ಶ್ರೀಮದಾನಂದತೀರ್ಥಭಗವತ್ಪಾದಪ್ರಣೀತ

ಮಹಾಭಾರತತಾತ್ಪರ್ಯನಿರ್ಣಯ

(ಸಂಸ್ಕೃತಮೂಲ, ಕನ್ನಡ ಅನುವಾದ, ವಿವರಣೆ ಹಾಗೂ
ಟಿಪ್ಪಣಿಗಳಲ್ಲಿನ ವಿಶೇಷಾಂಶಗಳೊಂದಿಗೆ)

ಸಂಪುಟ - ೪

(ಅಧ್ಯಾಯ : ೨೨ರಿಂದ ೨೬ರವರೆಗೆ)



ಸಂಪಾದನೆ, ಅನುವಾದ, ವಿವರಣೆ:

ಡಾ|| ವ್ಯಾಸನಕೆರೆ ಪ್ರಭಂಜನಾಚಾರ್ಯ

ಪ್ರಕಾಶಕರು:

ಶ್ರೀವ್ಯಾಸಮಧ್ವಸಂಶೋಧನ ಪ್ರತಿಷ್ಠಾನ

'ಪಾಜಕ', ನಂ. 67, 50 ಅಡಿ ರಸ್ತೆ, ಹನುಮಂತನಗರ,
ಬೆಂಗಳೂರು - 560 019.

Śrīmadānandatīrthabhagavatpāda-praṇīta MAHĀBHĀRATATĀTPARYANIRṆAYA (Volume 4 : Adhyāya 22 to 26) — critically edited with Kannada rendering, explanatory notes and extracts from various Sanskrit Glosses — by Vidyāvācaspati, Darśanaratnam, Sacchāstravicakṣaṇaratnam, Pravacanācārya, Śāstrapravacanakesari, Madhvamatavardhana, Vidvaccūḍāmaṇi, Vedavidyāvicakṣaṇa, Paṇḍitaratnam, Vidyāvāridhi, Sacchāstrapravacanapraviṇa, Gītāratnākara, Tattvavācaspati, Jnānaratnākara (and Recipient of Karnataka State Sanskrit Award-1999 & Karnataka Rajyotsava Award-2002 and Śrī Vidyāmānya-Mahāpraśasti of Śrī Pejavar Mutt, Udupi) **Dr.Vyasanakere Prabhanjanacharya**, M.A., Ph.D., D.Litt., F.I.B.R., F.U.W.A., Principal (Rtd.), Govt. First Grade College, K.R.Puram, Bangalore and Published by **Aitareya Prakāśana Vyasanakere**, Publication wing of **Śrī VyāsaMadhva Samśodhana Pratiṣṭhāna** "Pajaka",No.67, Fifty Feet Road, Hanumanthanagar, Bangalore - 560019.

Phone : 2660 2802
2662 2345.

Internet : www.vyasamadhwa.org

E-mail : info@vyasamadhwa.org

First Edition : 2004
Pages : 664 (xlviii+604+12)

© **Dr. Vyasanakere Prabhanjanacharya**

Typeset by :
Rayiprāṇa Impressions and
Śrī VyāsaMadhva Samśodhana Pratiṣṭhāna

Printed at :
Rāṣṭrotthāna Mudraṇālaya,
Bangalore -19.

ವಿಷಯ ಸೂಚೀ

ಮುನ್ನುಡಿ xxv-xlviii

ಮಹಾಭಾರತತಾತ್ಪರ್ಯನಿರ್ಣಯ ೧-೬೦೪
(ಅಧ್ಯಾಯ ೨೨ರಿಂದ ೨೬)

ಅಧ್ಯಾಯ - ೨೨ (ಅರಣೇಪ್ರಾಪ್ತಿಃ) ೧-೨೫೩
(ಕಿರ್ಮೀರವಧೆ, ಅಕ್ಷಯಪಾತ್ರೆ, ಭೀಮಗೀತೆ, ಕಿರಾತಾರ್ಜುನೀಯ, ತೀರ್ಥಯಾತ್ರೆ, ಶ್ರೀಕೃಷ್ಣನ ಕೈಲಾಸಯಾತ್ರಾಪ್ರಸಂಗ, ಅಜಗರಪ್ರಸಂಗ, ಜಯದ್ರಥಪರಾಭವ, ಘೋಷಯಾತ್ರೆ, ಕವಚಕುಂಡಲದಾನ, ಯಕ್ಷಪ್ರಶ್ನೆ)

ಪಾಂಡವರ ವನಪ್ರವೇಶ (೧) ೧
ಭೀಮನಿಂದ ಕಿರ್ಮೀರವಧೆ (೨) ೨
ಅಕ್ಷಯಪಾತ್ರೆಯ ಪ್ರಾಪ್ತಿ (೪) ೩
ಅಕ್ಷಯಪಾತ್ರೆಯ ಹಿರಿಮೆ (೫) ೪
ಧರ್ಮರಾಜನ ಅಪಾರವಾದ ಅಪೂರ್ವಪರಿವಾರ (೬) ೫
ಪಾಂಡವರ ಬಳಿ ಮುನಿವೃಂದ (೭) ೬
ಸ್ವರ್ಗವಾಸದಂತಹ ವನವಾಸ (೮) ೮
ಯುಧಿಷ್ಠಿರನ ದಿನಚರಿ (೯) ೮
ಧೃತರಾಷ್ಟ್ರನಿಗೆ ವಿದುರನ ಹಿತೋಕ್ತಿ (೧೦) ೯
ಧೃತರಾಷ್ಟ್ರನ ಅವಿವೇಕ - ಪಾಂಡವರ ಬಳಿಗೆ ವಿದುರ (೧೧) ೯
ವಿದುರನನ್ನು ಅಗಲಿರಲಾರದ ಧೃತರಾಷ್ಟ್ರ (೧೨) ೧೦
ಮರಳಿದ ವಿದುರ (೧೩) ೧೧
ಧೃತರಾಷ್ಟ್ರನ ಸಂಭ್ರಮ (೧೪) ೧೧
ವ್ಯಾಸಾಗಮನ (೧೫) ೧೨
ಧೃತರಾಷ್ಟ್ರನಿಗೆ ವ್ಯಾಸರ ಹಿತವಚನ (೧೬) ೧೨
ಶ್ರೀಹರಿಯ ಕಾರ್ಯವೈಖರಿ (೧೯) ೧೪
ಮೈತ್ರೇಯರ ಆಗಮನ (೨೦) ೧೫
ದುರ್ಯೋಧನನಿಗೆ ಮೈತ್ರೇಯರ ಶಾಪ (೨೨) ೧೬
ಕೃಷ್ಣನ ಬಳಿಗೆ ಪಾಂಡವರ ಸಂದೇಶ (೨೩) ೧೭
ಕೃಷ್ಣನ ಆಗಮನ - ಕೋಪದ ಕಪಟ ನಾಟಕ (೨೪) ೧೭

ದ್ರೌಪದಿಯ ಕೃಷ್ಣಸ್ತುತಿ (೨೬) ೧೮
ಕೌರವ ವಧೆಗೆ ಕೃಷ್ಣನ ಪ್ರತಿಜ್ಞೆ (೨೮) ೧೯
ದ್ಯೂತದ ಕಾಲದಲ್ಲಿ ಕೃಷ್ಣನೇಕೆ ಅಲ್ಲಿರಲಿಲ್ಲ? (೨೯) ೨೧
ಸಾಲ್ವವಧೆಯ ವೃತ್ತಾಂತ (೪೧) ೨೪
ಪ್ರದ್ಯುಮ್ನನಿಂದ ವಿಚಿತ್ರರೀತಿಯಲ್ಲಿ ಸಾಲ್ವಪರಾಭವ (೪೨) ೨೯
ಕೃಷ್ಣನ ಬಾಣದ ಹಿರಿಮೆ (೪೮) ೩೧
ಮಾಯಾವಿ ಸಾಲ್ವ (೪೯) ೩೨
ಕೃಷ್ಣನಿಂದ ಸಾಲ್ವನ ವಧೆ (೫೧) ೩೩
ಪಾಂಡವರೊಂದಿಗೆ ವನಕ್ಕೆ ನಡೆದವರು (೫೪) ೩೪
ಧೃಷ್ಟದ್ಯುಮ್ನನೊಂದಿಗೆ ಉಪಪಾಂಡವರು (೫೪) ೩೪
ಅಣ್ಣನೊಂದಿಗೆ ದೇವಕಿ (೫೫) ೩೪
ಕುಂತಿಯೊಂದಿಗೆ ನಕುಲ ಸಹದೇವರ ಪತ್ನಿಯರು (೫೬) ೩೫
ಸುಭದ್ರೆ ಅಭಿಮನ್ಯುಗಳೊಂದಿಗೆ ಕೃಷ್ಣನ ದ್ವಾರಕಾಪ್ರಯಾಣ (೫೭) ೩೫
ಉಪಪಾಂಡವರು ದ್ವಾರಕೆಗೆ (೫೮) ೩೫
ಧರ್ಮರಾಜನ ವಿಶಿಷ್ಟವೈರಾಗ್ಯ (೫೯) ೩೬
ವನದಲ್ಲಿ ಪಾಂಡವರ ನಿತ್ಯವಿಧಿ - ಧರ್ಮರಾಜನ ಅಪೂರ್ವ ಭ್ರಾತೃಪ್ರೇಮ (೬೦) ೩೬
ವರ್ಷಕಳೆದ ವನವಾಸ (೬೨) ೩೭
ಧರ್ಮರಾಜನ ಧರ್ಮಬೋಧೆಗೆ ಭೀಮ ದ್ರೌಪದಿಯರ ಸಿದ್ಧತೆ (೬೩) ೩೮
ದ್ರೌಪದಿಯ ಧರ್ಮಬೋಧೆ (೬೭) ೪೦
ಧರ್ಮರಾಜನ ಕ್ಷಮಾಪ್ರತಿಪಾದನೆ (೬೮) ೪೦
ದ್ರೌಪದಿ ಸಾರಿದ ಪುರುಷಪ್ರಯತ್ನದ ಹಿರಿಮೆ (೬೯) ೪೧
ಜೀವನ ಅಸ್ವಾತಂತ್ರ್ಯದ ಅರ್ಥ (೭೧) ೪೨
ವಿಧಿನಿಷೇಧಗಳು ಯಾರಿಗೆ? (೭೨) ೪೨
ಧರ್ಮರಾಜನ ವಿಚಿತ್ರ ದೈವವಾದ (೭೪) ೪೪
ದ್ರೌಪದಿಯ ಲೋಕಸಂಗ್ರಹ (೭೫) ೪೪
ಭೀಮಸೇನನ ಧರ್ಮೋಪದೇಶ (೭೬) ೪೫
ಜೀವನ ಕರ್ತೃತ್ವದ ಅರ್ಥ (೭೭) ೪೬

ಕೇವಲದೈವವಾದವು ಅಧೋಗತಿಯ ಸಾಧನ (೭೮) ೪೭
ಜೀವನ ಕರ್ತೃತ್ವದ ವಿವೇಚನೆ (೭೯) ೪೮
ಹರಿಸ್ವಾತಂತ್ರ್ಯದ ಅಂತರಾರ್ಥ (೮೦) ೪೮
ಪೂರ್ಣಪ್ರಮಾಣದ ಪರಿಕಲ್ಪನೆ (೮೧) ೪೯
ಕರ್ತವ್ಯತ್ಯಾಗ ನಿಜವಾದ ಆಸ್ತಿಕ್ಯವಲ್ಲ (೮೨) ೫೧
ಸಿದ್ಧಿಯ ಕಾರಣಗಳು (೮೩) ೫೨
ಯೋಗ್ಯತಾ ತಾರತಮ್ಯ (೮೫) ೫೩
ಪ್ರಯತ್ನದ ಮಹತ್ತ್ವ (೮೬) ೫೪
ಶ್ರೀಹರಿ ಫಲ ನೀಡುವ ಪರಿ (೮೭) ೫೫
ವರ್ಣಧರ್ಮದ ಅಪೂರ್ವ ವಿವೇಚನೆ (೮೮) ೫೬
ವರ್ಣಧರ್ಮದ ಮರ್ಮ (೯೪) ೬೦
ವಿಷ್ಣುಪೂಜೆಗೆಂದು ಸ್ವಧರ್ಮ (೯೬) ೬೨
ಹರಿಸ್ವಾತಂತ್ರ್ಯದ ಫಲಶ್ರುತಿ (೯೭) ೬೩
ಸ್ವಧರ್ಮವೇ ಹರಿಪೂಜೆ (೯೯) ೬೪
ದುಷ್ಟನಿಗ್ರಹವೇ ಕ್ಷತ್ರಿಯರ ಹರಿಪೂಜೆ (೧೦೦) ೬೪
ಯುದ್ಧದಲ್ಲಿ ರಾಜಧರ್ಮ (೧೦೨) ೬೫
ದ್ಯೂತದ ನಿಂದೆ (೧೦೫) ೬೭
ದ್ಯೂತದ ಸೋಲು ಸೋಲಲ್ಲ (೧೦೬) ೬೮
ತಿಂಗಳುಗಳೇ ವರ್ಷಗಳು (೧೦೮) ೬೯
ಧರ್ಮದ ಹೆಸರಲ್ಲಿ ಬಂಧುಜನರ ಹಿಂಸೆ ತರವಲ್ಲ (೧೧೦) ೭೧
ಶ್ರೀಕೃಷ್ಣನ ಹಿರಿಮೆಯ ವರ್ಣನೆ (೧೧೧) ೭೨
ವ್ಯಾಸರು ತೋರಿದ ಹರಿಮಹಿಮೆ (೧೧೨) ೭೨
ಕೀರ್ತಿಧರ್ಮಗಳಿಗಾಗಿ ಶತ್ರುವಧೆ ಅನಿವಾರ್ಯ (೧೧೩) ೭೩
ಯುದ್ಧಕ್ಕೆ ಸ್ಥಿರನಾದ ಯುಧಿಷ್ಠಿರ (೧೧೪) ೭೪
ಭೀಮನಲ್ಲಿ ಧರ್ಮರಾಜನ ಪ್ರಾರ್ಥನೆ (೧೧೬) ೭೫
ಈಡೇರಿದ ಭೀಮಸಂಕಲ್ಪ (೧೧೯) ೭೭
ಧರ್ಮರಾಜನ ಯುದ್ಧಚಿಂತೆ (೧೨೧) ೭೮

ವ್ಯಾಸಾಗಮನ (೧೨೩) ೭೮
ವ್ಯಾಸರು ನೀಡಿದ ಮಂತ್ರ (೧೨೪) ೭೯
ಧರ್ಮರಾಜನಿಂದ ಅರ್ಜುನನಿಗೆ ಮಂತ್ರೋಪದೇಶ (೧೨೭) ೮೦
ಇಂದ್ರಕೀಲದಲ್ಲಿ ಇಂದ್ರಾತ್ಮಜ (೧೨೮) ೮೦
ಮೂಕಾಸುರನ ವಧೆ (೧೩೦) ೮೧
ಕಿರಾತಾರ್ಜುನೀಯ (೧೩೨) ೮೨
ಕಿರಾತನಿಂದ ಅರ್ಜುನನ ಪರಾಭವ (೧೩೪) ೮೩
ನೆಲಕಚ್ಚಿದ ಅರ್ಜುನ (೧೩೬) ೮೩
ಶಿವನ ವಿಜಯದ ಹಿನ್ನೆಲೆ (೧೩೭) ೮೩
ವ್ಯಾಸರು ನೀಡಿದ ಮಂತ್ರದ ಪರಿಮಿತಿ (೧೪೦) ೮೫
ಅರ್ಜುನ ಮಾಡಿದ ಶಿವಪೂಜೆ (೧೪೧) ೮೫
ಅರ್ಜುನನ ಶರಣಾಗತಿ (೧೪೨) ೮೫
ಪಾಶುಪತಾದಿ ದಿವ್ಯಾಸ್ತ್ರಪ್ರಾಪ್ತಿ (೧೪೩) ೮೬
ಇಂದ್ರದರ್ಶನ (೧೪೪) ೮೭
ಸ್ವರ್ಗಲೋಕಕ್ಕೆ ಅರ್ಜುನ (೧೪೫) ೮೮
ಅರ್ಜುನನ ಸ್ವರ್ಗಲೋಕವಾಸ (೧೪೬) ೮೮
ಅರ್ಜುನನಿಗೆ ಉರ್ವಶಿಯ ಶಾಪ (೧೪೮) ೮೯
ಚಿತ್ರಸೇನನಿಂದ ಗಾಂಧರ್ವವಿದ್ಯೆ - ಇಂದ್ರನಿಂದ ದಿವ್ಯಾಸ್ತ್ರಪ್ರಾಪ್ತಿ (೧೫೦) ೯೧
ಶ್ರೀಕೃಷ್ಣನ ಕೈಲಾಸಯಾತ್ರಾ ಪ್ರಸಂಗ (೧೫೧) ೯೧
ಕೃಷ್ಣ ಶಿವನಿಗೆ ನೀಡಿದ್ದ ವರ (೧೫೨) ೯೨
ರುಗ್ಮಿಣಿಯ ಕೋರಿಕೆ (೧೫೬) ೯೩
ಬದರಿಕಾಶ್ರಮಕ್ಕೆ ಕೃಷ್ಣ (೧೫೭) ೯೩
ಘಂಟಾಕರ್ಣ ಕರ್ಣ ಪಿಶಾಚಿಗಳು (೧೬೨) ೯೫
ಪಿಶಾಚಿಚೇಷ್ಟೆ (೧೬೩) ೯೬
ಗಂಧರ್ವರಾದ ಪಿಶಾಚಿಗಳು (೧೬೫) ೯೭
ಕೈಲಾಸದಲ್ಲಿ ಕೃಷ್ಣ (೧೬೬) ೯೮
ಕೃಷ್ಣ ಮಾಡಿದ ತಪಸ್ಸಿನ ನಾಟಕ (೧೬೭) ೯೮

ಹನ್ನೆರಡು ವರ್ಷವಾದ ಒಂದು ದಿವಸ (೧೬೮) ೯೮
ಎರಡು ಗಂಟೆಗೆ ಒಂದು ವರ್ಷ (೧೭೧) ೧೦೦
ಗರುಡಾದಿಗಳ ಹರಿಸೇವೆ (೧೭೩) ೧೦೧
ಕೃಷ್ಣನ ಬಳಿಗೆ ಬ್ರಹ್ಮಾದಿಗಳ ಆಗಮನ (೧೭೪) ೧೦೨
ಹರಿಪೂಜೆಗೆಂದು ಧಾವಿಸಿದ ಹರ (೧೭೫) ೧೦೩
ಹರಿಯ ಪದತಲದಲ್ಲಿ ಹರ (೧೭೬) ೧೦೩
ಹರ ಸಾರಿದ ಹರಿಸರ್ವೋತ್ತಮತ್ವ (೧೭೮) ೧೦೫
ಇಂದ್ರಾದಿಗಳಿಗೆ ವಿಶೇಷಜ್ಞಾನಲಾಭ (೧೮೦) ೧೦೫
ಜಗತ್ತಿನ ತಂದೆಗೆ ಪುತ್ರಪ್ರಾಪ್ತಿವರ (೧೮೨) ೧೦೬
ವರದ ಹಿನ್ನೆಲೆ (೧೮೩) ೧೦೬
ಶಿವ ತಿಳಿಸಿದ ಕೈಲಾಸಯಾತ್ರೆಯ ಮರ್ಮ (೧೮೭) ೧೦೮
ವಕ್ರಾಸುರನ ವಧೆ (೧೮೮) ೧೦೮
ದ್ವಾರಕೆಗೆ ಮರಳಿದ ಕೃಷ್ಣ (೧೯೪) ೧೦೯
ಪೌಂಡ್ರಕನಿಂದ ದ್ವಾರಕೆಯ ಆಕ್ರಮಣ -
ಬಲರಾಮ ಏಕಲವ್ಯರ ಯುದ್ಧ (೧೯೫) ೧೧೦
ದ್ವಾರಕೆಯಲ್ಲಿ ರಾತ್ರಿಯುದ್ಧ (೧೯೭) ೧೧೦
ಬಲರಾಮ ಏಕಲವ್ಯರ ಗದಾಯುದ್ಧ (೨೦೦) ೧೧೨
ಕೃಷ್ಣನನ್ನು ಕಂಡ ಬಲರಾಮನ ಹರ್ಷ (೨೦೧) ೧೧೨
ಏಕಲವ್ಯನ ಪಲಾಯನ (೨೦೨) ೧೧೩
ಕೃಷ್ಣ ಪೌಂಡ್ರಕರ ಯುದ್ಧ (೨೦೫) ೧೧೪
ಪೌಂಡ್ರಕನ ವಿಚಿತ್ರ ಸಂದೇಶ (೨೦೭) ೧೧೫
ಶ್ರೀಕೃಷ್ಣನ ಪ್ರತ್ಯುತ್ತರ (೨೦೮) ೧೧೫
ಪೌಂಡ್ರಕನ ಹಾಸ್ಯಾಸ್ಪದ ವೇಷ (೨೦೯) ೧೧೬
ಕೃಷ್ಣನಿಂದ ಪೌಂಡ್ರಕನ ವಧೆ (೨೧೦) ೧೧೬
ಪೌಂಡ್ರಕನ ಅಧೋಗತಿ (೨೧೧) ೧೧೭
ಕೃಷ್ಣನಿಂದ ಏಕಲವ್ಯನ ವಧೆ (೨೧೩) ೧೧೮
ಸುದಕ್ಷಿಣನ ಸಂಹಾರ (೨೧೭) ೧೧೯

ವಾರಾಣಸೀದಹನ (೨೨೦) ೧೨೧
ಕೃಷ್ಣರುಗ್ಮಿಣಿಯರ ಪ್ರಣಯಕಲಹ (೨೨೧) ೧೨೧
ಯಮುನೆಯನ್ನು ಸೆಳೆದ ಬಲರಾಮ (೨೨೪) ೧೨೩
ಬಲರಾಮನಿಂದ ಮೈಂದವಿವಿದರ ವಧೆ (೨೨೭) ೧೨೫
ಲಕ್ಷಣಾ ಸ್ವಯಂವರ (೨೩೧) ೧೨೭
ಕೌರವರಿಂದ ಸಾಂಬಗ್ರಹಣ (೨೩೨) ೧೨೭
ಸಾಂಬನ ಬಿಡುಗಡೆಗಾಗಿ ಬಲರಾಮ (೨೩೩) ೧೨೮
ಕೌರವರಿಗೆ ಬಲರಾಮನ ಸಂದೇಶ (೨೩೪) ೧೨೮
ಕೌರವರ ಔದ್ಧತ್ಯ (೨೩೬) ೧೨೯
ಹಸ್ತಿನಾಪುರವನ್ನು ಸೆಳೆದ ಬಲರಾಮ (೨೩೭) ೧೨೯
ಸಾಂಬಮೋಚನೆ (೨೩೮) ೧೩೦
ಬಲರಾಮನ ಅಪೂರ್ವ ಕಾರ್ಯಗಳು (೨೩೯) ೧೩೦
ಉಷಾ-ಅನಿರುದ್ಧರ ವಿವಾಹ (೨೪೨) ೧೩೨
ಬಾಣನಿಂದ ಅನಿರುದ್ಧನ ಸೆರೆ (೨೪೫) ೧೩೪
ಅನಿರುದ್ಧಮೋಚನೆಗಾಗಿ ಶ್ರೀಕೃಷ್ಣ (೨೪೭) ೧೩೪
ಶೈವಜ್ವರ ವೈಷ್ಣವಜ್ವರಗಳು (೨೪೯) ೧೩೫
ಕೃಷ್ಣನಿಂದ ಶೈವಜ್ವರದ ಪರಾಭವ (೨೫೦) ೧೩೫
ವೈಷ್ಣವಜ್ವರದಿಂದ ಶೈವಜ್ವರದ ಪರಾಭವ (೨೫೨) ೧೩೬
ಹರಿಯಿಂದ ಹರನ ಪರಾಭವ (೨೫೪) ೧೩೭
ಕೃಷ್ಣನಿಂದ ಬಾಣಬಾಹುಚ್ಛೇದ (೨೫೭) ೧೩೯
ಹರನ ಪ್ರಾರ್ಥನೆಯಿಂದ ಬಾಣಮೋಕ್ಷಣ (೨೫೮) ೧೩೯
ಷಣ್ಮುಖಾದಿಗಳ ಪರಾಜಯ - ಅನಿರುದ್ಧಮೋಚನ (೨೫೯) ೧೪೦
ಹರಿಮಹಿಮೆಯ ವರ್ಣನೆ (೨೬೦) ೧೪೧
ಹರಿಮಹಿಮಾಶ್ರವಣದ ಫಲಶ್ರುತಿ (೨೬೪) ೧೪೨
ಪಾಂಡವರ ತೀರ್ಥಯಾತ್ರೆ (೨೬೫) ೧೪೨
ಪ್ರಭಾಸದಲ್ಲಿ ಪಾಂಡವರು (೨೬೬) ೧೪೩
ಕೃಷ್ಣ ಪಾಂಡವರ ಸಮಾಗಮ (೨೬೭) ೧೪೩

ಸಾತ್ಯಕಿಯ ವೀರೋದ್ಗಾರ (೨೭೦)	೧೪೪
ಕೃಷ್ಣನು ತಿಳಿಸಿದ ಪಾಂಡವಹಾರ್ದ (೨೭೨)	೧೪೫
ಹಿಮಾಲಯದಲ್ಲಿ ಪಾಂಡವರು (೨೭೪)	೧೪೬
ಗಗನಮಾರ್ಗದಲ್ಲಿ ಬದರೀಪ್ರಯಾಣ (೨೭೫)	೧೪೭
ಉತ್ತರ ಬದರಿಯಲ್ಲಿ ಪಾಂಡವರು (೨೭೬)	೧೪೭
ಪಾಂಡವರ ಅಪೂರ್ವ ವನವಾಸ (೨೭೭)	೧೪೮
ಸೌಗಂಧಿಕಾಹರಣ ಪ್ರಸಂಗ (೨೭೮)	೧೪೮
ಸೌಗಂಧಿಕಾಪುಷ್ಪಕ್ಕಾಗಿ ದ್ರೌಪದಿಯ ಕೋರಿಕೆ (೨೮೦)	೧೪೯
ಭೀಮಸೇನನ ಅದ್ಭುತ ಪ್ರಯಾಣ (೨೮೧)	೧೫೦
ಹನುಮ ಭೀಮರ ಸಮಾಗಮದ ಮರ್ಮ (೨೮೨)	೧೫೧
ಹನುಮಂತ ಭೀಮರ ಸಂಭಾಷಣೆ (೨೮೭)	೧೬೧
ಅರ್ಜುನನಿಗಾಗಿ ಭೀಮ ಕೇಳಿದ ವರ (೨೮೮)	೧೬೨
ಸೌಗಂಧಿಕಾ ಸರೋವರದಲ್ಲಿ ಭೀಮ (೨೮೯)	೧೬೩
ಭೀಮ ಕ್ರೋಧವಶರ ಯುದ್ಧ (೨೯೦)	೧೬೪
ಅಪೂರ್ವ ಭೀಮವಿಜಯ (೨೯೧)	೧೬೫
ಭೀಮನ ಬಳಿಗೆ ಯುಧಿಷ್ಠಿರಾದಿಗಳ ಆಗಮನ (೨೯೭)	೧೬೮
ಪಂಚವರ್ಣ ಪುಷ್ಪ ಪ್ರಸಂಗ (೩೦೧)	೧೭೦
ಮಣಿಮಂತನ ವಧೆ (೩೦೫)	೧೭೩
ಭೀಮನ ಮೇಲೆ ಕುಬೇರನ ಕೋಪ (೩೦೮)	೧೭೫
ಧರ್ಮರಾಜನ ಆಗಮನ (೩೧೧)	೧೭೬
ಕುಬೇರನ ಕೋಪದ ಉಪಶಮನ (೩೧೩)	೧೭೮
ನಿವಾತಕವಚರ ವಧಪ್ರಸಂಗ (೩೧೪)	೧೭೯
ನಿವಾತಕವಚರ ವಧೆಗೆ ಇಂದ್ರನ ಕೋರಿಕೆ (೩೧೫)	೧೭೯
ಕಿರೀಟಿಯಾದ ಅರ್ಜುನ (೩೧೭)	೧೮೦
ಅರ್ಜುನನಿಗೆ ದೇವದತ್ತಪ್ರಾಪ್ತಿ (೩೧೯)	೧೮೧
ನಿವಾತಕವಚರ ವಧೆ (೩೨೧)	೧೮೨
ಪೌಲೋಮ ಕಾಲೇಯರ ವಧೆ (೩೨೪)	೧೮೩

ಮರಳಿ ಧರೆಗೆ ಅರ್ಜುನ (೩೨೬) ೧೮೪
ಪಾಂಡವರ ಅಲಕಾಪುರಿವಾಸ (೩೨೭) ೧೮೪
ಮತ್ತೊಮ್ಮೆ ಭೀಮೋಪದೇಶ (೩೨೯) ೧೮೫
ಅಜಗರ ಪ್ರಸಂಗ (೩೩೨) ೧೮೬
ಇಂದ್ರಪದವಿಯಲ್ಲಿನಹುಷ (೩೩೩) ೧೮೭
ನಹುಷನಿಗೆ ಬ್ರಹ್ಮಶಾಪ (೩೩೫) ೧೮೮
ಶಾಪಮೋಚನೆಯ ಉಪಾಯ (೩೩೮) ೧೯೧
ವೃತ್ರವಧೆಯಿಂದ ಇಂದ್ರನಿಗೆ ಪುಣ್ಯವೃದ್ಧಿ (೩೪೨) ೧೯೩
ನಹುಷನಿಗೇಕೆ ಇಂದ್ರಪದವಿ? (೩೪೬) ೧೯೬
ಭೀಮನನ್ನು ಹಿಡಿದ ಅಜಗರ (೩೪೭) ೧೯೬
ಭೀಮ ಬಲದ ಹಿರಿಮೆ (೩೪೮) ೧೯೭
ವಿದ್ಯೋಪಜೀವನ ಮಾಡದ ಭೀಮ (೩೫೩) ೧೯೯
ಅಜಗರನ ಬಳಿಗೆ ಧರ್ಮಜನ ಆಗಮನ (೩೬೨) ೨೦೩
ನಹುಷನ ಶಾಪವಿಮೋಚನೆ (೩೬೪) ೨೦೪
ದ್ವೈತವನದಲ್ಲಿಪಾಂಡವರು (೩೬೮) ೨೦೬
ದ್ರೌಪದೀ ಸತ್ಯಭಾಮಾ ಸಂವಾದ (೩೬೯) ೨೦೭
ರಾವಣನಂತಹ ಜಯದ್ರಥ (೩೭೪) ೨೦೯
ಭೀಮನಿಂದ ಕೋಟಿಕಾಶ್ಯನ ವಧೆ (೩೮೦) ೨೧೨
ಜಯದ್ರಥನ ಪರಾಭವ (೩೮೧) ೨೧೨
ಜಯದ್ರಥನ ಸೆರೆ (೩೮೨) ೨೧೨
ಭಾಷಾತ್ರಯ ವಿವೇಚನೆ (೩೮೪) ೨೧೪
ಜಯದ್ರಥನಿಗೆ ಶಿವನ ವರ (೩೮೮) ೨೧೮
ದುರ್ಯೋಧನ ಮಾಡಿದ ಪೌಂಡರೀಕಯಾಗ (೩೮೯) ೨೧೯
ಘೋಷಯಾತ್ರೆಯ ಹಿನ್ನೆಲೆ (೩೯೧) ೨೨೧
ಇಂದ್ರನಿಂದ ಕೌರವ ಮಾನಭಂಗದ ಯೋಜನೆ (೩೯೪) ೨೨೩
ಗಂಧರ್ವರೊಂದಿಗೆ ಕೌರವರ ಯುದ್ಧ (೩೯೭) ೨೨೪
ವಿಕರ್ಣನೊಂದಿಗೆ ಕರ್ಣನ ಪಲಾಯನ (೪೦೦) ೨೨೫

ಚಿತ್ರಸೇನನಿಂದ ಕೌರವರ ಪರಾಭವ (೪೦೨) ೨೨೬
ಚಿತ್ರಸೇನನ ಸೆರೆಯಲ್ಲಿ ಸಕುಟುಂಬ ಸಪರಿವಾರರಾಗಿ ಕೌರವರು (೪೦೩) ೨೨೭
ಪಾಂಡವರ ಬಳಿಗೆ ಕೌರವರ ಮಂತ್ರಿಗಳ ಪ್ರಾರ್ಥನೆ (೪೦೫) ೨೨೮
ಭೀಮಸೇನನ ಪೂರ್ಣಪ್ರಜ್ಞತ್ವ (೪೦೬) ೨೨೮
ಭೀಮಾರ್ಜುನರಿಂದ ಚಿತ್ರಸೇನನ ಪರಾಭವ (೪೦೮) ೨೨೯
ಚಿತ್ರಸೇನನು ತಿಳಿಸಿದ ದುರ್ಯೋಧನನ ಕಪಟ (೪೦೯) ೨೩೦
ದುರ್ಯೋಧನನ ಬಿಡುಗಡೆ (೪೧೦) ೨೩೦
ದುರ್ಯೋಧನನ ಪ್ರಾಯೋಪವೇಶ (೪೧೧) ೨೩೧
ರಾತ್ರಿಯಲ್ಲಿ ಅಸುರರು ಮಾಡಿದ ಕೃತ್ಯಾನಿರ್ಮಾಣ (೪೧೪) ೨೩೨
ರಸಾತಲಕ್ಕೆ ದುರ್ಯೋಧನ (೪೧೫) ೨೩೨
ದುರ್ಯೋಧನನಿಗೆ ಅಸುರರ ಉಪದೇಶ (೪೧೬) ೨೩೩
ಕರ್ಣ ಭೀಷ್ಮಾದಿಗಳಲ್ಲಿ ಅಸುರರ ಪ್ರವೇಶ (೪೧೯) ೨೩೪
ಸ್ವಸ್ಥಾನಕ್ಕೆ ಮರಳಿದ ದುರ್ಯೋಧನ (೪೨೨) ೨೩೫
ಕರ್ಣನ ವಿಚಿತ್ರಶಪಥ (೪೧೪) ೨೩೬
ಕುಂಡಲಾಹರಣ ಪ್ರಸಂಗ (೪೨೪) ೨೩೭
ಕರ್ಣನಿಗೆ ಸೂರ್ಯನ ಉಪದೇಶ (೪೨೯) ೨೩೮
ಕರ್ಣನಿಂದ ಕವಚ ಕುಂಡಲದಾನ (೪೩೦) ೨೩೯
ಇಂದ್ರ ನೀಡಿದ ಅಮೋಘ ಶಕ್ತ್ಯಾಯುಧ (೪೩೧) ೨೪೦
ಅರಣೀಭಾಂಡ ಪ್ರಸಂಗ (೪೩೨) ೨೪೨
ಯಕ್ಷಪ್ರಶ್ನೆ (೪೩೩) ೨೪೩
ಯಮನ ಮಾಯೆಯ ಪರಿಮಿತಿ (೪೩೬) ೨೪೪
ಭೀಮಾರ್ಜುನರಿಗೆ ಮಾಯೆಯೇ? (೪೩೭) ೨೪೫
ಧರ್ಮರಾಜನಿಂದ ಯಕ್ಷಪ್ರಶ್ನೆಗೆ ಉತ್ತರ (೪೪೦) ೨೪೭
ಯಕ್ಷನೀಡಿದ ವರ (೪೪೨) ೨೪೮
ಧರ್ಮರಾಜನ ಧರ್ಮಪ್ರಜ್ಞೆ (೪೪೩) ೨೪೯
ಯಮನ ಸಂಪ್ರೀತಿ – ವರಪ್ರದಾನ (೪೪೪) ೨೫೦
ಯಮ ನೀಡಿದ ವಿಶೇಷ ವರ (೪೪೫) ೨೫೧
ವನವಾಸದ ಪರಿಸಮಾಪ್ತಿ (೪೪೭) ೨೫೩

ಅಧ್ಯಾಯ - ೨೩ (ಪಾಂಡವಾಜ್ಞಾತವಾಸಸಮಾಪ್ತಿಃ) **೨೫೪ - ೩೦೮**

(ವಿರಾಟನಗರದಲ್ಲಿ ಪಾಂಡವರು, ಜೀಮೂತವಧೆ, ಕೀಚಕವಧೆ, ದಕ್ಷಿಣಗೋಗ್ರಹಣ, ಉತ್ತರಗೋಗ್ರಹಣ, ಅಭಿಮನ್ಯು-ಉತ್ತರಾವಿವಾಹ)

ಅಜ್ಞಾತವಾಸಕ್ಕಾಗಿ ಪಾಂಡವರು (೧) ೨೫೪
ಪಾಂಡವರು ಸ್ವೀಕರಿಸಿದ ವೇಷಗಳು (೨) ೨೫೫
ಪಾಂಡವರು ಸೇವಿಸಿದ್ದು ವಿರಾಟನನ್ನಲ್ಲ; ಮುಖ್ಯವಾಗಿ ಶ್ರೀಹರಿಯನ್ನೇ (೩) ೨೫೬
ಭೀಮನ ಸೂದವೇಷದ ರಹಸ್ಯ (೪) ೨೫೭
ಪಾಂಡವರು ಅನ್ಯಾಶ್ರಯ ಮಾಡಲಿಲ್ಲ (೬) ೨೬೧
ಅರ್ಜುನಾದಿಗಳ ವೇಷಗಳ ಹಿನ್ನೆಲೆ (೭) ೨೬೩
ದ್ರೌಪದಿಯ ಸೈರಂಧ್ರಿವೇಷದ ಮರ್ಮ (೧೦) ೨೬೭
ಜೀಮೂತನ ವಧ (೧೧) ೨೬೮
ಮಹಾದೇವ ಎಂದರೆ ಶ್ರೀಹರಿ (೧೫) ೨೭೧
ಯುಧಿಷ್ಠಿರ ಶಬ್ದವು ಶ್ರೀಹರಿವಾಚಕ (೧೭) ೨೭೨
ಯಮಲೋಕಕ್ಕೆ ಜೀಮೂತ (೧೮) ೨೭೪
ಕೀಚಕನ ಆಗಮನ (೧೯) ೨೭೪
ದ್ರೌಪದಿಯನ್ನು ಕಾಮಿಸಿದ ನೀಚ ಕೀಚಕ (೨೦) ೨೭೬
ವಾಯುವಿನಿಂದ ಕೀಚಕನ ಪರಾಭವ (೨೪) ೨೭೯
ಭೀಮನ ಬಳಿಗೆ ದ್ರೌಪದಿ (೨೫) ೨೮೧
ಕೀಚಕನ ವಧೆ (೨೬) ೨೮೨
ಉಪಕೀಚಕರ ವಧೆ (೨೭) ೨೮೩
ಅಜ್ಞಾತವಾಸದ ಪರಿಸಮಾಪ್ತಿ (೩೦) ೨೮೬
ಗೋಗ್ರಹಣಕ್ಕೆ ಕೌರವರ ನಿಶ್ಚಯ (೩೧) ೨೮೮
ದಕ್ಷಿಣ ಗೋಗ್ರಹಣ (೩೩) ೨೯೦
ಭೀಮನಿಂದ ಗೋಮೋಚನ (೩೪) ೨೯೧
ಉತ್ತರ ಗೋಗ್ರಹಣಕ್ಕೆ ಭೀಷ್ಮಾದಿಗಳ ನಿಶ್ಚಯ (೩೬) ೨೯೨
ಉತ್ತರ ಗೋಮೋಚನೆಗೆ ಅರ್ಜುನ (೪೧) ೨೯೪

ಅರ್ಜುನನ ಅದ್ಭುತ ವಿಜಯ (೪೨) ೨೯೫
ಮರಳಿ ವಿರಾಟನಗರಕ್ಕೆ (೪೪) ೨೯೭
ವಿರಾಟನ ಅಪರಾಧ, ಭೀಮಾರ್ಜುನರ ಕೋಪ (೪೫) ೨೯೮
ನಿಜರೂಪದಲ್ಲಿ ಪಾಂಡವರು (೪೭) ೩೦೦
ಅಭಿಮನ್ಯು ವಿವಾಹ (೪೮) ೩೦೦
ದಕ್ಷಿಣ ಗೋಗ್ರಹಣದಲ್ಲಿ ಭೀಮಾದಿಗಳ ಸಾಧನೆ (೪೯) ೩೦೧
ಅಭಿಮನ್ಯು ವಿವಾಹದ ವೈಭವ (೫೦) ೩೦೨
ದುರ್ಯೋಧನಾದಿಗಳ ಕುಯುಕ್ತಿ (೫೨) ೩೦೩
ಚಾಂದ್ರಮಾನದ ಪ್ರಶಸ್ತಿ (೫೫) ೩೦೫
ಉಪಪ್ಲಾವ್ಯಕ್ಕೆ ಪಾಂಡವರು (೫೯) ೩೦೮

ಅಧ್ಯಾಯ - ೨೪ (ಯುದ್ಧೋದ್ಯೋಗಃ) ೩೦೯ - ೩೬೭

(ಅರ್ಜುನದುರ್ಯೋಧನರಿಗೆ ಕೃಷ್ಣನ ಸಹಾಯ, ಪಾಂಡವಕೌರವರ ಯುದ್ಧಸಿದ್ಧತೆ, ಶ್ರೀಕೃಷ್ಣರಾಯಭಾರ, ವಿಶ್ವರೂಪಪ್ರದರ್ಶನ, ಕರ್ಣಪ್ರಸಂಗ)

ಧೃತರಾಷ್ಟ್ರನ ಬಳಿಗೆ ದ್ರುಪದ ಪುರೋಹಿತ (೧) ೩೦೯
ಪುರೋಹಿತನ ಸಂದೇಶ (೨) ೩೧೦
ಭೀಮನಿಂದ ಆದ ರಾಕ್ಷಸಹನನ (೪) ೩೧೦
ಜಟಾಸುರವಧೆ (೬) ೩೧೧
ಶ್ರೀಹರಿಯ ಮಾಹಾತ್ಮ್ಯ (೧೦) ೩೧೪
ಮಾತು ಕೇಳದ ಧೃತರಾಷ್ಟ್ರ (೧೧) ೩೧೪
ಶ್ರೀಕೃಷ್ಣನ ಬಳಿಗೆ ಅರ್ಜುನ ದುರ್ಯೋಧನರು (೧೨) ೩೧೪
ದುರ್ಯೋಧನನ ದುರಹಂಕಾರ (೧೩) ೩೧೫
ಅರ್ಜುನನ ಹರಿಭಕ್ತಿ (೧೪) ೩೧೬
ಉಭಯರನ್ನೂ ಕಂಡ ಕೃಷ್ಣ (೧೫) ೩೧೭
ಸಮವಾಗಿ ಸಹಾಯ (೧೬) ೩೧೭
ಅರ್ಜುನ ದುರ್ಯೋಧನರ ಆಯ್ಕೆ (೧೮) ೩೧೮

ಸಹಾಯ ನೀಡಲು ನಿರಾಕರಿಸಿದ ಬಲರಾಮ (೨೦) ೩೨೧
ಪಾಂಡವ ಕೌರವರ ಸೇನಾಸಂಗ್ರಹ (೨೨) ೩೨೨
ಪಾಂಡವರ ಏಳು ಅಕ್ಷೌಹಿಣಿ (೨೩) ೩೨೩
ಕೌರವರ ಹನ್ನೊಂದು ಅಕ್ಷೌಹಿಣಿ (೨೫) ೩೨೩
ಬಾಹ್ಲೀಕಾದಿಗಳು ಕೌರವರ ಕಡೆ - ಪಾಂಡವರ ಕಡೆಗೆ ಪಾಂಡ್ಯ (೨೮) ೩೨೫
ದುರ್ಯೋಧನನ ಶಲ್ಯಗ್ರಹಣ (೨೯) ೩೨೬
ಸಂಜಯನ ರಾಯಭಾರ (೩೩) ೩೨೮
ಯುದ್ಧಕ್ಕೆ ಸ್ಥಿರನಾದ ಯುಧಿಷ್ಠಿರ (೩೪) ೩೨೯
ಸಂಜಯನ ಸೋಲು (೩೫) ೩೩೦
ವಿದುರನೀತಿ (೩೬) ೩೩೦
ಸನತ್ಸುಜಾತೀಯ (೩೯) ೩೩೨
ಧರ್ಮರಾಜನ ಧರ್ಮಜಿಜ್ಞಾಸೆ (೪೦) ೩೩೩
ರಾಯಭಾರಕ್ಕೆ ಶ್ರೀಕೃಷ್ಣ (೪೨) ೩೩೪
ಭೀಮನ ಲೋಕಸಂಗ್ರಹ (೪೪) ೩೩೫
ಹರಿಯ ಮತವೇ ಹನುಮನ ಮತವು (೪೮) ೩೩೭
ಅರ್ಜುನಾದಿಗಳ ಅಭಿಪ್ರಾಯ (೫೧) ೩೩೯
ದ್ರೌಪದಿಯ ದೃಢನಿಶ್ಚಯ (೫೩) ೩೪೦
ಶ್ರೀಕೃಷ್ಣರಾಯಭಾರ (೫೪) ೩೪೧
ಜನತೆಯ ಕೃಷ್ಣದರ್ಶನ ಕಾತರ (೫೬) ೩೪೨
ಧೃತರಾಷ್ಟ್ರನ ಬಳಿಗೆ ಕೃಷ್ಣ (೫೮) ೩೪೫
ದುರ್ಯೋಧನನ ಆತಿಥ್ಯದ ನಿರಾಕರಣೆ (೫೯) ೩೪೫
ವಿದುರನ ಭಾಗ್ಯ (೬೦) ೩೪೭
ಕುರುಸಭೆಯಲ್ಲಿ ಶ್ರೀಕೃಷ್ಣ (೬೨) ೩೫೦
ಶ್ರೀಕೃಷ್ಣಸಂದೇಶ (೬೪) ೩೫೩
ಕೃಷ್ಣಬಂಧನಕ್ಕೆ ದುಷ್ಟಕೂಟದ ಸಂಚು (೬೬) ೩೫೪
ದುರ್ಯೋಧನನ ದುಷ್ಟಸ್ವರೂಪ (೬೯) ೩೫೭

ವಿಶ್ವರೂಪಪ್ರದರ್ಶನ (೭೨) ೩೫೯
ಕಣ್ಣಿದ್ದೂ ಕುರುಡರು (೭೪) ೩೬೦
ಕಂಗಳ ಪಡೆದ ಕುರುಡ (೭೫) ೩೬೧
ಶ್ರೀಕೃಷ್ಣನ ಸ್ವಾತಂತ್ರ್ಯದ ಅರ್ಥ (೭೬) ೩೬೨
ಕುಂತಿಯ ಸಂದೇಶ - ಕರ್ಣನಿಗೆ ಹಿತೋಕ್ತಿ (೭೭) ೩೬೩
ಅಶ್ವತ್ಥಾಮರಿಗೆ ಹಿತೋಕ್ತಿ (೭೮) ೩೬೫
ಕುಂತೀ ಕರ್ಣ ಸಮಾಗಮ (೭೯) ೩೬೬
ಕುರು ಪಾಂಡವರ ಯುದ್ಧೋದ್ಯೋಗ (೮೦) ೩೬೭

ಅಧ್ಯಾಯ - ೨೫ (ಭೀಷ್ಮಪಾತಃ) ೩೬೮ - ೪೩೫
(ಭೀಷ್ಮಸೇನಾಪತ್ಯ, ಗೀತೋಪದೇಶ, ಶ್ರೀಕೃಷ್ಣನ ಚಕ್ರಧಾರಣ, ಇರಾವಂತನ ವಧೆ, ಭೀಮಾರ್ಜುನರ ಅದ್ಭುತಪರಾಕ್ರಮ, ಭೀಷ್ಮಪಾತ)

ಕುರು ಪಾಂಡವರ ಯುದ್ಧದ ಪ್ರಾರಂಭ (೧) ೩೬೮
ಅರ್ಜುನವಿಷಾದಯೋಗ (೨) ೩೬೯
ಗೀತೋಪದೇಶ (೩) ೩೬೯
ವಿಶ್ವರೂಪಪ್ರದರ್ಶನ (೧೩) ೩೭೫
ಯುದ್ಧಕ್ಕೆ ಸಿದ್ಧನಾದ ಅರ್ಜುನ (೧೫) ೩೭೬
ಪ್ರಥಮ ದಿವಸದ ಯುದ್ಧ - ಮೊದಲ ಹೆಜ್ಜೆ ಇಟ್ಟ ಭೀಮ (೧೬) ೩೭೭
ಭೀಮಸೇನನ ಪರಾಕ್ರಮ (೧೯) ೩೮೦
ಕುರು ಪಾಂಡವರ ದ್ವಂದ್ವಯುದ್ಧ (೨೧) ೩೮೧
ಉತ್ತರನ ವಧೆ (೨೬) ೩೮೨
ಭೀಷ್ಮರ ಪರಾಕ್ರಮ (೨೭) ೩೮೩
ಮೊದಲ ದಿನದ ಯುದ್ಧದ ಮುಕ್ತಾಯ (೨೮) ೩೮೩
ಎರಡನೆಯ ದಿನದ ಯುದ್ಧ (೨೯) ೩೮೩
ಭೀಷ್ಮರ ಸೇನಾಪತ್ಯ ಒಟ್ಟುಹತ್ತು ದಿನ (೩೦) ೩೮೪
ಸಮರಕ್ಕೆ ಬಾರದ ಕರ್ಣ (೩೧) ೩೮೫

ಭೀಷ್ಮ ಪ್ರತಿಜ್ಞೆ (೩೨) ೩೮೫
ಭೀಮಾರ್ಜುನರು ಭೀಷ್ಮರನ್ನು ವಧಿಸದಿರಲು ಕಾರಣ (೩೩) ೩೮೬
ಬಗೆಬಗೆಯ ಯುದ್ಧಗಳು (೩೪) ೩೮೭
ಚಕ್ರ ಹಿಡಿದ ಚಕ್ರಪಾಣಿ - ಮೂರನೆಯ ದಿನದ ಯುದ್ಧ (೩೬) ೩೮೮
ಅರ್ಜುನನ ಪರಾಕ್ರಮ (೩೮) ೩೮೯
ಮೂರನೆಯ ದಿನದ ಯುದ್ಧದ ಪರಿಸಮಾಪ್ತಿ (೩೯) ೩೮೯
ನಾಲ್ಕನೆಯ ದಿನದ ಯುದ್ಧ (೪೦) ೩೯೦
ಇಪ್ಪತ್ತೈದು ಕೌರವರ ವಧೆ - ನಾಲ್ಕನೆಯ ದಿನದ ಯುದ್ಧದ ಪರಿಸಮಾಪ್ತಿ (೪೨) ೩೯೦
ಭೀಷ್ಮರಿಂದ ಕೃಷ್ಣಮಹಿಮೆಯ ವರ್ಣನೆ - ವಿಶ್ವೋಪಾಖ್ಯಾನ (೪೫) ೩೯೧
ದುರ್ಯೋಧನನ ಡಂಭಬುದ್ಧಿ (೪೩) ೩೯೪
ಐದನೆಯ ದಿನದ ಯುದ್ಧ (೪೪) ೩೯೪
ಭೀಮನ ಅಪೂರ್ವ ಪರಾಕ್ರಮ (೪೫) ೩೯೫
ಅರ್ಜುನನ ಪರಾಕ್ರಮ (೬೧) ೩೯೭
ಸಾತ್ಯಕಿ ಭೂರಿಶ್ರವರ ಯುದ್ಧ (೬೨) ೩೯೭
ಭೂರಿಶ್ರವನಿಂದ ಸಾತ್ಯಕಿಯ ದಶಪುತ್ರರ ವಧೆ (೬೩) ೩೯೭
ಭೀಮನಿಂದ ಸಾತ್ಯಕಿಯ ರಕ್ಷಣೆ (೬೪) ೩೯೮
ಆರನೆಯ ದಿನದ ಯುದ್ಧ (೬೬) ೩೯೯
ಅರ್ಜುನನಿಂದ ಭೀಷ್ಮರ ಪರಾಭವ (೬೭) ೩೯೯
ಏಳನೆಯ ದಿನದ ಯುದ್ಧ - ಭೀಮನ ಪರಾಕ್ರಮ (೬೮) ೪೦೦
ಭಗದತ್ತಘಟೋತ್ಕಚರ ಯುದ್ಧ (೭೦) ೪೦೧
ಭಗದತ್ತನ ಬಳಿ ವೈಷ್ಣವಾಸ್ತ್ರ (೭೧) ೪೦೨
ಘಟೋತ್ಕಚ ಗೆದ್ದದ್ದು ಭೀಮಸೇನ ಗೆಲ್ಲುವುದಕ್ಕೆ ಕೈಮುತ್ಕಸಿದ್ಧ (೭೩) ೪೦೩
ಘಟೋತ್ಕಚನ ಪರಾಕ್ರಮ (೭೪) ೪೦೪
ಎಂಟನೆಯ ದಿನದ ಯುದ್ಧ - ಇರಾವಂತನ ಪರಾಕ್ರಮ (೭೬) ೪೦೫
ಇರಾವಂತನಿಂದ ಶಕುನಿಪುತ್ರರ ವಧೆ (೭೭) ೪೦೬
ಅಲಂಬುಸ ಇರಾವಂತರ ಯುದ್ಧ - ಇರಾವಂತನ ವಧೆ (೭೮) ೪೦೬

ಘಟೋತ್ಕಚನ ಪರಾಕ್ರಮ (೮೦) ೪೦೭
ಭೀಮನಿಂದ ಘಟೋತ್ಕಚನ ಸಂರಕ್ಷಣೆ (೮೪) ೪೦೮
ಕೌರವರ ಪರಾಭವ (೮೮) ೪೧೦
ಭಗದತ್ತಘಟೋತ್ಕಚರ ಯುದ್ಧ (೯೧) ೪೧೧
ಭಗದತ್ತನ ಪಲಾಯನ (೯೫) ೪೧೩
ಎಂಟನೆಯ ದಿನದ ಯುದ್ಧದ ಪರಿಸಮಾಪ್ತಿ (೯೬) ೪೧೩
ಒಂಭತ್ತನೆಯ ದಿನದ ಯುದ್ಧ - ಭೀಷ್ಮರ ಪರಾಕ್ರಮ (೯೭) ೪೧೪
ಅಭಿಮನ್ಯುವಿನ ಪರಾಕ್ರಮ (೯೯) ೪೧೪
ಭೀಮನ ಅದ್ಭುತ ಪರಾಕ್ರಮ (೧೦೨) ೪೧೫
ಭೀಷ್ಮರ ಪರಾಕ್ರಮ (೧೦೪) ೪೧೬
ಶಂಖನ ವಧೆ (೧೦೬) ೪೧೭
ಭೀಮಾರ್ಜುನರ ಪರಾಕ್ರಮ-ಒಂಭತ್ತನೆಯ ದಿನದ ಯುದ್ಧದ ಪರಿಸಮಾಪ್ತಿ (೧೦೭) ೪೧೭
ಭೀಷ್ಮರ ಬಳಿಗೆ ಯುಧಿಷ್ಠಿರ (೧೦೮) ೪೧೮
ಹತ್ತನೆಯ ದಿನದ ಯುದ್ಧ (೧೧೦) ೪೧೯
ಭೀಮನ ಪರಾಕ್ರಮ (೧೧೪) ೪೨೧
ಯುಧಿಷ್ಠಿರಾದಿಗಳಿಂದ ಶಕುನಿಯ ಪರಾಭವ (೧೧೬) ೪೨೨
ಧೃಷ್ಟದ್ಯುಮ್ನನಿಂದ ಜಯದ್ರಥನ ಪರಾಭವ (೧೧೮) ೪೨೨
ಪಾರ್ಥರಕ್ಷಣೆಯಲ್ಲಿ ಶಿಖಂಡಿ (೧೧೯) ೪೨೩
ಅರ್ಜುನ ದುಃಶಾಸನರ ಯುದ್ಧ (೧೨೧) ೪೨೪
ಭೀಷ್ಮರ ಅದ್ಭುತ ಪರಾಕ್ರಮ (೧೨೫) ೪೨೫
ಭೀಷ್ಮಾರ್ಜುನರ ಯುದ್ಧ (೧೨೭) ೪೨೬
ಅರ್ಜುನನ ಪರಾಕ್ರಮ (೧೨೮) ೪೨೬
ಭೀಷ್ಮರ ಪತನ (೧೨೯) ೪೨೭
ಭೀಷ್ಮರಿಗೆ ಅರ್ಜುನ ನೀಡಿದ ಬಾಣದ ತಲೆದಿಂಬು (೧೩೨) ೪೨೯
ಅರ್ಜುನನಿಂದ ಭೀಷ್ಮರಿಗೆ ಜಲದಾನ (೧೩೩) ೪೩೨
ಭೀಷ್ಮರಿಂದ ಭೀಮಾರ್ಜುನರ ಪ್ರಶಂಸೆ (೧೩೪) ೪೩೨
ಭೀಷ್ಮ ಪಾತದಿಂದ ಧೃತರಾಷ್ಟ್ರನ ಶೋಕ - ಪಾಂಡವರ ಹರ್ಷ (೧೩೭) ೪೩೩

ಅಧ್ಯಾಯ - ೨೬ (ನಾರಾಯಣಾಸ್ತ್ರೋಪಶಮನಮ್) ೪೩೬ - ೬೦೪
(ಭೀಮನಿಂದ ಶಲ್ಯನ ಪರಾಭವ, ಭಗದತ್ತವಧೆ, ಅಭಿಮನ್ಯುವಧೆ, ಘಟೋತ್ಕಚವಧೆ, ಬಾಹ್ಲೀಕಾದಿಹನನ, ದ್ರೋಣರ ನಿರ್ಯಾಣ, ನಾರಾಯಣಾಸ್ತ್ರಪ್ರಸಂಗ, ಭೀಮನ ಭಾಗವತಧರ್ಮದ ಹಿರಿಮೆ)

ಸೇನಾಪತಿಯಾಗಿ ದ್ರೋಣರು (೧) ೪೩೬
ಯುದ್ಧಕ್ಕೆ ಕರ್ಣನ ಆಗಮನ (೨) ೪೩೭
ಹನ್ನೊಂದನೆಯ ದಿನದ ಯುದ್ಧ - ದ್ರೋಣರ ಪ್ರತಿಜ್ಞೆ (೩) ೪೩೮
ಭೀಮ ಶಲ್ಯರ ಘೋರಯುದ್ಧ (೪) ೪೩೮
ಶಲ್ಯರಾಜನ ಮೂರ್ಛೆ (೮) ೪೪೦
ಭೀಮನಿಂದ ಸೇನಾಹನನ (೧೦) ೪೪೧
ಅರ್ಜುನನ ಪರಾಕ್ರಮ (೧೧) ೪೪೨
ಹನ್ನೊಂದನೆಯ ದಿನದ ಯುದ್ಧದ ಪರಿಸಮಾಪ್ತಿ (೧೩) ೪೪೨
ದ್ರೋಣರ ಶಪಥ (೧೪) ೪೪೩
ಹನ್ನೆರಡನೆಯ ದಿನದ ಯುದ್ಧ (೧೫) ೪೪೩
ಸಂಶಪ್ತಕರೊಂದಿಗೆ ಅರ್ಜುನನ ಯುದ್ಧ (೧೬) ೪೪೪
ಭಗದತ್ತನ ಪರಾಕ್ರಮ (೧೭) ೪೪೪
ಅರ್ಜುನನಿಂದ ಸಂಮೋಹನಾಸ್ತ್ರಪ್ರಯೋಗ (೨೧) ೪೪೬
ಸಂಮೋಹಿತರಾದ ಸಂಶಪ್ತಕರು (೨೨) ೪೪೬
ಭಗದತ್ತನ ಬಳಿಗೆ ಕೃಷ್ಣಾರ್ಜುನರು. (೨೩) ೪೪೭
ಕೃಷ್ಣನ ಸಾರಥ್ಯದ ವೈಭವ (೨೪) ೪೪೯
ಭಗದತ್ತನಿಂದ ವೈಷ್ಣವಾಸ್ತ್ರಪ್ರಯೋಗ (೨೫) ೪೪೯
ವೈಜಯಂತೀಮಾಲೆಯಾದ ವೈಷ್ಣವಾಸ್ತ್ರ (೨೬) ೪೪೯
ಅರ್ಜುನನಿಗೆ ವೈಷ್ಣವಾಸ್ತ್ರರಹಸ್ಯದ ವಿವರಣೆ (೨೭) ೪೫೦
ಶ್ರೀಕೃಷ್ಣಮಹಿಮೆ (೨೮) ೪೫೧
ವರಾಹ ನೀಡಿದ ವೈಷ್ಣವಾಸ್ತ್ರ (೨೯) ೪೫೨
ಅರ್ಜುನನಿಂದ ಭಗದತ್ತಸುಪ್ರತೀಕಗಳ ವಧೆ (೩೧) ೪೫೩

ಅರ್ಜುನನಿಂದ ಶಕುನಿಯ ತಮ್ಮಂದಿರ ವಧೆ (೩೩) ೪೫೪
ಭೀಮನ ಪರಾಕ್ರಮ - ಹನ್ನೆರಡನೆಯ ದಿನದ ಯುದ್ಧದ ಪರಿಸಮಾಪ್ತಿ (೩೫) ೪೫೬
ಮತ್ತೊಂದು ದ್ರೋಣ ಪ್ರತಿಜ್ಞೆ (೩೬) ೪೫೬
ಹದಿಮೂರನೆಯ ದಿನದ ಯುದ್ಧ - ಪದ್ಮವ್ಯೂಹ ನಿರ್ಮಾಣ (೩೮) ೪೫೭
ಪದ್ಮವ್ಯೂಹಭೇದನಕ್ಕೆ ಅಭಿಮನ್ಯು (೪೦) ೪೫೮
ಜಯದ್ರಥನಿಂದ ಪ್ರತಿರೋಧ (೪೧) ೪೫೯
ಅಭಿಮನ್ಯುವಿನ ಅದ್ಭುತ ಪರಾಕ್ರಮ (೪೪) ೪೬೧
ಅಭಿಮನ್ಯುವಿನಿಂದ ಲಕ್ಷ್ಮಣನ ವಧೆ (೪೫) ೪೬೨
ಅಭಿಮನ್ಯುವಿನ ವಧೆ (೪೮) ೪೬೪
ಭೀಮನಿಂದ ಕುರುಸೈನ್ಯದ ನಾಶ (೪೯) ೪೬೪
ಶ್ರೀವೇದವ್ಯಾಸರಿಂದ ಯುಧಿಷ್ಠಿರನ ಸಾಂತ್ವನ (೫೦) ೪೬೫
ಅರ್ಜುನನ ಶೋಕ - ಜಯದ್ರಥವಧೆಗೆ ಪ್ರತಿಜ್ಞೆ (೫೧) ೪೬೬
ಮತ್ತೊಮ್ಮೆ ಪಾಶುಪತಾಸ್ತ್ರಪ್ರಾಪ್ತಿ (೫೨) ೪೬೮
ಹದಿನಾಲ್ಕನೆಯ ದಿನದ ಯುದ್ಧ (೫೪) ೪೬೯
ದ್ರೋಣರಿಂದ ಶಕಟಾಬ್ಜಚಕ್ರವ್ಯೂಹದ ನಿರ್ಮಾಣ (೫೫) ೪೭೦
ಅರ್ಜುನನಿಂದ ಯುದ್ಧಾರಂಭ (೫೭) ೪೭೨
ದ್ರೋಣರಿಗೆ ವಂದಿಸಿ ವ್ಯೂಹಪ್ರವೇಶ (೫೮) ೪೭೨
ಅರ್ಜುನನಿಂದ ಕೃತವರ್ಮನ ಪರಾಭವ (೫೯) ೪೭೩
ದೃಢಾಯು ಅಚ್ಯುತಾಯು ಮೊದಲಾದವರ ವಧೆ (೬೧) ೪೭೪
ಶ್ರುತಾಯುಧನ ವಧೆ (೬೨) ೪೭೪
ದುರ್ಯೋಧನನಿಂದ ದ್ರೋಣನಿಂದೆ (೬೭) ೪೭೬
ದ್ರೋಣರು ನೀಡಿದ ಮಂತ್ರಕವಚ (೬೮) ೪೭೭
ಅರ್ಜುನ ದುರ್ಯೋಧನರ ಯುದ್ಧ (೬೯) ೪೭೮
ಅರ್ಜುನನಿಂದ ದುರ್ಯೋಧನನ ಪರಾಭವ (೭೧) ೪೭೯
ಅಶ್ವತ್ಥಾಮಾದಿಗಳೊಂದಿಗೆ ಅರ್ಜುನನ ಯುದ್ಧ (೭೨) ೪೮೦
ದ್ರೋಣರ ಪರಾಕ್ರಮ (೭೩) ೪೮೦

ದ್ರೋಣರಿಂದ ಸತ್ಯಜಿದ್ವಧೆ (೭೫) ೪೮೧
ದ್ರೋಣರಿಂದ ಯುಧಿಷ್ಠಿರನ ಪರಾಭವ (೭೬) ೪೮೧
ದ್ರೋಣರಿಂದ ಧೃಷ್ಟಕೇತು ಮೊದಲಾದವರ ವಧೆ (೭೮) ೪೮೨
ಭೀಮ ಅಲಂಬುಸರ ಯುದ್ಧ - ಭೀಮನ ಅಸ್ತ್ರವಿದ್ಯಾ ಕೌಶಲ (೮೧) ೪೮೪
ಘಟೋತ್ಕಚನಿಂದ ಅಲಂಬುಸನವಧೆ (೮೫) ೪೮೬
ಕೃತವರ್ಮನ ಪರಾಕ್ರಮ (೮೮) ೪೮೭
ಸಾತ್ಯಕಿಯಿಂದ ಕೃತವರ್ಮನ ಪರಾಜಯ (೯೦) ೪೮೮
ಕೃಷ್ಣನ ಪಾಂಚಜನ್ಯಘೋಷ (೯೧) ೪೮೯
ಗಾಂಡೀವದ ಘೋಷ ಕೇಳದೆ ಯುಧಿಷ್ಠಿರನ ಆತಂಕ (೯೩) ೪೯೦
ಅರ್ಜುನನ ಕ್ಷೇಮವಾರ್ತೆ ತಿಳಿದು ಬರಲು ಸಾತ್ಯಕಿಯ ಪ್ರೇಷಣೆ (೯೪) ೪೯೦
ಭೀಮಸೇನನಿಂದ ಸಾತ್ಯಕಿಯ ವ್ಯೂಹಪ್ರವೇಶ (೯೫) ೪೯೧
ದ್ರೋಣರಿಂದ ಸಾತ್ಯಕಿಯ ಉಪೇಕ್ಷೆ (೯೬) ೪೯೧
ಸಾತ್ಯಕಿಯ ಅಪೂರ್ವ ಪರಾಕ್ರಮ (೯೭) ೪೯೨
ಸಾತ್ಯಕಿ ಕೃತವರ್ಮರ ಯುದ್ಧ (೯೮) ೪೯೩
ಸಾತ್ಯಕಿಯಿಂದ ಜಲಸಂಧನವಧೆ (೯೯) ೪೯೩
ಸಾತ್ಯಕಿ ಭೂರಿಶ್ರವರ ಘೋರಯುದ್ಧ (೧೦೨) ೪೯೫
ಸಾತ್ಯಕಿಯನ್ನು ಕೊಲ್ಲಲು ಭೂರಿಶ್ರವನ ಯತ್ನ (೧೦೪) ೪೯೬
ಕೃಷ್ಣಪ್ರೇರಿತ ಅರ್ಜುನನಿಂದ ಸಾತ್ಯಕಿಯ ರಕ್ಷಣೆ (೧೦೫) ೪೯೬
ಸಾತ್ಯಕಿಯಿಂದ ಭೂರಿಶ್ರವನ ಸಂಹಾರ (೧೦೭) ೪೯೮
ಶ್ರೀಕೃಷ್ಣನಿಂದ ಅಶ್ವಗಳ ಆಯಾಸ ಪರಿಹಾರ (೧೦೮) ೪೯೮
ಅರ್ಜುನನ ಅದ್ಭುತ ಅಸ್ತ್ರವಿದ್ಯಾ ಕೌಶಲ (೧೦೯) ೪೯೯
ಯುಧಿಷ್ಠಿರನ ಆತಂಕ (೧೧೧) ೫೦೨
ಅರ್ಜುನನ ಕ್ಷೇಮವಾರ್ತೆ ತಿಳಿದು ಬರಲು ಭೀಮನಿಗೆ ಆದೇಶ (೧೧೨) ೫೦೨
ಭೀಮ ತಿಳಿಸಿದ ಕೃಷ್ಣಮಹಿಮೆ (೧೧೩) ೫೦೩
ಯುಧಿಷ್ಠಿರನ ಒತ್ತಾಯ (೧೧೫) ೫೦೪
ಯುಧಿಷ್ಠಿರನ ರಕ್ಷಣೆಗೆ ಧೃಷ್ಟದ್ಯುಮ್ನ ಘಟೋತ್ಕಚರ ನಿಯುಕ್ತಿ (೧೧೭) ೫೦೫

ಭೀಮ ದ್ರೋಣರ ಯುದ್ಧ (೧೨೦) ೫೦೭
ಗದೆಯಿಂದ ಪುಡಿಯಾದ ದ್ರೋಣರಥ (೧೨೨) ೫೦೮
ಭೀಮನಿಂದ ದ್ರೋಣರ ಎಂಟು ರಥಗಳ ವಿನಾಶ (೧೨೬) ೫೧೦
ಕುರು ಸೇನೆಯಲ್ಲಿ ದ್ರೋಣರ ಪರಾಕ್ರಮ (೧೨೮) ೫೧೧
ಭೀಮನಿಂದ ವಿಂದ, ಅನುವಿಂದ ಮೊದಲಾದ ಹನ್ನೆರಡು ಕೌರವರ
ಹಾಗೂ ದುರ್ಯೋಧನನ ಮಂತ್ರಿಗಳ ವಧೆ (೧೩೧) ೫೧೨
ಭೀಮನಿಂದ ಕೃತವರ್ಮನ ಪರಾಭವ (೧೩೪) ೫೧೩
ಭೀಮನಿಂದ ಅರ್ಜುನನ ಕ್ಷೇಮವಾರ್ತೆಯ ಘೋಷ (೧೩೭) ೫೧೪
ಭೀಮನ ಸಿಂಹನಾದದ ವೈಭವ (೧೩೮) ೫೧೫
ಭೀಮನಿಂದ ವಿಕರ್ಣಾದಿಗಳ ವಧೆ - ಕರ್ಣನ ಪರಾಜಯ (೧೩೯) ೫೧೬
ಇಪ್ಪತ್ತೊಂದು ಬಾರಿ ಭೀಮನಿಂದ ಕರ್ಣನ ಸೋಲು (೧೪೩) ೫೧೮
ಭೀಮನೊಂದಿಗೆ ಕರ್ಣನ ಇಪ್ಪತ್ತೆರಡನೆಯ ಯುದ್ಧ (೧೪೫) ೫೧೯
ಭೀಮನಿಂದ ಕರ್ಣನ ಕವಚ ಕುಂಡಲಗಳ ನಾಶ (೧೪೮) ೫೨೦
ಪರಶುರಾಮರ ವರವನ್ನು ಪಾಲಿಸಲು ಭೀಮನ ನಿಶ್ಚಯ (೧೫೧) ೫೨೧
ಭೀಮನ ಅದ್ಭುತ ಪರಾಕ್ರಮ (೧೫೪) ೫೨೨
ಭಯಗೊಂಡ ಕರ್ಣ ನೊಗದ ಕೆಳಗೆ ಅಡಗಿದ (೧೫೫) ೫೨೩
ಶಕ್ತ್ಯಾಯುಧ ಮೊದಲಾದವುಗಳನ್ನು ಒಯ್ಯಬಯಸದ ಭೀಮ (೧೫೬) ೫೨೩
ಭೀಮ ಕರ್ಣನನ್ನು ಕೊಲ್ಲದಿರಲು ಕಾರಣ (೧೫೭) ೫೨೪
ಭೀಮನ ಪರಾಕ್ರಮ (೧೫೮) ೫೨೫
ದುರ್ಯೋಧನನ ಪ್ರೀತಿಗಾಗಿ ಕರ್ಣನಿಂದ ದುರುಕ್ತಿ (೧೬೦) ೫೨೭
ಕರ್ಣ ಭೀಮನ ಮೇಲೆ ಶಕ್ತ್ಯಾಯುಧ ಪ್ರಯೋಗಿಸದಿರಲು ಕಾರಣ (೧೬೧) ೫೨೮
ಭೀಮ ಕರ್ಣನ ಶಕ್ತ್ಯಾಯುಧವನ್ನು ಒಯ್ಯದಿರಲು ಕಾರಣ (೧೬೩) ೫೨೯
ಕರ್ಣ ಸಾತ್ಯಕಿಯರ ಯುದ್ಧ (೧೬೮) ೫೩೨
ಸಾತ್ಯಕಿಯಿಂದ ಕರ್ಣನ ಪರಾಜಯ (೧೭೦) ೫೩೩
ಭೀಮನ ರಹಸ್ಯ ಪ್ರತಿಜ್ಞೆ (೧೭೧) ೫೩೩
ಅರ್ಜುನನ ರಹಸ್ಯ ಪ್ರತಿಜ್ಞೆ (೧೭೫) ೫೩೫

ಕರ್ಣನನ್ನು ಕೊಲ್ಲುವ ಅರ್ಜುನನ ಪುನಃಪ್ರತಿಜ್ಞೆ (೧೭೭) ೫೩೬
ಕರ್ಣಪುತ್ರನ ವಧೆಗೆ ಅರ್ಜುನನ ಪ್ರತಿಜ್ಞೆ (೧೮೨) ೫೩೯
ಅರ್ಜುನ ಅಶ್ವತ್ಥಾಮರ ಯುದ್ಧ (೧೮೪) ೫೩೯
ರಾತ್ರಿಯಾದ ಹಗಲು (೧೮೬) ೫೪೦
ಕೌರವರ ಹರ್ಷ (೧೮೭) ೫೪೧
ಅರ್ಜುನನಿಂದ ಜಯದ್ರಥನ ವಧೆ (೧೮೮) ೫೪೨
ಅರ್ಜುನನಿಂದ ವೃದ್ಧಕ್ಷತ್ರನ ವಧೆ (೧೯೦) ೫೪೩
ಪುನಃ ರಾತ್ರಿ ಹಗಲಾಯಿತು (೧೯೨) ೫೪೫
ಭೀಮನ ಅದ್ಭುತ ಪರಾಕ್ರಮ (೧೯೩) ೫೪೫
ಸಿಂಹನಾದದ ಸೂಚನೆಯಿಂದ ಯುಧಿಷ್ಠಿರನ ಹರ್ಷ (೧೯೪) ೫೪೬
ಭೀಮನಿಂದ ವ್ಯೂಹಭೇದ (೧೯೫) ೫೪೬
ಪಾಂಡವರಿಂದ ಕೌರವಸೇನೆಯ ಪರಾಭವ (೧೯೭) ೫೪೭
ದುರ್ಯೋಧನನ ಪರಾಕ್ರಮ (೧೯೮) ೫೪೭
ಭೀಮ ಅಜೇಯನೆಂದು ಕರ್ಣನ ಪ್ರತಿಪಾದನೆ (೨೦೩) ೫೪೮
ದುರ್ಯೋಧನನಿಂದ ದ್ರೋಣರ ನಿಂದೆ (೨೦೫) ೫೪೯
ದ್ರೋಣರ ಭೀಕರ ಪ್ರತಿಜ್ಞೆ (೨೦೭) ೫೪೯
ಅಶ್ವತ್ಥಾಮರಿಗೆ ದ್ರೋಣರ ಸಂದೇಶ (೨೦೮) ೫೫೦
ಆ ವರೆಗಿನ ಸೇನಾನಾಶದ ವಿವರ (೨೧೦) ೫೫೧
ಹದಿನಾಲ್ಕನೆಯ ದಿನದ ರಾತ್ರಿಯುದ್ಧ -
ಭೀಮನಿಂದ ಕರ್ಣ ದುಷ್ಕರ್ಣರ ವಧೆ (೨೧೩) ೫೫೨
ಭೀಮನಿಂದ ಕಾಳಿಂಗವಧೆ (೨೧೭) ೫೫೩
ಭೀಮನಿಂದ ಕೇತುಮಂತ ಮೊದಲಾದವರ ವಧೆ (೨೧೯) ೫೫೪
ಭೀಮನಿಂದ ಕರ್ಣಾನುಜರ ವಧೆ (೨೨೦) ೫೫೬
ಭೀಮನಿಂದ ಕರ್ಣಶಕ್ತಿಯ ಭಂಗ (೨೨೧) ೫೫೭
ಭೀಮನಿಂದ ಕರ್ಣರಥದ ನಾಶ (೨೨೫) ೫೫೮
ಕರ್ಣನಿಂದ ಸಹದೇವನ ಪರಾಜಯ (೨೨೯) ೫೫೯

ಘಟೋತ್ಕಚ ಅಶ್ವತ್ಥಾಮರ ಸಂಗ್ರಾಮ (೨೩೨) ೫೬೧
ಅಶ್ವತ್ಥಾಮನಿಂದ ಅಂಜನವರ್ಮನ ಸಂಹಾರ (೨೩೮) ೫೬೩
ಘಟೋತ್ಕಚನಿಂದ ಅಶ್ವತ್ಥಾಮರ ಮೂರ್ಛೆ (೨೩೯) ೫೬೪
ಅಶ್ವತ್ಥಾಮನಿಂದ ಘಟೋತ್ಕಚನ ಮೂರ್ಛೆ (೨೪೦) ೫೬೪
ಅಶ್ವತ್ಥಾಮರ ಮೂರ್ಛೆ (೨೪೧) ೫೬೫
ಘಟೋತ್ಕಚನ ಅದ್ಭುತ ಯುದ್ಧ (೨೪೨) ೫೬೫
ಕರ್ಣಘಟೋತ್ಕಚರ ಯುದ್ಧ (೨೪೪) ೫೬೬
ಘಟೋತ್ಕಚನಿಂದ ಅಲಂಬಲನ ವಧೆ (೨೪೭) ೫೬೭
ಘಟೋತ್ಕಚನಿಂದ ಅಲಾಯುಧನ ವಧೆ (೨೪೮) ೫೬೭
ಶಕ್ತಿಮೋಚನಕ್ಕೆ ಕರ್ಣನಲ್ಲಿ ಪ್ರಾರ್ಥನೆ (೨೫೧) ೫೬೮
ಕರ್ಣನಿಂದ ಶಕ್ತ್ಯಾಯುಧಪ್ರಯೋಗ (೨೫೨) ೫೬೯
ಶಕ್ತ್ಯಾಯುಧದಿಂದ ಘಟೋತ್ಕಚನ ಮರಣ (೨೫೪) ೫೭೦
ವ್ಯಾಸರಿಂದ ಧರ್ಮರಾಜನ ಸಾಂತ್ವನ (೨೫೮) ೫೭೧
ಉಭಯ ಸೇನೆಗಳಿಗೆ ನಿದ್ರೆಯ ಬಾಧೆ (೨೬೦) ೫೭೨
ಸ್ವಲ್ಪಕಾಲ ನಿದ್ರಿಸಲು ಅರ್ಜುನನ ಅನುಮತಿ (೨೬೧) ೫೭೩
ಚಂದ್ರೋದಯ - ಮತ್ತೆ ರಾತ್ರಿಯುದ್ಧ - ಸೋಮದತ್ತ, ಭೂರಿಗಳ ವಧೆ (೨೬೨) ೫೭೩
ಬಾಹ್ಲೀಕನಿಂದ ಸಾತ್ಯಕಿಯ ಪರಾಭವ (೨೬೩) ೫೭೪
ಭೀಮನಿಂದ ಸಾತ್ಯಕಿಯ ರಕ್ಷಣೆ - ಬಾಹ್ಲೀಕನ ವಧೆ (೨೬೪) ೫೭೫
ಬಾಹ್ಲೀಕವಧೆಯ ರಹಸ್ಯ (೨೬೫) ೫೭೫
ರಾತ್ರಿಯುದ್ಧದಲ್ಲಿ ಅಕ್ಷೋಹಿಣೀ ಸೇನೆಯ ವಿನಾಶ (೨೬೮) ೫೭೮
ಹದಿನೈದನೆಯ ದಿನದ ಯುದ್ಧ (೨೬೯) ೫೭೮
ದ್ರೋಣರ ಅದ್ಭುತ ಯುದ್ಧ (೨೭೦) ೫೭೮
ದ್ರೋಣರಿಂದ ವಿರಾಟ ದ್ರುಪದರ ವಧೆ (೨೭೨) ೫೭೯
ದ್ರೋಣ ಧೃಷ್ಟದ್ಯುಮ್ನರ ಯುದ್ಧ (೨೭೩) ೫೮೦
ದ್ರೋಣರಿಂದ ಪುರುಜಿತ್ ಕುಂತಿಭೋಜಾದಿಗಳ ವಧೆ (೨೭೬) ೫೮೧
ಭೀಮಸೇನನಿಂದ ಜಯತ್ಸೇನನ ಸಂಹಾರ (೨೭೯) ೫೮೨

ಭೀಮಸೇನನಿಂದ ಅಶ್ವತ್ಥಾಮ ಗಜದ ಸಂಹಾರ (೨೮೦) ೫೮೨
'ಅಶ್ವತ್ಥಾಮಾ ಹತಃ' ಎಂದ ಯುಧಿಷ್ಠಿರ (೨೮೧) ೫೮೩
ಭೀಮನಿಂದ ದ್ರೋಣರಿಗೆ ಉಪದೇಶ (೨೮೩) ೫೮೫
ದ್ರೋಣರ ದೇಹತ್ಯಾಗ (೨೮೫) ೫೮೭
ದ್ರೋಣರಿಗೆ ಸದ್ಗತಿ - ಧೃಷ್ಟದ್ಯುಮ್ನನಿಂದ ದ್ರೋಣರ ಶಿರಶ್ಛೇದ (೨೮೬) ೫೮೭
ಸಾತ್ಯಕಿ ಧೃಷ್ಟದ್ಯುಮ್ನರ ವಿವಾದ (೨೮೮) ೫೮೮
ಭೀಮನಿಂದ ವಿವಾದದ ಉಪಶಮನ (೨೯೦) ೫೮೯
ಅಶ್ವತ್ಥಾಮನಿಂದ ನಾರಾಯಣಾಸ್ತ್ರಪ್ರಯೋಗ (೨೯೨) ೫೯೦
ಯುಧಿಷ್ಠಿರನ ವಿಷಾದ (೨೯೩) ೫೯೧
ಶ್ರೀಕೃಷ್ಣನಿಂದ ಅಸ್ತ್ರಮೋಚನದ ಉಪಾಯ (೨೯೪) ೫೯೧
ಭೀಮನ ಅದ್ಭುತ ಧರ್ಮಪಾಲನೆ (೨೯೫) ೫೯೩
ಇತರರಿಗೂ ಭೀಮನ ಉಪದೇಶ (೩೦೧) ೫೯೬
ಅಸ್ತ್ರಕ್ಕೆ ವಂದಿಸದಿರಲು ಕಾರಣ (೩೦೨) ೫೯೭
ನಾರಾಯಣಾಸ್ತ್ರದ ಅಭಿಮಾನಿದೇವತೆ (೩೦೩) ೫೯೮
ಅಶ್ವತ್ಥಾಮನೊಂದಿಗೆ ಧೃಷ್ಟದ್ಯುಮ್ನ ಸಾತ್ಯಕಿಯರ ಯುದ್ಧ (೩೦೭) ೬೦೦
ಅಶ್ವತ್ಥಾಮರಿಂದ ಆಗ್ನೇಯಾಸ್ತ್ರಪ್ರಯೋಗ (೩೦೯) ೬೦೧
ಅಶ್ವತ್ಥಾಮರ ಯುದ್ಧತ್ಯಾಗ - ವೇದವ್ಯಾಸರ ಧರ್ಮೋಪದೇಶ (೩೧೧) ೬೦೨

ಪರಿಶಿಷ್ಟ ೬೦೫ - ೬೧೬

ವ್ಯತ್ಯಾಸಾದಿಸಪ್ತಭೇದಪ್ರತಿಪಾದಕಪುರಾಣವಾಕ್ಯಸಂಗ್ರಹ ೬೦೫-೬೧೬

*****

ಮುನ್ನುಡಿ

ಶ್ರೀವೇದವ್ಯಾಸರ ಮಹಾಭಾರತದಂತೆ ವೈವಿಧ್ಯಮಯ ವಿವರಗಳನ್ನೊಳಗೊಂಡಿರುವ ಅನಂತರಕಾಲದ ಏಕಮಾತ್ರಕೃತಿ ಆಚಾರ್ಯ ಶ್ರೀಮಧ್ವ(ಕ್ರಿ.ಶ.೧೨೦೦–೧೨೭೯)ರ ಮಹಾಭಾರತತಾತ್ಪರ್ಯನಿರ್ಣಯ. ಶಾಸ್ತ್ರಚರ್ಚೆಯಿಂದ ಹಿಡಿದು ರೋಚಕವಾದ ಕಥಾವಿವರಗಳವರೆಗೆ ವಿಭಿನ್ನ ಅಭಿರುಚಿಯ ಜಿಜ್ಞಾಸುಗಳಿಗೂ ರೋಚಕವೆನ್ನಿಸುವ ಸಕಲ ವಿವರಗಳನ್ನೂ ಒಳಗೊಂಡಿರುವುದು ಅವರ ಈ ಕೃತಿಯ ಅಸಾಧಾರಣವಾದ ಹಿರಿಮೆ.

ಹಿಂದಿನ ಸಂಪುಟದಲ್ಲಿ ಕುರುಪಾಂಡವರ ಅಸ್ತ್ರಾಭ್ಯಾಸದ ಮುಕ್ತಾಯದಿಂದ ಪ್ರಾರಂಭವಾಗಿ ಪಾಂಡವರ ವನಗಮನದವರೆಗಿನ ಕಥಾವಿವರಗಳನ್ನೊಳಗೊಂಡ ೧೮ ನೇ ಅಧ್ಯಾಯದಿಂದ ೨೧ ನೇ ಅಧ್ಯಾಯದ ವರೆಗಿನ ಒಟ್ಟು ೪ ಅಧ್ಯಾಯಗಳು ಅನುವಾದಸಮೇತವಾಗಿ ಬಂದಿದ್ದವು. ಪ್ರಸ್ತುತ ಸಂಪುಟ ೨೨ ನೇ ಅಧ್ಯಾಯದಿಂದ ೨೬ ನೇ ಅಧ್ಯಾಯದವರೆಗಿನ ಒಟ್ಟು ಐದು ಅಧ್ಯಾಯಗಳ ಅನುವಾದವನ್ನೊಳಗೊಂಡಿದೆ.

ಇಪ್ಪತ್ತೆರಡನೆಯ ಅಧ್ಯಾಯ (ಶ್ಲೋಕ ಸಂಖ್ಯೆ : ೪೪೭)

ಪಾಂಡವರ ವನ ಪ್ರವೇಶ, ಕಿರ್ಮೀರವಧೆ, ತನ್ನೊಂದಿಗೆ ಬಂದ ಅಸಂಖ್ಯ ಋಷಿಮುನಿಗಳ ಸಂರಕ್ಷಣೆಗೆಂದು ಸೂರ್ಯಾಂತರ್ಗತ ಶ್ರೀಹರಿಯನ್ನು ಆರಾಧಿಸಿ ಯುಧಿಷ್ಠಿರ ಅಕ್ಷಯಪಾತ್ರೆಯನ್ನು ಪಡೆದದ್ದು, ವನವಾಸದಲ್ಲೂ ಚಕ್ರವರ್ತಿಯಾಗಿದ್ದ ಸಮಯದಲ್ಲಿ ಹೇಗೋ ಹಾಗೆ ಸಮಸ್ತ ಸುಖಸಂತೋಷಗಳಿಂದ ಕೂಡಿ ದೇವಲೋಕದಲ್ಲಿ ದೇವೇಂದ್ರನಂತೆ ಪಾಂಡವರು ನೆಮ್ಮದಿಯಿಂದಿದ್ದದ್ದು, ಪಾಂಡವರಿಗೆ ಮರಳಿ ರಾಜ್ಯ ಒಪ್ಪಿಸುವ ವಿದುರನ ಸಲಹೆಯನ್ನು ಧೃತರಾಷ್ಟ್ರ ತಿರಸ್ಕರಿಸಿದ್ದು, ಪಾಂಡವರೆಡೆಗೆ ನಡೆದ ವಿದುರನ ವಿರಹವನ್ನು ಸಹಿಸದೆ ನೊಂದ ಧೃತರಾಷ್ಟ್ರನ ಪ್ರೀತಿಗೆಂದು ಸಂಜಯ ವಿದುರನನ್ನು ಮರಳಿ ಕರೆತಂದದ್ದು, ವನವಾಸದಲ್ಲಿದ್ದ ಪಾಂಡವರ ಮೇಲೆ ಆಕ್ರಮಣ ನಡೆಸುವ ದುರುದ್ದೇಶದಿಂದ ಸಿದ್ಧರಾಗಿದ್ದ ದುರ್ಯೋಧನಾದಿಗಳನ್ನು ಶ್ರೀವೇದವ್ಯಾಸರು ಧೃತರಾಷ್ಟ್ರನ ಮೂಲಕ ತಡೆದದ್ದು, ಪಾಂಡವರ ವನಗಮನ ತಮಗೆ ಪ್ರಿಯವಲ್ಲವೆಂದು ಅವರು ಧೃತಾಷ್ಟ್ರನಿಗೆ ತಿಳಿಸಿದ್ದು, ವ್ಯಾಸರ ಆದೇಶದಂತೆ ಆಗಮಿಸಿದ ಮೈತ್ರೇಯರನ್ನು ದುರ್ಯೋಧನ ಅವಜ್ಞೆಯಿಂದ ಕಂಡಾಗ ಅವರು ಅವನ ತೊಡೆ ಮುರಿಯಲೆಂದೇ ಯುದ್ಧ ನಡೆಯಲಿ ಎಂದು ಶಪಿಸಿದ್ದು, ಕಿರ್ಮೀರವಧೆಯ ವೃತ್ತಾಂತವನ್ನು ಕೇಳಿ ದುರ್ಯೋಧನ ತಲ್ಲಣಿಸಿದ್ದು, ವನದಲ್ಲಿದ್ದ ಪಾಂಡವರ ಬಳಿಗೆ ಸತ್ಯಭಾಮಾಸಮೇತನಾಗಿ ಶ್ರೀಕೃಷ್ಣನು ಆಗಮಿಸಿದ್ದು, ಕೃಷ್ಣನನ್ನು ದ್ರೌಪದಿ ಅಪೂರ್ವವಾಗಿ ಸ್ತುತಿಸಿದ್ದು, ಕೃಷ್ಣಸಾಲ್ವವಧೆಯ ವೃತ್ತಾಂತವನ್ನು ತಿಳಿಸಿ ತನ್ನ ಅನುಪಸ್ಥಿತಿಯಿಂದಾಗಿ ಪಾಂಡವರಿಗೆ ಅಂತಹ ಆಪತ್ತು ಒದಗಿತೆಂದು ಸಮಾಧಾನಪಡಿಸಿದ್ದು, ದ್ರೌಪದಿಗೆ ಅವಮಾನ

ಮಾಡಿದ ಕೌರವರನ್ನೆಲ್ಲ ಭೀಮನಿಂದ ಸಂಹಾರಮಾಡಿಸುವುದಾಗಿ ದ್ರೌಪದಿಗೆ ವಚನ ನೀಡಿದ್ದು, ಪಾಂಡವರ ಒಂದು ವರ್ಷದ ವನವಾಸ ಹಾಗೆ ಪೂರೈಸಿದಾಗ ಭೀಮದ್ರೌಪದಿಯರು ಯುಧಿಷ್ಠಿರನಿಗೆ ಅವನು ಮಾಡಿದ ಕರ್ತವ್ಯಲೋಪವನ್ನು ವಿವರಿಸಿ ಅಜ್ಞಾತವಾಸ ಕಳೆಯುತ್ತಲೇ ದುರ್ಯೋಧನ ರಾಜ್ಯ ನೀಡದಿದ್ದಲ್ಲಿ ಯುದ್ಧ ಕೈಗೊಳ್ಳುವ ದೀಕ್ಷೆ ಹುಟ್ಟಿಸಿದ್ದು, ಶ್ರೀವೇದವ್ಯಾಸರು ಆಗಮಿಸಿ ಅರ್ಜುನನಿಗೆ ಧರ್ಮರಾಜನ ಮೂಲಕ ಮಂತ್ರೋಪದೇಶ ಮಾಡಿದ್ದು, ಅರ್ಜುನ ಶ್ರೀವ್ಯಾಸರ ಆದೇಶದಂತೆ ಇಂದ್ರಕೀಲಪರ್ವತದಲ್ಲಿ ಶಿವನನ್ನು ಆರಾಧಿಸಿ ಕಿರಾತರೂಪದಿಂದ ಆಗಮಿಸಿದ ಅವನ ಅನುಗ್ರಹಕ್ಕೆ ಪಾತ್ರವಾಗಿ ಪಾಶುಪತಾಸ್ತ್ರವನ್ನು ಪಡೆದದ್ದು, ದಿಕ್ಪಾಲಕರು ಅವನಿಗೆ ತಮ್ಮ ವಿಶೇಷಾಸ್ತ್ರಗಳನ್ನು ನೀಡಿದ್ದು, ಇಂದ್ರನ ಆಹ್ವಾನದಂತೆ ಅರ್ಜುನ ಮಾತಲಿಸಂಗೃಹೀತವಾದ ರಥದಲ್ಲಿ ಕುಳಿತು ಇಂದ್ರಲೋಕಕ್ಕೆ ತೆರಳಿದ್ದು, ಅಲ್ಲಿ ತಾನಾಗಿ ಬಯಸಿಬಂದ ಉರ್ವಶಿಯನ್ನು ಕುಲದ ತಾಯಿಯೆಂಬ ಕಾರಣದಿಂದಾಗಿ ಸಂಗ ಬಯಸದ ಅವನನ್ನು ಷಂಡನಾಗುವಂತೆ ಅವಳು ಶಪಿಸಿದ್ದು, ಇಂದ್ರ ಅರ್ಜುನನಿಗೆ ಆ ಶಾಪ ಒಂದುವರ್ಷ ಅಜ್ಞಾತವಾಸಕಾಲದಲ್ಲಿ ತೋರಿಕೆಗೆ ಮಾತ್ರ ಅನ್ವಯಿಸುವಂತೆ ಮಾಡಿ ಅದನ್ನು ವರವಾಗುವಂತೆ ಪರಿವರ್ತಿಸಿದ್ದು, ಪಾಂಡವರು ಇಂದ್ರಾರ್ಜುನರು ಕಳುಹಿಸಿದ ಲೋಮಶಮುನಿಗಳ ನೇತೃತ್ವದಲ್ಲಿ ಭರತಖಂಡದ ಸಮಸ್ತ ತೀರ್ಥಕ್ಷೇತ್ರಗಳನ್ನು ಸಂದರ್ಶಿಸಿದ್ದು, ಪ್ರಭಾಸದಲ್ಲಿ ತಮಗೆ ದರ್ಶನನೀಡಿದ ಕೃಷ್ಣನಿಗೆ ಆ ಪುಣ್ಯಫಲವನ್ನು ಸಮರ್ಪಿಸಿ ಅವನ ಅನುಗ್ರಹಕ್ಕೆ ಪಾತ್ರರಾದದ್ದು, ಪ್ರಯಾಣವನ್ನು ಮುಂದುವರಿಸಿದ ಪಾಂಡವರು ಹಿಮಾಲಯವನ್ನು ತಲುಪಿ ಅಲ್ಲಿ ಘಟೋತ್ಕಚ ಮೊದಲಾದವರ ಮೇಲೆ ಕುಳಿತು ದ್ರೌಪದಿ ಹಾಗೂ ಮುನಿಜನಗಳೊಂದಿಗೆ ಬದರೀಕ್ಷೇತ್ರವನ್ನು ತಲುಪಿದ್ದು, ಅಲ್ಲಿಂದ ಮುಂದೆ ಉತ್ತರಬದರಿಗೆ ತೆರಳಿ ಅಲ್ಲಿ ನೆಲೆಸಿದ್ದು, ಆಗೊಮ್ಮೆ ಭೀಮ ದ್ರೌಪದಿಯರು ಏಕಾಂತದಲ್ಲಿದ್ದಾಗ ಅಲ್ಲಿಗೆ ಬಂದುಬಿದ್ದ ಸೌಗಂಧಿಕಪುಷ್ಪಗಳನ್ನು ನೋಡಿ ಭೀಮಸೇನನ ಯಶೋಧರ್ಮಗಳ ವೃದ್ಧಿಗಾಗಿ ಅಂಥಹ ಅನೇಕ ಪುಷ್ಪ ಗಳನ್ನು ತಂದುಕೊಡಲು ಪ್ರಾರ್ಥಿಸಿದ್ದು, ಅದರಂತೆ ತೆರಳಿದ ಭೀಮಸೇನ ಮಾರ್ಗಮಧ್ಯದಲ್ಲಿ ತನ್ನದೇ ಆದ ಹನುಮದ್ರೂಪವನ್ನು ಸಂದರ್ಶಿಸಿದ್ದು, ಅದರೊಂದಿಗೆ ವಿಭಿನ್ನವ್ಯಕ್ತಿಯೊಂದಿಗೆ ವರ್ತಿಸುವಂತೆ ವರ್ತಿಸಿದ್ದು, ಹನುಮಂತನು ವಿಶ್ವರೂಪ ತೋರಿದಾಗ ಆಶ್ಚರ್ಯಪಟ್ಟಂತೆ ವರ್ತಿಸಿ, ಚತುರ್ಯುಗದ ಧರ್ಮಗಳನ್ನೂ ಕೇಳಿ ತಿಳಿದಂತೆ ಮಾಡಿದ್ದು, ಅರ್ಜುನನ ರಥದ ಧ್ವಜದಲ್ಲಿ ಕುಳಿತು ಗರ್ಜನೆಯಿಂದಲೇ ಶತ್ರುಗಳನ್ನು ಪರಾಭವಗೊಳಿಸುವಂತೆ ವರಪಡೆದಂತೆ ನಟಿಸಿದ್ದು, ಮುಂದೆ ಸೌಗಂಧಿಕವನಕ್ಕೆ ತೆರಳಿ ಅಲ್ಲಿದ್ದ ಲಕ್ಷಸಂಖ್ಯೆಯ ಕ್ರೋಧವಶರೆಂಬ ದೈತ್ಯರನ್ನು ಸಂಹರಿಸಿದ್ದು, ದ್ರೌಪದಿಯಿಂದ ವಿಷಯ ತಿಳಿದು ಸಪರಿವಾರನಾಗಿ ಆಗಮಿಸಿದ ಯುಧಿಷ್ಠಿರ ಭೀಮನ ಸಾಹಸವನ್ನು ಕಂಡು ಆನಂದಿಸಿದ್ದು, ಕುಬೇರನಿಂದ ಪಾಂಡವರೆಲ್ಲ ಸತ್ಕೃತರಾದದ್ದು, ಮತ್ತೊಮ್ಮೆ ದ್ರೌಪದಿಯ ಕೋರಿಕೆಯಂತೆ

ಭೀಮಸೇನ ಪಂಚವರ್ಣದ ಪುಷ್ಪಗಳನ್ನು ತರಲೆಂದು ಕುಬೇರನ ಉಪವನಕ್ಕೆ ತೆರಳಿ, ಅಲ್ಲಿ ಕಾವಲಿದ್ದ ಮಣಿಮಂತನ ನೇತೃತ್ವದ ಪದ್ಮತ್ರಯಸಂಖ್ಯೆಯ ಕ್ರೋಧವಶದೈತ್ಯವೃಂದವನ್ನು ಸಂಹರಿಸಿದ್ದು, ವಿಷಯ ತಿಳಿದ ಕುಬೇರ ಯುದ್ಧಕ್ಕೆಂದು ಆಗಮಿಸಿದ್ದು, ತನ್ನ ಮಿತ್ರನಾದ ಮಣಿಮಂತನ ಸಾವಿಗೆ ಅಗಸ್ತ್ಯರ ಶಾಪ ಕಾರಣವೆಂದು ತಿಳಿದು ಶಾಂತನಾದ ಅವನು ಪಾಂಡವರಿಗೆ ತನ್ನ ಅಲಕಾಪುರಿಯಲ್ಲೇ ವಾಸವನ್ನು ಕಲ್ಪಿಸಿದ್ದು, ಅತ್ತ ಅರ್ಜುನ ದೇವಲೋಕದಲ್ಲಿ ಐದು ವರ್ಷಗಳನ್ನು ಕಳೆದು ಚಿತ್ರರಥನ ಬಳಿ ಗಾಂಧರ್ವವಿದ್ಯೆಯನ್ನು ಕಲಿತದ್ದು, ಇಂದ್ರನ ಪ್ರಾರ್ಥನೆಯಂತೆ, ಅವನು ಕಟ್ಟಿದ ಕಿರೀಟವನ್ನು ಹೊಂದಿ, ದೇವತೆಗಳು ನೀಡಿದ ದೇವದತ್ತ ಶಂಖವನ್ನು ಪಡೆದು, ನಿವಾತಕವಚ ಕಾಲಕೇಯರನ್ನು ಪಾಶುಪತಾಸ್ತ್ರದಿಂದ ಸಂಹರಿಸಿದ್ದು, ಬಳಿಕ ಕುಬೇರಪುರಿಯಲ್ಲಿದ್ದ ತನ್ನ ಸೋದರರ ಬಳಿಗೆ ತೆರಳಿದ್ದು, ಅವನ ಆಗಮನದ ಅನಂತರ ಪುನಃ ನಾಲ್ಕು ವರ್ಷಗಳ ಕಾಲ ಪಾಂಡವರು ಅಲ್ಲಿ ನೆಲೆಸಿ, ಬಳಿಕ ಭೀಮನ ಹಿತೋಕ್ತಿಯಂತೆ ಹಿಂದಿರುಗಿ ಹಿಮಾಲಯದ ದಕ್ಷಿಣದ ತಪ್ಪಲಿನಲ್ಲಿ ವಾಸಿಸಿದ್ದು, ಆಗೊಮ್ಮೆ ಬೇಟೆಗೆ ತೆರಳಿದ ಭೀಮ ಸ್ವೇಚ್ಛೆಯಿಂದ ಅಜಗರರೂಪದ ನಹುಷನ ಬಂಧನಕ್ಕೆ ಒಳಗಾದದ್ದು, ನಹುಷನ ಪ್ರಶ್ನೆಗೆ ಭೀಮ ಉತ್ತರಿಸಿ ಯುಧಿಷ್ಠಿರ ಭೀಮನ ಸಮೇತ ಹಿಂದಿರುಗಿದ್ದು, ಆಗೊಮ್ಮೆ ವಿವಾಹಕ್ಕೋಸ್ಕರ ತೆರಳುತ್ತಿದ್ದ ಜಯದ್ರಥ ದ್ರೌಪದಿಯ ಅಪಹರಣಕ್ಕೆ ಯತ್ನಿಸಿ ಭೀಮಾರ್ಜುನರಿಂದ ಪರಿಭವಕ್ಕೊಳಗಾದದ್ದು, ಭೀಮನಿಂದ ಪಂಚಚೂಡನಾಗಿಸಲ್ಪಟ್ಟ ಜಯದ್ರಥ ಶಿವನನ್ನು ಆರಾಧಿಸಿ, ಒಂದು ದಿನದ ಮಟ್ಟಿಗೆ ಅರ್ಜುನನ ಹೊರತು ಇತರ ಪಾಂಡವರನ್ನು ಯುದ್ಧದಲ್ಲಿ ತಡೆಯುವಂತಹ ವರವನ್ನು ಪಡೆದುಕೊಂಡದ್ದು, ಮಾರ್ಕಂಡೇಯರು ಪಾಂಡವರಲ್ಲಿಗೆ ಬಂದು ರಾಮೋಪಾಖ್ಯಾನ ಮೊದಲಾದ ಅನೇಕ ಕಥೆಗಳನ್ನು ತಿಳಿಸಿ ಯುಧಿಷ್ಠಿರನನ್ನು ಆನಂದಪಡಿಸಿದ್ದು, ದುರ್ಯೋಧನಾದಿಗಳು ಪಾಂಡವರನ್ನು ಅವಮಾನಿಸಲೆಂದು ಘೋಷಯಾತ್ರೆಯ ನೆಪದಿಂದ ಸೇನಾಸಮೇತರಾಗಿ ಪಾಂಡವರಿದ್ದ ವನಕ್ಕೆ ತೆರಳಿದ್ದು, ಅವನ ದುರುದ್ದೇಶವನ್ನು ಅರಿತ ಇಂದ್ರ ದುರ್ಯೋಧನನ ಪರಾಭವಕ್ಕೆಂದು ವರ ನೀಡಿ ಚಿತ್ರಸೇನಗಂಧರ್ವನನ್ನು ಅಪಾರಸೇನೆಯೊಂದಿಗೆ ಕಳುಹಿಸಿದ್ದು, ಅವನಿಂದ ಪರಾಜಿತನಾದ ಕರ್ಣ ವಿಕರ್ಣನೊಂದಿಗೆ ಪಲಾಯನ ಮಾಡಿದ್ದು, ದುರ್ಯೋಧನ ತನ್ನ ಸೋದರರ ಸಮೇತ ಪರಾಜಿತನಾಗಿ ಗಂಧರ್ವನಿಂದ ಬಂಧಿತನಾದದ್ದು, ದುರ್ಯೋಧನನ ಮಂತ್ರಿಗಳ ಪ್ರಾರ್ಥನೆಯಂತೆ ಯುಧಿಷ್ಠಿರನ ಅಪೇಕ್ಷೆಯಂತೆ ಭೀಮಾರ್ಜುನರು ಗಂಧರ್ವರನ್ನು ಪರಾಭವಗೊಳಿಸಿ, ಪತ್ನೀ ಸೋದರಸಮೇತನಾದ ದುರ್ಯೋಧನನನ್ನು ಬಿಡುಗಡೆ ಮಾಡಿಸಿದ್ದು, ಹತಾಶನಾದ ದುರ್ಯೋಧನ ಪ್ರಾಣತ್ಯಾಗಕ್ಕೆಂದು ಪ್ರಾಯೋಪವೇಶ ಕೈಗೊಂಡದ್ದು, ಆ ರಾತ್ರಿಯಲ್ಲಿ ಶುಕ್ರನಿರ್ಮಿತವಾದ ಕೃತ್ಯೆಯ ಮೂಲಕ ದೈತ್ಯರು ದುರ್ಯೋಧನನನ್ನು ಪಾತಾಳಕ್ಕೆ ಕರೆಸಿಕೊಂಡು, ಅವನ ಸ್ವರೂಪ, ದೇವದ್ವೇಷಾದಿಗಳ ಕಾರಣವನ್ನು ನೀಡಿ, ಅವನ ಜಯಕ್ಕೋಸ್ಕರ

ತಾವೆಲ್ಲ ತಪಸ್ಸು ಮಾಡುವುದಾಗಿ ತಿಳಿಸಿ, ಅವನನ್ನು ಮರಳಿ ರಾಜ್ಯಕ್ಕೆ ಮರಳುವಂತೆ ಮನವೊಲಿಸಿದ್ದು ಸ್ವಸ್ಥಾನಕ್ಕೆ ಮರಳಿದ ದುರ್ಯೋಧನ ಕರ್ಣಾದಿಗಳ ಮಾತಿಗೆ ಒಪ್ಪಿದಂತೆ ವರ್ತಿಸಿ ಹಸ್ತಿನಾಪುರಕ್ಕೆ ತೆರಳಿದ್ದು, ವಿಪ್ರರೂಪದಲ್ಲಿ ಆಗಮಿಸಿದ ದೇವೇಂದ್ರ ಕರ್ಣನಿಂದ ಕವಚಕುಂಡಲಗಳನ್ನು ದಾನವಾಗಿ ಸ್ವೀಕರಿಸಿ ಅಮೋಘಶಕ್ತ್ಯಾಯುಧವನ್ನು ಕರ್ಣನಿಗೆ ನೀಡಿದ್ದು, ಮೃಗವೊಂದರಿಂದ ಅಪಹೃತವಾದ ಬ್ರಾಹ್ಮಣನ ಅರಣೇಭಾಂಡವನ್ನು ತರಲೆಂದು ಪಾಂಡವರು ತೆರಳಿದ್ದು, ನೀರು ತರಲೆಂದು ಹೊರಟ ಸಹದೇವಾದಿಗಳು ಯಕ್ಷನ ಪ್ರಶ್ನೆಗಳಿಗೆ ಉತ್ತರಿಸಬಯಸದೆ ಕೊಳದಿಂದ ನೀರು ಕುಡಿದು, ದೇವಮಾಯೆಗೊಳಗಾಗಿ ಮೂರ್ಛಿತರಾದದ್ದು, ಕೊನೆಗೆ ಅಲ್ಲಿಗೆ ಆಗಮಿಸಿದ ಯುಧಿಷ್ಠಿರ ಯಕ್ಷನ ಪ್ರಶ್ನೆಗಳಿಗೆ ಉತ್ತರ ನೀಡಿ, ಅವನ ಅನುಗ್ರಹಕ್ಕೆ ಪಾತ್ರನಾದದ್ದು, ಆಗ ಪ್ರತ್ಯಕ್ಷನಾದ ಯಮ 'ಮೃಗರೂಪದಿಂದ ಅರಣೇಭಾಂಡವನ್ನು ಅಪಹರಿಸಿದವನೂ, ಬಕರೂಪದಿಂದ ನೀರು ಕುಡಿಯದಿರಲು ಹೇಳಿದವನೂ, ಯಕ್ಷರೂಪದಿಂದ ಪ್ರಶ್ನೆಗಳನ್ನು ಕೇಳಿದವನು ತಾನೇ' ಎಂದು ತಿಳಿಸಿ, ಯುಧಿಷ್ಠಿರನ ಧರ್ಮಬುದ್ಧಿಯನ್ನು ಶ್ಲಾಘಿಸಿದ್ದು, ಯಮ ವರ ಕೇಳಲು ತಿಳಿಸಿದಾಗ ಯುಧಿಷ್ಠಿರ ತಮ್ಮ ಅಜ್ಞಾತವಾಸಕಾಲ ನಿರ್ವಿಘ್ನವಾಗಿ ಪೂರೈಸುವಂತೆ ಕೇಳಿಕೊಂಡದ್ದು, ಯಮ ಅಂತಹ ವರವನ್ನು ನೀಡಿದ್ದು, ಹಾಗೂ ಪಾಂಡವರ ವನವಾಸದ ಪರಿಸಮಾಪ್ತಿ— ಇವು ಈ ಅಧ್ಯಾಯದ ಮುಖ್ಯವಿಷಯಗಳು.

ವನಪರ್ವದ ಈ ವಿವರಗಳು ಮಾತ್ರವಲ್ಲದೆ, ಕೃಷ್ಣನು ಬದರೀಕ್ಷೇತ್ರದಲ್ಲಿ ಘಂಟಾಕರ್ಣ ಹಾಗೂ ಕರ್ಣ ಎಂಬ ಪಿಶಾಚಿಗಳಿಗೆ ಮೋಕ್ಷ ನೀಡಿದ್ದು, ಅಸುರಮೋಹನಕ್ಕೆಂದು ಕೈಲಾಸಯಾತ್ರೆ ಮಾಡಿ ಶಿವನನ್ನು ಕುರಿತು ಒಂದೇ ದಿನದಲ್ಲಿ ಹನ್ನೆರಡು ವರ್ಷಗಳ ತಪಸ್ಸೆಂದನ್ನು ಮಾಡಿದ್ದು, ಪೌಂಡ್ರಕವಾಸುದೇವ, ಸುದಕ್ಷಿಣ, ಏಕಲವ್ಯ ಮೊದಲಾದವರ ವಧೆ, ಪ್ರದ್ಯುಮ್ನ ಸಾಂಬರ ಸ್ವರ್ಗಪಾತಾಳಗಳ ದಿಗ್ವಿಜಯಯಾತ್ರೆ, ಉಷಾ ಅನಿರುದ್ಧ ಸ್ವಯಂವರ, ಕೃಷ್ಣನಿಂದ ಬಾಣಾಸುರನ ನಿಗ್ರಹ, ಶಿವನ ಪರಾಭವ, ಬಲರಾಮನ ಹಿರಿಮೆಯನ್ನು ವಿವರಿಸುವ ಯಮುನಾಕರ್ಷಣಪ್ರಸಂಗ, ಮೈಂದವಿವಿದರ ವಧೆ, ಸಾಂಬನೊಂದಿಗೆ ಲಕ್ಷಣೆಯ ವಿವಾಹ ಮೊದಲಾದ ಕೃಷ್ಣಕಥೆಗೆ ಸಂಬಂಧಿಸಿದ ಅನೇಕ ವಿವರಗಳು ನಿರೂಪಿತವಾಗಿರುವುದು ಈ ಅಧ್ಯಾಯದ ಮತ್ತೊಂದು ವಿಶೇಷ. ಕೃಷ್ಣಕಥೆ ಹಾಗೂ ಪಾಂಡವರ ಕಥೆಗಳನ್ನು ಕಾಲಾನುಕ್ರಮದಲ್ಲಿ ಹೀಗೆ ಸಮನ್ವಯಿಸಿ ನಿರೂಪಿಸಿದ ಏಕಮಾತ್ರ ಕೃತಿಕಾರರು ಎಂಬುದು ಶ್ರೀಮನ್ಮಧ್ವಾಚಾರ್ಯರ ಹಿರಿಮೆ.

ವನಪರ್ವನಿರೂಪಣೆಯ ಈ ಅಧ್ಯಾಯದಲ್ಲಿ ಭೀಮದ್ರೌಪದಿಯರು ಧರ್ಮರಾಜನಿಗೆ ನಿರೂಪಿಸಿದ ಸ್ವಧರ್ಮಾಚರಣೆಯ ಮಹತ್ತ್ವ ಈ ಅಧ್ಯಾಯದ ಅತ್ಯಂತ ಮೌಲಿಕವಾದ ತಾತ್ತ್ವಿಕಭಾಗ. ಒಂದು ರೀತಿಯಲ್ಲಿ ಕೃಷ್ಣ ಅರ್ಜುನನಿಗೆ ಮಾಡಿದ ಗೀತೋಪದೇಶದಂತೆ ತೋರುವ ಇದರಲ್ಲಿ ಜೀವಕರ್ತೃತ್ವ, ಈಶ್ವರಸ್ವಾತಂತ್ರ್ಯ ಮೊದಲಾದವುಗಳ ಬಗ್ಗೆ

ಅತ್ಯಂತನಿಖರವಾಗಿ ಶಾಸ್ತ್ರಪರಿಕಲ್ಪನೆ ನಿರೂಪಿತವಾಗಿದೆ. ಜೀವ ಅಸ್ವತಂತ್ರನೇ ಹೊರತು ಜಡದಂತೆ ಅಕರ್ತೃವಲ್ಲ; ಈಶ್ವರನಂತೆ ಸ್ವತಂತ್ರನೂ ಅಲ್ಲ. ಒಟ್ಟಾಗಿ ಅವನು ಪರಾಧೀನಕರ್ತೃ ಎಂಬುದನ್ನು ಪರಿಪರಿಯಾಗಿ ನಿರೂಪಿಸಿರುವ ಇಲ್ಲಿಯ ವೈಖರಿ ಸಾಧಕರ ಪಾಲಿಗೆ ನೀಡುವ ಸಂದೇಶ ಅತ್ಯಂತ ಅಪೂರ್ವವಾದುದು. ಬ್ರಹ್ಮಸೂತ್ರದ ಕರ್ತೃತ್ವಾಧಿಕರಣದ ವಿಸ್ತಾರವಾದ ವ್ಯಾಖ್ಯೆಯಂತಿರುವ ಈ ಭಾಗ ಮಧ್ವದರ್ಶನದಲ್ಲಿನ ಪ್ರಯತ್ನದ ಸ್ಥಾನವನ್ನು ಸ್ಪುಟವಾಗಿ ನಿರೂಪಿಸುವ ಅತ್ಯಂತ ವಿಶಿಷ್ಟವಾದ ಭಾಗ. ಜೀವನ ಸ್ವರೂಪ, ಅನಾದಿಕರ್ಮ ಹಾಗೂ ಪುರುಷಪ್ರಯತ್ನ – ಈ ಮೂರೂ ಕಾರ್ಯಸಿದ್ಧಿಯ ಪ್ರಮುಖಘಟಕಗಳು. ಇವೆಲ್ಲವನ್ನೂ ನಿಯಂತ್ರಿಸುವ ಸರ್ವೋನ್ನತಶಕ್ತಿ ಭಗವಂತನದು ಎಂಬ ಇಲ್ಲಿಯ ವಿವರ ಗೀತೆಯಲ್ಲಿ ಬಂದಿರುವ –

ಅಧಿಷ್ಠಾನಂ ತಥಾ ಕರ್ತಾ ಕರಣಂ ಚ ಪೃಥಗ್ವಿಧಮ್ ।
ವಿವಿಧಾಶ್ಚ ಪೃಥಕ್ಚೇಷ್ಟಾ ದೈವಂ ಚೈವಾತ್ರ ಪಂಚಮಮ್ ॥ – (೧೮/೧೪)

– ಎಂಬ ಶ್ಲೋಕದ ವಿಸ್ತೃತವ್ಯಾಖ್ಯಾನವಾಗಿಯೂ ಮಾನ್ಯವಾಗುವುದು. ದೇವರನ್ನೇ ಒಪ್ಪದ ನಾಸ್ತಿಕನಂತೆ ದೇವರನ್ನು ಮಾತ್ರ ಒಪ್ಪಿ, ಪುರುಷಪ್ರಯತ್ನವನ್ನು ತೊರೆಯುವ ಆಸ್ತಿಕನೂ ಸಹ ನಿಶ್ಚಿತವಾಗಿಯೂ ಅಧೋಗತಿಗೇ ತೆರಳುವನು ಎಂಬ ಇಲ್ಲಿಯ ಸಂದೇಶ ಅತ್ಯಂತ ಮಾರ್ಮಿಕವಾದುದು (೨೨/೭೮):

ತೇನೈತಿ ಸಮ್ಯಗ್ಗತಿಮಸ್ಯ ವಿಷ್ಣೋರ್ಜನೋಽಶುಭೋ ದೈವಮಿತ್ಯೇವ ಮತ್ವಾ ।
ಹಿತ್ವಾ ಸ್ವಕಂ ಕರ್ಮ ಗತಿಂ ಚ ತಾಮಸೀಂ ಪ್ರಯಾತಿ ತಸ್ಮಾತ್ ಕಾರ್ಯಮೇವ ಸ್ವಕರ್ಮ ॥

ಇದರೊಂದಿಗೆ ವರ್ಣಾಶ್ರಮಧರ್ಮಗಳ ಬಗ್ಗೆ ಅತ್ಯಂತಸ್ಪುಟವಾದ ತಾತ್ತ್ವಿಕವಿಶ್ಲೇಷಣೆ–ಯನ್ನೂ ಈ ಭಾಗ ಹೊಂದಿದೆ(ಶ್ಲೋ. ೮೮–೯೫). ವಿಶೇಷವಾಗಿ ಕ್ಷತ್ರಿಯಧರ್ಮದ ಬಗ್ಗೆ ಬೆಳಕು ಬೆಲ್ಲುವ ಇದು ನಿಜವಾದ ಅರ್ಥದಲ್ಲಿ 'ಭೀಮಗೀತೆ'ಯೆಂದೇ ಮಾನ್ಯವಾಗುವ, ಭೀಮನ

ಸ್ವಭಾವಾಖ್ಯಾ ಯೋಗ್ಯತಾ ಯಾ ಹಠಾಖ್ಯಾ ಯಾಽನಾದಿಸಿದ್ಧಾ ಸರ್ವಜೀವೇಷು ನಿತ್ಯಾ ।
ಸಾ ಕಾರಣಂ ಪ್ರಥಮಂ ತು ದ್ವಿತೀಯಮನಾದಿಕರ್ಮೈವ ತಥಾ ತೃತೀಯಃ ॥
ಜೀವಪ್ರಯತ್ನಃ ಪೌರುಷಾಖ್ಯಸ್ತದೇತತ್ ತ್ರಯಂ ವಿಷ್ಣೋರ್ವಶಗಂ ಸರ್ವದೈವ ।
ಸ ಕಸ್ಯಚಿನ್ನ ವಶೇ ವಾಸುದೇವಃ ಪರಾತ್ಪರಃ ಪರಮೋಽಸೌ ಸ್ವತಂತ್ರಃ ॥
ಹಠಶ್ಚಾಸೌ ತಾರತಮ್ಯಸ್ಥಿತೋ ಹಿ ಬ್ರಹ್ಮಾಣಮಾರಭ್ಯ ಕಲಿಶ್ಚ ಯಾವತ್ ।
ಹಠಾಚ್ಚ ಕರ್ಮಾಣಿ ಭವಂತಿ ಕರ್ಮಜೋ ಯತ್ನೋ ಯತೋ ಹಠಕರ್ಮಪ್ರಯೋಕ್ತಾ ॥
ವಿನಾ ಯತ್ನಂ ನ ಹಠೋ ನಾಪಿ ಕರ್ಮ ಫಲಪ್ರದೋ ವಾಸುದೇವೋಽಖಿಲಸ್ಯ ।
ಸ್ವಾತಂತ್ರ್ಯಶಕ್ತೇರ್ವಿನಿಯಾಮಕೋ ಹಿ ತಥಾಽಪ್ಯೇತಾನ್ ಸೋಽಪ್ಯಪೇಕ್ಷ್ಯೈವ ಯುಂಜ್ಯಾತ್ ॥
ಏತಾನಪೇಕ್ಷ್ಯೈವ ಫಲಂ ದದಾನೀತ್ಯಸ್ಯೈವ ಸಂಕಲ್ಪ ಇತಿ ಸ್ವತಂತ್ರತಾ ।
ನಾಸ್ಯಾಪಗಚ್ಛೇತ್ ಸ ಹಿ ಸರ್ವಶಕ್ತರ್ನಾಶಕ್ತತಾ ಕ್ವಚಿದಸ್ಯ ಪ್ರಭುತ್ವಾತ್ ॥ – (೨೨/೮೩-೮೭)

ಪೂರ್ಣಪ್ರಜ್ಞತ್ವವನ್ನು ಅತ್ಯಂತ ಸ್ಫುಟವಾಗಿ ಸಾರುವ ಅತ್ಯಂತಮಹತ್ತ್ವಪೂರ್ಣವಾದ ಭಾಗ. ಅರ್ಜುನನ್ನು ಕರ್ತವ್ಯಪರಾಯಣನನ್ನಾಗಿಸಿದ ಶ್ರೇಯಸ್ಸು ಶ್ರೀಕೃಷ್ಣಗೀತೆಯದಾದರೆ, ಯುಧಿಷ್ಠಿರನನ್ನು ಸ್ವಧರ್ಮವಾದ ಯುದ್ಧದಲ್ಲಿ ಸ್ಥಿರಗೊಳಿಸಿದ ಶ್ರೇಯಸ್ಸು ಈ ಭೀಮಗೀತೆಯದು. ಯುಧಿಷ್ಠಿರನ ವನವಾಸ ಶಾಸ್ತ್ರದ ಹೃದಯವನ್ನು ಗ್ರಹಿಸುವ ಗುರುಕುಲವಾಸದಂತೆ ಸಾರ್ಥಕವಾಗಿದ್ದು ಭೀಮದ್ರೌಪದಿಯ ಈ ಅಪೂರ್ವ ಉಪದೇಶದಿಂದ.

ಯುಧಿಷ್ಠಿರನ ಬಾಳಿಗೆ, ಮಹಾಭಾರತದ ಕಥಾಸರಣಿಗೆ ಹೊಸ ತಿರುವನ್ನು ಕೊಟ್ಟಂತಹ ಈ ಅಮೂಲ್ಯವಾದ ಭಾಗ ಮಹಾಭಾರತವನ್ನು ಆಧರಿಸಿದ ಎಲ್ಲ ಕೃತಿಗಳಲ್ಲೂ ಸಹ ಪೂರ್ಣವಾಗಿ ಲುಪ್ತವಾಗಿರುವುದು ಅತ್ಯಂತ ಆಶ್ಚರ್ಯಕರ. ಕ್ಷೇಮೇಂದ್ರನ ಭಾರತಮಂಜರೀ, ಅನಂತಭಟ್ಟನ ಚಂಪೂಭಾರತ ಮೊದಲಾದ ಸಂಸ್ಕೃತಭಾರತಗಳಂತೆ ಪಂಪಭಾರತ, ಕುಮಾರವ್ಯಾಸಭಾರತದಂತಹ ಕನ್ನಡಭಾರತಗಳು, ನನ್ನಯಭಾರತ ಮೊದಲಾದ ತೆಲುಗು ಮೊದಲಾದ ಇತರ ಭಾಷೆಯ ಭಾರತಕ್ಕೆ ಸಂಬಂಧಿಸಿದ ಕೃತಿಗಳೂ ಈ ಭಾಗವನ್ನು ಸಂಪೂರ್ಣ ಕೈಬಿಟ್ಟಿವೆ. ಭಾರವಿಯ ಕಿರಾತಾರ್ಜುನೀಯ–ದಲ್ಲಿ ಇದರ ಸಾಮಾನ್ಯ ಉಲ್ಲೇಖವಿದ್ದರೂ, ಅದು ಕೇವಲ ಲೌಕಿಕಮಟ್ಟಕ್ಕೆ ಸೀಮಿತವಾಗುವಂತೆ ಮಾತ್ರ ಅಲ್ಲಿ ನಿರೂಪಿತವಾಗಿದೆ. ಆಚಾರ್ಯ ಶ್ರೀಮಧ್ವರ ಈ ಕೃತಿ ಮಾತ್ರವೇ ವ್ಯಾಸಭಾರತದ ಈ ಅಪೂರ್ವತಾತ್ತ್ವಿಕಭಾಗವನ್ನು ಯಥಾವತ್ತಾಗಿ ನಿರೂಪಿಸಿರುವ ವಿಶಿಷ್ಟಕೃತಿ.

ಕಿರಾತಾರ್ಜುನೀಯಪ್ರಸಂಗದ ಸಂಗ್ರಹ, ಉರ್ವಶೀಪ್ರಸಂಗದಲ್ಲಿ ಅರ್ಜುನ ತೋರುವ ಅಪೂರ್ವಸಂಯಮ, ಪಾಂಡವರ ತೀರ್ಥಯಾತ್ರೆಯ ವೈಭವ ಮೊದಲಾದವುಗಳ ಅನಂತರ ಇಲ್ಲಿಯ ಗಮನಾರ್ಹವಾದ ಭಾಗ ಸೌಗಂಧಿಕಾಪ್ರಸಂಗದಲ್ಲಿ ಬಂದಿರುವ ಭೀಮಹನುಮಂತರ ಸಮಾಗಮ. ಒಬ್ಬನೇ ವಾಯುವಿನ ಎರಡು ಅವತಾರರಾದ ಭೀಮಹನುಮಂತರು ಅಲ್ಲಿ ವಿಭಿನ್ನವ್ಯಕ್ತಿಗಳಂತೆ ವರ್ತಿಸುವುದು ನಿಜಕ್ಕೂ ಒಂದು ಒಡೆಯಲಾಗದ ಒಗಟು. ಪುರಾಣಪ್ರಪಂಚದ ಕಗ್ಗಂಟು. ಅದರ ರಹಸ್ಯವನ್ನು ತೆರೆದಿಟ್ಟ ಹಿರಿಮೆ ಮಹಾಭಾರತತಾತ್ಪರ್ಯನಿರ್ಣಯದ್ದು. ಒಬ್ಬನೇ ಶ್ರೀಹರಿಯ ರಾಮಪರಶುರಾಮರೂಪಗಳ, ಯಜ್ಞವೃಷಭರೂಪಗಳ, ವಾಸಿಷ್ಠಕೃಷ್ಣಯಾದವಕೃಷ್ಣ–ರೂಪಗಳ ಸಮಾಗಮದಂತೆ, ಒಬ್ಬಳೇ ಮಹಾಲಕ್ಷ್ಮಿಯ ಎರಡು ರೂಪಗಳಾದ ರುಗ್ಮಿಣೀ–ಸತ್ಯಭಾಮೆಯರ ಪ್ರಸಂಗದಂತೆ ಎಂದು ತಿಳಿಸಿ, ಅದು ಒಟ್ಟಾಗಿ ಲೋಕವಿಡಂಬನೆಗೂ, ಅಸುರ–ಮೋಹನಕ್ಕೂ ಕಾರಣವಾದ ವಿಶಿಷ್ಟಪ್ರಸಂಗವೆಂದು ವಿವರವಾಗಿ ನಿರೂಪಿತವಾಗಿದೆ (೨೨/೨೮೩):

> ಧರ್ಮೋ ದೇವಾನಾಂ ಪರಮೋ ಮಾನುಷತ್ವೇ ಸ್ವಯೇ ರೂಪೇಽಪ್ಯನ್ಯವದೇವ ವೃತ್ತಿಃ ।
> ಅನಾದಾನಂ ದಿವ್ಯಶಕ್ತೇರ್ವಿಶೇಷಾನ್ನರಸ್ವಭಾವೇ ಸರ್ವದಾ ಚೈವ ವೃತ್ತಿಃ ।
> ತಸ್ಮಾದ್ಭೀಮೋ ಹನುಮಾಂಶ್ಚೈಕ ಏವ ಜ್ಯಾಯಃಕನೀಯೋವೃತ್ತಿಮತ್ತ್ವಾಭಿಭೇದೇ ॥

ಮುಂದಿನ ಎರಡು ಮುಖ್ಯಪ್ರಸಂಗಗಳು ಒಂದು ಅಜಗರ ಪ್ರಸಂಗವಾದರೆ, ಮತ್ತೊಂದು ಯಕ್ಷಪ್ರಶ್ನೆಯ ಪ್ರಸಂಗ. ಈ ಎರಡು ಪ್ರಸಂಗಗಳಲ್ಲೂ ಭೀಮಸೇನ ಅಸಮರ್ಥನಂತೆ, ಅಜ್ಞಾನಿಯಂತೆ ತೋರುವನು. ಆದರೆ ಮೂಲಭಾರತದ ಸಮಗ್ರವಿವರಗಳನ್ನು ಬಲ್ಲ ಯಾರಿಗೂ ಭೀಮನ ಪೂರ್ಣಬಲ, ಪೂರ್ಣಜ್ಞಾನಗಳ ಬಗ್ಗೆ ಸಂಶಯವೇ ಬಾರದು. ಆದರೆ ಅದಕ್ಕೆ ಅನುಗುಣವಾಗುವಂತೆ ಈ ಪ್ರಸಂಗದ ವಿಶ್ಲೇಷಣೆ ಮಾತ್ರ ಯಾರಿಗೂ ಎಟುಕಿರಲಿಲ್ಲ. ಆ ಕೊರತೆಯನ್ನು ಮಹಾಭಾರತತಾತ್ಪರ್ಯನಿರ್ಣಯ ಪೂರೈಸಿದೆ. ನಹುಷನಲ್ಲಿದ್ದ ಸಮಸ್ತ ದೇವಮುನಿಗಳ ಬಲವನ್ನು ತನ್ನೆಡೆಗೆ ಸೆಳೆದುಕೊಳ್ಳುವುದು [೧]ಅಶಕ್ತರಂತೆ ವರ್ತಿಸಿದ್ದರ ಹಿನ್ನೆಲೆಯಾದರೆ, ವಿದ್ಯೋಪಜೀವನ ಸರ್ವಥಾ ನಿಷಿದ್ಧವೆಂದು ಸಾರುವುದು ಅಜ್ಞಾನಿಯಂತೆ ವರ್ತಿಸಿದ್ದರ ಹಿನ್ನೆಲೆ ಎಂಬುದನ್ನು ಇಲ್ಲಿ ವಿವರಿಸಿರುವರು :

ಆತ್ಮಮೋಕ್ಷಾಯ ನ ಪ್ರಶ್ನಾನ್ ವ್ಯಾಜಹಾರ ಸ ಚಾಭಿಭೂಃ ।
ವಿದ್ಯೋಪಜೀವನಂ ಧರ್ಮೋ ವಿಪ್ರಾಣಾಮಪಿ ನೋ ಯತಃ ॥
ಕಿಮುತ ಕ್ಷತ್ರಿಯಸ್ಯೇತಿ ಜಾನನ್ನಪಿ ವೃಕೋದರಃ ।
ತತ್ಪ್ರಶ್ನಪರಿಹಾರೇಣ ನಾತ್ಮಮೋಕ್ಷಂ ಸಮೈಚ್ಛತ ॥ – (೨೨/೩೫೩, ೩೫೪)

ಆದರಂತೆ ಯಕ್ಷಪ್ರಶ್ನೆಯ ಪ್ರಸಂಗದಲ್ಲೂ ಭೀಮನದು ಅಶಕ್ತಿಯಲ್ಲ, ದೇವಮಾಯೆಯನ್ನು ಗೌರವಿಸುವ ಪರಿ ಮಾತ್ರ. ಇಲ್ಲಿಯೂ ಸಹ ಹಿಂದಿನಂತೆ ವಿದ್ಯೋಪಜೀವನ ಅನುಚಿತವೆಂದು ತೋರಿಸಿಕೊಡುವುದು ಯಕ್ಷನ ಪ್ರಶ್ನೆಗಳಿಗೆ ಉತ್ತರ ಕೊಡದಿದ್ದರ ಹಿನ್ನೆಲೆ ಎಂದು ಗಮನಿಸಬೇಕು. ಭೀಮನಿರಲಿ, ಅರ್ಜುನಾದಿಗಳೂ ಸಹ ಆ ಉದ್ದೇಶದಿಂದಲೇ ಯಮನ ಪ್ರಶ್ನೆಗಳಿಗೆ ಉತ್ತರಿಸಲಿಲ್ಲ ಎಂಬುದು ಇಲ್ಲಿಯ ಮತ್ತೊಂದು ವಿಶೇಷ :

ಅದೃಶ್ಯೇನೈವ ಧರ್ಮೇಣ ವಾರಿತಾ ವಾರಿಪಾಯಿನಃ ।
ಕ್ಷತ್ರಧರ್ಮಸ್ಯ ರಕ್ಷಾರ್ಥಂ ನ ತತ್ಪ್ರಶ್ನವಿದಾಂ ವರಾಃ ।
ವ್ಯಾಚಕ್ರುಃ ಶಕ್ತಿಮಂತೋಽಪಿ ಪಾನೀಯಾರ್ಥಮರಿಂದಮಾಃ ॥
ನ ವಿಪ್ರಾಣಾಂ ಚ ಧರ್ಮೋಽಯಂ ವಿದ್ಯಾಯಾ ಉಪಜೀವನಮ್ ।
ಕ್ಷತ್ರಿಯಾಣಾಂ ತು ಕಿಮುತ ಪ್ರಸಭಂ ತೇನ ತೇ ಪಪುಃ ॥ – (೨೨/೪೩೪, ೪೩೫)

ಉಳಿದಂತೆ ದ್ರೌಪದಿ ಮಾಡಿದ [೨]ಅಪೂರ್ವಕೃಷ್ಣಸ್ತುತಿ, ಭೀಮ ಧರ್ಮರಾಜನಿಗೆ ಅಲಕಾಪುರಿಯಲ್ಲಿದ್ದಾಗ ಬೋಧಿಸಿದ [೩]ಧರ್ಮಸೂಕ್ಷ್ಮ ಕೃಷ್ಣ ಘಂಟಾಕರ್ಣ ಕರ್ಣರಿಗೆ [೪]ಮುಕ್ತಿ

---

೧. ...ಜಾನನ್ನೇವ ತದೀಯಂ ತತ್ತಪ ಆದಾತುಮೀಪ್ಸಯಾ ॥
ಯತ್ತತ್ ಸುರಾಣಾಂ ಸರ್ವೇಷಾಂ ಮುನೀನಾಂ ಚ ತಪಸ್ವಿನಾಮ್ ।
ತದ್ಗ್ರಹೀತುಂ ವಶಗವದಿಚ್ಛಯೈವಾಸ ಮಾರುತಿಃ ॥ – (೨೨/೩೪೭, ೩೪೮)

ಕರುಣಿಸಿದ್ದು ಕೃಷ್ಣ ಕೈಲಾಸದಲ್ಲಿ ಮಾಡಿದ ಒಂದು ದಿನದ "ಹನ್ನೆರಡು ವರ್ಷಗಳ ಯಾಗ – ಈ ಅಧ್ಯಾಯದ ಪ್ರಮುಖಘಟ್ಟಗಳು. ಪುಂಡರೀಕಾಕ್ಷನಾದ ಕೃಷ್ಣನನ್ನೇ ಆಹ್ವಾನಿಸದೆ ದುರ್ಯೋಧನ ಮಾಡಿದ ಪೌಂಡರೀಕಯಾಗ ಪಾಂಡವರು ಕೃಷ್ಣನಿಗೆ ಅಗ್ರಪೂಜೆ ಮಾಡಿದ ಒಂದಂಶಕ್ಕೂ ಸಾಟಿಯೆನ್ನಿಸದು ಎಂಬ ಇಲ್ಲಿಯ ವಿವರ ಗಮನಾರ್ಹ :

ವನೇ ವಸತ್ಸ್ವೈವ ಚ ಪಾಂಡವೇಷು ಚಕ್ರೇ ಯಜ್ಞಂ ಪೌಂಡರೀಕಾಖ್ಯಮೇವ।
ಸಂಸ್ಪರ್ಧಯಾ ರಾಜಸೂಯಸ್ಯ ರಾಜಾ ದುರ್ಯೋಧನೋ ನಾಪ್ಯಸೌ ತತ್ಕಲಾರ್ಹಃ ॥
– (೨೨/೩೮)

ಹೀಗೆ ವನಪರ್ವದ ನಿರ್ಣಯವನ್ನು ತಾತ್ತ್ವಿಕವಾದ ಹಿನ್ನೆಲೆಯಲ್ಲಿ ಒದಗಿಸಿದ ಶ್ರೇಯಸ್ಸು ಈ ಕೃತಿಯದು.

---

೨. ಅಚಿಂತ್ಯನಿತ್ಯಾವ್ಯಯಪೂರ್ಣಸದ್ಗುಣಾರ್ಣವೈಕದೇಹಾಖಿಲದೋಷದೂರ।
ರಮಾಬ್ಜಜೇರೇಶಸುರೇಂದ್ರಪೂರ್ವವೃಂದಾರಕಾಣಾಂ ಸತತಾಭವಂದ್ಯ ॥
ಸಮಸ್ತಚೇಷ್ಟಾಪ್ರದ ಸರ್ವಜೀವಪ್ರಭೋ ವಿಮುಕ್ತಾಶ್ರಯ ಸರ್ವಸಾರ।... – (೨೨/೨೬, ೨೭)

೩. ನೈವ ಶತ್ರೂನನುತ್ಸಾದ್ಯ ನಾನಾದಾಯ ಮಹದ್ಯಶಃ।
ನಾಕೃತ್ವಾ ವಾಸುದೇವಾಜ್ಞಾಂ ರಾಜ್ಞಾಂ ಮುಖ್ಯಾ ಗತಿರ್ಭವೇತ್ ॥
ತದನ್ಯೇಷಾಂ ತು ವರ್ಣಾನಾಂ ಕ್ಷಮಾ ಬಾಹ್ಯೇಷು ಶತ್ರುಷು।
ಪ್ರಾಯೋ ಧರ್ಮ ಇತಿ ಪ್ರೋಕ್ತೋ ಹರೇರಾಜ್ಞಾಽಖಿಲಸ್ಯ ಚ ॥ – (೨೨/೩೨೯, ೩೩೦)

೪. ತಯೋಃ ಪ್ರಸನ್ನೋ ಭಗವಾನ್ ಸ್ಪಷ್ಟ್ವಾ ಗಂಧರ್ವಸತ್ತಮೌ।
ಚಕಾರ ಕ್ಷಣಮಾತ್ರೇಣ ದಿವ್ಯರೂಪಸ್ವರಾನ್ವಿತೌ ॥ – (೨೨/೧೬೫)

೫. ಸ್ವೀಯಾನೇವ ಗುಣಾನ್ ವಿಷ್ಣುರ್ಯಂಜನ್ ನಿತ್ಯೇನ ಶೋಚಿಷಾ ।
ಶಾರ್ವಂ ತಪಃ ಕರೋತೀವ ಮೋಹಯಾಮಾಸ ದುರ್ಜನಾನ್॥
ಪೂರ್ವಂ ತೇನೋದಿತಂ ಯತ್ ತಲ್ಲೋಕಾನ್ ಮೋಹಯತಾಽಂಜಸಾ।
ಶರ್ವಂ ಪ್ರತಿ ತವಾಹಂ ತು ಕುರ್ಯಾಂ ದ್ವಾದಶವತ್ಸರಮ್ ॥
ತಪೋಽಸುರಾಣಾಂ ಮೋಹಾಯ ಸುರಾಃ ಸಂತು ಗತಜ್ವರಾಃ।
ಇತಿ ತಸ್ಮಾತ್ ತದಾ ಕೃಷ್ಣ ಏಕಾಹೇನ ಬೃಹಸ್ಪತಿಮ್ ॥
ಆಜ್ಞಯಾ ಚಾರಯಾಮಾಸ ಕ್ಷಿಪ್ರಂ ದ್ವಾದಶರಾಶಿಷು।
ದ್ವಾದಶಾಬ್ದಮಭೂತ್ ತೇನ ತದಹಃ ಕೇಶವೇಚ್ಛಯಾ ॥
ಏಕಸ್ಮಿನ್ನಹ್ನಿ ಭಗವಾನ್ ರಾಶಿಂ ರಾಶಿಂ ಚ ವತ್ಸರಮ್ ।
ಕಲ್ಪಯಿತ್ವೋಪವಾಸಾದೀನ್ ಮನಸಾ ನಿಯಮಾನಪಿ ॥
ಮಾಸವ್ರತಂ ಸಾರ್ಧಶತಶ್ವಾಸಕಾಲೈರಕಲ್ಪಯತ್ ।
ಮನಸೈವ ಸ್ವಭಕ್ತಾನಾಂ ದ್ವಾದಶಾಬ್ದವ್ರತಾಪ್ತಯೇ ॥ – (೨೨/೧೬೭-೧೭೨)

ಇಪ್ಪತ್ತಮೂರನೆಯ ಅಧ್ಯಾಯ (ಶ್ಲೋಕ ಸಂಖ್ಯೆ : ೫೯)

ಪಾಂಡವರು ತಮ್ಮೊಂದಿಗೆ ನೆಲೆಸಿದ್ದ ಋಷಿಮುನಿಗಳನ್ನು, ಧೌಮ್ಯರನ್ನು ಬೀಳ್ಕೊಟ್ಟು ಅಜ್ಞಾತವಾಸಕ್ಕೆಂದು ವಿರಾಟನ ಬಳಿಗೆ ತೆರಳುವುದು, ಯುಧಿಷ್ಠಿರಾದಿಗಳು ಕ್ರಮವಾಗಿ ಕಂಕ, ಬಲ್ಲವ, ಬೃಹನ್ನಳೆ, ಅಶ್ವಪಾಲ ಮತ್ತು ಗೋಪಾಲ ವೇಷಧಾರಿಗಳಾಗಿಯೂ, ದ್ರೌಪದಿ ಸೈರಂಧ್ರಿಯಾಗಿಯೂ ಅವನ ಆಸ್ಥಾನದಲ್ಲಿ ನೆಲೆಸುವುದು, ಶಿವವರದಿಂದ ಅವಧ್ಯನಾಗಿದ್ದ ಜೀಮೂತ ಮಲ್ಲನನ್ನು ಭೀಮ ಕೊಲ್ಲುವುದು, ಆವರೆಗೆ ದಿಗ್ವಿಜಯಕ್ಕೆಂದು ತೆರಳಿದ್ದ ಕೀಚಕನು ನಗರಕ್ಕೆ ಹಿಂದಿರುಗಿ ಸೈರಂಧ್ರಿರೂಪದ ದ್ರೌಪದಿಯನ್ನು ಕಂಡು ಆಕರ್ಷಿತನಾಗುವುದು, ಅವಳನ್ನು ಪಡೆಯಲು ಅವನ ವ್ಯರ್ಥ ಪ್ರಯತ್ನ, ಕಪಟದಿಂದ ಪಡೆಯಲು ಯತ್ನಿಸಿ ಆಗಲೂ ವಿಫಲನಾದ ಅವನು ರಾಜಸಭೆಗೆ ಕಾಣುವಂತೆಯೆ ಅವಳನ್ನು ಕಾಲಿನಿಂದ ಒದ್ದು ಬೀಳಿಸುವುದು, ವಿರಾಟ ಯುಧಿಷ್ಠಿರಾದಿಗಳು ಅದನ್ನು ನೋಡಿಯೂ ಸುಮ್ಮನಿದ್ದುದು, ಭೀಮ ಅವನನ್ನು ಕೊಲ್ಲಲೆಂದು ದೊಡ್ಡ ವೃಕ್ಷವೊಂದನ್ನು ನೋಡತೊಡಗಿದಾಗ ಯುಧಿಷ್ಠಿರ ಅಜ್ಞಾತರೀತಿಯಲ್ಲಿ ಅವನನ್ನು ಕೊಲ್ಲಲು ಅನುಜ್ಞೆ ನೀಡುವುದು, ಆ ರಾತ್ರಿಯಲ್ಲಿ ದ್ರೌಪದಿ ಭೀಮಸೇನನ ಬಳಿ ತೆರಳಿ ಸಮಾಲೋಚಿಸುವುದು, ಊರ ಹೊರಗಿನ ನರ್ತನಶಾಲೆಗೆ ಕೀಚಕನನ್ನು ಕರೆತರುವಂತೆ ಭೀಮ ದ್ರೌಪದಿಗೆ ತಿಳಿಸುವುದು, ಅದರಂತೆ ಅಲ್ಲಿಗೆ ಆಗಮಿಸಿದ ಕೀಚಕನನ್ನು ಭೀಮಸೇನ ಮಲ್ಲಯುದ್ಧದಲ್ಲಿ ಸಂಹರಿಸುವುದು, ದ್ರೌಪದಿಗೆ ಅಪಚಾರವೆಸಗಲು ಹೊರಟ ಉಪಕೀಚಕರನ್ನು ಭೀಮಸೇನ ಕೊಂದುಹಾಕುವುದು, ಹೆಣ್ಣಿಗಾಗಿ ಕೀಚಕ ಸತ್ತ ವಿವರವನ್ನು ಕೇಳಿ ಅವನನ್ನು ಕೊಂದವನು ಭೀಮಸೇನನೇ ಎಂದು ನಿಶ್ಚಯಿಸಿ ದುರ್ಯೋಧನಾದಿಗಳು ವಿರಾಟರಾಜನ ಗೋವುಗಳನ್ನು ಸೆರೆಹಿಡಿಯಲೆಂದು ಭೀಷ್ಮಾದಿ–ಗಳೊಂದಿಗೂ ಅಪಾರ ಸೇನೆಯೊಂದಿಗೂ ಆಗಮಿಸುವುದು, ಸುಶರ್ಮನಿಂದ ದಕ್ಷಿಣಗೋಗ್ರಹಣ, ಅದರ ಮೋಚನೆಗೆಂದು ತೆರಳಿದ ವಿರಾಟನನ್ನು ಸುಶರ್ಮ ಸೆರೆಹಿಡಿದಾಗ ಭೀಮ ಅವನನ್ನು ನಿಗ್ರಹಿಸಿ ವಿರಾಟನನ್ನು, ಗೋವುಗಳನ್ನೂ ಮೋಚನ ಮಾಡಿದ್ದು, ಉತ್ತರಗೋಗ್ರಹಣದ ಮೋಚನಕ್ಕೆಂದು ಉತ್ತರಕುಮಾರ ಬೃಹನ್ನಳೆಯನ್ನು ಸಾರಥಿಯನ್ನಾಗಿ ಮಾಡಿ ತೆರಳಿದ್ದು, ಅಪಾರ ಕುರುಸೇನೆಯನ್ನು ನೋಡಿ ಭೀತನಾಗಿ ಪಲಾಯನ ಮಾಡಿದ ಉತ್ತರಕುಮಾರನನ್ನು ನಿಲ್ಲಿಸಿ ಅವನನ್ನೇ ಸಾರಥಿಯನ್ನಾಗಿ ಮಾಡಿಕೊಂಡು ಅರ್ಜುನ ಏಕಾಕಿಯಾಗಿ ಕುರುಸೇನೆಯನ್ನೂ ಭೀಷ್ಮಾದಿಗಳನ್ನೂ ನಿಗ್ರಹಿಸಿ ಗೋಮೋಚನ ಮಾಡಿದ್ದು, ಮುಂದೆ ಪಾಂಡವರ ವಿವರವನ್ನು ತಿಳಿದು ಪಶ್ಚಾತ್ತಾಪ ಪಟ್ಟ ವಿರಾಟ ಅವರಿಗೆ ಶರಣಾಗಿ ಉತ್ತರೆಯನ್ನು ಅರ್ಜುನನಿಗೆ ಸಮರ್ಪಿಸಿದ್ದು, ಅರ್ಜುನ ಅವಳನ್ನು ತನ್ನ ಪುತ್ರನಾದ ಅಭಿಮನ್ಯುವಿಗಾಗಿ ಸ್ವೀಕರಿಸಿದ್ದು, ಶ್ರೀಕೃಷ್ಣನ ನೇತೃತ್ವದಲ್ಲಿ ಅಭಿಮನ್ಯುವಿನ ವಿವಾಹವನ್ನು ಪೂರೈಸಿದ್ದು ಈ ಅಧ್ಯಾಯದ ಮುಖ್ಯ ವಿಷಯಗಳು. ಮಹಾಭಾರತದ ವಿರಾಟಪರ್ವದ ನಿರ್ಣಯವಾಗಿ ಈ ಸಮಗ್ರ ಅಧ್ಯಾಯ ಹೊರಟಿದೆ.

ಪಾಂಡವರು ಕ್ರಮವಾಗಿ ಯತಿ, ಸೂದ, ಬೃಹನ್ನಳೆ, ಅಶ್ವಪಾಲ, ಗೋಪಾಲ, ಹಾಗೂ ಸೈರಂಧ್ರಿಯಾಗಿ ದ್ರೌಪದಿ ಆ ರೀತಿಯಾಗಿ ವೇಷಗಳನ್ನು ಧರಿಸಲು ಕಾರಣಗಳ ವಿಶ್ಲೇಷಣೆ, ಜೀಮೂತವಧೆಯ ಮಹತ್ವ, ಕೀಚಕನ ದುಷ್ಟತನ, ಅವನ ವಧೆಯಲ್ಲಿ ದ್ರೌಪದಿಯ ಪಾತ್ರ, ಭೀಮನಿಂದ ನಡೆದ ಕೀಚಕನ ವಧೆಯ ಮಹತ್ವ, ಅಜ್ಞಾತವಾಸಕಾಲದಲ್ಲಿ ನಡೆದ ಪಾಂಡವರ ವಿಶೇಷ ಸಾಧನೆಯ ವಿಶ್ಲೇಷಣೆ, ಇವು ಈ ಅಧ್ಯಾಯದಲ್ಲಿನ ವಿಶೇಷ ಘಟ್ಟಗಳು.

ಸರ್ವಪೂಜ್ಯ ಎಂಬ ಕಾರಣಕ್ಕಾಗಿ ಯುಧಿಷ್ಠಿರ ಯತಿವೇಷವನ್ನು ಧರಿಸಿದರೆ ಶಾಪದ ಕಾರಣದಿಂದ ಅರ್ಜುನ ಬೃಹನ್ನಳೆಯಾದ. ಕ್ಷತ್ರಿಯನ ಅನಂತರದ ಜಾತಿಯೆಂಬ ಕಾರಣಕ್ಕಾಗಿ ನಕುಲ ಅಶ್ವಪಾಲನಾದರೆ ಅದರ ಅನಂತರದ ಜಾತಿಯೆಂಬ ಕಾರಣದಿಂದ ಸಹದೇವ ಗೋಪಾಲಕನಾದ:

ಸೂತಸ್ಯಾನಂತರತ್ವಾತ್ ತು ವೈಶ್ಯಜಾತೇಸ್ತಥಾऽಭವತ್ ।
ಸಹದೇವೋ ವೈಶ್ಯಜಾತಿರ್ಗೋಪಾಲಸ್ತೇಷು ಚೋತ್ತಮಃ ॥
ತತೋ ಗೋಪಾಲತಾಮಾಪ ಯತಿಃ ಪೂಜ್ಯೋऽಖಿಲೈರ್ಯತಃ ।
ಯತಿರಾಸೀದ್ಧರ್ಮಜೋऽತಃ ಸೋऽಭ್ಯಾಸಾರ್ಥಂ ಸದೈವ ಚ ।
ಅಕ್ಷಾಸಕ್ತೋऽಭವತ್ ಪಶ್ಚಾದ್ದರ್ಶಯಿಷ್ಯನ್ ಸ್ವಶಿಷ್ಟತಾಮ್ ॥ – (೨೩/೮, ೯)

ಭೀಮಸೇನ ಸೂದವೇಷವನ್ನು ಧರಿಸಿದ ಹಿನ್ನೆಲೆ ಮಾತ್ರ ತೀರ ವಿಶಿಷ್ಟವಾದದ್ದು. ಪರಪಾಕ ಗೃಹಸ್ಥನಿಗೆ ಅದರಲ್ಲೂ ಕ್ಷತ್ರಿಯನಿಗೆ ನಿಷಿದ್ಧ. ಆದ್ದರಿಂದ ಸ್ವಯಂಪಾಕದ ಸೌಲಭ್ಯಕ್ಕಾಗಿ ಭೀಮ ಆ ವೇಷ ಧರಿಸಿದ:

ಪರಪಾಕೋ ಗೃಹಸ್ಥಸ್ಯ ಕ್ಷತ್ರಿಯಸ್ಯ ವಿಶೇಷತಃ।
ನ ಯೋಗ್ಯ ಇತಿ ಸೂದಸ್ಯ ಬಭ್ರೇ ವೇಷಂ ವೃಕೋದರಃ ॥ – (೨೩/೪)

ಭೀಮ ಧರಿಸಿದ ಸೂದ ವೇಷ ಶೂದ್ರವೇಷವೂ ಆಗಿತ್ತೆಂಬುದು ಮತ್ತೊಂದು ವಿಶೇಷ. ಬೇರೆ ವರ್ಣದ ವೇಷ ಧರಿಸಿದರೆ ವೈದಿಕ ವ್ಯವಹಾರಗಳಲ್ಲಿ ಪಾಲ್ಗೊಳ್ಳುವುದು ಅನಿವಾರ್ಯವಾಗಿ ಆಗ ವ್ಯಕ್ತವಾಗುವ ತನ್ನ ಪೂರ್ಣಪ್ರಜ್ಞತ್ವದಿಂದಾಗಿ ಅಜ್ಞಾತವಾಸಕ್ಕೆ ಪ್ರತಿಕೂಲವಾಗುವುದೆಂಬುದು ಅದಕ್ಕೆ ಮುಖ್ಯ ಕಾರಣ:

ವೈದಿಕವ್ಯವಹಾರೇಷು ಜ್ಞಾನಾಧಿಕ್ಯಪ್ರಸಿದ್ಧಿತಃ ।
ಜಾನೀಯುರ್ಭೀಮ ಇತ್ಯೇವ ಶೂದ್ರವೇಷಸ್ತತೋऽಭವತ್ ॥ – (೨೩/೫)

ದ್ರೌಪದಿ ಶೂದ್ರಸ್ತ್ರೀಯ ಸೈರಂಧ್ರಿವೇಷವನ್ನು ಧರಿಸಲು ಅವಳ ಪತಿ ಭೀಮ ಶೂದ್ರವೇಷವನ್ನು ಧರಿಸಿದ್ದೇ ಕಾರಣವಾಯಿತು. ಪತಿಗೆ ಅನುರೂಪವಾದ ಧರ್ಮಾಚರಣೆ ಸ್ತ್ರೀಯರ ಮುಖ್ಯಕರ್ತವ್ಯವೆಂಬುದು ಅದಕ್ಕೆ ಮುಖ್ಯ ಕಾರಣ:

ಭೀಮಸೇನಸಧರ್ಮಾರ್ಥಂ ಶೂದ್ರಾ ಸೈರಂಧ್ರಿಕಾऽಭವತ್ ।
ದ್ರೌಪದೀ ಭರ್ತೃಸಾಧರ್ಮ್ಯಂ ಸ್ತ್ರೀಣಾಂ ಧರ್ಮೋ ಯತಃ ಸದಾ ॥ – (೨೩/೧೦)

ಇದು ದ್ರೌಪದಿ ಭೀಮಪತ್ನಿಯಾದ ಸಾಕ್ಷಾತ್ ಭಾರತಿ ಎಂಬ ಮುಖ್ಯಪ್ರಮೇಯವನ್ನು ತಿಳಿಯಲು ಸಹ ಸಾಧನ.

ಪಾಂಡವರು ವಿರಾಟನಂತಹ ರಾಜನನ್ನು ಆಶ್ರಯಿಸುವ ಮೂಲಕ ಅನ್ಯಾಶ್ರಯವನ್ನು ಮಾಡಿದ ದೋಷಕ್ಕೆ ಗುರಿಯಾಗುವುದಿಲ್ಲವೇ ಎಂಬ ಮತ್ತೊಂದು ಪ್ರಶ್ನೆಗೂ ಇಲ್ಲಿ ಉತ್ತರವಿದೆ. ವಿರಾಟರಾಜ ಪಾಂಡವರ ಸಾಮಂತರಾಜ. ರಾಜಸೂಯಯಾಗದಲ್ಲಿ ಭೀಮನಿಗೆ ಸೋತು ಶರಣಾಗಿದ್ದವನು. ಆದ್ದರಿಂದ ಅವನ ರಾಜ್ಯ ಪಾಂಡವರ ರಾಜ್ಯವೇ ಆಗುವುದು. ಹೀಗೆ ಪಾಂಡವರು ನೆಲೆಸಿದ್ದು ಪರರ ಆಶ್ರಯದಲ್ಲಲ್ಲ ಎಂಬುದು ನಿಶ್ಚಿತವಾಗುವುದು. ವೇದ ಬಲ್ಲ ಜ್ಞಾನಿಗಳಿಗೆ ಇತರರ ಸೊತ್ತಿನ ಮೇಲೆ ಅಧಿಕಾರ ಬರುವುದು. ಪಾಂಡವರು ವೇದಬಲ್ಲವರು ಮಾತ್ರವಲ್ಲದೇ ವೇದ ಪ್ರತಿಪಾದ್ಯರಾದ ವಾಯು ಮೊದಲಾದ ದೇವತೆಗಳೇ ಆದವರು. ಎಂದರೆ ಅವರಿಗೆ ವಿರಾಟರಾಜನ ರಾಜ್ಯದ ಮೇಲಿನ ಅಧಿಕಾರ ಸಹಜವೆಂಬುದಾಗಿ ಸಿದ್ಧವಾಗುವುದು. ಹೀಗೆ ಅವರು ಆಶ್ರಯಿಸಿದ್ದು ಬೇರೆ ಯಾರನ್ನೋ ಅಲ್ಲ ಎನ್ನುವುದು ಸಿದ್ಧಪಡುವುದು. ಹೀಗೆ ಪಾಂಡವರಿಗೆ ಅನ್ಯಾಶ್ರಯದೋಷ ಸರ್ವಥಾ ಇಲ್ಲ ಎಂಬುದು ಇಲ್ಲಿಯ ನಿರೂಪಣೆ :

ಸ್ವಯಂ ವೇದವಿದಾಂ ಸರ್ವಂ ದೇವೇಶಾನಾಂ ಚ ಕಿಂ ಪುನಃ ।
ಅತಸ್ತೇऽನ್ಯಾಶ್ರಯಂ ನೈವ ಚಕ್ರುಃ ಸ್ವಬಲಸಂಶ್ರಯಾತ್ ॥ – (೨೩/೬)

ಅಜ್ಞಾತವಾಸಕಾಲದಲ್ಲಿನ ಪಾಂಡವರ ಸಾಧನೆಯನ್ನು ವಿಮರ್ಶಿಸುತ್ತ ಜೀಮೂತವಧೆ, ಕೀಚಕ, ಉಪಕೀಚಕರ ವಧೆ, ವಿರಾಟಮೋಚನ ಹಾಗೂ ಗೋಮೋಚನ, ಮೊದಲಾದ ಮುಖ್ಯಕಾರಣದಿಂದ ಸಾಧನೆಯಲ್ಲಿ ಭೀಮಸೇನನದೇ ಎಂದಿನಂತೆ ಸಿಂಹಪಾಲು. ಅನಂತರದ ಸಾಧನೆ ಕೀಚಕರ ಮತ್ತು ಉಪಕೀಚಕರ ವಧೆಗೆ ಕಾರಣವಾದ ದ್ರೌಪದಿಯದು. ಗೋಮೋಚನೆಯ ಕಾರಣದಿಂದ ಅನಂತರದ ಸ್ಥಾನ ಅರ್ಜುನನದು. ಅನಂತರದ್ದು ಯುಧಿಷ್ಠಿರಾದಿಗಳದು ಎಂಬುದು ಇಲ್ಲಿಯ ನಿರ್ಣಯ :

ಏವಂ ವಿರಾಟಂ ಮೋಚಯಿತ್ವೈವ ಗಾಶ್ಚ ತಮಸ್ಯಂಧೇ ಕೀಚಕಾನ್ ಪಾತಯಿತ್ವಾ ।
ಪ್ರಾಪ್ತೋ ಧರ್ಮಃ ಸುಮಹಾನ್ ವಾಯುಜೇನ ತಸ್ಯಾನು ಪಾರ್ಥೇನ ಚ ಗೋವಿಮೋಕ್ಷಣಾತ್॥
– (೨೩/೪೯)

ಅಧ್ಯಾಯದ ಕೊನೆಯಲ್ಲಿ ಚಾಂದ್ರಮಾನವೇ ಯಾಜ್ಞಿಕರಿಗೆ ಗ್ರಾಹ್ಯವಾದ ಕಾಲಗಣನೆಯ ಮಾನ ಎಂಬ ವಿಶೇಷಾಂಶ ನಿರೂಪಿತವಾಗಿದೆ :

ದಿನಾನಾಮಧಿಪಃ ಸೂರ್ಯಃ ಪಕ್ಷಮಾಸಾಬ್ದಪಃ ಶಶೀ।
ತಸ್ಮಾತ್ ಸೌಮ್ಯಾಬ್ದಮೇವಾತ್ರ ಮುಖ್ಯಮಾಹುರ್ಮನೀಷಿಣಃ ॥
ಸೌಮ್ಯಂ ಕಾಲಂ ತತೋ ಯಜ್ಞೇ ಗೃಹ್ಣಂತಿ ನ ತು ಸೂರ್ಯಜಮ್।

– (೨೩/೫೬,೫೭)

ಇಪ್ಪತ್ತನಾಲ್ಕನೆಯ ಅಧ್ಯಾಯ (ಶ್ಲೋಕ ಸಂಖ್ಯೆ : ೮೦)

ಉಪಪ್ಲಾವ್ಯದಲ್ಲಿ ಶ್ರೀಕೃಷ್ಣನ ನೇತೃತ್ವದಲ್ಲಿ ಸಭೆಸೇರಿ ಪಾಂಡವರು ತಮ್ಮ ರಾಜ್ಯವನ್ನು ನಿಯಮಕ್ಕನುಗುಣವಾಗಿ ಮರಳಿಸಲೆಂದು ಧೃತರಾಷ್ಟ್ರನ ಬಳಿಗೆ ದ್ರುಪದ ಪುರೋಹಿತನನ್ನು ಕಳುಹಿಸುವುದು, ಶ್ರೀಕೃಷ್ಣನ ಹಾಗೂ ಭೀಮಾರ್ಜುನರ ಹಿರಿಮೆಯನ್ನು ವರ್ಣಿಸಿ ದ್ರುಪದ ಪುರೋಹಿತ ಧೃತರಾಷ್ಟ್ರನಿಗೆ ಪಾಂಡವರ ರಾಜ್ಯವನ್ನು ಹಿಂದಿರುಗಿಸಲು ತಿಳಿಸುವುದು, ಪಾಂಡವ ಕೌರವರ ಸಮರಸಿದ್ಧತೆ, ಶ್ರೀಕೃಷ್ಣನ ಬಳಿಗೆ ಯುದ್ಧಸಹಾಯವನ್ನು ಬಯಸಿ ಅರ್ಜುನ ದುರ್ಯೋಧನರ ಆಗಮನ, ಅವರ ವರ್ತನೆಗನುಗುಣವಾಗಿ ಶ್ರೀಕೃಷ್ಣ ಇಬ್ಬರಿಗೂ ಸಹಾಯ ನೀಡಿದ್ದು ತನ್ನನ್ನು ಆಯ್ಕೆಮಾಡಿಕೊಂಡ ಅರ್ಜುನನೊಂದಿಗೆ ಕೃಷ್ಣ ಪಾಂಡವರ ಬಳಿಗೆ ತೆರಳಿದ್ದು, ಕೃಷ್ಣ ನೀಡಿದ ನಾರಾಯಣಸೇನೆಯೊಂದಿಗೆ ದುರ್ಯೋಧನ ಮರಳಿದ್ದು, ಬಲರಾಮ ಯಾವ ಪಕ್ಷವನ್ನೂ ವಹಿಸದೆ ತೀರ್ಥಯಾತ್ರೆಗೆ ತೆರಳಿದ್ದು, ಕುರುಪಾಂಡವಸೇನೆಯ ಪ್ರಧಾನ ಯೋಧರ ವಿವರ, ಪಾಂಡವಪಕ್ಷಸೇರಲೆಂದು ತೆರಳಿದ ಶಲ್ಯರಾಜನನ್ನು ದುರ್ಯೋಧನ ಕಪಟೋಪಾಯದಿಂದ ತನ್ನ ಪಕ್ಷಕ್ಕೆ ಸೆಳೆದುಕೊಂಡಿದ್ದು, ಧೃತರಾಷ್ಟ್ರನ ರಾಯಭಾರಿಯಾಗಿ ಬಂದ ಸಂಜಯನಿಗೆ ಭೀಮದ್ರೌಪದಿಯರು ತಿಳಿಸಿದ್ದ ಧರ್ಮಕ್ಕನುಗುಣವಾಗಿ ಯುಧಿಷ್ಠಿರ ರಾಜ್ಯ ಅಥವಾ ಯುದ್ಧ ಎಂಬ ತಮ್ಮ ನಿಲುವನ್ನು ಸ್ಫುಟಪಡಿಸಿದ್ದು, ಹಿಂತಿರುಗಿದ ಸಂಜಯ ಧೃತರಾಷ್ಟ್ರನನ್ನು ತೆಗಳಿ ಮನೆಗೆ ತೆರಳಿದ್ದು, ಆ ರಾತ್ರಿ ನಿದ್ದೆ ಬಾರದ ಧೃತರಾಷ್ಟ್ರ ವಿದುರನಿಂದ ನೀತಿಶಾಸ್ತ್ರವನ್ನೂ ಸನತ್ಸುಜಾತರಿಂದ ಬ್ರಹ್ಮವಿದ್ಯೆಯನ್ನೂ ಕೇಳಿ ತಿಳಿದದ್ದು, ಪಾಂಡವರ ರಾಯಭಾರವನ್ನು ವಹಿಸಿ ಶ್ರೀಕೃಷ್ಣ ತೆರಳಿದ್ದು, ಯುಧಿಷ್ಠಿರಾದಿಗಳು ಕೃಷ್ಣನಿಗೆ ತಮ್ಮ ಅಭಿಪ್ರಾಯವನ್ನು ತಿಳಿಸಿದ್ದು, ಸಂಧಿ ಅಶಕ್ಯ ಯುದ್ಧವೇ ಸೂಕ್ತ ಎಂಬ ದ್ರೌಪದಿಯ ಬೇಡಿಕೆಗೆ ಕೃಷ್ಣ ಸಮ್ಮತಿ ನೀಡಿದ್ದು, ಸಾತ್ಯಕಿಯೊಂದಿಗೆ ಹಸ್ತಿನಾಪುರಕ್ಕೆ ಕೃಷ್ಣ ಪಯಣಿಸಿದ್ದು, ದುರ್ಯೋಧನನ ಮನೆಗೆ ತೆರಳಿದ ಕೃಷ್ಣ ಅವನ ಆತಿಥ್ಯವನ್ನು ತಿರಸ್ಕರಿಸಿದ್ದು, ಸಭೆಯಲ್ಲಿ ದ್ರೌಪದಿಗಾದ ಅವಮಾನವನ್ನು ಪ್ರತಿಭಟಿಸಲಿಲ್ಲವೆಂಬ ಕಾರಣದಿಂದ ಭೀಷ್ಮಾದಿಗಳ ಮನೆಗೂ ತೆರಳದಿದ್ದದ್ದು, ವಿದುರ ದ್ರೌಪದಿಗಾದ ಅವಮಾನವನ್ನು ಪ್ರತಿಭಟಿಸಿದ್ದರಿಂದ ಪ್ರೀತನಾಗಿ ಕೃಷ್ಣ ವಿದುರನ ಮನೆಗೆ ತೆರಳಿ ಆತಿಥ್ಯ ಸ್ವೀಕರಿಸಿದ್ದು, ಮಾರನೆಯ ದಿನ ಕುರುಸಭೆಗೆ ಕೃಷ್ಣ ಪ್ರವೇಶಿಸಿದ್ದು, ಪ್ರಬಲರಾದ ಪಾಂಡವರಿಗೆ ಅರ್ಧರಾಜ್ಯವನ್ನು ನೀಡಿ ಪ್ರಾಣ ಉಳಿಸಿಕೊಳ್ಳಲು

ತಿಳಿಸಿದ್ದು, ಕೃಷ್ಣ ಪರಶುರಾಮ ಮೊದಲಾದ ಸಕಲರ ಉಪದೇಶವನ್ನೂ ದುರ್ಯೋಧನ ತಿರಸ್ಕರಿಸಿದ್ದು, ಕರ್ಣ ಶಕುನಿ, ದುಃಶಾಸನರೊಂದಿಗೆ ಕೂಡಿ ಕೃಷ್ಣನನ್ನು ಬಂಧಿಸಲು ಯೋಜಿಸಿದ್ದು, ಕೃಷ್ಣ ಆಗ ತನ್ನ ವಿಶ್ವರೂಪವನ್ನು ತೋರಿ ಧೃತರಾಷ್ಟ್ರನಿಗೆ ದರ್ಶನ ನೀಡಿದ್ದು, ಕೃಷ್ಣ ಕುಂತಿಯ ಮನೆಗೆ ತೆರಳಿ ಅವಳು ಪಾಂಡವರಿಗೆ ನೀಡಿದ ಸಂದೇಶವನ್ನು ಸ್ವೀಕರಿಸಿದ್ದು, ಕರ್ಣನನ್ನು ತನ್ನೊಂದಿಗೆ ಕರೆದೊಯ್ದು ಅವನು ಕೌಂತೇಯನೆಂದು ತಿಳಿಸಿ ಅವನು ಪಾಂಡವಪಕ್ಷವನ್ನು ಸ್ವೀಕರಿಸಲು ತಿಳಿಸಿದ್ದು, ಕೃಷ್ಣನ ಮಾತನ್ನು ಅಂಗೀಕರಿಸದ ಕರ್ಣ ಕೌರವಪಕ್ಷದಲ್ಲಿಯೇ ಉಳಿಯುವುದಾಗಿ ತಿಳಿಸಿದ್ದು, ಅಶ್ವತ್ಥಾಮ ಕೃಷ್ಣನಿಗೆ ತನ್ನ ತಂದೆಯ ಮರಣಪರ್ಯಂತ ಮೃದುಯೋಧಿಯಾಗಿರುವುದಾಗಿ ತಿಳಿಸಿದ್ದು, ಕುರುಪಾಂಡವಸೇನೆಗಳು ಕುರುಕ್ಷೇತ್ರಸಮರಾಂಗಣದಲ್ಲಿ ಯುದ್ಧಕ್ಕೆಂದು ಶಿಬಿರಗಳನ್ನು ನಿರ್ಮಿಸಿದ್ದು – ಇವು ಈ ಅಧ್ಯಾಯದ ಮುಖ್ಯ ವಿವರಗಳು. ಹೀಗೆ ಇದರಲ್ಲಿ ಮಹಾಭಾರತ ಉದ್ಯೋಗಪರ್ವದ ಸಮಗ್ರನಿರ್ಣಯ ಬಂದಿದೆ.

ಧೃತರಾಷ್ಟ್ರನಿಗೆ ದ್ರುಪದ ಪುರೋಹಿತ ತಿಳಿಸಿದ ಶ್ರೀಕೃಷ್ಣ ಹಾಗೂ ಭೀಮಾರ್ಜುನರ ಮಹಿಮೆ ಮನನೀಯವಾದದ್ದು. ವನಪರ್ವದಲ್ಲಿ ನಡೆದ ಜಟಾಸುರವಧಪ್ರಸಂಗ ಇದರಲ್ಲಿ ನಿರೂಪಿತವಾಗಿದೆ. ತನ್ನ ನೆರವು ಬಯಸಿ ಬಂದ ಅರ್ಜುನ ದುರ್ಯೋಧನರಿಗೆ ಶ್ರೀಕೃಷ್ಣ ಅವರಿಬ್ಬರಿಗೂ ತೃಪ್ತಿಯಾಗುವಂತೆ ಸೇವೆ ಸಲ್ಲಿಸಿದ ಇಲ್ಲಿಯ ನಿರೂಪಣೆ ತುಂಬ ವಿಶಿಷ್ಟವಾದದ್ದು. ಭಗವಂತನ ಆಯ್ಕೆ ಸಕಲ ಪುರುಷಾರ್ಥಗಳ ಸಿದ್ಧಿಗೆ ಸಾಧನವಾದರೆ ಅವನ ಹೊರತಾದ ಇತರ ವಸ್ತುಗಳ ಆಯ್ಕೆ ಸರ್ವನಾಶಕ್ಕೆ ನಾಂದಿಯೆಂಬ ಸಂದೇಶ ಧ್ವನಿತವಾಗಿದೆ :

> ಪಾರ್ಥಾನಾಮೇವ ಸಾಹಾಯ್ಯಂ ಕರಿಷ್ಯನ್ನಪಿ ಕೇಶವಃ ।
> ತಸ್ಯಾಭಕ್ತಿಂ ದರ್ಶಯಿತುಂ ಚಕ್ರೇ ಸಮವದೀಶ್ವರಃ ॥ – (೨೪/೧೯)

ಕೃಷ್ಣ ಭೀಮನನ್ನು ಆಕ್ಷೇಪಿಸುವ ನೆಪದಲ್ಲಿ ಅವನ ಅಗಾಧವಾದ ಬಲಜ್ಞಾನಗಳನ್ನು ವಿಶೇಷವಾಗಿ ಜಗತ್ತಿಗೆ ತಿಳಿಸಿಕೊಟ್ಟ ರೀತಿ ಅತ್ಯಂತ ಅಪೂರ್ವವಾದುದು (೨೪/೪೮, ೪೯) :

> ಅಭಿಪ್ರಾಯಂ ಕೇಶವಸ್ಯ ಜಾನನ್ ಭೀಮೋ ನಿಜಂ ಬಲಮ್ ।
> ರಾಜ್ಞಾಂ ಮಧ್ಯೇऽವದತ್ ತಚ್ಚ ಕೃಷ್ಣೋ ಹ್ಯಧಿಕಮೇವ ಹಿ ॥
> ಶಶಂಸ ಸತ್ಯೈಃ ಸದ್ವಾಕ್ಯೈ ರಾಜ್ಞಾಂ ಮಧ್ಯೇ ಪ್ರಕಾಶಯನ್ ।
> ವಧಂ ಕುರೂಣಾಂ ಸದ್ಧರ್ಮಂ ಗುಣಾನ್ ಭೀಮಸ್ಯ ಚಾಮಿತಾನ್ ॥

ಕೃಷ್ಣಭೀಮರಲ್ಲಿಂದೂ ಪರಸ್ಪರವಿರೋಧ ಸರ್ವಥಾ ಇಲ್ಲ ಎಂಬ ವಿಶೇಷಾಂಶವನ್ನೂ ತಿಳಿಸಿರುವರು :

> ನಿತ್ಯಮೇಕಮನಸ್ಕೌ ತಾವಪಿ ಕೇಶವಮಾರುತೀ ।
> ಏವಂ ಲೋಕಸ್ಯ ಸಂವಾದಹೇತೋಃ ಸಂವಾದಮಕ್ರತಾಮ್ ॥ – (೨೪/೫೦)

ಕೃಷ್ಣ ಭೀಷ್ಮಾದಿಗಳ ಮನೆಗೆ ತೆರಳದಿರಲು ಇಲ್ಲಿ ನೀಡಿರುವ ಕಾರಣ ಅತ್ಯಂತ ಮಾರ್ಮಿಕವಾದುದು:

ಯಥೋಚಿತಂ ತೇಷು ವಿಧಾಯ ಕೇಶವೋ ದೌರ್ಯೋಧನಂ ಪ್ರಾಪ್ಯ ಗೃಹಂ ಚ ಪೂಜಿತಃ।
ಪೂಜಾಂ ತದೀಯಾಂ ಗುಣವದ್ವಿಡಿತ್ಯಸೌ ಜಗ್ರಾಹ ನೋ ವಿದುರಂ ಜಾಜಗಾಮ॥
ಸ ಭೀಷ್ಮಮುಖ್ಯೈರಭಿಯಾಚಿತೋಽಪಿ ಜಗಾಮ ನೈಷಾಂ ಗೃಹಮಾದಿದೇವಃ ।
ಉಪೇಕ್ಷಿತಾ ದ್ರೌಪದೀತ್ಯಪ್ರಮೇಯೋ ಜಗಾಮ ಗೇಹಂ ವಿದುರಸ್ಯ ಶೀಘ್ರಮ್ ॥
– (೨೪/೫೯, ೬೦)

ಕೃಷ್ಣ ವ್ಯಾಸರು ಮೊದಲಾಗಿ ತಂದೆತಾಯಿಗಳವರೆಗೆ ಯಾರ ಮಾತನ್ನೂ ಕೇಳದ ದುರ್ಯೋಧನ ತಮೋಯೋಗ್ಯ ಎಂಬುದನ್ನು ನಿರೂಪಿಸಿರುವ ಪರಿ ಅಪೂರ್ವವಾದುದು:

ಋಷಿಭಿರ್ಜಾಮದಗ್ನ್ಯೇನ ವ್ಯಾಸೇನಾಪ್ಯಮಿತೌಜಸಾ ।
ವಾಸುದೇವಾತ್ಮನಾ ಚೈವ ತ್ರಿರೂಪೇಣೈವ ವಿಷ್ಣುನಾ ॥
ಮಾತಾಪಿತೃಭ್ಯಾಂ ಭೀಷ್ಮಾದ್ಯೈರನುಶಿಷ್ಟೋಽಪಿ ದುರ್ಮತಿಃ ।
ದುರ್ಯೋಧನೋ ಮಂತ್ರಯತೇ ಮುಕುಂದಸ್ಯಾಶು ಬಂಧನಮ್ ॥
– (೨೪/೬೯, ೭೦)

ವಿದುರ ನೀತಿ, ಸನತ್ಸುಜಾತೀಯಗಳ ಸಾರಸರ್ವಸ್ವದ ನಿರೂಪಣೆ ಹೀಗಿದೆ:

ನಿಂದಿತಃ ಸಂಜಯೇನಾಸಾವಾಹೂಯ ವಿದುರಂ ನಿಶಿ ।
ಪಪ್ರಚ್ಛ ಸೋಽವದದ್ಧರ್ಮಂ ಪಾರ್ಥಾನಾಂ ರಾಜ್ಯದಾಪನಮ್ ॥
ಐಹಿಕಸ್ಯ ಸುಖಸ್ಯಾಪಿ ಕಾರಣಂ ತದನಿಂದಿತಮ್ ।
ಅನ್ಯಥಾ ಸರ್ವಪುತ್ರಾಣಾಂ ನಾಶಂ ಧರ್ಮಾತಿಲಂಘನಮ್ ॥
ತತ್ರ ಭಾವಮಕೃತ್ವಾ ಸ ಜ್ಞಾನಾದಿಚ್ಛನ್ನಕ್ಷಯಮ್ ।
ವಿಷ್ಣೋಃ ಸ್ವರೂಪಂ ಪಪ್ರಚ್ಛ ಸೋಽಸ್ಮರಚ್ಚ ಸನಾತನಮ್ ॥
ಸ ಆಗತ್ಯಾವದತ್ ತತ್ತ್ವಂ ವಿಷ್ಣೋರ್ಮಾಯಾವಿನಃ ಶುಭಾ ।
ನ ಗತಿಶ್ಚ .....॥ – (೨೪/೩೬-೩೯)

ಶ್ರೀಕೃಷ್ಣ ಸಂಧಿಕಾರ್ಯದಲ್ಲಿ ವಿಫಲನಾದ ಎಂಬ ಆಕ್ಷೇಪವನ್ನು ನಿರಾಕರಿಸುತ್ತ ಸರ್ವಸಮರ್ಥನಾದ ಅವನು ರಾಯಭಾರ ಕೈಗೊಂಡಿದ್ದು ಯುದ್ಧನಿಶ್ಚಯಕ್ಕೇ ಹೊರತು ಸಂಧಿಗಾಗಿ ಸರ್ವಥಾ ಅಲ್ಲ. ಅವನು ಸದಾ ಸತ್ಯ ಸಂಕಲ್ಪ. ಧರ್ಮಾಧರ್ಮಗಳ, ನ್ಯಾಯಾನ್ಯಾಯಗಳ, ಸನ್ಮತ ದುರ್ಮತಗಳ ನಡುವೆ ಸಂಧಾನ ಕತ್ತಲೆ ಬೆಳಕುಗಳ ನಡುವೆ ಹೇಗೋ ಹಾಗೆ ಸರ್ವಥಾ ಅಸಂಭಾವಿತ ಎಂಬ ಇಲ್ಲಿನ ಒಟ್ಟು ಭಾವ ಶಾಸ್ತ್ರತತ್ತ್ವದ ಹೃದಯವನ್ನೇ ಅನಾವರಣಗೊಳಿಸುವ ಮುಖ್ಯಾಂಶ:

ಅನಂತಶಕ್ತಿಃ ಪುರುಷೋತ್ತಮೋಽಸೌ ಶಕ್ತೋಽಪಿ ದುರ್ಯೋಧನಚಿತ್ತನಿಗ್ರಹೇ ।
ನೈವ ವ್ಯಧಾದೇನಮಥೋಕ್ತಕಾರಿಣಂ ನಿಪಾತಯನ್ನಂಧತಮಸ್ಯನಂತಃ ॥ – (೨೪/೭೬)

ಇಪ್ಪತ್ತೈದನೆಯ ಅಧ್ಯಾಯ (ಶ್ಲೋಕ ಸಂಖ್ಯೆ : ೧೩೭)

ಭೀಮ ಭೀಷ್ಮರ ನೇತೃತ್ವದಲ್ಲಿ ಪಾಂಡವ ಕೌರವ ಸೇನೆಗಳ ಸಮಾವೇಶ, ಉಭಯ ಸೇನೆಗಳನ್ನು ನೋಡಿ ಕೃಪಾವಿಷ್ಟನಾದ ಅರ್ಜುನನ ಶಸ್ತ್ರಸನ್ಯಾಸ, ತತ್ತ್ವೋಪದೇಶ ನೀಡಲು ಶ್ರೀಕೃಷ್ಣನಲ್ಲಿ ಅರ್ಜುನನ ಪ್ರಾರ್ಥನೆ. ಯುದ್ಧ ಸ್ವಧರ್ಮವೆಂಬುದನ್ನು ನಿರೂಪಿಸುತ್ತ ಶ್ರೀಕೃಷ್ಣ ಅರ್ಜುನನಿಗೆ ಭಗವತ್ತತ್ತ್ವ, ಜೀವರ ಅನಾದಿನಿತ್ಯತ್ವ, ರಮಾಬ್ರಹ್ಮಾದಿ ಸಕಲರ ಹರ್ಯಧೀನತ್ವ, ಶ್ರೀಹರಿಗೆ ಸರ್ವಕರ್ಮಗಳನ್ನು ಸಮರ್ಪಿಸಿ ಫಲಾಸೆಯನ್ನು ತೊರೆಯುವುದೇ ಜ್ಞಾನಪ್ರಾಪಕವಾದ ಕರ್ಮಯೋಗ ಎಂಬುದರ ನಿರೂಪಣೆ ಭಗವಂತನ ಸರ್ವತ್ರವ್ಯಾಪ್ತಿ ಮೊದಲಾದವುಗಳನ್ನು ಉಪದೇಶಿಸಿ ತನ್ನ ವಿಶ್ವರೂಪವನ್ನು ತೋರಿದ್ದು, ಪುನಃ ಜ್ಞಾನ ಜ್ಞೇಯ ಪ್ರಕೃತಿ ಮೊದಲಾದವುಗಳ ಬಗ್ಗೆ ಉಪದೇಶಿಸಿದಾಗ ಅರ್ಜುನ ಮತ್ತೆ ಶಸ್ತ್ರಾಸ್ತ್ರವನ್ನು ತೆಗೆದುಕೊಂಡು ಯುದ್ಧಕ್ಕೆ ಸಿದ್ಧನಾದದ್ದು ಬಳಿಕ ಉಭಯ ಸೇನೆಗಳ ಯುದ್ಧ ಆರಂಭಗೊಂಡಿದ್ದು ಪ್ರಥಮದಿನದ ಯುದ್ಧದಲ್ಲಿ ದ್ವಂದ್ವಯುದ್ಧಗಳು ನಡೆದು, ಕೌರವ ಪಕ್ಷದ ಕೈ ಮೇಲಾದದ್ದು ಬಳಿಕ ಭೀಮಸೇನನ ಅದ್ಭುತ ಪರಾಕ್ರಮದಿಂದ , ಕೌರವರು ಕಂಗೆಟ್ಟದ್ದು ಮದ್ರರಾಜನಾದ ಶಲ್ಯನಿಂದ ಉತ್ತರಕುಮಾರನ ವಧೆಯಾದದ್ದು ಎರಡನೇ ದಿನದ ಯುದ್ಧದಲ್ಲಿ ಭೀಮ ಧೃಷ್ಟದ್ಯುಮ್ನಾದಿಗಳ ಪರಾಕ್ರಮ, ಮೂರನೇ ದಿವಸದ ಯುದ್ಧದಲ್ಲಿ ಕೃಷ್ಣ ಚಕ್ರ ಹಿಡಿದು, ಅರ್ಜುನ ದೃಢ ಯೋಧಿಯಾಗುವಂತೆ ಮಾಡಿದ್ದು ಅರ್ಜುನನ ಅಪಾರ ಪರಾಕ್ರಮದಿಂದ ಕುರುಸೇನೆ ಕಂಗೆಟ್ಟದ್ದು ನಾಲ್ಕನೇ ದಿವಸದ ಯುದ್ಧದಲ್ಲಿ ಭೀಮ, ಭೀಷ್ಮ ದ್ರೋಣಾದಿಗಳನ್ನು ಸಾರಥಿಹೀನರನ್ನಾಗಿ ಮಾಡಿ ಇಪ್ಪತ್ತೈದು ಜನ ಕೌರವರನ್ನು ಸಂಹರಿಸಿದ್ದು ಭಗವತ್ಪಾದಿಗಳೆಲ್ಲ ವಿರಥರಾದದ್ದು ದುರ್ಯೋಧನ ಭೀಮನಿಂದ ಪೆಟ್ಟು ತಿಂದು ಗಾಢ ಮೂರ್ಛೆಗೆ ಒಳಗಾದದ್ದು ಆ ರಾತ್ರಿ ದುರ್ಯೋಧನ ಭೀಷ್ಮರ ಬಳಿ ತೆರಳಿ ತಮ್ಮ ಸತತ ಸೋಲಿಗೆ ಕಾರಣವನ್ನು ಕೇಳಿದ್ದು, ಅದಕ್ಕೆ ಭೀಷ್ಮರು ಪಾಂಡವರೆಲ್ಲ ಕೃಷ್ಣರಕ್ಷಿತರಾದ ದೇವತೆಗಳು ಕೃಷ್ಣನಂತೂ ಸಾಕ್ಷಾತ್ ಪರಬ್ರಹ್ಮ ಎಂದು ಸಾರುವ ವಿಶ್ವೋಪಾಖ್ಯಾನವನ್ನು ತಿಳಿಸಿದ್ದು, ಆಗಲೂ ದುರ್ಯೋಧನ ಡಂಭಬುದ್ಧಿಯಿಂದ ವಿಷ್ಣುವಿಗೆ ನಮಸ್ಕರಿಸಿ, ಮಾರನೇ ದಿನ ಪುನಃ ಯುದ್ಧಕ್ಕೆ ತೆರಳಿದ್ದು ಐದನೆಯ ದಿನದ ಯುದ್ಧದಲ್ಲಿ ಮತ್ತೊಮ್ಮೆ ದುರ್ಯೋಧನನನ್ನು ಭೀಮ ಗಾಢಮೂರ್ಛೆಗೆ ಒಳಗಾಗಿಸಿದ್ದು, ಅರ್ಜುನನ ಪರಾಕ್ರಮದಿಂದ ಕುರು ಸೇನೆ ಮತ್ತೊಮ್ಮೆ ನೊಂದಿದ್ದು, ಸಾತ್ಯಕಿ ಭೂರಿಶ್ರವನ ಹತ್ತು ಮಕ್ಕಳನ್ನೂ ಅವನೆದುರೇ ಸಂಹರಿಸಿದ್ದು, ಆರನೇ ದಿನದ ಯುದ್ಧದಲ್ಲಿ ಅರ್ಜುನನಿಂದ ಭೀಷ್ಮರು ಪರಾಭವಗೊಂಡಿದ್ದು, ಏಳನೇ ದಿನದ ಯುದ್ಧದಲ್ಲಿ ಭಗದತ್ತ

ಘಟೋತ್ಕಚರ ಘೋರ ಯುದ್ಧ ನಡೆದದ್ದು, ಎಂಟನೇ ದಿನದ ಯುದ್ಧದಲ್ಲಿ ಅಲಂಬಸ ಇರಾವಂತರ ನಡುವೆ ಘೋರ ಯುದ್ಧ ನಡೆದು , ಅದರಲ್ಲಿ ಇರಾವಂತ ಹತನಾದದ್ದು, ಭೀಮನ ಪರಾಕ್ರಮಕ್ಕೆ ಅಂಜಿ ಅಲಂಬುಸಾದಿಗಳೆಲ್ಲ ಪಲಾಯನಮಾಡಿದ್ದು, ಅನಂತರ ನಡೆದ ಯುದ್ಧದಲ್ಲಿ ಭೀಮ ರಕ್ಷಿತನಾದ ಘಟೋತ್ಕಚನ ಪರಾಕ್ರಮದಿಂದ ಭೀಷ್ಮದ್ರೋಣಾದಿ ಸಮೇತವಾದ ಕುರುಸೇನೆ ಕಂಗೆಟ್ಟದ್ದು, ಒಂಭತ್ತನೇ ದಿನದ ಯುದ್ಧದಲ್ಲಿ ಅಭಿಮನ್ಯು ದುರ್ಯೋಧನರ ನಡುವೆ ನಡೆದ ಯುದ್ಧದಲ್ಲಿ ಭೀಮರಕ್ಷಿತನಾಗಿ ಅಭಿಮನ್ಯು ಜಯಗಳಿಸಿದ್ದು, ಅಂದು ರಾತ್ರಿ ಕೃಷ್ಣ ಭೀಮಾದಿಗಳ ಸಮೇತ ಭೀಷ್ಮರನ್ನು ಸಂದರ್ಶಿಸಿ ಅವರ ವಧೋಪಾಯವನ್ನು ತಿಳಿದದ್ದು, ಹತ್ತನೇ ದಿನದ ಯುದ್ಧದಲ್ಲಿ ಶಿಖಂಡಿಯನ್ನು ಮುಂದಿಟ್ಟುಕೊಂಡು ಅರ್ಜುನಾದಿಗಳು ಭೀಷ್ಮರನ್ನು ಎದುರಿಸಿದ್ದು, ಅರ್ಜುನನ ಬಾಣಗಳಿಂದ ಭೀಷ್ಮರು ಶರಮಂಚದ ಮೇಲೆ ಒರಗಿದ್ದು, ಭೀಷ್ಮರ ಅಪೇಕ್ಷೆಯಂತೆ ಅರ್ಜುನ ಅವರಿಗೆ ಬಾಣಗಳ ತಲೆದಿಂಬನ್ನು ನೀಡಿದ್ದು, ಮಾರನೇ ದಿನ ಪ್ರಾತಃಕಾಲದಲ್ಲಿ ಅರ್ಜುನ ಭೀಷ್ಮರ ಅಪೇಕ್ಷೆಯಂತೆ ವಾರುಣಾಸ್ತ್ರದಿಂದ ಊರ್ಧ್ವಧಾರೆಯಾಗಿ ಕುಡಿಯಲು ನೀರನ್ನು ನೀಡಿದ್ದು, ಆಗ ಭೀಷ್ಮರು ಭೀಮಾರ್ಜುನರ ಪರಾಕ್ರಮವನ್ನು ಪ್ರಶಂಸಿಸಿ, ಕೃಷ್ಣರಕ್ಷಿತರಾದ ಪಾಂಡವರೊಂದಿಗೆ ಆಗಲಾದರೂ ಸಂಧಿ ಮಾಡಿಕೊಳ್ಳಲು ಸೂಚಿಸಿದ್ದು, ದುರ್ಯೋಧನ ಅದಕ್ಕೆ ಸಮ್ಮತಿಸದ್ದು, ಶ್ರೀವೇದವ್ಯಾಸರು ನೀಡಿದ ದಿವ್ಯದೃಷ್ಟಿಯಿಂದ ಸಂಜಯ ಅದೆಲ್ಲವನ್ನು ಧೃತರಾಷ್ಟ್ರನಿಗೆ ತಿಳಿಸಿದ್ದು– ಇವು ಈ ಅಧ್ಯಾಯದಲ್ಲಿ ಬಂದಿರುವ ಮುಖ್ಯ ವಿಷಯಗಳು. ಒಟ್ಟಾಗಿ ಭೀಷ್ಮಪರ್ವ ನಿರ್ಣಯ ಇದರಲ್ಲಿ ಬಂದಿದೆ.

ಶ್ರೀಕೃಷ್ಣ ಅರ್ಜುನನಿಗೆ ಮಾಡಿದ ಗೀತೋಪದೇಶದ ಸಾರಸರ್ವಸ್ವ ಈ ಅಧ್ಯಾಯದ ಅತ್ಯಂತ ಪ್ರಮುಖವಾದ ಅಂಶ. ಹದಿನೆಂಟು ಅಧ್ಯಾಯಗಳ ಗೀತೆಯ ಸಾರಸರ್ವಸ್ವವನ್ನು ಕೇವಲ ಹದಿನೆಂಟು ಶ್ಲೋಕಗಳಲ್ಲಿ ಇಲ್ಲಿ ಸಂಗ್ರಹಿಸಿರುವ ಪರಿ ಅನನ್ಯವಾದದ್ದು. ಗೀತೆಯ ಪ್ರಧಾನ ತತ್ವಗಳನ್ನು ಪ್ರಧಾನವಾಗಿ ಅದರ ವಾಕ್ಯಗಳಿಂದಲೇ ಇಲ್ಲಿ ನೀಡಿರುವುದು ಇದರ ವೈಶಿಷ್ಟ್ಯ.

ಭೀಷ್ಮರ ನಿಗ್ರಹ ಭೀಮಾದಿಗಳಿಗೆ ಎಷ್ಟು ಮಾತ್ರಕ್ಕೂ ಸಮಸ್ಯೆಯಾಗಿರಲಿಲ್ಲ, ಎಂಬ ಮತ್ತೊಂದು ಅಂಶ ಇಲ್ಲಿ ನಿರೂಪಿತವಾಗಿದೆ. ಅವರು ಭೀಷ್ಮರನ್ನು ಸ್ವತಃ ನಿಗ್ರಹಿಸದಿರಲು ಅವರು ಕೃಷ್ಣ ಭಕ್ತರಾದ ಸಾತ್ವಿಕ ಚೇತನ ಎಂಬ ಆದರಭಾವ ಕಾರಣವಾಗಿದ್ದಿತೇ ಹೊರತು ಅಸಾಮರ್ಥ್ಯವಲ್ಲ ಎಂಬುದು ಗಮನಾರ್ಹ. ಪಾಂಡವರು ಭೀಷ್ಮರ ವಧೋಪಾಯವನ್ನು ತಿಳಿಯಬಯಸಿದ್ದು ಅವರು ಅಪೇಕ್ಷಿಸುವ ರೀತಿಯಲ್ಲಿ ಸಂಹರಿಸಲೆಂದು ಮಾತ್ರ. ಭೀಮನ ಅಗಾಧ ಬಲದ ಮುಂದೆ ಭೀಷ್ಮರ ಶಕ್ತಿ ತುಂಬಾ ಪರಿಮಿತವಾದುದು ಎಂಬ ಮಾತು ದುರ್ಯೋಧನನ ಬಾಯಿಯಲ್ಲೆ ಬಂದಿರುವುದು ಇದಕ್ಕೆ

ಅಪರ್ಯಾಪ್ತಂ ತದಸ್ಮಾಕಂ ಬಲಂ ಭೀಷ್ಮಾಭಿರಕ್ಷಿತಮ್ ।
ಪರ್ಯಾಪ್ತಂ ತ್ವಿದಮೇತೇಷಾಂ ಬಲಂ ಭೀಮಾಭಿರಕ್ಷಿತಮ್ ॥ – ಗೀತಾ (೧/೧೦)

ಕರ್ಣ ಭೀಷ್ಮರ ಸೇನಾಧಿಪತ್ಯದ ಮೊದಲ ಹತ್ತು ದಿನದ ಯುದ್ಧದಲ್ಲಿ ಪಾಲ್ಗೊಂಡಿರಲಿಲ್ಲ ಎಂಬ ಅಂಶ ಇದರಲ್ಲಿ ಬಂದಿದೆ:

ಕರ್ಣೋ ಽರ್ಧರಥ ಇತ್ಯುಕ್ತ್ವಾ ತಾವದ್ಯುದ್ಧಾತ್ ಪ್ರಯಾಪಿತಃ ।
ಯಾವತ್ ತ್ವಂ ಯೋತ್ಸ್ಯಸೇ ತಾವನ್ನ ಯೋತ್ಸ್ಯಾಮೀತಿ ನಿರ್ಗತೇ ॥ – (೨೫/೩೧)

ವ್ಯಾಸರು ಸಂಜಯನಿಗೆ ದಿವ್ಯದೃಷ್ಟಿ ನೀಡಿದ ವಿವರವು ಅಧ್ಯಾಯದ ಕೊನೆಯಲ್ಲಿ ನಿರೂಪಿತವಾಗಿದೆ :

ವ್ಯಾಸದತ್ತೋರುವಿಜ್ಞಾನಾತ್ ಸಂಜಯಾದಖಿಲಂ ಪಿತಾ ।
ಶ್ರುತ್ವಾ ತದಾ ಪರ್ಯತಪ್ಯತ್ ಪಾಂಡವಾಃ ಕೃಷ್ಣದೇವತಾಃ ।
ಮುಮುದುಃ ಶಿಬಿರಂ ಪ್ರಾಪ್ಯ ಸರ್ವೇ ಕೃಷ್ಣಾನುಮೋದಿತಾಃ ॥ – (೨೫/೧೩೭)

ಇಪ್ಪತ್ತಾರನೆಯ ಅಧ್ಯಾಯ (ಶ್ಲೋಕ ಸಂಖ್ಯೆ : ೩೧೪)

ಭೀಷ್ಮರ ಪತನದ ನಂತರ ದ್ರೋಣರಿಗೆ ಸೇನಾಪತ್ಯ ವಹಿಸಿದ್ದು, ಕರ್ಣ ಭೀಷ್ಮರ ಅನುಮತಿ ಪಡೆದು ಯುದ್ಧದಲ್ಲಿ ಭಾಗವಹಿಸಿದ್ದು, ದ್ರೋಣರು ದುರ್ಯೋಧನನ ಅಪೇಕ್ಷೆಯಂತೆ ಯುಧಿಷ್ಠಿರನನ್ನು ಸೆರೆಹಿಡಿದು ಒಪ್ಪಿಸಲು ಪ್ರತಿಜ್ಞೆ ಮಾಡಿದ್ದು, ಹನ್ನೊಂದನೇ ದಿನದ ಯುದ್ಧದಲ್ಲಿ ಭೀಷ್ಮ-ಶಲ್ಯರ ನಡುವೆ ಘೋರ ಗದಾಯುದ್ಧ ನಡೆದು, ಭೀಮನ ಪೆಟ್ಟಿಗೆ ಶಲ್ಯ ರಾಜ ಗಾಢ ಮೂರ್ಛೆಗೆ ಒಳಗಾದದ್ದು, ಬಳಿಕ ಭೀಮನ ಪರಾಕ್ರಮಕ್ಕೆ ಅಂಜಿ ಕುರು ಸೇನೆ ಪಲಾಯನ ಮಾಡಿದ್ದು, ಅರ್ಜುನನ ಬಾಣಗಳ ಪೆಟ್ಟಿಗೆ ಕುರುಸೇನೆ ನಾಶಹೊಂದ ತೊಡಗಿದ್ದು, ಅಂದು ರಾತ್ರಿ ದುರ್ಯೋಧನ ನಿಂದಿಸಿದಾಗ, ಅರ್ಜುನ ಸಮರದಿಂದ ದೂರಕ್ಕೆ ತೆರಳುವಂತಾದಲ್ಲಿ ಧರ್ಮರಾಜನನ್ನು ಸೆರೆಹಿಡಿಯುವುದಾಗಿ ದ್ರೋಣರು ತಿಳಿಸಿದ್ದು, ಸುಶರ್ಮನ ನೇತೃತ್ವದಲ್ಲಿ ಸಂಶಪ್ತಕರು ಅರ್ಜುನನನ್ನು ದೂರಕರೆದೊಯ್ಯುವ ಕಾರ್ಯಕ್ಕೆ ಸಮ್ಮತಿಸಿದ್ದು, ಹನ್ನೆರಡನೇ ದಿನದ ಯುದ್ಧದಲ್ಲಿ ಭಗದತ್ತ ಅಪೂರ್ವ ಪರಾಕ್ರಮ ತೋರಿದ್ದು, ಆಗ ಅರ್ಜುನ ಕೃಷ್ಣನ ಆದೇಶದಂತೆ ಭಗದತ್ತನ ಮೇಲೆ ಯುದ್ಧಕ್ಕೆ ತೆರಳಿದ್ದು, ಭಗದತ್ತ ಪ್ರಯೋಗಿಸಿದ ವೈಷ್ಣವಾಸ್ತ್ರವನ್ನು ಶ್ರೀಕೃಷ್ಣ ವೈಜಯಂತಿಮಾಲೆಯನ್ನಾಗಿ ಕೊರಳಲ್ಲಿ ಧರಿಸಿದ್ದು, ಅರ್ಜುನ ಕಾರಣ ಕೇಳಿದಾಗ ಕೃಷ್ಣ ತನ್ನ ವಾಸುದೇವಾದಿ ರೂಪಗಳ ವೈಭವವನ್ನು ನಿರೂಪಿಸಿ, ವೈಷ್ಣವಾಸ್ತ್ರದ ಹಿನ್ನೆಲೆಯನ್ನು ತಿಳಿಸಿದ್ದು, ಬಳಿಕ ಕೃಷ್ಣನ ಆದೇಶದಂತೆ ಭಗದತ್ತನನ್ನು ಅವನ ಆನೆಯಾದ ಸುಪ್ರತೀಕವನ್ನು ಸಂಹರಿಸಿದ್ದು, ಅನಂತರದ

ಯುದ್ಧದಲ್ಲಿ ಅರ್ಜುನನಿಂದ ಶಕುನಿಯ ತಮ್ಮಂದಿರಾದ ಅಚಲ ಮತ್ತು ವೃಷಕರು ಹತರಾದದ್ದು. ಶಕುನಿಯು ಸೋತು ಪಲಾಯನ ಮಾಡಿದ್ದು, ಅಂದು ರಾತ್ರಿ ಪುನಃ ದುರ್ಯೋಧನ ನಿಂದಿಸಿದಾಗ ದ್ರೋಣರು ಅವನಿಗೆ ಮಾರನೆ ದಿನದ ಯದ್ಧದಲ್ಲಿ ಯುಧಿಷ್ಠಿರನನ್ನು ಸೆರೆಹಿಡಿಯುವುದಾಗಿ ಅಥವಾ ಅವನಂಥ ಪಾಂಡವ ವೀರನನ್ನು ಸಂಹರಿಸುವುದಾಗಿ ವಚನ ನೀಡಿದ್ದು, ಹದಿಮೂರನೇ ದಿನದ ಯುದ್ಧದಲ್ಲಿ ದ್ರೋಣರು ಪದ್ಮವ್ಯೂಹವನ್ನು ರಚಿಸಿದ್ದು, ಅದನ್ನು ಪ್ರವೇಶಿಸಲು ಯುಧಿಷ್ಠಿರನ ಅಪ್ಪಣೆಯಂತೆ ಅಭಿಮನ್ಯು ತೆರಳಿದ್ದು, ಅವನನ್ನು ಹಿಂಬಾಲಿಸಿ ಹೊರಟ ಯುಧಿಷ್ಠಿರಾದಿಗಳನ್ನು ಜಯದ್ರಥ ವ್ಯೂಹದ ಬಾಗಿಲಿನಲ್ಲಿ ಶಿವನ ವರದಿಂದಾಗಿ ತಡೆದದ್ದು, ಪದ್ಮವ್ಯೂಹದೊಳಗೆ ಪ್ರವೇಶಿಸಿದ ಅಭಿಮನ್ಯು ಅದ್ಭುತಪರಾಕ್ರಮವನ್ನು ತೋರಿ ಅಪಾರ ಕುರುಸೇನೆಯನ್ನು ನಾಶಮಾಡಿದ್ದು, ದುರ್ಯೋಧನನ ಪುತ್ರನಾದ ಲಕ್ಷ್ಮಣನನ್ನು ಸಂಹರಿಸಿದ್ದು, ದ್ರೋಣಾದಿಗಳು ಆಗ ಕರ್ಣನನ್ನು ಮುಂದೆ ಮಾಡಿಕೊಂಡು ಅಭಿಮನ್ಯುವನ್ನು ವಿರಥನನ್ನಾಗಿಯೂ, ಧನುಸ್ಸಿಲ್ಲದವನನ್ನಾಗಿಯೂ ಮಾಡಿದ್ದು, ಅನಂತರ, ಬಳಿಕ ನಡೆದ ಯುದ್ಧದಲ್ಲಿ ಅಭಿಮನ್ಯು ಹಾಗೂ ದುಃಶಾಸನನ ಪುತ್ರ ಇಬ್ಬರೂ ಗದಾಯುದ್ಧದಲ್ಲಿ ಮಡಿದದ್ದು, ಅಭಿಮನ್ಯುವಿನ ಮರಣದಿಂದಾಗಿ ಕೌರವರು ಅಪಾರವಾಗಿ ಹರ್ಷಿಸಿದ್ದು, ಪುತ್ರ ವಧೆಯ ವಿಷಯ ತಿಳಿದು ಕೆರಳಿದ ಅರ್ಜುನ ಮಾರನೆಯ ದಿನ ಸೂರ್ಯಾಸ್ತದ ಮುನ್ನ ಜಯದ್ರಥನನ್ನು ಸಂಹರಿಸುವುದಾಗಿಯೂ, ತಪ್ಪಿದಲ್ಲಿ ಅಗ್ನಿಪ್ರವೇಶ ಮಾಡುವುದಾಗಿಯೂ ಶಪಥ ಮಾಡಿದ್ದು, ಅಂದು ರಾತ್ರಿ ಸ್ವಪ್ನದಲ್ಲಿ ಕೃಷ್ಣ ಅರ್ಜುನನನ್ನು ಕೈಲಾಸಕ್ಕೆ ಕರೆದೊಯ್ದು ಅವನಿಗೆ ಶಿವನಿಂದ ಮತ್ತೊಮ್ಮೆ ಪಾಶುಪತಾಸ್ತ್ರವನ್ನು ನೀಡಿಸಿದ್ದು, ಹದಿನಾಲ್ಕನೆ ದಿವಸದ ಯುದ್ಧದಲ್ಲಿ ಜಯದ್ರಥನ ರಕ್ಷಣೆಗೋಸ್ಕರ ಶಕಟಾಬ್ಜಚಕ್ರ ಎಂಬ ವ್ಯೂಹವನ್ನು ರಚಿಸಿದ್ದು, ಆ ವ್ಯೂಹದೊಳಗೆ ದ್ರೋಣರಿಗೆ ಪ್ರದಕ್ಷಿಣೆ ಮಾಡಿ ಕೃಷ್ಣರಕ್ಷಿತನಾಗಿ ಅರ್ಜುನ ಪ್ರವೇಶಿಸಿದ್ದು, ದೃಢಾಯು ಮೊದಲಾದ ಅನೇಕರನ್ನು ಅವನು ಸಂಹರಿಸಿದ್ದು, ಶ್ರುತಾಯುಧ ಎಂಬ ವರುಣಪುತ್ರ ಕೃಷ್ಣನ ಮೇಲೆ ಗದೆ ಅಪ್ಪಳಿಸಿ ಅದರಿಂದ ತಾನೇ ಹತನಾದದ್ದು, ದ್ರೋಣರಿಂದ ಮಂತ್ರಕವಚ ತೊಟ್ಟು, ಯುದ್ಧಕ್ಕೆ ಬಂದ ದುರ್ಯೋಧನನನ್ನು ಅರ್ಜುನ ಪರಾಭವಗೊಳಿಸಿದ್ದು, ಇತ್ತ ಯುಧಿಷ್ಠಿರನನ್ನು ಸೆರೆಹಿಡಿಯಲು ಬಂದ ದ್ರೋಣರೊಂದಿಗೆ ಕಾದಾಡಿ ಸತ್ಯಜಿತ್ ಮೊದಲಾದ ಅನೇಕ ಪಾಂಚಾಲರು ಮೊದಲಾದವರು ಹತರಾದದ್ದು, ಅಲಂಬುಸ ರಾಕ್ಷಸನನ್ನು ಭೀಮಸೇನ ಅಸ್ತ್ರಯುದ್ಧದಲ್ಲಿ ಪರಾಭವಗೊಳಿಸಿದ್ದು, ಘಟೋತ್ಕಚ ಅಲಂಬುಸನನ್ನು ಸಂಹರಿಸಿದ್ದು, ಕೃಷ್ಣನ ವರದಿಂದಾಗಿ ಕೃತವರ್ಮ ವಿಶೇಷ ಪರಾಕ್ರಮದಿಂದ ಹೋರಾಡಿದ್ದು, ಕೃಷ್ಣನ ಶಂಖಘೋಷವನ್ನು ಕೇಳಿ ಅರ್ಜುನನ ಗಾಂಡೀವ ಧ್ವನಿ ಕೇಳುತ್ತಿಲ್ಲ ಎಂಬ ಚಿಂತೆಯಿಂದ ಯುಧಿಷ್ಠಿರ ಅವನ ಕ್ಷೇಮವಾರ್ತೆಯನ್ನು ತಿಳಿದು ಬರಲೆಂದು ಸಾತ್ಯಕಿಯನ್ನು ಕಳುಹಿಸಿದ್ದು, ಭೀಮನ

ರಕ್ಷಣೆಯಿಂದ ಸಾತ್ಯಕಿ ಆ ವ್ಯೂಹವನ್ನು ಪ್ರವೇಶಿಸಲು ಸಮರ್ಥನಾದದ್ದು, ಅರ್ಜುನನಂತೆ ಸಾತ್ಯಕಿ ದ್ರೋಣರಿಗೆ ವಂದಿಸಿ ವ್ಯೂಹದೊಳಗೆ ನುಗ್ಗಿದ್ದು, ಸಾತ್ಯಕಿ ಭೂರಿಶ್ರವರ ಘೋರಯುದ್ಧದಲ್ಲಿ ಭೂರಿಶ್ರವನ ಖಡ್ಗಕ್ಕೆ ಆಹುತಿಯಾಗಲಿದ್ದ ಸಾತ್ಯಕಿಯನ್ನು ಕೃಷ್ಣನ ಸೂಚನೆಯಂತೆ ಅರ್ಜುನ ರಕ್ಷಿಸಿದ್ದು, ಪ್ರಾಯೋಪವೇಶಕ್ಕೆ ಕುಳಿತ ಭೂರಿಶ್ರವನ ತಲೆಯನ್ನು ಸಾತ್ಯಕಿ ಕತ್ತರಿಸಿದ್ದು, ಬಳಲಿದ ಕುದುರೆಗಳ ರಕ್ಷಣೆಗಾಗಿ ಕೃಷ್ಣನ ಆದೇಶದಂತೆ ರಣರಂಗದಲ್ಲಿ ಅಶ್ವಶಾಲೆ ಹಾಗೂ ಕೊಳಗಳನ್ನು ನಿರ್ಮಿಸಿದ್ದು, ಕೃಷ್ಣ ಕುದುರೆಗಳನ್ನು ಕೊಳದಲ್ಲಿ ನಿಲ್ಲಿಸಿ, ನೀರು ಕುಡಿಸಿ, ಹುಲ್ಲು ತಿನ್ನಿಸಿ ಅವುಗಳ ಬಳಲಿಕೆಯನ್ನು ಪರಿಹರಿಸಿದ್ದು, ಅರ್ಜುನ ಸಾತ್ಯಕಿಯರ ಕ್ಷೇಮವಾರ್ತೆಯನ್ನು ತಿಳಿದುಬರಲೆಂದು ಯುಧಿಷ್ಠಿರ ಭೀಮನನ್ನು ಕಳುಹಿಸಿದ್ದು, ಭೀಮ ದ್ರೋಣನನ್ನು ಪರಾಭವಗೊಳಿಸಿ, ವ್ಯೂಹದೊಳಗೆ ಪ್ರವೇಶಿಸಿದ್ದು, ಮುಂದೆ ಭೀಮಸೇನ ಇಪ್ಪತ್ತಮೂರು ಕೌರವರನ್ನು ಆ ದಿನ ಸಂಹರಿಸಿದ್ದು, ಕೃಷ್ಣಾರ್ಜುನರನ್ನು ಕಂಡ ಭೀಮಸೇನ ಮಾಡಿದ ಸಿಂಹನಾದದಿಂದ ಅವರೆಲ್ಲರ ಕ್ಷೇಮವಾರ್ತೆಯನ್ನು ತಿಳಿದು ಯುಧಿಷ್ಠಿರ ಆನಂದಿಸಿದ್ದು, ಭೀಮ ವಿಕರ್ಣಾದಿಗಳನ್ನು ಸಂಹರಿಸಿದ್ದು, ಭೀಮ ಅಂದು ಇಪ್ಪತ್ತೊಂದು ಭಾರಿ ಕರ್ಣನನ್ನು ರಥ, ಸಾರಥಿ, ಧ್ವಜ, ಕುದುರೆಗಳಿಲ್ಲದವನನ್ನಾಗಿ ಮಾಡಿ ಪ್ರಾಣಸಂದೇಹಕ್ಕೆ ಒಳಗಾಗುವಂತೆ ಮಾಡಿದ್ದು, ಬಹಳವಾಗಿ ದುಃಖಿಸಿದ ಕಾರಣ ಇಪ್ಪತ್ತೆರಡನೆ ಯುದ್ಧದಲ್ಲಿ ಪರಶುರಾಮರು ನೀಡಿದ್ದ ರಥಾದಿಗಳಿಂದ ಕೂಡಿ ಭೀಮನನ್ನು ಎದುರಿಸಿದ್ದು, ಆಗಲೂ ಕರ್ಣ ಭೀಮನಿಂದ ಪರಾಭವಗೊಂಡಿದ್ದು, ಕೊನೆಗೂ ಭೀಮ ಪರಶುರಾಮರ ವರವನ್ನು ಮನ್ನಿಸಲೆಂದು ಕರ್ಣನಿಗೆ ವಿಶೇಷ ಹೋರಾಟಕ್ಕೆ ಅವಕಾಶ ನೀಡಿದ್ದು, ಬರಿಗಾಲಲ್ಲೇ ಕರ್ಣನ ರಥವನ್ನು ಏರಿದಾಗ ಅವನು ಅಂಜಿ ರಥಕೂಬರದ ಕೆಳಗೆ ಅಡಗಿದ್ದು, ಘಟೋತ್ಕಚ ಅಂದು ಮಧ್ಯರಾತ್ರಿಯಲ್ಲಿ ಶಕ್ತ್ಯಾಯುಧಕ್ಕೆ ಸಿಕ್ಕಿ ಸಾಯಬೇಕೆಂಬ ಕೃಷ್ಣನ ಸಂಕಲ್ಪವನ್ನು ಅರಿತು ಭೀಮ ಕರ್ಣನ ರಥದಲ್ಲಿದ್ದ ಶಕ್ತ್ಯಾಯುಧವನ್ನು ತರದೆ ಅಲ್ಲಿಯೇ ಬಿಟ್ಟದ್ದು, ಕರ್ಣ ಭೀಮನನ್ನು 'ತೂಬರ' ಎಂದು ದುರ್ಯೋಧನನ ಪ್ರೀತಿಗಾಗಿ ಹಂಗಿಸಿದ್ದು, ಅರ್ಜುನ ಭೀಮನ ಆದೇಶದಂತೆ ಕರ್ಣನನ್ನು ತಾನೇ ಕೊಲ್ಲುವುದಾಗಿ ಮತ್ತೆ ಪ್ರತಿಜ್ಞೆ ಮಾಡಿದ್ದು, ಅವನ ಪುತ್ರನನ್ನು ಅವನೆದುರೇ ಕೊಲ್ಲುವ ಶಪಥ ತೊಟ್ಟದ್ದು, ಸೂರ್ಯ ಮುಳಗುವ ಸಮಯ ಒದಗಿದ್ದನ್ನು ಗಮನಿಸಿ ಕೃಷ್ಣ ಕತ್ತಲು ಸೃಷ್ಟಿಸಿದ್ದು, ಸೂರ್ಯ ಮುಳುಗಿದನೆಂದು ಭ್ರಮಿಸಿ, ಹೊರಗೆ ಕಾಣಿಸಿಕೊಂಡ ಜಯದ್ರಥನ ತಲೆಯನ್ನು ಅರ್ಜುನ ಕತ್ತರಿಸಿದ್ದು, ಕೃಷ್ಣನ ಆದೇಶದಂತೆ ಅವನ ತಲೆಯನ್ನು ಅವನ ತಂದೆ ವೃದ್ಧಕ್ಷತ್ರನ ಕೈಯಲ್ಲಿ ಬೀಳಿಸಿ, ಅವನ ಸಾವಿಗೆ ಕಾರಣನಾದದ್ದು, ಅನಂತರ ಕೃಷ್ಣ ಕತ್ತಲೆಯನ್ನು ಲಯಮಾಡಿದಾಗ ಪುನಃ ಸೂರ್ಯ ಕಾಣಿಸಿಕೊಂಡದ್ದು, ದುರ್ಯೋಧನ ನಿಂದಿಸಿದಾಗ ನೊಂದ ದ್ರೋಣರು ಅಂದು ರಾತ್ರಿಯೂ ಯುದ್ಧ ಮುಂದುವರೆಸಿದ್ದು, ಆ ರಾತ್ರಿ ಯುದ್ಧದಲ್ಲೂ ಕರ್ಣ ಮತ್ತೊಮ್ಮೆ ಭೀಮನಿಂದ

ಅನೇಕ ಬಗೆಯಲ್ಲಿ ಪರಾಭವಗೊಂಡಿದ್ದು, ಅಂದಿನ ರಾತ್ರಿ ಯುದ್ಧದಲ್ಲಿ ಘಟೋತ್ಕಚ ಅಶ್ವತ್ಥಾಮರ ಯುದ್ಧ ನಡೆದದ್ದು, ಅಶ್ವತ್ಥಾಮನಿಂದ ಘಟೋತ್ಕಚನ ಪುತ್ರ ಅಂಜನವರ್ಮನು ಹತನಾದದ್ದು, ಬಳಿಕ ಘಟೋತ್ಕಚನಿಂದ ಅಶ್ವತ್ಥಾಮ ಪರಾಭವಗೊಂಡಿದ್ದು, ಬಳಿಕ ತೋರಿದ ಘಟೋತ್ಕಚನ ಅದ್ಭುತ ಪರಾಕ್ರಮಕ್ಕೆ ಅಲಂಬಲ, ಅಲಾಯುಧ ಮೊದಲಾದ ರಾಕ್ಷಸರು ಹತರಾದಾಗ, ಕರ್ಣನೂ ಬಹಳ ಪೀಡಿತನಾಗಿ, ದುರ್ಯೋಧನನಿಂದ ಪ್ರೇರಿತನಾಗಿ ಇಂದ್ರದತ್ತವಾದ ಶಕ್ತ್ಯಾಯುಧವನ್ನು ಪ್ರಯೋಗಿಸಿ, ಘಟೋತ್ಕಚನನ್ನು ಸಂಹರಿಸಿದ್ದು, ಘಟೋತ್ಕಚನ ವಧೆಯಿಂದ ದುಃಖಿತನಾದ ಯುಧಿಷ್ಠಿರನನ್ನು ವೇದವ್ಯಾಸರು ಸಾಂತ್ವನಪಡಿಸಿದ್ದು, ಚಂದ್ರೋದಯದ ಅನಂತರ ನಡೆದ ಯುದ್ಧದಲ್ಲಿ ಭೀಮನಿಂದ ಬಾಹ್ಲೀಕರಾಜ ಹತನಾದದ್ದು, ಹದಿನೈದನೆ ದಿನದ ಯುದ್ಧದಲ್ಲಿ ದ್ರೋಣರ ಅದ್ಭುತ ಪರಾಕ್ರಮಕ್ಕೆ ವಿರಾಟ ದ್ರುಪದಾದಿಗಳು ಮಡಿದದ್ದು, ದ್ರೋಣ ಧೃಷ್ಟದ್ಯುಮ್ನರ ಯುದ್ಧದಲ್ಲಿ ದ್ರೋಣರು ಮೂರ್ಛಿತರಾದಾಗ ಧೃಷ್ಟದ್ಯುಮ್ನ ಅವರನ್ನು ಕೊಲ್ಲಲು ಯತ್ನಿಸಿ ವಿಫಲನಾದದ್ದು, ಬಳಿಕ ದ್ರೋಣರ ಬ್ರಹ್ಮಾಸ್ತ್ರದಿಂದ ಕುಂತಿಭೋಜ ಮೊದಲಾದವರು ಹತರಾದದ್ದು, ಭೀಮಸೇನ ಮಾಳವ ರಾಜನ ಅಶ್ವತ್ಥಾಮ ಎಂಬ ಆನೆಯನ್ನು ಕೊಂದಾಗ ಕೃಷ್ಣನ ಪ್ರಚೋದನೆಯಿಂದ ಯುಧಿಷ್ಠಿರ 'ಅಶ್ವತ್ಥಾಮಾ ಹತಃ' ಎಂದದ್ದು, ಆಗ ಭೀಮ ಮಾಡಿದ ತತ್ತ್ವೋಪದೇಶದಿಂದ ದ್ರೋಣರು ವೈರಾಗ್ಯ ಹೊಂದಿ ಶಸ್ತ್ರ ಸನ್ಯಾಸ ಮಾಡಿ ಯೋಗಬಲದಿಂದ ಪ್ರಾಣ ತ್ಯಜಿಸಿದ್ದು, ಧೃಷ್ಟದ್ಯುಮ್ನ ದ್ರೋಣರ ಶಿರಸ್ಸನ್ನು ಕತ್ತರಿಸಿದ್ದು, ಬಳಿಕ, ವಿಷಯ ತಿಳಿದ ಅಶ್ವತ್ಥಾಮ ನಾರಾಯಣಾಸ್ತ್ರವನ್ನು ಪ್ರಯೋಗಿಸಿದಾಗ ಧರ್ಮರಾಜಾದಿಗಳು ಹತಾಶರಾದದ್ದು, ಶರಣಾದವರನ್ನು ಅಸ್ತ್ರ ಸಂಹರಿಸದು ಎಂದು ಕೃಷ್ಣ ಪರಿಹಾರ ಸೂಚಿಸಿದ್ದು, ಭೀಮಸೇನನ ಹೊರತು ಇತರರೆಲ್ಲ ಶಸ್ತ್ರ ಸನ್ಯಾಸ ಮಾಡಿ ಶರಣಾದದ್ದು, ಭಾಗವತ ಧರ್ಮವ್ರತನಾದ ಭೀಮ ಅಸ್ತ್ರದಿಂದ ಸುರಕ್ಷಿತನಾಗಿ ಉಳಿದದ್ದು, ಕೃಷ್ಣ ಭೀಮನನ್ನು ರಥದಿಂದ ಕೆಳಕ್ಕಿಳಿಸಿದಾಗ ಅಸ್ತ್ರ ಶಾಂತವಾದದ್ದು, ಭೀಮಸೇನನ ಹಿರಿಮೆಯನ್ನು ಕೃಷ್ಣ ಆ ಮೂಲಕ ಜಗತ್ತಿಗೆ ಸಾರಿದ್ದು, ಆಯುಧವನ್ನು ಕಿತ್ತಿಕೊಂಡಾಗ ಅಶ್ವತ್ಥಾಮರು ಅನಂತರ ಪ್ರಯೋಗಿಸಿದ ಆಗ್ನೇಯಾಸ್ತ್ರಕ್ಕೆ ಭೀಮಾರ್ಜುನರ ಹೊರತು ಪಾಂಡವರ ಒಂದು ಅಕ್ಷೌಹಿಣಿ ಸೇನೆ ನಾಶವಾದದ್ದು, ಬೇಸತ್ತ ಅಶ್ವತ್ಥಾಮರು ಶಸ್ತ್ರ ಸನ್ಯಾಸ ಮಾಡಿ ರಣರಂಗದಿಂದ ಹೊರ ನಡೆದಾಗ ಶ್ರೀವೇದವ್ಯಾಸರು ಆಗಮಿಸಿ, ಯುದ್ಧ ಮುಂದುವರೆಸಲು ಆದೇಶಿಸಿದ್ದು, ಮಾರನೆದಿನದಿಂದ ಹಾಗೆ ಮಾಡುವುದಾಗಿ ಅವರು ಅಂಗೀಕರಿಸಿದ್ದು – ಇವು ಈ ಅಧ್ಯಾಯದಲ್ಲಿ ಬಂದಿರುವ ಮುಖ್ಯ ವಿಷಯಗಳು. ದ್ರೋಣ ಪರ್ವದ ಸಮಗ್ರ ನಿರ್ಣಯವು ಈ ಅಧ್ಯಾಯದಲ್ಲಿ ನಿರೂಪಿತವಾಗಿದೆ.

ದ್ರೋಣಪರ್ವ ನಿರ್ಣಯ ರೂಪವಾದ ಈ ಅಧ್ಯಾಯದಲ್ಲಿ ಅನೇಕ ಸೂಕ್ಷ್ಮ ವಿವರಗಳು ನಿರ್ಣಯಿಸಲ್ಪಟ್ಟಿದೆ. ದ್ರೋಣರ ವ್ಯಕ್ತಿತ್ವವನ್ನೆಲ್ಲ ಈ ಅಧ್ಯಾಯದ ಮೊದಲ ಶ್ಲೋಕ ಅತ್ಯಂತ ಪರಿಣಾಮಕಾರಿಯಾಗಿ ನಿರೂಪಿಸುವುದು:

ಅಥಾಖಿಲಾನಾಂ ಪೃಥಿವೀಪತೀನಾಮಾಚಾರ್ಯಮಗ್ರ್ಯಂ ರಥಿನಾಂ ಸುವಿದ್ಯಮ್ ।
ರಾಮಸ್ಯ ವಿಶ್ವಾಧಿಪತೇಃ ಸುಶಿಷ್ಯಂ ಚಕ್ರೇ ಚಮೂಪಂ ಧೃತರಾಷ್ಟ್ರಪುತ್ರಃ ॥ – (೨೬/೧)

ಶ್ರೀಕೃಷ್ಣ ವೈಜಯಂತಿಮಾಲೆಯನ್ನು ಧರಿಸಿದಾಗ ನೀಡಿದ ವಿವರಗಳಲ್ಲಿ ಹರಿಸರ್ವೋತ್ತಮತ್ವವು ವಿಶೇಷರೀತಿಯಿಂದ ನಿರೂಪಿತವಾಗಿದೆ(ಶ್ಲೋ. ೨೬–೩೦):

ತಸ್ಮಿನ್ನಸ್ತ್ರೇ ತೇನ ತದಾ ಪ್ರಮುಕ್ತೇ ದಧಾರ ತದ್ವಾಸುದೇವೋಽಮಿತೌಜಾಃ ।
ತದಂಸದೇಶೇಽಸ್ಯ ತು ವೈಜಯಂತೀ ಬಭೂವ ಮಾಲಾಽಖಿಲಲೋಕಭರ್ತುಃ ॥

ದೃಷ್ಟ್ವೈವ ತದ್ಧಾರಿತಮಚ್ಯುತೇನ ಪಾರ್ಥಃ ಕಿಮರ್ಥಂ ವಿಧೃತಂ ತ್ವಯೇತಿ ।
ಊಚೇ ತಮಾಹಾಶು ಜಗನ್ನಿವಾಸೋ ಮಯಾಽಖಿಲಂ ಧಾರ್ಯತೇ ಸರ್ವದೈವ ॥

ನ ಮಾದೃಶೋಽನ್ಯೋಽಸ್ತಿ ಕುತಃ ಪರೋ ಮತ್ ಸೋಽಹಂ ಚತುರ್ಧಾ ಜಗತೋ ಹಿತಾಯ ।
ಸ್ಥಿತೋಽಸ್ಮಿ ಮೋಕ್ಷಪ್ರಲಯಸ್ಥಿತೀನಾಂ ಸೃಷ್ಟೇಶ್ಚ ಕರ್ತಾ ಕ್ರಮಶಃ ಸ್ವಮೂರ್ತಿಭಿಃ ।
ಸ ವಾಸುದೇವಾದಿಚತುಃಸ್ವರೂಪಃ ಸ್ಥಿತೋಽನಿರುದ್ಧೋ ಹೃದಿ ಚಾಖಿಲಸ್ಯ ॥

ಸ ಏವ ಚ ಕ್ರೋಡತನುಃ ಪುರಾಽಹಂ ಭೂಮಿಪ್ರಿಯಾರ್ಥಂ ನರಕಾಯ ಚಾದಾಮ್ ।
ಅಸ್ತ್ರಂ ಮದೀಯಂ ವರಮಸ್ಯ ಚಾದಾಮವಧೃತಾಂ ಯಾವದಸ್ತ್ರಂ ಸಸೂನೋಃ ॥

ಅಸ್ತ್ರಸ್ಯ ಚಾನ್ಯೋ ನ ತು ಕಶ್ಚಿದಸ್ತಿ ಯೋಽವಧ್ಯ ಏತಸ್ಯ ಕುತಶ್ಚ ಮತ್ತಃ ।
ಇತಿ ಸ್ಮ ತೇನೈವ ಮಯಾ ಧೃತಂ ತದಸ್ತ್ರಂ ತದೇನಂ ಜಹಿ ಚಾಸ್ತ್ರಹೀನಮ್ ॥

– (೨೬/೨೬-೩೦)

ಭೀಮಸೇನ ಆ ಪದ್ಮವ್ಯೂಹವನ್ನು ಪ್ರವೇಶಿಸದಿರಲು ಅವನಿಗೆ ಅಂದು ಆ ವ್ಯೂಹದಲ್ಲಿ ಅಭಿಮನ್ಯು ಮಡಿಯಬೇಕೆಂಬ ಕೃಷ್ಣನ ಸಂಕಲ್ಪ ತಿಳಿದಿದ್ದುದು ಕಾರಣವಾಗಿದ್ದಿತೇ ಹೊರತು ಅಸಾಮರ್ಥ್ಯವಲ್ಲ ಎಂಬ ವಿಶೇಷ ಪ್ರಮೇಯ ನಿರೂಪಿತವಾಗಿದೆ. ಮಾರನೆಯ ದಿನ ದ್ರೋಣರು ನಿರ್ಮಿಸಿದ್ದ ಪದ್ಮವ್ಯೂಹಕ್ಕಿಂತ ಮಿಗಿಲಾಗಿದ್ದ ಶಕಟಾಬ್ಜಚಕ್ರವ್ಯೂಹವನ್ನು ಭೀಮಸೇನ ಅನಾಯಾಸವಾಗಿ ದ್ರೋಣರನ್ನೇ ಪರಾಭವಗೊಳಿಸಿ ಪ್ರವೇಶಿಸಿದ ವಿವರ ಈ ನಿರ್ಣಯವನ್ನು ಸಮರ್ಥಿಸುವುದು ಎಂಬುದನ್ನು ಗಮನಿಸಬೇಕು(ಶ್ಲೋ. ೧೨೨–೧೨೭).

ಮಾರನೆಯ ದಿನ ಕರ್ಣನ ರಥವನ್ನು ಏರಿದಾಗಲೂ ಭೀಮ ಅಂದು ಕರ್ಣನ ಶಕ್ತ್ಯಾಯುಧದಿಂದ ತನ್ನ ಮಗ ಘಟೋತ್ಕಚ ಮಡಿಯಬೇಕೆಂಬ ಕೃಷ್ಣನ ಸಂಕಲ್ಪವನ್ನು ತಿಳಿದು

ಅದನ್ನು ಅಪಹರಿಸಲು ಇಷ್ಟಪಡಲಿಲ್ಲ ಎಂಬ ವಿವರಣೆ ಇಲ್ಲಿ ಅವನಿಗೆ ಅಭಿಮನ್ಯುವಿನ ಮರಣದ ಬಗ್ಗೆ ಕೃಷ್ಣನ ಸಂಕಲ್ಪ ಪರಿಜ್ಞಾನವನ್ನು ದೃಢಪಡಿಸುವುದು:

ವರೇಣ ರುದ್ರಸ್ಯ ನಿರುದ್ಧ್ಯಮಾನೋ ಜಯದ್ರಥೇನಾತ್ರ ವೃಕೋದರಸ್ತು ।
ವಿಷ್ಣೋರಭೀಷ್ಟಂ ವಧಮಾರ್ಜುನೇಸ್ತದಾ ವಿಜ್ಞಾಯ ಶಕ್ತೋಽಪಿ ನ ಚಾತ್ಯವರ್ತತ ॥
– (೨೬/೪೨)

ಅಂದು ರಾತ್ರಿ ಕೃಷ್ಣ ಅರ್ಜುನನಿಗೆ ಶಿವನಿಂದ ಮತ್ತೊಮ್ಮೆ ಪಾಶುಪತಾಸ್ತ್ರವನ್ನು ಪ್ರದಾನಮಾಡಿಸಿದ್ದು ಅವನು ಪ್ರತಿಯೊಬ್ಬರಿಗೂ ಅವರ ನಿಯತ ಗುರುಗಳಿಂದಲೇ ಅನುಗ್ರಹ ಮಾಡಿಸುವ ಅವನ ಸಂಕಲ್ಪಕ್ಕೆ ಸೂಚಕ. ಅದಕ್ಕಾಗಿ ಅರ್ಜುನನಿಗೆ ಅವನ ನಿಯತ ಗುರುವಾದ ಶಿವನಿಂದ ಹಾಗೆ ಪುನಃ ಪಾಶುಪತಾಸ್ತ್ರವನ್ನು ನೀಡಿಸಿ ಜಯದ್ರಥನ ವಧೆಗೆ ಅನುಕೂಲ ಮಾಡಿಸಿಕೊಟ್ಟ ಎಂಬುದು ನಿರ್ಣಯ :

ಅಪ್ಯಚ್ಯುತೋ ಗುರುದ್ವಾರಾ ಪ್ರಸಾದಕೃದಹಂ ತ್ವಿತಿ ।
ಜ್ಞಾಪಯನ್ ಫಲ್ಗುನಸ್ಯಾಸ್ತ್ರಗುರುಂ ಗಿರಿಶಮಂಜಸಾ ।
ಪ್ರಾಪಯಿತ್ವೈನಮೇವೈತತ್ಪ್ರಸಾದಾದಸ್ತ್ರಮುಲ್ಬಣಮ್ ।
ಚಕ್ರೇ ತದರ್ಥಮೇವಾಸ್ಯ ರಕ್ಷಾಂ ಚಕ್ರೇ ತದಾತ್ಮಿಕಾಮ್ ॥ – (೨೬/೫೨, ೫೩)

ಹದಿನಾಲ್ಕನೆ ದಿನದ ಯುದ್ಧದ ವರ್ಣನೆ ಸಂಗೃಹಿತವಾಗಿರುವ ರೀತಿಯಂತೂ ತುಂಬಾ ಅದ್ಭುತವಾದದ್ದು. ವ್ಯಾಸೋತ್ತರ ಕಾಲದ ಸಂಸ್ಕೃತ ಸಾಹಿತ್ಯದಲ್ಲಿ ಯುದ್ಧವರ್ಣನೆಯನ್ನು ಇಷ್ಟು ರೋಚಕವಾಗಿ ನಿರೂಪಿಸಿದ ಮತ್ತೊಂದು ನಿದರ್ಶನ ಕಾಣಸಿಕ್ಕುವುದಿಲ್ಲ. ಅಂದಿನ ಯುದ್ಧದಲ್ಲಿ ಭೀಮಸೇನ ಕರ್ಣನನ್ನು ಇಪ್ಪತ್ತೆರಡು ಬಾರಿ ಸತತ ಇನ್ನಿಲ್ಲದಂತೆ ಸೋಲಿಸಿದ ಪ್ರಸಂಗ ವ್ಯಾಸಭಾರತದಲ್ಲಿ ಸ್ಫುಟವಾಗಿಯೇ ಬಂದಿದೆ. ಆದರೆ, ಭಾರತವನ್ನು ಕುರಿತ ಯಾವ ಕೃತಿಯಲ್ಲೂ ಈ ಮಹತ್ವವಾದ ಅಂಶ ನಿರೂಪಿತವಾಗಿಲ್ಲ ಎಂಬುದು ತುಂಬಾ ಸೋಜಿಗದ ಸಂಗತಿ. ಅದಕ್ಕೆ ನ್ಯಾಯ ಸಲ್ಲಿಸಿದ ಶ್ರೇಯಸ್ಸು ಶ್ರೀಮಧ್ವಾಚಾರ್ಯರದು ಮಾತ್ರ. ಇಡೀ ಮಹಾಭಾರತದಲ್ಲಿ ಕರ್ಣನನ್ನು ಭೀಮನಂತೆ ಸಂಪೂರ್ಣ ಪರಾಭವಗೊಳಿಸಿದ ಮತ್ತೊಂದು ಪ್ರಸಂಗ ಕಾಣಸಿಗದು. ಕರ್ಣನ ವಧೆಗೆ ಭೀಮ ಸರ್ವಸಮರ್ಥನಾಗಿದ್ದನೆಂಬ ವಿವರ ಮಹಾಭಾರತದಲ್ಲೇ ಬಂದಿದೆ :

'ಭೀಮೋಽಪಿ ಮುಷ್ಟಿಮುದ್ಯಮ್ಯ ವಜ್ರಗರ್ಭಂ ಸುದಾರುಣಮ್ ।
ಹಂತುಮೈಚ್ಛತ್ಸುತಪುತ್ರಂ ಸಂಸ್ಮರನ್ನರ್ಜುನಂ ಕ್ಷಣಾತ್ ॥
ಶಕ್ತೋಽಪಿ ನಾವಧೀತ್ಕರ್ಣಂ ಸಮರ್ಥಃ ಪಾಂಡುನಂದನಃ ।
ರಕ್ಷಮಾಣಃ ಪ್ರತಿಜ್ಞಾಂ ತಾಂ ಯಾ ಕೃತಾ ಸವ್ಯಸಾಚಿನಾ' ಇತಿ ॥
– ಭಾರತ (ದ್ರೋಣ. ೧೩೯/೯೦,೯೧)

ಅದರಂತೆ ಕರ್ಣನನ್ನು ಅಂದಿನ ರಾತ್ರಿಯುದ್ಧದಲ್ಲೂ ಭೀಮಸೇನ ಅನೇಕ ಬಗೆಯಲ್ಲಿ ಮತ್ತೆ ಮತ್ತೆ ಸೋಲಿಸಿದ ವಿವರವು ಮೂಲಭಾರತದಲ್ಲಿದೆ. ಎಂಬುದು ಗಮನಾರ್ಹ. ಭೀಮನನ್ನು ತೂಬರ ಎಂದು ಕರ್ಣ ಪುನಃ ಪುನಃ ಕರೆದ ಹಿನ್ನೆಲೆಯನ್ನು ಮಹಾಭಾರತದ ಯಾವ ವಿಮರ್ಶಕರೂ ಗಮನಿಸಿಲ್ಲ ಎಂಬುದು ಮತ್ತೊಂದು ಆಶ್ಚರ್ಯ. ಕೆಲವರಂತೂ ಕರ್ಣನ ಮಾತನ್ನು ಆಧರಿಸಿ, ಭೀಮಸೇನ ತೂಬರ(ಮೀಸೆ ಮೂಡದವನು)ನೆಂದೇ ಭ್ರಮಿಸಿರುವುದೂ ಉಂಟು. ಆದರೆ ಅದರ ಹಿನ್ನೆಲೆಯನ್ನು ಸಮಗ್ರವಾಗಿ ವಿಶ್ಲೇಷಿಸಿ ವಿವರಣೆ ನೀಡಿರುವುದು ಈ ಕೃತಿ ಮಾತ್ರ:

ಶಸ್ತ್ರಸಂಗ್ರಹಕಾಲೇ ತು ಕುಮಾರಾಣಾಂ ವ್ರತಂ ಭವೇತ್ ।
ಇತ್ಯುಕ್ತಂ ಜಾಮದಗ್ನ್ಯೇನ ಧನುರ್ವಿದ್ಯಾಪುರಾಕೃತಾ ॥
ತಚ್ಛತ್ರುವಧರೂಪಂ ಚ ಪೂರ್ವಾಸಿದ್ಧಂ ಚ ಗೂಹಿತಮ್ ।
ಅವಿರುದ್ಧಂ ಚ ಧರ್ಮಸ್ಯ ಕಾರ್ಯಂ ರಾಮಸ್ಯ ತುಷ್ಟಿದಮ್ ॥
ಅನುಪದ್ರವಂ ಚ ಲೋಕಸ್ಯೇತ್ಯತೋ ಭೀಮೋ ವ್ರತಂ ತ್ವಿದಮ್ ।
ಚಕಾರ ತೂಬರೇತ್ಯುಕ್ತೇ ಹನ್ಯಾಮಿತಿ ರಹಃ ಪ್ರಭುಃ ॥
ಅನುಪದ್ರವಾಯ ಲೋಕಸ್ಯ ಸುವ್ಯಕ್ತಶ್ಮಶ್ರುಮಂಡಲಃ ।
ಸುಶ್ಮಶ್ರುಂ ಮಾಂ ನ ಕಶ್ಚಿದ್ಧಿ ತಥಾ ಬ್ರೂಯಾದಿತಿ ಸ್ಫುಟಮ್ ।
ತದರ್ಜುನೋ ವಿಜಾನಾತಿ ಸ್ನೇಹಾದ್ಭೀಮೋದಿತಂ ರಹಃ ॥ – (೨೬/೧೭೧-೧೭೪)

ಅಂದು ಚಂದ್ರೋದಯದ ನಂತರ ನಡೆದ ಯುದ್ಧದಲ್ಲಿ ಬಾಹ್ಲೀಕರಾಜನನ್ನು ಭೀಮ ಸಂಹರಿಸಿದ ಪ್ರಸಂಗ ಮಹಾಭಾರತದ ಮತ್ತೊಂದು ಜಟಿಲ ಸಮಸ್ಯೆ. ಸ್ವತಃ ವೈಷ್ಣವೋತ್ತಮನಾದ ಭೀಮಸೇನ ವೈಷ್ಣವನಾದ ಪ್ರಹ್ಲಾದನ ಅವತಾರನಾದ ಬಾಹ್ಲೀಕ ರಾಜನನ್ನು ಹಾಗೆ ಸಂಹರಿಸಿದ ಔಚಿತ್ಯ ಮೇಲ್ನೋಟಕ್ಕೆ ಅರ್ಥವಾಗುವಂತಹುದಲ್ಲ. ಭೀಮಸೇನ ಆ ರೀತಿಯಾಗಿ ಬೇರಾವ ವೈಷ್ಣವನನ್ನೂ ಸಂಹರಿಸಿಲ್ಲ ಎಂಬುದು ಈ ಸಮಸ್ಯೆಯನ್ನು ಮತ್ತಷ್ಟು ಜಟಿಲಗೊಳಿಸುವುದು. ಅದಕ್ಕೆ ಸಮರ್ಪಕ ಪರಿಹಾರವನ್ನು ನೀಡಿರುವುದು ಈ ಕೃತಿಯ ಮಹಾವಿಶೇಷಗಳಲ್ಲೊಂದು :

ಬಾಹ್ಲೀಕಃ ಪ್ರಾರ್ಥಯಾಮಾಸ ಪೂರ್ವಂ ಸ್ನೇಹಪುರಃಸರಮ್ ।
ಭೀಮ ತ್ವಯೈವ ಹಂತವ್ಯೋ ರಣೇಽಹಂ ಪ್ರೀತಿಮಿಚ್ಛತಾ ।
ತದಾ ಯಶಶ್ಚ ಧರ್ಮಂ ಚ ಲೋಕಂ ಚ ಪ್ರಾಪ್ನುಯಾಮಹಮ್ ॥
ಇತ್ಯುಕ್ತ ಆಹ ತಂ ಭೀಮೋ ನಿತರಾಂ ವ್ಯಥಿತಸ್ತದಾ ।
ಹನ್ಯಾಂ ನೈವಾನ್ಯಥಾ ಯುದ್ಧೇ ತತ್ ತೇ ಶುಶ್ರೂಷಣಂ ಭವೇತ್ ।
ಇತಿ ತೇನ ಹತಸ್ತತ್ರ ಭೀಮಸೇನೇನ ಬಾಹ್ಲಕಃ ॥ – (೨೬/೨೬೫, ೨೬೬)

ಹದಿನೈದನೇ ದಿನದ ಯುದ್ಧದಲ್ಲಿ ಕಂಡು ಬರುವ ಮತ್ತೊಂದು ಮಹಾ ಸಮಸ್ಯೆ 'ಅಶ್ವತ್ಥಾಮಾ ಹತಃ' ಎನ್ನಿಸಿದ ಕೃಷ್ಣ ಮತ್ತು ಹಾಗೆಂದ ಭೀಮನ ವರ್ತನೆ ಇದಕ್ಕೂ ಸಮಗ್ರ

ಪರಿಹಾರ ಇಲ್ಲಿದೆಯೆಂಬುದು ಇದರ ಮಹತ್ವವನ್ನು ಅಪಾರವಾಗಿ ಹೆಚ್ಚಿಸಿದೆ. ಈ ಅಧ್ಯಾಯದ ಕೊನೆಯ ಅತ್ಯಂತ ರೋಚಕ ಘಟ್ಟ ನಾರಾಯಣಾಸ್ತ್ರ ಪ್ರಸಂಗ. ಮೇಲ್ನೋಟಕ್ಕೆ ಕೃಷ್ಣನ ಆಜ್ಞೆಯನ್ನು ಉಲ್ಲಂಗಿಸಿ ನಡೆದದ್ದು ಭೀಮನೊಬ್ಬನೇ ಎನ್ನುವಂತೆ ತೋರುವ ಈ ಪ್ರಸಂಗವನ್ನು ಶ್ರೀಮದಾಚಾರ್ಯರು ವಾಸ್ತವವಾಗಿ ಕೃಷ್ಣನ ಆಜ್ಞೆಯನ್ನು ಸರಿಯಾಗಿ ಅರ್ಥಮಾಡಿಕೊಂಡು ಪರಿಪಾಲಿಸಿದ ಏಕಮಾತ್ರ ವ್ಯಕ್ತಿ ಭೀಮಸೇನ ಎಂಬುದನ್ನು ಇಲ್ಲಿ ನಿರೂಪಿಸಿರುವ ರೀತಿ ಊಹೆಗೆ ನಿಲುಕದಷ್ಟು ಅದ್ಭುತ :

ನಮಸ್ಕಾರ್ಯಮಪಿ ಹ್ಯಸ್ತ್ರಂ ನ ನಮ್ಯಂ ಜೀವನೇಚ್ಛಯಾ ।
ಸಮರೇ ಶತ್ರುಣಾ ಮುಕ್ತಂ ತಸ್ಮಾತ್ ತಂ ನ ಚಕಾರ ಸಃ ॥
ಅಸ್ತ್ರಾಭಿಮಾನೀ ವಾಯುರ್ಹಿ ದೇವತಾಽಸ್ಯ ಹರಿಃ ಸ್ವಯಮ್ ।
ತಸ್ಮಾದ್ಭೀಮಂ ಸ್ವರೂಪತ್ವಾನ್ನಾದಹಚ್ಚಾಗ್ನಿಮಗ್ನಿವತ್ ॥
ಮನಸೈವಾದರಂ ಚಕ್ರೇ ಭೀಮೋಽಸ್ತ್ರೇ ಚ ಹರೌ ತದಾ ।
ಕ್ಷತ್ರಧರ್ಮಾನುಸಾರೇಣ ನ ನನಾಮ ಚ ಬಾಹ್ಯತಃ ॥ – (೨೬/೩೦೨, ೩೦೪)

******

ಹಿಂದಿನ ಸಂಪುಟದಂತೆ ಈ ಸಂಪುಟದಲ್ಲೂ ಮೂಲಶ್ಲೋಕಗಳು, ಅದರ ಅನುವಾದ, ವಿವರಣೆ, ಸಂವಾದಿಯಾದ ಮೂಲಗ್ರಂಥಗಳ ಶ್ಲೋಕಗಳು, ಅಡಿಟಿಪ್ಪಣಿಯಲ್ಲಿ ವ್ಯಾಖ್ಯಾನಗಳ ವಿಶೇಷಾಂಶಗಳು ಮೊದಲಾದವುಗಳನ್ನು ಕೊಡಲಾಗಿದೆ. ಇತರ ವಿಶೇಷಾಂಶಗಳನ್ನು ಕೊನೆಯ ಸಂಪುಟದ ಮುನ್ನುಡಿಯಲ್ಲಿ ಕಾಣಬಹುದು.

******

ಪ್ರಸ್ತುತ ಸಂಪುಟದ ಪ್ರಕಾಶನಕ್ಕೂ ಶ್ರೀಮತಿ ಶುಭಾ ರಂಗನಾಥ್ ಮತ್ತು ಶ್ರೀ ಡಿ.ಎಸ್.ರಂಗನಾಥ್ ದಂಪತಿಗಳು ತಮ್ಮ ಸುಪುತ್ರ ದಿ|| ಶ್ರೀನಿವಾಸ ಶ್ರೇಯಸ್‌ನ ಶ್ರೇಯಸ್ಸಿಗಾಗಿ ಆರ್ಥಿಕವಾಗಿ ಸೇವೆ ಸಲ್ಲಿಸಿ, ವಿಶೇಷಪುಣ್ಯಭಾಗಿಗಳಾಗಿರುವರು. ಇಂತಹ ಅನುಪಮ ಪುಣ್ಯಕಾರ್ಯಕ್ಕಾಗಿ ಈ ದಂಪತಿಗಳನ್ನು ನಮ್ಮ ಪ್ರತಿಷ್ಠಾನವು ಹೃತ್ಪೂರ್ವಕವಾಗಿ ಅಭಿನಂದಿಸುತ್ತಾ, ಅವರ ಸುಪುತ್ರನ ಸದ್ಗತಿಪ್ರಾಪ್ತಿಗಾಗಿ ಪ್ರಾರ್ಥಿಸುವಲ್ಲಿ ತಾನೂ ಭಾಗಿಯಾಗಿದೆ.

ಬೆಂಗಳೂರು
ತಾರಣ – ಬಲಿಪ್ರತಿಪತ್ (ದೀಪಾವಳಿ)
೧೩–೧೧–೨೦೦೪, ಶನಿವಾರ

ವ್ಯಾಸನಕೆರೆ ಪ್ರಭಂಜನಾಚಾರ್ಯ

ಅಧ್ಯಾಯ - ೨೨
(ಅರಣೇಪ್ರಾಪ್ತಿಃ)

(ಕಿರ್ಮೀರವಧೆ, ಅಕ್ಷಯಪಾತ್ರೆ, ಭೀಮಗೀತೆ, ಕಿರಾತಾರ್ಜುನೀಯ, ತೀರ್ಥಯಾತ್ರೆ, ಶ್ರೀಕೃಷ್ಣನ ಕೈಲಾಸಯಾತ್ರಾಪ್ರಸಂಗ, ಅಜಗರಪ್ರಸಂಗ, ಜಯದ್ರಥಪರಾಭವ, ಘೋಷಯಾತ್ರೆ, ಕವಚಕುಂಡಲದಾನ, ಯಕ್ಷಪ್ರಶ್ನೆ)

ಪಾಂಡವರ ವನಪ್ರವೇಶ

ಆಗಂತುಕಾಮಾನ್ ಪುರವಾಸಿನಸ್ತೇ
ಸಂಸ್ಥಾಪ್ಯ ಕೃಚ್ಛ್ರೇಣ ಕುರುಪ್ರವೀರಾಃ ।
ರಾತ್ರೌ ಪ್ರವಿಷ್ಟಾ ಗಹನಂ ವನಂ ಚ
ಕಿರ್ಮೀರಮಾಸೇದುರಥೋ ನರಾಶಮ್ ॥ ೧ ॥

ಅ: ತಮ್ಮೊಂದಿಗೆ ವನಕ್ಕೆ ಬರಲು ಬಯಸಿದ್ದ ನಗರವಾಸಿಗಳನ್ನು ಪಾಂಡವರು ಶ್ರಮದಿಂದ ತಡೆದು ನಿಲ್ಲಿಸಿ ರಾತ್ರಿಯಲ್ಲಿ ಆ ಗಹನವಾದ ಅರಣ್ಯವನ್ನು ಹೊಕ್ಕರು. ಅಲ್ಲಿ ಕಿರ್ಮೀರ ಎಂಬ ನರಭಕ್ಷಕನಾದ ರಾಕ್ಷಸ ಕಂಡ.

ವಿ: ೧) ಇಲ್ಲಿ ಕುರುಪ್ರವೀರರು ಎಂದರೆ ಪಾಂಡವರು ಎಂದರ್ಥ. ಪಾಂಡವರೂ ಕುರು–ವಂಶದವರೇ ಆದ್ದರಿಂದ ಅವರಿಗೂ ಆ ಹೆಸರು ಸಲ್ಲುವುದು. ಅವರು ಯೋಗ್ಯರಾದ್ದರಿಂದ ಆ ಹೆಸರು ಅವರಿಗೇ ಮುಖ್ಯವಾಗಿ ಉಚಿತವಾಗುವುದು ಎಂಬುದನ್ನು ಗಮನಿಸಬೇಕು.

೨) ಪಾಂಡವರು ವನವಾಸಕ್ಕೆ ತೆರಳಿದಂದು ಹಸ್ತಿನಾಪುರದ ಪರಿಸ್ಥಿತಿ ರಾಮಲಕ್ಷ್ಮಣಸೀತೆ–ಯರು ಕಾಡಿಗೆ ತೆರಳಿದಾಗ ಇದ್ದ ಅಯೋಧ್ಯೆಯ ಸ್ಥಿತಿಯಂತೆ ಇತ್ತು ಎಂಬ ಮಾತು ಮಹಾಭಾರತ–ದಲ್ಲಿದೆ. ಅಲ್ಲಿ ಶ್ರೀರಾಮ ಅವರನ್ನೆಲ್ಲ ಹಿಂದೆ ಕಳುಹಿಸಿದಂತೆ ಇಲ್ಲಿ ಪಾಂಡವರೂ ಸಹ ಆ ಜನತೆ–ಯನ್ನು ಬಹುಶ್ರಮದಿಂದ ಹಿಂದೆ ಕಳಿಸಿದರು ಎಂದು ತಿಳಿಯಬೇಕು. ಪಾಂಡವರು ಪ್ರವೇಶಿಸಿದ ಆ ವನಕ್ಕೆ ಕಾಮ್ಯಕವನ ಎಂದು ಹೆಸರು. ಅವರು ಅದನ್ನು ತಲುಪಿದ್ದು [+]ಮೂರು ದಿನಗಳ ಪ್ರಯಾಣದ ಅನಂತರ.

---

* ಯದವಸ್ಥಾ ಬಭೂವಾರ್ತಾ ಹ್ಯಯೋಧ್ಯಾ ನಗರೀ ಪುರಾ ।
ರಾಮೇ ವನಂ ಗತೇ ದುಃಖಾದ್ಭರತಾಜ್ಯೇ ಸಲಕ್ಷ್ಮಣೇ ॥
ತದವಸ್ಥಂ ಬಭೂವಾರ್ತಮದ್ಯೇವಂ ಗಜಸಾಹ್ವಯಮ್ । – ಭಾರತ (ಸಭಾ. ೮೦/೩೫)

\+ ಜಗ್ಮುಸ್ತ್ರಿಭಿರಹೋರಾತ್ರೈಃ ಕಾಮ್ಯಕಂ ನಾಮ ತದ್ವನಮ್ ॥ – ಭಾರತ (ವನ. ೧೧/೩)

ಭೀಮನಿಂದ ಕಿರ್ಮೀರವಧೆ

ಬಕಾನುಜೋಽಸೌ ನಿಖಿಲೈರಜೇಯೋ
ವರಾದ್ಗಿರೀಶಸ್ಯ ನಿಹಂತುಕಾಮಃ ।
ಸದಾರಸೋದರ್ಯಮಭಿಪ್ರಸಸ್ರೇ
ಭೀಮಂ ಮಹಾವೃಕ್ಷಗಿರೀನ್ ಪ್ರಮುಂಚನ್ ॥ ೨ ॥

ಅ: ಆ ಕಿರ್ಮೀರ ಬಕಾಸುರನ ತಮ್ಮ, ಶಿವನ ವರದಿಂದಾಗಿ ಯಾರಿಗೂ ಸೋಲದವನಾಗಿದ್ದ. ಅವನು ಭೀಮನನ್ನು ಪತ್ನಿ ಹಾಗೂ ಸೋದರರ ಸಮೇತವಾಗಿ ಕೊಲ್ಲಬಯಸಿ ದೊಡ್ಡ ದೊಡ್ಡ ವೃಕ್ಷಗಳನ್ನೂ, ಬೆಟ್ಟಗಳನ್ನೂ ಎಸೆಯುತ್ತಾ ಧಾವಿಸಿದ.

ವಿ: ೧) ಕಿರ್ಮೀರ ಮಾಯಾವಿದ್ಯೆಯನ್ನು ಪ್ರಯೋಗಿಸಲು ಧೌಮ್ಯರು ಮಂತ್ರಬಲದಿಂದ ಅವನ್ನೆಲ್ಲಾ ನಾಶಗೊಳಿಸಿದರು. ಇವನನ್ನು ದುಷ್ಟರಲ್ಲಿ ಅಗ್ರೇಸರ ಎಂಬುದಾಗಿ ವಾಯುಸ್ತುತಿ ಬಣ್ಣಿಸಿದೆ – **'ಕಿರ್ಮೀರಂ ದುರ್ಮತೀನಾಂ'** (ವಾಯುಸ್ತುತಿ ಶ್ಲೋ. ೨೨).

೨) ಇವನು ಬಕನ ತಮ್ಮನಾದ್ದರಿಂದ ಇವನು ರಾಮಾಯಣ ಕಾಲದಿಂದಲೂ ಪ್ರಜಾ–ಪೀಡಕನಾಗಿದ್ದನು ಎಂದು ತಿಳಿಯುವುದು.

ಸ ಸಂಪ್ರಹಾರಂ ಸಹ ತೇನ ಕೃತ್ವಾ
ಭೀಮೋ ನಿಪಾತ್ಯಾಶು ಧರಾತಲೇ ತಮ್ ।
ಚಕ್ರೇ ಮಖೇ ಸಂಗರನಾಮಧೇಯೇ
ಪ್ರಸಹ್ಯ ನಾರಾಯಣದೈವತೇ ಪಶುಮ್ ॥ ೩ ॥

ಅ: ಭೀಮನು ಅವನೊಂದಿಗೆ ಹೋರಾಡಿ ಅವನನ್ನು ಬೇಗನೇ ನೆಲದಲ್ಲಿ ಕೆಡವಿ, ನಾರಾಯಣನೇ ದೇವತೆಯಾದ ಯುದ್ಧ ಎಂಬ ಯಜ್ಞದಲ್ಲಿ ಬಲಿಪಶುವನ್ನಾಗಿ ಸಮರ್ಪಿಸಿದ.

ವಿ: ಯುದ್ಧವನ್ನೂ ಸಹ ಭೀಮಸೇನ ಯಜ್ಞವೆಂಬ ಶ್ರೇಷ್ಠ ಅನುಸಂಧಾನದಿಂದ ನಡೆಸುತ್ತಿದ್ದ ಉಲ್ಲೇಖ ಉದ್ದಕ್ಕೂ ಬಂದಿದೆ. ಇಲ್ಲಿಯೂ ಸಹ ಆ ರಣಯಜ್ಞದಲ್ಲಿ ಕಿರ್ಮೀರನನ್ನು ಬಲಿಪಶುವನ್ನಾಗಿ ಸಂಹರಿಸಿ ಪುಣ್ಯವನ್ನು ಶ್ರೀಹರಿಗೆ ಸಮರ್ಪಿಸಿದ ಎಂದರ್ಥ. ಯಜ್ಞದಲ್ಲಿ ಬಲಿಪಶುಗಳನ್ನು

---

೩. ಪ್ರಗೃಹ್ಯ ತರಸಾ ದೋರ್ಭ್ಯಾಂ ಪಶುಮಾರಮಮಾರಯತ್ ।
ಆಕ್ರಮ್ಯ ಚಕಟೀದೇಶೇ ಜಾನುನಾ ರಾಕ್ಷಸಾಧಮಮ್ ॥
ಪೀಡಯಾಮಾಸ ಪಾಣಿಭ್ಯಾಂ ಕಂಠಂ ತಸ್ಯ ವೃಕೋದರಃ ॥ – ಭಾರತ (ವನ. ೧೧/೬೪)

ಶಸ್ತ್ರದಿಂದ ಸಂಹರಿಸದೆ ಉಸಿರು ಕಟ್ಟಿಸಿ ಕೊಲ್ಲುವಂತೆ ಆ ಕಿರ್ಮೀರನನ್ನು ಸಂಹರಿಸಿದ ಎಂಬ ವಿಶೇಷಾಂಶವೂ ಇದರಿಂದ ಸೂಚಿತ.

ಅಕ್ಷಯಪಾತ್ರ್ಯಯ ಪ್ರಾಪ್ತಿ

ನಿಹತ್ಯ ರಕ್ಷೋ ವನಮಧ್ಯಸಂಸ್ಥಾ-
ಸ್ತದಾ ಯತೀನಾಮಯುತೈಃ ಸಮೇತಾಃ ।
ಅಶೀತಿಸಾಹಸ್ರಮುನಿಪ್ರವೀರೈ-
ರ್ದಶಾಂಶಯುಕ್ತೈಃ ಸಹಿತಾ ವ್ಯಚಿಂತಯನ್ ॥ ೪ ॥

ಅ: ಕಿರ್ಮೀರನನ್ನು ಸಂಹರಿಸಿದ ಅನಂತರ ಕಾಡಿನ ಮಧ್ಯದಲ್ಲಿ ಪಾಂಡವರು ಹತ್ತು ಸಾವಿರ ಯತಿಗಳೊಂದಿಗೂ, ಎಂಭತ್ತೆಂಟುಸಾವಿರ ಮುನಿಶ್ರೇಷ್ಠರುಗಳೊಂದಿಗೂ ಸಮೇತರಾಗಿ ವಾಸಿಸುತ್ತಾ ಚಿಂತಿಸಿದರು.

ವಿ: ಅಷ್ಟು ಅಪಾರಸಂಖ್ಯೆಯ ಯತಿಗಳನ್ನು, ಮುನಿಗಳನ್ನು ಪಾಲಿಸುವ ಬಗ್ಗೆ ವಿಶೇಷವಾಗಿ ಧರ್ಮರಾಜ ಚಿಂತೆಗೊಳಗಾದ ಎಂದರ್ಥ. ಯತಿಗಳ ಹಾಗೂ ಮುನಿಗಳ ಸಂಖ್ಯೆಯ ವಿವರ ಮುಂದೆ ಬಂದಿದೆ (ಶ್ಲೋ. ೬).

---

೪. ದಶಾಂಶಯುಕ್ತೈಸ್ಸಹಿತಾ ಇತ್ಯತ್ರ ಚತುರಷ್ಟಕಂ ದ್ವಾತ್ರಿಂಶತ್ಸಂಖ್ಯಾಕಂ ಭವತಿ । ಪುನಶ್ಚತುರಷ್ಟಕಮಪಿ ದ್ವಾತ್ರಿಂಶತ್ಸಂಖ್ಯಾಕಮ್। ಉಭಯಂ ಮಿಲಿತ್ವಾ ಅಷ್ಟಾಷ್ಟಕಮ್ । ಚತುರುತ್ತರಷಷ್ಟಿಸಂಖ್ಯಾಕಂ ಭವತಿ। ಪುನರಶೀತಿಸಂಖ್ಯಾಯಾಃ ಪೂರಣಾಯ ದ್ವ್ಯಷ್ಟಕಮುರ್ವರಿತಮ್ । ಏವಂ ಚ ಅಶೀತೇರ್ದಶಮೋಽಂಶಃ ಅಷ್ಟಸಂಖ್ಯಾಕೋ ಭವತಿ। ತಥಾ ಚ ದಶಾಂಶಯುಕ್ತೈಃ = ಉಕ್ತವಿಧಯಾ ಪರಿಗಣನಾಯಾಂ ಅಷ್ಟಸಹಸ್ರಮುನಿಭಿಸ್ಸಹಿತೈಃ ಅಶೀತಿಸಹಸ್ರಮುನಿಪ್ರವರೈರಿತ್ಯರ್ಥಃ। ಏವಂ ಚ ಯತೀನಾಂ ದಶಸಾಹಸ್ರೈರಷ್ಟೋತ್ತರಾಶೀತಿಸಹಸ್ರಸಂಖ್ಯಾಕಗೃಹಸ್ಥಮುನಿಭಿಶ್ಚ ಸಮೇತಾ ಇತ್ಯುಕ್ತಂ ಭವತಿ । ವ್ಯಚಿಂತಯನ್ = ಏತೇಷಾಂ ಭರಣಾಯ ಕ ಉಪಾಯ ಇತಿ ವ್ಯಚಿಂತಯನ್ ॥ – (ವಾ.)

೪. ಅಷ್ಟಾವಗ್ರೇ ಬ್ರಾಹ್ಮಣಾನಾಂ ಸಹಸ್ರಾಣಿ ಸ್ಮ ನಿತ್ಯದಾ ।
ಭುಂಜತೇ ರುಕ್ಮಪಾತ್ರೇಷು ಯುಧಿಷ್ಠಿರನಿವೇಶನೇ ॥
ಅಷ್ಟಾಶೀತಿಸಹಸ್ರಾಣಿ ಸ್ನಾತಕಾ ಗೃಹಮೇಧಿನಃ ॥
ತ್ರಿಂಶದ್ದಾಸೀಕ ಏಕೈಕೋ ಯಾನ್ ಬಿಭರ್ತಿ ಯುಧಿಷ್ಠಿರಃ ॥
ದಶಾನ್ಯಾನಿ ಸಹಸ್ರಾಣಿ ಭೈಷಾಮನ್ನಂ ಸುಸಂಸ್ಕೃತಮ್ ।
ಹ್ರಿಯತೇ ರುಕ್ಮಪಾತ್ರೀಭಿರ್ಯತೀನಾಮೂರ್ಧ್ವರೇತಸಾಮ್ ॥
ತಾನ್ ಸರ್ವಾನಗ್ರಹಾರೇಣ ಬ್ರಾಹ್ಮಣಾನ್ ವೇದವಾದಿನಃ ।
ಯಥಾರ್ಹಂ ಪೂಜಯಾಮಿ ಸ್ಮ ಪಾನಾಚ್ಛಾದನಭೋಜನೈಃ ।
ಶತಂ ದಾಸೀಸಹಸ್ರಾಣಿ ಕೌಂತೇಯಸ್ಯ ಮಹಾತ್ಮನಃ ।
ಕಂಬುಕೇಯೂರಧಾರಿಣ್ಯೋ ನಿಷ್ಕಕಂಠ್ಯಃ ಸ್ವಲಂಕೃತಾಃ ॥
ಮಹಾರ್ಹಮಾಲ್ಯಾಭರಣಾಃ ಸುವರ್ಣಾಶ್ಚಂದನೋಕ್ಷಿತಾಃ ।
ಮಣೀನ್ ಹೇಮ ಚ ಬಿಭ್ರತ್ಯೋ ನೃತ್ಯಗೀತವಿಶಾರದಾಃ ॥ – (ದ್ರೌಪದೀವಚನ) ಭಾರತ (೩/೨೩೩/೪೨-೪೯)

ಅಕ್ಷಯಪಾತ್ರೆಯ ಹಿರಿಮೆ

ವಿಚಿಂತ್ಯ ತೇಷಾಂ ಭರಣಾಯ ಧರ್ಮಜಃ
ಸಂಪೂಜ್ಯ ಸೂರ್ಯಸ್ಥಿತಮಚ್ಯುತಂ ಪ್ರಭುಮ್ ।
ದಿನೇ೬ಕ್ಷಯಾನ್ನಂ ಪಿಠರಂ ತದಾಪ
ರತ್ನಾದಿದಂ ಕಾಮವರಾನ್ನದಂ ಚ ॥ ೫ ॥

ಅ: ಅವರೆಲ್ಲರ ಪೋಷಣೆಗಾಗಿ ಧರ್ಮರಾಜ ಆಲೋಚಿಸಿ ಸೂರ್ಯಾಂತರ್ಯಾಮಿಯಾದ ಪ್ರಭು ನಾರಾಯಣನನ್ನು ಚೆನ್ನಾಗಿ ಆರಾಧಿಸಿ ದಿನವೊಂದಕ್ಕೆ ಅಕ್ಷಯಾನ್ನವನ್ನು, ಬಯಸಿದ ಉತ್ತಮ ಅನ್ನವನ್ನು, ರತ್ನ ಮೊದಲಾದವುಗಳನ್ನು ನೀಡುವಂತಹ ಅಕ್ಷಯಪಾತ್ರೆಯೊಂದನ್ನು ಪಡೆದ.

ಎ: ೧) ಧರ್ಮರಾಜ ಸೂರ್ಯಾಷ್ಟೋತ್ತರ ಶತನಾಮಸ್ತೋತ್ರದ ಉಪದೇಶವನ್ನು ಧೌಮ್ಯ ಮುನಿಗಳಿಂದ ಪಡೆದು, ಗಂಗೆಯಲ್ಲಿ ನಿಂತು ಅದನ್ನು ಜಪಿಸಿ, ಸೂರ್ಯನನ್ನು ಒಲಿಸಿ, ಅಕ್ಷಯ ಪಾತ್ರೆಯನ್ನು ಪಡೆದ ವಿವರ ಮಹಾಭಾರತದಲ್ಲಿದೆ.

೨) ಅದೊಂದು ತಾಮ್ರದ ಪಾತ್ರೆ. ವನವಾಸ ಕಾಲಪೂರ್ತಿ ಅನ್ನವನ್ನು ಅಕ್ಷಯಗೊಳಿಸುವ ಸಾಮರ್ಥ್ಯ ಅದರದು, ಜೊತೆಗೆ ರತ್ನಾದಿಗಳನ್ನೂ ಗೋ ಮೊದಲಾದವುಗಳನ್ನೂ ಸಹ ನೀಡುವುದು ಅದರ ವೈಶಿಷ್ಟ್ಯವಾಗಿತ್ತು. ದ್ರೌಪದಿ ಅಡುಗೆ ಮಾಡಿ ಅದರಲ್ಲಿರಿಸಿ ಬಡಿಸತೊಡಗುತ್ತಲೇ ಅದು ಅಕ್ಷಯವಾಗುತ್ತಿತ್ತು, ಅಲ್ಲದೇ ಬಯಸಿದ ಬಗೆಬಗೆಯ ಭಕ್ಷ್ಯಭೋಜ್ಯಗಳೂ ಅದು ನೀಡುತ್ತಿತ್ತು. ಅದರಿಂದಾಗಿ ಪಾಂಡವರಿಗೆ ಅಷ್ಟು ಅಪಾರಸಂಖ್ಯೆಯ ಋಷಿಮುನಿಗಳ ಪೋಷಣೆ ಸುಲಭದ ಕಾರ್ಯವಾಯಿತು.

---

೫. ದಿನೇ ದಿನೇ ಅಕ್ಷಯಮನ್ನಂ ಯಸ್ಮಾತ್ತತ್ ಅಕ್ಷಯಾನ್ನಮ್। ಕಾಮವರಾನ್ನದಂ= ಕಾಮ್ಯಂ ವರಂ ಶ್ರೇಷ್ಠಂ ಅನ್ನಂ= ಅದನಾರ್ಹಂ ಘೃತಪಾಯಸಭಕ್ಷ್ಯಾದಿಕಂ ಚ ದದಾತೀತಿ ತಥೋಕ್ತಮ್। ಪೂರ್ವಮನ್ನಪದೇನ ಪ್ರಸಿದ್ಧತ್ವಾತ್ ಶಾಲ್ಯೋದನಮೇವ ಗೃಹ್ಯತೇ। ಅತೋ ನ ಪೌನರುಕ್ತ್ಯಮಿತಿ ಧ್ಯೇಯಮ್ ॥ – (ವಾ.)

೫. ಗೃಹ್ಣೀಷ್ವ ಪಿಠರಂ ತಾಮ್ರಂ ಮಯಾ ದತ್ತಂ ನರಾಧಿಪ। – ಭಾರತ (ವನ. ೩/೩/೭೨)

೫. ಚತುರ್ವಿಧಂ ತದನ್ನಾದ್ಯಮಕ್ಷಯ್ಯಂ ತೇ ಭವಿಷ್ಯತಿ ॥ – ಭಾರತ (ವನ. ೩/೩/೭೩)

೫. ಅಪೇಕ್ಷಿತವರಾನ್ನದಮ್। .... ರತ್ನಾನಿ ಆದಿಶಬ್ದೇನ ಸುವರ್ಣವಸ್ತ್ರಾದೀನಿ ದದಾತೀತಿ ರತ್ನಾದಿದಂ ತತ್ .... ಪಿಠರಂ ಸ್ಥಾಲೀಮಾಪ। – (ಜ.)

೩) ಸೂರ್ಯ ಮಳೆ, ಬೆಳೆಗಳಿಗೆ ಕಾರಣವಾದ ದೇವತೆ ಎಂದು ಮನುಸ್ಮೃತಿಯಲ್ಲಿದೆ – **'ಆದಿತ್ಯಾಜ್ಜಾಯತೇ ವೃಷ್ಟಿರ್ವೃಷ್ಟೇರನ್ನಂ ತತಃ ಪ್ರಜಾಃ'** (೩/೭೬) ಅದರಿಂದ ಅವನ ಆರಾಧನೆ–ಯಿಂದ ಅನ್ನ ಲಭಿಸುವುದು ಶಾಸ್ತ್ರವಿಹಿತ. ಪ್ರತಿದಿನದ ಸಂಧ್ಯಾವಂದನೆಯ ಸೂರ್ಯಾರ್ಘ್ಯ ಹಾಗೂ ಸೂರ್ಯಾಂತರ್ಯಾಮಿಯಾದ ನಾರಾಯಣನನ್ನು ಕುರಿತ ಗಾಯತ್ರೀಜಪದ ಅನುಷ್ಠಾನ ಅನ್ನ ಹಾಗೂ ಜ್ಞಾನಗಳ ಪ್ರಾಪ್ತಿಗೆ ಶ್ರೇಷ್ಠ ಸಾಧನವೆಂಬ ಸೂಚನೆಯನ್ನು ಇದರಿಂದ ಗಮನಿಸಬಹುದು.

೪) ಸೂರ್ಯ ಯಮನ ತಂದೆ, ಯಮನೇ ಯುಧಿಷ್ಠಿರ. ಹೀಗೆ ಧರ್ಮರಾಜ ಅಕ್ಷಯ ಪಾತ್ರೆಯನ್ನು ಪಡೆದದ್ದು ತನ್ನ ಮೂಲರೂಪದ ತಂದೆಯಿಂದಲೇ ಎಂಬುದು ಇಲ್ಲಿಯ ಮತ್ತೊಂದು ವಿಶೇಷ. ಅನ್ನ ಸಂಪಾದನೆಯ ಅಪೂರ್ವ ಉಪಾಯವನ್ನಾಗಿ ಸೂರ್ಯಾಂತರ್ಗತ ಶ್ರೀಹರಿಯ ಉಪಾಸನೆಯನ್ನು ಮಹಾಭಾರತ ಹೀಗೆ ವಿಧಿಸಿದೆ ಎಂದು ತಿಳಿಯಬೇಕು.

೫) ದ್ರೌಪದಿ ಭಾವೀ ಸರಸ್ವತಿ. ಸರಸ್ವತಿ ಅನ್ನ ನಿರ್ಮಿಸುವ ದೇವತೆ ಎಂದು ಪಂಚರಾತ್ರ–ದಲ್ಲಿದೆ – **'ಅನ್ನಂ ಸರಸ್ವತೀ ಕುರ್ಯಾತ್'**. ಅವರ ಕೈಯೇ ಅಕ್ಷಯ ಪಾತ್ರೆಗಿಂತ ಮಿಗಿಲಾದುದು. ಅವರ ಕೈಯಿಂದ ಹಾಕಿದ ಕಾರಣದಿಂದಾಗಿಯೇ ಅನ್ನ ಅಕ್ಷಯವಾಗುತ್ತಿದ್ದುದು ಎಂದು ತಿಳಿಯಬೇಕು. ವಿದ್ಯೆಯಿಂದ ಅನ್ನ ದೊರೆಯುವುದು ನಿಶ್ಚಿತವಾಗಿರುವಾಗ, ವಿದ್ಯಾಭಿಮಾನಿ ದೇವತೆಯಾದ ದ್ರೌಪದಿಯಿಂದ ಅನ್ನ ಅಕ್ಷಯವಾದುದರಲ್ಲಿ ಆಶ್ಚರ್ಯವೇನಿದೆ.

ಧರ್ಮರಾಜನ ಅಪಾರವಾದ ಅಪೂರ್ವಪರಿವಾರ

ಬಭಾರ ತೇನೈವ ಯುಧಿಷ್ಠಿರಸ್ತಾನ್
ಪ್ರತ್ಯೇಕಶಸ್ತ್ರಿಂಶತದಾಸದಾಸಿಕಾನ್ ।
ಸುವರ್ಣಪಾತ್ರೇಷು ಹಿ ಭುಂಜತೇ ಯೇ
ಗೃಹೇ ತದೀಯೇ ಬಹುಕೋಟಿದಾಸಕೇ ॥ ೬ ॥

ಅ: ಆ ಅಕ್ಷಯಪಾತ್ರೆಯಿಂದ ಧರ್ಮರಾಜ ಪ್ರತ್ಯೇಕವಾಗಿ ಮೂವತ್ತು ಜನ ದಾಸ-ದಾಸಿಯರನ್ನು ಹೊಂದಿದ್ದ ಋಷಿ ಮುನಿಗಳನ್ನು ಪೋಷಿಸಿದ; ಅವರೆಲ್ಲ ಅನೇಕ ಕೋಟಿ ದಾಸದಾಸಿಯರಿದ್ದ ಅವನ ಅರಮನೆಯಲ್ಲಿ ಚಿನ್ನದ ಪಾತ್ರೆಗಳಲ್ಲಿ ಊಟ ಮಾಡುತ್ತಿದ್ದವರು.

---

೬. ತ್ರಿಂಶತಾಃ ತ್ರಿಂಶತ್ । – (ವೇ.)

೬. ತದೀಯೇ = ಧರ್ಮರಾಜಸಂಬಂಧಿನಿ ಗೃಹೇ = ಇಂದ್ರಪ್ರಸ್ಥೇ ವಿದ್ಯಮಾನೇ ಗೃಹೇ ॥ – (ವಾ.)

೬. ತ್ರಿಂಶತ್ಸಂಖ್ಯಾ ಯೇಷಾಂ ತೇ ತ್ರಿಂಶತಾಃ ಅರ್ಶಾದಿತ್ವಾದಚ್। ತ್ರಿಂಶತ್ಸಂಖ್ಯಾಕಾ ದಾಸದಾಸಿಕಾಃ ಯೇಷಾಂ ತೇ ತಥಾ ತಾನ್। – (ಜ.)

ಏಃ ೧) ಇದರಿಂದ ಆ ಋಷಿ ಮುನಿಗಳು ಆ ಮುಂಚೆಯೂ ಸಹ ಇಂದ್ರಪ್ರಸ್ಥದಲ್ಲಿ ಯುಧಿಷ್ಠಿರನ ಆಶ್ರಯದಲ್ಲಿದ್ದವರು ಎಂದು ತಿಳಿಯುವುದು. ಅವರಿಗೆ ಆಹಾರದ ವ್ಯವಸ್ಥೆ ಮಾತ್ರವಲ್ಲದೇ ಸೇವೆಗಾಗಿ ದಾಸದಾಸಿಯರ ವ್ಯವಸ್ಥೆಯನ್ನೂ ಧರ್ಮರಾಜ ಮಾಡಿದ್ದ. ತಮ್ಮೊಂದಿಗೆ ಕಾಡಿಗೆ ಬಂದಿದ್ದ ಅವರನ್ನೂ ಸಹ ಧರ್ಮರಾಜ ಮುಂಚಿನಂತೆಯೇ ಅತ್ಯಂತ ಆದರದಿಂದ ಸಮೃದ್ಧ ಆಹಾರ ನೀಡಿ ಪೋಷಿಸಿದ ಎಂಬುದು ವಿಶೇಷ.

೨) ಅಂತಹ ಯತಿಗಳಲ್ಲಿ ಒಬ್ಬರು ಮುಂದೆ ಕಲಿಯುಗದಲ್ಲಿ ಅಚ್ಯುತಪ್ರೇಕ್ಷರಾಗಿ ಜನಿಸಿ ಆಚಾರ್ಯ ಶ್ರೀಮಧ್ವರಿಗೆ ಆಶ್ರಯ ನೀಡಿದ ಗುರುಗಳೆನ್ನಿಸುವ ಭಾಗ್ಯವನ್ನು ಪಡೆದ ಉಲ್ಲೇಖ ಸುಮಧ್ವವಿಜಯದಲ್ಲಿದೆ*.

ಪಾಂಡವರ ಬಳಿ ಮುನಿವೃಂದ

ಸತ್ಸಂಗಮಾಕಾಂಕ್ಷಿಣ ಏವ ತೇऽವಸನ್
ಪಾರ್ಥೈಃ ಸಹಾನ್ಯೇ ಚ ಮುನೀಂದ್ರವೃಂದಾಃ ।
ಶ್ರುಣ್ವಂತ ಏಭ್ಯಃ ಪರಮಾರ್ಥಸಾರಾಃ
ಕಥಾ ವದಂತಶ್ಚ ಪುರಾತನಾಸ್ತಥಾ ॥ ೭ ॥

ಅಃ ಆ ಮುನಿಗಳ ಗುಂಪುಗಳು ಸತ್ಸಂಗವನ್ನು ಬಯಸಿ ಪಾಂಡವರೊಂದಿಗೆ ಕಾಡಿನಲ್ಲಿ ನೆಲೆಸಿದರು. ಶ್ರೀಹರಿಯ ಸರ್ವೋತ್ತಮತ್ವವನ್ನು ಸಾರುವಂತಹ ಪುರಾತನವಾದ ಅವರಿಂದ ಕಥೆಗಳನ್ನು ಕೇಳುತ್ತಲೂ, ತಾವು ಅವರಿಗೆ ಹೇಳುತ್ತಲೂ ಅವರೊಂದಿಗೆ ಇದ್ದರು.

ಏಃ ಹಾಗೆ ಋಷಿ ಮುನಿಗಳು ಪಾಂಡವರನ್ನು ಓಲೈಸಿದ್ದು ಹೊಟ್ಟೆಪಾಡಿಗಾಗಿ ಅಲ್ಲದೇ ಸಜ್ಜನ ಸಂಗದ ಲೋಭದಿಂದಾಗಿ. ಹಾಗೆ ಅವರೊಂದಿಗಿದ್ದದ್ದರಿಂದ ಅವರಿಗೆ ಹರಿಯ ಪಾರಮ್ಯವನ್ನು ಬಗೆಬಗೆಯ ಶಾಸ್ತ್ರ ವಿಚಾರಗಳಿಂದ ನಿರ್ಣಯಿಸಿಕೊಳ್ಳುವ ಅವಕಾಶ ಲಭಿಸಿತು. ಅದರಂತೆ ತಮಗೆ ತಿಳಿದುದ್ದನ್ನು ಅವರ ಮುಂದೆ ಅನುವಾದ ಮಾಡುವ ಭಾಗ್ಯವನ್ನೂ ಪಡೆದರು. ಸತ್ಸಂಗದ

---

* ಪುರೈಷ ಕೃಷ್ಣಕರಸಿದ್ಧಶುದ್ಧಿಮದ್ವರಾನ್ನಭುಕ್ತ್ಯಾಕಿಲ ಪಾಂಡವಾಲಯೇ ।
ವಿಶೋಧಿತಾತ್ಮಾ ಮಧುಕೃತ್ಪ್ರವೃತ್ತಿಮಾಂಶ್ಚಚಾರ ಕಾಂಶ್ಚಿತ್ ಪರಿವತ್ಸರಾನ್ ಮುದಾ॥ –ಸುಮಧ್ವವಿಜಯ(೪/೭)

೭. ಪರಮಾರ್ಥಸಾರಾ ಇತ್ಯತ್ರ ಪರಮಃ ಸರ್ವೋತ್ತಮೋऽರ್ಥಃ = ಶ್ರೀನಾರಾಯಣಃ ಸ ಏವ ಸಾರಃ = ಮುಖ್ಯಪ್ರತಿಪಾದ್ಯೋ ಯಾಸು ತಾಃ ಪರಮಾರ್ಥಸಾರಾ ಇತ್ಯರ್ಥಃ॥ –(ವಾ.)

೭. ತಸ್ಮಾತ್ ಪ್ರಾಜ್ಞಶ್ಚ ವೃದ್ಧಶ್ಚ ಸುಸ್ವಭಾವೈಸ್ತಪಸ್ವಿಭಃ ।
ಸದ್ಭಿಶ್ಚ ಸಹ ಸಂಸರ್ಗಃ ಕಾರ್ಯಃ ಶಮಪರಾಯಣೈಃ॥ –ವನಪರ್ವ(೧/೨೩/೩೨)

ಪ್ರಯೋಜನವೆಂದರೆ ಅದೇ. ಕೇವಲ ದೈಹಿಕವಾಗಿ ಜೊತೆಗಿರುವುದಷ್ಟೇ ಸತ್ಸಂಗವಲ್ಲ ಎಂಬುದು ಇದರ ಭಾವ.

ಸಂಗೋ ಭಾಗವತೈರ್ಭೂಯಾನವುನರ್ಭವಮಾತ್ರತಃ।
ಯತೋ ವಿಶಿಷ್ಟಮಾನಂದಂ ಮುಕ್ತೌ ಜನಯತಿ ಸ್ಫುಟಮ್ ॥ – ಭಾ. ತಾ. (೩/೨೩/೫೭)

ಸಂತಸ್ತು ತ್ರಿವಿಧಾಃ ಪ್ರೋಕ್ತಾ ಉತ್ತಮಾ ಮಧ್ಯಮಾಧಮಾಃ।
ಉತ್ತಮಾ ದೇವತಾಸ್ತತ್ರ ಋಷ್ಯಾದ್ಯಾ ಮಧ್ಯಮಾ ಮತಾಃ।
ಅಧಮಾ ಮಾನುಷೋತ್ಕೃಷ್ಟಾಸ್ತೇ ಚಾಪಿ ತ್ರಿವಿಧಾ ಮತಾಃ।
ತತ್ರಾಧಮೇಷು ಯೇಷಾಂ ತು ಸಂಗೋ ವಿಘ್ನಾಯ ವೈ ಭವೇತ್।
ತೇಷಾಮುತ್ತಮಸಂಗಸ್ಯ ತೇಷಾಂ ಸಂಗಂ ಪರಿತ್ಯಜೇತ್।
ಆದೌ ತು ತೇಷಾಮಪಿ ಚ ಸಂಗ ಉತ್ತಮಸಂಗತೇಃ।
ಸಾಧನತ್ವಾನ್ನ ತು ತ್ಯಾಜ್ಯೋ ಯದಿ ತ್ಯಕ್ತುಂ ನ ಶಕ್ಯತೇ।
ತದಾ ತೇಽಪಿ ತಥಾ ನೇಯಾ ಯಥಾ ವಿಘ್ನೋ ನ ವೈ ಭವೇತ್।
ತದುಚ್ಚಸಂಗತೇಃ ಕ್ವಾಪಿ ತದಾ ದೋಷೋ ನ ಜಾಯತೇ।
ಪ್ರಯೋಜನಾಯ ತೇಷಾಂ ತು ಸಂಗಃ ಸರ್ವಾತ್ಮನೇಷ್ಯತೇ।
ಸರ್ವಥಾ ಚೈವ ದೇವೇಷು ಸಂಗೋ ಮುನಿಗಣೇಷು ಚ।
ಭಾವ್ಯೋ ಹಿ ತಂ ವಿನಾ ನೈವ ಪುರುಷಾರ್ಥಃ ಕ್ವಚಿದ್ಭವೇತ್।
ವಿಶೇಷತಃ ಸ್ವೋತ್ತಮೇಷು ವಿನಾ ಸಂಗಂ ನ ಮುಚ್ಯತೇ।
ಸ್ವನೀಚೇಷು ತು ದೇವೇಷು ವಿನಾ ಸಂಗಂ ನ ಪೂರ್ಯತೇ।
ತಸ್ಮಾತ್ಸತ್ತೂತ್ತಮೇಷ್ವೇಷು ಸಂಗಂ ಕಾರ್ಯೋ ವಿಶೇಷತಃ।
ಅನಾದ್ಯನಂತಕಾಲೇಷು ನ ಚ ಹಾಪ್ಯಃ ಕಥಂಚನ।
ಸಕಾಂ ತದುತ್ತಮೇಶೇಶೇ ಕಿಮು ವಿಷ್ಣೌ ಪರಾತ್ಪರೇ' ಇತಿ ಗಾರುಡೇ ॥ – ಭಾ.ತಾ.(೧೧/೩/೨೪)

'ಸತ್ಪುಂಸು ಚ ತಥಾ ಸ್ತ್ರೀಷು ನ ಸಂಗೋ ದೋಷಮಾವಹೇತ್।
ಯಥಾಯೋಗ್ಯಂ ಗುಣಾಯೈವ ದೋಷಕೃದ್ದುಷ್ಟಜಂತುಷು' ಇತಿ ವಾರಾಹೇ ॥ – ಭಾ.ತಾ.(೩/೩೨/೪೧)

ಸಮ್ಯಕ್ಸ್ವರೂಪಾಭಿವ್ಯಕ್ತಿರಭಾವೋ ಜನನಸ್ಯ ಚ।
ಅಪ್ರಯತ್ನಾತ್ತತೋ ವೃದ್ಧಿಹೇತೋಃ ಸತ್ಸಂಗತಿರ್ವರಾ' ಇತಿ ವಾಯುಪ್ರೋಕ್ತೇ ॥ – ಭಾ.ತಾ.(೧/೧೮/೧೩)

'ಬಹ್ವಪೇಕ್ಷೋ ಹಿ ಜಿಜ್ಞಾಸುರತೋ ದೇಹಾದಿವೃತ್ತಯೇ।
ಕಿಂಚಿತ್ಸತ್ತ್ವಾಪಿ ಸಂಗೀ ಸ್ಯಾದಶಕ್ತೇ ಸತಿ ವರ್ತನೇ।
ಕೃತಕೃತ್ಯಸ್ತ್ಯಜೇತ್ಸಂಗಂ ಸದಾ ಗುರುಸುರಾದಿಷು।
ಸಂಗೀ ಸ್ಯಾನ್ನ ಹಿ ತತ್ಸಂಗಂ ವಿನಾ ತು ಸುಖಭಾಗ್ಭವೇತ್।
ತಸ್ಮಾದನಾದ್ಯನಂತೈವ ಸಕ್ತಿರ್ಗುರುಸುರಾದಿಷು।
ಅನ್ಯತ್ರ ಕೃತ್ಯಾಪೇಕ್ಷಾ ಸ್ಯಾದಿತಿ ಸಂಗವಿನಿರ್ಣಯಃ' ಇತಿ ಭವಿಷ್ಯತ್ಪರ್ವಣಿ ॥ – ಭಾ. ತಾ. (೧೧/೩/೨೪)

'ಅಸಜ್ಜನೈಸ್ತು ಸಂವಾಸೋ ನ ಕರ್ತವ್ಯಃ ಕಥಂಚನ।
ಯಾವದ್ಯಾವಚ್ಚ ಬಹುಭಿಃ ಸಜ್ಜನೈಃ ಸ ತು ಮುಕ್ತಿದಃ' ಇತಿ ಪಾದ್ಮೋತ್ತರೇ॥ – ಭಾ. ತಾ.(೧೧/೯/೧೦)

೭. ಪರಮಾರ್ಥೇನ ಉತ್ತಮಾಭಿಧೇಯೇನ ಹರಿಣಾ ನಿಮಿತ್ತಭೂತೇನ ಸಾರಾ ಉತ್ತಮಾಃ ಕಥಾಃ ... । – (ವ.)

ಸ್ವರ್ಗವಾಸದಂತಹ ವನವಾಸ

ಏವಂ ಗಜಾನಾಂ ಬಹುಕೋಟಿವೃಂದಾಂ-
ಸ್ತಥಾ ರಥಾನಾಂ ಚ ಹಯಾಂಶ್ಚ ವೃಂದಶಃ ।
ವಿಸೃಜ್ಯ ರತ್ನಾನಿ ನರಾಂಶ್ಚ ವೃಂದಶೋ
ವನೇ ವಿಜಹ್ರುರ್ದಿವಿ ದೇವವತ್ ಸುಖಮ್ ॥ ೮ ॥

ಅ: ಹೀಗೆ ಅನೇಕ ಕೋಟಿ ವೃಂದದ ಆನೆಗಳನ್ನು, ರಥಗಳನ್ನು, ವೃಂದಗಟ್ಟಲೆ ಕುದುರೆ-ಗಳನ್ನು, ರತ್ನಗಳನ್ನು, ಜನರನ್ನು ತೊರೆದು ಪಾಂಡವರು ಕಾಡಿನಲ್ಲಿ ಸ್ವರ್ಗದಲ್ಲಿ ದೇವತೆಗಳು ಹೇಗೋ ಹಾಗೆ ಸುಖವಾಗಿ ನೆಲೆಸಿದರು.

ವಿ: ಪಾಂಡವರ ವನವಾಸ ಶಾಸ್ತ್ರೋಕ್ತವಾದ ಸಾಧನಾನುಷ್ಠಾನವಾಯಿತೇ ಹೊರತು ವ್ಯರ್ಥ ಕಾಲಯಾಪನೆಯಾಗಲಿಲ್ಲ. ವನ ಎಂದರೆ ತೀರ್ಥ ಎಂದರ್ಥ. ವನವಾಸವೆಂದರೆ ಶಾಸ್ತ್ರಚಿಂತನೆ ಎಂದಾಗುವುದು. ಹಾಗೆ ಅವರು ವನವಾಸವನ್ನು ತಪಸ್ಸನ್ನಾಗಿ ಕಳೆದದ್ದು ವಿಶೇಷ. ಅವರ ಸುಖ ಜೀವನವನ್ನು *ಮುಕ್ತರಸುಖಕ್ಕೆ ಹೋಲಿಸಿರುವುದನ್ನು ಗಮನಿಸಬೇಕು. ಇಂತಹ ವನವಾಸವನ್ನು ಭಾಗವತಪುರಾಣದಲ್ಲಿ ಸಾತ್ತ್ವಿಕ ('ವನಂ ತು ಸಾತ್ತ್ವಿಕೋ ವಾಸಃ') ಎಂದು ಕರೆಯಲಾಗಿದೆ.

ಯುಧಿಷ್ಠಿರನ ದಿನಚರಿ

ಗವಾಂ ಚ ಲಕ್ಷಂ ಪ್ರದದಾತಿ ನಿತ್ಯಶಃ
ಸುವರ್ಣಭಾರಾಂಶ್ಚ ಶತಂ ಯುಧಿಷ್ಠಿರಃ ।
ಸಭ್ರಾತೃಕೋಽಸೌ ವನಮಾಪ್ಯ ಶಕ್ರವ-
ನ್ನಮೋದ ವಿಪ್ರೈಃ ಸಹಿತೋ ಯಥಾಸುಖಮ್ ॥ ೯ ॥

ಅ: ಧರ್ಮರಾಜ ಪ್ರತಿನಿತ್ಯದಲ್ಲೂ ಲಕ್ಷ ಗೋವುಗಳನ್ನು, ನೂರು ಸುವರ್ಣ ಭಾರವನ್ನು ದಾನ ಮಾಡುತ್ತಿದ್ದವನು. ಅವನು ಸೋದರರೊಂದಿಗೆ ಕಾಡಿಗೆ ತೆರಳಿದ ಮೇಲೂ ವಿಪ್ರ-ರೊಂದಿಗೆ ಕೂಡಿ ಅತ್ಯಂತ ಸುಖವಾಗಿ ಇಂದ್ರನಂತೆ ಯಥಾಯೋಗ್ಯ ಆನಂದದಿಂದ ಕಳೆದ.

---

೮. ಏವಂ ಗಜಾನಾಮಿತ್ಯತ್ರ ಇಂದ್ರಪ್ರಸ್ಥಸ್ಥಿತಚತುರಂಗಸೇನಾಂ ರತ್ನಾನಿ ಚ ವಿಸೃಜ್ಯ ಏವಂ = ಉಕ್ತವಿಧಯಾ ಮುನಿಭಿಃ ಸಹ ಕ್ಷಣೇ ಕ್ಷಣೇ ಶ್ರೀನಾರಾಯಣಕಥಾ ಏವ ವದಂತಶ್ಚ ಶೃಣ್ವಂತಶ್ಚ ವಿಜಹ್ರುರಿತ್ಯರ್ಥಃ। ಅನೇನ ಸಾಧನಾಧ್ಯಾಯೇ ಪ್ರಥಮಪಾದೋಕ್ತವೈರಾಗ್ಯಭಾಗ್ಯಂ ಸಂಪಾದ್ಯ ಪರಮಾರ್ಥಸಾರಪದಸೂಚಿತಹರಿಭಕ್ತಭರಿತಾಃ ಸಂತಃ ಉಪಾಸನಾಪಾದೋಕ್ತಪ್ರಾಥಮಿಕೋಪಾಸನಾರೂಪಶಾಸ್ತ್ರಾಭ್ಯಾಸಂ ಚ ಕುರ್ವಾಣಾಃ ತದುಚಿತಸ್ಥಲೇ ವನೇ ವಿಜಹ್ರುರಿತ್ಯುಕ್ತಂ ಭವತಿ ॥ – (ವಾ.)

* ಪಾಂಡವಾನಾಂ ಚ ಮುಕ್ತಾನಾಮಂತರಂ ಕಿಂಚಿದೇವ ಹಿ॥ (ಭವಿಷ್ಯತ್ಪರ್ವವಚನ) – ಗೀ.ತಾ. (೩/೧೯)

ಎ: ೧) ಅಕ್ಷಯ ಪಾತ್ರೆಯಿಂದ ದೊರೆಯುವ ರತ್ನಾದಿಗಳ ಪ್ರಭಾವದಿಂದಾಗಿ ಧರ್ಮರಾಜ ರಾಜ್ಯವಾಳುತ್ತಿದ್ದಾಗ ಮಾಡುತ್ತಿದ್ದಂತೆ ಲಕ್ಷಗಟ್ಟಲೆ ಗೋವುಗಳನ್ನು, ಭಾರಗಟ್ಟಲೆ ಸುವರ್ಣವನ್ನು ದಾನ ಮಾಡುತ್ತಲೇ ವೈಭವದಿಂದ ವಾಸಿಸಿದ. ಅದನ್ನು ಇಂದ್ರವೈಭವಕ್ಕೆ ಹೋಲಿಸಿರುವರು.

೨) ಧರ್ಮರಾಜ ಮೊದಲಾದ ಆ ಪಾಂಡವರೆಲ್ಲ ಬೇರೆ ಬೇರೆ ಮನ್ವಂತರಗಳಲ್ಲಿ ಇಂದ್ರ ಪದವಿಯಲ್ಲೇ ಇದ್ದವರಾದ್ದರಿಂದ, ಅವರು ಈಗಲೂ ಸಹ ಅದೇ ರೀತಿಯಾಗಿ ವಾಸಿಸಿದರು ಎಂಬುದು ಅತ್ಯಂತ ಉಚಿತವಾದುದು ಎಂಬುದನ್ನು ಗಮನಿಸಬೇಕು (೧೨೨/೧೩೪,೧೩೫).

ಧೃತರಾಷ್ಟ್ರನಿಗೆ ವಿದುರನ ಹಿತೋಕ್ತಿ

ಪಾರ್ಥೇಷು ಯಾತೇಷು ಕಿಮತ್ರ ಕಾರ್ಯ-
ಮಿತಿ ಸ್ಮ ಪೃಷ್ಟೋ ವಿದುರೋಽಗ್ರಜೇನ ।
ಆಹೂಯ ರಾಜ್ಯಂ ಪ್ರತಿಪಾದಯೇತಿ
ಪ್ರಾಹೈನಮಾಹಾಥ ರುಷಾಽಽಂಬಿಕೇಯಃ ॥ ೧೦ ॥

ಅ: ಪಾಂಡವರು ಕಾಡಿಗೆ ತೆರಳಿದ ಮೇಲೆ 'ಈಗ ನಮ್ಮ ಕರ್ತವ್ಯವೇನು?' ಎಂದು ಧೃತರಾಷ್ಟ್ರ ಕೇಳಲು ವಿದುರ ತಿಳಿಸಿದ 'ಅವರನ್ನು ಕರೆಸಿಕೊಂಡು ರಾಜ್ಯವನ್ನು ಅವರಿಗೆ ಒಪ್ಪಿಸು'. ಧೃತರಾಷ್ಟ್ರ ಕೋಪದಿಂದ ಅವನಿಗೆ ಹೇಳಿದ :

ಎ: ಪಾಂಡವರಿಗೆ ನಿನ್ನ ಮಕ್ಕಳಿಂದ ತುಂಬಾ ಅಪಚಾರವಾಗಿದೆ, ಅವರ ರಾಜ್ಯವನ್ನು ಅವರಿಗೇ ಹಿಂದಿರುಗಿಸುವುದರೊಂದಿಗೆ ತುಂಬಿದ ಸಭೆಯಲ್ಲಿ ದುಶ್ಶಾಸನಾದಿಗಳು ಅವರ ಕ್ಷಮೆ ಯಾಚಿಸಬೇಕು ಎಂದು ಮೊದಲಾಗಿ ವಿದುರ *ತಿಳಿಸಿದ.

ಧೃತರಾಷ್ಟ್ರನ ಅವಿವೇಕ - ಪಾಂಡವರ ಬಳಿಗೆ ವಿದುರ

ಜ್ಞಾತಂ ಪ್ರತೀಪೋಽಸಿ ಮಮಾತ್ಮಜಾನಾಂ
ನ ಮೇ ತ್ವಯಾ ಕಾರ್ಯಮಿಹಾಸ್ತಿ ಕಿಂಚಿತ್ ।
ಯಥೇಷ್ಟತಸ್ತಿಷ್ಠ ವಾ ಗಚ್ಛ ವೇತಿ
ಪ್ರೋಕ್ತೋ ಯಯೌ ವಿದುರಃ ಪಾಂಡುಪುತ್ರಾನ್ ॥ ೧೧ ॥

---

೯. ವಿವೇಶ ಧರ್ಮಾತ್ಮವತಾಂ ವರಿಷ್ಠಸ್ತ್ರಿವಿಷ್ಟಪಂ ಶಕ್ರ ಇವಾಮಿತೌಜಾಃ ॥ – ಭಾರತ(೩/೨೪/೨೧)

೯. ಭಾರೋ ನಾಮ ವಿಂಶತಿಸ್ತುಲಾಃ । – (ಜ.)

* ದುರ್ಯೋಧನಃ ಶಕುನಿಃ ಸೂತಪುತ್ರಃ ಪ್ರೀತ್ಯಾ ರಾಜನ್ ಪಾಂಡುಪುತ್ರಾನ್ ಭಜಂತು ॥
ದುಃಶಾಸನೋ ಯಾಚತು ಭೀಮಸೇನಂ ಸಭಾಮಧ್ಯೇ ದ್ರುಪದಸ್ಯಾತ್ಮಜಾಂ ಚ । ... – ಭಾರತ (೩/೪/೧೫)

ಅ: 'ನೀನು ನನ್ನ ಮಕ್ಕಳಿಗೆ ವಿರೋಧಿ ಎಂದು ತಿಳಿಯಿತು. ಇಲ್ಲಿ ನಿನ್ನಿಂದ ನನಗೆ ಆಗಬೇಕಾದ್ದೇನೂ ಇಲ್ಲ, ಇಷ್ಟವಿದ್ದರೆ ಇರು ಇಲ್ಲವಾದರೆ ತೊಲಗು' ಎಂದು ಧೃತರಾಷ್ಟ್ರ ನುಡಿಯಲು ವಿದುರ ಪಾಂಡವರ ಬಳಿಗೆ ತೆರಳಿದ.

ವಿದುರನನ್ನು ಅಗಲಿರಲಾರದ ಧೃತರಾಷ್ಟ್ರ

ತಸ್ಮಿನ್ ಗತೇ ಭ್ರಾತೃವಿಯೋಗಕರ್ಶಿತಃ
ಪಪಾತ ಭೂಮೌ ಸಹಸೈವ ರಾಜಾ ।
ಸಂಜ್ಞಾಮವಾಪ್ಯಾದಿಶದಾಶು ಸಂಜಯಂ
ಜೀವಾಮಿ ಚೇದಾಶು ಮಮಾನಯಾನುಜಮ್ ॥ ೧೨ ॥

ಅ: ವಿದುರ ತೆರಳುತ್ತಲೇ ಅವನ ಅಗಲುವಿಕೆಯಿಂದ ದುಃಖಿತನಾಗಿ ಒಡನೆಯೇ ಧೃತರಾಷ್ಟ್ರ ಭೂಮಿಗೊರಗಿದ. ಬಳಿಕ ಎಚ್ಚೆತ್ತು ಸಂಜಯನಿಗೆ ತಿಳಿಸಿದ 'ನಾನು ಬದುಕಬೇಕೆಂದಿದ್ದಲ್ಲಿ ನನ್ನ ತಮ್ಮನನ್ನು ಬೇಗ ಕರೆದು ತಾ'.

ವಿ: ೧) ಧೃತರಾಷ್ಟ್ರ ಹಾಗೆನ್ನುತ್ತಲೇ ವಿದುರ ತೆರಳಿದ್ದು ಅವನಿಗೆ ಆಘಾತ ಉಂಟುಮಾಡಿತು. ಸ್ವಭಾವತಃ ಸಾತ್ವಿಕನಾದ ಅವನಿಗೆ ಧರ್ಮಸ್ವರೂಪಿಯಾದ ವಿದುರನನ್ನು ಬಿಟ್ಟಿರಲು ಅಸಾಧ್ಯವೆನ್ನಿಸಿತು. ಮೂರ್ಛೆ ತಿಳಿದೆದ್ದ ಅವನು ಸಂಜಯನನ್ನು ಕರೆದು ವಿದುರನನ್ನು ಬೇಗ ಕರೆತರದಿದ್ದಲ್ಲಿ ತಾನು ಬದುಕಲಾರೆ ಎಂದು ತಿಳಿಸಿದ.

೨) ಸ್ವರೂಪತಃ ಸಾತ್ವಿಕನಾದವನು ಧರ್ಮವನ್ನು ಬಿಟ್ಟಿರಲು ಎಂದಿಗೂ ಸಾಧ್ಯವಾಗದು ಎಂಬುದಕ್ಕೆ ಇದೊಂದು ಉತ್ತಮ ನಿದರ್ಶನ.

೩) ಧೃತರಾಷ್ಟ್ರ ವಿದುರನ ಅಗಲುವಿಕೆಯ ನೋವಿನೊಂದಿಗೆ ವಿದುರ ಪಾಂಡವರ ಬಳಿಗೆ ತೆರಳಿ ಅವರಿಗೆ ಸಹಾಯ ಮಾಡಿ ಅವರ ಉನ್ನತಿಗೆ ನೆರವಾದಾನು ಎಂಬ ಭಯವನ್ನು ಸಹ ಅವನು ಹೊಂದಿದ್ದ ಎಂಬ ಮಾತು *ಮಹಾಭಾರತದಲ್ಲಿದೆ.

---

೧೧. ಯಥೇಚ್ಛಕಂ ಗಚ್ಛ ವಾ ತಿಷ್ಠ ವಾ ತ್ವಂ
ಸುಸಾಂತ್ವ್ಯಮಾನಾऽಪ್ಯತೀವ ಸ್ತ್ರೀ ಜಹಾತಿ ॥ – ಭಾರತ (ವನ. ೪/೨೧)

೧೨. ಜೀವಾಮಿ ಚೇದಾಶು ಮಮಾನಯಾನುಜಮಿತ್ಯತ್ರ ಮಮಾನುಜಂ ಆಶು ಆನಯ ಚೇತ್ = ಆನಯಸಿ ಚೇತ್ ಜೀವಾಮೀತಿ ಯೋಗ್ಯಪದಾಧ್ಯಾಹಾರೇಣ ಸಂಬಂಧಃ ॥ – (ವಾ.)

೧೨. ತ್ಯಕ್ಷ್ಯಾಮಿ ಜೀವಿತಂ ಪ್ರಾಜ್ಞ ತಂ ಗಚ್ಛಾನಯ ಸಂಜಯ ॥ – ಭಾರತ (ವನ. ೬/೧೦)

* ವಿದುರಸ್ಯ ಪ್ರಭಾವಂ ಚ ಸಂಧಿವಿಗ್ರಹಕಾರಿತಮ್ ।
ವಿವೃದ್ಧಿಂ ಚ ಪರಾಂ ಮತ್ವಾ ಪಾಂಡವಾನಾಂ ಭವಿಷ್ಯತಿ ॥ – ಭಾರತ (ವನ. ೬/೨)

ಮರಳಿದ ವಿದುರ

ಇತೀರಿತಃ ಸಂಜಯಃ ಪಾಂಡವೇಯಾನ್
ಪ್ರಾಪ್ಯಾನಯದ್ವಿದುರಂ ಶೀಘ್ರಮೇವ ।
ಸೋಽಪ್ಯಾಗತಃ ಕ್ಷಿಪ್ರಮಪಾಸ್ತದೋಷೋ
ಜ್ಯೇಷ್ಠಂ ವವಂದೇಽಥ ಸ ಚೈನಮಾಶ್ಲಿಷತ್ ॥ ೧೩ ॥

ಅ: ಧೃತರಾಷ್ಟ್ರ ಹೀಗೆ ತಿಳಿಸಲು ಸಂಜಯ ತ್ವರೆಯಿಂದ ಪಾಂಡವರ ಬಳಿಗೆ ತೆರಳಿ ವಿದುರನನ್ನು ಕರೆತಂದ. ನಿರ್ಮಲನಾಗಿದ್ದ ವಿದುರ ತತ್‌ಕ್ಷಣವೇ ಹಿಂತಿರುಗಿ ಬಂದು ಅಣ್ಣನಾದ ಧೃತರಾಷ್ಟ್ರನನ್ನು ವಂದಿಸಿದ. ಧೃತರಾಷ್ಟ್ರ ಅವನನ್ನು ಗಾಢವಾಗಿ ಆಲಿಂಗಿಸಿಕೊಂಡ.

ಎ: ವಿದುರ ತೆರಳಿದ್ದು ಪಾಂಡವರ ಬಳಿಗೆ. ಅವನ ಆಗಮನ ಪಾಂಡವರಿಗೆ ಹರ್ಷ ನೀಡಿತು. ಪಾಂಡವರಿಂದ ಭೀಮನಿಂದ ನಡೆದ ಕಿರ್ಮೀರ ವಧೆ ಮೊದಲಾದವುಗಳನ್ನು ಕೇಳಿ ವಿದುರನೂ ಸಂತೋಷಪಟ್ಟ. ಆ ವೇಳೆಗೆ ಸಂಜಯ ಬಂದು ಧೃತರಾಷ್ಟ್ರನ ಅಪೇಕ್ಷೆಯನ್ನು ತಿಳಿಸಿ ಪುನಃ ಅವನನ್ನು ಹಸ್ತಿನಾಪುರಕ್ಕೆ ಕರೆದೊಯ್ದ.

ಧೃತರಾಷ್ಟ್ರನ ಸಂಭ್ರಮ

ಅಂಕಂ ಸಮಾರೋಪ್ಯ ಸ ಮೂರ್ಧ್ನಿ ಚೈನ-
ಮಾಘ್ರಾಯ ಲೇಭೇ ಪರಮಾಂ ಮುದಂ ತದಾ ।
ಕ್ಷತ್ತಾರಮಾಯಾಂತಮುದೀಕ್ಷ್ಯ ಸರ್ವೇ
ಸಸೌಬಲಾ ಧಾರ್ತರಾಷ್ಟ್ರಾ ಅಮರ್ಷಾತ್ ।
ಸಮ್ಮಂತ್ರ್ಯ ಹಂತುಂ ಪಾಂಡವಾನಾಮುತೈಕಂ
ಛದ್ಮನೋಪಧೇನೈವ ಸಸೂತಜಾ ಯಯುಃ ॥ ೧೪ ॥

---

೧೪. ಛದ್ಮನೋಪಧೇನೇತ್ಯತ್ರ ಉಪೋಪಪದಾತ್ 'ಡು ಧಾಞ್ ಧಾರಣಪೋಷಣಯೋಃ' ಇತಿ ಧಾತೋಃ 'ಆತೋಽನುಪಸರ್ಗೇ ಕ' ಇತಿ ಕಪ್ರತ್ಯಯೇ ಕೃತೇ ಉಪಧಿರೇವ ಉಪಧಂ 'ಕಪಟೋಽಸ್ತ್ರೀ ವ್ಯಾಜದಂಭೋಪಧಯಃ ಛದ್ಮಕೈತವೇ' ಇತಿ ವಚನಾತ್ ಛದ್ಮೇತ್ಯರ್ಥಃ। ಮುಖಸಹಿತಾ ನಾಸಿಕಾ ಮುಖನಾಸಿಕಾ ಇತಿವತ್ ಛದ್ಮನ್= ಛದ್ಮನ್ಸ್ವಕಾರ್ಯಂ ಉಪಧಂ ಛದ್ಮೋಪಧಂ ತೇನ ಛದ್ಮೋಪಧೇನ। ವನದರ್ಶನವ್ಯಾಜೇನ ಪಾಂಡವಹನನಾಖ್ಯಂ ಕಾರ್ಯಂ ಕರ್ತುಂ ಯಯುರಿತಿ ಭಾವಃ। ಯದ್ವಾ ಛದ್ಮನ್ನಂ ಉಪಧಂ ಉಪಾಧಿಃ ಪಾಂಡವಹನನಾಖ್ಯಂ ಗಮನನಿಮಿತ್ತಂ ಯೇನ ಛದ್ಮನಾ ತತ್ ಛದ್ಮೋಪಧಂ ತೇನೇತ್ಯರ್ಥಃ ॥ – (ವಾ.)

೧೪. ಸೋಽಂಕಮಾನೀಯ ವಿದುರಂ ಮೂರ್ಧನ್ಯಾಘ್ರಾಯ ಚೈವ ಹ।
ಕ್ಷಮ್ಯತಾಮಿತಿ ಚೋವಾಚ ಯದುಕ್ತೋಽಸಿ ಮಯಾಽನಘ ॥ – ಭಾರತ (೩/೬/೨೧)

೧೪. ಗಚ್ಛಾಮಃ ಸಹಿತಾ ಹಂತುಂ ಪಾಂಡವಾನ್ ವನಗೋಚರಾನ್ ॥ – ಭಾರತ (ವನ. ೭/೧೮)

ಅ: ವಿದುರನನ್ನು ತೊಡೆಯ ಮೇಲೇರಿಸಿಕೊಂಡು ಧೃತರಾಷ್ಟ್ರ ನೆತ್ತಿಯಲ್ಲಿ ಮೂಸಿ ಪರಮಾನಂದ ಹೊಂದಿದ. ವಿದುರ ಮರಳಿ ಬಂದದ್ದನ್ನು ನೋಡಿ ಶಕುನಿ ಕೌರವರೆಲ್ಲಾ ಅಸಹನೆಯಿಂದ ಕುದಿದರು. ಎಲ್ಲರೂ ಮಂತ್ರಾಲೋಚನೆ ಮಾಡಿ ಪಾಂಡವರಲ್ಲಿ ಒಬ್ಬನನ್ನಾದರೂ ಕೊಲ್ಲಲೆಂದು ಯಾರಿಗೂ ತಿಳಿಯದಂತೆ ಕರ್ಣನೊಂದಿಗೆ ಹೊರಟು ನಿಂತರು.

ವಿ: ೧) ಧೃತರಾಷ್ಟ್ರ ವಿದುರನನ್ನು ಸಂಭ್ರಮದಿಂದ ಸ್ವಾಗತಿಸಿ ಪ್ರೀತಿಯಿಂದ ಮೈದಡವಿ ಸಂತೋಷಪಟ್ಟ.

೨) ವಿದುರನ ನಿರ್ಗಮನದಿಂದ ಸಂಭ್ರಮಪಟ್ಟಿದ್ದ ಕೌರವರಿಗೆ ಅವನ ಆಗಮನ ತಡೆಯದಾಯಿತು. ಪಾಂಡವರು ಅಸಹಾಯರಾಗಿ ಕಾಡಿನಲ್ಲಿರುವುದರಿಂದ ಅವರಲ್ಲಿ ಒಬ್ಬನನ್ನಾದರೂ ಕೊಲ್ಲುವ ದುರುದ್ದೇಶದಿಂದ ಕರ್ಣನೊಂದಿಗೆ ತೆರಳಲು ಅವರು ಸನ್ನದ್ಧರಾಗಿದ್ದರು ಎಂದರ್ಥ.

ವ್ಯಾಸಾಗಮನ

ವಿಜ್ಞಾಯ ತೇಷಾಂ ಗಮನಂ ಸಮಸ್ತ-
ಲೋಕಾಂತರಾತ್ಮಾ ಪರಮೇಶ್ವರೇಶ್ವರಃ ।
ವ್ಯಾಸೋಽಭಿಗಮ್ಯಾವದದಾಂಬಿಕೇಯಂ
ನಿವಾರಯಾಶ್ವೇವ ಸುತಂ ತವೇತಿ ॥ ೧೫ ॥

ಅ: ಅವರು ಹಾಗೆ ಹೊರಟದ್ದನ್ನು ತಿಳಿದು ಸರ್ವಲೋಕಗಳ ಅಂತರ್ಯಾಮಿಯೂ, ಪರಮ ಸಮರ್ಥರಾದ ದೇವತೆಗಳಿಗೂ ಒಡೆಯರೂ ಆದ ಶ್ರೀವೇದವ್ಯಾಸರು ಆಗಮಿಸಿ ಧೃತರಾಷ್ಟ್ರನಿಗೆ ಹೇಳಿದರು 'ಬೇಗನೇ ನಿನ್ನ ಮಗನನ್ನು ತಡೆದು ನಿಲ್ಲಿಸು'.

ವಿ: ವೇದವ್ಯಾಸರ ನಾರಾಯಣತ್ವಕ್ಕೆ ಇದು ಮತ್ತೊಂದು ನಿದರ್ಶನ. ಅವರೆಲ್ಲಾ ಹಾಗೆ ತೆರಳಲು ಸಿದ್ಧವಾಗುತ್ತಿದ್ದಂತೆಯೇ ವೇದವ್ಯಾಸರು ಆಗಮಿಸಿ ಧೃತರಾಷ್ಟ್ರನಿಗೆ ಅವರನ್ನು ಹಾಗೆ ತೆರಳದಂತೆ ತಡೆಯಲು ಆದೇಶಿಸಿದರು. ಅದಕ್ಕೆ ಕಾರಣವನ್ನು ಮುಂದಿನ ಶ್ಲೋಕದಲ್ಲಿ ತಿಳಿಸಿರುವರು.

ಧೃತರಾಷ್ಟ್ರನಿಗೆ ವ್ಯಾಸರ ಹಿತವಚನ

ಅವಾಪ್ಯ ಪಾರ್ಥಾನಯಮದ್ಯ ಮೃತ್ಯುಂ
ಸಹಾನುಬಂಧೋ ಗಮಿತಾ ಹ್ಯಸಂಶಯಮ್ ।
ಇತೀರಿತೇ ತೇನ ನಿವಾರಯೇತಿ
ಪ್ರೋಕ್ತೋ ಹರಿಃ ಪ್ರಾಹ ನ ಸಂವದೇ ತೈಃ ॥ ೧೬ ॥

ಅ: 'ಪಾಂಡವರನ್ನು ಎದುರಿಸಿ ಇವನು ಇಂದೇ ತನ್ನ ಪರಿವಾರದೊಂದಿಗೆ ನಾಶ ಹೊಂದುವನು, ಸಂಶಯವಿಲ್ಲ' ಎಂದು ಅವರು ನುಡಿಯಲು ಧೃತರಾಷ್ಟ್ರ ಕೇಳಿಕೊಂಡ 'ನೀವೇ ತಡೆಯಿರಿ'; ಆಗ ವ್ಯಾಸರು ನುಡಿದರು 'ಅವರೊಂದಿಗೆ ನಾನು ಮಾತನಾಡೆನು'.

ಎ: ೧) ಪಾಂಡವರ ಮೇಲೆ ಇವರೆಲ್ಲ ಹೀಗೆ ಯುದ್ಧಕ್ಕೆ ತೆರಳಿದರೆ ಸಮರ್ಥರಾದ ಅವರು ತಮ್ಮ ಪ್ರತಿಜ್ಞಾಪಾಲನೆಗಾಗಿ ಇವರನ್ನು ಕೊಂದು ಹಾಕುವುದು ನಿಶ್ಚಯ. ಮುಂದೆಂದೋ ಬರುವ ಸಾವು ಅವರಿಗೆ ಇಂದೇ ಸಂಭವಿಸುವುದು ಎಂದು ಎಚ್ಚರಿಸಿ ವೇದವ್ಯಾಸರು ತಡೆದರು ಎಂದರ್ಥ. ಅವರಿಂದ ಇನ್ನೂ ಎಷ್ಟೋ ಪಾಪಕಾರ್ಯಗಳು ಘಟಿಸಬೇಕಿರುವುದರಿಂದ ಆಗಲೇ ಅವರು ಸಾಯುವುದು ತರವಲ್ಲ ಎಂಬುದು ಅವರ ಸಂಕಲ್ಪವಾಗಿತ್ತು ಎಂದೂ ತಿಳಿಯಬೇಕು.

೨) ಧೃತರಾಷ್ಟ್ರ ಅವರನ್ನು ನೇರವಾಗಿ ಅವರಿಗೆ ಉಪದೇಶಿಸಲು ಕೇಳಿಕೊಂಡಾಗ ಅವರು ಅದನ್ನು ನಿರಾಕರಿಸಿದ್ದು ಗಮನಾರ್ಹ. ದುಷ್ಟರೊಂದಿಗೆ ಮಾತನಾಡುವುದೂ ಸಹ ಉಚಿತವಲ್ಲ ಎಂದು ಆ ಮೂಲಕ ವೇದವ್ಯಾಸರು ತೋರಿಸಿದರು ಎಂದು ತಿಳಿಯಬೇಕು. ವೇದವ್ಯಾಸರೂಪ ಜ್ಞಾನ ಪ್ರದಾಯಕರೂಪ. ಅಯೋಗ್ಯರಿಗೆ ಉಪದೇಶಿಸದಿರುವುದು ಒಂದು ಶಾಸ್ತ್ರವಿಧಿ – 'ತತ್ತ್ವಮೇಷು ನಿಗೂಹಿತಂ' (ಕಥಾಲಕ್ಷಣ ಶ್ಲೋ. ೪). ಅವರ ಬಾಯಿಂದ ಬಂದ ಮಾತು ಉಪದೇಶವೇ ಆಗುವುದರಿಂದ ಅವರು ಅದನ್ನು ಮಾಡಲು ನಿರಾಕರಿಸಿದರು ಎಂದು ತಿಳಿಯಬೇಕು. ಇದರಿಂದ ವ್ಯಾಸರ ಪ್ರತೀಕವಾದ ಅವರ ಗ್ರಂಥಗಳೂ ಸಹ ಎಂದೂ ಅಯೋಗ್ಯರಿಗೆ ತಮ್ಮ ಹೃದಯವನ್ನು ತೆರೆದುಕೊಳ್ಳುವುದಿಲ್ಲ ಎಂಬ ತತ್ತ್ವವೂ ಸೂಚಿತ.

ಮೈತ್ರೇಯ ಆಯಾಸ್ಯತಿ ಸೋಽಪಿ ವಾಚಂ
ಶಿಕ್ಷಾರ್ಥಮೇತೇಷ್ವಭಿಧಾಸ್ಯತೀಹ ।
ತಾಂ ಚೇತ್ ಕರೋತ್ಯೇಷ ಸುತಸ್ತವಾಸ್ಯ
ಭದ್ರಂ ತದಾ ಸ್ಯಾಚ್ಛಪ್ಸ್ಯತಿ ತ್ವನ್ಯಥಾ ಸಃ ॥ ೧೭ ॥

---

೧೫. ವಾರ್ಯತಾಂ ಸಾಧ್ವಯಂ ಮೂಢಃ ಶಮಂ ಗಚ್ಛತು ತೇ ಸುತಃ ।
ವನಸ್ಥಾಂಸ್ತಾನಯಂ ಹಂತುಮಿಚ್ಛನ್ ಪ್ರಾಣಾನ್ ವಿಮೋಕ್ಷ್ಯತಿ ॥
(ಧೃತರಾಷ್ಟ್ರನನ್ನು ಕುರಿತು ವ್ಯಾಸರ ವಚನ) – ಭಾರತ (ವನ. ೮/೫)

೧೬. ಆಹ ತೈಃ ಸಹ ನ ಸಂವದೇ। ದೋಷಿಣಾಂ ನಾಮೋಚ್ಚಾರಣಾತ್ ದೋಷಪ್ರಾಪ್ತಿರಿತಿ ಸ್ಮರಣಾತ್ ಸ್ವಯಂ ದೋಷಹೀನೋಽಪಿ ತೈರಿತ್ಯುಚೇ। ದುಷ್ಟೈಃ ಸಹ ಸಂವಾದೋ ನ ಕರ್ತವ್ಯ ಇತಿ ಅಹಂ ನ ಸಂವದೇ ತದ್ಬುದ್ಧಿಂ ನ ವದಿಷ್ಯ ಇತ್ಯುಚೇ। ನ ತು ಬೋಧನೇಽಶಕ್ತತ್ವಾದಿತಿ ಭಾವಃ। – (ಜ.)

ಅ: 'ಮೈತ್ರೇಯರು ಆಗಮಿಸುವರು, ಅವರು ನಿನ್ನ ಮಗನಿಗೆ ಒಳ್ಳೆಯದಾಗಲೆಂದು ಲೋಕರೀತಿಯಲ್ಲಿ ಬುದ್ಧಿ ಹೇಳುವರು. ಅದನ್ನು ನಿನ್ನ ಮಗ ಕೇಳಿದಲ್ಲಿ ಅವನಿಗೆ ಒಳಿತಾಗುವುದು. ಇಲ್ಲವಾದಲ್ಲಿ ಅವರು ಶಾಪ ನೀಡುವರು'.

ವಿ: ಮೈತ್ರೇಯರ ಆಗಮನವನ್ನು ಹೀಗೆ ಸೂಚಿಸುವುದೂ ಸಹ ವೇದವ್ಯಾಸರ ಸರ್ವಜ್ಞತ್ವಕ್ಕೆ ದ್ಯೋತಕ. ಶ್ರೀಮಧ್ವಾಚಾರ್ಯರು ಅಪಾಲಾ ಶಬ್ದಾರ್ಥವನ್ನು ತಿಳಿಸಿದ ಪ್ರಸಂಗದಲ್ಲಿ (ಮ.ವಿ. ೬/೧೮,೧೯) ಇದರಂತೆಯೇ ಒಬ್ಬ ವಿಪ್ರ ಆಗಮಿಸುವನು, ಅವನು ನಾವು ಹೇಳಿದ ಅರ್ಥವನ್ನೇ ಇದಕ್ಕೆ ತಿಳಿಸುವನು ಎಂದು ತಿಳಿಸಿದ್ದು ಇಂತಹುದೇ ಕಾರ್ಯ ಎಂಬುದನ್ನು ಗಮನಿಸಬೇಕು. ಇದು ವ್ಯಾಸರ ಕಾರ್ಯವಾದರೆ, ಅದು ಮಧ್ವರ ಕಾರ್ಯ ಎಂಬುದು ವಿಶೇಷ. ಅವರಿಬ್ಬರೂ ಸರ್ವಜ್ಞರೇ.

ಉಕ್ತ್ವೇತಿ ರಾಜಾನಮನಂತಶಕ್ತಿ-
ರ್ವ್ಯಾಸೋ ಯಯೌ ತತ್ರ ಗತೇಷು ತೇಷು ।
ಸುಯೋಧನಾದ್ಯೇಷು ಹತೇಷು ಪಾರ್ಥೈ-
ರ್ಭೂಭಾರಹಾನಿರ್ನ ಭವೇದಿತಿ ಪ್ರಭುಃ ॥ ೧೮ ॥

ಅ: ದುರ್ಯೋಧನಾದಿಗಳೆಲ್ಲ ಪಾಂಡವರ ಬಳಿಗೆ ಹೋಗಿ ಅವರಿಂದ ಹತರಾದರೆ ಭೂಭಾರ ಪರಿಹಾರವಾಗದು ಎಂದು ಪ್ರಭುವಾದ ಅನಂತಶಕ್ತಿಯುಳ್ಳ ವೇದವ್ಯಾಸರು ಹೀಗೆ ಧೃತರಾಷ್ಟ್ರನಿಗೆ ಹೇಳಿ ತೆರಳಿಬಿಟ್ಟರು.

ವಿ: ಕೌರವರು ಮಾತ್ರ ಹತವಾದರೆ ಭೂಭಾರ ನೀಗದು, ಕುರುಕ್ಷೇತ್ರ ಸಮರದಲ್ಲಿ ಇತರ ದುಷ್ಟರೊಂದಿಗೆ ಅವರು ಸತ್ತಾಗ ಮಾತ್ರ ಸಮಸ್ತ ಭೂಭಾರ ಪರಿಹಾರವಾಗುವುದು. ಆದ್ದರಿಂದ ಇವರ ಸಾವು ಅಲ್ಲಿ ಆಗುವುದೇ ಉಚಿತ ಎಂಬುದು ಅವರ ಸಂಕಲ್ಪವಾಗಿತ್ತು ಅದಕ್ಕೆಂದೇ ಹಾಗೆ ತಡೆದರು ಎಂದು ಭಾವ.

ಶ್ರೀಹರಿಯ ಕಾರ್ಯವೈಖರಿ

ಸರ್ವಾಶ್ಚ ಚೇಷ್ಟಾ ಭಗವನ್ನಿಯುಕ್ತಾಃ
ಸದಾ ಸಮಸ್ತಸ್ಯ ಚಿತೋಽಚಿತಶ್ಚ ।
ತಥಾಽಪಿ ವಿಷ್ಣುರ್ವಿನಿವಾರಯೇತ್ ಕ್ವಚಿ-
ದ್ವಾಚಾ ವಿಧತ್ತೇ ಚ ಜನಾನ್ ವಿಡಂಬಯನ್ ॥ ೧೯ ॥

ಅ: ಸಕಲಜಡಚೇತನಗಳ ಸಕಲಪ್ರವೃತ್ತಿಯೂ ಭಗವಂತನಿಂದಲೇ ನಿಯಂತ್ರಿತವಾಗಿರುವುದು. ಆದರೂ, ಶ್ರೀಹರಿಯು, ಲೋಕವಿಡಂಬನೆಗಾಗಿ ಒಮ್ಮೊಮ್ಮೆ ಮಾತಿನಿಂದ ಅಕಾರ್ಯಗಳನ್ನು ತಡೆಯುವನು, ಸತ್ಕಾರ್ಯಗಳನ್ನು ವಿಧಿಸುವನು.

ವಿ: ಶ್ರೀಹರಿಯ ಪ್ರೇರಣೆಯ ಬಗೆ ಅಪೂರ್ವವಾದುದು. ಕೆಲವೊಮ್ಮೆ ಒಳಗಿದ್ದೇ ಪ್ರೇರೇಪಿಸಿದರೆ ಮತ್ತೊಮ್ಮೆ ಮತ್ತೊಬ್ಬರ ಮೂಲಕ ಪ್ರೇರೇಪಿಸುವನು. ಕೆಲವೊಮ್ಮೆ ನೇರವಾಗಿ ಮಾತಿನಿಂದಲೇ ತಿಳಿಸುವನು. ಹಾಗೆ ಮಾಡುವುದು ಲೋಕ ವಿಡಂಬನೆಗಾಗಿ ಎಂದೂ ಸಹ ತಿಳಿಯಬೇಕು. ಹೀಗೆ ಮಾತಿನಿಂದ ತಿಳಿಸುವುದರಿಂದ ಲೋಕಶಿಕ್ಷಣವೂ ಆದಂತಾಗುವುದು ಎಂದು ತಿಳಿಯಬೇಕು – 'ಒಬ್ಬನಲಿ ನಿಂದಾಡುವನು ...' (ಹರಿಕಥಾಮೃತಸಾರ ೨/೯).

ಮೈತ್ರೇಯರ ಆಗಮನ

ಮೈತ್ರೇಯ ಆಗಾದಥ ಭೂಪತಿಶ್ಚ
ಪುತ್ರಾನ್ ಸಮಾಹೂಯ ಸಕರ್ಣಸೌಬಲಾನ್ ।
ಸಂಪೂಜಯಾಮಾಸ ಮುನಿಂ ಸ ಚಾಹ
ದಾತುಂ ರಾಜ್ಯಂ ಪಾಂಡವಾನ್ ಸಂಪ್ರಶಂಸನ್ ॥ ೨೦ ॥

ಅ: ಬಳಿಕ ಮೈತ್ರೇಯ ಮುನಿ ಆಗಮಿಸಿದ. ಧೃತರಾಷ್ಟ್ರನು ಕರ್ಣ, ಶಕುನಿಗಳೊಂದಿಗೆ ತನ್ನ ಮಕ್ಕಳನ್ನು ಕರೆದ; ಮುನಿಯನ್ನು ಚೆನ್ನಾಗಿ ಉಪಚರಿಸಿದ. ಅವರು ಪಾಂಡವರನ್ನು ಬಹಳವಾಗಿ ಹೊಗಳುತ್ತಾ ಅವರಿಗೆ ರಾಜ್ಯವನ್ನು ನೀಡಲು ತಿಳಿಸಿದರು.

ವಿ: ಪಾಂಡವರಿಗಾದ ಅನ್ಯಾಯವನ್ನು ಪಾಂಡವರ ಬಾಯಿಂದಲೇ ಕೇಳಿದ್ದ ಮೈತ್ರೇಯ ಮುನಿ ಕೌರವರಿಗೆ ಬುದ್ಧಿ ಹೇಳಲೆಂದು ಅಲ್ಲಿಗೆ ಆಗಮಿಸಿದ್ದರು ಎಂಬ ವಿವರ ಮಹಾಭಾರತದಲ್ಲಿದೆ. ಅದನ್ನು ಮುಂಚಿತವಾಗಿಯೇ ತಿಳಿಸಿದ್ದು ವೇದವ್ಯಾಸರ ಹಿರಿಮೆ.

---

೧೮. ಭೂಭಾರಹಾನಿರ್ನ ಭವೇದಿತ್ಯತ್ರ ಭೂಭಾರಭೂತಕತಿಪಯದುರ್ಯೋಧನಾದಿನಾಶೇऽಪಿ ಭೂಭಾರಭೂತಬಹ್ವಕ್ಷೋಹಿಣೀಭಃ ಸಹ ಕುರುಕ್ಷೇತ್ರೇ ನಾಶವತ್ ಸಮಸ್ತಭೂಭಾರಹಾನಿರ್ನ ಭವತೀತಿ ಭಾವಃ। ಚಿತೋऽಚಿತಶ್ಚೇತ್ಕತ್ರ ಅಚಿತಃ= ಶಿಲಾದೇಃ ಚೇಷ್ಟಾ= ಪತನಾದಿಕ್ರಿಯಾಃ ॥ – (ವಾ.)

೧೯. ತಥಾऽಪಿ ವಿಷ್ಣುರ್ವಿನಿವಾರಯೇದಿತ್ಯತ್ರ ತಥಾऽಪಿ= ಸಕಲಚೇತನಾಚೇತನಚೇಷ್ಟಾಪ್ರವರ್ತಕೋऽಪಿ ಅಂತಃ ಪ್ರೇರಣೇನೈವ ನಿವರ್ತಯಿತುಂ ಪ್ರವರ್ತಯಿತುಂ ಚ ಸಮರ್ಥೋऽಪೀತ್ಯರ್ಥಃ। ಕ್ವಚಿತ್= ಕಸ್ಮಿಂಶ್ಚಿತ್ಕಾರ್ಯೇ ಪ್ರಾಪ್ತೇ ಸತಿ। ''ಸಾವಧಾರಣಾನಿ ವಾಕ್ಯಾನಿ ಭವಂತಿ'' ಇತಿ ವಚನಾತ್ ವಾಚಾ= ವಾಚ್ಯೈವ ಅಕಾರ್ಯಂ ಚೇದಪಿ ವಿನಿವರ್ತಯೇತ್। ಕಾರ್ಯಂ ಚೇದಪಿ ವಾಚ್ಯೈವ ವಿಧತ್ತೇ ॥ – (ವಾ.)

ವಿಶೇಷತೋ ಭೀಮಬಲಂ ಶಶಂಸ
ಕಿರ್ಮೀರನಾಶಾದಿ ವದನ್ ಮುನೀಂದ್ರಃ ।
ಶ್ರುತ್ವಾऽಸಹಂಸ್ತದ್ಧೃತರಾಷ್ಟ್ರಪುತ್ರ
ಆಸ್ಫಾಲಯಾಮಾಸ ನಿಜೋರುಮುಗ್ರಃ ॥ ೨೧ ॥

ಅ: ಮುನಿಶ್ರೇಷ್ಠರಾದ ಮೈತ್ರೇಯರು ಕಿರ್ಮೀರ ಸಂಹಾರಾದಿಗಳನ್ನು ವರ್ಣಿಸಿ ವಿಶೇಷವಾಗಿ ಭೀಮನ ಬಲವನ್ನು ಹೊಗಳಿದರು. ಅದನ್ನು ಕೇಳಿ ಕ್ರೂರಿಯಾದ ದುರ್ಯೋಧನ ಸಹಿಸದೇ ಅಪಹಾಸ್ಯ ಮಾಡುತ್ತಾ ತನ್ನ ತೊಡೆಯನ್ನು ತಟ್ಟಿಕೊಂಡ.

ವಿ: ಹಿತೋಕ್ತಿ ನುಡಿದ ಮೈತ್ರೇಯರನ್ನು ಹಾಗೆ ಅವಮಾನಿಸಿದ್ದು ದುರ್ಯೋಧನನ ಮತ್ತೊಂದು ದುಷ್ಕಾರ್ಯವಾಯಿತು ಎಂಬುದನ್ನು ಗಮನಿಸಬೇಕು. ವಾಯುಜೀವೋತ್ತಮತ್ವವನ್ನು ಕೇಳಿ ಅಪಹಾಸ್ಯ ಮಾಡುವ ಜನರೆಲ್ಲ ಈ ದುರ್ಯೋಧನನಂಥವರೇ ಎಂದು ತಿಳಿಯಬೇಕು.

ದುರ್ಯೋಧನನಿಗೆ ಮೈತ್ರೇಯರ ಶಾಪ

ಶಶಾಪ ಚೈನಂ ಮುನಿರುಗ್ರತೇಜಾ-
ಸ್ತವೋರುಭೇದಾಯ ಭವೇತ್ ಸುಯುದ್ಧಮ್ ।
ಇತ್ಯೂಚಿವಾನ್ ಧೃತರಾಷ್ಟ್ರಾನತೋऽಪಿ
ಯಯೌ ನ ಚೇದ್ರಾಜ್ಯದಸ್ತ್ವಂ ತಥೇತಿ ॥ ೨೨ ॥

ಅ: ಆಗ ಮಹಾತೇಜಸ್ವಿಯಾದ ಮೈತ್ರೇಯಮುನಿ ಅವನನ್ನು ಶಪಿಸಿದರು; 'ನಿನ್ನ ತೊಡೆ ಮುರಿಯಲೆಂದು ದೊಡ್ಡ ಯುದ್ಧ ನಡೆಯುವುದು' ಎಂದು ನುಡಿದರು; ಧೃತರಾಷ್ಟ್ರ ನಮಿಸಿ ಕೇಳಿದರೂ ನಿಲ್ಲದೆ 'ನೀನು ರಾಜ್ಯ ನೀಡದಿದ್ದಲ್ಲಿ ಹಾಗೆ ಆಗುವುದು ತಪ್ಪಿದ್ದಲ್ಲ' ಎಂದು ನುಡಿದು ಹೊರಟುಬಿಟ್ಟ.

ವಿ: ೧) ವೇದವ್ಯಾಸರು ತಿಳಿಸಿದ್ದಂತೆ ಮೈತ್ರೇಯರು ದುರ್ಯೋಧನನಿಗೆ ಶಾಪವನ್ನೇ ನೀಡಿದರು. ಧೃತರಾಷ್ಟ್ರ ತುಂಬಾ ಕೇಳಿಕೊಂಡಾಗ ಅವನು ರಾಜ್ಯ ನೀಡಿದಲ್ಲಿ ಶಾಪ ನಡೆಯದಿರಲಿ ಎಂದು ಪರಿಹಾರ ಸೂಚಿಸಿದರು.

೨) ಇದು ಒಂದು ರೀತಿಯಲ್ಲಿ ಇಂತಹ ಎಲ್ಲ ಶಾಪಗಳಿಗೂ ಸೂಕ್ತಪರಿಹಾರ ಎಂದು ಭಾವಿಸಬಹುದು. ಧೃತರಾಷ್ಟ್ರ ಕೇಳಿಕೊಂಡರೂ ಕಿರ್ಮೀರವಧೆಯ ವಿವರವನ್ನು ಅವರು ತಿಳಿಸದೆ ವಿದುರನಿಂದ ತಿಳಿದುಕೊಳ್ಳಿ ಎಂದು ತೆರಳಿಬಿಟ್ಟರು.

---

೨೧. ಅಸಹನ್ ಅಸಹಮಾನಃ । –(ವೇ.)

೩) ಶ್ರೋತ್ರಾನುಕೂಲ್ಯವಿಲ್ಲದಿದ್ದಾಗ ವಾಯು ಮಹಿಮೆ ಮೊದಲಾದ ಪ್ರಮೇಯಗಳನ್ನು ತಿಳಿಸುವುದು ಉಚಿತವಲ್ಲ ಎಂಬ ತತ್ತ್ವ ಇದರಿಂದ ಸೂಚಿತ.

ಕೃಷ್ಣನ ಬಳಿಗೆ ಪಾಂಡವರ ಸಂದೇಶ

ಶ್ರುತ್ವಾ ತು ಕಿರ್ಮೀರವಧಂ ಸ್ವಪಿತ್ರಾ
ಪೃಷ್ಟಕ್ಷತೋಕ್ತಂ ಸೋಽತ್ರಸದ್ಧಾರ್ತರಾಷ್ಟ್ರಃ ।
ವನೇ ವಸಂತೋಽಥ ಪೃಥಾಸುತಾಸ್ತೇ
ವಾರ್ತಾಂ ಸ್ವಕೀಯಾಂ ಪ್ರಾಪಯಾಮಾಸುರಾಶು ॥ ೨೩ ॥

ಅ: ಧೃತರಾಷ್ಟ್ರ ಕೇಳಿದಾಗ ವಿದುರ ತಿಳಿಸಿದ ಕಿರ್ಮೀರವಧೆಯ ವೃತ್ತಾಂತವನ್ನು ಕೇಳಿ ದುರ್ಯೋಧನ ಭಯಪಟ್ಟ. ಕಾಡಿನಲ್ಲಿ ವಾಸಿಸುತ್ತಾ ಆ ಪಾಂಡವರು ತಮ್ಮ ವೃತ್ತಾಂತವನ್ನು ಕೃಷ್ಣನಿಗೆ ತಲುಪಿಸಿದರು.

ಆ: ಮುಂದೆ ವಿದುರನಿಂದ ಕಿರ್ಮೀರವಧೆಯ ವಿವರವನ್ನು ಕೇಳಿದಾಗ ದುರ್ಯೋಧನ ಭೀಮನ ಅಂತಹ ಅದ್ಭುತ ಪರಾಕ್ರಮವನ್ನು ಕೇಳಿ ಅದು ತನ್ನ ವಧೆಗೆ ಮುನ್ಸೂಚನೆ ಎಂಬ ಭಾವದಿಂದ ಭೀತನಾದ ಎಂದರ್ಥ.

ಕೃಷ್ಣನ ಆಗಮನ - ಕೋಪದ ಕಪಟ ನಾಟಕ

ಕೃಷ್ಣೇ ಸೋಽಪಿ ದ್ರುತಮಾಯಾತ್ ಸಸತ್ಯಃ
ಸಂಬಂಧಿನೋ ಯೇ ಚ ಪಾಂಚಾಲಮುಖ್ಯಾಃ ।
ಕ್ರುದ್ಧಂ ಕೃಷ್ಣಂ ಧಾರ್ತರಾಷ್ಟ್ರಾಯ ಪಾರ್ಥಾಃ
ಕ್ಷಮಾಪಯಾಮಾಸುರುಚ್ಚೈರ್ಗೃಣಂತಃ ॥ ೨೪ ॥

---

೨೨. ಇತ್ಯೂಚಿವಾನಿತ್ಯತ್ರ ಇತಿ ಶಶಾಪೇತಿ ಪೂರ್ವೇಣಾನ್ವಯಃ। ತ್ವಂ ರಾಜ್ಯದೋ ನ ಚೇತ್। ಅಸ್ತಿಭವತ್ಯೋಃ ಸರ್ವತ್ರಾನ್ವಯ ಇತಿ ವಚನಾತ್। ತಥಾ= ತಥಾ ಮಯೋಕ್ತಂ ತಥಾ ಭವಿಷ್ಯತೀತ್ಯೂಚಿವಾನ್ ಯಯೌ ಇತ್ಯನ್ವಯಃ। ಪೃಷ್ಟಕ್ಷತೋಕ್ತಮಿತ್ಯತ್ರ ಪೃಷ್ಟಶ್ಚಾಸೌ ಕ್ಷತ್ತಾ ಚೇತಿ ಸಮಾಸಃ ॥ – (ವಾ.)

೨೨. ತ್ವದಭಿದ್ರೋಹಸಂಯುಕ್ತಂ ಯುದ್ಧಮುತ್ಪತ್ಸ್ಯತೇ ಮಹತ್ ।
ತತ್ರ ಭೀಮೋ ಗದಾಘಾತೈಸ್ತವೋರುಂ ಭೇತ್ಸ್ಯತೇ ಬಲೀ ॥ – ಭಾರತ (೩/೧೦/೩೫)

೨೩. ಶಮಂ ಯಾಸ್ಯತಿ ಚೇತ್ ಪುತ್ರಸ್ತವ ರಾಜನ್ ಯದಾ ತದಾ ।
ಮೈತ್ರೇಯಂ ಪ್ರಾಹ ಕಿರ್ಮೀರಃ ಕಥಂ ಭೀಮೇನ ಪಾತಿತಃ ॥ – ಭಾರತ (೩/೧೦/೩೬)

೨೪. ಕ್ರುಧದ್ರುಹೇತ್ಯಾದಿನಾ ಕರ್ಮಣಿ ಚತುರ್ಥೀ । – (ಜ.)

ಗುಣಾಂಸ್ತದೀಯಾನಮಿತಾನ್ ಪ್ರಣಮ್ಯ
ತದಾ ರುದಂತೀ ದ್ರೌಪದೀ ಚಾಪ ಪಾದೌ ।
ಸಾ ಪಾದಯೋಃ ಪತಿತಾ ವಾಸುದೇವ-
ಮಸ್ತೌತ್ ಸಮಸ್ತಪ್ರಭುಮಾತ್ಮತಂತ್ರಮ್ ॥ ೨೫ ॥

ಅ: ಕೃಷ್ಣನು ಸತ್ಯಭಾಮೆಯೊಂದಿಗೆ ತ್ವರೆಯಿಂದ ಅಲ್ಲಿಗೆ ಆಗಮಿಸಿದ. ಅದರೊಂದಿಗೆ ಸಂಬಂಧಿಗಳಾದ ದ್ರುಪದ ಮೊದಲಾದವರೂ ಅಲ್ಲಿಗೆ ಬಂದರು. ದುರ್ಯೋಧನನ ಮೇಲೆ ಕೋಪಗೊಂಡ ಕೃಷ್ಣನನ್ನು ಬಹಳವಾಗಿ ಅವನ ಗುಣಗಳನ್ನು ವರ್ಣಿಸುತ್ತಾ ಸಮಾಧಾನ ಹೊಂದಲು ಬೇಡಿಕೊಂಡರು. ಆಗ ದ್ರೌಪದಿಯು ಅಳುತ್ತಾ ಕೃಷ್ಣನ ಪಾದಗಳನ್ನು ಹಿಡಿದಳು. ಅವನ ಪಾದದಲ್ಲಿ ಬಿದ್ದು ಸರ್ವಸ್ವಾಮಿಯಾದ, ಸ್ವತಂತ್ರನಾದ ಅವನನ್ನು ಸ್ತುತಿಸಿದಳು.

ವಿ: ೧) ಕೃಷ್ಣ ಆಗಷ್ಟೇ ವಿಷಯ ತಿಳಿದವನಂತೆ ನಟಿಸುತ್ತಾ ಕೌರವರ ಮೇಲೆ ಕೋಪಿಸಿಕೊಂಡು ಅವರನ್ನು ಶಿಕ್ಷಿಸಲು ತೆರಳುವವನಂತೆ ವರ್ತಿಸಿದ. ಪಾಂಡವರು ಬೇಡಿಕೊಂಡಾಗ ಶಾಂತನಾದಂತೆ ನಟಿಸಿದ. ಆ ಮೂಲಕ ಅಸುರ ಜನವನ್ನು ಮೋಹ ಮಾಡಿದ; ತನ್ನ ಭಕ್ತರ ದ್ರೋಹಿಗಳ ಮೇಲೆ ತಾನು ಅಪಾರವಾಗಿ ಕೋಪಗೊಳ್ಳುವುದನ್ನೂ ಸೂಚಿಸಿದ.

೨) ದ್ರೌಪದಿಯು ಹಾಗೆ ದುಃಖಿಸಿದ್ದು ಮೊದಲಾದವುಗಳೆಲ್ಲಾ ಒಂದು ರೀತಿಯಲ್ಲಿ ಅಸುರ ಮೋಹನ ಕಾರ್ಯವಾದರೆ, ಮತ್ತೊಂದು ರೀತಿಯಲ್ಲಿ ಅದೆಲ್ಲಾ ಅವರ ದೇಹದಲ್ಲಿದ್ದ ಪಾರ್ವತ್ಯಾದಿ ಇತರ ದೇವತಾ ಸ್ತ್ರೀಯರ ಕಾರ್ಯವಾಗಿತ್ತು ಎಂದು ತಿಳಿಯಬೇಕು.

ದ್ರೌಪದಿಯ ಕೃಷ್ಣಸ್ತುತಿ

ಅಚಿಂತ್ಯನಿತ್ಯಾವ್ಯಯಪೂರ್ಣಸದ್ಗುಣಾ-
ರ್ಣವೈಕದೇಹಾಖಿಲದೋಷದೂರ ।
ರಮಾಬ್ಜಜೇರೇಶಸುರೇಂದ್ರಪೂರ್ವ-
ವೃಂದಾರಕಾಣಾಂ ಸತತಾಭಿವಂದ್ಯ ॥ ೨೬ ॥

ಸಮಸ್ತಚೇಷ್ಟಾಪ್ರದ ಸರ್ವಜೀವ-
ಪ್ರಭೋ ವಿಮುಕ್ತಾಶ್ರಯ ಸರ್ವಸಾರ ।
ಇತಿ ಬ್ರುವಂತೀ ಸಕಲಾನುಭೂತಂ
ಜಗಾದ ಸರ್ವೇಶಿತುರಚ್ಯುತಸ್ಯ ।

ಯಸ್ಯಾಧಿಕಾನುಗ್ರಹಪಾತ್ರಭೂತಾ
ಸ್ವಯಂ ಹಿ ಶೇಷೇಶವಿಪಾದಿಕೇಭ್ಯಃ ॥ ೨೭ ॥

ಅ: ಅಚಿಂತ್ಯವೂ, ನಿತ್ಯವೂ, ಅವ್ಯಯವೂ, ಪರಿಪೂರ್ಣವೂ ಆದ ಸದ್ಗುಣಸಾಗರವನ್ನೇ ದೇಹವನ್ನಾಗಿ ಹೊಂದಿರುವವನೇ, ಸಕಲದೋಷದೂರನೇ, ರಮಾಬ್ರಹ್ಮ, ವಾಯು ಶಿವ ದೇವೇಂದ್ರ ಮೊದಲಾದ ದೇವತೆಗಳಿಂದ ಸದಾ ಬಹಳವಾಗಿ ಪೂಜಿತನಾದವನೇ, ಸರ್ವರಿಗೂ ಪ್ರೇರಕನಾದವನೇ, ಸರ್ವಜೀವರಿಗೂ ಸ್ವಾಮಿಯಾದವನೇ! ಮುಕ್ತರಿಗೂ ನೆಲೆಯಾದವನೇ, ಸರ್ವಶ್ರೇಷ್ಠನೇ ಎಂದು ಸ್ತುತಿಸುತ್ತಾ ತಾನು ಅನುಭವಿಸಿದ್ದನ್ನೆಲ್ಲಾ ಸರ್ವೇಶ್ವರನಾದ ಕೃಷ್ಣನಿಗೆ ದ್ರೌಪದಿ ತಿಳಿಸಿದಳು. ದ್ರೌಪದಿ ಕೃಷ್ಣನಿಗೆ ಶೇಷ, ಶಿವ, ಗರುಡ ಮೊದಲಾದವರಿಗಿಂತಲೂ ಹೆಚ್ಚು ಅನುಗ್ರಹಕ್ಕೆ ಪಾತ್ರಳಾದವಳು.

ವಿ: ದ್ರೌಪದಿ ಹೀಗೆ ಕೃಷ್ಣನ ಮುಂದೆ ತನ್ನ ಅನುಭವವನ್ನು ಹೇಳಿಕೊಳ್ಳುವಾಗ ಭೀಮನ ಹಿರಿಮೆಯನ್ನೂ ಸಾರುತ್ತಾ ಭೀಮಾರ್ಜುನರು ಹಾಗೂ ಕೃಷ್ಣ – ಈ ಮೂವರ ಹೊರತು ಗಾಂಡೀವದ ಹೆದೆಯೇರಿಸಲು ಬೇರಾರಿಗೂ ಆಗದು ಎಂಬ ವಿಶೇಷಾಂಶವನ್ನು ತಿಳಿಸುವಳು (೨/೧೭೬).

ಕೌರವ ವಧೆಗೆ ಕೃಷ್ಣನ ಪ್ರತಿಜ್ಞೆ

ಶ್ರುತ್ವಾ ಸಮಸ್ತಂ ಭಗವಾನ್ ಪ್ರತಿಜ್ಞಾಂ
ಚಕಾರ ತೇಷಾಮಖಿಲಾಶ್ಚ ಯೋಷಾಃ ।
ಪತೀನ್ ಸಮಾಲಿಂಗ್ಯ ವಿಮುಕ್ತಕೇಶಾಃ
ಭೀಮಾಹತಾನ್ ದರ್ಶಯೇ ನಾನ್ಯಥೇತಿ ।
ತಾಂ ಸಾಂತ್ವಯಿತ್ವಾ ಮಧುರೈಃ ಸುವಾಕ್ಯೈ-
ರ್ನಾರಾಯಣೋ ವಾಚಮಿಮಾಂ ಜಗಾದ ॥ ೨೮ ॥

---

೨೫. ರೋದನಂ ಭಾರತ್ಯತಿರಿಕ್ತಾನಾಮೇವೇತಿ ಕೇಚಿತ್ । – (ತಾ.)

೨೬. ಬ್ರಹ್ಮಶಂಕರಶಕ್ರಾದ್ಯೈರ್ದೇವವ್ರಂದೈಃ ಪುನಃ ಪುನಃ ।
ಕ್ರೀಡಸೇ ತ್ವಂ ನರವ್ಯಾಘ್ರ ಬಾಲಃ ಕ್ರೀಡನ್ಕರಿವ ॥ – ಭಾರತ (೩/೧೨/೫೪)

೨೭. ಕೃಷ್ಣಸ್ಯ ಶೇಷವಿಪಾದಿಕೇಭ್ಯಃ । ಅಧಿಕಾನುಗ್ರಹಪಾತ್ರಭೂತಾ ತಂ ಕೃಷ್ಣಂ ಪ್ರತಿ ಹಿಶಬ್ದೇऽವಧಾರಣೇ ಸ್ವಯಂ ಹಿ ಸ್ವಯಮೇವ ಸಕಲಾನುಭೂತಂ ಜಗಾದೇತಿ ॥ – (ಸ.)

ಅ: ಎಲ್ಲವನ್ನೂ ಕೇಳಿದ ಭಗವಂತನಾದ ಕೃಷ್ಣ ಪ್ರತಿಜ್ಞೆ ಮಾಡಿದ 'ಅವರೆಲ್ಲರ ಪತ್ನಿಯರೂ ಭೀಮನಿಂದ ಕೊಲ್ಲಲ್ಪಟ್ಟ ತಮ್ಮ ಗಂಡಂದಿರನ್ನು ತಬ್ಬಿಕೊಂಡು ಮುಕ್ತಕೇಶಿಯಾಗಿರುವುದನ್ನು ನಾನು ತಪ್ಪದೇ ತೋರಿಸುವೆ' ಅವಳನ್ನು ಮಧುರವಾದ ಮಾತುಗಳಿಂದ ಸಮಾಧಾನಪಡಿಸಿ ನಾರಾಯಣನು ಈ ಮಾತನ್ನಾಡಿದ.

ವಿ: ೧) ನಿನ್ನ ಕೂದಲು ಹಿಡಿದು ಎಳೆದ ಕೌರವರನ್ನು ಭೀಮ ಕೊಲ್ಲುವನು. ಅವರ ಪತ್ನಿಯರು ಅವರ ಶವಗಳನ್ನು ತಬ್ಬಿಕೊಂಡು ರೋದಿಸುವರು. ಆ ದೃಶ್ಯವನ್ನು ನಾನು ನಿನಗೆ ತಪ್ಪದೇ ತೋರಿಸುವೆ ಎಂದು ಕೃಷ್ಣವಚನ ನೀಡಿದ ಎಂದರ್ಥ.

೨) ಮೇಲ್ನೋಟಕ್ಕೆ ಮಹಾಭಾರತದಲ್ಲಿ ಕೌರವರನ್ನೆಲ್ಲ ಅರ್ಜುನ ಕೊಲ್ಲುವನು ಎಂಬರ್ಥದ ಮಾತು ಕಾಣುವುದು. ಆದರೆ, ಅಲ್ಲಿಯ ಭೀಭತ್ಸು ಎಂಬ ಪದಕ್ಕೆ ಭೀಮಸೇನ ಎಂದೇ ಅರ್ಥ ಎಂಬುದು ಮುಂದಿನ ಪ್ರಸಂಗಗಳಿಂದ ತಿಳಿಯುವುದು. ಇದು ಪುರುಷವ್ಯತ್ಯಾಸ ಎಂಬ ನಿರೂಪಣಾ ಪ್ರಭೇದಕ್ಕೆ ಹೊಂದುವ ಪ್ರಸಂಗ ಎಂಬ ವಿಶೇಷಾಂಶವನ್ನು ಈಗಾಗಲೇ ಶ್ರೀಮದಾಚಾರ್ಯರು ತಿಳಿಸಿರುವರು (೯/೧೨೯).

---

೨೮. ರೋದಿಷ್ಯಂತಿ ಸ್ತ್ರಿಯೋ ಹ್ಯೇವಂ ಯೇಷಾಂ ಕ್ರುದ್ಧಾಸಿ ಭಾಮಿನಿ ।
ಬೀಭತ್ಸುಶರಸಂಭಿನ್ನಾನ್ ಶೋಣಿತೌಘಪರಿಪ್ಲುತಾನ್ ॥
ನಿಹತಾನ್ ವಲ್ಲಭಾನ್ ವೀಕ್ಷ್ಯ ಶಯಾನಾನ್ ವಸುಧಾತಲೇ ।
ಯತ್ ಸಮರ್ಥಂ ಪಾಂಡವಾನಾಂ ತತ್ ಕರಿಷ್ಯಾಮಿ ಮಾ ಶುಚಃ ॥
ಸತ್ಯಂ ತೇ ಪ್ರತಿಜಾನಾಮಿ ರಾಜ್ಞಾಂ ರಾಜ್ಞೀ ಭವಿಷ್ಯಸಿ ॥ – ಭಾರತ(ವನ. ೧೨/೧೨೮,೧೨೯)

ಯಾಸ್ತಾಃ ಪ್ರವ್ರಜಮಾನಾಂ ತ್ವಾಂ ಪ್ರಾಹಸನ್ ದರ್ಪಮೋಹಿತಾಃ ।
ತಾಃ ಕ್ಷಿಪ್ರಂ ಹತಸಂಕಲ್ಪಾ ದ್ರಕ್ಷ್ಯಸಿ ತ್ವಂ ಕುರುಸ್ತ್ರಿಯಃ ॥
ತವ ದುಃ ಖೋಪಪನ್ನಾಯಾ ಯೈರಾಚರಿತಮಪ್ರಿಯಮ್ ।
ವಿದ್ಧಿ ಸಂಪ್ರಸ್ಥಿತಾನ್ ಸರ್ವಾಂಸ್ತಾನ್ ಕೃಷ್ಣೇ ಯಮಸಾದನಮ್ ॥ – ಭಾರತ (ವನ. ೨೩೫/೮,೯)

ಪುಂವ್ಯತ್ಯಾಸೇನ ಚೋಕ್ತಿಃ ಸ್ಯಾತ್ಪುರಾಣಾದಿಷು ಕುತ್ರಚಿತ್ ।
ಕೃಷ್ಣಾಮಾಹ ಯಥಾ ಕೃಷ್ಣೋ ಧನಂಜಯಶರೈರ್ಹತಾನ್ ॥
ಶತಂ ದುರ್ಯೋಧನಾದೀಂಸ್ತೇ ದರ್ಶಯಿಷ್ಯ ಇತಿ ಪ್ರಭುಃ ।
ಭೀಮಸೇನಹತಾಸ್ತೇ ಹಿ ಜ್ಞಾಯಂತೇ ಬಹುವಾಕ್ಯತಃ ॥
ವಿಸ್ತಾರೇ ಭೀಮನಿಹತಾಃ ಸಂಕ್ಷೇಪೇ ಽರ್ಜುನಪಾತಿತಾಃ ।
ಉಚ್ಯಂತೇ ಬಹವಶ್ಚಾನ್ಯೇ ಪುಂವ್ಯತ್ಯಾಸಸಮಾಶ್ರಯಾತ್ ॥ (೯/೧೩೦-೧೩೨)

ದ್ಯೂತದ ಕಾಲದಲ್ಲಿ ಕೃಷ್ಣನೇಕೆ ಅಲ್ಲಿರಲಿಲ್ಲ?

ಯದೀಹಾಹಂ ಸ್ಥಿತೋ ನೈವಂ ಭವಿತಾ ಽಹಂ ತ್ವಯೋಧಯಮ್ ।
ಸಾಲ್ವರಾಜಂ ದುರಾತ್ಮಾನಂ ಹತಶ್ಚಾಸೌ ಸುಪಾಪಕೃತ್ ॥ ೨೯ ॥

ಅ: 'ನಾನೇನಾದರೂ ಆಗ ಅಲ್ಲಿ ಇದ್ದಿದ್ದರೆ ಹೀಗಾಗುತ್ತಿರಲಿಲ್ಲ. ನಾನಾಗ ದುರಾತ್ಮನಾದ ಸಾಲ್ವ ರಾಜನೊಂದಿಗೆ ಯುದ್ಧದಲ್ಲಿ ತೊಡಗಿದ್ದೆ. ಆ ಮಹಾಪಾಪಿಯನ್ನು ಸಂಹರಿಸಿದೆನು ಸಹ'.

ಎ: ಕೃಷ್ಣ ತಾನಾಗ ಪಾಂಡವರೊಂದಿಗೆ ಇದ್ದಿದ್ದರೆ ಇಂತಹ ಪ್ರಸಂಗ ಯಾವುದೂ ನಡೆಯು–ತ್ತಿರಲಿಲ್ಲ ಎನ್ನುವನು. ಅದು ಸತ್ಯವಾದ ಮಾತು, ಆದರೆ, ಹಾಗೆ ತಾನು ಅಲ್ಲಿ ಇರದೇ ಹೋಗಿದ್ದು ಉದ್ದೇಶಪೂರ್ವಕವಾಗಿಯೇ ಹೊರತು ಅಜ್ಞಾನ, ಅಸಾಮರ್ಥ್ಯಾದಿ ಕಾರಣಗಳಿಂದಲ್ಲ ಎಂಬ ವಿವರ ಮುಂದೆ ಬಂದಿದೆ. ನಾರದರು ತಿಳಿಸಿದಂತೆ ಸಾಲ್ವ ದ್ವಾರಕೆಯನ್ನು ಮುತ್ತುವುದನ್ನು ಕೇಳಿ ತಾನು ಅಲ್ಲಿಗೆ ತೆರಳಿ ಅವನೊಂದಿಗೆ ಯುದ್ಧದಲ್ಲಿ ತೊಡಗಿದ್ದರಿಂದ ಈ ಕಡೆ ಗಮನ ಹರಿಸಲಾಗಲಿಲ್ಲ ಎಂದು ಕೃಷ್ಣ ಲೋಕ ರೀತಿಯಲ್ಲಿ ನುಡಿದ.

ಸನ್ನಿಧಾನೇ ಽಥವಾ ದೂರೇ ಕಾಲವ್ಯವಹಿತೇ ಽಪಿ ವಾ ।
ಸ್ವಭಾವಾದ್ವಾ ವ್ಯವಹಿತೇ ವಸ್ತುವ್ಯವಹಿತೇ ಽಪಿ ವಾ ॥ ೩೦ ॥

ನಾಶಕ್ತಿರ್ವಿದ್ಯತೇ ವಿಷ್ಣೋರ್ನಿತ್ಯಾವ್ಯವಹಿತತ್ವತಃ ।
ತಥಾ ಽಪಿ ನರಲೋಕಸ್ಯ ಕರೋತ್ಯನುಕೃತಿಂ ಪ್ರಭುಃ ॥ ೩೧ ॥

---

೨೯. ಅಹಂ ತ್ವಯೋಧಯಮಿತ್ಯಸ್ಯ ಸಾಲ್ವರಾಜಂ ದುರಾತ್ಮಾನಮಿತ್ಯುತ್ತರೇಣ ಸಂಬಂಧಃ ॥ – (ವಾ.)

೩೦. ಕಾಲವ್ಯವಹಿತೇ ಽಪಿ ವೇತ್ಯತ್ರ ಕಾಲವ್ಯವಹಿತಪದೇನ ಅತೀತಮನಾಗತಂ ಚೋಚ್ಯತೇ। ಸ್ವಭಾವವ್ಯವಹಿತ-ಪದೇನ ನಿತ್ಯಾತೀಂದ್ರಿಯಂ ಧರ್ಮಾಧರ್ಮಾದಿಕಮುಚ್ಯತೇ। ವಸ್ತುವ್ಯವಹಿತಪದೇನ ಕುಡ್ಯವ್ಯವಹಿತಘಟಾದಿಕ-ಮುಚ್ಯತೇ ॥ – (ವಾ.)

೩೦. ಸನ್ನಿಧಾನೇ ಽತಿಸಾಮೀಪ್ಯೇ ವಿದ್ಯಮಾನೇ ಽಕ್ಷಿಪಕ್ಷ್ಮಣಿ, ದೂರೇ ಪರ್ವತಾಗ್ರವರ್ತಿ ಘಟಾದೌ ಕಾಲವ್ಯವಹಿತೇ ಅತೀತಾದಿಕಾಲೇನ ವ್ಯವಹಿತೇ ಘಟಾದೌ ವಸ್ತುವ್ಯವಹಿತೇ ವಸ್ತುನಾಮಿತ್ಯಾದಿನಾ ವ್ಯವಹಿತೇ ಘಟಾದೌ ವಿಷ್ಣೋರಶಕ್ತಿಃ ಜ್ಞಾನಾದ್ಯಸಾಮರ್ಥ್ಯಂ ನ ವಿದ್ಯತೇ। – (ಜ.)

೩೧. ಅಶಕ್ತಿಪದೇನ ದರ್ಶನಾಶಕ್ತಿಃ ವ್ಯಾಪನಾಶಕ್ತಿಃ ಕರಣಾಶಕ್ತಿಶ್ಚೋಚ್ಯತೇ। ಅತೀತೇಷು ಅತೀತಕಾಲೇ ವ್ಯಾಪ್ತಿಃ। ಅನಾಗತೇಷು ತದುತ್ಪತ್ತ್ಯನಂತರಂ ವ್ಯಾಪ್ತಿರಿತಿ ವಿವೇಕಃ। ನಿತ್ಯಾವ್ಯವಹಿತತ್ವತಃ= ಸರ್ವದೇಶಗತತ್ವೇನ ಸರ್ವಕಾಲೀನತ್ವೇನ ಸರ್ವಾಪರೋಕ್ಷತ್ವೇನ ಚ ನಿತ್ಯಮುಕ್ತವ್ಯವಧಾನರಹಿತತ್ವಾತ್ ॥ – (ವಾ.)

ಅ: ವಸ್ತುಗಳು ಸನಿಹವಿರಲಿ, ದೂರವಿರಲಿ ಕಾಲ ವ್ಯವಧಾನವಿರಲಿ, ಸ್ವಭಾವ ವ್ಯವಧಾನವಿರಲಿ, ವಸ್ತುಗಳ ತಡೆಯಿರಲಿ, ನಿತ್ಯ ತಡೆಯಿಲ್ಲದ ಶ್ರೀಹರಿಗೆ ಅಶಕ್ತಿಯು ಸರ್ವಥಾ ಇಲ್ಲ. ಆದರೂ ಸರ್ವಶಕ್ತನಾದ ಅವನು ಮನುಷ್ಯಲೋಕದ ಅನುಕರಣೆ ಮಾಡುವನು.

ವಿ: ವಸ್ತು ಕಾಣದಿರಲು ತುಂಬಾ ಹತ್ತಿರವಿರುವುದು, ತುಂಬಾ ದೂರವಿರುವುದು, ಕಾಲ ಬೇರೆಯಾಗಿರುವುದು, ವಸ್ತು ಸ್ವರೂಪ ಭಿನ್ನವಾಗಿರುವುದು, ಬೇರೊಂದು ವಸ್ತು ಅಡ್ಡ ಇರುವುದು ಮೊದಲಾದ ಅನೇಕ ಕಾರಣಗಳು ಉಂಟು. ಆದರೆ, ಅಂತಹ ಯಾವ ಕಾರಣವೂ ಸಹ ಸರ್ವಶಕ್ತನಾದ ಕೃಷ್ಣನಿಗೆ ಅನ್ವಯಿಸುವುದಿಲ್ಲ. ಅವನು ಸರ್ವಶಕ್ತ ಸರ್ವನಿಯಾಮಕ. ಆದರೂ, ತಾನು ದೂರ ಇದ್ದದ್ದರಿಂದ ತನಗದು ತಿಳಿಯಲಿಲ್ಲ ಎನ್ನುತ್ತಾ ಲೋಕ ವಿಡಂಬನೆ ಮಾಡಿದ. ಅದು ಅವನಿಗೆ ನಿಜಕ್ಕೂ ಅಜ್ಞಾತವಾಗಿರಲಿಲ್ಲ ಎನ್ನಲು ಅವನು ತಾನಾಗಿಯೇ ದ್ರೌಪದಿಗೆ ಅಕ್ಷಯವಸ್ತ್ರ ನೀಡಿದ್ದು ಸ್ಪಷ್ಟ ನಿದರ್ಶನ.

ದುಷ್ಟಾನಾಂ ದೋಷವೃದ್ಧ್ಯರ್ಥಂ ಭೀಮಾದೀನಾಂ ಗುಣೋನ್ನತೇಃ ।
ಯುಧಿಷ್ಠಿರೇಽತಿವೃದ್ಧಂ ತು ರಾಜಸೂಯಾದಿಸಂಭವಮ್ ॥ ೩೨ ॥

ಧರ್ಮಂ ಚ ಸಂಕ್ರಾಮಯಿತುಂ ಕೃಷ್ಣಾಯಾಮನುಜೇಷು ಚ ।
ಯೋಗ್ಯತಾಕ್ರಮತೋ ವಿಷ್ಣುರಿಚ್ಛಯೇತ್ಥಮಚೀಕ್ಲೃಪತ್ ॥ ೩೩ ॥

ಅ: ದುಷ್ಟರಿಗೆ ದೋಷಗಳನ್ನು ಹೆಚ್ಚಿಸಲೆಂದು, ಭೀಮಾದಿಗಳ ಗುಣಗಳನ್ನು ವೃದ್ಧಿಗೊಳಿಸಲೆಂದು, ರಾಜಸೂಯಾದಿಗಳಿಂದಾಗಿ ಧರ್ಮರಾಜನಲ್ಲಿ ಯೋಗ್ಯತೆಗಿಂತ ಮಿಗಿಲಾಗಿ ಸೇರಿದ್ದ ಪುಣ್ಯವನ್ನು ದ್ರೌಪದಿಗೂ, ಅವನ ತಮ್ಮಂದಿರಿಗೂ ಅವರ ಯೋಗ್ಯತೆಗೆ ಅನುಗುಣವಾಗಿ ಹಂಚಲೆಂದು ವಿಷ್ಣುವು ಸ್ವೇಚ್ಛೆಯಿಂದಲೇ ಹಾಗೆ ಮಾಡಿದ್ದ.

---

೩೨. ದೋಷವೃದ್ಧ್ಯರ್ಥಂ = ಹರಿರತ್ರ ನಾಸ್ತಿ ಭೀಮಾದಯಸ್ತ್ವಶಕ್ತಾ ಇತಿ ಮಿಥ್ಯಾಜ್ಞಾನೇನ ಪಾಪಾಭಿವೃದ್ಧ್ಯರ್ಥಮ್। ಗುಣೋನ್ನತೇಃ = ಹರಿಸಂಕಲ್ಪಜ್ಞತ್ವಕ್ಷಮಾವತ್ವಾದಿಗುಣೋನ್ನತೇಃ । ಧರ್ಮರಾಜಸ್ಯ ರಾಜಾಯೋಗ್ಯದ್ಯೂತಕರಣೋದ್ಯೋಗಾಖ್ಯದೋಷಾತ್ । ಭೀಮಾದೀನಾಂ ದ್ರೌಪದ್ಯಾಶ್ಚ ತದನುಗುಣತ್ವಾಖ್ಯಗುಣಾತ್ । ಆತ್ಮನಾಂ ಪಣೀಕರಣೇಽಪಿ ಸಹಿಷ್ಣುತ್ವಾಖ್ಯಗುಣಾಚ್ಚ । ತೂಷ್ಣೀಂ ಯುಧಿಷ್ಠಿರಗತಪುಣ್ಯಾಕರ್ಷಣೇ ನೈರ್ಘೃಣ್ಯಪ್ರಸಂಗಾತ್। ಅನ್ಯತ್ರ ತೂಷ್ಣೀಂ ಸಂಕ್ರಾಮಣೇ ವೈಷಮ್ಯಪ್ರಸಂಗಾಚ್ಚೋಭಯತ್ರ ದೋಷಗುಣೋಹನಂ ಗ್ರಂಥಕೃತೋಽಪ್ಯಭಿಮತಮ್। ಜ್ಯೇಷ್ಠತ್ವೇನ ಪೂರ್ವಂ ಹೋಮಾದಿಕರ್ತೃತ್ವಾತ್ ಯುಧಿಷ್ಠಿರೇಽತಿವೃದ್ಧಂ= ಸ್ವಯೋಗ್ಯತಾತಿರೇಕೇಣಾಪಿ ವೃದ್ಧಂ ಧರ್ಮಂ ಪುಣ್ಯಂ ತತ ಆಕೃಷ್ಯ ಕೃಷ್ಣಾಯಾಂ = ದ್ರೌಪದ್ಯಾಂ ಅನುಜೇಷು = ಭೀಮಾದಿಷು ಚ ಯೋಗ್ಯತಾಕ್ರಮತಃ= ಭೀಮೇ ಅಧಿಕಂ ತದನು ದ್ರೌಪದ್ಯಾಂ ಪಶ್ಚಾದರ್ಜುನೇ ಅನಂತರಂ ಯಮಯೋರಿತಿ ಯೋಗ್ಯತಾಕ್ರಮೇಣ । ಸಂಕ್ರಾಮಯಿತುಂ= ಸಂಬಂಧಯಿತುಮಿತ್ಯರ್ಥಃ ॥ –(ವಾ.)

೩೨. ಗುಣೋನ್ನತೇಃ ಗುಣಾಭಿವೃದ್ಧ್ಯರ್ಥಂ ಕ್ಷಮಾಯಾ ಅವಲಂಬಿತತ್ವಾದಿತಿ ಭಾವಃ । –(ವ.)

ಎ: ಕೃಷ್ಣನು ಸರ್ವಶಕ್ತನಾಗಿದ್ದಲ್ಲಿ ಜೂಜಿನ ಪ್ರಸಂಗದಲ್ಲಿ ಪಾಂಡವರ ಜೊತೆಗಿದ್ದು ಅದನ್ನೆಲ್ಲ ತಪ್ಪಿಸಬಹುದಿತ್ತಲ್ಲ ಎನ್ನುವುದಕ್ಕೆ ಇಲ್ಲಿ ಉತ್ತರವಿದೆ. ಹಾಗೆ ಹತ್ತಿರವಿದ್ದು ಅದನ್ನೆಲ್ಲ ತಪ್ಪಿಸಿದ್ದಲ್ಲಿ ಇಲ್ಲಿ ಹೇಳಿದ ಕಾರ್ಯಗಳು ನಡೆಯುತ್ತಿರಲಿಲ್ಲ ಎಂದರ್ಥ. ದುರ್ಯೋಧನಾದಿಗಳಿಗೆ ಅಂತಹ ಹೀನ–ಕಾರ್ಯಗಳಿಂದ ದೋಷಗಳು ಹೆಚ್ಚಬೇಕು, ಆ ಸಮಯದಲ್ಲಿ ಅಂತಹ ಪಾಪಿಗಳನ್ನು ಪ್ರತಿಭಟಿಸಿದ್ದ–ರಿಂದ ಭೀಮಸೇನಾದಿಗಳ ಪುಣ್ಯ ಹೆಚ್ಚಬೇಕು. ಧರ್ಮರಾಜನಲ್ಲಿ ಅವನ ಯೋಗ್ಯತೆಗೆ ಮೀರಿದ ರಾಜಸೂಯಾದಿ ಪುಣ್ಯಕಾರ್ಯಗಳಿಂದಾಗಿ ಒದಗಿದ್ದ ಅಧಿಕ ಪುಣ್ಯ ಅವನು ಜೂಜಾಟದಂತಹ ಅಕಾರ್ಯಕ್ಕೆ ಎಳೆಸಿದ್ದರಿಂದಾಗಿ ಕಡಿಮೆಯಾಗಿ ಅದೆಲ್ಲಾ ದ್ರೌಪದಿಗೂ, ಇತರ ಪಾಂಡವರಿಗೂ ಹಂಚಿಹೋಗಬೇಕು ಎಂಬ ಉದ್ದೇಶದಿಂದಲೇ ಕೃಷ್ಣ ಆಗ ಅವರ ಜೊತೆಗಿರದೇ ಆ ಕಾರ್ಯವನ್ನು ನಡೆಯಗೊಟ್ಟ ಎಂದು ತಿಳಿಯಬೇಕು.

ಏಧಮಾನದ್ವಿಡಿತ್ಯೇವ ವಿಷ್ಣೋರ್ನಾಮ ಹಿ ವೈದಿಕಮ್ ॥ ೩೪ ॥

ಅ: ಏಧಮಾನದ್ವಿಟ್ ಎಂಬುದಾಗಿಯೇ ವಿಷ್ಣುವಿಗೆ ವೇದೋಕ್ತನಾಮವಷ್ಟೆ!

ಎ: ೧) ಶೃಣ್ವೇ ವೀರ ಎಂಬ ಶ್ರುತಿ ವಾಕ್ಯದಲ್ಲಿ ಶ್ರೀಹರಿಗೆ ಏಧಮಾನದ್ವಿಟ್ ಎಂಬ ಹೆಸರು ಉಲ್ಲೇಖಿಸಲ್ಪಟ್ಟಿದೆ (೧/೯೯). ಜೀವರು ತಮ್ಮ ಯೋಗ್ಯತೆಗಿಂತ ಮೀರಿದ ಪುಣ್ಯವನ್ನು ಸಂಪಾದಿಸಿದಾಗ ಅದು ಅವರಿಗೆ ಒಳಿತಿಗೆ ಕಾರಣವಾಗುವುದಿಲ್ಲವಾದ್ದರಿಂದ ಶ್ರೀಹರಿ ಅದನ್ನು ಮೆಚ್ಚದೇ ಅವರಿಂದ ಅಕಾರ್ಯಗಳನ್ನು ಮಾಡಿಸಿ ಅದು ಕ್ಷಯಿಸುವಂತೆ ಮಾಡಿ ಅವರ ಯೋಗ್ಯತೆಗೆ ಅನುಗುಣವಾದಷ್ಟು ಮಾತ್ರ ಉಳಿಯುವಂತೆ ಮಾಡುವನು ಎಂಬುದು ಅದರ ಭಾವ.

೨) ಕಾರಣಾಂತರಗಳಿಂದ ಹಿರಿಯ ಚೇತನರು ಅಂತಹ ಅಧಿಕ ಪುಣ್ಯವನ್ನು ಮಾಡುವ ಸಂಭವವುಂಟು. ರಾಜಸೂಯ ಯಾಗಾದಿಗಳಿಂದ ಧರ್ಮರಾಜ, ಲಕ್ಷ್ಮಣನಾಗಿ ವಿಶೇಷ ಸೇವೆ ಸಲ್ಲಿಸುವ ಮೂಲಕ ಶೇಷ ದೇವರು, ಸುಗ್ರೀವನಾಗಿ ಶ್ರೀರಾಮನ ವಿಶೇಷ ಸೇವೆ ಮಾಡಿದ ಸೂರ್ಯ, ಸಲ್ಲದ ತಪಸ್ಸನ್ನು ಮಾಡುವ ಮೂಲಕ ಗೌತಮ, ಮಾಂಡವ್ಯ ಮೊದಲಾದವರು ಹಾಗೆ ಅಧಿಕಪುಣ್ಯ ಮಾಡಿದ ಉಲ್ಲೇಖ ಈಗಾಗಲೇ ಬಂದಿದೆ. ಅಂತಹ ಅಧಿಕ ಪುಣ್ಯ ಮಿತಿಮೀರಿದ ಭೋಜನದಂತೆ ಅನಾರೋಗ್ಯಕ್ಕೆ ಕಾರಣ. ಅದು ಹರಿದು ಹೋಗುವವರೆಗೂ ಆರೋಗ್ಯ ಸುಧಾರಿಸದು. ವಾಹನಕ್ಕೆ ಮಿತಿಮೀರಿದ ವೇಗ ಅಪಘಾತಕ್ಕೆ ಕಾರಣವಾಗುವಂತೆ ಎಂದು ತಿಳಿಯಬೇಕು, ಅಧಿಕ ವಿದ್ಯುಚ್ಛಕ್ತಿ ನುಗ್ಗಿ ವಿದ್ಯುದುಪಕರಣಗಳು ನಾಶವಾಗುವ ಪ್ರಸಂಗವನ್ನೂ ಇದರಂತೆಯೇ ಎಂದು ತಿಳಿಯಬೇಕು. ವಾಹನಗಳ ವೇಗವನ್ನು ರಸ್ತೆಯ ತಡೆಗಳಿಂದಲೂ, ಅಧಿಕ ವಿದ್ಯುಚ್ಛಕ್ತಿಯ ಅಪಾಯವನ್ನು ಸ್ಟೆಬಿಲೈಸರ್‌ಗಳ ಮೂಲಕವೂ ತಡೆಯುವಂತೆ ಶ್ರೀಹರಿ ಇಂತಹ

ಚೇತನರ ಅಧಿಕ ಪುಣ್ಯವನ್ನು ಇಂತಹ ಪ್ರಸಂಗಗಳಿಂದ ಕಡಿಮೆ ಮಾಡಿಸಿ ಅವರ ಹಿತಕ್ಕೆ ಕಾರಣ–ನಾಗುವನು ಎಂದು ತಾತ್ಪರ್ಯ.

೩) ಇದರಂತೆ ಶೇಷ ಅಣ್ಣ ಬಲರಾಮನಾಗಿ, ಸುಗ್ರೀವ ಕರ್ಣನಾಗಿ ತಮ್ಮ ಅಧಿಕ ಪುಣ್ಯ–ವನ್ನು ಕಳೆದುಕೊಳ್ಳುವಂತಾಯಿತು ಎಂಬುದನ್ನೂ ಗಮನಿಸಬೇಕು. ಇಂತಹ ಪ್ರಸಂಗ ಸಾಮಾನ್ಯ ಜೀವರಿಗೆ ಅನ್ವಯಿಸದು. ಇದೇನಿದ್ದರೂ ದೇವತೆಗಳಿಗೆ, ಋಷಿಗಳಿಗೆ ಮಾತ್ರ ಅನ್ವಯಿಸುವ ವಿಶೇಷ ಪ್ರಸಂಗ ಎಂಬ ಎಚ್ಚರವನ್ನು ಶ್ರೀಮದಾಚಾರ್ಯರು ಮುಂದೆ ನೀಡಿರುವರು:

'ದೇವಾನಾಂ ವಾ ಮುನೀನಾಂ ವಾ ಭವೇದೇವಂ ನ ವೈ ನೃಣಾಮ್' (೨೨/೩೪೫).

ಸ್ವಯೋಗ್ಯತಾಯಾ ಅಧಿಕಂ ಧರ್ಮಜ್ಞಾನಾದಿಜಂ ಫಲಮ್ ।
ಭೀಷ್ಮದ್ರೋಣಾಂಬಿಕೇಯಾದೇಃ ಪಾರ್ಥೇಷ್ವೇವ ನಿಧಾಪಿತುಮ್ ॥ ೩೫ ॥

ಅ: ತಮ್ಮ ಯೋಗ್ಯತೆಗಿಂತ ಹೆಚ್ಚಿನದಾದ ಧರ್ಮಜ್ಞಾನಾದಿಗಳಿಂದ ಹುಟ್ಟಿದ, ಭೀಷ್ಮ, ದ್ರೋಣ, ಧೃತರಾಷ್ಟ್ರ ಮೊದಲಾದವರ ಅಧಿಕಪುಣ್ಯವನ್ನು ಪಾಂಡವರಲ್ಲಿಯೇ ತಂದು ಸೇರಿಸುವ ಉದ್ದೇಶದಿಂದಲೂ ಕೃಷ್ಣ ಹಾಗೆ ಮಾಡಿದ.

ವಿ: ೧) ಧರ್ಮರಾಜನಂತೆ ಭೀಷ್ಮ, ದ್ರೋಣ, ಧೃತರಾಷ್ಟ್ರರೂ ಸಹ ವಿಶೇಷ ರೀತಿಯ ಧರ್ಮ, ಜ್ಞಾನಾದಿಗಳಿಂದಾಗಿ ತಮ್ಮ ಯೋಗ್ಯತೆಗೆ ಮೀರಿದ ಪುಣ್ಯವನ್ನು ಗಳಿಸಿದ್ದರು. ಅವರು ದ್ಯೂತ ಸಭೆಯ ಪ್ರಸಂಗದಲ್ಲಿ ಪಾಂಡವರಿಗೂ, ದ್ರೌಪದಿಗೂ ನ್ಯಾಯ ಸಲ್ಲಿಸುವ ಕಾರ್ಯದಲ್ಲಿ ವಿಫಲರಾದ್ದರಿಂದ ಅವರ ಅಧಿಕ ಪುಣ್ಯ ಅವರಿಂದ ಜಾರಿ ಪಾಂಡವರಿಗೆ ಸೇರಿತು. ಅಂತೂ ಶ್ರೀಹರಿ ಅವರಿಗೆ ಸರ್ವಥಾ ಅಧಿಕ ಪುಣ್ಯ ದಕ್ಕದಂತೆ ಮಾಡಿ ಉದ್ಧರಿಸಿದ ಎಂದರ್ಥ.

೨) ಭೀಮ, ದ್ರೌಪದಿಯರಿಗೆ ಮಾತ್ರ ಇಂತಹ ಅಧಿಕಪುಣ್ಯದ ಅಪಾಯ ಸರ್ವಥಾ ಇಲ್ಲ ಕಾರಣ ಅವರ ಯೋಗ್ಯತೆ ಅತ್ಯಂತ ಶ್ರೇಷ್ಠವಾದ್ದರಿಂದ ಎಷ್ಟೇ ಪುಣ್ಯವನ್ನೂ ಸಹ ಅರಗಿಸಿಕೊಳ್ಳುವ ಅಸಾಮಾನ್ಯವಾದ ಸಾಮರ್ಥ್ಯ ಅವರದ್ದು. ಭೀಮಸೇನನ ಬಹುಭೋಜನ ಕಾರ್ಯ ಬಹು–ಪುಣ್ಯವನ್ನು ಸಹ ಅನಾಯಾಸವಾಗಿ ದಕ್ಕಿಸಿಕೊಳ್ಳುವ ಸಾಮರ್ಥ್ಯವಿಶೇಷಕ್ಕೆ ದ್ಯೋತಕ ಎಂದು ತಿಳಿಯಬೇಕು.

---

೩೫. ಇಕೋಯಣಚೀತಿವದಾಗಮಶಾಸನಸ್ಯಾನಿತ್ಯತ್ವಾದಿಡಭಾವಃ । ಸ್ವಯಂಭುವ ಇತಿವತ್ಸಂಜ್ಞಾಪೂರ್ವಕೋ ವಿಧಿರನಿತ್ಯ ಇತಿ ವಚನಾದ್ಗುಣಾಭಾವಃ । ಣೇರನಿಟೀತ್ಯತ್ರ ವ್ಯವಸ್ಥಿತವಿಕಲ್ಪಾನುವೃತ್ತೇರ್ಣಿಲೋಪಾಭಾವಃ। ನಿಧಾಪಯಿತುಮಿತ್ಥಮಚೀಕ್ಲೃಪದಿತಿ ಸಂಬಂಧಃ। –(ಜ.)

ಪುನಶ್ಚ ಪಾಪವೃದ್ಧ್ಯರ್ಥಮಜ್ಞೋ ದುರ್ಯೋಧನಾದಿಷು ।
ವ್ಯಾಸೋಽಂಬಿಕಾಸುತಂ ಪ್ರಾಹ ಪಾರ್ಥಾ ಮೇಽಭ್ಯಧಿಕಂ ಪ್ರಿಯಾಃ ।
ತೇಷಾಂ ಪ್ರವಾಸನಂ ಚೈವ ಪ್ರಿಯಂ ನ ಮಮ ಸರ್ವಥಾ ॥ ೩೬ ॥

ಅ: ದುರ್ಯೋಧನಾದಿಗಳಲ್ಲಿ ಪಾಪವೃದ್ಧಿಯೂ ಸಹ ಆಗಬೇಕು ಎಂಬ ಕಾರಣದಿಂದಲೂ ಕೃಷ್ಣ ಹಾಗೆ ಮಾಡಿದ. ವ್ಯಾಸರು ಧೃತರಾಷ್ಟ್ರನಿಗೆ ಹೇಳಿದರು 'ಪಾಂಡವರು ನನಗೆ ಅತ್ಯಂತ ಪ್ರಿಯರು, ಅವರನ್ನು ಕಾಡಿಗೆ ಕಳುಹಿಸಿದ್ದು ನನಗೆ ಸರ್ವಥಾ ಪ್ರಿಯವಾದುದಲ್ಲ'.

ವಿ: ವ್ಯಾಸರು ಪಾಂಡವರ ಬಗ್ಗೆ ಹೀಗೆ ಹೇಳುವ ಮೂಲಕ ದುರ್ಯೋಧನಾದಿಗಳು ಅವರ ಬಗ್ಗೆ ಮಾಡಿದ ದ್ರೋಹ ಅವರ ಪಾಪವೃದ್ಧಿಗೆ ಕಾರಣ ಎಂದು ಸ್ಪಷ್ಟ ತಿಳಿಸಿದರು ಎಂದು ತಿಳಿಯಬೇಕು ಎಂದರ್ಥ.

ಇತಿ ದುರ್ಯೋಧನಾದೀನಾಂ ಪಾಪವೃದ್ಧ್ಯರ್ಥಮೇವ ಸಃ ।
ಪ್ರಿಯಾ ಇತ್ಯೇವ ಕಥನಾತ್ ಪಾಂಡವಾನಾಂ *ಶುಭೋನ್ನತೇಃ ॥ ೩೭ ॥

---

೩೬. ದುರ್ಯೋಧನಾದಿಷು ಪುನಶ್ಚ ಪಾಪವೃದ್ಧ್ಯರ್ಥಮ್ =ಸ್ವಾಜ್ಞೋಲ್ಲಂಘನೇನ ಪಾಪವೃದ್ಧ್ಯರ್ಥಮ್ ॥ – (ವಾ.)

೩೬. ನ ಮೇ ಪ್ರಿಯಂ ಮಹಾಬಾಹೋ ಯದ್ ಗತಾಃ ಪಾಂಡವಾ ವನಮ್ ।
ನಿಕೃತ್ಯಾ ನಿಕೃತಾಶ್ಚೈವ ದುರ್ಯೋಧನಪುರೋಗಮೈಃ ॥ – ಭಾರತ (ವನ. ೮-೨)

೩೭. ನ ಕೇವಲಂ ದುರ್ಯೋಧನಾದಿಷು ಪಾಪವೃದ್ಧ್ಯರ್ಥಮಿದಂ ವಚನಮ್। ಕಿಂತು ಪಾಂಡವಾನಾಂ ಪುಣ್ಯಾ(ಗುಣಾ)ಭ್ಯುದ್ಧ್ಯರ್ಥಂ ಚೇತಿ ಭಾವೇನಾಹ। ಪ್ರಿಯಾ ಇತಿ ''ಪಾರ್ಥಾ ಏವ ಹಿ ಮೇ ಪ್ರಿಯಾ'' ಇತಿ ವಚನಾತ್। ಪಾಂಡವಾನಾಂ ಶುಭೋನ್ನತೇಃ = ಪುಣ್ಯೋನ್ನತೇಃ ತಾವರ್ಥೇ ಚೇಯಂ ಷಷ್ಠೀ। 'ಲಬ್ಧಾಂಗಸಂಗಂ ಪ್ರಣತಂ ಕೃತಾಂಜಲಿಂ ಮಾಂ ವಕ್ಷ್ಯತೇಽಕ್ರೂರ ತತೇತ್ಯುರುಶ್ರವಾಃ। ತದಾ ವಯಂ ಜನ್ಮಭೃತ' ಇತಿ (೧೦/೩೮/೨೧) ಭಾಗವತೋಕ್ತೇಃ। ಹರಿಶ್ಲಾಘಾವಿಷಯತ್ವೇನ ಪಾಂಡವಾನಾಂ ಪುಣ್ಯೋನ್ನತ್ಯರ್ಥಮಿತ್ಯರ್ಥಃ। 'ಪಾರ್ಥಾ ಏವ ಹಿ ಮೇ ಪ್ರಿಯಾ' ಇತಿ ವದತಾ ದುರ್ಯಾಧನಾದೀನಾಮಪ್ರಿಯತ್ವಂ ಸೂಚಿತಮ್। ಏವಂ ಚ 'ಮಹೀಯಸಾ ನೈವಾದೃತೋ ಯೋ ಧಿಗಮುಷ್ಯ ಜನ್ಮತ' ಇತಿ ತತ್ಪ್ರೋಕ್ತೇಃ। ಹರಿಣಾ ಸ್ವಾಪ್ರಿಯತ್ವಕಥನಾತ್ ದುರ್ಯೋಧನಾದೀನಾಂ ಪಾಪಾಭ್ಯುದ್ಧ್ಯರ್ಥಂ ಚೇತಿ। ಸಃ = ವ್ಯಾಸಃ ಇತಿ ಪ್ರಾಹೇತಿ ಪೂರ್ವೇಣಾನ್ವಯಃ। ತಥಾ ಚ ಪ್ರಾಕ್ತನಪಾಪಂ ಆಜ್ಞೋಲ್ಲಂಘನಜನಿತಮೇವ। ಇದಾನೀಂತನಪಾಪಂ ತು ಭಗವತಾ ಕೃತಗರ್ಹಾವಿಷಯತ್ವನಿಮಿತ್ತಮಿತಿ ನ ಪೌನರುಕ್ತ್ಯಮ್ ॥ – (ವಾ.)

೩೭. ತೇಷಾಂ ಪಾರ್ಥಾನಾಂ ಪ್ರವಾಸನಂ ವನಂ ಪ್ರತಿ ಪ್ರೇಷಣಂ ಮಮ ಸರ್ವಥಾ ಪ್ರಿಯಂ ನೈವ। ಪ್ರಿಯಾ ಇತಿ ಕಥನಾದೇವ ಪಾಂಡವಾನಾಂ ಶುಭೋನ್ನತೇಃ ಪುಣ್ಯೋತ್ಕರ್ಷಾರ್ಥಮ್। ಗುಣೋನ್ನತೇರಿತಿ ಕ್ವಚಿತ್ ಪಾಠಃ। ದುರ್ಯೋಧನಾದೀನಾಂ ಪಾಪವೃದ್ಧ್ಯರ್ಥಮೇವ, ಪಾಪವೃದ್ಧಿಪ್ರಕಟನಾರ್ಥಮೇವ। – (ಜ.)

* ಗುಣೋನ್ನತೇಃ – (ತಾ. ಪಾಠ)

ಅ: ಹೀಗೆಲ್ಲ ಅವರು ದುರ್ಯೋಧನಾದಿಗಳ ಪಾಪ ಹೆಚ್ಚಿಸುವುದಕ್ಕಾಗಿಯೇ ನುಡಿದರು. ತಮಗೆ ಪ್ರಿಯರು ಎಂದು ಹೇಳುವ ಮೂಲಕ ಪಾಂಡವರ ಪುಣ್ಯವನ್ನು ಹೆಚ್ಚಿಸಿದರು.

ವಿ: ೧) ಯೋಗ್ಯರನ್ನು ಹೊಗಳುವುದರಿಂದ ಅವರ ಪುಣ್ಯ ಹೆಚ್ಚುವುದು, ಅದರಂತೆ ಅಯೋಗ್ಯರನ್ನು ತೆಗಳುವುದರಿಂದ ಅವರ ಪಾಪವೂ ಹೆಚ್ಚುವುದು.

೨) ನಿಂದಿಸುವುದರಿಂದ ಪಾಪ ಹೆಚ್ಚುವುದಕ್ಕೆ **'ತತೋ ದುಃಖತರಂ ನು ಕಿಮ್'** ಎಂಬ ಗೀತಾವಾಕ್ಯ(೨/೩೬) ಪ್ರಮಾಣವಾಗಿದೆ.

ಗುರುತ್ವಾದ್ಭೀಮಸೇನಸ್ಯ ಕ್ಷಮಾ ದ್ಯೂತೇऽರ್ಜುನಾದಿನಾಮ್ ।
ನಾತಿಧರ್ಮಸ್ವರೂಪೋऽತ್ರ ಧರ್ಮೋ ಭೀಮೇ ನಿರೌಪಧಃ ॥ ೩೮ ॥

ಅ: ಭೀಮಸೇನ ಹಿರಿಯನಾದ್ದರಿಂದ ದ್ಯೂತದಲ್ಲಿ ಅರ್ಜುನಾದಿಗಳು ಕ್ಷಮೆ ವಹಿಸಿದ್ದುದು ಅಂತಹ ಅತ್ಯಂತ ಪುಣ್ಯಕರ ಕಾರ್ಯವಾಗಲಿಲ್ಲ. ಭೀಮನಲ್ಲಿ ಧರ್ಮವು ಅತ್ಯಂತ ನಿರುಪಾಧಿಕವಾದುದಾಗಿತ್ತು.

ವಿ: ಇತರರ ಪುಣ್ಯ ಪಾಂಡವರಲ್ಲಿ ಹಂಚಿದರೂ ಭೀಮನಿಗೆ ಸಂದ ಪ್ರಮಾಣದಲ್ಲಿ ಅದು ಸಲ್ಲಲಿಲ್ಲ, ಕಾರಣ ಭೀಮಸೇನನಂತೆ ಶುದ್ಧ ಧರ್ಮ ಅರ್ಜುನಾದಿಗಳದಾಗಿರಲಿಲ್ಲ. ಇಲ್ಲಿ 'ನಿರೌಪಧ' ಎಂದರೆ ನಿರ್ವ್ಯಾಜ ಎಂದರೆ ಸ್ವಾಭಾವಿಕ ಎಂದರ್ಥ. ಧರ್ಮರಾಜ ಅಣ್ಣನಾದ್ದರಿಂದ ಭೀಮನ ಸಹನೆಗೆ ಧರ್ಮದ ಆಧಾರವಿದೆ, ಆದರೆ ಅರ್ಜುನನಿಗೆ ಧರ್ಮರಾಜನಂತೆ ಭೀಮಸೇನನೂ ಹಿರಿಯನಾದ್ದರಿಂದ ಧರ್ಮರಾಜನ ಪ್ರೀತಿಗಾಗಿ ಅರ್ಜುನ ಕ್ಷಮೆ ವಹಿಸಿದಂತೆ ಭೀಮನ ಪ್ರೀತಿಗಾಗಿ ದುರ್ಯೋಧನಾದಿಗಳನ್ನು ಪ್ರತಿಭಟಿಸುವ ಕಾರ್ಯದಲ್ಲೂ ಪಾಲ್ಗೊಳ್ಳಬೇಕಿತ್ತು, ಹಾಗೆ ಮಾಡದೇ

---

೩೭ ದುರ್ಯೋಧನಾದೀನಾಮಿತಿ । ತೇಷಾಂ ಪ್ರವಾಸನಂ ಮಮಾಪ್ರಿಯಮಿತಿ ಕಥನಾತ್ ಪ್ರವಾಸನಕಾರಯಿತೄಣಾಂ ಪಾಪವೃದ್ಧ್ಯರ್ಥಂ ತಜ್ಜ್ಞಾಪನಾರ್ಥಮ್ । ಪ್ರಿಯಾ ಇತಿ ಕಥನಾತ್ ಪಾಂಡವಾನಾಂ ಗುಣೋನ್ನತೇಃ ಪ್ರಕಾಶಾಯ। – (ತಾ.)

೩೭. ಟೀಕಾಸ್ವೇತೇ ಶ್ಲೋಕಾ ರೀತ್ಯಂತರೇಣ ವ್ಯಾಖ್ಯಾತಾಃ । – (ತಾ.)

೩೮. ಭೀಮದ್ರೌಪದೀಪಾರ್ಥೇಷು ಧರ್ಮರಾಜಸ್ಥಿತಾಧಿಕಪುಣ್ಯಸ್ಯ ಭೀಮೇ ದ್ರೌಪದ್ಯಾಂ ಅರ್ಜುನಾದಿಷು ಚ ತಾರತಮ್ಯೇನ ಸಂಯೋಜನೇ ಕಾರಣಮಾಹ। ಗುರುತ್ವಾದಿತಿ। ಭೀಮಸೇನಸ್ಯ ಸ್ವಗುರುತ್ವಾತ್ ತಸ್ಮಿನ್ ಕ್ರುಧ್ಯತಿ ಸ್ವಯಂ ಕ್ರೋಧಮಕೃತ್ವಾ ದ್ಯೂತೇ ಅರ್ಜುನಾದೀನಾಂ ಯಾ ಕ್ಷಮಾ ಸಾ ಅತಿಧರ್ಮಸ್ವರೂಪೋ ಧರ್ಮೋ ನ । ಗುರೂಲ್ಲಂಘನಾಖ್ಯದೋಷಗ್ರಸ್ತತ್ವಾತ್। ಅತಸ್ತೇಷು ಪುಣ್ಯಂ ಅಲ್ಪಮೇವ ಸಂಕ್ರಾಮಿತಮ್। ಅತ್ರ= ದ್ಯೂತೇ ಈಷದನ್ಯಾಯವರ್ತಿನಃ ಧರ್ಮರಾಜಸ್ಯ ಭರ್ತ್ಸನಾತ್ ದುರ್ದ್ಯೂತೇ ದ್ರೌಪದ್ಯಾಕರ್ಷಣಾದಿಬಹ್ವನ್ಯಾಯವರ್ತಿನಾಂ ದುರ್ಯೋಧನಾದೀನಾಂ ವಧೋದ್ಯೋಗಾಚ್ಚ ಭೀಮೇ ನಿರೌಪಧೋ ಧರ್ಮಃ । ಅತಸ್ತತ್ರ ಅರ್ಜುನಾದಿಭ್ಯೋऽಪ್ಯತಿಶಯೇನ ಧರ್ಮಸಂಕ್ರಾಮಣಮ್ ॥ – (ವಾ.)

ಅವರು ಕ್ಷಮೆಯನ್ನಷ್ಟೇ ತೋರಿದ್ದರಿಂದ ಅದು ಅಂತಹ ಉನ್ನತ ಧರ್ಮದ ಸಾಲಿಗೆ ಸೇರಲಿಲ್ಲ ಎಂದು ತಿಳಿಯಬೇಕು. ಅವರು ಧರ್ಮರಾಜನನ್ನು ಅನುಸರಿಸಿದ ಪುಣ್ಯಕ್ಕೆ ಪಾತ್ರರಾದರೂ, ಭೀಮನನ್ನು ಅನುಸರಿಸುವ ಮೂಲಕ ಬರುವ ಪುಣ್ಯಕ್ಕೆ ಪಾತ್ರರಾಗದೇ ಹೋದರು. ತಮ್ಮೆಲ್ಲರಿಗಿಂತ ಹಿರಿಯ ಮಾತ್ರವಲ್ಲದೇ ಗುರುವಾಗಿದ್ದ ಭೀಮಸೇನನನ್ನು ದುರ್ಯೋಧನ ವಿರೋಧಿಸಿ ನಡೆದಾಗ ಆ ಗುರುದ್ರೋಹದ ಕಾರ್ಯವನ್ನು ಪ್ರತಿಭಟಿಸದೇ ಇದ್ದುದು ಸಹ ಅರ್ಜುನಾದಿಗಳ ಪಾಲಿಗೆ ಧರ್ಮಲೋಪದ ಪ್ರಸಂಗವೇ ಆಯಿತು ಎಂದೂ ತಿಳಿಯಬೇಕು.

ದ್ರೌಪದ್ಯಾ ಅಪ್ಯತಿಕ್ಲೇಶಾತ್ ಕ್ಷಮಾ ಧರ್ಮೋ೭ ಮಹಾನಭೂತ್ ।
ಸಾ ಹಿ ಭೀಮಮನೋ ವೇದ ನ ಕಾರ್ಯಃ ಶಾಪ ಇತ್ಯಲಮ್ ॥ ೩೯ ॥

ಅ: ದ್ರೌಪದಿಯೂ ಸಹ ಅತ್ಯಂತ ಕ್ಲೇಶವನ್ನು ಸಹಿಸಿಕೊಂಡದ್ದರಿಂದ ಅವಳಿಗೆ ಅದು ಮಹಾ ಪುಣ್ಯಕ್ಕೆ ಸಾಧನವಾಯಿತು. ಶಾಪ ಕೊಡುವುದು ಬೇಡ ಎಂಬ ಭೀಮನ ಮನಸ್ಸನ್ನು ಅವಳು ಚೆನ್ನಾಗಿ ತಿಳಿದಿದ್ದಳು.

ವಿ: ಭೀಮನ ಅನಂತರ ಇತರರ ಪುಣ್ಯವನ್ನೆಲ್ಲಾ ಪಡೆದುಕೊಂಡ ಭಾಗ್ಯವತಿ ದ್ರೌಪದಿ ಮಾತ್ರ. ಅಂತಹ ಪರಮಾಪತ್ಕಾಲದಲ್ಲೂ ಶಾಪವನ್ನು ನೀಡದೇ ಸಹಿಸಿಕೊಂಡಿದ್ದುದು ಅವಳ ಧರ್ಮವೃದ್ಧಿಗೆ ಸಾಧನವಾಯಿತು. ಭೀಷ್ಮಾದಿಗಳ ಜೊತೆಗೂ ಧರ್ಮಜಿಜ್ಞಾಸೆಗೆ ತೊಡಗುವ ಮೂಲಕ ಅಧರ್ಮ–ವನ್ನು ಪ್ರತಿಭಟಿಸಿದ್ದು ದ್ರೌಪದಿಯ ಮಹತ್ತರವಾದ ಸಾಧನೆ. ಭೀಮನ ಪ್ರತಿಭಟನೆಯ ಕಾರ್ಯದಲ್ಲಿ ಆ ಮೂಲಕ ದ್ರೌಪದಿಯೂ ಪಾಲ್ಗೊಂಡು ಭೀಮನ ಪ್ರೀತಿಗೆ ಪಾತ್ರಳಾದಳು. ಸಾಮರ್ಥ್ಯವಿದ್ದೂ ಶಾಪ ಕೊಡದೇ ಇದ್ದದ್ದು ಆಕೆಯ ಹಿರಿಮೆಗೆ ದ್ಯೋತಕ. ಅವಳಿಗೆ ತಿಳಿದಿತ್ತು ಶಾಪ ಕೊಡುವುದು

---

೩೯. ದ್ರೌಪದ್ಯಾ ಅಪ್ಯತಿಕ್ಲೇಶಾತ್= ಅತಿಕ್ಲೇಶಸಹನಾತ್ ಕ್ಷಮಾ ಮಹಾಧರ್ಮೋ೭ಭೂತ್। ತರ್ಹಿ ಭೀಮೇ ಕ್ರುದ್ಧತಿ ಸ್ವಯಂ ಕ್ರೋಧಾಚ್ಚಾಪಾ ಭೀಮೋಲ್ಲಂಘನಾಖ್ಯೋ ದೋಷಃ ಸ್ಯಾದಿತ್ಯತ ಆಹ। ಸಾ ಹೀತಿ ಭೀಮಮನ ಇತ್ಯುಪಲಕ್ಷಣಮ್। ಶಾಪದಾನಾತ್ ಏತತಣ ಏವ ದುರ್ಯೋಧನಾದೀನಾಂ ಹನನೇ ಬಹುತರಭೂಭಾರನಾಶೋ ನ ಸ್ಯಾದಿತಿ ಕೃಷ್ಣಮನೋ೭ಪಿ ವೇದ ಇತ್ಯಪಿ ಜ್ಞಾತವ್ಯಮ್। ಏವಂ ಚ ಕೃಷ್ಣಭೀಮಮನೋ೭ನುಸಾರಿತ್ವಾಖ್ಯಪುಣ್ಯಬಲಾತ್ ಬಹುತರದುಃಖಸಹನೇನ ಅತಿಕ್ಷಮಾವತ್ತ್ವಾಖ್ಯಪುಣ್ಯಬಲಾಚ್ಚ ದುಷ್ಪಸಂಹಾರೋದ್ಯೋಗಕರಣಾಚ್ಚ ಮಹಾಪುಣ್ಯವತಃ ಸ್ವಪತೇರನಂತರಂ ಅರ್ಜುನಾದಿಭ್ಯೋ೭ಪ್ಯಾಧಿಕ್ಯೇನ ತಸ್ಯಾಂ ಪುಷ್ಯಸಂಕ್ರಾಮಣಮಿತಿ ವಾಕ್ಯಸಂದರ್ಭಸ್ಯಾಭಿಸಂಧಿಃ ॥ – (ವಾ.)

೩೯. ಭರ್ತೄಣಾಂ ಮತಮಾಜ್ಞಾಯ ಕ್ಷಮಿಣಾಂ ಧರ್ಮಚಾರಿಣಾಮ್ ।
ನಾಶಪತ್ ತಂ ವಿಶಾಲಾಕ್ಷೀ ಸತೀ ಶಕ್ತಾ೭ಪಿ ಭಾರತ ॥ – ಭಾರತ (ವಿರಾಟ.೪/೧೬/೫೧)

೩೯. ಭಾರತ್ಯಾ೭ತಿಕ್ಲೇಶಾಭಾವಾತ್ ಕ್ಲೇಶಕಾರಣಪರಃ ಕ್ಲೇಶಶಬ್ದಃ । – (ತಾ.)

ಭೀಮನಿಗೆ ಒಪ್ಪಿಗೆಯಾಗುವಂತಹುದಲ್ಲ, ಹಾಗೆ ಪತಿಯ ಭಾವವನ್ನು ತಿಳಿದು ಅದಕ್ಕನುಗುಣವಾಗಿ ನಡೆಯುವ ಮೂಲಕ ತಾನು ಮಹಾಪತಿವ್ರತೆಯೆಂಬುದನ್ನೂ ಆಕೆ ತೋರಿಸಿಕೊಟ್ಟಳು. ಕುಂತಿ ಸ್ಪಷ್ಟವಾಗಿಯೇ ಅದನ್ನು ಪ್ರಶಂಸಿಸಿದ ವಿವರ ಮಹಾಭಾರತದಲ್ಲಿದೆ.

ತಸ್ಮಾದ್ಯಥಾಯೋಗ್ಯತಯಾ ಹರಿಣಾ ಧರ್ಮವರ್ಧನಮ್ ।
ಕೃತಂ ತತ್ಸಾನ್ನಿಧ್ಯಾನಂ ಕಾರಣಂ ಕೇಶವೋಽಬ್ರವೀತ್ ॥ ೪೦ ॥

ಅ: ಆದ್ದರಿಂದ ಅವರವರ ಯೋಗ್ಯತೆಗೆ ತಕ್ಕಂತೆ ಪುಣ್ಯವೃದ್ಧಿಯನ್ನು ಶ್ರೀಕೃಷ್ಣ ಮಾಡಿಕೊಟ್ಟ, ಆದರೆ ಅದಕ್ಕೆಲ್ಲಾ ತಾನು ಇರದಿದ್ದುದೇ ಕಾರಣ ಎಂದು ತಿಳಿಸಿದ.

ವಿ: ಕೃಷ್ಣ ಹೀಗೆ ತಾನು ಅಲ್ಲಿ ಇರದೇ ಹೋಗಿದ್ದರಿಂದ ಹೀಗಾಯಿತು ಎನ್ನುವ ಮೂಲಕ ಇದೆಲ್ಲಾ ಆಗಲೆಂದೇ ತಾನು ಅಲ್ಲಿರಲಿಲ್ಲ ಎಂಬ ಪ್ರಮೇಯವನ್ನು ತಿಳಿಸಿದ ಎಂದು ತಿಳಿಯಬೇಕು.

ಸಾಲ್ವವಧೆಯ ವೃತ್ತಾಂತ

ಸಾಲ್ವಂ ಶ್ರುತ್ವಾ ಸಮಾಯಾಂತಂ ರೌಗ್ಮಿಣೇಯಾದಯೋ ಮಯಾ ।
ಪ್ರಸ್ಥಾಪಿತಾ ಹಿ ಭವತಾಂ ಸಕಾಶಾತ್ ತೇ ಯಯುಃ ಪುರೀಮ್ ।
ತದಾ ಸಾಲ್ವೋಽಪಿ ಸೌಭೇನ ದ್ವಾರಕಾಮರ್ದಯದ್ಭೃಶಮ್ ॥ ೪೧ ॥

ಅ: 'ಸಾಲ್ವ ಆಕ್ರಮಿಸಿದ್ದನ್ನು ಕೇಳಿ ನಾನು ಪ್ರದ್ಯುಮ್ನಾದಿಗಳನ್ನು ನಿಮ್ಮಲ್ಲಿದ್ದಾಗ ಕಳುಹಿಸಿಕೊಟ್ಟೆ; ಅವರು ದ್ವಾರಕೆಗೆ ತೆರಳಿದರು. ಆಗ ಸಾಲ್ವನೂ ಸಹ ವಿಮಾನದಲ್ಲಿ ಕುಳಿತು ದ್ವಾರಕೆಯನ್ನು ಬಹಳವಾಗಿ ಪೀಡಿಸಿದ'.

---

೨೮. ನ ತ್ವಾಂ ಸಂದೇಷ್ಟುಮರ್ಹಾಮಿ ಭರ್ತ್ರಾನ್ಪ್ರತಿ ಶುಚಿಸ್ಮಿತೇ ।
ಸಾಧ್ವೀಗುಣಸಮಾಪನ್ನಾ ಭೂಷಿತಂ ತೇ ಕುಲದ್ವಯಮ್ ॥
ಸಭಾಗ್ಯಾಃ ಕುರುವಶ್ಚೇಮೇ ಯೇ ನ ದಗ್ಧಾಸ್ತ್ವಯಾನಘೇ । – ಭಾರತ (ಸಭಾ. ೭೯/೫೫,೬)

೪೦. 'ಯದೀಹಾಹಮಿ'ತಿ (ಶ್ಲೋ. ೨೯) ಶ್ಲೋಕೇ ಸಾಲ್ವವಧಾಯ ಮಯಾ ಗತತ್ವೇನ ಸ್ವಾಸನ್ನಿಧಾನಾದಿದಮಭೂದಿತಿ ಪ್ರಾಗುಕ್ತಮ್। ಸಾಲ್ವವಧಾಯ ಸಂಕರ್ಷಣಪ್ರದ್ಯುಮ್ನಾದಿಭಿರೇವಾಲಂ ತ್ವಯಾ ಕಿಮರ್ಥಂ ಗತಮಿತ್ಯತಸ್ತಾಮೇವ ಕಥಾಂ ವಿಸ್ತರೇಣಾಹ। ತತ್ಸಾನ್ನಿಧ್ಯಾನಂ ಕಾರಣಮಿತಿ ತತ್ರ= ದ್ಯೂತಸಭಾಯಾಂ ಸ್ವಸ್ವಯೋಗ್ಯತಯಾ ಪುಣ್ಯಸಂಕ್ರಾಮಣೇ ವಾ ॥ – (ವಾ.)

೪೦ 'ಯಾವತ್ತರಮಭಕ್ಷ್ಯೇಸ್ತು ಭುಜ್ಯತೇ ದುಃಖಮುಲ್ಬಣಮ್ ।
ತಾವನ್ಮುಕ್ತೌ ಸುಖೋದ್ರೇಕಸ್ತತ್ರ ಚೇದ್ಭಕ್ತಿವರ್ಧನಮ್' ಇತಿ ಚ ॥ – ಭಾ. ತಾ. (೩/೧೬/೪೯)

೪೧. ನೈತತ್ ಕೃಚ್ಛ್ರಮನುಪ್ರಾಪ್ತೋ ಭವಾನ್ ಸ್ಯಾದ್ ವಸುಧಾಧಿಪ ।
ಯದ್ಯಹಂ ದ್ವಾರಕಾಯಾಂ ಸ್ಯಾಂ ರಾಜನ್ ಸಂನಿಹಿತಃ ಪುರಾ ॥ – ಭಾರತ (ವನ. ೧೩/೧)

ಎ: ಸಾಲ್ವವಧೆಗೆ ತಾನೇ ತೆರಳಬೇಕಾಗಿ ಬಂದ ಪ್ರಸಂಗವನ್ನು ಕೃಷ್ಣ ಇಲ್ಲಿಂದ ವಿವರಿಸ–ತೊಡಗಿದ.

ಪ್ರದ್ಯುಮ್ನನಿಂದ ವಿಚಿತ್ರರೀತಿಯಲ್ಲಿ ಸಾಲ್ವಪರಾಭವ

ಪ್ರದ್ಯುಮ್ನ ಆಶು ನಿರಗಾದಥ ಸರ್ವಸೈನ್ಯೈ–
ರನ್ಯೈಶ್ಚ ಯಾದವಗಣೈಃ ಸಹಿತೋಽನುಜೈಶ್ಚ।
ಸಾಲ್ವೋಽವಗಮ್ಯ ತನಯಂ ಮಮ ತದ್ವಿಮಾನಾತ್
ಪಾಪೋಽವರುಹ್ಯ ರಥಮಾರುಹದತ್ರ ಯೋದ್ಧುಮ್ ॥ ೪೨ ॥

ಅ: 'ಪ್ರದ್ಯುಮ್ನ ಒಡನೆಯೇ ಸಕಲ ಸೈನ್ಯದೊಂದಿಗೆ, ಇತರ ಯಾದವರ ಗುಂಪಿನೊಂದಿಗೂ, ತಮ್ಮಂದಿರೊಂದಿಗೂ ಕೂಡಿ ಯುದ್ಧಕ್ಕೆ ತೆರಳಿದ. ಸಾಲ್ವ ಅವನನ್ನು ನನ್ನ ಮಗನೆಂದು ಗಮನಿಸಿ ಆ ವಿಮಾನದಿಂದ ಕೆಳಗಿಳಿದು ಅವನೊಂದಿಗೆ ಯುದ್ಧ ಮಾಡಲೆಂದು ರಥವನ್ನು ಏರಿದ'.

ವಿ: ಯುದ್ಧಕ್ಕೆ ಬಂದವನು ಕೃಷ್ಣನಲ್ಲ, ಕೃಷ್ಣನ ಮಗ ಎಂದು ತಿಳಿದ ಸಾಲ್ವ ವಿಮಾನದಿಂದ ಇಳಿದು ರಥವನ್ನೇರಿ ಯುದ್ಧಕ್ಕೆ ತೊಡಗಿದ. ಕೃಷ್ಣಪುತ್ರರಲ್ಲಿ ಪ್ರದ್ಯುಮ್ನನೇ ಎಲ್ಲರಿಗಿಂತ ಹಿರಿಯ–ನಾದ್ದರಿಂದ ಅವನು ತಮ್ಮಂದಿರೊಂದಿಗೆ ತೆರಳಿದ ಎಂದು ತಿಳಿಸಿರುವರು.

ಕೃತ್ವಾ ಸುಯುದ್ಧಮಮುನಾ ಮಮ ಪುತ್ರಕೋಽಸಾ–
ವಸ್ತ್ರೈಶ್ಚ ತಸ್ಯ ವಿನಿವಾರ್ಯ ಮಹಾಸ್ತ್ರಜಾಲೈಃ।
ದತ್ತಂ ಮಯಾ ಶರಮಮೋಘಮಥಾದದೇ ತಂ
ಹಂತುಂ ನೃಪಂ ಕೃತಮತಿಸ್ತ್ವಶ್ರೌಷೀದ್ವಚಃ ಖೇ ॥ ೪೩ ॥

ಅ: 'ಅವನೊಂದಿಗೆ ನನ್ನ ಮಗ ಪ್ರದ್ಯುಮ್ನ ಚೆನ್ನಾಗಿ ಯುದ್ಧ ಮಾಡಿದ. ಅವನ ಅಸ್ತ್ರಗಳನ್ನು ತನ್ನ ಮಹಾಸ್ತ್ರಗಳ ಸಮೂಹದಿಂದ ತಡೆದ. ಅವನನ್ನು ಕೊಲ್ಲಲೆಂದು ಮನಸ್ಸಿನಲ್ಲಿ ನಿಶ್ಚಯಿಸಿ ನಾನು ನೀಡಿದ್ದ ಅಮೋಘವಾದ ಬಾಣವೊಂದನ್ನು ಕೈಗೆತ್ತಿಕೊಂಡ. ಆಗ ಗಗನದಲ್ಲಿನ ಮಾತು ಅವನಿಗೆ ಕೇಳಿಸಿತು'.

ವಿ: ಆಪತ್ಕಾಲದಲ್ಲಿ ಪ್ರಯೋಗಿಸಲೆಂದು ನಿಶ್ಚಿತ ಜಯಕ್ಕೆ ಸಾಧನವಾದ ಬಾಣವೊಂದನ್ನು ಕೃಷ್ಣ ಪ್ರದ್ಯುಮ್ನನಿಗೆ ನೀಡಿದ್ದ. ಅದನ್ನು ಪ್ರಯೋಗಿಸಿ ಸಾಲ್ವನನ್ನು ಕೊಲ್ಲಲೆಂದು ಪ್ರದ್ಯುಮ್ನ ಯೋಚಿಸಿ–ದಾಗ ಅಶರೀರವಾಣಿ ಅವನನ್ನು ಎಚ್ಚರಿಸಿತು ಎಂದರ್ಥ.

ನಾರಾಯಣೇನ ಹಿ ಪುರಾ ಮನಸಾऽಭಿಕ್ಲೃಪ್ತಂ
ಕೃಷ್ಣಾವತಾರಮುಪಗಮ್ಯ ನಿಹನ್ಮಿ ಸಾಲ್ವಮ್ ।
ಇತ್ಯೇವ ತೇನ ಹರಿಣಾऽಪಿ ಸ ಭಾರ್ಗವೇಣ
ವಿದ್ರಾವಿತೋ ನ ನಿಹತಃ ಸ್ವಮನೋऽನುಸಾರಾತ್ ॥ ೪೪ ॥

ಅ: 'ನಾರಾಯಣ ಹಿಂದೆಯೇ ಮನಸ್ಸಿನಲ್ಲಿ ಸಂಕಲ್ಪಿಸಿರುವನು 'ನಾನು ಕೃಷ್ಣಾವತಾರವನ್ನು ಮಾಡಿ ಸಾಲ್ವನನ್ನು ಕೊಲ್ಲುವೆನು' ಎಂದು. ಅದರಿಂದಾಗಿಯೇ ಆ ಹರಿಯ ಅವತಾರವಾದ ಪರಶು-ರಾಮನೂ ತನ್ನ ಸಂಕಲ್ಪಕ್ಕೆ ತಕ್ಕಂತೆ ಅವನನ್ನು ಸೋಲಿಸಿ ಓಡಿಸಿದನೇ ಹೊರತು ಕೊಂದಿಲ್ಲ'.

ವಿ: ಸಾಲ್ವನನ್ನು ಕೃಷ್ಣಾವತಾರದಿಂದಲೇ ಕೊಲ್ಲುವುದು ಭಗವತ್ಸಂಕಲ್ಪವಾಗಿತ್ತು ಆದ್ದರಿಂದ ಪರಶುರಾಮರೂಪದಿಂದಲೂ ಅವನನ್ನು ಕೊಲ್ಲದೇ ಸೋಲಿಸಿ ಓಡಿಸಿದ್ದ ಮಾತ್ರ.

ವಧ್ಯಸ್ತ್ವಯಾ ನ ಹಿ ತತೋऽಯಮಯಂ ಚ ಬಾಣ-
ಶ್ಚಕ್ರ್ಯಾಯುಧಸ್ಯ ದಯಿತೋ ನಿತರಾಮಮೋಘಃ।
ಮಾ ಮುಂಚ ತೇನ ತಮಿಮಂ ವಿನಿವರ್ತಯೇऽಹಂ
ಸಾಲ್ವಂ ಹೃದಿ ಸ್ಥಿತ ಇತೀರಿತಮೀರಣೇನ ॥ ೪೫ ॥

ಅ: 'ಆದ್ದರಿಂದ ನಿನ್ನಿಂದ ಇವನನ್ನು ಕೊಲ್ಲಲಾಗದು. ಈ ಬಾಣವಾದರೋ ಚಕ್ರಪಾಣಿ-ಯಾದ ಕೃಷ್ಣನಿಗೆ ಪ್ರಿಯವಾದ ಅತ್ಯಂತ ಅಮೋಘವಾದ ಬಾಣ. ಆದ್ದರಿಂದ ಇದನ್ನು ನೀನು ಪ್ರಯೋಗಿಸಬೇಡ. ಸಾಲ್ವನನ್ನು ನಾನು ಅವನ ಹೃದಯದಲ್ಲಿನಿಂತು ಪ್ರೇರಿಸಿ ಹಿಂದಿರುಗಿಸಿವೆ' ಎಂದು ವಾಯು ನುಡಿದ.

ವಿ: ಅಶರೀರ ವಾಣಿಯೆಂದರೆ ವಾಯುವಚನ ಎಂಬ ಮಾತು ಈಗಾಗಲೇ ಬಂದಿದೆ. ಸಾಲ್ವ ಸಾಯುವುದು ಕೃಷ್ಣನಿಂದ, ಆದರೆ ಅದರಂತೆ ಪ್ರದ್ಯುಮ್ನನ ಬಳಿಯಿರುವ ಕೃಷ್ಣನ ಬಾಣ ಅಮೋಘ. ಈ ಸಮಸ್ಯೆಯನ್ನು ಪರಿಹರಿಸಲೆಂದು ವಾಯು ಹಾಗೆ ನುಡಿದ. ಸಾಲ್ವನನ್ನು ಅವನಾಗಿಯೇ ಹಿಂದಿರುಗುವಂತೆ ಪ್ರೇರಿಸುವ ಮೂಲಕ ಅದನ್ನು ಪರಿಹರಿಸುವುದು ಮುಖ್ಯಪ್ರಾಣನಾದ ವಾಯುದೇವರ ಅಸಾಮಾನ್ಯ ಕಾರ್ಯ. ಇದು ಅವರು ಎಷ್ಟು ಅಪಾರ ಪ್ರೇರಕ ಶಕ್ತಿಯನ್ನು ಹೊಂದಿದವರು ಎನ್ನುವುದಕ್ಕೂ ಸೂಚಕ. 'ಪ್ರಾಣ' ಶಬ್ದದ ಅರ್ಥ ಅದೇ ಅಲ್ಲವೇ! ಮಧ್ವ-ವಿಜಯದಲ್ಲಿ ಈಶ್ವರದೇವನನ್ನು ದಿನವಿಡೀ ಅಗೆಯುವಂತೆ ಮಧ್ವರೂಪದಿಂದ ಪ್ರೇರಿಸಿದ ಪ್ರಸಂಗ ಇದನ್ನು ಹೋಲುವಂತಿರುವುದು ಗಮನಾರ್ಹ (ಮ.ವಿ. ೧೦/೫,೬).

ಶ್ರುತ್ವಾ ವಚಃ ಸ ಪವನಸ್ಯ ಶರಂ ತ್ವಮೋಘಂ
ಸಂಜಹ್ರ ಆಶು ಸ ಚ ಸಾಲ್ವಪತಿಃ ಸ್ವಸೌಭಮ್ ।
ಆರುಹ್ಯ ಬಾಲಕಲಹೇನ ಕಿಮತ್ರ ಕಾರ್ಯಂ
ಕೃಷ್ಣೇನ ಸಂಗರ ಇತಿ ಪ್ರಯಯೌ ಸ್ವದೇಶಮ್ ॥ ೪೬ ॥

ಅ: 'ವಾಯುದೇವರ ಆ ಮಾತನ್ನು ಕೇಳಿ ಪ್ರದ್ಯುಮ್ನ ಆ ಅಮೋಘವಾದ ಬಾಣವನ್ನು ಒಡನೆಯೇ ಹಿಂತೆಗೆದುಕೊಂಡ. ಆ ಸಾಲ್ವನಾದರೂ ತನ್ನ ವಿಮಾನವನ್ನು ಏರಿ ಹುಡುಗನೊಂದಿಗೆ ಕಾದಿ ಮಾಡುವುದೇನು, ಕೃಷ್ಣನೊಂದಿಗೇ ಯುದ್ಧ ಎಂದು ನಿಶ್ಚಯಿಸಿ ತನ್ನ ರಾಜ್ಯಕ್ಕೆ ಹಿಂದಿರುಗಿಬಿಟ್ಟ'.

ಏ: ಸಾಲ್ವನಿಗೆ ಆ ಬುದ್ಧಿ ಬರಲು ಹಿಂದೆ ತಿಳಿಸಿದಂತೆ ವಾಯುದೇವರ ಪ್ರೇರಣೆ ಕಾರಣವಾಯಿತು ಎಂದರ್ಥ.

ಪ್ರದ್ಯುಮ್ನಸಾಂಬಗದಸಾರಣಚಾರುದೇಷ್ಣಾಃ
ಸೇನಾಂ ನಿಹತ್ಯ ಸಹ ಮಂತ್ರಿಗಣೈಸ್ತದೀಯಾಮ್।
ಆಹ್ಲಾದಿನಃ ಸ್ವಪುರಮಾಯಯುರಪ್ಯಹಂ ಚ
ತತ್ರಾಗಮಂ ಸಪದಿ ತೈಃ ಶ್ರುತವಾನಶೇಷಮ್ ॥ ೪೭ ॥

ಅ: 'ಪ್ರದ್ಯುಮ್ನ, ಸಾಂಬ, ಗದ, ಸಾರಣ, ಚಾರುದೇಷ್ಣರು ಸಾಲ್ವನ ಮಂತ್ರಿಗಳೊಂದಿಗೆ ಅವನ ಸೇನೆಯನ್ನು ಸಂಹರಿಸಿ ಸಂತೋಷಯುಕ್ತರಾಗಿ ಪಟ್ಟಣಕ್ಕೆ ಹಿಂತಿರುಗಿದರು. ಆ ವೇಳೆಗೆ ನಾನು ಅಲ್ಲಿಗೆ ಹೋದೆ, ಅವರಿಂದ ಎಲ್ಲವನ್ನೂ ಕೇಳಿಸಿಕೊಂಡೆ'.

ಏ: ಸಾಲ್ವ ಹಾಗೆ ಹಿಂತಿರುಗಿದ್ದು ತಮ್ಮ ಜಯದ ಸಂಕೇತವೆಂದು ಭಾವಿಸಿ ಪ್ರದ್ಯುಮ್ನಾದಿಗಳೆಲ್ಲಾ ನಗರಕ್ಕೆ ಹಿಂತಿರುಗಿದರು. ಕೃಷ್ಣ ಆ ವೇಳೆಗೆ ಅಲ್ಲಿಗೆ ಆಗಮಿಸಿದ.

ಕೃಷ್ಣನ ಬಾಣದ ಹಿರಿಮೆ

ಯಸ್ಮಿಂಛರೇ ಕರಗತೇ ವಿಜಯೋ ಧ್ರುವಃ ಸ್ಯಾ-
ನ್ನತ್ತೇಜಸಾ ತದನು ಸಂಗ್ರಹಣಾತ್ ಸುತಾನ್ಮೇ ।
ಯಾತಂ ನಿಶಮ್ಯ ರಿಪುಮಾತ್ಮಪುರೀಂ ಚ ಭಗ್ನಾಂ
ದೃಷ್ಟ್ವೈವ ತೇನ ತದನುವ್ರಜನಂ ಕೃತಂ ಮೇ ॥ ೪೮ ॥

ಅ: 'ಯಾವ ಬಾಣ ಕೈಯಲ್ಲಿದ್ದರೆ ನನ್ನ ಪ್ರಭಾವದಿಂದಾಗಿ ವಿಜಯ ಲಭಿಸುವುದು ನಿಶ್ಚಯವೋ, ಅಂತಹ ಬಾಣವನ್ನು ಕೈಗೆತ್ತಿಕೊಂಡದ್ದರಿಂದ ನನ್ನ ಮಗನಿಂದ ಸಾಲ್ವ ಸೋತು ತೆರಳಿದ, ಇದನ್ನು ಕೇಳಿ ನಮ್ಮ ನಗರವನ್ನು ಅವನು ಹಾಳು ಮಾಡಿದ್ದನ್ನು ಕಂಡು ನಾನು ಆಗಲೇ ಅವನನ್ನು ಬೆನ್ನಟ್ಟಿ ತೆರಳಿದೆ'.

ವಿ: ಪ್ರಯೋಗಿಸದಿದ್ದ ಮೇಲೆ ಕೃಷ್ಣ ನೀಡಿದ ಬಾಣದಿಂದ ಪ್ರಯೋಜನವೇನು ಎಂಬ ಪ್ರಶ್ನೆಗೆ ಇಲ್ಲಿ ಉತ್ತರವಿದೆ. ಪ್ರಯೋಗಿಸಲಿ, ಬಿಡಲಿ ಆ ಬಾಣವನ್ನು ಕೈಯಲ್ಲಿ ಹಿಡಿದರೆ ಜಯ ನಿಶ್ಚಿತ ಎಂಬುದು ಅದರ ವೈಶಿಷ್ಟ್ಯ. ಅದರಿಂದಾಗಿಯೇ ಅದನ್ನು ಪ್ರದ್ಯುಮ್ನ ಕೈಗೆತ್ತಿಕೊಳ್ಳುತ್ತಲೇ ಹಿಂದೆ ಹೇಳಿದಂತೆ ಸಾಲ್ವ ಅಲ್ಲಿಂದ ಮರಳುವಂತಾಯಿತು ಎಂದರ್ಥ.

ಮಾಯಾವಿ ಸಾಲ್ವ

ತಂ ಸಾಗರೋಪರಿಗಸೌಭಗತಂ ನಿಶಾಮ್ಯ
ಮುಕ್ತೇ ಚ ತೇನ ಮಯಿ ಶಸ್ತ್ರಮಹಾಸ್ತ್ರವರ್ಷೇ ।
ತತ್ ಸನ್ನಿವಾರ್ಯ ತು ಮಯಾ ಶರಪೂಗವಿದ್ಧೋ
ಮಾಯಾಂ ಯುಯೋಜ ಮಯಿ ಪಾಪತಮಃ ಸ ಸಾಲ್ವಃ ॥ ೪೯ ॥

ಅ: 'ಸಮುದ್ರದ ಮೇಲೆ ಸಂಚರಿಸುತ್ತಿದ್ದ ಸೌಭ ವಿಮಾನದಲ್ಲಿ ಸಾಲ್ವ ಕುಳಿತಿದ್ದುದನ್ನು ನಾನು ನೋಡಿದೆ. ಅವನು ನನ್ನ ಮೇಲೆ ಶಸ್ತ್ರಗಳ ಮತ್ತು ಮಹಾಸ್ತ್ರಗಳ ಮಳೆಯನ್ನು ಕರೆಯತೊಡಗಿದ. ನಾನು ಅವುಗಳನ್ನು ತಡೆದು ಬಾಣಗಳ ಸಮೂಹಗಳಿಂದ ಅವನನ್ನು ಹೊಡೆದೆ, ಆಗ ಮಹಾಪಾಪಿಯಾದ ಆ ಸಾಲ್ವನು ನನ್ನ ಮೇಲೆ ಮಾಯೆಯನ್ನು ಪ್ರಯೋಗಿಸಿದ'.

ವಿ: ಸಾಲ್ವ ಆಗ ಪ್ರಯೋಗಿಸಿದ ಮಾಯೆಯಿಂದಾಗಿ ಸೌಭ ವಿಮಾನದಿಂದ ವಸುದೇವ ಕೆಳಗೆ ಬಿದ್ದಂತೆಯೂ, ಅವನನ್ನು ದಾನವರು ಆಯುಧಗಳಿಂದ ತಿವಿದು ಕೊಲ್ಲುತ್ತಿದ್ದಂತೆಯೂ ಕಾಣಿಸಿತು, ರಾವಣ ಸೀತೆಗೆ ರಾಮ–ಲಕ್ಷ್ಮಣರನ್ನು ಕೊಂದು ಹಾಕಿದಂತೆ ಮಾಯೆ ಪ್ರಯೋಗಿಸಿದ್ದಂತೆ ಸಾಲ್ವ ಇಲ್ಲಿ ಕೃಷ್ಣನ ಎದುರೇ ವಸುದೇವನನ್ನು ಕೊಂದು ಹಾಕಿದಂತೆ ಮಾಯೆಯಿಂದ ತೋರಿಸಿದ. ಸರ್ವಸಾಮರ್ಥ್ಯೋಪೇತನಾದ ಸಾಕ್ಷಾತ್ ಶ್ರೀಹರಿಯ ಮುಂದೆಯೇ ಇಂತಹ ಮಾಯೆಯನ್ನು ಪ್ರಯೋಗಿಸುವ ದೈತ್ಯರ ಈ ಪರಿ, ದೈತ್ಯಶಕ್ತಿಗಳು ವರಬಲದಿಂದ ಯಾವ ಹಂತವನ್ನು ತಲುಪಿರುತ್ತವೆ ಎಂಬುದಕ್ಕೆ ನಿದರ್ಶನ. ಹಾಗೆ ಮಾಡುವ ಮೂಲಕ ಕೃಷ್ಣನಿಗೆ ಗೊಂದಲಹುಟ್ಟಿಸಿ ಪಾರಾಗಿ ಹೋಗುವುದು ಅವನ ತಂತ್ರವಾಗಿತ್ತು.

ತಾಃ ಕ್ರೀಡಯಾ ಕ್ಷಣಮಹಂ ಸಮರೇ ನಿಶಾಮ್ಯ
ಜ್ಞಾನಾಸ್ತ್ರತಃ ಪ್ರತಿವಿಧೂಯ ಬಹೂಂಶ್ಚ ದೈತ್ಯಾನ್ ।
ಹತ್ವಾऽऽಶು ತಂ ಚ ಗಿರಿವರ್ಷಿಣಮಾಶು ಸೌಭಂ
ವಾಧ್ರ್ಯೌ ನ್ಯಪಾತಯಮರೀಂದ್ರವಿಭಿನ್ನಬಂಧಮ್ ॥ ೫೦ ॥

ಅ: 'ನಾನು ಕ್ಷಣದಲ್ಲೇ ಲೀಲೆಯಿಂದ ನೋಡಿ ಆ ಮಾಯೆಯನ್ನು ವಿಜ್ಞಾನಾಸ್ತ್ರದಿಂದ ನಾಶ-ಮಾಡಿದೆ. ಬಹುಸಂಖ್ಯೆಯ ದೈತ್ಯರನ್ನು ಕೊಂದೆ. ಸಾಲ್ವ ಬೆಟ್ಟಗಳ ಮಳೆಗರೆಯತೊಡಗಿದಾಗ ನಾನು ಅವನ ಸೌಭ ವಿಮಾನವನ್ನು ಚಕ್ರದಿಂದ ಕತ್ತರಿಸಿ ಸಮುದ್ರದಲ್ಲಿ ಬೀಳಿಸಿದೆ'.

ಕೃಷ್ಣನಿಂದ ಸಾಲ್ವನ ವಧೆ

ತಂ ಸ್ಯಂದನಸ್ಥಮಥೋ ವಿಭುಜಂ ವಿಧಾಯ
ಬಾಣೇನ ತದ್ರಥವರಂ ಗದಯಾ ವಿಭಿದ್ಯ।
ಚಕ್ರೇಣ ತಸ್ಯ ಚ ಶಿರೋ ವಿನಿಕೃತ್ಯ ಧಾತೃ-
ಶರ್ವಾದಿಭಿಃ ಪ್ರತಿನುತಃ ಸ್ವಪುರೀಮಗಾಂ ಚ ॥ ೫೧ ॥

ಅ: 'ಬಳಿಕ ಅವನು ರಥದವನ್ನೇರಿ ಯುದ್ಧಕ್ಕೆ ಬರಲು ಬಾಣದಿಂದ ಅವನ ತೋಳುಗಳನ್ನು ಕತ್ತರಿಸಿ ಗದೆಯಿಂದ ಅವನ ಉತ್ತಮ ರಥವನ್ನು ಮುರಿದು ಹಾಕಿ ಚಕ್ರದಿಂದ ಅವನ ಶಿರಸ್ಸನ್ನು ತುಂಡರಿಸಿ ಬ್ರಹ್ಮ, ರುದ್ರಾದಿ ದೇವತೆಗಳಿಂದ ಸ್ತುತಿಸಲ್ಪಡುತ್ತಾ ನನ್ನ ಪಟ್ಟಣಕ್ಕೆ ಮರಳಿದೆ'.

ವಿ: ಬಾಣ, ಗದೆ ಹಾಗೂ ಚಕ್ರಗಳ ಒಟ್ಟು ಪ್ರಯೋಗ ಇಲ್ಲಿಯ ವಿಶೇಷ.

ತಸ್ಮಾದಿದಂ ವ್ಯಸನಮಾಸ ಹಿ ವಿಪ್ರಕರ್ಷಾ-
ನ್ನೇ ಕಾರ್ಯತಸ್ತ್ವಿತಿ ನಿಗದ್ಯ ಪುನಶ್ಚ ಪಾರ್ಥಾನ್ ।
ಕೃಷ್ಣಾಂ ಚ ಸಾಂತ್ವಯಿತುಮತ್ರ ದಿನಾನ್ಯುವಾಸ
ಸತ್ಯಾ ಚ ಸೋಮಕಸುತಾಮನುಸಾಂತ್ವಯಂತೀ ॥ ೫೨ ॥

ಅ: 'ಈ ಸಾಲ್ವವಧೆಯ ಕಾರ್ಯದಿಂದಾಗಿ ನಾನು ನಿಮ್ಮಿಂದ ದೂರವಿರಬೇಕಾಯಿತು. ಅದರಿಂದಾಗಿ ನಿಮಗೆ ಇಂತಹ ಕಷ್ಟ ಒದಗಿತು'. ಹೀಗೆ ಹೇಳಿ ಅವರನ್ನೂ, ದ್ರೌಪದಿಯನ್ನೂ ಸಮಾಧಾನ ಪಡಿಸಲೆಂದು ಕೃಷ್ಣ ಅಲ್ಲಿ ಕೆಲವು ದಿನಗಳ ಕಾಲ ಉಳಿದ. ಸತ್ಯಭಾಮೆಯೂ ದ್ರೌಪದಿಯನ್ನು ಸಮಾಧಾನ ಪಡಿಸುತ್ತಾ ಉಳಿದಳು.

ಪಾಂಡವರೊಂದಿಗೆ ವನಕ್ಕೆ ನಡೆದವರು

ಪಾಂಡವಾನಾಂ ಚ ಯಾ ಭಾರ್ಯಾಃ ಪುತ್ರಾ ಅಪಿ ಹಿ ಸರ್ವಶಃ ।
ಅನ್ವೇವ ಪಾಂಡವಾನ್ ಯಾತಾ ವನಮತ್ಕೈವ ಸಂಸ್ಥಿತಾಃ ॥ ೫೩ ॥

ಅ: ಪಾಂಡವರ ಇತರ ಪತ್ನಿಯರು ಮತ್ತು ಎಲ್ಲ ಪುತ್ರರೂ ಅವರೊಂದಿಗೆ ಕಾಡಿಗೆ ಬಂದು ಅಲ್ಲಿಯೇ ನೆಲೆಸಿದ್ದರು.

ಧೃಷ್ಟದ್ಯುಮ್ನನೊಂದಿಗೆ ಉಪಪಾಂಡವರು

ಧೃಷ್ಟದ್ಯುಮ್ನಸ್ತತಃ ಕೃಷ್ಣಾಂ ಸಾಂತ್ವಯಿತ್ವೈವ ಕೇಶವಮ್।
ಪ್ರಣಮ್ಯ ಸಮನುಜ್ಞಾತೋ ಭಾಗಿನೇಯೈಃ ಪುರಂ ಯಯೌ ॥ ೫೪ ॥

ಅ: ಧೃಷ್ಟದ್ಯುಮ್ನ ದ್ರೌಪದಿಯನ್ನು ಸಮಾಧಾನಪಡಿಸಿ, ಕೃಷ್ಣನಿಗೆ ವಂದಿಸಿ, ಅವನ ಅಪ್ಪಣೆ ಪಡೆದು ದ್ರೌಪದಿಯ ಪುತ್ರರೊಂದಿಗೆ ತನ್ನ ಪಟ್ಟಣಕ್ಕೆ ತೆರಳಿದ.

ಅಣ್ಣನೊಂದಿಗೆ ದೇವಕಿ

ಧೃಷ್ಟಕೇತುಶ್ಚ ಭಗಿನೀಂ ಕಾಶಿರಾಜಃ ಸುತಾಮಪಿ।
ಪುರಂ ಯಯತುರಾದಾಯ ಕುಂತ್ಯೈ ಕೃವಾನ್ಯಾಃ ಸಹ ಸ್ಥಿತಾಃ ॥ ೫೫ ॥

ಅ: ಧೃಷ್ಟಕೇತುವು ತನ್ನ ತಂಗಿಯಾದ ದೇವಕಿಯನ್ನು, ಕಾಶಿರಾಜನು ತನ್ನ ಮಗಳಾದ ಕಾಳಿಯನ್ನು ಕರೆದುಕೊಂಡು ತಮ್ಮ ಪಟ್ಟಣಗಳಿಗೆ ತೆರಳಿದರು. ಪಾಂಡವರ ಇತರ ಪತ್ನಿಯರು ಕುಂತಿಯೊಂದಿಗೆ ಉಳಿದುಕೊಂಡಿದ್ದರು.

ವಿ: ಕುಂತಿಯೊಂದಿಗೆ ಹಸ್ತಿನಾಪುರದಲ್ಲೇ ಉಳಿದಿದ್ದವರು ನಕುಲ, ಸಹದೇವರ ಪತ್ನಿಯರಾದ ಪಾರ್ವತಿ, ವಿಜಯಾ ಮತ್ತು ಕರೇಣುಮತಿ ಎಂಬ ಮೂವರು.

---

೫೨. ಅಸಾಂನಿಧ್ಯಂ ತು ಕೌರವ್ಯ ಮಮಾನರ್ತೇಷ್ವಭೂತ್ ತದಾ ।
ಯೇನೇದಂ ವ್ಯಸನಂ ಪ್ರಾಪ್ತಾ ಭವಂತೋ ದ್ಯೂತಕಾರಿತಮ್ ॥ – ಭಾರತ (ವನ. ೧೩/೧೪)

೫೪. ತತಃ ಪ್ರಯಾತೇ ದಾಶಾರ್ಹ ಧೃಷ್ಟದ್ಯುಮ್ನೋಽಪಿ ಪಾರ್ಷತಃ ।
ದ್ರೌಪದೇಯಾನುಪಾದಾಯ ಪ್ರಯಯೌ ಸ್ವಪುರಂ ತದಾ ॥ – ಭಾರತ (ವನ. ೨೨/೪೯)

೫೫. ಧೃಷ್ಟಕೇತುಃ ಸ್ವಸಾರಂ ಚ ಸಮಾದಾಯಾಥ ಚೇದಿರಾಟ್ ॥ – ಭಾರತ (ವನ. ೨೨/೫೦)

ಕುಂತಿಯೊಂದಿಗೆ ನಕುಲ ಸಹದೇವರ ಪತ್ನಿಯರು

ಪಾರ್ವತೀ ನಕುಲಸ್ಯಾಸೀದ್ಭಾರ್ಯಾ ಪೂರ್ವಂ ತಿಲೋತ್ತಮಾ ।
ಪೂರ್ವೋಕ್ತೇ ಚೈವ ಯಮಯೋರ್ಭಾರ್ಯೇ ಕುಂತ್ಯಾऽಭಿವಾರಿತಾಃ ॥ ೫೬ ॥

ಅ: ಪಾರ್ವತಿಯು ನಕುಲನ ಹೆಂಡತಿ. ಅವಳು ಹಿಂದೆ ತಿಲೋತ್ತಮೆಯಾಗಿದ್ದವಳು. ಅವಳು ಮತ್ತು ಹಿಂದೆ ಹೇಳಿದ ನಕುಲ ಸಹದೇವರ ಹೆಂಡಂದಿರನ್ನು ಕುಂತಿ ತಡೆದಿದ್ದಳು.

ಸುಭದ್ರೆ ಅಭಿಮನ್ಯುಗಳೊಂದಿಗೆ ಕೃಷ್ಣನ ದ್ವಾರಕಾಪ್ರಯಾಣ

ಸುಭದ್ರಾಮಭಿಮನ್ಯುಂ ಚ ರಥಮಾರೋಪ್ಯ ಕೇಶವಃ ।
ಪಾಂಡವಾನಭ್ಯನುಜ್ಞಾಯ ಸಭಾರ್ಯಃ ಸ್ವಪುರೀಂ ಯಯೌ ॥ ೫೭ ॥

ಅ: ಕೃಷ್ಣನು ಸುಭದ್ರೆಯನ್ನು, ಅಭಿಮನ್ಯುವನ್ನು ರಥದಲ್ಲಿ ಕುಳ್ಳಿರಿಸಿಕೊಂಡು ಪಾಂಡವರಿಗೆ ತಿಳಿಸಿ ಸತ್ಯಭಾಮೆಯೊಂದಿಗೆ ದ್ವಾರಕೆಗೆ ತೆರಳಿದ.

ಉಪಪಾಂಡವರು ದ್ವಾರಕೆಗೆ

ಕಂಚಿತ್ಕಾಲಂ ದ್ರೌಪದೇಯಾ ಉಷ್ಯ ಪಾಂಚಾಲಕೇ ಪುರೇ ।
ಯಯುರ್ದ್ವಾರಾವತೀಮೇವ ತತ್ರೋಷುಃ ಕೃಷ್ಣಲಾಲಿತಾಃ ॥ ೫೮ ॥

---

೫೬. ಪೂರ್ವಂ ಯಾ ತಿಲೋತ್ತಮಾ ಸಾ ಪಾರ್ವತೀನಾಮ್ನೀ ಭೂತ್ವಾ ನಕುಲಸ್ಯ ಭಾರ್ಯಾ ಆಸೀತ್ ಸಾ ಚ ಪೂರ್ವೋಕ್ತೇ ಯಮಯೋರ್ಭಾರ್ಯೇ ಶಲ್ಯಮಾಗಧಯೋಃ ಕನ್ಯೇ ಕುಂತ್ಯಾ ವಾರಿತಾಃ ವನಂ ಪ್ರತಿ ಮಾ ಗಚ್ಛೇದ್ವಮಿತಿ ವಾರಿತಾಃ। – (ಜ.)

೫೬. 'ಪಾರ್ವತೀ ನಕುಲಸ್ಯಾಸೀದಿ'ತ್ಯನೇನ ನಕುಲಸ್ಯೈವ ಉಷಸಃ ಅತಿರಿಕ್ತಾ ಭಾರ್ಯಾ । ತತಃ ಸಹದೇವಸ್ಯಾಪಿ ವಿದ್ಯತ ಇತಿ ಜ್ಞಾತವ್ಯಮ್ । 'ತತೋ ಭಾನುಮತೀಂ ಭಾನುಃ ದದೌ ಮಾದ್ರೀಸುತಾಯ ವೈ । ಸಹದೇವಾಯ ಧರ್ಮಾತ್ಮಾ' ಇತ್ಯಾದಿ ಹರಿವಂಶೇ । – (ಮ.)

೫೭. ಸುಭದ್ರಾಮಭಿಮನ್ಯುಂ ಚ ರಥಮಾರೋಪ್ಯ ಕಾಂಚನಮ್ ।
ಆರುರೋಹ ರಥಂ ಕೃಷ್ಣಃ ಪಾಂಡವೈರಭಿಪೂಜಿತಃ ॥ – ಭಾರತ (ವನ. ೨೨/೪೭)

೫೮. ಆನರ್ತಮೇವಾಭಿಮುಖಾಃ ಶಿವೇನ ಗತ್ವಾ ಧನುರ್ವೇದರತಿಪ್ರಧಾನಾಃ ।
ತವಾತ್ಮಜಾ ವೃಷ್ಣಿಪುರಂ ಪ್ರವಿಶ್ಯ ನ ದೈವತೇಭ್ಯಃ ಸ್ಪೃಹಯಂತಿ ಕೃಷ್ಣೇ ॥
(ದ್ರೌಪದಿಯನ್ನು ಕುರಿತು ಶ್ರೀಕೃಷ್ಣನ ವಚನ) – ಭಾರತ (ವನ. ೧೮೩/೨೪/೨೬)

ಅ: ದ್ರೌಪದೀಪುತ್ರರು ಪಾಂಚಾಲ ಪಟ್ಟಣದಲ್ಲಿ ಸ್ವಲ್ಪಕಾಲ ಇದ್ದು ದ್ವಾರಕೆಗೇ ತೆರಳಿದರು. ಅಲ್ಲಿ ಕೃಷ್ಣಲಾಲಿತರಾಗಿ ವಾಸಿಸಿದರು.

ಧರ್ಮರಾಜನ ವಿಶಿಷ್ಟನೈರಾಗ್ಯ

ತತಃ ಪರಂ ಧರ್ಮರಾಜೋ ನಿರ್ವಿಣ್ಣಃ ಸ್ವಕೃತೇನ ಹ ।
ಭ್ರಾತೃಭಾರ್ಯಾಪದೇ ಕೃಷ್ಣಾಂ ಸ್ಥಾಪಯಾಮಾಸ ಸರ್ವದಾ ॥ ೫೯ ॥

ಅ: ಆ ಬಳಿಕ ಧರ್ಮರಾಜ ತಾನು ಮಾಡಿದ್ದಕ್ಕೆ ಪರಿತಪಿಸಿ ದ್ರೌಪದಿಯನ್ನು ಸೋದರ-ಪತ್ನಿಯ ಸ್ಥಾನದಲ್ಲಿಯೇ ಸದಾ ಇರಿಸಿದನು.

ವಿ: ಇಲ್ಲಿ ಸೋದರ ಪತ್ನಿಯ ಸ್ಥಾನ ಎಂದರೆ ಸಾಕ್ಷಾತ್ ಸೋದರನಾದ ಭೀಮಸೇನನ ಪತ್ನಿಯ ಸ್ಥಾನ ಎಂದು ತಿಳಿಯಬೇಕು. ಈ ಬಗ್ಗೆ ಹೆಚ್ಚು ವಿವರಗಳು ಮುಂದೆ ಬಂದಿವೆ.

ವನದಲ್ಲಿ ಪಾಂಡವರ ನಿತ್ಯವಿಧಿ - ಧರ್ಮರಾಜನ ಅಪೂರ್ವ ಭ್ರಾತೃಪ್ರೇಮ

ಊಷುರ್ವನೇ ಚ ತೇ ಪಾರ್ಥಾ ಮುನಿಶೇಷಾನ್ನಭೋಜಿನಃ ।
ಭುಕ್ತವತ್ಸ್ವೇವಾನುಜೇಷು ಭುಂಕ್ತೇ ರಾಜಾ ಯುಧಿಷ್ಠಿರಃ ॥ ೬೦ ॥

ಅ: ಆ ಪಾಂಡವರು ಕಾಡಿನಲ್ಲಿ ಮುನಿಗಳಿಗೆ ನೀಡಿ ಉಳಿದ ಅನ್ನವನ್ನು ಉಣ್ಣುತ್ತಾ ವಾಸಿಸಿದರು. ರಾಜನಾದ ಯುಧಿಷ್ಠಿರ ತನ್ನ ತಮ್ಮಂದಿರ ಭೋಜನವಾದ ಬಳಿಕವೇ ತಾನು ಉಣ್ಣುತ್ತಿದ್ದ.

ವಿ: ಗೃಹಸ್ಥರ ಕರ್ತವ್ಯದಂತೆ ಅತಿಥಿ ಅಭ್ಯಾಗತರಿಗೆಲ್ಲಾ ಭೋಜನ ಮಾಡಿಸಿದ ನಂತರವೇ ಪಾಂಡವರು ತಾವು ಭೋಜನ ಮಾಡುತ್ತಿದ್ದರು. ಹಾಗೆ ಅತಿಥಿಗಳಿಗೆ ನೀಡಿ ಉಳಿದ ಅನ್ನ ವಿಘಸಾನ್ನ. ಅದು ಅಮೃತಸದೃಶ ಎಂಬ ಮಾತು ಗೀತೆಯಲ್ಲಿದೆ (೪/೩೧). ತಮ್ಮಂದಿರಿಗೂ ಭೋಜನ ಮಾಡಿಸಿದ ನಂತರವೇ ಧರ್ಮರಾಜ ಭೋಜನ ಮಾಡುತ್ತಿದ್ದುದು ವಿಶೇಷ. ಅದಕ್ಕೆ ತಾನು ಜೂಜಾಡಿದ್ದರಿಂದಾಗಿ ಅವರೆಲ್ಲ ವನವಾಸ ಮಾಡಬೇಕಾಯಿತು ಎಂಬ ಪರಿತಾಪ ಕಾರಣವಾಗಿತ್ತು ಎಂದು ತಿಳಿಯಬಹುದು. ಧರ್ಮರಾಜ ಹಾಗೆ ಮಾಡುತ್ತಿದ್ದ ಎನ್ನುವುದು ಧರ್ಮ ಎಂದೂ ಸಹ ತನ್ನನ್ನು ನಂಬಿದವರನ್ನು ಕೈಬಿಡದೇ ಅವರನ್ನು ತನ್ನ ಮುಂದಿಟ್ಟುಕೊಂಡು ಪೋಷಿಸುವುದು ಎಂಬ ತತ್ವಕ್ಕೂ ಸೂಚಕ – **'ಧರ್ಮೋ ರಕ್ಷತಿ ರಕ್ಷಿತಃ'** (ಭಾರತ ೩/೩೦/೮).

---

೫೯. ತತಃ ತಯಾ ಸಾಕಂ ನ ರೇಮ ಇತಿ ಭಾವಃ । – (ವ.)

೬೦. ಭುಕ್ತವತ್ಸು ಚ ವಿಪ್ರೇಷು ಭೋಜಯಿತ್ವಾऽನುಜಾನಪಿ ।
ಶೇಷಂ ವಿಘಸಸಂಜ್ಞಂ ತು ಪಶ್ಚಾದ್ ಭುಂಕ್ತೇ ಯುಧಿಷ್ಠಿರಃ ॥ – ಭಾರತ (ವನ. ೩/೮೩)

ಅಲಂಘ್ಯತ್ವಾತ್ ತದಾಜ್ಞಾಯಾ ಅನುಜಾಃ ಪೂರ್ವಭೋಜಿನಃ ।
ತಸ್ಯಾನಂತರಮೇವೈಕಾ ಭುಂಕ್ತೇ ಸಾ ಪಾರ್ಷತಾತ್ಮಜಾ ॥ ೬೧ ॥

ಅ: ಅವನ ಅಪ್ಪಣೆ ಮೀರಲಾಗದೆ ತಮ್ಮಂದಿರು ಅವನಿಗಿಂತ ಮುಂಚಿತವಾಗಿ ಭೋಜನ ಮಾಡುತ್ತಿದ್ದರು. ಧರ್ಮರಾಜನ ಭೋಜನದ ಅನಂತರ ದ್ರೌಪದಿ ಒಬ್ಬಳೇ ಉಣ್ಣುತ್ತಿದ್ದಳು.

ವಿ: ಅಣ್ಣನಿಗಿಂತ ಮುಂಚಿತವಾಗಿ ಭೀಮಾದಿ ಇತರ ಪಾಂಡವರು ಭೋಜನ ಮಾಡಲು ಅವನ ಒತ್ತಾಯದ ಆಜ್ಞೆಯೇ ಕಾರಣವಾಗಿತ್ತು ಎಂದರ್ಥ. ಅಂತೂ ಕೊನೆಗೆ ಮಹಾರಾಜನ ಭೋಜನ, ಅದರ ಅನಂತರ ಮಹಾರಾಣಿಯ ಭೋಜನ. ಆದರ್ಶ ಗೃಹಸ್ಥಾಶ್ರಮವೆಂದರೆ ಇದೇ. ಕಟ್ಟಕಡೆಯ ಭೋಜನ ಯಜಮಾನ, ಯಜಮಾನಿನಿಯರದಾದಾಗ ಮಾತ್ರ ಅಂತಹ ಗೃಹಸ್ಥಾಶ್ರಮ ಪರಮ ಧಾರ್ಮಿಕವಾದ *ಆಶ್ರಮವಾಗುವುದು ಎಂದರ್ಥ.

ವರ್ಷಕಳೆದ ವನವಾಸ

ಏವಂ ಸದಾ ವಿಷ್ಣುಪರಾಯಣಾನಾಂ
ತತ್ ಪ್ರಾರ್ಪಣೈಕಾನ್ನಭುಜಾಂ ಪ್ರಯಾತಃ ।
ಸಂವತ್ಸರಸ್ತತ್ರ ಜಗಾದ ಕೃಷ್ಣಾ
ಭೀಮಾಜ್ಞಯಾ ಧರ್ಮರಾಜಂ ಸುವೇತ್ರೀ ॥ ೬೨ ॥

ಅ: ಹೀಗೆ ಸದಾ ವಿಷ್ಣುಪರಾಯಣರಾದ, ಅವನಿಗೆ ಸಮರ್ಪಿಸಿದ ಅನ್ನವನ್ನು ಮಾತ್ರವೇ ಉಣ್ಣುವಂತಹ ಆ ಪಾಂಡವರ ವನವಾಸದ ಒಂದು ವರ್ಷ ಕಳೆಯಿತು. ಆಗ ಭೀಮಸೇನನ ಆದೇಶದಂತೆ ಉತ್ತಮ ಜ್ಞಾನಿಯಾದ ದ್ರೌಪದಿಯು ಧರ್ಮರಾಜನಿಗೆ ಹೇಳಿದಳು.

ವಿ: ಪಾಂಡವರ ವನವಾಸದಲ್ಲಿ ಒಂದು ವರ್ಷ ಕಾಲ ಹೀಗೆ ಪೂರೈಸಿತು. ಅವರ ವರ್ಷದ ದಿನಚರಿಯನ್ನು ಹೀಗೆ ತಿಳಿಸಿದರು. ಧರ್ಮರಾಜನಲ್ಲಿ ಆ ಒಂದು ವರ್ಷ ಕಾಲದಲ್ಲಿ ಯಾವುದೇ

---

* ಯುಧಿಷ್ಠಿರಂ ಭೋಜಯಿತ್ವಾ ಶೇಷಮಶ್ನಾತಿ ಪಾರ್ಷತೀ ।
ದ್ರೌಪದ್ಯಾಂ ಭುಜ್ಯಮಾನಾಯಾಂ ತದನ್ನಂ ಕ್ಷಯಮೇತಿ ಚ ॥ – ಭಾರತ (ವನ. ೩/೩/೮೪)

ಭುಕ್ತವತ್ಸ್ವಥ ವಿಪ್ರೇಷು ಸ್ವೇಷು ಭೃತ್ಯೇಷು ಚೈವ ಹಿ ।
ಭುಂಜೀಯಾತಾಂ ತತಃ ಪಶ್ಚಾದವಶಿಷ್ಟಂ ತು ದಂಪತೀ ॥
ದೇವಾನ್ ಋಷೀನ್ ಮನುಷ್ಯಾಂಶ್ಚ ಪಿತೄನ್ ಗೃಹ್ಯಾಶ್ಚ ದೇವತಾಃ ।
ಪೂಜಯಿತ್ವಾ ತತಃ ಪಶ್ಚಾದ್ಗೃಹಸ್ಥಃ ಶೇಷಭುಗ್ಭವೇತ್ ॥ – ಮನುಸ್ಮೃತಿ (೩/೧೧೬, ೧೧೭)

೬೨. ತತ್ಪ್ರಾಪಣಂ ತಸ್ಯೈ ಸಮರ್ಪಣಮ್ । – (ವೇ.)

೬೨. ಸುವೇತ್ರೀ ಶೋಭನನೀತಿಜ್ಞಾ ಕೃಷ್ಣಾ। – (ಜ.)

ವಿಧವಾದ ದುರ್ಯೋಧನಾದಿಗಳ ಮೇಲಿನ ಪ್ರತಿಕ್ರಿಯೆಯ ಪ್ರಯತ್ನ ನಡೆದಿರಲಿಲ್ಲ. ಅದು ಅವನ ಕರ್ತವ್ಯಲೋಪ. ಅಂತಹ ಮಹಾಪಾಪಿಗಳನ್ನು ಶಿಕ್ಷಿಸದೇ ವನವಾಸಿಯಂತೆ ಕಾಲ ಕಳೆಯುವುದು ರಾಜಧರ್ಮವಲ್ಲ ಎಂಬುದನ್ನು ಗಮನಿಸಿ ಭೀಮಸೇನ ಅವನನ್ನು ಕರ್ತವ್ಯಪರಾಯಣನನ್ನಾಗಿ ಮಾಡಲೆಂದು ವಿಷಯದ ಪ್ರಸ್ತಾವನೆಗಾಗಿ ದ್ರೌಪದಿಯನ್ನು ಕಳುಹಿಸಿಕೊಟ್ಟ. ಹಾಗೆ ತೆರಳಿದ ದ್ರೌಪದಿ ಧರ್ಮರಾಜನನ್ನು ಮಾತಿಗೆಳೆದಳು ಎಂದರ್ಥ. ದ್ರೌಪದಿಯು ವಿದ್ಯಾಭಿಮಾನಿ ದೇವತೆಯಾದ ಸಾಕ್ಷಾತ್ ಭಾರತಿಯ ಅವತಾರಳಾದ್ದರಿಂದ **'ಸುವೇಶ್ತ್ರೀ'** ಎಂಬ ಪದ ಅತ್ಯಂತ ಸಾರ್ಥಕವಾದುದು. ಅದರೊಂದಿಗೆ ಲೋಕದೃಷ್ಟಿಯಲ್ಲೂ ದ್ರೌಪದಿ ವಿಪ್ರನೊಬ್ಬನ ಮುಖದಿಂದ ಬೃಹಸ್ಪತಿ ನೀತಿಯನ್ನು ಕೇಳಿ ತಿಳಿದಿದ್ದಳು ಎಂಬ ವಿವರ ಮಹಾಭಾರತದಲ್ಲಿ ಬಂದಿದೆ (ವನಪರ್ವ ಅಧ್ಯಾಯ ೩೨, ಶ್ಲೋ. ೬೧).

ಧರ್ಮರಾಜನ ಧರ್ಮಬೋಧೆಗೆ ಭೀಮ ದ್ರೌಪದಿಯರ ಸಿದ್ಧತೆ

ಅತಿಮಾರ್ದವಯುಕ್ತತ್ವಾದ್ಧರ್ಮರಾಜಶ್ಚತುರ್ದಶೇ ।
ಅಪಿ ವರ್ಷೇ ಗುರುಭಯಾದ್ರಾಜ್ಯಂ ನೇಚ್ಛೇದಿತಿ ಪ್ರಭುಃ ।
ಮಾರುತಿಃ ಪ್ರೇಷಯಾಮಾಸ ಕೃಷ್ಣಾಂ ಪ್ರಸ್ತಾವಹೇತವೇ ॥ ೬೩ ॥

ಅ: ಧರ್ಮರಾಜನು ಅತ್ಯಂತ ಮೃದುಸ್ವಭಾವದಿಂದ ಕೂಡಿದವನಾದ್ದರಿಂದ ಹದಿನಾಲ್ಕನೆಯ ವರ್ಷದಲ್ಲೂ ಭೀಷ್ಮಾದಿ ಹಿರಿಯರ ಭಯದಿಂದಾಗಿ ರಾಜ್ಯವನ್ನು ಪಡೆಯಲು ಬಯಸಲಾರ ಎಂದು ತಿಳಿದು ಸಮರ್ಥನಾದ ಭೀಮಸೇನ ವಿಷಯ ಪ್ರಸ್ತಾವನೆಗಾಗಿ ದ್ರೌಪದಿಯನ್ನು ಕಳುಹಿಸಿದ.

ವಿ: ಧರ್ಮರಾಜ ಅದೇ ರೀತಿ ಮುಂದುವರೆದಲ್ಲಿ ಹದಿಮೂರು ವರ್ಷಗಳ ವನವಾಸ, ಅಜ್ಞಾತವಾಸದ ಅವಧಿ ಪೂರೈಸಿದ ಬಳಿಕವೂ ಕೌರವರಿಂದ ತನ್ನ ರಾಜ್ಯವನ್ನು ಮರಳಿ ಪಡೆಯಲು ಪ್ರಯತ್ನಿಸಲಾರ. ಅದಕ್ಕೆ ಭೀಷ್ಮಾದಿಗಳಂತಹ ಗುರು, ಹಿರಿಯರೊಡನೆ ವಿರೋಧ ಕಟ್ಟಿಕೊಳ್ಳುವುದು ಬೇಡ ಎಂಬ ಅವನ ಅತಿಯಾದ ಮೃದು ಸ್ವಭಾವ ಕಾರಣ. ಅದು ಮುಖ್ಯವಾಗಿ ಅವನ ಕ್ಷತ್ರಿಯ ಧರ್ಮಕ್ಕೆ ಲೋಪ ತರುವಂತಹ ಮಹಾಪರಾಧವಾಗುವುದು. ಹಾಗಾಗದಿರಲಿ ಎಂದು ಆ ಮುನ್ನವೇ ಅವನಿಗೆ ಕರ್ತವ್ಯದ ಬಗ್ಗೆ ಯೋಗ್ಯರೀತಿಯ ಉಪದೇಶವನ್ನು ನೀಡಿ ಅವನನ್ನು ಯುದ್ಧಕ್ಕೆ

---

೬೩. ಗುರುಭಯಾದಿತ್ಯತ್ರ ಗುರೂಣಾಂ= ಭೀಷ್ಮಾದೀನಾಂ ಹನನಭಯಾದಿತ್ಯರ್ಥಃ ॥ – (ವಾ.)

೬೩. ಪ್ರಸ್ತಾವಹೇತವೇ= ಧರ್ಮಕಥಾಪ್ರಸ್ತಾವಾರ್ಥಮ್ ॥ – (ವಾ.)

ಸನ್ನದ್ಧನನ್ನಾಗಿ ಮಾಡುವುದು ಭೀಮನ ಉದ್ದೇಶವಾಗಿತ್ತು. ಅಂತಹ ಉಪದೇಶಕ್ಕೆ ವಿಷಯ ಪ್ರಸ್ತಾವನೆಗಾಗಿ ದ್ರೌಪದಿಯನ್ನು ಭೀಮ ಮುಂಚಿತವಾಗಿ ಕಳುಹಿಸಿಕೊಟ್ಟ. ಭೀಮನ ಈ ರೀತಿ–ಯಾದ ಕಾರ್ಯವೈಖರಿ ಆತನ ಅಪ್ರತಿಮ ಜ್ಞಾನಾದಿ ಗುಣಗಳಿಗೆ ಅತ್ಯುತ್ತಮ ನಿದರ್ಶನ.

ಕ್ಷಮಾ ಸರ್ವತ್ರ ಧರ್ಮೋ ನ ಪಾಪಹೇತುಶ್ಚ ದುರ್ಜನೇ ।
ರಾಜ್ಞಾಂ ಸಾಮರ್ಥ್ಯಯುಕ್ತಾನಾಮಿತಿ ಸಂಸ್ಥಾಪ್ಯ ಶಾಸ್ತ್ರತಃ ॥ ೬೪ ॥

ಅ: ಕ್ಷಮೆ ಎಲ್ಲೆಡೆ ಧರ್ಮವಾಗದು; ಸಮರ್ಥರಾದ ರಾಜರಿಗೆ ದುರ್ಜನರ ವಿಷಯದಲ್ಲಿ ಪಾಪಸಾಧನವೇ ಆಗುವುದು ಎಂಬುದನ್ನು ಶಾಸ್ತ್ರದ ಆಧಾರದಿಂದ ಸಾಧಿಸಬೇಕು.

ಹತ್ವಾ ಚತುರ್ದಶೇ ವರ್ಷೇ ಧಾರ್ತರಾಷ್ಟ್ರಾನರಾಜ್ಯದಾನ್ ।
ಕರ್ತುಂ ರಾಜ್ಯಂ ಪುರೋ ಗಂತಾ ಭವಾನೀತ್ಯಗ್ರಜೇನ ಹ ॥ ೬೫ ॥

ಕಾರಯನ್ ಸತ್ಯಶಪಥಂ ವಿವಾದಸ್ಯ ಕ್ರಮೇಚ್ಛಯಾ।
ಆದಿಶತ್ ಪ್ರಥಮಂ ಕೃಷ್ಣಾಂ ಭೀಮಃ ಸಾ ನೃಪಮಬ್ರವೀತ್ ॥ ೬೬ ॥

ಅ: 'ಹದಿನಾಲ್ಕನೇ ವರ್ಷದಲ್ಲಿ ರಾಜ್ಯ ಕೊಡದ ಕೌರವರನ್ನು ಸಂಹರಿಸಿ ರಾಜ್ಯವನ್ನಾಳಲು ನಾನು ಮುಂದಾಗುವೆ;' ಎಂದು ಧರ್ಮರಾಜನನ್ನು ಸತ್ಯಪ್ರತಿಜ್ಞನನ್ನಾಗಿ ಮಾಡಬೇಕು ಎಂಬ ಕಾರಣದಿಂದ ವಿವಾದಕ್ಕೆ ಉಪಕ್ರಮವನ್ನು ಬಯಸಿ ಭೀಮಸೇನ ಮೊದಲಿಗೆ ದ್ರೌಪದಿಯನ್ನು ಕಳುಹಿಸಿಕೊಟ್ಟ. ಅವಳು ಧರ್ಮರಾಜನಿಗೆ ಹೇಳಿದಳು :

ವಿ: ಹಾಗೆ ದ್ರೌಪದಿಯನ್ನು ಧರ್ಮರಾಜನ ಬಳಿಗೆ ಭೀಮ ಕಳುಹಿಸಿಕೊಡಲು ಕಾರಣವನ್ನು ಇಲ್ಲಿ ವಿವರಿಸಿರುವರು. ಧರ್ಮರಾಜ ಅತ್ಯಂತ ಮೃದು ಸ್ವಭಾವದವನು. ಭೀಷ್ಮಾದಿ ಹಿರಿಯರ ಬಗ್ಗೆಯಂತೂ ಅವನದು ಗುರುಭಾವನೆಯೇ. ಅದರಿಂದಾಗಿ ಹದಿಮೂರು ವರ್ಷಗಳು ಕಳೆದ ಮೇಲೆಯೂ ಅವನು ನ್ಯಾಯಪ್ರಾಪ್ತವಾದ ತಮ್ಮ ರಾಜ್ಯಕ್ಕಾಗಿ ಕೌರವರ ಮೇಲೆ ಯುದ್ಧಕ್ಕೆ ಸಿದ್ಧನಾಗನು, ಅದು ಕ್ಷಾತ್ರಧರ್ಮಕ್ಕೆ ಸರ್ವಥಾ ಸಮ್ಮತವಲ್ಲ. ಅಂತಹ ಧರ್ಮಚ್ಯುತಿ ಮಹಾ–ಪರಾಧವೇ ಸರಿ. ಅಂತಹ ತಪ್ಪು ಅವನಿಂದಾಗದಿರಲಿ ಎಂಬ ಕೃಪಾದೃಷ್ಟಿಯಿಂದ ಭೀಮಸೇನ ಅವನಿಗೆ ಕರ್ತವ್ಯೋಪದೇಶವನ್ನು ಮಾಡಲು ನಿಶ್ಚಯಿಸಿದ. ಅದಕ್ಕೆ ಪೀಠಿಕೆಯಾಗಿ ವಿಷಯ ಪ್ರಸ್ತಾವನೆಗೆಂದು ದ್ರೌಪದಿಯನ್ನು ಧರ್ಮರಾಜನ ಬಳಿಗೆ ಕಳಿಸಿಕೊಟ್ಟ ಎಂದು ಭಾವ.

---

೬೬. ವಿವಾದಸ್ಯ ಕ್ರಮೇಚ್ಛಯೇತ್ಯತ್ರ ಕ್ರಮೇಚ್ಛಯಾ= ಉಪಕ್ರಮೇಚ್ಛಯಾ ॥ –(ವಾ.)

ದ್ರೌಪದಿಯ ಧರ್ಮಬೋಧೆ

ನೈವ ಕ್ಷಮಾ ಕುಜನತಾಸು ನೃಪಸ್ಯ ಧರ್ಮ-
ಸ್ತಾಂ ತ್ವಂ ವೃಥೈವ ಧೃತವಾನಸಿ ಸರ್ವಕಾಲಮ್ ।
ಇತ್ಯುಕ್ತ ಆಹ ನೃಪತಿಃ ಪರಮಾ ಕ್ಷಮೈವ
ಸರ್ವತ್ರ ತದ್ವಿಧೃತಮೇವ ಜಗತ್ ಸಮಸ್ತಮ್ ॥ ೬೭ ॥

ಅ: 'ದುರ್ಜನರ ಬಗ್ಗೆ ಕ್ಷಮೆ ತೋರುವುದು ರಾಜನಿಗೆ ಸರ್ವಥಾ ಧರ್ಮವಲ್ಲ; ನೀನು ಅಂಥವರಲ್ಲಿ ವ್ಯರ್ಥವಾಗಿ ಸದಾಕಾಲ ಕ್ಷಮೆ ವಹಿಸಿರುವಿ'. ದ್ರೌಪದಿಯು ಹೀಗೆನ್ನಲು ಧರ್ಮರಾಜ ನುಡಿದ 'ಕ್ಷಮೆಯೇ ಹಿರಿದಾದ ಧರ್ಮ; ಸಕಲ ಪ್ರಪಂಚವೂ ನಿಂತಿರುವುದೇ ಈ ಕ್ಷಮೆಯಿಂದ'.

ವಿ: ಕ್ಷಮೆ ಉತ್ತಮ ಗುಣವೇ ಆದರೂ ಅದನ್ನು ಸಜ್ಜನರಲ್ಲಿ ತೋರಬೇಕೇ ಹೊರತು ದುರ್ಜನರ ಬಗ್ಗೆ ಸರ್ವಥಾ ತೋರಕೂಡದು ಎಂಬುದು ದ್ರೌಪದಿಯ ಭಾವ; ಆದರೆ ಯಾಂತ್ರಿಕವಾಗಿ ಸರ್ವತ್ರ ಕ್ಷಮೆಯನ್ನೇ ಧರ್ಮವೆಂದು ಪಾಲಿಸುವುದು ಧರ್ಮರಾಜನ ವಿಚಾರ.

ಧರ್ಮರಾಜನ ಕ್ಷಮಾಪ್ರತಿಪಾದನೆ

ಕರ್ತಾ ಚ ಸರ್ವಜಗತಃ ಸುಖದುಃಖಯೋರ್ಹಿ
ನಾರಾಯಣಸ್ತದನುದತ್ತಮಿಹಾಸ್ಯ ಸರ್ವಮ್ ।
ತಸ್ಮಾನ್ನ ಕೋಪವಿಷಯೋಽಸ್ತಿ ಕುತಶ್ಚ ಕಶ್ಚಿತ್
ತಸ್ಮಾತ್ ಕ್ಷಮೈವ ಸಕಲೇಷು ಪರೋಽಸ್ಯ ಧರ್ಮಃ ॥ ೬೮ ॥

ಅ: 'ಸಕಲ ಜಗತ್ತಿನ ಸುಖ ದುಃಖಗಳಿಗೂ ನಾರಾಯಣನೇ ಕರ್ತೃ; ಅವನಿಂದಲೇ ಇದೆಲ್ಲವೂ ಕೊಡಲ್ಪಡುವುದು, ಆದ್ದರಿಂದ ಎಲ್ಲಿಯೂ ಯಾರಬಗ್ಗೆಯೂ ಕೋಪಿಸಿಕೊಳ್ಳಬೇಕಿಲ್ಲ; ಆದ್ದರಿಂದ ಎಲ್ಲರ ಬಗ್ಗೆಯೂ ಕ್ಷಮೆಯೇ ಶ್ರೇಷ್ಠವಾದ ಧರ್ಮ'.

ವಿ: ಸುಖ ದುಃಖಗಳಿಗೆಲ್ಲಾ ಶ್ರೀಹರಿಯೇ ಕರ್ತೃವಾದ್ದರಿಂದ ಅವನು ಅವುಗಳನ್ನು ಯೋಗ್ಯತೆಗೆ ಅನುಗುಣವಾಗಿ ಸರಿಯಾದ ರೀತಿಯಲ್ಲೇ ನೀಡುವುದರಿಂದ ಯಾರ ಬಗ್ಗೆಯೂ ಕೋಪಗೊಳ್ಳುವುದು ತರವಲ್ಲ ಎಂಬುದು ಧರ್ಮರಾಜನ ಭಾವ. ಶ್ರೀಹರಿಯ ಹೊರತು ಬೇರಾರಿಗೂ ಸ್ವಾತಂತ್ರ್ಯ ಎಷ್ಟು ಮಾತ್ರಕ್ಕೂ ಇಲ್ಲವಾದ್ದರಿಂದ ಇತರರ ಮೇಲೆ ಕೋಪಗೊಳ್ಳುವುದು ವ್ಯರ್ಥ ಎಂದರ್ಥ.

---

೬೮. ತದನುದತ್ತಮಿಹಾಸ್ಯ ಸರ್ವಮಿತ್ಯತ್ರ ಇಹ = ಲೋಕೇ ಅಸ್ಯ = ಜಗತಃ ಸರ್ವಂ = ಸುಖದುಃಖಾದಿಕಮ್ । ತದನುದತ್ತಂ = ತೇನ ಪರಮಾತ್ಮನಾ ಅನು = ತತ್ತದ್ಯೋಗ್ಯತಾಮನುಸೃತ್ಯ ದತ್ತಮಿತಿ ಯೋಜನಾ ॥ – (ವಾ.)

ದ್ರೌಪದಿ ಸಾರಿದ ಪುರುಷಪ್ರಯತ್ನದ ಹಿರಿಮೆ

ಇತ್ಯುಕ್ತವಂತಂ ನೃಪಮಾಹ ಪಾರ್ಷತೀ
ಯದಿ ಕ್ಷಮಾ ಸರ್ವನರೇಷು ಧರ್ಮಃ ।
ರಾಜ್ಞಾ ನ ಕೃತ್ಯಂ ನ ಚ ಲೋಕಯಾತ್ರಾ
ಭವೇಜ್ಜಗತ್ ಕಾಪುರುಷೈರ್ವಿನಶ್ಯೇತ್ ॥ ೬೯ ॥

ಅ: ಹೀಗೆ ಹೇಳಿದ ಧರ್ಮರಾಜನಿಗೆ ದ್ರೌಪದಿ ತಿಳಿಸಿದಳು 'ಸರ್ವ ಜನರಲ್ಲೂ ಕ್ಷಮೆಯೇ ಧರ್ಮವೆನ್ನುವುದಾದರೆ, ರಾಜನಿಗೆ ಕೆಲಸವೆಂಬುದೇ ಇರದು. ಲೋಕ ವ್ಯವಹಾರವೂ ನಡೆಯದಾಗುವುದು, ದುರ್ಜನರಿಂದ ಜಗತ್ತು ನಾಶ ಹೊಂದುವುದು'.

ವಿ: ಎಲ್ಲರಿಗೂ ಕ್ಷಮೆ ತೋರುವುದಾದಲ್ಲಿ ನ್ಯಾಯಾನ್ಯಾಯ ನಿರ್ಣಯಕ್ಕೆ ರಾಜನೇಕೆ ಬೇಕು? ಆ ರೀತಿ ಸರ್ವರಿಗೂ ಕ್ಷಮೆ ತೋರುವುದಾದಲ್ಲಿ ಜನ ಜೀವನ ನಡೆಯುವುದಾದರೂ ಎಂತು? ತಮಗೆ ದಂಡನೆಯೇ ಇಲ್ಲವೆಂದಾದರೆ ದುಷ್ಟರು ಇನ್ನೂ ಹೆಚ್ಚಾಗಿ ದುಷ್ಟ ಕಾರ್ಯದಲ್ಲೇ ತೊಡಗುವುದರಿಂದ ಜಗತ್ತು ಉಳಿಯುವುದಾದರೂ ಹೇಗೆ? ಧರ್ಮಪಾಲನೆ, ಅಧರ್ಮಶಾಸನ ರಾಜನ ಕಾರ್ಯವಾಗಿರುವಾಗ ಎಲ್ಲರಿಗೂ ಕ್ಷಮೆ ತೋರುವ ಮೂಲಕ ಅವುಗಳನ್ನು ತೊರೆದಲ್ಲಿ ರಾಜನು ಇದ್ದು ಮಾಡುವುದಾದರೂ ಏನು? ಎಂಬುದು ದ್ರೌಪದಿಯ ಪ್ರತ್ಯುತ್ತರ.

ಸತ್ಯಂ ಚ ವಿಷ್ಣುಃ ಸಕಲಪ್ರವರ್ತಕೋ
ರಮಾವಿರಿಂಚೇಶಪುರಃಸರಾಶ್ಚ ।
ಕಾಷ್ಠಾದಿವತ್ ತದ್ವಶಗಾಃ ಸಮಸ್ತಾ-
ಸ್ತಥಾಽಪಿ ನ ವ್ಯರ್ಥತಾ ಪೌರುಷಸ್ಯ ॥ ೭೦ ॥

ಅ: 'ವಿಷ್ಣುವು ಸರ್ವರಿಗೂ ಪ್ರವರ್ತಕನೆಂಬುದು ನಿಜ. ರಮಾ, ಬ್ರಹ್ಮ, ರುದ್ರ ಮೊದಲಾದವರೆಲ್ಲರೂ ಕಾಷ್ಠಾದಿಗಳಂತೆ ಅವನ ಅಧೀನರಾಗಿರುವುದೂ ಸತ್ಯ. ಆದರೂ, ಪುರುಷ ಪ್ರಯತ್ನ ವ್ಯರ್ಥವಲ್ಲ'.

ವಿ: ವಿಷ್ಣುವು ಸರ್ವತಂತ್ರ ಸ್ವತಂತ್ರ. ರಮಾ, ಬ್ರಹ್ಮಾದಿಗಳಿಗೆಲ್ಲಾ ಅವನೇ ಪ್ರವರ್ತಕ. ಅವರೆಲ್ಲ ಅವನಿಗೆ ಸಂಪೂರ್ಣವಾಗಿ ಅಧೀನರು ಎಂಬ ತತ್ವವನ್ನು ತಿಳಿದ ಜನ ಪುರುಷ ಪ್ರಯತ್ನಕ್ಕೆ

---

೬೯. ಯಥಾ ದಾರುಮಯೀಂ ಯೋಷಾಂ ನರಃ ಸ್ಥಿರಸಮಾಹಿತಃ ।
ಈರಯತ್ಯಂಗಮಂಗಾನಿ ತಥಾ ರಾಜನ್ನಿಮಾಃ ಪ್ರಜಾಃ ॥ – ಭಾರತ (ವನ. ೩/೩೦/೨೩)

೭೦. ತಥಾಽಪಿ ನ ವ್ಯರ್ಥತಾ ಪೌರುಷಸ್ಯೇತ್ಯತ್ರ ಪೌರುಷಸ್ಯ = ಪುರುಷಪ್ರಯತ್ನಸ್ಯ ॥ – (ವಾ.)

ಯಾವ ಸ್ಥಾನವೂ ಇಲ್ಲ ಎಂದು ವಾದಿಸುವುದುಂಟು. ಅಂತಹ ವಾದವನ್ನು ದ್ರೌಪದಿ ನಿರಾಕರಿಸಿದಳು. ವಿಷ್ಣುವಿನ ಸರ್ವಸ್ವಾತಂತ್ರ್ಯವನ್ನು ಒಪ್ಪುವುದು ಎಂದರೆ ಪುರುಷ ಪ್ರಯತ್ನವನ್ನು ಅಲ್ಲಗಳೆಯುವುದು ಎಂದಲ್ಲ, ಪುರುಷಪ್ರಯತ್ನವನ್ನು ದೈವಾನುಗ್ರಹದ ಹಿನ್ನೆಲೆಯಲ್ಲೇ ಯಥಾಶಕ್ತಿ ಮಾಡುತ್ತಾ ಕಾರ್ಯ ಸಾಧನೆಯಲ್ಲಿ ತೊಡಗುವುದೇ ನಿಜವಾದ ಜೀವನ. ಭಗವದ್ಗೀತಾದಿ ಸಮಸ್ತಶಾಸ್ತ್ರಗಳು ಸಾರುವುದೂ ಈ ತತ್ವವನ್ನೇ.

ಜೀವನ ಅಸ್ವಾತಂತ್ರ್ಯದ ಅರ್ಥ

ತದಾಜ್ಞಯಾ ಪುರುಷಶ್ಚೇಷ್ಟಮಾನ-
ಶ್ಚೇಷ್ಟಾನುಸಾರೇಣ ಶುಭಾಶುಭಸ್ಯ।
ಭೋಕ್ತಾ ನ ತಚ್ಚೇಷ್ಟಿತಮನ್ಯಥಾ ಭವೇತ್
ಕರ್ತಾ ತಸ್ಮಾತ್ ಪುರುಷೋಽಪ್ಯಸ್ಯ ವಶ್ಯಃ ॥ ೭೧ ॥

ಅ: 'ಶ್ರೀಹರಿಯ ಪ್ರೇರಣೆಯಂತೆ ಜೀವ ನಡೆಯುವನು. ತನ್ನ ಕರ್ಮಾಚರಣೆಗೆ ತಕ್ಕಂತೆ ಸುಖ ದುಃಖಗಳನ್ನು ಅನುಭವಿಸುವನು; ಅವನ ಕರ್ಮವೆಂದೂ ವ್ಯರ್ಥವಾಗದು. ಆದ್ದರಿಂದ ಜೀವನು ಕರ್ತೃವಾಗಿರುವುದೂ, ಆ ಭಗವಂತನಿಗೆ ಅಧೀನನಾಗಿರುವುದೂ ನಿಜವೇ'.

ವಿ: ಶ್ರೀಹರಿಯು ಸರ್ವಪ್ರೇರಕನಾದರೂ ಜೀವರಿಗೆ ಸುಖದುಃಖಗಳ ಅನುಭವವಿರುವುದರಿಂದ ಅವರ ಪೌರುಷಕ್ಕೆ ಎಂದಿಗೂ ವೈಯರ್ಥ್ಯವಿಲ್ಲ ಎಂದು ತಿಳಿಯಬೇಕು.

ವಿಧಿನಿಷೇಧಗಳು ಯಾರಿಗೆ?

ವೃಥಾ ಯದಿ ಸ್ಯಾತ್ ಪೌರುಷಂ ಕಸ್ಯ ಹೇತೋ-
ರ್ವಿಧಿರ್ನಿಷೇಧಶ್ಚ ಸಮಸ್ತವೇದಗಃ।
ವಿಧೇರ್ನಿಷೇಧಸ್ಯ ಚ ನೈವ ಗೋಚರಃ
ಪುಮಾನ್ ಯದಿ ಸ್ಯಾದ್ಭವತೋ ಹಿ ತೌ ಹರೇಃ ॥ ೭೨ ॥

---

೭೧. ನ ತಚ್ಚೇಷ್ಟಿತಮನ್ಯಥಾ ಭವೇದಿತ್ಯತ್ರ ತಚ್ಚೇಷ್ಟಿತಂ= ತಸ್ಯ ಪುಣ್ಯಪಾಪಫಲಯೋಗ್ಯಜೀವಸ್ಯ ಚೇಷ್ಟಿತಮ್। ಅನ್ಯಥಾ= ಜೀವಾನಾಮಪಿ ಹರ್ಯಧೀನಕರ್ತೃತ್ವಾಭಾವೇ। ತಸ್ಮಾತ್ಪುರುಷಃ ಅಸ್ಯ = ನಾರಾಯಣಸ್ಯ। ವಶ್ಯಃ= ವಶೀಕರಣಯೋಗ್ಯಃ ಸನ್। ಕರ್ತಾ = ಪುಣ್ಯಪಾಪಯೋಃ ಕರ್ತಾ ॥ – (ವಾ.)

೭೧. ಅತ್ರಾಯಂ ಪ್ರಯೋಗಃ। ಜೀವಃ ಕರ್ತಾ ಭೋಕ್ತೃತ್ವಾತ್ ಯಃ ಕರ್ತಾ ನ ಭವತಿ ಸ ಭೋಕ್ತಾಽಪಿ ನ ಭವತಿ। ಯಥಾ ಘಟ ಇತಿ। ಈಶ್ವರಸ್ಯಾಪಿ ಕರ್ತೃತ್ವೇನ ಸಪಕ್ಷತ್ವಾತ್ ತತ್ರ ಭೋಕ್ತೃತ್ವಾಭಾವಾದಸಾಧಾರಣಾನೈಕಾಂತಿಕ ಇತಿ ನಾಶಂಕನೀಯಮ್। – (ಜ.)

ಅ: ಪುರುಷ ಪ್ರಯತ್ನಕ್ಕೆ ಬೆಲೆಯಿಲ್ಲ ಎನ್ನುವುದಾದರೆ ಸಕಲ ವೇದಗಳಲ್ಲಿನ ವಿಧಿ ನಿಷೇಧಗಳು ಯಾರಿಗಾಗಿ ವಿಹಿತವಾಗಿವೆ? ವಿಧಿ ಮತ್ತು ನಿಷೇಧಗಳಿಗೆ ಜೀವ ಒಳಪಡುವುದಿಲ್ಲವಾದರೆ ಅವೆರಡೂ ಶ್ರೀಹರಿಗೇ ಎಂದಾಗುವುದಿಲ್ಲವೇ !

ವಿ: ೧) ಪುರುಷ ಪ್ರಯತ್ನಕ್ಕೆ ಬೆಲೆಯಿರುವುದರಿಂದಲೇ ವೇದಗಳಲ್ಲಿ ವಿಧಿ ನಿಷೇಧಗಳು ವಿಹಿತವಾಗಿವೆ. ವಿಧಿ ನಿಷೇಧಗಳಿಗೆ ಜೀವ ಒಳಪಡುವುದಿಲ್ಲವಾದರೆ ಅವುಗಳ ವಿಧಿ ಯಾರಿಗೆ? ಶ್ರೀಹರಿಗೆ ವಿಧಿ ನಿಷೇಧಗಳನ್ನು ಹೇಳುವುದೇ? ಕರ್ಮಗಳಿಗೆ ಫಲವಿರುವುದರಿಂದ ಜೀವನ ಪ್ರಯತ್ನಕ್ಕೆ ಬೆಲೆಯಿದೆ ಎಂದು ಹಿಂದಿನ ಶ್ಲೋಕದಲ್ಲಿ ಹೇಳಿ, ಈ ಶ್ಲೋಕದಲ್ಲಿ ವಿಧಿ ನಿಷೇಧಗಳನ್ನು ಜೀವನಿಗೆ ವಿಧಿಸಿರುವುದರಿಂದ ಅವನ ಪೌರುಷಕ್ಕೆ ಬೆಲೆಯಿದೆ ಎಂದು ತಿಳಿಸಲಾಗಿದೆ.

೨) ವಿಧಿಗಳು ಎಂದರೆ ಸತ್ಯಂ ವದ, ಧರ್ಮಂ ಚರ, ಮಾತೃದೇವೋ ಭವ, ಪಿತೃದೇವೋ ಭವ, ಅಹರಹಃ ಸಂಧ್ಯಾಮುಪಾಸೀತ ಇತ್ಯಾದಿಗಳು ಎಂದರ್ಥ. ನಿಷೇಧಗಳು ಎಂದರೆ 'ನ ಸುರಾಂ ಪಿಬೇತ್', 'ನ ಪರಸ್ತ್ರಿಯಂ ಗಚ್ಛೇತ್', 'ನ ಫಲಾಂಡುಂ ಭಕ್ಷಯೀತ', 'ನಾನೃತಂ ವದೇತ್' ಇತ್ಯಾದಿಗಳು ಎಂದು ತಿಳಿಯಬೇಕು.

ತೇನೈವ ಲೇಪಶ್ಚ ಭವೇದಮುಷ್ಯ
ಪುಣ್ಯೇನ ಪಾಪೇನ ಚ ನೈವ ಚಾಸೌ ।
ಲಿಪ್ಯೇತ ತಾಭ್ಯಾಂ ಪರಮಃ ಸ್ವತಂತ್ರಃ
ಕರ್ತಾ ತತಃ ಪುರುಷೋಽಪ್ಯಸ್ಯ ವಶ್ಯಃ ॥೭೩॥

ಅ: ವಿಧಿ ನಿಷೇಧಗಳು ಶ್ರೀಹರಿಗೇ ಎನ್ನುವುದಾದರೆ, ಅವನಿಗೆ ಅವುಗಳ ಲೇಪ ಉಂಟು ಎಂದು ಹೇಳಬೇಕಾದೀತು, ಆದರೆ, ಅವನು ಸರ್ವೋತ್ತಮ ಮತ್ತು ಸ್ವತಂತ್ರ ಆದ್ದರಿಂದ ಪುಣ್ಯ-ದಿಂದಾಗಲೀ, ಪಾಪದಿಂದಾಗಲೀ ಸರ್ವಥಾ ಲೇಪವಿಲ್ಲದವನು. ಆದ್ದರಿಂದ ಜೀವನು ಅವನ ಅಧೀನನಾಗಿದ್ದರೂ ಕರ್ತೃ ಎಂದೇ ಸಿದ್ಧವಾಗುವುದು.

ವಿ: ಹೀಗೆ ವಿಧಿ ನಿಷೇಧಗಳು ವೇದವಿಹಿತವಾಗಿದ್ದು ಅವುಗಳಿಗೆ ನಿರಂಜನನಾದ ಪರಮಾತ್ಮ ಭಾಗಿಯಲ್ಲವಾದ್ದರಿಂದ ಜೀವನೇ ಭಾಗಿಯೆಂದು ಒಪ್ಪಲೇಬೇಕು (**'ಕರ್ತಾ ಶಾಸ್ತ್ರಾರ್ಥವತ್ವಾತ್'**

---

೭೩. ಈಶ್ವರಂ ಚಾಪಿ ಭೂತಾನಾಂ ಧಾತಾರಂ ಮಾ ಚ ವೈ ಕ್ಷಿಪ ।
ಶಿಕ್ಷಸ್ವೈನಂ ನಮಸ್ವೈನಂ ಮಾ ತೇಽಭೂದ್ ಬುದ್ಧಿರೀದೃಶೀ ॥ – ಭಾರತ (ವನ. ೩೧/೪)

ಯಸ್ಯ ಪ್ರಸಾದಾತ್ ತದ್ಭಕ್ತೋ ಮರ್ತ್ಯೋ ಗಚ್ಛತ್ಯಮರ್ತ್ಯತಾಮ್ ।
ಉತ್ತಮಾಂ ದೇವತಾಂ ಕೃಷ್ಣೇ ಮಾವಮಂಸ್ಥಾಃ ಕದಾಚನ ॥ – ಭಾರತ (ವನ. ೩೧/೪೨)

ಬ್ರಹ್ಮಸೂತ್ರ ೨/೩/೩೩). ಹಾಗೆ ವಿಧಿ ನಿಷೇಧಗಳಿಗೆ ಪಾತ್ರನೆಂದಾದರೆ ಅವನ ಪೌರುಷಕ್ಕೆ ಬೆಲೆಯಿದೆ ಎಂದೇ ಸಿದ್ಧವಾಗುವುದು ಎಂದರ್ಥ. ಆದ್ದರಿಂದ ಹರಿಸರ್ವೋತ್ತಮತ್ವಾದಿಗಳನ್ನು ಒಪ್ಪುವುದು ಪುರುಷಪ್ರಯತ್ನವನ್ನು ಸರ್ವಥಾ ಅಲ್ಲಗಳೆಯಲು ಕಾರಣವಾಗಬೇಕಿಲ್ಲ ಎಂದು ದ್ರೌಪದಿಯ ಭಾವ.

ಧರ್ಮರಾಜನ ವಿಚಿತ್ರ ದೈವವಾದ

ಇತೀರಿತೋ ಧರ್ಮಜಃ ಕೃಷ್ಣಯೈವ
ನಿರುತ್ತರತ್ವಂ ಗಮಿತಸ್ತ್ವಭರ್ತ್ಸಯತ್ ।
ಕುತರ್ಕಮಾಶ್ರಿತ್ಯ ಹರೇರಪಿ ತ್ವ-
ಮಸ್ವಾತಂತ್ರ್ಯಂ ಸಾಧಯಸೀತಿ ಚೋಕ್ತ್ವಾ ॥ ೭೪ ॥

ಅ: ದ್ರೌಪದಿಯು ಹೀಗೆ ತಿಳಿಸಲು ಧರ್ಮರಾಜ ಅವಳಿಂದಲೇ ನಿರುತ್ತರನಾದ; 'ನೀನು ಕುತರ್ಕವನ್ನು ಅವಲಂಬಿಸಿ ಶ್ರೀಹರಿಗೂ ಅಸ್ವಾತಂತ್ರ್ಯವನ್ನು ಪ್ರತಿಪಾದಿಸುತ್ತಿರುವಿ' ಎಂದು ಅವಳನ್ನು ಗದರಿದ.

ಏ: ದ್ರೌಪದಿ ಹೇಳಿದ ಮಾತಿನಲ್ಲಿ ಯಾವುದೇ ಗೊಂದಲವಿಲ್ಲದ್ದರಿಂದ ಯುಧಿಷ್ಠಿರನಿಗೆ ಅದಕ್ಕೆ ಉತ್ತರ ನೀಡಲು ಸಾಧ್ಯವಾಗಲಿಲ್ಲ. ಅದನ್ನು ಒಪ್ಪಲು ಸಿದ್ಧನಾಗದೆ ಧರ್ಮರಾಜ ಅವಳದು ಕುತರ್ಕ, ಅದರಿಂದ ಶ್ರೀಹರಿಯ ಸ್ವಾತಂತ್ರ್ಯವನ್ನು ಅಲ್ಲಗಳೆದಂತಾಗುವುದು ಎಂದು ಆರೋಪಿಸಿ ಗದರಿದ. ಜೀವನಿಗೆ ಕರ್ತೃತ್ವವನ್ನು ಒಪ್ಪುವುದು ಶ್ರೀಹರಿಯ ಅಸ್ವಾತಂತ್ರ್ಯಕ್ಕೆ ಸರ್ವಥಾ ಸಾಧಕವಲ್ಲ. ಜೀವನಿಗೆ ಸ್ವಾತಂತ್ರ್ಯ ಒಪ್ಪಿದರೆ ಮಾತ್ರ ಶ್ರೀಹರಿಯ ಸ್ವಾತಂತ್ರ್ಯಕ್ಕೆ ಧಕ್ಕೆ ಬರುವುದು ಎಂಬ ವಿವೇಚನೆಯನ್ನು ಧರ್ಮರಾಜ ಗಮನಿಸಿಲ್ಲ ಎಂಬುದು ಸ್ಪಷ್ಟ.

ದ್ರೌಪದಿಯ ಲೋಕಸಂಗ್ರಹ

ಛಲೇನ ತೇನ ಪ್ರತಿಭರ್ತ್ಸಿತಾ ಸಾ
ಕ್ಷಮಾಪಯಾಮಾಸ ನೃಪಂ ಯತಃ ಸ್ತ್ರೀ ।
ವಾಚಾಲತಾ ನಾತಿತರಾಂ ಹಿ ಶೋಭತೇ
ಸ್ತ್ರೀಣಾಂ ತತಃ ಪ್ರಾಹ ವೃಕೋದರಸ್ತಮ್ ॥ ೭೫ ॥

---

೭೫. ಟೀಕಾಸು ತು ವಿಪರ್ಯಯಪರ್ಯವಸಾನಮಜ್ಞಾತ್ವಾ ಪುಣ್ಯಾದಿಲೇಪಾದನೇನ ಅಸ್ವಾತಂತ್ರ್ಯಂ ಸಾಧಿತಮಿತಿ ಬುದ್ಧ್ಯಾ ದೂಷಣಾಭಿಧಾನಾಚ್ಛಲತ್ವಮಿತ್ಯುಕ್ತಮ್ । – (ತಾ.)

ಅ: ಧರ್ಮರಾಜ ಛಲದಿಂದ ದ್ರೌಪದಿಯನ್ನು ಬೈದಾಗ ಅವಳು ಸ್ತ್ರೀಯಾದ್ದರಿಂದ ಅವನನ್ನು ಕ್ಷಮೆ ಯಾಚಿಸಿದಳು. ಅತಿ ಹೆಚ್ಚು ಮಾತುಗಾರಿಕೆ ಸ್ತ್ರೀಯರಿಗೆ ಶೋಭಿಸುವುದಿಲ್ಲ ಅಲ್ಲವೇ ! ಒಳಕ ಭೀಮ ಹೇಳತೊಡಗಿದ.

ವಿ: ದ್ರೌಪದಿ ಧರ್ಮರಾಜನಿಗೆ ಆ ಸಮಯದಲ್ಲಿ ನಿಷ್ಠುರವಾಗಿ ಪ್ರತ್ಯುತ್ತರ ನೀಡದೇ ಸುಮ್ಮನಾದಳು ಎಂದರ್ಥ. ವಾಸ್ತವವಾಗಿ ತಪ್ಪಿದ್ದುದು ಧರ್ಮರಾಜನ ವಾದದಲ್ಲೇ ಹೊರತು, ದ್ರೌಪದಿಯ ವಾದದಲ್ಲಲ್ಲ. ಅವನು ನಿಷ್ಕಾರಣವಾಗಿ ದ್ರೌಪದಿಯ ವಾದವನ್ನು ಛಲ ಎಂದು ಆಪಾದಿಸಿದ. ನಿಜಕ್ಕೂ ಛಲ ಅವನದೇ ಹೊರತು ದ್ರೌಪದಿಯದಲ್ಲ. ಆದರೂ ದ್ರೌಪದಿ ಸ್ತ್ರೀಯರಿಗೆ ಅತಿ ಮಾತುಗಾರಿಕೆ ತರವಲ್ಲ ಎಂಬ ಧರ್ಮವನ್ನು ತಿಳಿಸಿಕೊಡಲೆಂದು ಮುಂದೆ ಮಾತು ಬೆಳೆಸದೇ ಸುಮ್ಮನಾದಳು. ಅದಕ್ಕೆ ಅದನ್ನು ಮುಂದುವರೆಸಲು ಭೀಮ ಸಿದ್ಧನಾಗಿದ್ದುದು ಮುಖ್ಯ ಕಾರಣವಾಗಿತ್ತು ಎಂಬುದನ್ನು ತಿಳಿಯಬೇಕು. ಸ್ತ್ರೀ ಎಂಬ ಕಾರಣದಿಂದ ಧರ್ಮರಾಜ ದ್ರೌಪದಿಯ ಮಾತನ್ನು ಸುಲಭವಾಗಿ ಒಪ್ಪಲು ಸಿದ್ಧನಾಗಲಿಲ್ಲ. ಆದ್ದರಿಂದ ಅವನನ್ನು ಪೂರ್ಣವಾಗಿ ವಿರೋಧಿಸಿ ಒಪ್ಪಿಸುವ ಸಾಮರ್ಥ್ಯ ಸಂಪೂರ್ಣವಾಗಿ ತನಗಿದ್ದರೂ ತಾನು ಆ ಕಾರ್ಯಕ್ಕೆ ತೊಡಗದೇ ಭೀಮನ ಆದೇಶದಂತೆ ಅವನಿಗೇ ಆ ಕಾರ್ಯ ವಹಿಸಿದಳು ಎಂದು ತಿಳಿಯಬೇಕು.

ಭೀಮಸೇನನ ಧರ್ಮೋಪದೇಶ

ರಾಜನ್ ವಿಷ್ಣುಃ ಸರ್ವಕರ್ತಾ ನ ಚಾನ್ಯ-
ಸ್ತತ್ತಂತ್ರಮೇವಾನ್ಯದಸೌ ಸ್ವತಂತ್ರಃ ।
ತಥಾಽಪಿ ಪುಂಸಾ ವಿಹಿತಂ ಸ್ವಕರ್ಮ
ಕಾರ್ಯಂ ತ್ಯಾಜ್ಯಂ ಚಾನ್ಯದತ್ಯಂತಯತ್ನಾತ್ ॥ ೭೬ ॥

ಅ: ರಾಜನೇ, ವಿಷ್ಣುವು ಸರ್ವಕರ್ತೃ; ಬೇರಾರೂ ಅಲ್ಲ. ಉಳಿದುದೆಲ್ಲಾ ಅವನ ಅಧೀನ; ಅವನು ಸ್ವತಂತ್ರ. ಆದರೂ ಜೀವ ತನಗೆ ವಿಹಿತವಾದ ಕರ್ಮವನ್ನು ಆಚರಿಸಲೇಬೇಕು. ವಿಹಿತವಲ್ಲದ್ದನ್ನು ಅತ್ಯಂತ ಪ್ರಯತ್ನದಿಂದ ತೊರೆಯಲೇಬೇಕು.

ವಿ: ದ್ರೌಪದಿಯ ಮಾತನ್ನೇ ನೇರವಾಗಿ ಭೀಮ ಇಲ್ಲಿ ಮುಂದುವರಿಸುತ್ತಿರುವುದನ್ನು ಗಮನಿಸಬೇಕು. ಜೀವನಿಗೆ ಕರ್ತೃತ್ವ ಒಪ್ಪಿದರೆ ವಿಷ್ಣುವಿಗೆ ಅಸ್ವಾತಂತ್ರ್ಯವನ್ನು ಒಪ್ಪಿದಂತಾಗುವುದಿಲ್ಲ

---

೭೬. ತ್ಯಾಜ್ಯಂ ಚಾನ್ಯದತ್ಯಂತಯತ್ನಾದಿತ್ಯತ್ರ ಅನ್ಯತ್= ಅವಿಹಿತಂ ಕರ್ಮ। ಸ್ವೈರಿಣ್ಯಾ ಮಮ ಸಂಗಂ ಕುರ್ವಿತಿ ಬಲಾತ್ಕಾರೇಣ ಗೃಹೀತೇನ ಪುರುಷೇಣ ಗಲೇ ಅರ್ಧಚಂದ್ರಂ ದತ್ವಾ ವಾ ಕಶಯಾ ತಾಡನೇನ ವಾ ಸಾ ಮೋಚನೀಯೇತಿ ಭಾವೇನೋಕ್ತಂ ಅತ್ಯಂತಯತ್ನಾತ್ ತ್ಯಾಜ್ಯಮಿತಿ ॥ –(ವಾ.)

ಎಂದರ್ಥ. ವಿಷ್ಣುವು ಸ್ವತಂತ್ರನಾದರೂ ಜೀವನು ವಿಹಿತ ಕರ್ಮ ಮಾಡಲು, ನಿಷಿದ್ಧ ಕರ್ಮ ತೊರೆಯಲು ಸರ್ವ ರೀತಿಯಲ್ಲೂ ಪ್ರಯತ್ನಶೀಲನಾಗಲೇಬೇಕು ಎಂಬುದು ಇದರ ಭಾವ.

ಜೀವನ ಕರ್ತೃತ್ವದ ಅರ್ಥ

ಪ್ರತ್ಯಕ್ಷಮೇತತ್ ಪುರುಷಸ್ಯ ಕರ್ಮ
ತೇನಾನುಮೇಯಾ ಪ್ರೇರಣಾ ಕೇಶವಸ್ಯ ।
ಸ್ವಕರ್ಮ ಕೃತ್ವಾ ವಿಹಿತಂ ಹಿ ವಿಷ್ಣುನಾ
ತತ್ಪ್ರೇರಣೇತ್ಯೇವ ಬುಧೋಽನುಮನ್ಯತೇ ॥ ೭೭ ॥

ಅ: ಜೀವನು ಕರ್ಮ ಮಾಡುವುದು ಪ್ರತ್ಯಕ್ಷಸಿದ್ಧವಾದುದು. ಅದರಿಂದ ವಿಷ್ಣುವಿನ ಪ್ರೇರಣೆಯನ್ನು ಯುಕ್ತಿಯಿಂದ ತಿಳಿಯಬೇಕಾಗುವುದು. ಜ್ಞಾನಿಯಾದವನು ತನಗೆ ವಿಷ್ಣು ವಿಧಿಸಿದ ಕರ್ತವ್ಯ ಕರ್ಮವನ್ನು ಮಾಡಿ ಅವನ ಪ್ರೇರಣೆಯೆಂದು ಭಾವಿಸುವನು.

---

೭೭. ಪ್ರತ್ಯಕ್ಷಮೇತತ್ಪುರುಷಸ್ಯೇತ್ಯತ್ರ ಏತತ್ = ಸಂಧ್ಯಾವಂದನಯಜನಾದಿಕಂ ಕರ್ಮ ಪ್ರತ್ಯಕ್ಷಂ ತ್ವಯೈವ ಪ್ರತಿದಿನಂ ಕ್ರಿಯಮಾಣತ್ವಾತ್। ತೇನ ಕರ್ಮಣಾ ಕೇಶವಸ್ಯ ಪ್ರೇರಣಾ ಅನುಮೇಯಾ। ಜೀವತ್ವಾವಿಶೇಷೇऽಪಿ ಕಾಮುಕೈರ-ಕ್ರಿಯಮಾಣಂ ಸಂಧ್ಯಾವಂದನಾದಿಕಂ ಆಸಿಕ್ತೈಃ ಕಿಮರ್ಥಂ ಕ್ರಿಯತೇ। ಕಾಮುಕೇಷು ಕಾಮಮೇವ ಉದ್ದೀಪಯತಿ। ಭಗವಾನ್ ಆಸಿಕೇಷು ಶ್ರದ್ಧಾಮೇವ ಉದ್ದೀಪಯತೀತಿ ಸರ್ವೈರ್ವಾಚ್ಯಮ್। ಅತೋ ಹರಿಪ್ರೇರಣೈವ ತನ್ನಿಯಾಮಕತಯಾ ಅನುಮೇಯಾ। ನ ಚ ತತ್ತದ್ಯೋಗ್ಯತಯೈವ ತತ್ತದ್ಘಟನೇತಿ ವಾಚ್ಯಮ್। ಯೋಗ್ಯೇಷ್ವೇವ ಕಸ್ಯಚಿದಿಂದ್ರಾದೇಃ ಪರನಾರೀಕಾಮುಕಸ್ಯ ದರ್ಶನಾತ್। ಕಿಂ ಬಹುನಾ "ವಾಚಂ ದುಹಿತರಂ ತನ್ವೀಮ್" ಇತ್ಯಾದಿನಾ ಬ್ರಹ್ಮಣೋऽಪಿ ತಾತ್ಕಾಲಿಕಕಾಮದರ್ಶನಾತ್। ಸ್ವಸ್ಯಾನಿಷ್ಟಭೂತನರಕಹೇತುಪಾಪಕರ್ಮಣಿ ಪ್ರವರ್ತಕಕರ್ಮಣೋऽಪಿ ಸ್ವಾನಿಷ್ಟತ್ವೇನ ಸ್ವಾನಿಷ್ಟಸ್ಯ ಚ ಸ್ವಕರ್ತೃಕತ್ವಾಯೋಗೇನ ಸ್ವಕರ್ಮಕರ್ತುರಪಿ ಅನ್ಯಪ್ರೇರ್ಯತ್ವನಿಯಮಾತ್। ಕಿಂ ಬಹುನಾ। ಅನಿಷ್ಟಹೇತುಭೂತಾನಂತಕರ್ಮಪರಂಪರಾಯಾ ಅಪಿ ಸ್ವಾನಿಷ್ಟತ್ವನಿಯಮೇನ ಸ್ವತಂತ್ರಪ್ರೇರಕಾಂತರಂ ವಿನಾ ಸ್ವಸ್ಯ ಕರ್ತೃತ್ವಾಸಂಭವಾತ್। ಜಡಂ ಕರ್ಮೈವ ಚೇತನಂ ಪ್ರೇರಯತೀತಿ ಪ್ರಕ್ರಿಯಾಲತಾಂ ತು ಕುಠಾರ ಏವ ಛಿನತ್ತಿ। ನ ಹಿ ಕುಠಾರಃ ಸ್ವಯಮೇವ ದೇವದತ್ತಮುದೂಹ್ಯ ಗಚ್ಛತಿ। ಕಿಂತು ದೇವದತ್ತಕರಧೃತಃ ಸನ್ ತದಿಚ್ಛಯಾ ಛಿನತ್ತಿ। ತದಿಚ್ಛಾಭಾವೇ ನ ಛಿನತ್ತಿ ಚ। ಅತಃ ಸುಷ್ಠೂಕ್ತಂ "ತೇನಾನುಮೇಯಾ ಪ್ರೇರಣಾ ಕೇಶವಸ್ಯ" ಇತಿ। ಕಥಮನ್ಯಥಾ ಭುಂಜಾನಃ ಸ್ವಜಿಹ್ವಾಂ ಸ್ವಯಮೇವ ದಂಶೇತ್। ಅತೋ ಭಗವಾನೇವ ಶರಣಮಿತಿ ಭಾವಃ। ಬುಧೋऽನುಮನ್ಯತ ಇತಿ ವದತಾ "ನಿಷುಸೀದ ಗಣಪತೇ ಗಣೇಷು" ಇತ್ಯಾದಿ ಶ್ರುತಿಂ "ಯೋऽಂತಃ ಪ್ರವಿಶ್ಯ ಮಮ ವಾಚಮಿಮಾಂ ಪ್ರಸುಪ್ತಾಂ ಸಂಜೀವಯತ್ಯಖಿಲಶಕ್ತಿಧರಃ ಸ್ವಧಾಮ್ನಾ। ಅನ್ಯಾಂಶ್ಚ ಹಸ್ತಚರಣಶ್ರವಣತ್ವಗಾದೀನ್ ಪ್ರಾಣಾನ್ ನಮೋ ಭಗವತೇ ಪುರುಷಾಯ ತುಭ್ಯಮ್" ಇತಿ ಸ್ಮೃತಿಂ ಚ ಸ್ಮಾರಯತಿ ॥ – (ವಾ.)

೭೭. ಏತದ್ಧೀಜನಾದಿನಾನಾರೂಪಂ ಪುರುಷಸ್ಯ ಕರ್ಮಪ್ರತ್ಯಕ್ಷಂ ಪುರುಷನಿಷ್ಪತಯಾ ಪ್ರತ್ಯಕ್ಷಸಿದ್ಧಮ್ । ..... ಅನುಮೇಯಾ ವಿಮತಂ ಕರ್ತೃತ್ವಮೀಶ್ವರಾಧೀನಮ್ । ಕ್ವಚಿತ್ಕೃತಿಹತತ್ವಾತ್। ರಾಜಪುರುಷಕರ್ತೃತ್ವವದಿತ್ಯನುಮಾನೇನ ಜ್ಞಾತವ್ಯಾ । .... ವಿಷ್ಣುನಾ ವಿಹಿತಂ। ಶ್ರುತಿಸ್ಮೃತೀ ಮಮೈವಾಜ್ಞೇ ಇತಿವಚನಾತ್। – (ಜ.)

ಎ: ಜೀವನು ತಾನು ಕರ್ಮ ಮಾಡುವುದನ್ನು ತನ್ನ ಸಾಕ್ಷಿ ಪ್ರತ್ಯಕ್ಷದಿಂದ ತಿಳಿಯುವನು. ಇತರರ ಕರ್ಮಗಳನ್ನು ಪ್ರತ್ಯಕ್ಷದಿಂದ ಕಾಣುವನು, ಎಂದರೆ ಜೀವ ತಾನು ಕರ್ಮ ಮಾಡುತ್ತಿಲ್ಲ ಎಂದು ತಿಳಿಯಲು ಸರ್ವಥಾ ಸಾಧ್ಯವಿಲ್ಲ ಎಂದು ಸಿದ್ಧವಾಗುವುದು. ಆದ್ದರಿಂದ ಜೀವನಿಗೆ ಕರ್ತೃತ್ವವನ್ನು ಅಲ್ಲಗಳೆಯಲು ಶಕ್ಯವಿಲ್ಲ. ಆದರೆ, ಅಂತಹ ಯಾವುದೇ ಕಾರ್ಯವನ್ನು ಮಾಡುವಾಗಲೂ ನಾನೇ ಮಾಡುವೆ ಎಂಬ ಸ್ವಾತಂತ್ರ್ಯವೂ ಸಹ ಅನುಭವಕ್ಕೆ ಬರುವುದಿಲ್ಲ. ಎಂದರೆ ಕರ್ತೃತ್ವಾನುಭವ–ದೊಂದಿಗೆ ಅಸ್ವಾತಂತ್ರ್ಯಾನುಭವವೂ ಜೀವನಿಗೆ ಇದ್ದೇ ಇದೆ. ಆದ್ದರಿಂದ ಜೀವ ತನ್ನನ್ನು ಅಸ್ವತಂತ್ರ ಕರ್ತೃ ಎಂದು ಭಾವಿಸಿ ಸ್ವತಂತ್ರ ಕರ್ತೃವಾದವನು ಶ್ರೀಹರಿಯೇ ಎಂದು ತಿಳಿದು ತನ್ನ ವಿಹಿತ ಕರ್ಮಗಳಲ್ಲಿ ತೊಡಗುವುದು ವಿಹಿತ ಎಂದು ಭಾವ.

ಕೇವಲದೈವವಾದವು ಅಧೋಗತಿಯ ಸಾಧನ

ತೇನೈತಿ ಸಮ್ಯಗ್ಗತಿಮಸ್ಯ ವಿಷ್ಣೋ-
ರ್ಜನೋऽಶುಭೋ ದೈವಮಿತ್ಯೇವ ಮತ್ವಾ।
ಹಿತ್ವಾ ಸ್ವಕಂ ಕರ್ಮ ಗತಿಂ ಚ ತಾಮಸೀಂ
ಪ್ರಯಾತಿ ತಸ್ಮಾತ್ ಕಾರ್ಯಮೇವ ಸ್ವಕರ್ಮ ॥ ೭೮ ॥

ಅ: ಅದರಿಂದ ಶ್ರೀಹರಿಯ ಅನುಗ್ರಹದಿಂದ ಸದ್ಗತಿಯನ್ನು ಪಡೆಯುವನು. ತಾಮಸ ಜೀವಿ ದೈವವೇ ಎಲ್ಲದಕ್ಕೂ ಕಾರಣ ಎಂದು ಬಗೆದು ಕರ್ಮವನ್ನು ತ್ಯಜಿಸಿ ತಾಮಸಗತಿಯನ್ನು ಹೊಂದುವನು. ಆದ್ದರಿಂದ ಪ್ರತಿಯೊಬ್ಬನೂ ತನ್ನ ಕರ್ತವ್ಯವನ್ನು ಪಾಲಿಸಲೇಬೇಕು.

ಎ: ಹೀಗೆ ಶ್ರೀಹರಿಯ ಪ್ರೇರಣೆಯೆಂದು ಭಾವಿಸಿ ವಿಹಿತ ಕರ್ಮವನ್ನು ಮಾಡುವುದರಿಂದ ಸದ್ಗತಿ ಲಭಿಸುವುದು. ಅದನ್ನು ಬಿಟ್ಟು ಎಲ್ಲ ಕರ್ತೃತ್ವವೂ ಶ್ರೀಹರಿಯದೇ ಎಂದು ಸ್ವಕರ್ತವ್ಯವನ್ನು ತೊರೆದಲ್ಲಿ ಅಧೋಗತಿ ನಿಶ್ಚಿತ ಎಂದರ್ಥ. ತಾನು ಸ್ವತಂತ್ರ ಕರ್ತೃ ಎಂದು ಭ್ರಮಿಸಿವುದು ಹೇಗೆ ಅಧೋಗತಿಗೆ ಸಾಧನವೋ, ತಾನು ಸರ್ವಥಾ ಅಕರ್ತೃ ಎಂದು ಭಾವಿಸುವುದೂ ಸಹ ಅಧೋಗತಿಗೆ ಸಾಧನ ಎಂಬುದು ಇಲ್ಲಿಯ ಮುಖ್ಯ ಪ್ರಮೇಯ. ದೇವರೇ ಇಲ್ಲ ಎಂಬುದು ನಾಸ್ತಿಕ್ಯವಾದದಂತೆ ದೋಷವೇ ಅಲ್ಲ ಎಂಬುದು ಮತ್ತೊಂದು ಬಗೆಯ ನಾಸ್ತಿಕ್ಯ.

---

೭೮. ತೇನೈತಿ ಸಮ್ಯಗ್ಗತಿಮಿತ್ಯತ್ರ ಗಮ್ಯತೇ ಇತಿ ಗತಿಃ= ಸ್ಥಾನಂ ಅಸ್ಯ= ವಿಷ್ಣೋಃ ಸಮ್ಯಕ್‌ಸ್ಥಾನಂ ವೈಕುಂಠಾದಿಕಂ ಏತೀತಿ ಸಂಬಂಧಃ। ವಿಷ್ಣೋಃ ಸರ್ವಗತತ್ವೇನ ಸರ್ವಸ್ಯಾಪಿ ವಿಷ್ಣುಸ್ಥಾನತ್ವಾತ್ ಸಮ್ಯಗ್ಗತಿಮಿತ್ಯುಕ್ತಮ್। ವಿಶೇಷೇಣ ಸನ್ನಿಧಾನಸ್ಥಾನಮಿತ್ಯರ್ಥಃ। ಅಸ್ಯ ವಿಷ್ಣೋಃ ಪ್ರಸಾದಾದಿತಿ ವಾ। ಅಶುಭಃ= ಶುಭಬುದ್ಧಿರಹಿತಃ ಅವಿವೇಕೀತಿ ಯಾವತ್। ಕೇವಲಮಶುಭಸ್ಯ ದೈವೇ ಶ್ರದ್ಧಾಯೋಗಾತ್। ದೈವಮೇವ ಮತ್ವಾ= ಕರ್ತ್ರಿತಿ ಮತ್ವಾ ॥ –(ವಾ.)

ಜೀವನ ಕರ್ತೃತ್ವದ ವಿವೇಚನೆ

ಜ್ಞಾತವ್ಯಂ ಚೈವಾಸ್ಯ ವಿಷ್ಣೋರ್ವಶತ್ವಂ
ಕರ್ತವ್ಯಂ ಚೈವಾತ್ಮನಃ ಕಾರ್ಯಕರ್ಮ ।
ಪ್ರತ್ಯಕ್ಷೈಷಾ ಕರ್ತೃತಾ ಜೀವಸಂಸ್ಥಾ
ತಥಾऽऽಗಮಾದನುಮಾನಾಚ್ಚ ಸರ್ವಮ್ ॥ ೭೯ ॥

ಅ: ಈ ಜೀವನು ವಿಷ್ಣುವಿನ ಅಧೀನ ಎಂದು ತಿಳಿಯಲೇಬೇಕು. ತನ್ನ ಕರ್ತವ್ಯ ಕರ್ಮಗಳನ್ನು ತಪ್ಪದೇ ಆಚರಿಸಲೇಬೇಕು. ಜೀವನಲ್ಲಿರುವ ಕರ್ತೃತ್ವ ಪ್ರತ್ಯಕ್ಷದಿಂದ ಸಿದ್ಧವಾಗಿರುವಂತಹುದು. ಅದರಂತೆಯೇ ಆಗಮಗಳಿಂದಲೂ, ಅನುಮಾನದಿಂದಲೂ ಎಲ್ಲವೂ ವಿಷ್ಣ್ವಧೀನ ಎಬುದೂ ಸಿದ್ಧವಾಗಿದೆ.

ಏ: ನಾನು ಮಾಡುತ್ತಿರುವೆ ಎಂಬುದು ಪ್ರತ್ಯಕ್ಷಸಿದ್ಧವಾಗಿರುವಂತೆಯೇ, ತಾನು ಸ್ವತಂತ್ರವಾಗಿ ಮಾಡುತ್ತಿಲ್ಲ ಎಂಬುದೂ ಸಾಕ್ಷಿಪ್ರತ್ಯಕ್ಷದಿಂದ ಸಿದ್ಧವಾಗಿರುವಂತಹುದು. ಹೀಗೆ ಪ್ರತ್ಯಕ್ಷದಿಂದ ಕರ್ತೃತ್ವ ಹಾಗೂ ಅಸ್ವಾತಂತ್ರ್ಯಗಳು ಎರಡೂ ಸಿದ್ಧವಾಗಿರುವುದರಿಂದ ಅದಕ್ಕೆ ಪ್ರೇರಕನಾದ ಒಬ್ಬ ಸ್ವತಂತ್ರಕರ್ತೃ ಇರಲೇಬೇಕು ಎಂಬುದು ಅನುಮಾನದಿಂದ ಸಿದ್ಧವಾಗುವುದು. ಅಂತಹ ಸ್ವತಂತ್ರ ಕರ್ತೃವು ಶ್ರೀಹರಿಯೇ ಎಂಬುದು 'ನರ್ತೇ ತ್ವತ್ ಕ್ರಿಯತೇ ಕಿಂಚನಾರೇ', 'ತೇನ ವಿನಾ ತೃಣಮಪಿ ನ ಚಲತಿ' ಮೊದಲಾದ ಆಗಮಗಳಿಂದ ಸಿದ್ಧಪಡುವುದು. ಹೀಗೆ ಪ್ರತ್ಯಕ್ಷ, ಅನುಮಾನ ಹಾಗೂ ಆಗಮಗಳಿಂದ ಜೀವನ ಅಸ್ವತಂತ್ರಕರ್ತೃತ್ವದಂತೆ ವಿಷ್ಣುವಿನ ಸ್ವತಂತ್ರಕರ್ತೃತ್ವವೂ ಸಿದ್ಧವಾಗುವುದು ಎಂದರ್ಥ.

ಹರಿಸ್ವಾತಂತ್ರ್ಯದ ಅಂತರಾರ್ಥ

ವಿಷ್ಣೋರ್ವಶೇ ತನ್ನ ಹೇಯಂ ದ್ವಯಂ ಚ
ಜಾನನ್ ವಿದ್ವಾನ್ ಕುರುತೇ ಕಾರ್ಯಕರ್ಮ ।
ತತ್ಪ್ರೇರಕಂ ವಿಷ್ಣುಮೇವಾಭಿಜಾನನ್
ಭವೇತ್ ಪ್ರಮಾಣತ್ರಿತಯಾನುಗಾಮೀ ॥ ೮೦ ॥

ಅ: ಎಲ್ಲವೂ ವಿಷ್ಣುವಿನ ಅಧೀನವಾಗಿರುವುದರಿಂದ ಎರಡನ್ನೂ ಬಿಡುವಂತಿಲ್ಲ. ಹೀಗೆ ತಿಳಿದು ಜ್ಞಾನಿಯಾದವನು ಕರ್ತವ್ಯ ಕರ್ಮವನ್ನು ಆಚರಿಸುವನು. ವಿಷ್ಣುವನ್ನೇ ಅದರ ಪ್ರೇರಕನೆಂದು ತಿಳಿದು ಮೂರು ಪ್ರಮಾಣಗಳನ್ನೂ ಸಹ ಅನುಸರಿಸಿದವನಾಗುವನು.

ಎ: ಹೀಗೆ ಜೀವನ ಪರಾಧೀನಕರ್ತೃತ್ವ ಮತ್ತು ಶ್ರೀಹರಿಯ ಸ್ವತಂತ್ರಕರ್ತೃತ್ವ ಎರಡನ್ನೂ ಸರ್ವಥಾ ಬಿಡುವಂತಿಲ್ಲವಾದ್ದರಿಂದ ಜ್ಞಾನಿಯಾದವನು ವಿಷ್ಣುವು ಪ್ರೇರಕನಾಗಿರುವನು ಎಂದು ತಿಳಿದೇ ತನ್ನ ಕರ್ತವ್ಯ ಕರ್ಮಗಳನ್ನು ಪ್ರಯತ್ನ ಪೂರ್ವಕ ಆಚರಿಸಿ ಅತ್ಯಂತ ಪ್ರಾಮಾಣಿಕವಾಗಿ ವರ್ತಿಸುವನು ಎಂದರ್ಥ.

ಪೂರ್ಣಪ್ರಮಾಣದ ಪರಿಕಲ್ಪನೆ

ಪೂರ್ಣಂ ಪ್ರಮಾಣಂ ತತ್ತ್ರಯಂ ಚಾವಿರೋಧೇ-
ನೈಕತ್ರಸ್ಥಂ ತತ್ತ್ರಯಂ ಚಾವಿರೋಧಿ ।
ಪೃಥಙ್ಮಧ್ಯಂ ಚಾಪ್ರಮಾಣಂ ವಿರೋಧಿ
ಸ್ಯಾತ್ ತತ್ ತಸ್ಮಾತ್ ತ್ರಯಮೇಕತ್ರ ಕಾರ್ಯಮ್ ॥ ೮೧ ॥

ಅ: ಈ ಮೂರೂ ಪ್ರಮಾಣಗಳು ಪರಸ್ಪರ ವಿರೋಧವಾಗದೇ ಒಂದೆಡೆ ಸೇರಿದಾಗ ಅದು ಪೂರ್ಣಪ್ರಮಾಣ ಎನ್ನಿಸುವುದು. ಅವು ಮೂರು ಭಿನ್ನ ಭಿನ್ನ ವಿಷಯಗಳಲ್ಲಿ ವಿರೋಧವಿಲ್ಲದಂತೆ

೭೯/೮೦. ಪ್ರತ್ಯಕ್ಷಮೇತದಿತಿ ಪ್ರಾಗುಕ್ತಪ್ರತ್ಯಕ್ಷಮನೂದ್ಯ ಅಧಿಕಮಪ್ಯಾಹ। ಪ್ರತ್ಯಕ್ಷೈಷೇತಿ। ಜೀವಸಂಸ್ಥಾ ಏಷಾ ಕರ್ತೃತಾ ಪ್ರತ್ಯಕ್ಷಾ= ಪ್ರತ್ಯಕ್ಷಪ್ರಮಾಣಸಿದ್ಧಾ। ಅಹಮಿದಂ ಕರೋಮೀತಿ ಸಾಕ್ಷಿಣಾ ಸರ್ವೈರನುಭೂಯಮಾನತ್ವಾತ್। ತಥಾ ಆಗಮಾತ್='ಕುರ್ವನ್ನೇವೇಹ ಕರ್ಮಾಣಿ ಜಿಜೀವಿಷೇಚ್ಛತಂ ಸಮಾಃ'' ಇತ್ಯಾದ್ಯಾಗಮಾತ್। ತಥಾ ಅನುಮಾನಾತ್= ಜೀವಃ ಯಜನಾದಿಕರ್ತಾ ಭವಿತುಮರ್ಹತಿ ತಜ್ಜನ್ಯಫಲಭೋಕ್ತೃತ್ವಾತ್ ವ್ಯತಿರೇಕೇಣ ಘಟವದಿತ್ಯನುಮಾನಾಚ್ಚ ಸಿದ್ಧಾ। ನ ಚಾಸಿದ್ಧೋ ಹೇತುಃ ''ಜ್ಯೋತಿಷ್ಟೋಮೇನ ಸ್ವರ್ಗಕಾಮೋ ಯಜೇತ'' ಇತಿ ಶ್ರುತ್ಯಾ ಯಷ್ಟುಃ ಸ್ವರ್ಗಫಲಭೋಕ್ತೃತ್ವಸ್ಯ ನಿರ್ಣೀತತ್ವಾತ್। ತದುಕ್ತಂ ಸೂತ್ರಕೃತಾ ''ಕರ್ತಾ ಶಾಸ್ತ್ರಾರ್ಥವತ್ವಾತ್'' ಇತಿ। ತಥಾ ಸರ್ವಂ= ಜೀವಗತಕರ್ತೃತ್ವಭೋಕ್ತೃತ್ವಾದಿಕಂ ವಿಷ್ಣೋರ್ವಶೇ ತಿಷ್ಠತಿ। ಏತದಪಿ ಜ್ಞಾನಿನಾಂ ಪ್ರತ್ಯಕ್ಷಾತ್। ''ನ ಋತೇ ತ್ವತ್ಕ್ರಿಯತೇ ಕಿಂಚನಾರೇ'' ಇತ್ಯಾಗಮಾತ್। ಕರ್ತೃತ್ವಾದಿಕಂ ಈಶ್ವರವಶಂ ಕಾರ್ಯತ್ವಾತ್। ಅಂಕುರವದಿತ್ಯನುಮಾನಾಚ್ಚ ಸಿದ್ಧಮ್। ತತ್= ತಸ್ಮಾತ್ಕಾರಣಾತ್ ಜೀವಗತಕರ್ತೃತ್ವಸ್ಯ ಈಶ್ವರಗತಕರ್ತೃತ್ವಸ್ಯ ಚ ಪ್ರಮಾಣತ್ರಿತಯಸಿದ್ಧತ್ವಾತ್। ದ್ವಯಂ ಚ= ಜೀವಕರ್ತೃತ್ವಂ ಈಶಕರ್ತೃತ್ವಂ ಚೇತಿ ದ್ವಯಂ ಚ ನ ಹೇಯಮಿತಿ ಜಾನನ್= ವಿದ್ವಾನ್ ಕಾರ್ಯಕರ್ಮ= ಸ್ವವಿಹಿತತಯಾ ಕರ್ತುಂ ಯೋಗ್ಯಂ ಕರ್ಮ ಕುರುತೇ। ನ ಕೇವಲಂ ಜೀವಗತಕರ್ತೃತ್ವಾದಿಕಮೀಶ್ವರವಶಂ ಕಿಂತು ತೇಷಾಂ ಜೀವಾನಾಮಪಿ ಪ್ರೇರಕಂ ವಿಷ್ಣುಮಭಿಜಾನನ್ನೇವ ಪ್ರಮಾಣತ್ರಿತಯಾನುಗಾಮೀ ಭವೇತ್= ಕರ್ತವ್ಯಂ ಕರ್ಮ ಕುರ್ಯಾತ್ ಈಶ್ವರವಶತ್ವಂ ಚ ಜಾನೀಯಾದಿತ್ಯರ್ಥಃ। ಅನ್ಯಥಾ ಪ್ರಾಮಾಣಿಕಾರ್ಥಪರಿತ್ಯಾಗೇನ ಸ್ವಯಮಪ್ರಾಮಾಣಿಕಃ ಸ್ಯಾದಿತಿ ಭಾವಃ ॥ – (ವಾ.)

೭೯. ಯಶ್ಚ ದಿಷ್ಟಪರೋ ಲೋಕೇ ಯಶ್ಚಾಪಿ ಹತವಾದಿಕಃ ।
ಉಭಾವಪಿ ಶಠಾವೇತೌ ಕರ್ಮಬುದ್ಧಿಃ ಪ್ರಶಸ್ಯತೇ ॥ – ಭಾರತ (ವನ. ೩೧/೨೩)

೭೯. ದುರ್ಮನುಷ್ಯಾ ಹಿ ನಿರ್ವೇದಮಫಲಂ ಸ್ವಾರ್ಥಘಾತಕಮ್ ।
ಅಶಕ್ತಾಃ ಶ್ರಿಯಮಾಹರ್ತುಮಾತ್ಮನಃ ಕುರ್ವತೇ ಪ್ರಿಯಮ್ ॥ – ಭಾರತ (ವನ. ೩೩/೧೪)

ಪ್ರವರ್ತಿಸಿದರೆ ಮಧ್ಯಮ ಪ್ರಮಾಣವಾಗುವುದು. ಪರಸ್ಪರ ವಿರೋಧಿಯಾಗಿ ವರ್ತಿಸಿದರೆ ಅದು ಅಪ್ರಮಾಣವೆನ್ನಿಸುವುದು. ಆದ್ದರಿಂದ ಮೂರನ್ನೂ ಒಂದೇ ವಿಷಯದಲ್ಲಿ ವಿರುದ್ಧವಾಗದಂತೆ ಹೊಂದಿಸಿಕೊಳ್ಳಬೇಕು.

---

೮೧. ತತ್ತ್ರಯಂ = ಪ್ರಮಾಣತ್ರಿತಯಂ ಅವಿರೋಧೇನ ಏಕಸ್ಮಿನ್ನರ್ಥೇ ಸಂಸ್ಕೃತಂ ಪೂರ್ಣಂ ಪ್ರಮಾಣಮಿತ್ಯುಚ್ಯತೇ। ಯಥಾ ಜೀವಕರ್ತೃತ್ವೇ ಈಶ್ವರಕರ್ತೃತ್ವೇ ಚೋಕ್ತಂ ಪ್ರಮಾಣತ್ರಿಕಮ್। ತತ್ತ್ರಯಂ = ಪ್ರಮಾಣತ್ರಿತಯಂ ಪೃಥಕ್ = ಭಿನ್ನಾರ್ಥೇ ಅವಿರೋಧಿ ಚೇತ್ = ಭಿನ್ನಭಿನ್ನಾರ್ಥತಯಾ ವಿರೋಧರಹಿತಂ ಚೇದಿತ್ಯರ್ಥಃ। ಯಥಾ ಘಟವಿಷಯಕಪ್ರತ್ಯಕ್ಷಂ ಪರ್ವತಾರ್ವಾಗ್ಭಾಗಸ್ಥಿತವಹ್ನಿಪ್ರಮಾಪಕಮನುಮಾನಮ್। ನದೀತೀರೇ ಫಲಸಂಸರ್ಗಬೋಧಕಂ ''ನದೀತೀರೇ ಪಂಚ ಫಲಾನಿ ಸಂತಿ'' ಇತಿ ವಾಕ್ಯಮ್। ಇದಂ ಹಿ ಪ್ರಮಾಣತ್ರಿತಯಂ ಭಿನ್ನಭಿನ್ನಾರ್ಥವಿಷಯಂ ಪರಸ್ಪರಾವಿರೋಧಿ ಚ। ತಥಾ ಪೃಥಗರ್ಥಸ್ಥಿತಂ ಪ್ರಮಾಣತ್ರಿಕಂ ಅವಿರೋಧಿ ಚೇತ್ ಮಧ್ಯಂ = ಮಧ್ಯಪ್ರಮಾಣಂ ಏಕೈಕಸ್ಮಿನ್ನರ್ಥೇ ಏಕೈಕಮೇವ ಪ್ರಮಾಣಂ = ಪ್ರಮಾಪಕಂ ನ ತು ಪೂರ್ವವದೇಕಸ್ಮಿನ್ನೇವಾರ್ಥೇ ಪ್ರಮಾಣತ್ರಿಕಮಸ್ತು। ಅತಃ ಪೂರ್ಣತ್ವಾಭಾವಾತ್ ಮಧ್ಯಮಿತಿ ಭಾವಃ। ತಥಾ ಯದ್ವಿರೋಧಿ = ಪ್ರಮಾಣತ್ರಿತಯೇನ ವಾ ಏಕೈಕಪ್ರಮಾಣೇನ ವಾ ವಿರೋಧಿ। ತದಪ್ರಮಾಣಂ ಚೇತಿ ಚಶಬ್ದೇನ ಅಸ್ಯ ಪ್ರಮೇಯಸ್ಯ ಬುದ್ಧೈರ್ಹೇಯತ್ವಂ ಸಮುಚ್ಚಿನೋತಿ। ಯಥಾ ''ಅಹಂ ಸರ್ವಜ್ಞ ಇತಿ'' ಸಾಕ್ಷಿಪ್ರತ್ಯಕ್ಷವಿರುದ್ಧಂ ಸರ್ವಜ್ಞತ್ವಾಸರ್ವಜ್ಞತ್ವಾಖ್ಯವಿರುದ್ಧಧರ್ಮಘಟಿತತ್ವರೂಪಾನುಮಾನವಿರುದ್ಧಮ್, ''ದ್ವಾಸುಪರ್ಣೇ'' ತ್ಯಾದಿ ಶ್ರುತಿವಿರುದ್ಧಂ ಚ ವಿಮತಾ ಆತ್ಮಾನಃ ಪರಮಾತ್ಮನಸ್ತತ್ತ್ವತೋ ನ ಭಿದ್ಯಂತೇ ಆತ್ಮತ್ವಾತ್ ಪರಮಾತ್ಮವದಿತಿ ಮಾಯಾವಾದಿನೋಕ್ತಂ ಐಕ್ಯಾನುಮಾನಮ್। ಯಥಾ ವಾ ''ಸನ್ ಘಟ'' ಇತ್ಯಾದಿ ಪ್ರತ್ಯಕ್ಷವಿರುದ್ಧಮ್, ಅರ್ಥಕ್ರಿಯಾಕಾರಿತ್ವಾಖ್ಯಾನುಮಾನವಿರುದ್ಧಮ್, ವಿಶ್ವಂ ಸತ್ಯಮಿತಿ ಆಗಮವಿರುದ್ಧಂ ಚ ತೇಷಾಮೇವ ವಿಶ್ವಮಿಥ್ಯಾತ್ವಸಾಧಕಮನುಮಾನಮ್। ಇದಂ ಉಭಯಮಪ್ಯನುಮಾನಂ ಪ್ರಮಾಣತ್ರಿತಯವಿರುದ್ಧತ್ವಾತ್ ಅತ್ಯಂತಾಪ್ರಮಾಣಮ್। ಏವಮೇಕೈಕಪ್ರಮಾಣವಿರುದ್ಧಂ ನೇದಂ ರಜತಮಿತಿ ಪ್ರತ್ಯಕ್ಷಬಾಧಿತಂ ಶುಕ್ತಿರಜತಪ್ರತ್ಯಕ್ಷಮ್। ಅಸ್ಖಲನತ್ವಾನುಮಾನೇನ ಬಾಧಿತಂ ಗಂತೂ ರಥತ್ವಾನುಮಾನಮ್। ಗೌರ್ನ ಹಂತವ್ಯೇತಿ ಶ್ರುತಿವಿರುದ್ಧಂ ಮ್ಲೇಂಛಾನಾಂ ಹನನವಾಕ್ಯಮ್। ಇದಮಪಿ ಸಕಲಮೇಕೈಕಪ್ರಮಾಣವಿರುದ್ಧತ್ವಾದಪ್ರಮಾಣಮ್। ಪ್ರಮೇಯಂ ಚ ತತ್ ಬುದ್ಧೈರಸಂಗ್ರಾಹ್ಯಮೇವೇತಿ ಭಾವಃ। ತಸ್ಮಾತ್ = ಪೂರ್ಣಪ್ರಮಾಣಬಲಾತ್ ತತ್ತ್ರಯಂ= ಪ್ರಮಾಣತ್ರಯಂ ಏಕತ್ರಾರ್ಥೇ ಕಾರ್ಯಮಿತ್ಯುಪಸಂಹಾರಃ ॥ – (ವಾ.)

೮೧. ಸ್ವಾತಂತ್ರ್ಯಾಭಾವಾಪೇಕ್ಷಯೈವ ಜೀವಸ್ಯಾಕರ್ತೃತ್ವಮ್ ।
'ಸ್ವವಂದನಂ ಯಥಾ ಪಿತ್ರಾ ಕಾರಿತಂ ಶಿಶುಕರ್ತೃಕಮ್ ।
ಏವಂ ಪೂಜಾ ವಿಷ್ಣ್ವಧೀನಾ ಭವೇಜ್ಜೀವಕೃತೇತ್ಯಪಿ' ಇತಿ ಪ್ರವೃತ್ತೇ । – ಗೀತಾತಾತ್ಪರ್ಯ (೫/೧೦)

ಯಥಾ ಪಿತೃದತ್ತಂ ಪಾಲಕತ್ವಂ ರಾಜಪುತ್ರಾಣಾಮ್, ಏವಂ ಪರಮಾತ್ಮದತ್ತಂ ಕ್ರಿಯಾಸ್ವಾತಂತ್ರ್ಯಲಕ್ಷಣಂ ಕರ್ತೃತ್ವಮ್ । ಕ್ರಿಯಾನಿಷ್ಪನ್ನಧರ್ಮಾದಿರೂಪಕರ್ಮಣಿ ಸ್ವಾತಂತ್ರ್ಯಂ ಚ ಜೀವಾನಾಮಪ್ಯಸ್ತೀತ್ಯಾಶಂಕಾಂ ಪರಿಹರತಿ । ನ ಕರ್ತೃತ್ವಮಿತ್ಯಾದಿನಾ । ಕ್ರಿಯಾಯಾಮದೃಷ್ಟೋತ್ಪಾದನೇ ಫಲೇ ಚ ಸ್ವಾತಂತ್ರ್ಯಂ ಲೋಕಸ್ಯ ನ ಸೃಜತೀಶ್ವರ ಇತ್ಯರ್ಥಃ । ಅನ್ಯಥಾ ಲೋಕಸ್ಯೇತಿ ವಿಶೇಷಣಂ ವ್ಯರ್ಥಮ್ । ಜನಪದೇ ನಿವಸತಾಂ ತದ್ವಿತ್ತಭೋಜಿನಾಮಪ್ಯಾಧಿಪತ್ಯಾದಾನಾನ್ನ ದತ್ತಾ ಜನಪದಾ ರಾಜ್ಞಾ ಸ್ವಪುತ್ರಾಣಾಮಿತಿವತ್ಕರ್ಮಫಲಾದಿಸಂಯೋಗಿನಾಮಪಿ ತತ್ಸ್ವಾತಂತ್ರ್ಯದಾನಾನ್ನ ಸೃಜತೀತಿ ಯುಜ್ಯತೇ । ಸ್ವಯಮೇವ ಭವತಿ ಭಾವಯತಿ ಚೇತಿ ಸ್ವಭಾವೋ ಭಗವಾನ್ । ಸ್ವಭಾವತ್ವಾತ್ ಸ್ವಯಮೇವ ಕರ್ತೃತ್ವಾದಿಷು ಪ್ರವರ್ತತೇ । – ಗೀತಾತಾತ್ಪರ್ಯ (೫/೧೪)

ವಿ: ಪ್ರತ್ಯಕ್ಷಾದಿ ಮೂರುಪ್ರಮಾಣಗಳನ್ನು ಯಥಾಯೋಗ್ಯವಾಗಿ ಒಂದೇ ವಿಷಯದ ಬಗ್ಗೆ ವಿರೋಧವಿಲ್ಲದಂತೆ ಅನ್ವಯಿಸಿಕೊಂಡಾಗ ಅದು ಪೂರ್ಣಪ್ರಮಾಣವೆನ್ನಿಸುವುದು. ಹೊಂದಿಸಿ-ಕೊಳ್ಳಲು ಸಾಧ್ಯವೇ ಇಲ್ಲದ ವಿರೋಧ ಅವುಗಳಲ್ಲಿ ಕಂಡುಬಂದಾಗ ಅದು ಅಪ್ರಮಾಣ-ವಾಗುವುದು. ಪ್ರತ್ಯೇಕ ವಿಷಯಕ್ಕೆ ಸಂಬಂಧಿಸಿದಂತೆ ಅವುಗಳಿಗೆ ಗತಿ ಕಲ್ಪಿಸಿದಾಗ ಅದು ಮಧ್ಯಮ ಪ್ರಮಾಣವಾಗುವುದು. ಜೀವನ ಅನುಭವ, ಯುಕ್ತಿ ಮತ್ತು ಆಗಮಗಳು ಜೀವನ ಪರಾಧೀನ ಕರ್ತೃತ್ವ ಹಾಗೂ ಈಶ್ವರನ ಸ್ವತಂತ್ರ ಕರ್ತೃತ್ವಗಳನ್ನು ತಿಳಿಸುವುದರಲ್ಲಿ ಸರ್ವಾತ್ಮನಾ ಅವಿರೋಧಿ-ಗಳಾಗಿರುವುದರಿಂದ ಅವು ಪೂರ್ಣ ಪ್ರಮಾಣ ಎಂದರ್ಥ.

ಕರ್ತವ್ಯತ್ಯಾಗ ನಿಜವಾದ ಆಸ್ತಿಕ್ಯವಲ್ಲ

ಅಜ್ಞಃ ಪ್ರತ್ಯಕ್ಷಂ ತ್ವಪಹಾಯೈವ ದೈವಂ
ಮತ್ವಾ ಕರ್ತೃ ಸ್ವಾತ್ಮಕರ್ಮ ಪ್ರಜಹ್ಯಾತ್ ।
ವಿದ್ವಾನ್ ಜೀವಂ ವಿಷ್ಣುವಶಂ ವಿದಿತ್ವಾ
ಕರೋತಿ ಕರ್ತವ್ಯಮಜಸ್ರಮೇವ ॥ ೮೨ ॥

ಅ: ಅವಿವೇಕಿಯಾದವನು ಪ್ರತ್ಯಕ್ಷಸಿದ್ಧವಾದುದನ್ನು ತೊರೆದು ದೈವವೇ ಕರ್ತೃವೆಂದು ಬಗೆದು ತನ್ನ ಕರ್ಮವನ್ನು ತೊರೆಯುವನು. ಜ್ಞಾನಿಯಾದವನು ಜೀವನನ್ನು ವಿಷ್ಣುವಿನ ಅಧೀನನೆಂದು ತಿಳಿದು ತನ್ನ ಕರ್ತವ್ಯವನ್ನು ಸದಾ ಮಾಡುವನು.

ವಿ: ಹಿಂದೆ ಹೇಳಿದಂತೆ ಮೂರು ಪ್ರಮಾಣಗಳನ್ನು ಪರಸ್ಪರ ವಿರೋಧವಾಗದಂತೆ ಅನ್ವಯಿಸಿ-ಕೊಳ್ಳಲು ಸಮರ್ಥನಾಗದವನು ಅವಿವೇಕಿ. ಅವನು ಆಗಮವೇ ಪ್ರಮಾಣವೆಂಬುದನ್ನು ಸರಿ-ಯಾಗಿ ಅನ್ವಯಿಸಿಕೊಳ್ಳದೇ ದೈವವಷ್ಟೇ ಕರ್ತೃವೆಂದು ತೀರ್ಮಾನಿಸಿ ಕೊನೆಗೆ ಕರ್ಮಭ್ರಷ್ಟ-ನಾಗುವುದೇ ಸರಿ. ಆದರೆ, ವಿವೇಕಿಯಾದವನು ಮೇಲೆ ಹೇಳಿದಂತೆ ಪುರುಷ ಪ್ರಯತ್ನದಲ್ಲಿ ವಿಶ್ವಾಸವನ್ನಿರಿಸಿ ದೈವಾನುಗ್ರಹದ ಹಿನ್ನೆಲೆಯಲ್ಲಿ ತನ್ನ ಕರ್ತವ್ಯವನ್ನು ಸಾಧಿಸಲು ಪ್ರಯತ್ನಿಸಿ ಯಶಸ್ವಿಯಾಗುವನು. ಪ್ರತ್ಯಕ್ಷವನ್ನಷ್ಟೇ ಪ್ರಮಾಣವೆಂದು ನಂಬುವವನಂತೆ ಆಗಮವನ್ನಷ್ಟೇ ಪ್ರಮಾಣವೆಂದು ನಂಬುವವನೂ ಸಹ ಅವಿವೇಕಿ ಎಂದು ತಿಳಿಯಬೇಕು ಎಂದು ಇದರ ಭಾವ.

---

೮೧. ಸರ್ವಮೇವ ಹಠೇನೈಕೇ ದೈವೇನೈಕೇ ವದಂತ್ಯುತ ।
ಪುಂಸಃ ಪ್ರಯತ್ನಜಃ ಕೇಚಿತ್ ತ್ರೈಧಮೇತನ್ನಿರುಚ್ಯತೇ ॥ – ಭಾರತ (ವನ. ೩/೩೨/೩೨)

ದೃಶ್ಯತೇ ಹಿ ಹಠಾಚ್ಚೈವ ದಿಷ್ಟಾಚ್ಚಾರ್ಥಸ್ಯ ಸಂತತಿಃ ।
ಕಿಂಚಿತ್ ದೈವಾದ್ಧಠಾತ್ ಕಿಂಚಿತ್ ಕಿಂಚಿದೇವ ಸ್ವಭಾವತಃ ॥
ಪುರುಷಃ ಫಲಮಾಪ್ನೋತಿ ಚತುರ್ಥಂ ನಾತ್ರ ಕಾರಣಮ್ ॥ – ಭಾರತ (ವನ. ೩/೩೨/೩೪)

ಸಿದ್ಧಿಯ ಕಾರಣಗಳು

ಸ್ವಭಾವಾಖ್ಯಾ ಯೋಗ್ಯತಾ ಯಾ ಹಠಾಖ್ಯಾ
ಯಾಽನಾದಿಸಿದ್ಧಾ ಸರ್ವಜೀವೇಷು ನಿತ್ಯಾ ।
ಸಾ ಕಾರಣಂ ಪ್ರಥಮಂ ತು ದ್ವಿತೀಯ-
ಮನಾದಿಕರ್ಮೈವ ತಥಾ ತೃತೀಯಃ ॥ ೮೩ ॥

ಜೀವಪ್ರಯತ್ನಃ ಪೌರುಷಾಖ್ಯಸ್ತದೇತತ್
ತ್ರಯಂ ವಿಷ್ಣೋರ್ವಶಗಂ ಸರ್ವದೈವ ।
ಸ ಕಸ್ಯಚಿನ್ನ ವಶೇ ವಾಸುದೇವಃ
ಪರಾತ್ಪರಃ ಪರಮೋಽಸೌ ಸ್ವತಂತ್ರಃ ॥ ೮೪ ॥

ಅ: ಸಕಲ ಜೀವರಲ್ಲೂ ಅನಾದಿ ಸಿದ್ಧವಾದ ನಿತ್ಯವಾದ ಯೋಗ್ಯತೆಗೆ ಸ್ವಭಾವ ಎಂದೂ ಹಠ ಎಂದೂ ಹೆಸರು. ಅದು ಕರ್ಮಸಿದ್ಧಿಗೆ ಮೊದಲ ಕಾರಣ. ಎರಡನೆಯದು ಅನಾದಿ ಕರ್ಮವೇ. ಮೂರನೆಯದು ಪೌರುಷ ಎಂಬ ಹೆಸರಿನ ಜೀವನ ಪ್ರಯತ್ನ. ಈ ಮೂರೂ ಸದಾ ಶ್ರೀಹರಿಯ ವಶದಲ್ಲೇ ಇರುವಂತಹವು. ಆದರೆ, ಆ ಶ್ರೀಹರಿಯು ಮಾತ್ರ ಯಾರವಶದಲ್ಲೂ ಇಲ್ಲ. ಅವನು ಉತ್ತಮರಲ್ಲಿ ಉತ್ತಮ, ಸರ್ವೋತ್ತಮ, ಸ್ವತಂತ್ರ.

ವಿ: ಕರ್ಮಸಿದ್ಧಿಗೆ ಒಟ್ಟು ಮೂರು ಕಾರಣಗಳನ್ನು ಇಲ್ಲಿ ತಿಳಿಸಿರುವರು. ಸ್ವಭಾವ, ಅನಾದಿ–ಕರ್ಮ ಮತ್ತು ಪುರುಷ ಪ್ರಯತ್ನ – ಈ ಮೂರೂ ಸಹ ಕರ್ಮಸಿದ್ಧಿಯ ಮುಖ್ಯಕಾರಣಗಳು.

---

೮೩. ಜೀವಸ್ಯ. ಕರ್ತೃತ್ವೇ ತಸ್ಯ ಚೇಶ್ವರವಶತ್ವೇ ಪ್ರಮಾಣತ್ರಿತಯಮುಕ್ತ್ವಾ ಪ್ರಮಾಣತ್ರಿತಯಸ್ಯಾಪ್ಯೇಕಸ್ಮಿನ್ನೇವಾವಿರೋಧೇ ಸತಿ ಪೂರ್ಣಪ್ರಮಾಣತಾಂ ಭಿನ್ನಭಿನ್ನಾರ್ಥೇಽವಿರೋಧೇ ಸತಿ ಮಧ್ಯಮಪ್ರಮಾಣತಾಂ ಪ್ರಮಾಣವಿರೋಧೇ ತ್ವಪ್ರಮಾಣತಾಂ ಚೋಕ್ತ್ವಾ ಜೀವಸ್ಯ ಕರ್ತವ್ಯಕರ್ಮಣಿ ಕಾರಣತ್ರಯಂ ಚಾಹ। ಸ್ವಭಾವಾಖ್ಯೇತಿ। ಪುರುಷಸ್ಯ ಚೇತನಸ್ಯ ಸಂಬಂಧೀ ಪೌರುಷಃ ॥ – (ವಾ.)

೮೩. ತತ್ತತ್ಫಲಪ್ರಾಪ್ತ್ಯುಪಾಯಯೋಃ ಪ್ರಯತ್ನಾದೃಷ್ಟಯೋರಾಗಂತುಕಯೋರ್ಬೀಜಭೂತೋಽನಾಗಂತುಕ-ಸ್ವಭಾವವಿಶೇಷ ಏವ 'ಅನಾದಿಯೋಗ್ಯತಾ' ಉಚ್ಯತೇ ॥ – ನ್ಯಾಯಸುಧಾ ।

೮೩. ತತ್ರ ಸ್ವಭಾವಸ್ಯ ಸ್ವತೋಽಪಿ ಬಲವತ್ತ್ವಾತ್ । ನ ಚೈವಂ ಪ್ರಯತ್ನವೈಯರ್ಥ್ಯಮ್ । 'ಸ್ವಭಾವಸ್ಯ ಬಾಹ್ಯ-ಪ್ರಯತ್ನಸಚಿವಸ್ಯೈವ ಕಾರ್ಯಕಾರಿತ್ವಾತ್' ಇತಿ । ಈಶ್ವರಾನುಗ್ರಹಸ್ಯ ಪುರುಷಪ್ರಯತ್ನಾನುಸಾರೇಣೈವ ಫಲಜನನ-ಸ್ವಾಭಾವ್ಯಾತ್ । – ನ್ಯಾಯಸುಧಾ

೮೩. ಯೋಗ್ಯತಾಕರ್ಮಪ್ರಯತ್ನಸಾಕಲ್ಯಸ್ಯ ನ ಪುನರೇಕೈಕಸ್ಯ – ಇತಿ ನ್ಯಾಯಸುಧಾಯಾಮ್ ।

ಸ್ವಭಾವಕ್ಕೆ ಹಠ ಎಂಬುದು ಮತ್ತೊಂದು ಹೆಸರು. ಈ ಮೂರೂ ಸಹ ಶ್ರೀಹರಿಯ ಅಧೀನ. ಅವನು ಮಾತ್ರ ಯಾರ ಅಧೀನನೂ ಅಲ್ಲ ಎಂದು ತಾತ್ಪರ್ಯ.

ವಶೀ ವಶೇ ನ ಕಸ್ಯಾಪಿ ಯೋಽಜತೋ ವಿಜತಾಖಿಲಃ । – ದ್ವಾದಶಸ್ತೋತ್ರ (೨/೫)

ಯೋಗ್ಯತಾ ತಾರತಮ್ಯ

ಹಠಶ್ಚಾಸೌ ತಾರತಮ್ಯಸ್ಥಿತೋ ಹಿ
ಬ್ರಹ್ಮಾಣಮಾರಭ್ಯ ಕಲಿಶ್ಚ ಯಾವತ್ ।
ಹಠಾಚ್ಚ ಕರ್ಮಾಣಿ ಭವಂತಿ ಕರ್ಮಜೋ
ಯತ್ನೋ ಯತೋ ಹಠಕರ್ಮಪ್ರಯೋಕ್ತಾ ॥ ೮೫ ॥

---

೮೫. ಹಠಾತ್ ಯೋಗ್ಯತಾನುಸಾರೇಣ ಕಾರ್ಮಾಣಿ ಅನಾದಿಕರ್ಮಾಣಿ ಭವಂತಿ । ಯತ್ನಃ ತಾತ್ಕಾಲಿಕಃ ಪುರುಷ-ಪ್ರಯತ್ನಃ ಕರ್ಮಜಃ ಅನಾದಿಕರ್ಮಜಃ । ಯತ್ನೋ ಹಠಕರ್ಮಪ್ರಯೋಕ್ತಾ ಯೋಗ್ಯತಾಕರ್ಮಣೋರಭಿವ್ಯಂಜಕಃ । – (ವೇ.)

೮೫. ಬ್ರಹ್ಮಾಣಮಾರಭ್ಯ ಕಲಿಶ್ಚ ಯಾವದಿತ್ಯತ್ರ ಬ್ರಹ್ಮಣ ಸರ್ವೇಭ್ಯಃ ಪ್ರಧಾನಾ ಯೋಗ್ಯತಾ। ತತಃ ಪರಂ ರುದ್ರಾದಿದೇವಾನಾರಭ್ಯ ಮನುಷ್ಯೋತ್ತಮಪರ್ಯಂತಂ ಕಿಂಚಿತ್ಕಿಂಚಿದೇವ ಯೋಗ್ಯತಾ। ಇಯಂ ಚ ಯೋಗ್ಯತಾ ಇಹ ಜ್ಞಾನಭಕ್ತ್ಯಾದಿಗುಣಾನ್ ಪ್ರತಿ ಕಾರಣಮ್। ಅಂತೇ ಮುಕ್ತಿಂ ಪ್ರತಿ ಕಾರಣಮ್। ಅಸ್ಯಾಶ್ಚ ವಿಷ್ಣೌ ಕ್ರಿಯಮಾಣಜ್ಞಾನಭಕ್ತ್ಯಾದಿಗುಣಾನಾಂ ತಾರತಮ್ಯಾತ್ತಾರತಮ್ಯಮ್। ಪರತ್ರ ಮುಕ್ತಾವನುಭೂಯಮಾನಸುಖ ತಾರತಮ್ಯಾತ್ತಾರತಮ್ಯಮ್। ಅತ ಏತೇ ಕೇವಲಗುಣಭರಿತತ್ವಾತ್ ಉತ್ತಮಜೀವಾ ಇತ್ಯುಚ್ಯಂತೇ। ಮಿಶ್ರೇಷು ಮಧ್ಯಮಾ ಯೋಗ್ಯತಾ। ಇಯಂ ಚ ಇಹ ವಿಷ್ಣುಭಕ್ತ್ಯಾದಿಗುಣಾನಾಂ ವಿಷ್ಣುದ್ವೇಷಾದಿದೋಷಾಣಾಂ ತಾರತಮ್ಯಾತ್ತಾರತಮ್ಯೇನ ಸ್ಥಿತಾ। ಅಂತೇಽನುಭೂಯಮಾನಸುಖದುಃಖಯೋಃ ತಾರತಮ್ಯಾತ್ತಾರತಮ್ಯವತೀ। ಗುಣದೋಷಮಿಶ್ರತ್ವಾತ್ ಮಧ್ಯಮಯೋಗ್ಯತೇತ್ಯುಚ್ಯತೇ। ಇಯಂ ಚ ಯೋಗ್ಯತಾ ಮಧ್ಯಮಗತಿಂ ಪ್ರತ್ಯೇವ ಕಾರಣಮ್। ನ ತು ಮುಕ್ತಿಂ ಪ್ರತಿ। ನಾಪ್ಯಂಧಂತಮಃ ಪ್ರತಿ। ಅತ ಏವ ಜೀವಾಃ ಗುಣದೋಷಮಿಶ್ರತ್ವಾತ್ ಮಧ್ಯಮಾ ಇತ್ಯುಚ್ಯಂತೇ। ಮನುಷ್ಯಾಧಮಮಾರಭ್ಯ ಕಲಿಪರ್ಯಂತಂ ಜೀವೇಷ್ವಧಮಾ ಯೋಗ್ಯತಾ। ಅಧಮತ್ವಂ ಚ ವಿಷ್ಣುದ್ವೇಷಮಿಥ್ಯಾಜ್ಞಾನಾದಿದೋಷೈಕಪಾತ್ರತ್ವಾತ್। ತೇ ಚ ದೋಷಾಃ ಯತ್ಪಾಲ್ಪೀಯಾಂಸಸ್ತೇಽಧಮೇಷು ಕಿಂಚಿದುತ್ತಮಾ। ಯೇಷು ತು ಮಧ್ಯಮಾ ದೋಷಾಃ ತೇ ಅಧಮೇಷು ಮಧ್ಯಮಾಃ। ಯೇಷು ಬಹವೋ ದೋಷಾಃ ತೇ ಅಧಮೇಷು ನೀಚಾಃ। ಕಲಿಸ್ತು ಸರ್ವೇಭ್ಯೋಽಪ್ಯತ್ಯಂತದೋಷಭರಿತತ್ವಾದಧಮಾಧಮಃ। ಅತ ಏತೇಷು ಯೋಗ್ಯತಾಽಪಿ ಪ್ರಧಾನಾಧಮಾ ಮಧ್ಯಮಾಧಮಾ ಅಧಮಾಧಮಾ ಚೇತಿ ತಾರತಮ್ಯವತೀ। ಇಯಂ ಚ ಯೋಗ್ಯತಾ ಇಹ ದೋಷಾನ್ ಪ್ರತ್ಯೇವ। ಅಂತೇ ತಮಸ್ಯನುಭೂಯಮಾನದುಃಖಂ ಪ್ರತಿ ಕಾರಣಮ್। ಅತ ಏತೇ ಜೀವಾಃ ದೋಷೈಕಪಾತ್ರತ್ವಾತ್ ಅಧಮಾ ಇತ್ಯುಚ್ಯಂತೇ। ಅಧಮಾಧಮಸ್ತು ಕಲಿಃ। ಏತಾವಂತಮರ್ಥಂ ಮನಸಿ ನಿಧಾಯ "ಬ್ರಹ್ಮಾಣಮಾರಭ್ಯ ಕಲಿಶ್ಚ ಯಾವತ್" ಇತ್ಯುಕ್ತಮಿತಿ ವಿವೇಕೋ ದ್ರಷ್ಟವ್ಯಃ ॥ – (ವಾ.)

೮೫. ಏವಂ ಹಠಾಚ್ಚ ದೈವಾಚ್ಚ ಸ್ವಭಾವಾತ್ ಕರ್ಮಣಸ್ತಥಾ !
ಯಾನಿ ಪ್ರಾಪ್ನೋತಿ ಪುರುಷಸ್ತತ್ ಫಲಂ ಪೂರ್ವಕರ್ಮಣಾಮ್ ॥
ಧಾತಾಽಪಿ ಸ್ವಕರ್ಮೈವ ತೈಸ್ತೈರ್ಹೇತುಭಿರೀಶ್ವರಃ ।
ವಿದಧಾತಿ ವಿಭಜ್ಯೇಹ ಫಲಂ ಪೂರ್ವಕೃತಂ ನೃಣಾಮ್ ॥ – ಭಾರತ (ವನ.೩/೩೨/೧೯/೨೧)

ಅ: ಹಠವೆಂಬ ಜೀವನ ಯೋಗ್ಯತೆಯು ಬ್ರಹ್ಮದೇವರಿಂದ ಪ್ರಾರಂಭಿಸಿ ಕಲಿಯವರೆಗೆ ತಾರತಮ್ಯಕ್ರಮದಲ್ಲಿ ಇರುವಂತಹುದು. ಆ ಸ್ವಭಾವದಿಂದಲೇ ಕರ್ಮಗಳು ನಡೆಯುವವು. ಕರ್ಮದಿಂದ ಹುಟ್ಟುವ ಪ್ರಯತ್ನವು ಜೀವನ ಸ್ವಭಾವ ಮತ್ತು ಅನಾದಿ ಕರ್ಮಕ್ಕೆ ಅನುಗುಣವಾಗಿ ಇರುವದು.

ವಿ: ಯೋಗ್ಯತೆಯಲ್ಲಿ ತಾರತಮ್ಯವುಂಟು. ಬ್ರಹ್ಮದೇವರದು ಸರ್ವಜೀವರಲ್ಲೂ ಅತ್ಯುತ್ತಮ ಯೋಗ್ಯತೆಯಾದರೆ, ಕಲಿಯದು ಅತ್ಯಂತ ಅಧಮ ಯೋಗ್ಯತೆ. ಇವರ ಮಧ್ಯದಲ್ಲಿ ಉಳಿದವರ ಯೋಗ್ಯತೆ ಸೇರಿಕೊಳ್ಳುವುದು. ದೇವತೆಗಳ ಯೋಗ್ಯತೆ ಬ್ರಹ್ಮದೇವರ ಯೋಗ್ಯತೆಗಿಂತ ಕ್ರಮವಾಗಿ ಕಡಿಮೆಯಾಗುತ್ತಾ ಹೋದರೆ ದೈತ್ಯರ ಅಯೋಗ್ಯತೆ ಕಲಿಯ ವರೆಗೆ ಕ್ರಮವಾಗಿ ಹೆಚ್ಚುತ್ತಾ ಹೋಗುವುದು ಎಂದು ತಿಳಿಯಬೇಕು. ಎಲ್ಲ ಕರ್ಮಗಳಿಗೂ ಪ್ರಯತ್ನಗಳಿಗೂ ಸ್ವರೂಪ ಯೋಗ್ಯತೆಯೇ ಅತ್ಯಂತ ಮುಖ್ಯವಾದ ಕಾರಣ. ಯೋಗ್ಯತೆಗೆ ತಕ್ಕಂತೆ ಅನಾದಿಕರ್ಮ, ಅನಾದಿ ಕರ್ಮಕ್ಕೆ ತಕ್ಕಂತೆ ಜೀವನ ಪ್ರಯತ್ನ – ಹೀಗೆ ಇವುಗಳ ಸಂಬಂಧ ಎಂದು ತಿಳಿಯಬೇಕು.

ಪ್ರಯತ್ನದ ಮಹತ್ತ್ವ

ವಿನಾ ಯತ್ನಂ ನ ಹಠೋ ನಾಪಿ ಕರ್ಮ
ಫಲಪ್ರದೋ ವಾಸುದೇವೋಽಖಿಲಸ್ಯ ।
ಸ್ವಾತಂತ್ರ್ಯಶಕ್ತೇರ್ವಿನಿಯಾಮಕೋ ಹಿ
ತಥಾಽಪ್ಯೇತಾನ್ ಸೋಽಪ್ಯಪೇಕ್ಷ್ಯೈವ ಯುಂಜ್ಯಾತ್ ॥ ೮೬ ॥

ಅ: ಅನುಗುಣವಾದ ಪ್ರಯತ್ನವಿಲ್ಲದಿದ್ದಲ್ಲಿ ಯೋಗ್ಯತೆಯಾಗಲೀ, ಕರ್ಮವಾಗಲೀ ಫಲ ನೀಡಲಾರದು. ಎಲ್ಲದಕ್ಕೂ ಮುಖ್ಯ ಫಲಪ್ರದನು ಶ್ರೀಹರಿಯೇ. ಸ್ವಾತಂತ್ರ್ಯಶಕ್ತಿಯಿಂದಾಗಿ ಅವನೇ ಎಲ್ಲಕ್ಕೂ ನಿಯಾಮಕ. ಆದರೂ ಅವನು ಇವುಗಳನ್ನು ಅನುಸರಿಸಿಯೇ ಫಲಗಳನ್ನು ನೀಡುವನು.

ವಿ: ಫಲಕ್ಕೆ ಮೂಲಕಾರಣ ಜೀವನ ಸ್ವರೂಪ ಯೋಗ್ಯತೆಯಾದರೂ, ನೇರವಾಗಿ ಫಲಕ್ಕೆ ಕಾರಣವಾಗುವುದು ಅದಕ್ಕೆ ಉಚಿತವಾದ ಪ್ರಯತ್ನ. ಸ್ವಭಾವ ಸಿದ್ಧವಾದುದು; ಅನಾದಿಕರ್ಮ

---

೮೬. ಯತ್ನೋ ಯತೋ ಹಠಕರ್ಮಪ್ರಯೋಕ್ತಾ ಇತ್ಯತ್ರ ಯತಃ ಯತ್ನಃ ಹಠಕರ್ಮಪ್ರಯೋಕ್ತಾ = ಹಠಕರ್ಮಣೋಃ ಫಲಪ್ರಯೋಕ್ತೇತಿ ಮಧ್ಯಮಪದಲೋಪೀ ಸಮಾಸಃ। ಅತೋ ಯತ್ನಂ ವಿನಾ ಹಠೋಽಪಿ ನ = ಫಲಪ್ರದೋ ನ । ಕರ್ಮಾಪಿ ನ = ಫಲಪ್ರದಂ ನೇತ್ಯುತ್ತರಪದಾಕರ್ಷಣೇನ ಯೋಜನಾ। ವಾಸುದೇವಃ ಅಖಿಲಸ್ಯ = ಉಕ್ತಜೀವಸಮುದಾಯಸ್ಯ ತತ್ತದೀಯಹಠಕರ್ಮಪ್ರಯತ್ನಾನುಸಾರೇಣ ತತ್ತದ್ಯೋಗ್ಯಫಲಪ್ರದ ಇತ್ಯರ್ಥಃ ॥ – (ವಾ.)

ಹಿಂದೆ ನಡೆದುಹೋದಂತಹುದು. ಪ್ರಕೃತ ಸಾಧ್ಯವಾಗುವಂತಹುದು ಪ್ರಯತ್ನಮಾತ್ರ. ಆದ್ದರಿಂದ ಅಂತಹ ಸೂಕ್ತ ಪ್ರಯತ್ನವಿಲ್ಲದಿದ್ದಲ್ಲಿ ಯೋಗ್ಯತೆಯಾಗಲೀ, ಪೂರ್ವ ಕರ್ಮವಾಗಲೀ ಫಲಪ್ರದ–ವಾಗದು ಎಂಬುದು ತಾತ್ಪರ್ಯ. ಈ ಮೂರು ಅಸ್ವತಂತ್ರವಾದ್ದರಿಂದ ಮುಖ್ಯ ಫಲದಾಯಕನು ಶ್ರೀಹರಿಯೇ. ಅವನು ಸ್ವತಂತ್ರ ಶಕ್ತಿಸಂಪನ್ನನಾದರೂ ಇವು ಮೂರನ್ನು ಅನುಸರಿಸಿಯೇ ಫಲ ನೀಡುವನು ಎಂಬುದು ವಿಶೇಷ. ಇದರಿಂದಾಗಿ ಅವನಿಗೆ ಪಕ್ಷಪಾತಾದಿ ದೋಷಗಳನ್ನು ಆರೋಪಿಸಲು ಸರ್ವಥಾ ಸಾಧ್ಯವಾಗದು. ಹೀಗೆ ಸ್ವತಂತ್ರನಾಗಿದ್ದು ವೈಷಮ್ಯ, ನೈರ್ಘೃಣ್ಯಾದಿ ದೋಷರಹಿತ–ನಾಗಿರುದು ಶ್ರೀಹರಿಯ ವೈಶಿಷ್ಟ್ಯ.

ಶ್ರೀಹರಿ ಫಲ ನೀಡುವ ಪರಿ

ಏತಾನಪೇಕ್ಷ್ಯೈವ ಫಲಂ ದದಾನೀ-
ತ್ಯಸ್ಯೈವ ಸಂಕಲ್ಪ ಇತಿ ಸ್ವತಂತ್ರತಾ ।
ನಾಸ್ಯಾಪಗಚ್ಛೇತ್ ಸ ಹಿ ಸರ್ವಶಕ್ತಿ-
ರ್ನಾಶಕ್ತತಾ ಕ್ವಚಿದಸ್ಯ ಪ್ರಭುತ್ವಾತ್ ॥ ೮೭ ॥

ಅ: ಇವುಗಳಿಗೆ ಅನುಗುಣವಾಗಿಯೇ ಫಲ ನೀಡುವೆನು ಎಂಬುದು ಅವನ ಸಂಕಲ್ಪವೇ ಆಗಿದೆ. ಅವನ ಸ್ವಾತಂತ್ರ್ಯವೆಂದರೆ ಇದೇ. ಅದು ಎಂದೂ ಅವನನ್ನು ಬಿಟ್ಟುಹೋಗದು. ಅವನು ಸರ್ವಶಕ್ತ. ಆದ್ದರಿಂದಲೇ ಎಂದೂ ಅವನಿಗೆ ಅಶಕ್ತಿಯೆಂಬುದು ಸರ್ವಥಾ ಇಲ್ಲ.

ವಿ: ಶ್ರೀಹರಿಯು ಆ ಮೂರನ್ನು ಅನುಸರಿಸಿ ಫಲ ನೀಡುವುದಾದಲ್ಲಿ ಅವನ ಸ್ವಾತಂತ್ರ್ಯಕ್ಕೆ ಅರ್ಥವೇನು ಎಂಬ ಪ್ರಶ್ನೆಗೆ ಇಲ್ಲಿ ಉತ್ತರವಿದೆ. ಅವನು ಆ ಮೂರನ್ನು ಅನುಸರಿಸಿ ಫಲ ನೀಡುವುದು ಅವನ ಸಂಕಲ್ಪವೇ ಆದ್ದರಿಂದ ಅದರಂತೆ ನಡೆಯುವುದು ಸ್ವಾತಂತ್ರ್ಯವೇ ಆಗುವುದು ಎಂದರ್ಥ. ಎಂದರೆ ಶ್ರೀಹರಿಯು ಯಾವುದೋ ನಿರ್ಬಂಧಕ್ಕೆ ಒಳಪಟ್ಟು ಆ ಮೂರನ್ನು ಅನುಸರಿಸಿ ಫಲ ಕೊಡುತ್ತಿಲ್ಲ. ಅದು ತಾನೇ ಮಾಡಿಕೊಂಡ ವ್ಯವಸ್ಥೆ ಆದ್ದರಿಂದ ಅದು ತನ್ನ ಅಧೀನದಲ್ಲೇ ಇರುವುದರಿಂದ ಅವನ ಸ್ವಾತಂತ್ರ್ಯಕ್ಕೆ ಯಾವುದೇ ಕುಂದು ಉಂಟಾಗದು ಎಂದರ್ಥ. ಏನನ್ನೂ ಗಮನಿಸದೇ ತನಗೆ ತೋಚಿದಂತೆ ಫಲ ನೀಡುವನು ಎಂದರೆ ಶ್ರೀಹರಿಗೆ ವೈಷಮ್ಯಾದಿ ದೋಷಗಳ ಪ್ರಸಕ್ತಿ. ಮೂರನ್ನೂ ಗಮನಿಸಿ ಫಲ ನೀಡುವನು ಎಂದರೆ ಅವನ ಸ್ವಾತಂತ್ರ್ಯಕ್ಕೆ ಕುಂದು ಒದಗುವ ಪ್ರಸಕ್ತಿ. ಈ ಸಮಸ್ಯೆಗೆ ಇಲ್ಲಿ ಸಮರ್ಪಕ ಉತ್ತರವಿರುವುದನ್ನು ಗಮನಿಸಬೇಕು. ಅವನು ಆ ಮೂರನ್ನೂ ಗಮನಿಸಿ ಫಲ ನೀಡುವುದರಿಂದ ಪಕ್ಷಪಾತಾದಿ ದೋಷಗಳಿಗೆ ಅವಕಾಶವಿಲ್ಲ. ಹಾಗೆ ಫಲ ನೀಡುವುದು ಅವನ ಸಂಕಲ್ಪವೇ ಆದ್ದರಿಂದ ಸ್ವಾತಂತ್ರ್ಯಕ್ಕೂ ಧಕ್ಕೆಯಿಲ್ಲ ಎಂದು ಭಾವ.

---

೮೭. ಇತಿ ಸ್ವತಂತ್ರತೇತ್ಯತ್ರ ಇತಿ= ಹೇತೋಃ ಅಸ್ಯ ಸ್ವತಂತ್ರತಾ ನಾಪಗಚ್ಛೇದಿತ್ಯುತ್ತರೇಣಾನ್ವಯಃ ॥ – (ವಾ.)

ವರ್ಣಧರ್ಮದ ಅಪೂರ್ವ ವಿವೇಚನೆ

ತಸ್ಮಾತ್ ಕಾರ್ಯಂ ತೇನ ಕ್ಲೃಪ್ತಂ ಸ್ವಕರ್ಮ
ತತ್ಪೂಜಾರ್ಥಂ ತೇನ ತತ್ಪ್ರಾಪ್ತಿರೇವ ।
ಅತೋಽನ್ಯಥಾ ನಿರಯಃ ಸರ್ವಥಾ ಸ್ಯಾತ್
ಸ್ವಕರ್ಮ ವಿಪ್ರಸ್ಯ ಜಪೋಪದೇಶೌ ॥ ೮೮ ॥

ಅ: ಆದ್ದರಿಂದ ಶ್ರೀಹರಿಯು ವಿಧಿಸಿದ ಕರ್ತವ್ಯ ಕರ್ಮವನ್ನು ಅವನ ಪೂಜೆಯೆಂದು ಮಾಡಲೇಬೇಕು. ಅದರಿಂದ ಅವನ ಪ್ರಾಪ್ತಿಯೇ ಆಗುವುದು. ಇಲ್ಲವಾದಲ್ಲಿ ನರಕವಾಗುವುದು ನಿಶ್ಚಿತ. ಬ್ರಾಹ್ಮಣನಿಗೆ ಜಪ, ಉಪದೇಶಗಳು ಸ್ವಕರ್ಮಗಳು.

ವಿ: ಈ ವರೆಗೂ ಕರ್ಮಾಚರಣೆಯ ಹಿನ್ನೆಲೆಯಾಗಿ ಹರಿ ಪ್ರೇರಣೆಯ ಮಹತ್ವವನ್ನು ವಿವರಿಸಿ, ಈಗ ಅವನ ಪೂಜೆಯೇ ಅದರ ಉದ್ದೇಶವೆಂದು ತಿಳಿಯಬೇಕು ಎಂದು ತಿಳಿಸುತ್ತಿರುವರು. ಎಂದರೆ ವಿಷ್ಣುಪ್ರೇರಣಯಾ ವಿಷ್ಣುಪ್ರೀತ್ಯರ್ಥಂ ಎಂಬುದಾಗಿ ಪ್ರತಿಯೊಬ್ಬ ಜೀವನೂ ತನ್ನ ಪಾಲಿಗೆ ವಿಹಿತವಾದ ಕರ್ತವ್ಯ ಕರ್ಮಗಳನ್ನು ತಪ್ಪದೇ ಆಚರಿಸಬೇಕು. ಅದರಿಂದ ಅವನಿಗೆ ಸದ್ಗತಿಪ್ರಾಪ್ತಿ ಇಲ್ಲವಾದಲ್ಲಿ ನರಕಾದಿ ಅನರ್ಥರೂಪ ದುರ್ಗತಿ ನಿಶ್ಚಿತ ಎಂದು ಭಾವ. ಬ್ರಾಹ್ಮಣನಿಗೆ ಅತ್ಯಂತ ಮುಖ್ಯವಾದ ಸ್ವಧರ್ಮ ಎಂದರೆ ಜಪ ಮತ್ತು ಉಪದೇಶ. ಜಪ ತಾನು ಒಬ್ಬನೇ ಮಾಡುವಂತಹುದು. ಉಪದೇಶ ಇನ್ನೊಬ್ಬರಿಗೆ ಮಾಡುವಂತಹುದು. ಯಾವಾಗಲೂ ಒಬ್ಬನೇ ಇರಲು ಸಾಧ್ಯವಾಗುವುದಿಲ್ಲವಾದ್ದರಿಂದ ಉಪದೇಶ ವಿಹಿತ. ಬೇರೊಬ್ಬರು ಯಾವಾಗಲೂ ಜೊತೆಯಿರಲೂ ಸಾಧ್ಯವಿಲ್ಲವಾಗುವುದರಿಂದ ಜಪ ವಿಹಿತ. ಹೀಗೆ ಜಪ–ಉಪದೇಶಗಳು ಅತ್ಯಂತ ಪ್ರಧಾನವಾದ ಬ್ರಾಹ್ಮಣ ಕರ್ಮಗಳು ಎಂದು ತಿಳಿಯಬೇಕು – **'ಸ್ವಾಧ್ಯಾಯಪ್ರವಚಾನಾಭ್ಯಾಂ ನ ಪ್ರಮದಿತವ್ಯಮ್'.**

ವಿಷ್ಣೋರ್ಮುಖಾದ್ವಿಪ್ರಜಾತಿಃ ಪ್ರವೃತ್ತಾ
ಮುಖೋತ್ಥಿತಂ ಕರ್ಮ ತೇನಾಸ್ಯ ಸೋಽದಾತ್ ।
ಬಾಹ್ವೋರ್ಜಾತಃ ಕ್ಷತ್ರಿಯಸ್ತೇನ ಬಾಹ್ವೋಃ
ಕರ್ಮಾಸ್ಯ ಪಾಪಪ್ರತಿವಾರಣಂ ಹಿ ।
ಪ್ರವರ್ತನಂ ಸಾಧು ಧರ್ಮಸ್ಯ ಚೈವ
ಮುಖಸ್ಯ ಬಾಹ್ವೋಶ್ಚಾತಿಸಾಮೀಪ್ಯತೋಽಸ್ಯ ॥ ೮೯ ॥

ಜಪೋಪದೇಶೌ ಕ್ಷತ್ರಿಯಸ್ಯಾಪಿ ವಿಷ್ಣು-
ಶ್ಚಕ್ರೇ ಧರ್ಮೌ ಯಜ್ಞಕರ್ಮಾಪಿ ವಿಪ್ರೇ ।
ವೈಶ್ಯೇ ಯಸ್ಮಾದೂರುಜಸ್ತೇನ ತಸ್ಯ
ಪ್ರಜಾವೃದ್ಧಿಸ್ತಜ್ಜಕರ್ಮೈವ ಧರ್ಮಃ ॥ ೯೦ ॥

ತತ್ಸಾದೃಶ್ಯಾತ್ ಸ್ಥಾವರಾಣಾಂ ಚ ವೃದ್ಧಿಃ
ಕರೋರೂರ್ವೋಃ ಸನ್ನಿಕೃಷ್ಟತ್ವಹೇತೋಃ ।
ವಾರ್ತಾತ್ಮಕಂ ಕರ್ಮ ಧರ್ಮಂ ಚಕಾರ
ವಿಷ್ಣುಸ್ತಸ್ಯೈವಾಂಘ್ರಿಜಃ ಶೂದ್ರ ಉಕ್ತಃ ॥ ೯೧ ॥

ಗತಿಪ್ರಧಾನಂ ಕರ್ಮ ಶುಶ್ರೂಷಣಾಖ್ಯಂ
ಸಾದೃಶ್ಯತೋ ಹಸ್ತಪದೋಸ್ತಥೈವ ।
ಹಸ್ತೋದ್ಭವಂ ಕರ್ಮ ತಸ್ಯಾಪಿ ಧರ್ಮಃ
ಸಂತಾನವೃದ್ಧಿಶ್ಚ ಸಮೀಪಗತ್ವಾತ್ ॥ ೯೨ ॥

ಅ: ವಿಷ್ಣುವಿನ ಮುಖದಿಂದ ಬ್ರಾಹ್ಮಣ ಜಾತಿ ಉದ್ಭವಿಸಿತು. ಆದ್ದರಿಂದ ಅವನಿಗೆ, ಮುಖ-ದಿಂದ ಹುಟ್ಟುವ ಜಪ-ಉಪದೇಶಗಳನ್ನೇ ಮುಖ್ಯ ಕರ್ಮಗಳನ್ನಾಗಿ ಶ್ರೀಹರಿ ವಿಧಿಸಿರುವನು. ಕ್ಷತ್ರಿಯನು ಶ್ರೀಹರಿಯ ಬಾಹುಗಳಿಂದ ಜನಿಸಿದವನು. ಆದ್ದರಿಂದ ಅವನಿಗೆ ಬಾಹುಗಳ

---

೮೮. ಅಧ್ಯಯನಂ ಉಪದೇಶಃ ಅಧ್ಯಾಪನಂ ಸ್ವಕರ್ಮ ಸ್ವವಿಹಿತಕರ್ಮ ಉಕ್ತಮಿತಿ ಶೇಷಃ। – (ಜ.)

೮೯. ಕ್ಷತ್ರಿಯಸ್ಯ ಹಿ ಸರ್ವಸ್ಯ ನಾನ್ಯೋ ಧರ್ಮೋಽಸ್ತಿ ಸಂಯುಗಾತ್ । – ಭಾರತ (ಮನ. ೩೫/೩೫)

೮೯. ಪಾಪಪ್ರತಿವಾರಣಂ ಹೀತ್ಯತ್ರ ಪಾಪಾನಾಂ= ಪಾಪಿಷ್ಠಾನಾಂ ಪ್ರತಿವಾರಣಂ ಹೀತ್ಯರ್ಥಃ ॥ – (ವಾ.)

೯೧. ವಾರ್ತಾತ್ಮಕಂ ಕರ್ಮ ಧರ್ಮ ಚಕಾರೇತ್ಯತ್ರ ವಾರ್ತಾಪದೇನ ಕೃಷಿಗೋರಕ್ಷಾವಾಣಿಜ್ಯಕುಸೀದಾಖ್ಯ ಕರ್ಮಚತುಷ್ಟಯಂ ಗೃಹ್ಯತೇ। ''ಕುಸೀದಂ ವೃದ್ಧಿಜೀವನ'' ಮಿತ್ಯಮರಃ। ಕರೋರೂರ್ವೋಃ ಸನ್ನಿಕೃಷ್ಟತ್ವಹೇತೋಃ ಕೃಷ್ಯಾದಿಕರ್ಮ ಧರ್ಮಂ = ವೈಶ್ಯಸ್ಯ ಧರ್ಮಂ ಚಕಾರೇತಿ ಯೋಜನಾ। ಯದ್ವಾ ಕೃಷೇರಪಿ ಸಸ್ಯಾದಿಸ್ಥಾವರೋ-ತ್ಪತ್ತಿಹೇತುತ್ವೇನ ಪ್ರಜೋತ್ಪತ್ತಿಸಾಮ್ಯಾಚ್ಚ ವೈಶ್ಯಧರ್ಮತ್ವಮ್। ಗೋರಕ್ಷಾದೀನಾಂ ತು ವಿಹಿತತ್ವಾದೇವ ವೈಶ್ಯಧರ್ಮತ್ವಮಿತಿ ಜ್ಞೇಯಮ್ ॥ – (ವಾ.)

೯೧. ಕೇಚಿತ್ ತು ಕರೋಃ ಕರಯೋರಿತಿ ಛಾಂದಸಪ್ರಯೋಗ ಇತ್ಯಾಹುಃ । ತತಶ್ಚ ಕರೋರೂರ್ವೋರಿತ್ಯತ್ರ ಕರೋ ಉರ್ವೋರಿತಿ ಪದದ್ವಯಂ ಕೇಚಿತ್ ತು ಕರುಶಬ್ದ ಇತ್ಯಾಹುಃ । – (ತಿ.)

ಕರ್ಮವಾದ ಪಾಪಗಳನ್ನು ತಡೆಯುವುದು (ಪಾಪಿಗಳನ್ನು ಶಿಕ್ಷಿಸುವುದು), ಸತ್ಕರ್ಮಗಳನ್ನು ಪ್ರವರ್ತಿಸುವುದು ಮುಖ್ಯಕರ್ತವ್ಯವಾಗಿದೆ. ಮುಖ ಮತ್ತು ಬಾಹುಗಳಿಗೆ ಅತ್ಯಂತ ಸಾಮೀಪ್ಯ-ವಿರುವುದರಿಂದ ವಿಷ್ಣುವು ಕ್ಷತ್ರಿಯನಿಗೂ ಜಪ ಮತ್ತು ಉಪದೇಶಗಳನ್ನೂ ಕರ್ತವ್ಯವನ್ನಾಗಿ ವಿಧಿಸಿರುವನು. ಅದರಂತೆ ಬ್ರಾಹ್ಮಣನಿಗೆ ಯಜ್ಞಕರ್ಮವನ್ನೂ ವಿಧಿಸಿರುವನು. ವೈಶ್ಯನು ತೊಡೆಗಳಿಂದ ಹುಟ್ಟಿದ್ದರಿಂದ ಅವನಿಗೆ ಅದರಿಂದ ಆಗುವ ಪ್ರಜಾವೃದ್ಧಿಯೆಂಬ ಕರ್ಮ ಕರ್ತವ್ಯವಾಗಿದೆ. ಅದರಂತೆ ಸ್ಥಾವರಗಳ ವೃದ್ಧಿರೂಪ ಕರ್ಮವೂ ವಿಹಿತ. ಕೈಗಳಿಗೂ ತೊಡೆಗಳಿಗೂ ಸಾಮೀಪ್ಯವಿರುವುದರಿಂದ ವೈಶ್ಯನಿಗೆ ವಾರ್ತಾರೂಪವಾದ ಕರ್ಮವನ್ನು ಧರ್ಮವನ್ನಾಗಿ ವಿಧಿಸಿರುವನು. ವಿಷ್ಣುವಿನ ಪಾದದಿಂದ ಹುಟ್ಟಿದವನು ಶೂದ್ರ ಎಂದು ಹೇಳಿರುವರು. ಗಮನ ಪ್ರಧಾನವಾದ ಸೇವೆಯೆಂಬ ಕರ್ಮ ಅವನಿಗೆ ವಿಹಿತ. ಕೈಗಳಿಗೂ ಕಾಲುಗಳಿಗೂ ಹೋಲಿಕೆಯಿರುವುದರಿಂದ ಕೈಗಳಿಂದ ಹುಟ್ಟುವ ಕರ್ಮಗಳೂ ಅವನಿಗೆ ಧರ್ಮವೇ. ಅದರಂತೆ ತೊಡೆಗೂ ಕಾಲಿಗೂ ಸಾಮೀಪ್ಯವಿರುವುದರಿಂದ ಸಂತಾನವೃದ್ಧಿಯೂ ಅವನಿಗೆ ಕರ್ತವ್ಯ.

ವಿಃ ಬ್ರಾಹ್ಮಣಾದಿ ನಾಲ್ಕು ವರ್ಣಗಳಿಗೆ ವಿಹಿತವಾದ ಕರ್ಮಗಳ ವಿವೇಚನೆ ಈ ಶ್ಲೋಕಗಳಲ್ಲಿ ಬಂದಿದೆ. ಅದರಂತೆ ಬ್ರಾಹ್ಮಣನದು ಜಪ, ಉಪದೇಶಗಳು, ಕ್ಷತ್ರಿಯನದು ದುಷ್ಟ ಶಿಕ್ಷಣ ಮತ್ತು ಧರ್ಮಪ್ರಸಾರ, ವೈಶ್ಯನದು ಸಂತಾನವೃದ್ಧಿ, ಶೂದ್ರನದು ಪರಿಚರ್ಯೆ – ಹೀಗೆ ಬ್ರಾಹ್ಮಣಾದಿ ವರ್ಣದವರಿಗೆ ಕರ್ಮಗಳನ್ನು ವಿಧಿಸಲು ಕಾರಣಗಳನ್ನು ವಿಶ್ಲೇಷಿಸಿರುವುದು ಇಲ್ಲಿಯ ವೈಶಿಷ್ಟ್ಯ. ಪುರುಷಸೂಕ್ತ ತಿಳಿಸಿರುವಂತೆ ಬ್ರಾಹ್ಮಣ ಶ್ರೀಹರಿಯ ಮುಖದಿಂದ ಹುಟ್ಟಿದವನು ಆದ್ದರಿಂದ ಮುಖದ ಕಾರ್ಯಗಳಾದ ಜಪ ಉಪದೇಶಗಳು ಅವನ ಪ್ರಧಾನ ಕರ್ಮಗಳು. ಕ್ಷತ್ರಿಯ ಹರಿಯ ತೋಳುಗಳಿಂದ ಜನಿಸಿದವನು. ದುಷ್ಟಶಿಕ್ಷಣಾದಿ ಕಾರ್ಯಗಳು ಅದಕ್ಕಾಗಿ ಅವನಿಗೆ ವಿಹಿತವಾದ ಪ್ರಧಾನ ಕರ್ಮಗಳು. ತೊಡೆ ಸಂತಾನವೃದ್ಧಿಯ ಸಂಕೇತ, ಅದಕ್ಕೇ ವೈಶ್ಯನಿಗೆ ಸಂತಾನವೃದ್ಧಿಯೇ ಪ್ರಧಾನ ಕರ್ಮ. ಓಡಾಟ ಪಾದದ ಕಾರ್ಯ, ಪಾದದಿಂದ ಹುಟ್ಟಿದ ಶೂದ್ರನಿಗೆ ಓಡಾಟ ರೂಪವಾದ ಸೇವಾಕಾರ್ಯವೇ ವಿಹಿತ. ಇದು ಸಾಮಾನ್ಯವಾದ ವಿವೇಚನೆ. ಇದನ್ನು ಮುಂದುವರಿಸಿ ಮುಖ ಹಾಗೂ ತೋಳುಗಳಿಗೆ ಸಾಮೀಪ್ಯವಿರುವುದರಿಂದ ಬ್ರಾಹ್ಮಣನಂತೆ ಕ್ಷತ್ರಿಯನಿಗೂ ಜಪೋಪದೇಶಗಳು ಮುಖ್ಯ ಕರ್ತವ್ಯ. ಹಾಗೆಯೇ ಕೈಗಳಿಗೂ ತೊಡೆಗಳಿಗೂ ಹತ್ತಿರವಿರುವುದರಿಂದ ವೈಶ್ಯನಿಗೂ ವಾಣಿಜ್ಯಾದಿಗಳು ಕರ್ತವ್ಯ. ಪಾದಕ್ಕೂ ಕೈಗಳಿಗೂ ಹತ್ತಿರವಿರುವುದರಿಂದ ಶೂದ್ರನಿಗೂ ಯುದ್ಧಾದಿ ಕರ್ಮದಲ್ಲಿ ಅವಕಾಶ. ಪಾದಗಳು ತೊಡೆಗಳು ಹತ್ತಿರವಿರುವುದರಿಂದ ಶೂದ್ರನಿಗೂ ಸಂತಾನವೃದ್ಧಿಯ ಕರ್ಮ. ವೈಶ್ಯನ ಕರ್ಮಗಳನ್ನು ಸಂತಾನವೃದ್ಧಿಯೆಂದು ತಿಳಿಸುತ್ತಾ ಅದು ಕೇವಲ

ಔರಸ ಸಂತತಿ ವೃದ್ಧಿಮಾತ್ರವಾಗಿರದೇ, ಸಸ್ಯ ಸಂತತಿ ವೃದ್ಧಿರೂಪವಾದ ಕೃಷಿ, ಗೋಸಂತತಿ ವೃದ್ಧಿರೂಪವಾದ ಗೋಪಾಲನೆ ಮೊದಲಾದವುಗಳು ವಿಹಿತ ಎಂಬ ಅರ್ಥವಿಶೇಷವನ್ನು ತಿಳಿಸಿರುವರು. ಹೀಗೆ ವರ್ಣ ಧರ್ಮಗಳ ವಿಶ್ಲೇಷಣೆಯನ್ನು ಒಂದು ತಾತ್ವಿಕ ಹಿನ್ನೆಲೆಯಲ್ಲಿ ನೀಡಿರುವುದು ಇಲ್ಲಿಯ ವಿಶೇಷ.

ಭುಜಾವುರೋ ಹೃದಯಂ ಯದ್ಬಲಸ್ಯ
ಜ್ಞಾನಸ್ಯ ಚ ಸ್ಥಾನಮತೋ ನೃಪಾಣಾಮ್ ।
ಬಲಂ ಜ್ಞಾನಂ ಚೋಭಯಂ ಧರ್ಮ ಉಕ್ತಃ
ಪಾಣೌ ಕೃತೀನಾಂ ಕೌಶಲಂ ಕೇವಲಂ ಹಿ ।
ತಸ್ಮಾತ್ ಪಾಣ್ಯೋರೂರುಪದೋರುಪಸ್ಥಿತೇ-
ರ್ವಿಟ್ಶೂದ್ರಕೌ ಕರ್ಮಣಾಂ ಕೌಶಲೇತೌ ॥ ೯೩ ॥

---

೯೨. ಸಂತಾನವೃದ್ಧಿಶ್ಚ ಸಮೀಪಗತ್ವಾತ್ ಇತ್ಯತ್ರ ಸಮೀಪಗತ್ವಾತ್= ಪ್ರಜಾಪರಿಪಾಲಕಕರೋರುಸಮೀಪಗತ್ವಾತ್ ಇತ್ಯರ್ಥಃ ॥ – (ವಾ.)

೯೨ 'ನಾಹಂ ಕರ್ತಾ ಹರಿಃ ಕರ್ತಾ ತತ್ಪೂಜಾ ಕರ್ಮ ಚಾಖಿಲಮ್ ।
ತಥಾಽಪಿ ಮತ್ಕೃತಾ ಪೂಜಾ ತತ್ಪ್ರಸಾದೇನ ನಾನ್ಯಥಾ ।
ತದ್ಭಕ್ತಿಸ್ತತ್ಫಲಂ ಮಹ್ಯಂ ತತ್ಪ್ರಸಾದಃ ಪುನಃ ಪುನಃ ।
ಕರ್ಮನ್ಯಾಸೋ ಹರಾವೇವಂ ವಿಷ್ಣೋಸ್ಸಪ್ತಿಕರಃ ಸದಾ ।
ಯಸ್ಮಾತ್ಸ್ವತಂತ್ರಕರ್ತೃತ್ವಂ ವಿಷ್ಣೋರೇವ ನ ಚಾನ್ಯಗಮ್ ।
ತದಧೀನಂ ಸ್ವತಂತ್ರತ್ವಂ ಸ್ವಾವರಾಪೇಕ್ಷಯೈವ ತು ।
ಜೀವಸ್ಯ ವಿಕೃತಿರ್ನಾಮ ಕರ್ತೃತ್ವಂ ಜಡಸಂಶ್ರಯಮ್ ।
ಪುಮಾನ್ ದೋಗ್ಧಾ ಚ ಗೌರ್ದೋಗ್ಧ್ರೀ ಸ್ತನೋ ದೋಗ್ಧೇತಿವತ್ ಕ್ರಮಾತ್' ಇತಿ । – ಗೀ.ತಾ.(೩/೨೮)

೯೩. ಪಾಣ್ಯೋರೂರುಪದೋರುಪಸ್ಥಿತೇರಿತ್ಯತ್ರ ಪಾಣಪದೇನ ಪಂಚಪಂಚಾಂಗುಲಿಸಹಿತೇ ಹಸ್ತತಲೇ ಚೋಚ್ಯತೇ। ''ಪಂಚಶಾಖಿಶ್ಯಯಃ ಪಾಣಃ। ಅಂಗುಲ್ಯಃ ಕರಶಾಖಾಃ ಸ್ಯುಃ'' ಇತ್ಯಮರಃ। ತಯೋಶ್ಚ ಆಜಾನುಲಂಬಮಾನತ್ವಾತ್ ಊರುಪದೋರುಪಸ್ಥಿತೇಃ ವಿಟ್ಶೂದ್ರಕೌ ಕರ್ಮಣಾಂ ಕೌಶಲೇತೌ= ಹಸ್ತಯೋಗ್ಯಕರ್ಮಕೌಶಲಸಹಿತೌ ಚಕಾರೇತ್ಯರ್ಥಃ। ಸಾಮಾನ್ಯತಃ ಸರ್ವ ಏವಾಖಿಲಾನಾಮಿತ್ಯತ್ರ ಆಪದಿ ಬ್ರಾಹ್ಮಣಾನಾಂ ಕ್ಷತ್ರಿಯಧರ್ಮಃ। ಕ್ಷತ್ರಿಯಾಣಾಂ ಚ ವೈಶ್ಯಧರ್ಮಃ। ವೈಶ್ಯಾನಾಂ ಚ ಶೂದ್ರಧರ್ಮಃ। ಅತ್ಯಾಪದಿ ಬ್ರಾಹ್ಮಣಾನಾಂ ಕ್ಷತ್ರಿಯಾಣಾಂ ವಿಶಾಂ ಚ ಚತ್ವಾರೋಽಪಿ ಧರ್ಮಾಃ। ಶೂದ್ರಾಣಾಂ ತು ಕದಾಚಿತ್ ಬ್ರಾಹ್ಮಣಧರ್ಮವ್ಯತಿರಿಕ್ತಾಸ್ತ್ರಯೋಽಪಿ ಧರ್ಮಾ ಇತ್ಯನೇನ ಪ್ರಕಾರೇಣ ಅಖಿಲಾನಾಂ ಸಾಮಾನ್ಯತಃ ಸರ್ವೋಽಪಿ ಧರ್ಮ ಇತಿ ವಿವೇಕಃ ॥ – (ವಾ.)

೯೩. ಅಮುಖ್ಯತ್ವೇನ ಅಖಿಲಾನಾಂ ವಿಪ್ರಾದೀನಾಂ ಸರ್ವ ಏವ ಪ್ರಾಗುಕ್ತಾಃ ಸರ್ವೇ ಧರ್ಮಾ ಉಕ್ತಾ ಇತ್ಯರ್ಥಃ । – (ಜ.)

ಅ: ತೋಳುಗಳು ಮತ್ತು ಎದೆ ಬಲಕ್ಕೂ, ಹೃದಯ ಜ್ಞಾನಕ್ಕೂ ನೆಲೆ. ಆದ್ದರಿಂದ ರಾಜರುಗಳಿಗೆ ಬಲಕಾರ್ಯ, ಜ್ಞಾನಕಾರ್ಯಗಳೆರಡೂ ಧರ್ಮವೆಂದು ವಿಹಿತವಾಗಿವೆ. ಕೈಯು ಕರ್ಮಕೌಶಲಕ್ಕೆ ನೆಲೆ. ಆದ್ದರಿಂದ ಕೈಗಳು ತೊಡೆಗೂ, ಕಾಲುಗಳು ಪಾದಕ್ಕೂ, ಸಮೀಪವಿರುವುದರಿಂದ ವೈಶ್ಯ, ಶೂದ್ರರು ಕುಶಲ ಕಲೆಗಳಲ್ಲಿ ನೈಪುಣ್ಯವನ್ನು ಹೊಂದಿದವರಾಗಬೇಕು.

ವಿ: ತೋಳುಗಳು ಮತ್ತು ಎದೆ ಬಲದ ನೆಲೆಗಳು. ಆದರಂತೆ ಹೃದಯ ಜ್ಞಾನದ ನೆಲೆ. ಬಾಹುಗಳಿಂದ ಹುಟ್ಟಿದ ಕ್ಷತ್ರಿಯ ಹೀಗೆ ತೋಳು, ಎದೆ ಮತ್ತು ಹೃದಯಗಳ ಸಂಕೇತವಾದ ಬಲಕಾರ್ಯ ಮತ್ತು ಜ್ಞಾನಕಾರ್ಯ ಎರಡನ್ನೂ ತನ್ನ ಕರ್ಮಗಳನ್ನಾಗಿಸಿಕೊಳ್ಳಬೇಕು. ಕೈಕುಶಲತೆಯ ಸಂಕೇತ. ಆದ್ದರಿಂದ ತೊಡೆಗೆ ಹತ್ತಿರವಾಗುವ ಕೈ ಹಾಗೂ ಕಾಲಿಗೂ ಹತ್ತಿರವೆನ್ನಿಸುವ ಕೈ ವೈಶ್ಯ ಮತ್ತು ಶೂದ್ರರಿಗೂ ಕುಶಲ ಕರ್ಮಗಳ ಪರಿಣತಿಯನ್ನು ಧರ್ಮವೆಂದು ತಿಳಿಸಿವೆ ಎಂದರ್ಥ.

ವರ್ಣಧರ್ಮದ ಮರ್ಮ

ಪ್ರಾಧಾನ್ಯತೋ ಧರ್ಮವಿಶೇಷ ಏಷ
ಸಾಮಾನ್ಯತಃ ಸರ್ವ ಏವಾಖಿಲಾನಾಮ್ ।
ವಯಂ ಹಿ ದೇವಾಸ್ತೇನ ಸರ್ವಂ ಹಿ ಕರ್ಮ
ಪ್ರಾಯೇಣ ನೋ ಧರ್ಮತಾಮೇತಿ ಶಶ್ವತ್ ॥ ೯೪ ॥

ಅ: ಇದು ಪ್ರಾಧಾನ್ಯ ವಿವಕ್ಷೆಯಿಂದ ಹೇಳಿದ ವಿಶೇಷ ಧರ್ಮ. ಸಾಮಾನ್ಯವಾಗಿ ಎಲ್ಲವೂ ಎಲ್ಲರಿಗೂ ಧರ್ಮಗಳೇ ಆಗಿವೆ. ನಾವು ದೇವತೆಗಳು, ಆದ್ದರಿಂದ ನಮಗೆ ಸಾಮಾನ್ಯವಾಗಿ ಸರ್ವಕರ್ಮವೂ ಯಾವಾಗಲೂ ಧರ್ಮವೇ ಎನ್ನಿಸುವುದು.

ವಿ: ೧) ಹೀಗೆ ಬ್ರಾಹ್ಮಣಾದಿಗಳಿಗೆ ಜಪಾದಿಗಳು ವಿಶೇಷ ಧರ್ಮಗಳು ಎಂದು ಹೇಳಲಾಯಿತು. ಆದರೆ, ಇವೆಲ್ಲವೂ ಸಹ ಎಲ್ಲರಿಗೂ ಸಾಮಾನ್ಯವಾಗಿ ಧರ್ಮಗಳೇ ಆಗಿವೆ. ಇದು ವರ್ಣಧರ್ಮದ ಬಗ್ಗೆ ಒಂದು ವಿಶೇಷ ಬೆಳಕು. ಇದರಂತೆ ಸ್ತ್ರೀಯರ, ಗೋವುಗಳ ಸಂರಕ್ಷಣೆಗಾಗಿ ಕ್ಷತ್ರಿಯರಿಗೆ ವಿಹಿತವಾದ ಯುದ್ಧವು ಬ್ರಾಹ್ಮಣನಿಗೂ ಧರ್ಮ. ವೈಶ್ಯರಿಗೆ ವಿಹಿತವಾದ ಸಂತಾನವೃದ್ಧಿ ಬ್ರಾಹ್ಮಣನಿಗೂ ವಿಹಿತವೇ. ಇಲ್ಲದಿದ್ದರೆ ಬ್ರಾಹ್ಮಣ ವಂಶ ಬೆಳೆಯುವುದಾದರೂ ಹೇಗೆ. ಅದರಂತೆ ಉತ್ತಮರ ಪರಿಚರ್ಯಾರೂಪವಾದ ಶೂದ್ರಧರ್ಮವೂ ವಿಹಿತವೇ. ಅದರಂತೆ ಕ್ಷತ್ರಿಯನಿಗೂ ತನ್ನ ವರ್ಣದವರಿಗೆ ಅಥವಾ ಇತರ ವರ್ಣದವರಿಗೆ, ತನ್ನ ಅನುಬಂಧಿಗಳಿಗೆ ಉಪದೇಶವೆಂಬ ಬ್ರಾಹ್ಮಣ ಧರ್ಮ ವಿಹಿತ. ಕ್ಷತ್ರಿಯ ಸಂತತಿಯ ವೃದ್ಧಿಗಾಗಿ ಸಂತತಿ ವೃದ್ಧಿರೂಪವಾದ ವೈಶ್ಯಧರ್ಮ ವಿಹಿತ. ಸ್ವೋತ್ತಮರ ಸೇವೆಗಾಗಿ ಶೂದ್ರಧರ್ಮವೂ ವಿಹಿತ. ವೈಶ್ಯರಿಗೂ ಬ್ರಾಹ್ಮಣ ಕ್ಷತ್ರಿಯರಂತೆ

ವೇದಾಧಿಕಾರವಿರುವುದರಿಂದ ಜಪೋಪದೇಶವೂ, ಗೋಬ್ರಾಹ್ಮಣ ರಕ್ಷಣೆಗಾಗಿ ಯುದ್ಧರೂಪವಾದ ಕ್ಷತ್ರಿಯಧರ್ಮವೂ, ಸ್ವೋತ್ತಮರ ವಿಷಯದಲ್ಲಿ ಸೇವಾರೂಪವಾದ ಶೂದ್ರಧರ್ಮವೂ ವಿಹಿತವೇ. ಶೂದ್ರನಿಗೂ ತನ್ನ ಜನಗಳಿಗೆ ಯಥೋಚಿತವಾದ ಉಪದೇಶ ರೂಪವಾದ ಬ್ರಾಹ್ಮಣ ಧರ್ಮ, ಗೋಬ್ರಾಹ್ಮಣರ ರಕ್ಷಣೆಗಾಗಿ ಯುದ್ಧ ಎಂಬ ಕ್ಷತ್ರಿಯಧರ್ಮ, ತನ್ನ ಸಂತತಿಯ ವೃದ್ಧಿಗಾಗಿ ವೈಶ್ಯಧರ್ಮ ವಿಹಿತವಾಗಿವೆ.

೨) ಅದರಂತೆ ತಾನು ಜಪೋಪದೇಶಗಳೊಂದಿಗೆ ಆತ್ಮರಕ್ಷಣೆಗಾಗಿ ಕ್ಷತ್ರಿಯ ಧರ್ಮವನ್ನು, ಸಂತತಿ ವೃದ್ಧಿಗಾಗಿ ವೈಶ್ಯಧರ್ಮವನ್ನು, ತನ್ನದೇ ಕಾರ್ಯಗಳನ್ನು ಪೂರೈಸಿಕೊಳ್ಳಲಿಕ್ಕೋಸ್ಕರವಾಗಿ ಶೂದ್ರಧರ್ಮವನ್ನೂ ಸಹ ವಹಿಸಬೇಕಾದುದು ವಿಹಿತ.

೩) ಹೀಗೆ ವರ್ಣಧರ್ಮವನ್ನು ತುಂಬಾ ವ್ಯಾಪಕವಾಗಿ ವಿಶ್ಲೇಷಿಸಿದ ಹಿರಿಮೆ ಶ್ರೀಮಧ್ವಾಚಾರ್ಯರದು.

೪) ಮನುಷ್ಯನ ದೇಹದಲ್ಲಿ ತಲೆ, ಕೈಗಳು, ತೊಡೆಗಳು, ಕಾಲುಗಳು ಇರುವುದೂ ಸಹ ನಾಲ್ಕು ವರ್ಣಗಳ ಧರ್ಮಾಚರಣೆಗೆ ಸೂಚಕ ಎಂದು ತಿಳಿಯಬೇಕು. ತಲೆ ಬ್ರಾಹ್ಮಣನ ಕಾರ್ಯವಾದ ಜಪೋಪದೇಶಗಳಿಗೂ, ಕೈಗಳು ರಕ್ಷಣಾದಿ ಕಾರ್ಯಗಳಿಗೂ, ತೊಡೆಗಳು ಸಂತತಿ ವೃದ್ಧಿ ಮೊದಲಾದ ಕಾರ್ಯಗಳಿಗೂ, ಕಾಲುಗಳು ಸೇವಾ ಕಾರ್ಯಗಳಿಗೂ ಸಂಕೇತ.

೫) ಇನ್ನು ದೇವತೆಗಳಿಗೆ ನಾಲ್ಕು ವರ್ಣದ ಧರ್ಮಗಳೂ ಸಹ ವಿಶೇಷವಾಗಿಯೇ ವಿಹಿತ ಎಂಬುದು ಮತ್ತೊಂದು ಪ್ರಮೇಯ. ಆ ಬಗ್ಗೆ ಬ್ರಹ್ಮಸೂತ್ರಗಳಲ್ಲಿ ವಿವರಗಳು ಬಂದಿವೆ. ಅವರು ಸಾಮಾನ್ಯವಾಗಿ ಭೂಲೋಕದಲ್ಲಿ ಅವತರಿಸಿದಾಗ ತಾವು ಜನಿಸಿದ ವರ್ಣಕ್ಕೆ ಅನುಗುಣವಾದ ಕಾರ್ಯಗಳನ್ನೇ ಮಾಡಿದರೂ ವಿಶೇಷ ಪ್ರಸಂಗಗಳಲ್ಲಿ ಭಿನ್ನ ವರ್ಣದ ಕಾರ್ಯಗಳನ್ನು ಮಾಡುವ ವಿಶೇಷ ಅವಕಾಶವನ್ನು ಹೊಂದಿರುವರು ಎಂದು ತಿಳಿಯಬೇಕು.

೬) ಮನುಷ್ಯರಿಗೆ ಆಪತ್ಕಾಲದಲ್ಲಿ ಕ್ಷತ್ರಿಯಾದಿಧರ್ಮಗಳು ವಿಹಿತ ಎಂಬ ಹೆಚ್ಚಿನ ವಿವರ ಇಪ್ಪತ್ತೊಂಭತ್ತನೇ ಅಧ್ಯಾಯದಲ್ಲಿ ನಿರೂಪಿತವಾಗಿದೆ.

---

೯೪. 'ದೇವಾ ಏವ... ಸರ್ವವರ್ಣಾಃ ಸರ್ವಾಶ್ರಮಾಃ' ಇತ್ಯಾದಿ ಮಾಠರಶ್ರುತೌ। –ಬ್ರಸೂತ್ರಭಾಷ್ಯ(೩/೪/೪೮)

೯೪ ವಯಂ ಮನುಷ್ಯಧರ್ಮಾನುಸಾರಿಣೋ ನೇತ್ಯಾಹ – ವಯಂ ಹೀತಿ । ನೀಚಸೇವಾದಿವ್ಯಾವೃತ್ತ್ಯರ್ಥಂ ಪ್ರಾಯೇಣೇತ್ಯುಕ್ತಮ್। –(ಜ.)

ಏತೈರ್ಧರ್ಮೈರ್ವಿಷ್ಣುನಾ ಪೂರ್ವಕ್ಲೃಪ್ತೈಃ
ಸರ್ವೈರ್ವರ್ಣೈರ್ವಿಷ್ಣುರೇವಾಭಿಪೂಜ್ಯಃ ।
ತದ್ಭಕ್ತಿರೇವಾಖಿಲಾನಾಂ ಚ ಧರ್ಮೋ
ಯಥಾಯೋಗ್ಯಂ ಜ್ಞಾನಮಸ್ಯಾಪಿ ಪೂಜಾ ॥ ೯೫ ॥

ಅ: ಹೀಗೆ ಎಲ್ಲ ವರ್ಣದವರೂ ವಿಷ್ಣುವಿನಿಂದ ಸೃಷ್ಟಿಯ ಆದಿಯಲ್ಲಿಯೇ ವಿಹಿತವಾದ ತಮ್ಮ ಧರ್ಮ ಗಳಿಂದ ವಿಷ್ಣುವನ್ನೇ ಆರಾಧಿಸಬೇಕು. ಅವನಲ್ಲಿ ಯಥಾಯೋಗ್ಯವಾದ ಭಕ್ತಿ ಎಲ್ಲರಿಗೂ ಧರ್ಮ. ಅದರಂತೆ ಯಥಾಯೋಗ್ಯವಾದ ಜ್ಞಾನಸಂಪಾದನೆ ಮತ್ತು ಅವನ ಪೂಜೆ ಸರ್ವರಿಗೂ ಧರ್ಮವೇ.

ವಿ: ೧) ಇದು ಮತ್ತೊಂದು ರೀತಿಯಲ್ಲಿ ಸರ್ವವರ್ಣದವರಿಗೂ ಸಮಾನವಾದ ಧರ್ಮಗಳ ನಿರೂಪಣೆ. ವಿಷ್ಣುವೇ ವರ್ಣಧರ್ಮಗಳನ್ನು ಸೃಷ್ಟಿಯ ಪ್ರಾರಂಭದಲ್ಲೇ ವಿಧಿಸಿರುವನು – 'ಚಾತುರ್ವರ್ಣ್ಯಂ ಮಯಾ ಸೃಷ್ಟಂ ಗುಣಕರ್ಮವಿಭಾಗಶಃ' (ಗೀತಾ ೪/೧೩).

೨) ಎಲ್ಲ ವರ್ಣದವರೂ ವಿಷ್ಣುವನ್ನೇ ಪೂಜಿಸುವುದು, ಅವನಲ್ಲೇ ಭಕ್ತಿ ಮಾಡುವುದು, ಯಥಾಯೋಗ್ಯವಾಗಿ ಜ್ಞಾನಾರ್ಜನೆ ಮಾಡುವುದು ಮೊದಲಾದ ಮುಖ್ಯಕಾರ್ಯಗಳನ್ನು ಮಾಡಲೇಬೇಕೆಂಬುದು ವಿಶೇಷವಿಧಿ.

ವಿಷ್ಣುಪೂಜೆಗೆಂದು ಸ್ವಧರ್ಮ

ಪಿತಾ ಗುರುಃ ಪರಮಂ ದೈವತಂ ಚ
ವಿಷ್ಣುಃ ಸರ್ವೇಷಾಂ ತೇನ ಪೂಜ್ಯಃ ಸ ಏವ ।
ತದ್ಭಕ್ತತ್ವಾದ್ದೇವತಾಶ್ಚಾಭಿಪೂಜ್ಯಾ
ವಿಶೇಷತಸ್ತೇಷು ಯೇಽತ್ಯಂತಭಕ್ತಾಃ ॥ ೯೬ ॥

ಅ: ವಿಷ್ಣುವು ಎಲ್ಲರಿಗೂ ತಂದೆ, ಗುರು, ಪರದೇವತೆ - ಎಲ್ಲಾ ಆಗಿರುವನು. ಆದ್ದರಿಂದ ಎಲ್ಲರಿಗೂ ಅವನೇ ಪೂಜ್ಯನಾಗಿರುವನು. ಅವನ ಭಕ್ತರಾದ್ದರಿಂದ ದೇವತೆಗಳೂ ಪೂಜ್ಯ-ರಾಗಿರುವರು. ಅವರಲ್ಲಿಯೂ ಅತ್ಯಂತಹರಿಭಕ್ತರು ವಿಶೇಷವಾಗಿ ಪೂಜ್ಯರು.

ವಿ: ಹರಿಯೇ ತಂದೆ ತಾಯಿ ಮೊದಲಾಗಿ ಎಲ್ಲರಲ್ಲೂ ನೆಲೆಸಿದ್ದು ಅವರಿಂದ ರಕ್ಷಣೆ ಕೊಡಿಸುವುದರಿಂದ ಸರ್ವರಿಗೂ ಅವನೇ ಮುಖ್ಯವಾಗಿ ಪೂಜ್ಯ. ಹರಿಭಕ್ತರಾದ್ದರಿಂದ ದೇವತೆಗಳು ತಾರತಮ್ಯಕ್ರಮದಲ್ಲಿ ಸರ್ವಥಾ ಪೂಜ್ಯರೇ ಆಗಿರುವರು. ಅದರಲ್ಲೂ ವಿಶೇಷವಾಗಿ ಹರಿಭಕ್ತರಾದ ಲಕ್ಷ್ಮೀ, ಬ್ರಹ್ಮ ವಾಯುಗಳು, ಸರಸ್ವತಿ ಭಾರತಿಯರು ಮೊದಲಾದ ತತ್ತ್ವಾಭಿಮಾನಿ ದೇವತೆಗಳು

ವಿಶೇಷವಾಗಿ ಪೂಜ್ಯರು. ಪರಶುಕ್ಲತ್ರಯರೆನಿಸಿರುವ ರಮಾ, ಬ್ರಹ್ಮವಾಯು, ಸರಸ್ವತಿ ಭಾರತಿಯರಂತೂ ಇನ್ನೂ ವಿಶೇಷವಾಗಿ * ಪೂಜ್ಯರು ಎಂದು ತಿಳಿಯಬೇಕು.

ಹರಿಸ್ವತಂತ್ರ್ಯದ ಫಲಶ್ರುತಿ

ಸಂಪೂಜಿತೋ ವಾಸುದೇವಃ ಸ ಮುಕ್ತಿಂ
ದದ್ಯಾದೇವಾಪೂಜಿತೋ ದುಃಖಮೇವ ।
ಸ್ವತಂತ್ರತ್ವಾತ್ ಸುಖದುಃಖಪ್ರದೋಽಸೌ
ನಾನ್ಯಃ ಸ್ವತಂತ್ರಸ್ತದ್ವಶಾಃ ಯತ್ ಸಮಸ್ತಾಃ ॥ ೯೭ ॥

ಅ: ಆ ವಾಸುದೇವನು ಚೆನ್ನಾಗಿ ಆರಾಧಿತನಾದಾಗ ಮುಕ್ತಿಯನ್ನೇ ನೀಡುವನು. ಆರಾಧಿತನಾಗದಿದ್ದಾಗ ದುಃಖವನ್ನೇ ನೀಡುವನು. ಅವನು ಸ್ವತಂತ್ರನಾದ್ದರಿಂದ ಸುಖ ದುಃಖಪ್ರದನಾಗಿರುವನು. ಇತರ ಯಾರೂ ಸ್ವತಂತ್ರರಲ್ಲ. ಎಲ್ಲರೂ ಅವನ ಅಧೀನರಾಗಿರುವವರೇ.

ವಿ: ಸ್ವತಂತ್ರನಾದ ಶ್ರೀಹರಿಯೇ ಬಂಧ ಮೋಕ್ಷಾದಿ ಸಕಲ ಕಾರ್ಯಗಳಿಗೂ ಮುಖ್ಯ ಕಾರಣ. ಅವನ ಆರಾಧನೆ ಮೋಕ್ಷಸಾಧನವಾಗಿರುವಂತೆ ಪರಿತ್ಯಾಗ ತಮಃಸಾಧನ ಎಂದರ್ಥ. ರಮಾ, ಬ್ರಹ್ಮಾದಿ ಇತರ ಎಲ್ಲರೂ ಅಸ್ವತಂತ್ರರೇ ಹೊರತು ಸ್ವತಂತ್ರರಲ್ಲ.

ಸ್ವತಂತ್ರತ್ವಾತ್ ಸುಖಿಸಜ್ಜ್ಞಾನಶಕ್ತಿ-
ಪೂರ್ವೈರ್ಗುಣೈಃ ಪೂರ್ಣ ಏಷೋಽಖಿಲೈಶ್ಚ ।
ಸ್ವತಂತ್ರತ್ವಾತ್ ಸರ್ವದೋಷೋಜ್ಝಿತಶ್ಚ
ನಿಃಸೀಮಶಕ್ತಿರ್ಹಿ ಯತಃ ಸ್ವತಂತ್ರಃ ॥ ೯೮ ॥

ಅ: ಸ್ವತಂತ್ರನಾದ್ದರಿಂದ ಆನಂದ, ಸುಜ್ಞಾನ, ಸಚ್ಛಕ್ತಿ ಮೊದಲಾದ ಸಕಲಗುಣಗಳಿಂದಲೂ ಅವನು ಪರಿಪೂರ್ಣನಾಗಿರುವನು. ಸ್ವತಂತ್ರನಾದ್ದರಿಂದಲೇ ಸಕಲ ದೋಷಗಳಿಂದ ರಹಿತನೂ ಆಗಿರುವನು. ಎಣೆಯಿಲ್ಲದ ಶಕ್ತಿಯುಳ್ಳವನಷ್ಟೇ ಸ್ವತಂತ್ರನಲ್ಲವೇ.

---

* ರಮಾಬ್ರಹ್ಮಾದಯಸ್ತಸ್ಯ ಪರಿವಾರತ ಏವ ತು । –ಸದಾಚಾರಸ್ಮೃತಿ (ಶ್ಲೋ. ೩೪)
ಪರಿವಾರತಯಾ ಗ್ರಾಹ್ಯಾ ಅಪಿ ಹೇಯಾಃ ಪ್ರಧಾನತಃ ॥ –ಅನುವ್ಯಾಖ್ಯಾನ (೧/೧/೧೩೬)
ಯಸ್ಯ ದೇವೇ ಪರಾ ಭಕ್ತಿರ್ಯಥಾ ದೇವೇ ತಥಾ ಗುರೌ । –ಮ.ಭಾ.ತಾ.ನಿ. (೧/೧೦೨)
ತಸ್ಮಾದೇತೇ ಪ್ರಿಯಾ ವಿಷ್ಣೋರಂತರಂಗತಯಾ ಸದಾ ।
ಜ್ಞೇಯಾಶ್ಚೈವ ಪ್ರಪೂಜ್ಯಾಶ್ಚ ವಿಷ್ಣೋಃ ಪ್ರೀತಿಮಭೀಪ್ಸತಾ ॥ –ತಂತ್ರಸಾರಸಂಗ್ರಹ (೪/೭೫)

೯೮. ವಿಷ್ಣುರಖಿಲಗುಣಗಣಪೂರ್ಣಃ ಸರ್ವದೋಷದೂರಶ್ಚ। ಸ್ವತಂತ್ರತ್ವಾದ್ವ್ಯತಿರೇಕೇಣಾಸ್ಮದಾದಿವದಿತಿ ।–(ತಾ.)

ಎ: ಸ್ವತಂತ್ರನೆಂದರೆ ಬಯಸಿದ ಎಲ್ಲವನ್ನೂ ಪಡೆಯುವವನು. ಗುಣಗಳು ಅಪೇಕ್ಷಣೀಯ–ವಾದ್ದರಿಂದ ಸ್ವತಂತ್ರನಾದ ಶ್ರೀಹರಿ ಸರ್ವಗುಣಪೂರ್ಣ ಎಂದಾಗುವುದು. ಬಯಸದವುಗಳನ್ನು ದೂರ ಮಾಡುವುದು ಸ್ವತಂತ್ರನ ಮತ್ತೊಂದು ಲಕ್ಷಣ. ದೋಷಗಳು ಅನಪೇಕ್ಷಣೀಯ, ಆದ್ದರಿಂದ ಅವನು ಸಕಲ ದೋಷಗಳಿಂದಲೂ ದೂರಾದವನು.

ಸ್ವಧರ್ಮವೇ ಹರಿಪೂಜೆ

ದೋಷಾಸ್ಪೃಷ್ಟೌ ಗುಣಪೂರ್ತೌ ಚ ಶಕ್ತಿ-
ರ್ನಿಸ್ಸೀಮತ್ವಾದ್ವಿದ್ಯತೇ ತಸ್ಯ ಯಸ್ಮಾತ್ ।
ಏವಂ ಗುಣೈರಖಿಲೈಶ್ಚಾಪಿ ಪೂರ್ಣೋ
ನಾರಾಯಣಃ ಪೂಜ್ಯತಮಃ ಸ್ವಧರ್ಮೈಃ ॥ ೯೯ ॥

ಅ: ನಿಸ್ಸೀಮನಾದ್ದರಿಂದ ದೋಷರಹಿತನಾಗುವುದಕ್ಕೂ, ಗುಣಪೂರ್ಣನಾಗುವುದಕ್ಕೂ ಅವನಿಗೆ ಶಕ್ತಿ ಇದ್ದೇ ಇರುವುದು. ಆದ್ದರಿಂದ ನಾರಾಯಣನು ಸಕಲ ಗುಣಗಳಿಂದ ಪರಿಪೂರ್ಣ, ಸ್ವಧರ್ಮಗಳಿಂದ ಸರ್ವರಿಂದ ಅತ್ಯಂತ ಪೂಜ್ಯ.

ದುಷ್ಟನಿಗ್ರಹವೇ ಕ್ಷತ್ರಿಯರ ಹರಿಪೂಜೆ

ಅಸ್ಮಾಕಂ ಯತ್ ತೇನ ನಾತಿಕ್ಷಮೈವ
ಧರ್ಮೋ ದುಷ್ಟಾನಾಂ ವಾರಣಂ ಹ್ಯೇವ ಕಾರ್ಯಮ್ ।
ಹನ್ಯಾದ್ದುಷ್ಟಾನ್ ಯಃ ಕ್ಷತ್ರಿಯಃ ಕ್ಷತ್ರಿಯಾಂಶ್ಚ
ವಿಶೇಷತೋ ಯುದ್ಧಗತಾನ್ ಸ್ಮರನ್ ಹರಿಮ್ ॥ ೧೦೦ ॥

ಸ್ವಬಾಹುವೀರ್ಯೇಣ ಚ ತಸ್ಯ ಬಾಹೂ
ಚೈತನ್ಯಮಾತ್ರೌ ಭವತಃ ಸದೇಹೌ ।
ಪಾಪಾಧಿಕಾಂಶ್ಚೈವ ಬಲಾಧಿಕಾಂಶ್ಚ
ಹತ್ವಾ ಮುಕ್ತಾವಧಿಕಾನಂದವೃದ್ಧಿಃ ॥ ೧೦೧ ॥

ಅ: ಹೀಗೆ ನಮಗೂ ಅವನು ಸ್ವಧರ್ಮದಿಂದ ಅತ್ಯಂತ ಪೂಜ್ಯ. ಆದ್ದರಿಂದ ಅತಿಯಾದ ಕ್ಷಮೆ ನಮಗೆ ಧರ್ಮವಲ್ಲ. ದುಷ್ಟರ ನಾಶವನ್ನು ನಾವು ಮಾಡಲೇಬೇಕು. ಯಾವ ಕ್ಷತ್ರಿಯನು

---

* ಯದಧೀನಾ ಗುಣಾಶ್ಚೈವ ದೋಷಾ ಅಪಿ ಹಿ ಸರ್ವಶಃ ।
ಗುಣಾಸ್ತಸ್ಯ ಕಥಂ ನ ಸ್ಯುಃ ಸ್ಯುರ್ದೋಷಾಶ್ಚ ಕಥಂ ಪುನಃ ॥ – ಅನುವ್ಯಾಖ್ಯಾನ (೨/೧/೧೧೩, ೧೧೪)

ದುಷ್ಟರನ್ನು ಸಂಹರಿಸುವನೋ, ಅದರಲ್ಲೂ ಯುದ್ಧದಲ್ಲಿ ಇದಿರಾಗುವ ದುಷ್ಟ ಕ್ಷತ್ರಿಯರನ್ನು ಹರಿಯನ್ನು ಸ್ಮರಿಸುತ್ತಾ ತನ್ನ ಬಾಹುಬಲದಿಂದ ನಾಶ ಮಾಡುವನೋ ಅವನ ತೋಳುಗಳು ಮತ್ತು ದೇಹವು ಚಿನ್ಮಯವಾಗುವವು. ಮಹಾಪಾಪಿಗಳನ್ನು ವರಾದಿಗಳಿಂದ ಮಹಾಬಲಿಷ್ಠರಾದ ದುಷ್ಟರನ್ನು ಸಂಹರಿಸಿದರೆ ಮುಕ್ತಿಯಲ್ಲಿ ಅಧಿಕವಾಗಿ ಆನಂದವು ವೃದ್ಧಿ ಹೊಂದುವುದು.

ವಿ: ೧) ಸಾಮಾನ್ಯ ಪಾಪಿಗಳನ್ನು ಕೊಲ್ಲುವುದೇ ಧರ್ಮವಾಗಿರುವಾಗ, ಮಹಾಪಾಪಿಗಳ ಸಂಹಾರವಂತು ಇನ್ನೂ ವಿಶೇಷವಾದ ಧರ್ಮ. ಜ್ಞಾನದಿಂದ ಮುಕ್ತಿ ಖಚಿತವಾದರೂ, ಮಹಾ ದುಷ್ಟಸಂಹಾರಾದಿಕಾರ್ಯಗಳಿಂದ ಮುಕ್ತಿಯಲ್ಲಿ ಆನಂದಾತಿಶಯ ಲಭಿಸುವುದು.

೨) ಆದ್ದರಿಂದ ಮಹಾಜ್ಞಾನಿಯೂ ಸಹ ದುಷ್ಟನಾಶಾದಿ ಕಾರ್ಯಗಳನ್ನು ಮಾಡಲೇಬೇಕು. ಕ್ಷಮೆಯೆಂಬುದು ಸರ್ವಥಾ ದುಷ್ಟರ ವಿಷಯದಲ್ಲಿ ಧರ್ಮವೆನ್ನಿಸದು ಎಂದರ್ಥ.

೩) ತೋಳುಗಳು ಹಾಗೂ ದೇಹವು ಚಿನ್ಮಯವಾಗುವುದು ಎಂದರೆ ಕೇವಲ ಜ್ಞಾನಾನಂದ–ಮಯವಾದ ಸ್ವರೂಪ ದೇಹವೇ ಲಭಿಸುವುದು, ಎಂದರೆ ಮುಕ್ತಿಯಾಗುವುದು ಎಂದರ್ಥ.

೪) ಅಥವಾ ದುಷ್ಟ ಸಂಹಾರಾದಿ ರೂಪವಾದ ಸ್ವಕಾರ್ಯವನ್ನು ನಡೆಸುವ ಬಾಹುಗಳೇ ನಿಜವಾಗಿಯೂ ಚೈತನ್ಯಪೂರ್ಣ ಎನ್ನಿಸುವಂತಹುವು. ಇಲ್ಲವಾದಲ್ಲಿ ಶವದ ಬಾಹುಗಳಂತೆ ವ್ಯರ್ಥ ಎಂಬ ಅರ್ಥವೂ ಸೂಚಿತ ಎಂದು ತಿಳಿಯಬಹುದು.

ಯುದ್ಧದಲ್ಲಿ ರಾಜಧರ್ಮ

ಪ್ರೀತಿಶ್ಚ ವಿಷ್ಣೋಃ ಪರಮೈವ ತತ್ರ
ತಸ್ಮಾದ್ದಂತವ್ಯಾಃ ಪಾಪಿನಃ ಸರ್ವಥೈವ ।
ಯೇ ತ್ವಕ್ಷಧೂರ್ತಾ ಗ್ರಹಣಂ ಗತಾ ವಾ
ಪಾಪಾಸ್ತೇऽನ್ಯೈರ್ಘಾತನೀಯಾಃ ಸ್ವದೋರ್ಭ್ಯಾಮ್ ॥ ೧೦೨ ॥

---

೧೦೧. ತಸ್ಯ ಬಾಹೂ ಚೈತನ್ಯಮಾತ್ರಾವಿತ್ಯತ್ರ ಬಾಹುವೀರ್ಯೇಣ ದುಷ್ಟಹನನಂ ಕುರ್ವತಃ ಕ್ಷತ್ರಿಯಸ್ಯ ಸದೇಹೌ= ದೇಹೇನ ಸಹಿತೌ ಬಾಹೂ ಮುಕ್ತೌ ಚೈತನ್ಯಮಾತ್ರೌ ಭವತಃ= ಭವಿಷ್ಯತಃ। ತಸ್ಯ ಮುಕ್ತಿರ್ಹಸ್ತಗತೇತಿ ಸೂಚನಾಯ ವರ್ತಮಾನಪ್ರಯೋಗಃ। ಯದ್ವಾ ಅಂತಃ ಸ್ಥಿತಚೈತನ್ಯಂ ಮಾಪಯತ ಇತಿ ಚೈತನ್ಯಮಾತ್ರೌ ಭವತಃ। ಏವಂ ಶೌರ್ಯಕರಣೇ ಚೇತನ ಇತಿ ಜ್ಞಾಯತೇ। ನೋ ಚೇತ್ತಸ್ಯ ಹಸ್ತೌ ದೇಹೋऽಪಿ ಶವದೇಹ ಇತಿ ಭಾವಃ ॥ –(ವಾ.)

೧೦೧. ಮುಕ್ತಾವಿತಿ ಸರ್ವಸಮ್ಮತಂ ಇದಾನೀಮಪಿ ಏವಂ ಚೈತನ್ಯಮಾತ್ರತ್ವಂ ಜ್ಞೇಯಮ್ । ತಥಾಹಿ ಚೇತನಸ್ಯ ಭಾವಶ್ಚೈತನ್ಯಮ್ । ಚೇತನಸಂಬಂಧಿತ್ವೇನ ಮೀಯತೇ ಇತಿ ಚೈತನ್ಯಮಾತ್ರೌ ಮೀಯಂತ ಇತಿ ಮಾತ್ರಾ ಯಥಾ ತತಶ್ಚ ಯುದ್ಧಾಖ್ಯಭಗವತ್ಪೂಜಾಕರ್ತೃತ್ವೇನ ಚೇತನಸಂಬಂಧಿನೌ ಭವತ ಇತ್ಯರ್ಥಃ । ಅನ್ಯಥಾ ಶಾವೌ ಕರೌ ನೋ ಕುರುತ ಸಪರ್ಯಾಂ ಹರೇರ್ಲಸತ್ಕಾಂಚನಕಂಕಣೌ ವೇತ್ಯಾದಿನಾ ಜಡಸಂಬಂಧಸ್ಯೋಕ್ತತ್ವಾದಿತಿ ಭಾವಃ ॥ –(ತಿ.)

ಅ: ಅಲ್ಲಿ ವಿಷ್ಣುವಿನ ಪರಮಪ್ರೀತಿಯೂ ಲಭಿಸುವುದು. ಆದ್ದರಿಂದ ಪಾಪಿಗಳೆಲ್ಲಾ ಸರ್ವಥಾ ವಧಾರ್ಹರೇ ಆಗಿರುವರು. ಕಪಟ ದ್ಯೂತಕ್ಕೆ ತೊಡಗುವವರು, ಅಥವಾ ಯುದ್ಧದಲ್ಲಿ ಸೆರೆ ಸಿಕ್ಕುವವರೂ ಆದ ಪಾಪಿಗಳನ್ನು ಬೇರೆಯವರಿಂದ ಕೊಲ್ಲಿಸಬೇಕು.

ವಿ: ಕಪಟ ದ್ಯೂತಕ್ಕೆ ತೊಡಗುವವರು, ಯುದ್ಧದಲ್ಲಿ ಸೆರೆ ಸಿಕ್ಕುವ ದುರ್ಬಲರು ಮೊದಲಾದ-ವರನ್ನು ರಾಜ ತಾನು ಸಾಕ್ಷಾತ್ತಾಗಿ ಕೊಲ್ಲದೇ ಇತರರಿಂದ ಕೊಲ್ಲಿಸಬೇಕು ಎಂದರ್ಥ. ಅದರಿಂದಾ-ಗಿಯೇ ಭೀಮು ಶಕುನಿಯನ್ನು ತಾನೇ ಕೊಲ್ಲದೇ ಸಹದೇವನಿಂದ ಕೊಲ್ಲಿಸಿದ್ದು ಎಂದು ತಿಳಿಯಬೇಕು.

ರಾಜಾನಂ ವಾ ರಾಜಪುತ್ರಂ ತಥೈವ
ರಾಜಾನುಜಂ ವಾऽಭಿಯಾತಂ ನಿಹನ್ಯಾತ್ ।
ರಾಜ್ಞಃ ಪುತ್ರೋऽಪ್ಯಕೃತೋದ್ವಾಹಕೋ ಯಃ
ಸ ಘಾತನೀಯೋ ನ ಸ್ವಯಂ ವಧ್ಯ ಏವ ॥ ೧೦೩ ॥

ಅ: ಯುದ್ಧದಲ್ಲಿ ಇದಿರಾಗುವ ರಾಜನನ್ನಾಗಲಿ, ರಾಜಪುತ್ರನನ್ನಾಗಲಿ ಹಾಗೆಯೇ ರಾಜನ ತಮ್ಮನನ್ನಾಗಲಿ ತಾನೇ ಕೊಲ್ಲಬೇಕು. ರಾಜಪುತ್ರನು ಇನ್ನೂ ಅವಿವಾಹಿತನಾಗಿದ್ದಲ್ಲಿ ಅವನನ್ನು ತಾನೇ ಕೊಲ್ಲಕೂಡದು.

ವಿ: ೧) ರಾಜಪುತ್ರರು ಇನ್ನೂ ಅವಿವಾಹಿತರು ಎಂದರೆ ಚಿಕ್ಕವರು ಎಂದು ಅರ್ಥವಾಗುವುದು. ಅಂಥವರನ್ನು ರಾಜನಾದವನು ತಾನು ಕೊಲ್ಲುವುದು ಉಚಿತವಲ್ಲವೆಂಬುದು ಅರ್ಥಪೂರ್ಣ-ವಾದುದು. ರಾಮದೇವರು ಇಂದ್ರಜಿತ್ತನ್ನು ಲಕ್ಷ್ಮಣನಿಂದ ಕೊಲ್ಲಿಸಿದ್ದು, ಅಕ್ಷಕುಮಾರನನ್ನು ಹನುಮಂತನಿಂದ ಕೊಲ್ಲಿಸಿದ್ದು ಇದಕ್ಕೆ ನಿದರ್ಶನ ಎಂದು ತಿಳಿಯಬೇಕು. ದುರ್ಯೋಧನ, ದುಶ್ಶಾಸನನ ಮಕ್ಕಳನ್ನು ಭೀಮಸೇನ ತಾನು ಕೊಲ್ಲದೆ ಅಭಿಮನ್ಯುವಿನಿಂದ ಕೊಲ್ಲಿಸಿದ್ದು ಈ ಹಿನ್ನೆಲೆಯಲ್ಲಿ ಶ್ರೇಷ್ಠ ಧರ್ಮ ಎನ್ನಿಸುವುದನ್ನು ಗಮನಿಸಬೇಕು.

೨) ಶ್ರೀರಾಮ ಶೂರ್ಪನಖಿಯ ಕಿವಿಮೂಗುಗಳನ್ನು ಲಕ್ಷ್ಮಣನಿಂದ ಕತ್ತರಿಸಿದ್ದು ಸಹ ಈ ಹಿನ್ನೆಲೆಯಲ್ಲಿ ಎಂದು ತಿಳಿಯಬೇಕು (೫/೨೬).

---

೧೦೨. ಯೇ ತ್ವಕ್ಷಧೂರ್ತಾ ಇತ್ಯತ್ರ ಗ್ರಹಣಂ = ಯುದ್ಧೇ ಗ್ರಹಣಮ್। ಸ್ವಕರವಶಂಗತಾಃ ಪುರುಷಾಃ ಪಾಪಾಶ್ಚೇತ್ ಘಾತನೀಯಾಃ। ಯದ್ಯಪಿ ಗ್ರಹಣಂ ಗತಾಃ ನ ಹಂತವ್ಯಾಃ। ತಥಾऽಪಿ ಪಾಪಿಷ್ಠಾಶ್ಚೇತ್ ತೇಷಾಂ ಹನನಮಪಿ ಧರ್ಮ ಏವೇತಿ ಭಾವಃ ॥ – (ವಾ.)

೧೦೩. ಸ ಘಾತನೀಯ ಇತ್ಯತ್ರ ಘಾತನೀಯಃ = ಪರಹಸ್ತೇನ ಘಾತನೀಯಃ। ನ ತು ಸ್ವಯಂ = ಸ್ವೇನೈವ। ಸ್ವಹಸ್ತೇನೇತಿ ಯಾವತ್। ವಧ್ಯೋ ನ ಅನ್ಯತ್ = ಯುದ್ಧಾಯಾಗತಕ್ಷತ್ರಿಯಾದನ್ಯತ್ ಧರ್ಮಯುಕ್ತಂ = ಧರ್ಮಯುಕ್ತಮೇವ। ಕ್ರೂರಂ ಕರ್ಮ = ಚೋರನಾಸಾಕರಕರ್ಣಶಿರಶ್ಛೇದಾದಿಕಂ ಪರೈಃ = ಸ್ವಭಟೈರೇವ ಪ್ರಸಾಧನೀಯಮ್। ನ ಸ್ವಕಾರ್ಯಂ = ಸ್ವೇನೈವ ಕಾರ್ಯಂ ನ ॥ – (ವಾ.)

ಕ್ರೂರಂ ಚಾನ್ಯದ್ಧರ್ಮಯುಕ್ತಂ ಪರೈಸ್ತತ್
ಪ್ರಸಾಧನೀಯಂ ಕ್ಷತ್ರಿಯೈರ್ನ ಸ್ವಕಾರ್ಯಮ್ ।
ಏವಂ ಧರ್ಮೋ ವಿಹಿತೋ ವೇದ ಏವ
ವಾಕ್ಯಂ ವಿಷ್ಣೋಃ ಪಂಚರಾತ್ರೇಷು ತಾದೃಕ್ ॥ ೧೦೪ ॥

ಅ: ಧರ್ಮಸಮ್ಮತವಾದ ಕ್ರೂರ ಕರ್ಮವನ್ನು ಕ್ಷತ್ರಿಯ ತಾನು ಮಾಡದೇ ಮತ್ತೊಬ್ಬರಿಂದ ಮಾಡಿಸಬೇಕು. ಈ ರೀತಿಯಾಗಿ ಧರ್ಮವು ವೇದಗಳಲ್ಲಿಯೇ ವಿಹಿತವಾಗಿದೆ. ಪಂಚರಾತ್ರ-ಗಳಲ್ಲಿ ವಿಷ್ಣುವಿನ ವಾಕ್ಯವೂ ಅದರಂತೆಯೇ ಇದೆ.

ವಿ: ೧) ಕೊಲೆ ಮೊದಲಾದವುಗಳನ್ನು ಮಾಡಿದ ಪಾಪಿಗಳನ್ನು ಶಿಕ್ಷಿಸುವುದು ರಾಜನ ಕರ್ತವ್ಯ, ಆದರೆ ಅವರನ್ನು ತಾನೇ ಕೊಲ್ಲದೆ, ತನ್ನ ಭೃತ್ಯರಿಂದ ಕೊಲ್ಲಿಸಬೇಕು. ಅದರಂತೆ ದ್ರೋಣಾದಿ ಗುರುಜನರು ಅನ್ಯಾಯವೆಸಗಿದಾಗ ಅವರನ್ನು ತಾನೇ ಸಂಹರಿಸದೇ ಇತರರಿಂದ ಕೊಲ್ಲಿಸಬೇಕು. ರಾಜರು ಗಲ್ಲುಶಿಕ್ಷೆ ಮೊದಲಾದವುಗಳನ್ನು ತಮ್ಮ ಭೃತ್ಯರಿಂದ ಮಾಡಿಸುವುದು ಇದಕ್ಕಾಗಿಯೇ ಎಂದು ತಿಳಿಯುವುದು.

೨) ದ್ರೋಣಭೀಷ್ಮಾದಿ ಹಿರಿಯರನ್ನು ಭೀಮಸೇನ ತಾನು ಸಾಕ್ಷಾತ್ತಾಗಿ ಸಂಹರಿಸದೇ ಅರ್ಜುನ ಮೊದಲಾದವರ ಮೂಲಕ ಸಂಹರಿಸಿದ್ದೂ ಸಹ ಈ ಕಾರಣದಿಂದಾಗಿಯೇ ಎಂದೂ ತಿಳಿಯಬೇಕು (ವಾ., ತಾ.). ಈ ರೀತಿಯಾದ ಧರ್ಮವಿವೇಚನೆ ವೇದಗಳಲ್ಲೂ, ಪಂಚರಾತ್ರಾದಿ ವೈದಿಕಗ್ರಂಥಗಳಲ್ಲೂ ನಿರೂಪಿತವಾಗಿದೆ ಎಂದರ್ಥ.

೩) ಹೀಗೆ ಹೇಳುವ ಮೂಲಕ ಭೀಮಸೇನ ಭೀಷ್ಮದ್ರೋಣಾದಿಗಳನ್ನು ತಾನು ಸಾಕ್ಷಾತ್ ಸಂಹರಿಸುವುದಿಲ್ಲ ಎಂಬ ಪ್ರಮೇಯವನ್ನೂ ತಿಳಿಸಿರುವನು ಎಂದು ತಿಳಿಯಬೇಕು.

ದ್ಯೂತದ ನಿಂದೆ

ಅಕ್ಷದ್ಯೂತಂ ನಿಕೃತಿಃ ಪಾಪಮೇವ
ಕೃತಂ ತ್ವಯಾ ಗರ್ಹಿತಂ ಸೌಬಲೇನ ।
ನ ಕುತ್ರಚಿದ್ವಿಧಿರಸ್ಯಾಸ್ತಿ ತೇನ
ನ ತದ್ದತ್ತಂ ದ್ಯೂತಹೃತಂ ವದಂತಿ ।
ಭೀತೇನ ದತ್ತಂ ದ್ಯೂತದತ್ತಂ ತಥೈವ
ದತ್ತಂ ಕಾಮಿನ್ಯೈ ಪುನರಾಹಾರ್ಯಮೇವ ॥ ೧೦೫ ॥

---

೧೦೫. ಅಕ್ಷದ್ಯೂತಂ ನಿಕೃತಿರಿತ್ಯತ್ರ ನಿಕೃತಿಃ= ಕಪಟರೂಪಮಿತ್ಯರ್ಥಃ ॥ – (ವಾ.)

ಅ: ಜೂಜು ಮೋಸದಿಂದ ಕೂಡಿದ ಪಾಪಕಾರ್ಯ. ಅದನ್ನು ನೀನು ಶಕುನಿಯೊಂದಿಗೆ ಆಡಿದೆ. ಎಲ್ಲೂ ಅದನ್ನು ಆಡಬೇಕೆಂಬ ವಿಧಿಯಿಲ್ಲ. ದ್ಯೂತದಲ್ಲಿ ಕಳೆದುಕೊಂಡಿದ್ದನ್ನು ಕಳೆದುಕೊಂಡದ್ದು ಎಂದು ಕರೆಯುವುದಿಲ್ಲ. ಭಯಗೊಂಡವನು ನೀಡಿದ್ದನ್ನು, ಜೂಜಿನಲ್ಲಿ ಸೋತದ್ದನ್ನು, ವೇಶ್ಯೆಗೆ ಕೊಟ್ಟಿದ್ದನ್ನು ಪುನಃ ಅವರ ಬಂಧುಗಳು ಹಿಂದಕ್ಕೆ ತೆಗೆದುಕೊಳ್ಳುವುದೇ ಯೋಗ್ಯ.

ವಿ: ೧) ಧರ್ಮರಾಜ ಜೂಜಾಡಿದ್ದು ಶಾಸ್ತ್ರವಿಹಿತವಲ್ಲ ಎಂಬುದನ್ನು ಭೀಮ ಇಲ್ಲಿ ನೇರವಾಗಿಯೇ ತಿಳಿಸುತ್ತಿರುವನು.

೨) ಅದರಂತೆ ಕಾರಣಾಂತರದಿಂದ ದ್ಯೂತ ಮೊದಲಾದವುಗಳಲ್ಲಿ ಕಳೆದುಕೊಂಡದ್ದನ್ನು ಮರಳಿ ಕಿತ್ತಿಕೊಳ್ಳುವ ಅಧಿಕಾರವೂ ಸಹ ಇದ್ದೇ ಇದೆ ಎಂಬುದು ಇಲ್ಲಿಯ ಮತ್ತೊಂದು ವಿಶೇಷ ವಿವೇಚನೆ. ಭೀಮಸೇನ ಆಗಲೇ ಅದನ್ನು ಮಾಡದಿರಲು ಕಾರಣ ಮುಂದಿನ ಶ್ಲೋಕದಲ್ಲಿ ಬಂದಿದೆ.

ದ್ಯೂತದ ಸೋಲು ಸೋಲಲ್ಲ

ಏವಂ ಧರ್ಮಃ ಶಾಶ್ವತೋ ವೈದಿಕೋ ಹಿ
ದ್ಯೂತೇ ಸ್ತ್ರಿಯಾಂ ನಾಲ್ಪಮಾಹಾರ್ಯಮಾಹುಃ।
ಯದ್ಯೇಷಾಂ ಭೋಗ್ಯಮಲ್ಪಂ ತದೀಯಂ
ಭೋಗೇನ ತದ್ಬಂಧುಭಿಸ್ತಚ್ಚ ಹಾರ್ಯಮ್ ॥ ೧೦೬ ॥

ಅ: ಹೀಗೆ ಶಾಶ್ವತವಾದ ವೈದಿಕಧರ್ಮವಿದೆ; ದ್ಯೂತದಲ್ಲಾಗಲೀ, ವೇಶ್ಯೆಗೆ ನೀಡಿದ್ದಾಗಲೀ ಸ್ವಲ್ಪವಾಗಿದ್ದರೆ ಅದನ್ನು ಮರಳಿ ತೆಗೆದುಕೊಳ್ಳಬೇಕಿಲ್ಲ. ಆದರೆ, ಅದನ್ನು ನಂಬಿದ ವಾರಸುದಾರರಿಗೆ ಅದಿಷ್ಟೇ ಆಸ್ತಿಯಾಗಿದ್ದರೆ ಅದನ್ನೂ ಸಹ ಅವರು ಮರಳಿ ಕಿತ್ತಿಕೊಳ್ಳಬಹುದು.

ವಿ: ಸಾಮಾನ್ಯವಾಗಿ ದ್ಯೂತಾದಿಗಳಲ್ಲಿ ಸೋತದ್ದು ಸ್ವಲ್ಪ ಪ್ರಮಾಣದ ಆಸ್ತಿಯಾದರೆ ಅದನ್ನು ಹಿಂತೆಗೆದುಕೊಳ್ಳಬೇಕಿಲ್ಲ. ಆದರೆ, ಅದರ ವಾರಸುದಾರರಿಗೆ ದೊರೆಯುವ ಆಸ್ತಿ ಅದಷ್ಟೇ ಆಗಿದ್ದಲ್ಲಿ ಅದನ್ನೂ ಕಿತ್ತಿಕೊಳ್ಳಬಹುದು ಎಂಬುದು ಇಲ್ಲಿಯ ವಿಶೇಷಾಂಶ.

---

೧೦೬. ಯದ್ಯೇತೇಷಾಂ ಭೋಗ್ಯಮಿತ್ಯತ್ರ ಯದಿ ಏಷಾಂ= ನಾರ್ಯಾದೀನಾಂ ಭೋಗೇನ ನಿಮಿತ್ತೇನ ದತ್ತಂ ಬಹು ತದೀಯಂ= ತತ್ಸಂಬಂಧಿ। ಭೋಗ್ಯಂ= ಭೋಗಾರ್ಹಂ ಸುಖಾದಿಕಮಲ್ಪಮ್। ತರ್ಹಿ ತದ್ಬಂಧುಭಿಃ= ತಸ್ಯ ಕಾಮುಕಸ್ಯ ಬಂಧುಭಿಃ। ತಚ್ಚ ಹಾರ್ಯಮಿತಿ ಭಾವಃ। ಅಲ್ಪಭೋಗಾದಿಕಾರ್ಯಾರ್ಥಂ ನಾರ್ಯಾ ವಾ ದ್ಯೂತಕರ್ತ್ರಾ ವಾ ದಾಸೇನ ವಾ ಬಾಲಕಂ ವಂಚಯಿತ್ವಾ ಬಹುಧನಂ ಸ್ವೀಕೃತಂ ಚೇತ್ ತದ್ಬಂಧುಭಿಸ್ತದಪಿ ಅಪಹಾರ್ಯಮಿತಿ ಭಾವಃ ॥ – (ವಾ.)

ನಿವಾರಣೇ ಪುರುಷಸ್ಯ ತ್ವಶಕ್ತೌ
ತದ್ರಾಜ್ಯಂ ನಃ ಪುನರಾಹಾರ್ಯಮೇವ ।
ತ್ವಂ ಧರ್ಮನಿಷ್ಠಶ್ಚಾಗ್ರಜಶ್ಚೇತಿ ರಾಜನ್
ಋತೇಽನುಜ್ಞಾಂ ನ ಮಯಾ ತತ್ಕೃತಂ ಚ ॥ ೧೦೭ ॥

ಅ: ಸೋತವನಿಗೆ ಕಿತ್ತಿಕೊಳ್ಳುವ ಸಾಮರ್ಥ್ಯ ಇಲ್ಲದಿದ್ದಲ್ಲಿ ಅವನ ಬಂಧುಗಳು ಆ ಕಾರ್ಯ-ವನ್ನು ಮಾಡಬೇಕು. ಹೀಗೆ ನಮ್ಮ ರಾಜ್ಯವನ್ನು ನಾವು ಮರಳಿ ತೆಗೆದುಕೊಳ್ಳಲೇ ಬೇಕಾಗಿದೆ. ನೀನು ಧರ್ಮನಿಷ್ಠನಾದವನು ಮತ್ತು ಅಣ್ಣ ಎಂಬ ಕಾರಣದಿಂದ ನಿನ್ನ ಅನುಮತಿಯಿಲ್ಲವೆಂಬ ಕಾರಣದಿಂದ ನಾನು ಆ ಕಾರ್ಯವನ್ನು ಮಾಡಿಲ್ಲ.

ವಿ: ಭೀಮನ ಈ ಮಾತುಗಳು ತಾನು ದ್ಯೂತಕಾಲದಲ್ಲಿ ಧರ್ಮರಾಜನನ್ನು ಆ ರೀತಿಯಾಗಿ ಪ್ರತಿಭಟಿಸಿದ ಕಾರ್ಯಕ್ಕೆ ವಿವರಣಾರೂಪವಾಗಿವೆ ಎಂದು ತಿಳಿಯಬೇಕು. ಇತರರು ಆ ತಪ್ಪನ್ನು ಮಾಡಿದ್ದಲ್ಲಿ ಅದನ್ನು ಆಗಲೇ ಸರಿಪಡಿಸಬಹುದಿತ್ತು, ಆದರೆ ಧರ್ಮರಾಜ ಅಣ್ಣನಾಗಿ, ರಾಜನಾಗಿ ಪೂಜ್ಯನಾದ್ದರಿಂದ ಅವನ ಅನುಮತಿಯನ್ನು ಪಡೆದೇ ಆ ಕಾರ್ಯವನ್ನು ಮಾಡಬೇಕು ಎಂದು ಭಾವಿಸಿ ಸುಮ್ಮನಿರಬೇಕಾಯಿತು ಎಂದರ್ಥ.

ತಿಂಗಳುಗಳೇ ವರ್ಷಗಳು

ದಾತಾಽಸ್ಯನುಜ್ಞಾಂ ಯದಿ ತಾನ್ ನಿಹತ್ಯ
ತ್ವಯ್ಯೇವ ರಾಜ್ಯಂ ಸ್ಥಾಪಯಾಮ್ಯದ್ಯ ಸಮ್ಯಕ್ ।
ಸತ್ಯಂ ಪಾಪೇಷ್ವಪಿ ಕರ್ತುಂ ಯದೀಚ್ಛಾ
ತಥಾಽಪಿ ಮಾಸಾ ದ್ವಾದಶ ನಃ ಪ್ರಯಾತಾಃ ॥ ೧೦೮ ॥

ಅ: ನೀನೀಗ ಅನುಮತಿ ನೀಡಿದಲ್ಲಿ ಅವರನ್ನೆಲ್ಲಾ ಸಂಹರಿಸಿ ಇಂದೇ ರಾಜ್ಯವನ್ನು ನಿನಗೆ ಸಂಪೂರ್ಣವಾಗಿ ತಂದೊಪ್ಪಿಸುವೆ. ಪಾಪಿಗಳ ವಿಷಯದಲ್ಲಿಯೂ ನಿನ್ನ ಮಾತನ್ನು ಸತ್ಯ ಮಾಡಲು ಬಯಸುವೆಯಾದಲ್ಲಿ ಈಗಾಗಲೇ ನಮಗೆ ವನವಾಸದಲ್ಲಿ ಹನ್ನೆರಡು ತಿಂಗಳು ಕಳೆದಿವೆ.

ವಿ: ಅನುಮತಿಯಿಲ್ಲದ್ದರಿಂದ ಈ ವರೆಗೂ ಹಾಗೆ ಮಾಡಿಲ್ಲದ ತಾನು ಈಗ ಅನುಮತಿ ನೀಡಿದಲ್ಲಿ ತತ್‌ಕ್ಷಣವೇ ದುರ್ಯೋಧನಾದಿಗಳನ್ನು ದಂಡಿಸಿ ರಾಜ್ಯವನ್ನು ತಂದೊಪ್ಪಿಸುವುದಾಗಿ ಭೀಮನ

---

೧೦೭. ನಿವಾರಣೇ ಪುರುಷಸ್ಯೇತ್ಯತ್ರ ಪುರುಷಸ್ಯ = ಜ್ಯೇಷ್ಠಪುರುಷಸ್ಯ ತವ ನಿವಾರಣೇ = ದಾನಸಮಯೇ ನಿವಾರಣೇ ಅಶಕ್ತಾವಪಿ ತದ್ರಾಜ್ಯಂ ತತ್ = ತ್ವಯಾ ಪಣಾಯ ದತ್ತಂ ರಾಜ್ಯಂ ಪುನಃ ನಃ ಆಹಾರ್ಯಮೇವ= ಬಲಾದಪಹರ್ತವ್ಯ-ಮೇವೇತ್ಯರ್ಥಃ ॥ –(ವಾ.)

ಉಚಿತವಾದ ಮಾತು. ಇನ್ನು ಮಾತನ್ನು ಉಳಿಸಿಕೊಳ್ಳುವ ವಿಚಾರ. ಪಾಪಿಗಳಲ್ಲಿ ಆ ರೀತಿ ಮಾತನ್ನು ಉಳಿಸಿಕೊಳ್ಳಬೇಕಿಲ್ಲ, ಆದರೂ ಉಳಿಸಿಕೊಳ್ಳಲೇಬೇಕೆಂದಿದ್ದರೆ ಅದಕ್ಕೂ ಮಾರ್ಗವಿದೆ. ವನವಾಸದಲ್ಲಿ ಒಂದು ವರ್ಷ ಪೂರೈಸಿದೆ ಎಂದರೆ ಹನ್ನೆರಡು ತಿಂಗಳುಗಳು ಪೂರೈಸಿವೆ ಎಂದಾಯಿತು. ಅದರಿಂದ ಹನ್ನೆರಡು ವರ್ಷಗಳ ವನವಾಸ ಪೂರೈಸಿದಂತಾಯಿತು. ಅದು ಹೇಗೆ ಎಂಬ ವಿಚಾರ ಮುಂದಿನ ಶ್ಲೋಕದಲ್ಲಿ ಬಂದಿದೆ.

ವೇದಪ್ರಾಮಾಣ್ಯಾದ್ವತ್ಸರಾಸ್ತೇ ಹಿ ಮಾಸೈಃ
ಸಹಸ್ರಾಬ್ದಂ ಸತ್ರಮುಕ್ತಂ ನರಾಣಾಮ್ ।
ಅಜ್ಞಾತಮೇಕಂ ಮಾಸಮುಷ್ಯಾಥ ಶತ್ರೂನ್
ನಿಹತ್ಯ ರಾಜ್ಯಂ ಪ್ರತಿಪಾಲಯಾಮಃ ॥ ೧೦೯ ॥

ಅ: ವೇದದ ಆಧಾರದಂತೆ ಮಾಸಗಳು ಎಂದರೆ ವರ್ಷಗಳು ಎಂದಾಗುವುದು. ವೇದಗಳಲ್ಲಿ ಸಾವಿರ ವರ್ಷಗಳ ಯಾಗವನ್ನು ಮಾಡಲು ಮನುಷ್ಯರಿಗೆ ವಿಧಿಸಿರುವುದೇ ಅದಕ್ಕೆ ಸಾಕ್ಷಿ. ಇನ್ನು ಒಂದು ತಿಂಗಳು ಅಜ್ಞಾತವಾಸವನ್ನು ಮಾಡಿ ಶತ್ರುಗಳನ್ನು ಕೊಂದು ರಾಜ್ಯವನ್ನು ಪರಿಪಾಲಿಸೋಣ.

ವಿ: ೧) 'ಯೋ ಮಾಸಃ ಸ ಸಂವತ್ಸರಃ' ಎಂಬ ವೇದವಾಕ್ಯದಲ್ಲಿ ಮಾಸವನ್ನು ಸಂವತ್ಸರಕ್ಕೆ ಪ್ರತಿನಿಧಿ ಎಂದು ತಿಳಿಸಲಾಗಿದೆ. ಯಜ್ಞಗಳಲ್ಲಿ ಸೋಮಲತೆ ದೊರೆಯದಿದ್ದಾಗ ಅದಕ್ಕೆ ಪ್ರತಿನಿಧಿಯಾಗಿ ಅಮೃತಬಳ್ಳಿಯನ್ನು ಉಪಯೋಗಿಸಬಹುದು ಎಂಬ ವಚನವಿದ್ದು ಅದೂ ಸಹ ಮುಖ್ಯಾರ್ಥ ಸಾಧ್ಯವಾಗದಿದ್ದಾಗ ಅಮುಖ್ಯಾರ್ಥವನ್ನು ಗ್ರಹಿಸುವುದನ್ನು ವಿಧಿಸಿದೆ (**'ಸೋಮಾಭಾವೇ ಪೂತಿಕಾನ್ ಅಭಿಷುಣುಯಾತ್'**).

---

೧೦೯. ವೇದಪ್ರಾಮಾಣ್ಯಾದ್ವತ್ಸರಾಸ್ತೇ ಹೀತ್ಯತ್ರ ನರಾಣಾಂ ಸಹಸ್ರಾಬ್ದಂ ಸಹಸ್ರಂ ಅಬ್ದಾ ಯಸ್ಯೇತಿ ವಿಗ್ರಹಃ। ತತ್ ಸಹಸ್ರಂ ಮಾಸೈಃ = ಸಹಸ್ರಮಾಸೈಃ ಉಕ್ತಂ= ಯಸ್ಮಾತ್ ವೇದೇ ವಿಹಿತಮ್। ನರಾಣಾಂ ಸಹಸ್ರವರ್ಷಪರ್ಯಂತಮಾಯುಷೋSಭಾವಾತ್ ಸಹಸ್ರಾಬ್ದೇ ಸತ್ರಕರಣಂ ಸಹಸ್ರಮಾಸೈರೇವ ವಿಹಿತಮಿತಿ ಭಾವಃ। ತೇನ= ಕಾರಣೇನ ತೇ= ಅಸ್ಮಾಕಂ ಅತೀತಾಃ ದ್ವಾದಶ ಮಾಸಾಃ ವೇದಪ್ರಾಮಾಣ್ಯೇನ ದ್ವಾದಶವತ್ಸರಾ ಹೀತಿ ಯೋಜನಾ ॥ – (ವಾ.)

೧೦೯. ಅಹರ್ಮುಹೂರ್ತಂ ವಿಜ್ಞೇಯಮಹರ್ಮಾಸೋSಪಿ ಭಣ್ಯತೇ ।
ಅಹರ್ದಿನಂ ಪ್ರಕಾಶಶ್ಚ ಕ್ವಚಿತ್ ಜ್ಞಾನಂ ಬಲಂ ತಥಾ ॥ – ಬೃಹದ್ಭಾಷ್ಯ (೫/೩)

ಮಾಸಶಬ್ದೇನಾಹಾನ್ಯುಚ್ಯಂತೇ । ತಥಾ ಹಿ ಮಹಾಭಾರತೇ ।
'ಅಹಸ್ತು ಮಾಸಶಬ್ದೋಕ್ತಂ ಯತ್ರ ಚಿಂತಾಯುತಂ ವ್ರಜೇತ್ ।
ಏವಂ ವತ್ಸರಭಾದ್ಯಂ ಚ ವಿಪರೀತೇ ವಿಪರ್ಯಯಃ॥' ಇತಿ ನಾಮಮಹೋದಧೌ ।– ಭಾ.ತಾ. (೧/೧೩/೨)

೨) ಅದರಂತೆ ಮನುಷ್ಯರಿಗೆ ಸಾವಿರ ವರ್ಷಗಳ ಯಜ್ಞವನ್ನು ವೇದ ವಿಧಿಸಿದೆ. ಆದರೆ ಕಲಿಯುಗದಲ್ಲಿ ಮನುಷ್ಯ ಸಾವಿರ ವರ್ಷ ಖಂಡಿತ ಬದುಕಲಾರ. ವೇದ ತಪ್ಪಾಗಿ ವಿಧಿಸುವುದೂ ಸಾಧ್ಯವಿಲ್ಲ. ಆದ್ದರಿಂದ ಸಾವಿರ ವರ್ಷಗಳಿಗೆ ಸಾವಿರ ತಿಂಗಳುಗಳು ಎಂದು ಅರ್ಥಮಾಡಿಕೊಳ್ಳಲೇಬೇಕಾಗುವುದು. ಹೀಗೆ ಮಾಸವನ್ನು ವರ್ಷ ಎಂದು ಗಣಿಸಲು ವೇದದ ಆಧಾರವಿರುವುದರಿಂದ ತಾವು ಈಗ ಪೂರೈಸಿರುವ ಹನ್ನೆರಡು ತಿಂಗಳುಗಳು ಹನ್ನೆರಡು ವರ್ಷಗಳೇ ಆಗಿವೆ ಎಂಬುದು ಭೀಮನ ವಾದಸರಣಿ.

೩) ಇನ್ನು ಉಳಿದದ್ದು ಒಂದು ವರ್ಷದ ಅಜ್ಞಾತವಾಸ. ಅದನ್ನು ಇದರಂತೆ ಒಂದು ತಿಂಗಳ ಕಾಲ ಅಜ್ಞಾತವಾಗಿ ಕಳೆದು ಪೂರೈಸಿ ಅನಂತರ ಯುದ್ಧ ಮಾಡಿ ರಾಜ್ಯವನ್ನು ಪಡೆಯುವುದು ಎಂದರ್ಥ.

೨) ಭೀಮಸೇನ ಇಲ್ಲಿ ತಂದೊಪ್ಪಿಸುವೆ ಎಂದು ಹೇಳದೇ, ನಾವೆಲ್ಲಾ ತಂದೊಪ್ಪಿಸುವೆವು ಎಂದು ಹೇಳುತ್ತಿರುವುದು ಸಹ ಗಮನಾರ್ಹ. ತನ್ನಂತೆ ಅರ್ಜುನಾದಿಗಳೂ ಸಹ ಧರ್ಮರಾಜನ ಈ ಕ್ಷಮೆಯನ್ನು ಒಪ್ಪುವವರಲ್ಲ, ಅವರು ತನ್ನೊಂದಿಗೆ ಈ ಶತ್ರುಸಂಹಾರ ಕಾರ್ಯದಲ್ಲಿ ಭಾಗವಹಿಸುವವರೇ ಎಂಬುದನ್ನು ಸಹ ಈ ಮೂಲಕ ತಿಳಿಸಿರುವನು ಎಂದು ಭಾವಿಸಬಹುದು.

ಧರ್ಮದ ಹೆಸರಲ್ಲಿ ಬಂಧುಜನರ ಹಿಂಸೆ ತರವಲ್ಲ

ಮಾ ಮಿತ್ರಾಣಾಂ ತಾಪಕಸ್ತ್ವಂ ಭವೇಥಾ-
ಸ್ತಥಾऽಮಿತ್ರಾಣಾಂ ನಂದಕಶ್ಚೈವ ರಾಜನ್ ।
ಜ್ವಲಸ್ವಾರೀಣಾಂ ಮೂರ್ಧ್ನಿ ಮಿತ್ರಾಣಿ ನಿತ್ಯ-
ಮಾಹ್ಲಾದಯನ್ ವಾಸುದೇವಂ ಭಜಸ್ವ ॥ ೧೧೦ ॥

ಅ: ರಾಜನೇ, ನೀನು ಮಿತ್ರ ಜನಗಳಿಗೆ ತಾಪ ನೀಡುವವನಾಗದಿರು; ಅದರಂತೆ ಶತ್ರುಗಳಿಗೆ ಸುಖ ನೀಡುವವನೂ ಆಗದಿರು; ಶತ್ರುಗಳ ತಲೆಯ ಮೇಲೆ ಪ್ರಜ್ವಲಿಸು. ನಿನ್ನ ಮಿತ್ರ ಜನರನ್ನು ಸಂತೋಷಪಡಿಸುತ್ತಾ ನಿತ್ಯವೂ ಶ್ರೀಹರಿಯನ್ನು ಭಜಿಸು.

ವಿ: ಧರ್ಮರಾಜನ ದ್ಯೂತಕಾರ್ಯ ಯೋಗ್ಯರಿಗೆ ದುಃಖಕ್ಕೂ, ಅಯೋಗ್ಯರಿಗೆ ಸಂತೋಷಕ್ಕೂ ಕಾರಣವಾಗಿರುವ ಹೇಯಕಾರ್ಯ. ಅದರಂತೆ, ಧರ್ಮರಾಜನ ಕ್ಷಮೆಯೂ ಸಹ. ಅದು ಶಾಸ್ತ್ರ ವಿಹಿತರೀತಿಯಲ್ಲ. ಅವನೀಗ ತಾನು ಹೇಳಿದಂತೆ ಯುದ್ಧಕ್ಕೆ ಸಿದ್ಧನಾದಲ್ಲಿ ವಿಷ್ಣು ಭಕ್ತರಿಗೆ ಸಂತೋಷಕರವಾಗಿಯೂ, ವಿಷ್ಣುದ್ವೇಷಿಗಳಿಗೆ ದುಃಖಕರವಾಗಿಯೂ ಆಗುವುದು. ಶ್ರೀಹರಿಯು ಮೆಚ್ಚುವನು ಎಂದರ್ಥ.

ಶ್ರೀಕೃಷ್ಣನ ಹಿರಿಮೆಯ ವರ್ಣನೆ

ಸ್ವತಂತ್ರತ್ವಂ ವಾಸುದೇವಸ್ಯ ಸಮ್ಯಕ್
ಪ್ರತ್ಯಕ್ಷತೋ ದೃಶ್ಯತೇ ಹ್ಯದ್ಯ ರಾಜನ್ ।
ಯಸ್ಮಾತ್ ಕೃಷ್ಣೋ ವ್ಯಜಯಚ್ಛಂಕರಾದೀನ್
ಜರಾಸುತಾದೀನ್ ಕಾದಿವರೈರಜೇಯಾನ್ ॥ ೧೧೧ ॥

ಅ: ರಾಜನೇ, ಶ್ರೀಹರಿಯ ಸ್ವಾತಂತ್ರ್ಯವು ಈಗ ಚೆನ್ನಾಗಿ ಪ್ರತ್ಯಕ್ಷದಿಂದಲೇ ಕಂಡಿದೆ. ಏಕೆಂದರೆ ಆ ಶ್ರೀಹರಿಯೇ ಆದ ಕೃಷ್ಣನು ರುದ್ರಾದಿ ದೇವತೆಗಳನ್ನೂ, ಬ್ರಹ್ಮಾದಿಗಳ ವರದಿಂದ ಅಜೇಯರಾದ ಜರಾಸಂಧಾದಿಗಳನ್ನೂ ಗೆದ್ದಿರುವನು.

ವಿ: ೧) ವಾಸುದೇವನಾದ ಶ್ರೀಕೃಷ್ಣ ಪಾರಿಜಾತಹರಣಾದಿ ಪ್ರಸಂಗಗಳಲ್ಲಿ ರುದ್ರಾದಿದೇವತೆ–ಗಳನ್ನು ಗೆದ್ದಿರುವ ವಿವರ ಈಗಾಗಲೇ ಬಂದಿದೆ(೨೦/೧೨೬–೧೩೧). ಬ್ರಹ್ಮಾದಿ ವರದಿಂದ ಕೂಡಿದ್ದ ಜರಾಸಂಧಾದಿಗಳನ್ನಂತೂ ಅನೇಕ ಬಾರಿ ಪರಾಭವಗೊಳಿಸಿರುವುದು ಪ್ರತ್ಯಕ್ಷವಾಗಿಯೇ ಕಂಡಿದೆ. ಇದರಿಂದ ಶ್ರೀಹರಿಯ ಸ್ವಾತಂತ್ರ್ಯ, ಸರ್ವೋತ್ತಮತ್ವಗಳನ್ನು ಕಣ್ಣಾರೆ ಕಂಡಂತಾಗಿದೆ ಎಂದು ಭಾವ.

೨) 'ಕ' ಎಂದರೆ ಬ್ರಹ್ಮ; 'ಕಾದಿವರ್ಯೈಃ' ಎಂದರೆ ಬ್ರಹ್ಮಾದಿಗಳ ವರಗಳಿಂದ ಎಂದರ್ಥ.

ವ್ಯಾಸರು ತೋರಿದ ಹರಿಮಹಿಮೆ

ಬ್ರಹ್ಮಾದೀನಾಂ ಪ್ರಕೃತೇಸ್ತದ್ವಶತ್ವಂ
ದೃಷ್ಟ್ವಂ ಹಿ ನೋ ಬಹುಶೋ ವ್ಯಾಸದೇಹೇ ।
ಪಾರಾಶರ್ಯೋ ದಿವ್ಯದೃಷ್ಟಿಂ ಪ್ರದಾಯ
ಸ್ವಾತಂತ್ರ್ಯಂ ನೋಽದರ್ಶಯತ್ ಸರ್ವಲೋಕೇ ॥ ೧೧೨ ॥

---

೧೧೧. ಅಸ್ಮಾಭಿರುಷಿತಾಃ ಸಮ್ಯಗ್‌ವನೇ ಮಾಸಾಸ್ತ್ರಯೋದಶ ।
ಪರಿಮಾಣೇನ ತಾನ್ ಪಶ್ಯ ತಾವತಃ ಪರಿವತ್ಸರಾನ್ ॥
ಅಸ್ತಿ ಮಾಸಃ ಪ್ರತಿನಿಧಿರ್ಯಥಾ ಪ್ರಾಹುರ್ಮನೀಷಿಣಃ ।
ಪೂತಿಕಾಮಿವ ಸೋಮಸ್ಯ ತಥೇದಂ ಕ್ರಿಯತಾಮಿತಿ ॥ – ಭಾರತ (೩/೩೫/೩೨, ೩೩)

೧೧೨. ಸರ್ವಲೋಕವಿಷಯೇ ಬಹುಶ ಇತಿ । ಯದ್ಯಪಿ ದ್ರೌಪದೀಸ್ವಯಂವರೇಽಪಿ ವ್ಯಾಸೇನ ದ್ರುಪದಸ್ಯಂ ದಿವಿ ಸಂಸ್ಥಿತವಾಯ್ವಾದಿದೇವತಾಸಾಕ್ಷಾತ್ಕಾರಃ ಕಾರಿತಃ । ನ ತು ವಿಶ್ವರೂಪದರ್ಶನಾತ್ । ತಥಾಪ್ಯೇತದ್ವಚನಬಲಾತ್ ಬಹುಶಃ ವ್ಯಾಸಃ ಸ್ವದೇಹೇ ಸಂದರ್ಶಿತವಾನಿತ್ಯವಗಂತವ್ಯಮ್ । – (ತಾ.)

ಅ: ಬ್ರಹ್ಮಾದಿಗಳು ಮತ್ತು ಮಹಾಲಕ್ಷ್ಮಿಯು ಆ ಶ್ರೀಹರಿಯ ಅಧೀನರು ಎಂಬುದು ಅನೇಕ ಬಾರಿ ವೇದವ್ಯಾಸರ ದೇಹದಲ್ಲಿ ಕಂಡಿದೆ. ವೇದವ್ಯಾಸರು ನಮಗೆ ದಿವ್ಯದೃಷ್ಟಿಯನ್ನು ನೀಡಿ ತಮ್ಮ ಸ್ವಾತಂತ್ರ್ಯವನ್ನು ಸಕಲ ಜನರ ವಿಷಯದಲ್ಲಿಯೂ ತೋರಿಸಿಕೊಟ್ಟಿರುವರಲ್ಲವೇ.

ಎ: ವೇದವ್ಯಾಸರು ದ್ರುಪದನಿಗೆ ದಿವ್ಯ ದೃಷ್ಟಿಯನ್ನು ನೀಡಿದಾಗ ಅವನ ಕಣ್ಣಿಗೆ ಪಾಂಡವರ ಮೂಲ ರೂಪಗಳು ಗೋಚರಿಸಿದ್ದು, ದ್ರೌಪದಿಯ ಸ್ವರೂಪ ಹಾಗೂ ಅವಳ ದೇಹದಲ್ಲಿ ನೆಲೆಸಿದ್ದ ಸ್ವರೂಪ ಗೋಚರಿಸಿದ್ದು ಮೊದಲಾದವುಗಳನ್ನು ಇಲ್ಲಿ ಗಮನಿಸಬಹುದು. ಇವೆಲ್ಲಾ ವೇದವ್ಯಾಸರ ನಾರಾಯಣತ್ವಕ್ಕೂ ನಿದರ್ಶನ. ಹೀಗೆ ಯಾದವ ಕೃಷ್ಣ ಹಾಗೂ ವಾಸಿಷ್ಠಕೃಷ್ಣ ಎಂಬ ಎರಡು ರೂಪ–ಗಳಲ್ಲೂ ಶ್ರೀಹರಿ ತನ್ನ ಸ್ವಾತಂತ್ರ್ಯವನ್ನು ಪ್ರತ್ಯಕ್ಷವಾಗಿ ನಿರೂಪಿಸಿರುವನು ಎಂದರ್ಥ.

ಕೀರ್ತಿಧರ್ಮಗಳಿಗಾಗಿ ಶತ್ರುವಧೆ ಅನಿವಾರ್ಯ

ತಸ್ಮಾದ್ರಾಜನ್ನಭಿನಿರ್ಯಾಹಿ ಶತ್ರೂನ್
ಹಂತುಂ ಸರ್ವಾನ್ ಭೋಕ್ತುಮೇವಾಧಿರಾಜ್ಯಮ್ ।
ಏವಂ ಚ ತೇ ಕೀರ್ತಿಧರ್ಮೌ ಮಹಾಂತೌ
ಪ್ರಾಪ್ಸ್ಯೌ ರಾಜನ್ ವಾಸುದೇವಪ್ರಸಾದಾತ್ ॥ ೧೧೩ ॥

ಅ: ರಾಜನೇ, ಆದ್ದರಿಂದ ನೀನೀಗ ಶತ್ರುಗಳನ್ನೆಲ್ಲಾ ಸಂಹರಿಸಲು ಚಕ್ರಾಧಿಪತ್ಯವನ್ನು ಅನು-ಭವಿಸಲು ಸನ್ನದ್ಧನಾಗು. ಇದರಿಂದ ನಿನಗೆ ಮಹತ್ತರವಾದ ಕೀರ್ತಿ ಧರ್ಮಗಳು ಶ್ರೀಹರಿಯ ಅನುಗ್ರಹದಿಂದಾಗಿ ಲಭಿಸುವವು.

ಎ: ೧) ಮಹಾಭಾರತದ ವನಪರ್ವದಲ್ಲಿ ಭೀಮ, ದ್ರೌಪದಿಯರು ಧರ್ಮರಾಜನಿಗೆ ನೀಡಿದ ಉಪದೇಶದ ಸಾರ ಸರ್ವಸ್ವವನ್ನು ಹೀಗೆ ಸಂಗ್ರಹಿಸಿರುವುದು ಮಹಾಭಾರತತಾತ್ಪರ್ಯನಿರ್ಣಯದ ವೈಶಿಷ್ಟ್ಯ.

೨) ಮೂಲ ಮಹಾಭಾರತದಲ್ಲಿ ಈ ಭಾಗ ವಿಸ್ತಾರವಾಗಿಯೇ ಬಂದಿದ್ದು ಅದರಲ್ಲಿ ದ್ರೌಪದಿಯ ಮಾತುಗಳೇ ವಿಸ್ತಾರವಾಗಿರುವಂತೆ ತೋರುವವು. ವಾಸ್ತವವಾಗಿ ದ್ರೌಪದಿ ವಿಷಯ ಪ್ರಸ್ತಾವನೆಯನ್ನು ಮಾಡಿ ಮುಂದಿನ ವಿಷಯ ಮಂಡನೆಯ ಕಾರ್ಯವನ್ನು ಭೀಮನೇ ಮಾಡಿದ್ದು ಎಂಬುದು ಒಟ್ಟು ಭಾವ.

೩) ಧರ್ಮರಾಜನ ಮೊದಲ ವರ್ಷ ಪೂರ್ತಿ ಕೇವಲ ಅತಿಥಿಪೂಜಾದಿ ಕಾರ್ಯಗಳಲ್ಲಿ ಮಾತ್ರ ವಿನಿಯೋಗವಾಗಿದ್ದು, ಅನಂತರದ ಕಾಲದಲ್ಲಿ ಅದು ಹೊಸ ತಿರುವು ಪಡೆಯಲು ಭೀಮ, ದ್ರೌಪದಿಯರ ಉಪದೇಶ ಕಾರಣವಾಯಿತು.

೪) ಅತ್ಯಂತ ಮೃದು ಸ್ವಭಾವನಾದ ಧರ್ಮರಾಜ ಕುರುಕ್ಷೇತ್ರ ಸಮರದಂತಹ ಮಹಾ ಸಮರಕ್ಕೆ ತೊಡಗಿದ್ದಾಗಲೀ, ಅಲ್ಲಿ ಅರ್ಜುನನಂತೆ ವಿಷಾದಗ್ರಸ್ತನಾಗದೇ ಇರಲಾಗಲೀ ಇದೇ ಪ್ರಭಾವ ಎಂದು ತಿಳಿಯಬೇಕು.

೫) ಅರ್ಜುನ ಯುದ್ಧಾರಂಭದಲ್ಲಿ ಕೃಪಾಪರವಶನಾಗಿ ಯುದ್ಧತ್ಯಾಗಕ್ಕೆ ಮನಸ್ಸು ಮಾಡಿದಾಗ ಅವನನ್ನು ಮರಳಿ ಯುದ್ಧಕ್ಕೆ ಅಣಿಗೊಳಿಸಿದ್ದು ಶ್ರೀಕೃಷ್ಣಗೀತೆಯ ಅದ್ಭುತ ಪರಿಣಾಮ. ಅದರಂತೆ ದ್ಯೂತದ ಅನಂತರವೂ ಕ್ಷಮೆಯನ್ನೇ ನಂಬಿ ಕರ್ತವ್ಯ ವಿಮುಖನಾಗಿದ್ದ ಧರ್ಮರಾಜನನ್ನು ಯುದ್ಧೋನ್ಮುಖನನ್ನಾಗಿ ಮಾಡಿದ ಹಿರಿಮೆ ಈ ಭೀಮೋಪದೇಶದ್ದು. ಅದು ಕೃಷ್ಣಗೀತೆಯಾದರೆ, ಇದು ಭೀಮಗೀತೆ. ಧರ್ಮರಾಜನ ವನವಾಸ ಹೀಗೆ ಶಾಸ್ತ್ರತತ್ವವನ್ನು ತಿಳಿಯುವ ಗುರುಕುಲ ವಾಸದಂತೆ ಆಗಿದ್ದು ನಿಜಕ್ಕೂ ಆತನ ಪುಣ್ಯದ ಫಲ.

೬) ಮಹಾಭಾರತದ ವನಪರ್ವದಲ್ಲಿ ಬಹಳ ವಿಸ್ತಾರವಾಗಿ ಬಂದಿರುವ ಈ ಅಮೂಲ್ಯ ಭಾಗವನ್ನು ಅನಂತರದ ಮಹಾಭಾರತ ಸಂಗ್ರಹಕಾರರಾಗಲೀ, ವಿಮರ್ಶಕರಾಗಲೀ ಗಮನಿಸದೇ ಹೋಗಿರುವುದು ಒಂದು ಸಾರಸ್ವತ ದುರಂತ ಎನ್ನಬೇಕು. ಪಂಪಭಾರತ, ಕುಮಾರವ್ಯಾಸಭಾರತ ಮೊದಲಾದ ಇತರ ಭಾಷೆಯ ಭಾರತ ಸಂಗ್ರಹಗಳಾಗಲೀ, ಚಂಪೂಭಾರತ, ಭಾರತಮಂಜರೀ ಮೊದಲಾದ ಸಂಸ್ಕೃತದ ಭಾರತಸಂಗ್ರಹಗಳಾಗಲೀ ಇಂತಹ ಮಹಾ ತಾತ್ವಿಕ ಭಾಗವನ್ನು ಸಂಪೂರ್ಣವಾಗಿ ತೊರೆದಿರುವುದು ಮಹಾಭಾರತದ ತಾತ್ತ್ವಿಕಮಹತ್ತ್ವಕ್ಕೆ ಮಾಡಿದ ಅಪಚಾರ– ವೆನ್ನದೇ ವಿಧಿಯಿಲ್ಲ.

೭) ಭಾರವಿಯ ಕಿರಾತಾರ್ಜುನೀಯದಲ್ಲಿ ಸ್ವಲ್ಪ ಮಟ್ಟಿಗೆ ಈ ಭಾಗ ಬಂದಿದ್ದರೂ ಅದು ಕೇವಲ ರಾಜನೀತಿಯ ಮುಖವನ್ನಷ್ಟೇ ಸಂಗ್ರಹಿಸುವ ಸೀಮಿತ ವ್ಯಾಪ್ತಿಯನ್ನು ಹೊಂದಿದೆ. ಆದರೆ ಆಚಾರ್ಯ ಶ್ರೀಮಧ್ವರ ಮಹಾಭಾರತತಾತ್ಪರ್ಯನಿರ್ಣಯದ ಈ ಭಾಗ ನಿಜವಾದ ಅರ್ಥದಲ್ಲಿ ಮಹಾಭಾರತದ ತಾತ್ವಿಕ ಶ್ರೀಮಂತಿಕೆಯನ್ನು ತೆರೆದಿಟ್ಟ ಅನನ್ಯ ಕೃತಿ.

ಯುದ್ಧಕ್ಕೆ ಸ್ಥಿರನಾದ ಯುಧಿಷ್ಠಿರ

ಏವಮುಕ್ತೋಽಬ್ರವೀದ್ಭೀಮಂ ಧರ್ಮಪುತ್ರೋ ಯುಧಿಷ್ಠಿರಃ ।
ತ್ರಯೋದಶಾಬ್ದಸ್ಯಾಂತೇಽಹಂ ಕುರ್ಯಾಮೇವ ತ್ವದೀರಿತಮ್ ॥ ೧೧೪ ॥

ಅ: ಭೀಮಸೇನ ಹೀಗೆ ತಿಳಿಸಲು ಧರ್ಮಪುತ್ರನಾದ ಯುಧಿಷ್ಠಿರ ಭೀಮನಿಗೆ ವಚನವಿತ್ತ 'ಹದಿಮೂರು ವರ್ಷಗಳು ಪೂರೈಸಿದ ಮೇಲೆ ನೀನು ಹೇಳಿದ್ದನ್ನು ನಾನು ತಪ್ಪದೇ ನಡೆಸುವೆ'.

ವಿ: ಭೀಮನ ಉಪದೇಶದ ಫಲಶ್ರುತಿ ಧರ್ಮರಾಜ ವಚನ ನೀಡುವುದರಲ್ಲಿ ವ್ಯಕ್ತವಾಯಿತು.. (ಮಹಾಭಾರತ). ಕ್ಷಮೆಯ ಬಗ್ಗೆ ಅಷ್ಟಾಗಿ ವಾದಿಸಿದ್ದ ಧರ್ಮರಾಜ ಹೀಗೆ ಪೂರ್ಣವಾಗಿ

ಪರಿವರ್ತಿತನಾಗಲು ಭೀಮದ್ರೌಪದಿಯರ ಉಪದೇಶ ವಹಿಸಿದ ಪಾತ್ರ ಅಸಾಧಾರಣವಾದುದು. ಅವನು ಧರ್ಮಪುತ್ರನಾದ್ದರಿಂದ ಅದನ್ನೆಲ್ಲಾ ತಿಳಿಯಲು ಅವನಿಗೆ ಸಾಧ್ಯವಾಯಿತು ಎಂಬುದು ಧರ್ಮಪುತ್ರ ಎಂಬ ಪದದಿಂದ ತಿಳಿಸಿರುವರು.

ಸತ್ಯಮೇತನ್ನ ಸಂದೇಹಃ ಸತ್ಯೇನಾತ್ಮಾನಮಾಲಭೇ ।
ಲೋಕಾಪವಾದಭೀರುಂ ಮಾಂ ನಾತೋಽನ್ಯದ್ವಕ್ತುಮರ್ಹಸಿ ॥ ೧೧೫ ॥

ಅ: 'ಇದು ಸತ್ಯ; ಸಂದೇಹ ಬೇಡ; ನನ್ನ ಮೇಲೆ ಆಣೆಯಿಟ್ಟು ಹೇಳುತ್ತಿರುವೆ, ಲೋಕಾಪವಾದಕ್ಕೆ ಅಂಜುವ ನನಗೆ ಮುಂದೆ ಬೇರೆ ಏನನ್ನೂ ಹೇಳದಿರು'.

ವಿ: ೧) ಬೇರೆ ಏನನ್ನೂ ಎಂದರೆ ಈಗಾಗಲೇ ಹನ್ನೆರಡು ವರ್ಷಗಳು ಪೂರೈಸಿದಂತಾಗಿದೆ. ಇನ್ನು ಒಂದು ತಿಂಗಳು ಅಜ್ಞಾತವಾಸ ಮಾಡಿದರೆ ತನ್ನ ವಚನ ಸತ್ಯವಾದಂತಾಗುವುದು ಎಂಬ ಮಾತುಗಳನ್ನು ತಿಳಿಸಿ ನನ್ನನ್ನು ಬಾಯಿ ಕಟ್ಟದಿರು ಎಂದು ಅವನ ಕೋರಿಕೆ. ಶಾಸ್ತ್ರ ತಿಳಿದ ಜನ ಅದನ್ನು ಅರ್ಥಮಾಡಿಕೊಳ್ಳಬಲ್ಲರಾದರೂ ಲೋಕದ ಜನ ವಚನ ಭ್ರಷ್ಟನಾದ ಎಂದು ತನ್ನನ್ನು ಕರೆಯದಿರಲಿ ಎಂಬುದು ಅವನ ಆಶಯ ಎಂದು ತಿಳಿಯಬೇಕು.

೨) ಸತ್ಯನಿಷ್ಠೆಗಿಂತ ಲೋಕಾಪವಾದದ ಭಯ ಮುಖ್ಯವೆನ್ನುವುದು ಧರ್ಮರಾಜನ ಮಿತಿಯನ್ನು ತೋರುವುದು.

ಭೀಮನಲ್ಲಿ ಧರ್ಮರಾಜನ ಪ್ರಾರ್ಥನೆ

ತುದಸೇ ಚಾತಿವಾಚಾ ಮಾಂ ಯದ್ಯೇವಂ ಭೀಮ ಮಾ ವದೇಃ।
ತದೈವ ಮೇಽತ್ಯಯಃ ಕಾರ್ಯೋ ಹಂತವ್ಯಾಶ್ಚೈವ ಶತ್ರವಃ ।
ನೈತಾದೃಶೈರಿದಾನೀಂ ತು ವಾಕ್ಯೈರ್ಬಾಧಿತುಮರ್ಹಸಿ ॥ ೧೧೬ ॥

---

೧೧೫. ಸತ್ಯೇನಾತ್ಮಾನಮಾಲಭ ಇತ್ಯತ್ರ ಆತ್ಮಾನಂ ಸ್ಪೃಶಾಮೀತ್ಯರ್ಥಃ ॥ – (ವಾ.)

೧೧೫. ಆಲಭೇ ಸ್ಪೃಶಾಮಿ। ಮಮ ವಚನಮನ್ಯಥಾಚೇತ್ ತರ್ಹಿ ಆತ್ಮಹನನದೋಷಪ್ರಾಪ್ತಿಃ ಸ್ಯಾದಿತಿಭಾವೇನ ಆತ್ಮಾನಮಸ್ಪೃಶದಿತಿ ಭಾವಃ। – (ಜ.)

೧೧೫. ಆತ್ಮಾನಂ ಸತ್ಯೇನ ಶಪಥೇನ ಆಲಭೇ ಸಂಬಂಧಂ ಭವಾಮಿ ಅಹಂ ಶಪಥವಾನ್ ಭವಾಮಿ ಶಪಥಂ ಕರೋಮೀತಿ ಯಾವದಿತ್ಯರ್ಥಃ। – (ಸ.)

೧೧೬. ತದೈವ ಮೇಽತ್ಯಯ ಇತ್ಯತ್ರ ತ್ವದುಕ್ತಕಾರ್ಯಾಕರಣೇ ಅತಿಕ್ರಮಣಂ ಅತಿಕ್ರಮ್ಯ ಗಮನಂ ವೇತ್ಯರ್ಥಃ। ಅಯ ಪಯ ಗತಾವಿತಿ ಹಿ ಧಾತುಃ ॥ – (ವಾ.)

ಅ: 'ನಾನು ಹೀಗೆ ಹೇಳಿದ ಮೇಲೂ ನೀನು ನನ್ನನ್ನು ಅತಿಯಾಗಿ ಹಳಿಯದಿರು. ಅದರಿಂದ ನನಗೆ ನೋವಾಗುವುದು. ನೀನು ಅಂದೇ ನನ್ನನ್ನು ಧಿಕ್ಕರಿಸಿ ಶತ್ರುಗಳನ್ನು ಕೊಲ್ಲಬೇಕಾಗಿತ್ತು. ಈಗ ಇಂತಹ ಮಾತುಗಳಿಂದ ನನ್ನನ್ನು ನೋಯಿಸುವುದು ತರವಲ್ಲ'.

ವಿ: ೧) ಭೀಮನ ಮಾತಿನಿಂದ ತನ್ನ ತಪ್ಪಿನ ಅರಿವನ್ನು ಹೊಂದಿದ ಯುಧಿಷ್ಠಿರ ತುಂಬಾ ನೋವಿನಿಂದ ಹೇಳುವ ಮಾತು ಇದು. ಭೀಮ ಅಂದೇ ಧಿಕ್ಕರಿಸದಿರಲು ಕಾರಣವನ್ನು ಈಗಾಗಲೇ ಹೇಳಿರುವುದರಿಂದ ಈ ಮಾತು ಅವನಿಗೆ ಸರ್ವಥಾ ಅನ್ವಯಿಸದು.

೨) ಪ್ರಲಾಪಾದಿಗಳಲ್ಲಿ ಈ ಬಗೆಯ ಅರ್ಥರಹಿತವಾಗಿರುವ ಮಾತುಗಳನ್ನಾಡುವುದು ಸಹಜ ಎಂಬ ಮಾತು *ಭಾಗವತತಾತ್ಪರ್ಯನಿರ್ಣಯದಲ್ಲಿ ಬಂದಿದೆ.

ಭೀಷ್ಮದ್ರೋಣಾದಯೋಽಸ್ತ್ರಜ್ಞಾ ನಿವಾರ್ಯಾಶ್ಚ ಕಥಂ ಯುಧಿ ।
ಪೂಜ್ಯಾಸ್ತೇ ಬಾಹುಯುದ್ಧೇನ ನ ನಿವಾರ್ಯಾಃ ಕಥಂಚನ ॥ ೧೧೭ ॥

ಅ: 'ಭೀಷ್ಮ, ದ್ರೋಣ ಮೊದಲಾದವರು ಅಸ್ತ್ರ ಬಲ್ಲವರು. ಅವರನ್ನು ಯುದ್ಧದಲ್ಲಿ ಎದುರಿಸುವುದೆಂತು. ಪೂಜ್ಯರಾದ ಅವರನ್ನು ಬಾಹುಯುದ್ಧದಿಂದ ತಡೆಯುವುದು ಸರ್ವಥಾ ಉಚಿತವಾಗದಲ್ಲವೇ!'.

ವಿ: ಯುದ್ಧಕ್ಕೆ ನಿಶ್ಚಯಿಸಿದ ಧರ್ಮರಾಜ ಭೀಷ್ಮಾದಿಗಳ ಜಯದ ಬಗ್ಗೆ ಚಿಂತಿಸುತ್ತಿರುವನು. ಭೀಮನು ಭೀಷ್ಮಾದಿ ಮಹಾಅಸ್ತ್ರಜ್ಞರನ್ನು ಕೇವಲ ಬಾಹುಬಲದಿಂದ ಗೆಲ್ಲಬಲ್ಲ ಮಹಾವೀರ ಎಂದು ತಿಳಿದಿದ್ದರೂ, ಪೂಜ್ಯರಾದ ಅಂಥವರನ್ನು ಬಾಹುಯುದ್ಧದಿಂದ ಎದುರಿಸುವುದು ಸಲ್ಲುವಂತಹುದಲ್ಲ ಎಂಬುದು ಅವನ ಚಿಂತೆ.

ಅಸ್ತ್ರೈ ಜಾನನ್ನಪಿ ಹಿ ಪ್ರಯೋಜಯಸಿ ನ ಕ್ವಚಿತ್ ।
ತಸ್ಮಾತ್ ತದೈವ ಗಂತವ್ಯಂ ವಿಜ್ಞಾತಾಸ್ತ್ರೇ ಧನಂಜಯೇ ॥ ೧೧೮ ॥

ಅ: 'ನೀನು ಅಸ್ತ್ರಗಳನ್ನು ಬಲ್ಲವನಾದರೂ ಅವುಗಳನ್ನು ಎಲ್ಲಿಯೂ ಪ್ರಯೋಗಿಸುವವನಲ್ಲ. ಅದರಿಂದ ಅರ್ಜುನನು ಅಸ್ತ್ರಗಳನ್ನು ಅರಿತಾದ ಮೇಲೆಯೇ ನಾವು ಯುದ್ಧಕ್ಕೆ ತೆರಳಬೇಕು'.

ವಿ: ಭೀಮ ಬಾಹುಬಲದಿಂದ ಮಾತ್ರವಲ್ಲದೇ ಅಸ್ತ್ರಜ್ಞನಾದ್ದರಿಂದ ಅಸ್ತ್ರ ಬಲದಿಂದಲೂ ಭೀಷ್ಮಾದಿಗಳನ್ನು ಗೆಲ್ಲಬಲ್ಲವನು. ಆದರೆ ಅವನು ಅಸ್ತ್ರಗಳನ್ನು ಉಪಯೋಗಿಸದಿರಲು ಕಾರಣ ಈಗಾಗಲೇ ಬಂದಿದೆ (೧೮/೨). ಎಂದ ಮೇಲೆ ಅರ್ಜುನನೇ ಆ ಕಾರ್ಯವನ್ನು ಮಾಡಬೇಕು.

---

* 'ಸಂತಾಪಕ್ರೋಧರಾಗಾದಿಷ್ವನರ್ಥಕವಚಃ ಕ್ವಚಿತ್' ಇತಿ ಶಬ್ದನಿರ್ಣಯೇ ॥ – ಭಾ.ತಾ. (೬/೧೪/೫೪)

ಆದರೆ, ಅವನಿಗೆ ಈಗಿರುವ ಅಸ್ತ್ರ ಸಂಪತ್ತಿ ಅಂಥವರನ್ನೆಲ್ಲಾ ಗೆಲ್ಲಲು ಸಾಕಾಗುವುದಿಲ್ಲ ಎಂಬುದು ಧರ್ಮರಾಜನ ವಿಚಾರ. ಆದ್ದರಿಂದ ಅರ್ಜುನನನ್ನು ಅಸ್ತ್ರಜ್ಞನನ್ನಾಗಿಸಲು ಪ್ರಯತ್ನಿಸುವುದು ಮೊದಲ ಕರ್ತವ್ಯ ಎಂದರ್ಥ.

ಈಡೇರಿದ ಭೀಮಸಂಕಲ್ಪ

ಇತ್ಯುಕ್ತೋ ಭೀಮಸೇನಸ್ತು ಸ್ನೇಹಭಂಗಭಯಾತ್ ತತಃ ।
ನೋವಾಚ ಕಿಂಚಿದ್ವಚನಂ ಸ್ವಾಭಿಪ್ರೇತಮವಾಪ್ಯ ಚ ॥ ೧೧೯ ॥

ಅ: ಧರ್ಮರಾಜ ಹೀಗೆನ್ನಲು ಭೀಮಸೇನ ಪ್ರೀತಿಗೆ ಕುಂದಾದೀತು ಎಂಬ ಭಯದಿಂದ ಬೇರೇನನ್ನೂ ನುಡಿಯಲಿಲ್ಲ. ಅವನು ತನ್ನ ಉದ್ದೇಶವನ್ನು ಆಗಲೇ ನೆರವೇರಿಸಿಕೊಂಡಾಗಿತ್ತಲ್ಲವೇ?

ವಿ: ಧರ್ಮರಾಜನು ಹೀಗೆ ತುಂಬಾ ದೈನ್ಯದಿಂದ ಪ್ರಾರ್ಥಿಸಿಕೊಂಡಾಗ ಭೀಮಸೇನ ಮಾತು ಮುಂದುವರಿಸದೇ ಸುಮ್ಮನಾದ. ಜೊತೆಗೆ ಕೌರವರ ಮೇಲೆ ಯುದ್ಧ ಮಾಡಲೇಬೇಕೆಂಬ ಅವನ ವಿಚಾರವನ್ನು ಧರ್ಮರಾಜ ಹೇಗೂ ಒಪ್ಪಿಯಾಗಿತ್ತಲ್ಲ ಎಂಬುದು ಅದಕ್ಕೆ ಮತ್ತೊಂದು ಕಾರಣ.

ಅಭಿಪ್ರಾಯೋ ಹಿ ಭೀಮಸ್ಯ ನಿಶ್ಚಯೇನ ತ್ರಯೋದಶೇ ।
ಯುಧಿಷ್ಠಿರಸ್ಯ ರಾಜ್ಯಾರ್ಥಂ ಗಮನಾರ್ಥೇ ಪ್ರತಿಶ್ರವಃ।
ಅನ್ಯಥಾऽತಿಮೃದುತ್ವಾತ್ತ್ವ ಸ ನ ಗಚ್ಛೇದ್ವಿನ್ನಧೀಃ ಪರೈಃ ॥ ೧೨೦ ॥

ಅ: ಹದಿಮೂರು ವರ್ಷ ಕಳೆದ ಮೇಲೆ ಧರ್ಮರಾಜ ರಾಜ್ಯಕ್ಕೋಸ್ಕರ ಸನ್ನದ್ಧನಾಗಲು ಶಪಥ ತೊಡಬೇಕೆಂಬುದಷ್ಟೇ ಭೀಮನ ಅಭಿಪ್ರಾಯವಾಗಿತ್ತು. ಇಲ್ಲವಾದಲ್ಲಿ ಅತ್ಯಂತ ಮೃದು ಸ್ವಭಾವದ ಕಾರಣದಿಂದಾಗಿ ಶತ್ರುಗಳ ವಿಚಾರಗಳಿಂದ ಬುದ್ಧಿ ಬದಲಾಯಿಸಿ ಯುದ್ಧ ತೊರೆದಾನು ಎಂದು ಭೀಮ ಹಾಗೆ ಹೇಳಿದ್ದ.

ವಿ: ಹದಿಮೂರು ತಿಂಗಳು ಹದಿಮೂರು ವರ್ಷ ಎಂಬ ಭೀಮನ ವಿಚಾರವನ್ನು ಧರ್ಮರಾಜ ಒಪ್ಪಲಿಲ್ಲ ಎಂಬುದಕ್ಕೆ ಇದು ಉತ್ತರ. ಭೀಮನಿಗೂ ಸಹ ಹದಿಮೂರು ವರ್ಷ ಕಳೆಯುವುದೇ ಬೇಕಿತ್ತು ಆ ಸಮಯದಲ್ಲಿ ಸೌಗಂಧಿಕಾಹರಣಾದಿ ಪ್ರಸಂಗ, ಮಣಿಮಂತ ಮೊದಲಾದ ಅಸುರರ ವಧೆ, ಅಜಗರ ಮೋಚನ ಮೊದಲಾದ ಅನೇಕ ಕಾರ್ಯಗಳು ಆ ಅವಧಿಯಲ್ಲಿ ನಡೆಯಬೇಕೆಂಬುದು ಶ್ರೀಹರಿಯ ಸಂಕಲ್ಪ ಎಂದು ಭೀಮನಿಗೆ ತಿಳಿದಿತ್ತು, ಆದರೂ ಭೀಮ ಹಾಗೆ ಹೇಳಿದ್ದು ವಸ್ತುಸ್ಥಿತಿಯನ್ನು ತಿಳಿಸಲು ಮಾತ್ರ. ಇಲ್ಲವಾದಲ್ಲಿ ಅವನು ಹದಿಮೂರು ವರ್ಷಗಳ ಅನಂತರವೂ ಯುದ್ಧಕ್ಕೆ ಸಿದ್ಧನಾಗಲಾರ ಎಂಬ ಭಾವನೆಯಿಂದ ಹಾಗೆ ತಿಳಿಸಿದ ಎಂದರ್ಥ.

ಧರ್ಮರಾಜನ ಯುದ್ಧಚಿಂತೆ

ಕೃತಕೃತ್ಯೇ ತತೋ ಭೀಮೇ ಸ್ಥಿತೇ ಧರ್ಮಾತ್ಮಜೋ ಹಿ ಸಃ।
ಭೀಷ್ಮದ್ರೋಣಾದಿವಿಜಯಃ ಕಥಂ ಸ್ಯಾದಿತ್ಯಚಿಂತಯತ್ ॥ ೧೨೧ ॥

ನಿವಾರಣಂ ಗುರೂಣಾಂ ಹಿ ಭೀಮ ಇಚ್ಛತಿ ನ ಕ್ವಚಿತ್।
ತಸ್ಮಾತ್ ತೇ ಹ್ಯರ್ಜುನೇನೈವ ನಿವಾರ್ಯಾ ಇತ್ಯಚಿಂತಯತ್ ।
ಆಪದ್ಯೇವ ಹಿ ಭೀಮಸ್ತಾನ್ ನಿವಾರಯತಿ ನಾನ್ಯಥಾ ॥ ೧೨೨ ॥

ಅ: ಅದು ಈಡೇರಿದ್ದರಿಂದ ಭೀಮ ಸುಮ್ಮನಾದ. ಆಗ ಧರ್ಮರಾಜ ಭೀಷ್ಮ, ದ್ರೋಣಾದಿಗಳ ಮೇಲೆ ಜಯ ಸಾಧಿಸುವುದು ಹೇಗೆ ಎಂದು ಚಿಂತಿಸತೊಡಗಿದ. ಗುರುಹಿರಿಯರನ್ನು ವಿರೋಧಿಸುವುದನ್ನು ಭೀಮ ಎಲ್ಲೂ ಬಯಸಲಾರ. ಆದ್ದರಿಂದ ಅವರೆಲ್ಲಾ ಅರ್ಜುನನಿಂದಲೇ ಎದುರಿಸಲ್ಪಡಬೇಕು ಎಂದು ಚಿಂತಿಸತೊಡಗಿದ. ಭೀಮ ಅವರನ್ನು ಎದುರಿಸುವುದು ಆಪತ್ಕಾಲದಲ್ಲಿ ಹೊರತು ಇತರ ಸಮಯದಲ್ಲಿ ಅಲ್ಲ.

ವಿ: ಭೀಮನ ಉಪದೇಶದಿಂದಾಗಿ ಧರ್ಮಪ್ರಜ್ಞೆ ಮರಳಿ ಪಡೆದ ಯುಧಿಷ್ಠಿರ ಅನಂತರದ ದಿನಗಳನ್ನು ನಿದ್ರೆಯಿಲ್ಲದೇ ಕಳೆಯುವಷ್ಟು ಆಳವಾದ ಚಿಂತನೆಗೆ ತೊಡಗಿದ ಎಂಬ ಮಾತು *ಮಹಾಭಾರತದಲ್ಲಿದೆ.

ವ್ಯಾಸಾಗಮನ

ಏವಂ ಚಿಂತಾಸಮಾವಿಷ್ಟಂ ವಿಜ್ಞಾಯೈವ ಯುಧಿಷ್ಠಿರಮ್ ।
ಸರ್ವಜ್ಞಃ ಸರ್ವಶಕ್ತಿಶ್ಚ ಕೃಷ್ಣದ್ವೈಪಾಯನೋಽಗಮತ್।
ನೃಪತಿಂ ಬೋಧಯಾಮಾಸ ಚಿಂತಾವ್ಯಾಕುಲಮಾನಸಮ್ ॥ ೧೨೩ ॥

ಅ: ಹೀಗೆ ಧರ್ಮರಾಜನು ಚಿಂತಾಮಗ್ನನಾದದ್ದನ್ನು ತಿಳಿದು ಸರ್ವಜ್ಞರೂ, ಸರ್ವಶಕ್ತರೂ ಆದ ಶ್ರೀವೇದವ್ಯಾಸರು ಅಲ್ಲಿಗೆ ಆಗಮಿಸಿದರು. ಚಿಂತೆಯಿಂದ ಮನಸ್ಸಿನಲ್ಲಿನೊಂದಿದ್ದ ಅವನಿಗೆ ಉಪದೇಶಿಸಿದರು.

ವಿ: ಆ ವೇಳೆಗೆ ಅಲ್ಲಿಗೆ ವೇದವ್ಯಾಸರು ಆಗಮಿಸಿದ್ದು ಅವರ ಸರ್ವಜ್ಞತ್ವ, ಸರ್ವಶಕ್ತತ್ವಕ್ಕೆ ನಿದರ್ಶನ. ಭೀಮನ ಅಭಿಪ್ರಾಯವೇ ಅವರ ಅಭಿಪ್ರಾಯವೂ ಆಗಿತ್ತು ಎನ್ನಲು ಅವರು

---

* ನ ನಿದ್ರಾಮಧಿಗಚ್ಛಾಮಿ ಚಿಂತಯಾನೋ ವೃಕೋದರ। – ಭಾರತ (ವನ. ೩೬/೨೦)

೧೨೩. ಆಜಗಾಮ ಮಹಾಯೋಗೀ ವ್ಯಾಸಃ ಸತ್ಯವತೀಸುತಃ ॥ – ಭಾರತ (ವನ. ೩೬/೨೨)

ಧರ್ಮರಾಜನಿಗೆ ಅದೇ ವಿಷಯದ ಬಗ್ಗೆ ಪ್ರೋತ್ಸಾಹ ನೀಡಿದ್ದು ಗಮಕ ಎಂದು ತಿಳಿಯಬೇಕು – **'ಹನುಮನ ಮತವೇ ಹರಿಯ ಮತವೋ'.**

ವ್ಯಾಸರು ನೀಡಿದ ಮಂತ್ರ

ಇಮಂ ಮಂತ್ರಂ ವದಿಷ್ಯಾಮಿ ಯೇನ ಜೇಷ್ಯತಿ ಫಲ್ಗುನಃ ।
ಭೀಷ್ಮದ್ರೋಣಾದಿಕಾನ್ ಸರ್ವಾನ್ ತಂ ತ್ವಂ ವದ ಧನಂಜಯೇ ॥ ೧೨೪ ॥

ಅ: 'ನಿನಗೆ ಮಂತ್ರವೊಂದನ್ನು ಉಪದೇಶಿಸುವೆ, ಅದರಿಂದ ಅರ್ಜುನ ಭೀಷ್ಮ ದ್ರೋಣಾದಿಗಳನ್ನೆಲ್ಲಾ ಜಯಿಸುವನು. ನೀನದನ್ನು ಅರ್ಜುನನಿಗೆ ಉಪದೇಶಿಸು'.

ಇತ್ಯುಕ್ತ್ವಾವದನ್ಮಂತ್ರಂ ಸರ್ವದೈವತದೃಷ್ಟಿದಮ್ ।
ನ ಸ್ವಯಂ ಹ್ಯವದತ್ ಪಾರ್ಥೇ ಫಲಾಧಿಕ್ಯಂ ಯತೋ ಭವೇತ್ ॥ ೧೨೫ ॥

ಅ: ಹೀಗೆ ಹೇಳಿ ವೇದವ್ಯಾಸರು ಎಲ್ಲ ದೇವತೆಗಳ ಸಾಕ್ಷಾತ್ಕಾರ ಮಾಡಿಸಬಲ್ಲ ಮಂತ್ರವನ್ನು ಉಪದೇಶಿಸಿದರು. ಅದರ ಫಲ ಅಗತ್ಯಕ್ಕಿಂತ ಹೆಚ್ಚಾಗುತ್ತಿತ್ತು ಎಂಬ ಕಾರಣದಿಂದ ತಾವೇ ನೇರವಾಗಿ ಅರ್ಜುನನಿಗೆ ಉಪದೇಶಿಸಲಿಲ್ಲ.

ವಿ: ೧) ಧರ್ಮರಾಜನ ಮೂಲಕ ಅರ್ಜುನನಿಗೆ ಮಂತ್ರೋಪದೇಶ ನೀಡುವುದಕ್ಕಿಂತ ನೇರವಾಗಿ ತಾವೇ ಅರ್ಜುನನಿಗೆ ಏತಕ್ಕೆ ತಿಳಿಸಲಿಲ್ಲ ಎಂಬುದಕ್ಕೆ ಇಲ್ಲಿ ಉತ್ತರ ನೀಡಿರುವರು. ಸಾಕ್ಷಾದುಪದೇಶದಿಂದ ಮಂತ್ರದ ಸಾಮರ್ಥ್ಯ ಹೆಚ್ಚುವುದು. ಅರ್ಜುನನಿಗೆ ಆ ಮಂತ್ರದಿಂದ ಸಿದ್ಧಿಯಾಗಬೇಕಾದುದ್ದು ಭೀಷ್ಮಾದಿಗಳ ಜಯ ಮಾತ್ರ. ಆದ್ದರಿಂದ ಆ ಮಂತ್ರದ ಸಿದ್ಧಿ ಅಷ್ಟಕ್ಕೇ ಸೀಮಿತವಾಗಲಿ ಎಂಬ ಕಾರಣದಿಂದ ನೇರವಾಗಿ ಉಪದೇಶಿಸಲಿಲ್ಲ ಎಂದರ್ಥ.

೨) ಮತ್ತೊಬ್ಬರ ಮೂಲಕ ಹೇಳಿದಾಗ ಮಂತ್ರೋಪದೇಶ ಕುಂದುವುದು ಎಂದು ವಚನವಿದೆ – **'ಷಟ್ಕರ್ಣೋ ಭಿದ್ಯತೇ ಮಂತ್ರಃ'.**

ಭೀಷ್ಮದ್ರೋಣಾದಿವಿಜಯ ಏತಾವದ್ವೀರ್ಯಮೇವ ಹಿ ।
ಅಲಂ ನಾತೋऽಧಿಕಂ ಕಾರ್ಯಮೇತಾವದ್ಯೋಗ್ಯಮಸ್ಯ ಚ ।
ಫಲ್ಗುನಸ್ಯೇತಿ ಭಗವಾನ್ ನ ಸ್ವಯಂ ಹ್ಯವದನ್ಮನುಮ್ ॥ ೧೨೬ ॥

---

೧೨೪. ಗೃಹಾಣೇಮಾಂ ಮಯಾ ಪ್ರೋಕ್ತಾಂ ಸಿದ್ಧಿಂ ಮೂರ್ತಿಮತೀಮಿವ ।
ವಿದ್ಯಾಂ ಪ್ರತಿಸೃತಿಂ ನಾಮ ಪ್ರಪನ್ನಾಯ ಬ್ರವೀಮಿ ತೇ ॥
ಯಾಮವಾಪ್ಯ ಮಹಾಬಾಹುರರ್ಜುನಃ ಸಾಧಯಿಷ್ಯತಿ ॥ – ಭಾರತ (ವನ. ೩೬/೩೦)

ಅ: ಭೀಷ್ಮ, ದ್ರೋಣಾದಿಗಳನ್ನು ಗೆಲ್ಲಲು ಇಷ್ಟು ಸಾಮರ್ಥ್ಯ ಸಾಕು. ಅದಕ್ಕಿಂತ ಹೆಚ್ಚು ಬೇಕಾದುದಿಲ್ಲ. ಈ ಅರ್ಜುನನಿಗೆ ಇಷ್ಟು ಮಾತ್ರ ಯೋಗ್ಯವಾದುದು ಎಂಬ ಕಾರಣದಿಂದ ವೇದವ್ಯಾಸರು ತಾವೇ ಅವನಿಗೆ ಮಂತ್ರವನ್ನು ಉಪದೇಶಿಸಲಿಲ್ಲ.

ವಿ: ೧) ಬ್ರಹ್ಮದೇವರು ಶ್ವೇತರಾಜನಿಗೆ ಅಗಸ್ತ್ಯರ ಮೂಲಕ ಶ್ರೀರಾಮದೇವರಿಗೆ ಮಾಲೆಯೊಂದನ್ನು ಸಮರ್ಪಿಸಲು ನೀಡುವ ಆದೇಶವೂ ಸಹ ಇದೇ ಬಗೆಯದಾಗಿತ್ತು ಎಂಬುದನ್ನು ತಿಳಿಯಬೇಕು* (೯/೨೨–೨೬). ಅಲ್ಲಿಯೂ ಶ್ವೇತರಾಜನ ಹಸಿವು ಹಿಂಗುವಷ್ಟು ಕಾರ್ಯ ಮಾತ್ರ ಅದರಿಂದ ಆಗಬೇಕಿತ್ತು, ಅದರಿಂದ ಅವನಿಗೆ ಸಾಕ್ಷಾತ್ತಾಗಿ ನೀಡಲು ತಿಳಿಸದೇ ಅಗಸ್ತ್ಯರ ಮೂಲಕ ನೀಡಲು ತಿಳಿಸಿದರು ಎಂದು ಅಲ್ಲಿ ಹೇಳಿರುವುದನ್ನು ಗಮನಿಸಬೇಕು.

೨) ಈ ಪ್ರಸಂಗ ನಡೆದದ್ದು ಅವರು ದ್ವೈತವನದಲ್ಲಿದ್ದಾಗ ಎಂಬ ವಿವರ ಮಹಾಭಾರತ–ದಲ್ಲಿದೆ. ಮಂತ್ರೋಪದೇಶ ಮೊದಲಾದ ಕಾರ್ಯಗಳಿಗೆ ದ್ವೈತದರ್ಶನದಲ್ಲಿ ಮಾತ್ರ ಅವಕಾಶ ಎಂದು ಅದರ ಭಾವ.

ಧರ್ಮರಾಜನಿಂದ ಅರ್ಜುನನಿಗೆ ಮಂತ್ರೋಪದೇಶ

ಗತೇ ವ್ಯಾಸೇ ಭಗವತಿ ಸರ್ವಜ್ಞೇ ಸರ್ವಕರ್ತರಿ ।
ಧರ್ಮರಾಜೋऽದಿಶನ್ಮಂತ್ರಂ ಫಲ್ಗುನಾಯ ರಹಸ್ಯಮುಮ್ ॥ ೧೨೭ ॥

ಅ: ಸರ್ವಜ್ಞರೂ, ಸರ್ವಕರ್ತೃಗಳೂ ಆದ ವೇದವ್ಯಾಸರು ತೆರಳಿದ ಮೇಲೆ ಧರ್ಮರಾಜನು ಆ ಮಂತ್ರವನ್ನು ಏಕಾಂತದಲ್ಲಿ ಅರ್ಜುನನಿಗೆ ಉಪದೇಶಿಸಿದನು.

ವಿ: ವೇದವ್ಯಾಸರು ಹಾಗೆ ಉಪದೇಶಿಸಿದ ಮಂತ್ರಕ್ಕೆ 'ಪ್ರತಿಸ್ಮೃತಿ ಮಂತ್ರ' ಎಂದು ಹೆಸರು. ಅದರಿಂದಾಗಿಯೇ ಅರ್ಜುನನಿಗೆ ಇಂದ್ರಾದಿಸಕಲಲೋಕಪಾಲಕರನ್ನೂ ಸಾಕ್ಷಾತ್ ಕಾಣಲು ಸಾಧ್ಯ–ವಾಯಿತು. ಅವರಿಂದ ಅಸ್ತ್ರಪ್ರಾಪ್ತಿಯೂ ಆಯಿತು. ಧರ್ಮರಾಜನು ಅರ್ಜುನನಿಗೆ ಮಂತ್ರ ಉಪದೇಶಿಸಿದ್ದು ಕಾಮ್ಯಕವನದಲ್ಲಿ.

ಇಂದ್ರಕೀಲದಲ್ಲಿ ಇಂದ್ರಾತ್ಮಜ

ತಮಾಪ್ಯ ಫಲ್ಗುನೋ ಮಂತ್ರಂ ಯಯೌ ಜ್ಯೇಷ್ಠೌ ಪ್ರಣಮ್ಯ ಚ ।
ಯಮಜೌ ಚ ಸಮಾಶ್ಲಿಷ್ಯ ಗಿರಿಮೇವೇಂದ್ರಕೀಲಕಮ್ ॥ ೧೨೮ ॥

---

* ಕ್ಷುದಭಾವಮಾತ್ರಫಲದಂ ನ ಸಾಕ್ಷಾದ್ರಾಘವೇऽರ್ಪಿತಮ್ ।...
ವ್ಯವಧಾನತಸ್ತ್ವತೋ ರಾಮೇ ದದ್ಯಾಚ್ಛ್ವೇತ ಇತಿ ಪ್ರಭುಃ ॥ – (೯/೨೪)

★ ವಿದ್ಯಾಂ ಪ್ರತಿಸ್ಮೃತಿಂ ನಾಮ ಪ್ರಪನ್ನಾಯ ಬ್ರವೀಮಿ ತೇ । – ಭಾರತ (ವನ. ೩೬/೩೦)

ಅ: ಅರ್ಜುನನು ಆ ಮಂತ್ರೋಪದೇಶವನ್ನು ಹೊಂದಿ ಇಬ್ಬರು ಅಣ್ಣಂದಿರನ್ನು ವಂದಿಸಿ, ನಕುಲ ಸಹದೇವರನ್ನು ಗಾಢವಾಗಿ ಆಲಿಂಗಿಸಿಕೊಂಡು ಇಂದ್ರಕೀಲ ಪರ್ವತಕ್ಕೆ ತೆರಳಿದ.

ತಪಶ್ಚಚಾರ ತತ್ರಸ್ಥಃ ಶಂಕರಸ್ಥಂ ಹರಿಂ ಸ್ಮರನ್ ।
ಷಣ್ಮಾಸೇಽತಿಗತೇಽಪಶ್ಯನ್ಮೂಕಂ ನಾಮಾಸುರಂ ಗಿರೌ ।
ವರಾಹರೂಪಮಾಯಾತಂ ವಧಾರ್ಥಂ ಫಲ್ಗುನಸ್ಯ ಚ ॥ ೧೨೯ ॥

ಅ: ಇಂದ್ರಕೀಲದಲ್ಲಿ ನೆಲೆಸಿ ಅರ್ಜುನ ರುದ್ರಾಂತರ್ಯಾಮಿಯಾದ ಹರಿಯನ್ನು ಸ್ಮರಿಸುತ್ತಾ ತಪಸ್ಸನ್ನು ಆಚರಿಸಿದ. ಆರು ತಿಂಗಳು ಕಳೆದ ಮೇಲೆ ಆ ಬೆಟ್ಟದಲ್ಲಿ ಮೂಕ ಎಂಬ ಅಸುರನನ್ನು ಕಂಡ.

ವಿ: ಅರ್ಜುನ ಇಂದ್ರಕೀಲಕ್ಕೆ ಬಂದಾಗ ಇಂದ್ರ ಬ್ರಾಹ್ಮಣ ವೇಷದಿಂದ ಬಂದು ಅಲ್ಲಿಯೇ ತಪಸ್ಸು ಮಾಡಲು ಸೂಚನೆ ನೀಡಿದ. ಅರ್ಜುನ ಅಲ್ಲಿ ಮೊದಲ ತಿಂಗಳಲ್ಲಿ ಮೂರುದಿನಗಳಿ–ಗೊಮ್ಮೆ, ಎರಡನೆಯ ತಿಂಗಳಲ್ಲಿ ಆರುದಿನಗಳಿಗೊಮ್ಮೆ, ಮೂರನೆಯ ತಿಂಗಳಲ್ಲಿ ಹದಿನೈದು ದಿನಗಳಿಗೊಮ್ಮೆ ಹಣ್ಣು ಎಲೆಗಳನ್ನು ತಿಂದು ತಪಸ್ಸುಮಾಡಿದ. ನಾಲ್ಕನೆಯ ತಿಂಗಳಲ್ಲಿ ಅವನ್ನೂ ತೊರೆದು ವಾಯು ಸೇವನೆಯಿಮದ ತಪಸ್ಸನ್ನು ಮಾಡಿದ. ಮುಂದಿನ ತಿಂಗಳುಗಳಲ್ಲಿ ಪಾದಾಂಗುಷ್ಠಗಳ ಮೇಲೆ ನಿಂತು ತಪಸ್ಸನ್ನು ತೀವ್ರಗೊಳಿಸಿದ. ಹಾಗೆ ಆರುತಿಂಗಳು ಕಳೆದ ಮೇಲೆ ದನುಪುತ್ರನಾದ ಮೂಕಾಸುರ ಎಂಬವನು ಆಗಮಿಸಿದ ಎಂಬ ವಿವರ *ಮಹಾಭಾರತದಲ್ಲಿದೆ.

ಮೂಕಾಸುರನ ವಧೆ

ತಂ ಜ್ಞಾತ್ವಾ ಫಲ್ಗುನೋ ವೀರಃ ಸಜ್ಯಂ ಕೃತ್ವಾ ಚ ಗಾಂಡಿವಮ್ ।
ಚಿಕ್ಷೇಪ ವಜ್ರಸಮಿತಾಂಸ್ತತ್ಕಾಯೇ ಸಾಯಕಾನ್ ಬಹೂನ್ ॥ ೧೩೦ ॥

ಅ: ಹಂದಿಯ ಆಕಾರವನ್ನು ತಳೆದು ಆ ರಾಕ್ಷಸ ಅರ್ಜುನನನ್ನು ಕೊಲ್ಲಲು ಧಾವಿಸಿದ. ಅದನ್ನು ತಿಳಿದು ವೀರನಾದ ಅರ್ಜುನ ಗಾಂಡೀವವನ್ನು ಹೆದೆಯೇರಿಸಿ ವಜ್ರದಂತಹ ಅನೇಕ ಬಾಣಗಳನ್ನು ಅವನ ದೇಹದ ಮೇಲೆ ಪ್ರಯೋಗಿಸಿದ.

---

೧೨೮. ಗ್ರಂಥಾಂತರೇ ಶಂಕರಮುದ್ದಿಶ್ಯ ತಪಶ್ಚಕಾರೇತಿ ವಚನಸ್ಯ ತಾತ್ಪರ್ಯಮಾಹ – ಶಂಕರಸ್ಥಮಿತಿ । – (ಜ.)

* ಮೂಕಂ ನಾಮ ದನೋಃ ಪುತ್ರಂ ದದರ್ಶಾದ್ಭುತದರ್ಶನಮ್ ।
ವಾರಾಹಂ ರೂಪಮಾಸ್ಥಾಯ ತರ್ಕಯಂತಮಿವಾರ್ಜುನಮ್ ॥ – ಭಾರತ (ವನ. ೩/೩೯/೮)

ವಿ: ಅರ್ಜುನ ಶ್ರವಣಾದಿಗಳ ಸಂಕೇತ. ಮೂಕಾಸುರ ಶ್ರವಣಾದಿಗಳನ್ನು ಮಾಡುವವನಿಗೆ ಪಾಠ ಪ್ರವಚನಕ್ಕೆ ವಿಘ್ನವಾಗುವಂತಹ ಕೆಟ್ಟ ಮೌನದ ಸಂಕೇತ. ಅಂತಹ ಮೌನವನ್ನು ಮುರಿದು ಪಾಠ ಪ್ರವಚನಗಳಲ್ಲಿ ತೊಡಗಿದಾಗಲೇ ಶಿವನ ಅನುಗ್ರಹರೂಪವಾದ ಮನೋನಿಗ್ರಹ ಸಾಧ್ಯ ಎಂದು ಇಲ್ಲಿಯ ಅಧ್ಯಾತ್ಮಾರ್ಥ.

ಕಿರಾತರೂಪಸ್ತಮನು ಸಭಾರ್ಯಶ್ಚ ತ್ರಿಯಂಬಕಃ ।
ಸ ಮಮಾರ ಹತಸ್ತಾಭ್ಯಾಂ ದಾನವಃ ಪಾಪಚೇತನಃ ॥ ೧೩೧ ॥

ಅ: ಬಳಿಕ ಪಾರ್ವತೀ ಸಮೇತನಾದ ಮುಕ್ಕಣ್ಣನಾದ ಶಿವ ಕಿರಾತರೂಪದಿಂದ ಆ ಅಸುರನನ್ನು ಬಾಣಗಳಿಂದ ಹೊಡೆದ. ಅವರಿಬ್ಬರಿಂದ ಹೊಡೆಯಲ್ಪಟ್ಟು ಪಾಪಜೀವಿಯಾದ ಆ ರಾಕ್ಷಸ ಸತ್ತುಹೋದ.

ವಿ: ಸಾಯುವಾಗ ಆ ರಾಕ್ಷಸ ಹಂದಿಯ ರೂಪವನ್ನು ಬಿಟ್ಟು [+]ರಾಕ್ಷಸರೂಪವನ್ನು ತಾಳಿಯೇ ಸತ್ತ. ಅಂತ್ಯ ಕಾಲದಲ್ಲಿ ಅವರವರ ಸ್ವರೂಪ ಹೊರಬರುವುದು ಎಂದು ಶಾಸ್ತ್ರವಚನ.

ಕಿರಾತಾರ್ಜುನೀಯ

ತೇನೋಕ್ತೋಽಸೌ ಮಯೈವಾಯಂ ವರಾಹೋಽನುಗತೋಽದ್ಯ ಹಿ ।
ತಮವಿಧ್ಯೋ ಯತಸ್ತ್ವಂ ಹಿ ತದ್ಯುಧ್ಯಸ್ವ ಮಯಾ ಸಹ ॥ ೧೩೨ ॥

ಅ: ಶಿವ ಅರ್ಜುನನಿಗೆ ತಿಳಿಸಿದ 'ಈ ಹಂದಿಯನ್ನು ಬೆನ್ನಟ್ಟಿಕೊಂಡು ಬಂದಿದ್ದು ನಾನು, ಅದನ್ನು ನೀನು ಹೊಡೆದೆ. ಆದ್ದರಿಂದ ನನ್ನೊಂದಿಗೆ ನೀನು ಯುದ್ಧಮಾಡು'.

ವಿ: ಶಿವ ಅರ್ಜುನನೊಂದಿಗೆ ಉದ್ದೇಶಪೂರ್ವಕವಾಗಿಯೇ ಹಾಗೆ ಕಲಹ ಪ್ರಾರಂಭಿಸಿ ಮುಂದೆ ಅನುಗ್ರಹಿಸಿದ.

ಇತ್ಯುಕ್ತಃ ಫಲ್ಗುನಃ ಪ್ರಾಹ ತಿಷ್ಠ ತಿಷ್ಠ ನ ಮೋಕ್ಷ್ಯಸೇ ।
ಇತ್ಯುಕ್ತ್ವಾ ತಾವುಭೌ ಯುದ್ಧಂ ಚಕ್ರತುಃ ಪುರುಷರ್ಷಭೌ ॥ ೧೩೩ ॥

ಅ: ಅವನು ಹೀಗೆನ್ನಲು ಅರ್ಜುನ ನುಡಿದ 'ನಿಲ್ಲು, ನಿಲ್ಲು ನಿನ್ನನ್ನು ನಾನು ಬಿಡೆನು' ಹೀಗೆ ನುಡಿಯುತ್ತಾ ಆ ಪುರುಷಶ್ರೇಷ್ಠರಿಬ್ಬರೂ ಯುದ್ಧದಲ್ಲಿ ತೊಡಗಿದರು.

---

* ನಾನಂತೇವಾಸಿನೇ ಪ್ರಬ್ರೂಯಾನ್ನಾಸಂವತ್ಸರವಾಸಿನೇ ನಾಪ್ರವಕ್ತೇ ... ॥ – ಐತರೇಯೋಪನಿಷತ್ (೨/೮/೬)

[+] ಮಮಾರ ರಾಕ್ಷಸಂ ರೂಪಂ ಭೂಯಃ ಕೃತ್ವಾ ವಿಭೀಷಣಮ್ ॥ – ಭಾರತ (ವನ. ೩೯/೧೬)

ಕಿರಾತನಿಂದ ಅರ್ಜುನನ ಪರಾಭವ

ತತ್ರಾಖಿಲಾನಿ ಚಾಸ್ತ್ರಾಣಿ ಫಲ್ಗುನಸ್ಯಾಗ್ರಸಚ್ಛಿವಃ ।
ತತೋಽರ್ಜುನಸ್ತು ಗಾಂಡೀವಂ ಸಮಾದಾಯಾಭ್ಯತಾಡಯತ್ ॥ ೧೩೪ ॥

ಅ: ಆ ಯುದ್ಧದಲ್ಲಿ ಅರ್ಜುನನ ಎಲ್ಲಾ ಅಸ್ತ್ರಗಳನ್ನು ಶಿವ ನುಂಗಿಹಾಕಿದ. ಬಳಿಕ ಅರ್ಜುನ ಗಾಂಡೀವವನ್ನು ತೆಗೆದುಕೊಂಡು ಅದರಿಂದ ಅವನನ್ನು ಹೊಡೆದ.

ವಿ: ಅರ್ಜುನನು ಪ್ರಯೋಗಿಸಿದ ಬಾಣಗಳನ್ನು ಶಿವ *ನುಂಗಿಹಾಕಿಗಿದ (**'ಬಾಣಾನ್ ಗ್ರಸತಿ ಸರ್ವಶಃ'** – ಭಾರತ ೩/೩೯/೪೭). ಅಕ್ಷಯ ಬತ್ತಳಿಕೆ ಬರಿದಾದಾಗ ಅರ್ಜುನ ಬೇರೆ ದಾರಿ ಕಾಣದೇ ಗಾಂಡೀವವನ್ನೇ ಕೈಗೆತ್ತಿಕೊಂಡು ಹೊಡೆಯಲು ಹೊರಟ ಎಂದರ್ಥ.

ತದಪ್ಯಗ್ರಸದೇವಾಸೌ ಪ್ರಹಸನ್ ಗಿರಿಶಸ್ತದಾ ।
ಬಾಹುಯುದ್ಧಂ ತತಸ್ತ್ವಾಸೀತ್ ತಯೋಃ ಪುರುಷಸಿಂಹಯೋಃ ॥ ೧೩೫ ॥

ಅ: ಆಗ ಶಿವನು ಜೋರಾಗಿ ನಗುತ್ತಾ ಅದನ್ನೂ ಸಹ ನುಂಗಿಬಿಟ್ಟ. ಬಳಿಕ ಆ ಇಬ್ಬರು ಪುರುಶ್ರೇಷ್ಠರಿಗೆ ಮಲ್ಲಯುದ್ಧ ನಡೆಯಿತು.

ನೆಲಕಚ್ಚಿದ ಅರ್ಜುನ

ಪಿಂಡೀಕೃತ್ಯ ತತೋ ರುದ್ರಶ್ಚಿಕ್ಷೇಪಾಥ ಧನಂಜಯಮ್ ।
ಮೂರ್ಛಾಮವಾಪ ಮಹತೀಂ ಫಲ್ಗುನೋ ರುದ್ರಪೀಡಿತಃ ॥ ೧೩೬ ॥

ಅ: ಆಗ ಶಿವ ಅರ್ಜುನನನ್ನು ಮುದ್ದೆ ಮಾಡಿ ಎಸೆದ; ಅರ್ಜುನ ಶಿವನಿಂದ ಪೀಡಿತನಾಗಿ ಗಾಢ ಮೂರ್ಛೆಗೆ ಒಳಗಾದ.

ಶಿವನ ವಿಜಯದ ಹಿನ್ನೆಲೆ

ಪೂರ್ವಂ ಸಂಪ್ರಾರ್ಥಯಾಮಾಸ ಶಂಕರೋ ಗರುಡಧ್ವಜಮ್ ।
ಅವರಾಣಾಂ ವರಂ ಮತ್ತೋ ಯೇಷಾಂ ತ್ವಂ ಸಂಪ್ರಯಚ್ಛಸಿ ।
ಅಜೇಯತ್ವಂ ಪ್ರಸಾದಾತ್ ತೇ ವಿಜೇಯಾಃ ಸ್ಯುರ್ಮಯಾಽಪಿ ತೇ॥ ೧೩೭ ॥

---

* ತತೋಽರ್ಜುನಃ ಶರವರ್ಷಂ ಕಿರಾತೇ ಸಮವಾಸೃಜತ್ ।
ತತ್ ಪ್ರಸನ್ನೇನ ಮನಸಾ ಪ್ರತಿಜಗ್ರಾಹ ಶಂಕರಃ ॥ – ಭಾರತ (ವನ. ೩೯/೩೬)

೧೩೬. ತತೋಽಭಿಪೀಡಿತೈರ್ಗಾತ್ರೈಃ ಪಿಂಡೀಕೃತ ಇವಾಬಭೌ ॥ – ಭಾರತ (ವನ. ೩೯/೬೨)

ಅ: ಹಿಂದೆ ಶಿವ ಗರುಡಧ್ವಜನಾದ ಶ್ರೀಹರಿಯನ್ನು ಬೇಡಿಕೊಂಡಿದ್ದ 'ನೀನು ನನಗಿಂತ ಕಡಿಮೆಯಾದವರಿಗೆ ಅಜೇಯತ್ವ ವರವನ್ನು ಕೊಟ್ಟಾಗ ನಿನ್ನ ಅನುಗ್ರಹದಿಂದ ನಾನು ಅವರನ್ನು ಗೆಲ್ಲುವಂತಾಗಬೇಕು'.

ವಿ: ಪಾರಿಜಾತ ಹರಣ ಕಾಲದಲ್ಲಿ ಕೃಷ್ಣ ಇಂದ್ರನಿಗೆ ವರ ನೀಡಿದ್ದ 'ನಾನು ಭೂಲೋಕದಲ್ಲಿ ಇರುವವವರೆಗೂ ಅರ್ಜುನನನ್ನು ಯಾರೂ ಸೋಲಿಸರು' ಎಂದು (೨೦/೧೩೪). ಆದರೆ ಅರ್ಜುನ ಇಲ್ಲಿ ಹೀಗೆ ಸೋತದ್ದಕ್ಕೆ ಕಾರಣವನ್ನು ನೀಡಿರುವರು. ಶಿವ ಕೃಷ್ಣನನ್ನು ಹಿಂದೊಮ್ಮೆ ಪ್ರಾರ್ಥಿಸಿ–ಕೊಂಡಿದ್ದ. ಅವನಿಗಿಂತ ಚಿಕ್ಕವರಿಗೆ ಶ್ರೀಹರಿ ಅಜೇಯತ್ವ ವರವನ್ನು ನೀಡಿದರೆ, ತಾನು ಮಾತ್ರ ಅವರನ್ನು ಗೆಲ್ಲಲು ಸಾಧ್ಯವಾಗುವಂತಿರಬೇಕು ಎಂದು. ಇಲ್ಲಿ ಇಂದ್ರಾವತಾರನಾದ ಅರ್ಜುನ ಸ್ವರೂಪದಲ್ಲಿ ಶಿವನಿಗಿಂತ ಕಡಿಮೆ. ಅವನಿಗೆ ಕೃಷ್ಣನ ವರವಿದೆ. ಅಂಥವನನ್ನೂ ಗೆಲ್ಲಲು ಸಾಧ್ಯವಾಗಬೇಕು ಎಂಬುದು ಶಿವ ಕೇಳಿದ್ದ ವರದ ಭಾವ.

ಇತ್ಯುಕ್ತಃ ಪ್ರದದೌ ವಿಷ್ಣುರುಮಾಧೀಶಾಯ ತಂ ವರಮ್ ।
ತೇನಾಜಯಚ್ಛ್ವೇತವಾಹಂ ಗಿರಿಶೋ ರಣಮಧ್ಯಗಮ್ ॥ ೧೩೮ ॥

ಅ: ಹೀಗೆ ಕೇಳಿದಾಗ ವಿಷ್ಣು ಶಿವನಿಗೆ ಆ ವರವನ್ನು ನೀಡಿದ್ದ, ಅದರಿಂದಾಗಿ ಶಿವ ಆ ಯುದ್ಧದಲ್ಲಿ ಶ್ವೇತವಾಹನನಾದ ಅರ್ಜುನನನ್ನು ಸೋಲಿಸಿದ.

ವಿ: 'ಶ್ವೇತವಾಹನ' ಎಂಬುದು ಅರ್ಜುನನ ದಶನಾಮಗಳಲ್ಲಿ ಒಂದು (ಭಾರತ ೪/೪೪/೯).

ಕೇವಲಾನ್ ವೈಷ್ಣವಾನ್ ಮಂತ್ರಾನ್ ವ್ಯಾಸಃ ಪಾರ್ಥಾಯ ನೋ ದದೌ ।
ಏತಾವತಾऽಲಂ ಭೀಷ್ಮಾದೇರ್ಜಯಾರ್ಥಮಿತಿ ಚಿದ್ಘನಃ ॥ ೧೩೯ ॥

ಅ: ಚಿನ್ಮಯರಾದ ವೇದವ್ಯಾಸರು ಭೀಷ್ಮಾದಿಗಳನ್ನು ಗೆಲ್ಲಲಿಕ್ಕೆ ಅರ್ಜುನನಿಗೆ ಇಷ್ಟು ಸಾಕು ಎಂದು ಕೇವಲವೈಷ್ಣವ ಮಂತ್ರಗಳನ್ನು ನೀಡಿರಲಿಲ್ಲ.

---

೧೩೭. ವೇದವ್ಯಾಸದತ್ತಮಂತ್ರೈಃ ಅರ್ಜುನಸ್ಯಾಜೇಯತ್ವಾಖ್ಯವರೇ ಸತ್ಯಪಿ ಶಿವಃ ಕಥಮರ್ಜುನಮಜೈಷೀದಿತ್ಯತ ಆಹ। ಅವರಾಣಾಮಿತಿ ಧರ್ಮರಾಜಾಯ ಮಂತ್ರದಾನಸಮಯೇ ಇಮಾನ್ ಮಂತ್ರಾನರ್ಜುನಾಯ ದಿಶ। ಏತೈರ್ಮಂತ್ರೈರರ್ಜುನೋऽಜೇಯೋ ಭವಿಷ್ಯತೀತಿ ಧರ್ಮರಾಜವಿಶ್ವಾಸಾಯ ವ್ಯಾಸೇನ ವಾಗಪಿ ನಿರೂಪಿತಾ। ಅತೋ ಹರಿಣಾ ದತ್ತಾಜೇಯತ್ವವರೋऽಪ್ಯರ್ಜುನಸ್ಯಾಸ್ತೀತಿ ಭಾವಃ। ತೇऽಪಿ ಮಯಾ ವಿಜೇಯಾಃ ಸ್ಯುರಿತ್ಯಪಿಪದಸಂಬಂಧಃ ॥ – (ವಾ.)

೧೩೯. ವ್ಯಾಸಸ್ತು ಕೇವಲಾನ್ ವೈಷ್ಣವಾನ್ ಮಂತ್ರಾನ್ ನೋ ದದೌ। ಕಿಂತು ಹರಿದೇವತಾಕಾನ್ ರುದ್ರರ್ಷಿಕಾನೇವ ದದಾವಿತ್ಯರ್ಥಃ। ತಸ್ಮಾತ್ ಕೇವಲವೈಷ್ಣವಮಂತ್ರರಹಿತೋऽರ್ಜುನೋ ರುದ್ರೇಣ ಜಿತ ಇತಿ ಯುಕ್ತಮಿತಿ ಭಾವಃ। – (ಜ.)

ವಿ: ೧) ಕೇವಲ ವಿಷ್ಣುದೇವತಾಕವಾದ ಮಂತ್ರಗಳನ್ನು ವ್ಯಾಸರು ಅರ್ಜುನನಿಗೆ ನೀಡದೇ ಶಿವಾಂತರ್ಗತನಾದ ವಿಷ್ಣುವನ್ನು ಸ್ತುತಿಸುವಂತಹ ಮಂತ್ರಗಳನ್ನು ನೀಡಿದ್ದರು ಎಂದರ್ಥ.

೨) ಒಂದು ಮಂತ್ರ ಪೂರ್ಣ ವೈಷ್ಣವವಾಗುವುದು ಕೇವಲ ವಿಷ್ಣುವಾಚಕವಾದಾಗ. ಇತರ ದೇವತೆಗಳ ಅಂತರ್ಯಾಮಿತ್ವೇನ ಸ್ತುತಿಸಿದಾಗ ಅದು ಕೇವಲವೈಷ್ಣವಮಂತ್ರ ಎನ್ನಿಸದು. ಅವೈಷ್ಣವ ಮಂತ್ರಗಳಂತೂ ನಿಷಿದ್ಧವೇ ಆದ್ದರಿಂದ ಅವುಗಳ ಉಪದೇಶದ ಪ್ರಸಕ್ತಿ ಸರ್ವಥಾ ಬರದು ಎಂದು ತಿಳಿಯಬೇಕು.

ವ್ಯಾಸರು ನೀಡಿದ ಮಂತ್ರದ ಪರಿಮಿತಿ

ಕೇವಲೈರ್ವೈಷ್ಣವೈರ್ಮಂತ್ರೈಃ ಸ್ವದತ್ತೈರ್ವಿಜಯಾವಹೈಃ ।
ಅತಿವೃದ್ಧಸ್ಯ ಪಾರ್ಥಸ್ಯ ದರ್ಪಃ ಸ್ಯಾದಿತಿ ಚಿಂತಯನ್ ॥ ೧೪೦ ॥

ಅ: ತಾವು ಕೇವಲವೈಷ್ಣವಮಂತ್ರಗಳನ್ನೇ ನೀಡಿದರೆ, ವಿಜಯದಾಯಕವಾದ ಅವುಗಳಿಂದ ತುಂಬಾ ಬಲಿಷ್ಠನಾಗುವ ಅರ್ಜುನನಿಗೆ ಅಹಂಕಾರ ಬಂದೀತೆಂದು ಭಾವಿಸಿ ಶ್ರೀವೇದವ್ಯಾಸರು ಹಾಗೆ ಮಾಡಿದ್ದರು.

ವಿ: ೧) ಎಂದರೆ ಶಿವಾಂತರ್ಯಾಮಿತ್ವೇನ ವಿಷ್ಣುವನ್ನು ಆರಾಧಿಸುವ ಮಂತ್ರಗಳನ್ನು ವ್ಯಾಸರು ನೀಡಿದ್ದರಿಂದ ಶಿವನಿಗೆ ಅರ್ಜುನನನ್ನು ಹಾಗೆ ಸೋಲಿಸಲು ಸಾಧ್ಯವಾಯಿತೆಂದು ತಿಳಿಯಬೇಕು. ತಾವು ಕೃಷ್ಣ ರೂಪದಿಂದ ಶಿವನಿಗೆ ನೀಡಿದ್ದ ವರ ಸತ್ಯವಾಗಲಿ ಎಂದೇ ವ್ಯಾಸರು ಹಾಗೆ ಕೇವಲ ವೈಷ್ಣವ ಮಂತ್ರಗಳನ್ನು ನೀಡಿರಲಿಲ್ಲ ಎಂದೂ ತಿಳಿಯಬಹುದು.

೨) 'ಅತಿವೃದ್ಧಸ್ಯ' ಎಂದರೆ ಯೋಗ್ಯತೆಗೆ ಮೀರಿ ಶಕ್ತಿಪಡೆಯುವಂತಹ ಎಂದರ್ಥ.

ಅರ್ಜುನ ಮಾಡಿದ ಶಿವಪೂಜೆ

ಪಾರ್ಥಃ ಸಂಜ್ಞಾಮವಾಪ್ಯಾಥ ಜಯಾರ್ಥ್ಯಾರಾಧಯಚ್ಛಿವಮ್ ।
ವ್ಯಾಸೋದಿತೇನ ಮಂತ್ರೇಣ ತಾನಿ ಪುಷ್ಪಾಣಿ ತಚ್ಚಿರಃ ॥ ೧೪೧ ॥

ಅರ್ಜುನನ ಶರಣಾಗತಿ

ಆರುಹನ್ ಸ ತು ತಂ ಜ್ಞಾತ್ವಾ ರುದ್ರ ಇತ್ಯೇವ ಫಲ್ಗುನಃ ।
ನಮಶ್ಚಕ್ರೇ ತತಃ ಪ್ರಾದಾದಸ್ತ್ರಂ ಪಾಶುಪತಂ ಶಿವಃ ॥ ೧೪೨ ॥

ಅ: ಪ್ರಜ್ಞೆ ಮರಳಿದ ಅರ್ಜುನ ಯುದ್ಧದಲ್ಲಿ ಜಯ ಪಡೆಯಬಯಸಿದ. ಶ್ರೀವ್ಯಾಸರು ತಿಳಿಸಿದ್ದ ಮಂತ್ರದಿಂದ ಶಿವನನ್ನು ಆರಾಧಿಸತೊಡಗಿದ. ಅವನು ಸಮರ್ಪಿಸಿದ ಪುಷ್ಪಗಳು ಆ ಕಿರಾತನ ಶಿರಸ್ಸನ್ನು ಏರಿದವು. ಅರ್ಜುನ ಆಗ ಆ ಕಿರಾತನನ್ನು ಶಿವ ಎಂದು ತಿಳಿದು ವಂದಿಸಿದ. ಬಳಿಕ ಶಿವ ಅವನಿಗೆ ಪಾಶುಪತಾಸ್ತ್ರವನ್ನು ನೀಡಿದ.

ವಿ: ೧) ವ್ಯಾಸದತ್ತವಾದ ಮಂತ್ರದಿಂದ ಅರ್ಜುನ ಶಿವನನ್ನು ಆರಾಧಿಸಿದ ಎಂಬ ಮಾತಿನಿಂದ ಅದು ಶಿವಾಂತರ್ಯಾಮಿತಯಾ ವಿಷ್ಣುವನ್ನು ಆರಾಧಿಸುವ ಮಂತ್ರ ಎಂಬ ವಿಚಾರ ಸ್ಫುಟ-ಪಡುವುದು. ಅರ್ಜುನ ಶಿವನ ಆರಾಧನೆಗೆಂದು ಮಣ್ಣಿನಿಂದ ಶಿವಲಿಂಗ ಮಾಡಿ ಪೂಜಿಸುತ್ತಾ ಪುಷ್ಪಗಳನ್ನು ಸಮರ್ಪಿಸಿದ. ಆ ಪುಷ್ಪಗಳು ಅಲ್ಲಿಂದ ಮಾಯವಾಗಿ ಕಿರಾತನ ತಲೆಯ ಮೇಲೆ ಕಾಣಿಸಿಕೊಂಡವು. ಆಗ ಅರ್ಜುನನಿಗೆ ಆ ಕಿರಾತ ಶಿವನೆಂದು ತಿಳಿಯಿತು. ಬಳಿಕ ತನ್ನ ತಪ್ಪಿಗಾಗಿ ಪರಿತಾಪಪಟ್ಟು ಶಿವನಿಗೆ ಸಾಷ್ಟಾಂಗ ವಂದಿಸಿ ಪ್ರಾರ್ಥಿಸಿದ. ಶಿವ ಅವನಿಗೆ ಆಗ ಪಾಶುಪತಾಸ್ತ್ರ-ವನ್ನು ಅನುಗ್ರಹಿಸಿದ ಎಂದರ್ಥ.

೨) ಅರ್ಜುನ ಶಿವಲಿಂಗದ ಮೇಲೆ ಹಾಕಿದ ಹೂವುಗಳು ಕಿರಾತರೂಪಿ ಶಿವನ ತಲೆಯ ಮೇಲೆ ಕುಳಿತಿದ್ದುದು ಪೂಜಾ ತತ್ವವನ್ನು ವಿವರಿಸುವ ಒಂದು ಅಪೂರ್ವ ಪ್ರಸಂಗ. ನಾವು ವಿಗ್ರಹಗಳ ಮೇಲೆ ಹಾಕುವ ಪುಷ್ಪಾದಿಗಳೆಲ್ಲಾ ಆಯಾ ದೇವತೆಗಳಿಗೆ ಸಲ್ಲುವ ಬಗೆಯನ್ನು ಇಲ್ಲಿ ತಿಳಿಸಲಾಗಿದೆ.

೩) ಅರ್ಜುನ ಹಾಗೆ ಹೋರಾಡಿ ಶಿವನ ಅನುಗ್ರಹಕ್ಕೆ ಪಾತ್ರನಾದ ವಿವರ ಅಧ್ಯಾತ್ಮಗರ್ಭಿತ. ಶಿವ ಮನೋಭಿಮಾನಿ ದೇವತೆ. ಅವನನ್ನು ಒಲಿಸುವುದು ಎಂದರೆ ಮನಸ್ಸನ್ನು ನಿಗ್ರಹಿಸುವುದು ಎಂದರ್ಥ. ಶಿವನನ್ನು ಅವನೊಂದಿಗೆ ಹೋರಾಡಿ ಅರ್ಜುನ ಜಯಿಸಿದ್ದು ಮನಸ್ಸನ್ನು ಸಂಘರ್ಷದಿಂದಲೇ ಗೆಲ್ಲುವ ತತ್ವಕ್ಕೆ ದ್ಯೋತಕ. ಅರ್ಜುನನಿಗೆ ಶಿವನನ್ನು ಒಲಿಸಲು ಸಾಧ್ಯವಾಗಿದ್ದು ಅವನನ್ನು ಶಿವ ಎಂದು ತಿಳಿದಾದ ಮೇಲೆಯೇ; ಅದರಂತೆ ಮನಸ್ಸನ್ನು ನಿಗ್ರಹಿಸಲು ಸಾಧ್ಯವಾಗುವುದು ಅದರ ಅಭಿಮಾನಿ ದೇವತೆ ಶಿವನೆಂದು ತಿಳಿದು ಆರಾಧಿಸಿದಾಗಲೇ ಎಂದರ್ಥ.

ಪಾಶುಪತಾದಿ ದಿವ್ಯಾಸ್ತ್ರಪ್ರಾಪ್ತಿ

ಅಸ್ತ್ರಂ ತದ್ವಿಷ್ಣುದೈವತ್ಯಂ ಸಾಧಿತಂ ಶಂಕರೇಣ ಯತ್ ।
ತಸ್ಮಾತ್ ಪಾಶುಪತಂ ನಾಮ ಸ್ವಾನ್ಯಸ್ತ್ರಾಣ್ಯಪರೇ ಸುರಾಃ ।
ದದುಸ್ತದೈವ ಪಾರ್ಥಾಯ ಸರ್ವೇ ಪ್ರತ್ಯಕ್ಷಗೋಚರಾಃ ॥ ೧೪೩ ॥

ಅ: ಆ ಪಾಶುಪತಾಸ್ತ್ರವು ವಿಷ್ಣುದೇವತಾಕವಾದದ್ದು. ಅದನ್ನು ಶಿವ ಸಿದ್ಧಿ ಮಾಡಿಕೊಂಡಿದ್ದ. ಆದ್ದರಿಂದಲೇ ಪಾಶುಪತ ಎಂದು ಹೆಸರು. ಆಗ ಇತರ ದೇವತೆಗಳು ಪ್ರತ್ಯಕ್ಷ ಕಾಣಿಸಿಕೊಂಡು ತಮ್ಮ ಅಸ್ತ್ರಗಳನ್ನು ಅರ್ಜುನನಿಗೆ ನೀಡಿದರು.

ವಿ: ೧) ಪಾಶುಪತಾಸ್ತ್ರ ಎಂಬುದು ಪಾಶುಪತಾಗಮ ಎಂಬಂತೆ ಪಶುಪತಿಯೇ ದೇವತೆಯಾದ ಅಸ್ತ್ರ ಎಂಬ ತಪ್ಪು ತಿಳುವಳಿಕೆ ಆನೇಕರದು. ಅದನ್ನು ಇಲ್ಲಿ ನಿವಾರಿಸಲಾಗಿದೆ. ಈ ಪದ ರುದ್ರಗೀತಾ ಎಂಬ ಪದವಿದ್ದಂತೆ. ರುದ್ರಗೀತಾ ಎಂಬುದು ರುದ್ರದೇವರನ್ನು ಕುರಿತಾದ ಸ್ತೋತ್ರವಲ್ಲ, ಅದು ರುದ್ರದೇವರು ವಿಷ್ಣುವನ್ನು ಕುರಿತು ಮಾಡಿದ ಸ್ತೋತ್ರ ಎಂಬುದು ಶ್ರೀಮದ್ಭಾಗವತ ಚತುರ್ಥ ಸ್ಕಂಧದಲ್ಲಿ ಸ್ಪಷ್ಟ. ಪಾಶುಪತಾಸ್ತ್ರ ಎಂಬ ಪದವೂ ಇಂತಹುದೇ ಎಂದು ತಿಳಿಯಬೇಕು.

೨) ಪಶುಪತಿಯಾದ ಶಿವ ವಿಷ್ಣುವನ್ನು ಆರಾಧಿಸಿ ಸಿದ್ಧಿಪಡಿಸಿಕೊಂಡ ಅಸ್ತ್ರ ಎಂದು ಅದರ ಅರ್ಥ. ಮಹಾಭಾರತದಲ್ಲಿ ಶಿವ ಉಪದೇಶಿಸಿದ್ದು ಬ್ರಹ್ಮಶಿರ ಎಂಬ ಪಾಶುಪತಾಸ್ತ್ರ ಎಂದು ಸ್ಪಷ್ಟ ಉಲ್ಲೇಖವಿದೆ (**'ಯತ್ ತದ್ಭೀಮಶಿರೋ ನಾಮ ರೌದ್ರಂ ಭೀಮಪರಾಕ್ರಮಮ್'** – ಭಾರತ ೩/೪೦/೯). ಅದರಂತೆ ಅಸ್ತ್ರದೇವತೆ ಆಗ ಮೂರ್ತಿಮತ್ತಾಗಿ ಅರ್ಜುನನ ಎದುರು ಕಾಣಿಸಿಕೊಂಡ ಎಂಬ ಮಾತು ಬಂದಿದೆ (**'ಮೂರ್ತಿಮದ್ವೈ ಸ್ಥಿತಂ ಪಾರ್ಶ್ವೇ ದದೃಶುರ್ದೇವದಾನವಾಃ'** – ಭಾರತ ೩/೪೦/೨೪). ಇದು ಆ ಅಸ್ತ್ರವು ವಿಷ್ಣುದೇವತಾಕ ಎಂಬುದಕ್ಕೆ ಸ್ಪಷ್ಟ ಪುರಾವೆ.

೩) ವ್ಯಾಸರು ಉಪದೇಶಿಸಿದ ಮಂತ್ರ ಸಮಸ್ತದೇವತೆಗಳ ದರ್ಶನವನ್ನು ಒದಗಿಸು–ವಂತಹುದು ಎಂಬ ಮಾತು ಹಿಂದೆ ಬಂದಿದೆ (ಶ್ಲೋ. ೧೨೪). ಅದರಂತೆ ಇತರ ದೇವತೆಗಳು ಅಲ್ಲಿ ದರ್ಶನ ನೀಡಿ ತಮ್ಮ ಅಸ್ತ್ರಗಳನ್ನು ನೀಡಿದರು ಎಂಬುದು ಸಂಗತವಾದ ವಿಚಾರ; ಖಾಂಡವವನ ದಹನ ಕಾಲದಲ್ಲಿ ಮುಂದೊಮ್ಮೆ ಅಸ್ತ್ರ ನೀಡುವುದಾಗಿ ದೇವತೆಗಳು ಅರ್ಜುನನಿಗೆ ಆಶ್ವಾಸನೆ ನೀಡಿದ್ದ ವಿವರ ಬಂದಿದೆ (೨೦/೨೩೬). ಅದನ್ನು ಅವರು ಈಗ ನಡೆಸಿದರು ಎಂದರ್ಥ.

ಇಂದ್ರದರ್ಶನ

ಇಂದ್ರೋಽರ್ಜುನಂ ಸಮಾಗಮ್ಯ ಪ್ರಾಹ ಪ್ರೀತೋಽಸ್ಮಿ ತೇಽನಘ ।
ರುದ್ರದೇಹಸ್ಥಿತಂ ಬ್ರಹ್ಮ ವಿಷ್ಣ್ವಾಖ್ಯಂ ತೋಷಿತಂ ತ್ವಯಾ ।
ತೇನ ಲೋಕಂ ಮಮಾಗಚ್ಛ ಪ್ರೇಷಯಾಮಿ ರಥಂ ತವ ॥ ೧೪೪ ॥

---

೧೪೨. ಮೃಣ್ಮಯಂ ಸ್ಥಂಡಿಲಂ ಕೃತ್ವಾ ಮಾಲ್ಯೇನಾಪೂಜಯದ್ ಭವಮ್ ।
ತಚ್ಚ ಮಾಲ್ಯಂ ತದಾ ಪಾರ್ಥಃ ಕಿರಾತಶಿರಸಿ ಸ್ಥಿತಮ್ ।
ಅಪಶ್ಯತ್ ಪಾಂಡವಶ್ರೇಷ್ಠೋ ಹರ್ಷೇಣ ಪ್ರಕೃತಿಂ ಗತಃ ॥ – ಭಾರತ (ವನ. ೩೯/೬೫)

ಅ: ಇಂದ್ರನು ಅರ್ಜುನನ ಬಳಿಗೆ ಬಂದು ನುಡಿದ 'ದೋಷರಹಿತನೇ, ನಾನು ನಿನಗೆ ಪ್ರೀತನಾಗಿರುವೆ'. ರುದ್ರದೇಹದಲ್ಲಿನ ಶ್ರೀಹರಿಯೆಂಬ ಪರಬ್ರಹ್ಮನನ್ನು ನೀನು ಮೆಚ್ಚಿಸಿರುವಿ, ಅದರಿಂದ ನೀನು ನನ್ನ ಲೋಕಕ್ಕೆ ಬಾ, ನಿನಗಾಗಿ ರಥವನ್ನು ಕಳುಹಿಸಿಕೊಡುವೆ'.

ವಿ: ಯಮ ವರುಣ ಕುಬೇರರು ತಮ್ಮ ಅಸ್ತ್ರಗಳಾದ ಯಮದಂಡ, ವರುಣಪಾಶ ಹಾಗೂ ಕೌಬೇರಾಸ್ತ್ರಗಳನ್ನು ಆಗಲೇ ನೀಡಿದರು. ಇಂದ್ರ ನೀನು ಸ್ವರ್ಗಕ್ಕೆ ಬಾ, ಅಲ್ಲಿ ನಿನಗೆ ನನ್ನ ದಿವ್ಯಾಸ್ತ್ರ–ಗಳನ್ನು ನೀಡುವೆ ಎಂದು ತಿಳಿಸಿದ ಎಂಬುದು ವಿಶೇಷ (**'ತತ್ರ ತೇಽಹಂ ಪ್ರದಾಸ್ಯಾಮಿ ದಿವ್ಯಾನ್ಯ–ಸ್ತ್ರಾಣಿ ಕೌರವ'** – ಭಾರತ ೩/೪೧/೪೫). ಅರ್ಜುನನು ಶಿವನ ದೇಹದಲ್ಲಿನ ವಿಷ್ಣುವನ್ನು ಸಂತೋಷಪಡಿಸಿರುವನು ಎಂಬ ಇಲ್ಲಿಯ ಮಾತು ಶ್ರೀವ್ಯಾಸರು ನೀಡಿದ್ದು ಕೇವಲ ವಿಷ್ಣುದೇವತಾಕ–ವಾದ ಮಂತ್ರವಲ್ಲದೇ ಶಿವಾಂತರ್ಯಾಮಿತ್ವೇನ ವಿಷ್ಣುವನ್ನು ಸ್ತುತಿಸುವ ಮಂತ್ರ ಎಂಬುದನ್ನು ಇನ್ನೂ ಸ್ಫುಟಪಡಿಸುವುದು.

ಸ್ವರ್ಗಲೋಕಕ್ಕೆ ಅರ್ಜುನ

ಇತ್ಯುಕ್ತ್ವಾಽಪ್ರಯಯಾವಿಂದ್ರಸ್ತದ್ರಥೇನ ಚ ಮಾತಲಿಃ ।
ಆಯಾತ್ ಪಾರ್ಥಸ್ತಮಾರುಹ್ಯ ಯಯೌ ತಾತನಿವೇಶನಮ್ ॥ ೧೪೫ ॥

ಅ: ಹೀಗೆ ಹೇಳಿ ಇಂದ್ರನು ತೆರಳಿದ. ಅವನ ರಥದೊಂದಿಗೆ ಮಾತಲಿ ಅಲ್ಲಿಗೆ ಆಗಮಿಸಿದ. ಅರ್ಜುನನು ಅದನ್ನು ಏರಿ ತಂದೆಯಾದ ಇಂದ್ರನ ಲೋಕಕ್ಕೆ ತೆರಳಿದ.

ವಿ: ಇಂದ್ರ ಹಾಗೆ ಕಳಿಸಿದ ರಥ ವೈಜಯಂತ ಎಂಬ ಹೆಸರಿನದು. ಅದಕ್ಕೆ ಹತ್ತುಸಾವಿರ ಕುದುರೆಗಳನ್ನು ಹೂಡಲಾಗಿತ್ತು ಎಂಬ ವಿವರ *ಮಹಾಭಾರತದಲ್ಲಿದೆ.

ಅರ್ಜುನನ ಸ್ವರ್ಗಲೋಕವಾಸ

ಪೂಜಿತೋ ದೈವತೈಃ ಸರ್ವೈರಿಂದ್ರೇಣೈವ ನಿವೇಶಿತಃ ।
ತೇನ ಸಾರ್ಧಮುಪಾಸೀದತ್ ತಸ್ಮಿನ್ನೈಂದ್ರೇ ವರಾಸನೇ ॥ ೧೪೬ ॥

ಅ: ಅರ್ಜುನ ಎಲ್ಲ ದೇವತೆಗಳಿಂದ ಸಮ್ಮಾನಿತನಾದ. ಅರ್ಜುನನನ್ನು ಇಂದ್ರ ತನ್ನ ಆಸನ–ದಲ್ಲಿ ಕೂಡಿಸಿಕೊಂಡ. ಅರ್ಜುನನು ಆ ಶ್ರೇಷ್ಠವಾದ ಆಸನದಲ್ಲಿ ಅವನೊಂದಿಗೆ ಕುಳಿತುಕೊಂಡ.

---

* ದಶವಾಜಿಸಹಸ್ರಾಣಿ ಹರೀಣಾಂ ವಾತರಂಹಸಾಮ್ ।...
ತತ್ರಾಪಶ್ಯನ್ಮಹಾನೀಲಂ ವೈಜಯಂತಂ ಮಹಾಪ್ರಭಮ್ । ... – ಭಾರತ (ವನ. ೪೨/೭,೮)

೧೪೬. ಇಂದ್ರೇಣೈವ ನಿವೇಶಿತ ಇತ್ಯತ್ರ ಇಂದ್ರೇಣೈವ ಐಂದ್ರವರಾಸನೇ ನಿವೇಶಿತಃ= ಉಪವೇಶಿತಃ ॥ – (ವಾ.)

ಎ: ಸ್ವರ್ಗಕ್ಕೆ ಸಶರೀರನಾಗಿ ತೆರಳಿದ ಅರ್ಜುನ ಇಂದ್ರನಿಂದ ಅವನ ಆಸನದಲ್ಲಿಯೇ ಕುಳ್ಳಿರಿಸಿಕೊಳ್ಳಲ್ಪಟ್ಟು ಸತ್ಕೃತನಾದದ್ದು ಒಂದು ವಿಶೇಷ. ಅದಕ್ಕೆ ಅವನು ಸ್ವತಃ ಇಂದ್ರಾವತಾರ–ನಾಗಿದ್ದುದು ಕಾರಣ ಎಂದು ತಿಳಿಯಬೇಕು.

ಪ್ರೀತ್ಯಾ ಸಮಾಶ್ಲಿಷ್ಯ ಕುರುಪ್ರವೀರಂ
ಶಕ್ರೋ ದ್ವಿತೀಯಾಂ ತನುಮಾತ್ಮನಃ ಸಃ ।
ಈಕ್ಷನ್ ಮುಖಂ ತಸ್ಯ ಮುಮೋದ ಸೋಽಪಿ
ಹ್ಯುವಾಸ ತಸ್ಮಿನ್ ವತ್ಸರಾನ್ ಪಂಚ ಲೋಕೇ ॥ ೧೪೭ ॥

ಅ: ಮಹಾಕುರುವೀರನೂ, ತನ್ನ ಮತ್ತೊಂದು ರೂಪನೂ ಆದ ಅರ್ಜುನನನ್ನು ಇಂದ್ರ ಪ್ರೀತಿಯಿಂದ ಆಲಿಂಗಿಸಿಕೊಂಡು ಅವನ ಮುಖವನ್ನು ನೋಡುತ್ತಾ ಆನಂದಿಸಿದ. ಅರ್ಜುನ ಸ್ವರ್ಗಲೋಕದಲ್ಲಿ ಐದು ವರ್ಷಗಳ ಕಾಲ ನೆಲೆಸಿದ.

ಎ: ಅಯೋಗ್ಯರಿಗೆ ನೀಡಿದ ವಚನವನ್ನು ಯಥಾವತ್ತಾಗಿ ನಡೆಸಬೇಕಿಲ್ಲ ಎಂಬ ಕಾರಣ–ದಿಂದಲೂ, ಭೀಮ ತಿಳಿಸಿದಂತೆ ಆಗಲೇ ಹದಿಮೂರು ತಿಂಗಳು ಕಳೆದದ್ದರಿಂದ ಹದಿಮೂರು ವರ್ಷ ಮುಕ್ತಾಯಗೊಂಡಂತೆ ಆಗಿದ್ದರಿಂದಲೂ ಅರ್ಜುನ ವನವಾಸ ಮಾಡದೇ ಸ್ವರ್ಗವಾಸ ಮಾಡಿದ್ದು ವಚನ ಭಂಗವಾಗಲಿಲ್ಲ ಎಂದು ತಿಳಿಯಬೇಕು.

ಅರ್ಜುನನಿಗೆ ಉರ್ವಶಿಯ ಶಾಪ

ಅಸ್ತ್ರಾಣಿ ತಸ್ಮಾ ಅದಿಶಚ್ಚ ವಾಸವೋ
ಮಹಾಂತಿ ದಿವ್ಯಾನಿ ತದೋರ್ವಶೀ ತಮ್ ।
ಸಂಪ್ರಾಪ್ಯ ಭಾವೇನ ತು ಮಾನುಷೇಣ
ಮಾತಾ ಕುಲಸ್ಯೇತಿ ನಿರಾಕೃತಾಽಭೂತ್ ॥ ೧೪೮ ॥

---

೧೪೭. ಪುರಂದರನಿಯೋಗಾಚ್ಚ ಪಂಚಾಬ್ದಾನಮಸ್ತ್ ಸುಖೀ ॥ – ಭಾರತ (ವನ. ೩/೪೪/೫)

೧೪೭. ಅಪಿಹಿಶಬ್ದಯೋರ್ಲಾಭವದಾವೃತ್ಯ ಯೋಜ್ಯಮ್ । – (ಜ.)

೧೪೮. ಅತ್ರೇಯಂ ಭಾರತಕಥಾ – ಮಹೇಂದ್ರಪರಮಾಸನಾರೂಢೇನಾರ್ಜುನೇನ ನೃತ್ಯಂತ್ಯಾಮುರ್ವಶ್ಯಾಂ ವಿಶೇಷತೋಽವಲೋಕಿತಾಯಾಂ ತಸ್ಯಾಂ ವಿಷಕ್ತಮನಸಂ ಅರ್ಜುನಂ ವಿಜ್ಞಾನತೇಂದ್ರೇಣಾಜ್ಞಪ್ತೇನ ಚಿತ್ರಸೇನೇನ ಪ್ರೇಷಿತೋರ್ವಶೀ ಅರ್ಜುನಮಾಗಮಾದಿತಿ । ಮಾನುಷೇಣ ಭಾವೇನ ಮಾತೇತಿ । ಉರ್ವಶ್ಯಾಃ ಪುರೂರವಸೋಭ್ರ್ಯಾಯಾತ್ವಾತ್ ಸ್ವಸ್ಯಾಪಿ ಪುರೂರವಸೋರ್ವಂಶೇ ಜಾತತ್ವಾನ್ನನುಷ್ಯಜನ್ಮಾಪೇಕ್ಷಯಾ ಕುಲಸ್ಯ ಮಾತೇತಿ ನಿವಾರಿತೇತ್ಯರ್ಥಃ । – (ತಾ.)

ಅ: ಇಂದ್ರನು ಅರ್ಜುನನಿಗೆ ಅಸ್ತ್ರಗಳನ್ನು ನೀಡಿದನು. ಅವೆಲ್ಲವೂ ಮಹತ್ತರವಾದ ದಿವ್ಯಾಸ್ತ್ರಗಳು. ಆಗ ಉರ್ವಶಿ ಅವನನ್ನು ಸಮೀಪಿಸಿದಳು. ಅವನು ತನ್ನನ್ನು ಮನುಷ್ಯನೆಂದು ಬಗೆದು, ಅವಳನ್ನು ಕುಲದ ತಾಯಿ ಎಂಬ ಕಾರಣದಿಂದ ನಿರಾಕರಿಸಿದ.

ವಿ: ೧) ಉರ್ವಶಿ ಪುರೂರವನಿಂದ ಆಯುವನ್ನು ಪಡೆದವಳು. ಆಯುವಿನ ಮಗ ನಹುಷ, ನಹುಷನ ಮಗ ಯಯಾತಿ, ಯಯಾತಿಯ ಕಿರಿಯ ಮಗ ಪುರು(೧೧/೧,೨). ಆ ಪುರುವಂಶದಲ್ಲಿ ಜನಿಸಿದವರು ಪಾಂಡವರು. ಹಾಗೆ ಅವಳು ಕುರುಕುಲದ ತಾಯಿ ಎಂಬ ಕಾರಣದಿಂದ ಅರ್ಜುನ ಅವಳ ಸಂಗವನ್ನು ನಿರಾಕರಿಸಿದ ಎಂದರ್ಥ.

೨) ಅದರೊಂದಿಗೆ ಇಂದ್ರಪರಿಗ್ರಹವಾದ ಅವಳು ಇಂದ್ರಪುತ್ರನಾದ ಅರ್ಜುನನಿಗೆ ಒಂದರ್ಥದಲ್ಲಿ ತಾಯಿ ಎನ್ನಿಸಿದ್ದು ಮತ್ತೊಂದು ಕಾರಣ. ಅರ್ಜುನ ಹೀಗೆ ನುಡಿಯಲು ಅವನು ಆಗ ತನ್ನನ್ನು ಮನುಷ್ಯನೆಂಬ ಭಾವನೆಯಿಂದ ನೋಡಿದ್ದು ಕಾರಣವಾಯಿತು.

೩) ಹೀಗೆ ಅರ್ಜುನ ಉರ್ವಶಿಯಂತಹ ಶ್ರೇಷ್ಠ ಅಪ್ಸರೆಯ ಸಂಗವನ್ನು ನಿರಾಕರಿಸುವ ಮೂಲಕ ತನ್ನ ಧರ್ಮನಿಷ್ಠೆ ಹಾಗೂ ಜಿತೇಂದ್ರಿಯತ್ವವನ್ನು ಸ್ಪಷ್ಟಪಡಿಸಿದ. ಇಂತಹ ಅವನ ಬ್ರಹ್ಮಚರ್ಯ ಮುಂದೆ ಸಾಕ್ಷಾತ್ ಭಗವಂತನಾದ ಕೃಷ್ಣನಿಂದ ಭಗವದ್ಗೀತೆಯನ್ನು ಶ್ರವಣ ಮಾಡಲು, ಮುಂದೆ ಬ್ರಹ್ಮಶಿರೋಸ್ತ್ರವನ್ನು ಉಪಸಂಹರಿಸಲು (೧೬/೧೬೮) ಸಾಧಕವಾದವು ಎಂದು ತಿಳಿಯಬಹುದು. ಆದ್ದರಿಂದಲೇ ಅವನು ಉಲೂಪಿಯಲ್ಲಿ ಗರ್ಭಾಧಾನ ಮಾಡಿದ್ದು ಕೇವಲ ಅವಳ ಪ್ರಾರ್ಥನೆಯಂತೆಯೇ ಹೊರತು ಕಾಮುಕನಾಗಿಯಲ್ಲ ಎಂಬ ಅಂಶವೂ ದೃಢಪಡುವುದು.

ಷಂಢೋ ಭವೇತ್ಯೇವ ತಯಾऽಭಿಶಪ್ತೇ
ಪಾರ್ಥೇ ಶಕ್ರೋ೭ನುಗ್ರಹಂ ತಸ್ಯ ಚಾದಾತ್ ।
ಸಂವತ್ಸರಂ ಷಂಢರೂಪೀ ಚರಸ್ವ
ನ ಷಂಢತಾ ತೇ ಭವತೀತಿ ಧೃಷ್ಣುಃ ॥ ೧೪೯ ॥

ಅ: ಉರ್ವಶಿಯು ಅರ್ಜುನನಿಗೆ ಷಂಡನಾಗು ಎಂದು ಶಪಿಸಿದಳು, ಇಂದ್ರ ಅದನ್ನು 'ನೀನು ಒಂದು ವರ್ಷಕಾಲ ನಪುಂಸಕವೇಷದಲ್ಲಿ ಸಂಚರಿಸು; ನಿನಗೆ ಸರ್ವಥಾ ಷಂಡತ್ವ ಒದಗದು' ಎಂದು ಅವನಿಗೆ ಅನುಗ್ರಹವನ್ನಾಗಿಸಿದ.

ವಿ: ಪಾಂಡವರ ಅಜ್ಞಾತವಾಸ ಕಾಲದಲ್ಲಿ ಅರ್ಜುನ ಷಂಡ ವೇಷದಲ್ಲಿ ಬೃಹನ್ನಲೆಯಾಗಿ ಒಂದು ವರ್ಷ ಕಳೆಯುವ ಮೂಲಕ ಆ ಶಾಪ ಅನುಗ್ರಹವೇ ಆಯಿತು ಎಂದರ್ಥ. ಧರ್ಮನಿಷ್ಠೆಯಿಂದ ನಡೆದಾಗ ಶಾಪವೂ ವರವಾಗುವುದು ಎನ್ನಲು ಇದೊಂದು ಉತ್ತಮ ನಿದರ್ಶನ. ಉರ್ವಶಿ ಒಬ್ಬ

ಅಪ್ಸರೆ, ಅರ್ಜುನ ಇಂದ್ರಾವತಾರ, ಅವಳಿಗಿಂತ ತುಂಬಾ ಉತ್ತಮನಾದವನು. ಅವಳ ಶಾಪ ಅವನಿಗೆ ಸರ್ವಥಾ ತಟ್ಟದು. ಆದರೂ ಅದನ್ನು ಅಂಗೀಕರಿಸುವ ಮೂಲಕ ಅರ್ಜುನ ಲೋಕಧರ್ಮವನ್ನು ತಿಳಿಸಿದ ಎಂದು ತಿಳಿಯಬೇಕು. ಉತ್ತಮರಿಗೆ ಅಧಮರು ನೀಡುವ ಶಾಪಗಳು ಯಾವ ರೀತಿಯಲ್ಲೂ ಪರಿಣಾಮಕಾರಿಯಾಗಲಾರವು ಎಂಬುದೇ *ಶಾಸ್ತ್ರವಚನ.

ಚಿತ್ರಸೇನನಿಂದ ಗಾಂಧರ್ವವಿದ್ಯೆ - ಇಂದ್ರನಿಂದ ದಿವ್ಯಾಸ್ತ್ರಪ್ರಾಪ್ತಿ

ತತೋಽವಸತ್ ಪಾಂಡವೇಯೋ ಗಾಂಧರ್ವಂ ವೇದಮಭ್ಯಸನ್ ।
ಗಂಧರ್ವಾಚ್ಚಿತ್ರಸೇನಾತ್ ತು ತಥಾಽಸ್ತ್ರಾಣಿ ಸುರೇಶ್ವರಾತ್ ॥ ೧೫೦ ॥

ಅ: ಬಳಿಕ ಅರ್ಜುನ ಗಂಧರ್ವನಾದ ಚಿತ್ರಸೇನನಿಂದ ಗಾಂಧರ್ವ ವೇದವನ್ನು ಅಭ್ಯಾಸ ಮಾಡಿದ. ಇಂದ್ರನಿಂದ ಅಸ್ತ್ರಗಳನ್ನು ಅಭ್ಯಾಸ ಮಾಡಿದ.

ವಿ: ೧) ಅರ್ಜುನ ಸ್ವರ್ಗ ಲೋಕದಲ್ಲಿದ್ದರೂ ಅಲ್ಲಿಯ ಭೋಗ ಭಾಗ್ಯಗಳಿಗೆ ಹಾತೊರೆಯದೇ ಗಾಂಧರ್ವ ಶಾಸ್ತ್ರ ಹಾಗೂ ಮಹಾಸ್ತ್ರಗಳನ್ನು ಅಭ್ಯಸಿಸುವ ಮೂಲಕ ಅಪೂರ್ವ ಸಾಧನೆಯನ್ನೇ ಮಾಡಿದನು ಎಂಬುದು ಇಲ್ಲಿಯ ವಿಶೇಷ.

೨) ಭೋಗ ಭಾಗ್ಯಗಳಲ್ಲಿ ಎಂತಹ ಸಮಯದಲ್ಲೂ ಮೈಮರೆಯದಿರುವುದು ಮಹಾತ್ಮರ ಲಕ್ಷಣ. ಹೀಗೆ ಸ್ವರ್ಗದಲ್ಲಿಯೂ ವಿದ್ಯಾಭ್ಯಾಸ ಮಾಡಿದ ಅವನು ಕುರುಕ್ಷೇತ್ರದ ರಣರಂಗದಲ್ಲಿ ಗೀತೆಯಂತಹ ಲೋಕೋತ್ತರ ಶಾಸ್ತ್ರವನ್ನು ಕೇಳುವ ಭಾಗ್ಯಶಾಲಿಯಾದ.

ಶ್ರೀಕೃಷ್ಣನ ಕೈಲಾಸಯಾತ್ರಾ ಪ್ರಸಂಗ

ಸುಭದ್ರ್ಯಾಽಭಿಮನ್ಯುನಾ ಸಹ ಸ್ವಕಾಂ ಪುರಂ ಗತಃ ।
ಜನಾರ್ದನೋಽತ್ರ ಸಂವಸನ್ ಕದಾಚಿದಿತ್ಥಮೈಕ್ಷತ ॥ ೧೫೧ ॥

ಅ: ಸುಭದ್ರೆಯೊಂದಿಗೂ, ಅಭಿಮನ್ಯುವಿನೊಂದಿಗೂ ದ್ವಾರಕೆಗೆ ತೆರಳಿದ ಕೃಷ್ಣ ಅಲ್ಲಿ ವಾಸಿಸುತ್ತಾ ಒಮ್ಮೆ ಹೀಗೆ ಆಲೋಚಿಸಿದ.

---

* ತಥಾಪ್ಯಶಕ್ತೈರ್ವಿಹಿತಾಃ ಶಾಪಾದ್ಯಾಃ ಶಕ್ತಿಮತ್ಸುವೈ ।
ಅತ್ಯಲ್ಪಾಶ್ಚಾಲ್ಪಕಾಲಾಶ್ಚ ನ ಸಮ್ಯಕ್ಪ್ರಭವಂತಿ ಚ ।
ಯತ್ನೇನಾಪೋಹಿತುಂ ಶಕ್ಯಾ ಉತ್ತಮೈಸ್ತು ನ ಸಂಶಯಃ । – ಭಾ.ತಾ. (೬/೧೭/೩೭)

೧೫೦. ಗಾಂಧರ್ವಂ ವೇದಂ ಗಾನವಿದ್ಯಾಮ್। – (ಜ.)

ಕೃಷ್ಣ ಶಿವನಿಗೆ ನೀಡಿದ್ದ ವರ

ಮಯಾ ವರೋ ಹಿ ಶಂಭವೇ ಪ್ರದತ್ತ ಆಸ ಪೂರ್ವತಃ ।
ವರಂ ಗ್ರಹೀಷ್ಯ ಏವ ತೇ ಸಕಾಶತೋ ವಿಮೋಹಯನ್ ॥ ೧೫೨ ॥

ಅ: 'ನಾನು ಹಿಂದೆ ಶಿವನಿಗೆ ವರ ನೀಡಿದ್ದೆ, ಅಸುರ ಮೋಹನಕ್ಕಾಗಿ ನಿನ್ನಿಂದ ವರವನ್ನು ಪಡೆದುಕೊಳ್ಳುವೆ'.

ವಿ: ಶಿವನ ಪ್ರಾರ್ಥನೆಯಂತೆ ವಿಷ್ಣು ಅವನಿಗೆ ವರ ನೀಡಿದ್ದ ಪ್ರಸಂಗದ ವಿವರ ಇಲ್ಲಿದೆ.

ತ್ವಾಮಾರಾಧ್ಯ ತಥಾ ಶಂಭೋ ಗ್ರಹೀಷ್ಯಾಮಿ ವರಂ ಸದಾ ।
ದ್ವಾಪರಾದೌ ಯುಗೇ ಭೂತ್ವಾ ಕಲಯಾ ಮಾನುಷಾದಿಷು ॥ ೧೫೩ ॥

ಅ: 'ಶಿವನೇ ನಾನು ದ್ವಾಪರಾದಿ ಯುಗಗಳಲ್ಲಿ ಒಂದಂಶದಿಂದ ಮನುಷ್ಯಾದಿ ರೂಪದಲ್ಲಿ ಅವತರಿಸಿ, ನಿನ್ನನ್ನು ಆರಾಧಿಸಿ ವರ ಪಡೆಯುವೆ'.

ವಿ: ದ್ವಾಪರಾದಿ ಯುಗಗಳಲ್ಲಿ ಎಂದರೆ ದ್ವಾಪರ ಮತ್ತು ಅದಕ್ಕಿಂತ ಹಿಂದಿನ ಕೃತ ಮತ್ತು ತ್ರೇತಾಯುಗಗಳಲ್ಲಿ ಎಂದರ್ಥ. ಕಲಿಯುಗದಲ್ಲಿ ಅವತಾರ ಮಾಡದ ಅವನಿಗೆ ತ್ರಿಯುಗ ಎಂದು ಹೆಸರಿರುವುದರಿಂದ ಈ ಅರ್ಥವನ್ನೇ ಮಾಡಬೇಕು.

ಸ್ವಾಗಮೈಃ ಕಲ್ಪಿತೈಸ್ತ್ವಂ ಚ ಜನಾನ್ ಮದ್ವಿಮುಖಾನ್ ಕುರು ।
ಮಾಂ ಚ ಗೋಪಯ ಯೇನ ಸ್ಯಾತ್ ಸೃಷ್ಟಿರೇಷೋತ್ತರಾಧರಾ ॥ ೧೫೪ ॥

ಅ: 'ನೀನು ಕಲ್ಪಿತವಾದ ನಿನ್ನ ಆಗಮಗಳಿಂದ ಅಸುರ ಜನರನ್ನು ನನಗೆ ವಿಮುಖರನ್ನಾಗಿ ಮಾಡು, ನನ್ನನ್ನು ಮರೆಮಾಡು. ಅದರಿಂದ ಅಸುರ ಜನರು ಊರ್ಧ್ವಲೋಕಕ್ಕೆ ಹೋಗದೇ, ಅಧೋಲೋಕಕ್ಕೆ ಹೋಗುವಂತಾಗಲಿ'.

---

೧೫೩. ದ್ವಾಪರಾದಾವಿತ್ಯಸ್ಯ ದ್ವಾಪರೇ ತದಾದೌ ತ್ರೇತಾದೌ ಚೇತ್ಯರ್ಥಃ । ಏತೇನ ಕಲಿಯುಗೇ ಭಗವದವತಾರಾಭಾವಾತ್ ದ್ವಾಪರಾದಾವಿತ್ಯಭಿಧಾನಮನುಪಪನ್ನಮಿತಿ ಚೋದ್ಯಂ ನಿರಾಕೃತಮ್ । ದ್ವಾಪರಾದಾವಿತ್ಯತ್ರ ಬಹುವ್ರೀಹಿರ್ನ ಕಿಂತು ದ್ವಂದ್ವ ಇತ್ಯಭ್ಯುಪಗಮಾತ್ । ದ್ವಾಪರಾಂತ್ಯಭಾಗೇ ಕೃಷ್ಣಾವತಾರಸ್ಯ ಜಾತತ್ವಾತ್ ಕೃಷ್ಣಾವತಾರಸ್ಯಾಪಿ ಸಂಗ್ರಹೋ ಜಾತ ಇತಿ ದ್ರಷ್ಟವ್ಯಮ್ ॥ – (ಸ.)

೧೫೪. ಏಷಾ ಸೃಷ್ಟಿಃ ಅಸುರಸೃಷ್ಟಿಃ – (ಜ.)

ಎ: ಈ ಎರಡು ಶ್ಲೋಕಗಳು ಪದ್ಮಪುರಾಣದಲ್ಲಿ ಶಿವನು ಪಾರ್ವತಿಗೆ ಹೇಳಿದ ಶ್ಲೋಕಗಳು ಎಂಬುದಾಗಿ ಮೊದಲನೆಯ ಅಧ್ಯಾಯದಲ್ಲಿ (೧/೫೭,೫೮) ತಿಳಿಸಿರುವರು. ಇವು ಪದ್ಮಪುರಾಣದಲ್ಲಿ ವಾಸುದೇವಸಹಸ್ರನಾಮ ಸ್ತೋತ್ರದಲ್ಲಿ ಕಂಡು ಬರುವವು. ಇಲ್ಲಿ ಶಿವನಿಂದ ಕಲ್ಪಿತವಾದ ಆಗಮಗಳು ಎಂದರೆ ಪಾಶುಪತಾಗಮಗಳು ಎಂದರ್ಥ.

ಇತಿ ವಾಕ್ಯಮೃತಂ ಕರ್ತುಮಭಿಪ್ರಾಯಂ ವಿಜಜ್ಞುಷೀ ।
ಪ್ರೀತ್ಯರ್ಥಂ ವಾಸುದೇವಸ್ಯ ರುಗ್ಮಿಣೀ ವಾಕ್ಯಮಬ್ರವೀತ್ ॥ ೧೫೫ ॥

ಅ: ಈ ವಚನವನ್ನು ಸತ್ಯ ಮಾಡಲೆಂದು ಕೃಷ್ಣ ಮನಸ್ಸಿನಲ್ಲಿ ನಿಶ್ಚಯಿಸಿದ್ದನ್ನು ವಿಶೇಷವಾಗಿ ಬಲ್ಲ ರುಗ್ಮಿಣೀದೇವಿ ಅವನ ಪ್ರೀತಿಗಾಗಿ ಮಾತನಾಡಿದಳು.

ಎ: ಮಹಾಲಕ್ಷ್ಮಿಯಾದ ರುಗ್ಮಿಣಿ ಸರ್ವಜ್ಞಳಾದ್ದರಿಂದ ಅವನ ಅಭಿಪ್ರಾಯವನ್ನು ತಿಳಿದು ಅದಕ್ಕೆ ಅನುಗುಣವಾಗಿ ಕೇಳಿದಳು ಎಂದರ್ಥ.

ರುಗ್ಮಿಣಿಯ ಕೋರಿಕೆ

ಜಾತೇऽಪಿ ಪುತ್ರೇ ಪುತ್ರಾರ್ಥಂ ಸಾ ಹಿ ವೇದ ಮನೋಗತಮ್ ।
ಪುತ್ರೋ ಮೇ ಬಲವಾನ್ ದೇವಃ ಸ್ಯಾತ್ ಸರ್ವಾಸ್ತ್ರವಿದುತ್ತಮಃ ॥ ೧೫೬ ॥

ಅ: ತನಗಾಗಲೇ ಪುತ್ರ ಜನಿಸಿದ್ದರೂ ಪುತ್ರೋತ್ಪಾದನೆಗಾಗಿ ಕೃಷ್ಣನ ಸಂಕಲ್ಪವನ್ನು ರುಗ್ಮಿಣಿ ತಿಳಿದಿದ್ದಳು. ಅದರಿಂದಾಗಿ 'ದೇವ, ನನಗೆ ಬಲಿಷ್ಠನೂ, ಸರ್ವಾಸ್ತ್ರಗಳನ್ನು ಬಲ್ಲವನೂ ಆದ ಉತ್ತಮನಾದ ಪುತ್ರ ಜನಿಸಬೇಕು'.

ಎ: ಕೃಷ್ಣನಿಗೆ ಈಗಾಗಲೇ ರುಗ್ಮಿಣಿಯಲ್ಲಿ ಪ್ರದ್ಯುಮ್ನ ಮೊದಲಾದ ಅಸಂಖ್ಯಪುತ್ರರು ಜನಿಸಿದ ವಿವರ ಈಗಾಗಲೇ ನಿರೂಪಿತವಾಗಿದೆ (೧೭/೧೮೧, ೨೦/೧೪೦).

ಬದರಿಕಾಶ್ರಮಕ್ಕೆ ಕೃಷ್ಣ

ಇತ್ಯುಕ್ತೋ ಭಗವಾನ್ ದೇವ್ಯಾ ಸಮ್ಮೋಹಾಯ ಸುರದ್ವಿಷಾಮ್ ।
ಯಯೌ ಸುಪರ್ಣಮಾರುಹ್ಯ ಸ್ವೀಯಂ ಬದರಿಕಾಶ್ರಮಮ್ ॥ ೧೫೭ ॥

---

೧೫೫. ನ ಷಂಢತಾ ತೇ ಭವಿತೇತ್ಯತ್ರ ಧೃಷ್ಣುಃ= ಶತ್ರುಧರ್ಷಣಶೀಲ ಇತಿ ಶಕ್ರಸ್ಯ ವಿಶೇಷಣಮ್ ॥ – (ವಾ.)

ಅ: ರುಗ್ಮಿಣಿಯು, ಅಸುರ ಮೋಹನಕ್ಕೆಂದು ಹೀಗೆ ನುಡಿಯಲು ಶ್ರೀಕೃಷ್ಣನು ಅವಳೊಂದಿಗೆ ಗರುಡಾರೂಢನಾಗಿ ತನ್ನ ಬದರಿಕಾಶ್ರಮಕ್ಕೆ ಹೊರಟನು.

ಎ: ೧) ಹರಿವಂಶದಲ್ಲಿ ನಿರೂಪಿತವಾಗಿರುವ ಕೃಷ್ಣನ ಕೈಲಾಸ ಯಾತ್ರೆಯ ಘಟನೆ ನಡೆದದ್ದು ಪಾಂಡವರ ವನವಾಸ ಕಾಲದಲ್ಲಿ. ಹೀಗೆ ಕಾಲಕ್ರಮದಲ್ಲಿ ಕೃಷ್ಣ ಕಥೆ ಹಾಗೂ ಪಾಂಡವರ ಕಥೆಗಳನ್ನು ಅನ್ವಯಿಸಿ ವಿವರಿಸಿದ ಹಿರಿಮೆ ಮಹಾಭಾರತತಾತ್ಪರ್ಯನಿರ್ಣಯದ್ದು. ಜಗತ್ತಿನ ಬೇರಾವ ವಿಮರ್ಶಕರೂ ಹೀಗೆ ಮಹಾಭಾರತ, ಹರಿವಂಶಾದಿಗಳ ವಿವರಗಳನ್ನು ಅನ್ವಯಿಸಿ ವಿಶ್ಲೇಷಿಸಿದ ಮತ್ತೊಂದು ನಿದರ್ಶನ ದೊರೆಯದು.

೨) ತನ್ನ ಬದರಿಕಾಶ್ರಮ ಎನ್ನುವ ಮೂಲಕ ಬದರಿಕಾಶ್ರಮ ಮೂಲತಃ ವಿಷ್ಣುಕ್ಷೇತ್ರ ಎಂದು ನಿರೂಪಿತವಾಯಿತು.

ಏಷ ಮೋಹಂ ಸೃಜಾಮ್ಯಾಶು ಯೋ ಜನಾನ್ ಮೋಹಯಿಷ್ಯತಿ ।
ತ್ವಂ ಚ ರುದ್ರ ಮಹಾಬಾಹೋ ಮೋಹಶಾಸ್ತ್ರಾಣಿ ಕಾರಯ ॥ ೧೫೮ ॥

ಅತಥ್ಯಾನಿ ವಿತಥ್ಯಾನಿ ದರ್ಶಯಸ್ವ ಮಹಾಭುಜ ।
ಪ್ರಕಾಶಂ ಕುರು ಚಾತ್ಮಾನಮಪ್ರಕಾಶಂ ಚ ಮಾಂ ಕುರು ॥ ೧೫೯ ॥

ಅಹಂ ತ್ವಾಂ ಪೂಜಯಿಷ್ಯಾಮಿ ಲೋಕಸಮ್ಮೋಹನೋತ್ಸುಕಃ ।
ತಮೋಽಸುರಾ ನಾನ್ಯಥಾ ಹಿ ಯಾಂತೀತ್ಯೇತನ್ಮತಂ ಮಮ ॥ ೧೬೦ ॥

ಅ: 'ಮಹಾಬಾಹುವಾದ ಶಿವನೆ! ನಾನು ದುರ್ಜನರನ್ನು ಮೋಹಗೊಳಿಸುವಂತಹ ಮೋಹಶಾಸ್ತ್ರವನ್ನು ರಚಿಸುವೆನು, ನೀನೂ ಸಹ ಮೋಹಶಾಸ್ತ್ರಗಳನ್ನು ರಚನೆ ಮಾಡು; ಇತರ-

---

೧೫೮. ಏಷ ಮೋಹಂ ಸೃಜಾಮೀತ್ಯತ್ರ ಮೋಹಯತೀತಿ ಮೋಹಃ= ಮೋಹಕಶಾಸ್ತ್ರಂ ತ್ವಂ ಪಾಶುಪತಾದಿ ಮೋಹಕಶಾಸ್ತ್ರಾಣಿ ಕುರು। ದಧೀಚ್ಯಾದಿಭಿಃ ಕಾರಯ ಚ ॥ –(ವಾ.)

೧೫೮. ಮುಹ್ಯತೇಽನೇನೇತಿ ಮೋಹಃ ಮೋಹಕಂ ಶಾಸ್ತ್ರಂ ... । –(ಜ.)

೧೫೯. ಅತಥ್ಯಾನಿ = ನ ವಿದ್ಯತೇ ಫಲಂ ಯೇಷು ತಾನ್ಯತಥ್ಯಾನಿ। ಜಟಾರುದ್ರಾಕ್ಷಭಸ್ಮಧಾರಣಾದೀನಿ ದುರಾಚರಣಾನಿ। ವಿತಥ್ಯಾನಿ= ವೈಪರೀತ್ಯೇನ ತಥ್ಯಾನಿ ಸ್ವಸ್ಮಿನ್ ವಿರುದ್ಧಾನಿ ಅನ್ಯತ್ರ ತಥ್ಯಾನಿ ಸ್ವತೋಽಪಿ ವಿಶಿಷ್ಟೇ ನಾರಾಯಣೇ ತಥ್ಯಾನೀತಿ ವಾ। ಅಹಂ ಸರ್ವಜ್ಞಃ ಅಹಂ ಸರ್ವೋತ್ತಮ ಇತ್ಯಾದಿಮಿಥ್ಯಾಜ್ಞಾನಾನಿ ಚ ದರ್ಶಯಸ್ವೇತ್ಯರ್ಥಃ ॥ –(ವಾ.)

೧೫೯. ಪದ್ಮಪುರಾಣೇ ಉತ್ತರಖಂಡೇ ವಾಸುದೇವಸಹಸ್ರನಾಮಸ್ತೋತ್ರೇ। (ಅ.೭೧/೧೦೬, ೧೦೭)

ರಿಂದಲೂ ರಚನೆ ಮಾಡಿಸು. ಇಲ್ಲದ್ದನ್ನು ಇರುವಂತೆಯೂ, ಇರುವುದನ್ನು ಮತ್ತೊಂದು ಬಗೆಯಾಗಿ ಇರುವಂತೆಯೂ ತಿಳಿಸು. ನಿನ್ನನ್ನು ಸರ್ವೋತ್ತಮನೆಂಬಂತೆ ವಿವರಿಸು. ನನ್ನ ಮಹಿಮೆಯನ್ನು ತಿಳಿಸದಿರು. ಲೋಕವನ್ನು ಮರುಳುಗೊಳಿಸಲು ಉತ್ಸುಕನಾಗಿ ನಾನು ನಿನ್ನನ್ನು ಪೂಜಿಸುವೆ. ಇಲ್ಲವಾದಲ್ಲಿ ಅಸುರರು ತಮಸ್ಸಿಗೆ ತೆರಳಲಾರರು, ಇದು ನನ್ನ ಮತ'.

ವಿ: ಇವೆಲ್ಲಾ ವರಾಹಪುರಾಣದ ಶ್ಲೋಕಗಳು ಎಂಬುದನ್ನು ಈಗಾಗಲೇ ತಿಳಿಸಿರುವರು (೧/೪೮, ೪೯; ವರಾಹಪುರಾಣ ೭೦/೩೬). ಶ್ರೀಹರಿಯು ಸ್ವತಃ ರಚಿಸಿದ ಮೋಹಶಾಸ್ತ್ರವೆಂದರೆ ಬೌದ್ಧಾದಿ ಶಾಸ್ತ್ರಗಳು, ಹಾಗೂ ವ್ಯಾಸರೂಪದಿಂದ ರಚಿಸಿದ ತಾಮಸ ಪುರಾಣಗಳು ಎಂದು ತಿಳಿಯಬೇಕು. ಶಿವ ರಚಿಸಿದ ಮೋಹಕ ಶಾಸ್ತ್ರ ಪಾಶುಪತಾಗಮ. ದಧೀಚಿ ಮೊದಲಾದ ಮುನಿಗಳಿಂದಲೂ ಶಿವ ಮೋಹಕ ಶಾಸ್ತ್ರಗಳನ್ನು ರಚಿಸಿದ ವಿವರ ತತ್ತ್ವಪ್ರಕಾಶಿಕೆಯಲ್ಲಿದೆ ('ತ್ವಂ ಚ ಸೃಜ ದಧೀಚ್ಯಾದಿಭಿಃ ಕಾರಯ ಚ' – ೧/೧/೧). ದಧೀಚಿ ಮುನಿ ಶಿವನನ್ನು ವಿಷ್ಣುವಿಗಿಂತ ಮಿಗಿಲು ಎಂಬಂತೆ ವರ್ಣಿಸಿದ ವಿವರ ಶಿವಪುರಾಣದಲ್ಲಿ ಬಂದಿದೆ. ಮೊದಲ ಅಧ್ಯಾಯದಲ್ಲಿ ಉದಾಹೃತವಾಗಿದ್ದ ಈ ಶ್ಲೋಕಗಳ ಅವುಗಳ ಹಿನ್ನೆಲೆಯೊಂದಿಗೆ ಇಲ್ಲಿ ನಿರೂಪಿತವಾಗಿರುವುದು ವಿಶೇಷ.

ಇತ್ಯುಕ್ತಂ ವಚನಂ ಪೂರ್ವಂ ಕೇಶವೇನ ಶಿವಾಯ ಯತ್ ।
ತತ್ ಸತ್ಯಂ ಕರ್ತುಮಾಯಾಂತಂ ಕೃಷ್ಣಂ ಬದರಿಕಾಶ್ರಮಮ್ ।
ಸರ್ವಜ್ಞಾ ಮುನಯಃ ಸರ್ವೇ ಪೂಜಯಾಂಚಕ್ರಿರೇ ಪ್ರಭುಮ್ ॥ ೧೬೧ ॥

ಅ: 'ಇದು ವಿಷ್ಣುವಿನಿಂದಲೇ ಶಿವನಿಗೆ ಹೇಳಲ್ಪಟ್ಟ ವಚನ. ಆದ್ದರಿಂದ ಅದನ್ನು ಸತ್ಯ ಮಾಡಲೆಂದು ಬದರಿಕಾಶ್ರಮಕ್ಕೆ ಆಗಮಿಸಿದ ಪ್ರಭುವಾದ ಕೃಷ್ಣನನ್ನು ಸರ್ವಜ್ಞರಾದ ಸಕಲ ಮುನಿಗಳೂ ಪೂಜಿಸಿದರು.

ವಿ: ಕೃಷ್ಣ ಗರುಡಾರೂಢನಾಗಿ ಬದರಿಕಾಶ್ರಮಕ್ಕೆ ಬರುವ ವೇಳೆಗೆ ರಾತ್ರಿಯಾಗಿತ್ತು. ಕೃಷ್ಣನನ್ನು ಋಷಿಮುನಿಗಳೆಲ್ಲಾ ಭಕ್ತಿಯಿಂದ ಆರಾಧಿಸಿದರು.

ಘಂಟಾಕರ್ಣ ಕರ್ಣ ಪಿಶಾಚಿಗಳು

ರಾತ್ರೌ ಕೃಷ್ಣೇ ಮುನಿಮಧ್ಯೇ ನಿವಿಷ್ಟೇ
ಘಂಟಾಕರ್ಣಃ ಕರ್ಣನಾಮಾ ಪಿಶಾಚೌ ।
ಸಮಾಯಾತಾಂ ಗಿರಿಶೇನ ಪ್ರದಿಷ್ಟೌ
ಕೃಷ್ಣಂ ದ್ರಷ್ಟುಂ ದ್ವಾರಕಾಂ ಗಂತುಕಾಮೌ ॥ ೧೬೨ ॥

ಅ: ರಾತ್ರಿಯಲ್ಲಿ ಕೃಷ್ಣನು ಮುನಿಗಳ ಮಧ್ಯದಲ್ಲಿ ಕುಳಿತಿದ್ದಾಗ ಘಂಟಾಕರ್ಣ ಮತ್ತು ಕರ್ಣ ಎಂಬ ಎರಡು ಪಿಶಾಚಿಗಳು ಆಗಮಿಸಿದವು. ಅವರಿಬ್ಬರೂ ಕೃಷ್ಣನನ್ನು ನೋಡಲೆಂದು ಶಿವನಿಂದ ತಿಳಿಸಲ್ಪಟ್ಟವರಾಗಿ ದ್ವಾರಕೆಗೆ ತೆರಳ ಬಯಸಿದ್ದವರು.

ವಿ: ೧) ಘಂಟಾಕರ್ಣ ಮತ್ತು ಕರ್ಣ ಎಂಬ ಇಬ್ಬರು ಪಿಶಾಚಿಗಳು ಮೋಕ್ಷ ಪಡೆಯಲೆಂದು ಶಿವಾರಾಧನೆಗೆ ತೊಡಗಿದ್ದವರು. ಶಿವಭಕ್ತಿಯನ್ನು ತೋರುವ ಭರದಲ್ಲಿ ವಿಷ್ಣುದ್ವೇಷಿಗಳೂ ಆಗಿದ್ದವರು. ವಿಷ್ಣುನಾಮ ತಮ್ಮ ಕಿವಿಗೆ ಕೇಳಬಾರದೆಂಬ ಉದ್ದೇಶದಿಂದ ಕಿವಿಗಳಿಗೆ ಘಂಟೆಗಳನ್ನು ಕಟ್ಟಿಕೊಂಡು ಯಾರಾದರು ವಿಷ್ಣು ನಾಮವನ್ನು ಉಚ್ಚಾರ ಮಾಡಿದಾಗ ಆ ಘಂಟೆಗಳನ್ನು ಶಬ್ದ ಮಾಡುತ್ತಾ ವಿಷ್ಣುನಾಮ ಕಿವಿಗೆ ಬೀಳದಂತೆ ದೀಕ್ಷೆ ಹೊತ್ತಿದ್ದವರು.

೨) ಕುಬೇರಭೃತ್ಯರಾದ ಅವರಿಬ್ಬರಿಗೂ ಶಿವ ಪ್ರತ್ಯಕ್ಷನಾದ. ಅವರು ಮುಕ್ತಿ ನೀಡಲೆಂದು ಪ್ರಾರ್ಥಿಸಿದಾಗ ಶಿವ ತಿಳಿಸಿದ ಮುಕ್ತಿ ಕೊಡುವ ದೇವರು ಶ್ರೀಕೃಷ್ಣನೊಬ್ಬನೇ – **'ಮುಕ್ತಿಪ್ರದಾತಾ ಸರ್ವೇಷಾಂ ವಿಷ್ಣುರೇವ ನ ಸಂಶಯಃ'**(ಹರಿವಂಶ ೩/೮೦/೩೦). ತತ್‌ಕ್ಷಣವೇ ತಮ್ಮ ತಪ್ಪಿನ ಅರಿವಾದ ಅವರು ತುಂಬಾ ಪಶ್ಚಾತ್ತಾಪ ಪಟ್ಟು ಕುಬೇರನಿಂದ ವಿಷ್ಣು ಮಂತ್ರೋಪದೇಶವನ್ನು ಹೊಂದಿ ಕೃಷ್ಣನನ್ನು ಕಾಣಲೆಂದು ದ್ವಾರಕೆಗೆ ಹೊರಟರು. ಮಾರ್ಗಮಧ್ಯದಲ್ಲಿ ಬದರಿಯಲ್ಲಿ ಅವರಿಗೆ ಕೃಷ್ಣ ಕಂಡ ಎಂಬ ವಿವರಗಳು ಹರಿವಂಶದಲ್ಲಿ ಬಂದಿವೆ (ಭವಿಷ್ಯಪರ್ವ, ಅಧ್ಯಾಯ ೮೧).

ಪಿಶಾಚಚೇಷ್ಟೆ

ತೌ ದೃಷ್ಟ್ವಾ ಮುನಿಮಧ್ಯಸ್ಥಂ ಕೇಶವಂ ತದಬೋಧತಃ ।
ಕೃತ್ವಾ ಸ್ವಜಾತಿಚೇಷ್ಟಾಶ್ಚ ಧ್ಯಾನೇನೈನಮಪಶ್ಯತಾಮ್ ॥ ೧೬೩ ॥

ಅ: ಅವರಿಬ್ಬರೂ ಮುನಿಗಳ ಮಧ್ಯೆ ಕುಳಿತಿದ್ದ ಕೃಷ್ಣನನ್ನು ಕಂಡು ಅವನಾರೆಂದು ಅರಿಯದೆ ತಮ್ಮ ಜಾತಿಗೆ ಅನುಗುಣವಾದ ಪಿಶಾಚ ಚೇಷ್ಟೆಗಳನ್ನು ಮಾಡಿದರು. ಬಳಿಕ ಧ್ಯಾನದಿಂದ ಅವನನ್ನು ತಿಳಿದರು.

ವಿ: ಬದರಿಯಲ್ಲಿ ಕೃಷ್ಣನನ್ನು ಕಂಡ ಅವರು ತಮ್ಮ ಪರಿಚಯವನ್ನು ಹೇಳಿ ಅವನಾರೆಂದು ಕೇಳಿದರು. ತನ್ನನ್ನು ಒಬ್ಬ ಯಾದವನೆಂದು ಕೃಷ್ಣ ಪರಿಚಯ ಮಾಡಿಕೊಂಡ. ಅವರಿಬ್ಬರೂ ಕೃಷ್ಣನಿಗೆ ಕೃಷ್ಣನ ಮಹಿಮೆಯನ್ನು ತಿಳಿಸುತ್ತಾ ಕೃಷ್ಣನ ಧ್ಯಾನವನ್ನು ಮಾಡಲು ಹೇಳಿ ತಾವು ಧ್ಯಾನಕ್ಕೆ ಕುಳಿತರು. ಧ್ಯಾನಕಾಲದಲ್ಲಿ ತಮ್ಮ ಪಕ್ಕದಲ್ಲಿ ಕುಳಿತಿದ್ದವನೇ ಸಾಕ್ಷಾತ್ ಕೃಷ್ಣ ಎಂದು ತಿಳಿದರು. ತುಂಬಾ ಪಶ್ಚಾತ್ತಾಪದಿಂದ ಪರಿಪರಿಯಾಗಿ ಕೃಷ್ಣನನ್ನು ಸ್ತುತಿಸಿ ಅವನಿಂದ ಅನುಗೃಹೀತರಾದರು (ಹರಿವಂಶ ಭವಿಷ್ಯಪರ್ವ, ಅಧ್ಯಾಯ ೮೦ ಶ್ಲೋ.೫೯–೮೧ ಹಾಗೂ ಅಧ್ಯಾಯ ೮೧).

ದೃಷ್ಟ್ವಾ ಹೃದಿ ಸ್ಥಿತಂ ತಂ ತು ಕೌತೂಹಲಸಮನ್ವಿತೌ ।
ಸ್ತುತ್ವಾ ಭಕ್ತ್ಯಾ ಪ್ರಣಾಮಂ ಚ ಬಹುಶಶ್ಚಕ್ರತುಃ ಶುಭೌ ॥ ೧೬೪ ॥

ಅ: ಹೃದಯದಲ್ಲಿ ನೆಲೆಸಿದ ಕೃಷ್ಣನನ್ನು ಕಂಡು ಅವರಿಬ್ಬರೂ ಕುತೂಹಲದಿಂದ ಕೂಡಿದವರಾಗಿ ಭಕ್ತಿಯಿಂದ ಸ್ತುತಿಸಿ ಬಹುಬಗೆಯಿಂದ ಪುನಃ ಪುನಃ ನಮಸ್ಕರಿಸಿದರು. ಅವರಿಬ್ಬರೂ ಸ್ವರೂಪತಃ ಪುಣ್ಯ ಜೀವಿಗಳು.

ವಿ: ಕೃಷ್ಣನನ್ನು ಗುರುತಿಸುತ್ತಲೇ ಭಕ್ತಿಯಿಂದ ತಮ್ಮ ಜಾತಿಧರ್ಮಕ್ಕೆ ಅನುಗುಣವಾಗಿ ಒಬ್ಬ ಬ್ರಾಹ್ಮಣನ ಶವವನ್ನು ಕೃಷ್ಣನಿಗೆ ಕಾಣಿಕೆಯನ್ನಾಗಿ ಅರ್ಪಿಸಿ ಪೂಜಿಸತೊಡಗಿದರು. ಪಿಶಾಚ ಮೊದಲಾದ ಕುಯೋನಿಗಳಲ್ಲಿ ಜನಿಸಿದಾಗಲೂ ಆ ಯೋನಿಗೆ ಉಚಿತವಾದ ರೀತಿಯಲ್ಲಿ ಶ್ರೀಹರಿಯ ಆರಾಧನೆ ಎಹಿತ ಎಂಬುದು ಇದರಿಂದ ಸ್ಫುಟಪಡುವುದು – 'ಸ್ವಕರ್ಮಣಾ ತಮಭ್ಯರ್ಚ್ಯ ಸಿದ್ಧಿಂ ವಿಂದತಿ ಮಾನವಃ' (ಗೀತಾ ೧೮/೪೬).

ಗಂಧರ್ವರಾದ ಪಿಶಾಚಿಗಳು

ತಯೋಃ ಪ್ರಸನ್ನೋ ಭಗವಾನ್ ಸ್ಪೃಷ್ಟ್ವಾ ಗಂಧರ್ವಸತ್ತಮೌ ।
ಚಕಾರ ಕ್ಷಣಮಾತ್ರೇಣ ದಿವ್ಯರೂಪಸ್ವರಾನ್ವಿತೌ ॥ ೧೬೫ ॥

ಅ: ಅವರಿಬ್ಬರಿಗೂ ಪ್ರಸನ್ನನಾದ ಶ್ರೀಕೃಷ್ಣ ಅವರನ್ನು ಸ್ಪರ್ಶಿಸಿ ಕ್ಷಣಮಾತ್ರದಲ್ಲಿ ದಿವ್ಯರೂಪ, ಸ್ವರಗಳಿಂದ ಕೂಡಿದ ಗಂಧರ್ವ ಶ್ರೇಷ್ಠರನ್ನಾಗಿ ಮಾಡಿದ.

ವಿ: ೧) ಶ್ರೀಕೃಷ್ಣನ ಸ್ಪರ್ಶದ ಹಿರಿಮೆ ಇಲ್ಲಿ ಉಕ್ತವಾಗಿದೆ, ಸಾಲಿಗ್ರಾಮ ಸ್ಪರ್ಶಿಸಿದವನ ಕೈ ಪವಿತ್ರವಾಗುವಂತೆ. ಶ್ರೀಕೃಷ್ಣನ ಸ್ಪರ್ಶದಿಂದ ಅವರಿಬ್ಬರೂ ಆ ಪಿಶಾಚಿಯೋನಿಯಿಂದ ಮುಕ್ತರಾಗಿ ಉತ್ತಮದೇಹವನ್ನು ಪಡೆದರು.

೨) ಮೂಲತಃ ಗಂಧರ್ವರಾಗಿದ್ದ ಅವರು ಪ್ರಾರಬ್ಧವಶಾತ್ ಹಾಗೆ ಪಿಶಾಚಿಗಳಾಗಿ ಜನಿಸಿದ್ದರು. ಕೃಷ್ಣಾನುಗ್ರಹದಿಂದ ಪುನಃ ಸ್ವರೂಪವನ್ನು ಪಡೆದು ಕೃತಕೃತ್ಯರಾದರು ಎಂದರ್ಥ. ಅವರು ಅರ್ಪಿಸಿದ ಬ್ರಾಹ್ಮಣನ ಶವವನ್ನು ಕೃಷ್ಣ ಬದುಕಿಸಿ ಉದ್ಧರಿಸಿದ ಎಂಬ ವಿವರ *ಹರಿವಂಶದಲ್ಲಿದೆ.

---

೧೬೫. ಗಂಧರ್ವ ಇವ ಗಾಯಂಸ್ತು ಸಿದ್ಧಃ ಸಿದ್ಧ ಇವ ಸ್ವಯಮ್ ।
ಸ್ಪಾಷ್ಟಾತ್ ಸ್ಪೃಷ್ಟಂ ತದಾ ವಿಷ್ಣೋಃ ಕರೇಣ ಮೃದುಪೂರ್ವಕಮ್ ॥
ನ ನೂನಂ ತಾದೃಶಂ ರೂಪಮಾಸೀತ್ ಕಾಲಾಂತರೇಷ್ವಪಿ ।
ಅದ್ಯಾಪಿ ನೈವ ಮುನಯೋ ಲಭಂತೇ ತಾದೃಶಂ ವಪುಃ ॥ – ಹರಿವಂಶ (೩/೮೩/೧೯, ೨೦)

* ಇತ್ಯುಕ್ತ್ವಾ ಭಗವಾನ್ ಕೃಷ್ಣ ಉತ್ಥಾಪ್ಯ ಬ್ರಾಹ್ಮಣಂ ತದಾ ।
ತೇನ ಸ್ತುತೋ ಜಗನ್ನಾರ್ಥಃ ಪೂಜಯಿತ್ವಾ ಚ ತಂ ದ್ವಿಜಮ್ ॥ – ಹರಿವಂಶ (೩/೮೩/೩೦)

ಕೈಲಾಸದಲ್ಲಿ ಕೃಷ್ಣ

ತಾಭ್ಯಾಂ ಪುನರ್ನೃತ್ತಗೀತಸಂಸ್ತವೈಃ ಪೂಜಿತಃ ಪ್ರಭುಃ ।
ಯಯೌ ಕೈಲಾಸಮದ್ರೀಶಂ ಚಕಾರೇವ ತಪೋಽತ್ರ ಚ ॥ ೧೬೬ ॥

ಅ: ಅವರಿಬ್ಬರೂ ಕೃಷ್ಣನನ್ನು ಮತ್ತೆ ನರ್ತನ, ಗಾನ, ಉತ್ತಮ ಸ್ತುತಿಗಳಿಂದ ಆರಾಧಿಸಿದರು. ಪ್ರಭುವಾದ ಕೃಷ್ಣ ಮುಂದೆ ಪರ್ವತರಾಜನಾದ ಕೈಲಾಸಕ್ಕೆ ತೆರಳಿ ಅಲ್ಲಿ ತಪಸ್ಸನ್ನು ಆಚರಿಸುವವನಂತೆ ವರ್ತಿಸಿದ.

ವಿ: ಘಂಟಾಕರ್ಣ ಮತ್ತು ಕರ್ಣ ಎಂಬ ಪಿಶಾಚಿಗಳು ಹೀಗೆ ಕೃಷ್ಣನಿಂದ ಬದರಿಕಾಶ್ರಮದಲ್ಲಿ ಉದ್ಧಾರ ಹೊಂದಿದರು. ಬದರೀ ನಾರಾಯಣನ ಗುಡಿಯ ಪರಿಸರದಲ್ಲಿ ಇದರ ಸಂಕೇತವಾಗಿ ಎಂಬಂತೆ ಘಂಟಾಕರ್ಣನ ಗುಡಿಯಿರುವುದನ್ನು ಗಮನಿಸಬೇಕು. ಕೃಷ್ಣ ಬದರಿಯಲ್ಲಿ ಆ ರಾತ್ರಿ ತಂಗಿದ್ದು ಇವರನ್ನು ಉದ್ಧರಿಸಲೆಂದೇ ಎಂಬುದು ಅನಂತರ ಲೋಕಕ್ಕೆ ತಿಳಿಯಿತು.

ಕೃಷ್ಣ ಮಾಡಿದ ತಪಸ್ಸಿನ ನಾಟಕ

ಸ್ವೀಯಾನೇವ ಗುಣಾನ್ ವಿಷ್ಣುರ್ಯುಂಜನ್ ನಿತ್ಯೇನ ಶೋಚಿಷಾ ।
ಶಾರ್ವಂ ತಪಃ ಕರೋತೀವ ಮೋಹಯಾಮಾಸ ದುರ್ಜನಾನ್ ॥ ೧೬೭ ॥

ಅ: ವಿಷ್ಣುವು ತನ್ನ ಗುಣಗಳನ್ನೇ ನಿತ್ಯ ಜ್ಞಾನದಿಂದ ಸದಾ ಭೋಗಿಸುತ್ತಾ ಶಿವನನ್ನು ಕುರಿತು ತಪಸ್ಸು ಮಾಡುವವನಂತೆ ನಟಿಸಿ ದುರ್ಜನರನ್ನು ಮೋಹಿಸಿದ.

ವಿ: ಕೃಷ್ಣ ಹಾಗೆ ತಪಸ್ಸನ್ನು ಆಚರಿಸುವಾಗಲೂ ಧ್ಯಾನಿಸುತ್ತಿದ್ದುದು ತನ್ನನ್ನೇ ಹೊರತು ಶಿವನನ್ನಲ್ಲ, ಅದನ್ನು ಅರಿಯದ ಅಸುರಜನ ಕೃಷ್ಣ ಶಿವನ ಧ್ಯಾನವನ್ನು ಮಾಡುತ್ತಿರುವನು, ಶಿವ ಇವನಿಗಿಂತ ಉತ್ತಮ ಎಂದು ತಪ್ಪಾಗಿ ತಿಳಿಯುವಂತಾಯಿತು ಎಂದರ್ಥ.

ಹನ್ನೆರಡು ವರ್ಷವಾದ ಒಂದು ದಿವಸ

ಪೂರ್ವಂ ತೇನೋದಿತಂ ಯತ್ ತಲ್ಲೋಕಾನ್ ಮೋಹಯತಾಽಂಜಸಾ ।
ಶರ್ವಂ ಪ್ರತಿ ತವಾಹಂ ತು ಕುರ್ಯಾಂ ದ್ವಾದಶವತ್ಸರಮ್ ॥ ೧೬೮ ॥

---

೧೬೭. ಗುಣಾನ್ವಿಷ್ಣೋರ್ಯುಂಜನ್ನಿತ್ಯತ್ರ ನಿತ್ಯೇನ ಶೋಚಿಷಾ= ಪ್ರಕಾಶರೂಪೇಣ ಸಾಕ್ಷಿಣಾ ಯುಂಜನ್= ಮನಸಾ ಧ್ಯಾಯನ್। ಭುಂಜನ್ನಿತಿ ಪಾಠೇ ''ಭುಜಿ ಪಾಲನಾಭ್ಯವಹಾರಯೋಃ'' ಇತಿ ಧಾತೋಃ ಮನಸಾ ಪಾಲಯನ್ ಧ್ಯಾತ್ವಾ ಧ್ಯಾತ್ವಾ ಸ್ಥಿರೀಕುರ್ವನ್ನಿತಿ ಭಾವಃ ॥ – (ವಾ.)

೧೬೭. ಶೋಚಿಷಾ ಸಾಮರ್ಥ್ಯೇನ। – (ವ.)

ತಪೋಽಸುರಾಣಾಂ ಮೋಹಾಯ ಸುರಾಃ ಸಂತು ಗತಜ್ವರಾಃ ।
ಇತಿ ತಸ್ಮಾತ್ ತದಾ ಕೃಷ್ಣ ಏಕಾಹೇನ ಬೃಹಸ್ಪತಿಮ್ ॥ ೧೬೯ ॥

ಆಜ್ಞಯಾ ಚಾರಯಾಮಾಸ ಕ್ಷಿಪ್ರಂ ದ್ವಾದಶರಾಶಿಷು ।
ದ್ವಾದಶಾಬ್ದಮಭೂತ್ ತೇನ ತದಹಃ ಕೇಶವೇಚ್ಛಯಾ ॥ ೧೭೦ ॥

ಅ: ಅಸುರ ಜನರನ್ನು ಚೆನ್ನಾಗಿ ಮೋಹಗೊಳಿಸಲೆಂದು ಹಿಂದೆ ಅವನು ಶಿವನಿಗೆ 'ನಾನು ನಿನ್ನನ್ನು ಕುರಿತು ಹನ್ನೆರಡು ವರ್ಷಗಳ ಕಾಲ ಅಸುರ ಮೋಹನಕ್ಕೆಂದು ತಪಸ್ಸು ಮಾಡುವೆ,

---

೧೭೦. ಕ್ಷಿಪ್ರಂ ದ್ವಾದಶರಾಶಿಷ್ವಿತ್ಯತ್ರ ಏಕೈಕರಾಶೌ ವತ್ಸರಮಾತ್ರಸ್ಥಾಯಿನೋ ಬೃಹಸ್ಪತೇಃ ಏಕಸ್ಮಿನ್ನೇವ ದಿವಸೇ ದ್ವಾದಶರಾಶಿಷು ಸಂಚಾರೇ ಏಕಮೇವ ದಿನಂ ದ್ವಾದಶವರ್ಷೋಪಮಮಾಸೀದಿತಿ ಭಾವಃ। ಅತ ಏವ ಕ್ಷಿಪ್ರಮಿತ್ಯುಕ್ತ-ಮಿತಿ ಶ್ಲೇಯಮ್ ॥ –(ವಾ.)

೧೭೦ ಅಪಿ ಚಾನಂತಜೀವಾನಾಂ ಭವದ್ಭೂತಭವಿಷ್ಯತಾಮ್ ।
ಹೃದಿ ಸ್ಥಿತ್ವಾ ಪಂಚರೂಪೀ ಯಸ್ಯ ಮಂತ್ರತ್ರಯಂ ಸುಧೀಃ ॥
ಅಹರ್ನಿಶಂ ಚೈಕವಿಂಶತ್ಸಹಸ್ರಂ ಷಟ್‌ಶತಾಧಿಕಮ್ ।
ಯಥಾ ಭವತಿ ಮಾನೇನ ತಥಾಽನೂನತಯಾ ಜಪನ್ ॥
ಮುಖ್ಯಪ್ರಾಣೋ ಮಮ ಗುರುಸ್ತಸ್ಯ ಹಂಸಾತ್ಮನೋ ಹರೇಃ ।
ಮುಖ್ಯದಾಸೋಽಭವನ್ನಿತ್ಯಮಿತ್ಥಂ ವಿಷ್ಣೋರ್ಮಹಾಮನುಮ್ ॥
ಅಹರ್ನಿಶಂ ಚ ಜಪತಃ ಸ್ಯಾತ್ ಕದಾ ಮತಿರನ್ಯಥಾ ।
ಹರೌ ಕದಾಚಿತ್ ಸ್ಪರ್ಧಾಽಸ್ಯ ಯದಿ ಸ್ಯಾನ್ನ ಜಪೇತ್ ಸದಾ ॥
ಜಪಾಭಾವೇಽಪಿ ನಷ್ಟಂ ಸ್ಯಾಜ್ಜಗದೇತಚ್ಚರಾಚರಮ್ ।
ಏವಂ ಚ ಜೀವನಾರ್ಥೀ ಯಃ ಸ ವಾಯೋಶ್ಚ ಶ್ರಿಯಃಪತೇಃ ॥
ಮತ್ಕೈಕಂ ಪೋಷಯೇನ್ನಿತ್ಯಂ ದೂಷಯೇನ್ನ ಕದಾಚನ ।
ದಿನೇ ದಿನೇಽಪ್ಯಸಂಖ್ಯಾತನಾನಾಜೀವೇಷ್ವಹರ್ನಿಶಮ್ ॥
ಅನಂತಾನಂತಧಾ ವಿಷ್ಣೋರ್ಮನುಮೇತಮನುತ್ತಮಮ್ ।
ಜಪನ್ನಯಂ ವಾಯುದೇವಃ ಸರ್ವಜೀವೋತ್ತಮೋ ನ ಕಿಮ್ ॥
ವಿಷ್ಣುಭಕ್ತೌ ಚ ಸದೃಶಃ ಕಃ ಸ್ಯಾದಸ್ಯ ವಿಚಾರ್ಯತಾಮ್ ।
ಈದೃಶೋ ಯೋ ಜಗತ್ರಾಣಹೇತುಭೂತಃ ಸಮೀರಣಃ ॥
ಸರ್ವಜೀವಾಗ್ರಣೀಸ್ತಸ್ಮಾತ್ ತಸ್ಯಾಪೀಶಃ ಶ್ರಿಯಃ ಪತಿಃ ।
ಆಸೀತ್ ಸರ್ವೋತ್ತಮೋ ಬ್ರಹ್ಮಪಿತಾ ಶಂಭೋಃ ಪಿತಾಮಹಃ ॥ –ಸರಸಭಾರತೀವಿಲಾಸ (೮/೭೨-೮೦)

೧೭೦. ತತ್ರಾಯಮರ್ಥಃ। ಏಕವತ್ಸರಸ್ಯ ದ್ವಾದಶಮಾಸಾಃ ಭವಂತಿ ದ್ವಾದಶವತ್ಸರಾಣಾಂ ಚತುಶ್ಚತ್ವಾರಿಂಶದಧಿಕಶತಂ ಮಾಸಾಃ ಭವಂತಿ। ತೇ ಮಾಸಾಃ ಶ್ವಾಸಸಂಖ್ಯಾಭಿಃ ಕಲ್ಪನೀಯಾಃ। ಏಕಸ್ಮಿನ್ ದಿನೇ ಏಕವಿಂಶತ್ಸಹಸ್ರಾ-ದುಪರಿಷಟ್‌ಶತಶ್ವಾಸಾಃ ಭವಂತಿ। ಅಬ್ದೋಽಷ್ಟಾದಶಶತಸಂಖ್ಯಾಕೈಃ ಶ್ವಾಸೈಃ ಏಕವತ್ಸರೋ ಭವತಿ। ಸಾರ್ಧಶತಶ್ವಾ-ಸೈರ್ಮಾಸೋಭವತಿ। ಪಂಚಶ್ವಾಸೈಃ ಏಕದಿನಂ ಭವತಿ। ಏವಂ ಶ್ವಾಸವಿಭಾಗೇನ ವತ್ಸರಾಃ ಮಾಸಾಃ ದಿನಾನಿ ಚ ಪರಿಕಲ್ಪನೀಯಾಃ। –(ಜ.)

ದೇವತೆಗಳು ನಿಶ್ಚಿಂತರಾಗಿರಲಿ' ಎಂದು ತಿಳಿಸಿದ್ದ ಆದ್ದರಿಂದ ಕೃಷ್ಣ ಒಂದೇ ದಿನದಲ್ಲಿ ಬೃಹಸ್ಪತಿಯನ್ನು ಬೇಗನೇ ಹನ್ನೆರಡು ರಾಶಿಗಳಲ್ಲಿ ಸಂಚರಿಸುವಂತೆ ಮಾಡಿದ. ಹೀಗೆ ಕೃಷ್ಣನ ಆಜ್ಞೆಯಂತೆ ಆ ಒಂದು ದಿನ ಹನ್ನೆರಡು ವರ್ಷವಾಯಿತು.

ವಿ: ೧) ಕೃಷ್ಣ ಶಿವನಿಗೆ ವರ ನೀಡಿದ್ದು ತಾನು ಹನ್ನೆರಡು ವರ್ಷ ಅವನನ್ನು ಕುರಿತು ತಪಸ್ಸು ಮಾಡುವೆನೆಂದು. ಆದರೆ, ಕೃಷ್ಣ ತಪಸ್ಸು ಮಾಡಿದ್ದು ಒಂದು ದಿನ ಮಾತ್ರ. ಅದು ಹನ್ನೆರಡು ವರ್ಷ ಹೇಗಾಯಿತು ಎಂಬುದಕ್ಕೆ ವಿವರಣೆ ಇಲ್ಲಿವೆ.

೨) ಬೃಹಸ್ಪತಿ ಒಂದು ರಾಶಿಯಲ್ಲಿ ಒಂದು ವರ್ಷ ಇರುವನು' ಎಂದರೆ ಹನ್ನೆರಡು ವರ್ಷಗಳಲ್ಲಿ ಹನ್ನೆರಡು ರಾಶಿಗಳಲ್ಲಿ ಸಂಚರಿಸುವನು. ಕೃಷ್ಣ ಅವನಿಗೆ ಆಜ್ಞೆ ನೀಡಿ ಒಂದೇ ದಿನದಲ್ಲಿ ಹನ್ನೆರಡು ರಾಶಿಗಳಲ್ಲಿ ಸಂಚಾರ ಮಾಡಿಸಿದನು. ಇದರಿಂದ ಒಂದು ದಿನ ಹನ್ನೆರಡು ವರ್ಷ ಗಳಷ್ಟಾಯಿತು ಎಂದರ್ಥ. ಎಂದರೆ ಎರಡು ಗಂಟೆಗಳಿಗೆ ಒಂದು ರಾಶಿಯಂತೆ ಗುರು ಸಂಚರಿಸಿದ ಎಂದರ್ಥ.

೩) ಜಗತ್ತಿನ ಇತಿಹಾಸದಲ್ಲಿ ದಿನವೊಂದು ಹನ್ನೆರಡು ವರ್ಷಗಳಾಗಿ ಅತ್ಯದ್ಭುತವಾದ ಘಟನೆ ಇದು. ಕೃಷ್ಣ ಹೀಗೆ ಮಾಡುವ ಮೂಲಕ ತಾನು ಸಕಲ ಗ್ರಹಬಲನಾದ ಸರಸಿಜಾಕ್ಷ ಎಂದು ವಿಶ್ವಕ್ಕೆ ಸಾರಿದ; ತಾನು ಕಾಲ ನಿಯಾಮಕ ಎಂದೂ ಸ್ಫುಟಪಡಿಸಿದ.

ಎರಡು ಗಂಟೆಗೆ ಒಂದು ವರ್ಷ

ಏಕಸ್ಮಿನ್ನಹ್ನಿ ಭಗವಾನ್ ರಾಶಿಂ ರಾಶಿಂ ಚ ವತ್ಸರಮ್ ।
ಕಲ್ಪಯಿತ್ವೋಪವಾಸಾದೀನ್ ಮನಸಾ ನಿಯಮಾನಪಿ ॥ ೧೭೧ ॥

ಅ: ಒಂದೇ ದಿನದಲ್ಲಿ ಒಂದೊಂದು ರಾಶಿಯನ್ನು ಒಂದೊಂದು ವರ್ಷವೆಂದು ಸಂಕಲ್ಪಿಸಿ ಕೃಷ್ಣ ಮನಸ್ಸಿನಲ್ಲಿಯೇ ಉಪವಾಸಾದಿಗಳನ್ನು, ಅದಕ್ಕೆ ವಿಹಿತವಾದ ವಿಧಿಗಳನ್ನು ಆಚರಿಸಿದ.

ವಿ: ಒಂದು ದಿನವನ್ನು ಹನ್ನೆರಡು ವರ್ಷ ಮಾಡಿದ್ದರಿಂದ ಒಂದೊಂದು ರಾಶಿಯನ್ನು ಒಂದೊಂದು ವರ್ಷವಾಗುವಂತೆ ಒಂದೇ ದಿವಸದಲ್ಲಿ ಮಾಡುತ್ತಾ ದಿನವ್ರತ, ಮಾಸವ್ರತ, ವರ್ಷವ್ರತ, ಮೊದಲಾದವುಗಳನ್ನು ಆಚರಿಸಿದ ಎಂದರ್ಥ.

---

೧೭೧. ಶ್ವಾಸರೂಪೋ ಜಪೋ ನಿತ್ಯಮುಭಯೋರ್ವಿದ್ವದಜ್ಞಯೋಃ ।
ಏಕವಿಂಶತಸಹಸ್ರಾತ್ಮಾ ಸಷಟ್‌ಶತಮಹರ್ನಿಶಮ್ ॥ – ತಂತ್ರಸಾರ (೪/೨೨)

ಮಾಸವ್ರತಂ ಸಾರ್ಧಶತಶ್ವಾಸಕಾಲೈರಕಲ್ಪಯತ್ ।
ಮನಸೈವ ಸ್ವಭಕ್ತಾನಾಂ ದ್ವಾದಶಾಬ್ದವ್ರತಾಪ್ತಯೇ ॥ ೧೭೨ ॥

೨. ಮಾಸವ್ರತವನ್ನು ಕೃಷ್ಣ ನೂರೈವತ್ತು ಶ್ವಾಸಕಾಲಗಳಲ್ಲಿ ಮನಸ್ಸಿನಿಂದಲೇ ಪೂರೈಸಿದ. ತನ್ನ ಭಕ್ತರಿಗೆ ಹನ್ನೆರಡು ವರ್ಷಗಳ ವ್ರತದ ಫಲ ಪ್ರಾಪ್ತಿಗಾಗಿ ಕೃಷ್ಣ ಹಾಗೆ ಮಾಡಿದ.

ವಿ: ೧) ದಿವಸಕ್ಕೆ ಒಟ್ಟು ಶ್ವಾಸಗಳ ಸಂಖ್ಯೆ ಇಪ್ಪತ್ತೊಂದು ಸಾವಿರದ ಆರುನೂರು. ಒಂದು ದಿನವನ್ನು ಹನ್ನೆರಡು ವರ್ಷಗಳನ್ನಾಗಿ ಮಾಡಿದ್ದರಿಂದ ಎರಡು ಗಂಟೆಗೆ ಎಂದರೆ ಸಾವಿರದ ಎಂಟುನೂರು ಶ್ವಾಸಗಳಿಗೆ ಒಂದು ವರ್ಷ. ಅದಕ್ಕೆ ಒಂದು ತಿಂಗಳು ಎಂದರೆ ನೂರೈವತ್ತು ಶ್ವಾಸಗಳು ಎಂದಾಗುವುದು. ನೂರೈವತ್ತು ಶ್ವಾಸಗಳ ಕಾಲ ಒಂದು ತಿಂಗಳು ಎಂದು ಸಂಕಲ್ಪಿಸಿ ಅದರಂತೆ ಮಾಸವ್ರತವನ್ನು ಆಚರಿಸಿದ ಎಂದರ್ಥ.

೨) ಕೃಷ್ಣ ಹಾಗೆ ಮಾಡುವ ಮೂಲಕ ಅಂದು ವ್ರತ ಮಾಡಿದ ತನ್ನ ಭಕ್ತರಿಗೆಲ್ಲಾ ಹನ್ನೆರಡು ವರ್ಷಗಳ ವ್ರತದ ಫಲ ಲಭಿಸುವಂತೆ ಮಾಡಿದ ಎಂದರ್ಥ. ಒಂದೆಡೆ ಅಸುರ ಮೋಹನವಾದಂತೆ ಮತ್ತೊಂದೆಡೆ ಸಜ್ಜನರಿಗೆ ಸಮ್ಮೋದವೂ ಆಗುವಂತೆ ಮಾಡಿದ್ದು ಕೃಷ್ಣನ ಹಿರಿಮೆ.

೩) ತನ್ನ ನಿರ್ಮಾಲ್ಯವನ್ನು ಪ್ರಾಶನ ಮಾಡುವಂತಹ ಪುಣ್ಯಕಾರ್ಯಕ್ಕೆ *ಹನ್ನೆರಡು ವರ್ಷಗಳ ವ್ರತಫಲವನ್ನು ನೀಡುವ ಶ್ರೀಹರಿಗೆ ಇದಾವ ಲೆಕ್ಕ ಎಂಬುದನ್ನೂ ಗಮನಿಸಬೇಕು.

ಗರುಡಾದಿಗಳ ಹರಿಸೇವೆ

ತತ್ರಾಸ್ಯ ಗರುಡಾದ್ಯಾಶ್ಚ ಪರಿಚರ್ಯಾಂ ಸ್ವಪಾರ್ಷದಾಃ ।
ಚಕ್ರುರ್ಹೋಮಾದಿಕಾಶ್ಚೈವ ಕ್ರಿಯಾಶ್ಚಕ್ರೇ ಜನಾರ್ದನಃ ।
ಸ್ವಾತ್ಮಾನಂ ಪ್ರತಿ ಪಾಪಾನಾಂ ಶಿವಾಯೇತಿ ಪ್ರಕಾಶಯನ್ ॥ ೧೭೩ ॥

---

೧೭೨. ದಶವರ್ಷಾಣಾಂ ಶತಾದುಪರಿ ವಿಂಶತಿಮಾಸಾಃ ಪುನರ್ವರ್ಷದ್ವಯಸ್ಯ ಚತುರ್ವಿಂಶತಿಮಾಸಾಃ। ಏವಂ ಮಿಲಿತ್ವಾ ಶತಾದುಪರಿ ಚತುಶ್ಚತ್ವಾರಿಂಶನ್ಮಾಸಾ ಜಾತಾಃ। ಹಂಸಮಂತ್ರಜಪಾಶ್ಚ ಏಕಸ್ಮಿನ್ನೇವ ದಿನೇ ಏಕವಿಂಶತ್ಸಹಸ್ರಾದುಪರಿ ಷಟ್‌ಶತಾತ್ಮಕಾಃ। ತತ್ರ ದಶಸಹಸ್ರಾಣಾಂ ಶತವಾರಂ ಶತಾನಿ ಭವಂತಿ। ಪಂಚಸಹಸ್ರಾಣಾಂ ಶತವಾರಂ ಪಂಚಾಶತೋ ಭವಂತಿ। ಏವಂ ಚ ಶತಂ ಮಾಸಾಃ ಜಾತಾಃ ಪುನಶ್ಚತುಸ್ಸಹಸ್ರ್ಯಃ ಚತ್ವಾರಿಂಶಚ್ಛತಾನಿ ಭವಂತಿ। ಪುನರ್ದ್ವಿಸಹಸ್ರ್ಯಃ ಚತ್ವಾರಿಂಶತ್ಪಂಚಾಶತೋ ಭವಂತಿ। ಏವಂ ಚ ಶತಾದುಪರಿ ಚತ್ವಾರಿಂಶನ್ಮಾಸಾ ಜಾತಾಃ। ಪುನಷ್ಷಟ್‌ಶತಾನಿ ಸಂತಿ। ತತ್ರಾಪಿ ಚತುಶ್ಶತಾನಾಂ ದ್ವಿಶತಮಧ್ಯಸ್ಥಪಂಚಾಶಚ್ಚತುಷ್ಪಯಯೋಗೇ ತಾನ್ಯಪಿ ಚತ್ವಾರೋ ಮಾಸಾ ಜಾತಾಃ। ಏವಂ ಚ ಏಕಸ್ಮಿನ್ ದಿನೇ ಕ್ರಿಯಮಾಣಹಂಸಮಂತ್ರಜಪಾನಾಂ ದ್ವಾದಶವರ್ಷಮಾಸಾನಾಂ ಚ ಸಮೈವ ಸಂಖ್ಯೇತಿ ಭಾವೇನ "ಮಾಸವ್ರತಂ ಸಾರ್ಧಶತಶ್ವಾಸಕಾಲೈರಕಲ್ಪಯತ್" ಇತ್ಯುಕ್ತಮ್ ॥ -- (ವಾ.)

* ಅಭಿದಧತಿ ಮುನೀಂದ್ರಾ ದ್ವಾದಶಾಬ್ದೋಪವಾಸಪ್ರತಿಮಫಲಮಲಂ ಯತ್ಸೇವನಂ ಭಕ್ತಿಯುಕ್ತಮ್ ।
ಅಧಿಕಮಮರನದ್ಯಾದ್ಯಾಪ್ಲವಾದ್ಧನ್ಯಮಾನ್ಯಾದಪಿಬದಲವಬೋಧೋ ವಿಷ್ಣುಪಾದೋದಕಂ ತತ್॥
– ಸುಮಧ್ವವಿಜಯ(೧೪/೨೯)

ಅ: ಆಗ ಗರುಡ ಮೊದಲಾದ ಅವನ ಪರಿವಾರ ದೇವತೆಗಳು ಕೃಷ್ಣನ ಸೇವಾಕಾರ್ಯವನ್ನು ಮಾಡಿದರು. ಕೃಷ್ಣನು ಹೋಮ ಮೊದಲಾದಂತಹ ಕಾರ್ಯಗಳನ್ನು ಮಾಡಿದ. ಅವನು ಹಾಗೆ ಮಾಡಿದ್ದು ತನ್ನನ್ನು ಕುರಿತೇ ಆದರೂ ಅಸುರರಿಗೆ ಮಾತ್ರ ಶಿವನನ್ನು ಕುರಿತು ಎಂಬಂತೆ ತೋರಿಸಿದ.

ವಿ: ೧) ಗರುಡ ಮೊದಲಾದ ದೇವತೆಗಳು ಸಮಿತ್ತು ಮೊದಲಾದವುಗಳನ್ನು ತಂದಿತ್ತು ಕೃಷ್ಣನ ಯಜ್ಞಕಾರ್ಯದಲ್ಲಿ ಸೇವೆ ಸಲ್ಲಿಸಿದ ವಿವರ ಹರಿವಂಶದಲ್ಲಿ ಬಂದಿದೆ. ಅಲ್ಲಿ ವಾಹನವಾದ ಗರುಡ ಸಮಿತ್ತನ್ನೂ, ಸುದರ್ಶನಚಕ್ರ ಹೂಗಳನ್ನೂ ಶಂಖ ರಕ್ಷಣೆಯನ್ನೂ, ನಂದಕ ಖಡ್ಗ, ದರ್ಭೆಗಳನ್ನೂ ಅರ್ಪಿಸಿದರು ಎಂದಿದೆ. ಕೌಮೋದಕಿ ಸನಿಹದಲ್ಲಿದ್ದು ಸೇವೆ ಮಾಡಿತು. ಶಾರ್ಙ್ಗ ರಕ್ಷಣೆಯ ಕಾರ್ಯವನ್ನು ನಿರ್ವಹಿಸಿತು.

೨) ಇಲ್ಲಿ ಚಕ್ರಾದಿಗಳು ಎಂದರೆ ಅವುಗಳ ಅಭಿಮಾನಿ ದೇವತೆಗಳಾದ ಕಾಮಾದಿಗಳು ಎಂದು ತಿಳಿಯಬೇಕು. ಆ ಅಭಿಮಾನಿ ದೇವತೆಗಳ ವಿವರ ಮೂರನೆಯ ಅಧ್ಯಾಯದಲ್ಲಿದೆ(೭೩–೭೫).

ಕೃಷ್ಣನ ಬಳಿಗೆ ಬ್ರಹ್ಮಾದಿಗಳ ಆಗಮನ

ಏವಂಸ್ಥಿತಂ ತಮರವಿಂದದಲಾಯತಾಕ್ಷಂ
ಬ್ರಹ್ಮೇಂದ್ರಪೂರ್ವಸುರಯೋಗಿವರಪ್ರಜೇಶಾಃ।
ಅಭ್ಯಾಯಯುಃ ಪಿತೃಮುನೀಂದ್ರಗಣೈಃ ಸಮೇತಾ
ಗಂಧರ್ವಯಕ್ಷವರಸಿದ್ಧವಿಹಂಗಮಾದ್ಯಾಃ ॥ ೧೭೪ ॥

ಅ: ಹೀಗೆ ತಪಸ್ಸಿನಲ್ಲಿ ತೊಡಗಿದ ಪುಂಡರೀಕಾಕ್ಷನಾದ ಕೃಷ್ಣನ ಬಳಿಗೆ ಬ್ರಹ್ಮ, ಇಂದ್ರ ಮೊದಲಾದ ದೇವತೆಗಳು, ಯೋಗಿ ಶ್ರೇಷ್ಠರು, ಪ್ರಜಾಪತಿಗಳು, ಪಿತೃಗಣ, ಮುನೀಂದ್ರ ಗಣಗಳೊಂದಿಗೆ ಕೂಡಿ ಧಾವಿಸಿ ಬಂದರು. ಗಂಧರ್ವರು, ಸಿದ್ಧರು, ಶ್ರೇಷ್ಠ ಯಕ್ಷರು, ಪಕ್ಷಿಗಳು ಮೊದಲಾದವರೂ ಬಂದರು.

---

೧೭೩. ಗರುಡಃ ಕಶ್ಯಪಸುತ ಇಂಧನಾನಿ ಸಮಾಚಿನೋತ್ ।
ಹೇಮಾರ್ಥಂ ವಾಸುದೇವಸ್ಯ ಚರತಸ್ತಪ ಉತ್ತಮಮ್ ॥ – ಹರಿವಂಶ (ಭವಿಷ್ಯ. ೮೪/೨೦)

ಗರುಡಾಹೃತಕಾಷ್ಠಂ ತು ಜಟಿಲಂ ಚೀರವಾಸಸಮ್ ।
ಚಕ್ರೇಣಾನೀತಕುಸುಮಂ ಖಡ್ಗಾನೀತಕುಶಂ ತಥಾ ॥
ಗದಾಕೃತಸಮಾಚಾರಂ ದೇವದೇವಂ ಜನಾರ್ದನಮ್ ।
ಇಂದ್ರಾದ್ಯೈರ್ದೇವಸಂಘೈಶ್ಚ ವೃತಂ ಮುನಿಗಣೈಃ ಸಹ ॥ – ಹರಿವಂಶ (ಭವಿಷ್ಯ. ೮೭/೩,೪)

ಚಕ್ರಶಂಖಾದಿಶಬ್ದೈಃ ತತ್ತದಭಿಮಾನಿದೇವತಾ ಗೃಹ್ಯಂತೇ ॥ – ಹರಿವಂಶ (ಭವಿಷ್ಯ. ೮೫/೧–೩)

ವಿ: ಇಲ್ಲಿ ಯೋಗಿಗಳು ಎಂದರೆ ಸನಕಾದಿಗಳು, ಪ್ರಜಾಪತಿಗಳು ಎಂದರೆ ದಕ್ಷ ಮೊದಲಾದವರು, ಪಕ್ಷಿಗಳು ಎಂದರೆ ಹಂಸ ಮೊದಲಾದವುಗಳು ಎಂದು ತಿಳಿಯಬೇಕು.

ಹರಿಪೂಜೆಗೆಂದು ಧಾವಿಸಿದ ಹರ

ಶರ್ವೋಽಪಿ ಸರ್ವಸುರದೈವತಮಾತ್ಮದೈವ-
ಮಾಯಾತಮಾತೃಗೃಹಸನ್ನಿಧಿಮಾಶ್ವವೇತ್ಯ।
ಅಭ್ಯಾಯಯೌ ನಿಜಗಣೈಃ ಸಹಿತಃ ಸಭಾರ್ಯೋ
ಭಕ್ತ್ಯಾತಿಸಂಭ್ರಮಗೃಹೀತಸಮರ್ಹಣಾಗ್ರ್ಯಃ ॥ ೧೭೫ ॥

ಅ: ಶಿವನೂ ಸಹ ಸಕಲ ದೇವತೆಗಳಿಗೆ ಒಡೆಯನೂ, ತನ್ನ ಸ್ವಾಮಿಯೂ ಆದ ಶ್ರೀಹರಿಯು ತನ್ನ ಗೃಹದ ಬಳಿಗೆ ಬಂದಿರುವುದನ್ನು ನೋಡಿ ಬೇಗನೇ ತನ್ನ ಗಣಗಳೊಂದಿಗೆ ಪತ್ನೀ-ಸಮೇತನಾಗಿ ಭಕ್ತಿಯಿಂದ ತುಂಬಾ ಸಂಭ್ರಮದಿಂದ ಪೂಜಾ ದ್ರವ್ಯಗಳನ್ನು ತೆಗೆದುಕೊಂಡು ಧಾವಿಸಿದ.

ವಿ: ೧) ಸಮುದ್ರರಾಜನಾದ ವರುಣ ತನ್ನ ಬಳಿಗೆ ಆಗಮಿಸಿದ್ದ ಶ್ರೀರಾಮ ರೂಪದ ಶ್ರೀಹರಿಯನ್ನು ಸಪತ್ನೀಕನಾಗಿ ಪೂಜಾ ದ್ರವ್ಯಗಳಿಂದ ಆರಾಧಿಸಿದಂತೆ, ಕೈಲಾಸಪತಿಯಾದ ಶಿವ ತನ್ನ ಮನೆಯಾದ ಕೈಲಾಸಕ್ಕೆ ಆಗಮಿಸಿದ ಕೃಷ್ಣ ರೂಪದ ಶ್ರೀಹರಿಯನ್ನು ಆರಾಧಿಸಿದ ಎಂದು ತಿಳಿಯಬೇಕು.

೨) ಶಿವ ಅಲ್ಲಿಗೆ ಆಗಮಿಸಿದ್ದು ಕೃಷ್ಣನ ತಪಸ್ಸಿಗೆ ಮೆಚ್ಚಿಯಲ್ಲ, ತನ್ನ ಪ್ರಾರ್ಥನೆಗೆ ಮೆಚ್ಚಿ ಕೃಷ್ಣ ಆಗಮಿಸಿದ್ದಾನೆ ಎಂಬ ಭಕ್ತಿಯಿಂದ ಮಾತ್ರ ಎಂಬುದು ಇಲ್ಲಿಯ ಮುಖ್ಯಪ್ರಮೇಯ. ಶ್ರೀವಾದಿರಾಜರು ತಮ್ಮ ಹರಿಭಕ್ತಿಲತಾಕೃತಿಯಲ್ಲಿ 'ಕುಮಾರಶ್ಚಿತ್ ಪಿತರಂ ವಂದಮಾನಂ...' ಎಂಬ ಋಗ್ವೇದ(೨/೩೩/೧೨) ಮಂತ್ರವನ್ನು ಉಲ್ಲೇಖಿಸಿ ಇದನ್ನು ಸ್ಫುಟಪಡಿಸಿರುವರು (ಹರಿಭಕ್ತಿಲತಾ ಶ್ಲೋ. ೪೦–೬೧).

ಹರಿಯ ಪದತಲದಲ್ಲಿ ಹರ

ಅಭ್ಯೇತ್ಯ ಪಾದಯುಗಲಂ ಜಗದೇಕಭರ್ತುಃ
ಕೃಷ್ಣಸ್ಯ ಭಕ್ತ್ಯಭರಿತಃ ಶಿರಸಾ ನನಾಮ ।
ಚಕ್ರೇ ಸ್ತುತಿಂ ಚ ಪರಮಾಂ ಪರಮಸ್ಯ ಪೂರ್ಣ-
ಷಾಡ್ಗುಣ್ಯವಿಗ್ರಹವಿದೋಷಮಹಾವಿಭೂತೇಃ ॥ ೧೭೬ ॥

ಅ: ಭಕ್ತಿಭರಿತನಾಗಿ ಜಗತ್ತಿನ ಮುಖ್ಯಸ್ವಾಮಿಯಾದ ಕೃಷ್ಣನ ಎರಡು ಪಾದಗಳನ್ನು ಶಿವ ಸಮೀಪಿಸಿ ತಲೆಬಾಗಿ ನಮಸ್ಕರಿಸಿದ. ಪರಿಪೂರ್ಣಷಡ್ಗುಣದೇಹನೂ, ಸಕಲದೋಷದೂರನೂ, ಮಹಾ ಐಶ್ವರ್ಯಸಂಪನ್ನನೂ ಆದ ಸರ್ವೋತ್ತಮನಾದ ಆ ಶ್ರೀಹರಿಯನ್ನು ಕುರಿತು ಉತ್ತಮವಾದ ಸ್ತುತಿಯನ್ನು ಮಾಡಿದ.

ವಿ: ಶಿವ ಆಗ ಕೃಷ್ಣನಿಗೆ ಕೇಶವಾದಿ ನಾಮ ನಿರ್ವಚನಪೂರ್ವಕವಾಗಿ ಮಾಡಿದ ಅಪೂರ್ವ ಸ್ತೋತ್ರ ಹರಿವಂಶದಲ್ಲಿದೆ (ಭವಿಷ್ಯಪರ್ವ, ಅಧ್ಯಾಯ ೯೯). ಇಲ್ಲಿಯ ಕೇಶವಶಬ್ದ ನಿರ್ವಚನವನ್ನು ಶ್ರೀಮದಾಚಾರ್ಯರು ಗೀತಾಭಾಷ್ಯದಲ್ಲಿ(೨/೫೪) ಉಲ್ಲೇಖಿಸಿರುವರು :

ತಥಾಹಿ ನಿರುಕ್ತಿಃ ಕೃತಾ ಹರಿವಂಶೇಷು ರುದ್ರೇಣ ಕೈಲಾಸಯಾತ್ರಾಯಾಮ್।

ಕೃಷ್ಣೋಽಪ್ಯಯೋಗ್ಯಜನಮೋಹನಮೇವ ವಾಂಛನ್
ತುಷ್ಟಾವ ರುದ್ರಹೃದಿಗಂ ನಿಜಮೇವ ರೂಪಮ್।
ರುದ್ರೋ ನಿಶಮ್ಯ ತದುವಾಚ ಸುರಾನ್ ಸಮಸ್ತಾನ್
ಸತ್ಯಂ ವದಾಮಿ ಶ್ರುಣುತಾದ್ಯ ವಚೋ ಮದೀಯಮ್ ॥ ೧೭೭ ॥

ಅ: ಕೃಷ್ಣನೂ ಅಯೋಗ್ಯ ಜನರಿಗೆ ಮೋಹ ಉಂಟಾಗಲಿ ಎಂದು ಬಯಸಿ ರುದ್ರಾಂತರ್ಯಾಮಿಯಾದ ತನ್ನ ರೂಪವನ್ನೇ ಸ್ತುತಿಸಿದ. ಅದನ್ನು ಕೇಳಿ ಶಿವನು ಸಕಲ ದೇವತೆಗಳಿಗೂ ತಿಳಿಸಿದ 'ನಾನು ಸತ್ಯವನ್ನೇ ನುಡಿಯುತ್ತಿರುವೆನು, ನನ್ನ ಮಾತನ್ನು ಈಗ ಕೇಳಿ'

ವಿ: ೧) ಶಿವ ಕೃಷ್ಣನನ್ನು ಸ್ತುತಿಸಿದಂತೆ ಕೃಷ್ಣ ಶಿವನನ್ನು ಸ್ತುತಿಸಿದ ಎಂಬಂತೆ ಹರಿವಂಶದಲ್ಲಿ ಕಾಣುವುದು. ಅದರ ಭಾವವನ್ನು ಇಲ್ಲಿ ವಿವರಿಸಿರುವರು. ಅಲ್ಲಿ ಕೃಷ್ಣ ಸ್ತುತಿಸಿದ್ದು ಶಿವನನ್ನಲ್ಲ, ಶಿವನೊಳಗಿರುವ ತನ್ನದೇ ಆದ ಶಿವ ಎಂಬ ರೂಪವನ್ನು ಎಂದರ್ಥ.

೨) ಶ್ರೀಹರಿಗೆ ಶಿವ ಎಂಬ ಹೆಸರಿನ ಆ ರೂಪವಿರುವ ವಿವರವನ್ನು ಈಗಾಗಲೇ ಮೂರನೇ ಅಧ್ಯಾಯದಲ್ಲಿ ತಿಳಿಸಿರುವರು (೩/೧೯).

---

೧೭೭. ಅಂಜಲಿಂ ಸಂಪುಟಂ ಕೃತ್ವಾ ವಿಷ್ಣುಮುದ್ದಿಶ್ಯ ಶಂಕರಃ।
ಉಮಯಾ ಸಾರ್ಧಮೀಶಾನೋ ಯಾಥಾತ್ಮ್ಯಂ ವಕ್ತುಮೈಹತ ॥ – ಹರಿವಂಶ (ಭವಿಷ್ಯಪರ್ವ)

ಹರಿರೇಕಃ ಸದಾ ಧ್ಯೇಯೋ ಭವದ್ಭಿಃ ಸತ್ವಮಾಸ್ಥಿತೈಃ।
ನಾನ್ಯೋ ಜಗತಿ ದೇವೋಽಸ್ತಿ ವಿಷ್ಣೋರ್ನಾರಾಯಣಾತ್ ಪರಃ ॥
(ದೇವತೆಗಳನ್ನು ಕುರಿತು ಶಿವನ ವಚನ) – ಹರಿವಂಶ। (೮೮/೧೬೯/೮)

ಹರ ಸಾರಿದ ಹರಿಸರ್ವೋತ್ತಮತ್ವ

ವಿಷ್ಣುಃ ಸಮಸ್ತಸುಜನೈಃ ಪರಮೋಽಭ್ಯುಪೇಯ-
ಸ್ತತ್ಪ್ರಾಪ್ತಯೇಽಹಮನಿಲೋಽಥ ರಮಾಽಭ್ಯುಪೇಯಾಃ ।
ಏಷ ಹ್ಯಶೇಷನಿಗಮೋತ್ಥವಿನಿರ್ಣಯೋಽರ್ಥೋ
ಯದ್ವಿಷ್ಣುರೇವ ಪರಮೋ ಮಮ ಚಾಬ್ಜಯೋನೇಃ ॥ ೧೭೮ ॥

ಅವ್ಯಕ್ತತಃ ಸಕಲಜೀವಗಣಾಚ್ಚ ನಿತ್ಯ-
ಮಿತ್ಯೇವ ನಿಶ್ಚಯ ಉತೈತದನು ಸ್ಮರಧ್ವಮ್ ।
ಇತ್ಯುಕ್ತವತ್ಯಖಿಲದೇವಗಣಾ ಗಿರೀಶೇ
ಕೃಷ್ಣಂ ಪ್ರಣೇಮುರತಿವೃದ್ಧರಮೇಶಭಕ್ತ್ಯಾ ॥ ೧೭೯ ॥

ಅ: 'ಮಹಾವಿಷ್ಣುವು ಸಮಸ್ತ ಜನರಿಂದಲೂ ಆರಾಧಿಸಲ್ಪಡಬೇಕಾದ ಸರ್ವೋತ್ತಮ. ಅವನನ್ನು ಹೊಂದಲು ನಾನು, ವಾಯುದೇವರು, ಮಹಾಲಕ್ಷ್ಮಿ ಸಾಧನವಾಗಿರುವೆವು. ವಿಷ್ಣುವೇ ಸರ್ವೋತ್ತಮ, ನನಗೂ, ಬ್ರಹ್ಮನಿಗೂ ಮಿಗಿಲಾದವನು ಎಂಬುದೇ ಸಕಲ ವೇದಾದಿಶಾಸ್ತ್ರಗಳ ಸುನಿಶ್ಚಿತವಾದ ಅರ್ಥ'.

'ಇವನು ಮಹಾಲಕ್ಷ್ಮಿಗಿಂತಲೂ, ಸಕಲ ಜೀವ ಸಮುದಾಯಕ್ಕಿಂತಲೂ ಸದಾ ಮಿಗಿಲಾದವನು ಎಂಬುದೇ ನಿರ್ಣಯ. ಇವನನ್ನೇ ಸದಾ ಪುನಃ ಪುನಃ ಸ್ಮರಣೆಮಾಡುತ್ತಿರಿ' - ಹೀಗೆ ಶಿವನು ನುಡಿಯಲು ಎಲ್ಲ ದೇವತೆಗಳ ಗುಂಪುಗಳು ಅತ್ಯಂತ ಹೆಚ್ಚಿದ ಹರಿಭಕ್ತಿಯಿಂದಾಗಿ ಕೃಷ್ಣನನ್ನು ಸಾಷ್ಟಾಂಗ ವಂದಿಸಿದರು.

ಎ: ಶಿವನು ಹರಿಸರ್ವೋತ್ತಮತ್ವವನ್ನು ನಿರೂಪಿಸಿದ ವಿವರ ಹರಿವಂಶದಲ್ಲಿದೆ(೩/೮೯/೭–೧೩).

ಇಂದ್ರಾದಿಗಳಿಗೆ ವಿಶೇಷಜ್ಞಾನಲಾಭ

ಉಕ್ತೈರನ್ಯೈಶ್ಚ ಗಿರಿಶವಾಕ್ಯೈಸ್ತತ್ತ್ವವಿನಿರ್ಣಯೈಃ ।
ಕೃಷ್ಣಸ್ಯೈವ ಗುಣಾಖ್ಯಾನೈಃ ಪುನರಿಂದ್ರಾದಿದೇವತಾಃ ।
ಜ್ಞಾನಾಭಿವೃದ್ಧಿಮಗಮನ್ ಪುರಾಽಪಿ ಜ್ಞಾನಿನೋಽಧಿಕಮ್ ॥ ೧೮೦ ॥

ಅ: ಅದರಂತೆ ಕೃಷ್ಣನನ್ನೇ ವರ್ಣಿಸುವ ತತ್ವನಿರ್ಣಾಯಕವಾದ ಶಿವನ ಇತರ ಮಾತುಗಳಿಂದಲೂ ಮುಂಚೆಯೇ ಜ್ಞಾನಿಗಳಾಗಿದ್ದ ಇಂದ್ರಾದಿ ದೇವತೆಗಳೆಲ್ಲ ಇನ್ನೂ ವಿಶೇಷವಾದ ಜ್ಞಾನಾಭಿವೃದ್ಧಿಯನ್ನು ಪಡೆದರು.

---

೧೭೮. ಅಭ್ಯುಪಾಯಾಃ ಸಮೀಚೀನೋಪಾಯಾಃ । –(ವೇ.)

ವಿ: ಶಿವನ ಇಂತಹ ಅಪೂರ್ವ ನಿರ್ಣಾಯಕ ವಚನಗಳಿಂದ ಅವನಿಗಿಂತ ಅವರರಾದ ಇಂದ್ರಾದಿ ದೇವತೆಗಳ ತತ್ತ್ವಜ್ಞಾನ ಬಹಳವಾಗಿ ಹೆಚ್ಚಿತು ಎಂದರ್ಥ. ಇಂತಹ ದೇವತಾ ಜ್ಞಾನವೃದ್ಧಿಗಾಗಿಯೂ ಸಹ ಕೃಷ್ಣ ಅ ಕೈಲಾಸಯಾತ್ರೆಯ ಪ್ರಸಂಗವನ್ನು ಸಂಕಲ್ಪಿಸಿದ್ದ ಎಂದು ತಿಳಿಯಬೇಕು.

ಸರ್ವದೇವೋತ್ತಮಂ ತಂ ಹಿ ಜಾನಂತ್ಯೇವ ಸುರಾಃ ಸದಾ ।
ತಥಾಽಪಿ ತತ್ಪ್ರಮಾಣಾನಾಂ ಬಹುತ್ವಾದ್ಯತ್ರ ಸಂಶಯಾಃ ।
ಯುಕ್ತಿಮಾತ್ರಾತ್ ತೇಽಪಿ ರುದ್ರವಾಕ್ಯಾದಪಗತಾಸ್ತದಾ ॥ ೧೮೧ ॥

ಅ: ದೇವತೆಗಳು ಸದಾ ಶ್ರೀಹರಿಯನ್ನು ಸರ್ವದೇವತೆಗಳಿಗಿಂತ ಮಿಗಿಲಾದವನು ಎಂದು ತಿಳಿದೇ ಇರುವರು. ಆದರೂ ಪ್ರಮಾಣಗ್ರಂಥಗಳು ಅಪಾರವಾದ್ದರಿಂದ ಎಲ್ಲಿ ಕೇವಲ ಯುಕ್ತಿಯಿಂದಾಗಿ ಸಂಶಯಗಳು ಹುಟ್ಟಿದ್ದವೋ ಅವೆಲ್ಲ ರುದ್ರದೇವರ ವಾಕ್ಯಗಳಿಂದ ಪರಿಹಾರ-ಹೊಂದಿದವು.

ವಿ: ವೇದಗಳು ಅನಂತ; ಪಂಚರಾತ್ರ ಶತಕೋಟಿ; ಮೂಲರಾಮಾಯಣ ಶತಕೋಟಿ. ಹೀಗೆ ಪ್ರಮಾಣಗ್ರಂಥಗಳು ಅಸಂಖ್ಯವಾದ್ದರಿಂದ ಅವುಗಳನ್ನು ಮೇಲ್ನೋಟಕ್ಕೆ ಅಷ್ಟೇ ನೋಡಿದಾಗ ವಿಭಿನ್ನವಾದ ವಾಕ್ಯಗಳಿಂದಾಗಿ ಬರುವ ಸಂಶಯಗಳು, ಅದರಂತೆ ಕುತರ್ಕದಿಂದ ಹುಟ್ಟುವ ಸಂಶಯಗಳು, ಶಿವನ ವಾಕ್ಯದಿಂದ ಪರಿಹಾರ ಹೊಂದಿದವು ಎಂದರ್ಥ. ಶಿವನು ಮಾಡಿದ ವಿಷ್ಣುಸ್ತುತಿ ಅವರೆಲ್ಲ ಪ್ರತ್ಯಕ್ಷ ಕಂಡದ್ದರಿಂದ ಜ್ಞಾನದಾರ್ಢ್ಯಕ್ಕೆ ಪೂರಕವಾಯಿತು ಎಂದರ್ಥ.

ಜಗತ್ತಿನ ತಂದೆಗೆ ಪುತ್ರಪ್ರಾಪ್ತಿವರ

ತತಃ ಕೃಷ್ಣಃ ಸುತವರಂ ತ್ವತ್ತ ಆದಾಸ್ಯ ಇತ್ಯಜಃ ।
ಯದುಕ್ತವಾನ್ ಶಿವಂ ಪೂರ್ವಂ ಸತ್ಯಂ ಕರ್ತುಂ ತದಬ್ರವೀತ್ ॥ ೧೮೨ ॥

ಅ: ಬಳಿಕ ಕೃಷ್ಣ 'ನಿನ್ನಿಂದ ಪುತ್ರಪ್ರಾಪ್ತಿಯ ವರವನ್ನು ಪಡೆದುಕೊಳ್ಳುವೆ' ಎಂದು ಹಿಂದೆ ತಾನು ಶಿವನಿಗೆ ಹೇಳಿದ್ದ ಮಾತನ್ನು ಸತ್ಯ ಮಾಡಲೆಂದು ನುಡಿದ.

ವರದ ಹಿನ್ನೆಲೆ

ಪುತ್ರಂ ದೇಹೀತಿ ಸೋಽಪ್ಯಾಹ ಪೂರ್ವಮೇವ ಸುತಸ್ತವ ।
ಜಾತಃ ಪ್ರದ್ಯುಮ್ನನಾಮಾ ಯಃ ಸ ಮದ್ದತ್ತಃ ಪ್ರವಾದತಃ ॥ ೧೮೩ ॥

---

೧೮೩. ಪ್ರವಾದತ ಇತ್ಯಸ್ಯ ಸ ಪ್ರದ್ಯುಮ್ನಃ ಮದ್ದತ್ತ ಇತಿ ಪ್ರವಾದತಃ ಪ್ರವಾದೋ ಭವಿಷ್ಯತೀತ್ಯರ್ಥಃ । – (ಸ.)

ಅ: 'ನನಗೆ ಪುತ್ರನನ್ನು ನೀಡು', ಶಿವ ನುಡಿದ 'ನಿನಗೆ ಹಿಂದೆಯೇ ಪ್ರದ್ಯುಮ್ನ ಎಂಬ ಮಗ ಜನಿಸಿರುವನು, ಅವನನ್ನೇ ನಾನು ನೀಡಿದ ಮಗ ಎಂದು ಜನ ತಿಳಿದುಕೊಳ್ಳುವಂತಾಗಲಿ'.

ವಿ: ಶಿವ ಪುತ್ರಪ್ರಾಪ್ತಿಯ ವರವನ್ನೇನೂ ನೀಡಲಿಲ್ಲ, ಹಾಗೆ ನೀಡುವ ಅವಶ್ಯಕತೆ ಸರ್ವಥಾ ಇರಲೂ ಇಲ್ಲ. ಅದಕ್ಕೆಂದೇ ನುಡಿದ 'ನಿನಗೀಗಾಗಲೇ ಇರುವ ಮಕ್ಕಳಲ್ಲಿ ಪ್ರದ್ಯುಮ್ನ ಎಂಬವನು ನನ್ನ ವರದಿಂದ ಹುಟ್ಟಿದವನು ಎಂದು ಜನ ತಪ್ಪಾಗಿ ತಿಳಿದುಕೊಳ್ಳಲಿ'.

ಪುರಾ ದಗ್ಧೋ ಮಯಾ ಕಾಮಸ್ತದಾಽಯಾಚತ ಮಾಂ ರತಿಃ ।
ದೇಹಿ ಕಾಂತಂ ಮಮೇತ್ಯೇವ ತದಾ ತಾಮಹಮಬ್ರುವಮ್ ॥ ೧೮೪ ॥

ಅ: 'ನನ್ನಿಂದ ಹಿಂದೆ ಕಾಮನು ಸುಟ್ಟುಹೋದ. ಆಗ ಅವನ ಪತ್ನಿಯಾದ ರತಿ ನನ್ನನ್ನು ಕೇಳಿಕೊಂಡಳು 'ನನ್ನ ಗಂಡನನ್ನು ನೀಡು'. ಆಗ ನಾನು ಅವಳಿಗೆ ಹೇಳಿದೆ:

ವಿ: ಶಿವನಿಂದ ಕಾಮದಹನವಾದಾಗ ರತಿ ಪುನಃ ತನ್ನ ಪತಿಯ ಪ್ರಾಪ್ತಿಯನ್ನು ನೀಡಲು ಪ್ರಾರ್ಥಿಸಿದಾಗ ಶಿವ ನೀಡಿದ್ದ ವರ ಇದು.

ಉತ್ಪತ್ಸ್ಯತೇ ವಾಸುದೇವಾದ್ ತದಾ ತಂ ಪತಿಮಾಪ್ಸ್ಯತಿ ।
ಇತ್ಯತೋಽಸೌ ಮಯಾ ದತ್ತ ಇವ ದೇವ ತ್ವದಾಜ್ಞಯಾ ॥ ೧೮೫ ॥

ಅ: 'ಕೃಷ್ಣನಿಂದ ಇವನು ಪ್ರದ್ಯುಮ್ನನಾಗಿ ಹುಟ್ಟಿದಾಗ ಅವನನ್ನು ನೀನು ಪತಿಯನ್ನಾಗಿ ಹೊಂದುವಿ' ಎಂದು ಹೇಳಿದ್ದೆ. ದೇವನಾದ ಶ್ರೀಹರಿಯೆ! ಅವನೇ ಈಗ ನಿನ್ನ ಆಜ್ಞೆಯಂತೆ ನನ್ನಿಂದ ಕೊಡಲ್ಪಟ್ಟವನೆಂದಾಗಲಿ.

ವಿ: ಈ ಶಿವನ ವರದಿಂದಾಗಿಯೇ ಹಾಗೆ ಕೃಷ್ಣ ಪುತ್ರನಾಗಿ ಜನಿಸಿದ್ದ ಪ್ರದ್ಯುಮ್ನನನ್ನು ಶಂಬರನ ವಶದಲ್ಲಿದ್ದ ರತಿಯು ಪತಿಯನ್ನಾಗಿ ಪಡೆಯಲು ಸಾಧ್ಯವಾಯಿತು ಎಂದು ತಿಳಿಯಬೇಕು.

ದಾಸೋಽಸ್ಮಿ ತವ ದೇವೇಶ ಪಾಹಿ ಮಾಂ ಶರಣಾಗತಮ್ ।
ಇತ್ಯುಕ್ತ್ವಾಽಭಿಪ್ರಣಮ್ಯೈನಂ ಪುನರಾಹ ಸುರಾನ್ ಹರಃ ॥ ೧೮೬ ॥

ಅ: 'ದೇವತೆಗಳ ಒಡೆಯನಾದ ಕೃಷ್ಣನೇ ನಾನು ನಿನಗೆ ದಾಸನಾಗಿರುವೆ. ಶರಣಾಗತನಾದ ನನ್ನನ್ನು ಪಾಲಿಸು'. ಹೀಗೆ ನುಡಿದು ಕೃಷ್ಣನನ್ನು ನಮಸ್ಕರಿಸಿ ಶಿವ ದೇವತೆಗಳಿಗೆ ಮತ್ತೆ ತಿಳಿಸಿದ.

ಶಿವ ತಿಳಿಸಿದ ಕೈಲಾಸಯಾತ್ರೆಯ ಮರ್ಮ

ಯದರ್ಥಮೇಷ ಆಯಾತಃ ಕೇಶವಃ ಶ್ರುಣುತಾಮರಾಃ ॥ ೧೮೭ ॥

ಅ: 'ದೇವತೆಗಳೇ, ಕೃಷ್ಣ ಇಲ್ಲಿಗೆ ಏತಕ್ಕೋಸ್ಕರ ಬಂದಿರುವನು ಎಂದು ತಿಳಿಸುವೆನು ಕೇಳಿರಿ'

ವಕ್ರಾಸುರನ ವಧೆ

ಯೋಽಸುರೋ ವಕ್ರನಾಮಾಸೀದವಧ್ಯೋ ಬ್ರಹ್ಮಣೋ ವರಾತ್ ॥।
ತದಾ ಜಾತಾದ್ವಾಸುದೇವಪುತ್ರಾತ್ ಕಾಮಾದೃತೇ ಕ್ವಚಿತ್ ॥ ೧೮೮ ॥

ಅ: ವಕ್ರ ಎಂಬ ಹೆಸರಿನ ಅಸುರ ಬ್ರಹ್ಮನ ವರದಿಂದಾಗಿ ಅವಧ್ಯನಾಗಿದ್ದ. ಆಗ ತಾನೇ ಜನಿಸುವ ಕೃಷ್ಣಪುತ್ರನಾದ ಮನ್ಮಥನ ಹೊರತು ಎಲ್ಲೂ ಅವನು ಸಾಯುವಂತಿರಲಿಲ್ಲ.

ತಂ ಹಂತುಮೇವ ಪುತ್ರಂ ಸ್ವಂ ಪ್ರದ್ಯುಮ್ನಮುದರೇಽಪ್ಯ ಚ ।
ಆಯಾತ ಇಹ ತಂ ಚಾಪಿ ದದಾಹ ಸ್ವೋದರಾತ್ ಸುತಮ್ ।
ನಿಃಸಾರಯಿತ್ವಾ ಕಕ್ಷಂ ಚ ದಗ್ಧಂ ಪಶ್ಯತ ದೇವತಾಃ ॥ ೧೮೯ ॥

ಅ: ಅವನನ್ನು ಕೊಲ್ಲಲೆಂದೇ ತನ್ನ ಪುತ್ರನಾದ ಪ್ರದ್ಯುಮ್ನನನ್ನು ತನ್ನ ಉದರದಲ್ಲಿರಿಸಿ-ಕೊಂಡು ಕೃಷ್ಣ ಇಲ್ಲಿಗೆ ಬಂದ. ಇಲ್ಲಿ ತನ್ನ ಉದರದಿಂದ ಮಗನನ್ನು ಹೊರತಂದು ಆ ಅಸುರನನ್ನು ಸುಟ್ಟುಹಾಕಿದ. ಈಗ ಕಾಡೊಂದು ಸುಟ್ಟಿದ್ದನ್ನು ನೋಡಿರಿ.

ಜ್ವಾಲಾಮಾಲಾಕರಾಲೇನ ಸ್ವತೇಜೋವರ್ಧಿತೇನ ಚ ।
ಪ್ರದ್ಯುಮ್ನೇನೈವ ತಂ ದೈತ್ಯಂ ದಗ್ಧ್ವಾ ವನಸಮನ್ವಿತಮ್ ॥ ೧೯೦ ॥

ಅ: ಜ್ವಾಲೆಗಳ ಮಾಲೆಯಿಂದಾಗಿ ಕರಾಳನಾದ ತನ್ನ ತೇಜಸ್ಸಿನಿಂದ ವರ್ಧಿತನಾದ ಆ ಪ್ರದ್ಯುಮ್ನನಿಂದಲೇ ವನದೊಂದಿಗೆ ಆ ದೈತ್ಯನನ್ನು ಕೃಷ್ಣ ಸುಟ್ಟುಹಾಕಿದ.

ವಿ: ಈ ಪ್ರಸಂಗ ನಡೆಯುತ್ತಿದ್ದಂತೆ ಅಲ್ಲಿಯ ಕಾಡೊಂದು ಸುಟ್ಟು ಬೂದಿಯಾಯಿತು. ಕಾಡಿನೊಂದಿಗೆ ವಕ್ರ ಎಂಬ ಅಸುರ ಪ್ರದ್ಯುಮ್ನನಿಂದ ನಾಶಗೊಂದಿದ್ದಕ್ಕೆ ಅದು ಸೂಚಕವಾಯಿತು ಎಂದರ್ಥ.

ಪುನಶ್ಚ ಸ್ವೋದರೇ ಪುತ್ರಂ ಸ್ಥಾಪಯಾಮಾಸ ಕೇಶವಃ ।
ಸದ್ಯೋ ಗರ್ಭಂ ಪುನಸ್ತಂ ಚ ರುಗ್ಮಿಣ್ಯಾಂ ಜನಯಿಷ್ಯತಿ ।
ಪೂರ್ವವತ್ ಕ್ಷಣಮಾತ್ರೇಣ ಯುವಾ ಚ ಸ ಭವಿಷ್ಯತಿ ॥ ೧೯೧ ॥

ಅ: ಕೃಷ್ಣನು ಪುನಃ ತನ್ನ ಉದರದಲ್ಲಿ ತನ್ನ ಪುತ್ರನನ್ನು ಇರಿಸಿಕೊಂಡ. ಸದ್ಯೋಗರ್ಭವನ್ನಾಗಿ ಪುನಃ ಅವನನ್ನು ರುಗ್ಮಿಣಿಯಲ್ಲಿ ಹುಟ್ಟಿಸುವನು. ಮುಂಚಿನಂತೆ ಅವನು ಕ್ಷಣಮಾತ್ರದಲ್ಲಿಯೇ ಮತ್ತೆ ತರುಣನಾಗುವನು.

ದೃಷ್ಟಮೇತನ್ನಾರದಾದ್ಯೈರ್ಮುನಿಭಿಃ ಸರ್ವಮೇವ ಚ ।
ಏವಂ ಕ್ರೀಡತ್ಯಯಂ ದೇವಃ ಪೂರ್ಣೈಶ್ವರ್ಯೇಣ ಕೇವಲಮ್ ॥ ೧೯೨ ॥

ಅ: ಇದೆಲ್ಲವನ್ನೂ ನಾರದಾದಿ ಮುನಿಗಳು ಕಂಡಿರುವರು. ಹೀಗೆ ದೇವನಾದ ಇವನು ಕೇವಲ ಪರಿಪೂರ್ಣವಾದ ಐಶ್ವರ್ಯದಿಂದ ಕ್ರೀಡೆ ಮಾಡುವನು.

ಇತ್ಯುಕ್ತೇ ಕೇಶವಂ ನೇಮುರ್ದೇವಾಃ ಶಕ್ರಪುರೋಗಮಾಃ ॥ ೧೯೩ ॥

ಅ: ಶಿವ ಹೀಗೆ ತಿಳಿಸಲು ಇಂದ್ರಾದಿ ದೇವತೆಗಳೆಲ್ಲಾ ಕೃಷ್ಣನನ್ನು ನಮಸ್ಕರಿಸಿದರು.

ವಿ: ರತಿಯಿಂದ ಪೋಷಿತನಾಗಿ ಪ್ರದ್ಯುಮ್ನ ನಾಲ್ಕೇ ವರ್ಷಗಳಲ್ಲಿ ಯುವಕನಾದ ವಿವರ ಹಿಂದೆ ಬಂದಿದೆ (೧೭/೧೯೧). ಈಗ ಹುಟ್ಟುತ್ತಲೇ ಪುನಃ ಯುವಕನಾದ ವಿವರ ವಕ್ರಾಸುರವಧೆಯ ಪ್ರಸಂಗದಲ್ಲಿ ಪುನಃ ಬಂದಿದೆ.

ದ್ವಾರಕೆಗೆ ಮರಳಿದ ಕೃಷ್ಣ

ತತೋ ಹರಿರ್ಬ್ರಹ್ಮಸುರೇಂದ್ರಮುಖ್ಯೈ ಃ
ಸುರೈಃ ಸ್ತುತೋ ಗರುಡಸ್ಕಂಧಸಂಸ್ಥಃ ।
ಪುನಃ ಪುನಃ ಪ್ರಣತಃ ಶಂಕರೇಣ
ಸ್ತುತಸ್ತೃತೀಯೇऽಹ್ನಿ ನಿಜಾಂ ಪುರೀಮಗಾತ್ ॥ ೧೯೪ ॥

ಅ: ಕೃಷ್ಣನು ಬ್ರಹ್ಮ, ಇಂದ್ರ ಮೊದಲಾದ ದೇವತೆಗಳಿಂದ ಸ್ತುತನಾದ; ಗರುಡನ ಭುಜದಲ್ಲಿ ಕುಳಿತು ಶಿವನಿಂದ ಮತ್ತೆ ಮತ್ತೆ ನಮಸ್ಕೃತನಾದ; ಸ್ತುತನಾದ; ಮೂರನೆಯ ದಿನ ತನ್ನ ಪಟ್ಟಣವನ್ನು ತಲುಪಿದ.

ವಿ: ದ್ವಾರಕೆಯಿಂದ ಹೊರಟ ಕೃಷ್ಣನೊದಲ ದಿನ ರಾತ್ರಿ ಬದರಿಯಲ್ಲಿ ಉಳಿದ, ಬೆಳಗಿನ ಜಾವ ಕೈಲಾಸವನ್ನು ತಲುಪಿ ಅದರ ಮಾರನೆಯ ದಿನ ಬೆಳಗಿನ ವರೆಗೆ ಹನ್ನೆರಡು ವರ್ಷಗಳ ಅದ್ಭುತ ಪವಾಡವನ್ನು ಮಾಡಿದ. ಅಲ್ಲಿಂದ ಹೊರಟು ಅಂದೇ ಮತ್ತೆ ದ್ವಾರಕೆಯನ್ನು ಸೇರಿದ. ಹೀಗೆ ಮೂರನೆಯ ದಿನವೇ ಕೃಷ್ಣ ದ್ವಾರಕೆಗೆ ಮರಳಿದ ಎಂಬುದು ಸ್ಫುಟಪಡುವುದು.

ಪೌಂಡ್ರಕನಿಂದ ದ್ವಾರಕೆಯ ಆಕ್ರಮಣ - ಬಲರಾಮ ಏಕಲವ್ಯರ ಯುದ್ಧ

ಕೃಷ್ಣೇ ಪ್ರಯಾತೇ ನಿಲಯಂ ಪುರದ್ವಿಷೋ
ರಾತ್ರೌ ಪೌಂಡ್ರೋ ವಾಸುದೇವಃ ಸಮಾಗಾತ್ ।
ಸಹೈಕಲವ್ಯೇನ ನಿಜೇನ ಮಾತುಃ
ಪಿತ್ರಾ ತಥಾಽಕ್ಷೌಹಿಣೀಕತ್ರಯೇಣ ॥ ೧೯೫ ॥

ಅ: ಕೃಷ್ಣನು ಶಿವನ ನೆಲೆಯಾದ ಕೈಲಾಸಕ್ಕೆ ತೆರಳಿದ ದಿನವೇ ರಾತ್ರಿಯಲ್ಲಿ ಪೌಂಡ್ರಕ ವಾಸುದೇವ ಏಕಲವ್ಯನೊಂದಿಗೂ, ತನ್ನ ತಾಯಿಯ ತಂದೆಯೊಂದಿಗೂ ಮೂರು ಅಕ್ಷೋಹಿಣಿ ಸೇನೆಯೊಂದಿಗೆ ದ್ವಾರಕೆಯನ್ನು ಮುತ್ತಿದ.

ವಿ: ಹಾಗೆ ಬಂದ ತಾಯಿಯ ತಂದೆ ಕಾಶಿರಾಜ.

ಪುರೀಂ ಪ್ರಭಂಜಂತಮಮುಂ ವಿದಿತ್ವಾ
ಸರಾಮಶೈನೇಯಯದುಪ್ರವೀರಾಃ ।
ಸಂಯೋಧಯಾಮಾಸುರಥಾಭ್ಯವರ್ಷ-
ಚ್ಛರೈರ್ನಿಷಾದಾಧಿಪ ಏಕಲವ್ಯಃ ॥ ೧೯೬ ॥

ಅ: ದ್ವಾರಕೆಯನ್ನು ಅವನು ಭಗ್ನಗೊಳಿಸತೊಡಗಿದ್ದನ್ನು ತಿಳಿದು ಬಲರಾಮ, ಸಾತ್ಯಕಿ ಮೊದಲಾದವರೊಂದಿಗೆ ಯಾದವ ಮಹಾವೀರರು ಯುದ್ಧಕ್ಕೆ ತೊಡಗಿದರು. ಆಗ ನಿಷಾದ ನಾಯಕನಾದ ಏಕಲವ್ಯ ಬಾಣಗಳ ಮಳೆ ಸುರಿಸಿದ.

ದ್ವಾರಕೆಯಲ್ಲಿ ರಾತ್ರಿಯುದ್ಧ

ತದಸ್ತ್ರಶಸ್ತ್ರೈಃ ಸಹಸಾ ವಿಷಣ್ಣಾ
ಯದುಪ್ರವೀರಾ ವಿಹತಪ್ರದೀಪಾಃ ।
ಸಹೈವ ರಾಮೇಣ ಶಿನೇಶ್ಚ ನಪ್ತ್ರಾ
ಸಮಾವಿಶನ್ ಸ್ವಾಂ ಪುರಮೇವ ಸರ್ವೇ ॥ ೧೯೭ ॥

ಅ: ಅವನ ಅಸ್ತ್ರಶಸ್ತ್ರಗಳಿಂದ ಯಾದವವೀರರೆಲ್ಲಾ ಕೂಡಲೇ ಚಿಂತಿತರಾದರು. ದೀಪಗಳೂ ನಂದಿಹೋದವು. ಅವರೆಲ್ಲ ಬಲರಾಮನೊಂದಿಗೂ, ಸಾತ್ಯಕಿಯೊಂದಿಗೂ ಕೂಡಿ ಪಟ್ಟಣಕ್ಕೆ ಹಿಂದಿರುಗಿದರು.

ಎ: ಯಾದವರ ಕೆಲವು ದೀಪಗಳನ್ನು ಏಕಲವ್ಯನ ಸೈನ್ಯ ನಂದಿಸಿದರೆ, ಮತ್ತೆ ಕೆಲವು ದೀಪ–ಗಳನ್ನು ಅವರೇ ನಂದಿಸಿದರು ಎಂದು ತಿಳಿಯಬೇಕು. ಹಾಗೆ ಶತ್ರುಗಳ ಆಕ್ರಮಣವಾದಾಗ ತಮ್ಮ ಇರವು ತಿಳಿಯದಿರಲೆಂದು ದೀಪಗಳನ್ನು ಆರಿಸುವ ಪದ್ಧತಿ ಇಂದಿನ ರಕ್ಷಣಾತಂತ್ರವೂ (Blackout) ಆಗಿದೆ ಎಂಬುದನ್ನು ಗಮನಿಸಬೇಕು.

ಪುನಃ ಸಮಾದಾಯ ತಥೋರುದೀಪಿಕಾ
ಅಗ್ರೇ ಸಮಾಧಾಯ ಚ ರೌಹಿಣೇಯಮ್ ।
ವಿನಿಸ್ಸೃತಾ ಆತ್ತಶಸ್ತ್ರಾಃ ಸ್ವಪುರ್ಯಾಃ
ಸಿಂಹಾ ಯಥಾ ಧರ್ಷಿತಾಃ ಸದ್ಗುಹಾಯಾಃ ॥ ೧೯೮ ॥

ಅ: ಅವರು ದೊಡ್ಡ ದೀಪಗಳನ್ನು ತೆಗೆದುಕೊಂಡು ಬಲರಾಮನನ್ನು ಮುಂದಿಟ್ಟುಕೊಂಡು ತಮ್ಮಪಟ್ಟಣದಿಂದ ಶಸ್ತ್ರಪಾಣಿಗಳಾಗಿ ಮರಳಿ ಹೊರಬಂದರು - ಕೆರಳಿದ ಸಿಂಹಗಳು ಗುಹೆ-ಯಿಂದ ಧಾವಿಸಿ ಬರುವಂತೆ.

ಅಥಾಸಸಾದೈಕಲವ್ಯಂ ರಥೇನ ರಾಮಃ
ಶೈನೇಯಃ ಪೌಂಡ್ರಕಂ ವಾಸುದೇವಮ್ ।
ಅಯುಧ್ಯತಾಂ ತೌ ಸಾತ್ಯಕಿಃ ಪೌಂಡ್ರಕಶ್ಚ
ತಥಾಽನ್ಯೋನ್ಯಂ ವಿರಥಂ ಚಕ್ರತುಶ್ಚ ॥ ೧೯೯ ॥

---

೧೯೫. ಕೃಷ್ಣೇ ಪ್ರಯಾತೇ ನಿಲಯಂ ಪುರದ್ವಿಷ ಇತ್ಯತ್ರ ಕೃಷ್ಣೇ ಪುರದ್ವಿಷಃ= ಶಿವಸ್ಯ ನಿಲಯಂ= ಕೈಲಾಸಂ ಪ್ರಯಾತೇ ಸತಿ ಸಮಾಗಾತ್ = ದ್ವಾರಕಾಂ ಪ್ರತಿ ಸಮಾಗಾದಿತಿ ಯೋಗ್ಯಪದಾಧ್ಯಾಹಾರೇಣ ಯೋಜನಾ ॥ – (ವಾ.)

೧೯೭. ವಿಹತಪ್ರದೀಪಾ ಇತ್ಯತ್ರ ವಿಹತಾಃ ಪ್ರದೀಪಾಃ ರಾತ್ರಿಯುದ್ಧದೀಪಾಃ ಯೇಷಾಂ ತೇ ತಥೋಕ್ತಾಃ। ಪ್ರಕಾಶೇ ಸತಿ ದೃಷ್ಟ್ವಾ ಶರೈರ್ವಿದ್ಧ್ಯೇದಿತಿ ಭಯೇನ ದೀಪಾನ್ ನಾಶಿತವಂತ ಇತ್ಯರ್ಥಃ। ನಪ್ತಾ= ಪೌತ್ರಪುತ್ರಃ ಸಾತ್ಯಕಿರಿತಿ ಯಾವತ್। ತೇನೇತ್ಯರ್ಥಃ ॥ – (ವಾ.)

೧೯೭. ತದಸ್ತ್ರಶಸ್ತ್ರೈಃ ಏಕಲವ್ಯಾಸ್ತ್ರಶಸ್ತ್ರೈಃ ವಿಗತಪ್ರದೀಪಾಃ ನಾಶಿತಪ್ರಕೃಷ್ಟದೀಪಾಃ ಯದುಪ್ರವೀರಾಃ ... । – (ಜ.)

೧೯೯. ವಿರಥಂ ಚಕ್ರತುಶ್ಚೇತ್ಯತ್ರ ವಿರಥಂ= ವಿಗತಃ ರಥೋ ಯಥಾ ಭವತಿ ತಥೇತಿ ಕ್ರಿಯಾವಿಶೇಷಣಮ್॥– (ವಾ.)

೧೯೯. ಹರಿವಂಶ ಭವಿಷ್ಯಪರ್ವ (ಅ.೧೦೨)

ಅ: ಆಗ ಬಲರಾಮ ರಥವೇರಿ ಏಕಲವ್ಯನನ್ನು ಎದುರಿಸಿದ. ಸಾತ್ಯಕಿ ಪೌಂಡ್ರಕ ವಾಸುದೇವನನ್ನು ಎದುರಿಸಿದ. ಸಾತ್ಯಕಿ ಪೌಂಡ್ರಕವಾಸುದೇವರು ಯುದ್ಧ ಮಾಡಿ ಒಬ್ಬರ-ನ್ನೊಬ್ಬರು ವಿರಥರನ್ನಾಗಿಸಿಕೊಂಡರು.

ಬಲರಾಮ ಏಕಲವ್ಯರ ಗದಾಯುದ್ಧ

ತತೋ ಗದಾಯುದ್ಧಮಭೂತ್ ತಯೋ-
ರ್ವ್ಯಯೋಸ್ತಥಾ ರಾಮಶ್ಚೈಕಲವ್ಯಶ್ಚ ವೀರೌ ।
ಕೃತ್ವಾನ್ಯೋನ್ಯಂ ವಿರಥಂ ತೌ ಗದಾಭ್ಯಾಮ-
ಯುಧ್ಯತಾಂ ಜಾತದರ್ಪೌ ಬಲಾಗ್ರ್ಯೌ ॥ ೨೦೦ ॥

ಅ: ಬಳಿಕ ಸಾತ್ಯಕಿ ಪೌಂಡ್ರಕರಿಗೆ ಗದಾಯುದ್ಧ ನಡೆಯಿತು. ಅದರಂತೆ ವೀರರಾದ ಬಲರಾಮ, ಏಕಲವ್ಯರು ಒಬ್ಬರನೊಬ್ಬರು ವಿರಥರನ್ನಾಗಿ ಮಾಡಿಕೊಂಡು ಗದೆಗಳಿಂದ ಹೋರಾಡತೊಡಗಿದರು.

ಕೃಷ್ಣನನ್ನು ಕಂಡ ಬಲರಾಮನ ಹರ್ಷ

ತಸ್ಮಿನ್ ಕಾಲೇ ಕೇಶವೋ ವೈನತೇಯ-
ಮಾರುಹ್ಯಾಯಾದ್ಯತ್ರ ತೇ ಯುದ್ಧಸಂಸ್ಥಾಃ ।
ದೃಷ್ಟ್ವಾಽಥ ಕೃಷ್ಣಂ ಹರ್ಷಸಂಪೂರಿತಾತ್ಮಾ -
ರಾಮೋ ಹಂತುಂ ಚೈಕಲವ್ಯಂ ಸಮೈಚ್ಛತ್ ॥ ೨೦೧ ॥

ಅ: ಆ ಸಮಯಕ್ಕೆ ಕೃಷ್ಣ ಗರುಡನನ್ನೇರಿ ಯಾದವರು ಯುದ್ಧದಲ್ಲಿ ತೊಡಗಿದ್ದಲ್ಲಿಗೆ ಆಗಮಿಸಿದ. ಕೃಷ್ಣನನ್ನು ಕಂಡು ಆನಂದದಿಂದ ತುಂಬಿಹೋದ ಬಲರಾಮ ಮನಸ್ಸಿನಲ್ಲಿ ಹರ್ಷ ಉಕ್ಕಿದವನಾಗಿ ಏಕಲವ್ಯನನ್ನು* ಕೊಂದುಹಾಕಲು ಇಚ್ಛಿಸಿದ.

ವಿ: ಕೃಷ್ಣ ದರ್ಶನದಿಂದ ಬಲರಾಮ ಪುಲಕಗೊಂಡದ್ದು ಹರಿದರ್ಶನದ ಪರಿಣಾಮಕ್ಕೆ ನಿದರ್ಶನ. ದೇವದರ್ಶನ ದೇವಪೂಜಾದಿಗಳಿಂದ ಹೀಗೆ ದುಷ್ಟನಿಗ್ರಹಾದಿ ಕಾರ್ಯಗಳಲ್ಲಿ ಸಾಮರ್ಥ್ಯ, ಉತ್ಸಾಹಗಳು ಹೆಚ್ಚುವವು ಎಂಬ ಪ್ರಮೇಯ ಇದರಿಂದ ಸೂಚಿತ.

---

* ತತೋ ರಾಮೋ ಗದೀ ರಾಜನ್ ನಿಷಾದಂ ಬಾಹುಶಾಲಿನಮ್ ।
ಆಜಘ್ನೇ ಗದಯಾ ಕ್ರೂರಂ ಮದಮತ್ತೋ ಹಲಾಯುಧಃ ॥ – ಹರಿವಂಶ (೩/೯೯/೭)

ಏಕಲವ್ಯನ ಪಲಾಯನ

ಉದ್ಯಮ್ಯ ದೋರ್ಭ್ಯಾಂ ಸ ಗದಾಂ ಜವೇನ
ಯದಾಽಪತದ್ರೌಹಿಣೇಯೋ ನಿಷಾದಮ್ ।
ಬಲಂ ಕೋಪಂ ಚಾಸ್ಯ ದೃಷ್ಟ್ವೈಕಲವ್ಯಃ
ಪರಾದ್ರವಜ್ಜೀವಿತೇಪ್ಸುಃ ಸುದೂರಮ್ ॥ ೨೦೨ ॥

ಅ: ಎರಡೂ ಕೈಗಳಿಂದ ಗದೆಯನ್ನೆತ್ತಿಕೊಂಡು ಬಲರಾಮ ವೇಗದಿಂದ ಏಕಲವ್ಯನೆಡೆಗೆ ನುಗ್ಗಿದಾಗ ಅವನ ಬಲ ಮತ್ತು ಕೋಪಗಳನ್ನು ಕಂಡು ಏಕಲವ್ಯ ಜೀವ ಉಳಿಸಿಕೊಳ್ಳಬಯಸಿ ಬಹು ದೂರಕ್ಕೆ ಓಡಿದ.

ವಿದ್ರಾವಯನ್ ರೌಹಿಣೇಯೋಽನ್ವಯಾತ್ ತಂ
ಭೀತೋಽಪತಚ್ಚೈಕಲವ್ಯೋಽಂಬುಧೌ ಸಃ ।
ವೇಲಾಂತಂ ತಂ ದ್ರಾವಯಿತ್ವಾಽತ್ರ ತಸ್ಥೌ
ರಾಮೋ ಗದಾಪಾಣಿರದೀನಸತ್ತ್ವಃ ॥ ೨೦೩ ॥

ಅ: ಅವನನ್ನು ಅಟ್ಟಿಸಿಕೊಂಡೇ ಬಲರಾಮ ಓಡಿದ. ಭೀತನಾದ ಏಕಲವ್ಯ ಸಮುದ್ರದಲ್ಲಿ ಧುಮುಕಿದ. ಸಮುದ್ರ ತೀರದ ವರೆಗೂ ಅವನನ್ನು ಅಟ್ಟಿಸಿಕೊಂಡು ಹೋದ ಬಲಶಾಲಿಯಾದ ಬಲರಾಮ ಅಲ್ಲಿ ಗದೆಯನ್ನು ಕೈಯಲ್ಲಿ ಹಿಡಿದೇ ನಿಂತ.

ವಿ: ಹರಿಭಕ್ತರನ್ನು ವಿರೋಧಿಸುವ ಜನ ಹೀಗೆ ಸಂಸಾರಸಮುದ್ರದಲ್ಲಿ ಬಿದ್ದು ತೊಳಲುವರು ಎಂಬ ತತ್ತ್ವ ಇದರಿಂದ ಸೂಚಿತ.

ಸುಪಾಪೋಽಸಾವೇಕಲವ್ಯಃ ಸುಭೀತೋ
ರಾಮಂ ಮತ್ವೈವಾನುಯಾತಂ ಪುನಶ್ಚ ।
ಸಮುದ್ರೇಽಶೀತಿಂ ಯೋಜನಾನಾಮತೀತ್ಯ
ಪಶ್ಚಾದ್ದೈಕ್ಷದ್ದ್ವೀಪಮೇವಾಧಿರುಹ್ಯ ॥ ೨೦೪ ॥

---

೨೦೩. ಹರಿವಂಶ (ಭವಿಷ್ಯಪರ್ವ ಅ. ೧೦೨; ಶ್ಲೋ ೧-೭)

೨೦೩. ಗದಾ ಗೃಹ್ಯ ಮಹಾಘೋರಾಮಾಯಾಂತೀಂ ಪ್ರಾಣಹಾರಿಣೀಮ್ ।
ದುದ್ರಾವಾಥ ನಿಷಾದೇಶಃ ಸಮುದ್ರಂ ಮಕರಾಲಯಮ್ ॥ – ಹರಿವಂಶ (೩/೧೦೨/೪)

ಅ: ಮಹಾಪಾಪಿಯಾದ ಏಕಲವ್ಯ ತುಂಬಾ ಅಂಜಿ ಬಲರಾಮ ತನ್ನನ್ನು ಅಟ್ಟಿಸಿಕೊಂಡೇ ಬರುತ್ತಿರುವನು ಎಂದು ಭಾವಿಸಿ ಸಮುದ್ರದಲ್ಲಿ ಎಂಭತ್ತು ಯೋಜನಗಳಷ್ಟು ದೂರವನ್ನು ಸಾಗಿ ಬಳಿಕ ಒಂದು ದ್ವೀಪವನ್ನು ಏರಿ ಹಿಂದಿರುಗಿ ನೋಡಿದ.

ವಿ: ೧) ಏಕಲವ್ಯನಿಗೆ ಹಾಗೆ ಓಡುವ ಭರದಲ್ಲಿ ಬಲರಾಮ ಬರುತ್ತಿರುವನೆಂಬ ಭ್ರಮೆಯಿಂದಾಗಿ ಹಿಂತಿರುಗಿ ನೋಡುವಷ್ಟು ವ್ಯವಧಾನವೂ ಇಲ್ಲವಾಗಿತ್ತು ಎಂಬ ಇಲ್ಲಿಯ ಚಿತ್ರ ಅತ್ಯಂತ ರೋಚಕ–ವಾದುದು. ಒಂದು ಹಾವು ಅಟ್ಟಿಸಿಕೊಂಡು ಬಂದಾಗಲೇ ಭಯಗೊಂಡು ಓಡುವುದು ಜನರ ಸ್ವಭಾವ. ಸಾವಿರ ಹೆಡೆಗಳ ಆದಿಶೇಷನ ಅವತಾರನಾದ ಬಲರಾಮ ಹಾಗೆ ಬೆನ್ನಟ್ಟಿದಾಗ ಏಕಲವ್ಯನ ಪರಿಸ್ಥಿತಿ ಅಷ್ಟು ಚಿಂತಾಜನಕವೆನ್ನಿಸಿದ್ದರಲ್ಲಿ ಆಶ್ಚರ್ಯವೇನಿಲ್ಲ.

ಕೃಷ್ಣಪೌಂಡ್ರಕರ ಯುದ್ಧ

ರಾಮೋ ವಿಜಿತ್ಯಾತಿಬಲಂ ರಣೇ ರಿಪುಂ
ಮುದೈವ ದಾಮೋದರಮಾಸಸಾದ ।
ಪೌಂಡ್ರಸ್ತ್ವವಜ್ಞಾಯ ಶಿನಿಪ್ರವೀರಂ
ನಿವಾರ್ಯಮಾಣೋಽಪಿ ಯಯೌ ಜನಾರ್ದನಮ್ ॥ ೨೦೫ ॥

ಅ: ಬಲರಾಮ ಮಹಾ ಬಲಾಢ್ಯ ಶತ್ರುವಾದ ಏಕಲವ್ಯನನ್ನು ಹಾಗೆ ಯುದ್ಧದಲ್ಲಿ ಸೋಲಿಸಿ ಸಂತೋಷದಿಂದಲೇ ಕೃಷ್ಣನೆಡೆಗೆ ಸಾಗಿದ. ಪೌಂಡ್ರಕ ವಾಸುದೇವ ಸಾತ್ಯಕಿಯನ್ನು ಲೆಕ್ಕಿಸದೇ ಅವನು ತಡೆಯುತ್ತಿದ್ದರೂ ಕೃಷ್ಣನೆಡೆಗೆ ಸಾಗಿದ.

ವಿ: ಹರಿಭಕ್ತರ ಮೇಲಿನ ದ್ವೇಷಕ್ಕಿಂತ ಹರಿಯ ಮೇಲೆಯೇ ಅಂತಹ ಅಸುರರಿಗೆ ಹೆಚ್ಚು ದ್ವೇಷ ಎಂಬ ಪ್ರಮೇಯ ಇದರಿಂದ ಸೂಚಿತ. ಹರಿಭಕ್ತರ ಮೇಲೆಯೂ ಅವರ ದ್ವೇಷ ಅವರು ಹರಿ ಭಕ್ತರು ಎಂಬ ಕಾರಣದಿಂದಲೇ ಅಲ್ಲವೇ.

ತಂ ಕೇಶವೋ ವಿರಥಂ ವ್ಯಾಯುಧಂ ಚ ಕ್ಷಣೇನ
ಚಕ್ರೇ ಸ ಯಯೌ ನಿಜಾಂ ಪುರೀಮ್ ।
ಪ್ರಸ್ಥಾಪಯಾಮಾಸ ಪುನಶ್ಚ ದೂತಂ
ಕೃಷ್ಣಾಯೈಕೋ ವಾಸುದೇವೋಽಹಮಸ್ಮಿ ॥ ೨೦೬ ॥

ಅ: ಕೃಷ್ಣನು ಒಂದು ಕ್ಷಣದಲ್ಲೇ ಅವನನ್ನು ವಿರಥನನ್ನಾಗಿಯೂ, ಆಯುಧ ರಹಿತ-ನನ್ನಾಗಿಯೂ ಮಾಡಿದ; ಅವನು ಆಗ ತನ್ನ ಪಟ್ಟಣಕ್ಕೆ ಮರಳಿದ. ಮತ್ತೆ ತನ್ನ ದೂತನನ್ನು ಕೃಷ್ಣನ ಬಳಿಗೆ ಕಳುಹಿಸಿಕೊಟ್ಟ - ನಾನೊಬ್ಬನೇ ವಾಸುದೇವ.

ಪೌಂಡ್ರಕನ ವಿಚಿತ್ರ ಸಂದೇಶ

ಮದೀಯಲಿಂಗಾನಿ ವಿಸೃಜ್ಯ ಚಾಶು
ಸಮಾಗಚ್ಛೇಥಾಃ ಶರಣಂ ಮಾಮನಂತಮ್ ।
ತದ್ದೂತೋಕ್ತಂ ವಾಕ್ಯಮೇತನ್ನಿಶಮ್ಯ
ಯದುಪ್ರವೀರಾ ಉಚ್ಚಕೈಃ ಪ್ರಾಹಸನ್ ಸ್ಮ ॥ ೨೦೭ ॥

ಅ: ನನ್ನ ಚಿಹ್ನೆಗಳನ್ನು ಬಿಟ್ಟುಕೊಟ್ಟು ಬೇಗನೇ ಅನಂತನಾದ ನನ್ನನ್ನು ಶರಣುಹೊಂದು - ಅವನ ದೂತ ಹೇಳಿದ ಈ ಮಾತನ್ನು ಕೇಳಿ ಯಾದವ ವೀರರೆಲ್ಲಾ ಜೋರಾಗಿ ನಕ್ಕರು.

ವಿ: ಪೌಂಡ್ರಕ ವಾಸುದೇವ ತನ್ನನ್ನೇ ಸಾಕ್ಷಾತ್ ಕೃಷ್ಣ ಎಂದು ತಿಳಿದುಕೊಂಡಿದ್ದ ಮಹಾಪಾಪಿ. 'ಅಹಂ ಬ್ರಹ್ಮಾಸ್ಮಿ' ಎಂಬ ವೇದವಾಕ್ಯವನ್ನು ಅಪಾರ್ಥ ಮಾಡಿಕೊಂಡು ತನ್ನನ್ನೇ ದೇವರು ಎಂದು ತಿಳಿದಿದ್ದ ಧೂರ್ತ. ಕೃಷ್ಣನದೇ ಕಪಟ ವೇಷ, ತನ್ನದೇ ನಿಜರೂಪ ಎನ್ನುವುದು ಅವನ ಆರೋಪ. ಅದಕ್ಕೆಂದು ಕೃಷ್ಣನಿಗೆ ಚಕ್ರ, ಶಂಖಾದಿಗಳನ್ನೆಲ್ಲಾ ಬಿಟ್ಟುಕೊಡಲು ಸಂದೇಶ ಕಳುಹಿಸಿದ. ಅಸುರರ ಭ್ರಮೆ ಯಾವ ಮಟ್ಟವನ್ನು ಮುಟ್ಟುವುದು ಎಂಬುದಕ್ಕೆ ಇದೊಂದು ಅಪೂರ್ವ ನಿದರ್ಶನ.

ಶ್ರೀಕೃಷ್ಣನ ಪ್ರತ್ಯುತ್ತರ

ಕೃಷ್ಣಃ ಪ್ರಹಸ್ಯಾಹ ತವಾಯುಧಾನಿ
ದಾಸ್ಯಾಮ್ಯಹಂ ಲಿಂಗಭೂತಾನಿ ಚಾಜೌ ।
ಇತ್ಯುಕ್ತೋಽಸೌ ದೂತ ಏತ್ಯಾಹ ತಸ್ಮೈ
ಸ ಚಾಭ್ಯಾಗಾದ್ಯೋದ್ಧುಕಾಮೋ ಹರಿಶ್ಚ ॥ ೨೦೮ ॥

ಅ: ಕೃಷ್ಣ ಗಟ್ಟಿಯಾಗಿ ನಕ್ಕು ತಿಳಿಸಿದ 'ನಿನ್ನ ಚಿಹ್ನೆಗಳಾದ ಆಯುಧಗಳನ್ನು ನಾನು ಯುದ್ಧದಲ್ಲೇ ನೀಡುವೆ'. ಹೀಗೆ ನುಡಿಯಲು ಆ ದೂತ ಅವನ ಬಳಿಗೆ ತೆರಳಿ ಆ ವಿಷಯ ತಿಳಿಸಿದ. ಅವನು ಯುದ್ಧ ಮಾಡ ಬಯಸಿ ಆಗಮಿಸಿದ. ಕೃಷ್ಣನು ಅವನನ್ನು ಎದುರಿಸಿ ತೆರಳಿದ.

---

೨೦೬. ವಾಸುದೇವೋಽವತೀರ್ಣೋಽಹಮೇಕ ಏವ ನ ಚಾಪರಃ ।
ಭೂತಾನಾಮನುಕಂಪಾರ್ಥಂ ತ್ವಂ ತು ಮಿಥ್ಯಾಭಿಧಾಂ ತ್ಯಜ ॥
ಯಾನಿ ತ್ವಮಸ್ಮ ಚಿಹ್ನಾನಿ ಮೌಢ್ಯಾದ್ಬಿಭರ್ಷಿ ಸಾತ್ವತ ।
ತ್ಯಕ್ತ್ವೈಹಿ ಮಾಂ ತ್ವಂ ಶರಣಂ ನೋ ಚೇದ್ ದೇಹಿ ಮಮಾವಹಮ್ ॥ – ಭಾಗವತ (೧೦/೬೬/೫,೬)

ಏಃ ಕೃಷ್ಣನ ಮಾತಿನ ಅರ್ಥ ನೀನು ಕೇಳಿದಂತೆ ಚಕ್ರಾದಿ ಆಯುಧಗಳನ್ನು ನಿನ್ನ ಮೇಲೆ ಪ್ರಯೋಗಿಸಿ ತೋರಿಸುವೆ ಎಂದಾಗಿತ್ತು

ಪೌಂಡ್ರಕನ ಹಾಸ್ಯಾಸ್ಪದ ವೇಷ

ತಂ ಶಾತಕೌಂಭೇ ಗರುಡೇ ರಥಸ್ಥೇ
ಸ್ಥಿತಂ ಚಕ್ರಾದೀನ್ ಕೃತ್ರಿಮಾನ್ ಸಂದಧಾನಮ್ ।
ಶ್ರೀವತ್ಸಾರ್ಥೇ ದಗ್ಧವಕ್ಷಸ್ಥಲಂ ಚ
ದೃಷ್ಟ್ವಾ ಕೃಷ್ಣಃ ಪ್ರಾಹಸತ್ ಪಾಪಬುದ್ಧಿಮ್ ॥ ೨೦೯ ॥

ಅ: ರಥದ ಮೇಲೆ ಇರಿಸಿಕೊಂಡಿದ್ದ ಚಿನ್ನದ ಗರುಡನ ಮೇಲೆ ಕುಳಿತು ಕೃತಕವಾದ ಚಕ್ರ ಮೊದಲಾದವುಗಳನ್ನು ಧರಿಸಿಕೊಂಡು ಶ್ರೀವತ್ಸ ಚಿಹ್ನೆಗಾಗಿ ಎದೆಯನ್ನೇ ಸುಟ್ಟುಕೊಂಡಿದ್ದ ಪೌಂಡ್ರಕ ವಾಸುದೇವನನ್ನು ನೋಡಿ ಕೃಷ್ಣ ಗಹಗಹಿಸಿ ನಕ್ಕ.

ಏಃ ೧) ಪೌಂಡ್ರಕವಾಸುದೇವನದು ಬರೀ ಮಾತಿನ ಮೋಹವಷ್ಟೇ ಆಗಿರದೇ ಕೃಷ್ಣನ ಆಕೃತಿಯನ್ನೂ ಧರಿಸುವ ಹುಂಬತನವೂ ಆಗಿತ್ತು. ಅದಕ್ಕಾಗಿ ಅವನು ಚಿನ್ನದ ಗರುಡನನ್ನು ಮಾಡಿಸಿಕೊಂಡು ಅದನ್ನು ರಥದಲ್ಲಿ ಇರಿಸಿಕೊಂಡು ಅದರ ಮೇಲೆ ಕುಳಿತುಕೊಂಡು ತನ್ನನ್ನು ಗರುಡ ವಾಹನನೆಂದು ಕರೆದುಕೊಳ್ಳುತ್ತಿದ್ದ. ಅದರಂತೆ ಎರಡು ಚಿನ್ನದ ಕೈಗಳನ್ನು ಮಾಡಿಸಿಕೊಂಡು ಅವುಗಳಲ್ಲಿ ಕೃತ್ರಿಮವಾದ ಚಕ್ರ,ಶಂಖಗಳನ್ನು ಹಿಡಿದುಕೊಂಡು ತನ್ನನ್ನು ಚತುರ್ಭುಜನಾದ ಚಕ್ರ, ಶಂಖಗದಾಪದ್ಮಪಾಣಿ ಎಂದು ಹೇಳಿಕೊಳ್ಳುತ್ತಿದ್ದ. ಕೊನೆಗೆ ಎದೆಯಲ್ಲಿ ಶ್ರೀವತ್ಸ ಚಿಹ್ನೆಯನ್ನು ಇರಿಸಿಕೊಳ್ಳಲೆಂದು ಎದೆಯನ್ನೇ ಸುಟ್ಟುಕೊಳ್ಳುವ ತನ್ನನ್ನೇ ಕೃಷ್ಣ ಎಂದು ಕರೆದುಕೊಂಡದ್ದಕ್ಕೆ ಅವನಿಂದಲೇ ಎದೆ ಸುಟ್ಟಿಕೊಳ್ಳುವ ಶಿಕ್ಷೆಯನ್ನು ಕೃಷ್ಣ ವಿಧಿಸಿದ್ದ ಎಂದು ತಿಳಿಯಬೇಕು. ಇಂತಹ ಮಹಾಪಾಪಿಯ ಚಿತ್ರ ಸ್ವತಃ ಕೃಷ್ಣನಿಗೇ ನಗು ತರಿಸುವಷ್ಟು ಹಾಸ್ಯಾಸ್ಪದವಾಗಿತ್ತು ಎಂಬುದನ್ನು ಗಮನಿಸಬೇಕು.

ಕೃಷ್ಣನಿಂದ ಪೌಂಡ್ರಕನ ವಧೆ

ತತೋಽಸ್ತ್ರಶಸ್ತ್ರಾಣ್ಯಭಿವರ್ಷಮಾಣಂ
ವಿಜಿತ್ಯ ತಂ ವಾಸುದೇವೋಽರಿಹೈವ ।
ಚಕರ್ತ ತತ್ಕಂಧರಂ ತಸ್ಯ ಚಾನು
ಮಾತಾಮಹಸ್ಯಾಚ್ಛಿನತ್ ಸಾಯಕೇನ ॥ ೨೧೦ ॥

ಅ: ಆಗ ಅಸ್ತ್ರ ಶಸ್ತ್ರಗಳನ್ನು ಮಳೆಗರೆಯತೊಡಗಿದ್ದ ಪೌಂಡ್ರಕ ವಾಸುದೇವನನ್ನು ಕೃಷ್ಣ ಸೋಲಿಸಿ ಸುದರ್ಶನ ಚಕ್ರದಿಂದಲೇ ಅವನ ಕತ್ತನ್ನು ಕತ್ತರಿಸಿದ. ಬಳಿಕ ಅವನ ತಾತನ ತಲೆಯನ್ನೂ ಬಾಣದಿಂದ ತುಂಡರಿಸಿದ.

ವಿ: ಹಾಗೆಮಾಡುವ ಮೂಲಕ ತನ್ನನ್ನೇ ದೇವರು ಎಂದು ಕರೆದುಕೊಳ್ಳುವ ಜನರನ್ನು ಕೃಷ್ಣ ಸ್ವತಃ ತಾನೇ ಹಾಗೆ ನಾಶಮಾಡುವುದಾಗಿ * ಸಾರಿದ ಎಂದು ತಿಳಿಯಬೇಕು.

ಪೌಂಡ್ರಕನ ಅಧೋಗತಿ

ಅಪಾತಯಚ್ಚಾಶು ಶಿರಃ ಸ ತೇನ
ಕಾಶೀಶ್ವರಸ್ಯೇಶ್ವರೋ ವಾರಣಸ್ಯಾಮ್ ।
ಸ ಚ ಬ್ರಹ್ಮಾಹಂ ವಾಸುದೇವೋಽಸ್ಮಿ ನಿತ್ಯ-
ಮಿತಿ ಜ್ಞಾನಾದಗಮತ್ ತತ್ತಮೋಽಂಧಮ್ ॥ ೨೧೧ ॥

ಅ: ಸರ್ವೇಶ್ವರನಾದ ಕೃಷ್ಣ ಅದೇ ಬಾಣದಿಂದ ಆ ಕಾಶಿರಾಜನ ತಲೆಯನ್ನು ಕಾಶಿಯಲ್ಲಿ ಬೀಳಿಸಿದ. ತನ್ನನ್ನೇ ಬ್ರಹ್ಮ, ವಾಸುದೇವ ಎಂದು ಸದಾ ಕರೆದುಕೊಳ್ಳುತ್ತಿದ್ದ ಪೌಂಡ್ರಕ ವಾಸುದೇವ ಅಂತಹ ಮಿಥ್ಯಾಜ್ಞಾನದಿಂದಾಗಿ ಅಂಧಂ ತಮಸ್ಸಿಗೇ ತೆರಳಿದ.

ವಿ: ಹಾಗೆ ಕಾಶಿ ರಾಜನ ತಲೆಯನ್ನು ಕಾಶಿ ನಗರದೊಳಗೆ ಬೀಳಿಸುವ ಮೂಲಕ ಅವನ ಮಗನಾಗಿದ್ದ ಮಹಾಪಾಪಿಯಾದ ಸುದಕ್ಷಿಣ ಎಂಬುವವನನ್ನು ಕೆರಳಿಸಿ ಸಂಹಾರ ಮಾಡುವುದು ಕೃಷ್ಣನ ಉದ್ದೇಶವಾಗಿತ್ತು. ಕೃಷ್ಣ ಅರ್ಜುನನಿಂದ ಜಯದ್ರಥನ ತಲೆಯನ್ನು ಅವನ ತಂದೆಯಾದ ವೃದ್ಧಕ್ಷತ್ರನ ಕೈಯಲ್ಲಿ ಬೀಳಿಸುವ ಪ್ರಸಂಗವನ್ನು ಇಲ್ಲಿ ಸ್ಮರಿಸಿಕೊಳ್ಳಬಹುದು (೨೬/೧೮೯–೧೯೧).

ಸಾಹಾಯ್ಯಕೃಚ್ಚಾಸ್ಯ ಚ ಕಾಶಿರಾಜೋ
ಯಥೈವ ಕಿರ್ಮೀರಹಿಡಿಂಬಸಾಲ್ವಾಃ ।
ಅನ್ಯೇ ಚ ದೈತ್ಯಾ ಅಪತಂಸ್ತಮೋಽಂಧಂ
ತಥೈವ ಸೋಽಪ್ಯಪತತ್ ಪಾಪಬುದ್ಧಿಃ ॥ ೨೧೨ ॥

---

* ತಾನಹಂ ದ್ವಿಷತಃ ಕ್ರೂರಾನ್ ಸಂಸಾರೇಷು ನರಾಧಮಾನ್ ।
ಕ್ಷಿಪಾಮ್ಯಜಸ್ರಮಶುಭಾನಾಸುರೀಷ್ವೇವ ಯೋನಿಷು ॥ – ಗೀತಾ (೧೬/೧೯)

೨೧೧. ಕಾಶೀಶ್ವರಸ್ಯೇಶ್ವರ ಇತ್ಯತ್ರ ಈಶ್ವರಃ= ಕೃಷ್ಣಃ ಕಾಶೀಶ್ವರಸ್ಯ= ಕಾಶಿರಾಜಸ್ಯ ಶಿರ ಇತಿ ಸಂಬಂಧಃ ॥ – (ವಾ.)

೨೧೧. ಅಹಂ ಬ್ರಹ್ಮೇತಿ ವೇನಸ್ತು ಧ್ಯಾಯನ್ನಾಪಾಧರಂ ತಮಃ । (ಭವಿಷ್ಯತ್ಪುರಾಣ) – ಭಾ.ತಾ. (೪/೧೩/೨೨)

ಅ: ಅವನಿಗೆ ಸಹಾಯ ಮಾಡಿದ ಕಾಶಿರಾಜ ಅದರಂತೆಯೇ, ಕಿರ್ಮೀರ, ಹಿಡಿಂಬ, ಸಾಲ್ವರು ಮತ್ತು ಇತರ ದೈತ್ಯರು ಅಂಧಂತಮಸ್ಸಿನಲ್ಲಿಯೇ ಬಿದ್ದಿದ್ದರು. ಅವರಂತೆ ಪಾಪ-ಬುದ್ಧಿಯಾದ ಇವನೂ ತಮಸ್ಸಿನಲ್ಲಿಯೇ ಬಿದ್ದ.

ವಿ: ಕಾಶಿರಾಜನ ಸೈನ್ಯ ಮೂರು ಅಕ್ಷೌಹಿಣಿ, ಪೌಂಡ್ರಕನ ಸೈನ್ಯ ಎರಡು ಅಕ್ಷೌಹಿಣಿ – ಅವರಿಬ್ಬರೂ ತಮ್ಮ ಸೇನಾ ಸಮೇತರಾಗಿಯೇ ಹತರಾದರು ಎಂಬುದು ವಿಶೇಷ. ಪಾಪಿಗಳಂತೆ ಪಾಪಿಗಳ ಅನುಯಾಯಿಗಳೂ ನಾಶ ಹೊಂದುವರು ಎಂಬುದಕ್ಕೆ ಇದು ನಿದರ್ಶನ (೭/೩೯).

ಕೃಷ್ಣನಿಂದ ಏಕಲವ್ಯನ ವಧೆ

ನಿಹತ್ಯ ತೌ ಕೇಶವೋ ರೌಗ್ಮಿಣೇಯಂ
ಪುನರ್ವೈದರ್ಭ್ಯಾಂ ಜನಯಾಮಾಸ ಸದ್ಯಃ ।
ಸ ಏಕಲವ್ಯೋ ರಾಮಜಿತಃ ಶಿವಾಯ
ಚಕ್ರೇ ತಪೋಽಜೇಯತಾಂ ಚಾಪ ತಸ್ಮಾತ್ ॥ ೨೧೩ ॥

ಅ: ಅವರಿಬ್ಬರನ್ನೂ ಸಂಹರಿಸಿ ಕೃಷ್ಣನು ಪ್ರದ್ಯುಮ್ನನನ್ನು ಆಗಲೇ ರುಗ್ಮಿಣಿಯಲ್ಲಿ ಹುಟ್ಟಿಸಿದ. ಬಲರಾಮನಿಂದ ಸೋತ ಏಕಲವ್ಯ ಶಿವನನ್ನು ಕುರಿತು ತಪಸ್ಸು ಮಾಡಿದ; ಅವನಿಂದ ಅಜೇಯತ್ವ ವರವನ್ನೂ ಪಡೆದ.

ಸ ಶರ್ವದತ್ತೇನ ವರೇಣ ದೃಪ್ತಃ
ಪುನರ್ಯೋದ್ಧುಂ ಕೃಷ್ಣಮೇವಾಸಸಾದ ।
ತಸ್ಯಾಸ್ತ್ರಶಸ್ತ್ರಾಣಿ ನಿವಾರ್ಯ ಕೇಶವ-
ಶ್ಚಕ್ರೇಣ ಚಕ್ರೇ ತಮಪಾಸ್ತಕಂಧರಮ್ ॥ ೨೧೪ ॥

ಅ: ಶಿವ ನೀಡಿದ ವರದಿಂದ ಕೊಬ್ಬಿದ ಅವನು ಮರಳಿ ಯುದ್ಧ ಮಾಡಲೆಂದು ಕೃಷ್ಣನ ಮೇಲೆಯೇ ನುಗ್ಗಿದ. ಕೃಷ್ಣನು ಅವನ ಅಸ್ತ್ರಶಸ್ತ್ರಗಳನ್ನು ತಡೆದು, ಚಕ್ರದಿಂದ ತಲೆಯನ್ನು ಕತ್ತರಿಸಿ ಹಾಕಿದ.

---

೨೧೪. ಸ ತು ಬದ್ಧಾಂಗುಲಿತ್ರಾಣೋ ನೈಷಾದಿರ್ದೃಢವಿಕ್ರಮಃ ।
ತ್ವದ್ಧಿತಾರ್ಥಂ ತು ಸ ಮಯಾ ಹತಃ ಸಂಗ್ರಾಮಮೂರ್ಧನಿ ॥ – ಭಾರತ (ದ್ರೋಣ. ೧೮೧/೧೭-೨೧)

ಏ: ಏಕಲವ್ಯ ಹಾಗೆ ಕೊಬ್ಬಿ ನುಗ್ಗಿ ಬರಲು ಶಿವ ತನಗೆ ಅಜೇಯತ್ವ ವರ ನೀಡಿರುವುದರಿಂದ ತನ್ನನ್ನು ಕೃಷ್ಣ ಸೋಲಿಸಲಾರ ಎಂಬ ಭಾವ ಕಾರಣವಾಗಿತ್ತು ಎಂದು ತಿಳಿಯಬೇಕು. ಹರಿ ಸರ್ವೋತ್ತಮತ್ವ ಜ್ಞಾನ ಇಲ್ಲದ ಅವನು ಹರಿಯಿಂದ ಹತನಾದ.

ಸ ಚಾಪ ಪಾಪಸ್ತಮ ಏವ ಘೋರಂ
ಕೃಷ್ಣದ್ವೇಷಾನ್ನಿತ್ಯದುಃಖಾತ್ಮಕಂ ತತ್ ।
ಏವಂ ಯದೂನಾಮೃಷಭೇಣ ಸೂದಿತೇ
ಪೌಂಡ್ರೇ ತಥಾ ಕಾಶಿನೃಪೇ ಚ ಪಾಪೇ ॥ ೨೧೫ ॥

ಅ: ಮಹಾಪಾಪಿಯಾದ ಅವನೂ ಸಹ ಕೃಷ್ಣನನ್ನು ದ್ವೇಷಿಸಿದ್ದರಿಂದಾಗಿ ನಿತ್ಯ ದುಃಖಾತ್ಮಕ-ವಾದ ಭಯಂಕರವಾದ ತಮಸ್ಸಿಗೇ ತೆರಳಿದ. ಹೀಗೆ ಯಾದವ ಶ್ರೇಷ್ಠನಾದ ಕೃಷ್ಣನಿಂದ ಪಾಪಿಗಳಾದ ಪೌಂಡ್ರಕ ಮತ್ತು ಕಾಶಿರಾಜ ಇಬ್ಬರೂ ಹತರಾದರು.

ಕಾಶೀಶಪುತ್ರಃ ಸ ಸುದಕ್ಷಿಣಾಖ್ಯ-
ಸ್ತಪೋಽಚರಚ್ಛಂಕರಾಯೋರುಭಕ್ತ್ಯಾ।
ಪ್ರತ್ಯಕ್ಷಗಂ ತಂ ಶಿವಂ ಪಾಪಬುದ್ಧಿಃ
ಕೃಷ್ಣಾಭಾವಂ ಯಾಚತೇ ದುಷ್ಟಚೇತಾಃ ॥ ೨೧೬ ॥

ಅ: ಕಾಶಿರಾಜನ ಮಗನಾದ ಸುದಕ್ಷಿಣ ಎಂಬವನು ಬಹಳ ಭಕ್ತಿಯಿಂದ ಶಿವನನ್ನು ಕುರಿತು ತಪಸ್ಸು ಮಾಡಿದ. ಪ್ರತ್ಯಕ್ಷನಾದ ಶಿವನನ್ನು ಪಾಪಬುದ್ಧಿಯವನೂ, ದುಷ್ಟ ಮನಸ್ಸಿನವನೂ ಆದ ಅವನು ಕೃಷ್ಣನನ್ನು ಇಲ್ಲವಾಗಿಸುವ ವರವನ್ನು ಬೇಡಿದ.

ಸುದಕ್ಷಿಣನ ಸಂಹಾರ

ಕೃತ್ಯಾಮಸ್ಮೈ ದಕ್ಷಿಣಾಗ್ನೌ ಶಿವೋಽಪಿ
ದೈತ್ಯಾವೇಶಾದದದಾದಾವೃತಾತ್ಮಾ।
ಸ ದಕ್ಷಿಣಾಗ್ನಿಶ್ಚಾಸುರಾವೇಶಯುಕ್ತಃ
ಸಂಪೂಜಿತಃ ಕಾಶಿರಾಜಾತ್ಮಜೇನ ।
ವರಾದುಮೇಶಸ್ಯ ವಿವೃದ್ಧಶಕ್ತಿ-
ರ್ಯಯೌ ಕೃಷ್ಣೋ ಯತ್ರ ಸಂಪೂರ್ಣಶಕ್ತಿಃ ॥ ೨೧೭ ॥

ಅ: ಅಸುರಾವೇಶದಿಂದ ಮನಸ್ಸುಕವಿದಿದ್ದ ಶಿವನೂ ಸಹ ಅವನಿಗೆ ದಕ್ಷಿಣಾಗ್ನಿಯಲ್ಲಿ ಒಂದು ದೈತ್ಯಶಕ್ತಿಯನ್ನು ನೀಡಿದ. ಆ ದಕ್ಷಿಣಾಗ್ನಿಯೂ ಸಹ ಅಸುರಾವೇಶದಿಂದ ಕೂಡಿ ಕಾಶಿ ರಾಜನ ಮಗನಿಂದ ಪೂಜಿತನಾಗಿ ಶಿವನ ವರದಿಂದ ಶಕ್ತಿ ಹೆಚ್ಚಿಸಿಕೊಂಡವನಾಗಿ ಪರಿಪೂರ್ಣಶಕ್ತಿ-ಸಂಪನ್ನನಾದ ಕೃಷ್ಣನಿದ್ದಲ್ಲಿಗೇ ತೆರಳಿದ.

ವಿ: ವರ ನೀಡಿದ ಶಿವನಲ್ಲಿದ್ದಂತೆ ಆಗ ಆ ದಕ್ಷಿಣಾಗ್ನಿಯಲ್ಲಿಯೂ ಅಸುರಾವೇಶ ಉಂಟಾಗಿತ್ತು ಎಂಬುದು ವಿಶೇಷ.

ಕೃಷ್ಣಸ್ತಸ್ಯ ಪ್ರತಿಘಾತಾರ್ಥಮುಗ್ರಂ
ಸಮಾದಿಶಚ್ಚಕ್ರಮನಂತವೀರ್ಯಃ ।
ಜಾಜ್ವಲ್ಯಮಾನಂ ತದಮೋಘವೀರ್ಯಂ
ವ್ಯದ್ರಾವಯದ್ದಹ್ನಿಮಿಮಂ ಸುದೂರಮ್ ॥ ೨೧೮

ಅ: ಅನಂತ ಪರಾಕ್ರಮನಾದ ಕೃಷ್ಣನು ಅದರ ಪರಿಹಾರಕ್ಕೆಂದು ಭಯಂಕರವೂ, ಜಾಜ್ವಲ್ಯಮಾನವೂ, ಅಮೋಘ ಸಾಮರ್ಥ್ಯಯುಕ್ತವೂ ಆದ ಚಕ್ರವನ್ನು ಕಳುಹಿಸಿದ. ಅದು ಆ ದಕ್ಷಿಣಾಗ್ನಿಯನ್ನು ಬಲು ದೂರಕ್ಕೆ ಓಡಿಸಿತು.

ಕೃತ್ಯಾತ್ಮಕೋ ವಹ್ನಿರಸೌ ಪ್ರಧಾನ-
ವಹ್ನೇಃ ಪುತ್ರಶ್ಚಕ್ರವಿದ್ರಾವಿತೋऽಥ ।
ಸಹಾನುಬಂಧಂ ಚ ಸುದಕ್ಷಿಣಂ ತಂ
ಭಸ್ಮೀಚಕಾರಾಶು ಸಪುತ್ರಭಾರ್ಯಮ್ ॥ ೨೧೯ ॥

ಅ: ಆ ಅಗ್ನಿ ಪ್ರಧಾನ ವಹ್ನಿಯ ಪುತ್ರ. ಚಕ್ರದಿಂದ ಓಡಿಸಲ್ಪಟ್ಟ ಅವನು ಆ ಸುದಕ್ಷಿಣನನ್ನು ಹೆಂಡಿರು, ಮಕ್ಕಳು ಹಾಗೂ ಪರಿವಾರದೊಂದಿಗೆ ಬೇಗನೇ ಸುಟ್ಟು ಬೂದಿ ಮಾಡಿದ.

ವಿ: ಸುದರ್ಶನ ಚಕ್ರದಿಂದಾಗಿ ಅಸುರಾವೇಶದಿಂದ ದೂರಾದ ಆ ದಕ್ಷಿಣಾಗ್ನಿ ಅದನ್ನು ಪ್ರಯೋಗಿಸಿದ್ದ ಸುದಕ್ಷಿಣನನ್ನು ಸಪರಿವಾರವಾಗಿ ಸುಟ್ಟು ಹಾಕಿತು ಎಂದರ್ಥ. ಆಭಿಚಾರಿಕವಾದ ಕ್ಷುದ್ರ ಶಕ್ತಿ ಅದನ್ನು ಪ್ರಯೋಗಿಸಿದವರನ್ನೇ ಆಹುತಿ ತೆಗೆದುಕೊಳ್ಳುವುದು ಎಂಬುದಕ್ಕೂ ಇದು ಸೂಚಕ.

ವಾರಾಣಸೀದಹನ

ದಗ್ಧ್ವಾ ಪುರೀಂ ವಾರಣಾಸೀಂ ಸುದರ್ಶನಃ
ಪುನಃ ಪಾರ್ಶ್ವಂ ವಾಸುದೇವಸ್ಯ ಚಾಗಾತ್ ।
ಸುದಕ್ಷಿಣೋಽಸೌ ತಮ ಏವ ಜಗ್ಮಿವಾನ್
ಕೃಷ್ಣದ್ವೇಷಾತ್ ಸಾನುಬಂಧಃ ಸುಪಾಪಃ ॥ ೨೨೦ ॥

ಅ: ಸುದರ್ಶನ ಚಕ್ರವು ಕಾಶೀಪಟ್ಟಣವನ್ನು ಸುಟ್ಟು ಮತ್ತೆ ಕೃಷ್ಣನ ಬಳಿಗೆ ತೆರಳಿತು. ಮಹಾಪಾಪಿಯಾದ ಆ ಸುದಕ್ಷಿಣ ಕೃಷ್ಣದ್ವೇಷದಿಂದಾಗಿ ತನ್ನ ಪರಿವಾರದೊಂದಿಗೆ ತಮಸ್ಸಿಗೇ ತೆರಳಿದನು.

ಎ: ೧) ದಕ್ಷಿಣಾಗ್ನಿಯು ಸುದಕ್ಷಿಣನನ್ನು ಸಪರಿವಾರ ಸುಟ್ಟಂತೆ ಸುದರ್ಶನ ಚಕ್ರ ಕಾಶಿ ನಗರವನ್ನೇ ಸುಟ್ಟು ಹಾಕಿತು. ಇದು ಭಗವದ್ವೇಷಿಗಳು ಸಕುಟುಂಬ ಸಪರಿವಾರರಾಗಿ ನಾಶ–ವಾಗುವುದಕ್ಕೆ ಮತ್ತೊಂದು ನಿದರ್ಶನವಾಯಿತು.

೨) ವರಣಾ ಮತ್ತು ಅಸಿ ಎಂಬ ಎರಡು ನದಿಗಳ ಸಂಗಮ ಪ್ರದೇಶವಾದ್ದರಿಂದ ಕಾಶಿಗೆ ವಾರಣಾಸಿ ಎಂದು ಹೆಸರು. ಅವಿಮುಕ್ತಕ್ಷೇತ್ರ ಎಂಬುದಾಗಿ ಅದನ್ನು ಹರಿವಂಶ ವರ್ಣಿಸಿದೆ.

೩) ಹನುಮಂತ ಲಂಕಾಪಟ್ಟಣವನ್ನು ದಹನ ಮಾಡಿದಂತೆ ಕೃಷ್ಣ ಸುದರ್ಶನ ಚಕ್ರದಿಂದ ಕಾಶಿಯನ್ನು ದಹನ ಮಾಡಿದ. ಅದರಿಂದಾಗಿ ಪೌಂಡ್ರಕನಂತಹ ಪರಮ ಪಾಪಿಗಳಿಂದ ಒದಗಿದ್ದ ಅಪಾವಿತ್ರ್ಯ ಪರಿಹಾರವಾಯಿತು ಎಂದು ತಿಳಿಯಬೇಕು. ಸುದರ್ಶನಕ್ಕೆ ಪವಿತ್ರವೆಂದೇ ಹೆಸರಲ್ಲವೆ!

ಕೃಷ್ಣ ರುಗ್ಮಿಣಿಯರ ಪ್ರಣಯಕಲಹ

ಕೃಷ್ಣಃ ಕ್ರೀಡನ್ ದ್ವಾರವತ್ಯಾಂ ಸುಪೂರ್ಣ–
ನಿತ್ಯಾನಂದಃ ಕ್ವಚಿದಾಹ ಸ್ಮ ಭೈಷ್ಮೀಮ್ ।
ವಿಡಂಬಯನ್ ಗೃಹಿಣಾಮೇವ ಚೇಷ್ಟಾ
ನಿತ್ಯವಿರೋಧೋಽಪಿ ತಯಾ ವಿದೋಷಯಾ ॥ ೨೨೧ ॥

---

೨೨೦. ಸುದಕ್ಷಿಣಮಪಿ ಸುದರ್ಶನಮೇವ ಭಸ್ಮೀಚಕಾರೇತಿ ಕೇಚಿತ್ । ತತ್ರ ಭಾಗವತಬ್ರಹ್ಮಪುರಾಣೋಕ್ತೇರ್ವಿರೋಧೋ ದೃಶ್ಯತೇ । ಕೃತ್ಯಾನಲಃ ಪ್ರತಿಹತಃ ಸರಥಾಂಗಪಾಣೇರಸ್ತ್ರೌಜಸಾ ನೃಪವಿಭಗ್ನಮುಖೋ ನಿವೃತ್ತಃ। 'ವಾರಾಣಸೀಂ ಪ್ರತಿಸಮೇತ್ಯ ಸುದಕ್ಷಿಣಂ ತಂ ಸರ್ತ್ವಿಗ್ಜನಂ ಸಮದಹತ್ ಸ್ವಕೃತೋಽಭಿಚಾರಃ। ಚಕ್ರಂ ಚ ವಿಷ್ಣೋಸ್ತದನುಪ್ರವಿಷ್ಟಂ ವಾರಾಣಸೀಂ ಸಾಟ್ಟಸಭಾಲಯಾಪಣಾಮ್। ಸಗೋಪುರಾಟ್ಟಲಕಕೋಷ್ಠಸಂಕುಲಾಂ ಸಕೋಶ-ಹಸ್ತ್ಯಶ್ವರಥಮಂದಿರಾಮ್ । ದಗ್ಧ್ವಾ ವಾರಾಣಸೀಂ ಸರ್ವಾಂ ವಿಷ್ಣೋಶ್ಚಕ್ರಂ ಸುದರ್ಶನಮ್ । ಭೂಯಃ ಪಾರ್ಶ್ವಮುಪಾತಿಷ್ಠತ್ ಕೃಷ್ಣಸ್ಯಾಕ್ಲಿಷ್ಟಕರ್ಮಣಃ' ಇತಿ ಭಾಗವತೋಕ್ತೇಃ (೧೦/೬೬/೪೦-೪೨)। 'ಅಭಿಚಾರಃ ಕೃತ್ಯಾಗ್ನಿಃ ತದನು ಸುದಕ್ಷಿಣದಹನಾನಂತರಮ್' ಇತಿ ವಿಜಯಧ್ವಜಟೀಕಾಯಾಮ್। –(ಜ.)

ಅ: ದ್ವಾರಕೆಯಲ್ಲಿ ಕ್ರೀಡಿಸುತ್ತಾ ಪರಿಪೂರ್ಣವಾದ, ನಿತ್ಯ ಆನಂದದಿಂದ ಕೂಡಿದ ಶ್ರೀಕೃಷ್ಣ ವಿನೋದಕ್ಕೆಂದು ಒಮ್ಮೆ ರುಗ್ಮಿಣಿಗೆ ನುಡಿದ, ನಿರ್ದೋಷಳಾದ ರುಗ್ಮಿಣಿಯೊಡನೆ ಅವನು ಎಂದೂ ಯಾವ ರೀತಿಯ ವಿರೋಧವೂ ಇಲ್ಲದವನಾದರೂ ಗೃಹಸ್ಥರ ಚರ್ಯೆಯನ್ನು ವಿಡಂಬನೆ ಮಾಡಿದ.

ವಿ: ಭಾಗವತ ದಶಮಸ್ಕಂಧದಲ್ಲಿ ಬಂದಿರುವ ಕೃಷ್ಣ ರುಗ್ಮಿಣಿಯರ ಪ್ರಣಯ ಕಲಹ ಪ್ರಸಂಗವನ್ನು ಇಲ್ಲಿ ನಿರ್ಣಯಿಸಿ ತಿಳಿಸುತ್ತಿರುವರು. ಕೃಷ್ಣರುಗ್ಮಿಣಿಯರು ನಿತ್ಯ ಅವಿಯೋಗಿಗಳು. ಸದಾ ನಿರ್ದೋಷರು, ಅವರಲ್ಲಿ ವಿರೋಧಾದಿಗಳ ಪ್ರಸಕ್ತಿ ಸರ್ವಥಾ ಇಲ್ಲವೇ ಇಲ್ಲ. ಆದರೂ ಅಸುರ ಮೋಹನ ಹಾಗೂ ಲೋಕವಿಡಂಬನೆಗಾಗಿ ಪ್ರಣಯ ಕಲಹದ ಪ್ರಸಂಗವನ್ನು ನಿರೂಪಿಸಿದರು ಎಂದರ್ಥ.

ತ್ವಯಾ ನ ಕಾರ್ಯಂ ಮಮ ಕಿಂ ಚ ಭದ್ರೇ
ಮಯಾऽರೀಣಾಂ ಮಾನಭಂಗಾರ್ಥಮೇವ ।
ಸಮಾಹೃತಾऽಸೀತಿ ಸಾ ಚಾವಿಯೋಗಂ
ಸದಾ ಕೃಷ್ಣೇನಾತ್ಮನೋऽಪ್ಯೇವ ವೇತ್ತ್ರೀ ॥ ೨೨೨ ॥

ಸ್ತ್ರಿಯಾ ಭೇತ್ತವ್ಯಂ ಭರ್ತುರಿತ್ಯೇವ ಧರ್ಮಂ
ವಿಜ್ಞಾಪಯಂತೀ ದುಃಖಿತೇವಾಸ ದೇವೀ ।
ತಾಂ ಸಾಂತ್ವಯಾಮಾಸ ಗೃಹಸ್ಥಧರ್ಮಂ
ವಿಜ್ಞಾಪಯನ್ ದೇವದೇವೋऽಪ್ಯದುಃಖಾಮ್ ॥ ೨೨೩. ॥

ಅ: 'ಮಂಗಲ ಸ್ವರೂಪಳೇ! ನಿನ್ನಿಂದ ನನಗೆ ಯಾವ ಕಾರ್ಯವೂ ಆಗಬೇಕಿಲ್ಲ. ಶತ್ರುಗಳ ಮಾನಭಂಗಕ್ಕೆಂದು ಮಾತ್ರವೇ ನಾನು ನಿನ್ನನ್ನು ಹಾಗೆ ಕರೆತಂದೆ'. ಸರ್ವಜ್ಞಳಾದ ಮಹಾಲಕ್ಷ್ಮಿಯು ತಾನು ಕೃಷ್ಣನೊಂದಿಗೆ ಎಂದೂ ವಿಯೋಗ ಹೊಂದದವಳು ಎಂದು ಬಲ್ಲವಳಾಗಿದ್ದರೂ ಸತಿಯು ಪತಿಗೆ ಅಂಜಿ ನಡೆಯಬೇಕು ಎಂಬ ಧರ್ಮವನ್ನು ತಿಳಿಸಿಕೊಡಲೆಂದು

---

೨೨೩. ಅಮುಗ್ಮೈವ ಮುಗ್ಧೇವ ತ್ವದುಃಖಾ ದುಃಖಿತೇವ ಚ ।
ಶ್ರೀರ್ದರ್ಶಯೇದ್ಧರಿಶ್ಚೈವ ನೈವೈತೌ ಮೋಹದುಃಖಿನೌ ।
ಮಿಥೋऽಪಿ ತಾದೃಗ್ವಚನಮಾಕಾರಂ ಚೈವ ಲೀಲಯಾ ।
ದರ್ಶಯಂತೌ ನೃಣಾಂ ಮೋಹಂ ಕುರ್ಯಾತಾಂ ಶಾಸ್ತ್ರದರ್ಶನಾತ್ ॥ ಇತಿ ಕಾಪಿಲೇಯೇ ।

– ಭಾ.ತಾ. (೧೦/೯೨/೫೨)

ದುಃಖಿತಳಂತೆ ತೋರಿಸಿಕೊಂಡಳು. ದೇವದೇವನಾದ ಕೃಷ್ಣ ಗೃಹಸ್ಥಧರ್ಮವನ್ನು ತಿಳಿಸಿ ಕೊಡಲೆಂದು ನಿತ್ಯ ಸುಖಿಯಾದ ಅವಳನ್ನು ಸಮಾಧಾನಪಡಿಸಿದ.

ಏ: ೧) ರುಗ್ಮಿಣಿಯಿಂದ ಕೃಷ್ಣನಿಗೆ ಆಗಬೇಕಾದ್ದೇನೂ ಇಲ್ಲ ಎಂಬುದು ಸತ್ಯವಾದ ಮಾತೇ, ಅವನು ಸ್ವರತನಲ್ಲವೇ. ಆದರೆ, ಅತ್ಯಂತ ಶ್ರೇಷ್ಠಳಾದ ಪರಮ ಭಕ್ತೆ ಎಂಬ ದೃಷ್ಟಿಯಿಂದ ಅವರ ಮೇಲೆ ಅಪಾರ ಪ್ರೀತಿಯನ್ನು ಹೊಂದಿರುವನು. ಆದರೆ, ಇಲ್ಲಿ ಪ್ರೀತಿಯೂ ಇಲ್ಲ ಎಂದು ಹೇಳುತ್ತಿರುವುದು ಮಾತ್ರ ಎಡಂಬನೆ ಎಂದು ತಿಳಿಯಬೇಕು.

೨) ಕೃಷ್ಣ ಪರಿಪೂರ್ಣ, ತನ್ನದು ಅವನಲ್ಲಿ ಕೇವಲ ಪ್ರೀತಿ ಎಂದು ಬಲ್ಲವಳಾದರೂ ರುಗ್ಮಿಣೀದೇವಿ ಕೃಷ್ಣನ ಮಾತಿನಿಂದ ನೊಂದವಳಂತೆ ತೋರಿದಳು. ಕೃಷ್ಣ ಪತ್ನಿಯ ದುಃಖವನ್ನು ಪರಿಹರಿಸುವುದು ಪತಿಯ ಕರ್ತವ್ಯ ಎಂಬುದನ್ನು ತೋರಿಸಿಕೊಡಲೆಂದು ಅವಳನ್ನು ಸಮಾಧಾನ–ಪಡಿಸಿದ. ಹೀಗೆ ಲಕ್ಷ್ಮೀನಾರಾಯಣರಿಬ್ಬರೂ ಪರಸ್ಪರ ಪೂರ್ಣ ಒಮ್ಮನಸ್ಸಿನಿಂದ *ಲೋಕ–ಎಡಂಬನೆ ಮಾಡಿದ್ದು ಇಲ್ಲಿಯ ವಿಶೇಷ.

ಯಮುನೆಯನ್ನು ಸೆಳೆದ ಬಲರಾಮ

ಏವಂ ಕ್ರೀಡತ್ಯಬ್ಜಭವೇ ರಮಾಯಾಂ
ಕೃಷ್ಣಾದಿಷ್ಟೋ ಗೋಕುಲಂ ರೌಹಿಣೇಯಃ ।
ಪ್ರಾಯಾದ್ದೃಷ್ಟ್ವಾ ತತ್ರ ನಂದಂ ಯಶೋದಾಂ
ತತ್ಪೂಜಿತಃ ಕೃಷ್ಣವಾರ್ತಾಂ ಚ ಪೃಷ್ಟಃ ॥ ೨೨೪ ॥

ಅ: ಹೀಗೆ ಕೃಷ್ಣನು ರುಗ್ಮಿಣಿಯೊಂದಿಗೆ ಕ್ರೀಡಿಸುತ್ತಿರಲು ಕೃಷ್ಣನ ಮಾತಿನಿಂದ ಬಲರಾಮ ಗೋಕುಲಕ್ಕೆ ತೆರಳಿದ. ಅಲ್ಲಿ ನಂದನನ್ನು, ಯಶೋದೆಯನ್ನು ಕಂಡು ಅವರಿಂದ ಪೂಜಿತನಾದ. ಅವರು ಕೃಷ್ಣನ ವಾರ್ತೆಯನ್ನು ಕೇಳಿದರು.

ಮಾಸೌ ತತ್ರ ನ್ಯವಸದ್ಗೋಪಿಕಾಭೀ
ರೇಮೇ ಕ್ಷೀಬೋ ಯಮುನಾಮಾಹ್ವಯಚ್ಚ ।
ಮತ್ತೋಽಯಮಿತ್ಯೇವ ನದೀಮನಾಗತಾಂ
ಚಕರ್ಷ ರಾಮೋ ಲಾಂಗಲೇನೋಗ್ರವೀರ್ಯಃ ॥ ೨೨೫ ॥

---

* ಯಾಂ ಯಾಂ ಪರೇಶ ಉರುಧೈವ ಕರೋತಿ ಲೀಲಾಂ ತಾಂ ತಾಂ ಕರೋತ್ಯನು ತಥೈವ ರಮಾಽಪಿ ದೇವೀ ।
ನೈತಾವತಾಽಸ್ಯ ಪರಮಸ್ಯ ತಥಾ ರಮಾಯಾ ದೋಷೋಽಣುರಪ್ಯನುವಿಚಿಂತ್ಯ ಉರುಪ್ರಭೂ ಯತ್ ॥
– ಮ.ಭಾ.ತಾ.ನಿ. (೫/೩೫)

ಅ: ಅಲ್ಲಿ ಎರಡು ತಿಂಗಳು ವಾಸವಾಗಿದ್ದು ಬಲರಾಮ ಗೋಪಿಕಾಸ್ತ್ರೀಯರೊಂದಿಗೆ ವಿಹರಿಸಿದ. ಅಲ್ಲಿಯೂ ಮಧುಪಾನ ಮಾಡಿದ ಬಲರಾಮ ಮತ್ತನಾಗಿ ಯಮುನೆಯನ್ನು ತಾನಿದ್ದಲ್ಲಿಗೇ ಬರಲು ಕರೆದ. ಇವನು ಮತ್ತನಾಗಿರುವನು ಎಂದು ತಿಳಿದು ಅದು ಬಾರದಿದ್ದಾಗ ಮಹಾವೀರನಾದ ಅವನು ನೇಗಿಲಿನಿಂದ ಅದನ್ನು ತಾನಿದ್ದಲ್ಲಿಗೆ ಎಳೆದ.

ವಿ: ೧) ಬಲರಾಮ ಹಾಗೆ ಕುಡಿದ ಮಧು ಹಿಂದೆ ಈಗಾಗಲೇ ತಿಳಿಸಿರುವಂತೆ ನಿಷಿದ್ಧವಲ್ಲದ ಪೇಯ ಎಂಬುದನ್ನು ಗಮನಿಸಬೇಕು. ಹಾಗೆ ಪೇಯ ರೂಪದಲ್ಲಿ ಬಂದದ್ದು ಅವನ ಪತ್ನಿ ವಾರುಣೀ ದೇವಿಯೇ.

೨) ಬಲರಾಮ ಸೆಳೆದಾಗ ಯಮುನೆ ಅವನಿದ್ದಲ್ಲಿಗೇ ಹರಿದು ಬಂದಳು. ಬಲರಾಮನ ಅತ್ಯದ್ಭುತವಾದ ಕಾರ್ಯಗಳಲ್ಲಿ ಇದೂ ಒಂದು. ನದಿಯ ಪಾತ್ರವನ್ನೇ ಬದಲಿಸಿದ ಅಪೂರ್ವ ಸಾಮರ್ಥ್ಯ ಅವನದು. ಅದಕ್ಕೆ ಅವನೊಳಗೆ ಆಗ ವ್ಯಕ್ತವಾಗಿದ್ದ ಶ್ರೀಹರಿಯ ಶುಕ್ಲಕೇಶ ರೂಪದ ಆವೇಶವೇ ಕಾರಣ ಎಂಬ ವಿವರಣೆ ಮುಂದೆ ಬಂದಿದೆ (ಶ್ಲೋ. ೨೩೯).

೩) ಬಲರಾಮ ಅಲ್ಲಿ ನೆಲೆಸಿದ್ದು ಒಟ್ಟು ಎರಡು ತಿಂಗಳು ಎಂದು ಭಾಗವತದಲ್ಲಿದೆ.

ಪುನಸ್ತಯಾ ಪ್ರಣತಃ ಸಂಸ್ತುತಶ್ಚ
ವ್ಯಸರ್ಜಯತ್ ತಾಮಥ ನಂದಗೋಪಃ ।
ಆಪೃಚ್ಛ್ಯ ಗಾದ್ದ್ವಾರಕಾಂ ಕೇಶವಾಯ
ನ್ಯವೇದಯನ್ನಂದಗೋಪಾದಿಭಕ್ತಿಮ್ ॥ ೨೨೬ ॥

ಅ: ಅವಳು ನಮಸ್ಕರಿಸಿ ಸ್ತುತಿಸಿದಾಗ ಬಲರಾಮ ಅವಳನ್ನು ಮರಳಿ ಕಳುಹಿಸಿದ. ಬಳಿಕ ನಂದಗೋಪನಿಂದ ಬೀಳ್ಕೊಂಡು ದ್ವಾರಕೆಗೆ ಹಿಂದಿರುಗಿದ. ಕೃಷ್ಣನಿಗೆ ನಂದಗೋಪಾದಿಗಳು ಅವನಲ್ಲಿರಿಸಿರುವ ಭಕ್ತಿಯನ್ನು ಅರಿಕೆ ಮಾಡಿದ.

ವಿ: ಯಮುನೆ ಮಾಡಿದ ಸ್ತೋತ್ರದ ವಿವರ ಭಾಗವತದಲ್ಲಿದೆ. ಇಂದಿಗೂ ಹಾಗೆ ಯಮುನೆ ಬಲರಾಮನಿಂದ ಸೆಳೆಯಲ್ಪಟ್ಟ ಸಂಕೇತವಾಗಿ ನದಿ ಅಲ್ಲಿ ವಕ್ರವಾಗಿ ಹರಿಯುವುದು ಅಂದಿನ ಈ ಪ್ರಸಂಗಕ್ಕೆ ಸೂಚನೆ.

---

* ದ್ವೌ ಮಾಸೌ ತತ್ರ ಚಾವಾತ್ಸೀನ್ಮಧುಂ ಮಾಧವಮೇವ ಚ ।
ರಾಮಃ ಕ್ಷಪಾಸು ಭಗವಾನ್ ನಾನಾನುನಯಕೋವಿದಃ ॥ – ಭಾಗವತ (೧೦/೬೫/೧೭)

\+ ರಾಮ ರಾಮ ಮಹಾಬಾಹೋ ನ ಜಾನೇ ತವ ವಿಕ್ರಮಮ್ ।... – ಭಾಗವತ (೧೦/೬೫/೨೬,೨೭)

ಬಲರಾಮನಿಂದ ಮೈಂದವಿವಿದರ ವಧೆ

ತದ್ವೈವ ಮೈಂದೋ ವಿವಿದಶ್ಚ ಭೌಮೌ
ಹತೌ ಸಖಾಯೌ ದಾನವಾವೇಶಯುಕ್ತೌ ।
ಆನರ್ತರಾಷ್ಟ್ರಂ ವಾಸುದೇವಪ್ರತೀಪೌ
ವ್ಯನಾಶಯೇತಾಂ ವಾಸುದೇವೋಽಥ ಚೋಚೇ ॥ ೨೨೭ ॥

ಅ: ಆಗ ಅಸುರಾವೇಶದಿಂದ ಕೂಡಿದವರಾಗಿ ನರಕಾಸುರನಿಗೆ ಸ್ನೇಹಿತರಾಗಿದ್ದ ಮೈಂದ, ವಿವಿದರು ಅವನು ಸತ್ತಮೇಲೆ ಕೃಷ್ಣನ ವಿರೋಧಿಗಳಾಗಿ ಆನರ್ತದೇಶವನ್ನು ನಾಶ ಮಾಡ-ತೊಡಗಿದರು. ಅವನನ್ನು ಕೊಲ್ಲಲು ಕೃಷ್ಣ ಬಲರಾಮನಿಗೆ ಹೇಳಿದ.

ಎ: ೧) ಮೈಂದ ವಿವಿದರು ಅಶ್ವಿನೀ ದೇವತೆಗಳ ಅವತಾರ. ರಾಮಾಯಣ ಕಾಲದಲ್ಲಿ ಕಪಿ ರೂಪದಲ್ಲಿ ಅವತರಿಸಿ ಬಂದವರು, ವರುಣಾವತಾರನಾದ ಸುಷೇಣನ ಪುತ್ರರು. ಅವರು ಅಸುರಾ-ವೇಶದಿಂದಾಗಿ ರಾಮ ವರಂಧಾಮಕ್ಕೆ ತೆರಳುವಾಗ ಹಿಂಬಾಲಿಸದೇ ಹಾಗೆಯೇ ಉಳಿದುಕೊಂಡಿದ್ದ ವಿವರ ಈಗಾಗಲೇ ಬಂದಿದೆ (೯/೧೦೯).

೨) ರಾಮ ಭಕ್ತರಾದ ಅವರು ಇಲ್ಲಿ ಕೃಷ್ಣ ದ್ವೇಷಿಗಳಾಗಿದ್ದು ಅಸುರಾವೇಶದ ಫಲ. ಕೃಷ್ಣಭಕ್ತರಾದ ಗರ್ಗಾಚಾರ್ಯರು ಅಸುರಾವೇಶದಿಂದಾಗಿ ಕೃಷ್ಣದ್ವೇಷಿಗಳಾದ ಪ್ರಸಂಗವನ್ನು ಇದು ಹೋಲುತ್ತದೆ. ಅವರ ನಿಗ್ರಹಕ್ಕಾಗಿ ಕೃಷ್ಣ ಬಲರಾಮನನ್ನು ಕಳುಹಿಸಿದ ಎಂದರ್ಥ.

ರಾಮಾಯ ಸೋಽದಾದ್ವರಮಬ್ಜನಾಭೋ
ವಧ್ಯಾವೇತೌ ಭವತಾಂ ತೇಽಪ್ಯವಧ್ಯೌ ।
ವರಾದ್ವಿರಿಂಚಸ್ಯ ತಥಾಽಮೃತಾಶನಾ-
ದುಭೌ ಚ ಮೈಂದೋ ವಿವಿದೋ ವ್ರಜೇತಿ ॥ ೨೨೮ ॥

ಅ: ಕೃಷ್ಣ ಬಲರಾಮನಿಗೆ ವರ ನೀಡಿದ 'ಈ ಮೈಂದ, ವಿವಿದರು ಬ್ರಹ್ಮ ವರದಿಂದಾಗಿಯೂ, ಅಮೃತಪಾನದಿಂದಾಗಿಯೂ ಅವಧ್ಯರಾಗಿರುವರು. ಆದರೂ ನಿನ್ನಿಂದ ಅವರು ಹತರಾಗುವರು, ತೆರಳು' ಎಂದು.

---

೨೨೭. ವಾಸುದೇವೋಽಥ ಚೋಚ ಇತ್ಯತ್ರ ಅಥ ರಾಮಾಯೋಚೇ= ಏತೌ ಜಹೀತ್ಯೂಚೇ। ಸಃ= ಕೃಷ್ಣಃ ಅಸ್ಮೈ ರಾಮಾಯ ವರಂ ಬುದಾದಿತ್ಯನ್ವಯಃ। ವಿರಿಂಚಿವರಾತ್ ತಥಾ ಅಮೃತಾಶನಾಚ್ಚ ಅವಧ್ಯಾವಪೀತ್ಯಪಿಪದಸಂಬಂಧಃ ಮೈಂದೋ ವಿವಿದ ಇತ್ಯುಭಾವಪೀತಿ ಸಂಬಂಧಃ ॥ -(ವಾ.)

ವಿ: ಬ್ರಹ್ಮವರ ಹಾಗೂ ಅಮೃತ ಪಾನದಿಂದಾಗಿ ಅವಧ್ಯರಾಗಿದ್ದ ಅವರ ಸಂಹಾರ ಶೇಷಾವತಾರನಾದ ಬಲರಾಮನಿಗೆ ಸಾಧ್ಯವಾದುದೆಂತು ಎಂಬುದಕ್ಕೆ ಇಲ್ಲಿ ಉತ್ತರವಿದೆ. ಕೃಷ್ಣ ನೀಡಿದ ವರದಿಂದಾಗಿ ಬಲರಾಮನಿಗೆ ಆ ಕಾರ್ಯ ಸಾಧ್ಯವಾಯಿತು ಎಂದರ್ಥ.

ಗತ್ವಾ ಸ ಮೈಂದಂ ಪ್ರಥಮಂ ಜಘಾನ
ಕ್ರೋಧಾದ್ಯುದ್ಧಾಯಾಗತಂ ರೈವತಾಗ್ರೇ ।
ದಿನೇ ಪರಸ್ಮಿನ್ ವಿವಿದಂ ಜಘಾನ
ಶಿಲಾ ವರ್ಷಂತಂ ಮುಸಲೇನಾಗ್ರ್ಯಕರ್ಮಾ ॥ ೨೨೯ ॥

ತಯೋರಾವಿಷ್ಟೌ ತಾವಸುರೌ ತಮೋಽಂಧಂ ।
ಪ್ರಾಪ್ತೌ ಚ ತಾವಶ್ವಿನೌ ಸ್ವಂ ಚ ಲೋಕಮ್ ॥ ೨೩೦ ॥

ಅ: ಹಾಗೆ ತೆರಳಿದ ಬಲರಾಮ ಮೊದಲಿಗೆ ತನ್ನನ್ನು ರೈವತ ಪರ್ವತದ ಶಿಖರದಲ್ಲಿ ಕೋಪದಿಂದ ಎದುರಿಸಿ ಬಂದ ಮೈಂದನನ್ನು ಸಂಹರಿಸಿದ; ಮಹಾಶ್ರೇಷ್ಠಕಾರ್ಯಗಳನ್ನು ಮಾಡುವ ಅವನು ಮಾರನೆಯ ದಿನ ಶಿಲೆಗಳ ಮಳೆಗರೆಯುತ್ತಿದ್ದ ವಿವಿದನನ್ನು ಮುಸಲದಿಂದ ಹೊಡೆದು ಕೊಂದ (೨೨೯).

ಅವರೊಳಗೆ ಆವಿಷ್ಟರಾಗಿದ್ದ ಅಸುರರು ಅಂಧಂತಮಸ್ಸನ್ನು ಹೊಂದಿದರು ಮತ್ತು ಅಶ್ವಿನೀದೇವತೆಗಳು ತಮ್ಮ ಲೋಕವನ್ನು ಸೇರಿದರು (೨೩೦).

ವಿ: ೧) ಅಸುರಾವೇಶದಿಂದಾಗಿ ನರಕಾಸುರನ ಮಿತ್ರರಾಗಿದ್ದ ಅವರು ಕೃಷ್ಣ ನರಕಾಸುರನನ್ನು ಕೊಂದದ್ದರಿಂದ ಕೋಪಗೊಂಡು ದ್ವಾರಕೆಯನ್ನು ನಾಶಮಾಡತೊಡಗಿದ್ದರು. ಅದರಿಂದಾಗಿ ಕೃಷ್ಣ ಬಲರಾಮನಿಂದ ಅವರಿಬ್ಬರನ್ನೂ ಕೊಲ್ಲಿಸಿದ.

೨) ರಾವಣನ ಸಂಹಾರದ ಅನಂತರ ಅಸುರಾವೇಶದಿಂದಾಗಿ ಶಿವ ರಾಮನ ಮೇಲೆ ಯುದ್ಧಕ್ಕೆ ತೆರಳಿದಂತೆ ಈ ಮೈಂದ ವಿವಿದರ ರೀತಿ ಇರುವುದನ್ನು ಗಮನಿಸಬೇಕು(೮/೨೧೮–೨೧೯).

೩) ಹೀಗೆ ತಿಳಿಸುವ ಮೂಲಕ ಹರಿ ದ್ವೇಷಿಗಳಿಗೆ ತಮಸ್ಸು, ಹರಿಭಕ್ತರಿಗೆ ಮುಕ್ತಿ ಎಂಬುದು ನಿತ್ಯತತ್ವ ಎಂಬುದನ್ನು ತಿಳಿಸಿರುವರು.

೪) ಅಶ್ವಿನೀದೇವತೆಗಳ ನಕುಲಸಹದೇವರೂಪಗಳು ಭೀಮಾನುಯಾಯಿಗಳಾಗಿದ್ದು ಕೃಷ್ಣನಿಗೆ ಪ್ರಿಯವಾದರೆ, ಈ ಮೈಂದವಿವದರೂಪಗಳು ಅಸುರಾವೇಶದಿಂದಾಗಿ ಬಲರಾಮನಿಂದ ಹತವಾದದ್ದು ವಿಶೇಷ.

ಲಕ್ಷಣಾ ಸ್ವಯಂವರ

ದುರ್ಯೋಧನಸ್ಯಾಸ ಪುತ್ರೀ ರತಿರ್ಯಾ
ಪೂರ್ವಂ ನಾಮ್ನಾ ಲಕ್ಷಣಾ ಕಾಂತರೂಪಾ ।
ಸ್ವಯಂವರಸ್ಥಾಂ ತಾಂ ಬಲಾದೇವ ಸಾಂಬೋ
ಜಗ್ರಾಹ ಸಾ ಚೈನಮಾಸಾನುರಕ್ತಾ ॥ ೨೩೧ ॥

ಅ: ದುರ್ಯೋಧನನಿಗೆ ಲಕ್ಷಣೆಯೆಂಬ ಮಗಳಿದ್ದಳು. ರತಿಯ ಅವತಾರವಾದ ಅವಳು ತುಂಬಾ ಸುಂದರಿ. ಅವಳ ಸ್ವಯಂವರದಲ್ಲೂ ಅವಳನ್ನು ಸಾಂಬ ಬಲಾತ್ಕಾರದಿಂದ ಕೈಹಿಡಿದ. ಅವಳೂ ಅವನಲ್ಲಿ ಅನುರಕ್ತಳಾದಳು.

ವಿ: ಅವಳು ರತಿಯ ಅವತಾರವಾಗಿದ್ದಂತೆ ಅವಳ ಕೈಹಿಡಿದ ಕೃಷ್ಣ–ಜಾಂಬವತಿಯರ ಪುತ್ರನಾದ ಸಾಂಬ ಮನ್ಮಥನವತಾರನಾಗಿದ್ದವನು. ಅದರಿಂದಾಗಿಯೇ ಅವರಿಬ್ಬರಲ್ಲಿ ಪರಸ್ಪರ ಅನುರಾಗ ಮೂಡಿತ್ತು ಎಂದರ್ಥ.

ಕೌರವರಿಂದ ಸಾಂಬಗ್ರಹಣ

ಬಲಾದ್ಗೃಹೀತಾಂ ವೀಕ್ಷ್ಯ ತಾಂ ಕರ್ಣಮುಖ್ಯಾ
ದುರ್ಯೋಧನಾದ್ಯಾ ಯುಯುಧುಃ ಕ್ರೋಧದೀಪ್ತಾಃ ।
ಕೃಚ್ಛ್ರೇಣ ತಂ ವಿರಥೀಕೃತ್ಯ ಚೈಕಂ
ಸರ್ವೇ ಸಮೇತಾ ಜಗೃಹುರ್ಧಾರ್ತರಾಷ್ಟ್ರಾಃ ।
ಕರ್ಣೇನ ಭೂರಿಶ್ರವಸಾ ಚ ಸಾರ್ದ್ಧಂ
ಬಾಹ್ವೋರ್ಬಲಾದೇವ ದುರ್ಯೋಧನಸ್ಯ ॥ ೨೩೨ ॥

ಅ: ಅವಳನ್ನು ಬಲಾತ್ಕಾರದಿಂದ ಅವನು ಕೈಹಿಡಿದುದನ್ನು ಕಂಡು ಕರ್ಣ ಮೊದಲಾದವರು, ದುರ್ಯೋಧನ ಮುಂತಾದವರು ಕೋಪದಿಂದ ಉರಿದು ಯುದ್ಧಕ್ಕೇ ತೊಡಗಿದರು. ಒಂಟಿಯಾದ ಅವನನ್ನು ಕಷ್ಟದಿಂದ ವಿರಥನನ್ನಾಗಿ ಮಾಡಿದರು; ಕೌರವರೆಲ್ಲಾ ಕರ್ಣನೊಂದಿಗೂ, ಭೂರಿಶ್ರವನೊಂದಿಗೂ ಕೂಡಿ ದುರ್ಯೋಧನನ ಬಾಹುಬಲದಿಂದ ಸೆರೆ ಹಿಡಿದರು.

---

೨೩೧. ಷಣ್ಮುಖಸ್ಯೈವ ಕಾಮಾವತಾರತ್ವಾತ್ ತಸ್ಯೈವ ಸಾಂಬತ್ವೇನಾವತೀರ್ಣತ್ವಾಚ್ಚ (೧೭/೨೨೦) ರತಿರೂಪ-ಲಕ್ಷಣಾಯಾಃ ಪಾಣಿಗ್ರಹಣಯೋಗ್ಯೋಽಸಾವಿತಿ ಭಾವೇನೋಕ್ತಂ ಸ್ವಯಂವರಸ್ಥಾಂ ತಾಂ ಬಲಾದೇವ ಸಾಂಬೋ ಜಗ್ರಾಹೇತಿ ॥ –(ವಾ.)

ಏಃ ದುರ್ಯೋಧನ ಕರ್ಣಾದಿ ಅನೇಕರು ಸೇರಿದರೂ ಒಂಟಿಯಾದ ಅವನನ್ನು ತುಂಬಾ ಶ್ರಮದಿಂದಲೇ ಸೆರೆ ಹಿಡಿದರು ಎಂಬಲ್ಲಿ ಕೃಷ್ಣರಕ್ಷಿತನಾದ ಸಾಂಬನ ಹಿರಿಮೆ ವ್ಯಕ್ತವಾಗಿದೆ.

ಸಾಂಬನ ಬಿಡುಗಡೆಗಾಗಿ ಬಲರಾಮ

ಶ್ರುತ್ವೈವ ತದ್ವೃಷ್ಣಯಃ ಸರ್ವ ಏವ
ಸಮುದ್ಯಮಂ ಚಕ್ರಿರೇ ಕೌರವೇಷು ।
ನಿವಾರ್ಯ ತಾನ್ ಬಲಭದ್ರಃ ಸ್ವಯಂ ಯಯೌ
ಸಹೋದ್ಧವಃ ಕೌರವೇಯಾನ್ ಶಮಾರ್ಥೀ ॥ ೨೩೩ ॥

ಅಃ ಆ ವಿಷಯವನ್ನು ಕೇಳುತ್ತಲೇ ಯಾದವರೆಲ್ಲಾ ಕೌರವರ ಮೇಲೆ ಸಮರಕ್ಕೆ ಸಿದ್ಧರಾದರು. ಬಲರಾಮ ಅವರನ್ನು ತಡೆದು ಶಾಂತಿಯನ್ನು ಬಯಸಿ ಉದ್ಧವನೊಂದಿಗೆ ಸ್ವತಃ ಕೌರವರ ಬಳಿಗೆ ಹೊರಟ.

ವಿಃ ಸಾಂಬ ಸೆರೆಸಿಕ್ಕ ವಿಚಾರವನ್ನು ನಾರದರಿಂದ ತಿಳಿದ ಯಾದವರೆಲ್ಲ ಅವನನ್ನು ಬಿಡಿಸಿ ತರಲೆಂದು ಯುದ್ಧಕ್ಕೆ ಸಿದ್ಧರಾಗಲು ಬಲರಾಮ ಅವರನ್ನು ತಡೆದು ಉದ್ಧವನೊಂದಿಗೆ ತಾನು ಹೊರಟ. ಹಾಗೆ ತೆರಳಲು ದುರ್ಯೋಧನ ತನ್ನ ಶಿಷ್ಯನಾದ್ದರಿಂದ ತನ್ನನ್ನು ಗೌರವಿಸಿ ಅವನು ಸಾಂಬನನ್ನು ಬಿಡುಗಡೆ ಮಾಡಬಹುದೆಂಬ ಭಾವನೆ ಕಾರಣವಾಗಿತ್ತು.

ಕೌರವರಿಗೆ ಬಲರಾಮನ ಸಂದೇಶ

ಪುರಸ್ಯ ಬಾಹ್ಯೋಪವನೇ ಸ್ಥಿತಃ ಸ
ಪ್ರಾಸ್ಥಾಪಯಚ್ಚೋದ್ಧವಂ ಕೌರವಾರ್ಥೇ ।
ಆಗತ್ಯ ಸರ್ವೇ ಕುರವೋಽಸ್ಯ ಪೂಜಾಂ
ಚಕ್ರುಃ ಸ ಚಾಹೋಗ್ರಸೇನಸ್ಯ ಚಾಜ್ಞಾಮ್ ॥ ೨೩೪ ॥

ಅಃ ಹಸ್ತಿನಾಪುರದ ಹೊರ ಉದ್ಯಾನದಲ್ಲಿ ಇಳಿದುಕೊಂಡು ಬಲರಾಮ ಕೌರವರ ಬಳಿಗೆ ಉದ್ಧವನನ್ನು ಕಳುಹಿಸಿದ. ಕೌರವರೆಲ್ಲಾ ಅವನ ಬಳಿಗೆ ಬಂದು ಸತ್ಕರಿಸಿದರು. ಅವನು ಉಗ್ರಸೇನನ ಆದೇಶವನ್ನು ತಿಳಿಸಿದ.

ಆಜ್ಞಾಪಯದ್ವೋ ನೃಪತಿಃ ಸ್ವಯಂ ನಃ
ಕುಮಾರಕಃ ಪ್ರಗೃಹೀತೋ ಭವದ್ಭಿಃ ।
ಏಕಃ ಸಮೇತೈರ್ಬಹುಭಿರ್ಬಾಂಧವಾರ್ಥಂ
ಕ್ಷಾಂತಂ ತನ್ನೋ ಮುಂಚತಾಶ್ವೇವ ಸಾಂಬಮ್ ॥ ೨೩೫ ॥

ಅ: 'ನಮ್ಮ ಮಹಾರಾಜ ಉಗ್ರಸೇನನು ನಿಮಗೆ ಆದೇಶಿಸಿರುವನು. ನೀವೆಲ್ಲಾ ಬಹಳಷ್ಟು ಜನ ಸೇರಿ ಒಂಟಿಯಾದ ನಮ್ಮ ಕುಮಾರನನ್ನು ಸೆರೆ ಹಿಡಿದಿರುವಿರಿ. ಆದರೆ ನಾವು ಬಂಧುಗಳೆಂದು ಅದನ್ನು ಕ್ಷಮಿಸಿರುವೆವು. ಕೂಡಲೇ ಸಾಂಬನನ್ನು ಬಿಡುಗಡೆ ಮಾಡಿರಿ'.

ಕೌರವರ ಔದ್ಧತ್ಯ

ಆಜ್ಞಾಪಯಾಮಾಸ ಚ ಉಗ್ರಸೇನ
ಇತ್ಯುಕ್ತಮೇವ ತು ನಿಶಮ್ಯ ಕುರುಪ್ರವೀರಾಃ ।
ಸಂಶ್ರಾವ್ಯ ದುಷ್ಟವಚನಾನಿ ಬಲಂ ಪುರಂ ಸ್ವಂ
ಕ್ರೋಧಾತ್ ಸಮಾವಿವಿಶುರತ್ರ ಚುಕೋಪ ರಾಮಃ ॥ ೨೩೬ ॥

ಅ: ಉಗ್ರಸೇನ ಹೀಗೆ ಆದೇಶಿಸಿರುವನು ಎಂದು ಬಲರಾಮ ಹೇಳಿದ್ದನ್ನು ಕೇಳಿ ಕೌರವರು ಕೋಪದಿಂದ ಬಲರಾಮನನ್ನು ಕೆಟ್ಟ ಮಾತುಗಳಿಂದ ನಿಂದಿಸಿ ತಮ್ಮ ನಗರಕ್ಕೆ ತೆರಳಿದರು. ಆಗ ಬಲರಾಮ ಕೋಪಗೊಂಡ.

ವಿ: ದುರ್ಯೋಧನ ಬಲರಾಮನನ್ನು ಹೀಗೆ ಅವಮಾನಿಸುವ ಮೂಲಕ ಗುರುದ್ರೋಹಿಯೂ ಆದ ಎಂಬುದನ್ನು ಗಮನಿಸಬೇಕು.

ಹಸ್ತಿನಾಪುರವನ್ನು ಸೆಳೆದ ಬಲರಾಮ

ಸ್ವಲಾಂಗಲೇನ ತತ್ಪುರಂ ವಿಕೃಷ್ಯ ಜಾಹ್ನವೀಜಲೇ ।
ನಿಪಾತಯನ್ ನಿವಾರಿತಃ ಪ್ರಣಮ್ಯ ಸರ್ವಕೌರವೈಃ ॥ ೨೩೭ ॥

---

೨೩೭. ಅದ್ಯಾಪಿ ಚ ಪುರಂ ಹ್ಯೇತತ್ ಸೂಚಯದ್ರಾಮವಿಕ್ರಮಮ್ ।
ಸಮುನ್ನತಂ ದಕ್ಷಿಣತೋ ಗಂಗಾಯಾಮನುದೃಶ್ಯತೇ ॥ – ಭಾಗವತ (೧೦/೬೮/೫೪)

ಅ: ಬಲರಾಮ ನೇಗಿಲಿನಿಂದ ಆ ಪಟ್ಟಣವನ್ನು ಸೆಳೆದು ಗಂಗೆಯ ನೀರಲ್ಲಿ ಬೀಳಿಸ ಹೊರಟಾಗ ಎಲ್ಲ ಕೌರವರೂ ಬಂದು ನಮಸ್ಕರಿಸಿ ಹಾಗೆ ಮಾಡದಿರಲು ಕೇಳಿಕೊಂಡರು.

ವಿ: ೧) ಇಡೀ ನಗರವೇ ಗಂಗೆಯ ಪಾಲಾದೀತೆಂಬ ಆಂಜಿಕೆಯಿಂದ ಕೌರವರೆಲ್ಲ ಬಲರಾಮನಿಗೆ ಶರಣಾಗಿ ಸಾಂಬನನ್ನು ಬಿಡುಗಡೆ ಮಾಡಿದ್ದಲ್ಲದೇ ಲಕ್ಷಣೆಯನ್ನೂ ಒಪ್ಪಿಸಿದರು. ಅಸಂಖ್ಯವಾದ ಬಗೆಬಗೆಯ ಕಾಣಿಕೆಗಳನ್ನೂ ನೀಡಿ ದುರ್ಯೋಧನ ಗೌರವಿಸಿದ.

೨) ಬಲರಾಮ ಹಿಂದೆ ಗೋಕುಲದಲ್ಲಿ ಯಮುನೆಯನ್ನೇ ತನ್ನ ಬಳಿ ಸೆಳೆದಿದ್ದರೆ, ಇಲ್ಲಿ ಹಸ್ತಿನಾಪುರವನ್ನೇ ಸೆಳೆದು ಗಂಗೆಯಲ್ಲಿ ಬೀಳಿಸಹೊರಟ ಎಂಬುದು ಅವನ ಅಗಾಧ ಪರಾಕ್ರಮಕ್ಕೆ ನಿದರ್ಶನ.

೩) ಅದರ ಸಂಕೇತವಾಗಿ ಇಂದಿಗೂ ಹಸ್ತಿನಾಪುರ ಒಂದೆಡೆ ಉನ್ನತವಾಗಿಯೇ ಇದ್ದು ಗಂಗೆಯೆಡೆಗೆ ವಾಲಿದಂತೆ ಕಾಣುವುದು ಎಂಬ ಮಾತು ಭಾಗವತದಲ್ಲಿ ಬಂದಿದೆ.

ಸಾಂಬಮೋಚನೆ

ಸಭಾರ್ಯಮಾಶು ಪುತ್ರಕಂ ಸುಯೋಧನಾಭಿಪೂಜಿತಮ್ ।
ಸಪಾರಿಬರ್ಹಮಾಪ್ಯ ಚ ಪ್ರಜಗ್ಮಿವಾನ್ ಸ್ವಕಂ ಪುರಮ್ ॥ ೨೩೮ ॥

ಅ: ದುರ್ಯೋಧನನಿಂದ ಪೂಜಿತನಾದ ಪತ್ನೀಸಮೇತನಾದ ಪುತ್ರ ಸಾಂಬನನ್ನು ಉಡುಗೊರೆಗಳೊಂದಿಗೆ ಸ್ವೀಕರಿಸಿ ಬಲರಾಮ ದ್ವಾರಕೆಗೆ ಹಿಂದಿರುಗಿದ.

ವಿ: ಬಲರಾಮ ಹೀಗೆ ಸತ್ಯಸಂಕಲ್ಪನಾಗಿ ಮರಳಿದ್ದು ಅವನಲ್ಲಿದ್ದ ವಿಶೇಷ ಹರಿ ಅನುಗ್ರಹಕ್ಕೆ ಸಾಕ್ಷಿಯಾಯಿತು. ಅಣ್ಣ ತಮ್ಮಂದಿರ ಮಕ್ಕಳು ಅವರೆಲ್ಲರಿಗೂ ಮಕ್ಕಳೆನ್ನಿಸುವರು. ಅದರಿಂದಾಗಿ ಕೃಷ್ಣಪುತ್ರನಾದ ಸಾಂಬನನ್ನು ಇಲ್ಲಿ ಬಲರಾಮಪುತ್ರನೆಂದು ಕರೆಯಲಾಗಿದೆ.

ಬಲರಾಮನ ಅಪೂರ್ವ ಕಾರ್ಯಗಳು

ಇತ್ಯಾದಿಕರ್ಮಾಣಿ ಮಹಾಂತಿ ರಾಮಸ್ಯಾ-
ಸನ್ ಶೇಷಸ್ಯಾಚ್ಯುತಾವೇಶಿನೋಽಲಮ್ ।
ಯಸ್ಯಾಚ್ಯುತಾವೇಶವಿಶೇಷಕಾಲಂ ಜ್ಞಾತ್ವಾ
ಭೀಮೋಽಪ್ಯಸ್ಯ ನೋದೇತಿ ಯುದ್ಧೇ ॥ ೨೩೯ ॥

ಅ: ಶ್ರೀಕೃಷ್ಣನ ಆವೇಶವನ್ನು ವಿಶೇಷವಾಗಿ ಹೊಂದಿದ ಶೇಷಾವತಾರನಾದ ಬಲರಾಮನಿಂದ ಇಂತಹ ಮಹತ್ಕಾರ್ಯಗಳು ನಡೆದವು. ಅವನಲ್ಲಿಯ ಶ್ರೀಕೃಷ್ಣನ ವಿಶೇಷ ಆವೇಶದ ಕಾಲವನ್ನು ಗಮನಿಸಿ ಭೀಮನೂ ಸಹ ಅವನೊಂದಿಗೆ ಯುದ್ಧಕ್ಕೆ ತೊಡಗುತ್ತಿರಲಿಲ್ಲ.

ವಿ: ಬಲರಾಮನ ಇಂತಹ ಕಾರ್ಯಗಳೆಲ್ಲಾ ಅವನಲ್ಲಿದ್ದ ಶ್ರೀಹರಿಯ ವಿಶೇಷ ಆವೇಶದಿಂದಾಗಿ ನಡೆದವು ಎಂದರ್ಥ. ಕೃಷ್ಣನ ವಿಶೇಷಾವೇಶ ಅವನಲ್ಲಿದ್ದಾಗ ಗದಾಯುದ್ಧ ಶಿಕ್ಷಣ ಪ್ರಸಂಗದಲ್ಲಿ ಭೀಮನೂ ಸಹ ಅವನೊಡನೆ ಯುದ್ಧಕ್ಕೆ ತೊಡಗುತ್ತಿರಲಿಲ್ಲ. ಆ ವಿವರ ಈಗಾಗಲೇ ಬಂದಿದೆ (೧೪/೧೦೩).

ಕ್ರೀಡಾಯುದ್ಧೇ ಬಹುಶೋ ರೌಹಿಣೇಯೇ
ವ್ಯಕ್ತಿಂ ವಿಷ್ಣೋರ್ಭೀಮಸೇನೋ ವಿದಿತ್ವಾ।
ತಾತ್ಕಾಲಿಕೀಂ ಪೀಡ್ಯಮಾನೋಽಪಿ ತೇನ
ನೈವೋದ್ಯಮಂ ಕುರುತೇ ವಿಷ್ಣುಭಕ್ತ್ಯಾ ॥ ೨೪೦ ॥

ಅ: ಬಲರಾಮನೊಂದಿಗೆ ಕ್ರೀಡೆಗಾಗಿ ಯುದ್ಧಕ್ಕೆ ತೊಡಗಿದಾಗ ಅವನಲ್ಲಿ ತತ್ಕಾಲದಲ್ಲಿ ಉಂಟಾಗುತ್ತಿದ್ದ ವಿಷ್ಣುವಿನ ವಿಶೇಷವಾದ ಆವೇಶವನ್ನು ಗಮನಿಸಿ ಭೀಮಸೇನ ಅವನೊಂದಿಗೆ ವಿಷ್ಣುಭಕ್ತಿಯ ಕಾರಣದಿಂದಾಗಿ ತನಗೆ ಪೆಟ್ಟು ಬೀಳುತ್ತಿದ್ದರೂ ಪ್ರತಿಯಾಗಿ ಹೊಡೆಯುತ್ತಿರಲಿಲ್ಲ.

ವಿ: ಶೇಷಾವತಾರನಾದ ಬಲರಾಮನಿಗಿಂತ ವಾಯು ಅವತಾರನಾದ ಭೀಮಸೇನ ತುಂಬಾ ಬಲಾಢ್ಯನಾದರೂ ಅವನಲ್ಲಿ ಶ್ರೀಹರಿಯ ಆವೇಶ ಇದ್ದಾಗ ಮಾತ್ರ ಹರಿಭಕ್ತಿಯನ್ನು ತೋರಲೆಂದು ತನಗೆ ಅವನು ಪೆಟ್ಟು ಹಾಕುತ್ತಿದ್ದರೂ ತಿರುಗಿ ಹೊಡೆಯುತ್ತಿರಲಿಲ್ಲ ಎಂದರ್ಥ.

ತದಾ ಜಯೀ ಪ್ರಭವತ್ಯೇಷ ರಾಮೋ
ನಾತಿವ್ಯಕ್ತಸ್ತತ್ರ ಯದಾ ಜನಾರ್ದನಃ।
ತದಾ ಭೀಮೋ ವಿಜಯೀ ಸ್ಯಾತ್ ಸದೈವ
ವಿಷ್ಣೋಃ ಕೇಶಾವೇಶವಾನ್ ಯತ್ ಸ ರಾಮಃ ॥ ೨೪೧ ॥

---

೨೪೦. 'ನಾಗಾಯುತಬಲಪ್ರಾಣೋ ಭೀಮೋ ಭೀಮಪರಾಕ್ರಮಃ।
ಅಸಕೃದ್ಬಲದೇವೇನ ಬಾಹುಯುದ್ಧೇ ಪರಾಜಿತಃ' ಇತಿ ಚ ॥ –(ಮ.)

ಅ: ಆಗ ಈ ಬಲರಾಮನು ಜಯಶಾಲಿಯಾಗುತ್ತಿದ್ದ. ಆದರೆ, ಅವನಲ್ಲಿ ವಿಷ್ಣುವಿನ ವಿಶೇಷ ಆವೇಶವಿಲ್ಲದಿದ್ದಾಗ ಸದಾ ಭೀಮನೇ ಜಯಶಾಲಿಯಾಗುತ್ತಿದ್ದ. ವಿಷ್ಣುವಿನ ಶುಕ್ಲಕೇಶ ಆವೇಶವನ್ನು ಬಲರಾಮ ಆಗ ಸದಾ ಹೊಂದಿದ್ದನಲ್ಲವೇ.

ವಿ: ಭೀಮಸೇನ ಗದಾಭ್ಯಾಸ ಕಾಲದಲ್ಲಿ ಬಲರಾಮನೊಂದಿಗೆ ವರ್ತಿಸುತ್ತಿದ್ದ ವಿವರ ಇಲ್ಲಿ ಸ್ಫುಟವಾಗಿ ನಿರೂಪಿತವಾಗಿದೆ. ಆದ್ದರಿಂದ ಇಲ್ಲಿ ಭೀಮನ ಹಿರಿಮೆಯ ಬಗ್ಗೆ ಶಂಕೆಗೆ ಅವಕಾಶವಿಲ್ಲ.

ಉಷಾ-ಅನಿರುದ್ಧರ ವಿವಾಹ

ಏತಾದೃಶೇನೈವ ರಾಮೇಣ ಯುಕ್ತೇ
ಕೃಷ್ಣೇ ದ್ವಾರ್ವತ್ಯಾಂ ನಿವಸತ್ಯಬ್ಜನಾಭೇ।
ಸ್ವಪ್ನೇऽನಿರುದ್ಧೇನ ರತಾ ಕದಾಚಿ-
ದ್ಬಾಣಾತ್ಮಜೋಷಾ ಚಿತ್ರಲೇಖಾಮುವಾಚ ॥ ೨೪೨ ॥

ತಮಾನಯೇತ್ಯಥ ಸಾ ಚಿತ್ರವಸ್ತ್ರೇ
ಪ್ರದರ್ಶ್ಯ ಲೋಕಾನ್ ಸಮದರ್ಶಯತ್ ತಮ್।
ಪೌತ್ರಂ ವಿದಿತ್ವಾ ವಚನಾಚ್ಚ ತಸ್ಯಾಃ
ಕೃಷ್ಣಸ್ಯ ತಂ ಚಾನಯತ್ ತತ್ರ ರಾತ್ರೌ ॥ ೨೪೩

---

೨೪೨. ಸ್ವಪ್ನೇऽನಿರುದ್ಧೇನೇತಿ –
ವೈಶಾಖೇ ಮಾಸಿ ಹರ್ಮ್ಯಸ್ಥಾಂ ದ್ವಾದಶ್ಯಾಂ ತ್ವಾಂ ದಿನಕ್ಷಯೇ।
ರಮಯಿಷ್ಯತಿ ಯಃ ಸ್ವಪ್ನೇ ಸ ತೇ ಭರ್ತಾ ಭವಿಷ್ಯತಿ।
ಸ್ವಪ್ನಯೋಗೇನ ಕಲ್ಯಾಣಿ ವ್ರತಲೋಪೋ ನ ವಿದ್ಯತೇ।
ಸ್ವಪ್ನೇಷು ವ್ಯಭಿಚಾರೇಣ ನಾತಿ ಕಶ್ಚಿದ್ವ್ಯತಿಕ್ರಮಃ।
ನ ಚ ಸ್ವಪ್ನಕೃತೋ ದೋಷೋ ಮರ್ತ್ಯಲೋಕೇऽಸ್ತಿ ಸುಂದರಿ ॥' *ಇತಿ ಪಾರ್ವತೀವಚನಮ್॥ – (ಮ.)

೨೪೩. 'ಪೌತ್ರಂ ವಿದಿತ್ವಾ ವಚನಾಚ್ಚ ತಸ್ಯಾಃ ಕೃಷ್ಣಸ್ಯ' ಇತಿ –
'ಉವಾಚ ಚಿತ್ರಲೇಖಾಂ ತಾಮಯಂ ಚೋರಃ ಸ ವೈ ಸಖಿ।
ಯೇನಾಹಂ ದೂಷಿತಾ ಪೂರ್ವಂ ಸ್ವಪ್ನೇ ಹರ್ಮ್ಯಗತಾ ಸಖಿ ॥' – ಹರಿವಂಶ।

ಅಥ ಕೃಷ್ಣಃ ಸಮಾರುಹ್ಯೇತಿ ಯದೂನಾಮಾಚಚಕ್ಷೇ ತಂ ಬದ್ಧಂ ಬಾಣೇನ ನಾರದಃ ಇತಿ ವಿಷ್ಣುಪುರಾಣೇ।

ಆಸ್ಥಿತಾ ಗರುಡಂ ದೇವ ಅಸ್ಯ ಚಾನು ಜನಾರ್ದನಃ।
ಹಲಾಯುಧಃ ಪೃಷ್ಟತೋ ನು ಪ್ರದ್ಯುಮ್ನಃ ಶತ್ರುಕರ್ಶನಃ ॥ – ಹರಿವಂಶ ॥ – (ಮ.)

---

* ಹರಿವಂಶ (೨/೧೧೭/೧೯-೨೧)

ಅ: ಇಂತಹ ಬಲರಾಮನೊಂದಿಗೆ ಕೂಡಿ ಪದ್ಮನಾಭನಾದ ಕೃಷ್ಣನು ದ್ವಾರಕೆಯಲ್ಲಿ ನೆಲೆಸಿದ್ದಾಗ ಒಮ್ಮೆ ಬಾಣಪುತ್ರಿಯಾದ ಉಷೆಯು ಸ್ವಪ್ನದಲ್ಲಿ ಅನಿರುದ್ಧನೊಂದಿಗೆ ಸಂಗಮ ಹೊಂದಿದಳು. ಅವಳು ಚಿತ್ರಲೇಖೆಗೆ ಹೇಳಿದಳು 'ಅವನನ್ನು ಕರೆದು ತಾ'. ಬಳಿಕ ಅವಳು ಚಿತ್ರವಸ್ತ್ರದಲ್ಲಿ ಜನರನ್ನು ಬರೆದು ತೋರಿಸಿ ಅವನು ಅವಳ ಮಾತಿನಂತೆ ಕೃಷ್ಣನ ಮೊಮ್ಮಗನೆಂದು ತಿಳಿದು ಅವನನ್ನು ರಾತ್ರಿಯಲ್ಲಿ ಅವಳ ಬಳಿಗೆ ಕರೆತಂದಳು.

ವಿ: ೧) ಅನಿರುದ್ಧ ಕೃಷ್ಣನ ಮೊಮ್ಮಗ, ಉಷೆ ಮೂಲರೂಪದಲ್ಲೂ ಅವನ ಪತ್ನಿಯಾದ ಉಷೆಯೇ. ಬಾಣಾಸುರ ಬಲಿಚಕ್ರವರ್ತಿಯ ಶತಪುತ್ರರಲ್ಲಿ ಜ್ಯೇಷ್ಠ, ಕಾರ್ತವೀರ್ಯಾರ್ಜುನನಂತೆ ಸಾವಿರ ಕೈಗಳನ್ನು ಹೊಂದಿದ್ದವನು, ಅಪೂರ್ವ ಶಿವಭಕ್ತ ಅವನು ವಿಷ್ಣುಭಕ್ತನಾಗಿ ಪರಿವರ್ತಿತನಾದ ಪ್ರಸಂಗದ ನಿರೂಪಣೆ ಈ ಪ್ರಸಂಗದಲ್ಲಿ ಬಂದಿದೆ.

೨) ಚಿತ್ರಲೇಖೆ ಉಷೆಯ ಸಖಿ. ಬಟ್ಟೆಯ ಮೇಲೆ ರಾಜಕುಮಾರರ ಚಿತ್ರವನ್ನು ಕಲ್ಪನೆಯಿಂದಲೇ ಬರೆಯಬಲ್ಲ ವಿಚಿತ್ರಶಕ್ತಿಯನ್ನು ಹೊಂದಿದವಳು. ಅದಕ್ಕೆ ಅವಳಿಗೆ ಚಿತ್ರಲೇಖೆ ಎಂದು ಹೆಸರು; ಉಷೆ ಕನಸ್ಸಿನಲ್ಲಿ ಕಂಡ ವ್ಯಕ್ತಿಯನ್ನು ಗುರುತಿಸಲು ಅವಳು ಆ ಕಾಲದ ರಾಜಕುಮಾರ ಚಿತ್ರಗಳನ್ನೆಲ್ಲಾ ಬರೆದಳು; ಕೃಷ್ಣಪೌತ್ರನಾದ ಅನಿರುದ್ಧನ ಚಿತ್ರ ಬರೆದಾಗ ಉಷೆ ಅವನನ್ನು ಗುರುತಿಸಲು ತತ್‌ಕ್ಷಣವೇ ಅವಳು ಮಾಯೆಯಿಂದ ಅವನನ್ನು ದ್ವಾರಕೆಯಿಂದ ಅವಳ ಬಳಿಗೆ ಕರೆತಂದಳು. ಅವಳು ಹಾಗೆ ಮಾಯೆಯಿಂದ ಬಯಸಿದ ಜನರನ್ನು ಕರೆತರುವ ಶಕ್ತಿಯನ್ನೂ ಹೊಂದಿದ್ದ ವಿಶಿಷ್ಟಸ್ತ್ರೀ.

ಅನಿರುದ್ಧಂ ಗುಣೋದಾರಮಾನೀತಂ ಚಿತ್ರಲೇಖಯಾ ।
ಪ್ರಾಪ್ಯ ರೇಮೇ ಬಾಣಸುತಾ ದಿವಸಾನ್ ಸುಬಹೂನಪಿ ॥ ೨೪೪ ॥

ಅ: ಚಿತ್ರಲೇಖೆ ಕರೆತಂದ ಗುಣಶಾಲಿಯಾದ ಅನಿರುದ್ಧನನ್ನು ಪಡೆದು ಬಾಣಪುತ್ರಿಯಾದ ಉಷೆ ಅವನೊಂದಿಗೆ ಅನೇಕ ದಿನಗಳ ಕಾಲ ರಮಿಸಿದಳು.

ವಿ: ಉಷೆ ಅನಿರುದ್ಧನೊಂದಿಗೆ ಗಾಂಧರ್ವರೀತಿಯಿಂದ ವಿವಾಹವಾಗಿ ಒಟ್ಟು ಚಾತುರ್ಮಾಸ್ಯದ ನಾಲ್ಕು ತಿಂಗಳುಗಳ ಕಾಲ ಅವನೊಡನೆ ರಹಸ್ಯವಾಗಿ ಜೊತೆಯಾಗಿದ್ದಳು ಎಂಬ ವಿವರ ಹರಿವಂಶ ಮತ್ತು * ಭಾಗವತಗಳಲ್ಲಿ ಬಂದಿದೆ.

---

* ತತಶ್ಚೋದ್ವಾಹ ಧರ್ಮೇಣ ಗಾಂಧರ್ವೇಣ ಸಮೀಯತುಃ । – ಹರಿವಂಶ (೨/೧೧೯/೭೫)
ಚತ್ವಾರೋ ವಾರ್ಷಿಕಾ ಮಾಸಾ ವ್ಯತೀಯುರನುಶೋಷತಾಮ್ । – ಭಾಗವತ (೧೦/೬೩/೧)

ಬಾಣನಿಂದ ಅನಿರುದ್ಧನ ಸೆರೆ

ಗೂಢಂ ಕನ್ಯಾಗೃಹೇ ತಂ ತು ಜ್ಞಾತ್ವಾ ಕನ್ಯಾಭಿರಕ್ಷಿಣಃ ।
ಊಚುರ್ಬಾಣಾಯಾದಿಶಚ್ಚ ಕಿಂಕರಾನ್ ಗ್ರಹಣೇऽಸ್ಯ ಸಃ ॥ ೨೪೫ ॥

ಅ: ಅನಿರುದ್ಧನು ಹಾಗೆ ಕನ್ಯೆಯ ಅಂತಃಪುರದಲ್ಲಿ ರಹಸ್ಯವಾಗಿ ನೆಲೆಸಿದ್ದುದನ್ನು ತಿಳಿದು ಕನ್ಯಾಂತಃಪುರರಕ್ಷಕರಾದ ಭಟರು ಬಾಣಾಸುರನಿಗೆ ತಿಳಿಸಿದರು. ಅವನು ಅವನನ್ನು ಸೆರೆ ಹಿಡಿಯಲೆಂದು ತನ್ನ ಭಟರನ್ನು ಕಳಿಸಿದ.

ಆಗತಾನನಿರುದ್ಧಸ್ತಾನ್ ಪರಿಘೇಣ ಮಹಾಬಲಃ ।
ನಿಹತ್ಯ ದ್ರಾವಯಾಮಾಸ ಸ್ವಯಮಾಯಾತ್ ತತೋऽಸುರಃ ।
ಸ ತು ಯುಧ್ವಾऽತಿಕೃಚ್ಛ್ರೇಣ ನಾಗಾಸ್ತ್ರೇಣ ಬಬಂಧ ತಮ್ ॥ ೨೪೬ ॥

ಅ: ಮಹಾಬಲನಾದ ಅನಿರುದ್ಧ ತನ್ನನ್ನು ಹಿಡಿಯಲು ಬಂದ ಅವರನ್ನು ಪರಿಘದಿಂದ ಹೊಡೆದೋಡಿಸಿದ. ಆಗ ಬಾಣಾಸುರ ತಾನೇ ಯುದ್ಧಕ್ಕೆ ಬಂದ. ಅವನು ತುಂಬಾ ಕಷ್ಟದಿಂದ ಕಾದಾಡಿ ಕೊನೆಗೆ ನಾಗಾಸ್ತ್ರದಿಂದ ಅವನನ್ನು ಸೆರೆ ಹಿಡಿದ.

ವಿ: ಸಾಂಬನನ್ನು ಸೆರೆಹಿಡಿಯಲು ಕೌರವರು ತುಂಬಾ ಶ್ರಮಪಟ್ಟಂತೆ ಅನಿರುದ್ಧನನ್ನು ಸೆರೆ ಹಿಡಿಯಲು ಬಾಣಾಸುರನೂ ತುಂಬಾ ಶ್ರಮಪಡಬೇಕಾಯಿತು ಎಂಬ ವಿವರ ಗಮನಾರ್ಹ.

ಅನಿರುದ್ಧಮೋಚನೆಗಾಗಿ ಶ್ರೀಕೃಷ್ಣ

ಅಥ ಕೃಷ್ಣಃ ಸಮಾರುಹ್ಯ ಗರುಡಂ ರಾಮಸಂಯುತಃ ।
ಪ್ರದ್ಯುಮ್ನೇನ ಚ ತತ್ರಾಗಾತ್ ಪ್ರಥಮಂ ತತ್ರ ವಹ್ನಿಭಿಃ ॥ ೨೪೭ ॥

ಯುಧ್ವೈವಾಂಗಿರಸಾ ಚೈವ ಕ್ಷಣಾದ್ವಿದ್ರಾವ್ಯ ತಾನ್ ಹರಿಃ ।
ವಿದ್ರಾವ್ಯ ಶರ್ವಪ್ರಮಥಾನಾಸಸಾದ ಜ್ವರಂ ತತಃ ॥ ೨೪೮ ॥

ಅ: ಬಳಿಕ ಕೃಷ್ಣ ಗರುಡನನ್ನೇರಿ ಬಲರಾಮನೊಂದಿಗೂ ಪ್ರದ್ಯುಮ್ನನೊಂದಿಗೂ ಕೂಡಿ ಅಲ್ಲಿಗೆ ಬಂದ. ಮೊದಲಿಗೆ ಅಗ್ನಿಗಳೊಂದಿಗೂ, ಅಂಗಿರಸನೊಂದಿಗೂ ಯುದ್ಧ ಮಾಡಿ ಅವರನ್ನು ಒಂದೇ ಕ್ಷಣದಲ್ಲಿ ಕೃಷ್ಣ ಸೋಲಿಸಿ ಓಡಿಸಿದ. ಅದರಂತೆ ಶಿವನ ಪ್ರಮಥಗಣಗಳನ್ನೂ ಓಡಿಸಿ ಜ್ವರವನ್ನು ಎದುರಿಸಿದ.

ವಿ: ೧) ಸರ್ವಜ್ಞನಾದ ಕೃಷ್ಣ ಅನಿರುದ್ಧನ ಬಂಧನ ವಾರ್ತೆಯನ್ನು ನಾರದರಿಂದ ಕೇಳಿದಂತೆ ಮಾಡಿ ಬಾಣಾಸುರನ ಮೇಲೆ ಯುದ್ಧಕ್ಕೆ ಆಗಮಿಸಿದ. ಆಂಗಿರಸ ಎಂದರೆ ಅಂಗಿರಸನ ಪುತ್ರ, ಪ್ರಧಾನಾಗ್ನಿ, ಆಂಗಿರ ಎಂಬ ಪ್ರಮಥ ಎಂದು ವ್ಯಾಖ್ಯಾನಗಳಲ್ಲಿದೆ.

೨) ಕೃಷ್ಣನನ್ನು ಇದುರಿಸಿ ಹೊರಟ ಶೈವಜ್ವರಕ್ಕೆ ಅಭಿಮಾನಿಗೆ ಮೂರು ತಲೆ, ಮೂರು ಕಾಲು, ಆರು ಕೈಗಳು ಮತ್ತು ಒಂಭತ್ತು ಕಣ್ಣುಗಳು ಎಂಬ ಉಲ್ಲೇಖ * ಹರಿವಂಶದಲ್ಲಿದೆ.

ಶೈವಜ್ವರ ವೈಷ್ಣವಜ್ವರಗಳು

ತೇನ ಭಸ್ಮಪ್ರಹಾರೇಣ ಜ್ವರಿತಂ ರೋಹಿಣೀಸುತಮ್ ।
ಆಶ್ಲಿಷ್ಯ ವಿಜ್ವರಂ ಚಕ್ರೇ ವಾಸುದೇವೋ ಜಗತ್ಪ್ರಭುಃ ॥ ೨೪೯ ॥

ಅ: ಆ ಜ್ವರದಿಂದ ಭಸ್ಮಪ್ರಹಾರದಿಂದ ಜ್ವರಪೀಡಿತನಾದ ಬಲರಾಮನನ್ನು ಜಗತ್ಪ್ರಭುವಾದ ಕೃಷ್ಣ ಆಲಿಂಗಿಸಿಕೊಂಡು ಜ್ವರದಿಂದ ಬಿಡುಗಡೆ ಮಾಡಿದ.

ಕೃಷ್ಣನಿಂದ ಶೈವಜ್ವರದ ಪರಾಭವ

ಸ್ವಯಂ ವಿಕ್ರೀಡ್ಯ ತೇನಾಥ ಕಂಚಿತ್ಕಾಲಂ ಜನಾರ್ದನಃ ।
ನಿಷ್ಪಿಷ್ಯ ಮುಷ್ಟಿಭಿಶ್ಚಾನ್ಯಂ ಸಸರ್ಜ ಜ್ವರಮಚ್ಯುತಃ ॥ ೨೫೦ ॥

ಅ: ಜನಾರ್ದನನಾದ ಕೃಷ್ಣ ಸ್ವಲ್ಪಸಮಯ ಅದರೊಂದಿಗೆ ಕ್ರೀಡಿಸಿ ಮುಷ್ಟಿಗಳಿಂದ ಜಜ್ಜಿದ. ಅಚ್ಯುತನಾದ ಅವನು ವೈಷ್ಣವ ಜ್ವರವನ್ನು ಸೃಷ್ಟಿಮಾಡಿದ.

ವಿ: ೧) ಶೈವಜ್ವರ ಮತ್ತು ವೈಷ್ಣವ ಜ್ವರಗಳ ಈ ಸಂಘರ್ಷ ಇಂದಿನ ಆಂತ್ರಾಕ್ಸ್ (Anthrax) ಪರಿಕಲ್ಪನೆಗೆ ಹತ್ತಿರವಾದುದು ಎಂಬುದನ್ನು ಗಮನಿಸಬೇಕು.

೨) ಬಲರಾಮನಿಗೆ ಜ್ವರಬಾಧೆಯಾದಾಗ ಕೃಷ್ಣ ಅದನ್ನು ಪರಿಹರಿಸಿದ. ಇದರಿಂದ ಕೃಷ್ಣಸ್ಮರಣೆಯಿಂದ ಜ್ವರಪೀಡೆ ನಿವಾರಣೆಯಾಗುವುದೆಂಬ ತತ್ವ ನಿರೂಪಿತವಾಗಿದೆ.

---

೨೪೮. ಆಂಗಿರಸಃಶಬ್ದಾರ್ಥತ್ವಂ ಚ ಆಂಗಿರಾ ಆಂಗಿರಃ ಪುತ್ರೋ ಯತೋಽಗ್ನಿರಭವತ್ ಕ್ವಚಿದಿತಿ ಋಗ್ಭಾಷ್ಯಸಿದ್ಧಂ ತಸ್ಯಾರ್ಥಃ ಯತೋಽಗ್ನಿಃ ಕ್ವಚಿತ್ ಕಾಲೇ ಆಂಗಿರಃ ಪುತ್ರಃ ಆಂಗಿರಸಃ ಪುತ್ರೋಽಭವತ್ ತತಃ ಆಂಗಿರಾ ಇತ್ಯುಚ್ಯತ ಇತಿ। – (ಸ.)

೨೪೮. ಆಂಗಿರಸಾಽಗ್ನಿವಿಶೇಷೇಣೇತಿ ವರದರಾಜೀಯೇ । ಆಂಗಿರೋ ನಾಮಕಪ್ರಮಥೇನೇತಿ ಕೇಚಿತ್ । ಪ್ರಧಾನಾಗ್ನಿನೇತ್ಯಪರೇ । ಅಗ್ನಿಗೋ ಹರಿಃ । – (ತಾ.)

* ಜ್ವರಸ್ತ್ರಿಪಾದಸ್ತ್ರಿಶಿರಾಃ ಷಡ್ಭುಜೋ ನವಲೋಚನಃ ।
ಭಸ್ಮಪ್ರಹರಣೋ ರೌದ್ರಃ ಕಾಲಾಂತಕಯಮೋಪಮಃ ॥ – ಹರಿವಂಶ (ವಿಷ್ಣು. ೧೨೨/೭೨)

೩) ಇಲ್ಲಿ ಶೈವಜ್ವರ ಎಂದರೆ ಶಿವ ಸೃಷ್ಟಿಸಿದ ಜ್ವರ ಎಂದು, ವೈಷ್ಣವಜ್ವರ ಎಂದರೆ ವಿಷ್ಣು ಸೃಷ್ಟಿಸಿದ ಜ್ವರ ಎಂದು ತಿಳಿಯಬೇಕು.

೪) ಇಲ್ಲಿ ಅಚ್ಯುತ ಎಂಬ ಪದಪ್ರಯೋಗದ ಮೂಲಕ ಅವನ ನಾಮವೇ ಜ್ವರಹರ–ವಾಗಿರುವಾಗ ಅವನು ಜ್ವರಹರನಾದದ್ದರಲ್ಲಿ ಅಚ್ಚರಿಯೇನು ಎಂಬ ತತ್ವವೂ ಸೂಚಿತ ಎಂದು ತಿಳಿಯಬಹುದು.

ಸ್ವಯಂ ಜಿತ್ವಾಽಪಿ ಗಿರಿಶಭೃತ್ಯಂ ನಾಲಮಿತಿ ಪ್ರಭುಃ ।
ಸ್ವಭೃತ್ಯೇನೈವ ಜೇತವ್ಯ ಇತ್ಯನ್ಯಂ ಸಸೃಜೇ ತದಾ ॥ ೨೫೧ ॥

ಅ: ಶಿವಭೃತ್ಯನನ್ನು ತಾನು ಸೋಲಿಸಿದ್ದರೂ ಅದು ಸಾಲದು ಎಂದು ಸಮರ್ಥನಾದ ಕೃಷ್ಣ ತನ್ನ ಭೃತ್ಯನಿಂದಲೂ ಅವನನ್ನು ಪರಾಭವಗೊಳಿಸಬೇಕೆಂದು ಬೇರೊಂದು ಜ್ವರವನ್ನು ಆಗಲೇ ಸೃಷ್ಟಿ ಮಾಡಿದ.

ವಿ: ೧) ಕೃಷ್ಣ ಜರಾಸಂಧನನ್ನು ತಾನು ಸೋಲಿಸಿ ಶಿವಭಕ್ತನಾದ ಅವನನ್ನು ತನ್ನ ಭಕ್ತಾಗ್ರೇಸರ–ನಾದ ಭೀಮನಿಂದ ಕೊಲ್ಲಿಸಿದಂತೆ ಈ ಪ್ರಸಂಗವೂ ಇದೆ ಎಂದು ತಿಳಿಯಬಹುದು.

೨) ಶೈವರ ಮೇಲಿನ ವೈಷ್ಣವವಿಜಯವೆಲ್ಲಾ ಈ ರೀತಿಯಾಗಿ ಅಪೂರ್ವ ಎಂದರ್ಥ.

ವೈಷ್ಣವಜ್ವರದಿಂದ ಶೈವಜ್ವರದ ಪರಾಭವ

ಜ್ವರೇಣ ವೈಷ್ಣವೇನಾಸೌ ಸುಭೃಶಂ ಪೀಡಿತಸ್ತದಾ ।
ಗ್ರಾಸಾರ್ಥಮುಪನೀತಶ್ಚ ಜಗಾಮ ಶರಣಂ ಹರಿಮ್ ।
ತೇನ ಸ್ತುತಃ ಸ ಭಗವಾನ್ ಮೋಚಯಾಮಾಸ ತಂ ವಿಭುಃ ॥ ೨೫೨ ॥

ಅ: ವೈಷ್ಣವ ಜ್ವರದಿಂದ ಬಹಳವಾಗಿ ಪೀಡಿತವಾದ ಆ ಶೈವಜ್ವರ, ಅದು ತನ್ನನ್ನು ನುಂಗಲು ಬಾಯಿ ತೆರೆದಾಗ ಕೃಷ್ಣನನ್ನೇ ಶರಣು ಹೊಕ್ಕಿತು. ಅದರಿಂದ ಸ್ತುತನಾದ ಪ್ರಭು ಕೃಷ್ಣ ಅದನ್ನು ಬಿಡುಗಡೆ ಮಾಡಿದ.

ವಿ: ೧) ಕೃಷ್ಣನನ್ನು ಶರಣು ಹೊಂದಿದರೆ ಜ್ವರ ಪರಿಹಾರವಾಗುವುದಕ್ಕೆ ಇದು ಮತ್ತೊಂದು ನಿದರ್ಶನವೆಂದು ತಿಳಿಯಬೇಕು.

೨) ಈ ಜ್ವರಕೃತ ವಿಷ್ಣುಸ್ತೋತ್ರಪಠನೆ ಸಹ ಜ್ವರಪರಿಹಾರಕ (ಹರಿವಂಶ ವಿಷ್ಣುಪರ್ವ, ಅಧ್ಯಾಯ ೧೨೩, ಭಾಗವತ ೧೦/೬೩/೨೯).

ಕ್ರೀಡಾರ್ಥಮತ್ಯಲ್ಪಜನೇಷ್ವಪಿ ಪ್ರಭುಃ
ಕಥಂಚಿದೇವ ವ್ಯಜಯದ್ವ್ಯಥಾಂ ವಿನಾ ।
ಇತ್ಯಾದಿ ಮೋಹಾಯ ಸ ದರ್ಶಯತ್ಯಜೋ
ನಿತ್ಯಸ್ವತಂತ್ರಸ್ಯ ಕುತೋ ವ್ಯಥಾದಯಃ ॥ ೨೫೩ ॥

ಅ: ಸಮರ್ಥನಾದ ಕೃಷ್ಣ ವ್ಯಥೆ ಹೊಂದದಿದ್ದರೂ ಮಹಾಪ್ರಯತ್ನದಿಂದಲೇ ಅಲ್ಪ ಜನರನ್ನೂ ಜಯಿಸಿದ ಎಂಬುದನ್ನು ಕ್ರೀಡೆಗೋಸ್ಕರವಾಗಿಯೂ, ಅಸುರ ಜನರ ಮೋಹನ-ಕ್ಕೋಸ್ಕರವಾಗಿಯೂ ತೋರುವನು. ನಿತ್ಯ ಸ್ವತಂತ್ರನಾದ ಅವನಿಗೆ ನೋವು ಮೊದಲಾದವು-ಗಳೆಲ್ಲಿ?

ಹರಿಯಿಂದ ಹರನ ಪರಾಭವ

ಯದಾ ಜ್ವರಾದ್ಯಾ ಅಖಿಲಾಃ ಪ್ರವಿದ್ರುತಾ-
ಸ್ತದಾ ಸ್ವಯಂ ಪ್ರಾಪ ಹರಿಂ ಗಿರೀಶಃ ।
ತಯೋರಭೂದ್ಯುದ್ಧಮಥೈನಮಚ್ಯುತೋ
ವಿಜೃಂಭಯಾಮಾಸ ವಿಜೃಂಭಣಾಸ್ತ್ರತಃ ॥ ೨೫೪ ॥

ಅ: ಜ್ವರ ಮೊದಲಾದವುಗಳೆಲ್ಲಾ ಪಲಾಯನ ಗೈಯ್ಯಲು ಆಗ ಶಿವ ಸ್ವತಃ ಕೃಷ್ಣನ ಮೇಲೇರಿ ಬಂದ. ಅವರಿಬ್ಬರ ಮಧ್ಯೆ ಯುದ್ಧ ನಡೆಯಿತು. ಶ್ರೀಕೃಷ್ಣ ವಿಜೃಂಭಣಾಸ್ತ್ರದಿಂದ ಶಿವನನ್ನು ಸ್ತಂಭನಗೊಳಿಸಿದ.

ವಿ: ೧) ಇತರರ ಸೋಲನ್ನು ಕಂಡ ಶಿವ ಬಾಣಾಸುರನ ರಕ್ಷಣೆಗೆಂದು ಸ್ವತಃ ತಾನೇ ಧಾವಿಸಿದ. ಕೃಷ್ಣ ವಿಜೃಂಭಣಾಸ್ತ್ರದಿಂದ ಶಿವನನ್ನು ಜಡದಂತೆ ನಿಷ್ಕ್ರಿಯನನ್ನಾಗಿಸಿದ ಎಂದರ್ಥ.

೨) ರಾಮಾಯಣದಲ್ಲಿ ವಿಷ್ಣು ಮತ್ತು ಶಿವ ಕ್ರಮವಾಗಿ ಶಾರ್ಙ್ಗ ಪಿನಾಕಗಳನ್ನು ಹಿಡಿದು ದೇವತೆಗಳ ಅಪೇಕ್ಷೆಯಂತೆ ಯುದ್ಧಕ್ಕೆ ನಿಂತಾಗ ಶಿವ ವಿಷ್ಣುವಿನ ಮುಂದೆ ಸ್ಥಾಣುವಿನಂತಾದ ಉಲ್ಲೇಖ

---

೨೫೩. ವ್ಯಜಯವ್ವ್ಯಥಾಂ ವಿನೇತ್ಯತ್ರ ವ್ಯಥಾಂ ವಿನಾ ಕಥಂಚಿದೇವ ವ್ಯಜಯತ್। ಸ್ವಯಂ ಜೇತುಮಶಕ್ತಃ ಸನ್ ಪ್ರತಿಜ್ವರಸ್ಯಾಪ್ಯ ವ್ಯಜಯದಿತ್ಯಾದಿಕಂ ಮೋಹಾಯ ದರ್ಶಯತೀತ್ಯರ್ಥಃ ॥ – (ವಾ.)

೨೫೪. ಜೃಂಭಕಾಸ್ತ್ರೇಣ ಗೋವಿಂದೋ ಜೃಂಭಯಾಮಾಸ ಶಂಕರಮ್ ।
ತತಃ ಪ್ರಣೇಶುರ್ದೈತೇಯಾಃ ಪ್ರಮಥಾಶ್ಚ ಸಮಂತತಃ ॥
ಜೃಂಭಾಭಿಭೂತಸ್ತು ಹರೋ ರಥೋಪಸ್ಥ ಉಪಾವಿಶತ್ ।
ನ ಶಶಾಕ ತತೋ ಯೋದ್ಧುಂ ಕೃಷ್ಣೇನಾಕ್ಲಿಷ್ಟಕರ್ಮಣಾ ॥ (ಇತ್ಯಾದಿ) – ವಿಷ್ಣುಪುರಾಣ (೫/೩೩/೨೪-೨೫)

ಈಗಾಗಲೇ ಬಂದಿದೆ (೪/೪೬). ಅದರಂತೆ ರಾವಣವಧೆಯ ನಂತರ ಶ್ರೀರಾಮನನ್ನು ಎದುರಿಸಿದ ಶಿವ ಸ್ಥಾಣುವಿನಂತಾಗಿ ಉರುಳಿದ ಪ್ರಸಂಗವು ಬಂದಿದೆ (೮/೨೧೯).

೩) ಅನೇಕಬಾರಿ ಹಾಗೆ ಶಿವನನ್ನು ಸ್ತಂಭನ ಮಾಡುವ ಮೂಲಕ ವಿಷ್ಣುವಿನ ಸರ್ವೋತ್ತಮತ್ವ ವಿಶೇಷವಾಗಿ ಪ್ರಕಟವಾಗಿದೆ.

ವಿಜೃಂಭತೇ ಶಂಕರೇ ನಿಷ್ಪ್ರಯತ್ನೇ
ಸ್ಥಾಣೂಪಮೇ ಸಂಸ್ಥಿತೇ ಕಂಜಜಾತಃ ।
ದೈತ್ಯಾವೇಶಾದ್ವಾಸುದೇವಾನಭಿಜ್ಞಂ
ಸಂಬೋಧಯಾಮಾಸ ಸದುಕ್ತಿಭಿರ್ವಿಭುಃ ॥ ೨೫೫ ॥

ಅ: ಹಾಗೆ ಸ್ತಂಭಿತನಾದ ಶಿವ ಪ್ರಯತ್ನಶೂನ್ಯನಾಗಿ ಮೋಟು ಮರದಂತೆ ನಿಂತಾಗ ಪ್ರಭು-ವಾದ ಬ್ರಹ್ಮ ಅಸುರಾವೇಶದಿಂದಾಗಿ ಕೃಷ್ಣನನ್ನು ಅರಿಯದೇ ಹೋಗಿದ್ದ ಅವನನ್ನು ಉತ್ತಮ ಮಾತುಗಳಿಂದ ಎಚ್ಚರಿಸಿದ.

ಪ್ರಗೃಹ್ಯ ಶರ್ವಂ ಚ ವಿವೇಶ ವಿಷ್ಣೋಃ
ಸ ತೂದರಂ ದರ್ಶಯಾಮಾಸ ತತ್ರ ।
ಶಿವಸ್ಯ ರೂಪಂ ಸ್ತಂಭಿತಂ ಬಿಲ್ವನಾಮ್ನಿ
ವನೇ ಗಿರೀಶೇನ ಚ ಯತ್ ತಪಃ ಕೃತಮ್ ।
ಶೈವಂ ಪದಂ ಪ್ರಾಪ್ತುಮೇವಾಚ್ಯುತಾಚ್ಚ
ತಚ್ಚಾವದತ್ ಕಂಜಜಃ ಶಂಕರಸ್ಯ ॥ ೨೫೬ ॥

---

೨೫೬. ಶಿವಸ್ಯ ರೂಪಂ ಸ್ತಂಭಿತಮಿತ್ಯತ್ರ ಬಿಲ್ವನಾಮ್ನಿ ವನೇ ಅಚ್ಯುತಾತ್ ಶೈವ ಪದಂ ಪ್ರಾಪ್ತುಂ ಗಿರಿಶೇನ ಯತ್ತಪಃ ಕೃತಂ ತಚ್ಚ ಕಂಜಜಃ ಶಂಕರಸ್ಯಾವದತ್। ತದೇವ ರೂಪಂ ಸ್ತಂಭಿತಮ್। ಬಾಣರಣಾಂಕಣೇ ಯುದ್ಧಕರಣಾಪರಾಧಾತ್ ಸ್ತಂಭಿತಂ ದರ್ಶಯಾಮಾಸ ಚ। ಶೈವಂ ಪದಂ ಪ್ರಾಪ್ತುಂ ತಪಃ ಕುರ್ವದ್ರೂಪಂ ಏಕೇನ ರೂಪೇಣ ಶೈವಪದಪ್ರಾಪ್ತಾವಪಿ ಅಪರಾಂಶೇನ ತಸ್ಯಾಂತರಾಯಪರಿಹಾರಾರ್ಥಂ ತಪಃ ಕುರ್ವದೇವಾದ್ಯಾಪಿ ತಿಷ್ಠತಿ। ತದೇವ ರೂಪಂ ಬಾಣಸಹಾಯಂ ಕುರ್ವತಾ ತ್ವಯಾ ಕೃತಾಪರಾಧೇನ ಸ್ತಂಭಿತಮಾಸೀತ್। ಅತಃ ಪರಂ ತ್ವಂ ವಿಷ್ಣುಭಕ್ತಿಂ ಕರೋಷಿ ಚೇತ್ ತದ್ರೂಪಸ್ತಂಭನಂ ವಿಹಾಯ ತಪ ಏವ ಕರಿಷ್ಯತಿ। ತದಾ ತವ ಪದಸ್ಯಾಂತರಾಯೋಽಪಿ ನ ಭವತಿ। ನೋ ಚೇತ್ತಪೋಭಂಗಾತ್ ಪದಭಂಗೋಽಪಿ ಭವಿಷ್ಯತೀತಿ ಬಲವದ್ಬಾಧಮುಕ್ತ್ವಾ ಬೋಧಯಾಮಾಸೇತಿ ಭಾವಃ। ಸ್ತಂಭನಸಮಯೇ ತಪಸೋಽಭಾವಾತ್ ಕ್ರಿಯಮಾಣಂ ತಪಃ ಅವದದಿತ್ಯುಕ್ತಮ್। ಅಧುನಾ ರೂಪಸ್ತಂಭನಸ್ಯೈವ ದೃಶ್ಯಮಾನತ್ವಾತ್ ಸ್ತಂಭಿತಂ ರೂಪಂ ದರ್ಶಯಾಮಾಸೇತ್ಯುಕ್ತಮಿತಿ ಜ್ಞೇಯಮ್ ॥ – (ವಾ.)

ಅ: ಶಿವನನ್ನು ಹಿಡಿದುಕೊಂಡು ವಿಷ್ಣುವಿನ ಉದರವನ್ನು ಪ್ರವೇಶ ಮಾಡಿ ಅಲ್ಲಿ ಬಿಲ್ವ ಎಂಬ ವನದಲ್ಲಿ ಶಿವನ ರೂಪ ಸ್ತಂಭಿತವಾಗಿರುವುದನ್ನು ತೋರಿಸಿದ. ಶಿವ ಪದವಿಯನ್ನು ಹೊಂದಲೆಂದು ನಡೆಯುತ್ತಿದ್ದ ಶಂಕರನ ತಪಸ್ಸೂ ಸಹ ಕೃಷ್ಣನಿಂದ ಸ್ತಂಭನಗೊಂಡಿರುವುದನ್ನು ತೋರಿಸಿದ.

ವಿ: ೧) ವಿಷ್ಣುವಿನ ವಿರೋಧದಿಂದಾಗಿ ಶಿವನ ಮೂಲರೂಪವೂ ಸಹ ಸ್ತಂಭಿತವಾಗಿ ಅವನ ತಪಸ್ಸಿಗೂ ವಿಘ್ನ ಒದಗಿರುವುದನ್ನು ಬ್ರಹ್ಮ ಶಿವನಿಗೆ ತೋರಿಸಿದ ಎಂದರ್ಥ (**'ಮೋಹಯಿತ್ವಾ ತು ಗಿರಿಶಂ ಜೃಂಭಣಾಸ್ತ್ರೇಣ ಜೃಂಭಿತವಮ್'** ಭಾಗವತ ೧೦/೬೪/೧೪).

೨)ಹೀಗೆ ಶಿವನಿಗೆ ಬ್ರಹ್ಮ ತಂದೆ ಮಾತ್ರವಲ್ಲದೇ ವಿಶೇಷ ಜ್ಞಾನನೀಡುವ ಗುರುವೂ ಆಗಿರುವುದು ಪ್ರಕಟವಾಯಿತು ಎಂದೂ ತಿಳಿಯಬಹುದು.

ಕೃಷ್ಣನಿಂದ ಬಾಣಬಾಹುಚ್ಛೇದ

ಅಪೇತಮೋಹೋ೭ಥ ವೃಷಧ್ವಜೋ ಹರಿಂ
ತುಷ್ಟಾವ ಬಾಣೋ೭ಭಸಸಾರ ಕೇಶವಮ್ ।
ತಸ್ಯಾಚ್ಯುತೋ ಬಾಹುಸಹಸ್ರಮಚ್ಛಿನತ್
ಪುನಶ್ಚಾರಿಂ ಜಗೃಹೇ ತಚ್ಛಿರೋ೭ರ್ಹಣೇ ॥ ೨೫೭ ॥

ಅ: ಅಸುರಾವೇಶದಿಂದಾಗಿ ಉಂಟಾಗಿದ್ದ ಮೋಹ ಅಳಿದು ವೃಷಭಧ್ವಜನಾದ ಶಿವ ಕೃಷ್ಣನನ್ನು ಹರಿಯೆಂದು ತಿಳಿದು ಸ್ತೋತ್ರ ಮಾಡಿದ. ಬಳಿಕ ಬಾಣಾಸುರ ಕೃಷ್ಣನ ಮೇಲೆ ಯುದ್ಧಕ್ಕೆ ತೊಡಗಿದ. ಕೃಷ್ಣ ಅವನ ಸಾವಿರ ತೋಳುಗಳನ್ನು ಕತ್ತರಿಸಿದ. ಬಳಿಕ ಅವನ ತಲೆಯನ್ನು ಕತ್ತರಿಸಲೆಂದು ಚಕ್ರವನ್ನು ಕೈಗೆತ್ತಿಕೊಂಡ.

ವಿ: ಕಾರ್ತವೀರ್ಯಾರ್ಜುನನಂತೆ ಬಾಣಾಸುರನೂ ಸಾವಿರ ತೋಳುಗಳನ್ನು ಹೊಂದಿದ್ದವನು. ಪರಶುರಾಮರೂಪದಿಂದ ಕಾರ್ತವೀರ್ಯಾರ್ಜುನನ ಸಾವಿರ ತೋಳುಗಳನ್ನು ಶ್ರೀಹರಿ ತರಿದು ಸಂಹರಿಸಿದ್ದ. ಕೃಷ್ಣರೂಪದಿಂದ ಬಾಣಾಸುರನ ಕೈಗಳನ್ನು ತರಿದು ಜೀವ ಉಳಿಸಿದ ಎಂಬುದು ವಿಶೇಷ.

ಹರನ ಪ್ರಾರ್ಥನೆಯಿಂದ ಬಾಣಮೋಕ್ಷಣ

ತದಾ ಶಿವೇನ ಪ್ರಣತೋ ಬಾಣರಕ್ಷಣಕಾಮ್ಯಯಾ ।
ಕೃತ್ವಾ ಸ್ವಭಕ್ತಂ ಬಾಣಂ ತಂ ರರಕ್ಷ ದ್ವಿಭುಜೀಕೃತಮ್ ॥ ೨೫೮ ॥

ಅ: ಆಗ ಬಾಣನನ್ನು ರಕ್ಷಿಸುವ ಇಚ್ಛೆಯಿಂದ ಶಿವ ಕೃಷ್ಣನನ್ನು ನಮಸ್ಕರಿಸಿದ. ಕೃಷ್ಣ ಬಾಣಾಸುರನನ್ನು ತನ್ನ ಭಕ್ತನನ್ನಾಗಿ ಮಾಡಿಕೊಂಡು ಎರಡು ಕೈಗಳನ್ನು ಉಳಿಸಿ ಅವನನ್ನು ರಕ್ಷಿಸಿದ.

ವಿ: ೧) ಹಿಂದಿನ ಶ್ಲೋಕದಲ್ಲಿ ಬಾಣನ ಸಾವಿರ ತೋಳುಗಳನ್ನು ಕತ್ತರಿಸಿದ ಎಂದರೆ ಎರಡು ತೋಳುಗಳನ್ನು ಉಳಿಸಿ ಉಳಿದ ತೋಳುಗಳನ್ನು ಕತ್ತರಿಸಿದ ಎಂದು ಅರ್ಥಮಾಡಿಕೊಳ್ಳಬೇಕು.

೨) ಹೀಗೆ ಹರಭಕ್ತನಾಗಿದ್ದ ಬಾಣ ಹರಿಭಕ್ತನಾದ. ಅವನು ಕೃಷ್ಣನನ್ನು ಹಾಗೆ ಎದುರಿಸಿ ಹೋರಾಡುವ ಮಹಾಪರಾಧವನ್ನು ಮಾಡಲು ಅವನೊಳಗೆ ಬಾಣನೆಂಬ ಹೆಸರಿನ ಅಸುರ ಆವಿಷ್ಟನಾಗಿದ್ದುದೇ ಕಾರಣವಾಗಿತ್ತು ಎಂಬ ವಿವರ ಹಿಂದೆ ಬಂದಿದೆ (೧೧/೨೧೬).

೩) ಬಾಣಾಸುರನಿಗೆ ಉಳಿದದ್ದು ಒಟ್ಟು ನಾಲ್ಕು ಕೈಗಳು, ಅದರಲ್ಲಿ ಬಲಭಾಗದಲ್ಲಿ ಎರಡು, ಮತ್ತು ಎಡಭಾಗದಲ್ಲಿ ಎರಡು ಎಂಬುದನ್ನು ಗಮನಿಸಿ ಅರ್ಥಮಾಡಿಕೊಳ್ಳಬೇಕು ಎಂಬ ವಿಶೇಷ ವಿವರ ಸತ್ಯಧರ್ಮತೀರ್ಥರ ಭಾಗವತ ಟಿಪ್ಪಣಿಯಲ್ಲಿದೆ.

೪) ಹರಿದ್ವೇಷಿಗಳಾದ ಘಂಟಾಕರ್ಣ ಕರ್ಣರು ಹರಿಭಕ್ತರಾದಂತೆ ಈ ಪ್ರಸಂಗ ಎಂಬುದನ್ನು ಗಮನಿಸಬೇಕು.

ಷಣ್ಮುಖಾದಿಗಳ ಪರಾಜಯ - ಅನಿರುದ್ಧಮೋಚನ

ಮೋಚಯಿತ್ವಾನಿರುದ್ಧಂ ಚ ಯಯೌ ಬಾಣೇನ ಪೂಜಿತಃ ।
ಏವಮಗ್ನೀನಂಗಿರಸಂ ಜ್ವರಂ ಸ್ಕಂದಮುಮಾಪತಿಮ್ ।
ಬಾಣಂ ಚಾಯತ್ನತೋ ಜಿತ್ವಾ ಪ್ರಾಯಾದ್ ದ್ವಾರವತೀಂ ಪುನಃ ॥ ೨೫೯ ॥

ಅ: ಕೃಷ್ಣ ಅನಿರುದ್ಧನನ್ನು ಬಿಡುಗಡೆಮಾಡಿ, ಬಾಣಾಸುರನಿಂದ ಪೂಜಿತನಾಗಿ ತೆರಳಿದ. ಹೀಗೆ ಅಗ್ನಿಗಳನ್ನು, ಅಂಗಿರಸನನ್ನು, ಜ್ವರವನ್ನು, ಷಣ್ಮುಖನನ್ನು, ಶಿವನನ್ನು, ಬಾಣಾಸುರನನ್ನು ಅನಾಯಾಸದಿಂದ ಗೆದ್ದು ಕೃಷ್ಣ ದ್ವಾರಕೆಗೆ ತೆರಳಿದ.

---

೨೫೮. ಕೃಷ್ಣಕೃಷ್ಣ ಜಗನ್ನಾಥ ಜಾನೇ ತ್ವಾಂ ಪುರುಷೋತ್ತಮಮ್ ।
ತತ್ಕೃತೀದಾಭಯಂ ದತ್ತಂ ಬಾಣಸ್ಯಾಸ್ಯ ಮಯಾ ಪ್ರಭೋ ॥
ತತ್ ತ್ವಯಾ ನಾನ್ಯತಂ ಕಾರ್ಯಂ ಯನ್ಮಯಾ ವ್ಯಾಹೃತಂ ವಚಃ ॥ – ವಿಷ್ಣುಪುರಾಣ (೫/೩೩/೪೧,೪೩)
ಭಾಗವತ (೧೦/೬೨/೩೧-೪೫); ಹರಿವಂಶ (ವಿಷ್ಣುಪರ್ವ, ಅಧ್ಯಾಯ ೧೨೫)

* ನನು ಭಾರತೇ ಹರಿವಂಶೇ ದ್ವಿಬಾಹುನಾ ಚ ಬಾಣೇನೇತಿ । 'ಕೃತ್ವಾ ದ್ವಿಬಾಹುಂ ತಂ ಬಾಣಂ ಛಿನ್ನಶಾಖಾಮಿವ ದ್ರುಮಮ್' ಇತಿ ಚ ದ್ವಿಬಾಹುತ್ವೋಕ್ತೇಃ ಕಥಮತ್ರ ಚತುರ್ಭುಜಮಿತ್ಯುಕ್ತಿರಿತಿ ಚೇತ್, ತತ್ರ ಬಾಹುಶಬ್ದ ಏಕಬಾಹುಪರೋಽತ್ರ ತು ಭಾಗದ್ವಿಕಬಾಹುಪರ ಇತಿ ದ್ವಿತ್ವಚತುಷ್ಟ್ವವಿರೋಧಸಂಭವಾತ್ । ಯದ್ವಾ ರುದ್ರಾಣೇ ಪ್ರತಿ ವಾಣೇ, ವಾಣೇ ಚ ರುದ್ರಂ ಪ್ರತೀತಿ ಕೃಷ್ಣೇನ ದ್ವಿವಾರಂ ದ್ವಿಭುಜಮಿತೀರಣಾತ್ ತಚ್ಚತುಷ್ಟ್ವಂ ಜ್ಞೇಯಮ್ ॥ – ಸತ್ಯಧರ್ಮೀಯಭಾಗವತಟಿಪ್ಪಣೇ (೧೦/೬೯/೪೯)

ಎ: ಕೃಷ್ಣ ಸ್ಕಂದನನ್ನು ಜಯಿಸಿದ ವಿವರ *ಹರಿವಂಶದಲ್ಲಿ ಬಂದಿದೆ. ಸ್ಕಂದ ಬ್ರಹ್ಮಾಸ್ತ್ರ, ಶಕ್ಯಾಯುಧಗಳನ್ನು ಪ್ರಯೋಗಿಸಿದಾಗ ಅವುಗಳನ್ನು ಕ್ರಮವಾಗಿ ಚಕ್ರದಿಂದಲೂ, ಹುಂಕಾರ–ದಿಂದಲೂ ಹಿಮ್ಮೆಟ್ಟಿಸಿ ಜಯಿಸಿದನು ಎಂದೂ ಉಕ್ತವಾಗಿದೆ.

ಹರಿಮಹಿಮೆಯ ವರ್ಣನೆ

ಯೇನಾಯತ್ನೇನ ವಿಜಿತಃ ಸರ್ವಲೋಕಹರೋ ಹರಃ ।
ಕಿಂ ಜ್ವರಾದಿಜಯೋ ವಿಷ್ಣೋಸ್ತಸ್ಯಾನಂತಸ್ಯ ಕಥ್ಯತೇ ॥ ೨೬೦ ॥

ಅ: ಸರ್ವಲೋಕಸಂಹಾರಕನಾದ ಶಿವನನ್ನು ಕೃಷ್ಣ ಯತ್ನವಿಲ್ಲದೆ ಜಯಿಸಿರುವಾಗ, ಅಂತಹ ಅನಂತ ಶಕ್ತನಾದ ಅವನಿಗೆ ಜ್ವರಾದಿಗಳ ಜಯವನ್ನು ಏನೆಂದು ಹೇಳಬೇಕು?

ಎ: ಶಿವನನ್ನೇ ಗೆದ್ದ ವಿಷ್ಣುವಿಗೆ ಶಿವನ ಭೃತ್ಯರಾದ ಜ್ವರಾದಿಗಳ ಜಯ ಕೈಮುತ್ಯಸಿದ್ಧ ಎಂದರ್ಥ.

ಈದೃಶಾನಂತಸಂಖ್ಯಾನಾಂ ಶಿವಾನಾಂ ಬ್ರಹ್ಮಣಾಮಪಿ ।
ರಮಾಯಾ ಅಪಿ ಯದ್ವೀಕ್ಷಾಂ ವಿನಾ ನ ಚಲಿತುಂ ಬಲಮ್ ॥ ೨೬೧ ॥

ಅ: ಇಂತಹ ಅನಂತ ಸಂಖ್ಯೆಯ ಶಿವರಿಗೂ, ಬ್ರಹ್ಮದೇವರಿಗೂ, ಮಹಾಲಕ್ಷ್ಮಿಗೂ ಸಹ ಆ ಶ್ರೀಹರಿಯ ಅನುಗ್ರಹವಿಲ್ಲದೇ ಚಲಿಸಲೂ ಸಹ ಶಕ್ತಿಯಿರದು.

ಎ: ಅನಂತ ಶಿವರು, ಅನಂತ ಬ್ರಹ್ಮರು ಎಂದರೆ ಹಿಂದಿನ, ಹಾಗೂ ಮುಂದಿನ ಅನಂತ ಕಲ್ಪಗಳಲ್ಲಿನ ಶಿವರು, ಬ್ರಹ್ಮರು ಎಂದರ್ಥ. ಮುಕ್ತಿಯಲ್ಲಂತೂ ಅನಂತ ಬ್ರಹ್ಮರು, ಶೇಷರು ಇದ್ದೇ ಇರುವರು. ಅವರಿಗೂ, ಮಹಾಲಕ್ಷ್ಮಿಗೂ ಚಲಿಸುವ ಶಕ್ತಿಮಾತ್ರವಲ್ಲದೇ ತಿಳಿಯುವ ಶಕ್ತಿ ಮೊದಲಾದ ಸಕಲ ಶಕ್ತಿಗಳೂ +ಸ್ವಾತಂತ್ರ್ಯೇಣ ಸರ್ವಥಾ ಇರುವುದಿಲ್ಲ ಎಂದರ್ಥ.

ನ ಚ ಜ್ಞಾನಾದಯೋ ಭಾವಾ ನ ಚಾಸ್ತಿತ್ವಮಪಿ ಕ್ವಚಿತ್ ।
ಅನಂತಶಕ್ತೇಃ ಕೃಷ್ಣಸ್ಯ ನ ಚಿತ್ರಃ ಶೂಲಿನೋ ಜಯಃ ॥ ೨೬೨ ॥

---

* ಚಕ್ರಮಪ್ರತಿಚಕ್ರಸ್ಯ ಲೋಕೇ ಖ್ಯಾತಂ ಮಹಾಮನಃ ।
ಅಸ್ತ್ರಂ ಬ್ರಹ್ಮಶಿರಸ್ತೇನ ನಿಷ್ಪಭಂ ಕೃತಮೋಜಸಾ ॥ – ಹರಿವಂಶ (೨/೧೨೬/೧೨)
ತಾಂ ಸಮೀಪಮನುಪ್ರಾಪ್ತಾಂ ಮಹಾಶಕ್ತಿಂ ಮಹಾಮೃಧೇ ।
ಹುಂಕಾರೇಣ ನಿರ್ಭರ್ತ್ಸ್ಯ ಪಾತಯಾಮಾಸ ಭೂತಲೇ ॥ – ಹರಿವಂಶ (೨/೧೨೬/೧೯)

\+ ಯಸ್ಮಾದ್ ಬ್ರಹ್ಮೇಂದ್ರರುದ್ರಾದಿದೇವತಾನಾಂ ಶ್ರಿಯೋಽಪಿ ಚ ।
ಜ್ಞಾನಸ್ಫೂರ್ತಿಃ ಸದಾ ತಸ್ಮೈ ಹರಯೇ ಗುರವೇ ನಮಃ ॥ – ಈಶಾವಾಸ್ಯೋಪನಿಷದ್ಭಾಷ್ಯ

ಅ: ಅದರಂತೆ ಅವರಾರಿಗೂ ಜ್ಞಾನಾದಿ ಗುಣಗಳಾಗಲೀ, ಅಸ್ತಿತ್ವವಾಗಲೀ ಅವನ ಅನುಗ್ರಹವಿಲ್ಲದೇ ಇರಲಾರವು. ಅಂತಹ ಅನಂತ ಶಕ್ತಿಯುಳ್ಳ ಕೃಷ್ಣನಿಗೆ ಶಿವನ ಜಯದಲ್ಲಿ ಅಚ್ಚರಿಯೇನೂ ಇಲ್ಲ.

ವಿ: ಅಗಾಧ ಮಹಿಮನಾದ ಹರನನ್ನು ಗೆದ್ದದ್ದು ಅಚ್ಚರಿಯ ಸಂಗತಿಯಾದರೂ ಕೃಷ್ಣನ ಸ್ವರೂಪವನ್ನು ಸರಿಯಾಗಿ ಬಲ್ಲವರಿಗೆ ಮಾತ್ರ ಅದರಲ್ಲಿ ಅಚ್ಚರಿ ಕಾಣದು ಎಂದರ್ಥ.

ಚಿತ್ರಲೇಖಾಸಮೇತೋಷಾನ್ವಿತಪೌತ್ರಸಮನ್ವಿತಃ ।
ಸರಾಮಃ ಸಸುತೋ ವೀಂದ್ರಮಾರುಹ್ಯ ದ್ವಾರಕಾಂ ಗತಃ ।
ರೇಮೇ ತತ್ರ ಚಿರಂ ಕೃಷ್ಣೋ ನಿತ್ಯಾನಂದೋ ನಿಜೇಚ್ಛಯಾ ॥ ೨೬೩ ॥

ಅ: ಚಿತ್ರಲೇಖೆಯೊಂದಿಗೆ ಕೂಡಿದ ಉಷೆಯ ಜೊತೆಗೆ ಅನಿರುದ್ಧನನ್ನು ಕರೆದುಕೊಂಡು ಬಲರಾಮನೊಂದಿಗೂ, ಪ್ರದ್ಯುಮ್ನನೊಂದಿಗೂ ಕೃಷ್ಣ ಗರುಡನನ್ನೇರಿ ದ್ವಾರಕೆಯನ್ನು ಸೇರಿದ; ಅಲ್ಲಿ ನಿತ್ಯಾನಂದನಾದ ಆ ಕೃಷ್ಣ ಸ್ವೇಚ್ಛೆಯಿಂದ ಬಹುಕಾಲ ವಿಹರಿಸಿದ.

ಹರಿಮಹಿಮಾಶ್ರವಣದ ಫಲಶ್ರುತಿ

ಏವಂವಿಧಾನ್ಯಗಣಿತಾನಿ ಯದೂತ್ತಮಸ್ಯ
ಕರ್ಮಾಣ್ಯಗಣ್ಯಮಹಿಮಸ್ಯ ಮಹೋತ್ಸವಸ್ಯ ।
ನಿತ್ಯಂ ರಮಾಕಮಲಜನ್ಮಗಿರೀಶಶಕ್ರ-
ಸೂರ್ಯಾದಿಭಿಃ ಪರಿನುತಾನಿ ವಿಮುಕ್ತಿದಾನಿ ॥ ೨೬೪ ॥

ಅ: ಯಾದವೋತ್ತಮನೂ, ಗಣಿಸಲಾಗದ ಮಹಾಮಹಿಮನೂ, ಮಹೋತ್ಸವಗಳಿಂದ ಕೂಡಿದವನೂ ಆದ ಶ್ರೀಕೃಷ್ಣನ ಇಂತಹ ಕಾರ್ಯಗಳು ಅನಂತವಾದುವು. ಇವು ಸದಾ ಮಹಾ-ಲಕ್ಷ್ಮಿ, ಬ್ರಹ್ಮ, ಶಿವ, ಇಂದ್ರ, ಸೂರ್ಯಾದಿಗಳಿಂದ ಸ್ತುತವಾದವು, ಮುಕ್ತಿ ನೀಡುವಂತಹವು.

ವಿ: ಕೃಷ್ಣನ ಇಂತಹ ಮಹಿಮೆಗಳು ಒಂದೆರಡಲ್ಲ, ಅಸಂಖ್ಯ ಎಂದರ್ಥ. ಅವುಗಳ ಚಿಂತನೆ ಮುಕ್ತಿಗೆ ಸಾಧನ ಎಂಬುದು ಅವುಗಳ ಫಲಶ್ರುತಿ.

ಪಾಂಡವರ ತೀರ್ಥಯಾತ್ರೆ

ಏವಂ ವಸತ್ಯಮಿತಪೌರುಷವೀರ್ಯಸಾರೇ
ನಾರಾಯಣೇ ಸ್ವಪುರಿ ಶಕ್ರಧನಂಜಯೋಕ್ತಃ ।
ಸಂಪ್ರಾಪ್ಯ ಲೋಮಶಮುನಿಃ ಸಕಲಾನಿ ತೀರ್ಥಾ-
ನ್ಯಾಪ್ತುಂ ಸ ಪಾಂಡುತನಯೇಷು ಸಹಾಯ ಆಸೀತ್ ॥ ೨೬೫ ॥

ಅ: ಹೀಗೆ ಅಪರಿಮಿತ ಬಲವೀರ್ಯಸಾರನಾದ ಶ್ರೀಕೃಷ್ಣನು ದ್ವಾರಕೆಯಲ್ಲಿ ನೆಲೆಸಿದ್ದಾಗ ಇಂದ್ರಾರ್ಜುನರಿಂದ ಕಳುಹಿಸಲ್ಪಟ್ಟ ಲೋಮಶಮುನಿ ಸಕಲ ತೀರ್ಥಗಳನ್ನು ಸಂಚರಿಸುವ ಕಾರ್ಯದಲ್ಲಿ ಪಾಂಡವರಿಗೆ ಜೊತೆಯಾದ.

ವಿ: ಅರ್ಜುನ ಸ್ವರ್ಗಲೋಕದಲ್ಲಿ ಇಂದ್ರನ ಅತಿಥಿಯಾಗಿ ಉಳಿದು ಅಲ್ಲಿಯೇ ಬಹುಕಾಲ ನೆಲೆಸಿದಾಗ ಅದನ್ನು ಲೋಮಶ ಮುನಿಗಳ ಮೂಲಕ ಪಾಂಡವರಿಗೆ ತಿಳಿಸಿ ಅವರೊಂದಿಗೆ ತೀರ್ಥ–ಯಾತ್ರೆಯನ್ನೂ ಸಹ ಮಾಡಿ ಬರಲು ಅವರನ್ನು ಕಳುಹಿಸಿಕೊಟ್ಟ.

ಪ್ರಭಾಸದಲ್ಲಿ ಪಾಂಡವರು

ಪೃಥ್ವೀಂ ಪ್ರದಕ್ಷಿಣತ ಏತ್ಯ ಸಮಸ್ತತೀರ್ಥಸ್ನಾನಂ
ಯಥಾಕ್ರಮತ ಏವ ವಿಧಾಯ ಪಾರ್ಥಾಃ ।
ಸಂಪೂಜ್ಯ ತೇಷು ನಿಖಿಲೇಷು ಹರಿಂ ಸುಭಕ್ತ್ಯಾ
ಕೃಷ್ಣೇ ಸಮರ್ಪಯಿತುಮಾಪುರಥ ಪ್ರಭಾಸಮ್ ॥ ೨೬೬ ॥

ಅ: ಪಾಂಡವರು ಭೂಮಿಯನ್ನು ಪ್ರದಕ್ಷಿಣ ಕ್ರಮದಲ್ಲಿ ಸಂಚರಿಸುತ್ತಾ ಸಮಸ್ತ ತೀರ್ಥಗಳ ಸ್ನಾನವನ್ನು ಶಾಸ್ತ್ರೋಕ್ತ ಕ್ರಮದಲ್ಲಿ ಮಾಡಿದರು. ಆ ಎಲ್ಲ ತೀರ್ಥಗಳಲ್ಲಿ ಶ್ರೀಹರಿಯನ್ನು ಭಕ್ತಿಯಿಂದ ಆರಾಧಿಸಿ, ಅದನ್ನು ಕೃಷ್ಣನಿಗೆ ಸಮರ್ಪಿಸಲೆಂದು ಪ್ರಭಾಸವನ್ನು ತಲುಪಿದರು.

ವಿ: ಲೋಮಶರೊಂದಿಗೆ ಪಾಂಡವರು ಭರತಖಂಡದ ಸಮಸ್ತ ತೀರ್ಥಕ್ಷೇತ್ರಗಳನ್ನು ಪ್ರದಕ್ಷಿಣಾಕಾರವಾಗಿ ಸಂದರ್ಶಿಸಿ ಅಲ್ಲೆಲ್ಲಾ ಶ್ರೀಹರಿಯನ್ನೇ ಮುಖ್ಯವಾಗಿ ಆರಾಧಿಸಿದ ವಿಷಯ ವನಪರ್ವದಲ್ಲಿ ವಿವರವಾಗಿ ನಿರೂಪಿತವಾಗಿದೆ. ಅದನ್ನು ತಿಳಿಸುವ ಭಾಗಕ್ಕೆ ತೀರ್ಥಯಾತ್ರಾಪರ್ವ ಎಂದೇ ಹೆಸರು. ಶ್ರೀವಾದಿರಾಜಸ್ವಾಮಿಗಳ ತೀರ್ಥಪ್ರಬಂಧದ ಅನೇಕ ವಿವರಗಳು ಇದರ ಸಂಗ್ರಹರೂಪವಾಗಿವೆ.

ಕೃಷ್ಣ ಪಾಂಡವರ ಸಮಾಗಮ

ಸಂಭಾವನಾಯ ಸಕಲೈರ್ಯದುಭಿಃ ಸಮೇತ-
ಸ್ತೇಷಾಂ ಚ ರಾಮಸಹಿತೋ ಹರಿರಾಜಗಾಮ ॥ ೨೬೭ ॥

ಅ: ಅವರನ್ನು ಸತ್ಕರಿಸಲೆಂದು ಸಕಲ ಯಾದವರೊಂದಿಗೆ ಬಲರಾಮ ಸಮೇತನಾಗಿ ಶ್ರೀಕೃಷ್ಣ ಅಲ್ಲಿಗೆ ಆಗಮಿಸಿದ.

ಪಾರ್ಥೈಃ ಸಂಪೂಜಿತಸ್ತತ್ರ ಕೃಷ್ಣೋ ಯದುಗಣೈಃ ಸಹ ।
ಪಾರ್ಥಾನ್ ಸಂಪೂಜಯಾಮಾಸುರ್ವೃಷ್ಣಯಶ್ಚಾಜ್ಞಯಾ ಹರೇಃ ॥ ೨೬೮ ॥

ಅ: ಕೃಷ್ಣನನ್ನು ಯಾದವರನ್ನು ಪಾಂಡವರೂ ವಿಶೇಷವಾಗಿ ಪೂಜಿಸಿದರು. ಕೃಷ್ಣನ ಅಪ್ಪಣೆಯಂತೆ ಸಕಲ ಯಾದವರು ಪಾಂಡವರನ್ನು ಸತ್ಕರಿಸಿದರು.

ತತ್ರ ಭೀಮಂ ತಪೋವೇಷಂ ದೃಷ್ಟ್ವಾತಿಸ್ನೇಹಕಾರಣಾತ್ ।
ದುರ್ಯೋಧನಂ ನಿಂದಯತಿ ರಾಮೇ ಸಾತ್ಯಕಿರಬ್ರವೀತ್ ॥ ೨೬೯ ॥

ಅ: ಅಲ್ಲಿ ತಪಸ್ವಿ ವೇಷದಲ್ಲಿದ್ದ ಭೀಮನನ್ನು ನೋಡಿ ಬಲರಾಮ ಅತ್ಯಂತ ಪ್ರೀತಿಯ ಕಾರಣದಿಂದಾಗಿ ದುರ್ಯೋಧನನನ್ನು ನಿಂದಿಸತೊಡಗಲು ಸಾತ್ಯಕಿ ಹೇಳಿದ.

ವಿ: ೧) ಎಲ್ಲರೂ ತಪಸ್ವಿಗಳ ವೇಷದಲ್ಲಿದ್ದರೂ ಬಲರಾಮನಿಗೆ ಭೀಮನ ತಪಸ್ವಿವೇಷ ಕಂಡು ಅದಕ್ಕೆ ಕಾರಣನಾದ ದುರ್ಯೋಧನನ ಮೇಲೆ ಕೋಪ ಕೆರಳಿತು ಎಂದರ್ಥ.

೨) ಅದಕ್ಕೆ ಕಾರಣ ತನಗಿಂತ ಪೂಜ್ಯನಾದ ಭೀಮನಿಗೆ ದುರ್ಯೋಧನ ದ್ರೋಹ ಮಾಡಿದ್ದೇ ಎಂದು ತಿಳಿಯಬೇಕು. ಹಾಗೆ ಉತ್ತಮರಿಗೆ ಅವಮಾನವಾದಾಗ ಸಿಡಿದೇಳುವುದು ಸಾತ್ವಿಕರ ಲಕ್ಷಣ.

ಸಾತ್ಯಕಿಯ ಏರೋದ್ಗಾರ

ಸರ್ವೇ ವಯಂ ನಿಹತ್ಯಾದ್ಯ ಸಕರ್ಣಾನ್ ಧೃತರಾಷ್ಟ್ರಜಾನ್ ।
ಅಭಿಮನ್ಯುಂ ಸ್ಥಾಪಯಾಮೋ ರಾಜ್ಯೇ ಯಾವತ್ ತ್ರಯೋದಶಮ್ ॥ ೨೭೦ ॥

ಸಂವತ್ಸರಂ ಸಮಾಪ್ಯೈವ ಪುರಂ ಯಾಸ್ಯಂತಿ ಪಾಂಡವಾಃ ।
ತತೋ ಯುಧಿಷ್ಠಿರೋ ರಾಜಾ ರಾಜ್ಯಂ ಶಾಸತು ಪೂರ್ವವತ್ ॥ ೨೭೧ ॥

ಅ: 'ನಾವೆಲ್ಲಾ ಕರ್ಣನನ್ನು, ಕೌರವರನ್ನು ಸಂಹರಿಸಿ ಪಾಂಡವರು ಹದಿಮೂರು ವರ್ಷ-ಗಳನ್ನು ಪೂರೈಸಿ ಪಟ್ಟಣಕ್ಕೆ ಮರಳುವ ವರೆಗೆ ಅಭಿಮನ್ಯುವನ್ನು ರಾಜ್ಯದಲ್ಲಿ ಕುಳ್ಳಿರಿಸೋಣ. ಬಳಿಕ ಧರ್ಮರಾಜನು ರಾಜನಾಗಿ ಹಿಂದಿನಂತೆ ರಾಜ್ಯವಾಳಲಿ'.

---

೨೬೯. ಪ್ರಾಚ್ಯಾಂ ನೃಪಾನೇಕರಥೇನ ಜಿತ್ವಾ ವೃಕೋದರಃ ಸಾನುಚರಾನ್ ರಣೇಷು ।
ಸ್ವಸ್ಯಾಗಮದ್ ಯೋಽತಿರಥಸ್ತರಸ್ವೀ ಸೋಽಯಂ ವನೇ ಕ್ಲಿಶ್ಯತಿ ಚೀರವಾಸಾಃ ॥

– ಭಾರತ (ವನ. ೧೧೯/೧೭)

ಏ: ಬಲರಾಮನು ನಿಂದಿಸಿದರ ಪ್ರಯೋಜನವನ್ನು ಪಡೆದ ಸಾತ್ಯಕಿ ಆಗಲೇ ಕೌರವರನ್ನು ಸಂಹರಿಸಿ ಅಭಿಮನ್ಯುವನ್ನು ರಾಜ್ಯದಲ್ಲಿ ಪಟ್ಟಾಭಿಷೇಕ ಮಾಡುವ ಯೋಜನೆಯೊಂದನ್ನು ಸೂಚಿಸಿದ ಎಂದರ್ಥ.

ಕೃಷ್ಣನು ತಿಳಿಸಿದ ಪಾಂಡವಹಾರ್ದ

ಏವಂ ವದತ್ಯೇವ ಶಿನಿಪ್ರವೀರೇ
ಜನಾರ್ದನಃ ಪಾರ್ಥಮುಖಾನ್ಯುದೀಕ್ಷ್ಯ ।
ಉವಾಚ ಶೈನೇಯ ನ ಪಾಂಡುಪುತ್ರಾಃ
ಪರೇಣ ಸಂಸಾಧಿತರಾಜ್ಯಕಾಮಾಃ ॥ ೨೭೨ ॥

ಸ್ವಬಾಹುವೀರ್ಯೇಣ ನಿಹತ್ಯ ಶತ್ರೂ-
ನಾಪ್ಸ್ಯಂತಿ ರಾಜ್ಯಂ ತ ಇತೀರಿತೇऽಮುನಾ ।
ತಥೇತಿ ಪಾರ್ಥಾ ಅವದಂಸ್ತತಸ್ತೇ
ಕೃಷ್ಣಂ ಪುರಸ್ಕೃತ್ಯ ಯಯುರ್ದಶಾರ್ಹಾಃ ॥ ೨೭೩ ॥

ಅ: ಹೀಗೆ ಸಾತ್ಯಕಿಯು ಹೇಳಲು ಕೃಷ್ಣ ಪಾಂಡವರ ಮುಖಗಳನ್ನು ನೋಡಿ ತಿಳಿಸಿದ 'ಸಾತ್ಯಕಿ! ಪಾಂಡವರು ಇತರರು ಸಂಪಾದಿಸಿಕೊಡುವ ರಾಜ್ಯವನ್ನು ಬಯಸುವವರಲ್ಲ. ಅವರು ತಮ್ಮ ಸ್ವಂತ ಬಾಹುಬಲದಿಂದಲೇ ಶತ್ರುಗಳನ್ನು ಕೊಂದು ರಾಜ್ಯವನ್ನು ಸಂಪಾದಿಸುವರು'. ಕೃಷ್ಣ ಹೀಗೆನ್ನಲು ಪಾಂಡವರು 'ಹೌದು' ಎಂದು ನುಡಿದರು. ಬಳಿಕ ಯಾದವರು ಕೃಷ್ಣನನ್ನು ಮುಂದಿಟ್ಟುಕೊಂಡು ಮರಳಿದರು.

ಏ: ೧) ಕೃಷ್ಣ ಪಾಂಡವರ ಅಸಾಮಾನ್ಯವಾದ ಕ್ಷಾತ್ರತೇಜಸ್ಸನ್ನು ಕೊಂಡಾಡಿದ ಬಗೆಯಿದು. ಪಾಂಡವರೆಂದೂ ಮತ್ತೊಬ್ಬರ ಸಹಾಯದಿಂದ ತಮ್ಮ ರಾಜ್ಯವನ್ನು ಪಡೆಯಬಯಸುವವರಲ್ಲ, ಅವರದೇನಿದ್ದರೂ ತಮ್ಮ ಬಾಹುಬಲದಿಂದಲೇ ಅದನ್ನು ಸಾಧಿಸುವ ಹಿರಿಮೆ.

೨) ಕೃಷ್ಣ ಹೀಗೆನ್ನುವ ಮೂಲಕ ದ್ಯೂತದಂತಹ ಕಪಟೋಪಾಯದಿಂದ ಪಾಂಡವರ ರಾಜ್ಯವನ್ನು ಕಿತ್ತಿಕೊಂಡ ಕೌರವರ ಪ್ರವೃತ್ತಿಯನ್ನು ಹಳಿದಿರುವನು ಎಂಬುದನ್ನು ಗಮನಿಸಬೇಕು.

---

೨೭೨. ಸ್ವಾಭ್ಯಾಂ ಭುಜಾಭ್ಯಾಮಜಿತಾಂ ತು ಭೂಮಿಂ ನೇಚ್ಛೇತ್ ಕುರೂಣಾಮೃಷಭಃ ಕದಾಚಿತ್ ।
ನ ಹ್ಯೇಷ ಕಾಮಾನ್ನ ಭಯಾನ್ನ ಲೋಭಾದ್ಯುಧಿಷ್ಠಿರೋ ಜಾತು ಜಹ್ಯಾತ್ ಸ್ವಧರ್ಮಮ್ ।
ಭೀಮಾರ್ಜುನೌ ಚಾತಿರಥೌ ಯಮೌ ಚ ತಥೈವ ಕೃಷ್ಣಾ ದ್ರುಪದಾತ್ಮಜೇಯಮ್ ॥
– ಭಾರತ (ವನ. ೧೨೦/೨೩, ೨೪)

೨) ಬಲರಾಮ, ಸಾತ್ಯಕಿ ಮೊದಲಾದವರು ಎಷ್ಟೇ ಬಲಾಢ್ಯರಾದರೂ ಸಾಕ್ಷಾತ್ ಕಲಿಯ ಅವತಾರನಾದ ದುರ್ಯೋಧನನನ್ನು ಕೊಲ್ಲುವ ಸಾಮರ್ಥ್ಯ ಇಲ್ಲದವರು ಎಂಬುದನ್ನು ಗಮನಿಸ–ಬೇಕು. ಕೃಷ್ಣ ಭೀಮರ ಹೊರತು ಇತರರಾರಿಗೂ ದುರ್ಯೋಧನ ಮಣಿಯುವಂತಹವನಲ್ಲ ಎಂಬುದು ಶಾಸ್ತ್ರ ತತ್ವ.

೩) ಸಾತ್ಯಕಿಯ ಉತ್ಸಾಹಪೂರ್ಣವಾದ ಮಾತುಗಳು ಅಭಿನಂದನಾರ್ಹವಾದರೂ ತಾತ್ವಿಕವಾಗಿ ಅವು ಅಂಗೀಕಾರಾನರ್ಹವಾಗಿದ್ದವು ಎಂಬುದು ಇದರ ಭಾವ.

೪) ಸಾತ್ಯಕಿ ಹಾಗೆ ನುಡಿಯಲು ಅರ್ಜುನ ಅವನ ಅಸ್ತ್ರಶಸ್ತ್ರಾದಿವಿದ್ಯೆಗಳಲ್ಲಿ ಗುರು–ವಾಗಿದ್ದುದು ಒಂದು ವಿಶೇಷ ಕಾರಣ ಎಂದು ತಿಳಿಯಬೇಕು (೨೦/೧೭೫). ಅವನ ಮಾತುಗಳೆಲ್ಲ ಗುರುಭಕ್ತಿದ್ಯೋತಕ ಎಂದು ತಿಳಿಯಬಹುದು.

ಹಿಮಾಲಯದಲ್ಲಿ ಪಾಂಡವರು

ಕ್ರಮೇಣ ಪಾರ್ಥಾ ಅಪಿ ಶೈಶಿರಂ ಗಿರಿಂ
ಸಮಾಸದಂಸ್ತತ್ರ ಕೃಷ್ಣಾಂ ಸುದುರ್ಗೇ ।
ವಿಷಜ್ಜಂತೀಂ ವೀಕ್ಷ್ಯ ತೈಃ ಸಂಸ್ಮೃತೋಽಥ
ಹೈಡಿಂಬ ಆಯಾತ್ ಸಹಿತೋ ನಿಶಾಚರೈಃ ॥ ೨೭೪ ॥

ಅ: ಪಾಂಡವರು ಸಹ ಕ್ರಮವಾಗಿ ಹಿಮಾಲಯ ಪರ್ವತವನ್ನು ತಲುಪಿದರು. ಅಲ್ಲಿ ತುಂಬಾ ದುರ್ಗಮವಾದ ಮಾರ್ಗದಲ್ಲಿ ದ್ರೌಪದಿಯು ಬಳಲಿದಂತೆ ಕಂಡದ್ದನ್ನು ನೋಡಿ ಅವರು ಘಟೋತ್ಕಚನನ್ನು ಸ್ಮರಿಸಿದರು. ಅವನು ರಾಕ್ಷಸರ ಸಮೇತವಾಗಿ ಆಗಮಿಸಿದ.

ವಿ: ೧) ಹಿಮಾಲಯ ಪರ್ವತದ ದುರ್ಗಮ ದಾರಿಯಲ್ಲಿ ದ್ರೌಪದಿಗೆ ಕ್ಲೇಶವಾಯಿತು ಎಂಬುದು ಅವರೊಳಗೆ ನೆಲೆಸಿದ್ದ ಪಾರ್ವತ್ಯಾದಿ ಇತರ ದೇವತಾ ಸ್ತ್ರೀಯರ ದೃಷ್ಟಿಯಿಂದ ಹೇಳಿದ

---

೨೭೪. ಶೈಶಿರಂ ಗಿರಿಂ ಸಮಾಸದನ್ ಇತ್ಯತ್ರ ಶಿಶಿರೋ ಹಿಮಃ ತತ್ಸಂಬಂಧಿನಂ ಗಿರಿಂ= ಹಿಮವತ್ಪರ್ವತಮಿತ್ಯರ್ಥಃ। ಗಂತುಮಶಕ್ಯಂ ದುರ್ಗಂ, ಸುದುರ್ಗೇ= ಅತ್ಯಂತದುರ್ಗಮ್ಯಸ್ಥಲೇ ವಿಷಜ್ಜಂತೀಂ= ವಿಷಾದಂ ಸಜ್ಜಂತೀಂ ಸಂಬಧ್ನಂತೀಂ ಗಮನಾಶಕ್ತ್ಯಾ ದುಃಖಿತಾಮಿತ್ಯರ್ಥಃ ॥ – (ವಾ.)

೨೭೪. ದುಃಖಿತಾಮಿತ್ಯತ್ರ ದುಃಖಿತಾಮಿವೇತ್ಯರ್ಥಃ । ಕೃಷ್ಣಾಯಾಃ ದುಃಖಾಭಾವಾತ್ (೩೦/೧೩೦)

೨೭೪. ವಿಷಜ್ಜಂತೀಂ ಪ್ರತಿಬದ್ಧಗಮನಾಂ ... । – (ವ.)

೨೭೪. ವಿಶೇಷಾಕಾರೇಣ ಸಜ್ಜತೀಮ್ । ಸಜು ಸಂಗೇ । ಪ್ರತಿಬದ್ಧಗಮನಾಂ ಭಾರತ್ಯತಿರಿಕ್ತವಿಷಯಮೇತತ್ । – (ತಾ.)

ಮಾತು ಎಂಬುದನ್ನು ಮರೆಯಬಾರದು. ಸ್ವತಃ ಸಕಲ ವಾಙ್ಮನೋದೇವತೆಯಾದ, ಭಾರತಿಯಾದ ದ್ರೌಪದಿಗೆ ಅಂತಹ ಯಾವ ಆಯಾಸವೂ ಸರ್ವಥಾ ಆಗದು.

೨) ಹಾಗೆ ನಟಿಸುವ ಮೂಲಕ ದ್ರೌಪದಿ ತಮ್ಮನ್ನು ಅನುಸರಿಸಿ ಬಂದಿದ್ದ ಅಸಂಖ್ಯ ಋಷಿ–ಮುನಿಗಳ ಸುಖಪ್ರಯಾಣಕ್ಕೆ ಅನುಗ್ರಹ ಮಾಡಿದರು ಎಂದು ತಿಳಿಯಬೇಕು.

ಗಗನಮಾರ್ಗದಲ್ಲಿ ಬದರೀಪ್ರಯಾಣ

ಉವಾಹ ಕೃಷ್ಣಾಂ ಸ ತು ತಸ್ಯ ಭೃತ್ಯಾ
ಊಹುಃ ಪಾರ್ಥಾಂಸ್ತೇ ಬದರ್ಯಾಶ್ರಮಂ ಚ ।
ಪ್ರಾಪ್ಯಾತ್ರ ನಾರಾಯಣಪೂಜಯಾ ಕೃತ-
ಸ್ವಕೀಯಕಾರ್ಯಾ ಯಯುರುತ್ತರಾಂ ದಿಶಮ್ ॥ ೨೭೫ ॥

ಅ: ಘಟೋತ್ಕಚನು ದ್ರೌಪದಿಯನ್ನು ಹೊತ್ತ. ಅವನ ಸೇವಕರು ಪಾಂಡವರನ್ನು ಹೊತ್ತರು. ಅವರು ಬದರಿಕಾಶ್ರಮವನ್ನು ತಲುಪಿ ನಾರಾಯಣನ ಪೂಜೆಯನ್ನು ಮಾಡಿ ತಮಗೆ ವಿಹಿತವಾದ ಇತರ ಕಾರ್ಯಗಳನ್ನು ಪೂರೈಸಿ ಉತ್ತರ ದಿಕ್ಕಿನತ್ತ ನಡೆದರು.

ವಿ: ಪಾಂಡವರು ತಲುಪಿದ ಈ ಬದರಿ ಇಂದು ಪ್ರಸಿದ್ಧವಾಗಿರುವ ವಿಶಾಲಬದರೀ. ಧ್ರುವ ಮೊದಲಾದವರು ಅಂತ್ಯಕಾಲದಲ್ಲಿ ನೆಲೆಸಿದ್ದ ಸ್ಥಳ. ದ್ರೌಪದಿ ತಾಯಿಯಾದ್ದರಿಂದ ಘಟೋತ್ಕಚ ಹೊತ್ತಿದ್ದು ಉಚಿತವಾಯಿತು.

ಉತ್ತರ ಬದರಿಯಲ್ಲಿ ಪಾಂಡವರು

ಅತೀತ್ಯ ಶರ್ವಶ್ವಶುರಂ ಗಿರಿಂ ತೇ
ಸುವರ್ಣಕೂಟಂ ನಿಷಧಂ ಗಿರಿಂ ಚ ।
ಮೇರೋಃ ಪ್ರಾಚ್ಯಾಂ ಗಂಧಮಾದೇ ಗಿರೌ ಚ
ಪ್ರಾಪುರ್ಬದಾರ್ಯಾಶ್ರಮಮುತ್ತಮಂ ಭುವಿ ॥ ೨೭೬ ॥

---

೨೭೫. ತುಶಬ್ದೇನ ಮಾತೃತ್ವಾತ್ ಪುರುಷಸ್ಕಂಧಾರೋಹಣಾರ್ಹತ್ವಂ ಸೂಚಿತಮ್ । – (ಜ.)

೨೭೬. ಗಂಧಮಾದೇ ಗಿರೌ ಚೇತ್ಯತ್ರ ''ಮದಿ ಹರ್ಷ'' ಇತಿ ಧಾತೋಃ ಡಪ್ರತ್ಯಯೇ ಕೃತೇ ಗಂಧೇನ ಜನಾನ್ ಮಾದಯತಿ ಹರ್ಷಯತೀತಿ ಗಂಧಮಾದಃ = ಗಂಧಮಾದನಃ। ಗಂಧಮಾದೇ= ಉತ್ತುಂಗಗಂಧಮಾದನಪರ್ವತಸ್ಯ ಅಧೋಭಾಗೇ ಅಧೋಭಾಗಸ್ಥನಾರಾಯಣಾಶ್ರಮೇ ॥ – (ವಾ.)

೨೭೬. ಆಲೋಕಯಂತಸ್ತೇ ಜಗ್ಮುರ್ವಿಶಾಲಾಂ ಬದರೀಂ ಪ್ರತಿ ॥ – ಭಾರತ (ವನ. ೧೪೪/೧೧)

ಅ: ಮುಂದೆ ಅವರು ಹಿಮಾಲಯವನ್ನು ದಾಟಿದರು. ಹೇಮಕೂಟ, ನಿಷಧ ಪರ್ವತಗಳನ್ನು ದಾಟಿ ಸಾಗಿದರು. ಮುಂದೆ ಮೇರು ಪರ್ವತದ ಪೂರ್ವದಿಕ್ಕಿನಲ್ಲಿನ ಗಂಧಮಾದನ ಗಿರಿಯಲ್ಲಿರುವ ಭೂಲೋಕದಲ್ಲಿಯ ಉತ್ತಮವಾದ ಬದರಿಕಾಶ್ರಮವನ್ನು ತಲುಪಿದರು.

ವಿ: ಈ ಬದರಿಯಿಂದ ಪಾಂಡವರು ಉತ್ತರ ಬದರಿಯನ್ನು ತಲುಪಿದ ವಿವರ ಇಲ್ಲಿ ಬಂದಿದೆ. ಹೀಗೆ ಎರಡು ಬದರಿಗಳ ಉಲ್ಲೇಖ ಮಹಾಭಾರತದಲ್ಲಿ ಬಂದಿರುವುದು ಗಮನಾರ್ಹ. ಆಚಾರ್ಯ ಶ್ರೀಮಧ್ವರು ಈ ಎರಡು ಬದರಿಗಳನ್ನು ಸಂದರ್ಶಿಸಿದ ವಿವರ ಸುಮಧ್ವವಿಜಯದಲ್ಲಿ ಬಂದಿದೆ. (೬/೩೭, ೭/೧, ೮/೬, ೯/೫೩) ಆ ಉತ್ತರ ಬದರಿಯ ಸ್ಥಳ ನಿರ್ದೇಶವೂ ಸಹ ಇಲ್ಲಿಯ ವಿವರಗಳಿಂದ ತಿಳಿಯುವಂತಿದೆ ಎಂಬುದನ್ನೂ ಗಮನಿಸಬೇಕು.

ಪಾಂಡವರ ಅಪೂರ್ವ ವನವಾಸ

ತಸ್ಮಿನ್ ಮುನೀಂದ್ರೈರಭಿಪೂಜ್ಯಮಾನಾ
ನಾರಾಯಣಂ ಪೂಜಯಂತಃ ಸದೈವ ।
ಚಕ್ರುಸ್ತಪೋ ಜ್ಞಾನಸಮಾಧಿಯುಕ್ತಂ
ಸತತ್ತ್ವವಿದ್ಯಾಂ ಪ್ರತಿಪಾದಯಂತಃ ॥ ೨೭೭ ॥

ಅ: ಬದರಿಯಲ್ಲಿ ಮುನಿಶ್ರೇಷ್ಠರುಗಳಿಂದ ಸತ್ಕರಿಸಲ್ಪಟ್ಟವರಾಗಿ ಪಾಂಡವರು ನಾರಾಯಣನನ್ನು ನಿರಂತರ ಪೂಜಿಸುತ್ತಲೇ ಜ್ಞಾನ-ಧ್ಯಾನಗಳಿಂದ ಕೂಡಿದ ತಪಸ್ಸನ್ನು ಆಚರಿಸಿದರು. ಉತ್ತಮವಾದ ತತ್ತ್ವವಿದ್ಯೆಗಳನ್ನು ಪ್ರತಿಪಾದಿಸಿದರು.

ವಿ: 'ತತ್ತ್ವವಿದ್ಯೆ' ಎಂದರೆ ಬ್ರಹ್ಮಸೂತ್ರಾದಿಗಳು ಎಂದರ್ಥ.

ಸೌಗಂಧಿಕಾಹರಣ ಪ್ರಸಂಗ

ಏವಂ ಬದರ್ಯಾಂ ವಿಹರತ್ಸು ತೇಷು
ಕ್ವಚಿದ್ರಹಃ ಕೃಷ್ಣಯಾ ವಾಯುಸೂನೌ ।
ಸ್ಥಿತೇ ಗರುತ್ಮಾನುರಗಂ ಜಹಾರ
ಮಹಾಹ್ರದಾದ್ವಾಸುದೇವಾಸನಾಗ್ರ್ಯಃ ॥ ೨೭೮ ॥

ಅ: ಹೀಗೆ ಅವರು ಬದರಿಯಲ್ಲಿ ವಿಹರಿಸುತ್ತಿದ್ದಾಗ ಒಮ್ಮೆ ಏಕಾಂತದಲ್ಲಿ ಭೀಮಸೇನನು ದ್ರೌಪದಿಯೊಂದಿಗೆ ಇದ್ದ. ಆಗ ವಾಸುದೇವನಾದ ಶ್ರೀಹರಿಯ ಉತ್ತಮವಾದ ಆಸನವೆನ್ನಿಸಿದ ಗರುಡ ದೊಡ್ಡ ಸರೋವರದಿಂದ ಸರ್ಪವೊಂದನ್ನು ಹಿಡಿದೆಳೆದ.

ತತ್ಪಕ್ಷಪಾತೇನ ವಿಚಾಲಿತೇ ತು ತಸ್ಮಿನ್
ಗಿರೌ ಕಮಲಂ ಹೈಮಮಗ್ರ್ಯಮ್ ।
ಪಪಾತ ಕೃಷ್ಣಾಭೀಮಯೋಃ ಸನ್ನಿಧಾನೇ
ಉದ್ಯದ್ಭಾನೋರ್ಮಂಡಲಾಭಂ ಸುಗಂಧಮ್ ॥ ೨೭ ॥

ಅ: ಗರುಡನ ರೆಕ್ಕೆಯ ಗಾಳಿಯಿಂದ ಆ ಪರ್ವತ ಕಂಪಿಸಲು ಒಂದು ಶ್ರೇಷ್ಠವಾದ ಚಿನ್ನದ ಕಮಲ ಭೀಮದ್ರೌಪದಿಯರ ಬಳಿ ಬಂದು ಬಿದ್ದಿತು. ಅದು ಉದಿಸುವ ಸೂರ್ಯನಂತೆ ಶೋಭಿಸುತ್ತಿತ್ತು; ಅಪೂರ್ವ ಪರಿಮಳದಿಂದ ಕೂಡಿತ್ತು.

ಸೌಗಂಧಿಕಾಪುಷ್ಪಕ್ಕಾಗಿ ದ್ರೌಪದಿಯ ಕೋರಿಕೆ

ದೃಷ್ಟ್ವಾತಿಗಂಧಂ ವರಹೇಮಕಂಜಂ
ಕುತೂಹಲಾದ್ದ್ರೌಪದೀ ಭೀಮಸೇನಮ್ ।
ಬಹೂನ್ಯಯಾಚತ್ ತಾದೃಶಾನ್ಯಾನುಭಾವ-
ಮಸ್ಯಾವಿಷಹ್ಯಂ ಜಾನತೀ ದೇವದೈತ್ಯೈಃ ॥ ೨೮೦ ॥

ಅ: ಅತ್ಯಂತ ಪರಿಮಳಭರಿತವಾಗಿದ್ದ ಆ ಶ್ರೇಷ್ಠವಾದ ಚಿನ್ನದ ಕಮಲವನ್ನು ಕಂಡು ದ್ರೌಪದಿ ಕುತೂಹಲದಿಂದ ಅಂತಹ ಅನೇಕ ಹೂವುಗಳನ್ನು ತಂದುಕೊಡಲು ಭೀಮಸೇನನನ್ನು ಕೇಳಿಕೊಂಡಳು. ಭೀಮನ ಅಪಾರಸಾಮರ್ಥ್ಯ ದೇವ, ದೈತ್ಯರಿಂದಲೂ ಸಹಿಸಲಸಾಧ್ಯವಾದುದು ಎಂದು ಅವಳು ಬಲ್ಲವಳು.

ವಿ: ಈ ಘಟನೆ ನಡೆದದ್ದು ಪಾಂಡವರು ಅಲ್ಲಿ ನೆಲೆಸಿ *ಆರು ದಿನಗಳಾದ ನಂತರ.

---

೨೭೭. ಜ್ಞಾನಸಮಾಧಿಯುಕ್ತಮಿತ್ಯತ್ರ ಜ್ಞಾನಂ= ವಿಷ್ಣುಸರ್ವೋತ್ತಮತ್ವಾದಿಜ್ಞಾನಂ, ಸಮಾಧಿಃ = ಚಿತ್ತೈಕಾಗ್ರ್ಯತಾ ॥ -(ವಾ.)

೨೭೭. ದದೃಶುರ್ವಿವಿಧಾಶ್ಚರ್ಯಂ ಕೈಲಾಸಂ ಪರ್ವತೋತ್ತಮಮ್ ।
ತಸ್ಯಾಭ್ಯಾಶೇ ತು ದದೃಶುರ್ನರನಾರಾಯಣಾಶ್ರಮಮ್ ॥
ಉಪೇತಂ ಪಾದಪೈರ್ದಿವ್ಯೈಃ ಸದಾಪುಷ್ಪಫಲೋಪಗೈಃ ।
ದದೃಶುಸ್ತಾಂ ಚ ಬದರೀಂ ವೃತ್ತಸ್ಕಂಧಾಂ ಮನೋರಮಾಮ್ ॥ –ವನಪರ್ವ (೧೪೫/೧೮,೧೯)

೨೮೦. ಅನುಭಾವಮಸ್ಯಾವಿಷಹ್ಯಮಿತ್ಯತ್ರ ಆ ಸಮಂತಾತ್ ಅನುಭವಃ ಅನುಭಾವಃ ತಂ ಸರ್ವತ್ರಾಪ್ರತಿಹತ-ಸಾಮರ್ಥ್ಯಮಿತ್ಯರ್ಥಃ ॥ –(ವಾ.)

೨೮೦. ಯದಿ ತೇಽಹಂ ಪ್ರಿಯಾ ಪಾರ್ಥ ಬಹೂನೀಮಾನ್ಯುಪಾಹರ ॥ –ಭಾರತ(ವನ. ೧೪೬/೭)

* ಷಡ್ರಾತ್ರಮಮಸನ್ ವೀರಾ ಧನಂಜಯದಿದೃಕ್ಷವಃ ।... –ಭಾರತ (ವನ. ೧೪೬/೧)

ವಿ: ೧) ದ್ರೌಪದಿ ಹಾಗೆ ಕೇಳಲು ಭೀಮಸೇನನ ಬಲ ಸಕಲ ದೇವದೈತ್ಯರಿಂದಲೂ ಸಹಿಸಲ–ಸಾಧ್ಯವಾದಷ್ಟು ಮಿಗಿಲಾದುದು ಎಂದು ತಿಳಿದಿದ್ದುದೇ ಕಾರಣ ಎಂದರ್ಥ. ಅದರೊಂದಿಗೆ ಅದನ್ನು ಇತರರಿಗೆ ತಿಳಿಸುವ ಕುತೂಹಲದಿಂದಾಗಿ ಹಾಗೆ ಕೇಳಿದರು ಎಂದು ತಿಳಿಯಬೇಕು.

೨) ಸೀತೆ ರಾಮಾಯಣದಲ್ಲಿ ಚಿನ್ನದಜಿಂಕೆಯನ್ನು ತಂದುಕೊಡಲು ಶ್ರೀರಾಮನನ್ನು ಬೇಡಿ–ದಂತೆ ಇಲ್ಲಿ ದ್ರೌಪದಿ ಚಿನ್ನದ ಹೂವನ್ನು ತಂದುಕೊಡಲು ಭೀಮನನ್ನು ಕೇಳಿದಳು. ಸೀತಾರಾಮರು ನಿಜ ದಂಪತಿಗಳಾಗಿದ್ದಂತೆ ಭೀಮ ದ್ರೌಪದಿಯರೂ ನಿಜ ದಂಪತಿಗಳು ಎಂಬುದಕ್ಕೆ ಇದು ಗಮಕ.

೩) ಅಲ್ಲಿ ಸೀತೆ ಕೇಳಿದ್ದೂ ಸಹ ಮಾರೀಚಾದಿ ದೈತ್ಯರ ಸಂಹಾರಕ್ಕೆಂದು ಮಾತ್ರ. ಇಲ್ಲಿ ದ್ರೌಪದಿ ಕೇಳುವುದೂ ಸಹ ಕ್ರೋಧವಶರೆಂಬ ದೈತ್ಯರ ಸಂಹಾರಕ್ಕಾಗಿ ಮಾತ್ರ ಎಂಬುದೂ ಗಮನಾರ್ಹ.

೪) ಸತ್ಯಭಾಮ ಶ್ರೀಕೃಷ್ಣನನ್ನು ಪಾರಿಜಾತಪುಷ್ಪ ಕೇಳಿದ ಪ್ರಸಂಗವೂ ಇಂತಹುದೇ ಆಗಿದೆ. ಅಲ್ಲಿ ಕೃಷ್ಣ ಇಂದ್ರನ ಪಾರಿಜಾತವನ್ನು ತಂದರೆ, ಇಲ್ಲಿ ಭೀಮ ಕುಬೇರನ ಸೌಗಂಧಿಕವನ್ನು ತಂದ.

೫) ಈ ಕಾರಣಗಳಿಂದಾಗಿ ಹರಿವಾಯುಗಳ ಸಾಕ್ಷಾತ್ ಬಿಂಬಪ್ರತಿಬಿಂಬಭಾವಕ್ಕೆ ಸೂಚಕ.

ಭೀಮಸೇನನ ಅದ್ಭುತ ಪ್ರಯಾಣ

ತಯಾಽರ್ಥಿತಃ ಸಗದಸ್ತುಂಗಮೇನಂ
ಗಿರಿಂ ವೇಗಾದಾರುಹದ್ವಾಯುಸೂನುಃ ।
ಪ್ರಶಸ್ಯಮಾನಃ ಸುರಸಿದ್ಧಸಂಘೈರ್ಮೃತ್ಸ್ನನ್
ದೈತ್ಯಾನ್ ಸಿಂಹಶಾರ್ದೂಲರೂಪಾನ್ ॥ ೨೮೧ ॥

ಅ: ದ್ರೌಪದಿಯಿಂದ ಪ್ರಾರ್ಥಿತನಾದ ಭೀಮಸೇನ ಗದೆಯೊಂದಿಗೆ ಎತ್ತರದ ಆ ಪರ್ವತ-ವನ್ನು ವೇಗದಿಂದ ಏರತೊಡಗಿದ; ಸಿಂಹ ಹುಲಿಗಳ ರೂಪದಲ್ಲಿದ್ದ ದೈತ್ಯರನ್ನು ನಾಶಪಡಿಸಿದ; ದೇವತೆಗಳ, ಸಿದ್ಧರ ಗುಂಪುಗಳು ಅವನನ್ನು ಕೊಂಡಾಡಿದವು.

ವಿ: ೧) ಭೀಮನು ಅಂತಹ ಗಹನವಾದ ಗಂಧಮಾದನ ಪರ್ವತವನ್ನು ಅತ್ಯಂತ ವೇಗದಿಂದ ಏರತೊಡಗಿದಾಗ ಸುರಸಿದ್ಧ ಗುಂಪುಗಳೆಲ್ಲ ಆಶ್ಚರ್ಯದಿಂದ ಬಗೆಬಗೆಯಿಂದ ಕೊಂಡಾಡಿದ ವಿವರ ಮಹಾಭಾರತದಲ್ಲಿ ಬಂದಿದೆ.

೨) ಭೀಮು ಹಾಗೆ ಅಸಂಖ್ಯವಾದ ಸಿಂಹ, ಹುಲಿ ಮೊದಲಾದ ಕ್ರೂರ ಪ್ರಾಣಿಗಳನ್ನು ಕೊಲ್ಲುತ್ತಿದ್ದುದೂ ಸಹ ಪ್ರಾಣಿ ಹತ್ಯೆಯಾಗದೇ ಅಸುರ ಹತ್ಯೆಯಾಗಿತ್ತು ಎಂಬ ಪ್ರಮೇಯ ವಿಶೇಷ–ವನ್ನು 'ದೈತ್ಯಾನ್' ಎಂಬ ಪದದಿಂದ ತಿಳಿಸಿರುವರು. ಭೀಮು ಹಾಗೆ ಸಿಂಹ, ಹುಲಿ, ಆನೆಗಳನ್ನು ಒಂದರ ಮೇಲೆ ಮತ್ತೊಂದನ್ನು ಲೆಕ್ಕಿಸದೆ ಕೊಲ್ಲುತ್ತಿದ್ದ ವಿವರವೂ *ಮಹಾಭಾರತದಲ್ಲಿದೆ.

ಹನುಮ ಭೀಮರ ಸಮಾಗಮದ ಮರ್ಮ

ಆಸೇದಿವಾಂಸ್ತತ್ರ ಹನೂಮದಾಖ್ಯಂ
ನಿಜಂ ರೂಪಂ ಪ್ರೋದ್ಯದಾದಿತ್ಯಭಾಸಮ್ ।
ಜಾನನ್ನಪ್ಯೇನಂ ಸ್ವೀಯರೂಪಂ ಸ ಭೀಮ-
ಶ್ಚಿಕ್ರೀಡ ಏತೇನ ಯಥಾ ಪರೇಣ ॥ ೨೮೨ ॥

ಅ: ಮಾರ್ಗದಲ್ಲಿ ಉದಿಸುವ ಸೂರ್ಯನಂತೆ ಕಂಗೊಳಿಸುತ್ತಿದ್ದ ಹನುಮಂತ ಎಂಬ ತನ್ನ ರೂಪವನ್ನೇ ಕಂಡ. ಅವನನ್ನು ತನ್ನ ರೂಪವೆಂದು ತಿಳಿದಿದ್ದರೂ ಭೀಮಸೇನ ಬೇರೆಯವ-ರೊಡನೆ ಎಂಬಂತೆ ಕ್ರೀಡಿಸಿದ.

ವಿ: ೧) ಈ ಪ್ರಸಂಗದಲ್ಲಿ ಹನುಮಂತ ಮತ್ತು ಭೀಮಸೇನರ ಸಂದರ್ಶನ ನಡೆಯುವುದು. ಬೇರೆ ದೇವತೆಗಳ ಪರಸ್ಪರ ಸಂದರ್ಶನ ಹೀಗೆ ನಡೆದದ್ದು ಅಪೂರ್ವ. ಶ್ರೀಹರಿಯ ರಾಮ–ಪರಶುರಾಮ, ಕೃಷ್ಣ–ವೇದವ್ಯಾಸ, ಯಜ್ಞ–ಋಷಭ ಮೊದಲಾದ ರೂಪಗಳ ಸಂದರ್ಶನ ಘಡಿದದ್ದು ಪ್ರಸಿದ್ಧ. ಇತರ ದೇವತೆಗಳ ರೂಪಗಳು ಪರಸ್ಪರ ಸಂದರ್ಶಿಸಿದಾಗಲೂ ತಮ್ಮನ್ನು ಹಾಗೆ ಗುರುತಿಸಿ ನಡೆದುಕೊಂಡ ವಿವರಗಳು ದುರ್ಲಭ.

೨) ಆದರೂ ಹನುಮಂತನನ್ನು ಕಂಡ ಭೀಮಸೇನ ಅದನ್ನು ಬೇರೊಂದು ರೂಪ ಎಂಬಂತೆ ನಡೆದದ್ದು ಇಲ್ಲಿಯ ವಿಶೇಷ. ಇತರರು ಹಾಗೆ ನಡೆಯುವುದು ಅಜ್ಞಾನಾದಿಗಳಿಂದ. ಆದರೆ

---

೨೮೧. ಯಕ್ಷಗಂಧರ್ವಯೋಷಾಭಿರದೃಶ್ಯಾಭಿರ್ನಿರೀಕ್ಷಿತಃ ।
ನವಾವತಾರೋ ರೂಪಸ್ಯ ವಿಕ್ರೀಡನ್ನಿವ ಪಾಂಡವಃ ॥ –ಮನ. ೧೪೬/೩೦

೨೮೧. ಗಜೇನಾನ್ಯಾನ್ ಗಜಾನ್ ಶ್ರೀಮಾನ್ ಸಿಂಹಂ ಸಿಂಹೇನ ವಾ ವಿಭುಃ ।
ತಲಪ್ರಹಾರೈರನ್ಯಾಂಶ್ಚ ನ್ಯಹನತ್ ಪಾಂಡವೋ ಬಲೀ ॥

೨೮೨. ನ ಗ್ಲಾನಿರ್ನ ಚ ಚ ವೈ ಕ್ಲಮ್ಯಂ ನ ಭಯಂ ನ ಚ ಸಂಭ್ರಮಃ ।
ಕದಾಚಿದ್ಬುಷ್ಯತೇ ಪಾರ್ಥಮಾತ್ಮಜಂ ಮಾತರಿಶ್ವನಃ ॥ –ಭಾರತ (ವನ. ೧೪೬/೧೩)

* ಹರಿಗಳನು ಹರಿಗಳಿಂ ಕರಿಗಳನು ಕರಿಗಳಿಂ । ಅರೆದ ವೀರನಿಗೆ ಸುರನರರು ಸರಿಯೆ ॥ –ಮಧ್ವನಾಮ(೧೩)

ಭೀಮಸೇನ ಮಾತ್ರ ಹನುಮದ್ರೂಪ ತನ್ನದೇ ಎಂದು ತಿಳಿದರೂ ಸಹ ಅದು ಬೇರೊಂದು ರೂಪ ಎಂಬಂತೆ ನಡೆದುಕೊಂಡದ್ದು ವಿಶೇಷಕಾರಣದಿಂದ; ಆ ವಿವರ ಮುಂದೆ ಬಂದಿದೆ.

ಧರ್ಮೋ ದೇವಾನಾಂ ಪರಮೋ ಮಾನುಷತ್ವೇ
ಸ್ವೀಯೇ ರೂಪೇಽಪ್ಯನ್ಯವದೇವ ವೃತ್ತಿಃ ।
ಅನಾದಾನಂ ದಿವ್ಯಶಕ್ತೇರ್ವಿಶೇಷಾ-
ನ್ನರಸ್ವಭಾವೇ ಸರ್ವದಾ ಚೈವ ವೃತ್ತಿಃ ।
ತಸ್ಮಾದ್ಭೀಮೋ ಹನುಮಾಂಶ್ಚೈಕ ಏವ
ಜ್ಯಾಯಃಕನೀಯೋವೃತ್ತಿಮತ್ಸ್ವಾಭಿಪೇದೇ ॥ ೨೮೩ ॥

ಅ: ಮನುಷ್ಯರಾಗಿ ಅವತರಿಸಿದಾಗ ತನ್ನ ರೂಪದೊಂದಿಗೆ ಸಹ ಮತ್ತೊಬ್ಬರೊಂದಿಗೆಂಬಂತೆ ನಡೆದುಕೊಳ್ಳುವುದು, ವಿಶೇಷವಾಗಿ ಮೂಲರೂಪದ ದಿವ್ಯಶಕ್ತಿಯನ್ನು ಸ್ವೀಕರಿಸದಿರುವುದು, ಮನುಷ್ಯ ಸ್ವಭಾವದಂತೆಯೇ ಸದಾ ನಡೆದುಕೊಳ್ಳುವುದು ದೇವತೆಗಳಿಗೆ ಪರಮ ಧರ್ಮ. ಆದ್ದರಿಂದ ಹನುಮಂತ, ಭೀಮಸೇನ ಇಬ್ಬರೂ ಒಬ್ಬರೇ ಆದರೂ ಅಣ್ಣತಮ್ಮಂದಿರಂತೆ ವರ್ತಿಸಿದರು.

ವಿ: ೧) ಮನುಷ್ಯಲೋಕದಲ್ಲಿ ಅವತರಿಸಿದಾಗ ತಮ್ಮ ವಿಭಿನ್ನ ರೂಪಗಳು ಪರಸ್ಪರ ಸಂದರ್ಶಿಸಿದಾಗ ಅವು ಒಂದೇ ಎಂದು ಗೊತ್ತಿದ್ದರೂ ಆ ದೇವತೆಗಳು ಬೇರೊಬ್ಬರೊಡನೆ ವರ್ತಿಸುವಂತೆ ವರ್ತಿಸಬೇಕಾದದ್ದು ದೇವತೆಗಳಿಗೆ ಶ್ರೀಹರಿ ವಿಧಿಸಿರುವ ಶ್ರೇಷ್ಠ ಧರ್ಮ. ಅದರಿಂದಾಗಿ ಭೀಮಸೇನ ಮತ್ತು ಹನುಮಂತ ಇಬ್ಬರೂ ಒಬ್ಬರೇ ವಾಯುದೇವರ ಅವತಾರರಾದರೂ ಭಿನ್ನ ವ್ಯಕ್ತಿಗಳಂತೆ ವರ್ತಿಸಿದರು ಎಂದರ್ಥ.

೨) ತ್ರೇತಾಯುಗದಲ್ಲಿ ಅವತರಿಸಿದ್ದ ಹನುಮಂತನನ್ನು ಅಣ್ಣ ಎಂದು ಭೀಮ ಕರೆಯುವುದು ದ್ವಾಪರ ಯುಗದ ಭೀಮನನ್ನು ಹನುಮಂತ ತಮ್ಮ ಎಂದು ಸಂಭೋಧಿಸುವುದು ಈ ಹಿನ್ನೆಲೆಯಲ್ಲಿ ನಡೆದ ಕಾರ್ಯ ಎಂದರ್ಥ.

೩) ವಿದುರ ಯುಧಿಷ್ಠಿರರು ಒಬ್ಬ ಯಮನ ಅವತಾರರೇ ಆದರೂ ಅವರಿಗೆ ತಾವಿಬ್ಬರೂ ಅಂಥವರು ಎಂಬ ಪರಿಜ್ಞಾನ ಸಾಮಾನ್ಯವಾಗಿ ಇರುತ್ತಿರಲಿಲ್ಲ. ಅದರಿಂದಾಗಿ ಧರ್ಮರಾಜ ವಿದುರನನ್ನು ಚಿಕ್ಕಪ್ಪ ಎಂದೇ ಕಾಣುತ್ತಿದ್ದ, ವಿದುರನೂ ಧರ್ಮರಾಜನನ್ನು ತನ್ನ ಮಗನಂತೆ ನೋಡುತ್ತಿದ್ದ. ಅದರಂತೆ ಇತರ ದೇವತೆಗಳೂ ಸಹ. ದ್ರೋಣ ಉದ್ಧವರು ಇದಕ್ಕೆ ಮತ್ತೊಂದು ದೃಷ್ಟಾಂತ.

೪) ಆದರೆ, ಹನುಮಂತ ಭೀಮಸೇನನ ನಿದರ್ಶನ ಮಾತ್ರ ತೀರಾ ವಿಭಿನ್ನ ರೀತಿಯದು. ಅವರ ರೂಪಗಳಲ್ಲಿ ಯಾವುದೇ ವ್ಯತ್ಯಾಸವಿಲ್ಲದಿದ್ದರೂ ಸ್ವತಃ ಅವುಗಳ ಬಗ್ಗೆ ಪರಸ್ಪರ ಸರಿಯಾದ ತಿಳುವಳಿಕೆ ಇದ್ದರೂ ಬೇರೆ ಬೇರೆಯಂತೆ ವರ್ತಿಸಿದ್ದುಮೇಲೆ ಹೇಳಿದ ಕಾರಣದಿಂದಾಗಿ ಮಾತ್ರ.

ಸರ್ವೇ ಗುಣಾ ಅವೃತಾ ಮಾನುಷತ್ವೇ
ಯುಗಾನುಸಾರಾನ್ಮೂಲರೂಪಾನುಸಾರಾತ್ ।
ಕ್ರಮಾತ್ ಸುರಾಣಾಂ ಭಾಗತೋ ವ್ಯಕ್ತರೂಪಾ
ಆದಾನತೋ ವ್ಯಕ್ತಿಮಾಯಾಂತ್ಯುರೂಣಾಮ್ ॥ ೨೮೪ ॥

ಅ: ಮನುಷ್ಯರಾಗಿ ಅವತರಿಸಿದಾಗ ದೇವತೆಗಳ ಮೂಲ ರೂಪದ ಎಲ್ಲ ಗುಣಗಳು ಯುಗಕ್ಕೆ ಅನುಗುಣವಾಗಿ, ಮೂಲ ರೂಪಕ್ಕೆ ಅನುಗುಣವಾಗಿ ಕ್ರಮವಾಗಿ ಆವರಿಸಲ್ಪಟ್ಟಿರುತ್ತವೆ. ಉತ್ತಮ ದೇವತೆಗಳಿಗೆ ಅವರ ಮೂಲ ರೂಪದ ಗುಣಗಳು ಪ್ರಸಂಗ ಒದಗಿದಾಗ, ತೆಗೆದುಕೊಂಡರೆ ಭಾಗಶಃ ವ್ಯಕ್ತವಾಗುವವು.

ಎ: ೧) ಸಾಮಾನ್ಯವಾಗಿ ದೇವತೆಗಳು ಮನುಷ್ಯರಾಗಿಅವತರಿಸಿದಾಗ ಅವರ ಮೂಲ ರೂಪದ ಗುಣಗಳು ಅವರ ಯೋಗ್ಯತೆಗೆ ಅನುಗುಣವಾಗಿ ತಾರತಮ್ಯಕ್ರಮದಲ್ಲಿ ತಿರೋಧಾನ ಹೊಂದುವವು.

---

೨೮೩. ಜ್ಯಾಯಃ ಕನೀಯೋವೃತ್ತಿಮಿತ್ಯತ್ರ ಜ್ಯಾಯಃ ಕನೀಯಸೋಃ= ಜ್ಯೇಷ್ಠಕನಿಷ್ಠಯೋಃ ವೃತ್ತಿಃ= ವರ್ತನಂ ಜ್ಯಾಯಃ ಕನೀಯೋವೃತ್ತಿಃ ॥ – (ವಾ.)

೨೮೪. ಕ್ರಮಾತ್ಸುರಾಣಾಮಿತ್ಯತ್ರ ಸುರಾಣಾಂ ಮಾನುಷತ್ವೇ ಸರ್ವೇ ಗುಣಾಃ ಅವೃತಾಃ। ಭಾಗತೋ ವ್ಯಕ್ತರೂಪಾಶ್ಚ ಯುಗಾನುಸಾರಾತ್ ಕಲಿಯುಗೇ ಯಾವಂತೋ ಗುಣಾ ಆವೃತಾಃ ತಾವತಾಂ ದ್ವಾಪರಯುಗೇ ನಾವರಣಮ್। ದ್ವಾಪರಯುಗೇ ಯಾವಂತೋ ಆವೃತಾಃ ತಾವತಾಂ ತ್ರೇತಾಯುಗೇ ನಾವರಣಮ್। ತ್ರೇತಾಯುಗೇ ಯಾವತಾಂ ಆವರಣಂ ಕೃತಯುಗೇ ನ ತಾವತಾಮಾವರಣಮಿತ್ಯೇಕೋ ಯುಗಾನುಸಾರಃ। ಏವಂ ಕೃತಯುಗೇ ಯಾವಾನ್ ಭಾಗೋ ವ್ಯಕ್ತಃ ತ್ರೇತಾಯುಗೇ ನ ತಾವತೋ ಭಾಗಸ್ಯ ವ್ಯಕ್ತಿತ್ಯಾದಿಕ್ರಮೇಣಾಪರೋ ಯುಗಾನುಸಾರಃ। ಮೂಲರೂಪಮುತ್ತಮಂ ಚೇತ್ ಅವತಾರೇ ಆವೃತತ್ವಮಷ್ಟಲ್ಪಮ್। ಅವರತ್ವೇ ತತೋಽಷ್ಟಧಿಕಮಾವರಣಮಿತ್ಯಾದಿನಾ ಆವರಣಕ್ರಮಃ ಮೂಲರೂಪಾನುಸಾರ ಇತಿ ವಿವೇಕಃ। ಉರೂಣಾಂ ದೇವಾನಾಂ ವಾಯುಶೇಷೇಂದ್ರಪ್ರಭೃತೀನಾಂ ಆದಾನತಃ ಕಿಂಚಿತ್ಕಾರ್ಯಾರ್ಥಮಾದಾನೇ ಕೃತೇ ಸತಿ ವ್ಯಕ್ತಿಮಾಯಾಂತೀತಿ ಯೋಜನಾ। ಅತ ಏವ ರಾವಣಾಕೃಷ್ಟಲಕ್ಷ್ಮಣಸ್ಯ ಮೂಲರೂಪಸ್ಮರಣೇನ ತತಃ ಶಕ್ತ್ಯಾದಾನೇ ಸತಿ ಪುನರ್ಲಕ್ಷ್ಮಣಾಕರ್ಷಣೇ ಅಶಕ್ತಃ ಸನ್ ರಾವಣಃ ಪಪಾತೇತಿ ಪೌರಾಣಿಕೀ ಕಥೇತಿ ಜ್ಞೇಯಮ್ ॥ – (ವಾ.)

೨೮೪. ಉಕ್ತಂ ಚ ತತ್ತ್ವಪ್ರದೀಪಿಕಾಯಾಮ್ - ''ತತ್ತ್ವವಿದ್ಯಾರ್ಯವರ್ಯಾಣಾಂ ಮೂಲರೂಪ ಇವ ಸರ್ವರೂಪೇಷ್ವಪಿ ಸೌಬಲ್ಯಸಾರ್ವಜ್ಞಸೌಲಕ್ಷಣ್ಯಾದಿಗುಣಾಃ ಪರಿದೃಶ್ಯಮಾನಾ ಯುಜ್ಯಂತೇ''- ಇತಿ । ನನ್ವೇವಂ ಚೇತ್ ಕಥಂ ನಿರ್ಣಯೇ –

೨) ಇದು ದೇವತೆಗಳ ಸ್ವರೂಪ ಯೋಗ್ಯತೆಯನ್ನು ಅವಲಂಬಿಸಿರುವಂತೆ ಅವರು ಅವತರಿಸುವ ಯುಗವನ್ನೂ ಅವಲಂಬಿಸಿರುವುದು. ಎಂದರೆ, ಒಬ್ಬೇ ದೇವತೆ ಕೃತಯುಗದಲ್ಲಿ ಅವತರಿಸಿದಾಗ ತಿರೋಧಾನ ಹೊಂದುವುದಕ್ಕಿಂತ ಹೆಚ್ಚಾಗಿ ತ್ರೇತಾಯುಗಾದಿ ಅನಂತರ ಯುಗ–ಗಳಲ್ಲಿ ಅವತರಿಸಿದಾಗ ತಿರೋಧಾನ ಹೊಂದುವವು ಎಂದರ್ಥ.

''ಸರ್ವೇ ಗುಣಾ ಆವೃತಾ ಮಾನುಷತ್ವೇ ಯುಗಾನುಸಾರಾನ್ಮೂಲರೂಪಾನುಸಾರಾತ್ ।
ಕ್ರಮಾತ್ ಸುರಾಣಾಂ ಭಾಗತೋ ವ್ಯಕ್ತರೂಪಾ ಆದಾನತೋ ವ್ಯಕ್ತಿಮಾಯಾಂತ್ಯರೂಣಾಮ್ ॥
ಇಚ್ಛಾವ್ಯಕ್ತಿಃ ಪ್ರಾಯಶೋ ಮಾರುತಸ್ಯ ತದನ್ಯೇಷಾಂ ವ್ಯಕ್ತತಾ ಕಾರಣೇನ'' ಇತಿ, ಸೌಗಂಧಿಕಪ್ರಕರಣೇ

ದೇವಾನಾಂ ಹಿ ನೃಜಾತಾನಾಮಲ್ಪವ್ಯಕ್ತಂ ಭವೇದ್ಬಲಮ್ ।
ಇಚ್ಛಯಾ ವ್ಯಕ್ತತಾಂ ಯಾತಿ ವಾಯೋರನ್ಯೇಷು ತಚ್ಚ ನ ।

ಅನ್ಯೇಷು ದೇವತಾವ್ಯತಿರಿಕ್ತೇಷು ತಚ್ಚಾಲ್ಪಂ ಸ್ವರೂಪಬಲಮಪಿ ವ್ಯಕ್ತಂ ಭವೇದಿತಿ ಯತ್ತಚ್ಚ ನೇತಿ ತದರ್ಥಃ ।

ಏವಮನ್ಯೇಽಪಿ ಹಿ ಗುಣಾ ಮಾನುಷಾದಿಷು ಜನ್ಮಸು ।
ದೇವಾನಾಂ ಮಾನುಷಾದೌ ತು ಶಕ್ತೇಽವ್ಯಕ್ತತಾಕೃತೇಃ ।
ಧರ್ಮವೃದ್ಧಿರ್ಭವೇತ್ ತೇಷಾಂ ಪ್ರೀತೋ ಭವತಿ ಕೇಶವಃ ।
ತನ್ಮಾನುಷೇ ಬಲೇ ತಸ್ಯ ವರಾದ್ವಾರಿತವತ್ ಸ್ಥಿತೇ ।
ದೈವಂ ಬಲಂ ಸುಶಕ್ತೋಽಪಿ ನಾವಿಶತ್ಕ್ರೀ ಸ ಮಾರುತಃ''

ಇತಿ ನಹುಷಪ್ರಶ್ನೇ ಚ ಭೀಮಾವತಾರೇ ಬಲಾದಿಗುಣಾನಾಮಾವೃತತ್ವಮುಚ್ಯತೇ । ಮೂಲರೂಪಾವತಾರರೂಪಯೋಃ ಸಾಮ್ಯೇ ತದನುಪಪತ್ತೇಃ । ನ ಚಾವ್ಯಕ್ತತ್ವೇಪಿ ಸ್ವರೂಪತೋ ಗುಣಸದ್ಭಾವಾತ್ ಸಾಮ್ಯಮಿತಿ ವಾಚ್ಯಮ್ । ತಸ್ಯ ಸರ್ವಸಾಧಾರಣತ್ವೇನ ವಿಶಿಷ್ಯ ಇತ್ಥಮೇವ ನಿಹಿತಮಿತ್ಯನುಪಪತ್ತೇಃ । ನ ಚಾವತಾರೇ ಇಚ್ಛಯಾ ವ್ಯಕ್ತಿಸದ್ಭಾವೇನ ಮೂಲರೂಪಸಾಮ್ಯಮ್ । ಪ್ರಾಯಶ ಇತಿ ಕದಾಚಿದಿಚ್ಛಾಯಾಮಪಿ ವ್ಯಕ್ತ್ಯಭಾವೋಕ್ತೇಃ । ಅತೋ ನೋಕ್ತಂ ಯುಕ್ತಮಿತಿ ।

ಅತ್ರೋಚ್ಯತೇ । ಇತರದೇವತಾವೈಲಕ್ಷಣ್ಯಂ ತಾವದಸ್ತಿ । ಕೇಷಾಂಚಿದ್ದೇವಾನಾಂ ಬಹುಶೋ ಗುಣಾವ್ಯಕ್ತಿಮಂಗೀಕೃತ್ಯ ಮಾನುಷಭಾವಾಂಗೀಕಾರಾತ್ । ಉರೂಣಾಂ ಕ್ವಚಿದ್ಬಲವತ್ಕಾರಣೇನ ಮಹಾಪ್ರಯತ್ನಪೂರ್ವಕಂ ಮೂಲರೂಪಗತಬಲಾದ್ಯಾದಾನತ ಏವಾವತಾರೇ ವ್ಯಕ್ತಿಃ । ಅತ್ರೋತ್ತಮಾನಾಂ ಶೇಷಶಕ್ರಾದೀನಾಂ ಲಕ್ಷ್ಮಣಾದಿಭಾವೇ ಸ್ವತ ಏವಾವ್ಯಕ್ತಾನಾಂ ಮೂಲರೂಪ ಏವ ಸ್ಥಿತಾನಾಂ ವಿಶೇಷಸ್ಮರಣರೂಪಾದಾನೇನ ದೈವಬಲಂ ವ್ಯಕ್ತಂ ಭವತಿ । ತದುಕ್ತಂ– 'ಆದಾನತೋ ವ್ಯಕ್ತಿಮಾಯಾಂತ್ಯರೂಣಾಮ್' ಇತಿ ।

ಯಥಾ

''..... ಸಸ್ಮಾರ ರೂಪಂ ನಿಜಮೇವ ಲಕ್ಷ್ಮಣಃ ।
ಚಚಾಲ ಪೃಥ್ವೀ ಸಹ ಮೇರುಮಂದರಾ ಸಸಾಗರಾ ನೈವ ಚಚಾಲ ಲಕ್ಷ್ಮಣಃ ।
ಸಹಸ್ರಮೂರ್ಧ್ನೋಽಸ್ಯ ಬತೈಕಮೂರ್ಧ್ನಿ ಧರಾಽಖಿಲೇಯಂ ನನು ಸರ್ಷಪಾಯತಿ''

೩) ಈ ಅರ್ಥದಲ್ಲಿ ವಾಲಿಯಾಗಿ ಅವತರಿಸಿದ್ದಾಗ ವ್ಯಕ್ತವಾಗಿದ್ದ ಇಂದ್ರನ ಗುಣಗಳು ಅನಂತರದ ಅರ್ಜುನಾದಿ ಅವತಾರಗಳಲ್ಲಿ ಆ ಪ್ರಮಾಣದಲ್ಲಿ ವ್ಯಕ್ತವಾಗಲಾರವು ಎಂದಾಗುವುದು. ಅದರಂತೆ ಜಾಂಬವಂತನ ದೇಹದಾರ್ಢ್ಯಾದಿಗಳು ಧರ್ಮರಾಜ, ವಿದುರನಲ್ಲಿ ಆ ಪ್ರಮಾಣದಲ್ಲಿ ಕಾಣಲಾರವು.

– ಇತಿ ಮೂಲರೂಪಮಾಹಾತ್ಮ್ಯಾನುಸಾರೇಣ ಮಾಹಾತ್ಮ್ಯಸ್ಯಾದಾನತೋ ವ್ಯಕ್ತೇರ್ಲಕ್ಷಣಸ್ಯೋಕ್ತಾ । ಅತ ಏವಾವತಾರಪ್ರಸಂಗೇ ಸಹಸ್ರಮೂರ್ಧ್ನ ಇತಿ ಮೂಲರೂಪಸ್ಥಿತಿವರ್ಣನಂ ಕೃತಮಿತಿ ಜ್ಞೇಯಮ್ । ಏವಮನ್ಯತ್ರಾಪಿ ದ್ರಷ್ಟವ್ಯಮ್ । ಭೀಮಸೇನಾದಿರೂಪಸ್ಯ ವಾಯೋಸ್ತು ಮೂಲರೂಪೇ ವಿದ್ಯಮಾನಂ ಗುಣಜಾತಂ ಸಮಸ್ತಮಸ್ಯೈವ । ಇತ್ಥಮೇವ ವಪುಷೇ ನಿಹಿತಮಿತಿ ಸ್ಪಷ್ಟಮುಕ್ತೇಃ । ಅಸ್ತ್ರ ವಿಶೇಷಃ । ಅವತಾರರೂಪೇ ವಿದ್ಯಮಾನಂ ಸರ್ವಂ ದೈವಂ ಬಲಾಧಿಕಂ ನ ನಿತ್ಯದಾ ವ್ಯಕ್ತಮ್ । ಕಿಂತು ಕ್ವಚಿತ್ಕ್ವಚಿದಿಚ್ಛಯಾ ವ್ಯಕ್ತಂ ಭವತಿ । ತರ್ಹೀತ್ಥಮೇವ ನಿಹಿತಮಿತಿ ಕಥಮಿತಿ ಚೇದುಚ್ಯತೇ । ಭಗವತಿ ಕ್ರಿಯಾಣಾಂ ಶಕ್ತಿವ್ಯಕ್ತ್ಯನಾऽವಸ್ಥಾನಂ ಪ್ರಮಿತಮ್ । ತತ್ರ ರಾವಣಹನನನ-ವನೀತಭಕ್ಷಣಾದಿಕ್ರಿಯಾಣಾಂ ರಾಮಕೃಷ್ಣಾದಿರೂಪೇಷು ವ್ಯಕ್ತಿದಶಾಯಾಂ ನ ವ್ಯಾಸಕಪಿಲಾದಿರೂಪೇಷು ವ್ಯಕ್ತಿರಿತ್ಯೇತಾವತಾ ನ ತೇಷಾಂ ರೂಪಾಣಾಂ ಸಾಮ್ಯಾಭಾವಃ । ಕಿಂ ತು ಕ್ರಿಯಾಣಾಂ ಸ್ವರೂಪತಃ ಸತ್ತ್ವಮಾತ್ರೇಣೈವ ಸಾಮ್ಯಮ್ । ತಥಾ ಭೀಮಾದೌ ದೈವಬಲಾದೇಃ ಸ್ವರೂಪತಃ ಸತ್ತ್ವಮಾತ್ರೇಣ ಸಾಮ್ಯಂ ಯುಜ್ಯತೇ । ಯತ್ ತು ಧರ್ಮಮಾಯಾಚ್ಛಾದಿತತ್ವಂ ನಹುಷೇಣ ವಾರಿತತ್ವಮಿತ್ಯಾದಿಕಂ ತತ್ಕೇವಲಮಾನುಷಬಲವಿವಕ್ಷಯೇತಿ ನ ದೋಷಃ । ವಾಯೋಸ್ತು ಕಾರಣವಿಶೇಷಮಪಹಾಯ ಇಚ್ಛಾಮಾತ್ರೇಣ ಮೂಲರೂಪಗತಸಮಗ್ರವ್ಯಕ್ತೀಕರಣಾತ್ । ನ ಚ ಯಥಾಕಥಂಚಿದವ್ಯಕ್ತಸದ್ಭಾವಾತ್ ಸಾಮ್ಯಾಭಾವ ಇತಿ ವಾಚ್ಯಮ್ । ಅವ್ಯಕ್ತೇಃ ಕಾದಾಚಿತ್ಕತ್ವೇನಾಲ್ಪತಯಾ ವ್ಯಕ್ತೀಕರ್ತುಂ ಶಕ್ಯೇऽಪ್ಯವ್ಯಕ್ತಾಕರಣನಿಮಿತ್ತಕಧರ್ಮಾಭಾವದ್ಧಿಭಗವತ್ಪ್ರೀತಿ ಸರ್ವದೇವಗತಮುನೀಂದ್ರತಪಃ-ಸ್ವೀಕಾರಾದಿರೂಪಮಹಾಪ್ರಯೋಜನೋದ್ದೇಶೇನ ಬುದ್ಧಿಪೂರ್ವಂ ವ್ಯಕ್ತೀಕರಣಾಭಾವಾದವ್ಯಕ್ತಂಗೀಕಾರೇऽಪಿ ತದ್ವಿವಕ್ಷಾಭಾವಾತ್ । ನನು ತರ್ಹ್ಯನಾವೃತತ್ವೇ ಇಚ್ಛಾಯಾ ವ್ಯಕ್ತುರ್ವ್ಯಕ್ತನುಪಪತ್ತಿಃ । ನ ಹಿ ನಿತ್ಯವ್ಯಕ್ತಿಃ ಸ್ವೇಚ್ಛಾಪೂರ್ವಕವ್ಯಕ್ತಿರಿತ್ಯುಪಪದ್ಯತ ಇತಿ ಚೆನ್ನ । ಭಾವಾನವಬೋಧಾತ್ । ನ ಹಿ ವಯಂ ಪರಮಾತ್ಮನ ಇವ ನಿತ್ಯವ್ಯಕ್ತಗುಣತ್ವಂ ಬ್ರೂಮಃ । ಯೇನೋಕ್ತದೋಷಃ । ಕಿಂ ತು ಮರುತ್ಪತೇರ್ಮೂಲ ಇವಾವತಾರರೂಪೇಷ್ವಪಿ ಕದಾಚಿತ್ ಸ್ವತ ಏವ ಗುಣಾ ವ್ಯಕ್ತಾ ಭವಂತಿ । ಅನ್ಯದಾ ನ ಸ್ವತೋವ್ಯಕ್ತಾಃ । ತದಾಪೀಚ್ಛಯಾ ವ್ಯಜ್ಯಂತೇ । ಪ್ರಾಯಶ ಇತ್ಯಸ್ಯಾಪ್ಯಯಮೇವಾರ್ಥಃ । ಇಚ್ಛಾವ್ಯಕ್ತಿಃ ಪ್ರಾಯಶಃ ಕದಾಚಿದನಿಚ್ಛಾಯಾಮಪಿ ವ್ಯಕ್ತಿರಿತಿ ವಾ ಕ್ವಚಿದಿ-ಚ್ಛಾಭಾವಾದವ್ಯಕ್ತಿರಿತಿ ವಾ ಕ್ವಚಿತ್ ಕಿಂಚಿದಾದಾನ ಇತಿ ವಾ । ಸರ್ವಂ ಚೈತದುಪಪನ್ನಮ್ ।

''ಪ್ರದರ್ಶಯಾಮಾಸ ತಥಾऽಸುರಾಣಾಂ ಮೋಹಾಯೈವಾಶಕ್ತವಚ್ಛಕ್ತರೂಪಃ'' ಇತಿ ತತ್ರೈವ,

ಪೂರ್ಣಜ್ಞಾನೌಜಸೋಸ್ತೇ ಗುರುತಮವಪುಷೋಃ ಶ್ರೀಮದಾನಂದತೀರ್ಥ
ಕ್ರೀಡಾಮಾತ್ರಂ ತದೇತತ್ ಪ್ರಮದದ ಸುಧಿಯಾಂ ಮೋಹಕ ದ್ವೇಷಭಾಜಾಮ್ - ಇತಿ ವಾಯುಸ್ತುತೌ ಚ,

ಪೂರ್ಣಶಕ್ತೇರ್ವೇऽಪಿ ಮೋಹನಾರ್ಥಮಶಕ್ತವತ್ ತತ್ಪದರ್ಶನಾದ್ಯುಕ್ತ್ಯಾ ಸ್ವತೋ ವ್ಯಕ್ತಿಪ್ರತೀತೇಃ ''ದೈವಂ ಬಲಂ ಸುಶಕ್ತೋऽಪಿ ನಾವಿಶತ್ಕ್ರೀ ಸ ಮಾರುತಃ'' ಇತಿ ಸರ್ವದೇವಮುನೀಂದ್ರಾಣಾಂ ತಪಸ ಆದಾನಾರ್ಥಂ ವ್ಯಕ್ತೀ-ಕರಣಾರ್ಥಮಿಚ್ಛಾಭಾವೇನಾವ್ಯಕ್ತೇರಪಿ ಶ್ರುತತ್ವಾತ್। ತಥಾ ಜರಾಸಂಧಹನನಸಮಯೇ ''ಕ್ರಮಶೋ ಬಲಂ ಸ್ವಂ ಸಮಾದದೇ ಮಾರುತನಂದನೋಪಿ'' ಇತ್ಯಾದಾನೇನ ವ್ಯಕ್ತತ್ವಸ್ಯಾಪ್ಯುಕ್ತತ್ವಾತ್ । ತಥಾ ಚ ಸ್ವತೋ ವಾ ಇಚ್ಛಯಾ ವಾ ಕಿಂಚಿದಾದಾನತೋ ವಾ ಸಮಗ್ರವ್ಯಕ್ತಿಸದ್ಭಾವಾದಿತ್ಥಮೇವೇತ್ಯಾದ್ಯುಕ್ತಿರುಪಪದ್ಯತೇ । ಆವೃತಿಮಂಗೀಕೃತ್ಯೇಚ್ಛಾ-ವ್ಯಕ್ತ್ಯಂಗೀಕಾರಾತ್ ಕದಾಚಿತ್ಕಯೋಜನವಿಶೇಷವಶೇನ ವ್ಯಕ್ತ್ಯಭಾವಾಚ್ಚ ವೈವಕ್ಷಿಕಾವೃತತ್ವೋಕ್ತಿರುಪಪದ್ಯತೇ । ಕೇಚಿತ್ ತು ಇಚ್ಛಾಯಾಮವ್ಯಕ್ತಿಃ ಪ್ರಾಯಃಶಬ್ದಾರ್ಥ ಇತ್ಯಾಹುಃ ।

೪) ಇದು ಒಂದರ್ಥದಲ್ಲಿ ವರ್ಣಕ್ರಮಕ್ಕೂ ಅನ್ವಯಿಸುವ ವಿಚಾರ ಎನ್ನಬಹುದು. ಎಂದರೆ ಬ್ರಾಹ್ಮಣ ರೂಪದಲ್ಲಿ ಅವತರಿಸಿದಾಗ ಜ್ಞಾನಾದಿಗಳು, ಕ್ಷತ್ರಿಯ ರೂಪದಲ್ಲಿ ಅವತರಿಸಿದಾಗ ಬಲಾದಿಗಳು ವಿಶೇಷವಾಗಿ ವ್ಯಕ್ತವಾಗುವವು ಎಂದು ಭಾವ.

ತದನುಪಪನ್ನಮಿತಿ ಭಾತಿ । ಯತಸ್ತಸ್ಯಾಪಿ ಕಾಮಸ್ಯ ಕ್ಷಣಮವ್ಯವಹಿತಿರ್ಭವೇದಿತಿ ಕ್ಷಣಮಾತ್ರಮ್ಯವಹಿತಸತ್ಯಕಾಮತ್ವೋಕ್ತಿವಿರೋಧಾತ್ । ನ ಚೈತದ್ವಾಕ್ಯಂ ಚತುರ್ಮುಖವಿಷಯಂ ನ ವಾಯುವಿಷಯಮಿತಿ ಮಂತವ್ಯಮ್ । ಬ್ರಹ್ಮವಾಯ್ವೋರವಿಶೇಷಸ್ಯ ''ಅನ್ಯೋನ್ಯಗುಣದಾತೃತ್ವಾತ್ ಸಮಾನೌ ಬ್ರಹ್ಮಮಾರುತೀ'' ಇತ್ಯೈತರೇಯಭಾಷ್ಯಾದ್ಯನೇಕಪ್ರಮಾಣಸಿದ್ಧತ್ವಾತ್ । ವಾಯುತ್ವೇ ಕಿಂಚಿದೂನತೇತ್ಯಸ್ಯ ಭಗವದ್ವಿಷಯಕಜ್ಞಾನಪರತ್ವಾತ್ । ಕ್ರಮೇಣ ವರ್ಧಮಾನಮಿತಿ ಬಹುವೃದ್ಧ್ಯುಕ್ತೇಃ ಕಥಂ ಜ್ಞಾನೇ ಕಿಂಚಿದೂನತೇತಿ ಚೇತ್ ಕ್ರಮವೃದ್ಧೇರ್ವಿಶೇಷಮಾತ್ರವಿಷಯಕತ್ವೇನಾಪರೋಕ್ಷಾಕಾರವಿಷಯಕತ್ವೇನ ಚೋಭಯೋರಪಿ ಗುಣರೂಪಾದಿಧರ್ಮವಿಷಯಪರೋಕ್ಷಜ್ಞಾನಸಾಮ್ಯೇನ ತದಪೇಕ್ಷಯಾ ತನ್ನಿಷ್ಠವಿಶೇಷಾಣಾಂ ಕಿಂಚಿತ್ತ್ವಸ್ಯ ಏವಕ್ಷಿತತ್ವಾಪರೋಕ್ಷಾಪೇಕ್ಷಯಾ ಚ ಕಿಂಚಿದೂನತಾ ವಿವಕ್ಷಿತೇತಿ ನ ದೋಷಃ ।

ನನು ನಹುಷಪ್ರಶ್ನೇ– ''ಕ್ಷಿಪ್ರಮಾತ್ಮವಿಮೋಕ್ಷಣಮ್ । ಇಚ್ಛನ್ನಪಿ ನ ಮೋಕ್ಷಾಯ ಯತ್ನಂ ಚಕ್ರೇ ವೃಕೋದರಃ''

ಇತೀಚ್ಛಾಯಾಮಪಿ ಪ್ರಯತ್ನಾಭಾವನಿಮಿತ್ತಕಮೋಕ್ಷಾಭಾವೋಕ್ತೇಃ ಕಥಂ ಕ್ಷಣಮಾತ್ರಮ್ಯವಹಿತಸತ್ಯಕಾಮತ್ವಮಿತಿ ಚೇನ್ನ। ತಸ್ಯ ತದಾನೀಂ ಕ್ಷಿಪ್ರಮೋಕ್ಷೇಚ್ಛೈವ ಶ್ರೂಯತೇ ನ ತು ತನ್ನಿಷ್ಠೇವ ಕ್ಷಣೇ । ತಥಾಪಿ

''..... ಕಾಲತೋ ಭಂಗಂ ಸ್ವಯಮೇವೈಷ ಯಾಸ್ಯತಿ ।
ಆಜ್ಞಯಾ ವಾಸುದೇವಸ್ಯ ದಾರ್ಢ್ಯಾದ್ದೇಹಸ್ಯ ಮೇ ತಥಾ ।
ಸ್ರಸ್ತಾಂಗೇ ಪತಿತೇ ಸರ್ಪೇ ಯಾಸ್ಯಾಮೀತಿ ವಿಚಿಂತಯನ್''

ಇತ್ಯುತ್ತರಗ್ರಂಥವಿರೋಧಾತ್ । ಕ್ಷಿಪ್ರಮೋಕ್ಷಣಂ ಚ ಯುಧಿಷ್ಠಿರಾಗಮನೇ ಜಾಯತ ಇತಿ ನ ಸತ್ಯಕಾಮತ್ವಹಾನಿಃ । ನ ಚ ಯುಧಿಷ್ಠಿರೇಣ ನಹುಷಕೃತಪ್ರಶ್ನೋತ್ತರದಾನತಃ ಪ್ರಸನ್ನೇನ ನಹುಷೇಣ ಬಂಧಮೋಚನಂ ಕೃತಮಿತಿ ತತ್ರ ಸ್ಪಷ್ಟಮುಕ್ತತ್ವಾತ್ 'ಸ್ರಸ್ತಾಂಗೇ ಪತಿತೇ ಸರ್ಪೇ' ಇತಿ ಚಿಂತನಂ ಭ್ರಮರೂಪಮಾಪನ್ನಮಿತಿ ವಾಚ್ಯಮ್ ।

''ಸ ನಹುಷೋ ಽಥಾಸೀತ್ ಸ್ರಸ್ತಭೋಗಃ ಶನೈಃ ಶನೈಃ''

ಇತಿ ಸ್ರಸ್ತಾಂಗತ್ವಸಮಯ ಏವ ಯುಧಿಷ್ಠಿರಾಗಮನಸ್ಯೋಕ್ತತ್ವೇನಾವಿರೋಧಾತ್ ।

ನನು ತಥಾಪಿ ಬ್ರಹ್ಮವಾಯ್ವೋಃ ಸಾಮ್ಯಂ ಕಥಂ ಯುಜ್ಯತೇ । ದ್ವಿವಾರಂ ಭಯಮೇವ ಚ । ಶೋಕೋ ಽಪಿ ತಾವಾನಿತಿ ಚತುರ್ಮುಖಸ್ಯ ದ್ವಿವಾರಮೇವ ಶೋಕೋಕ್ತೇಃ । ''ಭೀಮೋಪಿ ವಿಹ್ವಲತನುಃ ಸ ತು ಕಿಂಚಿದೇವ'' ಇತ್ಯುಕ್ತೇಃ ಪ್ರತಿದಿನಕಲ್ಪಮಪಿ ವಾಯೋರ್ಭೀಮತಾಯಾಂ ವಿಹ್ವಲತಾಯಾ ವಕ್ತವ್ಯತ್ವೇನ ಷಟ್ತ್ರಿಂಶತ್ಸಹಸ್ರವಾರಂ ವಿಹ್ವಲತಾಪತ್ತ್ಯಾ ಶೋಕಸ್ಯಾಪಿ ತಾವದ್ವಾರಮಂಗೀಕಾರ್ಯತ್ವಾದಿತಿ ಚೇನ್ನೈವಮ್ । ತತ್ರ ದೇಹಮಾತ್ರಗತೋ ವಿಹ್ವಲತಾರೂಪೋ ಧರ್ಮ ಏವೋಚ್ಯತೇ । ನ ತು ತದಾನೀಂ ಶೋಕೋತ್ಪತ್ತಿಃ । ಮಧ್ಯಂದಿನೇ ಸೂರ್ಯಕ್ಷೋಭ ಇವ ಶರೀರೇ ದೃಢತರಾಭಘಾತಪ್ರಯುಕ್ತಕಿಂಚಿದ್ವಿಕಾರವಿಶೇಷಮಾತ್ರೋತ್ಪತ್ತಿಪರತ್ವೇನಾಸ್ಯ ವಾಕ್ಯಸ್ಯ ಶೋಕೋತ್ಪತ್ತಿಪರತ್ವಾನಂಗೀಕಾರಾತ್ । ಯತ್ರ ದ್ವಿವಾರಂ ಭಯೋಕ್ತಿಸ್ತತ್ರ ಭಯಮಾತ್ರಂ ನ ತನ್ನಿಮಿತ್ತಕಂ ದುಃಖಮ್ । ಯತ್ರ ಚ ಶೋಕೋ ಽಭಿಧೀಯತೇ ತತ್ರಾಪಿ ಶೋಕವೃತ್ತಿಜನನಮಾತ್ರಂ ನ ತು ತನ್ನಿಮಿತ್ತಕೋ ನೀಚತಾವಿಕಾರ ಇತ್ಯೇವಂ ಯತ್ರ ಯತ್ರ ಯಾವಚ್ಛ್ರೂಯತೇ ತಾವದೇವ ಪ್ರತಿಪತ್ತವ್ಯಮ್ । ನತ್ವಸ್ಮದಾದಾವಿವ ತತ್ತದವಿನಾಭೂತಃ ಶೋಕಾದಿರ್ನೀಚತಾದಿರ್ವಾ । ಸರ್ವದೋಷವಿಹೀನತ್ವನಿಯಮಾತ್ । ಮನುಷ್ಯಭಾವಮಾಪನ್ನತ್ವಾದ್ದೇಹಮಾತ್ರಸ್ಯ ವಿಹ್ವಲತೇತಿ ಸರ್ವಮನವದ್ಯಮ್ ।

೫) ಆದರೆ, ಲಕ್ಷ್ಮಣ ರಾವಣನು ಎತ್ತಿಕೊಂಡು ಹೋಗಲು ಯತ್ನಿಸಿದಾಗ ತನ್ನ ಮೂಲ ರೂಪವನ್ನು ಸ್ಮರಿಸಿ ವಿಶೇಷ ಶಕ್ತಿಯನ್ನು ಪಡೆದ ಪ್ರಸಂಗ ಉತ್ತಮ ದೇವತೆಗಳಿಗೆ ಮೂಲ ರೂಪದ ಸಾಮರ್ಥ್ಯವನ್ನು ಪ್ರಸಂಗ ವಿಶೇಷದಲ್ಲಿ ತೆಗೆದುಕೊಳ್ಳಲು ಸಾಧ್ಯವಾಗುವುದಕ್ಕೆ ನಿದರ್ಶನ.

೬) ಆದರೆ, ಈ ರೀತಿಯ ಸಾಮರ್ಥ್ಯ ಸಾಮಾನ್ಯ ದೇವತೆಗಳಿಗೆ ಇರದು.

ಅಥವಾ ಬ್ರಹ್ಮವಾಯ್ವೋಃ ಸರ್ವಸಾಮ್ಯಾಭಾವಃ । ನೈತಾವನ್ಮಾತ್ರೇಣ ಕಾಮಿತಾನವಾಪ್ತಿರ್ವಕ್ತುಂ ಯುಕ್ತಾ । ತಥಾತ್ವೇ ಭಗವತ್ಯಾಮನಾವಿರುದ್ಧಕಾಮವತ್ತ್ವರೂಪದೋಷಪ್ರಸಕ್ತೇಃ । ಭಗವತ್ಯಾಮಾನುಸಾರಿತ್ವಪ್ರಾಪ್ತೇರ್ನಿಯತತ್ವಾತ್ । ತದೇವಂ ನೇಚ್ಛಾಯಾಮಪ್ಯವ್ಯಕ್ತಿರ್ಯುಕ್ತೇತಿ ।

ನನು ತಥಾಪಿ ನ ಮೂಲರೂಪಾವತಾರರೂಪಯೋಃ ಸಾಮ್ಯಮ್ ।

''ಅತೋ ಭೀಮಾರ್ಜುನೌ ಧರ್ಮಾದತ್ಯುತ್ತಮಬಲಾವಪಿ ।
ದೇವಮಾಯಾಂ ಸಮಾಶ್ರಿತ್ಯ ಧರ್ಮೇಣ ಸ್ಥಾಪಿತೌ ಕ್ಷಣಾತ್ ।
ಮುಹೂರ್ತಮಾತ್ರಂ ಸಾ ಮಾಯಾ ತಯೋರಾಚ್ಛಾದನಕ್ಷಮಾ''

ಇತಿ ಬಕಪ್ರಶ್ನೇ ಭೀಮಸ್ಯ ಸ್ವಾವರಧರ್ಮಮಾಯಾಬದ್ಧತ್ವೋಕ್ತೇಃ । ನ ಚ ವಾಚ್ಯಂ ನಾಸೌ ಮಾಯಾಬದ್ಧಃ ಕಿಂ ತು ಬದ್ಧವದ್ದರ್ಶಯಾಮಾಸೇತ್ಯೇವೇತಿ । ತಯೋರಾಚ್ಛಾದನಕ್ಷಮೇತ್ಯಾಚ್ಛಾದನಕ್ಷಮತ್ವಸ್ಯ ಸ್ತುತ್ಯೋಕ್ತೇಃ । ಅಪಿ ಚ ನಹುಷಬಲಪ್ರತಿಬದ್ಧತ್ವಂ ಚ ತಸ್ಯೋಚ್ಯಮಾನಮನುಪಪನ್ನಮಿತಿ । ಅತ್ರೋಚ್ಯತೇ । ಭೀಮೇ ಹಿ ದ್ವಿವಿಧಂ ಬಲಮ್ । ಮಾನುಷಶರೀರತ್ವೇನ ಮಾನುಷಭಾವಪ್ರಾಪ್ತ್ಯಾ ತಚ್ಛರೀರೋದ್ಭವಂ ಮಾನುಷಬಲಂ ಸ್ವರೂಪಕೃತಂ ದೈವಂ ಬಲಂ ಚೇತಿ । ಉಕ್ತಂ ಚ ತತ್ರೈವ–

'ದೇವಾ ಅಪಿ ಮನುಷ್ಯೇಷು ಜಾತಾಃ ಸುಬಲಿನೋಽಪಿ ಹಿ ।
ಮಾನುಷೇಣೈವ ಭಾವೇನ ಯುಕ್ತಾಃ ಸ್ಯುಃ ಕೇಶವಾದೃತೇ ।
ಅತೋ ಭೀಮಾರ್ಜುನೌ ಧರ್ಮೇಣ ಸ್ಥಾಪಿತೌ .... ।' ಇತಿ ।
ತನ್ಮಾನುಷೇ ಬಲೇ ತಸ್ಯ ವರಾದ್ವಾರಿತವತ್ ಸ್ಥಿತೇ ।
ದೈವಂ ಬಲಂ ಸುಶಕ್ತೋಽಪಿ ನಾವಿಶತ್ಕ್ರೀ ಸ ಮಾರುತಿಃ ।' ಇತಿ ।

ತಥಾ ಚ ಧರ್ಮಮಾಯಾದಿನಾ ಮಾನುಷಬಲಸ್ಯೈವ ಕಿಂಚಿತ್ಕತಿಬಂಧೋ ನ ದೈವಬಲಸ್ಯ । ಅಯಮಪಿ ಕಿಂಚಿತ್ಕಾಲ ಏವ । ಅತ ಏವ ಮುಹೂರ್ತಮಾತ್ರಮಿತ್ಯುಕ್ತಮ್ ।

''ತತಃ ಪ್ರಬುದ್ಧಯೋರ್ಧರ್ಮೋ ನೈವ ಶಕ್ತಿಶತಾಂಶಭಾಕ್''- ಇತಿ ಚ ।

ನಹುಷೇಣ ಬದ್ಧತ್ವಂ ತು ಮಾನುಷಬಲಮಾದಾಯ ಬುದ್ಧಿಪೂರ್ವಬದ್ಧವದವಸ್ಥಾನಮ್ । ಅತ ಏವ ಮಾನುಷೇ ಬಲೇ ಇತಿ, ವಾರಿತವದಿತಿ ಚೋಕ್ತಮ್ । ಶಕ್ತೋಽಪೀತಿ ಬಹುಶ ಇತಿ । ನರಸ್ವಭಾವೇ ವೃತ್ತಿರ್ದೈವಬಲಾನಾವಿಷ್ಕರಣಾದಿರೂಪಂ ಮೂಲರೂಪಾವತಾರರೂಪಯೋರ್ವೈಷಮ್ಯಮಂಗೀಕ್ರಿಯತ ಏವ । ಅತ್ಯಲ್ಪತ್ವಾತ್ । ಅತ ಏವ ''ಬ್ರಹ್ಮಣಾ ತ್ವಂಶರೂಪೇಷು ಭಾರತ್ಯಾ ಜ್ಞಾನವರ್ಜನಮ್'' ಇತಿ ಭೀಮಾದ್ಯವತಾರೇಷು ಕ್ವಚಿತ್ಕ್ವಚಿದ್ಭಗವದ್ಗುಣಾದಿಗತವಿಶೇಷಾಪರೋಕ್ಷ್ಯಂ ನೇತ್ಯಾದಿವೈಷಮ್ಯಾಂಗೀಕಾರವಿರೋಧೋಽಪಿ ನಿರಸ್ತಃ । ಅತ್ಯಲ್ಪವೈಷಮ್ಯಸ್ಯಾ-ವಿರೋಧಿತ್ವಾದಿತಿ । ನನು ತಥಾಪಿ–

''ಜಗಾಮ ಚಾನು ಮಾರುತಿಃ ಸುಸೂಕ್ಷ್ಮಮಕ್ಷಿಕೋಪಮಃ।
ಯದೈನಮೇಷ ಬಾಧತೇ ತದಾ ವಿಮೋಚಯಾಮ್ಯಹಮ್ ॥
ಯದಿ ಸ್ಮ ಶಕ್ಯತೇಽಸ್ಯ ತು ಸ್ವಮೋಚನಾಯ ತದ್ವರಮ್ ।
ಇತಿ ವ್ರಜತ್ಯನು ಸ್ಮ ತಂ ಮರುತ್ಸುತೇ ನಿಶಾಚರಃ'' ॥

ಇತಿ ಯದ್ಯಾಲಿಂಗಿತಜ್ಞಾನೋಕ್ತಿವಿರೋಧಃ । ಯದ್ಯಾಲಿಂಗಿತಜ್ಞಾನಸ್ಯ ಸಂಶಯರೂಪತ್ವಾತ್ । ಸಂಶಯಸ್ಯ ಚ ಮೂಲರೂಪೇಽಭಾವಾದಿತಿ ಚೇನ್ನ। ಯದ್ಯಪಿ ತುಹಿನಸಲಿಲಮಾಲ್ಯಾದಿಭಿಃ ಸಿಕ್ತಃ ಸುಗ್ರೀವೋ ವಿಗತಸಕಲಯುದ್ಧಗ್ಲಾನಿಃ ಸನ್ ಕುಂಭಕರ್ಣಾತ್ ಸ್ವಯಮೇವ ಸ್ವಾತ್ಮಾನಂ ಮೋಚಯಿಷ್ಯತ್ಯೇವೇತಿ ಶ್ರೀಹನೂಮಾನ್ ನಿಶ್ಚಿತ್ಯೈವ ಸ್ವೀಯಸ್ಯ ಪರೈರಪಹಾರೇ ಪ್ರಸಕ್ತೇ ಪ್ರಚ್ಛನ್ನವೇಷೈರಪರೈಸ್ತದೀಯೈಸ್ತನ್ಮೋಚನಾಯ ಸಹ ಗಂತವ್ಯಮಿತಿ ನೀತಿಪ್ರದರ್ಶನಾರ್ಥಮೇವ ಸಹ ಗತವಾನ್ । ನ ತು ಸಂಶಯಪೂರ್ವಮ್ । ತಥಾಽಪಿ ಪಶ್ಯತಾಂ ಕಲಿಮುಖ್ಯಾನಾಂ ಮೋಹನಾಯ ಸತಾಂ ವಿಡಂಬನಾಯ ಚ ತಾದೃಶಜ್ಞಾನಾಕಾರಂ ದರ್ಶಯಾಮಾಸೇತಿ ಕುತೋ ವಿರೋಧಃ। ಯದ್ವಾ

''ಜಘಾನ ಶೂಲೇನ ಪುನಃ ಸ ರಾಕ್ಷಸಃ,
ಅಮೋಘಶೂಲಂ ಪ್ರಪತತ್ ತದೀಕ್ಷ್ಯ ರವೇಃ ಸುತಸ್ಯೋಪರಿ ಮಾರುತಾತ್ಮಜಃ।
ಪ್ರಗೃಹ್ಯ ಜಾನೌ ಪ್ರಣಿಧಾಯ ಶೀಘ್ರಂ ಬಭಂಜ ತಂ ಪ್ರೇಕ್ಷ್ಯ ನನಾದ ಚೋಚ್ಚೈಃ'' – ಇತ್ಯುಕ್ತೇಃ

ಯದಾ ಏಷ ಕುಂಭಕರ್ಣಃ ಏನಂ ಸುಗ್ರೀವಂ ಶೂಲೇನ ಬಾಧತೇ ತದಾಽಹಂ ಶೂಲಭಂಜನೇನೈನಂ ವಿಮೋಚಯಾಮೀತಿ ಪ್ರಥಮಾರ್ಧಾರ್ಥಃ। ಅತ ಏವ ಯದಾ ತದೇತ್ಯಾದಿಪ್ರಯೋಗೋ ನ ತು ಯದಿ ತರ್ಹೀತಿ। ದ್ವಿತೀಯಾರ್ಧಸ್ಯ ತು ಕುಂಭಕರ್ಣೇನ ಗೃಹೀತಸುಗ್ರೀವವಿಮೋಚನಾಯ ನ ಮಯಾ ಪ್ರಯತಿತವ್ಯಮ್ । ತುಹಿನಸಲಿಲಮಾಲ್ಯಾದಿಭಿಃ ಶ್ರಮಪರಿಹಾರೇ ಸ ಸ್ವಾತ್ಮಾನಂ ಮೋಚಯಿಷ್ಯತ್ಯೇವೇತ್ಯಭಿಪ್ರಾಯಃ। ಯೋಜನಾ ತು ಅಸ್ಯ ಸ್ವಮೋಚನಾಯ ಶಕ್ಯತ ಇತಿ ಯತ್ ತದ್ವರಮಿತಿ । ಸುಧಾಯಾಂ 'ಪಂಚರಾತ್ರನಿಷೇಧಾರ್ಥಂ ಸೂತ್ರಾಣ್ಯಾಚಕ್ಷತೇ ಯದಿ' ಇತ್ಯನುವ್ಯಾಖ್ಯಾನೇ ಯದೀತ್ಯೇತದನೂದ್ಯ ಯದೇತಿ ವ್ಯಾಖ್ಯಾತಮಿತಿ ಪ್ರಕೃತೇಽಪಿ ತಥಾ ವ್ಯಾಖ್ಯಾತಮಿತ್ಯದೋಷಃ। ತಥಾ ಚಾಸ್ಯ ಗ್ರಂಥಸ್ಯ ನಿಶ್ಚಯರೂಪಭಿನ್ನವಿಷಯಜ್ಞಾನದ್ವ್ಯಾನುವಾದಪರತ್ವಾನ್ನಾನೇನ ಹನುಮತಃ ಸಂಶಯಸ್ಯ ಶಂಕಾವಕಾಶ ಇತಿ । ಕೇಚಿತ್ ತು ಅನಾಲೋಚನದಶಾಯಾಂ ಹನುಮತೋ ಯದ್ಯಾಲಿಂಗಿತಜ್ಞಾನಮಿತ್ಯಾಹುಃ । ಅಪರೇ ತು ಯಥಾನಿಶ್ಚಯರೂಪಮಪಿ ಸಾಕ್ಷಿಜ್ಞಾನಂ ಸದೋಷಂ ನಿರ್ದೋಷಂ ವಾ ಪ್ರಮಾಣಮಪ್ರಮಾಣಂ ವಾ ಇತಿ ಮಾನಸಸಂಶಯಪ್ರಾಪ್ತಯೋಃ ಸದೋಷತ್ವಪ್ರಾಮಾಣ್ಯಕೋಟ್ಯೋಃ ಅದೋಷತ್ವಾಪ್ರಾಮಾಣ್ಯಕೋಟ್ಯೋಶ್ಚ ತಾದರ್ಥ್ಯಮಾತ್ರಮ್ । ಸದೋಷಂ ಚೇದಪ್ರಮಾಣಮದೋಷಂ ಚೇತ್ ಪ್ರಮಾಣಮಿತಿ ಗೃಹ್ಣಾತಿ ತಥಾ ಏನಮೇಷ ಬಾಧತೇ ನ ವಾ ಹನುಮಾನ್ ಮೋಚಯಿಷ್ಯತಿ ನ ವಾ ಸ್ವಮೋಚನಾಯ ಶಕ್ಯತೇ ವಾ ನ ವಾ ಇತಿ ಲೋಕಸಂಶಯಪ್ರಾಪ್ತಬಾಧವಿಮೋಚನಾದೀನಾಂ ಕೋಟೀನಾಂ ತಾದರ್ಥ್ಯಮಾತ್ರಂ ವಿಷಯೀಕುರ್ವಜ್ಜ್ಞಾನಂ ಯದೈನಮೇಷ ಬಾಧತ ಇತ್ಯಾದಿನಾಽನೂದ್ಯತ ಇತಿ ವರ್ಣಯಂತೀತ್ಯಲಂ ಪ್ರಸಕ್ತಾನುಪ್ರಸಕ್ತ್ಯಾ। ತದೇವಂ ಮೂಲ ಇವಾಶೇಷರೂಪೇಷ್ವಪಿ ಸಾಮ್ಯೋಕ್ತಿರುಪಪನ್ನೇತಿ ॥

– ಸತ್ತತ್ತ್ವರತ್ನಮಾಲಾ (ಚತುರ್ಮುಖಿಪ್ರಕರಣ, ಶ್ಲೋ. ೧೭೫)

೨೮೪. ಆಯುರ್ವೀರ್ಯಮಥೋ ಬುದ್ಧಿರ್ಬಲಂ ತೇಜಶ್ಚ ಪಾಂಡವ।
ಮನುಷ್ಯಾಣಾಮನುಯುಗಂ ಹ್ರಸತೀತಿ ನಿಬೋಧ ಮೇ ॥ – ಭಾರತ (ವನ. ೧೯೦/೧೨)

೨೮೪. ಭೂರ್ಮಿರ್ನದ್ಯೋ ನಗಾಃ ಶೈಲಾಃ ಸಿದ್ಧಾ ದೇವಾ ಮಹರ್ಷಯಃ।
ಕಾಲಂ ಸಮನುವರ್ತಂತೇ ಯಥಾ ಭಾವಾ ಯುಗೇ ಯುಗೇ ॥ – ಭಾರತ (ವನಪರ್ವ ೧೪೯/೮)

೨೮೪. ಯುಗಾನುಸಾರಾತ್ಕೃತಯುಗೇ ಕಿಂಚಿದಾವರಣಂ ತ್ರೇತಾಯಾಂ ತತೋಽಧಿಕಮಿತಿ ಯುಗಾನುಸಾರಾತ್ ।– (ತಾ.)

ನೈವಾವ್ಯಕ್ತಿಃ ಕಾಚಿದಸ್ತೀಹ ವಿಷ್ಣೋಃ
ಪ್ರಾದುರ್ಭಾವೇಷ್ವಿತಿಸುವ್ಯಕ್ತಶಕ್ತೇಃ ।
ಇಚ್ಛಾವ್ಯಕ್ತಿಃ ಪ್ರಾಯಶೋ ಮಾರುತಸ್ಯ
ತದನ್ಯೇಷಾಂ ವ್ಯಕ್ತತಾ ಕಾರಣೇನ ॥ ೨೮೫ ॥

ಅ: ಎಲ್ಲ ಪ್ರಾದುರ್ಭಾವಗಳಲ್ಲೂ ಸಹ ಪರಿಪೂರ್ಣವಾಗಿ ತನ್ನ ಸಾಮರ್ಥ್ಯವನ್ನೆಲ್ಲಾ ವ್ಯಕ್ತಪಡಿಸುವ ವಿಷ್ಣುವಿಗೆ ಮಾತ್ರ ಇಂತಹ ಅಭಿವ್ಯಕ್ತಿಯ ಅಭಾವ ಎಷ್ಟು ಮಾತ್ರಕ್ಕೂ ಇರದು. ವಾಯುದೇವರಿಗೆ ಅವತಾರಗಳಲ್ಲಿ ಗುಣಗಳು ಸಾಮಾನ್ಯವಾಗಿ ಇಚ್ಛೆಯಿಂದ ಅಭಿವ್ಯಕ್ತ-ವಾಗುವವು. ಇತರ ದೇವತೆಗಳಿಗೆ ವ್ಯಕ್ತವಾಗುವುದು ವಿಶೇಷ ಕಾರಣವಿದ್ದಾಗ ಮಾತ್ರ.

ವಿ: ೧) ಶ್ರೀಹರಿಯ ಸಕಲ ಪ್ರಾದುರ್ಭಾವಗಳೂ ಮೂಲರೂಪದಂತೆಯೇ ಸರ್ವಾತ್ಮನಾ ಪರಿಪೂರ್ಣವಾದ್ದರಿಂದ ಅವುಗಳಲ್ಲಿ ಯಾವ ವಿಧವಾದ ವ್ಯತ್ಯಾಸವೂ ಎಷ್ಟು ಮಾತ್ರಕ್ಕೂ ಸರ್ವಥಾ ಇರುವುದಿಲ್ಲ ಎಂಬುದು ವಿಶೇಷ. ಎಂದರೆ ಪರಮಾತ್ಮನ ಮತ್ಸ್ಯ, ಕೂರ್ಮಾದಿ ಸಕಲರೂಪಗಳೂ ಒಂದೇ ಬಗೆಯಲ್ಲಿ ಪರಿಪೂರ್ಣವಾದವು ಎಂದರ್ಥ. ಅವನಿಗೆ ಯುಗಭೇದ, ವರ್ಣಭೇದ, ಯೋನಿಭೇದ, ಲಿಂಗಭೇದ, ವಯೋಭೇದ, ದೇಶಭೇದ ಮೊದಲಾದ ಯಾವ ಕಾರಣದಿಂದಲೂ ಶಕ್ತಿವ್ಯತ್ಯಾಸದ ಪ್ರಸಕ್ತಿಯೇ ಇರದು.

---

೨೮೪. ಭೀಮಸೇನಾಂಶೇಷು ತತ್ತ್ವವಿದ್ಯಾವಿಚಾರ್ಯವರ್ಯೇಷು ಕಲಿಯುಗಾವತೀರ್ಣೇಷು ಮೂಲರೂಪ ಇವ ಸೌಂದರ್ಯಸೌಲಕ್ಷಣ್ಯಾದೀನಾಂ ಪ್ರಮಿತತ್ವಾಚ್ಚ। – (ತಾ.)

೨೮೪. ಕೃತೇ ಕಿಂಚಿದಾವೃತಾಃ ತ್ರೇತಾಯಾಂ ತತೋऽಧಿಕಮಾವೃತಾ ಇತ್ಯಾದಿಕ್ರಮೇಣ ಮೂಲರೂಪಾಪೇಕ್ಷಯಾ। – (ವ.)

೨೮೫. ಇಚ್ಛಾವ್ಯಕ್ತಿಃ ಪ್ರಾಯಶೋ ಮಾರುತಸ್ಯೇತ್ಯತ್ರ ಸ್ವಭಾವತ ಏವಾಂಶಾನಾಂ ಬಹುಬಲಾಢ್ಯತ್ವಾತ್ ಇಚ್ಛಾऽಪಿ ಪ್ರಾಯಿಕೀತಿ ಸೂಚನಾಯ ಪ್ರಾಯಶ ಇತ್ಯುಕ್ತಮ್। ಕಾರಣೇನ = ಮೂಲರೂಪಸ್ಮರಣಾದಿಕಾರಣೇನ। ತಸ್ಮಾದ್ಭೀಮ ಇತ್ಯತ್ರ ತಸ್ಮಾತ್ = ಹನುಮತಸ್ತೇತಾಯುಗೋತ್ಪನ್ನತ್ವಾತ್ ಭೀಮಸ್ಯ ದ್ವಾಪರಯುಗೋತ್ಪನ್ನತ್ವಾತ್। ಅನ್ಯವದಿತ್ಯುಪ-ಲಕ್ಷಣಮ್। ''ಪ್ರೋದ್ಧರ್ತುಂ ನಾಶಕತ್'' ಇತಿ ವಚನಾತ್ ಅಶಕ್ತವತ್ ಹನುಮನ್ಮುಖತಃ ಕಥಾಶ್ರವಣಾತ್ ಅಜ್ಞವಚ್ಚೇತ್ಯಪಿ ದ್ರಷ್ಟವ್ಯಮ್। ಅತ ಏವ ಅಶಕ್ತವಚ್ಛಕ್ತರೂಪ ಇತ್ಯಪ್ಯುಕ್ತಮ್ ॥ – (ವಾ.)

೨೮೫. ಗಚ್ಛನ್ ಸೌಗಂಧಿಕಾರ್ಥಂ ಪಥಿ ಸ ಹನುಮತಃ ಪುಚ್ಛಮಚ್ಛಸ್ಯ ಭೀಮಃ
ಪ್ರೋದ್ಧರ್ತುಂ ನಾಶಕತ್ ಸ ತ್ವಮುಮುರುವಪುಷಾ ಭೀಷಯಾಮಾಸ ಚೇತಿ ।
ಪೂರ್ಣಜ್ಞಾನೌಜಸೋऽಸ್ತೇ ಗುರುತಮವಪುಷೋಃ ಶ್ರೀಮದಾನಂದತೀರ್ಥ-
ಕ್ರೀಡಾಮಾತ್ರಂ ತದೇತತ್ಕಮದದ ಸುಧಿಯಾಂ ಮೋಹಕ ದ್ವೇಷಭಾಜಾಮ್ ॥ – ವಾಯುಸ್ತುತಿ(೨೭)

೨೮೫. ಕ್ವಚಿದಿಚ್ಛಾಭಾವಾದವ್ಯಕ್ತಿಃ ಪ್ರಾಯಃಶಬ್ದಾರ್ಥಃ। ಯದ್ವಕ್ಷ್ಯತಿ। 'ದೈವಬಲಂ ಸುಶಕ್ತೋऽಪಿ ನಾವಿಶ್ಚಕ್ರೇ ಸ ಮಾರುತಿಃ' ಇತಿ। – (ತಾ.)

೨) ಮಹಾಲಕ್ಷ್ಮಿಗೂ ಇಂತಹುದೇ ವೈಶಿಷ್ಟ್ಯ ಎಂಬುದು ಮತ್ತೊಂದು ಪ್ರಮೇಯ. ವಾಯುದೇವರ ಗುಣಗಳು ಮಾತ್ರ ಪ್ರಾಯಃ ಇಚ್ಛಾಮಾತ್ರದಿಂದಲೇ ವ್ಯಕ್ತವಾಗುವವು. ಸ್ವಾಭಾವಿಕವಾಗಿಯೇ ಅವರ ಗುಣಗಳು ವ್ಯಕ್ತವಾಗಿರುವುದರಿಂದ ಅಂತಹ ಇಚ್ಛಾಭಿವ್ಯಕ್ತಿಯ ಪ್ರಸಂಗವೂ ಬರದು ಎಂದರ್ಥ.

೩) ಇತರ ದೇವತೆಗಳಿಗೆ ಅಂತಹ ವಿಶೇಷ ಕಾರಣ ಒದಗದಿದ್ದಾಗ ವ್ಯಕ್ತವಾಗುವ ಪ್ರಸಕ್ತಿಯೇ ಇಲ್ಲ ಎಂಬುದು ಮತ್ತೊಂದು ವಿಶೇಷ. ಅವರ ಅವತಾರಗಳ ಭೇದವೂ ಸಹ ಈ ಬಗೆಯದು. ಯುಗ ಮೊದಲಾದವುಗಳ ಪರಿಣಾಮ ಅವುಗಳ ಮೇಲೆ ಆಗಿಯೇ ಆಗುವುದು.

೪) ಆದರೆ ವಾಯುದೇವರಿಗೆ ಯುಗಭೇದಾದಿ ನಿಮಿತ್ತಗಳಿಂದ ಸಹ ಅವತಾರಗಳಲ್ಲಿ ಶಕ್ತಿಭೇದಾದಿಗಳು ಸಹ ಒದಗದಿರುವುದು ಅವರ ಮತ್ತೊಂದು ಹಿರಿಮೆ :

'ಬಟ್ ತದ್ದರ್ಶತಮಿತ್ಥಮೇವ ನಿಹಿತಂ'.... – ಅನುವ್ಯಾಖ್ಯಾನ

'ಇತ್ಥಮೇವ ಮೂಲರೂಪವದೇವ' – ನ್ಯಾಯಸುಧಾ

೫) ವಾಯುದೇವರು ಅವತಾರಗಳಲ್ಲೂ ಸಹ ತಮ್ಮ ಮೂಲರೂಪದ ಶಕ್ತಿಯ ಅತ್ಯಂತ ಅಲ್ಪಾಂಶವನ್ನಷ್ಟೇ ಉಪಯೋಗಿಸಿ ಇತರ ದೇವತೆಗಳಿಗೆ ಮನಸ್ಸಿನಲ್ಲೂ ಯೋಚಿಸಲಾಗದ ಅದ್ಭುತ ಕಾರ್ಯಗಳನ್ನು ನಡೆಸುವ ವಿವರ ಶಾಸ್ತ್ರದಲ್ಲಿದೆ (ಮಧ್ವವಿಜಯಭಾವಪ್ರಕಾಶಿಕಾ) :

ಸಾಮರ್ಥ್ಯಾಂಶಾಂಶಮೇವಾತ್ರ ಪ್ರಾದುಶ್ಚಕ್ರೇ ಜಗದ್ಗುರುಃ ।

ತಸ್ಮಾದ್ಭೀಮೋ ಧರ್ಮವೃದ್ಧ್ಯರ್ಥಮೇವ
ಸ್ವೀಯೇ ರೂಪೇಽಪ್ಯನ್ಯದ್ವೃತ್ತಿಮೇವ ।
ಪ್ರದರ್ಶಯಾಮಾಸ ತಥಾಽಸುರಾಣಾಂ
ಮೋಹಾಯೈವಾಶಕ್ತವಚ್ಛಕ್ತರೂಪಃ ॥ ೨೮೬ ॥

ಅ: ಆದ್ದರಿಂದ ಆಗ ಭೀಮಸೇನ ಪುಣ್ಯವೃದ್ಧಿಗೆಂದೇ ತನ್ನ ರೂಪದೊಂದಿಗೆ ಬೇರೊಬ್ಬರೊಂದಿಗೆಂಬಂತೆ ವರ್ತನೆಯನ್ನು ತೋರಿದ. ಅವನು ಪೂರ್ಣಶಕ್ತಿಸ್ವರೂಪನಾದರೂ ಅಸುರ ಮೋಹನಕ್ಕಾಗಿ ಸಹ ಹಾಗೆ ಅಶಕ್ತನಂತೆ ನಡೆದುಕೊಂಡ.

ವಿ: ೧) ಭೀಮಸೇನ ಹನುಮಂತನ ಬಾಲವನ್ನು ಎತ್ತಲು ಅಸಮರ್ಥನಾದಂತೆ ವರ್ತಿಸಿದ್ದು ಹನುಮಂತ ಯಾರೆಂದು ತಿಳಿಯದೇ ಸಾಮಾನ್ಯ ಕಪಿ ಎಂದು ಭ್ರಮಿಸಿದಂತೆ ಕಂಡದ್ದು ಹನುಮಂತನ ಮಹಿಮೆಯನ್ನು ಕಂಡು ಭಯಗೊಂಡಂತೆ ನಟಿಸಿದ್ದು – ಎಲ್ಲವೂ ಸಹ ಹಿಂದೆ ಹೇಳಿದಂತೆ ಶ್ರೀಹರಿಯು ವಿಧಿಸಿದ ಧರ್ಮವನ್ನು ಪಾಲಿಸುವುದರಿಂದ ವಿಶೇಷವಾದ ಹರಿಪ್ರೀತಿಗೆ ಪಾತ್ರನಾಗಲೆಂದು ಮಾತ್ರ.

೨) ಪೂರ್ಣವ್ಯಕ್ತ ಸ್ವರೂಪನಾದರೂ ಹಾಗೆ ನಡೆದುಕೊಳ್ಳಲು ಮತ್ತೊಂದು ಕಾರಣ ಅಸುರ ಮೋಹನ. ವಾಯುದೇವರಿಗೂ ಇತರ ದೇವತೆಗಳಿಗೆ ಆಗುವಂತೆ ಯುಗಭೇದಾದಿ ಕಾರಣದಿಂದ ಶಕ್ತಿಹ್ರಾಸಾದಿ ದೋಷ ಒದಗುವುದು ಎಂದು ಅಸುರರು ತಪ್ಪು ತಿಳಿಯುವಂತೆ ಮಾಡಲೆಂದೂ ಹಾಗೆ ನಡೆದುಕೊಂಡರು ಎಂದರ್ಥ.

೩) ಈ ಪ್ರಸಂಗದ ಅಂತರಾರ್ಥವನ್ನೆಲ್ಲಾ ಅಪೂರ್ವವಾಗಿ ಸೆರೆ ಹಿಡಿದಿರುವ ವಾಯುಸ್ತುತಿಯ ಶ್ಲೋಕ ಗಮನಾರ್ಹ.

೪) ರಾಮ–ಪರಶುರಾಮರು ಸಹ ಹೀಗೆಯೇ ಬೇರೆಯೆಂಬ ರೀತಿಯಲ್ಲಿ ವರ್ತಿಸಿದ್ದು ಪರಸ್ಪರ ಸಂಘರ್ಷಕ್ಕೆ ತೊಡಗಿದಂತೆ ನಟಿಸಿದ್ದೂ ಸಹ ಇತರರಿಗೆ ವಿಡಂಬನೆಯ ಮೂಲಕ ಧರ್ಮ ತೋರಿಸಲೆಂದು. ಅದರಂತೆ ಯಜ್ಞ–ಋಷಭರ ಸಂಘರ್ಷವನ್ನು ತಿಳಿಯಬೇಕು.

೫) ಕೃಷ್ಣ ವೇದವ್ಯಾಸ, ಪರಶುರಾಮ ರೂಪಗಳ ನಡುವೆ ನಡೆದ ಭೇದವ್ಯವಹಾರವೂ ಈ ಬಗೆಯದೇ. ಮಹಾಲಕ್ಷ್ಮೀ ರೂಪಗಳಾದ ರುಗ್ಮಿಣೀ ಸತ್ಯಭಾಮೆಯರೂ ಸಹ ಬೇರೆ ವ್ಯಕ್ತಿಗಳಂತೆ ವ್ಯವಹರಿಸಲು ಇದೇ ಕಾರಣ ಎಂದು ಅರಿಯಬೇಕು (೨೦/೮೩, ೪೪).

೬) ಇತರ ದೇವತೆಗಳು ಹಾಗೆ ವರ್ತಿಸಿದಾಗ ಮಾತ್ರ ಅದು ಯುಗಭೇದಾದಿ ಕಾರಣದಿಂದ ಒದಗುವ ಶಕ್ತಿಹ್ರಾಸಾದಿಗಳಿಂದಾಗಿ ಎಂದೇ ತಿಳಿಯಬೇಕು.

ಹನುಮಂತ ಭೀಮರ ಸಂಭಾಷಣೆ

ತದ್ರೂಪವೃದ್ಧಿಂ ಭೀಮಸೇನೋಽಥ ದೃಷ್ಟ್ವಾ
ಶ್ರುತ್ವಾ ಹನೂಮನ್ಮುಖಿತಃ ಕಥಾಶ್ಚ।
ರಾಮಸ್ಯ ತಚ್ಚಾತುರಾತ್ಮ್ಯಂ ಚ ದಿವ್ಯಂ
ಚಾತುರ್ಯುಗಂ ಧರ್ಮಮಪ್ಯಗ್ರ್ಯಮೇವ ॥ ೨೮೭ ॥

ಅ: ಭೀಮಸೇನ ಹನುಮಂತನ ರೂಪ ಬೆಳೆದದ್ದನ್ನು ನೋಡಿದ; ಆ ಹನುಮಂತನ ಮುಖದಿಂದ ರಾಮನ ಮಹಿಮೆಯನ್ನು ಕೇಳಿದ; ಶ್ರೀರಾಮನ ಆ ವಾಸುದೇವಾದಿ

---

೨೮೭. 'ವಿನತಸ್ಯ ಸುಪರ್ಣಸ್ಯ ತಥಾ ಶತಬಲೀರಪಿ । ತಥಾ ತತ್ಪರಿವಾರಾಣಾಂ ಕಪೀನಾಂ ರಾಮಸೇವಿನಾಂ ಅತ್ಯಾಯಾಮಸಮುದ್ರಾಣಾಂ ತರಣೇ ಶಕ್ತಿರೂರ್ಜಿತಾ। ಇಚ್ಛಯಾ ರಾಮದೇವಸ್ಯ ತದಾಸೀತ್ ಕರುಣಾತ್ಮನಃ' ಇತಿ ಸ್ಯಾಂದೇ । ವಿನತಾದಿಕಪೀನಾಂ ಸಪ್ತದ್ವೀಪಗಮನಶಕ್ತಿವಿಷಯೇ ರಾಮಸ್ಯೇಚ್ಛೈವ ಕಾರಣಮಿತ್ಯೇಕದೇಶೇನ ಕಾರಣಂ ಉದಾಹರಣಪೂರ್ವಕಂ ದರ್ಶಿತಮ್ । – (ಜ.)

ಚತುರ್ಮೂರ್ತಿರೂಪದ ದಿವ್ಯವೈಭವವನ್ನು ಕೇಳಿದ; ನಾಲ್ಕುಯುಗಗಳಿಗೆ ಸಂಬಂಧಿಸಿದ ಉತ್ತಮಧರ್ಮಗಳನ್ನು ಕೇಳಿದ.

ವಿಃ ೧) ಮುಂದೆ ಭೀಮಸೇನನ ಅಪೇಕ್ಷೆಯಂತೆ ಹನುಮಂತ ತಾನು ಸಾಗರ ಹಾರುವ ಸಮಯದಲ್ಲಿ ಸ್ವೀಕರಿಸಿದ್ದ ದೊಡ್ಡ ರೂಪವನ್ನು ತೋರಿಸಿದ. ರಾಮನ ವಿಶೇಷಮಹಿಮೆಯನ್ನು ವರ್ಣಿಸಿದ; ತಾನು ಸಮರ್ಥನಾಗಿದ್ದರೂ ಶ್ರೀರಾಮಪ್ರೀತಿಗಾಗಿಯೇ ರಾವಣ, ಕುಂಭಕರ್ಣರನ್ನು ಸ್ವತಃ ಸಂಹರಿಸಲಿಲ್ಲ ಎಂದು ತಿಳಿಸಿದ(೭/೨೭, ೮/೧೨೧, ೧೨೨ ಹಾಗೂ ೮/೮೦).

೨) ಶ್ರೀಹರಿಯೇ ತನ್ನ ವಾಸುದೇವಾದಿ ರೂಪಗಳಿಂದ ರಾಮಾದಿ ರೂಪದಲ್ಲಿ ಅವತರಿಸಿದ್ದು ಅದರಲ್ಲಿ ವಾಸುದೇವ ರೂಪ ಸಾಕ್ಷಾತ್ ರಾಮರೂಪ, ಇತರ ಮೂರು ರೂಪಗಳು ಲಕ್ಷ್ಮಣಾದಿಗಳಲ್ಲಿ ಅವಿಷ್ಟ ರೂಪಗಳು ಮೊದಲಾದ ಅನೇಕವಿವರಗಳನ್ನು, ಕೃತಯುಗಾದಿ ನಾಲ್ಕುಯುಗಗಳ ಧರ್ಮಗಳನ್ನು, ವಿಶೇಷವಾಗಿ ಕಲಿಯುಗದ ಧರ್ಮವನ್ನು ತಿಳಿಸಿದ; ಇವೆಲ್ಲ ಹಿಂದೆ ಹೇಳಿದ ಕಾರಣದಿಂದಾಗಿ ನಡೆದವು ಎಂದರ್ಥ.

ಅರ್ಜುನನಿಗಾಗಿ ಭೀಮನ ವರ

ಧ್ವಜಾದ್ಬೀಭತ್ಸೋರ್ಗರ್ಜನೇನೈವ ಶತ್ರು-
ಪರಾಭವೇ ತೇನ ದತ್ತೇऽರ್ಜುನಸ್ಯ ।
ಯಯೌ ಪ್ರಣಮ್ಯೈನಮಾಶ್ವೇವ ಭೀಮಃ
ಸೌಗಂಧಿಕಂ ವನಮತ್ಯಗ್ರ್ಯರೂಪಮ್ ॥ ೨೮೮ ॥

---

೨೮೭. ತಚ್ಚಾತುರಾತ್ಮ್ಯಮಿತ್ಯತ್ರ ತಸ್ಯ ರಾಮಸ್ಯ ಚಾತುರಾತ್ಮ್ಯಂ ಸ್ವಸ್ಯ ಸಾಕ್ಷಾದ್ವಾಸುದೇವರೂಪತ್ವಂ ಲಕ್ಷ್ಮಣ-ಭರತಶತ್ರುಘ್ನೇಷ್ವಾವಿಷ್ಟಸಂಕರ್ಷಣಪ್ರದ್ಯುಮ್ನಾನಿರುದ್ಧಾಖ್ಯರೂಪತ್ರಯಂ ಚೇತಿ ಚಾತುರಾತ್ಮ್ಯಮ್। ಏಕೇಷುಣಾ ಮಂಡಲೀಭೂತಸಪ್ತತಾಲಾದಿಭೇದಕಾರಣಾತ್ ಚತುರಃ= ಕುಶಲಃ ಆತ್ಮಾ ಸ್ವಭಾವೋ ಯಸ್ಯ ತಸ್ಯ ಭಾವ-ಶ್ಚಾತುರಾತ್ಮ್ಯಮಿತಿ ವಾ। ಗರ್ಜನೇನೈವ ಶತ್ರುಪರಾಭವೇ ತೇನ ದತ್ತ ಇತ್ಯತ್ರ ತ್ವದಂಗೀಕಾರೇ ಸತಿ ಯಥಾ ಕೃಷ್ಣಃ ಪೂರ್ವಾವತಾರವೈರಿಣೋऽಪ್ಯರ್ಜುನಸ್ಯ ಸಾರಥ್ಯಂ ಚಕಾರ ತಥಾ ಅಹಮಪಿ ತ್ವತ್ಕಪಾಪಾತ್ರಸ್ಯಾರ್ಜುನಸ್ಯ ಯುದ್ಧೇ ಸಾಹಾಯ್ಯಂ ಕರೋಮೀತಿ ಭಾವಃ ॥ –(ವಾ.)

೨೮೮. ವಿಜಯಸ್ಯ ರಥಸ್ಥಶ್ಚ ನಾದಾನ್ ಮೋಕ್ಷ್ಯಾಮಿ ದಾರುಣಾನ್ ।
ಶತ್ರೂಣಾಂ ಯೇ ಪ್ರಾಣಹರಾಃ ಸುಖಂ ಯೇನ ಹನಿಷ್ಯಥ ॥ –ಭಾರತ (ವನ. ೧೫೧/೧೮)

೨೮೮. ಧ್ವಜಾದ್ಬೀಭತ್ಸೋರ್ಗರ್ಜನೇನೈವೇತಿ–

'ಸ ವಾನರವರೋ ರಾಜನ್ ವಿಶ್ವಕರ್ಮಕೃತೋ ಮಹಾನ್ ।
ನನಾದ ಸುಮಹಾನಾದಂ ಭೀಷಣಂ ಚ ನನಾದ ಚ ॥' (ಕರ್ಣಪರ್ವ) –(ಮ.)

ಅ: ಅರ್ಜುನನ ಧ್ವಜದಲ್ಲಿ ಕುಳಿತು ಗರ್ಜನೆಯಿಂದಲೇ ಶತ್ರುಗಳಿಗೆ ಸೋಲುಂಟು ಮಾಡುವುದಾಗಿ ಹನುಮಂತ ವರ ನೀಡಿದ; ಬಳಿಕ ಭೀಮಸೇನ ಅವನಿಗೆ ವಂದಿಸಿ ತ್ವರೆಯಿಂದ ಶ್ರೇಷ್ಠ ಸ್ವರೂಪದ ಸೌಗಂಧಿಕಾ ವನಕ್ಕೆ ತೆರಳಿದ.

ವಿ: ೧) ಆ ಪ್ರಸಂಗದಲ್ಲೇ ಭೀಮಸೇನ ಅರ್ಜುನನಿಗಾಗಿ ಕೇಳಿದ ವರದ ವಿವರ ಇಲ್ಲಿದೆ. ಅದರಂತೆ ಅರ್ಜುನನ ಧ್ವಜದಲ್ಲಿ ಯುದ್ಧ ಕಾಲದಲ್ಲಿ ಮೂರ್ತಿಮತ್ತಾಗಿ ಕುಳಿತು ಘರ್ಜಿಸುವ ಮೂಲಕವೇ ಹನುಮಂತ ಶತ್ರುಗಳ ಪರಾಭವಕ್ಕೆ ಕಾರಣನಾಗುವುದಾಗಿ ವರ ನೀಡಿದ. ಹೀಗೆ ವರ ಕೇಳಿ ಪಡೆದ ಪ್ರಸಂಗವೂ ಅಸುರ ಮೋಹಕವೇ ಎಂದರ್ಥ.

೨) ಭೀಮ ತನಗಾಗಿ ವರ ಕೇಳದೇ ಅರ್ಜುನನಿಗಾಗಿ ಮಾತ್ರ ಕೇಳಲು ತಾನು ಸಂಪೂರ್ಣ–ವಾಗಿ ಹನುಮಂತನಂತೆ ಶಕ್ತಿಸಂಪನ್ನನಾಗಿದ್ದುದು ಕಾರಣ ಎಂಬುದೂ ಇದರಿಂದ ಸೂಚಿತ.

ಸೌಗಂಧಿಕಾ ಸರೋವರದಲ್ಲಿ ಭೀಮ

ನರಾಗಮ್ಯಾಂ ನಲಿನೀಮೇತ್ಯ ತತ್ರ
ದೃಷ್ಟ್ವಾ ಪದ್ಮಾನ್ಯದ್ಭುತಾಕಾರವಂತಿ ।
ಹೈಮಾನಿ ದಿವ್ಯಾನ್ಯತಿಗಂಧವಂತಿ
ಸಮಾಸದದ್ಭಾರ್ಯಮಾಣೋ ನರಾಶೈಃ ॥ ೨೮೯ ॥

ಅ: ಮನುಷ್ಯರಿಗೆ ತೆರಳಲಾಗದ ಕಮಲ ಪುಷ್ಪಗಳಿಂದ ತುಂಬಿದ್ದ ಸರೋವರಕ್ಕೆ ತೆರಳಿ ಭೀಮಸೇನ ಅಲ್ಲಿ ಅದ್ಭುತ ಆಕಾರದ ದಿವ್ಯವೂ, ಅತ್ಯಂತ ಪರಿಮಳ ಭರಿತವೂ ಆದ ಚಿನ್ನದ ಕಮಲಗಳನ್ನು ಕಂಡ. ಆಗ ನರಭಕ್ಷಕರಾದ ರಾಕ್ಷಸರು ಅಡ್ಡಿಯಾಗತೊಡಗಿದರು.

ವಿ: ೧) ನರಾಗಮ್ಯವಾದ ಸರೋವರವನ್ನು ಭೀಮ ತಲುಪಿದ ಎಂದು ಹೇಳುವ ಮೂಲಕ ಭೀಮಸೇನ ನರನಲ್ಲ ದೇವತೆ ಎಂಬುದನ್ನು ತಿಳಿಸಿರುವರು.

೨) ನರಾಗಮ್ಯವಾದ ಗಂಧಮಾಧನಕ್ಕೆ ಹೋಗಿ ಹನುಮದ್ರೂಪದಿಂದ ಸಂಜೀವನ ತಂದಿದ್ದ ವಾಯುದೇವರು ಇಲ್ಲಿ ನರಾಗಮ್ಯವಾದ ಸರೋವರದಿಂದ ಸೌಗಂಧಿಕ ಪುಷ್ಪಗಳನ್ನು ತರುವುದನ್ನು ಗಮನಿಸಬೇಕು. ಆ ಸರೋವರವಿದ್ದಿದ್ದು ಸಹ ಗಂಧಮಾದನ ಪರ್ವತದಲ್ಲಿಯೇ ಎಂಬುದು ಮತ್ತೊಂದು ವಿಶೇಷಾಂಶ.

---

೨೮೯. ತಾಂ ತು ಪುಷ್ಕರಿಣೀಂ ರಮ್ಯಾಂ ದಿವ್ಯಸೌಗಂಧಿಕಾವೃತಾಮ್ ।
ಜಾತರೂಪಮಯೈಃ ಪದ್ಮೈಶ್ಚನ್ನಾಂ ಪರಮಗಂಧಿಭಿಃ ॥
ವೈದೂರ್ಯವರನಾಲೈಶ್ಚ ಬಹುಚಿತ್ರೈರ್ಮನೋರಮೈಃ ॥ – ಭಾರತ (ವನ. ೧೫೩/೭)

೩) ಆ ಕಮಲಗಳು ಅಷ್ಟು ಅದ್ಭುತವಾದ ದಿವ್ಯ ಕಮಲಗಳಾದ್ದರಿಂದಲೇ ಕುಬೇರ ಅಷ್ಟು ಭದ್ರವಾದ ಕಾವಲನ್ನು ಅದಕ್ಕೆ ಏರ್ಪಡಿಸಿದ್ದ ಎಂಬುದೂ ತಿಳಿಯುವುದು.

೪) ಆ ಸೌಗಂಧಿಕ ಪುಷ್ಪದ ಸರೋವರ ಒಂದು ನದಿಯಲ್ಲಿದ್ದ ಮಡು ಎಂದು ಮಹಾ-ಭಾರತದಲ್ಲಿ ಉಲ್ಲೇಖವಿದೆ :

ತಸ್ಯಾಂ ನದ್ಯಾಂ ಮಹಾಸತ್ತ್ವಃ ಸೌಗಂಧಿಕವನಂ ಮಹತ್ । – (ವನ. ೧೫೨/೧೩)

೫) ಭೀಮಸೇನ ಮೇಲ್ನೋಟಕ್ಕೆ ಮತ್ತೊಬ್ಬರ ಸರೋವರವನ್ನು ದೌರ್ಜನ್ಯದಿಂದ ಆಕ್ರಮಿಸಿದಂತೆ ಕಾಣುವುದು; ಅದು ಸರಿಯಲ್ಲ. ರಾಜಸೂಯಯಾಗದ ಸಂದರ್ಭದಲ್ಲಿ ಭೀಮಸೇನ ರುದ್ರಾದಿ ಸಮಸ್ತ ದೇವತೆಗಳನ್ನು ಗೆದ್ದಿದ್ದರಿಂದ ಕುಬೇರನಿಗೆ ಸೇರಿದ ಈ ಸರೋವರವೇ ಮೊದಲಾದ ಎಲ್ಲವೂ ಅವನ ಆಧೀನ್ಯಕ್ಕೆ ಒಳಪಟ್ಟಿದ್ದೇ. ಆದ್ದರಿಂದ ತಾನು ಆಗಲೇ ಗೆದ್ದಿದ್ದ ಸರೋವರದಲ್ಲಿನ ಕಮಲಗಳನ್ನು ಒಯ್ದದ್ದು ಸರ್ವಥಾ ಧರ್ಮಾತಿಕ್ರಮವಾಗದು.

ಭೀಮ ಕ್ರೋಧವಶರ ಯುದ್ಧ

ತೇ ಭೀಮಮಾತ್ತಾಯುಧಮುಗ್ರರೂಪಂ
ಮಹಾಬಲಂ ರೂಪನವಾವತಾರಮ್ ।
ನ್ಯವಾರಯನ್ ಕ್ರೋಧವಶಾಃ ಸಮೇತಾಃ
ಶತಂ ಸಹಸ್ರಾಣ್ಯಯುತಾನಿ ಸಂಖ್ಯೇ ॥ ೨೯೦ ॥

ಅ: ಉಗ್ರರೂಪನೂ, ಮಹಾಬಲಿಷ್ಠನೂ, ಅತ್ಯಂತಸುಂದರಾಕಾರನೂ, ಆಯುಧ ಹಿಡಿದ-ವನೂ ಆದ ಭೀಮನನ್ನು ನೂರುಕೋಟಿ ಸಂಖ್ಯೆಯ ಕ್ರೋಧವಶರೆಂಬ ದೈತ್ಯರು ಒಟ್ಟಾಗಿ ತಡೆದರು.

ವಿ: ೧) ಭೀಮಸೇನನ ಸೌಂದರ್ಯವನ್ನು ವರ್ಣಿಸುವುದು ಅಷ್ಟು ಅಪಾರ ಸಂಖ್ಯೆಯ ರಾಕ್ಷಸರು ಎದುರಿಸಿ ಬಂದರೂ ಭೀಮನಿಗೆ ಯಾವುದೇ ಬಗೆಯ ಆತಂಕವಾಗಿರಲಿಲ್ಲ ಎಂಬುದಕ್ಕೆ ದ್ಯೋತಕ ಎಂದು ತಿಳಿಯಬೇಕು.

---

೨೯೦. ಅಂತರ್ಭಕ್ತಾ ಬಹಿಃ ಕ್ರುದ್ಧಾ ಹಿರಣ್ಯಾದ್ಯಾ ಹರಿಂ ಪ್ರತಿ ।
ಸರ್ವಕ್ರುದ್ಧಾಃ ಶಂಬರಾದ್ಯಾ ಅಂತಃ ಕ್ರೋಧವಶಾಸ್ತಥಾ ॥ – ಭಾ.ತಾ. ೩/೧೭/೨೬

೨೯೦. ತತ್ರ ಕ್ರೋಧವಶಾ ನಾಮ ರಾಕ್ಷಸಾ ರಾಜಶಾಸನಾತ್ ।
ರಕ್ಷಂತಿ ಶತಸಾಹಸ್ರಾಶ್ಚಿತ್ರಾಯುಧಪರಿಚ್ಛದಾಃ ॥ – ಭಾರತ (ವನ. ೧೫೩/೧೧)

೨೯೦. ರೂಪೇಣ ನವಾವತಾರಂ ಅದೃಷ್ಟಪೂರ್ವಭೂತಂ ನವಪ್ರಾದುರ್ಭೂತಮಿತ್ಯರ್ಥಃ । – (ವ.)

೨೯೦. ಶತಂ ಸಹಸ್ರಾಣಿ ಏಕಲಕ್ಷಂ ಅಯುತಾನಿ ಶತಂ ಸಹಸ್ರಾಣಿ ದಶಸಹಸ್ರಲಕ್ಷಾಣಿಶತಂ ಕೋಟಯ ಇತ್ಯರ್ಥಃ। – (ಜ.)

೨) ಅಶೋಕ ವನದಲ್ಲಿ ರಾವಣನ ಎಂಭತ್ತು ಕೋಟಿ ಸೇನಾಧಿಪತಿಗಳಿದ್ದ ಸೈನ್ಯ ಹನುಮಂತನನ್ನು ಆಕ್ರಮಿಸಿದ್ದಂತೆ, ಈ ಸೌಗಂಧಿಕ ವನದಲ್ಲಿ ಕುಬೇರನ ನೂರು ಕೋಟಿ ರಾಕ್ಷಸ ಸೇನೆ ಆಕ್ರಮಿಸಿತ್ತು ಈ ಕುಬೇರ ಆ ರಾವಣನ ಅಣ್ಣ ಎಂಬುದು ವಿಶೇಷ. ಭೀಮನಂತೂ ಆ ಹನುಮಂತನೇ. ಇದೂ ಸಹ ಅವನ ರೂಪ ರೂಪಗಳಲ್ಲಿ ಬಲಾದಿಗಳ ವ್ಯತ್ಯಾಸವಿಲ್ಲವೆಂಬುದಕ್ಕೆ ನಿದರ್ಶನ.

೩) ಯಾಚಿಸಿದರೆ ಕೆಲವು ಪುಷ್ಪಗಳನ್ನು ಕೊಡುವುದಾಗಿ ಅವರು ಹೇಳಿದಾಗ, ತಾನು ಯಾಚಿಸಲಾರೆ; ಅದು ಕ್ಷತ್ರಿಯಧರ್ಮಕ್ಕೆ * ವಿರುದ್ಧವಾದುದು ಎಂದು ತಿಳಿಸಿದ.

ಅಪೂರ್ವ ಭೀಮವಿಜಯ

ವರಾಚ್ಛಿವಸ್ಯೈವ ಪರೈರಜೇಯಾಃ
ಶಸ್ತ್ರಾಸ್ತ್ರವೃಷ್ಟಿಂ ಮುಮುಚುಃ ಸುಭೀಮಾಮ್ ।
ಭೀಮೇಽಖಿಲಜ್ಞೇ ತಪಸಾಂ ನಿಧಾನೇ
ಬಲೋದಧೌ ಶೈವಶಾಸ್ತ್ರಂ ವದಂತಃ ॥ ೨೯೧ ॥

ಅ: ಸರ್ವಜ್ಞನೂ, ತಪಸ್ಸಿನ ಆಕರನೂ, ಬಲಸಾಗರನೂ ಆದ ಭೀಮನ ಮೇಲೆ ಶಿವ ಸರ್ವೋತ್ತಮತ್ವವನ್ನು ಹೇಳುವ ಶಾಸ್ತ್ರಗಳನ್ನು ಹೇಳುತ್ತಾ ಶಿವ ವರದಿಂದಾಗಿ ಅಜೇಯರೇ ಆಗಿದ್ದ ಅವರೆಲ್ಲ ಭಯಂಕರವಾದ ಶಸ್ತ್ರಾಸ್ತ್ರದ ಮಳೆಯನ್ನು ಕರೆದರು.

ವಿ: ಶೈವ ಶಾಸ್ತ್ರವನ್ನು ಹೇಳುತ್ತಾ ಅವರು ಯುದ್ಧಕ್ಕೆ ತೊಡಗಿದರು ಎಂಬುದು ಮೊದಲು ಅವರಲ್ಲಿ ವಾಗ್ಯುದ್ಧ ನಡೆದು ಅನಂತರ ಶಸ್ತ್ರಾಸ್ತ್ರ ಯುದ್ಧ ನಡೆಯಿತು ಎಂಬುದಕ್ಕೆ ಸೂಚಕ.

ತಾನ್ ವೈಷ್ಣವೈರೇವ ಶಾಸ್ತ್ರೈಃ ಸ ಭೀಮೋ
ವಿಜಿತ್ಯ ಪೂರ್ವಂ ವಾಙ್ಮಯೇ ಸಂಗರೇ ತು ।
ಶಸ್ತ್ರಾಸ್ತ್ರವರ್ಷಸ್ಯ ಕುರ್ವನ್ ಪ್ರತೀಪಂ
ಜಘ್ನೇಽಖಿಲಾನ್ ಗದಯಾ ತೇಷು ವೀರಾನ್ ॥ ೨೯೨ ॥

ಅ: ಆ ಭೀಮಸೇನ ಅವರನ್ನು ವೈಷ್ಣವ ಶಾಸ್ತ್ರಗಳಿಂದಲೇ ಮೊದಲಿಗೆ ವಾಙ್ಮಯ ಯುದ್ಧದಲ್ಲಿ ಸೋಲಿಸಿ ಶಸ್ತ್ರಾಸ್ತ್ರದ ಮಳೆಯನ್ನು ನಾಶಗೈದು ವೀರರಾದ ಅವರನ್ನೆಲ್ಲ ಗದೆಯಿಂದ ಸಂಹರಿಸಿದ.

---

* ನ ಹಿ ಯಾಚಂತಿ ರಾಜಾನಃ ಏಷ ಧರ್ಮಃ ಸನಾತನಃ ।
ನ ಚಾಹಂ ಹಾತುಮಿಚ್ಛಾಮಿ ಕ್ಷಾತ್ರಧರ್ಮಂ ಕಥಂಚನ ॥ – ಭಾರತ (ವನ. ೧೫೪/೧೦)

ವಿ: ಅವರು ಶೈವ ಶಾಸ್ತ್ರದಿಂದ ವಾದಕ್ಕಿಳಿದುದ್ದರಿಂದ ಅವರನ್ನು ವೈಷ್ಣವ ಶಾಸ್ತ್ರದಿಂದ ಭೀಮು ಸೋಲಿಸಿ ಮುಂದೆ ಶಸ್ತ್ರಾಸ್ತ್ರ ಯುದ್ಧದಲ್ಲೂ ಪರಾಭವಗೊಳಿಸಿ ಕೊಂದುಹಾಕಿದ.

ವಾತೇನ ಕುಂತ್ಯಾಂ ಬಲವಾನ್ ಪ್ರಜಾತಃ
ಶೂರಸ್ತಪಸ್ವೀ ದ್ವಿಷತಾಂ ನಿಹಂತಾ ।
ಸತ್ಯೇ ಚ ಧರ್ಮೇ ಚ ರತಃ ಸದೈವ
ಪರಾಕ್ರಮೇ ಶತ್ರುಭಿರಪ್ರಧೃಷ್ಯಃ ॥ ೨೯೩ ॥

ಅ: ಭೀಮಸೇನ ಕುಂತಿಯಲ್ಲಿ ವಾಯುವಿನಿಂದ ಜನಿಸಿದ ಬಲಿಷ್ಠನೂ, ಶೂರನೂ, ತಪಸ್ವಿಯೂ, ಶತ್ರುಸಂಹಾರಕನೂ, ಸತ್ಯಧರ್ಮಗಳಲ್ಲಿ ಸದಾ ನಿರತನೂ, ಶತ್ರುಗಳಿಂದ ಎಂದೂ ಪರಾಕ್ರಮದಲ್ಲಿ ಜಗ್ಗದವನೂ ಆದವನು.

ವಿ: ಇದು ಮಹಾಭಾರತದ ಮೂಲದಲ್ಲೇ ಬಂದಿರುವ ಅಪೂರ್ವ ಶ್ಲೋಕ. ಸಣ್ಣಪುಟ್ಟ ಪಾಠಾಂತರಗಳೊಂದಿಗೆ ಎಲ್ಲ ಪ್ರತಿಗಳಲ್ಲೂ ಕಂಡು ಬರುವ ಶ್ಲೋಕ. ಇಲ್ಲಿ ಭೀಮನನ್ನು ತಪಸ್ವಿ, ಸತ್ಯಧರ್ಮಗಳಲ್ಲಿ ಸದಾ ನಿರತನಾದವನು ಎಂದು ಬಣ್ಣಿಸಿರುವುದನ್ನು ಗಮನಿಸಬೇಕು.

ತತ್ರಾಪರಾಂಶ್ಚೈವ ಬಹೂನಸತ್ಯಂ ನಿರೀ-
ಶ್ವರಂ ಚಾಪ್ರತಿಷ್ಠಂ ಚ ಲೋಕಮ್ ।
ಸಿದ್ಧೋಽಹಮೀಶೋಽಹಮಿತಿ ಬ್ರುವಾಣಾನ್
ಗುಣಾನ್ ವಿಷ್ಣೋಃ ಖ್ಯಾಪಯನ್ ವಾದತೋಽಜೈತ್ ॥ ೨೯೪ ॥

ಅ: ಜಗತ್ತು ಅಸತ್ಯ, ದೇವರಿಲ್ಲದ್ದು, ಯಾರನ್ನೂ ಆಶ್ರಯಿಸದ್ದು ಎಂದೂ, ನಾನು ಸಿದ್ಧ, ನಾನು ಈಶ್ವರ ಎಂದೂ ನುಡಿಯುತ್ತಿದ್ದ ಇತರ ಅನೇಕ ರಾಕ್ಷಸರನ್ನು ಭೀಮಸೇನ ವಿಷ್ಣುವಿನ ಗುಣಗಳನ್ನು ಪ್ರತಿಪಾದಿಸುತ್ತಾ ವಾದದಲ್ಲಿ ಗೆದ್ದ.

---

೨೯೩. ಭಾರತಶ್ಲೋಕ (ವನ. ೧೫೪/೧೯)

೨೯೫. ತೇ ತಸ್ಯ ವೀರ್ಯಂ ಚ ಬಲಂ ಚ ದೃಷ್ಟ್ವಾ ವಿದ್ಯಾಬಲಂ ಬಾಹುಬಲಂ ತಥೈವ ।
ಅಶಕ್ನುವಂತಃ ಸಹಿತಂ ಸಮಂತಾದ್ ದ್ರುತಂ ಪ್ರವೀರಾಃ ಸಹಸಾ ನಿವೃತ್ತಾಃ ॥ – ಭಾರತ (ವನ. ೧೫೪/೨೧)

೨೯೫. ಏತೇನ ವಿದ್ಯಾಬಲಂ ಬಾಹುಬಲಮಿತಿ ಪಾದಾಭ್ಯಾಂ ಬಲದ್ವಯಸ್ಯೋಕ್ತತ್ವಾತ್ ಬಲಮಿತ್ಯೇತತ್ ವ್ಯರ್ಥ-ಮಿತಿ ದೂಷಣಂ ಪರಿಹೃತಮ್ । 'ಸಂಕ್ಷೇಪವಿಸ್ತರಾಭ್ಯಾಂ ತು ಪ್ರವದಂತಿ ಮನೀಷಿಣಃ । ಬಹುವಾರಸ್ಯತೇಸ್ತಸ್ಯ ಫಲಬಾಹುಲ್ಯಕಾರಣಾದಿ'ತಿ ಪ್ರಮಾಣಾನುಸಾರೇಣ ಫಲಬಾಹುಲ್ಯಾರ್ಥೇ ಬಲಂ ದೃಷ್ಟ್ವಾ ಸಹಸಾ ನಿವೃತ್ತಾ ಇತಿ ಸಂಕ್ಷೇಪೇಣೋಕ್ತತ್ವಾತ್ ॥ – (ಸ.)

ವಿ: ೧) ಆ ನೂರು ಕೋಟಿ ರಾಕ್ಷಸರನ್ನು ಮಾತ್ರವಲ್ಲದೇ ವಿಶೇಷವಾಗಿ ವಾದ ಕೋವಿದರಾಗಿ ಬ್ರಹ್ಮೈಕ್ಯ, ಜಗನ್ಮಿಥ್ಯಾತ್ವಾದಿಗಳನ್ನು ವಾದಿಸಲು ಬಂದ ಇತರ ರಾಕ್ಷಸರನ್ನೂ ಭೀಮಸೇನ ಪರಾ–ಭವಗೊಳಿಸಿದ ಎಂದರ್ಥ.

೨) ಇಲ್ಲಿ ವಾದ ಎಂದರೆ ಚರ್ಚೆ ಎಂದರ್ಥ. ಅವರೆಲ್ಲ ಅಯೋಗ್ಯರಾದ್ದರಿಂದ ಅದು ವಿತಂಡಾ ಎಂಬ ಕಥೆಯಾಗಿತ್ತು ಎಂದು ತಿಳಿಯಬೇಕು. ಅಯೋಗ್ಯರೊಂದಿಗೆ ಮಾಡುವ ಚರ್ಚೆ ಅದೊಂದೇ ಬಗೆಯದಲ್ಲವೇ.

ಭಿನ್ನಂ ವಿಷ್ಣುಂ ಚಾಧಿಕಂ ಸರ್ವತಶ್ಚ
ಬ್ರುವನ್ ಪ್ರವೀರಾನ್ ಲಕ್ಷಮೇಷಾಂ ನಿಜಘ್ನೇ ।
ತೇ ತಸ್ಯ ವೀರ್ಯಂ ಚ ಬಲಂ ಚ ದೃಷ್ಟ್ವಾ
ವಿದ್ಯಾಬಲಂ ಬಾಹುಬಲಂ ತಥೈವ ।
ಅಶಕ್ನುವಂತಃ ಸಹಿತಾಃ ಸಮಸ್ತಾ
ಹತಪ್ರವೀರಾಃ ಸಹಸಾ ನಿವೃತ್ತಾಃ ॥ ೨೯೫ ॥

ಅ: ವಿಷ್ಣುವನ್ನು ಸರ್ವರಿಗಿಂತ ಭಿನ್ನನೆಂದೂ, ಸರ್ವೋತ್ತಮನೆಂದೂ ಸಾರುತ್ತಾ ಅವರಲ್ಲಿ ಒಂದು ಲಕ್ಷ ಮಹಾವೀರರನ್ನು ಸಂಹರಿಸಿದ. ಅವರು ಅವನ ವೀರ್ಯವನ್ನು, ಬಲವನ್ನು, ವಿದ್ಯಾಬಲವನ್ನು, ಅದರಂತೆ ಬಾಹುಬಲವನ್ನು ನೋಡಿ ಎಲ್ಲರೂ ಒಟ್ಟಾದರೂ ಎದುರಿಸಲು ಅಸಮರ್ಥರಾಗಿ ಹತರಾದರು. ಅಳಿದುಳಿದವರು ಅಲ್ಲಿಂದ ಓಡನೆಯೇ ಪಲಾಯನ ಮಾಡ-ತೊಡಗಿದರು.

ವಿ: ಈ ಶ್ಲೋಕವು ಮೂಲಮಹಾಭಾರತದಲ್ಲಿ ಕಂಡು ಬರುವುದು, ಇಲ್ಲಿಯ 'ವಿದ್ಯಾಬಲಂ' ಎನ್ನುವ ಪದ ಅಲ್ಲಿ ನಡೆದ ವಾಙ್ಮಯಯುದ್ಧದ ಬಗ್ಗೆ ಬೆಳಕು ಚೆಲ್ಲುವದು ಎಂಬುದನ್ನು ಗಮನಿಸ–ಬೇಕು.

ವಿಕ್ರಮ್ಯ ತಾನ್ ಗದಯಾऽಸೌ ನಿಹತ್ಯ
ವಿದ್ರಾವ್ಯ ಸರ್ವಾನ್ ನಲಿನೀಂ ಪ್ರವಿಶ್ಯ ।
ಪೀತ್ವಾऽಮೃತಾಂಭಶ್ಚ ತತೋऽಂಬುಜಾನಿ
ದಿವ್ಯಾನಿ ಜಗ್ರಾಹ ಕುರುಪ್ರವೀರಃ ॥ ೨೯೬ ॥

ಅ: ಮಹಾಕುರುವೀರನಾದ ಭೀಮಸೇನ ಅವರನ್ನೆಲ್ಲಾ ಆಕ್ರಮಿಸಿ ಗದೆಯಿಂದ ಹೊಡೆದೋಡಿಸಿ ಆ ಕಮಲ ಸರೋವರವನ್ನು ಪ್ರವೇಶಿಸಿ, ಅದರ ಅಮೃತ ಸದೃಶವಾದ ನೀರನ್ನು ಕುಡಿದು ಆ ದಿವ್ಯ ಕಮಲಗಳನ್ನು ಕೈಗೆತ್ತಿಕೊಂಡ.

ವಿ: ಭೀಮ ಒಂಟಿಯಾಗಿ ಅಲ್ಲಿ ಮೆರೆದ ಪರಾಕ್ರಮ ನಿಶ್ಚಿತವಾಗಿಯೂ ಹನುಮಂತ ಒಂಟಿಯಾಗಿ ಲಂಕೆಯಲ್ಲಿ ಮೆರೆದ ಪರಾಕ್ರಮಕ್ಕೆ ದ್ಯೋತಕ. ಲಂಕೆ ಚಿನ್ನದ ಪಟ್ಟಣವಾದರೆ, ಇದು ಚಿನ್ನದ ಕಮಲಗಳ ವನವಾಗಿತ್ತು ಎಂಬುದು ವಿಶೇಷ. ಅದು ರಾವಣನ ಪುರ, ಇದು ಅವನ ಅಣ್ಣನಾದ ಕುಬೇರನ ವನ ಎಂಬುದು ಇನ್ನೊಂದು ವಿಶೇಷ.

ಭೀಮನ ಬಳಿಗೆ ಯುಧಿಷ್ಠಿರಾದಿಗಳ ಆಗಮನ

ಅಥೋ ಕಲಹಶಂಸೀನಿ ನಿಮಿತ್ತಾನಿ ಯುಧಿಷ್ಠಿರಃ ।
ದೃಷ್ಟ್ವಾ ಕೃಷ್ಣಾಮಪೃಚ್ಛಚ್ಚ ಕ್ವ ಭೀಮ ಇತಿ ದೀನಧೀಃ ॥ ೨೯೭ ॥

ಅ: ಆ ವೇಳೆಗೆ ಯುದ್ಧ ಸೂಚಕವಾದ ದುಶ್ಶಕುನಗಳನ್ನು ಕಂಡು ಧರ್ಮರಾಜ ಮನಸ್ಸಿನಲ್ಲಿ ಕಳವಳಗೊಂಡವನಾಗಿ 'ಎಲ್ಲಿ ಭೀಮ' ಎಂದು ದ್ರೌಪದಿಯನ್ನು ಕೇಳಿದ.

ವಿ: ಧರ್ಮರಾಜ ಶಕುನ ಶಾಸ್ತ್ರದಲ್ಲೂ ಪ್ರವೀಣನಾಗಿದ್ದವನು ಎಂಬುದು ಇದರಿಂದ ತಿಳಿಯುವುದು. ಭೀಮನ ಬಗ್ಗೆ ದ್ರೌಪದಿಯನ್ನೇ ಕೇಳುವ ಮೂಲಕ ದ್ರೌಪದಿ ಸಾಕ್ಷಾತ್ ಭೀಮಪತ್ನಿ ಎಂಬುದನ್ನು ತಿಳಿಸಿದನು ಎಂದಾಗುವುದು. ದ್ರೌಪದಿ ಶಾಸ್ತ್ರದ ಸಂಕೇತವಾದರೆ, ಭೀಮ ಜ್ಞಾನದ ಸಂಕೇತ. ಜ್ಞಾನವನ್ನು ಶಾಸ್ತ್ರದಿಂದಲೇ ಪಡೆಯಬೇಕು ಎಂಬುದಕ್ಕೂ ಇದು ಸೂಚಕ.

ಸೌಗಂಧಿಕಾರ್ಥಂ ಯಾತಂ ತಂ ಶ್ರುತ್ವಾ ಕೃಷ್ಣಾಮುಖಾನ್ನೃಪಃ ।
ಆರುಹ್ಯ ರಾಕ್ಷಸಶ್ರೇಷ್ಠಾನ್ ಕೃಷ್ಣಯಾ ಭ್ರಾತೃಭಿಃ ಸಹ ॥ ೨೯೮ ॥

ಯಯೌ ವೃಕೋದರೋ ಯತ್ರ ದೃಷ್ಟ್ವಾಚ್ಛೈನಮವಸ್ಥಿತಮ್ ।
ಉವಾಚ ಮೈವಮಿತ್ಯೇನಂ ಭೀತೋ ಗಿರಿಶಕೋಪತಃ ॥ ೨೯೯ ॥

ಅ: ದ್ರೌಪದಿಯ ಬಾಯಿಂದ ಸೌಗಂಧಿಕಕ್ಕಾಗಿ ಭೀಮಸೇನನು ತೆರಳಿದ್ದನ್ನು ಕೇಳಿ ಧರ್ಮರಾಜ ರಾಕ್ಷಸ ಶ್ರೇಷ್ಠರನ್ನೇರಿ ದ್ರೌಪದಿಯೊಂದಿಗೂ, ಸೋದರರೊಂದಿಗೂ ಅಲ್ಲಿಗೆ ತೆರಳಿದ.

---

೨೯೭. ಶ್ರೀನಾಥಕೇರ್ತ್ಯಂಬುಜಸೇವ್ಯಗಂಧಂ ಪ್ರಾಣಃ ಸ ಸಂಗೃಹ್ಯ ವಿಹರ್ತುಮೀಷ್ಟೇ ॥ – ರುಗ್ಮಿಣೀಶವಿಜಯ

ವೃಕೋದರನಿದ್ದಲ್ಲಿಗೆ ತೆರಳಿ ಅಲ್ಲಿ ಭೀಮ ಹಾಗೆ ಇದ್ದದ್ದನ್ನು ನೋಡಿ ಶಿವನ ಕೋಪಕ್ಕೆ ಅಂಜಿ ಹೀಗೆ ಮಾಡಬೇಡ ಎಂದು ಹೇಳಿದ.

ವಿ: ೧) ಇಲ್ಲಿ ಸೋದರರೊಂದಿಗೆ ಎಂದರೆ ನಕುಲ, ಸಹದೇವರೊಂದಿಗೆ ಎಂದರ್ಥ. ಅರ್ಜುನ ಸ್ವರ್ಗದಲ್ಲಿದ್ದದ್ದರಿಂದ ಸೌಗಂಧಿಕಕ್ಕೆ ತೆರಳಿದ್ದ ಭೀಮನ ಬಳಿಗೆ ತೆರಳಲು ಜೊತೆಯಿದ್ದವರು ಅವರಿಬ್ಬರು ಮಾತ್ರ. ಆದರೂ, ಸೋದರರು ಹಾಗೂ ಇತರ ಎಲ್ಲ ಜನರೊಂದಿಗೂ ಕೂಡಿ ಹೊರಟನು ಎಂದು ತಿಳಿಸಲು ಹಾಗೆ 'ಭ್ರಾತೃಭಿಃ ಸಹ' ಎಂಬುದಾಗಿ ಬಹುವಚನವನ್ನು ಪ್ರಯೋಗಿಸಿರುವರು ಎಂದು ತಿಳಿಯಬಹುದು.

೨) ಯುಧಿಷ್ಠಿರ ತನ್ನೊಂದಿಗೆ ಬಂದಿದ್ದ ಋಷಿಮುನಿಗಳನ್ನು ತನ್ನ ಸಹೋದರರಂತೆಯೇ ಕಾಣುತ್ತಿದ್ದರಿಂದ ಇಲ್ಲಿ ದ್ವಿವಚನದ ಬದಲು ಬಹುವಚನಪ್ರಯೋಗ ಎಂದೂ ತಿಳಿಯಬಹುದು.

ದೇವೇಭ್ಯೋ ಮರಣಾದ್ಭೀತಾ ರಾಕ್ಷಸಾ ಏತಪ್ಪಾಜ್ಞಯಾ ।
ತದೀಯಾಂ ನಲಿನೀಂ ತೇ ಹಿ ರಕ್ಷಂತ್ಯಸ್ಯಾಶ್ರಯೋ ಹರಃ ।
ಜಾನನ್ ವಿತ್ತೇಶ್ವರೋ ಭೀಮಮಾಹಾತ್ಮ್ಯಂ ನ ಚುಕೋಪ ಹ ॥ ೩೦೦ ॥

ಅ: ದೇವತೆಗಳಿಂದ ಸಾವಿಗೆ ಅಂಜಿದ ರಾಕ್ಷಸರು ಕುಬೇರನ ಆದೇಶದಂತೆ ಆ ಸರೋವರವನ್ನು ರಕ್ಷಿಸುತ್ತಿದ್ದರು. ಅವನಿಗೆ ಶಿವ ರಕ್ಷಕ. ಧನಾಧಿಪನಾದ ಕುಬೇರ ಭೀಮನ ಮಾಹಾತ್ಮ್ಯವನ್ನು ಅರಿತವನಾದ್ದರಿಂದ ಸಿಟ್ಟಾಗಲಿಲ್ಲ.

ವಿ: ೧) ಕುಬೇರನ ವನವನ್ನು ಆಕ್ರಮಿಸಿದ್ದರಿಂದ ಕುಬೇರ ಸಖನಾದ ಶಿವ ಮುನಿಯಬಹುದು ಎಂಬುದು ಧರ್ಮರಾಜನ ಆತಂಕ. ಇದರಿಂದ ಕುಬೇರ ಮುನಿಯುವುದು ಅಷ್ಟಾಗಿ ಚಿಂತೆಗೆ ಕಾರಣವಲ್ಲ ಎಂಬ ಅಭಿಪ್ರಾಯವೂ ಸೂಚಿತ. ಆದರೆ, ಭೀಮನಿಗೆ ಶಿವನ ಭಯವೂ ಇಲ್ಲ ಎಂಬುದು ಗಮನಾರ್ಹ.

೩) ರಾಕ್ಷಸರು ದೇವತೆಯಾದ ಕುಬೇರನಿಗೆ ಭೃತ್ಯರಾಗಿ ಆ ಸರೋವರವನ್ನು ರಕ್ಷಿಸಲು ಕಾರಣವನ್ನು ಇಲ್ಲಿ ತಿಳಿಸಿರುವರು. ಅವರೆಲ್ಲ ದೇವತೆಗಳಿಗೆ ಅಂಜಿ ಕುಬೇರನ ಭೃತ್ಯರಾಗುವುದರಿಂದ

---

೩೦೦. ದೇವೇಭ್ಯೋ ಮರಣಾದ್ಭೀತಾ ಇತ್ಯನೇನ ಅನ್ಯತ್ರ ಸ್ಥಿತೌ ದೇವೇಭ್ಯೋ ದೈತ್ಯಾನಾಂ ಮರಣಶಂಕಾऽಸ್ತಿ। ಕುಬೇರವನೇ ಕುಬೇರಾಜ್ಞಯಾ ಕುಬೇರಭಟತಯಾ ಸ್ಥಿತಾನಾಂ ದೇವೇಭ್ಯೋ ಮರಣಶಂಕಾ ನಾಸ್ತೀತಿ ಸೂಚಿತಮ್ ॥ – (ವಾ.)

೩೦೦. 'ಗೃಹ್ಣಾತು ಭೀಮೋ ಜಲಜಾನಿ ಕಾಮಾತ್ ಕೃಷ್ಣಾನಿಮಿತ್ತಂ ವಿದಿತಂ ಮಮೈತತ್ ॥
(ಕುಬೇರವಚನ)–ಭಾರತ (ವನ. ೧೫೪/೨೬)

ದೇವತೆಗಳು ತಮ್ಮನ್ನು ಕೊಲ್ಲಲಾರರು ಎಂಬ ಭಾವನೆಯಿಂದ ಹಾಗೆ ಅಲ್ಲಿ ಅವನ ಆದೇಶದಂತೆ ಆ ವನದ ರಕ್ಷಕರಾಗಿದ್ದರು ಎಂದರ್ಥ.

೪) ಶಿವನಿಗೆ ರಾಜರಾಜಸಖ ಎಂದು ಹೆಸರಿದೆ. ಮೇಲ್ನೋಟಕ್ಕೆ ಅವರಿಬ್ಬರೂ ಸಮಾನರು ಎಂಬ ಅಪಾರ್ಥಕ್ಕೆ ಇಲ್ಲಿ ಅವಕಾಶವಿದೆ. ಅದಕ್ಕೆ ಶ್ರೀಮದಾಚಾರ್ಯರು **ಅಸ್ಯ ಆಶ್ರಯೋ ಹರಃ** ಎಂದು ವಿವರಣೆ ನೀಡುವ ಮೂಲಕ ಶಿವ ಆಶ್ರಯ ಕೊಡುವ ಮೂಲಕ ಸಖನೇ ಹೊರತು ಆಶ್ರಯ ಪಡೆಯುವ ಸಖನಲ್ಲ ಎಂಬ ಅರ್ಥ ತಿಳಿಸಿರುವರು.

೫) ವಹ್ನಿಗೆ 'ಮರುತ್ಸಖ'(೭/೪೩) ಎಂಬುದೂ ಸಹ ಈ ಅರ್ಥದಲ್ಲಿಯೇ ಎಂದು ತಿಳಿಯಬೇಕು. ಅಗ್ನಿಗೆ ಹಿತಕಾರಕನಾದ ಸಖ ವಾಯುವೇ ಹೊರತು, ವಾಯುವಿಗೆ ಅಗ್ನಿಯಿಂದ ಆಗಬೇಕಾದ್ದೇನಿಲ್ಲ ಎಂದರ್ಥ. ಭೀಮನ ಮಹಿಮೆ ಕುಬೇರನಿಗೆ ರಾಜಸೂಯಯಾಗದ ಸಂದರ್ಭ–ದಲ್ಲಿ ಅರಿವಿಗೆ ಬಂದಿತ್ತು ಎಂದು ತಿಳಿಯಬಹುದು.

ಪಂಚವರ್ಣ ಪುಷ್ಪ ಪ್ರಸಂಗ

ವಸತ್ಸು ತತ್ರ ಪಾರ್ಥೇಷು ಪುನಃ ಕತಿಪಯೈರ್ದಿನೈಃ ।
ಉವಾಚ ಭೀಮಸೇನಸ್ಯ ಯಶೋಧರ್ಮಾಭಿವೃದ್ಧಯೇ ॥ ೩೦೧ ॥

ಪಂಚವರ್ಣಾನಿ ಪುಷ್ಪಾಣಿ ಕೃಷ್ಣಾ ವೀಕ್ಷ್ಯಾಹೃತಾನಿ ತು ।
ಮಾರುತೇನ ಕುಬೇರಸ್ಯ ಗೃಹಾನ್ನೃಭರಗಮ್ಯತಃ ॥ ೩೦೨ ॥

ಅ: ಪಾಂಡವರು ಅಲ್ಲಿ ವಾಸಿಸುತ್ತಿದ್ದಾಗ ಮತ್ತೆ ಕೆಲವು ದಿನಗಳು ಕಳೆದವು. ಆಗೊಮ್ಮೆ ಗಾಳಿಯಿಂದ ಕುಬೇರನ ಮನೆಯಿಂದ ಪಂಚವರ್ಣದ ಪುಷ್ಪಗಳು ಹಾರಿ ಬಂದದ್ದನ್ನು ಕಂಡು ಮನುಷ್ಯರಿಗೆ ಅಗಮ್ಯವಾದ ಆ ಸ್ಥಳದಿಂದ ಅವುಗಳನ್ನು ತರುವುದರಿಂದ ಭೀಮಸೇನನ ಕೀರ್ತಿ ಮತ್ತು ಪುಣ್ಯಗಳು ಬಹಳವಾಗಿ ಹೆಚ್ಚುವುವು ಎಂಬ ಕಾರಣದಿಂದ ದ್ರೌಪದಿ ಕೇಳಿದಳು.

ವಿ: ೧) ದ್ರೌಪದಿ ಮತ್ತೊಮ್ಮೆ ಪುಷ್ಪಾಹರಣಕ್ಕಾಗಿ ಭೀಮನನ್ನು ಬೇಡಿಕೊಂಡ ಪ್ರಸಂಗವಿದು. ಸಾಮಾನ್ಯವಾಗಿ ಇತರ ಭಾರತದ ಸಂಗ್ರಹಗಳಲ್ಲಿ ಈ ಪ್ರಸಂಗ ನಿರೂಪಿತವಾಗಿಲ್ಲ. ಮೂಲ ಮಹಾಭಾರತದಲ್ಲಿ ಸ್ಪಷ್ಟವಾಗಿ ಉಲ್ಲೇಖಿತವಾಗಿರುವ ಇದನ್ನು ಪೂರ್ಣವಾಗಿ ಸಂಗ್ರಹಿಸಿದ ಶ್ರೇಯಸ್ಸು ಶ್ರೀಮನ್ಮಧ್ವಾಚಾರ್ಯರದು.

೨) ಸೌಗಂಧಿಕ ಪುಷ್ಪಗಳ ಸರೋವರ ಇದ್ದದ್ದು ಕುಬೇರನ ಪಟ್ಟಣದ ಹೊರವಲಯದಲ್ಲಿ. ಆದರೆ, ಈ ಪಂಚವರ್ಣಗಳ ಪುಷ್ಪಗಳ ಸರೋವರವಿದ್ದದ್ದು, ಕುಬೇರನ ಪಟ್ಟಣದ ಒಳವಲಯ–

ದಲ್ಲಿ ಇದನ್ನು 'ಗೃಹಾತ್' ಎಂಬ ಪದದಿಂದ ಸೂಚಿಸಿರುವರು. ಆದ್ದರಿಂದ ಸಹಜವಾಗಿಯೇ ಇದು ಸೌಗಂಧಿಕ ಪುಷ್ಪಗಳಿಗಿಂತ ಹೆಚ್ಚಾಗಿ ನರಾಗಮ್ಯವೆನ್ನಿಸಿತ್ತು ಎಂದು ತಿಳಿಯುವುದು.

೩) ದ್ರೌಪದಿ ಪುಷ್ಪಗಳನ್ನು ಬೇಡಿದ್ದು ಸಾಮಾನ್ಯ ಸ್ತ್ರೀಯಂತೆ ಅವುಗಳ ಮೇಲಿನ ಅಪೇಕ್ಷೆಯಿಂದಾಗಿರದೇ, ಅವುಗಳನ್ನು ತರುವ ಮೂಲಕ ಭೀಮಸೇನನ ಪರಾಕ್ರಮ ಬೆಳಕಿಗೆ ಬಂದು ಕೀರ್ತಿ ಅಪಾರವಾಗಿ ಹೆಚ್ಚಬೇಕು ಎಂಬುದು ಮಾತ್ರ ಆಗಿತ್ತು. ಇದರಿಂದ ದ್ರೌಪದಿ ಆದರ್ಶ ಸತಿ ಎಂದು ಸ್ಫುಟಪಡುವುದು. ಹೀಗೆ ರಾಮ ಸೀತೆಯರಂತೆ ಭೀಮ ದ್ರೌಪದಿಯರ ದಾಂಪತ್ಯ ಅತ್ಯಂತ ವಿಲಕ್ಷಣವಾದದ್ದು ಎಂಬುದನ್ನು ಗಮನಿಸಬೇಕು.

೪) ದ್ರೌಪದಿ ಶಾಸ್ತ್ರದ ಸಂಕೇತ, ಅವಳ ಬಯಕೆಯನ್ನು ಪೂರೈಸುವುದು ಶಾಸ್ತ್ರಾಭಿ-ಪ್ರಾಯವನ್ನು ವಿವರಿಸುವುದರ ಸಂಕೇತ. ಪುಷ್ಪಗಳು ಪ್ರಮೇಯ ಪುಷ್ಪಗಳ ಸಂಕೇತ. ಶಾಸ್ತ್ರ ಬಯಸಿದ ಪ್ರಮೇಯಗಳು ನರಾಗಮ್ಯ, ಸಾಮಾನ್ಯಮನುಷ್ಯರಿಗೆ ಅರಿಯಲಾಗದಷ್ಟು ಸೂಕ್ಷ್ಮವಾದವುಗಳು. ಅವುಗಳನ್ನು ಯಥಾರ್ಥವಾಗಿ ವಿವರಿಸುವ ಸಾಮರ್ಥ್ಯ ವಾಯುದೇವರದು ಮಾತ್ರ ಎಂಬ ಮುಖ್ಯ ಪ್ರಮೇಯ ಇಲ್ಲಿನ ಎರಡೂ ಬಾರಿಯ ಪುಷ್ಪಹರಣ ಪ್ರಸಂಗದಿಂದ ತಿಳಿಯುವುದು (**'ಶ್ರೀನಾಥಕೀರ್ತ್ಯಂಬುಜಸೇವ್ಯಗಂಧಂ ಪ್ರಾಣಃ ಸ ಸಂಗೃಹ್ಯ ವಿಹರ್ತುಮೀಷ್ಟೇ'** – ರುಕ್ಮಿಣೀಶವಿಜಯ ೧/೭). ಹನುಮದ್ರೂಪದಿಂದ ಸಂಜೀವನಾನಯನ ಪ್ರಸಂಗ ಎರಡು ಬಾರಿ ಬಂದದ್ದು ರಾಮಾಯಣದಲ್ಲಿ ಪ್ರಸಿದ್ಧವಿದೆ. ಅದರಂತೆ ಈ ಪುಷ್ಪಾಹರಣ ಪ್ರಸಂಗವು ಎರಡು ಬಾರಿ ಎಂಬುದು ವಿಶೇಷ. ಅದರಂತೆ ಮಧ್ವರೂಪದಿಂದ ವ್ಯಾಸ ನಾರಾಯಣರ ಬಳಿಗೆ ತೆರಳಿದ್ದೂ ಸಹ ಎರಡು ಬಾರಿ ಎಂಬುದು ಪ್ರಸಿದ್ಧವೇ – **'...ಪುನರಪಿ ಬದರೀಂ ಪ್ರಾಪ್ಯ'**.

---

೩೦೧. ವಸತ್ಸು ತತ್ರೇತ್ಯತ್ರ ತತ್ರ = ಗಂಧಮಾದನಮೂರ್ಧ್ನಿ ॥ – (ವಾ.)

೩೦೨. ಕುಬೇರಸ್ಯ ಗೃಹಾನ್ನೃಭರಗಮ್ಯತ ಇತ್ಯತ್ರ ನೃಭರಗಮ್ಯತಃ ಅಗಮ್ಯಾತ್ ಕುಬೇರಸ್ಯ ಗೃಹಾತ್= ಮಹಾಮೇರುಸ್ಥಿತಕುಬೇರಗೃಹಸಮೀಪಸ್ಥಸರೋವರಾದಿತ್ಯರ್ಥಃ। ಕುಬೇರಗೃಹವತ್ ತತ್ಸಮೀಪಸ್ಥಸರೋವರಸ್ಯಾಪ್ಯ-ಗಮ್ಯತ್ವಸೂಚನಾಯ ಗೃಹಾದಿತಿ ಲಾಕ್ಷಣಿಕಪ್ರಯೋಗಃ। ಗೃಹಾನ್ನಿಮಿತ್ತಾತ್ ನೃಭರಗಮ್ಯತಃ ಸರೋವರಾದಿತಿ ವಾ। ಅಯಂ ಕುಬೇರಾಧಿಷ್ಠಿತಮೇರೋರುತ್ತರಭಾಗಸ್ಥೋ ಗಿರಿಪ್ರದೇಶಃ। ಪೂರ್ವಂ ಗಂಧಮಾದನಗಿರೌ ಸ್ಥಿತಸರೋವರೇ ಏಕವರ್ಣಮೇವ ಸೌವರ್ಣಂ ಕಮಲಮ್। ಮೇರುಮೂರ್ಧ್ನಿ ಸ್ಥಿತಸರೋವರೇ ತು ಪಂಚವರ್ಣಾನಿ ಕಮಲಾನಿ ಸಂತಿ। ತತಃ ಕಾನಿಚಿತ್ಕುಸುಮಾನಿ ಮಾರುತೇನಾನೀತಾನಿ ತಾನಿ ದೃಷ್ಟ್ವಾ ದ್ರೌಪದೀ ಪಂಚವರ್ಣಕುಸುಮವ್ಯಾಜೇನ ಪದ್ಮತ್ರಯಸಂಖ್ಯಾಕರಾಕ್ಷಸವಧೇನ ಭೀಮಸ್ಯ ಯಶೋಧರ್ಮಾಭಿವೃದ್ಧಿಮೇವ ಕಾರಯಿತುಂ ಭೀಮಂ ಪ್ರತ್ಯಾಹೇತಿ ವಿವೇಕೋ ಜ್ಞೇಯಃ। ಅತ ಏವ ಭೀಮಸ್ಯ ಯಶೋಧರ್ಮಾಭಿವೃದ್ಧಯೇ ಇತಿ ತಾದರ್ಥ್ಯಾರ್ಥಕ-ಚತುರ್ಥೀಪ್ರಯೋಗಃ। ಪುಷ್ಪೇಷು ತು ಪಂಚವರ್ಣಾನಿ ಪುಷ್ಪಾಣಿ ವೀಕ್ಷ್ಯೇತ್ಯೇವೋಕ್ತಮ್। ನ ತು ತಾನ್ಯಾನಯೇತಿ। ತಸ್ಮಾತ್ ಭಾರತೀಮನೋಭಾವಂ ಭಾರತೀಪತಿರೇವ ವೇದೇತಿ ಜ್ಞೇಯಮ್ ॥ – (ವಾ.)

೩೦೩. ತವಾಪಿ ಸುಮಹತ್ತೇಜೋ ಮಹದ್ ಬಾಹುಬಲಂ ಚ ತೇ।
ಅವಿಷಹ್ಯಮನಾಧೃಷ್ಯಂ ಶಕ್ರತುಲ್ಯಪರಾಕ್ರಮ ॥ – ದ್ರೌಪದೀವಚನ (ವನ. ೧೬೦/೨೩)

೬) ಹೀಗೆ ಇಂತಹ ಅಚಿಂತ್ಯಾದ್ಭುತ ಕಾರ್ಯಗಳನ್ನು ಎರಡೆರೆಡು ಬಾರಿ ಮಾಡುವುದರ ಮೂಲಕ ಶ್ರೀವಾಯುದೇವರು ಅವು ತಮಗೆ ಆಕಸ್ಮಿಕವಾಗಿ ಸಾಧ್ಯವಾದ ಕಾರ್ಯಗಳಲ್ಲ, ಸಹಜ–ವಾಗಿ ಸಿದ್ಧಿಸಿದ ಕಾರ್ಯಗಳು ಎಂದು ತಿಳಿಸಿಕೊಟ್ಟಿರುವರು ಎಂದು ತಿಳಿಯಬೇಕು.

೭) ಪಂಚವರ್ಣದ ಪುಷ್ಪಗಳು ಒಂದು ರೀತಿಯಲ್ಲಿ *'ಪಂಚಭೇದ'ಗಳ ಸಂಕೇತ ಎಂದೂ ತಿಳಿಯಬಹುದು. ಅದರಂತೆ ಪಂಚಭೇದವೆಂಬ ಪ್ರಮೇಯ ಕುಸುಮಗಳನ್ನು ಸಮರ್ಥಿಸಿದ ಹಿರಿಮೆ ಮಧ್ವರೂಪದ ಭೀಮಸೇನನದು.

ಅಗಮ್ಯೋಽಯಂ ಗಿರಿಃ ಸರ್ವೈಃ ಕುಬೇರೇಣಾಭಿಪಾಲಿತಃ ।
ಅದ್ಯ ತ್ವಯ್ಯೇವ ಗಂತವ್ಯೋ ವಿಧೂಯಾಖಿಲರಾಕ್ಷಸಾನ್ ॥ ೩೦೩ ॥

ಅ: 'ಈ ಪರ್ವತ ಕುಬೇರನಿಂದ ಪರಿಪಾಲಿತವಾಗಿದ್ದರಿಂದ ಎಲ್ಲರಿಗೂ ದುರ್ಗಮ–ವಾದುದು. ಇಂದು ನೀನೇ ಅಲ್ಲಿಗೆ ಹೋಗಿ ಎಲ್ಲ ರಾಕ್ಷಸರನ್ನು ಸೋಲಿಸಬೇಕು'.

ವಿ: ೧) ಈ ಪರ್ವತವನ್ನು ಗಂಧಮಾದನವೆಂದು ಕೆಲವು ವ್ಯಾಖ್ಯಾನಕಾರರು ವಿವರಿಸಿದರೆ, ಮೇರುಪರ್ವತವೆಂದು ವಾದಿರಾಜರು ವಿವರಿಸಿರುವರು.

೨) ಗಂಧಮಾದನವು ಮೇರುಪಾರ್ಶ್ವದ ಪರ್ವತ ಎಂಬ ವಿವರಣೆ ಈಗಾಗಲೇ ಬಂದಿರುವುದರಿಂದ (ಶ್ಲೋ. ೨೭೬) ಎರಡೂ ಸಂಗತ ಎಂಬುದು ಸ್ಪಷ್ಟ.

ಇತ್ಯುಕ್ತ ಆಶು ಸಗದಃ ಸಧನುಃ ಸಬಾಣೋ
ಭೀಮೋ ಗಿರಿಂದ್ರಮಜಿತೋರುಬಲೋ ವಿಗಾಹೇ ।
ಪ್ರಾಪ್ತಂ ನಿಶಾಮ್ಯ ಬಲದೈವತಸೂನುಮತ್ರ
ಪದ್ಮತ್ರಯಂ ನ್ಯರುಣದುದ್ಧತರಾಕ್ಷಸಾನಾಮ್ ॥ ೩೦೪ ॥

ಅ: ದ್ರೌಪದಿ ಹೀಗೆ ಕೇಳಲು ಎಂದೂ ಸೋಲದ ಅಪಾರ ಬಲನಾದ ಭೀಮಸೇನ ಗದೆ, ಧನುಸ್ಸು, ಬಾಣಗಳನ್ನು ಹಿಡಿದು ಆ ಬೆಟ್ಟವನ್ನು ಏರಿದ. ಅಲ್ಲಿಗೆ ಭೀಮ ಬಂದದ್ದನ್ನು ಕಂಡು ಮೂರು ಪದ್ಮ ಸಂಖ್ಯೆಯ ಉನ್ಮತ್ತ ರಾಕ್ಷಸರು ಅವನನ್ನು ತಡೆದರು.

---

* ಪಂಚಭೇದಾತ್ಮಕ ಪ್ರಪಂಚಕೆ । ಪಂಚರೂಪಾತ್ಮಕನೆ ದೈವಕ
ಪಂಚಮುಖ ಶಕ್ರಾದಿಗಳು ಕಿಂಕರರು ಶ್ರೀಹರಿಗೆ ।
ಪಂಚವಿಂಶತಿತತ್ತ್ವ ತರತಮ । ಪಂಚಕೆಗಳನು ಪೇಳ್ದ ಭಾವಿ ವಿ- ।
ರಿಂಚಿಯೆನಿಪಾನಂದತೀರ್ಥರ ನೆನೆವೆನನುದಿನವು ॥ – ಹರಿಕಥಾಮೃತಸಾರ (೧/೯)

ಎ: ೧) ಸೀತೆ ಪ್ರಾರ್ಥಿಸಿದೊಡನೆ ರಾಮ ತೆರಳಿದಂತೆ, ದ್ರೌಪದಿ ಕೇಳಿದೊಡನೆ ಭೀಮ ತೆರಳಿದ್ದೂ ಸಹ ಗಮನಾರ್ಹವಾದುದು.

೨) ಕುಬೇರನ ಸೌಗಂಧಿಕ ವನವನ್ನು ನೂರು ಕೋಟಿ ರಾಕ್ಷಸರು ರಕ್ಷಿಸುತ್ತಿದ್ದರೆ, ಈ ಪಂಚವರ್ಣದ ಸರೋವರವನ್ನು ಪದ್ಮತ್ರಯ ಸಂಖ್ಯೆಯ ರಾಕ್ಷಸರು ರಕ್ಷಿಸುತ್ತಿದ್ದರು.

೩) ಈ ಪದ್ಮಸಂಖ್ಯೆಯ ಎವರ ಈಗಾಗಲೇ ಬಂದಿದೆ (೮/೧೭೯).

ಮಣಿಮಂತನ ವಧೆ

ಅಗ್ರೇ ನಿಧಾಯ ಮಣಿಮಂತಮಜೇಯಮುಗ್ರಂ
ಶಂಭೋರ್ವರಾದ್ವಿವಿಧಶಸ್ತ್ರಮಹಾಭಿವೃಷ್ಟ್ಯಾ ।
ತಾನ್ ಸರ್ವರಾಕ್ಷಸಗಣಾನ್ ಮಣಿಮತ್ಸಮೇತಾನ್
ಭೀಮೋ ಜಘಾನ ಸಪದಿ ಪ್ರವರೈಃ ಶರೌಘೈಃ ॥ ೩೦೫ ॥

ಅ: ಶಿವವರದಿಂದಾಗಿ ಅಜೇಯನಾಗಿದ್ದ ಕ್ರೂರಿ ಮಣಿಮಂತನನ್ನು ಮುಂದಿಟ್ಟುಕೊಂಡು ಬಗೆಬಗೆಯ ಶಸ್ತ್ರಗಳನ್ನು, ಮಹಾಸ್ತ್ರಗಳನ್ನು ಮಳೆಗರೆಯುತ್ತಾ ಯುದ್ಧಕ್ಕೆ ತೊಡಗಿದ. ಮಣಿಮಂತನೊಂದಿಗೆ ಕೂಡಿದ ಆ ಸಕಲ ರಾಕ್ಷಸರ ಗುಂಪುಗಳನ್ನು ಭೀಮಸೇನ ಕೂಡಲೇ ತುಂಬಾ ಶ್ರೇಷ್ಠವಾದ ಬಾಣಗಳ ಪ್ರವಾಹದಿಂದ ಸಂಹರಿಸಿದ.

ಅವಧ್ಯಾಂಸ್ತಾನ್ ಕ್ಷಣೇನೈವ ಹತ್ವಾ ಭೀಮೋ ಮಹಾಬಲಃ ।
ರಣೇ ಕ್ರೋಧವಶಾನ್ ಸರ್ವಾನತಿಷ್ಠದ್ಗಿರಿಮೂರ್ಧನಿ ।
ತೇ ಹತಾ ಭೀಮಸೇನೇನ ಪ್ರಾಪುರಂಧಂತಮೋಽಖಿಲಾಃ ॥ ೩೦೬ ॥

---

೩೦೩. ಸುಪರ್ಣಾನಿಲವೇಗೇನ ಶ್ವಸನೇನ ಮಹಾಚಲಾತ್ ।
ಪಂಚವರ್ಣಾನಿ ಪಾತ್ಯಂತೇ ಪುಷ್ಪಾಣಿ ಭರತರ್ಷಭ ॥ – ಭಾರತ (ವನ. ೧೬೦/೨೦)

೩೦೩. ಬಿಭ್ವೀಃ ಕೋಟೀರಟೀಕಃ ಕುಟಿಲಕಟುಮತೀನುತ್ಕಟಾಟೋಪಕೋಪಾನ್
ದ್ರಾಕ್ ಚ ತ್ವಂ ಸತ್ವರತ್ವಾಚ್ಚರಣದ ಗದಯಾ ಪೋಥಯಾಮಾಸಿಥಾರೀನ್ ।
ಉನ್ಮಥ್ಯಾತಥ್ಯಮಿಥ್ಯಾತ್ವವಚನವಚನಾನುತ್ಪಥಸ್ಥಾಂಸ್ತಥಾಽನ್ಯಾನ್
ಪ್ರಾಯಶ್ಚಿತ್ತಃ ಸ್ವಪ್ರಿಯಾಯೈ ಪ್ರಿಯತಮಕುಸುಮಂ ಪ್ರಾಣ ತಸ್ಮೈ ನಮಸ್ತೇ ॥ – ಹರಿವಾಯುಸ್ತುತಿ (೨೮)

೩೦೪. ಬಲದೈವತಸೂನುಮಿತಿ ವದತಾ ಮಧ್ಯೇ ಇಲಾವೃತಖಂಡಸ್ಯಾಗಮ್ಯತ್ವಾತ್ ಅಂಬರಮಾರ್ಗೇಣೈವ ಪರ್ವತಮಾರುರೋಹೇತಿ ಸೂಚಿತಮ್ ॥ – (ವಾ.)

೩೦೫. ವಿವಿಧಶಸ್ತ್ರಮಹಾಸ್ತ್ರವೃಷ್ಟ್ಯೋತ್ಥಸ್ಯ ನ್ಯರುಣದಿತಿ ಪೂರ್ವೇಣಾನ್ವಯಃ ॥ – (ವಾ.)

ಅ: ಅವಧ್ಯರಾಗಿದ್ದ ಆ ಕ್ರೋಧವಶರೆಂಬ ರಾಕ್ಷಸರನ್ನೆಲ್ಲಾ ಮಹಾಬಲನಾದ ಭೀಮಸೇನ ಯುದ್ಧದಲ್ಲಿ ಕ್ಷಣಮಾತ್ರದಲ್ಲಿ ಕೊಂದು ಹಾಕಿದ. ಬೆಟ್ಟದ ಶಿಖರದ ಮೇಲೆ ನಿಂತ. ಭೀಮಸೇನ-ನಿಂದ ಹತರಾದ ಅವರೆಲ್ಲಾ ಅಂಧಂತಮಸ್ಸಿಗೆ ತೆರಳಿದರು.

ವಿ: ಈ ಪಂಚವರ್ಣದ ಪುಷ್ಪಗಳ ವನವನ್ನುಕಾಯುತ್ತಿದ್ದ ರಾಕ್ಷಸರು ಕ್ರೋಧವಶ ಎಂಬ ವಿಶಿಷ್ಟ ವರ್ಗಕ್ಕೆ ಸೇರಿದವರು. ಹೊರಗೆ ಹರಿಭಕ್ತರಂತೆ ನಟಿಸುತ್ತಾ ಒಳಗೆ ಹರಿದ್ವೇಷಿಗಳಾಗಿದ್ದುದು ಈ ರಾಕ್ಷಸರ ವೈಶಿಷ್ಟ್ಯ. ಮೇಲ್ನೋಟಕ್ಕೆ ವೈದಿಕರಂತೆ ಕಂಡರೂ ಗುಪ್ತವಾಗಿ ವೇದದ್ವೇಷಿಗಳಾಗಿರುವ ಮಾಯಾವಾದಿಗಳು ಇದಕ್ಕೆ ನಿದರ್ಶನ.

ಹತಃ ಸೌಗಂಧಿಕವನೇ ಮಣಿಮಾಂಶ್ಚ ಪುನಃ ಕಲೌ ।
ಜಾತೋ ಮಿಥ್ಯಾಮತಿಂ ಸಮ್ಯಗಾಸ್ತೀರ್ಯಾಪ ತಮೋಽಧಿಕಮ್ ॥ ೩೦೭ ॥

---

೩೦೭. ಅಹಂ ಬ್ರಹ್ಮೇತಿ ವೇನಸ್ತು ಧ್ಯಾಯನ್ನಾಪಾಧರಂ ನಮಃ ।
ತದ್ಯಾದ್ಧಾಂತೋ ಮಹೀಂ ವ್ಯಾಪ್ತೋ ಭೇರ್ಯಾ ಖ್ಯಾಪಯತೋಽನಿಶಮ್ ॥
ಅಸುರಾ ರಾಕ್ಷಸಾಶ್ಚೈವ ಪಿಶಾಚಾಸ್ತತ್ಪಥಿ ಸ್ಥಿತಾಃ ।
ಭೂಮೌ ತತ್ಪ್ರಥನಾ ಸರ್ವಂ ನಿರಸ್ತಂ ಮಹಿತಾತ್ಮನಾ ॥
ಪುನಃ ಕಲಿಯುಗೇ ಪ್ರಾಪ್ತೇ ಅಷ್ಟಾವಿಂಶತಿಮೇ ಮನೋಃ ।
ವೈವಸ್ವತಶ್ಚ ಸಮಯೇ ಜಾತಾಃ ಕ್ರೋಧವಶಾ ಭುವಿ ॥
ಖ್ಯಾಪಯಂತಿ ದುರಾತ್ಮಾನೋ ಮಣಿಮಾಂಸ್ತತ್ಪುರಃಸರಃ ॥ – ಭವಿಷ್ಯತ್ಪುರಾಣ ॥ (ಭಾ. ತಾ. ೪/೧೪/೩೫)

ದೇಹಾದುತ್ಥಾಮಿತಾನಾಮಧಿಪತಿರಸತಾಮಕ್ರಮಾದ್ವಕ್ರಬುದ್ಧಿಃ
ಕ್ರುದ್ಧಃ ಕ್ರೋಧೈಕವಶ್ಯಃ ಕೃಮಿರಿವ ಮಣಿಮಾನ್ ದುಷ್ಕೃತೀ ನಿಷ್ಕ್ರಿಯಾರ್ಥಮ್ ।
ಚಕ್ರೇ ಭೂಚಕ್ರಮೇತ್ಯ ಕ್ರಕಚಮಿವ ಸತಾಂ ಚೇತಸಃ ಕಷ್ಟಶಾಸ್ತ್ರಂ
ದುಸ್ತರ್ಕಂ ಚಕ್ರಪಾಣೇರ್ಗೌಣಗಣವಿರಹಂ ಜೀವತಾಂ ಚಾಧಿಕೃತ್ಯ – ಹರಿವಾಯುಸ್ತುತಿ(೨೯)

ಅನ್ಯೇ ಮನುಷ್ಯಾ ಅಪಿ ಭಾರತಾದ್ಯಂ ಸತ್ಸಂಪ್ರದಾಯಂ ಪರಿಗೃಹ್ಯ ವಿಷ್ಣುಮ್ ।
ಯಜಂತ ಆಪುಃ ಪರಮಾಂ ಗತಿಂ ತನ್ನ ಸೇಹಿರೇ ಕ್ರೋಧವಶಾದಿದೈತ್ಯಾಃ ॥

ಶೈವಂ ತಪಶ್ಚ ವಿಪುಲಂ ವಿಧಾಯ ಜಗದ್ವಿಮೋಹೋರ್ಜಿತಶಕ್ತಿಮಸ್ಮಾತ್ ।
ಪ್ರಾಪ್ಯ ಪ್ರಜಾತಾ ಭುವಿ ಮೋಹನಂ ಚ ಚಕ್ರುಃ ಕುತರ್ಕೈರಭಿದಾಂ ವದಂತಃ ॥ – (೩೨/೧೪೯,೧೫೦)

ಮಣಿಮಂತಂ ಮಹಾಭ್ರಾಂತಂ ಹರೌ ದ್ವೇಷಕರಂ ಖಿಲಮ್ ।
ವಾಚಾ ವಿಜಿತ್ಯ ಗದಯಾ ನೀಚಂ ಪಶ್ಚಾಜ್ಜಘಾನ ಯಃ ॥ – ಸರಸಭಾರತೀವಿಲಾಸ (೬/೨೮)

ಅ: ಸೌಗಂಧಿಕವನದಲ್ಲಿ ಹತನಾದ ಮಣಿಮಂತ ಮತ್ತೆ ಕಲಿಯುಗದಲ್ಲಿ ಹುಟ್ಟಿ ಮಿಥ್ಯಾಜ್ಞಾನ-ವನ್ನು ವಿಶೇಷವಾಗಿ ಹರಡಿ ಹೆಚ್ಚಿನ ತಮಸ್ಸನ್ನು ಹೊಂದಿದ.

ವಿ: ಸುಜೀವಿಗಳಿಗೆ ಜ್ಞಾನಾನಂತರ ಮಾಡುವ ಸತ್ಕರ್ಮಗಳಿಗೆ ಮುಕ್ತಿಯಲ್ಲಿ ಆನಂದಾತಿಶಯ–ರೂಪಫಲ ಮುಕ್ತಿಯಲ್ಲಿ ಲಭಿಸುವಂತೆ ದುಷ್ಟರಿಗೆ ವಿಶೇಷ ಪಾಪಕಾರ್ಯಗಳಿಂದಾಗಿ ತಮಸ್ಸಿನಲ್ಲಿ ದುಃಖಾತಿಶಯವೂ ಲಭಿಸುವುದು ಎಂಬುದು ಇದರಿಂದ ಸೂಚಿತ.

ಭೀಮನ ಮೇಲೆ ಕುಬೇರನ ಕೋಪ

ತತೋ ವೈಶ್ರವಣೋ ರಾಜಾ ಮಹಾಪದ್ಮತ್ರಯೇ ಹತೇ।
ರಾಕ್ಷಸಾನಾಮವಧ್ಯಾನಾಂ ಸಖಾಯೇ ಮಣಿಮತ್ಯಪಿ ।
ಆರುರೋಹ ರಥಂ ದಿವ್ಯಂ ಯೋದ್ಧುಕಾಮೋ ವೃಕೋದರಮ್ ॥ ೩೦೮ ॥

ಅ: ಬಳಿಕ ರಾಜನಾದ ಕುಬೇರ ಆ ಮೂರು ಮಹಾಪದ್ಮ ಸಂಖ್ಯೆಯ ಅವಧ್ಯ ರಾಕ್ಷಸರು ಹಾಗೂ ಗೆಳೆಯನಾದ ಮಣಿಮಂತ ಹತನಾದದ್ದನ್ನು ಕಂಡು ಭೀಮನನ್ನು ಯುದ್ಧದಲ್ಲಿ ಎದುರಿಸಲೆಂದು ದಿವ್ಯ ರಥವನ್ನೇರಿ ತೆರಳಿದ.

ವಿ: ೧) ಹಿಂದೆ ಪದ್ಮತ್ರಯ ಎಂದು ಆ ರಾಕ್ಷಸರ ಸಂಖ್ಯೆಯನ್ನು ತಿಳಿಸಿದ ಆಚಾರ್ಯರು ಇಲ್ಲಿ ಮಹಾಪದ್ಮತ್ರಯ ಎಂದಿರುವರು. ಪದ್ಮ ಮತ್ತು ಮಹಾಪದ್ಮಗಳು ವಿಭಿನ್ನ ಸಂಖ್ಯೆಗಳು. ಎಂದಮೇಲೆ ಈ ವಿರೋಧ ಹೇಗೆ ಎಂಬುದು ಪ್ರಶ್ನೆ. ಅದಕ್ಕೆ ಇಲ್ಲಿ ಮಹಾಪದ್ಮವೆಂದರೆ ಸಂಖ್ಯೆಯ ಮಹಾಪದ್ಮ–ವಲ್ಲ ಮಹಾಬಲಿಷ್ಠವಾದ ಮೂರು ಪದ್ಮಸಂಖ್ಯೆಯ ಸೇನೆ ಎಂದು ಅರ್ಥಮಾಡಿಕೊಂಡರೆ ವಿರೋಧವಿಲ್ಲ ಎಂದು ತಿಳಿಯುವುದು.

೨) ಅಸುರಾವೇಶದಿಂದಾಗಿ ಮಣಿಮಂತನಂತಹ ರಾಕ್ಷಸರೊಂದಿಗೆ ಕುಬೇರನಂತಹ ಸಾತ್ತ್ವಿಕರಿಗೆ ಗೆಳೆತನ ಎಂದು ತಿಳಿಯಬೇಕು.

---

೩೦೮. ಪದ್ಮಮಹಾಪದ್ಮ ಸಂಖ್ಯೆಗಳ ವಿವರಣೆ ವಾಲ್ಮೀಕಿರಾಮಾಯಣದಲ್ಲಿ ಬಂದಿದೆ :

ಶತಂ ಶತಸಹಸ್ರಾಣಾಂ ಕೋಟಿಮಾಹುರ್ಮನೀಷಿಣಃ ।
ಶತಂ ಕೋಟಿಸಹಸ್ರಾಣಾಂ ಶಂಖ ಇತ್ಯಭಿಧೀಯತೇ ॥
ಶತಂ ಶಂಖಸಹಸ್ರಾಣಾಂ ಮಹಾಶಂಖ ಇತಿ ಸ್ಮೃತಮ್ ।
ಮಹಾಶಂಖಸಹಸ್ರಾಣಾಂ ಶತಂ ಬೃಂದಮಿತಿ ಸ್ಮೃತಮ್ ॥
ಶತಂ ಬೃಂದಸಹಸ್ರಾಣಾಂ ಮಹಾಬೃಂದಮಿತಿ ಸ್ಮೃತಮ್ ।
ಮಹಾಬೃಂದಸಹಸ್ರಾಣಾಂ ಶತಂ ಪದ್ಮಮಿತಿ ಸ್ಮೃತಮ್ ॥
ಶತಂ ಪದ್ಮಸಹಸ್ರಾಣಾಂ ಮಹಾಪದ್ಮಮಿತಿ ಸ್ಮೃತಮ್ ॥ –ವಾ.ರಾ. (೬/೨೮/೩೩–೩೬)

ಅಸುರಾವೇಶತಸ್ತಸ್ಯ ಭೀಮೇ ಕ್ರೋಧೋ ಮಹಾನಭೂತ್ ।
ಸ ಆಜಗಾಮ ಭೀಮೇನ ಯೋದ್ಧುಂ ವಿತ್ತಪತಿಃ ಸ್ವಯಮ್ ॥ ೩೦೯ ॥

ಅ: ಅಸುರಾವೇಶದಿಂದಾಗಿ ಭೀಮನ ಮೇಲೆ ಅವನಿಗೆ ಬಹಳ ಕೋಪ ಹುಟ್ಟಿತ್ತು. ಆ ಕುಬೇರನು ಭೀಮನೊಂದಿಗೆ ಕಾದಲೆಂದು ಸ್ವತಃ ಆಗಮಿಸಿದ.

ತಸ್ಮಿನ್ ಕಾಲೇ ಭೀಮಸೇನಸ್ಯ ಘೋಷಂ
ಶ್ರುತ್ವಾ ರಾಜಾಽಪೃಚ್ಛದಾಶು ಸ್ಮ ಕೃಷ್ಣಾಮ್ ।
ಕ್ವ ಭೀಮ ಇತ್ಯೇವ ತಯೋದಿತಂ ಚ
ಶ್ರುತ್ವಾ ಜಗಾಮಾಶು ರಕ್ಷೋಽಂಸಸಂಸ್ಥಃ ॥ ೩೧೦ ॥

ಅ: ಆ ಕಾಲದಲ್ಲಿ ಭೀಮಸೇನನ ಘೋಷವನ್ನು ಕೇಳಿ ಧರ್ಮರಾಜನು ಒಡನೆಯೇ ದ್ರೌಪದಿಯನ್ನು 'ಎಲ್ಲಿ ಭೀಮ?' ಎಂದು ಕೇಳಿದ. ಅವಳು ತಿಳಿಸಿದೊಡನೆಯೇ ಅದನ್ನು ಕೇಳಿ ಅವನು ಘಟೋತ್ಕಚನ ಭುಜವೇರಿ ಅಲ್ಲಿಗೆ ಧಾವಿಸಿದ.

ವಿ: ಹಿಂದಿನಂತೆ ಈಗಲೂ ಧರ್ಮರಾಜ ಭೀಮನ ಬಗ್ಗೆ ತಿಳಿದದ್ದು ದ್ರೌಪದಿಯ ಮೂಲಕವೇ. ಜ್ಞಾನದ ಸಂಕೇತವಾದ ಭೀಮನನ್ನು ಹೀಗೆ ಶಾಸ್ತ್ರದ ಮೂಲಕ ತಿಳಿಯಲು ಧರ್ಮಿಷ್ಠರಿಗೆ ಮಾತ್ರ ಸಾಧ್ಯ ಎಂಬುದು ಇಲ್ಲಿಯ ತತ್ವ.

ಧರ್ಮರಾಜನ ಆಗಮನ

ಸಭ್ರಾತೃಕೇ ಮುನಿಭಿಃ ಕೃಷ್ಣಯಾ ಚ
ಗತೇ ರಾಜನ್ಯತ್ರ ಭೀಮಂ ಕುಬೇರಃ ।
ದೃಷ್ಟ್ವಾಽಸುರಾವೇಶತೋ ಧರ್ಮಜಂ ಚ
ಕಿಂಚಿನ್ಮೃಕ್ತಃ ಸ್ನೇಹಯುಕ್ತಸ್ತಥಾಽಽಸ ॥ ೩೧೧ ॥

ಅ: ಸೋದರರೊಂದಿಗೂ, ಮುನಿಗಳೊಂದಿಗೂ, ದ್ರೌಪದೀ ಸಮೇತನಾಗಿ ಧರ್ಮರಾಜ ಭೀಮನಿದ್ದಲ್ಲಿಗೆ ತೆರಳಿದಾಗ ಧರ್ಮರಾಜನನ್ನು ನೋಡಿ ಕುಬೇರನ ಅಸುರಾವೇಶ ಸ್ವಲ್ಪ ಕಡಿಮೆಯಾಯಿತು. ಅದರಂತೆ ಅವರ ಬಗ್ಗೆ ಸ್ನೇಹವೂ ಮೂಡಿತು.

ವಿ: ೧) ಧರ್ಮರಾಜನ ದರ್ಶನ ಮಾತ್ರದಿಂದ ಕುಬೇರನ ಅಸುರಾವೇಶ ಕಡಿಮೆಯಾದದ್ದು ಧರ್ಮಕಾರ್ಯದ ಅನುಷ್ಠಾನದಿಂದ ಕೆಟ್ಟ ಬುದ್ಧಿ ಅಳಿಯುವುದಕ್ಕೆ ಸಂಕೇತ ಎಂದು ತಿಳಿಯಬೇಕು.

೨) ಇಲ್ಲಿ ಒಂದು ಆಕ್ಷೇಪಕ್ಕೆ ಅವಕಾಶವಿದೆ ಸಾಕ್ಷಾತ್ ವಾಯುದೇವರ ಅವತಾರನಾದ ಭೀಮಸೇನನನ್ನು ನೋಡಿಯೂ ಕಡಿಮೆಯಾಗದ ಅಸುರಾವೇಶ ವಾಯುವಿಗಿಂತ ತುಂಬಾ ಕಡಿಮೆಯಾದ ಯಮನ ಅವತಾರನಾದ ಧರ್ಮರಾಜನನ್ನು ಕಂಡಾಗ ಕಡಿಮೆಯಾದುದು ಹೇಗೆ ಎಂದು. ಪರಿಹಾರ ಹೀಗೆ – ಭೀಮಸೇನನ ಹಿರಿಮೆ ಸೂರ್ಯ ಪ್ರಕಾಶದಂತೆ ಅಪಾರವಾದುದು. ಎಂದರೆ ಅದರ ಪ್ರಖರತೆಯನ್ನು ಗ್ರಹಿಸಲು ಕುಬೇರನ ಯೋಗ್ಯತೆಗೆ ಎಟುಕದು. ಧರ್ಮರಾಜನ ತೇಜಸ್ಸು ಹಿತಮಿತವಾದದ್ದು. ಅದನ್ನು ಕುಬೇರನಿಗೆ ನೋಡಿ ಅರಿಯಲು ಸಾಧ್ಯವಾಯಿತು ಎಂದರ್ಥ. ಚಂದ್ರನನ್ನು ನೋಡಿ ಆನಂದಪಡುವಂತೆ ಸೂರ್ಯನನ್ನು ನೋಡಿ ಆನಂದಪಡಲು ಸಾಧ್ಯವಿಲ್ಲವಷ್ಟೇ! ಅದರಂತೆಯೇ ಇದು ಎಂದು ತಿಳಿಯಬೇಕು. ಚಿಕ್ಕ ಮಕ್ಕಳಿಗೆ ಸಾಮಾನ್ಯ ಜ್ಞಾನಿ ಹೇಳಿದ ವಿವರ ತಿಳಿಯುವಂತೆ ಪ್ರಕಾಂಡ ಪಂಡಿತರು ಹೇಳುವ ವಿವರಗಳು ತಿಳಿಯಲಾರವು ಎಂಬುದು ಸಹ ಈ ಅರ್ಥದಲ್ಲಿಯೇ ಎಂಬುದೂ ಗಮನಾರ್ಹ.

ಧೃತಾಯುಧಂ ಭೀಮಮೀಕ್ಷ್ಯಾಪಿ ಕಿಂಚಿ-
ದ್ದೈತ್ಯಾವೇಶಾದ್ಬಹು ಮೇನೇ ನ ಭೀಮಮ್ ।
ಅಗಸ್ತ್ಯಶಾಪಂ ಚಾವದತ್ ಸ್ವಸ್ಯ ಪೂರ್ವಂ
ಸಖಾಯನಾಶೇ ಕಾರಣಂ ರಾಜರಾಜಃ ॥ ೩೧೨ ॥

---

೩೦೯. ಅತ್ಯಲ್ಪಸ್ತ್ವಸುರಾವೇಶೋ ದೇವಾನಾಂ ಚ ಭವಿಷ್ಯತಿ ।
ಪ್ರಾಣಮೇಕಂ ವಿನಾऽಸೌ ಹಿ ತ್ವಾಖಿಣಾಶ್ಚಸಮಃ ಸ್ಮೃತಃ ।
ತಸ್ಮಿನ್ನಪ್ಯಸುರಾವೇಶೇ ಗತೇ ಪ್ರಕೃತಿರೇವ ತು ॥ – ಇತಿ ಭಾಗವತತಂತ್ರೇ (ಭಾ. ತಾ. ೧೦/೨೨/೩೦)

೩೧೯. ದ್ವಿತೀಯಮಪರಾಧ್ನಂತಂ ಭೀಮಂ ಶ್ರುತ್ವಾ ಧನೇಶ್ವರಃ ।
ಚುಕ್ರೋಧ ಯಕ್ಷಾಧಿಪತಿರ್ಯುಜ್ಯತಾಮಿತಿ ಚಾಬ್ರವೀತ್ ॥ – ಭಾರತ (ವನ. ೧೬೧/೨೨)

ಭೀಮಸೇನಸ್ಯ ನ ಗ್ಲಾನಿರ್ವಿಕ್ಷತಸ್ಯಾಪಿ ರಾಕ್ಷಸೈಃ ।
ಆಸೀತ್ ತಸ್ಯಾಮವಸ್ಥಾಯಾಂ ಕುಬೇರಮಪಿ ಪಶ್ಯತಃ ॥ – ಭಾರತ (ವನ. ೧೬೧/೪೧)

೩೧೧. ಅತ್ರೋಕ್ತಂ ವ್ಯಾಸತೀರ್ಥೀಯೇ – ಬಹುತ್ವಾಭಾವೇ ಬಹುವಚನಪ್ರಯೋಗೋ ದ್ವಿತ್ವಮವಿವಕ್ಷಿತ್ವಾತ್ । ಜಾತ್ಯಾಖ್ಯಾಯಾಮೇಕಸ್ಮಿನ್ ಬಹುವಚನಮನ್ಯತರಸ್ಯಾಮಿತಿ ನ್ಯಾಯಮನುಸೃತ್ಯ ವೇತಿ । ಯದ್ವಾ ಈಶಾನಾಸ ಇತಿ ಬಹುವಚನಮಾದ್ಯರ್ಥೇ ಭ್ರಾತ್ರಾದಿಭರಿತ್ಯುಕ್ತಿವತ್ತು ಲೋಮಶಾದಿಮುನೀನಾಮಪಿ ಭ್ರಾತೃವದಿಷ್ಟತ್ವೇನ ತತ್ಸಮತ್ವಾತ್ ತದ್ವಿವಕ್ಷಯಾ ಯದ್ವಕ್ಷ್ಯತಿ 'ಸಭ್ರಾತೃಕೇ ಮುನಿಭಿಃ ಕೃಷ್ಣಯಾ ಚ' ಇತಿ । – (ತಾ.)

೩೧೨. ಅಹಂ ಪೂರ್ವಮಗಸ್ತ್ಯೇನ ಕ್ರುದ್ಧೇನ ಪರಮರ್ಷಿಣಾ ।
ಶಪ್ತೋऽಪರಾಧೇ ಕಸ್ಮಿಂಶ್ಚಿತ್ ತಸ್ಯೈಷಾ ನಿಷ್ಕೃತಿಃ ಕೃತಾ ॥ – ಭಾರತ (ವನ. ೧೬೧/೫೦)

೩೧೨. ಏಷ ಶಾಪೋ ಮಯಾ ಪ್ರಾಪ್ತಃ ಪ್ರಾಕ್ ತಸ್ಮಾದೃಷಿಸತ್ತಮಾತ್ ।
ಸ ಭೀಮೇನ ಮಹಾರಾಜ ಭ್ರಾತ್ರಾ ತವ ವಿಮೋಕ್ಷಿತಃ ॥ (ಕುಬೇರವಚನ) – ಭಾರತ (ವನ. ೧೬೧/೬೩)

ಅ: ಸ್ವಲ್ಪ ಅಸುರಾವೇಶ ಇನ್ನು ಉಳಿದಿದ್ದರಿಂದಾಗಿ ಆಯುಧ ಹಿಡಿದ ಭೀಮನನ್ನು ಕಂಡಾಗಲೂ ಅಷ್ಟು ದೊಡ್ಡವನೆಂದು ಅರಿಯಲಿಲ್ಲ. ಅವನು ತನ್ನ ಗೆಳೆಯನಾದ ಮಣಿಮಂತನ ಸಾವಿಗೆ ಅಗಸ್ತ್ಯರ ಶಾಪವನ್ನು ಕಾರಣವನ್ನಾಗಿ ತಿಳಿಸಿದನು.

ವಿ: ೧) ಆಸುರಬುದ್ಧಿಯಿದ್ದವರಿಗೆ ಜ್ಞಾನದ ಮಹತ್ವ ಅಷ್ಟಾಗಿ ತಿಳಿಯದು ಎಂದು ಇದರ ಅರ್ಥ. ಕುಬೇರ ಧನಾಧಿಪ, ಎಂದರೆ ಭಾರೀ ಶ್ರೀಮಂತ. ಎಂದರೆ ಧನಮದದಿಂದ ಕೊಬ್ಬಿದವರಿಗೂ ಜ್ಞಾನದ ಸಂಕೇತವಾದ ಭೀಮನ ಮಹಿಮೆ ತಿಳಿಯದು ಎಂದು ಸೂಚಿತವಾಗುವುದು.

೨) ಒಮ್ಮೆ ಆಕಾಶಮಾರ್ಗವಾಗಿ ಕುಬೇರ ಮಣಿಮಂತರು ತೆರಳುತ್ತಿದ್ದಾಗ ಯಮುನಾ ತೀರದಲ್ಲಿ ತಪಸ್ಸು ಮಾಡುತ್ತಿದ್ದ ಅಗಸ್ತ್ಯರ ಮೇಲೆ ಮಣಿಮಂತ ಸೀನಿದ. ಅದರಿಂದ ಕೆರಳಿದ ಅಗಸ್ತ್ಯರು ಕುಬೇರನಿಗೆ ಶಾಪವಿತ್ತರು ಈ ನಿನ್ನ ಗೆಳೆಯ ಸಾಯಲಿ – ಎಂದು. ಅದರಿಂದಾಗಿ ಮಣಿಮಂತ ಸತ್ತ ಎಂದು ಕುಬೇರನ ವಿವರಣೆ. ಆದರೇ ಶಿವನ ವರವಿದ್ದಂತಹ ಅವನನ್ನು ಅಗಸ್ತ್ಯ ಶಾಪ ಕೊಲ್ಲಲಾರದು ಎಂಬುದನ್ನು ಅವನು ಗಮನಿಸಿಲ್ಲ ಎಂಬುದು ಸ್ಪಷ್ಟ (ವನ. ೧೬೧/೫೪–೬೩).

೩) ಶಿವನ ವರವಿದ್ದ ಮಣಿಮಂತನನ್ನು ಕೊಂದ ಭೀಮ ಶಿವನಿಗಿಂತ ಮಿಗಿಲಾದ ವಾಯುದೇವರ ಅವತಾರ ಎಂಬುದೇ ನಿಜವಾದ ಉತ್ತರ.

ಕುಬೇರನ ಕೋಪದ ಉಪಶಮನ

ದೈತ್ಯಾವೇಶಾದುಜ್ಝಿತಃ ಶಾಂತಭಾವೋ
ದದೌ ನಿಜಂ ಸ್ಥಾನಮೇಷಾಂ ಸುತುಷ್ಟಃ ।
ಆವಾಸಾರ್ಥಂ ತೇऽವಸಂಸ್ತತ್ರ ಪಾರ್ಥಾ-
ಸ್ತಥಾऽನ್ಯೇಷಾಂ ದೇವತಾನಾಂ ಗೃಹೇಷು ॥ ೩೧೩ ॥

ಅ: ಮುಂದೆ ಅಸುರಾವೇಶದಿಂದ ಪೂರ್ಣ ಮುಕ್ತನಾದ ಕುಬೇರ ಶಾಂತ ಮನಸ್ಕನಾಗಿ ತುಂಬಾ ಸಂತೋಷದಿಂದ ಪಾಂಡವರಿಗೆ ವಾಸಿಸಲೆಂದು ತನ್ನ ಮನೆಯನ್ನೇ ನೀಡಿದ. ಪಾಂಡವರು ಅಲ್ಲಿಯೂ ಹಾಗೂ ಇತರ ದೇವತೆಗಳ ಮನೆಗಳಲ್ಲಿಯೂ ವಾಸಿಸತೊಡಗಿದರು.

ವಿ: ೧) ಅರ್ಜುನ ಹಾಗೆ ಸ್ವರ್ಗಲೋಕದಲ್ಲಿ ಇಂದ್ರಾತಿಥಿಯಾಗಿ ವೈಭವದಿಂದ ವಾಸಿಸುತ್ತಿದ್ದರೆ, ಇಲ್ಲಿ ಪಾಂಡವರು ಕುಬೇರಾತಿಥಿಗಳಾಗಿ ವೈಭವದಿಂದಲೇ ವಾಸಿಸುತ್ತಿರುವರು. ಆದ್ದರಿಂದಲೇ ಪಾಂಡವರು ವನವಾಸ ಕಾಲದಲ್ಲೂ ದೇವತೆಗಳಂತೆ, ಇಂದ್ರನಂತೆ ಸುಖದಿಂದಲೇ ಇದ್ದರು ಎಂದು ತಿಳಿಸಿದ್ದು (೨೨/೮).

೨) ಇದರಿಂದ ಅರ್ಜುನನ ವನವಾಸನಿಯಮದ ಭಂಗವಾಗಿಲ್ಲ ಎಂಬ ವಿವರಣೆ ಆಗಲೇ ಬಂದಿದೆ.

ನಿವಾತಕವಚರ ವಧಪ್ರಸಂಗ

ತತ್ರೈವ ತೇಷಾಂ ವಸತಾಂ ಮಹಾತ್ಮನಾ-
ಮಾನಂದಿನಾಮಬ್ದಚತುಷ್ಟಯೇ ಗತೇ ।
ಪಂಚಾಬ್ದಮಧ್ಯಾಪ್ಯ ಮಹಾಂತಿ ಚಾಸ್ತ್ರ-
ಣೇಂದ್ರೋ ಗುರ್ವರ್ಥಂ ಫಲ್ಗುನೇನಾರ್ಥಿತೋಽಭೂತ್ ॥ ೩೧೪ ॥

ಅ: ಮಹಾತ್ಮರಾದ ಪಾಂಡವರು ಆನಂದದಿಂದ ಅಲ್ಲಿಯೇ ವಾಸಿಸುತ್ತಿದ್ದಂತೆ ನಾಲ್ಕು ವರ್ಷಗಳು ಕಳೆದವು. ಐದು ವರ್ಷಗಳ ಕಾಲ ಮಹಾಸ್ತ್ರಗಳನ್ನು ಇಂದ್ರನಿಂದ ಅಭ್ಯಾಸ ಮಾಡಿದ ಅರ್ಜುನ ಗುರುದಕ್ಷಿಣೆ ಪಡೆಯಲು ಇಂದ್ರನನ್ನು ಪ್ರಾರ್ಥಿಸಿದ.

ನಿವಾತಕವಚರ ವಧೆಗೆ ಇಂದ್ರನ ಕೋರಿಕೆ

ವಧಂ ವವ್ರೇ ಸ್ವಶತ್ರೂಣಾಮಿಂದ್ರಃ ಪಾರ್ಥಾತ್ ಸ್ವರೂಪತಃ ।
ನಿವಾತಕವಚಾಖ್ಯಾನಾಂ ಏಷಾಂ ಬ್ರಹ್ಮಾ ವರಂ ದದೌ ॥ ೩೧೫ ॥

ಅವಧ್ಯತ್ವಂ ಸುರೈರ್ದೈತ್ಯೈರ್ಗಂಧರ್ವೈಃ ಪಕ್ಷಿರಾಕ್ಷಸೈಃ ।
ಪುನರಿಂದ್ರೇಣಾರ್ಥಿತೋಽದಾತ್ ಜಹೀಮಾನ್ ನರದೇಹವಾನ್ ॥ ೩೧೬ ॥

ಅ: ಇಂದ್ರ ತನ್ನ ಅವತಾರನೇ ಆದ ಅರ್ಜುನನನ್ನು ತನ್ನ ಶತ್ರುವಾದ ನಿವಾತಕವಚರನ್ನು ಕೊಲ್ಲಲು ಕೇಳಿಕೊಂಡ. ದೇವತೆಗಳಿಂಲೂ, ದೈತ್ಯರಿಂದಲೂ, ಗಂಧರ್ವರಿಂದಲೂ, ಯಕ್ಷ ರಾಕ್ಷಸರಿಂದಲೂ ಅವಧ್ಯತ್ವವನ್ನು ಅವರಿಗೆ ಬ್ರಹ್ಮ ವರವಾಗಿ ನೀಡಿದ್ದ. ಪುನಃ ಇಂದ್ರ ಬೇಡಿ-ಕೊಂಡಾಗ ಮಾನವ ದೇಹದಿಂದ ಅವರನ್ನು ಸಂಹರಿಸು ಎಂದು ಇವನಿಗೂ ವರ ನೀಡಿದ್ದ.

---

೩೧೪. ತಥಾ ನಿವಸತಾಂ ತೇಷಾಂ ಪಂಚಮಂ ವರ್ಷಮಭ್ಯಗಾತ್ ॥– ಭಾ. (ವನ. ೧೬೦/೧೦)

೩೧೪. ಉಷಿತ್ವಾ ಪಂಚವರ್ಷಾಣಿ ಸಹಸ್ರಾಕ್ಷನಿವೇಶನೇ ।
ಅವಾಪ್ಯ ದಿವ್ಯಾನ್ಯಸ್ತ್ರಾಣಿ ಸರ್ವಾಣಿ ವಿಬುಧೇಶ್ವರಾತ್ ॥ – ಭಾರತ (ವನ. ೧೬೪/೧೭)

ವಿ: ೧) ಇಂದ್ರ ಗುರು ದಕ್ಷಿಣೆಯಾಗಿ ಕೇಳಿದ್ದು ತನ್ನ ಶತ್ರುಗಳಾದ ಬ್ರಹ್ಮ ವರದಿಂದ ಅವಧ್ಯ–ರಾದ ನಿವಾತಕವಚರ ವಧೆಯನ್ನು. ಬ್ರಹ್ಮ ಅವಧ್ಯತ್ವ ವರವನ್ನು ಅವರಿಗೆ ನೀಡಿದ್ದರೂ ಇಂದ್ರನ ಮನುಷ್ಯ ರೂಪದಿಂದ ಸಾಯುವಂತೆ ತಿಳಿಸಿದ್ದರಿಂದ ಇಂದ್ರನಿಂದಾಗದ ಅವರ ಸಂಹಾರ ಕಾರ್ಯ ಅರ್ಜುನನಿಗೆ ಆಗುವುದರಿಂದ ಹಾಗೆ ಕೇಳಿಕೊಂಡ ಎಂದರ್ಥ.

೨) ಪ್ರಹ್ಲಾದನ ಸೋದರ ಸಂಹ್ಲಾದನ ಮಕ್ಕಳು ನಿವಾತಕವಚರು; ಸಮುದ್ರಮಧ್ಯದ ಪಟ್ಟಣದಲ್ಲಿ ವಾಸವಾಗಿದ್ದ ಅವರು ಲೋಕಕಂಟಕರಾಗಿದ್ದರು; ದೇವತಾಪೀಡಕರಾಗಿದ್ದರು.

೩) ಅವರ ಕವಚದೊಳಗೆ ಗಾಳಿಯೂ ಪ್ರವೇಶಿಸದಂತಹ ಸುರಕ್ಷತೆಯನ್ನು ಅವರು ಹೊಂದಿದ್ದರಿಂದ ಅವರಿಗೆ ನಿವಾತಕವಚರು ಎಂದು ಹೆಸರಾಗಿದ್ದಿತು.

ಕಿರೀಟಿಯಾದ ಅರ್ಜುನ

ಇತಿ ತೇನಾರ್ಜುನಂ ಶಕ್ರಃ ಸ್ವಾತ್ಮಾನಂ ನರದೇಹಗಮ್ ।
ಜಗಾದ ತಾನ್ ಜಹೀತ್ಯೇವ ಕಿರೀಟಂ ಸ್ವಂ ನಿಬಧ್ಯ ಚ ॥ ೩೧೭ ॥

ಅ: ಅದರಿಂದಾಗಿ ತನ್ನ ಮನುಷ್ಯರೂಪದ ಅವತಾರವಾದ ಅರ್ಜುನನಿಗೆ ಇಂದ್ರ 'ಅವರನ್ನು ಸಂಹರಿಸು' ಎಂದು ಹೇಳಿ ತನ್ನ ಕಿರೀಟವನ್ನು ತೊಡಿಸಿದ.

ಐಂದ್ರಂ ಸ್ಯಂದನಮಾರುಹ್ಯ ಪಾರ್ಥೋ ಮಾತಲಿಸಂಯುತಃ ।
ಗಾಂಡೀವಂ ಧನುರಾಧಾಯ ಯಯೌ ಹಂತುಂ ಮಹಾಸುರಾನ್ ॥ ೩೧೮ ॥

---

೩೧೬. ಇಂದ್ರೇಣಾರ್ಥಿತೋಽದಾದಿತ್ಯತ್ರ ಪುನಃ= ದೈತ್ಯಾನಾಂ ವರದಾನಾನಂತರಂ ಇಂದ್ರೇಣಾರ್ಥಿತೋ ಬ್ರಹ್ಮಾ ಅದಾತ್ = ವರಮದಾತ್ ॥ –(ವಾ.)

೩೧೬. ತಪಸ್ತಪ್ತ್ವಾ ಮಹತ್ ತೀವ್ರಂ ಪ್ರಸಾದ್ಯ ಚ ಪಿತಾಮಹಮ್ ।
ಇದಂ ವೃತಂ ನಿವಾಸಾಯ ದೇವೇಭ್ಯಶ್ಚಾಭಯಂ ಯುಧಿ ॥
ತತಃ ಶಕ್ರೇಣ ಭಗವಾನ್ ಸ್ವಯಂಭೂರಿತಿ ಚೋದಿತಃ ॥
ವಿಧತ್ತಾಂ ಭಗವಾನಂತಮಾತ್ಮನೋ ಹಿತಕಾಮ್ಯಯಾ ।
ತತ ಉಕ್ತೋ ಭಗವತಾ ದಿಷ್ಟಮತ್ರೇತಿ ಭಾರತ ॥
ಭವಿತಾಂತಸ್ತ್ವಮೇಷಾಂ ದೇಹೇನಾನ್ಯೇನ ಶತ್ರುಹನ್ ॥
ತತ ಏಷಾಂ ವಧಾರ್ಥಾಯ ಶಕ್ರೋಽಸ್ತ್ರಾಣಿ ದದೌ ತವ ॥
(ಅರ್ಜುನನ್ನು ಕುರಿತು ಮಾತಲಿಯ ವಚನ) – ಭಾರತ (ವನ. ೧೭೨/೨೯,೩೨)

೩೧೭. "ಬಬಂಧ ಚೈವ ಮೇ ಮೂರ್ಧ್ನಿ ಕಿರೀಟಮಿದಮುತ್ತಮಮ್ ।"
(ಅರ್ಜುನನ ವಚನ) – ಭಾರತ (ವನ. ೧೬೮/೭೪)

ಅ: ಇಂದ್ರನ ರಥವನ್ನೇರಿ ಮಾತಲಿಯೊಡನೆ ಪಾರ್ಥನು ಗಾಂಡೀವ ಧನುಸ್ಸನ್ನು ತೆಗೆದುಕೊಂಡು ಆ ಮಹಾಸುರರನ್ನು ಕೊಲ್ಲಲು ತೆರಳಿದನು.

ವಿ: ೧) ಇಂದ್ರನ ಕಿರೀಟ, ಇಂದ್ರನ ರಥ, ಇಂದ್ರನ ಸಾರಥಿ – ಹೀಗೆ ಇಂದ್ರನ ವಸ್ತುಗಳೊಂದಿಗೆ ಅರ್ಜುನ ಬ್ರಹ್ಮನ ಧನುಸ್ಸಾದ ಗಾಂಡೀವವನ್ನು ಹಿಡಿದು ಅಸುರ ಸಂಹಾರಕ್ಕೆ ತೆರಳಿದ. ಅವನಂತೂ ಸ್ವತಃ ಇಂದ್ರಾವತಾರನೇ. ಇಂದ್ರನಿತ್ತ ಕುಂಡಲಗಳನ್ನು ತೊಟ್ಟ ವಿವರ ಮುಂದಿನ ಶ್ಲೋಕಗಳಲ್ಲಿ ಬಂದಿದೆ.

೨) ಬ್ರಹ್ಮದೇವರ ಧನುಸ್ಸಾದ ಗಾಂಡೀವ ಹಾಗೂ ಶಿವ ನೀಡಿದ್ದ ಪಾಶುಪತಾಸ್ತ್ರ ಅರ್ಜುನನಿಗೆ ಬ್ರಹ್ಮ ವರದಿಂದ ಕೂಡಿದ್ದ ಅವರನ್ನು ಕೊಲ್ಲಲು ವಿಶೇಷವಾಗಿ ನೆರವಾದವು ಎಂದೂ ತಿಳಿಯಬಹುದು.

ಅರ್ಜುನನಿಗೆ ದೇವದತ್ತಪ್ರಾಪ್ತಿ

ಶಂಖಂ ದದುಸ್ತಸ್ಯ ದೇವಾ ದೇವದತ್ತಃ ಸ ಶಂಖರಾಟ್ ।
ನಾದಯನ್ ಶಂಖಘೋಷೇಣ ಧನುರ್ವಿಷ್ಫಾರಯನ್ ಮಹತ್ ॥ ೩೧೯ ॥

ದಧಾನಃ ಕುಂಡಲೇ ದಿವ್ಯೇ ಶಕ್ರದತ್ತೇ ಸುಭಾಸ್ವರೇ ।
ಆಸಸಾದ ಪುರಂ ದಿವ್ಯಂ ದೈತ್ಯಾನಾಮಿಂದ್ರನಂದನಃ ॥ ೩೨೦ ॥

ಅ: ದೇವತೆಗಳು ಅವನಿಗೆ ಆಗ ಶಂಖವೊಂದನ್ನು ನೀಡಿದರು. ದೇವದತ್ತ ಆ ಶ್ರೇಷ್ಠವಾದ ಶಂಖ. ಶಂಖಘೋಷದಿಂದ ದಿಕ್ಕುಗಳನ್ನು ಪ್ರತಿಧ್ವನಿಗೊಳಿಸುತ್ತಾ ಆ ಶ್ರೇಷ್ಠ ಧನುಸ್ಸನ್ನು

---

೩೧೯. ವಿಸ್ಫಾರಯನ್ನಿತ್ಯತ್ರ 'ವಿಸ್ಫಾರೋ ಧನುಷಃ ಸ್ವನ' ಇತ್ಯನುಶಾಸನಾತ್ ಧನುರ್ವಿಸ್ಫಾರಯನ್ = ಧ್ವನಯನ್ನಿತ್ಯರ್ಥಃ॥ – (ವಾ.)

೩೧೯. ಅಯಂ ಚ ಶಂಖಪ್ರವರೋ ಯೇನ ಜೇತಾಸಿ ದಾನವಾನ್ ।
ಅನೇನ ವಿಜಿತಾ ಲೋಕಾಃ ಶಕ್ರೇಣಾಪಿ ಮಹಾತ್ಮನಾ ॥
ಪ್ರದೀಯಮಾನಂ ದೇವೈಸ್ತಂ ದೇವದತ್ತಂ ಜಲೋದ್ಭವಮ್ ।
ಪ್ರತ್ಯಗೃಹ್ಣಂ ಜಯಾಯೈನಂ ಸ್ತೂಯಮಾನಸ್ತದಾऽಮರೈಃ ॥
(ಅರ್ಜುನನ ವಚನ) – ಭಾರತ(ವನ. ೧೬೮/೮೪,೮೫)

ದೇವದತ್ತಂ ಚ ಮೇ ಶಂಖಂ ಪುನಃ ಪ್ರಾದಾನ್ಮಹಾರವಮ್ ।
ದಿವ್ಯಂ ಚೇದಂ ಕಿರೀಟಂ ಮೇ ಸ್ವಯಮಿಂದ್ರೋ ಯುಯೋಜ ಹ ॥ – ಭಾರತ (ವನ. ೧೭೪/೫)

ಝೀಂಕಾರ ಮಾಡುತ್ತಾ ಇಂದ್ರದತ್ತವಾದ ಹೊಳೆಯುವ ದಿವ್ಯ ಕುಂಡಲಗಳನ್ನು ಧರಿಸಿದವನಾಗಿ ಅರ್ಜುನ ದೈತ್ಯರ ಆ ದಿವ್ಯ ಪಟ್ಟಣವನ್ನು ತಲುಪಿದ.

ನಿವಾತಕವಚರ ವಧೆ

ತಸ್ಯ ಶಂಖಧ್ವನಿಂ ಶ್ರುತ್ವಾ ಗಾಂಡೀವಸ್ಯ ಚ ನಿಸ್ವನಮ್ ।
ಅಭಿಸಸ್ಮುರ್ಮಹಾವೀರ್ಯಾ ನಿವಾತಕವಚಾಸುರಾಃ ॥ ೩೨೧ ॥

ಅ: ಅರ್ಜುನನ ಶಂಖಧ್ವನಿಯನ್ನು, ಗಾಂಡೀವದ ಘೋಷವನ್ನು ಕೇಳಿ ಮಹಾ ವೀರ್ಯ-ರಾದ ಆ ನಿವಾತಕವಚ ರಾಕ್ಷಸರು ಅವನನ್ನು ಇದಿರಿಸಿ ಬಂದರು.

ತಿಸ್ರಃ ಕೋಟ್ಯೋ ದಾನವಾನಾಂ ಸ್ವಯಂಭುವರಗರ್ವಿತಾಃ ।
ನಾನಾಯುಧೈ ರಣೇ ಪಾರ್ಥಮಭ್ಯವರ್ಷನ್ ಸುಸಂಹತಾಃ ॥ ೩೨೨ ॥

ಅ: ಆ ಮೂರು ಕೋಟಿ ದಾನವರು ಬ್ರಹ್ಮನ ವರದಿಂದ ಕೊಬ್ಬಿದ್ದರು. ಅವರೆಲ್ಲ ಒಟ್ಟಾಗಿ ಅರ್ಜುನನ ಮೇಲೆ ರಣದಲ್ಲಿ ನಾನಾಯುಧಗಳ ಮಳೆಗರೆದರು.

ತೇಷಾಂ ಸ ಶಸ್ತ್ರಾಣಿ ಕಿರೀಟಮಾಲೀ
ನಿವಾರ್ಯ ಗಾಂಡೀವಧನುಃಪ್ರಮುಕ್ತೈಃ ।
ಶರೈಃ ಶಿರಾಂಸಿ ಪ್ರಚಕರ್ತ ವೀರೋ
ಮಹಾಸ್ತ್ರಶಿಕ್ಷಾಬಲಸಂಪ್ರಯುಕ್ತೈಃ ॥ ೩೨೩ ॥

ಅ: ಕಿರೀಟ, ಹಾರಗಳನ್ನು ಧರಿಸಿದ ವೀರನಾದ ಅರ್ಜುನ ಅವರ ಶಸ್ತ್ರಗಳನ್ನು ಮಹಾ ಅಸ್ತ್ರವಿದ್ಯೆಯ ಬಲದಿಂದಾಗಿ ಗಾಂಡೀವ ಧನುಸ್ಸಿನಿಂದ ಚೆನ್ನಾಗಿ ಪ್ರಯೋಗಿಸಲ್ಪಟ್ಟಂತಹ ಬಾಣಗಳಿಂದ ತಡೆದು ಅವರ ತಲೆಗಳನ್ನು ಕತ್ತರಿಸಿದ.

---

೩೨೨. ನಿವಾತಕವಚಾ ನಾಮ ದಾನವಾ ಮಮ ಶತ್ರವಃ ।
ಸಮುದ್ರಕುಕ್ಷಿಮಾಶ್ರಿತ್ಯ ದುರ್ಗೇ ಪ್ರತಿವಸಂತ್ಯುತ ॥
ತಿಸ್ರಃ ಕೋಟ್ಯಃ ಸಮಾಖ್ಯಾತಾಸ್ತುಲ್ಯರೂಪಬಲಪ್ರಭಾಃ ॥ (ಶಕ್ರವಚನ) – ಭಾರತ (ವನ. ೧೬೮/೭೨)

ಮಾನುಷಾನ್ಪ್ರತ್ಯರೇತೇಷಾಂ ನಿರ್ದಿಷ್ಟೋ ಬ್ರಹ್ಮಣಾ ಪುರಾ ॥ – ಭಾರತ (ವನ. ೧೭೩/೧೫)

೩೨೩. ಮಹಾಸ್ತ್ರಶಿಕ್ಷಾಬಲಸಂಪ್ರಯುಕ್ತೈರಿತ್ಯಸ್ಯ ಮಹಾಸ್ತ್ರಶಿಕ್ಷಾಜನ್ಯಂ ಯದ್ಬಲಂ ಸಾಮರ್ಥ್ಯಂ ತೇ ನ ಸಂಪ್ರಯುಕ್ತೈರಿತ್ಯರ್ಥಃ ॥ – (ಸ.)

ವಿ: ಅರ್ಜುನ ಹಾಗೆ ನಿವಾತಕವಚರ ಮೇಲೆ ಯುದ್ಧಕ್ಕೆ ತೆರಳಿ ಅಪೂರ್ವರೀತಿಯಲ್ಲಿ ಅವರನ್ನು ಸೋಲಿಸಿ ಸಂಹರಿಸಿದ ವಿವರಗಳನ್ನು ವನಪರ್ವದಲ್ಲಿ ನಿವಾತಕವಚವಧಪರ್ವ ಎಂಬ ಉಪ–ಪರ್ವದಲ್ಲಿ ಕಾಣಬಹುದು.

ಪೌಲೋಮ ಕಾಲೇಯರ ವಧೆ

ಸರ್ವೇ ಹತಾಸ್ತೇನ ಮಹಾರಥೇನ
ತೇ ದಾನವಾಃ ಸೋಽಪಿ ಯಯೌ ತಥಾಽನ್ಯಾನ್ ।
ಪೌಲೋಮಕಾಲೇಯಗಣಾಭಿಧಾನಾನ್
ಷಷ್ಟಿಂ ಸಹಸ್ರಾಣಿ ಮಹಾರಥಾನಾಮ್ ॥ ೩೨೪ ॥

ಅ: ಮಹಾರಥನಾದ ಅರ್ಜುನನಿಂದ ಆ ರಾಕ್ಷಸರೆಲ್ಲಾ ಹತರಾದರು. ಅದರಂತೆ ಪೌಲೋಮಗಣ, ಕಾಲೇಯಗಣ ಎಂಬ ಹೆಸರುಗಳನ್ನು ಹೊಂದಿದ್ದ ಅರವತ್ತು ಸಾವಿರ ಮಹಾರಥರನ್ನೂ ಅರ್ಜುನ ಎದುರಿಸಿ ಹೊರಟನು.

ವಿ: ೧) ಮಹಾರಥ* ಎಂದರೆ ಒಬ್ಬನೇ ರಥದಲ್ಲಿ ಕುಳಿತು ತನ್ನನ್ನು ಎದುರಿಸಿ ಬರುವ ಹತ್ತು ಸಹಸ್ರ ಸಶಸ್ತ್ರಯೋಧರನ್ನು ಗೆಲ್ಲಬಲ್ಲ ಶಸ್ತ್ರ, ಶಾಸ್ತ್ರಪ್ರವೀಣನಾದ ವೀರ ಎಂದರ್ಥ.

೨) ಕಶ್ಯಪ ಮಡದಿಯರಾದ ಪುಲೋಮ ಮತ್ತು ಕಾಲಿಕೆ ಎಂಬುವರಲ್ಲಿ ಜನಿಸಿದವರೇ ಈ ಪೌಲೋಮರು ಮತ್ತು ಕಾಲೇಯರು. ಕಾಲಕೇಯರು ಎಂಬುದು ಕಾಲೇಯರ ನಾಮಾಂತರ. ಅವರೆಲ್ಲ ಬ್ರಹ್ಮವರದಿಂದ ಅವಧ್ಯರಾಗಿದ್ದವರು. ಹಿರಣ್ಯಪುರ ಅವರ ರಾಜಧಾನಿ.

ತಾನಸ್ತ್ರಶಸ್ತ್ರಾಣ್ಯಭಿವರ್ಷಮಾಣಾನ್
ಧನಂಜಯಃ ಪಾಶುಪತಾಸ್ತ್ರತೋ ದ್ರಾಕ್ ।
ದಗ್ಧ್ವಾ ಯಯೌ ಪುನರೇವೇಂದ್ರಸದ್ಮ
ತಂ ಸಸ್ವಜೇ ಪ್ರೀತಿಯುತಶ್ಚ ಶಕ್ರಃ ॥ ೩೨೫ ॥

---

* ಏಕೋ ದಶಸಹಸ್ರಾಣಾಂ ಯೋಧಯೇದ್ಯಸ್ತು ಧನ್ವಿನಾಮ್ ।
ಶಸ್ತ್ರಶಾಸ್ತ್ರಪ್ರವೀಣಶ್ಚ ಮಹಾರಥ ಇತಿ ಸ್ಮೃತಃ ॥ – ಭಾರತ

೩೨೫. ಸ್ವಸ್ತಿ ಭೂತೇಭ್ಯ ಇತ್ಯುಕ್ತ್ವಾ ಮಹಾಸ್ತ್ರಂ ಸಮಚೋದಯಮ್ ।
ಯತ್ ತದ್ರೌದ್ರಮಿತಿ ಖ್ಯಾತಂ ಸರ್ವಮಿತ್ರವಿನಾಶನಮ್ ॥
ಮಹತ್ ಪಾಶುಪತಂ ದಿವ್ಯಂ ಸರ್ವಲೋಕನಮಸ್ಕೃತಮ್ ॥ – ಭಾರತ (ವನ. ೧೭೩/೪೧)

ಅ: ಅಸ್ತ್ರಶಸ್ತ್ರಗಳ ಸುರಿಮಳೆಗೈಯುತ್ತಿದ್ದ ಅವರನ್ನು ಅರ್ಜುನ ಪಾಶುಪತಾಸ್ತ್ರದಿಂದ ಕೂಡಲೇ ಸುಟ್ಟುಹಾಕಿ, ಮರಳಿ ಇಂದ್ರಲೋಕಕ್ಕೆ ತೆರಳಿದ. ಇಂದ್ರ ತುಂಬಾ ಪ್ರೀತಿಯಿಂದ ಅವನನ್ನು ಆಲಿಂಗಿಸಿಕೊಂಡ.

ವಿ: ಅರ್ಜುನ ತಾನು ಶಿವನಿಂದ ಪಡೆದಿದ್ದ ಪಾಶುಪತಾಸ್ತ್ರದಿಂದ ಅವರನ್ನೆಲ್ಲ ಸಂಹರಿಸಿದ. ಪಾಶುಪತಾಸ್ತ್ರ ವಿಷ್ಣುದೇವತಾಕವಾದ ಅಸ್ತ್ರವಾದ್ದರಿಂದ ಅದರಿಂದ ಆ ಬ್ರಹ್ಮವರದಿಂದ ಕೂಡಿದ್ದ ಆ ರಾಕ್ಷಸರನ್ನು ಸಂಹರಿಸಲು ಅರ್ಜುನನಿಗೆ ಸಾಧ್ಯವಾಯಿತು ಎಂದು ತಿಳಿಯಬಹುದು.

ಮರಳಿ ಧರೆಗೆ ಅರ್ಜುನ

ಯಯುರಂಧಂತಮಸ್ತೇऽಪಿ ಸರ್ವೇ ದೇವದ್ವಿಷೋऽಸುರಾಃ ।
ಅಥಾನುಜ್ಞಾಪ್ಯ ಪಿತರಂ ರಥೇನೈಂದ್ರೇಣ ಭಾಸ್ವತಾ ।
ಸೋದರ್ಯಾಣಾಂ ಸಕಾಶಂ ಸ ಯಯೌ ವಜ್ರಧರಾತ್ಮಜಃ ॥ ೩೨೬ ॥

ಅ: ದೇವದ್ವೇಷಿಗಳಾದ ಅಸುರರೆಲ್ಲರೂ ಅಂಧಂತಮಸ್ಸಿಗೆ ತೆರಳಿದರು. ಬಳಿಕ ಅರ್ಜುನ ತಂದೆಯ ಅನುಮತಿಯನ್ನು ಪಡೆದು ಅವನ ಹೊಳಿಯುವ ರಥದಲ್ಲಿ ಕುಳಿತು ಸಹೋದರರ ಬಳಿಗೆ ತೆರಳಿದ.

ವಿ: ಅಂತೂ ಅರ್ಜುನ ತಾನು ಹೊರಟ ಐದು ವರ್ಷಗಳ ಅನಂತರ ಸೋದರರ ಬಳಿಗೆ ಮರಳಿದ ಎಂದಾಗುವುದು.

ಪಾಂಡವರ ಅಲಕಾಪುರಿವಾಸ

ಆಯಾಂತಮೀಕ್ಷ್ಯ ಬೀಭತ್ಸುಂ ಮುಮುದುರ್ಭ್ರಾತರೋऽಧಿಕಮ್ ।
ಊಷುಶ್ಚ ಚತುರೋऽಬ್ದಾಂಸ್ತೇ ಪುನರ್ಮೇರೌ ಪ್ರಮೋದಿನಃ ॥ ೩೨೭ ॥

ಅ: ಅರ್ಜುನ ಬಂದುದನ್ನು ಕಂಡು ಸೋದರರು ಬಹಳವಾಗಿ ಆನಂದಿಸಿದರು. ಅವರು ಆನಂದದಿಂದ ಮತ್ತೆ ನಾಲ್ಕು ವರ್ಷಗಳ ಕಾಲ ಆ ಮೇರುವಿನಲ್ಲಿ ನೆಲೆಸಿದರು.

ವಿ: ಒಟ್ಟು ಪಾಂಡವರ ವನವಾಸದ ಹತ್ತು ವರ್ಷಗಳು ಇಲ್ಲಿಗೆ ಪೂರೈಸಿದಂತಾಯಿತು ಎಂಬುದನ್ನು ಗಮನಿಸಬೇಕು.

---

೩೨೭. ಸಮೇತ್ಯ ಪಾರ್ಥೇನ ಯಥೈಕರಾತ್ರಮೂಷುಃ ಸಮಾಸ್ತತ್ರ ತದಾ ಚತಸ್ರಃ ।
ಪೂರ್ವಶ್ಚಷಟ್ ತಾ ದಶ ಪಾಂಡವಾನಾಂ ಶಿವಾ ಬಭೂವುರ್ವಸತಾಂ ವನೇಷು ॥ – ಭಾರತ (ವನ. ೧೭೬/೫)

ಕಥಾಭಿರ್ವಾಸುದೇವಸ್ಯ ಧ್ಯಾನೇನಾಭ್ಯರ್ಚನೇನ ಚ ।
ಯಯೌ ಕಾಲಃ ಸುಖೇನೈವ ತೇಷಾಂ ವಿಷ್ಣುರತಾತ್ಮನಾಮ್ ॥ ೩೨೮ ॥

ಅ: ಹರಿಯಲ್ಲಿಯೇ ನಿರತವಾದ ಮನಸ್ಸಿನ ಆ ಪಾಂಡವರಿಗೆ ಶ್ರೀಹರಿಯ ಕಥೆಗಳಿಂದಲೂ, ಧ್ಯಾನದಿಂದಲೂ, ಪೂಜೆಯಿಂದಲೂ ಕಾಲ ಸುಖವಾಗಿಯೇ ಕಳೆಯಿತು.

ವಿ: ಹರಿಕಥಾಶ್ರವಣ, ಧ್ಯಾನ, ಪೂಜೆಗಳನ್ನು ಮಾಡುವವರ ಕಾಲ ಸುಖವಾಗಿಯೇ ಕಳೆಯು–ವುದು ಎಂಬುದಕ್ಕೆ ಇದು ಸೂಚಕ.

ಮತ್ತೊಮ್ಮೆ ಭೀಮೋಪದೇಶ

ನೈವ ಶತ್ರೂನನುತ್ಸಾದ್ಯ ನಾನಾದಾಯ ಮಹದ್ಯಶಃ ।
ನಾಕೃತ್ವಾ ವಾಸುದೇವಾಜ್ಞಾಂ ರಾಜ್ಞಾಂ ಮುಖ್ಯಾ ಗತಿರ್ಭವೇತ್ ॥ ೩೨೯ ॥

ಅ: ''ಶತ್ರುಗಳನ್ನು ನಾಶ ಮಾಡದೇ, ಮಹತ್ತರವಾದ ಕೀರ್ತಿಯನ್ನು ಸಂಪಾದಿಸದೇ, ಶ್ರೀಹರಿಯ ಆಜ್ಞೆಯನ್ನು ಪಾಲಿಸದೇ ರಾಜರಿಗೆ ಮುಖ್ಯಗತಿ ಸರ್ವಥಾ ದೊರೆಯದು''.

ವಿ: ಈ ಮೂರೂ ರಾಜರು ಮಾಡಲೇಬೇಕಾದ ಪ್ರಧಾನಕರ್ತವ್ಯ ಎಂದು ಭಾವ.

ತದನ್ಯೇಷಾಂ ತು ವರ್ಣಾನಾಂ ಕ್ಷಮಾ ಬಾಹ್ಯೇಷು ಶತ್ರುಷು ।
ಪ್ರಾಯೋ ಧರ್ಮ ಇತಿ ಪ್ರೋಕ್ತೋ ಹರೇರಾಜ್ಞಾऽಖಿಲಸ್ಯ ಚ ॥ ೩೩೦ ॥

ಅ: ಇತರ ವರ್ಣದವರಿಗೆ ಬಾಹ್ಯ ಶತ್ರುಗಳಲ್ಲಿ ಕ್ಷಮೆಯೇ ಮುಖ್ಯವಾದ ಧರ್ಮ. ಎಲ್ಲರಿಗೂ ಶ್ರೀಹರಿಯ ಆದೇಶ ಪಾಲನೆಯೇ ಪ್ರಮುಖ ಕರ್ತವ್ಯ.

ವಿ: ಆಪತ್ಕಾಲದಲ್ಲಿ ಬ್ರಾಹ್ಮಣರೂ ಸಹ ಶಾಪಾದಿಗಳಿಂದ ದುಷ್ಟರನ್ನು ಶಿಕ್ಷಿಸಬಹುದು ಎಂಬುದನ್ನು **'ಪ್ರಾಯಃ'** ಎಂಬ ಪದದಿಂದ ಸೂಚಿಸಿರುವರು.

---

೩೨೮. ವಾಸುದೇವಕಥಾದಿಜನ್ಯಕೇವಲಸುಖೇನ ಚ ಸಾರ್ಥಕಃ ಕಾಲೋ ಯಯಾವಿತಿ । – (ಸ.)

೩೨೯. ಮುಖ್ಯಗತಿಃ ಮುಖ್ಯಸ್ಯ ಶ್ರೇಷ್ಠಸ್ಯವಿಷ್ಣೋರ್ಗತಿಃ ಮುಖ್ಯಾ ಚ ಸಾ ಗತಿಶ್ಚೇತಿ ವಾ ವಿಷ್ಣುಲೋಕಪ್ರಾಪ್ತಿರಿತ್ಯರ್ಥಃ। – (ಜ.)

೩೩೦. ಬಾಹ್ಯೇಷು ಶತ್ರುಷು ಕ್ಷಮಾ ಪ್ರಾಯೋ ಧರ್ಮ ಇತಿ ವದತಾ ಆಂತರಕಾಮಕ್ರೋಧಾದಿಶತ್ರುಷು ಕ್ಷಮಾ ನ ಧರ್ಮ ಇತಿ ಸೂಚಿತಮ್ ।''ಭಗವನ್ನಿಂದಯಾ ವೇನೋ ದ್ವಿಜೈಸ್ತಮಸಿ ಪಾತಿತ'' ಇತಿ ವಚನಾತ್ ಮಹಾಪದಿ ಬ್ರಾಹ್ಮಣೈರಪಿ ಶಾಪಾದಿನಾ ಶತ್ರುರ್ಘಾತನೀಯ ಇತಿ ಭಾವೇನ ಪ್ರಾಯ ಇತ್ಯುಕ್ತಮ್ ॥ – (ವಾ.)

ವಿ: ೧) ಅಖಿಲಸ್ಯ ಎಂದರೆ ಎಲ್ಲ ವರ್ಣದವರಿಗೂ, ಎಲ್ಲ ಆಶ್ರಮದವರಿಗೂ ಹರಿಯ ಆಜ್ಞಾ–ಪಾಲನೆಯೇ ಮುಖ್ಯ ಧರ್ಮ. ಹರಿಯ ಆಜ್ಞೆಯೆಂದರೆ ಶ್ರುತಿಸ್ಮೃತಿಗಳು ಎಂದರ್ಥ. 'ಶ್ರುತಿಸ್ಮೃತೀ ಹರೇರಾಜ್ಞೇ' ಅಂತಃಶತ್ರುಗಳ ನಿಗ್ರಹ ಎಲ್ಲರಿಗೂ ಪರಮಧರ್ಮವೇ, ಬಾಹ್ಯ ಶತ್ರುಗಳ ವಿಶೇಷ ನಿಗ್ರಹ ಕ್ಷತ್ರಿಯರ ಮುಖ್ಯ ಧರ್ಮ ಎಂದರ್ಥ.

೨) ಆಪತ್ಕಾಲದಲ್ಲಿ ಇತರರಿಗೂ ದುಷ್ಟನಿಗ್ರಹ ಯಥೋಚಿತವಾಗಿ ಧರ್ಮವೇ ಆಗಿದೆ ಎಂಬುದನ್ನು **'ಪ್ರಾಯಃ'** ಎಂಬ ಪದದಿಂದ ಸೂಚಿಸಿರುವರು.

ಇತಿ ಭೀಮವಚಃ ಶ್ರುತ್ವಾ ಸಸೋದರ್ಯೋ ಯುಧಿಷ್ಠಿರಃ ।
ರಾಕ್ಷಸಸ್ಕಂಧಮಾರೂಢಃ ಕೃಷ್ಣಯಾ ಚಾಯಯೌ ಪುನಃ ॥ ೩೩೧ ॥

ಅ: ಭೀಮನ ಈ ಮಾತನ್ನು ಕೇಳಿ ಧರ್ಮರಾಜ ಸಹೋದರರೊಂದಿಗೆ ಮತ್ತು ದ್ರೌಪದಿ–ಯೊಂದಿಗೆ ರಾಕ್ಷಸರ ಹೆಗಲೇರಿ ತೆರಳಿದ.

ವಿ: ೧) ಧರ್ಮರಾಜನಿಗೆ ಪುನಃ ಕರ್ತವ್ಯ ಪಾಲನೆಯ ಅರಿವು ಮೂಡಲು ಈ ಭೀಮಸೇನನ ಉಪದೇಶವೇ ಕಾರಣವಾಯಿತು.

೨) ಇಲ್ಲಿ ರಾಕ್ಷಸರು ಎಂದರೆ ಘಟೋತ್ಕಚ ಮೊದಲಾದವರು ಎಂದರ್ಥ.

ಅಜಗರ ಪ್ರಸಂಗ

ಪಾದೇಷು ತೇಷು ನಿವಸತ್ಸು ಹಿಮಾಲಯಸ್ಯ
ಯಾಮ್ಯಾಶ್ರಿತೇಷು ಪವಮಾನಸುತಃ ಕದಾಚಿತ್ ।
ಧನ್ವೀ ಮೃಗಾನನುಚರನ್ ಸಹಸಾऽऽಸಸಾದ
ಹಾಯೋಃ ಸುತಂ ನಹುಷಮಾಜಗರೋರುರೂಪಮ್ ॥ ೩೩೨ ॥

---

೩೩೨. ಯಾಮ್ಯಾಶ್ರಿತೇಷ್ವಿತ್ಯತ್ರ ಯಮಸಂಬಂಧಿನೀ ದಿಕ್ ಯಾಮ್ಯಾ ತದಾಶ್ರಿತೇಷು ದಕ್ಷಿಣದಿಗ್ಭಾಗಸ್ಥಿತೇಷ್ವಿತ್ಯರ್ಥಃ। ಯಮನಿಯಮಸಂಬಂಧಿನೋ ಯಾಮ್ಯಾಃ= ತಪಸ್ವಿನಃ ತೈರಾಶ್ರಿತೇಷ್ವಿತಿ ವಾ ॥ – (ವಾ.)

೩೩೨. 'ತತೋऽಬ್ರವೀತ್ ವಾಯುಸುತಸ್ತರಸ್ವೀ' – ಭಾರತ (ವನ. ೧೭೬/೭/೧೬)

೩೩೨. 'ವಿಹೃತ್ಯ ಮಾಸಂ ಸುಖಿನೋ ಬದರ್ಯಾಂ' – ಭಾರತ (ವನ. ೧೭೭/೧೧)

೩೩೨. ನಹುಷಕಥೆಯು ಭಾರತದಲ್ಲಿ (ಉದ್ಯೋಗ.೧೧; ಶಾಂತಿ.೧೭೯; ಅನು.೧೦೦; ವನ. ೧೭೯) ಬಂದಿದೆ.

ಅ: ಪಾಂಡವರು ಹಿಮಾಲಯ ಪರ್ವತದ ದಕ್ಷಿಣ ತಪ್ಪಲು ಪ್ರದೇಶಗಳಲ್ಲಿ ವಾಸಿಸುತ್ತಿದ್ದಾಗ ಒಮ್ಮೆ ವಾಯುಪುತ್ರನಾದ ಭೀಮಸೇನ ಧನುರ್ಧಾರಿಯಾಗಿ ಮೃಗಗಳನ್ನು ಬೇಟೆಯಾಡುತ್ತಾ ದೊಡ್ಡ ಹೆಬ್ಬಾವಿನ ರೂಪದಲ್ಲಿದ್ದ ನಹುಷನನ್ನು ಸಮೀಪಿಸಿದ.

ವಿ: ಕುಬೇರನ ಪಟ್ಟಣದಿಂದ ಪಾಂಡವರು ಹಿಮಾಲಯದ ಮೂಲಕ ಮರಳಿ ಅದರ ದಕ್ಷಿಣ ತಪ್ಪಲಿನಲ್ಲಿ ವಾಸಿಸುತ್ತಿದ್ದಾಗ ನಡೆದ 'ಅಜಗರಪ್ರಸಂಗ'ದ ನಿರೂಪಣೆ ಇಲ್ಲಿದೆ.

ಇಂದ್ರಪದವಿಯಲ್ಲಿ ನಹುಷ

ಪೂರ್ವಂ ಹಿ ವೃತ್ರವಧತೋಽಂಬುಜನಾಲತಂತು-
ಸಂಸ್ಥೇ ಶಚೀಪ್ರಣಯಿನಿ ಪ್ರವಿಚಿಂತ್ಯ ದೇವಾಃ ।
ಚಕ್ರುಸ್ತ್ರಿಲೋಕಪತಿಮಾಯುಸುತಂ ವರಂ ಚ
ದತ್ವಾಽಕ್ಷಿಗೋಚರತಪೋಽಸ್ಯ ಬಲಂ ಚ ಸರ್ವಮ್ ॥ ೩೩ ॥

ಅ: ಹಿಂದೆ ವೃತ್ರಾಸುರವಧೆಯಿಂದಾಗಿ ಶಚೀಪತಿಯಾದ ಇಂದ್ರ ಕಮಲನಾಳದ ತಂತುವಿನಲ್ಲಿ ಅಡಗಿದ್ದಾಗ ದೇವತೆಗಳೆಲ್ಲಾ ಚೆನ್ನಾಗಿ ಆಲೋಚಿಸಿ ಆಯುಪುತ್ರನಾದ ನಹುಷನಿಗೆ ಅವನ ಕಣ್ಣಿಗೆ ಕಾಣುವವರ ತಪಸ್ಸು ಮತ್ತು ಬಲಗಳೆಲ್ಲಾ ಅವನಿಗೆ ಲಭಿಸುವಂತೆ ವರ ನೀಡಿ ಅವನನ್ನು ತ್ರಿಲೋಕಪತಿಯನ್ನಾಗಿ ಮಾಡಿದರು.

ವಿ: ೧) ವೃತ್ರಾಸುರನನ್ನು ಸಂಹಾರ ಮಾಡಿದಾಗ ಒದಗಿದ ಬ್ರಹ್ಮಹತ್ಯೆಯಿಂದ ಪಾರಾಗಲು ಇಂದ್ರ ಮಾನಸ ಸರೋವರದಲ್ಲಿದ್ದ ಒಂದು ಕಮಲದ ನಾಳದ ತಂತುವಿನಲ್ಲಿ ಅಡಗಿ ನರಸಿಂಹ ಮಂತ್ರದ ಜಪದಲ್ಲಿ ತೊಡಗಿದ್ದ.

೨) ತ್ರಿಲೋಕಪತಿ ಎಂದರೆ ಇಂದ್ರ ಎಂದರ್ಥ.

೩) ಆಗ ಇಂದ್ರ ಪದವಿಯಲ್ಲಿ ಯಾರೂ ಇಲ್ಲದಂತಾದಾಗ ಭೂಲೋಕದಲ್ಲಿ ಆಯು ಎಂಬ ರಾಜನ ಮಗನಾಗಿ ರಾಜ್ಯವಾಳುತ್ತಿದ್ದ ಚಂದ್ರವಂಶದ ದೊರೆಯಾದ ನಹುಷನನ್ನು ಕರೆತಂದು, ಅವನಿಗೆ ಅವನ ಕಣ್ಣಿಗೆ ಬೀಳುವವರ ಸಕಲ ತಪಸ್ಸೂ ಮತ್ತು ಬಲಗಳೆಲ್ಲಾ ಲಭಿಸುವಂತೆ ವರ ನೀಡಿ ಆ ಪದವಿಯಲ್ಲಿ ಕೂಡಿಸಿದರು ಎಂದರ್ಥ.

ಸ ಸರ್ವಸುರವಿಪ್ರೇಂದ್ರತಪಶ್ಚ ಬಲಮಕ್ಷಯಮ್ ।
ಅವಾಪ್ಯ ವವೃಧೇ ನಿತ್ಯಂ ದರ್ಪಾದೈಚ್ಛಚ್ಛಚೀಮಪಿ ॥ ೩೪ ॥

ಅ: ಆ ನಹುಷನು ನಿತ್ಯ ಸಕಲ ಸುರರ, ಬ್ರಾಹ್ಮಣಶ್ರೇಷ್ಠರ ತಪಸ್ಸನ್ನು ಅಪಾರವಾದ ಬಲವನ್ನು ಹೊಂದಿ ಬೆಳೆದ. ಬಳಿಕ ದರ್ಪದಿಂದಾಗಿ ಶಚಿಯನ್ನೂ ಸಹ ಪಡೆಯಬಯಸಿದ.

ವಿ: ೧) ತನಗೆ ದೇವತೆಗಳು ನೀಡಿದ ವರದಂತೆ ನಹುಷ ಋಷಿ, ಮುನಿಗಳನ್ನು ನೋಡುತ್ತಾ ಅವರ ತಪಸ್ಸು ಮತ್ತು ಬಲಗಳನ್ನು ತನ್ನದಾಗಿಸಿಕೊಂಡು ಅದರ ಫಲದಿಂದಾಗಿ ತುಂಬಾ ಕೊಬ್ಬಿ ಕೊನೆಗೆ ಅದರಿಂದ ಶಚಿಯನ್ನೂ ಬಯಸಿದ. ಅವನ ಯೋಗ್ಯತೆಗೆ ಮೀರಿ ಬಲಾದಿಗಳು ಲಭಿಸಿದ್ದರಿಂದ ಅಸುರಾವೇಶ ಉಂಟಾಗಿ ಅವನು ಇಂದ್ರಪತ್ನಿಯಾದ ಶಚಿಯನ್ನು ಹೊಂದ ಬಯಸಿದ ಎಂದರ್ಥ.

೨) ಹಾಗೆ ಅವನು ಬಯಸಿದ್ದು ಕಾಮದಿಂದಲ್ಲದೇ ದರ್ಪದಿಂದಾಗಿ ಎಂಬುದನ್ನು 'ದರ್ಪಾತ್' ಎಂಬ ಪದದಿಂದ ಸೂಚಿಸಿದರು. ಶಲ್ಯ **'ವೀರ್ಯಾತ್'** (ಪರಾಕ್ರಮವನ್ನು ತೋರಲೆಂದು) ದ್ರೌಪದಿಯ ಸ್ವಯಂವರದಲ್ಲಿ ಮತ್ಸ್ಯಯಂತ್ರಭೇದನಕ್ಕೆ ಯತ್ನಿಸಿದ್ದಂತೆ, ನಹುಷ **'ದರ್ಪಾತ್'** (ದರ್ಪದಿಂದಾಗಿ) ಶಚಿಯನ್ನು ಹೊಂದ ಬಯಸಿದ. ಕಾಮದಿಂದ ಬಯಸಲಿಲ್ಲ–ವಾದ್ದರಿಂದ ಪರಮಸಾತ್ತ್ವಿಕನಾದ ಅವನಿಗೆ ಸ್ವೋತ್ತಮಸ್ತ್ರೀಕಾಮನೆಯ ಮಹಾದೋಷ ಘಟಿಸಲಿಲ್ಲ ಎಂದು ತಿಳಿಯಬೇಕು.

೩) 'ಏಧಮಾನದ್ವಿಟ್' ಎಂಬ ಶ್ರೀಹರಿಯ ನಾಮದ ಅರ್ಥವಿಶೇಷ ಇದರಿಂದ ಸ್ಪುಟ–ಪಡುವುದು.

ನಹುಷನಿಗೆ ಬ್ರಹ್ಮಶಾಪ

ಸ ಇಂದ್ರವಚನಾಚ್ಛಚ್ಯಾ ಮಹರ್ಷಿಗಣವಾಹನೇ ।
ನಿಯುಕ್ತೋ ವಂಚನಾಯೈವ ವಾಹಯಾಮಾಸ ತಾನೃಷೀನ್ ॥ ೩೩೫ ॥

ಅ: ಇಂದ್ರನ ವಚನದಂತೆ ಶಚಿಯು ನಹುಷನನ್ನು ವಂಚಿಸಲೆಂದು ಮಹಾ ಋಷಿಗಳ ಗುಂಪು ಹೊರುವ ವಾಹನದಲ್ಲಿ ಕೂಡಲು ತಿಳಿಸಿದಳು. ನಹುಷ ಆ ಋಷಿಗಳಿಂದ ತನ್ನ ವಾಹನವನ್ನು ಹೊರಿಸಿದ.

---

೩೩೪. ದೇವದಾನವಯಕ್ಷಾಣಾಮೃಷೀಣಾಂ ರಕ್ಷಸಾಂ ತಥಾ ।
ಪಿತೃಗಂಧರ್ವಭೂತಾನಾಂ ಚಕ್ಷುರ್ವಿಷಯವರ್ತಿನಾಮ್ ॥ – ಭಾರತ (ಉದ್ಯೋಗ ೧೧/೭)

೩೩೪. ಮಹತಾಂ ವನಿತಾಕಾಮಃ ಪತತ್ಯಂಧೇ ತಮಸ್ಯಲಮ್ ।
ಅನ್ಯತ್ರ ನಿರಯಂ ಯಾತಿ ದುಃಖವಾನ್ ಸ್ಯಾದ್ ವಿಪರ್ಯಯೇ ॥ – ಭಾ. ತಾ. (೧೧/೧೮/೭)

ಗುಣೋತ್ತಮಾನಾಂ ತು ಸ್ಪೃತ್ಯೈವಾಂಧಂತಮೋ ವ್ರಜೇತ್ (ತಾ. ವಿ. ೩೯/೩೬) – (ಇತ್ಯಾದಿ)

ವಿ: ೧) ನಹುಷನ ಅಧರ್ಮದ ಬೇಡಿಕೆಯ ವಿವರವನ್ನು ಮಾನಸ ಸರೋವರದಲ್ಲಿದ್ದ ಇಂದ್ರನಿಗೆ ತಿಳಿಸಲು ಬೃಹಸ್ಪತ್ಯಾಚಾರ್ಯರ ಮೂಲಕ ಇಂದ್ರ ಶಚಿಗೆ ಹೇಳಿ ಕಳಿಸಿದ ಉಪಾಯ ಅದಾಗಿತ್ತು.

೨) ಆ ರೀತಿ ಬ್ರಹ್ಮರ್ಷಿಗಳಿಂದ ಹೊರಲ್ಪಡುವ ವಾಹನದಲ್ಲಿ ಕುಳಿತು ನಹುಷ ಅಂತಹ ಹೀನ ಕಾರ್ಯಕ್ಕೆ ಹೊರಟರೆ ಅವನಿಗೆ ಅವರಿಂದ ಶಿಕ್ಷೆ ದೊರೆತು ಸಮಸ್ಯೆ ಪರಿಹಾರವಾಗುವುದು ಎಂದು ಅದರ ಆಶಯ.

ಸ ಶಚೀಪ್ರತಿಷೇಧಾರ್ಥಮಗಸ್ತ್ಯೇನ ಮಹಾತ್ಮನಾ ।
ವೇದಪ್ರಾಮಾಣ್ಯವಿಷಯೇ ಪೃಷ್ಟೋ ನೇತ್ಯಾಹ ಮೂಢಧೀಃ ।
ಪ್ರಮಾಣಮಿತಿ ತೇನೋಕ್ತಃ ಶಿರಸ್ಯೇನಂ ಪದಾऽಹನತ್ ॥ ೩೩೬ ॥

ಅ: ಮಹಾತ್ಮರಾದ ಅಗಸ್ತ್ಯರು ಶಚೀಸಂಗಮವನ್ನು ತಪ್ಪಿಸಲೆಂದು ನಹುಷನನ್ನು ವೇದ-ಪ್ರಾಮಾಣ್ಯದ ಬಗ್ಗೆ ಪ್ರಶ್ನೆ ಮಾಡಿದರು. ಬುದ್ಧಿಗೆ ಮಂಕು ಕವಿದ ಅವನು ಪ್ರಮಾಣವಲ್ಲ ಎಂದು ನುಡಿದ. ಪ್ರಮಾಣವೆಂದು ಅಗಸ್ತ್ಯರು ವಾದಿಸಿದಾಗ ನಹುಷ ಅವರ ತಲೆಯನ್ನು ಕಾಲಿನಿಂದ ಒದ್ದ.

ವಿ: ೧) ನಹುಷನಿಂದ ಆಗುವ ಅಂತಹ ಪಾಪವನ್ನು ತಪ್ಪಿಸಲೆಂದು ಅಗಸ್ತ್ಯರು ವೇದಗಳನ್ನು ಪ್ರಮಾಣವೋ ಅಲ್ಲವೋ ಎಂದು ಕೇಳಿದರು ಎಂದರ್ಥ. ವೇದಗಳು ಪ್ರಮಾಣವೆಂದು ಒಪ್ಪಿದರೆ ಅದರಲ್ಲಿನ ಪರಸ್ತ್ರೀಯಂ ಗಚ್ಛೇತ್ – ಪರಸ್ತ್ರೀಯನ್ನು ಹೊಂದಬಾರದು ಎಂದಿರುವುದರಿಂದ ಆ ಅಕಾರ್ಯವನ್ನು ಬಿಡು ಎಂದು ಹೇಳುವುದು ಅವರ ಉದ್ದೇಶವಾಗಿತ್ತು. ಅದನ್ನು ಅರಿತ ನಹುಷ ಅವುಗಳ ಪ್ರಾಮಾಣ್ಯವನ್ನೇ ಒಪ್ಪಲಿಲ್ಲ. ಆಗ ಅಗಸ್ತ್ಯರು ಅವುಗಳ ಪ್ರಾಮಾಣ್ಯವನ್ನು ಸಾಧಿಸಲೆಂದು

---

೩೩೬. ವೇದಪ್ರಾಮಾಣ್ಯವಿಷಯ ಇತ್ಯತ್ರ ವೇದಃ ಪ್ರಮಾಣಮಿತಿ ವದತಿ ಚೇತ್ ನ ಪರಸ್ತ್ರಿಯಂ ಗಚ್ಛೇದಿತಿ ಶ್ರುತ್ಯೈವ ಶಚೀಗಮನಾಶಾಂ ನಿವಾರಯಾಮಿ। ಅಪ್ರಮಾಣಮಿತಿ ವದತಿ ಚೇತ್ ನೇತಿ ವದಾಮಿ। ತದಾऽಸೌ ಕುಪಿತೋ ಮಯಿ ದ್ರೋಹಂ ಕರೋತಿ ಚೇತ್ ಶಾಪಂ ದಾಪಯಾಮಿ। ಅತ ಉಭಯಥಾऽಪಿ ಶಚೀಸಂಗಮಂ ನಿವಾರಯಾಮೀತಿ ಬುದ್ಧ್ಯಾ ಪ್ರಶ್ನಾಂತರಂ ವಿಹಾಯ ವೇದಪ್ರಾಮಾಣ್ಯವಿಷಯೇ ಪ್ರಶ್ನಃ ಕೃತ ಇತಿ ಭಾವಃ। ಅತ ಏವ ''ನಿಯುಕ್ತೋ ವಂಚನಾಯೈವ''ಇತಿ ಪ್ರಾಗುಕ್ತಮ್। ಉಕ್ತವಿಧಯಾ ಋಷಿಮುಖಾತ್ ವಂಚನಾಯೇತ್ಯರ್ಥಃ। ನ ತು ಋಷಿವಾಪನೇ ಸತಿ ಅಹಮಾಯಾಸ್ಯಾಮೀತಿ ಏವಕಾರಾರ್ಥಃ ॥ – (ವಾ.)

೩೩೬. ಏತೇ ಪ್ರಮಾಣಂ ಭವತ ಉತಾಹೋ ನೇತಿ ವಾಸವ ।
ನಹುಷೋ ನೇತಿ ತಾನಾಹ ತಮಸಾ ಮೂಢಚೇತನಃ ॥ – ಭಾರತ (ಉದ್ಯೋಗ. ೧೭೯/೨೧)

ಹೊರಟಾಗ ನಹುಷ ಕೆರಳಿ ಅವರನ್ನು ತನ್ನ ಕಾಲಿನಿಂದ ಒದ್ದ ಎಂದರ್ಥ. ಪರಸ್ತ್ರೀಗಮನದಂತಹ ಪಾಪ ಎಷ್ಟು ಭಯಂಕರವಾದ ಮತ್ತೊಂದು ಪಾತಕಕ್ಕೆ ಕಾರಣವಾಗುವುದು ಎಂಬುದಕ್ಕೆ ನಿದರ್ಶನ.

೨) ವೇದಪ್ರಾಮಾಣ್ಯ ಒಪ್ಪದವರಿಗೆ ದೊರೆಯುವ ಮಹತ್ತರ ಶಿಕ್ಷೆ ಈ ಪ್ರಸಂಗದಿಂದ ಸೂಚಿತ. ವೇದಪ್ರಾಮಾಣ್ಯದ ಸಮರ್ಥನೆಯ ವಿವರಗಳನ್ನು ಶ್ರೀಮದಾಚಾರ್ಯರ ವಿಷ್ಣುತತ್ತ್ವ–ನಿರ್ಣಯ, ಗೀತಾಭಾಷ್ಯ, ಅನುವ್ಯಾಖ್ಯಾನ ಗ್ರಂಥಗಳಲ್ಲಿ ಕಾಣಬಹುದು.

ತದಾ ಭೃಗುಂ ತಸ್ಯ ಜಟಾಸು ಲೀನಂ
ಕದಾऽಪಿ ತಸ್ಯಾಕ್ಷಿಪಥಂ ನ ಯಾತಮ್ ।
ಆವಿಶ್ಯ ಕಂಜಪ್ರಭವಃ ಶಶಾಪ
ವ್ರಜಾಶು ಪಾಪಾಜಗರತ್ವಮೇವ ॥ ೩೩೭ ॥

ಅ: ಆಗ ಅಗಸ್ತ್ಯರ ಜಟೆಯಲ್ಲಿ ಅಡಗಿದ್ದ ಅವನ ಕಣ್ಣಿಗೆ ಎಂದೂ ಬಿದ್ದಿರದಿದ್ದ ಭೃಗುವನ್ನು ಬ್ರಹ್ಮ ಪ್ರವೇಶಿಸಿ ಶಾಪವಿತ್ತ : 'ಎಲವೊ ಪಾಪಿ! ನೀನು ಕೂಡಲೇ ಅಜಗರವಾಗು'.

ವಿ: ೧) ನಹುಷ ಆ ವೇಳೆಗೆ ಅಗಸ್ತ್ಯಾದಿಮುನಿಗಳನ್ನೆಲ್ಲಾ ಕಣ್ಣಿಂದ ಕಂಡು ಅವರ ತಪಸ್ಸು, ಬಲ ಮೊದಲಾದವುಗಳನ್ನು ತನ್ನದಾಗಿಸಿಕೊಂಡಿದ್ದ. ಆದ್ದರಿಂದ ಅವರಾರಿಗೂ ಶಾಪ ನೀಡುವ ಶಕ್ತಿಯೂ ಇಲ್ಲದಂತಾಗಿತ್ತು. ಆದರೆ ಭೃಗುಮುನಿ ಅಗಸ್ತ್ಯರ ಜಟೆಯಲ್ಲಿ ಅಡಗಿ ನಹುಷನ ಕಣ್ಣಿಗೆ ಕಾಣದಂತೆ ಇದ್ದರಿಂದ ಅವರಿಗೆ ಶಾಪ ಕೊಡಲು ಸಾಧ್ಯವಾಯಿತು.

೨) ಆದರೂ, ಸಮಸ್ತ ಋಷಿ ಮುನಿಗಳ ಬಲ ಹೊಂದಿದ್ದ ನಹುಷನನ್ನು ಶಪಿಸುವುದು ಭೃಗುಮುನಿಯಿಂದಾಗದು ಎಂದು ಬ್ರಹ್ಮ ಅವನೊಳಗೆ ಪ್ರವೇಶಿಸಿ ತಾನೇ ಶಾಪ ನೀಡಿದ ಎಂದರ್ಥ.

---

೩೩೭. ತದಾ ಭೃಗುಂ ತಸ್ಯ ಜಟಾಸು ಲೀನಮಿತ್ಯತ್ರ ಬಹುಮಹರ್ಷೀಣಾಂ ದೇವಾನಾಂ ಚ ತಪಸಾ ಬಲೇನ ಚಾಭಿವೃದ್ಧಂ ನಹುಷಂ ಕೇವಲಂ ಭೃಗುಶಾಪೋऽಪಿ ಸ್ಪೃಷ್ಟುಂ ನ ಶಕ್ನೋತೀತಿ ಧಿಯಾ ಭೃಗುಹೃದಯಸ್ಥಃ ಬ್ರಹ್ಮೈವ ಶಶಾಪೇತಿ ಜ್ಞೇಯಮ್। ನಿರಪರಾಧಿನಃ ಶಾಪದಾನಾಯೋಗಾತ್ ಶಿರಸ್ಯೇನಂ ಪದಾऽಹನದಿತ್ಯುಕ್ತಮ್। ಪದಾ ಶಿರಸಿ ತಾಡನೇ ಶಿರೋಜಟಾಂತಸ್ಥಿತಭೃಗೋಸ್ತದಂತರ್ಗತಬ್ರಹ್ಮಣಸ್ತಾಡನಮಭೂತ್। ಅತೋऽಪರಾಧಿನಿ ನೃಪೇ ಶಾಪೋऽಪ್ಯುಚಿತ ಇತಿ ಭಾವಃ ॥ – (ವಾ.)

೩೩೭. ಭೃಗುಸ್ತಸ್ಯ ಜಟಾಂತಸ್ಥೋ ಬಭೂವ ಹ್ಯೃಷಿತೋ ಭೃಶಮ್ ।
ನ ಚಾಪಿ ದರ್ಶನಂ ತಸ್ಯ ಚಕಾರ ಸ ಭೃಗುಸ್ತದಾ ।
ವರದಾನಪ್ರಭಾವಜ್ಞೋ ನಹುಷಸ್ಯ ಮಹಾತ್ಮನಃ ॥ – ಭಾರತ (ಅನುಶಾಸನ. ೧೦೦/೨೦)

ತಸ್ಮಿನ್ ಶಿರಸ್ಯಭಹತೇ ಯ ಜಟಾಂತರ್ಗತೋ ಭೃಗುಃ ।
ಶಶಾಪ ಬಲವತ್ಕ್ರುದ್ಧೋ ನಹುಷಂ ಪಾಪಚೇತಸಮ್ ॥ – ಭಾರತ (ಅನುಶಾಸನ. ೧೦೦/೨೩)

ಅಷ್ಟು ಜನ ಋಷಿ, ಮುನಿಗಳ ತಪಸ್ಸಿನ ಬಲವಿದ್ದವನಿಗೂ ಶಾಪ ನೀಡುವ ಸಾಮರ್ಥ್ಯದ ಬ್ರಹ್ಮ ದೇವರು ಉಳಿದೆಲ್ಲ ಋಷಿ, ಮುನಿಗಳಿಗಿಂತಲೂ ಶ್ರೇಷ್ಠರಾದವರು ಎಂದು ಸ್ಪಷ್ಟವಾಗುವುದು.

೩) ಅಗಸ್ತ್ಯನ ತಪಸ್ಸನ್ನೆಲ್ಲಾ ನಹುಷ ತೆಗೆದುಕೊಂಡಿದ್ದರಿಂದ ಅಂತಹ ತಪೋಹೀನರಲ್ಲಿ ನೇರವಾಗಿ ಬ್ರಹ್ಮನ ಆವೇಶವಾಗುವ ಯೋಗವೂ ಇಲ್ಲವಾಗಿತ್ತು. ಅದರಿಂದಾಗಿಯೇ ಭೃಗುಮುನಿ–ಗಳಲ್ಲಿ ಬ್ರಹ್ಮದೇವರು ಆವೇಶ ಹೊಂದಿದರು ಎಂದು ತಿಳಿಯಬೇಕು.

೪) ಸಾಮರ್ಥ್ಯವಿಲ್ಲದಿದ್ದರೂ ತಪೋಬಲವನ್ನು ಉಳಿಸಿಕೊಂಡಿದ್ದಲ್ಲಿ ಹೀಗೆ ದೊಡ್ಡವರ ಅನುಗ್ರಹಕ್ಕೆ ಪಾತ್ರರಾಗಿ ಪುಣ್ಯ ಭಾಗಿಗಳಾಗಬಹುದು ಎಂಬುದಕ್ಕೆ ಭೃಗುಮುನಿ ನಿದರ್ಶನ–ವಾದರು.

೫) ನಹುಷ ಮೇಣಿಯಲ್ಲಿ ಕುಳಿತು ಋಷಿಗಳನ್ನು ಶಚಿಯ ಬಳಿಗೆ 'ಸರ್ಪ ಸರ್ಪ' ಎಂದು ನುಡಿದುದರ ಫಲವಾಗಿ ಸರ್ಪಯೋನಿಯಲ್ಲೇ ಹುಟ್ಟಬೇಕಾಯಿತು ಎಂಬುದು ಇಲ್ಲಿಯ ಮತ್ತೊಂದು ವಿಶೇಷ.

ಶಾಪಮೋಚನೆಯ ಉಪಾಯ

ಷಷ್ಠೇ ಕಾಲೇ ಯಸ್ತ್ವಯಾऽऽಸಾದಿತಃ ಸ್ಯಾತ್
ಸ ತೇ ವಶಂ ಯಾತು ಬಲಾಧಿಕೋऽಪಿ ।
ಯದಾ ಗೃಹೀತಂ ಪುರುಷಂ ನಿಹಂತುಂ
ನ ಶಕ್ಷ್ಯಸೇ ಯದಿ ಸ ತ್ವದ್ಗೃಹೀತಃ ।
ಶಕ್ತೋऽಪಿ ನಾತ್ಮಾನಮಭಿಪ್ರಮೋಚಯೇತ್
ತದಾऽಸ್ಯ ಸ್ಯಾತ್ ತ್ವತ್ತಪೋऽಗ್ರ್ಯಂ ಬಲಂ ಚ ॥ ೩೩೮ ॥

ಅ: 'ಷಷ್ಠಕಾಲದಲ್ಲಿ ನಿನಗೆ ಯಾರು ಸಿಗುವರೋ ಅವನು ನಿನಗಿಂತ ಮಹಾ ಬಲಿಷ್ಠ-ನಾದರೂ ನಿನ್ನ ವಶಕ್ಕೆ ಸಿಲುಕಲಿ, ಹಾಗೆ ಹಿಡಿದ ವ್ಯಕ್ತಿಯನ್ನು ನಿನಗೆ ಎಂದು ಕೊಲ್ಲಲು ಅಸಾಧ್ಯವಾಗುವುದೋ ಮತ್ತು ಶಕ್ತನಾಗಿದ್ದರೂ ಆ ವ್ಯಕ್ತಿ ತನ್ನನ್ನು ಬಿಡಿಸಿಕೊಳ್ಳಲು ಯತ್ನಿಸುವು-

---

೩೩೮. ಷಷ್ಠೇ ಕಾಲೇ ಯಸ್ತ್ವಯಾऽऽಸಾದಿತಃ ಸ್ಯಾದಿತ್ಯತ್ರ ಸಾರ್ಧದಿನದ್ವ್ಯಾಂತಿಮರಾತ್ರೌ ॥ – (ವಾ.)

೩೩೮. ನ ಹಿ ಮುಚ್ಯೇತ ಕಶ್ಚಿತ್ ಕಥಂಚಿತ್ ಪ್ರಗ್ರಹಂ ಗತಃ ।
ಗಜೋ ವಾ ಮಹಿಷೋ ನಾऽಪಿ ಷಷ್ಠೇ ಕಾಲೇ ನರೋತ್ತಮ ॥ – ಭಾರತ (ವನ. ೧೭೯/೧೬)
ಸತ್ವಭ್ರಂಶೋऽಧಿಕಸ್ಯಾಪಿ ಸರ್ವಸ್ಯಾಶು ಭವಿಷ್ಯತಿ ॥ – ಭಾರತ (ವನ. ೧೭೯/೨೨)

೩೩೮. ಷಷ್ಠೇ ಕಾಲೇ – ಸಾಯಂಕಾಲೇ । – (ಜ.)

ದಿಲ್ಲವೋ ಆಗ ನಿನ್ನೊಳಗಿರುವ ಹೆಚ್ಚಿನ ತಪಸ್ಸು, ಉತ್ತಮವಾದ ಬಲ ಎಲ್ಲವೂ ಅವನಿಗೆ ಸೇರುವುದು'.

ವಿ: ೧) ಷಷ್ಠ ಕಾಲವೆಂದರೆ ಹಗಲನ್ನು ಎಂಟು ಭಾಗ ಮಾಡಿದರೆ ಅದರಲ್ಲಿ ಆರನೇ ಭಾಗ ಎಂದು, ಮೂರನೆಯ ದಿನದ ಅಂತಹ ಆರನೆಯ ಕಾಲ ಎಂದು ವ್ಯಾಖ್ಯಾನಗಳಲ್ಲುಂಟು.

೨) ಅಜಗರವ್ರತದ ಪಾರಣ ಕಾಲ ಎಂಬ ಅರ್ಥ * ವರದರಾಜೀಯದಲ್ಲಿದೆ.

ಸರ್ವದೇವಮುನೀನಾಂ ಯತ್ತಪಸ್ತ್ವಾಂ ಸಮುಪಾಶ್ರಿತಮ್ ।
ತಚ್ಚ ಸರ್ವಂ ತಮೇವೈತಿ ನಾತ್ರ ಕಾರ್ಯಾ ವಿಚಾರಣಾ ॥ ೩೩೯ ॥

ಅ: 'ನಿನ್ನೊಳಗೆ ಸೇರಿರುವ ಸಕಲ ದೇವತೆಗಳ ಹಾಗೂ ಮುನಿಶ್ರೇಷ್ಠರುಗಳ ತಪಸ್ಸೆಲ್ಲಾ ಸಂಪೂರ್ಣವಾಗಿ ಅವನಿಗೇ ಸೇರಿಹೋಗುವುದು, ಇದರ ಬಗ್ಗೆ ವಿಚಾರ ಮಾಡಬೇಕಿಲ್ಲ'.

ವಿ: ನಹುಷನೊಳಗೆ ಸೇರಿದ ಅವನ ಯೋಗ್ಯತೆಗೆ ಮೀರಿದ ಅಂತಹ ಅಗಾಧ ತಪಸ್ಸೆಲ್ಲಾ ಆ ವ್ಯಕ್ತಿಗೆ ಸೇರುವುದು. ಆಗ ಅಧಿಕ ಪುಣ್ಯದಿಂದಾಗಿ ಅವನಿಗೆ ಒದಗಿದ ದೋಷ ಪರಿಹಾರ–ವಾಗುವುದು ಎಂದರ್ಥ. ಅಜೀರ್ಣವಾದವನಿಗೆ ವಾಂತಿ ಮಾಡಿಸಿದಂತೆ ಈ ಪ್ರಸಂಗ ಎಂದು ತಿಳಿಯಬೇಕು.

ಯದಾ ಪ್ರಶ್ನಾಂಸ್ತ್ವದೀಯಾಂಶ್ಚ ಕಶ್ಚಿತ್ ಪರಿಹರಿಷ್ಯತಿ ।
ದಿವಂ ಗಂತಾಸಿ ಚ ತದಾ ವಿಸೃಜ್ಯಾಜಗರೀಂ ತನುಮ್ ।
ಸ್ಮೃತಿಶ್ಚ ಮತ್ಪ್ರಸಾದೇನ ಸರ್ವದಾ ತೇ ಭವಿಷ್ಯತಿ ॥ ೩೪೦ ॥

ಅ: 'ಯಾವಾಗ ನಿನ್ನ ಪ್ರಶ್ನೆಗಳನ್ನು ಒಬ್ಬನು ಉತ್ತರಿಸುವನೋ ಆಗ ನೀನು ಅಜಗರ ದೇಹವನ್ನು ತೊರೆದು ಸ್ವರ್ಗವನ್ನು ಸೇರುವಿ, ನನ್ನ ಅನುಗ್ರಹದಿಂದ ನಿನಗೆ ಪೂರ್ವಜನ್ಮದ ಸ್ಮರಣೆ ಸದಾ ಇರುವುದು'.

---

* ಷಷ್ಠೇ ಕಾಲೇ ಅಜಗರವ್ರತಪಾರಣಾಕಾಲೇ । – (ವ.)

೩೩೯. ತಮೇವೈತಿ ಇತ್ಯತ್ರ ತಮೇವ= ಕ್ಷಮಾವಂತಮೇವ ॥ – (ವಾ.)

೩೪೦. ಯಸ್ತುತೇ ವ್ಯಾಹೃತಾನ್ ಪ್ರಶ್ನಾನ್ ಪ್ರತಿಬ್ರೂಯಾದ್ವಿಭಾಗವಿತ್ ।
ಸ ತ್ವಾಂ ಮೋಕ್ಷಯಿತಾ ಶಾಪಾದಿತಿ ಮಾಮಬ್ರವೀದೃಷಿಃ ॥ – ಭಾರತ (ವನ. ೧೭೯/೨೧)

೩೪೦. ಪತಿತೋಽಪಿ ಮಹಾರಾಜ ಭೂತಲೇ ಸ್ಮೃತಿಮಾನಭೂತ್ ॥ – ಭಾರತ (ಆನು. ೧೦೦/೨೮)

ವಿ: ೧) ಬ್ರಹ್ಮದೇವರ ಈ ಮಾತಿನಲ್ಲಿ ಹಾಗೆ ಸಿಕ್ಕುವ ಬಲಾಧಿಕನೇ ಬೇರೆ, ಪ್ರಶ್ನೆಗಳಿಗೆ ಉತ್ತರ ನೀಡಿ ಅಜಗರಯೋನಿಯಿಂದ ಬಿಡುಗಡೆ ಮಾಡುವವನೇ ಬೇರೆ ಎಂಬ ಅಂಶವೂ ಸೂಚಿತ–ವಾಗಿರುವುದನ್ನು ಗಮನಿಸಬೇಕು.

೨) ಅಂತಹ ಬಲಾಧಿಕ ಭೀಮ, ಪ್ರಶ್ನೆಗೆ ಉತ್ತರ ನೀಡುವ ವ್ಯಕ್ತಿ ಯುಧಿಷ್ಠಿರ ಎಂದು ಮುಂದೆ ತಿಳಿಯುವುದು.

ಭೃಗುದೇಹಗತೇನೈವಂ ಶಪ್ತಃ ಕಮಲಯೋನಿನಾ ।
ಪಪಾತಾಜಗರೋ ಭೂತ್ವಾ ನಹುಷಃ ಕ್ಷಣಮಾತ್ರತಃ ॥ ೩೪೧ ॥

ಅ: ಭೃಗು ದೇಹದೊಳಗಿದ್ದ ಬ್ರಹ್ಮನಿಂದ ಹಾಗೆ ಶಪಿಸಲ್ಪಟ್ಟ ನಹುಷ ಕ್ಷಣಮಾತ್ರದಲ್ಲಿ ಅಜಗರವಾಗಿ ಭೂಮಿಯಲ್ಲಿ ಬಿದ್ದ.

ವೃತ್ರವಧೆಯಿಂದ ಇಂದ್ರನಿಗೆ ಪುಣ್ಯವೃದ್ಧಿ

ಇಂದ್ರೋಽಪ್ಯವಾಪ ಸ್ವಂ ಸ್ಥಾನಮಿಷ್ಟ್ವಾ ವಿಷ್ಣುಂ ವಿಪಾಪಕಃ ।
ಧರ್ಮವೃದ್ಧ್ಯರ್ಥಮೇವೈತತ್ಪಾಪಮಾಸೀಚ್ಛಚೀಪತೇಃ ॥ ೩೪೨ ॥

ಅ: ಇಂದ್ರನೂ ಸಹ ವಿಷ್ಣುವನ್ನು ಆರಾಧಿಸಿ ತನ್ನ ಪಾಪವನ್ನು ಕಳೆದುಕೊಂಡು ತನ್ನ ಸ್ಥಾನವನ್ನು ಮರಳಿ ಪಡೆದ. ಇಂದ್ರನಿಗೆ ಆ ವೃತ್ರಹತ್ಯೆಯ ಪಾಪ ಪುಣ್ಯವೃದ್ಧಿಗೆ ಸಾಧನವಾಯಿತು.

ವಿ: ೧) ಆ ವೇಳೆಗೆ ತಪಸ್ಸನ್ನು ಆಚರಿಸಿ ಇಂದ್ರ ತನ್ನ ಪಾಪವನ್ನು ಕಳೆದುಕೊಂಡಿದ್ದರಿಂದ ಪುನಃ ಇಂದ್ರ ಪದವಿಯನ್ನು ಅಲಂಕರಿಸಿದನು ಎಂದರ್ಥ. ಆ ವೇಳೆಗೆ ಒಟ್ಟು ಒಂದು ಸಾವಿರ ವರ್ಷಗಳು ಕಳೆದಿದ್ದವು ಎಂಬ ಉಲ್ಲೇಖ ಶ್ರೀಮದ್ಭಾಗವತದಲ್ಲಿದೆ (**'ವರ್ಷಾಣಿ ಸಾಹಸ್ರಮಲಕ್ಷಿತೋಽಂತಃ ಸ ಚಿಂತಯನ್ ಬ್ರಹ್ಮವಧಾದ್ವಿಮೋಕ್ಷಮ್'** – ೬/೧೩/೧೫). ನಹುಷನ ಆಳ್ವಿಕೆ ಆ ಸಾವಿರ ವರ್ಷ–ಗಳವರೆಗೆ ನಡೆದಿತ್ತು. ಇಂದ್ರನು ತನ್ನ ಪದವಿಗೆ ಮರಳಲೂ ಸಹ ಈ ಪ್ರಸಂಗ ಕಾರಣವಾಯಿತು ಎಂದು ತಿಳಿಯಬೇಕು. ಇಲ್ಲವಾದಲ್ಲಿ ಅಂತಹ ಸಕಲ ಋಷಿ ಮುನಿಗಳ ತಪಸ್ಸಿನಿಂದ ದೃಪ್ತನಾಗಿದ್ದ ನಹುಷನನ್ನು ಪದಚ್ಯುತನಾಗಿಸುವುದು ಅಷ್ಟು ಸುಲಭದ ಕಾರ್ಯವೇನೂ ಆಗುತ್ತಿರಲಿಲ್ಲ. ಭಗವತ್ಸಂಕಲ್ಪ ಎಷ್ಟು ವಿಚಿತ್ರವಾದುದು ಎಂಬುದನ್ನು ಇಂತಹ ಪ್ರಸಂಗಗಳಿಂದ ತಿಳಿಯಬಹುದು.

---

೩೪೨. ''ತದಧಿಗಮ ಉತ್ತರಪೂರ್ವಾಘಯೋರಶ್ಲೇಷವಿನಾಶೌ'' ಇತಿ ಸೂತ್ರಾತ್ ಅಪರೋಕ್ಷಜ್ಞಾನಿನ ಇಂದ್ರಸ್ಯ ಪಾಪಲೇಪಾಯೋಗಾತ್ ಪಾಪಮ್ಯಾಜೇನ ಸಹಸ್ರವರ್ಷಪರ್ಯಂತಂ ನೃಸಿಂಹಧ್ಯಾನಾಖ್ಯಮಹಾಪುಣ್ಯಮೇವ ಲಬ್ಧಮಿತಿ ಭಾವೇನಾಹ ಧರ್ಮವೃದ್ಧ್ಯರ್ಥಮೇವೇತಿ ॥ – (ವಾ.)

೨) ಅಪರೋಕ್ಷಜ್ಞಾನಿಗಳಿಗೆ ಜ್ಞಾನೋತ್ತರಕಾಲದ ಪಾಪಕರ್ಮಗಳ ಲೇಪವಿಲ್ಲ. ಇಂದ್ರ ಶ್ರೇಷ್ಠ ಅಪರೋಕ್ಷಜ್ಞಾನಿ, ವೃತ್ರವಧೆಯಂತೂ ಶ್ರೇಷ್ಠ ಪುಣ್ಯಕಾರ್ಯ. ಎಂದಮೇಲೆ ವೃತ್ರವಧೆ–ಯಿಂದ ಅವನಿಗೆ ಪಾಪ ಒದಗಿದ್ದು ಹೇಗೆ ಎಂಬ ಪ್ರಶ್ನೆಗೆ ಇಲ್ಲಿ ಉತ್ತರವಿದೆ. ಅದು ಇಂದ್ರನಿಗೆ ವಿಶೇಷ ಪುಣ್ಯ ವೃದ್ಧಿಗೆ ಕಾರಣವಾಗುವಂತಹ ವಿಶೇಷ ರೀತಿಯ ಪಾಪ ಎಂಬುದು ಇದರ ಅರ್ಥ.

೩) ಯಮ ಸ್ವೇಚ್ಛೆಯಿಂದ ಮಾಂಡವ್ಯರ ಶಾಪವನ್ನು ಸ್ವೀಕರಿಸಿ ವಿದುರನಾಗಿ ಜನಿಸಿ ವಿಶೇಷವಾಗಿ ಕೃಷ್ಣ ಸೇವೆ ಮಾಡಲು ಅದನ್ನು ಸಾಧನವನ್ನಾಗಿ ಮಾಡಿಕೊಂಡಂತೆ ಈ ಪ್ರಸಂಗ ಎಂದು ತಿಳಿಯಬೇಕು.

ನಹಿ ಲೋಕಾವನಂ ಪಾಪಂ ತ್ರೈಲೋಕ್ಯೇಶಸ್ಯ ವಜ್ರಿಣಃ ।
ವೃತ್ರಂ ಹತ್ವಾ ಮಹಾನಾಸೇತ್ಯಾದಿವೇದಪದಂ ಚ ಯತ್ ॥ ೩೪೩ ॥

ಅ: ಮೂರು ಲೋಕಗಳ ಒಡೆಯನಾದ ಇಂದ್ರನಿಗೆ ವೃತ್ರಾಸುರನನ್ನು ಸಂಹರಿಸಿ ಲೋಕ–ವನ್ನು ಪಾಲಿಸಿದ್ದು ಪಾಪವೆಂತಾಗುವುದು? ವೃತ್ರನನ್ನು ಕೊಂದು ಇಂದ್ರ ಮಹತ್ತರವಾದ ಪುಣ್ಯವನ್ನೇ ಗಳಿಸಿದ ಎಂದು ವೇದವಚನವೂ ಇದೆಯಷ್ಟೆ!

ವಿ: ೧) ವೃತ್ರ ಬ್ರಾಹ್ಮಣಪುತ್ರನಾದ್ದರಿಂದ ಅವನ ವಧೆ ಬ್ರಹ್ಮಹತ್ಯೆಯೆಂಬುದು ಲೋಕ–ದೃಷ್ಟಿಯ ಪಾಪ; ಶಾಸ್ತ್ರದೃಷ್ಟಿಯಲ್ಲಿ ಅದು ಮಹತ್ತರವಾದ ಪುಣ್ಯಕಾರ್ಯವೇ ಆಗುವುದು. ಇಂದ್ರದೇವರು ಹಾಗೆ ಅಡಗಿರಲು ಕಾರಣವಾಗಿದ್ದು ಅವರ ಪ್ರಾರಬ್ಧದ ಫಲ್ಲ ಎಂದಷ್ಟೇ ತಿಳಿಯ–ಬೇಕು. ಗೌತಮಶಾಪದಿಂದ ಅವರು ಸಹಸ್ರಾಕ್ಷರಾದದ್ದು ಎಂತೋ ಅಂತೆಯೇ ಎಂದರ್ಥ.

---

೩೪೩. ನ ಹಿ ಲೋಕಾವನಂ ಪಾಪಮಿತ್ಯತ್ರ ಲೋಕಾನಾಂ ಅವನಂ ರಕ್ಷಣಂ ಯಸ್ಮಾತ್ತತ್ ಲೋಕಾವನಂ= ವೃತ್ರಹನನಮ್। ಲೋಕಾವನಂ ಪಾಪಂ ನ ಹಿ= ಲೋಕೋಪಕಾರಾಯ ಕೃತತ್ವಾತ್ ಪಾಪಂ ನಹೀತ್ಯರ್ಥಃ ॥ –(ವಾ.)

೩೪೩. ಇತ್ಯಾದಿ ವೇದಪದಮಿತ್ಯತ್ರ ವೇದಾನಾಂ ಪದಾನಿ ಯಸ್ಮಿನ್ ತತ್ ವೇದಪದಂ= ವೇದವಾಕ್ಯಮಿತ್ಯರ್ಥಃ ॥ –(ವಾ.)

೩೪೩. 'ವೃತ್ರಂ ಹತ್ವಾ ಪುರೇಂದ್ರಸ್ತು ಮಹೇಂದ್ರತ್ವಾಭಿಪತ್ತಯೇ ।
ಮಹಾವ್ರತಂ ಕರ್ಮ ಚಕ್ರೇ..... ॥ – ಐತರೇಯಭಾಷ್ಯ (೨/೨/೩)

೩೪೩. ವೃತ್ರಂ ಹತ್ವಾ ಮಹಾನಾಸೇತ್ಯೇನೇನ 'ಇಂದ್ರೋ ವೈ ವೃತ್ರಂ ಹತ್ವಾ ಮಹಾನಭವತ್' ಇತಿ ಶ್ರುತಿರ್ಗೃಹೀತಾ । ವೇದಪದಂ ವೇದವಚನಂ ಯದ್ಯಸ್ಮಾತ್ ತಸ್ಮಾತ್ ಧರ್ಮವೃದ್ಧ್ಯರ್ಥಮಾಸೇತಿ ಸಂಬಂಧಃ। –(ಜ.)

೨) ವೈದ್ಯ ಮಾಡುವ ಶಸ್ತ್ರಚಿಕಿತ್ಸೆ ಮೇಲ್ನೋಟಕ್ಕೆ ಹಿಂಸೆಯಂತೆ ಕಂಡರೂ ಅದು ರೋಗದ ಹಿಂಸೆಯನ್ನು ಪರಿಹರಿಸುವ ಪುಣ್ಯಕಾರ್ಯವೇ ಆಗಿರುವಂತೆ ಈ ವೃತ್ರಹತ್ಯಾಕಾರ್ಯ ಎಂದು ತಿಳಿಯ–ಬೇಕು. ವೈದ್ಯನು ಶಸ್ತ್ರಚಿಕಿತ್ಸೆಯ ಬಳಿಕ ಕೈತೊಳೆದು ಶುದ್ಧನಾಗುವಂತೆ ಈ ಪ್ರಾಯಶ್ಚಿತ್ತಕಾರ್ಯ ಎಂದೂ ತಿಳಿಯಬೇಕು.

ಕ್ವಚಿತ್ ಪಾಪಂ ಚ ಪುಣ್ಯಾನಾಂ ವೃದ್ಧಯೇ ಭವತಿ ಸ್ಫುಟಮ್ ।
ವೃತ್ರಹತ್ಯಾ ಯಥೇಂದ್ರಸ್ಯ ಜಾತಾ ಧರ್ಮಸ್ಯ ವೃದ್ಧಯೇ ॥ ೩೪೪ ॥

ಅ: ಕೆಲವೊಮ್ಮೆ ಪಾಪವೂ ಸಹ ಪುಣ್ಯಗಳ ವೃದ್ಧಿಗೆ ಕಾರಣವಾಗುವುದು ಸ್ಪಷ್ಟ. ಇಂದ್ರ ಮಾಡಿದ ವೃತ್ರಹತ್ಯೆ ಪುಣ್ಯವೃದ್ಧಿಗೆ ಕಾರಣವಾದಂತೆ.

ದೇವಾನಾಂ ವಾ ಮುನೀನಾಂ ವಾ ಭವೇದೇವಂ ನ ವೈ ನೃಣಾಮ್ ।
ಪಾಪಂ ಯತ್ ಪುಣ್ಯಮೇವೈತದಸುರಾಣಾಂ ವಿಲೋಮತಃ ।
ಏವಂ ಸ್ಕಾಂದೇ ಹಿ ವಚನಂ ನ ಪಾಪಂ ತಚ್ಛಚೀಪತೇಃ ॥ ೩೪೫ ॥

ಅ: ಇದು ಹೀಗಾಗುವುದು ದೇವತೆಗಳಿಗಾಗಲೀ, ಮುನಿಗಳಿಗಾಗಲೀ ಮಾತ್ರ. ಮನುಷ್ಯ-ರಿಗೆ ಸರ್ವಥಾ ಅಲ್ಲ. ಅವರಿಗೆ ಪಾಪವು ಪಾಪವೇ, ಪುಣ್ಯವು ಪುಣ್ಯವೇ. ಅದರಂತೆ ಕೆಲವೊಮ್ಮೆ ಅಸುರರು ಮಾಡುವ ಪುಣ್ಯವೂ ಸಹ ಅವರ ಪಾಪವೃದ್ಧಿಗೇ ಕಾರಣವಾಗುವುದು. ಹೀಗೆ ಸ್ಕಂದ ಪುರಾಣದಲ್ಲಿ ಹೇಳಲ್ಪಟ್ಟಿದೆ, ಆದ್ದರಿಂದ ಇದು ಶಚೀಪತಿಯಾದ ಇಂದ್ರನಿಗೆ ಪಾಪವಾಗಲಿಲ್ಲ.

ವಿ: ೧) ವೃತ್ರಹತ್ಯೆ ಪುಣ್ಯಸಾಧನವಾಯಿತೇ ಹೊರತು ಪಾಪ ಸಾಧನವಾಗಲಿಲ್ಲ ಎಂಬ ವೇದದ ವಚನವನ್ನು ಸ್ಕಂದಪುರಾಣದ ಮಾತಿನಿಂದ ಸ್ಫುಟಪಡಿಸಿರುವರು (೧/೧೦೬).

೨) ಈ ಅಧಿಕಪುಣ್ಯದ ಪ್ರಸಂಗ ದೇವತೆಗಳು, ಮುನಿಗಳಂತಹ ಉತ್ತಮಾಧಿಕಾರಿಗಳಿಗೆ ಮಾತ್ರವೇ ಹೊರತು ಸಾಮಾನ್ಯರಿಗಲ್ಲ ಎಂಬ ವಿಶೇಷಾಂಶವೂ ಇಲ್ಲಿ ಉಕ್ತವಾಗಿದೆ.

---

೩೪೪. ಧರ್ಮೋ ಭವತ್ಯಧರ್ಮೋಽಪಿ ಕೃತೋ ಭಕ್ತ್ಯಸ್ತವಾಚ್ಯುತ ।

೩೪೫. ನೃಣಾಂ ತರ್ಹಿ ಕಥಮಿತ್ಯತ ಆಹ ಪಾಪಂ ಯದಿತಿ। ನೃಣಾಂ ತು ಯತ್ಪಾಪಂ ತತ್ಪಾಪಮೇವ। ಯತ್ಪುಣ್ಯಂ ತತ್ಪುಣ್ಯಮೇವ ॥ – (ವಾ.)

೩೪೫. ನಾಶಕ್ಯಂ ದೇವತಾನಾಂ ತು ಯದನ್ಯೈಃ ಶಕತಂ ಕ್ವಚಿತ್ ।
ಶಕ್ತಾಽಪಿ ನ ಕುರ್ವಂತಿ ಯದನ್ಯವಿಹಿತಂ ಬುಧಾಃ ॥ ಇತಿ ಬ್ರಾಹ್ಮೇ। – ಭಾ.ತಾ. (೪/೮/೭೨)

೩) ದೇವತೆಗಳಿಗೆ ಪಾಪಕರ್ಮ ಪುಣ್ಯಕರ್ಮ ಆಗಲು ಅವರು ಮೂಲತಃ ವಿಷ್ಣು–ಪ್ರೀತ್ಯರ್ಥವಾಗಿ ಪರಮ ಭಕ್ತಿಯಿಂದಲೇ ಸಕಲ ಕರ್ಮಗಳನ್ನೂ ಆಚರಿಸುವುದೇ ಕಾರಣ. ಅದರಂತೆ ಅಸುರರು ಮಾಡುವ ಪುಣ್ಯಕರ್ಮಗಳೂ ಸಹ ಪಾಪಸಾಧನವಾಗಲು ಅವರು ಅವು–ಗಳನ್ನು ವಿಷ್ಣುದ್ವೇಷದಿಂದ ಆಚರಿಸುವುದೇ ಕಾರಣ. ಇದಕ್ಕೆ ದುರ್ಯೋಧನ ಮಾಡಿದ ಪುಂಡರೀಕ ಯಾಗ, ಸಾಲ್ವರಾಜ ಮಾಡಿದ ರಾಜಸೂಯಯಾಗ ಮೊದಲಾದವುಗಳು ನಿದರ್ಶನ.

ನಹುಷನಿಗೇಕೆ ಇಂದ್ರಪದವಿ?

ನಾನ್ಯಸ್ಯ ಪದಮಾಪ್ಸ್ಯಂತಿ ತದ್ದೇವಾನಾಂ ವ್ರತಂ ಪರಮ್ ।
ತಸ್ಮಾತ್ ತೇ ನಹುಷಂ ಶಕ್ರಪದೇ ನಿದಧುರೀಶ್ವರಾಃ ॥ ೩೪೬ ॥

ಅ: ಮತ್ತೊಬ್ಬರ ಪದವಿಯನ್ನು ಹೊಂದದಿರುವುದು ದೇವತೆಗಳ ಹಿರಿದಾದ ವ್ರತ. ಆದ್ದರಿಂದ ಅವರು ಸಮರ್ಥರಾಗಿದ್ದರೂ ನಹುಷನನ್ನೇ ಇಂದ್ರ ಪದವಿಯಲ್ಲಿ ಕುಳ್ಳಿರಿಸಿದರು.

ಆ: ೧) ನಹುಷನನ್ನು ಕರೆತರುವ ಬದಲು ಇಂದ್ರಸಮನೇ ಆದ ಕಾಮನಾಗಲಿ ಇತರ ದೇವತೆಗಳಾಗಲಿ ಇಂದ್ರಪದವಿಯಲ್ಲಿ ಇರಬಹುದಾಗಿತ್ತಲ್ಲ ಎಂಬ ಪ್ರಶ್ನೆಗೆ ಇಲ್ಲಿ ಉತ್ತರವಿದೆ. ಒಬ್ಬರ ಪದವಿಯಲ್ಲಿ ಮತ್ತೊಬ್ಬರು ಕೂಡುವುದು ದೇವತೆಗಳಿಗೆ ಎಂದೂ ಪ್ರಿಯವಲ್ಲ. ಅದರಿಂದಾಗಿಯೇ ಅವರು ತಾವು ಕೂಡದೇ ನಹುಷನನ್ನು ಕುಳ್ಳಿರಿಸಿದರು ಎಂದರ್ಥ.

೨) ನಹುಷನು ದೇವಗಣಕ್ಕೆ ಸೇರದೇ ರಾಜಗಣಕ್ಕೆ ಸೇರಿದವನಾದ್ದರಿಂದ ಅವನು ಅದಕ್ಕೆ ಆಸೆಪಟ್ಟು ಕುಳಿತಿದ್ದ ಎಂದರ್ಥ. ಅದರಿಂದಾಗಿ ಹೀಗೆ ಭಯಂಕರವಾದ ಶಾಪವನ್ನು ಪಡೆದು ದುಃಖಪಡುವಂತಾಯಿತು.

ಭೀಮನನ್ನು ಹಿಡಿದ ಅಜಗರ

ತಸ್ಮಿನ್ನೇವಂ ನಿಪತಿತೇ ಬ್ರಹ್ಮಣಃ ಶಾಪಕಾರಣಾತ್ ।
ಅಷ್ಟಾವಿಂಶತಿಮೇ ಪ್ರಾಪ ಯುಗೇ ಭೀಮಸ್ತಮುಲ್ಬಣಮ್ ।
ಜಾನನ್ನೇವ ತದೀಯಂ ತತ್ತಪ ಆದಾತುಮೀಪ್ಸಯಾ ॥ ೩೪೭ ॥

---

೩೪೬. ನಾನ್ಯಸ್ಯ ಪದಮಾಪ್ಸ್ಯಂತೀತ್ಯತ್ರ ದೇವಾ ಅನ್ಯಸ್ಯ ಪದಂ ನಾಪ್ಸ್ಯಂತೀತಿ ಯತ್ ತದ್ದೇವಾನಾಂ ವ್ರತಮ್। ಅತ ಇಂದ್ರಸಮಸ್ಯಾಪಿ ಕಾಮಸ್ಯ ನೇಂದ್ರಪದಂ ದತ್ತಮಿತಿ ಜ್ಞೇಯಮ್ ॥ –(ವಾ.)

೩೪೭. ತದೀಯಂ ತತ್ತಪ ಇತಿ ಸಾಮಾನ್ಯೇನೋಕ್ತಂ ತಪಃ ಪ್ರಪಂಚಯತಿ ಯತ್ತತ್ಸುರಾಣಾಮಿತಿ । 'ಸಂಕ್ಷೇಪ-ವಿಸ್ತರಾಭ್ಯಾಂ ಹಿ ಪ್ರವದಂತಿ ಮನೀಷಿಣ' ಇತಿ ನ್ಯಾಯಾದುಕ್ತಂ ಯುಕ್ತಮ್ ॥ –(ವಾ.)

ಅ: ಬ್ರಹ್ಮದೇವರ ಶಾಪದ ಕಾರಣದಿಂದಾಗಿ ಅವನು ಹೀಗೆ ಭೂಮಿಗೆ ಬೀಳಲು ಇಪ್ಪತ್ತೆಂಟನೆಯ ಮಹಾಯುಗದಲ್ಲಿ ಭೀಮ ಅದನ್ನು ಉಗ್ರನಾದ ನಹುಷ ಎಂದು ತಿಳಿದೇ ಅವನ ತಪಸ್ಸನ್ನು ಸೆಳೆದುಕೊಳ್ಳಲೆಂದು ಸ್ವೇಚ್ಛೆಯಿಂದ ಅದರ ಬಳಿಗೆ ಬಂದಿದ್ದ.

ವಿ: ಶಾಪ ನೀಡಿದ್ದು ಬ್ರಹ್ಮನಾದರೆ, ಅವನ ಉದ್ಧಾರಕ್ಕೆಂದು ಅಲ್ಲಿಗೆ ಆಗಮಿಸಿದ್ದು ಭಾವಿ ಬ್ರಹ್ಮನಾದ ಭೀಮ ಎಂಬುದು ಇಲ್ಲಿಯ ವಿಶೇಷ. ಪೂರ್ಣಪ್ರಜ್ಞನಾದ್ದರಿಂದ ಆ ಸಮಗ್ರ ವಿವರಗಳನ್ನು ತಿಳಿದಿದ್ದ ಭೀಮಸೇನ ಪೂರ್ವಜನೂ, ಸ್ವರೂಪತಃ ಯೋಗ್ಯನೂ ಆಗಿದ್ದ ಆ ನಹುಷನನ್ನು ಅವನ ಹೆಚ್ಚಿನ ತಪಸ್ಸು ಮೊದಲಾದವುಗಳನ್ನೆಲ್ಲಾ ತೆಗೆದುಕೊಂಡು ಉದ್ಧರಿಸಲೆಂದೇ ಅಲ್ಲಿಗೆ ತೆರಳಿದ್ದ ಎಂದರ್ಥ.

ಭೀಮ ಬಲದ ಹಿರಿಮೆ

ಯತ್ತತ್ ಸುರಾಣಾಂ ಸರ್ವೇಷಾಂ ಮುನೀನಾಂ ಚ ತಪಸ್ವಿನಾಮ್ ।
ತದ್ಗ್ರಹೀತುಂ ವಶಗವದಿಚ್ಛಯೈವಾಸ ಮಾರುತಿಃ ॥ ೩೪೮ ॥

ಅ: ಅವನಲ್ಲಿದ್ದ ಸಕಲ ದೇವತೆಗಳ ಹಾಗೂ ಮುನಿಗಳ ತಪಸ್ಸನ್ನೆಲ್ಲಾ ಸ್ವೀಕರಿಸಲೆಂದೇ ಭೀಮಸೇನ ಸ್ವೇಚ್ಛೆಯಿಂದ ಅವನ ವಶಕ್ಕೆ ಸಿಲುಕಿದ.

ವಿ: ಭೀಮ ಅಲ್ಲಿಗೆ ಆಗಮಿಸಿದ್ದು ಸ್ವೇಚ್ಛೆಯಿಂದ, ಅವನ ಕೈಗೆ ಸಿಕ್ಕಿದಂತೆ ನಟಿಸಿದ್ದೂ ಸಹ ಸ್ವೇಚ್ಛೆಯಿಂದಲೇ ಎಂದರ್ಥ. ಇದು ಶ್ರೀಕೃಷ್ಣ ಸ್ವೇಚ್ಛೆಯಿಂದ ಕಾಲಿಯನ ವಶಕ್ಕೆ ಸಿಕ್ಕಿದ ಪ್ರಸಂಗದಂತಿದೆ.

ದೇವಾನಾಂ ಹಿ ನೃಜಾತಾನಾಮಲ್ಪಂ ವ್ಯಕ್ತಂ ಭವೇದ್ಬಲಮ್ ।
ಇಚ್ಛಯಾ ವ್ಯಕ್ತತಾಂ ಯಾತಿ ವಾಯೋರನ್ಯೇಷು ತಚ್ಚ ನ ॥ ೩೪೯ ॥

ಅ: ಮನುಷ್ಯರಾಗಿ ಹುಟ್ಟಿದಾಗ ದೇವತೆಗಳ ಬಲ ಸ್ವಲ್ಪ ಮಾತ್ರ ಅಭಿವ್ಯಕ್ತವಾಗುವದು. ವಾಯುವಿಗೆ ಮಾತ್ರ ಅದು ಇಚ್ಛೆಯಿಂದ ಪೂರ್ಣ ವ್ಯಕ್ತವಾಗುವುದು, ಇತರರಿಗೆ ಹಾಗಾಗದು.

ನಿತ್ಯಂ ವ್ಯಕ್ತಾ ಗುಣಾ ವಿಷ್ಣೋರಿತಿ ಶಾಸ್ತ್ರಸ್ಯ ನಿರ್ಣಯಃ ।
ಏವಮನ್ಯೇಽಪಿ ಹಿ ಗುಣಾ ಮಾನುಷಾದಿಷು ಜನ್ಮಸು ॥ ೩೫೦ ॥

ಅ: ವಿಷ್ಣುವಿನ ಗುಣಗಳು ಮಾತ್ರ ಸದಾ ಪೂರ್ಣ ವ್ಯಕ್ತವಾಗುವವು ಎಂಬುದು ಶಾಸ್ತ್ರದ ನಿರ್ಣಯ. ಇದರಂತೆ ಮನುಷ್ಯ ಮೊದಲಾದ ಜನ್ಮಗಳಲ್ಲಿ ಇತರ ಗುಣಗಳು ವ್ಯಕ್ತವಾಗುವುದೂ ಹಾಗೆಯೇ.

ಎ: ಹಿಂದೆ ಹೇಳಿದಂತೆ ದೇವತೆಗಳ ಅವತಾರಗಳಲ್ಲಿ ಅವರ ಮೂಲರೂಪದ ಬಲ, ಜ್ಞಾನಾದಿ-ಗಳೆಲ್ಲಾ ಪೂರ್ಣವಾಗಿ ವ್ಯಕ್ತವಾಗುವುದಿಲ್ಲ. ವಾಯುದೇವರಿಗೆ ಮಾತ್ರ ಇಚ್ಛಿಸಿದಾಗ ಪೂರ್ಣ ವ್ಯಕ್ತ-ವಾಗುವವು. ಲಕ್ಷ್ಮೀನಾರಾಯಣರಿಗೆ ಮಾತ್ರ ಅವೆಲ್ಲಾ ಸದಾ ವ್ಯಕ್ತವೇ ಆಗಿರುವವು ಎಂಬುದು ವಿಶೇಷ ಎಂದರ್ಥ.

ದೇವಾನಾಂ ಮಾನುಷಾದೌ ತು ಶಕ್ಯೇಽಪ್ಯವ್ಯಕ್ತತಾಕೃತೇಃ ।
ಧರ್ಮವೃದ್ಧಿರ್ಭವೇತ್ ತೇಷಾಂ ಪ್ರೀತೋ ಭವತಿ ಕೇಶವಃ ॥ ೩೫೧ ॥

ಅ: ದೇವತೆಗಳು ಮನುಷ್ಯಾದಿ ಜನ್ಮಗಳಲ್ಲಿ ಅವತರಿಸಿದಾಗ ತಮ್ಮ ಸ್ವರೂಪ ಗುಣಗಳನ್ನು ವ್ಯಕ್ತಮಾಡಿಕೊಳ್ಳುವ ಸಾಮರ್ಥ್ಯವಿದ್ದಾಗಲೂ ವ್ಯಕ್ತ ಮಾಡಿಕೊಳ್ಳದಿದ್ದಲ್ಲಿ ಅವರಿಗೆ ಪುಣ್ಯವೃದ್ಧಿ-ಯಾಗುವುದು, ಶ್ರೀಹರಿ ವಿಶೇಷವಾಗಿ ಪ್ರೀತನಾಗುವನು.

ತನ್ಮಾನುಷೇ ಬಲೇ ತಸ್ಯ ವರಾದ್ವಾರಿತವತ್ ಸ್ಥಿತೇ ।
ದೈವಂ ಬಲಂ ನ ಶಕ್ತೋಽಪಿ ವ್ಯಕ್ತಂ ಚಕ್ರೇ ಸ ಮಾರುತಿಃ ॥ ೩೫೨ ॥

---

೩೫೦. ಏವಮನ್ಯೇಽಪೀತ್ಯತ್ರ ಏವಂ= ಬಲವತ್, ಅನ್ಯೇ= ಜ್ಞಾನಾನಂದಾದಯೋ ಗುಣಾಃ। ಮಾನುಷಾದಿಷು ಜನ್ಮಸು ವಾಯೋರಿಚ್ಛಯಾ ವ್ಯಕ್ತಾ ಭವಂತಿ। ಅನ್ಯೇಷಾಂ ಯಥಾಯೋಗ್ಯಂ ಈಷದೀಷತ್ ವ್ಯಕ್ತಾ ಭವಂತೀತಿ ಪೂರ್ವಾವೃತ್ತ್ಯಾ ಯೋಜನಾ। ತೇಷಾಂ ದೇವಾನಾಂ ಮಾನುಷಾದೌ ತು ಶಕ್ಯೇಽಪ್ಯವ್ಯಕ್ತತಾ ಕೃತೇಃ ಅಶಕ್ತವತ್ ಸ್ಥಿತೇಃ ಧರ್ಮವೃದ್ಧಿರ್ಭವೇದ್ಧೀತಿ ಯೋಜನಾ ॥ – (ವಾ.)

೩೫೨. ತನ್ಮಾನುಷೇ ಬಲೇ ತಸ್ಯೇತ್ಯತ್ರ ತತ್ = ನಹುಷಾಶ್ರಿತತಪಃಸ್ವೀಕರಣನಿಮಿತ್ತಾತ್ ತಸ್ಯ = ಸಮಸ್ತಲೋಕಸಂಹರಣ-ಸಮರ್ಥಸ್ಯ ಭೀಮಸ್ಯ ಮಾನುಷೇ= ಮನುಷ್ಯಜನ್ಮನಿ ಯೋಗ್ಯೇ ಬಲೇ ಬ್ರಹ್ಮವರದಾನೇನ ವಾರಿತವತ್ ಸ್ಥಿತೇ ಸತಿ ಭೀಮಸೇನಸ್ಥಿತಮಾನುಷಬಲಸ್ಯಾಪಿ ಕೇನಾಪಿ ವಾರಯಿತುಮಶಕ್ಯತ್ವಾತ್ ವಾರಿತವದಿತ್ಯುಕ್ತಮ್ ॥ – (ವಾ.)

೩೫೨. 'ತನ್ಮಾನುಷೇ ಬಲೇ ತಸ್ಯ ವರಾದ್ವಾರಿತವತ್ ಸ್ಥಿತೇ । ದೈವಂ ಬಲಂ ನ ಶಕ್ತೋಽಪಿ ವ್ಯಕ್ತಂ ಚಕ್ರೇ ಸ ಮಾರುತಿಃ ॥' ಇತ್ಯತ್ರ ಮಾನುಷಬಲೇ ಆವೃತವತ್ ಸ್ಥಿತೇ ಸತಿ ದೈವಬಲಂ ಸುಶಕ್ತೋಽಪಿ ನ ವ್ಯಕ್ತಂ ಚಕ್ರ ಇತ್ಯುಚ್ಯತೇ । ಇದಮನುಪಪನ್ನಂ ಮಾನುಷಸ್ಯ ಸರ್ವಾತ್ಮನಾ ವೃತತ್ವೇ ಸತಿ ದೇವಬಲಸ್ಯ ವ್ಯಕ್ತೀಕರಣೇ ಸಾಮರ್ಥ್ಯವಾನಪಿ ಮಾರುತಿಸ್ತನ್ನ ವ್ಯಕ್ತಂ ಚಕ್ರೇ ಇತಿ ವಕ್ತುಂ ಶಕ್ಯತೇ । ಮಾನುಷಸ್ಯಾವೃತತ್ವಾದಿತ್ಯುಕ್ತತ್ವೇನ ಸರ್ವಾತ್ಮನಾ ಆವೃತತ್ವಾಭಾವಾತ್ ತಸ್ಮಾದುಭಯವ್ಯಕ್ತೀಕರಣಶಕ್ತಿಮಾನಪಿ ಉಭಯಂ ನ ವ್ಯಕ್ತೀಚಕ್ರ ಇತಿ ವಕ್ತವ್ಯಮ್ । ದೈವಂ ಬಲಂ ನ ವ್ಯಕ್ತಂ ಚಕ್ರ ಇತಿ ವಿಶೇಷೋಕ್ತಿಃ । ಕುತ ಇತಿ ಚೇತ್ ಸತ್ಯಮ್ । ದೈವಂ ಬಲಂ ನ ವ್ಯಕ್ತೀಚಕ್ರ ಇತ್ಯಪಿಶಬ್ದಾನ್ವಯಾದುಭಯವ್ಯಕ್ತೀಕರಣಾ-ಸಿದ್ಧೇರ್ನ ದೋಷಃ । ತೇನೈಕಬಲವ್ಯಕ್ತೀಕರಣಶಕ್ತೌ ಸತ್ಯಾಮಪಿ ತದಕರಣೇ ಯದ್ಯದಾಧರ್ಮವೃದ್ಧಿಸ್ತದೋಭಯ-ಕರಣಶಕ್ತೌ ಸತ್ಯಾಮಪಿ ತದಕರಣಾತ್ ಮಹಾಲಾಭ ಇತಿ ಕಿಂ ವಕ್ತವ್ಯಮಿತಿ । – (ತಿ.)

ಅ: ಆದ್ದರಿಂದ ತನ್ನ ಮಾನುಷ ಬಲ ಬ್ರಹ್ಮದೇವರ ವರದಿಂದ ತಡೆಯಲ್ಪಟ್ಟಂತಾದಾಗ ಅತ್ಯಂತ ಸುಸಮರ್ಥನಾಗಿದ್ದರೂ ಭೀಮಸೇನ ತನ್ನ ದೈವಬಲವನ್ನು ವ್ಯಕ್ತಮಾಡಿಕೊಳ್ಳಲಿಲ್ಲ.

ವಿ: ೧) ಮಾನುಷಬಲ ಬ್ರಹ್ಮವರದಿಂದಾಗಿ ತಡೆದಾಗ ಇಚ್ಛಾಮಾತ್ರದಿಂದ ಭೀಮು ತನ್ನ ದೈವ ಬಲವನ್ನು ಪ್ರಕಟಿಸಿ ಅದರಿಂದ ಪಾರಾಗಬಹುದಿತ್ತು ಆದರೆ ವಿಶೇಷವಾದ ಪುಣ್ಯವೃದ್ಧಿ ಹಾಗೂ ಹರಿಪ್ರೀತಿಗಾಗಿ ಹಾಗೆ ಭೀಮಸೇನ ಸಂಪೂರ್ಣ ಸಮರ್ಥನಾದರೂ ಅವನ್ನು ವ್ಯಕ್ತಮಾಡಿಕೊಳ್ಳಲಿಲ್ಲ ಎಂದರ್ಥ. ಅದನ್ನು ತಿಳಿಯದ ಜನ ಭೀಮು ಆ ಹೆಬ್ಬಾವಿನಿಂದ ಬಿಡಿಸಿಕೊಳ್ಳಲು ಸಮರ್ಥನಾಗಲಿಲ್ಲ ಎಂದು ಅಪಾರ್ಥ ಮಾಡಿಕೊಳ್ಳುವರು ಎಂದರ್ಥ.

೨) ಇದು ಹನುಮಂತ ಬ್ರಹ್ಮಾಸ್ತ್ರಕ್ಕೆ ಸ್ವೇಚ್ಛೆಯಿಂದ ವಶನಾದಂತೆ ನಟಿಸಿದ ಸುಂದರಕಾಂಡ ಪ್ರಸಂಗವನ್ನು ಹೋಲುವುದು ಎಂಬುದನ್ನು ಗಮನಿಸಬೇಕು. ಅಲ್ಲಿಯದು ಬ್ರಹ್ಮಾಸ್ತ್ರ ಪ್ರಸಂಗ– ವಾದರೆ, ಇಲ್ಲಿಯದು ಬ್ರಹ್ಮವರ ಪ್ರಸಂಗ ಎಂಬುದು ವಿಶೇಷ. ಹಾಗೆ ಭೀಮಸೇನ ನಡೆದುಕೊಳ್ಳಲು ಅಸುರ ಮೋಹನ ಮತ್ತೊಂದು ಉದ್ದೇಶವೆಂದೂ ತಿಳಿದುಕೊಳ್ಳಬೇಕು.

೩) ಸತ್ತತ್ತ್ವರತ್ನಮಾಲಾ ಕೃತಿಯಲ್ಲಿ ಈ ಪ್ರಸಂಗದ ವಿಸ್ತೃತವಿವೇಚನೆ ಬಂದಿದ್ದು ಅದನ್ನು ಪರಿಶಿಷ್ಟದಲ್ಲಿ ಕೊಡಲಾಗಿದೆ.

ವಿದ್ಯೋಪಜೀವನ ಮಾಡದ ಭೀಮ

ಆತ್ಮಮೋಕ್ಷಾಯ ನ ಪ್ರಶ್ನಾನ್ ವ್ಯಾಜಹಾರ ಸ ಚಾಭಿಭೂಃ ।
ವಿದ್ಯೋಪಜೀವನಂ ಧರ್ಮೋ ವಿಪ್ರಾಣಾಮಪಿ ನೋ ಯತಃ ॥ ೩೫೩ ॥

ಕಿಮುತ ಕ್ಷತ್ರಿಯಸ್ಯೇತಿ ಜಾನನ್ನಪಿ ವೃಕೋದರಃ ।
ತತ್ಪ್ರಶ್ನಪರಿಹಾರೇಣ ನಾತ್ಮಮೋಕ್ಷಂ ಸಮೈಚ್ಛತ ॥ ೩೫೪ ॥

ಅ: ತುಂಬಾ ಸಮರ್ಥನಾಗಿದ್ದರೂ ತನ್ನ ಬಿಡುಗಡೆಗೆಂದು ಭೀಮಸೇನ ಅವನ ಪ್ರಶ್ನೆಗಳಿಗೆ ಉತ್ತರವನ್ನೂ ನೀಡಲಿಲ್ಲ. ವಿದ್ಯೆಯಿಂದ ಜೀವನ ಸಾಗಿಸುವುದು ಬ್ರಾಹ್ಮಣರಿಗೂ ಸಹ ಧರ್ಮ- ವಲ್ಲ, ಇನ್ನು ಕ್ಷತ್ರಿಯನಿಗೆ ಧರ್ಮವಲ್ಲವೆಂದು ಹೇಳಬೇಕೆ? ಆದ್ದರಿಂದ ಭೀಮ ತಿಳಿದವನಾ- ಗಿದ್ದರೂ ನಹುಷನ ಪ್ರಶ್ನೆಗಳಿಗೆ ಉತ್ತರ ನೀಡಿ ತನ್ನ ಬಿಡುಗಡೆ ಮಾಡಿಕೊಳ್ಳಲು ಇಚ್ಛಿಸಲಿಲ್ಲ.

---

೩೫೩. ಯಸ್ಯಾಗಮಃ ಕೇವಲಜೀವಿಕೈವ ತಂ ಜ್ಞಾನಪಣ್ಯಂ ವಣಿಜಂ ವದಂತಿ ॥ – ಮಾಲವಿಕಾಗ್ನಿಮಿತ್ರ

ವಿ: ೧) ಭೀಮ ಹಾಗೆ ಹೆಬ್ಬಾವಿನ ವಶವಾದಂತೆ ವರ್ತಿಸಲು ಕಾರಣವನ್ನು ತಿಳಿಸಿ ಈಗ ಅವನ ಪ್ರಶ್ನೆಗಳಿಗೆ ಉತ್ತರಿಸದಿರಲು ಕಾರಣವನ್ನು ತಿಳಿಸುತ್ತಿರುವರು. ಅಲ್ಲಿ ಶಕ್ತನಾಗಿದ್ದರೂ ಅಶಕ್ತನಂತೆ ನಟಿಸಿದರೆ, ಇಲ್ಲಿ ಜ್ಞಾನಿಯಾಗಿದ್ದರೂ ಅಜ್ಞಾನಿಯಂತೆ ನಟಿಸಿದ ಎಂದು ಭಾವ.

೨) ವಿದ್ಯೆಯ ಉಪದೇಶ ಅತ್ಯಂತವಿಹಿತವಾದರೂ, ಜೀವನೋಪಾಯಕ್ಕಾಗಿ ಅದನ್ನು ಬಳಸಿಕೊಳ್ಳುವುದು ಬ್ರಾಹ್ಮಣರಿಗೂ ಧರ್ಮವಲ್ಲ; ಕ್ಷತ್ರಿಯರಿಗಂತೂ ಸರ್ವಥಾ ಅಲ್ಲ ಎಂಬ ಧರ್ಮ–ಸೂಕ್ಷ್ಮವನ್ನು ತಿಳಿಸಲೆಂದು ಭೀಮಸೇನ ಆ ಪ್ರಶ್ನೆಗಳಿಗೆ ಉತ್ತರಿಸಲಿಲ್ಲ ಎಂಬ ವಿಶೇಷಾಂಶ ಇಲ್ಲಿದೆ.

೩) ವಿದ್ಯೆ ಅಸಮಾನವಾದ ವಸ್ತು, ಬೇರೆ ಎಲ್ಲದಕ್ಕೂ ಬೆಲೆಕಟ್ಟಲು ಬರುವಂತೆ ವಿದ್ಯೆಗೆ ಬೆಲೆಕಟ್ಟಲು ಸಾಧ್ಯವಿಲ್ಲ('ನ ಹಿ ಜ್ಞಾನೇನ ಸದೃಶಂ ಪವಿತ್ರಮಿಹ ವಿದ್ಯತೇ'). ಆದ್ದರಿಂದ ಇತರ ವಸ್ತುಗಳಂತೆ ಜ್ಞಾನವನ್ನು ಜೀವನಕ್ಕಾಗಿ ಬಳಸುವುದು ಅದಕ್ಕೆ ಅಪಚಾರ ಮಾಡುವಂತಹ ಮಹಾ–ಪಾಪ. ಅದಕ್ಕೆಂದೇ ವಿದ್ಯೋಪಜೀವನವನ್ನು ಶಾಸ್ತ್ರ ನಿಷೇಧಿಸಿದೆ ಎಂದು ತಿಳಿಯಬೇಕು. ಆ ಪರಮ ಧರ್ಮವನ್ನು ಲೋಕಕ್ಕೆ ಸಾರಲೆಂದು ಭೀಮ ಹಾಗೆ ಜ್ಞಾನಿಯಾಗಿದ್ದೂ ಅಜ್ಞಾನಿಯಂತೆ ವರ್ತಿಸಿದ.

೪) ಭೀಮ ಮೊದಲು ಪ್ರಶ್ನೆಗಳನ್ನು ಕೇಳು ಎಂದು ನುಡಿದು ಅನಂತರ ಉತ್ತರಿಸದಿದ್ದಲ್ಲಿ ಅವನಿಗೆ ಉತ್ತರ ತಿಳಿದಿರಲಿಲ್ಲ ಎಂದಾಗುತ್ತಿತ್ತು, ಆದರೆ ನಹುಷ ''ಪ್ರಶ್ನೆಗೆ ಉತ್ತರ ನೀಡಿದರೆ ನಿನ್ನನ್ನು ಬಿಡುಗಡೆ ಮಾಡುವೆ'' ಎಂದು ನಿಬಂಧನೆ ಹಾಕಿದ್ದರಿಂದ ಭೀಮಸೇನ ಅದು ಅಧರ್ಮ ಎಂದು ತೋರಿಸಲೆಂದು ಪ್ರಶ್ನೆಗಳು ಯಾವುವೆಂದು ಕೇಳಲೇ ಇಲ್ಲ. ಇಲ್ಲಿಯ ಧರ್ಮಸೂಕ್ಷ್ಮದ ವಿಮರ್ಶೆ ಮಹಾಭಾರತತಾತ್ಪರ್ಯನಿರ್ಣಯದ ಅಪೂರ್ವ ಘಟ್ಟಗಳಲ್ಲೊಂದು.

ಅಯತಂತಮಪಿ ಹ್ಯೇನಂ ಚಾಲನಾಯಾಪಿ ನಾಶಕತ್ ।
ಪೂರ್ಣೋಽಪಿ ಸರ್ವಲೋಕಾನಾಂ ಬಲೇನ ನಹುಷಸ್ತದಾ ।
ವೇಷ್ಟಯಿತ್ವೈವ ತಂ ಭೀಮಂ ಸ್ಥಿತೋಽಸೌ ನಾಶಕತ್ ಪರಮ್ ॥ ೩೫೫ ॥

ಅ: ಭೀಮ ಪ್ರಯತ್ನಿಸದಿದ್ದರೂ ಸಕಲ ಲೋಕಗಳ ಬಲದಿಂದ ತುಂಬಿದ್ದರೂ ಅಜಗರ ರೂಪದ ನಹುಷನಿಗೆ ಅವನನ್ನು ಅಲುಗಾಡಿಸಲೂ ಸಾಧ್ಯವಾಗಲಿಲ್ಲ. ಅವನು ಭೀಮನನ್ನು ಸುಮ್ಮನೇ ಸುತ್ತಿಕೊಂಡಿದ್ದನೇ ಹೊರತು ಮತ್ತೇನನ್ನೂ ಮಾಡಲು ಸಮರ್ಥನಾಗಲಿಲ್ಲ.

ವಿ: ಸಕಲ ಲೋಕದ ಬಲದಿಂದ ತುಂಬಿದ್ದ ನಹುಷನಿಗೂ ಭೀಮನೊಬ್ಬನನ್ನು ಅಲುಗಾಡಿಸಲು ಶಕ್ಯವಾಗಲಿಲ್ಲ ಎಂಬ ಮಾತಿನಲ್ಲಿ ಇತರ ಸಕಲಲೋಕದ ಬಲಕ್ಕಿಂತ ಭೀಮನ ಬಲ ಮಿಗಿಲಾದುದು ಎಂಬ ಸ್ಪಷ್ಟ ಚಿತ್ರವಿದೆ. ಕೂರ್ಮ ರೂಪದಿಂದ ಬ್ರಹ್ಮಾಂಡವನ್ನೇ ಹೊತ್ತವಾಯುವಾದ ಭೀಮನಿಗೆ ಇದೇನೂ ಅಚ್ಚರಿಯ ಸಂಗತಿಯಲ್ಲ. ಬ್ರಹ್ಮದೇವರು ಇಂತಹ ವ್ಯಕ್ತಿ ಬಿಡಿಸಿಕೊಳ್ಳಲು ಪ್ರಯತ್ನಿಸದೇ

ಇದ್ದಾಗಲೇ ಅವನ ಹೆಚ್ಚಿನ ಬಲ ಅವನೆಡೆಗೆ ಸಾಗುವುದು ಎಂದು ತಿಳಿಸಿದ್ದುದನ್ನು ಜ್ಞಾಪಿಸಿ-ಕೊಳ್ಳಬೇಕು (ಶ್ಲೋ. ೩೩೮, ೩೩೯).

ಭ್ರಾತೃಮಾತ್ರಾದಿಷು ಸ್ನೇಹಾತ್ ಕ್ಷಿಪ್ರಮಾತ್ಮವಿಮೋಕ್ಷಣಮ್ ।
ಇಚ್ಛನ್ನಪಿ ನ ಮೋಕ್ಷಾಯ ಯತ್ನಂ ಚಕ್ರೇ ವೃಕೋದರಃ ॥ ೩೫೬ ॥

ಅ: ಸಹೋದರರು, ತಾಯಿ ಮೊದಲಾದವರ ಮೇಲಿನ ಪ್ರೀತಿಯಿಂದಾಗಿ ಬೇಗನೇ ತನ್ನ ಬಿಡುಗಡೆಯಾಗಬೇಕೆಂದು ಬಯಸಿದ್ದರೂ ಭೀಮಸೇನ ಅದಕ್ಕಾಗಿ ಯತ್ನಿಸಲಿಲ್ಲ.

ವಿ: ಭೀಮ ಆಗ ಲೋಕ ದೃಷ್ಟಿಯಲ್ಲಿ ಮರುಗುವಂತೆ ನಿಂತಿದ್ದನೇ ಹೊರತು ವಾಸ್ತವವಾಗಿ ಯಾವುದೇ ಕೊರಗಿಗೆ ಒಳಗಾಗಿರಲಿಲ್ಲ ಎಂಬುದು ಇಲ್ಲಿಯ ಮುಖ್ಯಾಂಶ.

ಸರ್ವದೇವಮುನೀಂದ್ರಾಣಾಂ ತಪ ಆದಾತುಮತ್ರಗಮ್ ।
ಭ್ರಾತ್ರಾದಿಷು ಸ್ನೇಹವಶಾನ್ನ ಸ್ಥಾತವ್ಯಮಿಹೇತ್ಯಪಿ ॥ ೩೫೭ ॥

ಮನ್ವಾನಃ ಕಾಲತೋ ಭಂಗಂ ಸ್ವಯಮೇವೈಷ ಯಾಸ್ಯತಿ ।
ಆಜ್ಞಯಾ ವಾಸುದೇವಸ್ಯ ದಾರ್ಢ್ಯಾದ್ದೇಹಸ್ಯ ಮೇ ತಥಾ ॥ ೩೫೮ ॥

---

೩೫೫. ನಾಶಕತ್ಪರಮಿತ್ಯತ್ರ ಪರಂ - ಉಪರಿ ಚಾರಣಾದಿಕರ್ಮಣಿ ನಾಶಕತ್ ॥ -(ವಾ.)

೩೫೭. ಭೀಮಸ್ಯ ನಿರ್ಬಂಧಶ್ರವಣಾತ್ ದೂರಸ್ಥಾಯಾ ಅಪಿ ಕುಂತ್ಯಾಃ ಶೋಕೋ ಭವಿಷ್ಯತಿ। ಅತಸ್ತತ್ಸ್ನೇಹಾದಪಿ ಯತ್ನಂ ನಾಕರೋದಿತಿ ಭಾವೇನೋಕ್ತಂ ಭ್ರಾತೃಮಾತ್ರಾದಿಭಃ ಸ್ನೇಹಾದಿತಿ। ಭ್ರಾತೃಮಾತ್ರಾದಿಭಃ ಸ್ನೇಹವಶಾತ್ ನ ಸ್ಥಾತವ್ಯಮಿತಿ ಮನ್ಯಮಾನೋಽಪಿ ಏಷ ಸರ್ವಃ ಕಾಲತಃ ಶಕ್ತಸ್ಯಾಪಿ ಮಮ ಕ್ಷಮಯಾ ಕಾರಣೇನ ಕ್ರಮಾತ್ತದ್ಗತಬಲೇ ತಪಸಿ ಚ ಮಯ್ಯೇವ ಪ್ರಾಪ್ತೇ ದುರ್ಬಲತ್ವಾತ್ ಮಮ ಭಾರಮಸಹಮಾನಃ ಸ್ವಯಮೇವ ಭಂಗಂ ಯಾಸ್ಯತೀತ್ಯತೋಽಪಿ ಯತ್ನಂ ನ ಚಕ್ರ ಇತಿ ಪೂರ್ವೇಣಾನ್ವಯಃ ॥ -(ವಾ.)

೩೫೮. ವಾಸುದೇವಸ್ಯಾಜ್ಞಯಾ ಕಾರಣೇನ ಮೇ ದೇಹಸ್ಯ ದಾರ್ಢ್ಯಾಚ್ಚ ಸ್ರಸ್ತಾಂಗೇ ಸರ್ಪೇ ಪತಿತೇ ಸತಿ ಯಾಸ್ಯಾಮೀತಿ ಚಿಂತಯನ್ ತಸ್ಥಾವಿತಿ ಯೋಜನಾ। ಮಾನುಷಜನ್ಮಸು ಶಕ್ತಸ್ಯಾಪ್ಯಶಕ್ತವತ್ ಸ್ಥಿತೇಃ ದೇವಧರ್ಮತ್ವಾತ್ ಕಾಲತಃ ಸ್ವಭಾರಾಸಹತ್ವೇನಾಪಿ ಮೋಕ್ಷಸಂಭವಾತ್ ಉಕ್ತವಿಧಯಾ ವಿಷ್ಣೋರಾಜ್ಞಯಾ ಮೋಕ್ಷಸಂಭವಾತ್। ದೇಹದಾರ್ಢ್ಯೇನ ಭಕ್ಷಣಾದ್ಯಶಕ್ತೌ ಪ್ರಯೋಜನಾಭಾವೇನಾಪಿ ಮೋಕ್ಷಸಂಭವಾತ್ ವಿದ್ಯೋಪಜೀವನಸ್ಯ ಸ್ವಾಯೋಗ್ಯತ್ವಾಚ್ಚ ತೂಷ್ಣೀಂ ತಸ್ಥಾವಿತಿ ಭಾವಃ । ಸ್ವಭಾವಾದೇವ ಹರಿಂ ಧ್ಯಾಯನ್ । ನತು ತದಿಚ್ಛಯಾ= ಮೋಕ್ಷಣೇಚ್ಛಯಾ ಧ್ಯಾಯನ್। ಅನೇನಾಪಿ ಹರಿಸ್ಮರಣೇನ ಮೋಚಯಿತುಂ ಶಕ್ತೋಽಪಿ ''ಜ್ಞಾನಭಕ್ತೀ ಹರೇಸ್ಫಿಟ್ಟಿಂ ವಿನಾ ವಿಷ್ಣೋರಪಿ ಕ್ವಚಿತ್। ನಾಕಾಂಕ್ಷ್ಯಮ್'' ಇತಿ ವಚನೇನ ಐಹಿಕಫಲಸ್ಯಾಪ್ಯಾರ್ಥ್ಯತ್ವಾತ್ ನ ಮೋಚಯಾಮಾಸೇತಿ ಹೇತುಃ ಸೂಚಿತಃ। ಪ್ರಶ್ನೋತ್ತರಂ ದತ್ವಾ ಮಮ ಜ್ಯೇಷ್ಠೋ ಮೋಚಯಿಷ್ಯತೀತಿ ವಸ್ತುತತ್ತ್ವಂ ಕುತೋ ನ ಚಿಂತಿತಮಿತಿ ಚೇನ್ನ। ಪರಮುಖೇನಾಪಿ ವಿದ್ಯೋಪಜೀವನಸ್ಯಾನಾಶಾಸ್ಯತ್ವಾತ್ । ಸೋಡ್ಯೈವ ಚಿಂತನಂ ಕೃತಮಿತಿ ಗ್ರಂಥ-ಸಮುದಾಯಸ್ಯಾಭಿಪ್ರಾಯಃ। ಅತೋ ನ ಪೌನರುಕ್ತ್ಯಮ್ ॥ ,-(ವಾ.)

ಸ್ರಸ್ತಾಂಗೇ ಪತಿತೇ ಸರ್ಪೇ ಯಾಸ್ಯಾಮೀತಿ ವಿಚಿಂತಯನ್ ।
ತಸ್ಥೌ ಭೀಮೋ ಹರಿಂ ಧ್ಯಾಯನ್ ಸ್ವಭಾವಾನ್ನ ತದಿಚ್ಛಯಾ ॥ ೩೫೯ ॥

ಅ: ಅವನಲ್ಲಿದ್ದ ಸಕಲ ದೇವತೆಗಳ ಹಾಗೂ ಮುನಿಶ್ರೇಷ್ಠರ ತಪಸ್ಸನ್ನು ತನ್ನೆಡೆಗೆ ಸೆಳೆದುಕೊಳ್ಳಲೆಂದು, ಭೀಮಸೇನ ಸೋದರರು ಮೊದಲಾದವರ ಮೇಲಿನ ಸ್ನೇಹದಿಂದ ಅಲ್ಲಿ ಇರಕೂಡದು ಎಂದು ತಿಳಿದಿದ್ದರೂ, ಅದು ಸ್ವಲ್ಪಕಾಲದಲ್ಲೇ ತಾನಾಗಿ ಶಕ್ತಿಕುಂದುವುದು. ಅದಕ್ಕೆ ಶ್ರೀಹರಿಯ ಆಜ್ಞೆ ಹಾಗೂ ನನ್ನ ದೇಹದ ದಾರ್ಢ್ಯವೇ ಕಾರಣ.

ಸರ್ಪ ಹಾಗೆ ಬಳಲಿ ಕೆಳಗೆ ಬಿದ್ದ ಮೇಲೆ ನಾನು ತೆರಳುವೆ ಎಂದು ಆಲೋಚಿಸುತ್ತಾ ಭೀಮಸೇನ ಸ್ವಾಭಾವಿಕವಾಗಿ ಹರಿಯನ್ನು ಧ್ಯಾನಿಸುತ್ತಾನಿಂತ; ಬಿಡುಗಡೆಯನ್ನು ಬಯಸಿ ಅಲ್ಲ.

ವಿ: ೧) ಭೀಮ ಯಾವ ಪ್ರಯತ್ನವನ್ನು ಮಾಡದಿದ್ದರೂ ಆತನ ಅಪಾರ ದೇಹದಾರ್ಢ್ಯದಿಂದಾಗಿ ಸರ್ಪವೇ ಬಳಲಿ ತಾನಾಗಿಯೇ ಬಿದ್ದುಹೋಗುವುದು ಎಂಬುದು ಭೀಮನಿಗೆ ತಿಳಿದಿತ್ತು ಎಂದರ್ಥ.

೨) ಶ್ರಮವಿಲ್ಲದೇ ಕಾರ್ಯ ಸಾಧಿಸುವುದು ವಾಯುದೇವರ ಮತ್ತೊಂದು ಹಿರಿಮೆ ಎಂಬ ಮಾತು ಛಾಂದೋಗ್ಯೋಪನಿಷತ್ತಿನಲ್ಲಿದೆ. ಸಾಗರ ಲಂಘಿಸುವಾಗಲೂ ಹನುಮಂತನಿಗೆ ಬಳಲಿಕೆಯಾಗದ ಉಲ್ಲೇಖ ಈಗಾಗಲೇ ನಿರ್ಣಯದಲ್ಲಿದೆ (೭/೪). ಆದ್ದರಿಂದ ಭೀಮ ಆಗ ಹರಿಸ್ಮರಣೆ ಮಾಡುತ್ತಿದ್ದುದು ಸ್ವಾಭಾವಿಕವಾಗಿಯೇ ಹೊರತು ಫಲೇಚ್ಛೆಯಿಂದಲ್ಲ.

೩) ದ್ರೌಪದಿಯೂ ಸಹ ವಸ್ತ್ರಾಪಹರಣ ಪ್ರಸಂಗದಲ್ಲಿ ಶ್ರೀಕೃಷ್ಣನನ್ನು ಧ್ಯಾನಿಸಿದ್ದು ಸಹಜವಾಗಿಯೇ ಹೊರತು ಫಲಾಪೇಕ್ಷೆಯಿಂದಲ್ಲ ಎಂಬ ವಿವರ ಈಗಾಗಲೇ ಬಂದಿದೆ (೨೧/೩೫೫).

ತದೈವ ಬ್ರಹ್ಮವಚನಾತ್ ಪೂರ್ವೋಕ್ತಾತ್ ಕೇಶವಾಜ್ಞಯಾ ।
ಬಲಂ ತಪಶ್ಚ ಸರ್ವಸ್ಯ ತತ್ಸ್ಥಮಾಯಾದ್ವೃಕೋದರಮ್ ॥ ೩೬೦ ॥

ಅ: ಆಗಲೇ ಹಿಂದೆ ಹೇಳಿದ ಬ್ರಹ್ಮವಚನದಿಂದ ಶ್ರೀಹರಿಯ ಆದೇಶದಂತೆ ನಹುಷನಲ್ಲಿದ್ದ ಸಕಲ ದೇವತೆಗಳ ಬಲ ಮತ್ತು ತಪಸ್ಸು ಭೀಮನಲ್ಲಿ ಸೇರಿಕೊಂಡಿತು.

ವಿ: ನಹುಷನಿಗೆ ಆ ರೀತಿ ಬಲ ಸೇರಿದಾಗ ಅವನಿಗೆ ದರ್ಪ ಬಂದು ದಾರಿ ತಪ್ಪಿದ ವಿವರ ಈಗಾಗಲೇ ಬಂದಿದೆ. ಆದರೆ, ಭೀಮನಿಗೆ ಅಂತಹ ದುಷ್ಪರಿಣಾಮ ಆಗದೇ ಇದ್ದದ್ದು ಆತನ

---

೩೬೦. ಕೇಶವಾಜ್ಞಯಾ ಬ್ರಹ್ಮವಚನಾದಿತಿ ಸಂಬಂಧಃ ॥ –(ವಾ.)

ಪರಿಪೂರ್ಣಯೋಗ್ಯತೆಗೆ ನಿದರ್ಶನ. ಮಳೆಯಿಂದ ಕೆರೆ ನದಿಗಳ ನೀರು ಉಕ್ಕುವಂತೆ ಸಮುದ್ರ ಜಲವು ಉಕ್ಕುವುದಿಲ್ಲವಷ್ಟೆ!

ಪೂರಿತೇ ನಹುಷಸ್ಯೇನ ತಪಸಾ ಚ ಬಲೇನ ಚ ।
ಭೀಮೇ ಸ ನಹುಷೋऽಪ್ಯಾಸೀತ್ ಸ್ರಸ್ತಭೋಗಃ ಶನೈಃ ಶನೈಃ ॥ ೩೬೧ ॥

ಅ: ನಹುಷನಲ್ಲಿದ್ದ ತಪಸ್ಸು ಮತ್ತು ಬಲಗಳಿಂದ ಭೀಮ ತುಂಬಿ ಹೋದಾಗ ನಹುಷ ಮೆಲ್ಲ-ಮೆಲ್ಲನೆ ದೇಹದಲ್ಲಿ ಶಕ್ತಿ ಕುಂದಿದವನಾದ.

ಅಜಗರನ ಬಳಿಗೆ ಧರ್ಮಜನ ಆಗಮನ

ಗತೇ ಭೀಮೇ ನಿಮಿತ್ತಾನಿ ದೃಷ್ಟ್ವಾ ರಾಜಾ ಯುಧಿಷ್ಠಿರಃ ।
ಪಪ್ರಚ್ಛ ಕ್ವ ಗತೋ ಭೀಮ ಇತಿ ಕೃಷ್ಣಾಂ ಚಲನ್ಮನಾಃ ॥ ೩೬೨ ॥

ಅ: ಭೀಮನು ತೆರಳಿದ ಮೇಲೆ ಅತ್ತ ದುಶ್ಶಕುನಗಳನ್ನು ಕಂಡು ರಾಜನಾದ ಯುಧಿಷ್ಠಿರ ಮನಸ್ಸಿನಲ್ಲಿ ಸಂಶಯ ಹೊಂದಿದ; ದ್ರೌಪದಿಯನ್ನು 'ಭೀಮ ಎಲ್ಲಿಗೆ ಹೋಗಿರುವನು?' ಎಂದು ಕೇಳಿದ.

ವಿ: ಧರ್ಮರಾಜನಿಗೆ ಸದಾ ಭೀಮನ ಬಗ್ಗೆಯೇ ಚಿಂತೆ ಎಂಬುದು ಇಲ್ಲಿಯ ಮಹತ್ವದ ವಿಚಾರ. ಧರ್ಮಿಷ್ಠರಿಗೆ ಎಂದೂ ಜ್ಞಾನದ ಬಗ್ಗೆಯೇ ಕಣ್ಣು ಎಂಬುದು ಇದರ ಅಂತರಾರ್ಥ. ಹಿಂದೆ ತಿಳಿಸಿರು-ವಂತೆ ದ್ರೌಪದಿಯನ್ನೇ ಕೇಳಿದ್ದು ಜ್ಞಾನದ ಸುಳಿವಿಗಾಗಿ ಶಾಸ್ತ್ರವನ್ನೇ ಆಶ್ರಯಿಸಬೇಕೆಂಬುದಕ್ಕೂ ಸಂಕೇತ.

ಯಾತಂ ಮೃಗಾರ್ಥಂ ಸ ನಿಶಮ್ಯ ತಸ್ಯಾ-
ಸ್ತದೂರುವೇಗಾತ್ ಪತಿತಾನ್ ನಗೇಂದ್ರಾನ್ ।
ದೃಷ್ಟ್ವಾ ಪಥಾ ತೇನ ಯಯೌ ಸ ತತ್ರ
ದೃಷ್ಟ್ವಾ ಚ ಸರ್ಪಾವೃತಮನ್ವಪೃಚ್ಛತ್ ॥ ೩೬೩ ॥

---

೩೬೨ ಅನಿಷ್ಟದರ್ಶನಾನ್ ಘೋರಾನುತ್ಪಾತಾನ್ ಪರಿಚಿಂತಯನ್ ॥ – ಭಾರತ (ವನ. ೧೭೯/೪೦)

೩೬೨. ದ್ರೌಪದೀಂ ಪರಿಪಪ್ರಚ್ಛ ಕ್ವ ಭೀಮ ಇತಿ ಭಾರತ ॥ – ಭಾರತ (ವನ. ೧೭೯/೪೬)

ಅ: ಬೇಟೆಗೆಂದು ಅವನು ಹೋಗಿದ್ದನ್ನು ಕೇಳಿದ ಧರ್ಮರಾಜ ಭೀಮನ ತೊಡೆಗಳ ವೇಗದಿಂದ ಉರುಳಿ ಬಿದ್ದಿದ್ದ ದೊಡ್ಡ ದೊಡ್ಡ ಮರಗಳನ್ನು ನೋಡಿ ಆ ದಾರಿಯಲ್ಲಿ ತೆರಳಿದ; ಅಲ್ಲಿ ಸರ್ಪದಿಂದ ಸುತ್ತಲ್ಪಟ್ಟಿದ್ದ ಭೀಮನನ್ನು ಕಂಡು ಕೇಳಿದ:

ವಿ: ೧) ಭೀಮನ ದಾರಿಯನ್ನು ಗುರುತಿಸಲು ಧರ್ಮರಾಜ ಕಂಡುಕೊಂಡಿದ್ದ ಸುಲಭೋಪಾಯ ಇದಾಗಿತ್ತು. ಬಿರುಗಾಳಿ ಬೀಸಿದ ದಿಕ್ಕಿನಲ್ಲಿ ಸಾಲು ಸಾಲಾಗಿ ಮರಗಳು ಉರುಳಿ ಬೀಳುವಂತೆ ಭೀಮ ಸಾಗಿದ ದಾರಿಯಲ್ಲಿ ಆತನ ನಡಿಗೆಯ ವೇಗದಿಂದ ಮರಗಳು ಹಾಗೆ ಸಾಲುಸಾಲಾಗಿ ಉರುಳಿ ಬೀಳುತ್ತಿದ್ದವು. ಅದರ ಗುರುತಿನ ಹಿನ್ನೆಲೆಯಲ್ಲಿ ಧರ್ಮರಾಜ ಭೀಮಸೇನನ ಜಾಡನ್ನು ಹಿಡಿದು ಅಲ್ಲಿಗೆ ತಲುಪಿದ ಎಂದರ್ಥ.

೨) ಜ್ಞಾನದ ಹಾದಿ ಧರ್ಮಕ್ಕೆ ತಿಳಿಯುವುದು ಎಂಬುದಕ್ಕೂ ಇದು ಸಂಕೇತ. 'ಕರ್ಮಣಾ ಜ್ಞಾನಮಾಪ್ನೋತಿ' ದುರ್ಮತಗಳೆಂಬ ವೃಕ್ಷಗಳನ್ನು ಬಿರುಗಾಳಿಯಂತೆ ಉರುಳಿಸುವ ವಾಯುದೇವರ ಮತವೇ ಸುಭದ್ರವಾದ ಮತ ಎಂಬುದಕ್ಕೂ ಇದು ಸೂಚಕ.

ನಹುಷನ ಶಾಪವಿಮೋಚನೆ

ತತ್ಕಾರಣಂ ನಹುಷಾತ್ ಸರ್ವಮೇವ
ಶುಶ್ರಾವ ತತ್ಪ್ರಶ್ನಮಶೇಷತಶ್ಚ।
ಭ್ರಾತೃಸ್ನೇಹಾತ್ ವ್ಯಾಕರೋದ್ಧರ್ಮಸೂನು-
ಸ್ತದೈವ ಸೋಽಪ್ಯಾರುಹತ್ ಸ್ವರ್ಗಲೋಕಮ್ ॥ ೩೬೪ ॥

ಅ: ಯುಧಿಷ್ಠಿರ ನಹುಷನಿಂದ ಕಾರಣವನ್ನೆಲ್ಲಾ ತಿಳಿದುಕೊಂಡ. ಬಳಿಕ ಸೋದರನ ಮೇಲಿನ ಪ್ರೀತಿಯಿಂದಾಗಿ ಅವನು ಕೇಳಿದ ಪ್ರಶ್ನೆಗಳನ್ನೆಲ್ಲಾ ಉತ್ತರ ನೀಡಿದ. ಕೂಡಲೇ ನಹುಷ ಸ್ವರ್ಗ ಲೋಕಕ್ಕೆ ಏರಿದ.

ವಿ: ೧) ಕಾರಣ ತಿಳಿದ ಧರ್ಮರಾಜ ನಹುಷನ ಪ್ರಶ್ನೆಗಳಿಗೆ ಉತ್ತರ ನೀಡಿದ. ಬ್ರಹ್ಮ ವಚನದಂತೆ ನಹುಷ ಹೆಬ್ಬಾವಿನ ಜನ್ಮದಿಂದ ಬಿಡುಗಡೆ ಹೊಂದಿ ಸ್ವರ್ಗಕ್ಕೆ ತೆರಳಿದ ಎಂದರ್ಥ.

---

೩೬೩. ಮೃಗಾರ್ಥಂ= ಮೃಗಪ್ರಾಪ್ತ್ಯರ್ಥಮ್ ॥ –(ವಾ.)

೩೬೩. ಧಾವತಸ್ತಸ್ಯ ವೀರಸ್ಯ ಮೃಗಾರ್ಥಂ ವಾತರಂಹಸಃ।
ಊರುವಾತವಿನಿರ್ಭಗ್ನಾ ದ್ರುಮಾ ವ್ಯಾವರ್ಜಿತಾಃ ಪಥಿ ॥
ಸ ಗತ್ವಾ ತೈಸ್ತದಾ ಚಿಹ್ನೈರ್ದದರ್ಶ ಗಿರಿಗಹ್ವರೇ ॥ (ವನ. ೧೧೯/೫೨)

೩೬೪. ಇತ್ಯುಕ್ತ್ವಾ ऽऽಜಗರಂ ದೇಹಂ ಮುಕ್ತ್ವಾ ಸ ನಹುಷೋ ನೃಪಃ।
ದಿವ್ಯಂ ವಪುಃ ಸಮಾಸ್ಥಾಯ ಗತಸ್ತ್ರಿದಿವಮೇವ ಹ ॥ –ಭಾರತ (ವನ. ೧೮೧/೪೪)

೩) ಒಮ್ಮೆ ನಂದನನ್ನು ಹಿಡಿದಿದ್ದ ಅಜಗರ ಕೃಷ್ಣನ ದರ್ಶನದಿಂದಾಗಿ ಬಿಡುಗಡೆ ಹೊಂದಿದ ಕಥೆ ಈಗಾಗಲೇ ಬಂದಿದೆ (೧೪/೧೦೭). ಇಲ್ಲಿ ಭಾವೀ ಆನಂದತೀರ್ಥರನ್ನು ಹಿಡಿದ ಅಜಗರ ಸದ್ಗತಿಗೆ ತೆರಳಿದ್ದು ಅಂತಹುದೇ ಪ್ರಸಂಗ.

೩) ಕೃಷ್ಣನನ್ನು ಸುತ್ತಿ ಹಿಡಿದ ಕಾಳೀಯ ಸರ್ಪ ಉದ್ಧಾರವಾದದ್ದು ಹಿಂದೆ ಬಂದಿದೆ. ಅದರಂತೆ ಭೀಮನನ್ನು ಹಿಡಿದ ಅಜಗರ ಉದ್ಧಾರವಾದದ್ದು ಇಲ್ಲಿ ಬಂದಿದೆ. ಸರ್ವೋತ್ತಮನಾದ ಕೃಷ್ಣ ಹಾಗೂ ಜೀವೋತ್ತಮನಾದ ವಾಯುವನ್ನು ಹಿಡಿಯುವುದು ಬಿಡುಗಡೆಗೆ ಹಾದಿ ಎಂಬುದು ಇದರ ಅಂತರಾರ್ಥ. ಹಾವು ಸಾವಿನ ಸಂಕೇತ; ಹರಿವಾಯುಗಳನ್ನು ಆಶ್ರಯಿಸಿದರೆ ಸಾವಿನ ಭಯ–ವಿಲ್ಲ ಎಂಬುದು ಇಲ್ಲಿಯ ತತ್ತ್ವ.

೪) ಸಾಮಾನ್ಯ ವೈಷ್ಣವನೊಬ್ಬ ಹುಟ್ಟಿದಾಗಲೇ ಅವನಿಂದ ಪಿತೃಗಳ ಉದ್ಧಾರವಾಗುವುದು ಶಾಸ್ತ್ರವಾಣಿ, ವೈಷ್ಣವೋತ್ತಮನಾದ ಭೀಮನಿಂದಾಗಿ ಆ ವಂಶದ ಪೂರ್ವಜನಾದ ನಹುಷ ಉದ್ಧಾರವಾಗಿದ್ದು ತೀರಾ ಸಹಜವಾದ ಸಂಗತಿ. ಮಹಾಭಾರತದಲ್ಲಿ ಈ ಅಜಗರ ಪ್ರಸಂಗವೆಲ್ಲಾ ಆಜಗರಪರ್ವ ಎಂಬ ಉಪಪರ್ವದಲ್ಲಿ ನಿರೂಪಿತವಾಗಿದೆ.

ದಿವ್ಯಾಂಬರೇ ಕುಂಡಲಿನಿ ಸ್ವಪೂರ್ವೇ
ಗತೇ ವಿಮಾನೇನ ಸ ಧರ್ಮರಾಜಃ ।
ಭೀಮಶ್ಚಾಯಾತ್ ಸ್ವಾಶ್ರಮಾಯೈವ ಸರ್ವಂ
ಯುಧಿಷ್ಠಿರಃ ಕಥಯಾಮಾಸ ತತ್ರ ॥ ೩೬೫ ॥

ಅ: ದಿವ್ಯವಾದ ವಸ್ತ್ರಗಳನ್ನು ಧರಿಸಿ ಕರ್ಣಕುಂಡಲಗಳೊಂದಿಗೆ ತಮ್ಮ ಪೂರ್ವಜನಾದ ನಹುಷ ವಿಮಾನದಿಂದ ಸ್ವರ್ಗಕ್ಕೆ ತೆರಳಲು ಧರ್ಮರಾಜ ಮತ್ತು ಭೀಮ ತಮ್ಮ ಆಶ್ರಮಕ್ಕೆ ತೆರಳಿದರು. ಅಲ್ಲಿ ಧರ್ಮರಾಜ ನಡೆದದ್ದೆಲ್ಲವನ್ನೂ ತಿಳಿಸಿದ.

ಶ್ರುತ್ವಾ ಕೃಷ್ಣಾ ಭ್ರಾತರಶ್ಚಾಸ್ಯ ಸರ್ವೇ
ಸರ್ವೇ ಮುನೀಂದ್ರಾ ಭೀಮಸೇನೇऽತಿಭಕ್ತಾಃ ।
ವ್ರೀಳಾಂ ಯಯುರ್ಭೀಮಸೇನಗ್ರಹೇಣ
ತಥಾऽಬ್ರುವನ್ ಸ್ನೇಹತೋ ಭೀಮಸೇನಮ್ ॥ ೩೬೬ ॥

---

೩೬೫. ದಿವ್ಯಾಂಬರೇ ಕುಂಡಲಿನಿ ಸ್ವಪೂರ್ವ ಇತ್ಯತ್ರ ಸ್ವಪೂರ್ವೇ = ಸ್ವಸ್ಯ ವಂಶೇ ಪೂರ್ವಂ ವಿದ್ಯಮಾನೇ ನಹುಷ ಇತ್ಯರ್ಥಃ।''ಪೂರ್ವಪರಾವರದಕ್ಷಿಣೋತ್ತರಾಪರಾಧರಾಣಿ ವ್ಯವಸ್ಥಾಯಾಮಸಂಜ್ಞಾಯಾಮ್'' ಇತಿ (೧/೧/೩೪) ಸೂತ್ರಾತ್ ಪೂರ್ವಶಬ್ದಸ್ಯ ಸರ್ವನಾಮಸಂಜ್ಞಾಯಾಃ ವೈಕಲ್ಪಿಕತ್ವಾತ್ ಪೂರ್ವ ಇತಿ ಸಾಧುಃ ॥ –(ವಾ.)

ಅ: ಅದನ್ನು ಕೇಳಿ ಭೀಮಸೇನನಲ್ಲಿ ಅತ್ಯಂತ ಭಕ್ತರಾದ ಅವನ ಎಲ್ಲ ಸಹೋದರರು, ಸಕಲ ಮುನಿ ಶ್ರೇಷ್ಠರು ಹಾಗೂ ದ್ರೌಪದಿ ಭೀಮ ಹಾವಿನಿಂದ ಹಿಡಿಯಲ್ಪಟ್ಟದ್ದನ್ನು ಕೇಳಿ ನಾಚಿದರು. ಭೀಮಸೇನನನ್ನು ಕುರಿತು ಸ್ನೇಹದಿಂದ ಹಾಗೆ ಹೇಳಿಯೂ ಬಿಟ್ಟರು.

ವಿ: ಭೀಮ ಅಜೇಯ ಎಂದು ತುಂಬಾ ಅಭಿಮಾನದಿಂದ ಬೀಗುತ್ತಿದ್ದ ಮುನಿಗಳಿಗೆ ಈ ಪ್ರಸಂಗ ಒಂದು ರೀತಿಯಲ್ಲಿ ನಾಚಿಕೆಯನ್ನುಂಟು ಮಾಡಿತು ಎಂದರ್ಥ.

ನೈತಾದೃಶಂ ಸಾಹಸಂ ತೇऽನುರೂಪಂ
ಶಕ್ತೋऽಪಿ ಯತ್ ಸ್ವಾತ್ಮನೋ ಮೋಕ್ಷಣಾಯ ।
ನೈವಾಕರೋರ್ಯತ್ನಮತೋ ನಿಜಾನಾಂ
ಮಹದ್ದುಃಖಂ ಹೃದಯೇ ಪ್ರಾರ್ಪಯಸ್ತ್ವಮ್ ॥ ೩೬೭ ॥

ಅ: 'ಇಂತಹ ಸಾಹಸ ನಿನಗೆ ಒಪ್ಪದು, ನೀನು ಸಮರ್ಥನಾಗಿದ್ದೂ ನಿನ್ನ ಬಿಡುಗಡೆಗೆ ಪ್ರಯತ್ನವನ್ನು ಮಾಡದ ಮೂಲಕ ನಿನ್ನವರ ಮನಸ್ಸಿನಲ್ಲಿ ಹೆಚ್ಚಿನ ದುಃಖವನ್ನು ಉಂಟು ಮಾಡಿರುವೆ'.

ವಿ: ಅವರಿಗೆ ಭೀಮನ ಸಾಮರ್ಥ್ಯದಲ್ಲಿ ಅಪನಂಬಿಕೆ ಉಂಟಾಗಲಿಲ್ಲ. ಆದರೆ, ಶಕ್ತನಾಗಿದ್ದೂ ಬಿಡುಗಡೆ ಮಾಡಿಕೊಂಡು ಬರಲಿಲ್ಲ ಎಂಬ ಬಗ್ಗೆ ಅವರಿಗೆ ವ್ಯಥೆಯಾಗಿತ್ತು ಎಂದರ್ಥ.

ದ್ವೈತವನದಲ್ಲಿ ಪಾಂಡವರು

ಮೈವಂ ಪುನಃ ಕಾರ್ಯಮಿತಿ ಬ್ರುವಂತಃ
ಸಮಾಶ್ಲಿಷನ್ ಸರ್ವ ಏವೈತ್ಯ ಭೀಮಮ್ ।
ತತೋऽಹೋಭಿಃ ಕೈಶ್ಚಿದಾಪುಃ ಕುರೂಣಾಂ
ರಾಷ್ಟ್ರಂ ಪಾರ್ಥಾ ಮುನಿಮುಖ್ಯೈಃ ಸಮೇತಾಃ ॥ ೩೬೮ ॥

---

೩೬೬. ತಚ್ಛ್ರುತ್ವಾ ತೇ ದ್ವಿಜಾಃ ಸರ್ವೇ ಭ್ರಾತರಶ್ಚಾಸ್ಯ ತೇ ತ್ರಯಃ ।
ಆಸನ್ ಸುವ್ರೀಡಿತಾ ರಾಜನ್ ದ್ರೌಪದೀ ಚ ಯಶಸ್ವಿನೀ ॥ – ಭಾರತ (ವನ. ೧೮೧/೪೭)

೩೬೭. ನೈತಾದೃಶಂ ಸಾಹಸಮಿತ್ಯತ್ರ ''ಷಹ ಮರ್ಷಣ'' ಇತಿ ಧಾತೋಃ ಸಾಹಸಂ = ಸಹನಂ ವ್ಯಸನಸಹಿಷ್ಣುತ್ವಮಿತ್ಯರ್ಥಃ ॥ – (ವಾ.)

ಅ: 'ಹೀಗೆ ಮತ್ತೆ ಮಾಡಬೇಡ' ಎಂದು ನುಡಿಯುತ್ತಾ ಅವರೆಲ್ಲ ಭೀಮನ ಬಳಿಗೆ ಬಂದು ಗಾಢವಾಗಿ ಆಲಿಂಗಿಸಿಕೊಂಡರು. ಬಳಿಕ ಕೆಲವು ದಿನಗಳಲ್ಲಿ ಪಾಂಡವರು ಮುನಿಶ್ರೇಷ್ಠರುಗಳೊಂದಿಗೆ ಕೂಡಿ ಕುರು ರಾಜ್ಯದ ಬಳಿಯ ದ್ವೈತವನಕ್ಕೆ ತೆರಳಿದರು.

ವಿ: ಭೀಮನ ಬಗ್ಗೆ ತುಂಬಾ ಅಭಿಮಾನ ಪಡುವ ಜನರ ಮನಸ್ಸಿಗೆ ಆಘಾತ ಉಂಟುಮಾಡುವ ಈ ಪ್ರಸಂಗವನ್ನು ಮಹಾಭಾರತತಾತ್ಪರ್ಯನಿರ್ಣಯದಲ್ಲಿ ಹೀಗೆ ನಿರ್ಣಯಿಸಿ ತಿಳಿಸದಿದ್ದಲ್ಲಿ ಅವರಿಗೆಲ್ಲ ನಿಜಕ್ಕೂ ತುಂಬಾ ವ್ಯಥೆಯೇ ಆಗುತ್ತಿತ್ತು ಎಂದು ಗಮನಿಸಬೇಕು.

ದ್ರೌಪದೀ ಸತ್ಯಭಾಮಾ ಸಂವಾದ

ತತೋಽಮಿತೌಜಾ ಭಗವಾನುಪಾಗಮ-
ನ್ನಾರಾಯಣಃ ಸತ್ಯಭಾಮಾಸಹಾಯಃ ।
ಸಂಪೂಜಿತಃ ಪಾಂಡವೈಸ್ತೈಃ ಸಮೇತ-
ಶ್ಚಕ್ರೇಽಥ ಸೌಹಾರ್ದನಿಮಿತ್ತಸತ್ಕಥಾಃ ॥ ೩೬೯ ॥

ಅ: ಅಲ್ಲಿಗೆ ಆಗ ಅಪರಿಮಿತ ಶಕ್ತಿ ಉಳ್ಳ ಭಗವಾನ್ ಶ್ರೀಕೃಷ್ಣ ಸತ್ಯಭಾಮೆಯೊಂದಿಗೆ ಆಗಮಿಸಿದ. ಆ ಪಾಂಡವರಿಂದ ಚೆನ್ನಾಗಿ ಆರಾಧಿತನಾಗಿ ಅವರೊಂದಿಗೆ ಬಗೆಬಗೆಯ ವಿನೋದದ ಮಾತು ಕಥೆಗಳನ್ನು ನಡೆಸಿದ.

ವಿ: ೧) ದ್ವೈತವನದಲ್ಲಿದ್ದಾಗ ಪಾಂಡವರ ಬಳಿಗೆ ಕೃಷ್ಣನು ಸತ್ಯಭಾಮೆಯೊಂದಿಗೆ ಆಗಮಿಸಿ ಅವರ ಮೇಲಿನ ತನ್ನ ವಿಶೇಷ ಪ್ರೀತಿಯನ್ನು ಜಗತ್ತಿಗೆ ಸಾರಿದ ಎಂದರ್ಥ.

೨) ಹೀಗೆ ಅನೇಕ ಬಾರಿ ಪಾಂಡವರ ಬಳಿಗೆ ತೆರಳುವ ಮೂಲಕ ಅವರು ತನಗೆ ತುಂಬಾ ಪ್ರೀತಿಪಾತ್ರರಾದವರು ಎಂದು ಜಗತ್ತಿಗೆ ಸಾರಿದ.

೩) ಆ ಹದಿಮೂರು ವರ್ಷಗಳ ಅವಧಿಯಲ್ಲಿ ಒಂದು ಬಾರಿಯೂ ಕೌರವರ ಬಳಿಗೆ ತೆರಳದೆ ಶ್ರೀಕೃಷ್ಣ ತನಗೆ ಅವರು ಪ್ರಿಯರಲ್ಲವೆಂಬುದನ್ನೂ ತಿಳಿಸಿದ.

೪) ಮಹಾಲಕ್ಷ್ಮಿಯಾದ ಸತ್ಯಭಾಮೆಯೊಂದಿಗೆ ಹಾಗೆ ಅವರಿಗೆ ದರ್ಶನ ನೀಡುವ ಮೂಲಕ ನಿಜಕ್ಕೂ ಪಾಂಡವರೇ ಭಾಗ್ಯಶಾಲಿಗಳು ಎಂಬುದನ್ನು ಸೂಚಿಸಿದ.

---

೩೬೭. ತೇ ತು ಸರ್ವೇ ದ್ವಿಜಶ್ರೇಷ್ಠಾಃ ಪಾಂಡವಾನಾಂ ಹಿತೇಪ್ಸಯಾ ।
ಮೈವಮಿತ್ಯಬ್ರುವನ್ ಭೀಮಂ ಗರ್ಹಯಂತೋಽಸ್ಯ ಸಾಹಸಮ್ ॥ – ಭಾರತ (ವನ. ೧೮೧/೪೮)

೩೬೮. ಕುರೂಣಾಂ ರಾಷ್ಟ್ರಮಿತ್ಯತ್ರ ರಾಷ್ಟ್ರಂ= ರಾಷ್ಟ್ರಸ್ಥಿತಂ ದ್ವೈತವನಮ್ ॥ – (ವಾ.)

ಕೃಷ್ಣಾ ಚ ಸತ್ಯಾ ಚ ಪರಸ್ಪರಂ ಮುದಾ
ಸಂಭಾಷಣಂ ಚಕ್ರತುರ್ಯೋಷಿದಗ್ರ್ಯೇ ।
ಪರೀಕ್ಷಯಂತ್ಯಾ ಸತ್ಯಯಾ ಸರ್ವವೇತ್ತ್ರ್ಯ
ನಿರ್ದೋಷಯಾ ಚೋದಿತಾ ಪ್ರಾಹ ಕೃಷ್ಣಾ ॥ ೩೭೦ ॥

ಅ: ಸ್ತ್ರೀಯರಲ್ಲಿ ಉತ್ತಮರಾದ ದ್ರೌಪದಿ ಮತ್ತು ಸತ್ಯಭಾಮೆ ಇಬ್ಬರೂ ಸಂತೋಷದಿಂದ ಪರಸ್ಪರ ಸಂಭಾಷಣೆ ನಡೆಸಿದರು. ಸರ್ವಜ್ಞಳೂ ನಿರ್ದೋಷಳೂ ಆದ ಸತ್ಯಭಾಮೆಯು ಪರೀಕ್ಷಿಸಲೆಂದು ಕೇಳಿದಾಗ ದ್ರೌಪದಿ ತಿಳಿಸಿದಳು.

ವಿ: ೧) ಸರ್ವೋತ್ತಮನ ಪತ್ನಿಯಾಗಿ ಮಹಾಲಕ್ಷ್ಮಿಯ ಅವತಾರಳಾದ ಸತ್ಯಭಾಮೆ ಅತ್ಯುತ್ತಮ ಸ್ತ್ರೀಯಾದರೆ, ಜೀವೋತ್ತಮನ ಪತ್ನಿಯಾಗಿ ದ್ರೌಪದಿ ಜೀವರಲ್ಲಿ ಅತ್ಯುತ್ತಮ ಸ್ತ್ರೀ ಎಂಬುದು ಇಲ್ಲಿಯ **ಯೋಷಿದಗ್ರ್ಯೇ** ಎಂಬ ಮಾತಿನ ಭಾವ.

೨) ಸತ್ಯಭಾಮೆ ಸರ್ವಜ್ಞಳಾದರೂ ಹಾಗೆ ಕೇಳಿದ್ದು ಪರೀಕ್ಷೆಗೆಂದು. ಅವಳು ಸರ್ವಜ್ಞಳೆಂದು ತಿಳಿದಿದ್ದೂ ದ್ರೌಪದಿಯು ಉತ್ತರಿಸಿದ್ದು ಲೋಕ ಶಿಕ್ಷಣಕ್ಕೆಂದು.

ಸ್ತ್ರೀಧರ್ಮಾನಖಿಲಾಂಸ್ತತ್ರ ಸತ್ಯಾಂ ನಿರ್ದೋಷಸಂವಿದಮ್ ।
ಜ್ಞಾತ್ವಾಽಪಿ ಕೃಷ್ಣಾ ಪ್ರೋವಾಚ ಲೋಕಶಿಕ್ಷಾರ್ಥಮೇವ ತು ॥ ೩೭೧ ॥

ಅ: ದ್ರೌಪದಿಯು ಸತ್ಯಭಾಮೆಗೆ, ಅವಳು ನಿರ್ದೋಷಳೂ ಸರ್ವಜ್ಞಳೂ ಎಂದು ತಿಳಿದೇ ಸಕಲ ಸ್ತ್ರೀಧರ್ಮಗಳನ್ನೂ ತಿಳಿಸಿದಳು. ಲೋಕ ಶಿಕ್ಷಣೆಯೇ ಅದರ ಉದ್ದೇಶವಾಗಿತ್ತು.

ವಿ: ೧) ದ್ರೌಪದಿ ಸತ್ಯಭಾಮೆಯರ ಆ ಸರಸಸಂವಾದದ ಪ್ರಸಂಗವನ್ನು ಮಹಾಭಾರತ ವನಪರ್ವ–ದಲ್ಲಿ 'ದ್ರೌಪದೀಸತ್ಯಭಾಮಾಸಂವಾದಪರ್ವ' ಎಂಬ ಉಪಪರ್ವದಲ್ಲಿ ಸಂಗ್ರಹಿಸಿರುವರು.

೨) ದ್ರೌಪದಿ ಸರಸ್ವತಿಯಾದರೆ, ಸತ್ಯಭಾಮೆ ಮಹಾಲಕ್ಷ್ಮಿ ಲಕ್ಷ್ಮೀ ಸರಸ್ವತಿಯರದು ಸದಾ ವಿವಾದ ಎಂಬುದು ಲೋಕದ ತಿಳುವಳಿಕೆ. ಆದರೆ ಅವರದು ಸಂವಾದವೇ ಹೊರತು ವಿವಾದವಲ್ಲ ಎಂಬುದು ಇಲ್ಲಿಯ ನಿರೂಪಣೆ.

೩) ಅಲಕ್ಷ್ಮಿ ಸರಸ್ವತಿಯರಿಗೂ ವಿವಾದ ಅಥವಾ ಮಹಾಲಕ್ಷ್ಮಿ ಕುವಿದ್ಯೆಗೂ ಮಾತ್ರ ವಿವಾದ ಎಂಬುದಷ್ಟೇ ಲಕ್ಷ್ಮೀ ಸರಸ್ವತೀ ವಿವಾದ ಎಂಬುದಕ್ಕೆ ಅರ್ಥ. ಮಹಾಲಕ್ಷ್ಮಿ ಸರಸ್ವತಿಯರ ಮಧ್ಯೆ ವಿವಾದ ಸರ್ವಥಾ ಇಲ್ಲವೆಂಬುದು ಇಲ್ಲಿಯ ಸಂದೇಶ.

---

೩೭೦. ಪರೀಕ್ಷಂತ್ಯೇತ್ಯತ್ರ ದ್ರೌಪದ್ಯಾ ಧರ್ಮಕೌಶಲಂ ಪರೀಕ್ಷಂತ್ಯಾ = ಪರಿತಃ ಈಕ್ಷಂತ್ಯಾ ॥ –(ವಾ.)

ಕ್ರೀಡಾರ್ಥಮೇವ ವಚನಂ ಜ್ಞಾತ್ವಾ ಸತ್ಯಾಸಮೀರಿತಮ್ ।
ತಸ್ಯಾನುಸಾರವಾಕ್ಯಾನಿ ತತ್ಪ್ರೀತ್ಯಾ ಏವ ಸಾಽಬ್ರವೀತ್ ॥ ೩೭ ॥

ಅ: ಸತ್ಯಭಾಮೆ ನುಡಿದ ಮಾತು ವಿನೋದಕ್ಕೆಂದು ತಿಳಿದೇ ದ್ರೌಪದಿಯು ಅದಕ್ಕೆ ಅನುಗುಣವಾದ ಮಾತುಗಳನ್ನೇ ಅವಳ ಮೇಲಿನ ಪ್ರೀತಿಯಿಂದ ಹೀಗೆ ಆಡಿದಳು.

ವಿ: ೧) ಸತ್ಯಭಾಮೆ ದ್ರೌಪದಿಯನ್ನು ನೀನು ಐವರು ಪತಿಗಳನ್ನು ಅದ್ಹೇಗೆ *ವಶಪಡಿಸಿಕೊಂಡಿರುವಿ! ಮಂತ್ರವೋ, ಮಾಟ ಮದ್ದುಗಳೋ? ಎಂದು ಕೇಳುವಳು. ಅದಕ್ಕೆ ದ್ರೌಪದಿ ಹಾಗೆ ಕೇಳುವುದು ತರವಲ್ಲ, ಆ ರೀತಿ ಗಂಡನನ್ನು ವಶಪಡಿಸಿಕೊಳ್ಳುವ ಹೆಣ್ಣು ಗಂಡನನ್ನು ಉಳಿಸಿಕೊಳ್ಳಲೂ ಸಮರ್ಥಳಾಗಳು. ಭಕ್ತಿಯಿಂದ ಪತಿಯನ್ನು ಒಲಿಸುವಂತೆ ಮಾಟ, ಮಂತ್ರಗಳಿಂದ ಒಲಿಸಲಾಗದು ಎಂದು ಹೇಳುವಳು. ಈ ಮಾತಿನ ತಾತ್ಪರ್ಯ ಇಲ್ಲಿ ಹೀಗೆ ನಿರೂಪಿತವಾಗಿದೆ.

೨) 'ಸೋಪಹಾಸಂ ಪ್ರಭಾಷಿತಂ' (ಭಾರತ ೩/೨೩೩/೬೧) ಎಂಬ ಸತ್ಯಭಾಮೆಯ ಮಾತಿನಲ್ಲಿ ಅದು ಪರೀಕ್ಷೆಯಲ್ಲ; ವಿನೋದ ಮಾತ್ರ ಎಂಬ ವಿವರಣೆಯಿದೆ.

ತತಃ ಕತಿಪಯಾಹಾನಿ ನಿರುಷ್ಯಾತ್ರ ಜನಾರ್ದನಃ ।
ಯಯೌ ಸಭಾರ್ಯಃ ಸ್ವಪುರೀಂ ಪಾಂಡವಾನನುಮಾನ್ಯ ಚ ॥ ೩೭೩ ॥

ಅ: ಬಳಿಕ ಶ್ರೀಕೃಷ್ಣ ಕೆಲವು ದಿನ ಅಲ್ಲಿದ್ದು ಪಾಂಡವರಿಂದ ಬೀಳ್ಕೊಂಡು ಸತ್ಯಭಾಮೆಯೊಂದಿಗೆ ದ್ವಾರಕೆಗೆ ತೆರಳಿದ.

ರಾವಣನಂತಹ ಜಯದ್ರಥ

ತತಃ ಕದಾಚಿನ್ಮೃಗಯಾಂ ಗತೇಷು
ಪಾರ್ಥೇಷು ರಾಜಾ ಸೈಂಧವೋ ಹ್ಯಾಸಸಾದ ।
ಸಕೋಟಿಕಾಶ್ಯಃ ಸಬಲಶ್ಚ ತೇಷಾಂ
ವರಾಶ್ರಮಂ ಸೋಽತ್ರ ದದರ್ಶ ಕೃಷ್ಣಾಮ್ ॥ ೩೭೪ ॥

---

೩೭೨. ಅನುಪ್ರಶ್ನಃ ಸಂಶಯೋ ವಾ ನೈತತ್ ತ್ವಯ್ಯುಪಪದ್ಯತೇ ।
ತಥಾ ಹ್ಯುಪೇತಾ ಬುದ್ಧ್ಯಾ ತ್ವಂ ಕೃಷ್ಣಸ್ಯ ಮಹಿಷೀ ಪ್ರಿಯಾ॥(ದ್ರೌಪದೀವಚನ)–ಭಾರತ(ವನ. ೨೩೩/೧೧)

* ವ್ರತಚರ್ಯಾ ತಪೋ ವಾಽಪಿ ಸ್ನಾನಮಂತ್ರೌಷಧಾನಿ ವಾ ।
ವಿದ್ಯಾವೀರ್ಯಂ ಮೂಲವೀರ್ಯಂ ಜಪಹೋಮಾಗದಾಸ್ತಥಾ ॥ –ಭಾರತ (ವನ. ೨೩೩/೭)

ಅ: ಬಳಿಕ ಒಮ್ಮೆ ಪಾಂಡವರೆಲ್ಲಾ ಬೇಟೆಗೆ ತೆರಳಿದ್ದಾಗ ಸಿಂಧು ರಾಜನಾದ ಜಯದ್ರಥ ಕೋಟಿಕಾಶ್ಯನೊಂದಿಗೂ ಸೈನ್ಯದೊಂದಿಗೂ ಆ ಶ್ರೇಷ್ಠ ಆಶ್ರಮಕ್ಕೆ ಆಗಮಿಸಿದ; ಅಲ್ಲಿ ದ್ರೌಪದಿಯನ್ನು ಕಂಡ.

ಎ: ೧) ಬಂದವನ ಹೆಸರು ಕೋಟಿ ಎಂದೂ, ಅವನು ಕಾಶಿ ದೇಶದವನಾದ್ದರಿಂದ ಕೋಟಿ-ಕಾಶ್ಯ ಎಂದೂ ಹೆಸರು.

೨) ಸೈಂಧವ ಮತ್ತೊಂದು ಮದುವೆಗೆಂದು ತೆರಳುತ್ತಿದ್ದವನು ಮಾರ್ಗದಲ್ಲಿ ಪಾಂಡವರ ಆಶ್ರಮದಲ್ಲಿ ದ್ರೌಪದಿಯನ್ನು ಕಂಡ ಎಂಬ ವಿವರ ಮುಂದಿನ ಶ್ಲೋಕದಲ್ಲಿದೆ.

ವ್ರಜನ್ ವಿವಾಹಾರ್ಥಮಸೌ ನಿಶಾಮ್ಯ
ಕೃಷ್ಣಾಂ ಕೋಟಿಂ ಪ್ರೇಷಯಿತ್ವೈವ ಕಾಶ್ಯಮ್।
ಆಯಾಹಿ ಮಾಮಿತ್ಯವದತ್ ಸುಪಾಪ-
ಸ್ತಯಾ ನಿರಸ್ತೋ ಜಗೃಹೇ ಕರೇ ಚ ॥ ೩೭೫ ॥

ಅ: ವಿವಾಹಕ್ಕೆಂದು ತೆರಳುತ್ತಿದ್ದ ಜಯದ್ರಥ ದ್ರೌಪದಿಯನ್ನು ನೋಡಿ ಮೊದಲಿಗೆ ಕೋಟಿ-ಕಾಶ್ಯನನ್ನು ಕಳುಹಿಸಿ 'ನನ್ನ ಬಳಿಗೆ ಬಾ' ಎಂದು ಹೇಳಿಸಿದ. ಅವಳು ನಿರಾಕರಿಸಿದಾಗ ತುಂಬಾ ಪಾಪಿಯಾದ ಅವನು ಕೈಹಿಡಿಯ ಹೊರಟ.

ತಯಾ ಧೂತೋ ನಿಪಪಾತಾಶು ಭೂಮೌ
ಪುನಃ ಸಸಂಜ್ಞೋಽಭ್ಯಪತದ್ವಿಲಜ್ಜಃ।
ತತೋಽಸಹಾಯತ್ವತ ಏವ ಕೃಷ್ಣಾ
ಧೌಮ್ಯಾಯೋಕ್ತ್ವಾ ಸಾಗ್ನಿರನ್ವೇಹಿ ಮೇತಿ ॥ ೩೭೬ ॥

ಅ: ದ್ರೌಪದಿ ಕೈ ಕೊಡಹಿದಾಗ ಆ ಪಾಪಿ ಪ್ರಜ್ಞೆ ತಪ್ಪಿ ನೆಲಕ್ಕುರುಳಿದ, ಪುನಃ ಎದ್ದು ನಾಚಿಕೆ-ಯಿಲ್ಲದೆ ಎಳೆದೊಯ್ಯಲು ನುಗ್ಗಿದ; ಆಗ ದ್ರೌಪದಿಯು ಅಸಹಾಯಕಳೆಂಬ ಕಾರಣದಿಂದ ಅಗ್ನಿ ಸಮೇತನಾಗಿ ನನ್ನನ್ನು ಅನುಸರಿಸಿರಿ ಎಂದು ಧೌಮ್ಯರಿಗೆ ನುಡಿದಳು.

---

೩೭೪. ಸಕೋಟಿಕಾಶ್ಯ ಇತ್ಯತ್ರ ಕೋಟಿನಾಮಕಃ ಕಾಶೀವಿಷಯಾಧಿಪತಿಃ ಕೋಟಿಕಾಶ್ಯಃ ತೇನ ಸಹಿತಃ ಸಕೋಟಿಕಾಶ್ಯ ಇತ್ಯರ್ಥಃ॥ –(ವಾ.)

* ತತಸ್ತು ರಾಜಾ ಸಿಂಧೂನಾಂ ವಾರ್ಧಕ್ಷತ್ರಿರ್ಮಹಾಯಶಾಃ।
ವಿವಾಹಕಾಮಃ ಶಾಲ್ವೇಯಾನ್ ಪ್ರಯಾತಃ ಸೋಽಭವತ್ ತದಾ। –ಭಾರತ (ವನ. ೨೬೪/೬)

ಸಮಾರುಹತ್ ಸೈಂಧವಸ್ಯೈವ ಯಾನಂ
ಸುಖಂ ನ ಯಾಸೀತಿ ತಮೀರಯಿತ್ವಾ।
ತದಾ ನಿಮಿತ್ತಾನಿ ನಿಶಾಮ್ಯ ಪಾರ್ಥಾಃ
ಸಮಾಯಯುಸ್ತ್ವರಯೈವಾಶ್ರಮಾಯ ॥ ೩೭೭ ॥

ಅ: ದ್ರೌಪದಿ ''ನೀನು ಸುಖವಾಗಿ ತೆರಳಲಾರೆ'' ಎಂದು ನುಡಿದು ಅವನ ರಥವನ್ನು ಹತ್ತಿದಳು. ಆಗ ಪಾಂಡವರು ಉತ್ಪಾತಗಳನ್ನು ಕಂಡು ಆಶ್ರಮಕ್ಕೆ ಕೂಡಲೇ ಆಗಮಿಸಿದರು.

ವಿ: ೧) ಆಶ್ರಮದಲ್ಲಿ ಪತಿಪತ್ನಿಯರು ಇಲ್ಲದ ಕಾರಣದಿಂದಾಗಿ ಔಪಾಸನಾಗ್ನಿ ನಾಶವಾಗ-ದಿರಲೆಂದು ದ್ರೌಪದಿ ಧೌಮ್ಯರಿಗೆ ಅಗ್ನಿಸಮೇತರಾಗಿ ಬರಲು ತಿಳಿಸುವಳು ಎಂದರ್ಥ.

೨) ಹಾಗೆ ಅಗ್ನಿಸಂರಕ್ಷಣೆ ಗೃಹಿಣಿಯ ಮುಖ್ಯ ಕರ್ತವ್ಯ ಎಂಬುದನ್ನು ಜಗತ್ತಿಗೆ ತಿಳಿಸಿದರು.

ಶ್ರುತ್ವಾ ದಾಸೀವಚನಾತ್ ಸರ್ವಮೇವ
ಚಕ್ರುಃ ಕ್ಷಿಪ್ರಂ ಸೈಂಧವಸ್ಯಾನುಯಾನಮ್ ।
ಆಕ್ರೋಶಮಾನಂ ಭೀಮಸೇನೇತಿ ಧೌಮ್ಯಂ
ದೃಷ್ಟ್ವಾ ತಸ್ಯಾಗ್ರೇ ಸೈಂಧವಂ ಚಾತಿಪಾಪಮ್ ॥ ೩೭೮ ॥

ಅ: ದಾಸಿಯ ಮಾತಿನಿಂದ ನಡೆದದ್ದನ್ನೆಲ್ಲಾ ತಿಳಿದು ಅವರು ಕೂಡಲೇ ಸೈಂಧವನನ್ನು ಬೆನ್ನಟ್ಟಿದರು. 'ಭೀಮಸೇನಾ!' ಎಂದು ಕೂಗುತ್ತಿದ್ದ ಧೌಮ್ಯರನ್ನು ನೋಡಿದರು. ಅವರ ಮುಂಭಾಗದಲ್ಲಿ ಅತ್ಯಂತ ಪಾಪಿಯಾದ ಜಯದ್ರಥನನ್ನೂ ಕಂಡರು.

ಚಕ್ರುರ್ನಾದಂ ಸಿಂಹವತ್ ಪಾಂಡುಪುತ್ರಾ
ದೃಷ್ಟ್ವಾ ಕೃಷ್ಣಾ ಚಾವತರದ್ರಥಾತ್ ತದಾ ।
ಧೌಮ್ಯೇನ ಸಾರ್ಧಂ ಸಾ ಯಯೌ ಚಾಶ್ರಮಾಯ
ಸೈನ್ಯಂ ಪಾರ್ಥಾಸ್ತತ್ರ ನಿಜಘ್ನುರೋಜಸಾ ॥ ೩೭೯ ॥

ಅ: ಪಾಂಡವರು ಸಿಂಹದಂತೆ ಘರ್ಜನೆ ಮಾಡಿದರು. ಅವರನ್ನು ಕಂಡು ದ್ರೌಪದಿ ರಥ-ದಿಂದ ಕೆಳಗಿಳಿದಳು; ಧೌಮ್ಯರೊಂದಿಗೆ ಆಶ್ರಮಕ್ಕೆ ತೆರಳಿದಳು. ಪಾಂಡವರು ಆಗ ಸೈಂಧವನ ಸೈನ್ಯವನ್ನು ಪರಾಕ್ರಮದಿಂದ ಸದೆಬಡಿಯತೊಡಗಿದರು.

ಭೀಮನಿಂದ ಕೋಟಿಕಾಶ್ಯನ ವಧೆ

ಅಗ್ರೇ ಕೃಷ್ಣಾಂ ಯೋಽವದತ್ ಸಿಂಧುರಾಜಂ
ಯಾಹೀತಿ ತಂ ಕೋಟಿಕಾಶ್ಯಂ ಸುಪಾಪಮ್ ।
ಛಿತ್ತ್ವಾ ಶಿರೋ ಮೃತ್ಯವೇ ಭೀಮಸೇನೋ
ನಿವೇದಯಾಮಾಸ ತಮಃ ಸ ಚಾಗಾತ್ ॥ ೩೮೦ ॥

ಅ: ಮೊದಲಿಗೆ ದ್ರೌಪದಿಯನ್ನು ಸಿಂಧುರಾಜನ ಬಳಿಗೆ ಬಾ ಎಂದು ಕರೆದ ಕೋಟಿ-ಕಾಶ್ಯನನ್ನು ಭೀಮಸೇನ ತಲೆಕಡಿದು ಮೃತ್ಯುವಿಗೆ ನೀಡಿದ; ಅವನು ತಮಸ್ಸಿಗೆ ತೆರಳಿದ.

ಜಯದ್ರಥನ ಪರಾಭವ

ಹತ್ವಾ ಸೇನಾಮಖಿಲಾಂ ಸೈಂಧವಸ್ಯ
ಭೀಮಾರ್ಜುನೌ ಸಯಮಂ ಧರ್ಮರಾಜಮ್।
ವಿಸೃಜ್ಯ ಧಾವಂತಮಥಾನುಜಗ್ಮತು-
ರ್ಜಯದ್ರಥಂ ವಿರಥಂ ಫಲ್ಗುನೋಽಕಃ ॥ ೩೮೧ ॥

ಅ: ಸೈಂಧವನ ಸಕಲ ಸೇನೆಯನ್ನು ಭೀಮಾರ್ಜುನರು ಸಂಹರಿಸಿದರು. ಧರ್ಮರಾಜನನ್ನು, ನಕುಲ, ಸಹದೇವರನ್ನು ಹಿಂದಕ್ಕೆ ಕಳಿಸಿ ಪಲಾಯನ ಮಾಡುತ್ತಿದ್ದ ಜಯದ್ರಥನನ್ನು ತಾವು ಬೆನ್ನಟ್ಟಿದರು. ಅರ್ಜುನ ಅವನನ್ನು ವಿರಥನನ್ನಾಗಿಸಿದ.

ಜಯದ್ರಥನ ಸೆರೆ

ಪದ್ಭ್ಯಾಂ ಧಾವಂತಂ ಭೀಮಸೇನೋ ನಿಗೃಹ್ಯ
ದತ್ವಾ ಪ್ರಹಾರಂ ಚ ಭೃಶಂ ತಮಾರ್ತಮ್ ।
ಆದಾಯಾಧಾದ್ದ್ರೌಪದೀಪಾದಯೋಶ್ಚ
ತಂ ಮೋಚಯಾಮಾಸ ಚ ಧರ್ಮಸೂನುಃ ॥ ೩೮೨ ॥

ಅ: ಕಾಲುಗಳಿಂದ ಓಡತೊಡಗಿದ ಅವನನ್ನು ಭೀಮಸೇನ ಹಿಡಿದು ಒದೆಗಳನ್ನು ನೀಡಿದ; ಬಹಳವಾಗಿ ದುಃಖಿತನಾದ ಅವನನ್ನು ಕರೆತಂದು ದ್ರೌಪದಿಯ ಪಾದಗಳ ಮೇಲೆ ಹಾಕಿದ; ಧರ್ಮರಾಜ ಅವನನ್ನು ಬಿಡುಗಡೆ ಮಾಡಿಸಿದ.

ಏಃ ಧರ್ಮರಾಜ ಜಯದ್ರಥ ಕೌರವರ ತಂಗಿಯಾದ ದುಶ್ಶಲೆಯ ಗಂಡ, ನಮ್ಮ ಬಂಧು, ಅವನನ್ನು ಕೊಂದರೆ ಅವಳು ವಿಧವೆಯಾಗುವಳು, ಹಾಗಾಗುವುದು ಬೇಡ ಎಂದು ಹೇಳಿ ಅವನನ್ನು ಬಿಡುಗಡೆ ಮಾಡಿಸಿದ ಎಂದರ್ಥ.

ದಾಸೋ ದ್ರೌಪದ್ಯಾ ಅಹಮಿತ್ಯೇವ ವಾಕ್ಯೇ
ತೇನೈವೋಕ್ತೇ ಭೀಮಸೇನೋಽಪ್ಯಮುಂಚತ್ ।
ಸ ವ್ರೀಳಿತೋಽವಾಗ್ವದನೋ ಯಯೌ ವನಂ
ಪಾರ್ಥಾಶ್ಚ ತತ್ರೋಷುರತಿಪ್ರಮೋದಿನಃ ॥ ೩೮೩ ॥

ಅಃ ನಾನು ದ್ರೌಪದಿಯ ದಾಸ - ಎಂದು ಜಯದ್ರಥ ಹೇಳಿದ ಮೇಲೆ ಭೀಮಸೇನ ಅವನನ್ನು ಬಿಡುಗಡೆ ಮಾಡಿದ. ಅವನು ನಾಚಿಕೆಯಿಂದ ಮುಖ ತಗ್ಗಿಸಿ ಕಾಡಿಗೆ ತೆರಳಿದ. ಪಾಂಡವರು ಅಲ್ಲಿ ಅತ್ಯಂತ ಸಂತೋಷದಿಂದ ವಾಸ ಮಾಡತೊಡಗಿದರು.

---

೩೮೧. ಫಲ್ಗುನೋऽಕ ಇತ್ಯತ್ರ ಅಕಃ= ಅಕರೋತ್ ॥ – (ವಾ.)

೩೮೧. ಅಕಃ ಅಕರೋತ್ ಕೃಧಾತೋರ್ಗುಣೇ ಕೃತೇ ಅಡಾಗಮೇ ಚ ಕೃತೇ ಇತಶ್ಚೇತಿ ಇಕಾರಲೋಪೇ ಚಾಕರ್ ಇತಿ ಸ್ಥಿತೇ ಖರವಸಾನಯೋರ್ವಿಸರ್ಜನೀಯ ಇತಿ ರೇಫಸ್ಯಾವಿಸರ್ಜನೀಯೇ ಕೃತೇ ಅಕ ಇತಿ ಭವತಿ। – (ಜ.)

೩೮೧. ಸರ್ವೇಷಾಂ ಚೈವ ಪಾರ್ಥಾನಾಂ ಪ್ರಿಯಾ ಬಹುಮತಾ ಸತೀ । ತಯಾ ಸಮೇತ್ಯ ಸೌವೀರಸುವೀರಾಭಿಮುಖೋ ವ್ರಜೇತಿ। – (ಜ.)

೩೮೨. ತಂ ಭೀಮಸೇನೋ ಧಾವಂತಮವತೀರ್ಯ ರಥಾದ್ಬಲೀ ।
ಅಭಿದ್ರುತ್ಯ ನಿಜಗ್ರಾಹ ಕೇಶಪಕ್ಷೇ ಹ್ಯಮರ್ಷಣಃ ॥
ಸಮುದ್ಯಮ್ಯ ಚ ತಂ ಭೀಮೋ ನಿಷ್ಪೇಷ ಮಹೀತಲೇ ।
ಶಿರೋ ಗೃಹೀತ್ವಾ ರಾಜಾನಂ ತಾಡಯಾಮಾಸ ಚೈವ ಹ ॥
ಪುನಃ ಸಂಜೀವಮಾನಸ್ಯ ತಸ್ಯೋತ್ಪತಿತುಮಿಚ್ಛತಃ ।
ಪದಾ ಮೂರ್ಧ್ನಿ ಮಹಾಬಾಹುಃ ಪ್ರಾಹರದ್ ವಿಲಪಿಷ್ಯತಃ ॥
ತಸ್ಯ ಜಾನೂ ದದೌ ಭೀಮೋ ಜಘ್ನೇ ಚೈನಮರತ್ನಿನಾ ।
ಸ ಮೋಹಮಗಮದ್ ರಾಜಾ ಪ್ರಹಾರವರಪೀಡಿತಃ ॥ – ಭಾರತ (ವನ. ೨೭೨/೨/೫)

೩೮೩. ದ್ರೌಪದೀ ಚಾಬ್ರವೀದ್ಭೀಮಮಭಿಪ್ರೇಕ್ಷ್ಯ ಯುಧಿಷ್ಠಿರಮ್ ।
ದಾಸೋऽಯಂ ಮುಚ್ಯತಾಂ ರಾಜ್ಞಸ್ತ್ವಯಾ ಪಂಚಸಟಃ ಕೃತಃ ॥ – ಭಾರತ (ವನ. ೨೭೨/೧೮)

೩೮೩. 'ದಾಸೋ ದ್ರೌಪದ್ಯಾ ಅಹಮಿತ್ಯೇವ ವಾಕ್ಯೇ ತೇನೈವೋಕ್ತೇ ಭೀಮಸೇನೋऽಪ್ಯಮುಂಚತ್' ಇತ್ಯತ್ರ ಭೀಮಸೇನಃ ತೇನ ಜಯದ್ರಥೇನ ಅಹಂ ದ್ರೌಪದ್ಯಾ ದಾಸ ಇತ್ಯುಕ್ತೇ ಸತಿ ಅನಂತರಂ ಪಂಚಶಿಖಿನಂ ಕೃತ್ವಾ ಮುಂಚದಿತಿ ಗ್ರಾಹ್ಯಮ್। ಜಯದ್ರಥಸ್ತು ಭೀಮೇನ ಯದಾ ಪಂಚಶಿಖೀ ಕೃತಃ ಇತ್ಯುತ್ತರಗ್ರಂಥಾನುರೋಧಾತ್। – (ತಿ.)

ವಿ: ೧) ಭೀಮಸೇನ ಅವನನ್ನು ಬಿಡುಗಡೆ ಮಾಡುವ ಮುನ್ನ ಅವನ ತಲೆಯನ್ನು ಬೋಳಿಸಿ ಐದು ಕಡೆ ಮಾತ್ರ ಕೂದಲುಗಳನ್ನು ಉಳಿಸಿದ. ಎಂದರೆ ಪಂಚ ಚೂಡನನ್ನಾಗಿ ಮಾಡಿ ಓಡಿಸಿದ ಎಂದರ್ಥ.

೨) ಕೃಷ್ಣ ರುಗ್ಮಿಯನ್ನು ಹಾಗೆ ಮಾಡಿದ್ದನ್ನು ಇಲ್ಲಿ ಗಮನಿಸಬೇಕು. ಅಲ್ಲಿ ಕೃಷ್ಣ ಮಹಾಲಕ್ಷ್ಮಿಯಾದ ರುಗ್ಮಿಣಿಯ ಸೋದರನನ್ನು ಹಾಗೆ ಮಾಡಿದರೆ, ಭೀಮ ಇಲ್ಲಿ ಸರಸ್ವತಿಯಾದ ದ್ರೌಪದಿಯನ್ನು ಕೆಣಕಿದವನನ್ನು ಹಾಗೆ ಮಾಡಿದ ಎಂಬುದು ವಿಶೇಷ.

೩) ಅಂತೂ ಲಕ್ಷ್ಮಿ ಸರಸ್ವತಿಯರನ್ನು ಅವಮಾನಿಸುವವರಿಗೆ ತಲೆ ಬೋಳಿಸುವ ಶಿಕ್ಷೆ ಉಚಿತ ಎಂದು ತಿಳಿಯುವುದು.

ಭಾಷಾತ್ರಯ ವಿವೇಚನೆ

ಮಾರ್ಕಂಡೇಯಸ್ತದಾಗತ್ಯ ತೇಷಾಮಕಥಯತ್ ಕಥಾಃ ।
ಬಹ್ವ್ಯಶ್ಚೈವ ವಿಚಿತ್ರಾಶ್ಚ ಭಾಷಾತ್ರಯಸಮನ್ವಿತಾಃ ॥ ೩೮೪ ॥

---

೩೮೪. ಏತತ್ ತೇ ಸರ್ವಮಾಖ್ಯಾತಮತೀತಾನಾಗತಂ ತಥಾ ।
ವಾಯುಪ್ರೋಕ್ತಮನುಸ್ಮೃತ್ಯ ಪುರಾಣಮೃಷಿಸಂಸ್ತುತಮ್ ॥
(ಮಾರ್ಕಂಡೇಯವಚನ) – ಭಾರತ (ವನ. ೧೯೧/೧೬)

೩೮೪. ಬಹ್ವ್ಯಶ್ಚೈವ ವಿಚಿತ್ರಾಶ್ಚೇತ್ಯತ್ರ ಬಹ್ವ್ಯಃ= ಬಹ್ವೀಃ ''ವ್ಯತ್ಯಯೋ ಬಹುಲಮ್'' ಇತಿವಚನಾತ್ ॥ – (ವಾ.)

೩೮೫. ಮಾರ್ಕಂಡೇಯಮುನಿನಾ ಭಾಷಾತ್ರಯಮಾಶ್ರಿತ್ಯ ಕಥಾಯಾಃ ಕಥಿತತ್ವಾತ್ ಕಾ ಗ್ರಾಹ್ಯಾ ಕಾ ತ್ಯಾಜ್ಯಾ ಇತ್ಯತ ಆಹ- ಲೋಕದರ್ಶನಮಾಶ್ರಿತ್ಯೇತಿ। ತತ್ರ ದರ್ಶನಭಾಷಾ ದ್ವಿವಿಧಾ। ಲೋಕದರ್ಶನಭಾಷಾ ಪರದರ್ಶನಭಾಷಾ ಚೇತಿ। ಪರದರ್ಶನಭಾಷಾऽಪಿ ದ್ವಿವಿಧಾ। ಲೌಕಿಕಪರದರ್ಶನಭಾಷಾ ವೈದಿಕಪರದರ್ಶನಭಾಷಾ ಚೇತಿ। ತತ್ರ ಲೋಕಶಿಕ್ಷಾರ್ಥಂ ದರ್ಶಯತಿ ಲೋಕದರ್ಶನಮಿತಿ। ಲೋಕದರ್ಶನಂ = ಸ್ಮೃತ್ಯಾದಿಧರ್ಮಶಾಸ್ತ್ರಂ ಮಾತಾಪಿತ್ರೋರ್ಮೃತೇऽಹನಿ ಶ್ರಾದ್ಧತಿಲಾಂಜಲ್ಯಾದಿಕಂ ಕುರ್ಯಾತ್। ಪಿತ್ರೇ ಮಾತ್ರೇ ಗುರವೇ ಚ ನಮಸ್ಕುರ್ಯಾದಿತ್ಯಾದಿಲೋಕೋಚಿತ-ಧರ್ಮಪ್ರತಿಪಾದಕಮಿತ್ಯರ್ಥಃ। ಈದೃಶಂ ಲೋಕದರ್ಶನಮಾಶ್ರಿತ್ಯ ದೇವಾಶ್ಚ ಮುನಯಶ್ಚ ಬ್ರೂಯುಃ। ಹರಾವಪಿ ಕಥಾಂ ಬ್ರೂಯುಃ। ತತ್ರ ಶಿಕ್ಷ್ಯೈವ ಗ್ರಾಹ್ಯಾ। ಲೋಕಶಿಕ್ಷಾರ್ಥಮಿದಮುಕ್ತಮಿತ್ಯೇವೋಹ್ಯಮ್। ಅರ್ಥಸ್ತು ಕಥಂಚನ ನ ಗ್ರಾಹ್ಯಃ। ಕೃತಕೃತ್ಯಸ್ಯ ಸರ್ವೋತ್ತಮಸ್ಯ ಹರೇಃ ಕರ್ತವ್ಯಾಭಾವಾತ್। ಪಿತೃಶ್ರಾದ್ಧಮುನಿವಂದನಸೀತಾನ್ವೇಷಣಾದಿಕಂ ಲೀಲೈವೇತ್ಯನಾದರಣೀಯಮಿತ್ಯರ್ಥಃ। ಅತ ಏವ ಮಾರ್ಕಂಡೇಯಮುನಿನಾ ಪಾಂಡವಾನ್ ಪ್ರತಿ ರಾಮಾಯಣ ಕಥಾಕಥನೇ ಪಿತರಿ ಮೃತೇ ಸತಿ ರಾಮೇಣ ಪಿತೃಶ್ರಾದ್ಧಂ ಕೃತಮ್। ತಿಲಾಂಜಲಿರ್ದತ್ತಃ। ಅಗಸ್ತ್ಯಾದಿಮುನಿವಂದನಂ ಕೃತಮ್। ಸೀತಾನ್ವೇಷಣಂ ಕೃತಮಿತ್ಯಾದಿ ಯಾ ಕಥಾ ಕಥಿತಾ ತತ್ರಾಪಿ ಶಿಕ್ಷ್ಯೈವ ಗ್ರಾಹ್ಯಾ ನ ತ್ವರ್ಥಃ। ಹರ್ಯವತಾರಸ್ಯ ರಾಮಸ್ಯ ಪಿತ್ರಾದ್ಯಭಾವಾತ್। ಪಿತೃಶ್ರಾದ್ಧಮುನಿವಂದನಸೀತಾನ್ವೇಷಣಾದಿಕಂ ಲೀಲೈವೇತ್ಯನಾದರಣೀಯಮೇವೇತಿ ಭಾವಃ ॥ – (ವಾ.)

ಅ: ಆಗ ಮಾರ್ಕಂಡೇಯ ಮುನಿ ಪಾಂಡವರ ಬಳಿಗೆ ಬಂದು ಅವರಿಗೆ ಅನೇಕ ಕಥೆಗಳನ್ನು ತಿಳಿಸಿದರು; ಅವು ಭಾಷಾತ್ರಯಗಳಿಂದ ಕೂಡಿದ ಬಗೆಬಗೆಯ ಕಥೆಗಳಾಗಿದ್ದವು.

ಎ: ೧) ಮಾರ್ಕಂಡೇಯರು ಹಾಗೆ ಪಾಂಡವರಿಗೆ ತಿಳಿಸಿದ ಕಥಾವಿವರಗಳು ಮಾರ್ಕಂಡೇಯ ಸಮಾಸ್ಯಾಪರ್ವ, ರಾಮೋಪಾಖ್ಯಾನಪರ್ವ ಮತ್ತು ಪತಿವ್ರತಾಮಾಹಾತ್ಮ್ಯಪರ್ವ ಎಂಬ ಮೂರು ಪರ್ವಗಳಲ್ಲಿ ಮೂಲಮಹಾಭಾರತದಲ್ಲಿ ಸಂಗೃಹೀತವಾಗಿವೆ.

೨) ಇಲ್ಲಿ ಬಂದಿರುವ ರಾಮಕಥೆಯನ್ನು ಶ್ರೀಮದಾಚಾರ್ಯರು ಮೂರರಿಂದ ಒಂಭತ್ತನೆಯ ಅಧ್ಯಾಯದ ವರೆಗಿನ ಭಾಗದಲ್ಲಿ ನಿರ್ಣಯಿಸಿರುವರು. ಆದ್ದರಿಂದ ಮಹಾಭಾರತತಾತ್ಪರ್ಯ–ನಿರ್ಣಯದಲ್ಲಿ ರಾಮಕಥೆಯ ನಿರ್ಣಯವೇಕೆ ಎಂಬ ಶಂಕೆಗೆ ಅವಕಾಶವಿಲ್ಲ. 'ಉಕ್ತಾ ರಾಮ–ಕಥಾऽಪ್ಯಸ್ಮಿನ್ ಮಾರ್ಕಂಡೇಯಸಮಾಸ್ಯಯಾ' (೨/೫೦) ಎಂದು ಈಗಾಗಲೇ ಬಂದಿದೆ.

೩) ಅವುಗಳೆಲ್ಲಾ ಭಾಷಾತ್ರಯ ಸಮನ್ವಿತ ಎಂಬುದು ಉಪಲಕ್ಷಿತ. ರೀತಶತಕಗಳಿಂದಲೂ, ವ್ಯತ್ಯಾಸಾದಿ ಸಪ್ತ ಭೇದಗಳಿಂದಲೂ ಸಹ ಕೂಡಿದವು ಎಂದು ತಿಳಿಯಬೇಕು.

ಲೋಕದರ್ಶನಮಾಶ್ರಿತ್ಯ ದೇವಾಶ್ಚ ಮುನಯಸ್ತಥಾ ।
ಬ್ರೂಯುಃ ಕಥಾಸ್ತತ್ರ ಶಿಕ್ಷಾ ಗ್ರಾಹ್ಯಾ ನಾರ್ಥಃ ಕಥಂಚನ ॥ ೩೮೫ ॥

---

೩೮೪. 'ಮಾರ್ಕಂಡೇಯಸ್ತದಾಗತ್ಯ ತೇಷಾಮಕಥಯತ್ ಕಥಾಃ । ಬಹ್ವ್ಯಶ್ಚೈವ ವಿಚಿತ್ರಾಶ್ಚ ಭಾಷಾತ್ರಯಸಮನ್ವಿತಾಃ ॥' ಇತ್ಯತ್ರ ಬಹ್ವೀಃ ಕಥಾ ಅಕಥಯದಿತಿ ವಕ್ತವ್ಯೇ ಬಹ್ವ್ಯ ಇತಿ ಕಥಮುಕ್ತಮಿತ್ಯತಃ ಛಾಂದಸತ್ವಾತ್ ತಥೋಕ್ತಮಿತಿ ಕೇಚಿತ್ । ಅನ್ಯೇ ತು ಬಹ್ವ್ಯಃ ವಿಚಿತ್ರಾಃ ಯಾಃ ಕಥಾಸ್ತಥಾ ಅಕಥಯದಿತಿ । ಏವಂ ಚ ಯಾಸ್ತಾ ಇತ್ಯಧ್ಯಾಹಾರೇ ಸತಿ ನ ಛಾಂದಸತ್ವಮ್ ॥ –(ತಿ.)

೩೮೫. ತತ್ರ ದರ್ಶನಭಾಷಾ ಲೋಕದರ್ಶನಭಾಷಾ ಪರದರ್ಶನಭಾಷೇತಿ ತ್ರಿವಿಧಾ ಲೋಕದರ್ಶನಭಾಷೇತ್ಯನೇಕಧಾ ಲೋಕದರ್ಶನಂ ಲೋಕದರ್ಶನಭಾಷಾಮಾಶ್ರಿತ್ಯ ದೇವಾಃ ಮುನಿಯಶ್ಚ ಕಥಾ ಬ್ರೂಯುಃ । ತಥಾऽಪಿ ತತ್ರಾಸು ಕಥಾಸು ಶಿಕ್ಷಾ ಗ್ರಾಹ್ಯಾ ಅರ್ಥಃ ಕಥಂಚನ ನ ಗ್ರಾಹ್ಯಃ । –(ಜ.)

೩೮೫. 'ಲೋಕದರ್ಶನಮಾಶ್ರಿತ್ಯ ದೇವಾಶ್ಚ ಮುನಯಸ್ತಥಾ । ಬ್ರೂಯುಃ ಕಥಾಸ್ತತ್ರ ಶಿಕ್ಷಾ ಗ್ರಾಹ್ಯಾ ನಾರ್ಥಃ ಕಥಂಚನ' ಇತ್ಯತ್ರ ದೇವಾಃ ಮುನಯಶ್ಚ ಲೋಕದರ್ಶನಮಾಶ್ರಿತ್ಯ ಕಥಾ ಬ್ರೂಯುಸ್ತಥಾಪಿ ತತ್ರ ಕಥಾಸು ಯಥಾ ಲೋಕದರ್ಶನಂ ಪ್ರವೃತ್ತತ್ವಾಚ್ಛಿಕ್ಷಾ ಗ್ರಾಹ್ಯಾ । ತತ್ರ ಲೋಕಭ್ರಾಂತೇರಭಾವಾತ್ ಅರ್ಥಃ ಕಥಂಚನ ನ ಗ್ರಾಹ್ಯಃ । ಯಥಾ ರಾಮಕೃಷ್ಣಾದಿರೂಪೇ ಹರಿಃ ಪಿತರಂ ಭ್ರಾತರಂ ಚ ಭಕ್ತ್ಯಾನಮಸ್ಕರೋತೀತಿ ಗ್ರಂಥಾಂತರೇ ಹ್ಯುಚ್ಯತೇ ತತ್ರ ಭಕ್ತ್ಯಾ ಮಾತೃಪಿತೃವಂದನಾದಿಕಂ ಕಾರ್ಯಮಿತ್ಯಾದಿರೂಪಾ ಶಿಕ್ಷಾಂಗೀಕಾರ್ಯಾ ಹರೇರಪಿ ಕಶ್ಚನ ನಮಸ್ಕಾರ್ಯ ಇತ್ಯಾದಿರೂಪೋऽರ್ಥೋ ನಾಂಗೀಕಾರ್ಯಃ । ಅರ್ಥಃ ಸಮಾಧಿಭಾಷಾಸು ಗ್ರಾಹ್ಯಃ ॥ –(ತಿ.)

ಅ: ಶ್ಲೋಕದರ್ಶನವನ್ನು ಅವಲಂಬಿಸಿ ದೇವತೆಗಳೂ ಹಾಗೆಯೇ ಮುನಿಗಳು ಕಥೆಗಳನ್ನು ತಿಳಿಸುವರು. ಅವುಗಳಲ್ಲಿ ತತ್ತ್ವ ಮಾತ್ರ ಗ್ರಾಹ್ಯ, ಮೇಲ್ನೋಟದ ಕಥೆಯನ್ನು ಸರ್ವಥಾ ಸ್ವೀಕರಿಸಬಾರದು.

ಎ: ಸಮಾಧಿ, ದರ್ಶನ ಮತ್ತು ಗುಹ್ಯ ಎಂಬುದಾಗಿ ಭಾಷೆ ಮೂರು ವಿಧ. ಈ ಭಾಷಾತ್ರಯಗಳ ಬಗ್ಗೆ ವಿವೇಚನೆ ಈಗಾಗಲೇ ಎರಡನೆಯ ಅಧ್ಯಾಯದಲ್ಲಿ ಬಂದಿದೆ(೨/೧೨೦–೧೨೨). ವಿವರ–ಗಳನ್ನೂ ಸಹ ಅಲ್ಲಿಯೇ ಕಾಣಬಹುದು. ಇದರ ಬಗ್ಗೆ ಮತ್ತೂ ಹೆಚ್ಚು ವಿವರಗಳನ್ನು ಭಾಗವತ ಏಕಾದಶಸ್ಕಂಧದ ತಾತ್ಪರ್ಯದಲ್ಲಿ ನೋಡಬಹುದು.

ಅರ್ಥಃ ಸಮಾಧಿಭಾಷಾಸು ಗ್ರಾಹ್ಯಃ ಸರ್ವೋಽಪ್ಯಸಂಶಯಮ್ ।
ಪರದರ್ಶನಭಾಷಾಸು ಜ್ಞೇಯಂ ತದ್ದರ್ಶನಂ ತಥಾ ॥ ೩೮೬ ॥

ಗ್ರಾಹ್ಯೋ ನಾರ್ಥೋ ವೈದಿಕಂ ತು ದರ್ಶನಂ ಗ್ರಾಹ್ಯಮೇವ ಚ ।
ಅನ್ಯಾರ್ಥೋ ಗುಹ್ಯಭಾಷಾಸು ಗ್ರಾಹ್ಯ ಏವಂ ವಿನಿರ್ಣಯಃ ॥ ೩೮೭ ॥

---

೩೮೬. ಸಮಾಧಿಭಾಷಾಸು ಇತ್ಯತ್ರ ತ್ರಿವಿಧಾಂ ದರ್ಶನಭಾಷಾಮನವಲಂಬ್ಯ ಕೇವಲಸತ್ಸಿದ್ಧಾಂತಪ್ರತಿಪಾದಕ ಸ್ಪಷ್ಟವಚನಮ್। ಯಥಾ "ವಿಷ್ಣೋರ್ನು ಕಂ" "ನ ತೇ ವಿಷ್ಣೋ ಜಾಯಮಾನಃ" "ಪರೋ ಮಾತ್ರಯಾ ತನ್ವಾ ವೃಧಾನ" "ನಾಸ್ತಿ ನಾರಾಯಣಸಮಂ ನ ಭೂತಂ ನ ಭವಿಷ್ಯತಿ" ಇತ್ಯಾದಿಕಮ್। ನ ಚೇದಮಪಿ ವೈಷ್ಣವದರ್ಶನಭಾಷಾರೂಪಮಿತಿ ವಾಚ್ಯಮ್। ಕಸ್ಯಚಿತ್ ಸ್ವಸಿದ್ಧಾಂತಸ್ಯಾಭಾವೇ ಮೂಕತಾಪ್ರಸಂಗಾತ್। ಪರಿಶೇಷಾದ್ವೈಷ್ಣವಸಿದ್ಧಾಂತತ್ವೇ ಆಪಾತತಃ ಸ್ವಾನಭಿಮತಾರ್ಥಪ್ರತಿಪಾದಕದರ್ಶನಭಾಷಾತ್ವಸ್ಯ ಈದೃಶವಾಕ್ಯೇಷ್ವಸಂಭವಾತ್। ಪರದರ್ಶನಭಾಷಾಸು ಪರೇಷಾಂ= ವೈದಿಕೇಭ್ಯೋಽನ್ಯೇಷಾಂ ಪಾಶುಪತಾದೀನಾಂ ಯಾನಿ ದರ್ಶನಾನಿ ತಾನ್ಯಾಶ್ರಿತ್ಯ ಯಾ ಭಾಷಾ ಭಾರತಾದಿಷು ತತ್ರ ತತ್ರ ಭಾಷಣಾನಿ ಶಿವಃ ಸರ್ವೋತ್ತಮಃ, ಕೃಷ್ಣೇನ ಶಿವಂ ಪ್ರತಿ ತಪಃ ಕೃತಂ, ಕೈಲಾಸಯಾತ್ರಾ ಕೃತೇತ್ಯಾದಿರೂಪಾಣಿ ತದ್ದರ್ಶನಂ= ತೇಷಾಂ ಸಿದ್ಧಾಂತಃ ತಥಾ= ತೇನ ಪ್ರಕಾರೇಣೇತಿ ಜ್ಞಾಪಯಿತುಮೇವ ವ್ಯಾಸಾದಯೋ ವದಂತೀತಿ ಜ್ಞೇಯಮ್ ॥ –(ವಾ.)

೩೮೬. ಅರ್ಥಃ ಶಿವಾದಿಸರ್ವೋತ್ತಮತ್ವಪ್ರತಿಪಾದಕೋಽರ್ಥಃ। ಸ ಗ್ರಾಹ್ಯಃ ಶೈವಾದಿದರ್ಶನಾನಾಂ ಅವೈದಿಕ-ಮೂಲಕತ್ವಾದರ್ಥೋ ನ ಗ್ರಾಹ್ಯ ಇತಿ ಭಾವಃ। ನನು ದರ್ಶನೋಕ್ತಃ ಸರ್ವೋಽಪ್ಯರ್ಥೋ ನ ಗ್ರಾಹ್ಯಃ ಕಿಮಿತ್ಯಾಶಂಕ್ಯನೇತ್ಯಾಹ। ವೈದಿಕಮಿತಿ। ವಿಷ್ಣುಃಸರ್ವೋತ್ತಮ ಇತ್ಯಾದ್ಯರ್ಥಪ್ರತಿಪಾದಕವೈದಿಕಂವೇದಾರ್ಥಪ್ರತಿಪಾದಕಂ ದರ್ಶನಭಾಷೋಕ್ತಂಗ್ರಾಹ್ಯಮೇವ ಹೀತಿಶ್ರುತ್ಯಾದೌ ಪ್ರಸಿದ್ಧಿಃ ಗುಹ್ಯಭಾಷಾಸುಗುಹ್ಯಭಾಷಾಯಾಪ್ರವೃತ್ತಾಸುಕಥಾಸು ಅನ್ಯಾರ್ಥಃ ಪ್ರತೀಯಮಾನಾರ್ಥಾದನ್ಯೋಽರ್ಥೌಗ್ರಾಹ್ಯಃಯಥಾ ಉಚ್ಛಿಷ್ಟಂ ಶಿವನಿರ್ಮಾಲ್ಯಂ ವಮನಂ ಮೃತಕಪರ್ವಟಂ। ಕಾಕೀವಿಷ್ಠಾಸಮಾಯುಕ್ತಂ ಪಂಚಪೂತಾನಿ ಭಾರತ ಇತ್ಯತ್ರಾಯಮರ್ಥಃ। ಉಚ್ಛಿಷ್ಟಂ ಗೋವತ್ಸಪೀತ-ಪ್ರತಿಮುಕ್ತಸ್ತನಕ್ಷೀರಂ। ಶಿವನಿರ್ಮಾಲ್ಯಂ ಗಂಗೋದಕಂ। ವಮನಂ ಮಾವಿಕಂಮಧು। ಮೃತಕಪರ್ವಟಂಕೌಶೇಯವಾಸಃ। ಕಾಕವಿಷ್ಠಾಸಮಾಯುಕ್ತಂ ಅಶ್ವತ್ಥವಟಾದಿಕಂಗುಹ್ಯತೇ। ಏವಮನ್ಯಾರ್ಥೋಜ್ಞೇಯಃ ಏವಂ ಕ್ವಪ್ರಕಾರೇಣಾವಿನಿರ್ಣಯಃ। ಶಾಸ್ತೇಷ್ವಿತಿ ಶೇಷಃ। –(ಜ.)

ಅ: ಸಮಾಧಿ ಭಾಷೆಗಳಲ್ಲಿ ಎಲ್ಲಾ ಅರ್ಥವೂ ಗ್ರಾಹ್ಯವೇ, ಸಂಶಯವಿಲ್ಲ. ಪರದರ್ಶನ ಭಾಷೆಗಳಲ್ಲಿ ಆ ದರ್ಶನಗಳನ್ನು ಆ ತೆರನಾದವು ಎಂದು ಮಾತ್ರ ತಿಳಿಯಬೇಕು. ವಿಷಯವನ್ನು ಯಥಾರ್ಥ ಎಂದು ಗ್ರಹಿಸಬಾರದು. ವೈದಿಕ ದರ್ಶನವು ಮಾತ್ರ ಸರ್ವಥಾ ಗ್ರಾಹ್ಯವೇ ಆಗಿದೆ. ಗುಹ್ಯ ಭಾಷೆಗಳಲ್ಲಿ ಮೇಲೆ ಕಾಣುವ ಅರ್ಥಕ್ಕಿಂತ ಅದರೊಳಗಿನ ಬೇರೊಂದು ಅರ್ಥವನ್ನೇ ಮುಖ್ಯಾರ್ಥವನ್ನಾಗಿ ಗ್ರಹಿಸಬೇಕು. ಇದು ಭಾಷೆಗಳ ವಿಶೇಷ ನಿರ್ಣಯ.

---

೩೮೬. ಸರ್ವೋಽಪ್ಯಸಂಶಯಮಿತ್ಯತ್ರ 'ಸರ್ವಂ ವಶೇ ಭಗವತೋ ನ ವಯಂ ಸ್ವತಂತ್ರಾ ನಾಹಂ ವೇದ ಪರೇ ಕುತಃ' ಇತ್ಯಾದಿಷು ಸಮಾಧಿಭಾಷಯಾ ಪ್ರವೃತ್ತಾಸು ಕಥಾಸು ಪ್ರತಿಪಾದ್ಯಃ ಸರ್ವೋಽಪ್ಯರ್ಥಃ ಅಸಂಶಯಂ ಯಥಾ ಸ್ಯಾತ್ ತಥಾ ಗ್ರಾಹ್ಯಃ । ಉಕ್ತೋ ಯೋ ಮಹಿಮಾ ವಿಷ್ಣೋಃ ಸ ತೂಕ್ತೋ ಹಿ ಸಮಾಧಿನೇತಿ ವಾಕ್ಯಾತ್ । ಪರದರ್ಶನಭಾಷಯಾ ಪ್ರವೃತ್ತಾಸು ಶಿವಾದೀನಾಂ ಸರ್ವೋತ್ತಮತ್ವಪ್ರತಿಪಾದಕಾಸು ಕಥಾಸು ದರ್ಶನಭಾಷಾಸು ತೇಷಾಂ ಶಿವಾದೀನಾಂ ತಥಾ ದರ್ಶನಮಿತಿ ಜ್ಞೇಯಮ್ । ಶಿವಾದಿಸರ್ವೋತ್ತಮತ್ವಂ ನ ಗ್ರಾಹ್ಯಮಿತಿ ಭಾವಃ । ನನು ದರ್ಶನೋಕ್ತೇಃ ಸರ್ವೋಽಪ್ಯರ್ಥಃ ನ ಗ್ರಾಹ್ಯಃ । ಕಿಮಿತ್ಯತ ಆಹ– ವೈದಿಕಂ ತ್ವಿತಿ (೨೨/೩೮೭) । ವಿಷ್ಣುಃ ಸರ್ವೋತ್ತಮ ಇತ್ಯರ್ಥಪ್ರತಿಪಾದಕಂ ಪರದರ್ಶನಭಾಷೋಕ್ತಂ ಹಿ ಯಸ್ಮಾದ್ವೈದಿಕಂ ತಸ್ಮಾದ್ಗ್ರಾಹ್ಯಮೇವೇತ್ಯರ್ಥಃ । ಗುಹ್ಯಭಾಷಯಾ ಪ್ರವೃತ್ತಾಸು ಕಥಾಸು ಅನ್ಯಾರ್ಥಃಪ್ರತೀಯಮಾನಾದನ್ಯೋಽರ್ಥಃ ಗ್ರಾಹ್ಯಃ । 'ಉಚ್ಛಿಷ್ಟಂ ಶಿವನಿರ್ಮಾಲ್ಯಂ' ಇತ್ಯತ್ರ ಗೋವತ್ಸಪೀತಮುಚ್ಛಿಷ್ಟಂ ಸ್ತನಸ್ಥಕ್ಷೀರಮುಚ್ಛಿಷ್ಟಂ ಗೃಹ್ಯತೇಽನ್ಯದಪ್ಯೇವಮುಕ್ತಪ್ರಕಾರೇಣ ನಿರ್ಣಯಃ ॥ –(ತಿ.)

೩೮೭. ಅರ್ಥಃ = ತತ್ಪ್ರೋಕ್ತಶಿವಸರ್ವೋತ್ತಮತ್ವಾದಿರೂಪಃ ನ ಗ್ರಾಹ್ಯಃ = ಸ್ವೇನಾಪಿ ನ ಗ್ರಾಹ್ಯಃ ನಾಪಿ ವಿವೇಕಿಲೌಕಿಕೈರಪಿ ಗ್ರಾಹ್ಯ ಇತಿ ಭಾವಃ। ವೈದಿಕಂ ತು ದರ್ಶನಂ ಆಪಾತತಃ ಶಿವಾದೀನಾಮವಿದ್ಯಮಾನಮುತ್ತಮತ್ವಂ ದರ್ಶಯದ್ರುದ್ರಸೂಕ್ತಾದಿಕಮ್। ಅಸ್ಯ ಪರದರ್ಶನತ್ವೇಽಪಿ ಅಪೌರುಷೇಯತ್ವೇನ ಸರ್ವಥಾ ತ್ಯಾಗಾನರ್ಹತ್ವಂ ಸೂಚಯಿತುಂ ತುಶಬ್ದಃ। ಅತ ಏವ ಗ್ರಾಹ್ಯಮೇವೇತ್ಯುಕ್ತಮ್। ಚಶಬ್ದೇನ ''ಯೋ ದೇವಾನಾಂ ನಾಮಧಾ ಏಕ ಏವ'' ಇತಿ ವೇದ ಏವೋಕ್ತಾಂ ವಿಷ್ಣೋಸ್ಸರ್ವನಾಮವತ್ತ್ವಾದಿಯುಕ್ತಿಂ ಸಮುಚ್ಚಿನೋತಿ। ಅಪೌರುಷೇಯವೇದಸ್ಯ ಸರ್ವಥಾಽಪ್ರಾಮಾಣ್ಯಾಯೋಗಾತ್ ''ರುಜಂ ದ್ರಾವಯತೇ ಯಸ್ಮಾದ್ರುದ್ರಸ್ತಸ್ಮಾಜ್ಜನಾರ್ದನಃ'' ಇತ್ಯಾದಿ ಸ್ಮೃತ್ಯುಕ್ತ-ವ್ಯುತ್ಪತ್ತಿಮಾಶ್ರಿತ್ಯ ತದಪಿ ಸೂಕ್ತಂ ವಿಷ್ಣುಸೂಕ್ತಮಿತಿ ಗ್ರಾಹ್ಯಮೇವ। ನ ತು ಪರದರ್ಶನವತ್ ತ್ಯಾಜ್ಯಮಿತಿ ಭಾವಃ। ಅತ ಏವೈವಕಾರಃ। ಇಯಂ ಭಾಷಾ ಪರದರ್ಶನರೀತ್ಯಾ ಪ್ರವೃತ್ತತ್ವಾತ್ ದರ್ಶನಭಾಷೈವ। ನ ತು ಗುಹ್ಯಭಾಷಾ। ದರ್ಶನಾಂತರಪ್ರಮೇಯಮನವಲಂಬ್ಯ ಯಾ ಲೌಕಿಕೇಽರ್ಥೇ ನಿರೂಢಭಾಷಾ ಸಾ ಗುಹ್ಯಭಾಷಾ। ಈದೃಶ ಗುಹ್ಯಭಾಷಾಸು ಅನ್ಯಾರ್ಥೋಽಪಿ ಗ್ರಾಹ್ಯಃ। ಯಥಾ ''ಉಚ್ಛಿಷ್ಟಂ ಶಿವನಿರ್ಮಾಲ್ಯಂ ವಾಂತಂ ಚ ಮೃತಕರ್ಪಟಮ್। ಕಾಕವಿಷ್ಠಾಸಮಾಯುಕ್ತಂ ಪಂಚ ಪೂತಾನಿ ಭಾರತ'' ಇತ್ಯಾದಿ । ಅತ್ರ ಯಥಾವಸ್ಥಿತಸ್ಯಾರ್ಥಸ್ಯ ಬಾಧಿತತ್ವಾತ್ ಉಚ್ಛಿಷ್ಟಪದೇನ ಉಚ್ಛಿಷ್ಟಮಿವ ಪ್ರತೀಯಮಾನಂ ವತ್ಸೋಚ್ಛಿಷ್ಟಮುಚ್ಯತೇ। ಶಿವನಿರ್ಮಾಲ್ಯಪದೇನ ಚ ಶಿವೇನ ಶಿರಸಿ ಧೃತತ್ವಮಾತ್ರತಃ ಶಿವನಿರ್ಮಾಲ್ಯಮಿವ ಪ್ರತೀಯಮಾನಂ ಗಂಗಾಜಲಮುಚ್ಯತೇ। ವಾಂತಪದೇನ ಮಧು-ಮಕ್ಷಿಕೋದರವಿನಿಸ್ಸೃತತ್ವಮಾತ್ರೇಣ ವಾಂತೋಪಮಂ ಮಧೂಚ್ಯತೇ। ಅತ್ರಾಪಿ ಪುಷ್ಪರಸಾದಿಕಂ ಸ್ವಯಮನಾಸ್ವಾ ಬಹಿರ್ನಿಸ್ಸಾರಯಂತಿ। ಮಧುಭಾವಾನಂತರಮೇವ ಸ್ವೀಕುರ್ವಂತಿ। ಅತೋಽಗ್ನಿನಾ ಸ್ವಯಮನಾಸ್ವಾದ್ಯ ಸ್ವಜಿಹ್ವಾಯಾದೀಯಮಾನದೇವತಾಹುತಿವದಿದಮಪಿ ಶುದ್ಧಮಿತಿ ಭಾವಃ। ಮೃತಕರ್ಪಟಪದೇನ ಮೃತಕೃಮಿಕೋಶೋತ್ಥಂ ವಸ್ತ್ರಮುಚ್ಯತೇ। ಕಾಕವಿಷ್ಠಾಸಮಾಯುಕ್ತಪದೇನ ಕಾಕೈರಶ್ವತ್ಥಪಕ್ವಫಲಭಕ್ಷಣೇ ಕೃತೇ ಸತಿ ತದ್ವಿಷ್ಠಾಯಾಂ ಯದ್ಬೀಜಂ ತದುತ್ಥೋಽಶ್ವತ್ಥ ಉಚ್ಯತೇ॥ –(ವಾ.)

ವಿ: ದರ್ಶನ ಭಾಷೆಯನ್ನು ಲೋಕದರ್ಶನ ಭಾಷೆ, ಪರದರ್ಶನ ಭಾಷೆ, ವೈದಿಕ ದರ್ಶನ ಭಾಷೆ ಎಂಬುದಾಗಿ ಮೂರು ಬಗೆಯಲ್ಲಿ ವಿವೇಚಿಸಿರುವುದು ಈ ಭಾಗದ ವೈಶಿಷ್ಟ್ಯ. ಸಮಾಧಿ ಭಾಷೆ ಮೊದಲಾದ ಮೂರು ಭಾಷೆಗಳು ಪ್ರತ್ಯೇಕವಾಗಿ ಅವಾಂತರ ಪ್ರಭೇದಗಳನ್ನು ಹೊಂದಿದ್ದು ಒಟ್ಟು ಎಂಭತ್ತೊಂದು ಬಗೆಯಾದ್ದರಿಂದ 'ಭಾಷಾಸು' ಎಂಬುದಾಗಿ ಇಲ್ಲಿ ಬಹುವಚನವನ್ನು ಪ್ರಯೋಗಿಸ-ಲಾಗಿದೆ ಎಂದು ತಿಳಿಯಬೇಕು.

ಜಯದ್ರಥನಿಗೆ ಶಿವನ ವರ

ಜಯದ್ರಥಸ್ತು ಭೀಮೇನ ತದಾ ಪಂಚಶಿಖೀಕೃತಃ ।
ತಪಸಾ ಶಿವಮಾರಾಧ್ಯ ವವ್ರೇ ಪಾಂಡವರೋಧನಮ್ ।
ಋತೇऽರ್ಜುನಾದರ್ಜುನಸ್ಯ ತುಷ್ಟೋ ಹಿ ತಪಸಾ ಶಿವಃ ॥ ೩೮೮ ॥

ಅ: ಭೀಮಸೇನನಿಂದ ಪಂಚಚೂಡನಾಗಿ ಮಾಡಲ್ಪಟ್ಟ ಜಯದ್ರಥ ತಪಸ್ಸಿನಿಂದ ಶಿವನನ್ನು ಆರಾಧಿಸಿ ಅವನಿಂದ ಪಾಂಡವರನ್ನು ತಡೆದು ನಿಲ್ಲಿಸುವ ವರವನ್ನು ಬೇಡಿದ. ಶಿವ ಅರ್ಜುನನ

---

೩೮೭. ಭಾಷಾತ್ಮೈವಿಧ್ಯದ ಬಗ್ಗೆ ಈ ಹಿಂದೆ ಹೇಳಿದ್ದನ್ನು ಗಮನಿಸಬೇಕು(೨/೧೨೫).

೩೮೭. ಗುಹ್ಯಭಾಷಾಸು ಗುಹ್ಯಭಾಷಯಾ ಪ್ರವೃತ್ತಾಸು ಕಥಾಸು ಪ್ರತೀತೋऽರ್ಥೋ ನ ಗ್ರಾಹ್ಯಃ ಕಿಂತು ಅನ್ಯಾರ್ಥೋ ಗ್ರಾಹ್ಯಃ । ಯಥಾ 'ಉಚ್ಛಿಷ್ಟಂ ಶಿವನಿರ್ಮಾಲ್ಯಮ್' ಇತ್ಯಾದಿ । – (ವ.)

೩೮೭. 'ಕೃಷ್ಣೋ ವವಂದೇ ಪಿತರಂ ಭಕ್ತ್ಯಾ ಪೂಜ್ಯತಮಂ ಹ್ಯಜಃ' ಇತ್ಯತ್ರ ಪುತ್ರೇಣ ಭಕ್ತ್ಯಾ ಪಿತೃವಂದನಂ ಕರ್ತವ್ಯಮಿತ್ಯಾದಿರೂಪಾ ಶಿಷ್ಟಾಗ್ರಾಹ್ಯಾ, ಕೃಷ್ಣಸ್ಯ ಪೂಜ್ಯತಮಃ ಕಶ್ಚನ ಪಿತಾ ವರ್ತತ ಇತ್ಯಾದಿ ರೂಪೋऽರ್ಥಸ್ತು ನ ಗ್ರಾಹ್ಯಃ। ಕೃಷ್ಣಸ್ಯ ದೇಹಂ ತ್ವದಹದರ್ಜುನಃ ಪತಿತಂ ಭುವೀತ್ಯತ್ರ ಮೃತದೇಹಸ್ಯಾಗ್ನಿಸಂಸ್ಕಾರಃ ಕರ್ತವ್ಯ ಇತ್ಯಾದಿರೂಪಾ ಶಿಷ್ಟಾಗ್ರಾಹ್ಯಾ, ಕೃಷ್ಣದೇಹ ಪತನಾದಿ ರೂಪೋऽರ್ಥಸ್ತು ನ ಗ್ರಾಹ್ಯಃ। – (ಜ.)

೩೮೭. ದರ್ಶನಾದಿಭಾಷಾಣಾಂ ತ್ರಿವಿಧತ್ವಾದ್ಭಾಷಾಸ್ವಿತಿ ಬಹುವಚನಂ। ಪರದರ್ಶನಭಾಷಾಸು ಶಿವಸ್ಕಾಂದ-ಸೂರ್ಯವಿನಾಯಕಶಕ್ತೀನಾಂ ಪ್ರತ್ಯೇಕಂ ಸರ್ವೋತ್ತಮತ್ವಪ್ರತಿಪಾದಕತ್ವೇನ ಪ್ರವೃತ್ತಾಸು ಕಥಾಸು ಪ್ರವೃತ್ತಾ-ಸ್ವಿತಿಕಾಕಚ್ಯಶೇಷಃ। ತದ್ದರ್ಶನಂ ತೇಷಾಂ ಶಿವಾದೀನಾಂ ದರ್ಶನಂ ಸಂಪ್ರದಾಯಮಿತ್ಯರ್ಥಃ। – (ಜ.)

೩೮೭. ಶ್ರುತ್ಯವಿರುದ್ಧಂ ತದನುಕೂಲದರ್ಶನೋಕ್ತಮಪ್ಯಂಗೀಕಾರ್ಯಮಿತ್ಯರ್ಥಃ । – (ತಾ.)

೩೮೮. ಜಯದ್ರಥಪಂಚಶಿಖೀಕರಣಸ್ಯ ಪ್ರಾಗನುಕೃತ್ವಾತ್ ಅನುವಾದವ್ಯಾಜೇನ ತದಿದಾನೀಮಾಹ ಜಯದ್ರಥ ಇತಿ॥ – (ವಾ.)

೩೮೮. ಪ್ರಧಾನಃ ಸೋऽಸ್ತ್ರವಿದುಷಾಂ ತೇನ ಕೃಷ್ಣೇನ ರಕ್ಷ್ಯತೇ॥
ಋತೇऽರ್ಜುನಂ ಮಹಾಬಾಹುಂ ನರಂ ನಾಮ ಸುರೇಶ್ವರಮ್ ।
ತಮೇಕಂ ವರ್ಜಯಿತ್ವಾ ತು ಸರ್ವಾಂ ಯೌಧಿಷ್ಠಿರಂ ಬಲಮ್ ॥
ಚತುರಃ ಪಾಂಡವಾನ್ ರಾಜನ್ ದಿನೈಕಂ ಜೇಷ್ಯಸೇ ರಿಪೂನ್ ॥ – ಭಾರತ (ವನ. ೨೭೨/೨೯,೨೪,೨೭)

ತಪಸ್ಸಿನಿಂದ ಸಂತುಷ್ಟನಾಗಿದ್ದರಿಂದ ಅವನ ಹೊರತು ಉಳಿದ ಪಾಂಡವರನ್ನು ತಡೆಯುವ ವರವನ್ನು ನೀಡಿದ.

ಎ: ೧) ದ್ರೌಪದಿಯ ದಾಸ ಎಂದು ಹೇಳಿಕೊಂಡ ಜಯದ್ರಥ ಹೀಗೆ ಪಾಂಡವರ ಮೇಲೆ ವೈರ ಸಾಧಿಸಲೆಂದು ತಪಸ್ಸನ್ನು ಆಚರಿಸಿದ್ದರಿಂದ ಅವನು ಹಾಗೆ ಹೇಳಿದ್ದು ಬರೀ ಬೂಟಾಟಿಕೆ ಮಾತ್ರ ಎಂಬುದು ಸ್ಫುಟಪಡುವುದು.

೨) ದ್ರೌಪದಿಯ ದಾಸ ಎಂಬುದು ನಿಜವಾದ ಅರ್ಥದಲ್ಲಿ ತಾತ್ವಿಕವಾದ ಪದ. ಅದನ್ನು ಅರ್ಥಾನುಸಂಧಾನಪೂರ್ವಕ ನುಡಿದರೆ ಸದ್ಗತಿಯೇ ಖಚಿತ. ಆದರೆ, ಜಯದ್ರಥನದು ವಂಚಕ ಪ್ರವೃತ್ತಿಯಾದ್ದರಿಂದ ಅವನು ಆ ಮಾತನ್ನಾಡಿಯೂ ಅಧೋಗತಿಗೆ ತೆರಳಿದ.

೩) ಸಕಲ ಪಾಂಡವರನ್ನೂ ಒಂದು ದಿನದ ಮಟ್ಟಿಗಾದರೂ ಗೆಲ್ಲುವ ವರವನ್ನು ನೀಡಬೇಕೆಂದು ಶಿವನನ್ನು ಬೇಡಿದಾಗ, ಶಿವ ಅದಕ್ಕೆ ಒಪ್ಪದೇ ಒಂದು ದಿನದ ಮಟ್ಟಿಗೆ ಮಾತ್ರ ಅರ್ಜುನನ ಹೊರತು ಉಳಿದ ನಾಲ್ವರನ್ನು ತಡೆದು ನಿಲ್ಲಿಸುವ ವರವನ್ನು ಮಾತ್ರ ನೀಡಿದ. ಅರ್ಜುನನಿಗೆ ಆಗಲೇ ಒಲಿದು ಪಾಶುಪತಾಸ್ತ್ರಾದಿಗಳನ್ನು ತಾನು ನೀಡಿದ್ದರಿಂದ ಅವನನ್ನು ತಡೆಯಬಲ್ಲ ಶಕ್ತಿನೀಡಲು ನಿರಾಕರಿಸಿದ.

೪) ಶಿವ ಹಾಗೆ ವರ ನೀಡಿದ್ದರೂ ಅದು ಸಾರ್ಥಕವಾಗುವುದು ಭೀಮನ ಹೊರತು ಇತರ ಮೂವರ ಮೇಲೆ ಮಾತ್ರ. ಅದು ಶಿವನಿಗೂ ಗೊತ್ತಿದ್ದ ವಿಚಾರವೇ. ಆದರೂ ಹಾಗೆ ವರ ನೀಡಿದ್ದು ತಾವು ಹಾಗೆ ನೀಡಿದರೂ ಭೀಮಸೇನನ ವಿಚಾರದಲ್ಲಿ ಅದು ಸರ್ವಥಾ ನಡೆಯದು ಎಂಬ ವಿವೇಕದಿಂದಲೇ ಎಂದು ತಿಳಿಯಬೇಕು.

೫) ಅಸುರ ಮೋಹನವೂ ಅದರಿಂದ ಆಯಿತು ಎಂದು ಭಾವಿಸಬಹುದು. ಆ ಬಗ್ಗೆ ವಿವರಗಳನ್ನು ಮುಂದೆ ದ್ರೋಣಪರ್ವನಿರ್ಣಯದಲ್ಲಿ ಕಾಣಬಹುದು (೨೬/೪೧,೪೨).

ದುರ್ಯೋಧನ ಮಾಡಿದ ಪೌಂಡರೀಕಯಾಗ

ವನೇ ವಸತ್ಸ್ವೇವ ಚ ಪಾಂಡವೇಷು
ಚಕ್ರೇ ಯಜ್ಞಂ ಪೌಂಡರೀಕಾಖ್ಯಮೇವ।
ಸಂಸ್ಪರ್ಧಯಾ ರಾಜಸೂಯಸ್ಯ ರಾಜಾ
ದುರ್ಯೋಧನೋ ನಾಪ್ಯಸೌ ತತ್ಕಲಾರ್ಹಃ ॥ ೩೮ ॥

---

೩೮. ಪೌಂಡರೀಕಾಖ್ಯಮೇವೇತ್ಯೇವಕಾರಸ್ಯ ಸಂಸ್ಪರ್ಧಯೈವೇತ್ಯುತ್ತರೇಣ ಸಂಬಂಧಃ ॥ – (ವಾ.)

ಅ: ಪಾಂಡವರು ಕಾಡಿನಲ್ಲಿ ನೆಲೆಸಿದ್ದಾಗಲೇ ದುರ್ಯೋಧನ ಅವರು ಮಾಡಿದ ರಾಜಸೂಯಯಾಗದ ಮೇಲಿನ ಸ್ಪರ್ಧೆಯಿಂದ ಪುಂಡರೀಕ ಎಂಬ ಯಜ್ಞವನ್ನು ಮಾಡಿದ; ಅದು ರಾಜಸೂಯಯಾಗದ ಒಂದಂಶಕ್ಕೂ ಸಾಟಿಯಾಗಿರಲಿಲ್ಲ.

ವಿ: ೧) ದುರ್ಯೋಧನ ರಾಜಸೂಯಯಾಗವನ್ನೇ ಮಾಡದೆ ಪುಂಡರೀಕ ಯಾಗವನ್ನು ಮಾಡತೊಡಗಿದ್ದು ತಾನು ಸಕಲ ರಾಜರನ್ನೂ ಗೆಲ್ಲುವ ಸಾಮರ್ಥ್ಯ ಹೊಂದಿರದಿದ್ದುದೇ ಕಾರಣ ಎಂದು ತಿಳಿಯಬೇಕು.

೨) ಪುಂಡರೀಕ ಯಾಗವೂ ವೈಷ್ಣವ ಯಾಗವೇ. ಅದನ್ನು ಅವನು ಮಾಡಿದ್ದು ಮಾತ್ರ ವಿಷ್ಣುಭಕ್ತಿಯಿಂದಲ್ಲ, ಕೇವಲ ವಿಷ್ಣುಭಕ್ತರ ದ್ವೇಷದಿಂದ ಎಂಬುದು ವಿಪರ್ಯಾಸ. ಆ ಯಾಗಕ್ಕೆ ಸಾಕ್ಷಾತ್ ವಿಷ್ಣುವೇ ಆದ ಕೃಷ್ಣನಿಗೇ ಅವನು ಆಹ್ವಾನ ನೀಡಿರಲಿಲ್ಲ ಎಂದಮೇಲೆ ಆ ಯಾಗದ ವೈಫಲ್ಯ ಅತ್ಯಂತ ಸ್ಪಷ್ಟ. ಎಂದರೆ ದುರ್ಯೋಧನನದ್ದೂ ಸಹ ತೋರಿಕೆಯ ಯಾಗವೇ ಹೊರತು ನಿಜವಾದ ಯಾಗವಾಗಿರಲಿಲ್ಲ.

೩) ಬೃಹತೀಸಹಸ್ರ, ಪವಮಾನ ಮೊದಲಾದ ಹೋಮಗಳನ್ನು ವಿಷ್ಣುಭಕ್ತಿಯಿಲ್ಲದೇ ಮಾಡಿದಾಗ ಅವುಗಳು ಸಹ ಸಾರ್ಥಕವೆನ್ನಿಸಲಾರವು ಎನ್ನುವುದಕ್ಕೆ ಇದು ಸೂಚಕ ಎಂದೂ ತಿಳಿಯಬಹುದು. ಅಭಕ್ತರು ಮಾಡುವ ದೇವಪೂಜಾದಿಗಳೂ ಸಹ ಇದರಂತೆ ಸರ್ವಥಾ ವ್ಯರ್ಥ–ವಾಗುವವು ಎಂಬುದೂ ನಿಶ್ಚಿತ.

ದುರ್ಯೋಧನಸ್ಯಾಜ್ಞಯಾ ಪಾಂಡವಾನಾಂ
ದುಃಶಾಸನಃ ಪ್ರೇಷಯಾಮಾಸ ದೂತಮ್ ।
ಆಗಚ್ಛತೇತ್ಯವಮಾನಾಯ ತಂ ತು
ಭೀಮೋಽವಾದೀದ್ರಣಯಜ್ಞಂ ಸುಗಮ್ಯಮ್ ॥ ೩೯೦ ॥

---

೩೮೯. ಅವೈಷ್ಣವಕೃತಂ ಕರ್ಮ ಸರ್ವಮಂತವದುಚ್ಯತೇ । – ಇತಿ ಉತ್ತರತ್ರ ।
ಅಂತವತ್ತು ಫಲಂ ತೇಷಾಂ ತದ್ಭವತ್ಯಲ್ಪಮೇಧಸಾಮ್ – ಗೀತಾ (೭/೨೩)
ಯುಧಿಷ್ಠಿರಸ್ಯ ಯಜ್ಞೇನ ನ ಸಮೋ ಹ್ಯೇಷ ವೈ ಕ್ರತುಃ ।
ನೈವ ತಸ್ಯ ಕ್ರತೋರೇಷ ಕಲಾಮರ್ಹತಿ ಷೋಡಶೀಮ್ ॥ – ಭಾರತ (ವನ. ೨೫೭/೩)

೩೯೦. ''ಗಚ್ಛ ದ್ವೈತವನಂ ಶೀಘ್ರಂ ಪಾಂಡವಾನ್ ಪಾಪಪೂರುಷಾನ್'' ॥ .... – ಭಾರತ (ವನ. ೨೫೭/೩)

ಅ: ದುರ್ಯೋಧನನ ಅಪ್ಪಣೆಯಂತೆ ದುಶ್ಶಾಸನ ಪಾಂಡವರನ್ನು ಅವಮಾನಿಸಲೆಂದು ದೂತನ ಮೂಲಕ ''ಬನ್ನಿ'' ಎಂದು ಹೇಳಿ ಕಳಿಸಿದ. ಅವನಿಗೆ ಭೀಮಸೇನ ತಿಳಿಸಿದ ''ನಾವು ತಪ್ಪದೆ ಬರುವುದು ರಣಯಜ್ಞಕ್ಕೇ''.

ವಿ: ಭೀಮನದು ಯಾವಾಗಲೂ ಶುದ್ಧಭಾಗವತಧರ್ಮ. ಆದ್ದರಿಂದ ಧರ್ಮರಾಜನಂತೆ ಕೇವಲ ''ಬರುವುದಿಲ್ಲ'' ಎಂದು ಸೌಮ್ಯವಾಗಿ ಉತ್ತರಿಸದೇ ''ರಣಯಜ್ಞಕ್ಕೆ ಬಂದೇ ಬರುವೆವು'' ಎಂದು ಖಚಿತವಾಗಿ ತಿಳಿಸಿದ. ದುಷ್ಟರೊಂದಿಗೆ ಹಾಗೆ ನಡೆದಾಗಲೇ ಶ್ರೀಹರಿ ಪ್ರೀತನಾಗುವನು ಎಂಬುದು ತಾತ್ಪರ್ಯ.

ಘೋಷಯಾತ್ರೆಯ ಹಿನ್ನೆಲೆ

ತತೋ ದಿನೈಃ ಕೈಶ್ಚನ ಧಾರ್ತರಾಷ್ಟ್ರಾಃ
ಸಕರ್ಣಗಾಂಧಾರನೃಪಾಃ ಕುಮಂತ್ರತಃ ।
ಸಭಾರ್ಯಕಾಃ ಪಾಂಡವಾನ್ ದ್ರೌಪದೀಂ ಚ
ಮಹೈಶ್ವರ್ಯಂ ದರ್ಶಯಿತ್ವಾವಮಂತುಮ್ ॥ ೩೯೦ ॥

ಅ: ಬಳಿಕ ಕೆಲವು ದಿನಗಳು ಕಳೆದ ಮೇಲೆ ಕೌರವರು ಕರ್ಣ, ಶಕುನಿಯರು ದುರಾಲೋಚನೆ ಮಾಡಿ ಪಾಂಡವರಿಗೆ, ದ್ರೌಪದಿಗೆ ತಮ್ಮ ಮಹಾ ಐಶ್ವರ್ಯವನ್ನು ತೋರಿಸಿ ಅವಮಾನಿಸಲೆಂದು ಸಪತ್ನೀಕರಾಗಿ ತೆರಳಿದರು.

ತೇ ಸ್ಯಂದನೈಃ ಕಾಂಚನರತ್ನಚಿತ್ರೈ-
ರ್ಮಹಾಗಜೈಸ್ತುರಗೈಃ ಪತ್ತಿಭಿಶ್ಚ ।
ಸ್ವಲಂಕೃತಾಶ್ಚಿತ್ರಮಾಲ್ಯಾಂಬರಾಶ್ಚ
ವಿನಿರ್ಯಯುರ್ದ್ವೈತವನಾಯ ಶೀಘ್ರಮ್ ॥ ೩೯೧ ॥

---

೩೯೦. ತದಾ ತು ನೃಪತಿರ್ಗಂತಾ ಧರ್ಮರಾಜೋ ಯುಧಿಷ್ಠಿರಃ ।
ಅಸ್ತ್ರಶಸ್ತ್ರಪ್ರದೀಪ್ತೇऽಗ್ನೌ ಯದಾ ತಂ ಪಾತಯಿಷ್ಯತಿ ॥
ವರ್ಷಾತ್ ತ್ರಯೋದಶಾದೂರ್ಧ್ವಂ ರಣಸತ್ರೇ ನರಾಧಿಪಃ ।
ಯದಾ ಕ್ರೋಧಹವಿರ್ಮೋಕ್ತಾ ಧಾರ್ತರಾಷ್ಟ್ರೇಷು ಪಾಂಡವಃ ॥
ಆಗಂತಾऽಹಂ ತದಾಸ್ಮೀತಿ ವಾಚ್ಯಸ್ತೇ ಸ ಸುಯೋಧನಃ ॥ – ಭಾರತ (ವನ. ೨೫೬/೧೫–೧೭)

೩೯೧. ಘೋಷಾ ದ್ವೈತವನೇ ಸರ್ವೇ ತ್ವತ್ಪತೀಕ್ಷಾ ನರಾಧಿಪ ।
ಘೋಷಯಾತ್ರಾಪದೇಶೇನ ಗಮಿಷ್ಯಾಮೋ ನ ಸಂಶಯಃ ॥ – ಭಾರತ (ವನ. ೨೩೮/೨೩)

ಅ: ಅವರು ಚಿನ್ನ, ರತ್ನಗಳಿಂದ ಮನೋಹರವಾಗಿದ್ದ ರಥಗಳಿಂದ, ಶ್ರೇಷ್ಠ ಆನೆಗಳಿಂದ, ಕುದುರೆಗಳಿಂದ, ಕಾಲಾಳುಗಳಿಂದ ಕೂಡಿ ಮನೋಹರವಾದ ಹಾರ ವಸ್ತ್ರಗಳನ್ನು ಧರಿಸಿ, ಬಗೆಬಗೆಯ ಅಲಂಕಾರ ಮಾಡಿಕೊಂಡು ದ್ವೈತವನಕ್ಕೆ ತ್ವರೆಯಿಂದ ತೆರಳಿದರು.

ವಿ: ೧) ಅವರು ಹಾಗೆ ತೆರಳಿದ್ದು ಘೋಷಯಾತ್ರೆಗೆಂದು. ಘೋಷಯಾತ್ರೆಯೆಂದರೆ ಹಸುಗಳನ್ನು ಸಾಕುತ್ತಿದ್ದ ಗೋವಳಿಗರ ಹಟ್ಟಿಗಳನ್ನು ಸಂದರ್ಶಿಸಿ, ಅಲ್ಲಿಯ ವ್ಯವಸ್ಥೆಗಳನ್ನು ಪರಿಶೀಲಿಸಿ, ಸುವ್ಯವಸ್ಥಿತಗೊಳಿಸುವ ಹಿನ್ನೆಲೆಯ ಒಂದು ಅಪೂರ್ವ ಯಾತ್ರೆ.

೩) ಮೇಲ್ನೋಟಕ್ಕೆ ಅದು ಘೋಷಯಾತ್ರೆಯಾಗಿದ್ದರೂ, ನಿಜವಾದ ಉದ್ದೇಶ ತಮ್ಮ ಐಶ್ವರ್ಯವನ್ನು ಪ್ರದರ್ಶಿಸಿ ಪಾಂಡವರನ್ನು, ದ್ರೌಪದಿಯನ್ನು ನೋಯಿಸುವುದೇ ಆಗಿತ್ತು ಅದಕ್ಕೆಂದೇ ಅವರು ಹಾಗೆ ಚತುರಂಗ ಬಲ ಸಮೇತರಾಗಿ ಬಗೆಬಗೆಯ ಅಲಂಕಾರಗಳಿಂದ ಕೂಡಿ ತೆರಳಿದರು ಎಂದರ್ಥ.

೪) ಪಾಂಡವರು ಆಗ ದ್ವೈತವನದಲ್ಲಿ ನೆಲೆಸಿದ್ದರಿಂದ ಅವರು ಅಲ್ಲಿಗೇ ತೆರಳಿದರು ಎಂದರ್ಥ. ಅವರು ಜೊತೆಗೆ ಒಯ್ದಿದ್ದ ರಥಗಳು ಎಂಟು ಸಾವಿರ, ಆನೆಗಳು ಮೂವತ್ತು ಸಾವಿರ, ಕುದುರೆಗಳು ಒಂಭತ್ತುಸಾವಿರ, ಕಾಲಾಳುಗಳಂತೂ ಅಸಂಖ್ಯ ಎಂದು * ಭಾರತದಲ್ಲಿದೆ.

ಗವಾಂ ದೃಷ್ಟಿಚ್ಛದ್ಮನಾ ನಿರ್ಗತಾಂಸ್ತಾನ್
ಜ್ಞಾತ್ವಾ ಶಕ್ರಸ್ತೇಜಸೋ ಭಂಗಕಾಮಃ ।
ತತ್ಸಾಮರ್ಥ್ಯಂ ವರಮಸ್ಮೈ ಪ್ರದಾಯ
ತದ್ಬಂಧನಾಯಾದಿಶಚ್ಚಿತ್ರಸೇನಮ್ ॥ ೩೯೩ ॥

ಅ: ಅವರು ಗೋವುಗಳನ್ನು ನೋಡುವ ನೆಪದಿಂದ ಹೊರಟಿದ್ದನ್ನು ತಿಳಿದು, ಅವರ ತೇಜಸ್ಸನ್ನು ಭಂಗಗೊಳಿಸಲೆಂದು ಇಂದ್ರ ಚಿತ್ರಸೇನನಿಗೆ ಅದಕ್ಕೆ ಬೇಕಾಗುವ ಸಾಮರ್ಥ್ಯವನ್ನು ವರವನ್ನಾಗಿ ನೀಡಿ ಅವರನ್ನು ಬಂಧಿಸಲೆಂದು ಕಳುಹಿಸಿದ.

ವಿ: ಅವರ ದುರ್ವಿಚಾರವನ್ನು ತಿಳಿದ ಇಂದ್ರ ಪಾಂಡವರಿಗೆ ಅವಮಾನ ಮಾಡಲೆಂದು ಹೊರಟ ಅವನೇ ಅವಮಾನಿತನಾಗಿ ತೆರಳುವಂತೆ ಚಿತ್ರಸೇನನ ಮೂಲಕ ವ್ಯವಸ್ಥೆ ಮಾಡಿದ ಎಂದರ್ಥ.

---

* ಅಷ್ಟೌ ರಥಸಹಸ್ರಾಣಿ ತ್ರೀಣಿ ನಾಗಾಯುತಾನಿ ಚ ।
ಪತ್ತಯೋ ಬಹುಸಾಹಸ್ರಾ ಹಯಾಶ್ಚ ನವತಿಃ ಶತಾಃ ॥
ಶಕಟಾಪಣವೇಶಾಶ್ಚ ವಣಿಜೋ ವಂದಿನಸ್ತಥಾ ।
ನರಾಶ್ಚ ಮೃಗಯಾಶೀಲಾಃ ಶತಶೋऽಥ ಸಹಸ್ರಶಃ ॥ – ಭಾರತ (ವನ. ೨೩೯/೨೬, ೨೭)

೩೯೩. ಗವಾಂ ದೃಷ್ಟಿಚ್ಛದ್ಮನೇತ್ಯತ್ರ ವನೇ ತೃಣಜಲಾದೇಃ ಸಮೃದ್ಧತ್ವಾತ್ ತತ್ರ ರಕ್ಷಣಾಯ ಸ್ಥಾಪಿತಾನಾಂ ಗವಾಂ ದರ್ಶನವ್ಯಾಜೇನೇತ್ಯರ್ಥಃ। ತತ್ಸಾಮರ್ಥ್ಯಂ= ತೇಷಾಂ ಬಂಧನಸಾಮರ್ಥ್ಯಮ್ ॥ – (ವಾ.)

ಇಂದ್ರನಿಂದ ಕೌರವ ಮಾನಭಂಗದ ಯೋಜನೆ

ಸ ಷಷ್ಟಿಸಾಹಸ್ರಕಕೋಟಿಯೂಥಪೈಃ
ಗಂಧರ್ವಮುಖ್ಯೈಃ ಸಂವೃತೋಽಗಾತ್ ಸರಸ್ತತ್।
ಯಸ್ಮಿನ್ ಸ್ನಾತುಂ ವಾಂಛತಿ ಧಾರ್ತರಾಷ್ಟ್ರ-
ಸ್ತದಾಜ್ಞಯಾ ಪುರುಷಾಸ್ತಾನಥೋಚುಃ ॥ ೩೯೪ ॥

ಅ: ಚಿತ್ರಸೇನ ಅರವತ್ತು ಸಾವಿರ ಕೋಟಿ ಸೇನಾಧಿಪತಿಗಳಿಂದ ಕೂಡಿದ್ದ ಗಂಧರ್ವ-ಶ್ರೇಷ್ಠರಿಂದ ಕೂಡಿದವನಾಗಿ ದುರ್ಯೋಧನನು ಸ್ನಾನಮಾಡಲು ಬಯಸಿದ್ದ ಸರೋವರಕ್ಕೆ ತೆರಳಿದ. ದುರ್ಯೋಧನನ ಆದೇಶದಂತೆ ಅಲ್ಲಿಯ ಭಟರು ಗಂಧರ್ವರಿಗೆ ತಿಳಿಸಿದರು

ಸ್ನಾತುಂ ಸಮಾಯಾಸ್ಯತಿ ಧಾರ್ತರಾಷ್ಟ್ರೋ
ರಾಜೇಶ್ವರೋ ನಿಃಸರಧ್ವಂ ತದಸ್ಮಾತ್ ।
ತೀರ್ಥಾದಾಜ್ಞಾಂ ಧಾರಯಂತಶ್ಚ ತಸ್ಯೇ-
ತ್ಯುಕ್ತಾ ಗಂಧರ್ವಾ ಜಹಸುಸ್ತಾನಥೋಚ್ಚೈಃ ॥ ೩೯೫ ॥

ಅ: 'ಇಲ್ಲಿಗೆ ಸ್ನಾನಕ್ಕೆಂದು ರಾಜೇಶ್ವರನಾದ ದುರ್ಯೋಧನನು ಆಗಮಿಸಲಿರುವನು, ನೀವು ಈ ತೀರ್ಥದಿಂದ ಹೊರಕ್ಕೆ ನಡೆಯಿರಿ, ಅವನ ಆಜ್ಞೆಯನ್ನು ಪಾಲಿಸಿರಿ'. ಅವರು ಹೀಗೆನ್ನಲು ಗಂಧರ್ವರು ಜೋರಾಗಿ ನಕ್ಕರು.

ಊಚುರ್ವಯಂ ಮಾನಯಾಮಸ್ತದಾಜ್ಞಾಂ
ತ್ರಿಲೋಕಾನಾಂ ಯಃ ಪತಿಃ ಶಕ್ರದೇವಃ ।
ನ ಮಾನುಷಾಣಾಮಪಿ ಚಕ್ರವರ್ತಿನಾಂ
ಕಿಮ್ವಲ್ಪಸಾರಸ್ಯ ಸುಯೋಧನಸ್ಯ ॥ ೩೯೬ ॥

---

೩೯೪. ತಾನಥೋಚುರಿತ್ಯತ್ರ ತಾನ್ ಗಂಧರ್ವಾನ್ ॥ – (ವಾ.)

೩೯೫. ರಾಜಾ ದುರ್ಯೋಧನೋ ನಾಮ ಧೃತರಾಷ್ಟ್ರಸುತೋ ಬಲೀ ।
ವಿಜಿಹೀರ್ಷುರಿಹಾಯಾತಿ ತದರ್ಥಮಪಸರ್ಪತ ॥
ಏವಮುಕ್ತಾಸ್ತು ಗಂಧರ್ವಾಃ ಪ್ರಹಸಂತೋ ವಿಶಾಂಪತೇ ।
ಪ್ರತ್ಯಬ್ರುವಂಸ್ತಾನ್ ಪುರುಷಾನಿದಂ ಹಿ ಪರುಷಂ ವಚಃ ॥ – ಭಾರತ (ವನ. ೨೪೦/೨೬, ೨)

ಅ: ಅವರು ತಿಳಿಸಿದರು 'ಮೂರುಲೋಕಗಳ ಒಡೆಯನಾದವನು ದೇವೇಂದ್ರ, ಅವನ ಆಜ್ಞೆಯನ್ನು ನಾವು ಶಿರಸಾ ವಹಿಸುವೆವು. ಮನುಷ್ಯಚಕ್ರವರ್ತಿಗಳ ಮಾತನ್ನೂ ನಾವು ಕೇಳುವವರಲ್ಲ, ಇನ್ನು ಈ ಅಲ್ಪವೀರ್ಯನಾದ ದುರ್ಯೋಧನನ ಮಾತನ್ನು ಕೇಳುವೆವೇ?'.

ಗಂಧರ್ವರೊಂದಿಗೆ ಕೌರವರ ಯುದ್ಧ

ಇತೀರಿತೇ ಕುಪಿತೋ ಧಾರ್ತರಾಷ್ಟ್ರೋ
ಜಘಾನ ಗಂಧರ್ವವರಾನ್ ಶರೌಘೈಃ ।
ಜಘ್ನುಃ ಸಕರ್ಣಾ ಅಪಿ ತಸ್ಯ ಸೋದರಾ
ಜಘ್ನುಶ್ಚ ತೇ ಧಾರ್ತರಾಷ್ಟ್ರಸ್ಯ ಸೇನಾಮ್ ॥ ೩೯೭ ॥

ಅ: ಅವರು ಹೀಗೆನ್ನಲು ಕೋಪಗೊಂಡ ದುರ್ಯೋಧನ ಗಂಧರ್ವಶ್ರೇಷ್ಠರನ್ನು ಬಾಣಗಳ ಸಮೂಹಗಳಿಂದ ಹೊಡೆಯ ತೊಡಗಿದ. ಕರ್ಣನೊಂದಿಗೆ ಅವನ ಸೋದರರೂ ಹೊಡೆಯತೊಡಗಿದರು. ಗಂಧರ್ವರೂ ಸಹ ದುರ್ಯೋಧನನ ಸೇನೆಯನ್ನು ಹೊಡೆಯತೊಡಗಿದರು.

ಮುಹೂರ್ತಮಾಸೀತ್ ಸಮಮೇವ ಯುದ್ಧಂ
ತೇಷಾಂ ತದಾ ಧಾರ್ತರಾಷ್ಟ್ರಸ್ಯ ಚೈವ ।
ಪುರಾಂ ಭಿಂದೋರ್ವರತೋ ಮಾಯಯಾ ಚ
ಗಂಧರ್ವವೀರಾ ವವೃಧುಸ್ತತಃ ಸ್ಮ ॥ ೩೯೮ ॥

ಅ: ಒಂದು ಮುಹೂರ್ತಕಾಲ ಗಂಧರ್ವರಿಗೂ, ದುರ್ಯೋಧನನಿಗೂ ಯುದ್ಧ ಸಮವಾಗಿಯೇ ನಡೆಯಿತು. ಮುಂದೆ ಪುರಂದರನಾದ ಇಂದ್ರನ ವರದಿಂದಲೂ, ಮಾಯೆಯಿಂದಲೂ ಗಂಧರ್ವವೀರರ ಸಾಮರ್ಥ್ಯ ಹೆಚ್ಚತೊಡಗಿತು.

ವಿ: **'ಪುರಾಂಬಿಂಧುಃ'** ಎಂದರೆ ಪುರಂದರ ದೇವೇಂದ್ರ ಎಂದರ್ಥ.

---

೩೯೬. ಮಾನುಷಾಣಾಂ ಚಕ್ರವರ್ತಿನಾಮಪಿ ಭಾರತಾದೀನಾಮಪಿ ಆಜ್ಞಾಂ ನ ಮಾನಯಾಮಃ। – (ಜ.)

೩೯೮. ಪುರಾಂಭಿಂದೋರ್ವರತ ಇತ್ಯತ್ರ ಪುರಾಂ = ಶತ್ರುಪುರೀಣಾಂ ಭಿಂದೋರ್ಭೇದನಶೀಲಸ್ಯ ಪುರಂದರಸ್ಯ ಇತ್ಯರ್ಥಃ।

''ಪುರಾಂ ಭಿಂದುರ್ಯುವಾ ಕವಿರಮಿತೌಜಾ ಅಜಾಯತ।
ಇಂದ್ರೋ ವಿಶ್ವಸ್ಯ ಕರ್ಮಣೋ ಧರ್ತಾ ವಜ್ರೀ ಪುರುಷ್ಟುತ'' ಇತಿ (ಋ. ೧/೧೧/೪) ಶ್ರುತೇಃ।

ವವೃಧುಸ್ತತಶ್ಚೇತ್ಯತ್ರ ತತಃ= ಕೌರವಸೈನ್ಯಾತ್। ವವೃಧುಃ= ಸಾಮರ್ಥ್ಯೇನ ವವೃಧುಃ ॥ – (ವಾ.)

೩೯೮. ಪುರಾಂ ಭಿಂದುರ್ಯುವಾ। ಇತ್ಯಾದಿ (ಋ.೧/೧೧/೪), ಸಾಮ.೩೫೯,೧೨೫೦, ತಾಂಡ್ಯಬ್ರಾಹ್ಮಣ।

ತೇಜೋಭಂಗಂ ತತ್ರ ಸುಯೋಧನಸ್ಯ
ಪಾರ್ಥಾರ್ಥಮತ್ರ ಪ್ರವಿಧಾತುಮೇವ ।
ಬಲಂ ದದಾವಬ್ಜಜಃ ಕೇಶವಶ್ಚ
ಗಂಧರ್ವಾಣಾಂ ತೇऽಭ್ಯಯುರ್ಧಾರ್ತರಾಷ್ಟ್ರಾನ್ ॥ ೩೯ ॥

ಅ: ಪಾಂಡವರಿಗೋಸ್ಕರ ದುರ್ಯೋಧನನಿಗೆ ತೇಜೋವಧೆಯನ್ನು ಉಂಟುಮಾಡಲೆಂದೇ ಬ್ರಹ್ಮ ಮತ್ತು ವಿಷ್ಣು ಆ ಗಂಧರ್ವರಿಗೆ ಬಲ ನೀಡಿದ್ದರು; ಅವರು ಕೌರವರನ್ನು ಎದುರಿಸಿದರು.

ವಿ: ೧) ಇಂದ್ರನ ವರ ಮಾತ್ರವಲ್ಲದೇ ಆ ಗಂಧರ್ವರಿಗೆ ವಿಷ್ಣು ಮತ್ತು ಬ್ರಹ್ಮರ ವರವೂ ಇದ್ದಿತೆಂಬ ವಿಶೇಷಾಂಶ ಇಲ್ಲಿದೆ.

೨) ಬ್ರಹ್ಮವರವಿರುವ ಕಲಿಯ ಅವತಾರನಾದ ದುರ್ಯೋಧನನ ಹಾಗೂ ಪರಶುರಾಮನ ವರವಿದ್ದ ಕರ್ಣನ ನಿಗ್ರಹಕ್ಕೆ ಕೇವಲ ಇಂದ್ರವರ ಸಮರ್ಥವಾಗುತ್ತಿರಲಿಲ್ಲ ಎಂಬ ಕಾರಣದಿಂದ ವಿಷ್ಣು ಬ್ರಹ್ಮರು ವರ ನೀಡಿದರು ಎಂದು ತಿಳಿಯಬೇಕು.

ವಿಕರ್ಣನೊಂದಿಗೆ ಕರ್ಣನ ಪಲಾಯನ

ಸ ಚಿತ್ರಸೇನಃ ಪ್ರಥಮಂ ಕರ್ಣಮೇವ
ಯುಯೋಧ ಪಾರ್ಥಸ್ಪರ್ಧಯಾ ತೇನ ಯುಧ್ಯನ್ ।
ಕರ್ಣೋ ನಾಶಕ್ನೋದ್ವಚನಾದ್ಭಾರ್ಗವಸ್ಯ
ರಾಮಸ್ಯ ನಿತ್ಯಾಮಿತಸದ್ಗುಣಸ್ಯ ॥ ೪೦೦ ॥

---

೩೯. 'ತೇಜೋಭಂಗಂ ತತ್ರ ಸುಯೋಧನಸ್ಯ ಪಾರ್ಥಾರ್ಥಮತ್ರ ಪ್ರವಿಧಾತುಮೇವ । ಬಲಂ ದದಾವಬ್ಜಜಃ ಕೇಶವಶ್ಚ ಗಂಧರ್ವಾಣಾಂ ತೇऽಭ್ಯಯುರ್ಧಾರ್ತರಾಷ್ಟ್ರಾನ್ ॥' ಇತ್ಯತ್ರ ಸುಯೋಧನಸ್ಯ ಪಾರ್ಥಾರ್ಥಂ ಭಂಗಂ ಪ್ರವಿಧಾತುಮೇವ ಬಲಂ ದದಾವಿತ್ಯನುಪಪನ್ನಂ ಬ್ರಹ್ಮವರೇಣೈವ ತದುಪಪತ್ತೇಃ ದುರ್ಯೋಧನಸ್ಯ ಶಿವವರೋಪೇತತ್ವಾತ್ ಬ್ರಹ್ಮಣಶ್ಚ ಶಿವಾದ್ಯುತ್ತಮತ್ವೇನ ತದ್ಬಲಲಂಘನೇ ಸಾಮರ್ಥ್ಯಾಭಾವಾತ್ ತಸ್ಮಾತ್ ಬ್ರಹ್ಮವರಸ್ಯೈವ ಸಂಗತತ್ವಾತ್ ಕೇಶವವರದಾನಸ್ಯಾಸಂಗತತ್ವಾದಿತಿ ಚೇನ್ನ । ಸುಯೋಧನತೇಜೋಭಂಗಾರ್ಥಮಿತ್ಯುಪಲಕ್ಷಣಂ ಭಾರ್ಗವವರೋಪೇತಕರ್ಣಸ್ಯಾಪಿ ತೇಜೋಭಂಗಾರ್ಥಂ ಕೇಶವಶ್ಚ ಬಲಂ ದದಾವಿತ್ಯಂಗೀಕಾರಾನ್ನ ದೋಷಃ । ಭಾರ್ಗವಸ್ಯ ಬ್ರಹ್ಮಾದ್ಯುತ್ತಮತ್ವೇನ ತದ್ವರೋಪೇತಕರ್ಣಸ್ಯ ಬ್ರಹ್ಮವರಮಾತ್ರಸ್ಯ ಬಾಧನಾಯೋಗಾದಿತಿ ಭಾವಃ । ಅಥವಾ 'ಜರಾಸಂಧೋಪಮೋ ಯಸ್ಮಾತ್ ಧಾರ್ತರಾಷ್ಟ್ರಃ ಸುವಿಶ್ರುತ' ಇತಿ ಗದಾಪರ್ವಣಿ ಕೃಷ್ಣವಾಕ್ಯಾದ್ಧಾರ್ತರಾಷ್ಟ್ರಸ್ಯ ಜರಾಸಂಧೋಪಮತ್ವಂ ಪ್ರತೀಯತೇ । ತತ್ ತು ದೈತ್ಯಾನಾಂ ಸ್ವತೋ ಬಲಾದ್ಯಭಾವಾತ್ ವರೋಪಾತ್ತಮೇವೇತಿ ವಕ್ತವ್ಯಮ್ । ಏವಂ ಚ ತಸ್ಯಾಪಿ ಬ್ರಹ್ಮವರೋऽಸ್ತೀತಿ ಪ್ರತೀಯತೇ । ಗಂಧರ್ವಸ್ಯಾಪಿ ತನ್ಮಾತ್ರವರೋಪೇತತ್ವೇನ ಸಾಮ್ಯಮೇವ ಸ್ಯಾತ್ । ತನ್ಮಾಭೂದಿತಿ ವರಂ ದದಾವಬ್ಜಜಃ ಕೇಶವಶ್ಚೇತ್ಯುಕ್ತಂ ಭವತಿ । – (ತಿ.)

ಅ: ಆ ಚಿತ್ರಸೇನನು ಮೊದಲಿಗೆ ಕರ್ಣನೊಡನೆ ಯುದ್ಧಮಾಡಿದ. ಅರ್ಜುನನ ಮೇಲಿನ ಸ್ಪರ್ಧೆಯಿಂದ ಅವನೊಂದಿಗೆ ಹೋರಾಡಿದ ಕರ್ಣ ಸದಾ ಅನಂತ ಷಡ್ಗುಣಪೂರ್ಣನಾದ ಪರಶುರಾಮನ ಮಾತಿನಿಂದಾಗಿ ಗೆಲ್ಲಲು ಸಮರ್ಥನಾಗಲಿಲ್ಲ.

ವಿ: ಕರ್ಣ ಮಹಾವೀರನಾದರೂ ಆಗ ಅರ್ಜುನನ ಮೇಲಿನ ಸ್ಪರ್ಧೆಯಿಂದ ಕಾದಿದ್ದರಿಂದ ಪರಶುರಾಮರ ಶಾಪದಿಂದಾಗಿ ಪರಾಜಿತನಾದ ಎಂದರ್ಥ.

ಸ ಭಗ್ನಯಾನಶ್ಚ ವಿಕರ್ಣಯಾನ-
ಮಾಸ್ಥಾಯ ತಸ್ಯೈವ ನಿಯಮ್ಯ ವಾಜಿನಃ।
ಪರಾದ್ರವತ್ ತೇನ ಸಹೈವ ಶೀಘ್ರಂ
ದುರ್ಯೋಧನಶ್ಚಿತ್ರಸೇನಂ ಯುಯೋಧ ॥ ೪೦೧ ॥

ಅ: ವಿರಥನಾದ ಕರ್ಣ ವಿಕರ್ಣನ ರಥವನ್ನು ಏರಿ ಅವನ ಕುದುರೆಗಳನ್ನೇ ನಡೆಸಿ ಅವನೊಂದಿಗೆ ಸಮೇತನಾಗಿಯೇ ವೇಗದಿಂದ ಅಲ್ಲಿಂದ ಪಲಾಯನ ಮಾಡಿದ; ದುರ್ಯೋಧನ ಚಿತ್ರಸೇನನೊಂದಿಗೆ ಯುದ್ಧಕ್ಕೆ ತೊಡಗಿದ.

ಚಿತ್ರಸೇನನಿಂದ ಕೌರವರ ಪರಾಭವ

ಮುಹೂರ್ತಮೇತೇನ ಸಮಂ ಸ ಯುದ್ಧ್ವ-
ನ್ನನ್ಯೈರ್ಗಂಧರ್ವೈರ್ಬಹುಭಿರ್ಮಾಯಯೈವ।
ಭಗ್ನೇ ರಥೇ ಭೂಮಿತಲೇ ಸ್ಥಿತಃ ಸನ್
ಗೃಹೀತ ಆಸೀಚ್ಚಿತ್ರಸೇನೇನ ಸಂಖ್ಯೇ ॥ ೪೦೨ ॥

---

೪೦೧. ತತೋ ರಥಾದವಪ್ಲುತ್ಯ ಸೂತಪುತ್ರೋಽಸಿಚರ್ಮಭೃತ್।
ವಿಕರ್ಣರಥಮಾಸ್ಥಾಯ ಮೋಕ್ಷಾಯಾಶ್ವಾನಚೋದಯತ್ ॥ – ಭಾರತ (ವನ.೨೪೧/೩೨)

೪೦೧. ತೇನ ವಿಕರ್ಣೇನ ಸಹ ಪರಾದ್ರವತ್। – (ಜ.)

೪೦೨. ದುರ್ಯೋಧನಂ ಚಿತ್ರಸೇನೋ ವಿರಥಂ ಪತಿತಂ ಭುವಿ।
ಅಭಿದ್ರುತ್ಯ ಮಹಾಬಾಹುರ್ಜೀವಗ್ರಾಹಮಥಾಗ್ರಹೀತ್ ॥ – ಭಾರತ (ವನ.೨೪೨/೬)

ಅ: ಮುಹೂರ್ತ ಕಾಲ ದುರ್ಯೋಧನ ಚಿತ್ರಸೇನನೊಂದಿಗೂ, ಬಹುಸಂಖ್ಯೆಯ ಇತರ ಗಂಧರ್ವರೊಂದಿಗೂ ಸಮನಾಗಿಯೇ ಹೋರಾಡಿದ. ಬಹುಸಂಖ್ಯೆಯ ಇತರ ಗಂಧರ್ವರ ಮಾಯೆಯಿಂದ ಅವನ ರಥ ಭಗ್ನವಾಯಿತು. ಭೂಮಿಯ ಮೇಲೆ ನಿಂತ ಅವನನ್ನು ಚಿತ್ರಸೇನ ಯುದ್ಧದಲ್ಲಿ ಸೆರೆ ಹಿಡಿದ.

ಚಿತ್ರಸೇನನ ಸೆರೆಯಲ್ಲಿ ಸಕುಟುಂಬ ಸಪರಿವಾರರಾಗಿ ಕೌರವರು

ಮಹಾಬಲೋ ಧಾರ್ತರಾಷ್ಟ್ರೋಽಪಿ ಶಕ್ರ-
ವರಾದ್ವಿಷ್ಣೋರಾಜ್ಞಯಾ ಚಾಭಿವೃದ್ಧೇ ।
ಸ ಚಿತ್ರಸೇನೇಽನೇನ ಧೃತಸ್ತದಾಽಽಸೀ-
ದ್ಬದ್ಧಃ ಪಾಶೈರ್ವೈದ್ಯುತೈರಿಂದ್ರದತ್ತೈಃ ॥ ೪೦೩ ॥

ಅ: ದುರ್ಯೋಧನ ಮಹಾಬಲಿಷ್ಠನಾಗಿದ್ದರೂ ಇಂದ್ರನ ವರದಿಂದಾಗಿಯೂ, ವಿಷ್ಣುವಿನ ಆಜ್ಞೆಯಿಂದಾಗಿಯೂ ಬಹಳವಾಗಿ ಶಕ್ತಿಸಂಪನ್ನನಾಗಿದ್ದ ಚಿತ್ರಸೇನನಿಂದ ಆಗ ಸೆರೆಸಿಕ್ಕಿದ ಮತ್ತು ಇಂದ್ರ ನೀಡಿದ್ದ ವಿದ್ಯುತ್ ಪಾಶಗಳಿಂದ ಬಂಧಿತನೂ ಆದ.

ವಿ: ವಿದ್ಯುತ್ ಪಾಶ ಎಂದರೆ ವಿದ್ಯುತ್ತಿನಂತೆ ಹೊಳೆಯುವ ಪಾಶ ಎಂದು, ಅಚ್ಛೇದ್ಯ ಅಭೇದ್ಯವಾದ ಅಪೂರ್ವಪಾಶ ಎಂದು ಅರ್ಥ. ಆಧುನಿಕ ಪರಿಭಾಷೆಯಲ್ಲಿ ವಿದ್ಯುಚ್ಛಕ್ತಿ ಹರಿಯುವ ತಂತಿಗಳಂತೆ (Live wire) ಎಂದು ತಿಳಿಯಬಹುದು.

ತಸ್ಯಾನುಜಾಃ ಶಕುನೀ ರಾಜಭಾರ್ಯಾಃ
ಸರ್ವೇ ಬದ್ಧಾಃ ಶಕ್ರಭೃತ್ಯೈಃ ಪ್ರಣೀತಾಃ ।
ಆದಾಯ ತಾನಂಬರಂ ಸಂಪ್ರಯಾತೇ-
ಷ್ವರೂರುವನ್ ಪಾಂಡವಾನ್ ಮಂತ್ರಿಣೋಽಸ್ಯ ॥ ೪೦೪ ॥

---

೪೦೩. ವೈದ್ಯುತೈರಿಂದ್ರದತ್ತೈರಿತ್ಯತ್ರ ವೈದ್ಯುತೈಃ = ಸುವರ್ಣಮಯತ್ವಾತ್ ವಿದ್ಯುದ್ವತ್ ದ್ಯೋತಮಾನೈಃ ವಿದ್ಯುದಭಿಮಾನಿದೇವತಾಕೈರಿತಿ ॥ – (ವಾ.)

೪೦೫. ಬಧ್ವಾ ಹ್ರಿಯಂತೇ ಗಂಧರ್ವೈ ರಾಜದಾರಾಶ್ಚ ಸರ್ವಶಃ ।
ಇತಿ ದುರ್ಯೋಧನಾಮಾತ್ಯಾಃ ಕ್ರೋಶಂತೋ ರಾಜಗೃದ್ಧಿನಃ ॥
ಆರ್ತಾ ದೀನಾಸ್ತತಃ ಸರ್ವೇ ಯುಧಿಷ್ಠಿರಮುಪಾಗಮನ್ ॥ – ಭಾರತ (ವನ. ೨೪೨/೧೨)

ಅ: ಅವನ ತಮ್ಮಂದಿರು, ಶಕುನಿ, ರಾಜಪತ್ನಿಯರು ಮೊದಲಾಗಿ ಎಲ್ಲರೂ ಇಂದ್ರನ ದೂತರಿಂದ ಬಂಧಿತರಾದರು. ಅವರನ್ನೆಲ್ಲಾ ಕರೆದುಕೊಂಡು ಅವರು ಗಗನಮಾರ್ಗವಾಗಿ ತೆರಳಲು ಅವನ ಮಂತ್ರಿಗಳು ಪಾಂಡವರ ಬಳಿಗೆ ಆರ್ತರಾಗಿ ತೆರಳಿದರು.

ಪಾಂಡವರ ಬಳಿಗೆ ಕೌರವರ ಮಂತ್ರಿಗಳ ಪ್ರಾರ್ಥನೆ

ಸಮೀಪಮಾಗತ್ಯ ಪೃಥಾಸುತಾನಾಂ
ಪರಾಭೂತಂ ವಃ ಕುಲಂ ಶಕ್ರಭೃತ್ಯೈಃ ।
ಧೃತಃ ಸಭಾರ್ಯಃ ಸಾನುಜೋ ಧಾರ್ತರಾಷ್ಟ್ರ-
ಸ್ತಂ ಮೋಚಯಧ್ವಂ ಭ್ರಾತರಂ ಭಾರತಾಗ್ರ್ಯಾಃ ॥ ೪೦೫ ॥

ಅ: ಪಾಂಡವರ ಬಳಿಗೆ ಬಂದು 'ನಿಮ್ಮ ವಂಶ ಇಂದ್ರಭಟರಿಂದ ಸೋತು ಹೋಯಿತು. ತಮ್ಮಂದಿರೊಂದಿಗೂ, ಪತ್ನಿಯರೊಂದಿಗೂ ದುರ್ಯೋಧನ ಸೆರೆಸಿಕ್ಕಿರುವನು. ಭಾರತ ಶ್ರೇಷ್ಠರಾದ ನೀವು ಸೋದರನಾದ ಅವನನ್ನು ಬಿಡುಗಡೆ ಮಾಡಬೇಕು'.

ಭೀಮಸೇನನ ಪೂರ್ಣಪ್ರಜ್ಞತ್ವ

ಇತ್ಯುಕ್ತ ಊಚೇ ಭೀಮಸೇನೋಽಗ್ರಜಂ ಸ್ವಂ
ಜಾನೇ ರಾಜನ್ ಯಾದೃಶೋಽಯಂ ವಿಮರ್ದಃ ।
ಐಶ್ವರ್ಯಂ ಸ್ವಂ ದರ್ಶಯನ್ ನಃ ಸಮಾಗಾ-
ದ್ದುರ್ಯೋಧನಸ್ತೇಜಸೋ ಭಂಗಮಿಚ್ಛನ್ ॥ ೪೦೬ ॥

ವಿಜ್ಞಾಯ ತೇಷಾಂ ಮಂತ್ರಿತಂ ವಜ್ರಬಾಹು-
ರೇತಚ್ಚಕ್ರೇ ನಾತ್ರ ನಃ ಕಾರ್ಯಹಾನಿಃ ।
ದಿವ್ಯಜ್ಞಾನಂ ಸ್ವಾತ್ಮನೋ ದರ್ಶಯನ್ ಸ
ಏತಾವದುಕ್ತ್ವಾವಿರರಾಮ ಭೀಮಃ ॥ ೪೦೭ ॥

---

೪೦೭. ವೃದ್ಧಾನ್ ದುರ್ಯೋಧನಾಮಾತ್ಯಾನ್ ಭೀಮಸೇನೋಽಭ್ಯಭಾಷತ ।
ಅಸ್ಮಾಭಿರ್ಯದನುಷ್ಠೇಯಂ ಗಂಧರ್ವೈಸ್ತದನುಷ್ಠಿತಮ್ ॥ – ಭಾರತ (ವನ. ೨೪೨/೧೫)

೪೦೭. ಸ ಭೀಮ ಆತ್ಮನಃ ಸ್ವಸ್ಯ ದಿವ್ಯಂ ಜ್ಞಾನಂ ಸುಸಮ್ಯಕ್ । ದರ್ಶಯನ್ ವಜ್ರಬಾಹುಸ್ತೇಷಾಂ ದುರ್ಯೋಧನಾದೀನಾಂ ಮಂತ್ರಿತಂ ವಿಜ್ಞಾಯ ತತ್ ಬಂಧನಂ ಚಕ್ರೇ । .... – (ಸ.)

ಅ: ಅವರು ಹೀಗೆ ಕೇಳಿಕೊಳ್ಳಲು ಭೀಮಸೇನ ತನ್ನ ಅಣ್ಣನಿಗೆ ನುಡಿದ 'ರಾಜನೇ, ಈ ಯುದ್ಧ ಹೇಗಾಯಿತು ಎಂದು ನಾನು ಬಲ್ಲೆ. ತನ್ನ ಐಶ್ವರ್ಯವನ್ನು ನಮಗೆ ತೋರಿಸಲೆಂದು ದುರ್ಯೋಧನ ಇಲ್ಲಿಗೆ ಬಂದ. ಅವನ ತೇಜಸ್ಸಿಗೆ ಭಂಗ ಮಾಡಲೆಂದು ವಜ್ರಪಾಣಿಯಾದ ಇಂದ್ರ ಅವರ ದುರುದ್ದೇಶವನ್ನು ತಿಳಿದು ಇದನ್ನು ಮಾಡಿದ; 'ಇದರಲ್ಲಿ ನಮ್ಮ ಕಾರ್ಯವೇನೂ ಕೆಟ್ಟಿಲ್ಲ'. ತನ್ನ ದಿವ್ಯಜ್ಞಾನವನ್ನು ತೋರಿಸುತ್ತಾ ಭೀಮಸೇನ ಇಷ್ಟು ಹೇಳಿ ಸುಮ್ಮನಾದನು.

ವಿ: ಕೌರವರ ದುರಾಲೋಚನೆಯನ್ನು, ಅದಕ್ಕೆ ಇಂದ್ರ ಮಾಡಿದ ಪ್ರತಿಕ್ರಿಯೆಯನ್ನೂ ಅತ್ಯಂತ ಸ್ಫುಟವಾಗಿ ತಿಳಿಸುವ ಮೂಲಕ ಭೀಮಸೇನ ತಾನು ಪೂರ್ಣಪ್ರಜ್ಞ ಎಂಬುದನ್ನು ಸಾರಿದ ಎಂಬುದನ್ನು ಗಮನಿಸಬೇಕು. ಮೂಲಭಾರತದಲ್ಲಿ ಭೀಮಸೇನ ಆಗ ನುಡಿದಃ 'ನಾವು ಮಾಡ–ಬೇಕಾದ ಕೆಲಸವನ್ನೇ ಗಂಧರ್ವರು ಮಾಡಿರುವರು'.

ಭೀಮಾರ್ಜುನರಿಂದ ಚಿತ್ರಸೇನನ ಪರಾಭವ

ಏಕಾಹಯಜ್ಞೇ ದೀಕ್ಷಿತೇನೈವ ರಾಜ್ಞಾ
ಸಂಪ್ರೇರಿತೋ ಭೀಮಸೇನೋಽರ್ಜುನಶ್ಚ।
ಸಮಾದ್ರೇಯೌ ಚಿತ್ರಸೇನಂ ರಣೇ ತೌ
ವಿಜಿತ್ಯ ದುರ್ಯೋಧನಮಾಶ್ವಮುಂಚತಾಮ್ ॥ ೪೦೮ ॥

ಅ: ಒಂದುದಿನದ ಯಜ್ಞದಲ್ಲಿ ದೀಕ್ಷಿತನಾಗಿದ್ದ ಧರ್ಮರಾಜ ಭೀಮಸೇನ ಮತ್ತು ಅರ್ಜುನ-ರನ್ನು ನಕುಲ, ಸಹದೇವರೊಂದಿಗೆ ಕಳಿಸಿಕೊಟ್ಟ. ಅವರಿಬ್ಬರೂ ಯುದ್ಧದಲ್ಲಿ ಚಿತ್ರಸೇನನನ್ನು ಸೋಲಿಸಿ ಬೇಗನೇ ದುರ್ಯೋಧನನನ್ನು ಬಿಡುಗಡೆ ಮಾಡಿದರು.

ವಿ: ೧) ಒಂದು ದಿನದ ಅಶ್ವಮೇಧ ಯಾಗವನ್ನು ಕೃಷ್ಣ ಮಾಡಿದ ಉಲ್ಲೇಖ ಈಗಾಗಲೇ ಬಂದಿದೆ. ಇಲ್ಲಿ ಧರ್ಮರಾಜ ಮಾಡಿದ್ದು ಒಂದು ದಿನದಲ್ಲಿ ಮಾಡಿ ಮುಗಿಸಬಹುದಾದ ಬೇರೊಂದು

---

೪೦೮. ಆಶ್ವಮುಂಚತಾಮಿತ್ಯತ್ರ ಅಮುಂಚತಾಂ= ಅಮೋಚಯತಾಮ್ ॥ –(ವಾ.)

೪೦೮. ವೃಕೋದರ ಮಹಾಬಾಹೋ ಧನಂಜಯ ಮಹಾಯಶಃ।
ಯಮೌ ಮಾಮನುಧಾವೇತಾಂ ರಕ್ಷಾರ್ಥಂ ಮಮ ಸಾಯುಧೌ ॥
ಕುರುವಂಶಸ್ಯ ತು ಮಹದಯಶಃ ಪ್ರಾಪ್ತಮೀದೃಶಮ್।
ವ್ಯಪೋಹಯಧ್ವಂ ಗಂಧರ್ವಾನ್ ಜಿತ್ವಾ ವೀರ್ಯೇಣ ಪಾಂಡವಾಃ ॥
(ಎಂದು ದುರ್ಯೋಧನನ ವಚನ) – ಭಾರತ (ವನ. ೨೪೩/೧೧)

ಯಜ್ಞ. ಅವನು ಯಜ್ಞದೀಕ್ಷಿತನಾಗಿದ್ದರಿಂದ 'ನಾನಾಗಿ ಹೋಗುವಂತಿಲ್ಲ, ನೀವು ಹೋಗಿ ಬಿಡಿಸಿರಿ' ಎಂದು ಭೀಮಾದಿಗಳನ್ನು ಕಳುಹಿಸಿದ.

೨) ಇಡೀ ದಿನ ಕಾದಿಯೂ ಗೆಲ್ಲದೇ ಸೋತು ಹೋಗಿದ್ದ ಕೌರವರನ್ನು ಭೀಮಾರ್ಜುನರು ಕ್ಷಣಮಾತ್ರದಲ್ಲಿ ಗಂಧರ್ವರನ್ನು ಸೋಲಿಸಿ ಬಿಡಿಸಿದ್ದು ಅವರ ಅಪಾರ ಪರಾಕ್ರಮಕ್ಕೆ ನಿದರ್ಶನವಾಯಿತು.

೩) ವಿಷ್ಣು ಬ್ರಹ್ಮ ಮತ್ತು ಶಕ್ರಾದಿಗಳ ವರ ಗಂಧರ್ವರಿಗೆ ಇದ್ದುದು ದುರ್ಯೋಧನನ ವಿರುದ್ಧ ಮಾತ್ರವಾದ್ದರಿಂದ ಭೀಮಾರ್ಜುನರಿಗೆ ಅವು ಪ್ರತಿಕೂಲವಾಗಲಿಲ್ಲ; ಇಂದ್ರವರ ಭೀಮನಿಗೆ ಸರ್ವಥಾ ಪ್ರತಿಕೂಲವಾಗದು ಎಂಬುದಂತೂ ಸ್ಪಷ್ಟವೇ.

ಚಿತ್ರಸೇನನು ತಿಳಿಸಿದ ದುರ್ಯೋಧನನ ಕಪಟ

ಸ ಚಿತ್ರಸೇನೋ ವಾಸವೋಕ್ತಂ ಚ ಸರ್ವಂ
ಕುಮಂತ್ರಿತಂ ಧಾರ್ತರಾಷ್ಟ್ರಸ್ಯ ಚಾಹ ।
ಪಾರ್ಥಸ್ಯ ಭೀಮಸ್ಯ ಚ ತನ್ನಿಶಮ್ಯ
ಸುವ್ರೀಳಿತೋ ಧೃತರಾಷ್ಟ್ರಾತ್ಮಜೋಽಭೂತ್ ॥ ೪೦೯ ॥

ಅ: ಆ ಚಿತ್ರಸೇನ ಇಂದ್ರನು ತಿಳಿಸಿದ್ದ ದುರ್ಯೋಧನನ ದುರಾಲೋಚನೆಯನ್ನೆಲ್ಲಾ ಭೀಮಾರ್ಜುನರಿಗೆ ತಿಳಿಸಿದ; ಅದನ್ನು ಕೇಳಿ ದುರ್ಯೋಧನ ಬಹಳವಾಗಿ ನಾಚಿದ.

ವಿ: ದುರ್ಯೋಧನನು ಕೇಳುತ್ತಿದ್ದಂತೆಯೇ ಅವನ ದುರಾಲೋಚನೆಯನ್ನೆಲ್ಲಾ ಗಂಧರ್ವ ಇಂದ್ರನ ಆದೇಶದಂತೆ ಬಯಲು ಮಾಡಿದಾಗ ದುರ್ಯೋಧನ ನಾಚಿಕೆಯಿಂದ ಕುಗ್ಗಿಹೋದ ಎಂಬ ಮಾತು ಭಾರತದಲ್ಲಿದೆ.

ದುರ್ಯೋಧನನ ಬಿಡುಗಡೆ

ಸಮಾಪ್ಯ ಯಜ್ಞಂ ಚ ತತೋಽಭಿಯಾತಂ
ಸರ್ವೇ ಪ್ರಾಪುರ್ಧರ್ಮರಾಜಂ ಸ ಚಾಶು ।
ಸಂಪೂಜ್ಯ ತೂತ್ಸೃಜ್ಯ ಚ ಚಿತ್ರಸೇನಮೂಚೇ
ಗಾಂಧಾರೇ ನ ಪುನಃ ಕಾರ್ಯಮೀದೃಕ್ ॥ ೪೧೦ ॥

---

೪೧೦. ಮಾ ಸ್ಮ ತಾತ ಪುನಃ ಕಾರ್ಷೀರೀದೃಶಂ ಸಾಹಸಂ ಕ್ವಚಿತ್ ।
ನ ಹಿ ಸಾಹಸಕರ್ತಾರಃ ಸುಖಮೇಧಂತಿ ಭಾರತ ॥ – ಭಾರತ (ವನ. ೨೪೬/೨೨)

ಅ: ಯಜ್ಞವನ್ನು ಪೂರೈಸಿ ಎದುರಿಗೆ ಬರುತ್ತಿದ್ದ ಧರ್ಮರಾಜನ ಬಳಿಗೆ ಅವರೆಲ್ಲ ತಲುಪಿದರು. ಧರ್ಮರಾಜ ಚಿತ್ರಸೇನನನ್ನು ಆದರಿಸಿ ಬೀಳ್ಕೊಟ್ಟು ದುರ್ಯೋಧನನಿಗೆ ಹೇಳಿದ 'ದುರ್ಯೋಧನ, ಇನ್ನೊಮ್ಮೆ ಹೀಗೆ ಮಾಡದಿರು'.

ದುರ್ಯೋಧನನ ಪ್ರಾಯೋಪವೇಶ

ಸ ಪಾಂಡವೈರ್ಯೋಚಿತಃ ಸಾನುಜಶ್ಚ
ಸಭಾರ್ಯಕಃ ಕಿಂಚಿದತೋऽಪಗಮ್ಯ ।
ಸಮ್ಮೇಲನಾಯೋಪವಿಷ್ಟಶ್ಚ ತತ್ರ
ಸುವ್ರೀಳಿತಃ ಸೂತಪುತ್ರಂ ದದರ್ಶ ॥ ೪೧೧ ॥

ಅ: ಪಾಂಡವರಿಂದ ತನ್ನ ಪರಿವಾರದೊಂದಿಗೂ, ಪತ್ನಿಯರೊಂದಿಗೂ ಬಿಡುಗಡೆ ಮಾಡಲ್ಪಟ್ಟ ದುರ್ಯೋಧನ ತುಂಬಾ ಲಜ್ಜಿತನಾಗಿ ಅಲ್ಲಿಂದ ಸ್ವಲ್ಪ ದೂರಕ್ಕೆ ತೆರಳಿ ಅಲ್ಲಿ ಎಲ್ಲರೂ ಒಂದೆಡೆ ಸೇರಲಿ ಎಂದು ಕುಳಿತ. ಅಲ್ಲಿ ಕರ್ಣನನ್ನು ಕಂಡ.

ವಿ: ಪರಾಜಿತನಾಗಿ ಓಡಿಹೋಗಿದ್ದ ಕರ್ಣ ಆ ವೇಳೆಗೆ ಅಲ್ಲಿಗೆ ಬಂದು ಸೇರಿಕೊಂಡ ಎಂಬುದು ಇಲ್ಲಿಯ ವಿಶೇಷ.

ಸ ಚಾಹ ದಿಷ್ಟ್ಯಾ* ಜಯಸಿ ರಾಜನ್ನಿತಿ ಸುಯೋಧನಮ್ ।
ವ್ರೀಳಿತೋ ನೇತಿ ತಂ ಚೋಕ್ತ್ವಾ ಯಥಾವೃತ್ತಂ ಸುಯೋಧನಃ ।
ಉಕ್ತ್ವಾ ಪ್ರಾಯೋಪವೇಶಂ ಚ ಚಕ್ರೇ ತತ್ರ ಸುದುಃಖಿತಃ ॥ ೪೧೨ ॥

ಅ: ಅವನು ದುರ್ಯೋಧನನಿಗೆ ಹೇಳಿದ 'ರಾಜನೇ, ನೀನು ದೈವವಶಾತ್ ಗೆದ್ದಿರುವಿ'. ನಾಚಿದ ದುರ್ಯೋಧನ 'ಇಲ್ಲ' ಎಂದು ನುಡಿದು ನಡೆದುದನ್ನೆಲ್ಲಾ ತಿಳಿಸಿದ. ಬಳಿಕ ತುಂಬಾ ದುಃಖಿತನಾಗಿ ಪ್ರಾಯೋಪವೇಶಕ್ಕೆ ತೊಡಗಿದ.

ವಿ: ೧) ವಿಷಯ ತಿಳಿಯದ ಕರ್ಣ ದುರ್ಯೋಧನನೇ ಜಯಿಸಿದನೆಂದು ಭಾವಿಸಿ ಅಭಿನಂದಿಸಿ– ದಾಗ ಸ್ವತಃ ದುರ್ಯೋಧನನೇ ತನ್ನ ಪರಾಭವದ ವಿಷಯವನ್ನೆಲ್ಲ ವಿವರವಾಗಿ ತಿಳಿಸಿದ; ನೋವಿನಿಂದ ಮರಣಾಂತ ಉಪವಾಸಕ್ಕೆ ಕುಳಿತ.

---

* ದಿಷ್ಟ್ಯಾ ಸಮುಪಜೋಷಂ ಚೇತ್ಯಾನಂದೇ – ಅಮರಕೋಶ (ಕಾಂಡ ೩, ಅವ್ಯಯವರ್ಗ, ಶ್ಲೋ. ೧೦)

೨) ರಾಮಾಯಣದಲ್ಲಿ ಹನುಮಂತನ ನೇತೃತ್ವದ ಕಪಿಗಳು ಶ್ರೀರಾಮಕಾರ್ಯಸಾಧನೆಗಾಗಿ ಪ್ರಾಯೋಪವೇಶಕ್ಕೆ ಕುಳಿತರೆ, ದುರ್ಯೋಧನ ತನ್ನ ಸ್ವಾರ್ಥಸಾಧನೆಗಾಗಿ ಪ್ರಾಯೋಪವೇಶಕ್ಕೆ ಕುಳಿತ. ಅವರದು ಸಾತ್ವಿಕ ಪ್ರಾಯೋಪವೇಶವಾದರೆ, ಇವನದು ತಾಮಸ ಪ್ರಾಯೋಪವೇಶ ಎಂಬುದು ವಿಶೇಷ.

ಕರ್ಣದುಃಶಾಸನಾಭ್ಯಾಂ ಚ ಸೌಬಲೇನ ಚ ದೇವಿನಾ ।
ಅನ್ಯೈಶ್ಚ ಯಾಚ್ಯಮಾನೋಽಪಿ ನೈವೋತ್ತಸ್ಥೌ ಸುಯೋಧನಃ ॥ ೪೧೩ ॥

ಅ: ಕರ್ಣ, ದುಶ್ಶಾಸನ, ಜೂಜುಕೋರನಾದ ಶಕುನಿ ಹಾಗೂ ಇತರರು ಬಹುವಾಗಿ ಕೇಳಿ-ಕೊಂಡರೂ ದುರ್ಯೋಧನ ಪ್ರಾಯೋಪವೇಶವನ್ನು ಬಿಟ್ಟುಮೇಲೇಳಲಿಲ್ಲ.

ವಿ: ಕರ್ಣಾದಿಗಳು ಮಾಡಿದ ಸಮಾಧಾನದಿಂದ ತೃಪ್ತನಾಗದ ದುರ್ಯೋಧನ ಪ್ರಾಯೋಪ–ವೇಶವನ್ನೇ ಮುಂದುವರಿಸಿದ. ಅವನಿಗೆ ಯಾರ ಮಾತಿನಿಂದಲೂ ಸಮಾಧಾನವಾಗದಂತಹ ವಿಶೇಷ ಮನೋವ್ಯಥೆ ಉಂಟಾಗಿತ್ತು ಎಂದರ್ಥ.

ರಾತ್ರಿಯಲ್ಲಿ ಅಸುರರು ಮಾಡಿದ ಕೃತ್ಯಾನಿರ್ಮಾಣ

ತತೋ ನಿಶಾಯಾಂ ಪ್ರಾಪ್ತಾಯಾಂ ಸ್ವಪಕ್ಷೇ ಪ್ರವಿಷೀದತಿ ।
ಮಂತ್ರಯಿತ್ವಾಽಸುರೈಃ ಕೃತ್ಯಾ ನಿರ್ಮಿತಾ ಹೋಮಕರ್ಮಣಾ ॥ ೪೧೪ ॥

ಅ: ರಾತ್ರಿ ಕವಿಯುತ್ತಿದ್ದಂತೆ ತಮ್ಮ ಪಕ್ಷ ವಿಷಣ್ಣಗೊಂಡದ್ದನ್ನು ಕಂಡು ಅಸುರರು ಸಮಾ-ಲೋಚನೆ ನಡೆಸಿ ಹೋಮಕರ್ಮವೊಂದರಿಂದ ಒಂದು ದೈತ್ಯ ಶಕ್ತಿಯನ್ನು ನಿರ್ಮಿಸಿದರು.

ವಿ: ಅಸುರರೆಲ್ಲಾ ತಮ್ಮ ನಾಯಕನಾದ ದುರ್ಯೋಧನ ಹಾಗೆ ಪ್ರಾಯೋಪವೇಶಕ್ಕೆ ಕುಳಿತದ್ದರಿಂದ ತಮ್ಮ ಪಕ್ಷ ದುರ್ಬಲವಾಗುವುದು ಎಂಬ ಆಂಜಿಕೆಯಿಂದ ಅದರ ಪರಿಹಾರಕ್ಕೆಂದು ಒಂದು ಕ್ಷುದ್ರಶಕ್ತಿಯನ್ನು ಹೋಮಕಾರ್ಯದಿಂದ ನಿರ್ಮಿಸಿ ದುರ್ಯೋಧನನನ್ನು ರಸಾತಳಕ್ಕೆ ಕರೆತರಲು ಕಳುಹಿಸಿಕೊಟ್ಟರು (‘ಪ್ರವಿವೇಶ ರಸಾತಲಮ್’ – ಭಾರತ ೨೫೯/೨೧). ಇದು ಮುಂದೆ ಅವನು ಸಂಪೂರ್ಣ ಅಧಃಪತನ ಹೊಂದುವುದಕ್ಕೆ ಮುನ್ಸೂಚನೆಯಾಯಿತು.

ರಸಾತಲಕ್ಕೆ ದುರ್ಯೋಧನ

ಶುಕ್ರೇಣೋತ್ಪಾದಿತಾ ಕೃತ್ಯಾ ಸಾ ಪ್ರಸುಪ್ತೇಷು ಮಂತ್ರಿಷು ।
ಧಾರ್ತರಾಷ್ಟ್ರಂ ಸಮಾದಾಯ ಯಯೌ ಪಾತಾಲಮಾಶು ಚ ॥ ೪೧೫ ॥

---

೪೧೩. ಸೌಬಲೇನ ಚ ದೇವಿನೇತ್ಯತ್ರ ದೇವಃ= ದೇವನಂ ತದಸ್ಯಾಸ್ತೀತಿ ದೇವೀ ತೇನ ದೇವಿನಾ ॥ – (ವಾ.)

ಅ: ಶುಕ್ರಾಚಾರ್ಯರಿಂದ ನಿರ್ಮಿತವಾದ ಆ ಕ್ಷುದ್ರದೇವತೆ ದುರ್ಯೋಧನನ ಮಂತ್ರಿ-ಗಳೆಲ್ಲಾ ಮಲಗಿದ್ದಾಗ ಅವನನ್ನು ಎತ್ತಿಕೊಂಡು ಕೂಡಲೇ ಪಾತಾಲಕ್ಕೆ ತೆರಳಿತು.

ವಿ: ಹಾಗೆ ದುರ್ಯೋಧನನನ್ನು ಕರೆತರಿಸಿ ಅವನಿಗೆ ದೈತ್ಯ ಕಾರ್ಯಸಾಧನೆಯ ಬಗ್ಗೆ ವಿವರ-ಗಳನ್ನು ತಿಳಿಸಿ ಅವರೆಲ್ಲರ ನಾಯಕನಾದ ಅವನು ಹಾಗೆ ವಿಷಣ್ಣನಾಗಕೂಡದು ಎಂದು ತಿಳಿಸಿದರು ಎಂದರ್ಥ.

ದುರ್ಯೋಧನನಿಗೆ ಅಸುರರ ಉಪದೇಶ

ಅಥ ಸಂಬೋಧಯಾಮಾಸುರ್ದೈತ್ಯಾ ದುರ್ಯೋಧನಂ ನೃಪಮ್ ।
ತ್ವಂ ದಿವ್ಯಃ ಪುರುಷೋ ವೀರಃ ಸೃಷ್ಟೋಽಸ್ಮಾಭಿಃ ಪ್ರತೋಷಿತಾತ್ ॥ ೪೧೬ ॥

ತಪಸಾ ಶಂಕರಾದ್ವಜ್ರಕಾಯೋಽವಧ್ಯಶ್ಚ ಸರ್ವದಾ ।
ಅಸ್ಮಾಕಂ ಪಕ್ಷಭೂತಸ್ತ್ವಂ ದೇವಾನಾಂ ಚೈವ ಪಾಂಡವಾಃ ॥ ೪೧೭ ॥

ಅ: ಬಳಿಕ ಅಸುರರೆಲ್ಲಾ ದುರ್ಯೋಧನನಿಗೆ ಅನೇಕ ರೀತಿಯಲ್ಲಿ ತಿಳಿಸಿದರು. ನೀನು ದಿವ್ಯ ಪುರುಷ, ವೀರನಾದವನು, ನಾವು ತಪಸ್ಸಿನಿಂದ ಮೆಚ್ಚಿಸಿದ ಶಿವನಿಂದ ನಿನ್ನ ದೇಹ ನಿರ್ಮಿತ-ವಾಗಿದೆ. ನೀನು ಸದಾ ಅವಧ್ಯನು, ನಮ್ಮ ಪಕ್ಷದವನು. ಪಾಂಡವರೆಲ್ಲ ದೇವಪಕ್ಷದವರು.

ವಿ: ೧) ದುರ್ಯೋಧನನ ದೇಹಸೃಷ್ಟಿಯ ಬಗ್ಗೆ ವಿವರಗಳು ಬಂದಿರುವುದು ಇಲ್ಲಿಯ ವಿಶೇಷ. ದೈತ್ಯರೆಲ್ಲ ಶಿವನನ್ನು ತಪಸ್ಸಿನಿಂದ ಮೆಚ್ಚಿಸಿ ಅವನಿಂದ ವಿಶಿಷ್ಟ ರೀತಿಯಲ್ಲಿ ಸೃಷ್ಟಿಯಾದದ್ದು ಇವನ ದೇಹ ಎಂದರ್ಥ. ಆ ವಿವರ ಈಗಾಗಲೇ ಬಂದಿದೆ (೧೨/೧೯).

೨) ಹೀಗೆ ಅವನ ದೇಹದ ಬಗ್ಗೆ ವಿವರಗಳನ್ನು ನೀಡುವ ಮೂಲಕ ಅವನು ಅವಧ್ಯ ಎಂಬುದನ್ನು ಮನವರಿಕೆ ಮಾಡಿಕೊಡುವುದು ಅವರ ಉದ್ದೇಶವಾಗಿತ್ತು.

---

೪೧೬. ಪುರಾ ತ್ವಂ ತಪಸಾಽಸ್ಮಾಭಿರ್ಲಬ್ಧೋ ರಾಜನ್ ಮಹೇಶ್ವರಾತ್ ।
ಪೂರ್ವಕಾಯಶ್ಚ ಪೂರ್ವಸ್ತೇ ನಿರ್ಮಿತೋ ವಜ್ರಸಂಚಯೈಃ ।
ಅಸ್ತ್ರೈರಭೇದ್ಯಃ ಶಸ್ತ್ರೈಶ್ಚಾವ್ಯಧಃಕಾಯಶ್ಚತೇಽನಘ ॥
ಕೃತಃ ಪುಷ್ಪಮಯೋ ದೇವ್ಯಾ ರೂಪತಃ ಸ್ತ್ರೀಮನೋಹರಃ ॥ – ಭಾರತ (ವನ. ೨೫೨/೬,೭)

೪೧೭. ತ್ವಮಸ್ಮಾಕಂ ಗತಿರ್ನಿತ್ಯಂ ದೇವತಾನಾಂ ಚ ಪಾಂಡವಾಃ ॥ – ಭಾರತ (ವನ. ೨೫೨/೨೬)

೩) ದೇವತೆಗಳಿಗೆಲ್ಲಾ ಪಾಂಡವರು ಗತಿಯಾಗಿರುವಂತೆ, ದೈತ್ಯರಿಗೆಲ್ಲ ದುರ್ಯೋಧನನೇ ಗತಿಯಾಗಿರುವನು ಎಂಬ ವಿಶೇಷಾಂಶವನ್ನು ಅವನಿಗೆ ಮನವರಿಕೆ ಮಾಡಿಕೊಟ್ಟರು.

ಇದಾನೀಂ ಸರ್ವದೇವಾನಾಂ ವರಾತ್ ತ್ವಂ ವಿಜಿತೋ ರಣೇ ।
ವಯಂ ತಥಾ ಕರಿಷ್ಯಾಮೋ ಯಥಾ ಜೇಷ್ಯಸಿ ಪಾಂಡವಾನ್ ॥ ೪೧೮ ॥

ಅ: ಈಗ ಎಲ್ಲ ದೇವತೆಗಳ ವರದಿಂದಾಗಿ ಯುದ್ಧದಲ್ಲಿ ಸೋತಿರುವೆ. ನೀನು ಪಾಂಡವರನ್ನು ಗೆಲ್ಲುವಂತೆ ನಾವು ಮಾಡುವೆವು.

ವಿ: ಅಂದಿನ ಸೋಲು ವಿಶೇಷ ಕಾರಣದ ಹಿನ್ನೆಲೆಯಲ್ಲಿ ಮಾತ್ರ ಉಂಟಾದದ್ದು, ಈ ರೀತಿ ಮುಂದೆ ನಡೆಯದಂತೆ ವಿಶೇಷ ಪ್ರಯತ್ನ ಮಾಡುವುದಾಗಿ ಅವರು ಅವನಿಗೆ ಭರವಸೆ ನೀಡಿದರು ಎಂದರ್ಥ.

ಕರ್ಣ ಭೀಷ್ಮಾದಿಗಳಲ್ಲಿ ಅಸುರರ ಪ್ರವೇಶ

ಕೃಷ್ಣೇನ ನಿಹತಶ್ಚೈವ ನರಕಃ ಕರ್ಣ ಆಸ್ಥಿತಃ ।
ಸ ಚ ಕೃಷ್ಣಾರ್ಜುನಾಭಾವಂ ಕರಿಷ್ಯತಿ ನ ಸಂಶಯಃ ॥ ೪೧೯ ॥

ಅ: ಕೃಷ್ಣನಿಂದ ಹತನಾದ ನರಕಾಸುರ ಕರ್ಣನೊಳಗೆ ಸೇರಿಕೊಂಡಿರುವನು; ಅವನು ಕೃಷ್ಣಾರ್ಜುನರನ್ನು ಇಲ್ಲದಂತೆ ಮಾಡುವನು. ಇದರಲ್ಲಿ ಸಂಶಯವಿಲ್ಲ.

ವಿ: ೧) ಕರ್ಣನಲ್ಲಿ ಸಹಸ್ರವರ್ಮ ಎಂಬ ಅಸುರನ ಆವೇಶವಿದ್ದ ವಿವರ ಈಗಾಗಲೇ ಬಂದಿದೆ. (೧೧/೧೫೪) ಅವನೊಳಗೆ ಕೃಷ್ಣನಿಂದ ಹತನಾದ ನರಕಾಸುರನೂ ಸೇರಿಕೊಂಡಿದ್ದ ವಿಶೇಷ ವಿವರ ಇಲ್ಲಿ ಬಂದಿದೆ.

೨) ಮಹಾಪರಾಕ್ರಮಿಯಾದ ಕರ್ಣನೊಳಗೆ ನರಕಾಸುರನೂ ಸೇರಿಕೊಂಡಿರುವುದರಿಂದ ಕೃಷ್ಣಾರ್ಜುನರಿಬ್ಬರನ್ನೂ ಅವನು ಕೊಲ್ಲಬಲ್ಲ ಎಂಬ ಭ್ರಮೆ ಅವರದು. ಕರ್ಣನಿಂದ ಅರ್ಜುನನು, ಅವನೊಳಗಿನ ನರಕಾಸುರನಿಂದ ಕೃಷ್ಣನು ನಾಶವಾಗುವರು ಎಂಬುದು ಅವರ ವಿಚಾರವಾಗಿತ್ತು.

---

೪೧೯. ಹತಸ್ಯ ನರಕಸ್ಯಾತ್ಮಾ ಕರ್ಣಮೂರ್ತಿಮುಪಾಶ್ರಿತಃ ।
ತದ್ ವೈರಂ ಸಂಸ್ಮರನ್ ವೀರ ಯೋತ್ಸ್ಯತೇ ಕೇಶವಾರ್ಜುನೌ ॥ – ಭಾರತ (ವನ. ೨೫೨/೨೦)

ಕರ್ಣೋಽಪ್ಯಾವಿಷ್ಟಚಿತ್ತಾತ್ಮಾ ನರಕಸ್ಯಾಂತರಾತ್ಮನಾ ॥ – ಭಾರತ (ವನ. ೨೫೨/೩೪)

ಭೀಷ್ಮಾದೀಂಶ್ಚ ವಯಂ ಸರ್ವಾನಾವಿಶಾಮ ಜಯಾಯ ತೇ ।
ತಪಸಾ ವರ್ಧಯಿಷ್ಯಾಮಸ್ತ್ವಾಂ ಕರ್ಣಾದೀಂಶ್ಚ ಸರ್ವಶಃ ॥ ೪೨೦ ॥

ಅ: ನಾವೆಲ್ಲರೂ ಭೀಷ್ಮಾದಿಗಳನ್ನು ನಿನ್ನ ಜಯಕ್ಕೋಸ್ಕರವಾಗಿ ಪ್ರವೇಶಿಸುವೆವು. ಕರ್ಣ ಮೊದಲಾದವರನ್ನೂ, ನಿನ್ನನ್ನೂ ತಪಸ್ಸಿನಿಂದ ಹೆಚ್ಚು ಬಲಿಷ್ಠರನ್ನಾಗಿ ಮಾಡುವೆವು.

ವಿ: ಕರ್ಣನಲ್ಲಿ ಮಾತ್ರವಲ್ಲದೇ, ಭೀಷ್ಮಾದಿಗಳಲ್ಲೂ ಅಸುರಾವೇಶವಿದ್ದ ವಿವರಕ್ಕೆ ಇದು ಮುಖ್ಯವಾದ ಆಧಾರ.

ತಸ್ಮಾದ್ಗತ್ವಾ ಪಾಲಯಸ್ವ ರಾಜ್ಯಂ ರಾಜನ್ನಪೇತಭೀಃ ।
ಇದಂ ಕಸ್ಯಾಪಿ ನಾಖ್ಯೇಯಂ ಸುಗುಪ್ತಂ ಭೂತಿವರ್ಧನಮ್ ॥ ೪೨೧ ॥

ಅ: ರಾಜನೇ, ಆದ್ದರಿಂದ ನೀನು ತೆರಳಿ ರಾಜ್ಯವನ್ನು ನಿರ್ಭಯದಿಂದ ಆಳು. ಇದು ಅತ್ಯಂತ ರಹಸ್ಯವಾದದ್ದು. ನಿನ್ನ ಶ್ರೇಯಸ್ಸನ್ನು ಹೆಚ್ಚಿಸುವಂತಹದ್ದು. ಯಾರಿಗೂ ಹೇಳದಿರು.

ಸ್ವಸ್ಥಾನಕ್ಕೆ ಮರಳಿದ ದುರ್ಯೋಧನ

ಇತ್ಯುಕ್ತ್ವಾ ಕೃತ್ಯಯಾ ಭೂಯಃ ಸ್ವಸ್ಥಾನೇ ಸ್ಥಾಪಿತೋ ನೃಪಃ ।
ಉಮಯಾ ನಿರ್ಮಿತಾತ್ಮಾರ್ಧಮುತ್ತರಂ ಹರನಿರ್ಮಿತಮ್ ॥ ೪೨೨ ॥

ಜ್ಞಾತ್ವೈವಾವಧೃತಾಂ ಚೈವ ರಾಜ್ಯೇ ಬುದ್ಧಿಂ ಚಕಾರ ಸಃ ।
ನೋವಾಚ ಕಸ್ಯಚಿತ್ ತೇಷು ಸ್ವಾನುಭೂತಂ ಸುಯೋಧನಃ ॥ ೪೨೩ ॥

---

೪೨೦. ಭೀಷ್ಮದ್ರೋಣಕೃಪಾದೀಂಶ್ಚಪ್ರವೇಕ್ಷ್ಯಂತ್ಯಪರೇऽಸುರಾಃ ॥
ಯೈರಾವಿಷ್ಟಾಪ್ಯಣಾಂ ತ್ಯಕ್ತ್ವಾ ಯೋತ್ಸ್ಯಂತೇ ತವ ವೈರಿಭಃ ॥ – ಭಾರತ (ವನ. ೨೫೨/೧೧)

ಭೀಷ್ಮದ್ರೋಣಕೃಪಾದ್ಯಾಶ್ಚ ದಾನವಾಕ್ರಾಂತಚೇತನಾಃ ।
ನ ತಥಾ ಪಾಂಡಪುತ್ರಾಣಾಂ ಸ್ನೇಹವಂತೋ ವಿಶಾಂಪತೇ ॥ – ಭಾರತ (ವನ. ೨೫೨/೩೬)

೪೨೨. ಪ್ರತಿನಿಕ್ಷಿಪ್ಯ ತಂ ವೀರಂ ಕೃತ್ಯಾ ಸಮಭಿಪೂಜ್ಯ ಚ ।
ಅನುಜ್ಞಾತಾ ಚ ರಾಜ್ಞಾ ಸಾ ತಥೈವಾಂತರಧೀಯತ ॥ – ಭಾರತ (ವನ. ೨೫೨/೩೦)

೪೨೩. ಏವಮೀಶ್ವರಸಂಯುಕ್ತಸ್ತವ ದೇಹೋ ನೃಪೋತ್ತಮ ।
ದೇವ್ಯಾ ಚ ರಾಜಶಾರ್ದೂಲ ದಿವ್ಯಸ್ತ್ವಂ ಹಿ ನ ಮಾನುಷಃ ॥ – ಭಾರತ (ವನ. ೨೫೨/೬-೮)

ಅ: ಹೀಗೆ ಹೇಳಿ ಮತ್ತೆ ಆ ಕ್ಷುದ್ರ ದೇವತೆಯ ಮೂಲಕ ದುರ್ಯೋಧನನ್ನು ಅವನು ಮೊದಲಿದ್ದ ಸ್ಥಳಕ್ಕೆ ಕಳುಹಿಸಿದರು. ತನ್ನ ದೇಹದ ಮೇಲ್ಭಾಗ ಶಿವನಿಂದಲೂ, ಕೆಳಭಾಗ ಪಾರ್ವತಿಯಿಂದಲೂ ನಿರ್ಮಿತವಾದದ್ದೆಂದೂ, ತಾನು ಅವಧ್ಯನೆಂದು ತಿಳಿದ ದುರ್ಯೋಧನ ರಾಜ್ಯವಾಳಲು ನಿಶ್ಚಯಿಸಿದ. ತನಗಾದ ಅನುಭವವನ್ನು ಯಾರಿಗೂ ತಿಳಿಸಲಿಲ್ಲ.

ವಿ: ನಿರಾಶನಾಗಿದ್ದ ದುರ್ಯೋಧನ ತನ್ನ ದೇಹದ ಸೃಷ್ಟಿಯ ಹಿನ್ನೆಲೆ ಹಾಗೂ ಅವಧ್ಯತ್ವ ವಿವರಗಳನ್ನು ತಿಳಿದದ್ದರಿಂದ ಪುನಃ ಜೀವನದಲ್ಲಿ ಆಸೆ ಮೂಡಿ ಪ್ರಾಯೋಪವೇಶವನ್ನು ತೊರೆದು ರಾಜ್ಯಕ್ಕೆ ತೆರಳಲು ನಿಶ್ಚಯಿಸಿದ ಎಂದರ್ಥ.

ಕರ್ಣನ ವಿಚಿತ್ರಶಪಥ

ಪ್ರಭಾತಾಯಾಂ ತು ಶರ್ವರ್ಯಾಂ ಪುನಃ ಕರ್ಣೋಽಬ್ರವೀದ್ವಚಃ ।
ಭೃತ್ಯೈಸ್ತವೈವ ಪಾರ್ಥೈರ್ಯನ್ಮೋಚಿತೋಽಸಿ ಪರಂತಪ ॥ ೪೨೪ ॥

ತೇನ ಮಾನ್ಯೋಽಧಿಕಂ ಲೋಕೇ ಯದ್ಭೃತ್ಯಾ ಏವ ತಾದೃಶಾಃ ।
ಕಿಮು ತ್ವಂ ರಾಜಶಾರ್ದೂಲ ತದುತ್ತಿಷ್ಠ ಸ್ಥಿರೋ ಭವ ॥ ೪೨೫ ॥

ಅ: ರಾತ್ರಿ ಕಳೆದು ಬೆಳಗ್ಗಾದ ಮೇಲೆ ಕರ್ಣ ಮತ್ತೆ ಮಾತನಾಡಿದ 'ನಿನ್ನ ಭೃತ್ಯರಾದ ಪಾಂಡವರಿಂದಲೇ ನೀನು ಬಿಡುಗಡೆ ಹೊಂದಿರುವುದರಿಂದ ಲೋಕದಲ್ಲಿ ನಿನ್ನ ಮಾನ್ಯತೆ ಹೆಚ್ಚಿದೆ. ನಿನ್ನ ದಾಸರೇ ಅಂಥವರೆಂದರೆ ನೀನು ಎಂಥವನೆಂದು ಹೇಳಬೇಕೇ? ಅದರಿಂದ ರಾಜಶ್ರೇಷ್ಠನೇ ಎದ್ದೇಳು, ದೃಢನಿಶ್ಚಯ ಹೊಂದು'.

ವಿ: ಕರ್ಣ ಹೇಳಿದ ಮಾತು ಮೇಲ್ನೋಟಕ್ಕೆ ದುರ್ಯೋಧನನನ್ನು ತುಂಬಾ ಪ್ರಶಂಶಿಸು–ವಂತಿದೆ; ಭೃತ್ಯರಿಂದ ನಡೆದ ಕಾರ್ಯ ರಾಜನ ಗೌರವವನ್ನು ಹೆಚ್ಚಿಸುವುದು ನಿಜ, ಆದರೆ ಇಲ್ಲಿ ಪಾಂಡವರು ಸರ್ವಥಾ ದುರ್ಯೋಧನನ ಭೃತ್ಯರಲ್ಲ. ಅದರಂತೆ ದುರ್ಯೋಧನನು ಎಲ್ಲೋ ಇದ್ದು ಇವರು ಜಯಿಸಿದುದೂ ಅಲ್ಲ. ದುರ್ಯೋಧನನನ್ನು ಸೋಲಿಸಿದವರನ್ನೇ ತಾವು ಸೋಲಿಸಿ ಅವರನ್ನು ಬಿಡುಗಡೆ ಮಾಡಿದ ಮಹಾವೀರರು. ಅವರು ಆದ್ದರಿಂದ ಕರ್ಣ ಹೇಳಿದ ಯುಕ್ತಿ ಸರ್ವಥಾ ಅಗ್ರಾಹ್ಯವಾದದ್ದು. ಅವನು ಅದನ್ನು ಕೇವಲ ದುರ್ಯೋಧನನಿಗೆ ಸಮಾಧಾನ ಮಾಡಲೆಂದು ಮಾತ್ರ ಹೇಳಿದ್ದು ಎಂದು ತಿಳಿಯಬೇಕು.

---

೪೨೪. ಶರ್ವರ್ಯಾಂ ರಾತ್ರೌ ಪ್ರಭಾತಾಯಾಂ ಪ್ರಕಾಶಿತಾಯಾಂ ಸತ್ಯಾಮಿತ್ಯರ್ಥಃ ರಾತ್ರಿದಿವಾಕಾಲಯೋಃ ಸಂಧಿಕಾಲ ಇತಿ ಭಾವಃ । –(ಸ.)

ಯಾ ಚ ತೇಽರ್ಜುನಮಾಹಾತ್ಮ್ಯೇ ಶಂಕಾ ಸಾ ವ್ಯೇತು ಮೇ ಶ್ರುಣು ।
ಯಾವನ್ನೈವಾರ್ಜುನಂ ಹನ್ಯಾಂ ಪಾದೌ ಪ್ರಕ್ಷಾಲಯೇ ಸ್ವಯಮ್ ॥ ೪೨೬ ॥

ಅ: 'ಅರ್ಜುನನ ಹಿರಿಮೆಯ ಬಗ್ಗೆ ನಿನಗಿರುವ ಸಂದೇಹವನ್ನು ತೊರೆ, ನಾನು ಹೇಳುವುದನ್ನು ಕೇಳು, ಅರ್ಜುನನನ್ನು ಕೊಲ್ಲುವವರೆಗೂ ನನ್ನ ಪಾದಗಳನ್ನು ನಾನೇ ತೊಳೆದುಕೊಳ್ಳುವೆ'.

ವಿ: ೧) ಕರ್ಣ ಮಾಡಿದ ವಿಚಿತ್ರ ಶಪಥವಿದು. ರಾಜ ಮಹಾರಾಜರು ತಮ್ಮ ಭೃತ್ಯರುಗಳಿಂದ ಪಾದ ತೊಳೆಸಿಕೊಳ್ಳುವುದು ಪದ್ಧತಿ, ಕರ್ಣ ಅಂದಿನಿಂದ ಅರ್ಜುನನನ್ನು ಕೊಲ್ಲುವವರೆಗೂ ಹಾಗೆ ಮಾಡದೇ ತನ್ನ ಪಾದಗಳನ್ನು ತಾನೇ ತೊಳೆದುಕೊಳ್ಳುವುದಾಗಿ ಶಪಥ ಮಾಡಿದ. ಎಂದರೆ ಮುಂದೆಂದೂ ಅವನು ತನ್ನ ಪಾದಗಳನ್ನು ಮತ್ತೊಬ್ಬರಿಂದ ತೊಳೆಸಿಕೊಳ್ಳುವ ಭಾಗ್ಯ ಪಡೆಯಲೇ ಇಲ್ಲ ಎಂದರ್ಥ.

೨) ಸ್ವೋತ್ತಮದ್ರೋಹ ಪೂಜ್ಯತೆಯನ್ನು ನಾಶಮಾಡುವಂತಹುದು ಎಂಬುದಕ್ಕೆ ಇದು ನಿದರ್ಶನ. ಮಹಾಭಾರತದ ಕೆಲವು ಪಾಠಗಳಲ್ಲಿ ಕರ್ಣ ಈ ಶಪಥವನ್ನು ದುರ್ಯೋಧನನ ಪೌಂಡರೀಕಯಾಗದ ಸಮಯದಲ್ಲಿ ಮಾಡಿದಂತೆ ಉಲ್ಲೇಖವುಂಟು. ಅದು ಕಾಲವ್ಯತ್ಯಾಸ ಎಂಬ ಪ್ರಭೇದಕ್ಕೆ ಸೇರಿರುವುದು ಎಂದು ತಿಳಿಯಬೇಕು.

ಇತ್ಯುಕ್ತೋಽವರಜೈಶ್ಚೈವ ಸರ್ವೈಃ ಶಕುನಿನಾ ತಥಾ ।
ಯಾಚಿತೋ ರಥಮಾರುಹ್ಯ ಯಯೌ ನಾಗಪುರಂ ದ್ರುತಮ್ ॥ ೪೨೭ ॥

ಕುಂಡಲಾಹರಣ ಪ್ರಸಂಗ

ಸಕುಂಡಲಂ ಸಕವಚಮವಧ್ಯಂ ಸೂರ್ಯನಂದನಮ್ ।
ಜ್ಞಾತ್ವೇಂದ್ರ ಉಭಯಂ ತಸ್ಮಾದೈಚ್ಛದಾದಾತುಮುತ್ತಮಮ್ ॥ ೪೨೮ ॥

---

೪೨೬. ಯಾ ಚ ತೇಽರ್ಜುನಮಾಹಾತ್ಮ್ಯ ಇತ್ಯತ್ರ ಅರ್ಜುನಮಾಹಾತ್ಮ್ಯೇ ತೇ ಯಾ ಶಂಕಾ ಸಾ ವ್ಯೇತು ಗಚ್ಛತು ಮೇ ವಚನಂ ಶೃಣು। ಅರ್ಜುನಂ ಯಾವನ್ನ ಹನ್ಯಾಂ ತಾವತ್ ಸ್ವಯಂ = ಸ್ವಯಮೇವ ಪಾದೌ ಪ್ರಕ್ಷಾಲಯೇ। ನ ತು ಭೃತ್ಯಕರೈಃ ಪ್ರಕ್ಷಾಲಯಿಷ್ಯೇ ಇತ್ಯರ್ಥಃ ॥ – (ಪಾ.)

೪೨೬. ಪಾದೌ ನ ಧಾವತೇ ತಾವದ್ ಯಾವನ್ನ ನಿಹತೋಽರ್ಜುನಃ ॥ – ಭಾರತ (ವನ. ೨೫೭/೧೬)

೪೨೮. ಐಚ್ಛದಾದಾತುಮುತ್ತಮಮಿತ್ಯಸ್ಯೋತ್ತಮಮುಭಯಮಾದಾತುಂ ದ್ವಿಜರೂಪಂ ಗ್ರಹಣಮೈಚ್ಛದಿತ್ಯರ್ಥಃ । – (ಸ.)

ಅ: ಕರ್ಣ ಕುಂಡಲಗಳೊಂದಿಗೂ, ಕವಚದೊಂದಿಗೂ ಇರುವಷ್ಟು ಕಾಲ ಸಾಯಲಾರ ಎಂದು ತಿಳಿದು ಇಂದ್ರ ಉತ್ತಮವಾದ ಅವುಗಳನ್ನು ತೆಗೆದುಕೊಳ್ಳಲೆಂದು ಇಚ್ಛಿಸಿದನು.

ವಿ: ತನ್ನ ಅವತಾರನಾದ ಅರ್ಜುನ ಕರ್ಣನನ್ನು ಕೊಲ್ಲುವುದಾಗಿ ಶಪಥ ಮಾಡಿರುವನು, ಅದು ಈಡೇರುವುದು ಕರ್ಣನಲ್ಲಿ ಕವಚ ಕುಂಡಲವಿರುವವರೆಗೂ ಅಸಾಧ್ಯ. ಆದ್ದರಿಂದ ಅವುಗಳನ್ನು ದಾನದ ರೂಪದಲ್ಲಿ ತೆಗೆದುಕೊಳ್ಳಲು ಇಂದ್ರ ಯೋಚಿಸಿದ ಎಂದರ್ಥ.

ಕರ್ಣನಿಗೆ ಸೂರ್ಯನ ಉಪದೇಶ

ತದ್ವಿಜ್ಞಾಯ ರವಿಃ ಕರ್ಣಂ ಸ್ವಪ್ನ ಉಕ್ತ್ವಾ ನ್ಯವಾರಯತ್ ।
ಸರ್ವಥಾ ದಾಸ್ಯ ಇತ್ಯುಕ್ತೇ ಪ್ರಾಹಾದೇಯಂ ವರಾಯುಧಮ್ ॥ ೪೨೯ ॥

ಅ: ಅದನ್ನು ತಿಳಿದ ಸೂರ್ಯ ಸ್ವಪ್ನದಲ್ಲಿ ಕರ್ಣನಿಗೆ ಅದನ್ನು ತಿಳಿಸಿ ಅವುಗಳನ್ನು ನೀಡದಿರಲು ತಿಳಿಸಿದ. ಆಗ ಕರ್ಣ 'ನಾನು ಸರ್ವಥಾ ನೀಡುವೆ' ಎನ್ನಲು, ಹಾಗಿದ್ದಲ್ಲಿ 'ಇಂದ್ರನ ಶ್ರೇಷ್ಠ ಆಯುಧವನ್ನು ಪ್ರತಿಯಾಗಿ ಪಡೆದುಕೋ' ಎಂದು ಹೇಳಿದ.

ವಿ: ೧) ಇಂದ್ರನ ಅಂತಹ ಯೋಜನೆ *ದೇವಗುಹ್ಯವಾಗಿತ್ತೆಂಬ ವಿವರ ಮಹಾಭಾರತದಲ್ಲಿದೆ. ಅದನ್ನು ತಿಳಿದ ಸೂರ್ಯ ಅದನ್ನು ತಪ್ಪಿಸಲೆಂದು ಸ್ವಪ್ನದಲ್ಲಿ ಕರ್ಣನಿಗೆ ಅದರ ಹಿನ್ನೆಲೆಯನ್ನು ತಿಳಿಸಿ ಇಂದ್ರನಿಗೆ ಅವನ್ನು ಸರ್ವಥಾ ನೀಡಬಾರದೆಂದು ಹೇಳುವನು. ಆದರೆ, ದಾನವ್ರತದ ದೀಕ್ಷೆ

---

೪೨೯. ಪ್ರಾಹಾದೇಯಂ ವರಾಯುಧಮಿತ್ಯತ್ರ ಇಂದ್ರಾದ್ವರಂ= ಶ್ರೇಷ್ಠಂ ಶಕ್ರಾಚ್ಛ್ರಿಮಮೋಘಮಾಯುಧಂ ತ್ವಯಾऽऽದೇಯಮಿತಿ ಪ್ರಾಹ। ದಾನಶೂರತ್ವಾತ್ ಕವಚಕುಂಡಲೇ ಇಂದ್ರಾಯ ದಾಸ್ಯಸಿ ಚೇತ್ ತಸ್ಮಾದ್ವರಾಯುಧಂ ಆದಾಯ ದಿಶೇತಿ ಭಾವಃ ॥ – (ವಾ.)

೪೨೯. ಸ್ವಪ್ನಾಂತೇ ನಿಶಿ ರಾಜೇಂದ್ರ ದರ್ಶಯಾಮಾಸ ರಶ್ಮಿವಾನ್ ॥
ಕೃಪಯಾ ಪರಯಾऽऽವಿಷ್ಟಃ ಪುತ್ರಸ್ನೇಹಾಚ್ಚ ಭಾರತ ॥ – ಭಾರತ (ವನ. ೩೦೬/೮)

ಪ್ರತ್ಯಾಖ್ಯೇಯಸ್ತ್ವಯಾ ತಾತ ಕುಂಡಲಾರ್ಥೇ ಸುರೇಶ್ವರಃ ॥ – ಭಾರತ (ವನ. ೩೦೧/೧೩)

೪೨೯. ಬಿಭೇಮಿ ನ ತಥಾ ಮೃತ್ಯೋರ್ಯಥಾ ಬಿಭ್ಯೇऽನೃತಾದಹಮ್ ।
ವಿಶೇಷೇಣ ದ್ವಿಜಾತೀನಾಂ ಸರ್ವೇಷಾಂ ಸರ್ವದಾ ಸತಾಮ್ ॥...
ಇದಂ ತ್ವಮನುಜಾನೀಹಿ ಸುರಶ್ರೇಷ್ಠ ವ್ರತಂ ಮಮ ।
ಭಿಕ್ಷತೇ ವಜ್ರಿಣೇ ದದ್ಯಾಮಪಿ ಜೀವಿತಮಾತ್ಮನಃ ॥ – ಭಾರತ (ವನ. ೩೦೨/೬,೧೦)

* ದೇವಗುಹ್ಯಂ ತ್ವಯಾ ಜ್ಞಾತುಂ ನ ಶಕ್ಯಂ ಪುರುಷರ್ಷಭ ।
ತಸ್ಮಾನ್ನಾಖ್ಯಾಮಿ ತೇ ಗುಹ್ಯಂ ಕಾಲೇ ವೇತ್ಸ್ಯತಿ ತದ್ಭವಾನ್ ॥ – ಭಾರತ (ವನ. ೩೦೧/೧೦)

ತೊಟ್ಟಿದ್ದ ಕರ್ಣ ಅವನ ಮಾತನ್ನು ಕೇಳದೇ ಕೊಟ್ಟೇ ಕೊಡುವುದಾಗಿ ನಿಶ್ಚಯದಿಂದ ತಿಳಿಸಿದಾಗ ಹಾಗಿದ್ದಲ್ಲಿ ಅದಕ್ಕೆ ಪ್ರತಿಯಾಗಿ ಇಂದ್ರನ ಅಮೋಘವಾದ ಶಕ್ತ್ಯಾಯುಧವನ್ನು ಕೇಳಿ ತೆಗೆದುಕೋ ಎಂಬ ಸಲಹೆ ನೀಡುವನು.

೨) ಸ್ವತಃ ಸೂರ್ಯ ಹೇಳಿದರೂ ದಾನವ್ರತವನ್ನು ತ್ಯಜಿಸದ ಕರ್ಣನ ದೀಕ್ಷೆ ಅತ್ಯಂತ ಶ್ಲಾಘ್ಯವಾದುದು. ತನ್ನ ಪ್ರಾಣಕ್ಕೇ ಆಪತ್ತು ಎಂದು ಖಚಿತವಾಗಿ ತಿಳಿದರೂ ಅದನ್ನು ತೊರೆಯದ ಅವನ ನಿಷ್ಠೆ ಲೋಕಮಾನ್ಯವಾದುದು. ಸೂರ್ಯನಾಗಿ ಇಡೀ ಲೋಕಕ್ಕೆ ಬೆಳಕನ್ನು ನೀಡುವ ಕರ್ಣನಿಗೆ ಅಂತಹ ದಾನ ಶೂರತೆ ಸಹಜ ಗುಣವಾಗಿದ್ದರಲ್ಲಿ ಅಚ್ಚರಿಯೇನಿಲ್ಲ. ಕನಸಿನಲ್ಲೂ ಆ ದೀಕ್ಷೆಯನ್ನು ತೊರೆಯದ್ದು ಕರ್ಣನ ಮತ್ತೊಂದು ವಿಶೇಷಗುಣ. ಸ್ವಪ್ನದಲ್ಲೂ ದೀಕ್ಷೆ ತೊರೆಯದ ಮಹಾತ್ಮ ಎಂಬುದು ಅವನ ಅಪೂರ್ವ ಹಿರಿಮೆ.

೩) ಇಂದ್ರ ತನ್ನ ಅವತಾರನಾದ ಅರ್ಜುನನ ಜಯಕ್ಕೆ ಯತ್ನಿಸಿದರೆ, ಸೂರ್ಯ ತನ್ನ ಅವತಾರನಾದ ಕರ್ಣನ ಜಯಕ್ಕೆ ಯತ್ನಿಸಿದ ಎಂಬುದು ಇಲ್ಲಿಯ ವಿಶೇಷ.

ಕರ್ಣನಿಂದ ಕವಚ ಕುಂಡಲದಾನ

ದದೌ ಚೋತ್ಕೃತ್ಯ ಕವಚಂ ಕುಂಡಲೇ ಚ ಶಚೀಪತೇಃ ।
ಅಮೋಘಾಂ ಶಕ್ತಿಮಾದಾಯ ಜ್ಞಾತ್ವೇಂದ್ರಂ ದ್ವಿಜರೂಪಿಣಮ್ ॥ ೪೩೦ ॥

ಅ: ದಾನ ಪಡೆಯಲು ಇಂದ್ರ ಬ್ರಾಹ್ಮಣ ರೂಪದಲ್ಲಿ ಬಂದಿರುವನು ಎಂದು ತಿಳಿದರೂ ಕರ್ಣ ತನ್ನ ಕವಚ ಮತ್ತು ಕರ್ಣಕುಂಡಲಗಳನ್ನು ದೇಹದಿಂದ ಕತ್ತರಿಸಿ ದಾನವಾಗಿ ನೀಡಿದ; ಪ್ರತಿಯಾಗಿ ಅಮೋಘವಾದ ಶಕ್ತ್ಯಾಯುಧವನ್ನು ಪಡೆದುಕೊಂಡ.

ವಿ: ೧) ಕರ್ಣ ಮಧ್ಯಾಹ್ನ ಕಾಲದಲ್ಲಿ ಸಂಧ್ಯಾಂಗವಾಗಿ ಸೂರ್ಯೋಪಸ್ಥಾನ ಮಾಡುತ್ತಿದ್ದಾಗ ಇಂದ್ರ ಬ್ರಾಹ್ಮಣ ವೇಷದಲ್ಲಿ ಕವಚ ಹಾಗೂ ಕುಂಡಲಗಳನ್ನು ದಾನವಾಗಿ ನೀಡಲು ಕೇಳಿದ. ಅದನ್ನು ಸ್ವಪ್ನಸೂಚನೆಯಂತೆ ತಿಳಿದಿದ್ದ ಕರ್ಣ ಸಂತೋಷದಿಂದಲೇ ನೀಡಿದ.

೨) ಹಾಗೆ ನೀಡುವಾಗ ದೇಹದೊಂದಿಗೇ ಹುಟ್ಟಿ ಬಂದಿದ್ದ ಅವುಗಳನ್ನು ದೇಹವನ್ನೇ ಕತ್ತರಿಸಿ ನೀಡುವುದು ಅನಿವಾರ್ಯವಾಗಿತ್ತು. ಕರ್ಣ ಹಾಗೆ ಕತ್ತರಿಸಿಯೇ ನೀಡಿದ್ದು ಮತ್ತೊಂದು ವಿಶೇಷ. ಕವಚ ದೇಹದ ಹಿಂಭಾಗ ಮುಂಭಾಗ ಎರಡನ್ನೂ ಆವರಿಸಿದ್ದರಿಂದ ಆ ಭಾಗಗಳನ್ನೆಲ್ಲಾ

---

೪೩೦. ಅಭ್ಯರ್ಥಯೇಥಾ ದೇವೇಶಮಮೋಘಾರ್ಥಂ ಪುರಂದರಮ್ ।
ಅಮೋಘಾಂ ದೇಹಿ ಮೇ ಶಕ್ತಿಮಮಿತ್ರವಿನಿಬರ್ಹಿಣೀಮ್ ॥ – ಭಾರತ (ವನ. ೩೦೨/೧೫)

ಕರ್ಣ ಕತ್ತರಿಸಲೇ ಬೇಕಾಯಿತು. ಅದರಂತೆ ಕುಂಡಲಗಳನ್ನು ನೀಡುವಾಗ ಕಿವಿಯ ಆ ಭಾಗವನ್ನೂ ಕತ್ತರಿಸಿಕೊಳ್ಳಬೇಕಾಯಿತು*. ಅಂತಹ ಅಪಾರ ಮೌಲ್ಯದ, ಪ್ರಾಣರಕ್ಷಕವಾದ ಅವುಗಳನ್ನು ಅಂತಹ ಅಪಾರ ನೋವನ್ನು ಅನುಭವಿಸಿಯೂ ನೀಡಿದ್ದು ಕರ್ಣನ ಅಪೂರ್ವ ಹಿರಿಮೆ.

೩) ಹಾಗೆ ಕವಚ ಕುಂಡಲಗಳನ್ನು ನೀಡುವ ಮೂಲಕ ಕರ್ಣ ಜನ್ಮಾರಭ್ಯ ಅವನೊಳಗೆ ಪ್ರವೇಶಿಸಿದ್ದ ಸಹಸ್ರವರ್ಮ ಎಂಬ ಅಸುರನ ಆವೇಶದಿಂದ ಬಿಡುಗಡೆ ಹೊಂದಲು ಕಾರಣ–ವಾಯಿತು. ಹೀಗೆ ದಾನಕಾರ್ಯ ಆಸುರೀ ಶಕ್ತಿಗಳನ್ನು ಮನಸ್ಸಿನಿಂದ ಹೊಡೆದೋಡಿಸುವ ಸಾಧನ ಎಂಬುದಕ್ಕೂ ಇದು ಸೂಚಕ.

೪) ಆದರೆ, ಕರ್ಣನೊಳಗೆ ಈ ಹಿಂದೆ ತಿಳಿಸಿದಂತೆ ಆ ವೇಳೆಗೆ ಕೃಷ್ಣನಿಂದ ಹತನಾದ ನರಕಾಸುರ ಪ್ರವೇಶಿಸಿದ್ದರಿಂದ ಕರ್ಣ ಪುನಃ ದುರ್ಯೋಧನನ ಪಕ್ಷದಲ್ಲೇ ಉಳಿಯುವಂತಾಯಿತು ಎಂದು ತಿಳಿಯಬೇಕು.

೫) ಸ್ವತಃ ದೇವೇಂದ್ರ ಅವನ ಅದ್ಭುತ ದೀಕ್ಷೆಯನ್ನು ಮೆಚ್ಚಿ ವರ ನೀಡಲು ಸಿದ್ಧನಾದ. ಕರ್ಣ ಸೂರ್ಯ ತಿಳಿಸಿದ್ದಂತೆ ಅಮೋಘವಾದ ಶಕ್ಯಾಯುಧವನ್ನು ಬೇಡಿ ಪಡೆದ. ಶಕ್ಯಾಯುಧ ಆಮೋಘವೆಂದರೆ ಅದು ಯಾವನ ಮೇಲೆ ಪ್ರಯೋಗಿಸಲ್ಪಡುವುದೋ ಅವನ ಸಾವು ಖಚಿತ ಎಂದರ್ಥ.

ಇಂದ್ರ ನೀಡಿದ ಅಮೋಘ ಶಕ್ಯಾಯುಧ

ಋತೇऽರ್ಜುನಾದೇಕಮೇವ ವಧಿಷ್ಯನ್ತಯೇತಿ ಸಃ ।
ದತ್ವಾ ಶಕ್ತಿಂ ಯಯೌ ಶಕ್ರಃ ಸಾರ್ಧಂ ಕವಚಕುಂಡಲೈಃ ॥ ೪೩೧ ॥

---

* ಶಸ್ತ್ರಂ ಗೃಹೀತ್ವಾ ನಿಶಿತಂ ಸರ್ವಗಾತ್ರಾಣ್ಯಕೃಂತತ । – ಭಾರತ (ವನ. ೩೧೦/೩೫)

೪೩೧. ಏಕಂ ಹನಿಷ್ಯಸಿ ರಿಪುಂ ಗರ್ಜಂತಂ ಬಲಿನಂ ರಣೇ ।
ತ್ವಂ ತು ಯಂ ಪ್ರಾರ್ಥಯಸ್ಯೇಕಂ ರಕ್ಷ್ಯತೇ ಸ ಮಹಾತ್ಮನಾ ॥
ಯಮಾಹುರ್ವೇದವಿದ್ವಾಂಸೋ ವರಾರ್ಹಮಪರಾಜಿತಮ್ ।
ನಾರಾಯಣಮಚಿಂತ್ಯಂ ಚ ತೇನ ಕೃಷ್ಣೇನ ರಕ್ಷ್ಯತೇ ॥ – ಭಾರತ (ವನ ೩೧೦/೨೭,೨೮)

೪೩೧. ತದಿದಮುಕ್ತಮಾರಣ್ಯಕೇ। ಗೃಹಾಣ ಕರ್ಣಶಕ್ತಿಂ ಸ್ವಮನೇನ ಸಮಯೇನ ವೈ ಇತ್ಯುಕ್ತಾ। ಸೇಯಂ ತವ ಕರಂ ಪ್ರಾಪ್ಯಹತ್ವೈಕಂ ರಿಪುಮೂರ್ಜಿತಂ। ಗರ್ಜಂತಂ ಪ್ರತಿಪನ್ನಂ ಚ ಮಾಮೇವೈಷ್ಯತಿ ಸೂತಜ ಇತ್ಯುಕ್ತಂ ಶ್ರುತ್ವಾ। ಏವಮೇವಾಹಮಿಚ್ಛಾಮಿ ರಿಪುಂ ಹಂತುಂ ಮಹಾಹವೇ। ಗರ್ಜತಂ ಪ್ರತಿಪನ್ನಂ ಚ ಯತೋ ಮಮ ಭಯಂ ಭವೇತ್ ಇತಿ ಕರ್ಣೇನೋಕ್ತೇನ। – (ಜ.)

ಅ: ಅರ್ಜುನನ ಹೊರತು ಒಬ್ಬನನ್ನು ಮಾತ್ರ ಇದರಿಂದ ನೀನು ಕೊಲ್ಲುವಿ ಎಂದು ತಿಳಿಸಿ ಇಂದ್ರ ಶಕ್ತ್ಯಾಯುಧವನ್ನು ಅವನಿಗೆ ನೀಡಿ, ಕವಚ ಕುಂಡಲಗಳೊಂದಿಗೆ ತೆರಳಿದ.

ಎ: ೧) ಇಂದ್ರ ಹಾಗೆ ಅವೋಘ ಶಕ್ತ್ಯಾಯುಧವನ್ನು ಕರ್ಣ ಪಡೆಯುತ್ತಿರುವುದು ಅರ್ಜುನನ ಸಂಹಾರಕ್ಕೆಂದು ತಿಳಿದ, ಆದರೆ ಅರ್ಜುನನನ್ನು ಸಂರಕ್ಷಿಸುವುದು ಕೃಷ್ಣನ ಸಂಕಲ್ಪವಾದ್ದರಿಂದ ಕರ್ಣನ ಆ ಬಯಕೆ ಸರ್ವಥಾ ಈಡೇರದು ಎಂದು ಖಚಿತವಾಗಿ ತಿಳಿದು ಅರ್ಜುನನನ್ನು ನೀನು ಇದರಿಂದ

---

೪೩೧. 'ಋತೇऽರ್ಜುನಾದೇಕಮೇವ ವಧಿಷ್ಯನ್ನಯೇತಿ ಸಃ' ಇತ್ಯತ್ರ ಅರ್ಜುನಾದೃತೇ ಅರ್ಜುನಂ ವಿನೈಕಮೇವಾನಯಾ ವಧಿಷ್ಯಸೀತ್ಯೇವಂ ನ ವ್ಯಾಖ್ಯೇಯಮ್ । ಏವಂ ವ್ಯಾಖ್ಯಾತೇ ಅರಣ್ಯಪರ್ವವಿರೋಧಃ । ತಥಾ ಹಿ –

'ಗೃಹಾಣ ಕರ್ಣ ಶಕ್ತಿಂ ತ್ವಮೃತೇ ನ ಸಮಯೇನ ವೈ ।
ಇಯಂ ತವ ಕರಂ ಪ್ರಾಪ್ಯ ಹನ್ತ್ಯೇಕಂ ರಿಪುಮೂರ್ಜಿತಮ್ ।
ಗರ್ಜಂತಂ ಪ್ರತಿಪನ್ನಂ ಚ ಮಾಮೇವೇಷ್ಯತಿ ಸೂತಜ ॥'

ಇತ್ಯುಕ್ತಂ ಶ್ರುತ್ವಾ –

ಏಕಮೇವಾಹಮಿಚ್ಛಾಮಿ ರಿಪುಂ ಹಂತುಂ ಮಹಾಹವೇ ।
ಗರ್ಜಂತಂ ಪ್ರತಿಪನ್ನಂ ಚ ಯತೋ ಮಮ ಭಯಂ ಭವೇತ್ ॥'

ಇತಿ ಕರ್ಣೋಕ್ತನಂತರಂ–

'ನ ತು ತ್ವಂ ಪ್ರಾರ್ಥಯಸ್ಯೇಕಂ ರಕ್ಷ್ಯತೇ ಸ ಮಹಾತ್ಮನಾ'

ಇತಿ ಪುನರಿಂದ್ರೇಣೋಚ್ಯಮಾನತ್ವಾತ್ 'ತಸ್ಮಾದೇಕಮೇವಾನಯಾ ವಧಿಷ್ಯಸೀತ್ಯೇವಮೇವ ವ್ಯಾಖ್ಯೇಯಮ್'। ಅರ್ಜುನಾದೃತ ಇತಿ ತು ಸ್ವರೂಪಕಥನಮಿತಿ ವಕ್ತವ್ಯಮ್ । ಯದ್ಯೇವಂ ನ ವ್ಯಾಖ್ಯಾ ತದಾ 'ನನರ್ತ ಕೇಶವಃ ಸಮಾಶ್ಲಿಷಚ್ಚ ಫಲ್ಗುನಂ । ಯಯಾರ್ಜುನೋ ನಿಹಂತವ್ಯ.....' ಇತ್ಯಾದ್ಯುತ್ತರಗ್ರಂಥವಿರೋಧಃ ಸ್ಯಾದಿತಿ ನ ವಾಚ್ಯಮ್ । 'ನ ತು ಯಂ ಪ್ರಾರ್ಥಯಸ್ಯೇಕಮ್' ಇತಿ ತದ್ವಾಕ್ಯೇನೈವ 'ಅರ್ಜುನಾದೃತ' ಇತಿ ಅರ್ಥಸಿದ್ಧೇಃ 'ಹೇ ಕರ್ಣ ತ್ವಂ ಹಂತುಂ ಯಂ ಅರ್ಜುನಂ ಪ್ರಾರ್ಥಯಸಿ ತು ಸಃ ಮಹಾತ್ಮನಾ ಕೃಷ್ಣೇನ ರಕ್ಷ್ಯತೇ' ಇತಿ ಶಕ್ರವಾಕ್ಯಾತ್ ಅರ್ಥಪ್ರತೀತೇಃ। ನ ಚೈವಮರ್ಥಸ್ಯ ಪ್ರತೀತತ್ವೇ ಶಕ್ಯಾ ಅರ್ಜುನಂ ಹನಿಷ್ಯಾಮೀತಿ ಕರ್ಣಸ್ಯ ನಿಶ್ಚಯಾನುಪಪತ್ತಿರಿತಿ ವಾಚ್ಯಮ್ । 'ನ ತು ಯಂ ಪ್ರಾರ್ಥಯಸ್ಯೇಕಮಿ'ತಿ ವಾಕ್ಯಾರ್ಥಪರಿಜ್ಞಾನಾದೇವ ತದುಪಪತ್ತೇಃ । ನ ಚ ಕೃಷ್ಣನರ್ತನಾದಿವಿರೋಧಃ । ತಸ್ಯ ಲೋಕಾನುಕರಣತ್ವೋಪಪತ್ತೇಃ । ಏತದುಕ್ತಂ ಭವತಿ – ಭಾರತೇऽಪಿ 'ಅರ್ಜುನಾದೃತೇ ಏಕಂ ಶಕ್ಯಾ ಹನಿಷ್ಯ 'ಇತ್ಯರ್ಥಪ್ರತೀತ್ಯಾ ನ ತದ್ವಿರೋಧೋ ಏತಸ್ಯ ಕರ್ಣಸ್ಯೇಂದ್ರವಾಕ್ಯಾರ್ಥಾಪರಿಜ್ಞಾನಾತ್ ಅರ್ಜುನವಧಾದೌ ಪ್ರವೃತ್ತಿಃ। ಪೂರ್ವಪಕ್ಷಿಣಸ್ತು ತದ್ವಾಕ್ಯಾರ್ಥಾಪರಿಜ್ಞಾನಾದೇವ ಶಂಕಾ । ಕೃಷ್ಣಾದೇಃ ಸರ್ವಜ್ಞಸ್ಯ ಲೋಕಾನುಕರಣಮಿತಿ ನ ಪೂರ್ವೋತ್ತರವಿರೋಧಶಂಕಾವಕಾಶ ಇತಿ । ಯದ್ವಾ 'ನ ತು ಯಂ ಪ್ರಾರ್ಥಯಸ್ಯೇಕಮ್' ಇತ್ಯಸ್ಯಾರ್ಥಃ 'ಋತೇऽರ್ಜುನಾದಿ'ತ್ಯನೇನ ಕಥ್ಯತೇ । ತಸ್ಯಾರ್ಥೇ ಋತೇ ಯಥಾರ್ಥೇ ಸತಿ ಅರ್ಜುನಾದೇಕಮೇವ ಅರ್ಜುನಾದನ್ಯಮೇವಾನಯಾ ವಧಿಷ್ಯಸೀತಿ ಯಥಾ ಸತ್ಯೇವಮಯಥಾರ್ಥೇ ಸತಿ ವೈಪರೀತ್ಯಂ ಕಿಂ ನ ಸ್ಯಾದಿತ್ಯಾಶಯೇನ ಕರ್ಣಾರಿಪ್ರವೃತ್ತಿರುಪಪದ್ಯತ ಇತಿ। –(ತಿ.)

ಕೊಲ್ಲಲಾರೆ ಎಂದು ಖಚಿತವಾಗಿ ತಿಳಿದು ಅರ್ಜುನನನ್ನು ನೀನು ಇದರಿಂದ ಕೊಲ್ಲಲಾರೆ ಎಂದು ತಿಳಿಸಿಯೇ ಅದನ್ನು ನೀಡಿದ ಎಂದರ್ಥ.

೨) ಮಹಾಭಾರತದಲ್ಲಿ ಕೃಷ್ಣರಕ್ಷಿತನಾದವನನ್ನು ಹೊರತು ಬೇರೊಬ್ಬನನ್ನು ಅದರಿಂದ ಸಂಹರಿಸುವಿ ಎಂದು ತಿಳಿಸಿ ಇಂದ್ರ ನೀಡಿದ ಎಂಬ ಉಲ್ಲೇಖವಿದೆ(ವನಪರ್ವ ೩೧೦/೨೭,೨೮). ಆ ಕೃಷ್ಣರಕ್ಷಿತನಾದವನು ಅರ್ಜುನನಾದ್ದರಿಂದ ಶ್ರೀಮದಾಚಾರ್ಯರು ಇಲ್ಲಿ ಅರ್ಜುನನ ಹೊರತು ಎಂದೇ ಇಂದ್ರ ಹೇಳಿದ ಎಂಬುದಾಗಿ ಸಂಗ್ರಹಿಸಿರುವರು ಎಂದು ತಿಳಿಯಬೇಕು.

೩) ಆ ಶಕ್ತ್ಯಾಯುಧಕ್ಕೆ ಅರ್ಜುನನನ್ನು ಸಂಹರಿಸುವ ಶಕ್ತಿ ಇದ್ದರೂ ಕೃಷ್ಣನ ಸಂಕಲ್ಪ–ದಿಂದಾಗಿ ಅದು ನಡೆಯದು ಎಂದರ್ಥ.

೪) ಇಂದ್ರ ಶಕ್ತ್ಯಾಯುಧವನ್ನು ನೀಡಿದ್ದು ಮಾತ್ರವಲ್ಲದೇ ಕರ್ಣನಿಗೆ ದೇಹ ಕತ್ತರಿಸಿ ಕೊಂಡದ್ದರಿಂದಾಗಿ ಯಾವುದೇ ಗಾಯವಾಗಲೀ, ವಿಕಾರವಾಗಲೀ ಉಂಟಾಗದಿರಲಿ ಎಂಬ ವರವನ್ನೂ ನೀಡಿದ. ಅದರಿಂದಾಗಿ ಕರ್ಣನ ದೇಹಕಾಂತಿ ಮುಂಚಿನಂತೆ ಅಪೂರ್ವವಾಗಿಯೇ ಉಳಿಯಲು * ಸಾಧ್ಯವಾಯಿತು.

ಅರಣೇಭಾಂಡ ಪ್ರಸಂಗ

ಪಾರ್ಥಾ ವಿಮುಚ್ಯೈವ ಸುಯೋಧನಂ ತಂ
ವನೇ ವಸಂತೋ ಮುದಿತಾಃ ಸದೈವ ।
ಸಹಾರಣೇಭಾಂಡಮಥೋ ಮೃಗೇಣ
ಹೃತಂ ದ್ವಿಜಸ್ಯಾಶು ನಿಶಮ್ಯ ಚಾನ್ವಯುಃ ॥ ೪೩ ॥

ಅ: ಪಾಂಡವರು ದುರ್ಯೋಧನನನ್ನು ಬಿಡುಗಡೆ ಮಾಡಿ ವನದಲ್ಲಿ ಸದಾ ಆನಂದದಿಂದ ನೆಲೆಸಿದರು. ಬ್ರಾಹ್ಮಣನೊಬ್ಬನ ಅರಣಿ ಮತ್ತು ಅದನ್ನಿರಿಸುವ ಪಾತ್ರೆಗಳನ್ನು ಜಿಂಕೆಯೊಂದು ಅಪಹರಿಸಿದ್ದನ್ನು ಕೇಳಿ ಅದನ್ನು ಬೆನ್ನಟ್ಟಿ ತೆರಳಿದರು.

---

* ನ ತೇ ಬೀಭತ್ಸತಾ ಕರ್ಣ ಭವಿಷ್ಯತಿ ಕಥಂಚನ ।
ವ್ರಣಶ್ಚೈವ ನ ಗಾತ್ರೇಷು ಯಸ್ತ್ವಂ ನಾನೃತಮಿಚ್ಛಸಿ ॥
ಯಾದೃಶಸ್ತೇ ಪಿತುರ್ವರ್ಣಸ್ತೇಜಶ್ಚ ವದತಾಂ ವರ ।
ತಾದೃಶೇನೈವ ವರ್ಣೇನ ತ್ವಂ ಕರ್ಣ ಭವಿತಾ ಪುನಃ ॥ – ಭಾರತ (ವನ. ೩೧೦/೩೧)

೪೩. ಪಾರ್ಥಾ ವಿಮೋಚ್ಯೈವೇತ್ಯೇವಕಾರಸ್ಯ ವನ ಏವೇತಿ ಸಂಬಂಧಃ । ಸಹಾರಣೇಭಾಂಡಮಿತ್ಯತ್ರ ಅರಣೇಭ್ಯಾಂ= ಅಗ್ನಿಮಥನಕಾಷ್ಠಾಭ್ಯಾಂ ಸಹಿತಂ ಭಾಂಡಂ= ಪಾತ್ರಮಿತ್ಯರ್ಥಃ ॥ – (ವಾ.)

೪೩. 'ಸಹಾರಣೇಭಾಂಡಮಥೋ ಮೃಗೇಣ' ಇತ್ಯತ್ರ ಅರಣೇ ಅಗ್ನ್ಯುಧಾನಕಾಷ್ಠಾ ತಸ್ಯಾ ಸಹಿತಂ ಪಾತ್ರಮಿತ್ಯರ್ಥಃ । 'ಅರಣೇಸಹಿತಂ ಭಾಂಡಂ ಬ್ರಾಹ್ಮಣಾಯ ನ್ಯವೇದಯನ್ನಿ'ತಿ ವಿರಾಟಪರ್ವವಚನಾತ್ ॥ – (ತಿ.)

ಎ: ೧) ವನವಾಸದ ಕೊನೆಯ ಘಟ್ಟದಲ್ಲಿ ನಡೆದ ಪ್ರಸಂಗವಿದು. ಬ್ರಾಹ್ಮಣನೊಬ್ಬ ಮರದ ಕೊಂಬೆಯಲ್ಲಿ ಸಿಕ್ಕಿಸಿದ್ದ ಅರಣೇಕಾಷ್ಠ ಮತ್ತು ಯಜ್ಞಪಾತ್ರೆಗಳನ್ನು ಜಿಂಕೆ ತನ್ನ ಕೊಂಬುಗಳಲ್ಲಿ ಸಿಕ್ಕಿಸಿಕೊಂಡು ಓಡಿ ಹೋಯಿತು. ಅವುಗಳಿಲ್ಲದೇ ಯಜ್ಞ ನಡೆಯದು ಎಂಬ ಕಾರಣದಿಂದ ಬ್ರಾಹ್ಮಣ ಪಾಂಡವರನ್ನು ಶರಣು ಹೊಕ್ಕಾಗ ಅವರು ಅದನ್ನು ಬೆನ್ನಟ್ಟಿದರು.

೨) ಹಾಗೆ ಜಿಂಕೆಯ ರೂಪದಲ್ಲಿ ಬಂದು ಅವುಗಳನ್ನು ಅಪಹರಿಸಿದ್ದು ಯಮದೇವರೇ ಎಂಬ ವಿವರ ಮುಂದೆ ಬಂದಿದೆ (ಶ್ಲೋ. ೪೪೬).

ಯಕ್ಷಪ್ರಶ್ನೆ

ತಸ್ಮಿನ್ನದೃಶ್ಯೇ ತೃಷಿತಾ ಏಕೈಕಮುದಕಾರ್ಥಿನಃ ।
ಯಯುರ್ಯುಧಿಷ್ಠಿರಮೃತೇ ಸುಪ್ತಾಸ್ತೇ ಧರ್ಮಮಾಯಯಾ ॥ ೪೩೩ ॥

ಅ: ಜಿಂಕೆ ಕಾಣದಾದಾಗ ಪಾಂಡವರಿಗೆ ಬಾಯಾರಿಕೆ ಉಂಟಾಗಿತ್ತು. ಧರ್ಮರಾಜನ ಹೊರತು ಒಬ್ಬೊಬ್ಬರಾಗಿ ನೀರು ತರಲೆಂದು ಹೊರಟರು. ಯಮನ ಮಾಯೆಯಿಂದ ಅವರೆಲ್ಲ ಗಾಢ ನಿದ್ರೆಗೊಳಗಾದರು.

ಎ: ಮೊದಲು ಸಹದೇವ, ಬಳಿಕ ನಕುಲ, ಅನಂತರ ಅರ್ಜುನ ಕೊನೆಗೆ ಭೀಮಸೇನ ಎಂಬ ಕ್ರಮದಲ್ಲಿ ಅವರೆಲ್ಲ ನೀರು ತರಲೆಂದು ಹೊರಟು, ಒಂದು ಕೊಳದಲ್ಲಿ ಬಕರೂಪದ ಯಮ ಕೇಳಿದ ಪ್ರಶ್ನೆಗೆ ಉತ್ತರ ನೀಡಲು ಬಯಸದೇ ಆ ನೀರನ್ನು ಕುಡಿದು ದೇವಮಾಯೆಯಿಂದ ಮಲಗಿಬಿಟ್ಟರು ಎಂದರ್ಥ.

ಅದೃಶ್ಯೇನೈವ ಧರ್ಮೇಣ ವಾರಿತಾ ವಾರಿಪಾಯಿನಃ ।
ಕ್ಷತ್ರಧರ್ಮಸ್ಯ ರಕ್ಷಾರ್ಥಂ ನ ತತ್ಪ್ರಶ್ನವಿದಾಂ ವರಾಃ ।
ವ್ಯಾಚಕ್ರುಃ ಶಕ್ತಿಮಂತೋಽಪಿ ಪಾನೀಯಾರ್ಥಮರಿಂದಮಾಃ ॥ ೪೩೪ ॥

---

೪೩೩. ಏಕ ಏಕೋ ಯಥಾ ಭವತಿ ತಥಾ ಏಕೈಕಮಿತಿ ಕ್ರಿಯಾವಿಶೇಷಣಮ್। ಯಯುಃ= ಯುಧಿಷ್ಠಿರಮೃತೇ ಯಯುಃ ॥ – (ವಾ.)

೪೩೪. ತದಾ ಅದೃಶ್ಯೇನೈವ ಧರ್ಮೇಣ ವಾರಿಪಾಯಿನಃ ಸಂತಃ ವಾರಿತಾಃ = ಮದುಕ್ತಪ್ರಶ್ನೋತ್ತರಮದತ್ವಾ ನ ಪಿಬತೇತಿ ವಾರಿತಾಃ। ಕ್ಷತ್ರಧರ್ಮಸ್ಯ ರಕ್ಷಾರ್ಥಂ ವಿದ್ಯೋಪಜೀವನೇನ ನ ಜೀವಿತವ್ಯಮಿತಿ ಧರ್ಮಸ್ಯ ರಕ್ಷಾರ್ಥಂ= ಪ್ರಶ್ನಾನ್ನ ವ್ಯಾಚಕ್ರುಃ। ಕಿಂ ತು ಪ್ರಸಭಂ= ಬಲಾತ್ಕಾರೇಣೈವೋದಕಂ ಪಪುಃ। ತೇನ ಕಾರಣೇನ ತೇ ಚತ್ವಾರೋಽಪಿ ಧರ್ಮಮಾಯಯಾ ಸುಪ್ತಾ ಬಭೂವುರಿತಿ ಪೂರ್ವಕ್ರಿಯಯಾ ಏಕಾನ್ವಯಃ ॥ – (ವಾ.)

ಅ: ಯಮ ಅದೃಶ್ಯನಾಗಿ ಅವರನ್ನು ತಡೆದ. ಅವರೆಲ್ಲ ಹಾಗೇ ನೀರು ಕುಡಿದರು. ಕ್ಷತ್ರಿಯ-ಧರ್ಮದ ರಕ್ಷಣೆಗಾಗಿ ತಾವು ಸಮರ್ಥರಾಗಿದ್ದರೂ ಸಹ ಜಲಪಾನಕ್ಕೋಸ್ಕರ ಶತ್ರುನಾಶಕರಾದ ಆ ಮಹಾವೀರರು ಅವನ ಪ್ರಶ್ನೆಗಳನ್ನು ಉತ್ತರಿಸಲಿಲ್ಲ.

ವಿ: ೧) ಹಾಗೆ ಪ್ರಶ್ನೆ ಕೇಳುವುದಾಗಿ ಹೇಳಿದ್ದು ಬಕರೂಪದ ಯಮ. ಅವರೆಲ್ಲ ಅವುಗಳಿಗೆಲ್ಲ ಸಮರ್ಪಕ ಉತ್ತರ ನೀಡಬಲ್ಲ ಮಹಾಜ್ಞಾನಿಗಳು. ಭೀಮನಂತೂ ಪೂರ್ಣಪ್ರಜ್ಞನೇ. ಆದರೂ ಅವರು ಉತ್ತರ ನೀಡದಿರಲು ಕ್ಷತ್ರಿಯ ಧರ್ಮವನ್ನು ಪಾಲಿಸುವ ನಿಶ್ಚಯವೇ ಕಾರಣವಾಗಿತ್ತು.

೨) ಯಮ ಪ್ರಶ್ನೆಗಳಿಗೆ ಉತ್ತರ ನೀಡಿದರೆ ಮಾತ್ರ ನೀರು ಕುಡಿಯಲು ಅನುಮತಿ ನೀಡುವುದಾಗಿ ಹೇಳಿದ್ದರಿಂದ ಹಾಗೆ ಮಾಡುವುದು ವಿದ್ಯೆಯಿಂದ ಉಪಜೀವನ ಮಾಡಿದಂತಾಗುವುದು ಎಂಬ ಕಾರಣದಿಂದ ಅವರು ಉತ್ತರಿಸಲಿಲ್ಲ.

೩) ಅವರೆಲ್ಲ ಸತ್ತರೆಂದೇ ಪಂಪ, ಕುಮಾರವ್ಯಾಸ ಮೊದಲಾದವರು ಬರೆದಿರುವರು;

ನ ವಿಪ್ರಾಣಾಂ ಚ ಧರ್ಮೋಽಯಂ ವಿದ್ಯಾಯಾ ಉಪಜೀವನಮ್ ।
ಕ್ಷತ್ರಿಯಾಣಾಂ ತು ಕಿಮುತ ಪ್ರಸಭಂ ತೇನ ತೇ ಪಪುಃ ॥ ೪೩೫ ॥

ಅ: ವಿದ್ಯೆಯಿಂದ ಜೀವನ ನಿರ್ವಹಣೆ ಮಾಡುವುದು ಬ್ರಾಹ್ಮಣರಿಗೂ ಧರ್ಮವಲ್ಲ, ಎಂದ ಮೇಲೆ ಕ್ಷತ್ರಿಯರಿಗೆ ಧರ್ಮವಲ್ಲವೆಂದು ಇನ್ನೇನು ಹೇಳುವುದು; ಆದ್ದರಿಂದ ಅವರು ಬಲಾತ್ಕಾರದಿಂದ ನೀರನ್ನು ಕುಡಿದರು.

ವಿ: ಅಜಗರಪ್ರಸಂಗದಂತೆ(೨೨/೩೫೩,೩೫೪; ೧೮/೧೧) ಇಲ್ಲೂ ಸಹ ಭೀಮಸೇನ ವಿದ್ಯೋಪಜೀವನ ತರವಲ್ಲ ಎಂಬ ಕಾರಣದಿಂದ ಬಕನ ಪ್ರಶ್ನೆಗಳಿಗೆ ಉತ್ತರಿಸಲಿಲ್ಲ. ಇತರರೂ ಹಾಗೆಯೇ.

ಯಮನ ಮಾಯೆಯ ಪರಿಮಿತಿ

ದೇವಾ ಅಪಿ ಮನುಷ್ಯೇಷು ಜಾತಾಃ ಸುಬಲಿನೋಽಪಿ ಹಿ ।
ಮಾನುಷೇಣೈವ ಭಾವೇನ ಯುಕ್ತಾಃ ಸ್ಯುಃ ಕೇಶವಾದೃತೇ ॥ ೪೩೬ ॥

ಅ: ಶ್ರೀಹರಿಯೊಬ್ಬನ ಹೊರತು ಇತರ ದೇವತೆಗಳು, ಮನುಷ್ಯರಲ್ಲಿ ಅವತರಿಸಿದಾಗ ತುಂಬಾ ಬಲಶಾಲಿಗಳಾಗಿದ್ದರೂ ಮನುಷ್ಯ ಸ್ವಭಾವದಿಂದಲೇ ಕೂಡಿರುವರು.

---

* ವಿಗತಜೀವಿತರಾಗಿರ್ದ ಮೂವರನುಜರುಮಂ .... – ಪಂಪಭಾರತ (ಆಶ್ವಾಸ ೮, ಪದ್ಯ ೪೧)
ದಾಂಟಿದುದಸು ಕಳೇಬರವ – ಕುಮಾರವ್ಯಾಸಭಾರತ (ಆರಣ್ಯಪರ್ವ, ಸಂಧಿ ೨೩, ಪದ್ಯ ೨೧)

ಎ: ಶ್ರೀಹರಿ ಮತ್ತು ಮಹಾಲಕ್ಷ್ಮಿ ಇಬ್ಬರು ಸದಾ ಅಪ್ರಾಕೃತ ಶರೀರರಾದ್ದರಿಂದ ಅವರಿಗೆಂದೂ ಮನುಷ್ಯಾದಿ ಪ್ರಾಕೃತದೇಹಗಳು ಸರ್ವಥಾ ಇಲ್ಲ ಎಂದರ್ಥ; ಮನುಷ್ಯದೇಹದ ಪ್ರಸಕ್ತಿ ಸರ್ವಥಾ ಇಲ್ಲ ಇತರ ದೇವತೆಗಳಿಗೆ ಪ್ರಾಕೃತ ದೇಹ ಉಂಟು; ಮಾನವಾದಿದೇಹವೂ ಉಂಟು ಎಂದು ತಾತ್ಪರ್ಯ.

ಭೀಮಾರ್ಜುನರಿಗೆ ಮಾಯೆಯೇ?

ಕಾರ್ಯೇಷ್ವೇಷಾಂ ಕ್ರಮೇಣೈವ ವ್ಯಕ್ತಿಮಾಯಾಂತಿ ಸದ್ಗುಣಾಃ ।
ಅತೋ ಭೀಮಾರ್ಜುನೌ ಧರ್ಮಾದತ್ಯುತ್ತಮಬಲಾವಪಿ ।
ದೇವಮಾಯಾಂ ಸಮಾಶ್ರಿತ್ಯ ಧರ್ಮೇಣ ಸ್ಥಾಪಿತೌ ಕ್ಷಣಾತ್ ॥ ೪೩೭ ॥

ಅ: ಪ್ರಸಂಗ ಒದಗಿದಾಗ ಮಾತ್ರ ಅವರ ಸದ್ಗುಣಗಳು ಕ್ರಮವಾಗಿ ಪ್ರಕಟಗೊಳ್ಳುವವು. ಆದ್ದರಿಂದ ಭೀಮ ಮತ್ತು ಅರ್ಜುನರು ಯಮನಿಗಿಂತ ಮಿಗಿಲಾದ ಅತ್ಯುತ್ತಮ ಬಲ-ಶಾಲಿಗಳಾಗಿದ್ದರೂ ಭಗವಂತನ ಇಚ್ಛೆಯನ್ನು ಅವಲಂಬಿಸಿ ಯಮನಿಂದ ಕ್ಷಣಮಾತ್ರದಲ್ಲಿ ಮಲಗಿಸಲ್ಪಟ್ಟರು.

---

೪೩೭. ನನು ಮೂಲರೂಪಾವತಾರರೂಪಯೋರ್ನ ಸಾಮ್ಯಂ ಅತೋ ಭೀಮಾರ್ಜುನೌ ಧರ್ಮಾದತ್ಯುತ್ತಮ-ಬಲಾವಪಿ 'ದೇವಮಾಯಾಂ ಸಮಾಶ್ರಿತ್ಯ ಧರ್ಮೇಣ ಸ್ಥಾಪಿತೌ ಕ್ಷಣಾತ್ । ಮುಹೂರ್ತಮಾತ್ರಂ ಸಾ ಮಾಯಾ ತಯೋರಾಚ್ಛಾದಾನೇ ಕ್ಷಮಾ' ಇತಿ ಬಕಪ್ರಶ್ನೇ ಭೀಮಸ್ಯ ಸ್ವಾವರಧರ್ಮಮಾಯಾಬದ್ಧತ್ವೋಕ್ತೇಃ । ನ ಚ ವಾಚ್ಯಂ ನಾಸೌ ಮಾಯಾಬದ್ಧಃ । ಕಿಂತು ಮಾಯಾಬಲ ಇವ ದರ್ಶಯಾಮಾಸೇತಿ । ತಯೋರಾಚ್ಛಾದನಕ್ಷಮೇತಿ ಸ್ವಪ್ನೋಕ್ತೇಃ । ಅಪಿ ಚ ನಹುಷಬಲಬದ್ಧತ್ವಂ ಚ ತಸ್ಯೋಕ್ತಂ ಅನುಪಪನ್ನಮ್ । ಅತ್ರೋಚ್ಯತೇ । ಭೀಮೇ ಹಿ ದ್ವಿವಿಧಂ ಬಲಮ್ । ಮಾನುಷಶರೀರವತ್ತ್ವೇನ ಮಾನುಷಭಾವಪ್ರಾಪ್ತ್ಯಾ ತಚ್ಛರೀರೋದ್ಭವಂ ಮಾನುಷಬಲಮ್ । ಸ್ವರೂಪಕೃತಂ ದೈವಂ ಬಲಂ ಚೇತಿ । ಉಕ್ತಂ ಚ ತತ್ರೈವ । ದೇವಾ ಅಪಿ ಮನುಷ್ಯೇಷು ಜಾತಾಃ ಸುಬಲಿನೋಽಪಿ ಹಿ । ಮಾನುಷೇಣೈವ ಭಾವೇನ ಯುಕ್ತಾಃ ಸ್ಯುಃ ಕೇಶವಾದೃತೇ । ಅತೋ ಭೀಮಾರ್ಜುನೌ ಧರ್ಮೇಣ ಸ್ಥಾಪಿತಾವಿತಿ । ತನ್ಮಾನುಷೇ ಬಲೇ ತಸ್ಯ ವರಾದ್ವಾರಿತವತ್ ಸ್ಥಿತೇ ದೈವಬಲಂ ಸುಶಕ್ತೋಽಪಿ ನಾವಿಶ್ಚಕ್ರೇ ಸ ಮಾರುತಿರಿತಿ ಚ । ಯಥಾ ಚ ಧರ್ಮಮಾಯಾದಿನಾ ಮಾನುಷಬಲಸ್ಯೈವ ಕಿಂಚಿತ್ ಪ್ರತಿಬಂಧೋ ನ ದೇವಬಲಸ್ಯ ಅಯಮಪಿ ಕಿಂಚಿತ್ಕಾಲ ಏವ । ಅತ ಏವ ಮುಹೂರ್ತಮಾತ್ರಮಿತ್ಯುಕ್ತಮ್ । ತತಃ ಪ್ರಬುದ್ಧಯೋರ್ನೈವ ಶಕ್ತಿಶತಾಂಶಭಾಕ್ ಇತಿ ಚ । ನಹುಷಬದ್ಧತ್ವಂ ತು ಮಾನುಷಬಲಮಾದಾಯ ಬುದ್ಧಿಪೂರ್ವಂ ಬದ್ಧವದವಸ್ಥಾನಮ್ । ಅತ ಏವ ತನ್ಮಾನುಷೇ ಬಲೇ ತಸ್ಯ ವರಾದ್ವಾರಿತವತ್ ಸ್ಥಿತ ಇತಿ ಚೋಕ್ತಮ್ । ದೈವಂ ಬಲಂ ಸುಶಕ್ತೋಽಪಿ ನಾವಿಶ್ಚಕ್ರ ಇತಿ ಚ । ನರಸ್ವಭಾವೇ ಸರ್ವದಾ ವೃತ್ತಿಃ ದೈವಬಲಾನಾವಿಷ್ಕುರ್ವಣಾದಿರೂಪಂ ಚ ಮೂಲರೂಪಾವತಾರರೂಪಯೋರ್ವೈಷಮ್ಯಮಂಗೀಕ್ರಿಯತ ಏವ । ಅತ್ಯಲ್ಪತ್ವಾತ್ । ಅತ ಏವ ಬ್ರಹ್ಮಣಸ್ತ್ವಂಶರೂಪೇಷು ಭಾರತ್ಯಾ ಜ್ಞಾನವರ್ಜನಮಿತಿ । ಭೀಮಾದ್ಯವತಾರೇಷು ಕ್ವಚಿತ್ಕ್ವಚಿದ್ಭಗವದ್ಗುಣಾದಿಗತವಿಶೇಷೇಷು ಆಪರೋಕ್ಷೋಜ್ಜ್ವಾದಿವೈಷಮ್ಯಾಂಗೀಕಾರವಿರೋಧೋಽಪಿ ನಿರಸ್ತಃ । ಅತ್ಯಲ್ಪತ್ವಾದಿತಿ । ಸರ್ವಮನವದ್ಯಮ್ । ಬ್ರಹ್ಮಣೋ ಭಾರತ್ಯಾಶ್ಚ ಅಂಶರೂಪೇಷು ಭೀಮಕಾಲ್ಯಾದಿರೂಪೇಷು ।

– (ತಾ.)

ವಿ: ೧) ಇಲ್ಲಿ ಕ್ರಮವಾಗಿ ವ್ಯಕ್ತಿಯಾಗುವವು ಎಂದರೆ ವಾಯುದೇವರಿಗೆ ಹಿಂದೆ ಹೇಳಿದಂತೆ ಇಚ್ಛಾವ್ಯಕ್ತಿಯೆಂದು, ಇತರರಿಗೆ ಯಥಾಯೋಗ್ಯ ವ್ಯಕ್ತಿಎಂದು ಅರ್ಥ.

೨) ದೇವಮಾಯೆ ಎಂಬುದಕ್ಕೆ ಭೀಮಸೇನನಿಗೆ ಶ್ರೀಹರಿಯ ಇಚ್ಛೆಯೆಂದೂ, ಇತರರಿಗೆ ಶ್ರೀಹರಿಯ ಮಾಯೆಯೆಂದೂ ಅರ್ಥಮಾಡಿಕೊಳ್ಳಬೇಕು. ಇದರಿಂದ ಭೀಮಸೇನ ಶ್ರೀಹರಿಯ ಇಚ್ಛೆಯನ್ನು ತಿಳಿದು ಮಲಗಿದಂತೆ ನಟಿಸಿದ. ಇತರರು ದೇವಮಾಯೆಗೆ ಒಳಗಾಗಿ ನಿಜಕ್ಕೂ ಗಾಢ ನಿದ್ರೆಗೆ ಒಳಗಾದರು ಎಂದರ್ಥ.

೩) ಭೀಮ ಮತ್ತು ಅರ್ಜುನ ಇಬ್ಬರೂ ಯಮದೇವರಿಗಿಂತ ಸ್ವರೂಪದಲ್ಲಿ ತುಂಬಾ ಉತ್ತಮರಾದ್ದರಿಂದ ವಿಶೇಷವಾಗಿ ಅವರ ಬಗ್ಗೆ ಇಲ್ಲಿ ಸ್ಪಷ್ಟೀಕರಣ ನೀಡಿರುವರು. ಅಶ್ವಿನೀದೇವತೆ–ಗಳ ಅವತಾರರಾದ ನಕುಲ, ಸಹದೇವರು ಯಮನಿಗಿಂತ ಕಡಿಮೆಯವರಾದ್ದರಿಂದ ಅವರು ಯಮನ ಶಕ್ತಿಯಿಂದಲೇ ಗಾಢನಿದ್ರೆಗೊಳಗಾದರು ಎಂದು ತಿಳಿಯಬೇಕು.

ಮುಹೂರ್ತಮೇವ ಸಾ ಮಾಯಾ ತಯೋರಾಚ್ಛಾದನೇ ಕ್ಷಮಾ ।
ತತಃ ಪ್ರಬುದ್ಧಯೋರ್ಧರ್ಮ್ಯೇ ನೈವ ಶಕ್ತಿಶತಾಂಶಭಾಕ್ ॥ ೪೩೮ ॥

ಅ: ಆ ದೇವಮಾಯೆ ಭೀಮಾರ್ಜುನರನ್ನು ಒಂದು ಮುಹೂರ್ತ ಕಾಲ ಮಾತ್ರ ಆವರಿಸುವಷ್ಟು ಸಾಮರ್ಥ್ಯ ಉಳ್ಳದ್ದು. ಬಳಿಕ ಅವರು ಎಚ್ಚೆತ್ತಮೇಲೆ ಅವರ ಶಕ್ತಿಯ ನೂರನೇ ಒಂದಂಶಕ್ಕೂ ಯಮ ಸಾಟಿಯಾಗಲಾರ.

ವಿ: ೧) ಇಲ್ಲಿಯೂ ಸಹ ಭೀಮನಿಗೆ ದೇವಮಾಯೆ, ಎಂದರೆ ಹರಿಸಂಕಲ್ಪ ಎಂದೇ ಅರ್ಥ. ಒಂದು ಮುಹೂರ್ತ ಕಾಲ ಮಾತ್ರ ಹಾಗೆ ಮಲಗಿದಂತೆ ನಟಿಸಬೇಕು ಎಂಬುದು ಶ್ರೀಹರಿಯ ಸಂಕಲ್ಪ ಎಂದು ಭೀಮನಿಗೆ ತಿಳಿದಿತ್ತು ಎಂದರ್ಥ.

೨) ಅರ್ಜುನನಿಗೆ ಮಾತ್ರ ಯಮ ಸೃಷ್ಟಿಸಿದ ದೇವಮಾಯೆ ಒಂದು ಮುಹೂರ್ತ ಕಾಲ ಮಾತ್ರ ಅವನನ್ನು ಹಿಡಿದಿಡಬಲ್ಲದು ಎಂದರ್ಥ. ಬಳಿಕ ಭೀಮನಿಗಿರಲಿ ಅದು ಅರ್ಜುನನಿಗೂ ಯಾವ ಲೆಕ್ಕಕ್ಕೂ ಬಾರದಷ್ಟು ಅಲ್ಪ ಎಂದರ್ಥ.

ಉಕ್ತಂ ಪದ್ಮಪುರಾಣೇ ಚ ತದೇತತ್ ಸರ್ವಮಂಜಸಾ ।
ತಸ್ಮಾನ್ನಾಶಕ್ತಿರನಯೋಃ ಸಂಭಾವ್ಯಾ ಭೀಮಪಾರ್ಥಯೋಃ ॥ ೪೩೯ ॥

ಅ: ಇದೆಲ್ಲವೂ ಪದ್ಮಪುರಾಣದಲ್ಲಿ ಚೆನ್ನಾಗಿ ಹೇಳಲ್ಪಟ್ಟಿದೆ. ಆದ್ದರಿಂದ ಆ ಭೀಮ, ಪಾರ್ಥರಿಬ್ಬರಿಗೂ ಅಶಕ್ತಿಯನ್ನು ಸರ್ವಥಾ ಶಂಕಿಸಬಾರದು.

ಧರ್ಮರಾಜನಿಂದ ಯಕ್ಷಪ್ರಶ್ನೆಗೆ ಉತ್ತರ

ಧರ್ಮಾತ್ಮಜೋ೨ಥಾಜಗಾಮೋದಕಾಂತಂ
ದೃಷ್ಟ್ವಾ ಭ್ರಾತೄಂಸ್ತತ್ರ ದುಃಖಾಭಿತಪ್ತಃ ।
ಇಚ್ಛನ್ ಪಾತುಂ ವಾರಿ ಸಂವಾರಿತಶ್ಚ
ಪಿತ್ರಾ ಬಕಾಕಾರಮಿತೇನ ನಾಪಾತ್ ॥ ೪೪೦ ॥

ಅ: ಬಳಿಕ ಧರ್ಮರಾಜ ನೀರಿನ ಸಮೀಪಕ್ಕೆ ಬಂದ. ಅಲ್ಲಿ ತನ್ನ ತಮ್ಮಂದಿರನ್ನು ಕಂಡು ದುಃಖದಿಂದ ತಪಿಸಿದ. ನೀರು ಕುಡಿಯಲು ಬಯಸಿದ ಅವನನ್ನು ಬಕನ ಆಕಾರವನ್ನು ಹೊಂದಿದ್ದ ಯಮ ತಡೆದದ್ದರಿಂದ ಕುಡಿಯಲಿಲ್ಲ.

ಎ: ಧರ್ಮರಾಜ ಆ ನಾಲ್ವರು ಮಲಗಿದ್ದುದನ್ನು ಕಂಡು ಅದರ ಬಗ್ಗೆ ತುಂಬಾ ಚಿಂತಾಕ್ರಾಂತ–ನಾಗಿ ನೀರು ಕುಡಿದು ಅನಂತರ ವಿಚಾರ ಮಾಡಲೆಂದು ಸರೋವರವನ್ನು ಸಮೀಪಿಸಿದಾಗ ಬಕರೂಪದಲ್ಲಿ ಇದ್ದ ಯಮ ಅವರಿಗೆಲ್ಲಾ ತಿಳಿಸಿದಂತೆ ಪ್ರಶ್ನೆಗಳಿಗೆ ಉತ್ತರ ನೀಡಿಯೇ ನೀರು ಕುಡಿಯಬೇಕು. ಇಲ್ಲವಾದಲ್ಲಿ ಅವರ ಪರಿಸ್ಥಿತಿಯೇ ಒದಗುವುದು ಎಂದು ತಿಳಿಸಿದ; ಆದ್ದರಿಂದ ಧರ್ಮರಾಜ ನೀರು ಕುಡಿಯಲಿಲ್ಲ.

ಅರ್ಥೇ ಭ್ರಾತೄಣಾಮೈಚ್ಛದಸೌ ತದೀಯ-
ಪ್ರಶ್ನಪ್ರತಿವ್ಯಾಹರಣಂ ದಯಾಲುಃ ।
ತತೋ ಧರ್ಮೋ ಯಕ್ಷತನುಃ ಸ ಭೂತ್ವಾ
ಪ್ರಶ್ನಾಂಶ್ಚಕ್ರೇ ವ್ಯಾಕರೋತ್ ತಾನ್ ಸ ಪಾರ್ಥಃ ॥ ೪೪೧ ॥

---

೪೪೦. ಮಾ ತಾತ ಸಾಹಸಂ ಕಾರ್ಷೀರ್ಮಮ ಪೂರ್ವಪರಿಗ್ರಹಃ ।
ಪ್ರಶ್ನಾನುಕ್ತ್ವಾ ತು ಕೌಂತೇಯ ತತಃ ಪಿಬ ಹರಸ್ವ ಚ ॥ – ಭಾರತ (ವನ. ೩೧೩/೩೦)

೪೪೧. 'ಅರ್ಥೇ ಭ್ರಾತೄಣಾಮೈಚ್ಛದಸೌ ತದೀಯಪ್ರಶ್ನಪ್ರತಿವ್ಯಾಹರಣಂ ದಯಾಲು'ರಿತ್ಯತ್ರ ಕೇ ತತ್ಪಶ್ನಾ ಇತ್ಯತಃ ಅಲ್ಪತ್ವಾದುಚ್ಯತೇ । ನಹುಷಪ್ರಶ್ನಾನಾಂ ಬಹುತ್ವಾತ್ ಅಲ್ಪೋಕ್ತಿಃ । ತಥಾಹಿ 'ಕೋ ಮೋದತೇ ಕಿಮಾಶ್ಚರ್ಯಂ ಕಃ ಪಂಥಾ ಕಾ ಚ ವಾರ್ತಿಕಾ ಬ್ರೂಹಿ ಮೇ ಚತುರಃ ಪ್ರಶ್ನಾನ್ ಮೃತಾ ಜೀವಂತಿ ಬಾಂಧವಾ' ಇತ್ಯೇವಂ ಪ್ರಶ್ನಚತುಷ್ಟಯೇ ಸತಿ ಯುಧಿಷ್ಠಿರೇಣೋಚ್ಯತೇ 'ಪಂಚಮೇ೨ಹನಿ ಷಷ್ಠೇ ವಾ ಶಾಕಂ ಪಚತಿ ಸ್ವೇ ಗೃಹೇ । ಅನೃಣೇ ಚ ಪ್ರವಾಸೇ ಚ ಸ ವಾರಿಚರ ಮೋದತೇ' ಇತ್ಯಾದ್ಯಪ್ರಶ್ನೋತ್ತರಂ 'ಅಹನ್ಯಹನಿ ಭೂತಾನಿ ಗಚ್ಛಂತಿ ಯಮಮಂದಿರಮ್ । ಶೇಷಾ ಜೀವಿತುಮಿಚ್ಛಂತಿ ಕಿಮಾಶ್ಚರ್ಯಮತಃ ಪರಮ್' ಇತಿ ದ್ವಿತೀಯಸ್ಯೋತ್ತರಂ 'ತರ್ಕೋ೨ ಪ್ರತಿಷ್ಠಾ ಶ್ರುತಯೋ೨ಪಿ ಭಿನ್ನಾ ನೈಕೋ ಮುನಿರ್ಯಸ್ಯ ವಚಃ ಪ್ರಮಾಣಂ । ಧರ್ಮಸ್ಯ ತತ್ತ್ವಂ ನಿಹಿತಂ ಗುಹಾಯಾಂ ಮಹಾಜನೋ ಯೇನ ಗತಃ ಸ ಪಂಥಾ' ಇತಿ ತೃತೀಯಸ್ಯೋತ್ತರಂ, 'ಪೃಥ್ವೀ ವಿಭಾಂಡಂ ಗಗನಂ ಪಿಧಾನಂ ಸೂರ್ಯಾಗ್ನಿತಾರಾತ್ರಿನಿರಿಂಧನೇನ । ಮಾಸಾಖ್ಯದರ್ವೀ ಪರಿಘಟ್ಟತೇನ ಭೂತಾನಿ ಕಾಲಾತ್ಪಚತೀತಿ ವಾರ್ತಾ' ಇತಿ ಚತುರ್ಥಸ್ಯೋತ್ತರಮಿತಿ ॥ – (ತಿ.)

ಅ: ಕರುಣಾಳುವಾದ ಧರ್ಮರಾಜ ತಮ್ಮಂದಿರಿಗಾಗಿ ಆ ಬಕನ ಪ್ರಶ್ನೆಗಳಿಗೆ ಉತ್ತರ ನೀಡಲು ಇಚ್ಛಿಸಿದ. ಬಳಿಕ ಯಮ ಯಕ್ಷರೂಪವನ್ನು ತಳೆದು ಪ್ರಶ್ನೆಗಳನ್ನು ಕೇಳತೊಡಗಿದ. ಧರ್ಮರಾಜ ಅವುಗಳಿಗೆ ಉತ್ತರಿಸಿದ.

ವಿ: ೧) ಬಕ ರೂಪದಿಂದ ಆ ವರೆಗೂ ಮಾತನಾಡುತ್ತಿದ ಯಮ, ಆಗ ಯಕ್ಷರೂಪವನ್ನು ತಳೆದು ಪ್ರಶ್ನೆ ಕೇಳತೊಡಗಿದ.

೨) ಧರ್ಮರಾಜ ಇಲ್ಲಿ ಪ್ರಶ್ನೆಗೆ ಉತ್ತರ ನೀಡಹೊರಟಿದ್ದು ಉಪಜೀವನಕ್ಕಾಗಿ ಅಲ್ಲದೇ ತನ್ನ ಸೋದರರ ಮೇಲಿನ ಪ್ರೀತಿಯಿಂದಾಗಿ ಎಂಬುದು ವಿಶೇಷ.

೩) ಯಮ ಕೇಳಿದ ಅನೇಕ ಪ್ರಶ್ನೆಗಳಿಗೆ ಧರ್ಮರಾಜ ತಟ್ಟನೆ ಸಮರ್ಪಕ ಉತ್ತರಗಳನ್ನು ನೀಡಿದ್ದು ತುಂಬಾ ವಿಶೇಷ. ಇದು ಅತನ ಅಪಾರ ಧರ್ಮಜ್ಞಾನಕ್ಕೆ ಅಪೂರ್ವ ನಿದರ್ಶನ.

೪) ಅವು ನಿತ್ಯಜೀವನಕ್ಕೆ, ಆಧ್ಯಾತ್ಮಿಕಸಾಧನೆಗೆ ತುಂಬಾ ಉಪಯುಕ್ತವಾದ ಮೌಲಿಕ ಪ್ರಶ್ನೋತ್ತರಗಳು.

ಯಕ್ಷನೀಡಿದ ವರ

ತತಸ್ತುಷ್ಟೋ ವರಮಸ್ಮೈ ದದೌ ಸ
ಏಕೋತ್ಥಾನಂ ಭ್ರಾತೃಮಧ್ಯೇ ಸ ವವ್ರೇ ।
ಯದ್ಯೇಕಃ ಸ್ಯಾನ್ನಕುಲೋಽಸ್ತ್ವಿತ್ಯಥಾಹ
ತುಷ್ಟೋ ಧರ್ಮಃ ಕಥಮೇತತ್ಕೃತಂ ತೇ ॥ ೪೪೨ ॥

ಅ: ಆಗ ಯಮ ಸಂತೋಷಪಟ್ಟು ಅವನಿಗೆ ಅವನ ತಮ್ಮಂದಿರ ಮಧ್ಯದಲ್ಲಿ ಒಬ್ಬನನ್ನು ಮಾತ್ರ ಏಳಿಸುವುದಾಗಿ ವರ ನೀಡಿದ. ಧರ್ಮರಾಜ 'ಒಬ್ಬನೇ ಏಳುವುದಾದಲ್ಲಿ ನಕುಲನು ಏಳಲಿ' ಎಂದು ಕೇಳಿದ. ಸಂತೋಷಪಟ್ಟ ಯಮ ಕೇಳಿದ 'ನೀನು ಮಾಡುತ್ತಿರುವುದೇನು?'

---

೪೪೨. ಏಕೋತ್ಥಾನಂ ಭ್ರಾತೃಮಧ್ಯೇ ಇತ್ಯತ್ರ ಭ್ರಾತೃಮಧ್ಯೇ ಏಕೋತ್ಥಾನಂ ವರಂ ದದೌ। ಯದ್ಯೇಕಃ ಸ್ಯಾತ್ ತರ್ಹಿ ನಕುಲೋಽಸ್ತ್ವಿತಿ ವವ್ರೇ= ವರಂ ವವ್ರ ಇತಿ ಯೋಜನಾ ॥ – (ವಾ.)

೪೪೨. ಶ್ಯಾಮೋ ಯ ಏಷ ರಕ್ತಾಕ್ಷೋ ಬೃಹಚ್ಛಾಲ ಇವೋತ್ಥಿತಃ ।
ವ್ಯೂಢೋರಸ್ಕೋ ಮಹಾಬಾಹುರ್ನಕುಲೋ ಯಕ್ಷ ಜೀವತು ॥ – ಭಾರತ (ವನ. ೩೧೩/೧೨೩)

ವಿ: ಯಮ ಒಬ್ಬನನ್ನು ಮಾತ್ರ ಎಬ್ಬಿಸುವ ವರ ನೀಡಿದಾಗ ಧರ್ಮರಾಜ ನಕುಲನನ್ನು ಎಬ್ಬಿಸಲು ಕೇಳಿದ್ದು ಯಮನಿಗೂ ಆಚ್ಚರಿ ಹುಟ್ಟಿಸುವ ವಿಷಯವಾಯಿತು.

ಧರ್ಮರಾಜನ ಧರ್ಮಪ್ರಜ್ಞೆ

ಅತಿಪ್ರೀತಿರ್ಭೀಮಸೇನೇ ತವಾಸ್ತಿ ಬಲೀ
ಚಾಸೌ ರಾಜ್ಯಹೇತುಸ್ತವ ಸ್ಯಾತ್ ।
ಇತ್ಯುಕ್ತ ಊಚೇ ಮಾದ್ರಿಪುತ್ರಂ ವಿಹಾಯ
ಕುಂತೀಪುತ್ರೋ ನ ಮಯೋತ್ಥಾಪನೀಯಃ ॥ ೪೪೩ ॥

ಅ: 'ನಿನಗೆ ಭೀಮಸೇನನ ಮೇಲೆ ತುಂಬಾ ಪ್ರೀತಿಯುಂಟು, ಅವನು ಬಲಶಾಲಿಯಾಗಿದ್ದು ನಿನ್ನ ರಾಜ್ಯಪ್ರಾಪ್ತಿಗೆ ಕಾರಣನೂ ಆದವನು'. ಯಮ ಹೀಗೆನ್ನಲು ಧರ್ಮರಾಜ ನುಡಿದ 'ಮಾದ್ರಿಯ ಮಗನನ್ನು ಬಿಟ್ಟು ಕುಂತಿಯ ಮಗನನ್ನು ಎಬ್ಬಿಸುವುದು ಯೋಗ್ಯವಲ್ಲ'.

ವಿ: ೧) ಭೀಮನ ಮೇಲೆ ಧರ್ಮರಾಜನದು ವಿಶೇಷ ಪ್ರೀತಿ, ಮೇಲಾಗಿ ಮುಂದೆ ಕೌರವರನ್ನು ನಾಶಗೊಳಿಸಿ ರಾಜ್ಯ ಸಂಪಾದಿಸಿಕೊಡುವವನೂ ಅವನೇ, ಅಂತಹ ಭೀಮನನ್ನಾಗಲೀ ಅಥವಾ ಶಸ್ತ್ರಾಸ್ತ್ರಕೋವಿದನಾದ ಅರ್ಜುನನ್ನಾಗಲೀ ಬಯಸದೇ ಅವರಿಬ್ಬರ ಮುಂದೆ ತುಂಬ ದುರ್ಬಲ–ನಾದ ನಕುಲನನ್ನು ಬಯಸಿದ್ದಕ್ಕೆ ಧರ್ಮರಾಜ ನೀಡಿದ ಕಾರಣ ತುಂಬಾ ಅಪೂರ್ವವಾದುದು.

೨) ಪಾಂಡುರಾಜನ ಇಬ್ಬರು ಹೆಂಡಂದಿರಲ್ಲಿ ಕುಂತಿಯ ಮಗನಾಗಿ ತಾನು ಬದುಕಿರುವಾಗ ಭೀಮ ಅಥವಾ ಅರ್ಜುನರನ್ನು ಎಬ್ಬಿಸಿದಲ್ಲಿ ಅವರೂ ಕುಂತಿಯ ಪುತ್ರರಾಗಿರುವುದರಿಂದ ಮತ್ತೊಬ್ಬ ತಾಯಿಯಾದ ಮಾದ್ರಿಯ ಜೀವಕ್ಕೆ ತೃಪ್ತಿ ದೊರೆಯದು. ಅವಳ ಮನಸ್ಸಿಗೂ ನೆಮ್ಮದಿ ದೊರೆಯಬೇಕಿದ್ದಲ್ಲಿ ಅವಳ ಮಕ್ಕಳಲ್ಲೊಬ್ಬನಾದ ನಕುಲನನ್ನು ಆರಿಸಿಕೊಳ್ಳುವುದೇ ಉತ್ತಮ.

---

೪೪೩. ಪ್ರಿಯಸ್ತೇ ಭೀಮಸೇನೋऽಯಮರ್ಜುನೋ ವಃ ಪರಾಯಣಮ್ ।
ಯಸ್ಯ ನಾಗಸಹಸ್ರೇಣ ದಶಸಂಖ್ಯೇನ ವೈ ಬಲಮ್ ।
ತುಲ್ಯಂ ತಂ ಭೀಮಮುತ್ಸೃಜ್ಯ ನಕುಲಂ ಜೀವಮಿಚ್ಛಸಿ ॥ – ಭಾರತ (ವನ. ೩೧೩/೧೨೫)

ಕುಂತೀ ಚೈವ ತು ಮಾದ್ರೀ ಚ ದ್ವೇ ಭಾರ್ಯೇ ತು ಪಿತುರ್ಮಮ ।
ಉಭೇ ಸಪುತ್ರೇ ಸ್ಯಾತಾಂ ವೈ ಇತಿ ಮೇ ಧೀಯತೇ ಮತಿಃ ॥
ಯಥಾ ಕುಂತೀ ತಥಾ ಮಾದ್ರೀ ವಿಶೇಷೋ ನಾಸ್ತಿ ಮೇ ತಯೋಃ ।
ಮಾತೃಭ್ಯಾಂ ಸಮಮಿಚ್ಛಾಮಿ ನಕುಲೋ ಯಕ್ಷ ಜೀವತು ॥ – ಭಾರತ (ವನ. ೩೧೩/೧೩೧, ೧೩೨)

೩) ಧರ್ಮರಾಜನಿಗೆ ರಾಜ್ಯಪ್ರಾಪ್ತಿ ಮೊದಲಾದ ಬೇರೆಲ್ಲವುಗಳಿಗಿಂತಲೂ ಧರ್ಮಪಾಲನೆ ಮುಖ್ಯ ಕರ್ತವ್ಯವಾಗಿತ್ತು ಎಂಬುದು ಇಲ್ಲಿಯ ವಿಶೇಷ. ಅವನು ಉತ್ತರಿಸಿದ್ದೂ ಸಹ ಹಾಗೆಯೇ. ಇಂತಹ ಧರ್ಮಪ್ರಜ್ಞೆ ಅವನ ಸರ್ವತೋಮುಖವಾದ ಉನ್ನತಿಗೆ ಕಾರಣವಾಯಿತು.

೪) ಧೃತರಾಷ್ಟ್ರನದು ಇದಕ್ಕೆ ವ್ಯತಿರಿಕ್ತವಾದ ಚಿಂತನೆ, ತನ್ನ ಸ್ವಂತ ಮಕ್ಕಳ ರಾಜ್ಯಲಾಭಕ್ಕಾಗಿ ತನ್ನ ತಮ್ಮನ ಮಕ್ಕಳಾದ ಪಾಂಡವರನ್ನು ಮಲತಾಯಿ ಧೋರಣೆಯಿಂದಲೇ ಕಂಡಿದ್ದು ಅವನ ಪ್ರವೃತ್ತಿ ಅದರಿಂದಾಗಿ ಅವನು ರಾಜ್ಯಕೋಶಗಳೊಂದಿಗೆ ಅವರನ್ನೂ ಕಳೆದುಕೊಳ್ಳುವಂತಾಯಿತು.

೫) ಧರ್ಮರಾಜ ಧೃತರಾಷ್ಟ್ರರ ಪ್ರವೃತ್ತಿಯಲ್ಲಿನ ಅಗಾಧ ವ್ಯತ್ಯಾಸವನ್ನು ಇಲ್ಲಿ ಗುರುತಿಸ–ಬಹುದು. ದೊಡ್ಡಪ್ಪನಾಗಿ ಧೃತರಾಷ್ಟ್ರ ಸಾಧಿಸದ್ದನ್ನು ಧರ್ಮರಾಜ ಸಾಧಿಸಿದ್ದು ಇಲ್ಲಿಯ ವಿಶೇಷ.

ಯಮನ ಸಂಪ್ರೀತಿ – ವರಪ್ರದಾನ

ಸ ಏವಮುಕ್ತೋ ನಿತರಾಂ ಪ್ರೀಯಮಾಣ
ಉತ್ಥಾಪಯಾಮಾಸ ಚ ತಾನ್ ಸಮಸ್ತಾನ್ ।
ಯಥೇಷ್ಟರೂಪಪ್ರಾಪ್ತಿಮೇಷಾಂ ಪುನಶ್ಚ
ಸ್ವಕಾಮತೋ ನಿಜರೂಪಾಪ್ತಿಮಾದಾತ್ ॥ ೪೪ ॥

ಅ: ಅವನು ಹೀಗೆನ್ನಲು ಅತ್ಯಂತ ಪ್ರೀತನಾಗಿದ್ದ ಯಮ ಮಲಗಿದ್ದ ಅವರನ್ನೆಲ್ಲ ಎಬ್ಬಿಸಿದ. ಅವರಿಗೆ ಅವರು ಬಯಸಿದ ರೂಪಗಳು ದೊರೆಯುವಂತೆಯೂ ಮತ್ತೆ ಅವರ ಅಪೇಕ್ಷೆಯಂತೆ ನಿಜರೂಪ ಮರಳುವಂತೆಯೂ ವರ ನೀಡಿದ.

ವಿ: ೧) ಧರ್ಮರಾಜನ ಧರ್ಮಪ್ರವೃತ್ತಿಗೆ ಯಮ ಅತ್ಯಂತ ಸಂತೋಷಪಟ್ಟು ಆ ನಾಲ್ವರನ್ನೂ ಎಬ್ಬಿಸಿದ. ಧರ್ಮ ಅವನನ್ನು ಪಾಲಿಸಿತು.

೨) ಬಳಿಕ ಧರ್ಮರಾಜನ ಪ್ರಾರ್ಥನೆಯಂತೆ ಯಮ ತಾನೇ ಜಿಂಕೆಯ ರೂಪದಿಂದ ಅರಣಿಯನ್ನು ಅಪಹರಿಸಿದವನು, ಬಕರೂಪದಿಂದ ನೀರು ಕುಡಿಯದಂತೆ ತಡೆದವನು, ಯಕ್ಷ–ರೂಪದಿಂದ ಪ್ರಶ್ನೆ ಕೇಳಿದವನು ಎಂಬುದನ್ನು ತಿಳಿಸಿದ.

---

೪೪. ಯಥೇಷ್ಟರೂಪಪ್ರಾಪ್ತಿಮಿತ್ಯತ್ರ ವಿರಾಟಪುರ್ಯಾಂ ಯತಿಸೂದಷಂಡಾದಿರೂಪಾಣಾಂ ಪ್ರಾಪ್ತತ್ವಾತ್ ಅಂತೇ ನಿಜರೂಪಸ್ಯಾಪಿ ಪ್ರಾಪ್ತತ್ವಾತ್ ದ್ವಿವಿಧಂ ವರಂ ಭಾವಿಕಾರ್ಯಾನುಸಾರೇಣ ದದಾವಿತಿ ಭಾವಃ ॥– (ವಾ.)

೩) ಭೀಮ–ಹನುಮಂತರ ಸಮಾಗಮದಲ್ಲಿ ಅವರಿಬ್ಬರು ಪರಸ್ಪರ ತಾವು ವಾಯುವಿನ ಅವತಾರವೆಂದು ತಿಳಿದೇ ಲೋಕಮೋಹನಕ್ಕೆಂದು ಬೇರೆಯೆಂಬಂತೆ ವರ್ತಿಸಿದರು. ಇಲ್ಲಿ ಯಮ ಮತ್ತು ಯುಧಿಷ್ಠಿರ ಇಬ್ಬರ ಸಮಾಗಮದಲ್ಲಿ ಯಮನಿಗೆ ಯುಧಿಷ್ಠಿರನ ಬಗ್ಗೆ ತಿಳಿದಿದ್ದರೂ ಯುಧಿಷ್ಠಿರನಿಗೆ ಯಮನ ಬಗ್ಗೆ ಅವನು ತಿಳಿಸುವವರೆಗೆ ತಿಳಿಯಲಾಗಲಿಲ್ಲ ಎಂಬುದು ವಿಶೇಷ. ವಾಯುದೇವರ ಅವತಾರಗಳಿಗೂ ಇತರ ದೇವತೆಗಳ ಅವತಾರಗಳಿಗೂ ಇರುವ ಈ ಗಮನಾರ್ಹ ವ್ಯತ್ಯಾಸವನ್ನು ತಿಳಿಯಬೇಕು.

೪) ಮುಂದೆ ಅಜ್ಞಾತವಾಸ ಕಾಲದಲ್ಲಿ ಪಾಂಡವರು ಕೌರವರಿಗೆ ತಿಳಿಯದಂತಿರಲು ಅವರು ಬಯಸಿದ ರೂಪವನ್ನು ಹೊಂದಲೆಂದು, ಅದು ಪೂರೈಸಿದ ಮೇಲೆ ಅವರು ತಮ್ಮ ನಿಜರೂಪವನ್ನು ಹಾಗೆ ಬಯಸಿದಾಕ್ಷಣ ಹೊಂದಲೆಂದು ಯಮ ವರ ನೀಡಿದ.

ಯಮ ನೀಡಿದ ವಿಶೇಷ ವರ

ಅಜ್ಞಾತವಾಸೇ ಽಜ್ಞಾತತಾಂ ಸರ್ವದೈವ
ದದೌ ತೇಷಾಂ ಪ್ರೀತ ಏವಾನೃಶಂಸ್ಯಾತ್ ।
ಏವಂ ಕ್ರೀಡನ್ ಪುತ್ರ ಇತ್ಯಾತ್ಮನೈವ
ಯಶೋಧರ್ಮಾವಾತ್ಮನೋ ವರ್ಧಯನ್ ಸಃ ॥ ೪೪೫ ॥

---

೪೪೫. ಆನೃಶಂಸ್ಯಾತ್= ದಯಾಲುತ್ವಾತ್ ಮೂಲರೂಪೇ ಅವತಾರರೂಪೇ ಚ ಯಶೋಧರ್ಮಾಭಿವೃದ್ಧಿಂ ಸೂಚಯಿತುಂ ''ಆತ್ಮನೋ ಯಶೋಧರ್ಮೌ ವರ್ಧಯನ್'' ''ಯುಧಿಷ್ಠಿರಾತ್ಮನಃ ಸ್ವಸ್ಯ ಚ ಯಶೋಧರ್ಮಾಭಿವೃದ್ಧಯೇ'' ಇತಿ ದ್ವಿವಾರಮುಕ್ತಮ್। ಭೀಮಾದೀನ್ ಸ್ವನಿಜಭ್ರಾತೄನ ವಿಹಾಯ ನಕುಲೇ ದಯಾಕರಣಾತ್ ಯುಧಿಷ್ಠಿರಸ್ಯ ಧರ್ಮಕೀರ್ತಿರ್ = ಗುಣದರ್ಶನೇನ ಸುಪ್ರೀತತ್ವಾತ್ ಮೂಲರೂಪಸ್ಯಾಪಿ ಧರ್ಮಕೀರ್ತಿರ್ ಚೇತಿ ಭಾವಃ॥ – (ವಾ.)

೪೪೫. ತಸ್ಯ ತೇ ಽರ್ಥಾಚ್ಚ ಕಾಮಾಚ್ಚ ಆನೃಶಂಸ್ಯ ಪರಂ ಮತಮ್ ।
ತಸ್ಮಾತ್ ತೇ ಭ್ರಾತರಃ ಸರ್ವೇ ಜೀವಂತು ಭರತರ್ಷಭ ॥ – ಭಾರತ (ವನ. ೩೧೩/೧೩೩)

೪೪೫. ಯದ್ಯಪಿ ಸ್ವೇನ ರೂಪೇಣ ಚರಿಷ್ಯಥ ಮಹೀಮಿಮಾಮ್ ।
ನ ವೋ ವಿಜ್ಞಾಸ್ಯತೇ ಕಶ್ಚಿತ್ ತ್ರಿಷು ಲೋಕೇಷು ಭಾರತ ॥
ವರ್ಷಂ ತ್ರಯೋದಶಮಿದಂ ಮತ್ಪ್ರಸಾದಾತ್ ಕುರೂದ್ವಹಾಃ ।
ವಿರಾಟನಗರೇ ಗೂಢಾ ಅವಿಜ್ಞಾತಾಶ್ಚರಿಷ್ಯಥ ॥
ಯದ್ವಃ ಸಂಕಲ್ಪಿತಂ ರೂಪಂ ಮನಸಾ ಯಸ್ಯ ಯಾದೃಶಮ್ ।
ತಾದೃಶಂ ತಾದೃಶಂ ಸರ್ವೇ ಛಂದತೋ ಧಾರಯಿಷ್ಯಥ ॥ – ಭಾರತ (ವನ. ೩೧೪/೧೭-೧೯)

ಅ: ಧರ್ಮರಾಜನ ದಯಾಗುಣಕ್ಕೆ ಮೆಚ್ಚಿ ಯಮ ಅಜ್ಞಾತವಾಸದಲ್ಲಿ ಸ್ವತಃ ಅಜ್ಞಾತರಾಗಿಯೇ ಉಳಿಯುವ ವರವನ್ನೂ ಸಹ ನೀಡಿದ. ಹೀಗೆ ಮಗನೊಂದಿಗೆಂಬಂತೆ ತನ್ನೊಂದಿಗೇ ಕ್ರೀಡಿಸುತ್ತಾ ಯಮ ತನ್ನ ಕೀರ್ತಿ ಮತ್ತು ಪುಣ್ಯಗಳನ್ನು ಹೆಚ್ಚಿಸಿಕೊಂಡ.

ವಿ: ಅಜ್ಞಾತವಾಸ ಕಾಲದಲ್ಲಿ ಪಾಂಡವರು ತಮ್ಮ ನಿಜರೂಪದಲ್ಲೇ ಓಡಾಡಿಕೊಂಡಿದ್ದರೂ ಕೌರವರು ಸರ್ವಥಾ ಗುರುತಿಸದಿರಲಿ ಎಂಬ ವರವನ್ನೂ ಯಮ ನೀಡಿದ. ಧರ್ಮರಾಜನ ದಯಾಗುಣವನ್ನು ಈ ಪ್ರಸಂಗದ ಮೂಲಕ ಬೆಳಕಿಗೆ ತರುವ ಮೂಲಕ ಯಮ ತನ್ನ ಕೀರ್ತಿಯನ್ನು ತಾನೇ ಹೆಚ್ಚಿಸಿಕೊಂಡ.

ಯುಧಿಷ್ಠಿರಾತ್ಮನಃ ಸ್ವಸ್ಯ ಯಶೋಧರ್ಮಾಭಿವೃದ್ಧಯೇ ।
ಕೃತ್ವಾऽರಣ್ಯಪಹಾರಾದಿ ಪುನರ್ದತ್ವಾ ಚ ತತ್ ಸ್ವಯಮ್ ।
ದಾತುಂ ವಿಪ್ರಾಯ ತದ್ಧಸ್ತೇ ಯಯೌ ಧರ್ಮೋ ದಿವಂ ಪುನಃ ॥ ೪೪೬ ॥

ಅ: ಯುಧಿಷ್ಠಿರ ರೂಪದ ತನ್ನ ಕೀರ್ತಿ ಮತ್ತು ಪುಣ್ಯಗಳನ್ನು ಹೆಚ್ಚಿಸಿಕೊಳ್ಳಲೆಂದು ಅರಣಿಯ ಅಪಹಾರ ಮೊದಲಾದವುಗಳನ್ನು ತಾನೇ ಮಾಡಿದ್ದ ಯಮ ಬ್ರಾಹ್ಮಣನಿಗೆ ಕೊಡಲೆಂದು ಅವುಗಳನ್ನು ಪುನಃ ಅವನ ಕೈಗಿತ್ತು ಮರಳಿ ತನ್ನ ಲೋಕಕ್ಕೆ ತೆರಳಿದ.

ವಿ: ೧) ತನ್ನ ಮೂಲರೂಪದೊಂದಿಗೆ ಅವತಾರ ರೂಪಕ್ಕೂ ವಿಶೇಷವಾದ ಕೀರ್ತಿಯನ್ನು ನೀಡಿದ್ದು ಯಮನ ಆ ಕಾರ್ಯದ ಸಾಧನೆಯಾಗಿತ್ತು.

೨) ಅವತಾರರೂಪದ ಸಾಧನೆ ಮೂಲರೂಪಕ್ಕೆ ಸಲ್ಲುವುದೆಂಬ ವಿಷಯಕ್ಕೂ ಇದು ನಿದರ್ಶನ.

೩) ಅವನು ನೀಡಿದ ಅರಣಿ ಮತ್ತು ಭಾಂಡವನ್ನು ಪಾಂಡವರು ಆ ಬ್ರಾಹ್ಮಣನಿಗೆ ನೀಡಿ ಅವನ ಅಪೇಕ್ಷೆಯನ್ನು ಪೂರೈಸಿದರು.

---

೪೪೬. ಅರಣೀಸಹಿತಂ ಚೇದಂ ಬ್ರಾಹ್ಮಣಾಯ ಪ್ರಯಚ್ಛತ ।
ಜಿಜ್ಞಾಸಾರ್ಥಂ ಮಯಾ ಹ್ಯೇತದಾಹೃತಂ ಮೃಗರೂಪಿಣಾ ॥....
ಇತ್ಯುಕ್ತ್ವಾಂತರ್ದಧೇ ಧರ್ಮೋ ಭಗವಾನ್ ಲೋಕಭಾವನಃ ।
ಸಮೇತಾಃ ಪಾಂಡವಾಶ್ಚೈವ ಸುಖಸುತಾ ಮನಸ್ವಿನಃ ॥
ಉಪೇತ್ಯ ಚಾಶ್ರಮಂ ವೀರಾಃ ಸರ್ವ ಏವ ಗತಕ್ಲಮಾಃ ।
ಅರಣೇಯಂ ದದುಸ್ತಸ್ಮೈ ಬ್ರಾಹ್ಮಣಾಯ ತಪಸ್ವಿನೇ ॥ — ಭಾರತ (ವನ. ೩೧೪/೨೦, ೨೬, ೨೭)

ವನವಾಸದ ಪರಿಸಮಾಪ್ತಿ

ತತೋ ರಾಜಾ ಭೀಮಸೇನಾರ್ಜುನೌ ಚ
ಸಾರ್ಧಂ ಯಮಾಭ್ಯಾಮರಣೇಂ ಪ್ರದಾಯ ।
ಮುದಾ ಯುತಾಃ ಕೃಷ್ಣಯಾ ಸಾರ್ಧಮೇವ
ಸಂತುಷ್ಟುವುಃ ಕೃಷ್ಣಮನಂತಮಚ್ಯುತಮ್ ॥ ೪೪೭ ॥

॥ ಇತಿ ಶ್ರೀಮದಾನಂದತೀರ್ಥಭಗವತ್ಪಾದಾಚಾರ್ಯವಿರಚಿತೇ ಮಹಾಭಾರತತಾತ್ಪರ್ಯನಿರ್ಣಯೇ ಅರಣೇಪ್ರಾಪ್ತಿರ್ನಾಮ ದ್ವಾವಿಂಶೋಽಧ್ಯಾಯಃ ॥ ೨೨ ॥

ಅ: ಬಳಿಕ ಧರ್ಮರಾಜ, ಭೀಮಸೇನ, ಅರ್ಜುನರು, ನಕುಲ ಸಹದೇವರೊಂದಿಗೆ ತೆರಳಿ ಬ್ರಾಹ್ಮಣನಿಗೆ ಅರಣಿಯನ್ನು ನೀಡಿದರು. ದ್ರೌಪದಿಯೊಂದಿಗೆ ಆನಂದದಿಂದ ಕೂಡಿದವರಾಗಿ ಅನಂತನೂ, ಅಚ್ಯುತನೂ ಆದ ಕೃಷ್ಣನನ್ನು ಬಹಳವಾಗಿ ಸ್ತುತಿಸಿದರು.

ವಿ: ಪಾಂಡವರು ವನವಾಸವನ್ನು ನಿರ್ವಿಘ್ನವಾಗಿ ಪೂರೈಸಿ ಅದನ್ನು ದುರ್ಯೋಧನ ಪ್ರೀತ್ಯರ್ಥ ಎಂದು ಭಾವಿಸದೇ ಭಗವಂತನಾದ ಶ್ರೀಕೃಷ್ಣನ ಪ್ರೀತ್ಯರ್ಥ ಎಂದು ಅನುಸಂಧಾನ ಮಾಡಿ ಅತ್ಯಂತ ಸಂಭ್ರಮದಿಂದ ಸುಖಿಸಿದರು ಎಂದರ್ಥ.

॥ ಶ್ರೀಮದಾನಂದತೀರ್ಥಭಗವತ್ಪಾದಾಚಾರ್ಯಪ್ರಣೀತ ಮಹಾಭಾರತತಾತ್ಪರ್ಯನಿರ್ಣಯದಲ್ಲಿ 'ಅರಣೇಪ್ರಾಪ್ತಿ' ಎಂಬ ಇಪ್ಪತ್ತೆರಡನೆಯ ಅಧ್ಯಾಯ ಮುಗಿಯಿತು ॥ ೨೨ ॥

॥ ಶ್ರೀಕೃಷ್ಣಾರ್ಪಣಮಸ್ತು ॥

★★★★★

ಅಧ್ಯಾಯ - ೨೩

(ಪಾಂಡವಾಜ್ಞಾತವಾಸಸಮಾಪ್ತಿಃ)

(ವಿರಾಟನಗರದಲ್ಲಿ ಪಾಂಡವರು, ಜೀಮೂತವಧೆ, ಕೀಚಕವಧೆ,
ದಕ್ಷಿಣಗೋಗ್ರಹಣ, ಉತ್ತರಗೋಗ್ರಹಣ, ಅಭಿಮನ್ಯು-ಉತ್ತರಾವಿವಾಹ)

ಅಜ್ಞಾತವಾಸಕ್ಕಾಗಿ ಪಾಂಡವರು

ನಾರಾಯಣಾನುಗ್ರಹತೋ ಯಥಾವ-
ನ್ನಿಸ್ತೀರ್ಯ ತಾನ್ ದ್ವಾದಶಾಬ್ದಾನ್ ವನೇ ತೇ ।
ವಿಸೃಜ್ಯ ಚ ಬ್ರಾಹ್ಮಣಾದೀನ್ ಸಧೌಮ್ಯಾ-
ನಜ್ಞಾತವಾಸಾಯ ತತೋ ಮನೋ ದಧುಃ ॥ ೧ ॥

ಅ: ಪಾಂಡವರು ಶ್ರೀಹರಿಯ ಅನುಗ್ರಹದಿಂದ ಹನ್ನೆರಡು ವರ್ಷಗಳನ್ನು ವನದಲ್ಲಿ ಸರಿಯಾದ ರೀತಿಯಲ್ಲಿ ಕಳೆದು, ಧೌಮ್ಯರನ್ನು, ಬ್ರಾಹ್ಮಣರು ಮೊದಲಾದವರನ್ನು ಬೀಳ್ಕೊಟ್ಟು ಅಜ್ಞಾತವಾಸಕ್ಕೆಂದು ಮನಸ್ಸು ಮಾಡಿದರು.

ವಿ: ತಮ್ಮೊಂದಿಗೆ ವನಕ್ಕೆ ಬಂದಿದ್ದ ಅಪಾರಸಂಖ್ಯೆಯ ಋಷಿಗಳನ್ನು, ಮುನಿಗಳನ್ನು ಮತ್ತು ಪುರೋಹಿತರಾದ ಧೌಮ್ಯರನ್ನು ಬೀಳ್ಕೊಟ್ಟು ಪಾಂಡವರು ಅಜ್ಞಾತವಾಸಕ್ಕೆ ಸಿದ್ಧರಾದರು ಎಂದರ್ಥ.

---

೧. ಆದಿಶಬ್ದೇನ ಸ್ವವಿಹಿತಾಗ್ನಿಹೋತ್ರಾತಿಥಿಪೂಜನಕ್ಷತ್ರಚಿಹ್ನಾದೀನ್। – (ಜ.)

೧. ಉಷಿತಾಶ್ಚ ವನೇ ಕೃಚ್ಛ್ರೇ ವಯಂ ದ್ವಾದಶ ವತ್ಸರಾನ್ ।
ಅಜ್ಞಾತವಾಸಸಮಯಂ ಶೇಷಂ ವರ್ಷಂ ತ್ರಯೋದಶಮ್ ॥
ತದ್ ವಸಾಮೋ ವಯಂ ಧನ್ಯಾಸ್ತದನುಜ್ಞಾತುಮರ್ಹಥ ।
(ಧೌಮ್ಯಾದಿಗಳನ್ನು ಕುರಿತು ಯುಧಿಷ್ಠಿರನ ವಚನ) – ಭಾರತ (ವನ. ೩೧೫/೬)

ಪುರೋಹಿತೋಽಯಮಸ್ಮಾಕಂ ಮಗ್ನಿಹೋತ್ರಾಣಿ ರಕ್ಷತು ।
ಸೂದಪೌರೋಗವೈಃ ಸಾರ್ಧಂ ದ್ರುಪದಸ್ಯ ನಿವೇಶನೇ ॥
ಇಂದ್ರಸೇನಮುಖಾಶ್ಚೇಮೇ ರಥಾನಾದಾಯ ಕೇವಲಾನ್ ।
ಯಾಂತು ದ್ವಾರವತೀಂ ಶೀಘ್ರಮಿತಿ ಮೇ ವರ್ತತೇ ಮತಿಃ ॥
ಇಮಾಶ್ಚ ನಾರ್ಯೋ ದ್ರೌಪದ್ಯಾಃ ಸರ್ವಾಶ್ಚ ಪರಿಚಾರಿಕಾಃ ।
ಪಾಂಚಾಲಾನೇವ ಗಚ್ಛಂತು ಸೂದಪೌರೋಗವೈಃ ಸಹ ॥
ಸರ್ವೈರಪಿ ಚ ವಕ್ತವ್ಯಂ ನ ಪ್ರಾಜ್ಞಾಯಂತ ಪಾಂಡವಃ ॥
ಗತಾ ಹ್ಯಸ್ಮಾನಪಹಾಯ ಸರ್ವೇ ದ್ವೈತವನಾದಿತಿ ॥ – ಭಾರತ (ವಿರಾಟ. ೪/೨೨-೫)

ಪಾಂಡವರು ಸ್ವೀಕರಿಸಿದ ವೇಷಗಳು

ಗತ್ವಾ ವಿರಾಟಸ್ಯ ಪುರೀಂ ನಿಧಾಯ
ಹೇತೀಃ ಶಮ್ಯಾಂ ಛನ್ನರೂಪಾ ಬಭೂವುಃ।
ಯತಿಃ ಸೂದಃ ಷಂಡವೇಷೋಽಶ್ವಸೂತ-
ವೇಷೋ ಗೋಪೋ ಗಂಧಕರ್ತ್ರೀ ಚ ಜಾತಾಃ ॥ ೨ ॥

ಅ: ಪಾಂಡವರು ವಿರಾಟನ ಪಟ್ಟಣಕ್ಕೆ ತೆರಳಿ ಶಮೀವೃಕ್ಷದಲ್ಲಿ ಆಯುಧಗಳನ್ನಿರಿಸಿ ರೂಪವನ್ನು ಬದಲಾಯಿಸಿಕೊಂಡರು; ಅವರು ಕ್ರಮವಾಗಿ ಯತಿ, ಅಡಿಗೆಯವನು, ನಪುಂಸಕ, ಅಶ್ವಪಾಲಕನಾದ ಸೂತ, ಗೋಪಾಲಕ ಹಾಗೂ ಸೈರಂಧ್ರಿಯ ವೇಷದವರಾದರು.

ವಿ: ೧) ಧರ್ಮರಾಜ ಕಂಕ ಎಂಬ ಹೆಸರಿನಲ್ಲಿ ತ್ರಿದಂಡಿ ಸನ್ಯಾಸಿಯ ವೇಷವನ್ನು ತಳೆದ. ವಿರಾಟರಾಜನ ಆಸ್ಥಾನದಲ್ಲಿ ಅವನ ಸಲಹೆಗಾರನಂತಿದ್ದು ಆ ವರ್ಷ ಕಳೆಯುವುದು ಅವನ ಉದ್ದೇಶವಾಗಿತ್ತು.

೨) ಭೀಮಸೇನ 'ಬಲ್ಲವ' ಎಂಬ ಹೆಸರಿನಿಂದ ಅಡಿಗೆಯವನ ವೇಷದಲ್ಲಿ ವಿರಾಟನಗರದಲ್ಲಿ ಕಳೆಯಲು ನಿಶ್ಚಯಿಸಿದ. ಪಂಪಭಾರತ, ಕುಮಾರವ್ಯಾಸಭಾರತಗಳಲ್ಲಿ 'ವಲಲ' ಎಂದಿದೆ.

೩) ಅರ್ಜುನ ನಪುಂಸಕ ವೇಷದಲ್ಲಿ ಬೃಹನ್ನಳೆಯಾಗಿ ಅಂತಃಪುರದ ಸ್ತ್ರೀಯರಿಗೆ ನೃತ್ಯ ಗೀತಾದಿಗಳನ್ನು ಕಲಿಸುವ ಕಾರ್ಯದಲ್ಲಿ ಇರಲು ಬಯಸಿದ.

೪) ನಕುಲನು ದಾಮಗ್ರಂಥಿ ಅಥವಾ ಗ್ರಂಥಿಕ ಎಂಬ ಹೆಸರಿನಿಂದ ವಿರಾಟ ರಾಜನ ಸೂತನಾಗಿಯೂ, ಸಹದೇವನು ತಂತ್ರಿಪಾಲ, ತಂತಿಪಾಲ ಅಥವಾ ಅರಿಷ್ಟನೇಮಿ ಎಂಬ ಹೆಸರಿನಿಂದ ಗೋಪಾಲಕನಾಗಿಯೂ ರಾಜನ ಬಳಿ ಸೇರಬಯಸಿದರು.

೫) ದ್ರೌಪದಿಯು ಮಾಲಿನಿ ಎಂಬ ಹೆಸರಿನಿಂದ ಗಂಧಾದಿಗಳನ್ನು ಸಿದ್ಧಪಡಿಸುವ ಸೈರಂಧ್ರಿಯ ವೇಷದಲ್ಲಿ ವಿರಾಟರಾಜನ ಪತ್ನಿ ಸುದೇಷ್ಣೆಯ ಬಳಿ ಆ ಕಾಲವನ್ನು ಕಳೆಯಲು ತೀರ್ಮಾನಿಸಿದಳು.

---

೨. ವೈಶ್ಯಾಚ್ಛೂದ್ರ್ಯಾಂ ಜಾತೋ ನಟಃ ಸಂಗೀತಾದ್ಯುಪಜೀವಕಃ .... ಕ್ಷತ್ರಿಯಾದ್ಬ್ರಾಹ್ಮಣ್ಯಾಂ ಜಾತಃ ಸೂತಃ ರಥಿಕಃ। ವೈಶ್ಯಾಚ್ಛೂದ್ರ್ಯಾಂ ತಾತಾ ಕರಣೇ ವೈಶ್ಯಾತ್ ಕರಣ್ಯಾಂ ಜಾತೋ ಗೋಪಃ। ವೈಶ್ಯಾಯಾಂ ಕ್ಷತ್ರಿಯಾಜ್ಜಾತೋ ಗೋಪಶ್ರೇಷ್ಠೋ ವಿಶಾಂವರಃ। ... ಸಾ ಸ್ತ್ರೀಣಾಂ ಗಂಧಲೇಪಾಲಕ್ತಕಾಂಕನಾದ್ಯಲಂಕರಣಾದಿಕಕರ್ಮಕರ್ತ್ರೀ।– (ಜ.)

೨. ಸಮೀಪೇ ಚ ಶ್ಮಶಾನಸ್ಯ ಗಹನಸ್ಯ ವಿಶೇಷತಃ।
ಸಮಾಧಾಯಾಥ ಶಮ್ಯಾಂ ಗಚ್ಛಾಮೋ ನಗರಂ ಪ್ರತಿ ॥ – ಭಾರತ (ವಿರಾಟ. ೫/೧೫)

ಜಯೋ ಜಯಂತೋ ವಿಜಯೋ ಜಯತ್ಸೇನೋ ಜಯದ್ಬಲಃ।
ಇತಿ ಗುಹ್ಯಾನಿ ನಾಮಾನಿ ಚಕ್ರೇ ತೇಷಾಂ ಯುಧಿಷ್ಠಿರಃ ॥ – ಭಾರತ (ವಿರಾಟ. ೫/೩೫)

ಮಾಲಿನೀತ್ಯೇವ ಮೇ ನಾಮ ಸ್ವಯಂ ದೇವೀ ಚಕಾರ ಸಾ – ಭಾರತ (ವಿರಾಟ. ೯/೨೧)

೬) ಜಯ, ಜಯಂತ, ವಿಜಯ, ಜಯತ್ಸೇನ ಮತ್ತು ಜಯದ್ಬಲ ಎಂಬ ಗುಪ್ತನಾಮ-ಗಳನ್ನು ಅವರು ಹೊಂದಿದ್ದರು.

೭) ಧಾರ್ಮಿಕನೆನ್ನಿಸಿದ್ದ ಮತ್ಸ್ಯದೇಶದ ವಿರಾಟ ರಾಜನಲ್ಲಿ ಅಜ್ಞಾತವಾಸವನ್ನು ಕಳೆಯುವುದು ಅವರ ನಿಶ್ಚಯವಾಗಿತ್ತು.

೮) ವಿರಾಟನಗರದ ಹೊರವಲಯದ ಶ್ಮಶಾನದ ಬಳಿಯ ಒಂದು ಶಮೀವೃಕ್ಷದ ಮೇಲೆ ತಮ್ಮ ಆಯುಧಗಳನ್ನೆಲ್ಲಾ ಒಂದು ಶವದ ಆಕಾರದಲ್ಲಿ ಬಿಗಿದು ಕಟ್ಟಿ, ನಗರದೊಳಕ್ಕೆ ತೆರಳಿದರು.

೯) ಆ ಐವರೂ ತಾವು ಮೊದಲು ಪಾಂಡವರ ಬಳಿ ಇದ್ದುದಾಗಿಯೂ, ಅವರು ಅಜ್ಞಾತವಾಸಕ್ಕೆ ತೆರಳಿದ್ದರಿಂದ ತಾವೀಗ ಒಂದು ವರ್ಷ ಕಾಲ ವಿರಾಟರಾಜನ ಬಳಿಯಲ್ಲಿ ಕಳೆಯಲು ಬಂದಿರುವುದಾಗಿ ಹೇಳಿಕೊಳ್ಳುವ ನಿಶ್ಚಯವನ್ನೂ ಮಾಡಿದರು.

ಪಾಂಡವರು ಸೇವಿಸಿದ್ದು ವಿರಾಟನನ್ನಲ್ಲ; ಮುಖ್ಯವಾಗಿ ಶ್ರೀಹರಿಯನ್ನೇ

ಸರ್ವೇ ವಿರಾಟಂ ಯಯುರತ್ರ ದೇವವತ್
ಸಂಭಾವಿತಾಸ್ತೇನ ಶುಭೋರುಲಕ್ಷಣಾಃ ।
ಯುಧಿಷ್ಠಿರಸ್ಯೈವ ಶುಶ್ರೂಷಣಂ ತೇ
ಚಕ್ರುರ್ಹೃದಾ ವಾಸುದೇವಸ್ಯ ನಾನ್ಯತ್ ॥ ೩ ॥

ಅ: ಅವರೆಲ್ಲರೂ ವಿರಾಟನ ಬಳಿಗೆ ತೆರಳಿದರು. ಅಲ್ಲಿ ಉತ್ತಮ ಸಲ್ಲಕ್ಷಣಭರಿತರಾದ ಅವರು ದೇವತೆಗಳಂತೆ ಅವನಿಂದ ಆದರಿಸಲ್ಪಟ್ಟರು. ಅವರು ಧರ್ಮರಾಜನೊಳಗೆ ಇರುವ ಶ್ರೀಹರಿಯನ್ನೇ ಮುಖ್ಯವಾಗಿ ಸೇವಿಸಿದರೇ ಹೊರತು ಇತರರನ್ನಲ್ಲ.

ವಿ: ೧) ಮೇಲ್ನೋಟಕ್ಕೆ ಪಾಂಡವರು ವಿರಾಟನ ಬಳಿಯಲ್ಲಿ ಸೇವೆ ಸಲ್ಲಿಸುತ್ತಾ ಕಾಲ ಕಳೆದರು ಎಂದಾಗುವುದು. ಆದರೆ, ಅವರು ನಿಜಕ್ಕೂ ಸೇವಿಸಿದ್ದು ವಿರಾಟನನಲ್ಲ; ತಮ್ಮೆಲ್ಲರ ಹಿರಿಯಣ್ಣನಾದ ಧರ್ಮರಾಜನನ್ನೇ*.

೨) ಅಲ್ಲಿಯೂ ಸಹ ಅವನ ಅಂತರ್ಯಾಮಿಯಾದ ಶ್ರೀಹರಿಯನ್ನೇ ಮುಖ್ಯವಾಗಿ ಆರಾಧಿಸಿದರು ಎಂಬುದು ವಿಶೇಷ.

---

* ಏವಂ ಮತ್ಸ್ಯಸ್ಯ ನಗರೇ ಪ್ರಚ್ಛನ್ನಾಃ ಕುರುನಂದನಾಃ ।
ಆರಾಧಯಂತೋ ರಾಜಾನಂ ..... ॥ – ಭಾರತ (ವಿರಾಟ. ೧೩/೨)

೩) ಅವರು ಆ ರೀತಿ ಮಾರುವೇಷದಲ್ಲಿ ತೆರಳಿದ್ದರೂ ವಿರಾಟರಾಜ ಅವರನ್ನು ತುಂಬಾ ಗೌರವಭಾವನೆಯಿಂದಲೇ ಕಂಡ. ಅದಕ್ಕೆ ಅವನು ಅವರಲ್ಲಿ ಕಂಡ ಶ್ರೇಷ್ಠಲಕ್ಷಣಗಳೇ ಕಾರಣವಾಗಿದ್ದವು. ಭೂಮಂಡಲವನ್ನೇ ಪಾಲಿಸುವ ಚಕ್ರವರ್ತಿಗಳಂತೆ ಕಾಣುವ ಅವರನ್ನು ತಾನು ಸೇವಕರನ್ನಾಗಿ ಇರಿಸಿಕೊಳ್ಳುವುದೆಂತು? ಆದರೂ ಅವರು ತನ್ನಲ್ಲಿಗೆ ಬಂದಿರುವುದು ತನ್ನ ಭಾಗ್ಯವೆಂದು ಭಾವಿಸಿ ಆದರದಿಂದಲೇ ಕಾಣುವುದಾಗಿ ತಿಳಿಸಿದ.

ಭೀಮನ ಸೂದವೇಷದ ರಹಸ್ಯ

ಪರಪಾಕೋ ಗೃಹಸ್ಥಸ್ಯ ಕ್ಷತ್ರಿಯಸ್ಯ ವಿಶೇಷತಃ।
ನ ಯೋಗ್ಯ ಇತಿ ಸೂದಸ್ಯ ಬಭ್ರೇ ವೇಷಂ ವೃಕೋದರಃ ॥ ೪ ॥

ಅ: ಗೃಹಸ್ಥನಿಗೆ, ವಿಶೇಷವಾಗಿ ಕ್ಷತ್ರಿಯನಿಗೆ ಪರಪಾಕ ವಿಹಿತವಾದುದಲ್ಲ ಎಂಬ ಕಾರಣದಿಂದ ಭೀಮಸೇನ ಅಡಿಗೆಯವನ ವೇಷವನ್ನು ಧರಿಸಿದ.

ವಿ: ೧) ಭೀಮ ಅಡಿಗೆಯವನ ವೇಷ ತೊಡಲು ಕಾರಣವನ್ನು ತಿಳಿಸಿರುವರು. ಪರಪಾಕ ಗೃಹಸ್ಥನಿಗೆ ಸರ್ವಥಾ ನಿಷಿದ್ಧ, ಅದರಲ್ಲೂ ಕ್ಷತ್ರಿಯನಾದವನಿಗೆ ಇನ್ನೂ ಹೆಚ್ಚಾಗಿ ನಿಷಿದ್ಧ. ಬ್ರಹ್ಮಚರ್ಯಾಶ್ರಮದಲ್ಲಿ ಸ್ವಯಂಪಾಕ ನಿಷಿದ್ಧ. ಬ್ರಾಹ್ಮಣರಿಗೂ, ದೇವಕಾರ್ಯ, ಪಿತೃಕಾರ್ಯದಂತಹ ವಿಶೇಷ ಸಂದರ್ಭದ ಹೊರತು ಉಳಿದಂತೆ ಪರಾನ್ನ ಅಷ್ಟು ಪ್ರಶಸ್ತವಾದುದಲ್ಲ. ಆಪತ್ಕಾಲ ಮೊದಲಾದ ಕಾರಣಗಳಿಂದ ಮಾತ್ರ ಪರಾನ್ನ ನಿಷಿದ್ಧವೆನ್ನಿಸದು.

೨) ಬೇರೆ ವೇಷವನ್ನು ಧರಿಸಿ ವಿರಾಟರಾಜನ ಬಳಿ ಇದ್ದಲ್ಲಿ ಪರಾನ್ನವನ್ನು ಸ್ವೀಕರಿಸಬೇಕಾಗುವುದು ಎಂಬ ಕಾರಣದಿಂದ ಭೀಮಸೇನ ಅಡಿಗೆಯವನ ವೇಷವನ್ನೇ ಧರಿಸಿದ ಎಂದು ತಿಳಿಯಬೇಕು. ಏಕಚಕ್ರ ನಗರದಲ್ಲಿ ಅವರು ಬ್ರಹ್ಮಚಾರಿಯ ವೇಷದಲ್ಲಿದ್ದದ್ದರಿಂದ ಭಿಕ್ಷಾನ್ನ ನಿಷಿದ್ಧವೆನ್ನಿ–

---

೪. ಪರಪಾಕೋ ಗೃಹಸ್ಥಸ್ಯೇತ್ಯತ್ರ। ವಿಶೇಷತ ಇತಿ ಲ್ಯಬ್ಲೋಪನಿಮಿತ್ತಾ ಪಂಚಮೀ। ಗೃಹಸ್ಥಸ್ಯ= ಗೃಹಸ್ಥಾಶ್ರಮಂ ಪ್ರಾಪ್ತಸ್ಯ ಕ್ಷತ್ರಿಯಸ್ಯ। ವಿಶೇಷತಃ= ಸಂಬಂಧವಿಶೇಷಂ ಫಲವಿಶೇಷಂ ವಾ ವಿಹಾಯ ಪರಪಾಕೋ ಯೋಗ್ಯೋ ನ। ಸಂಬಂಧವಿಶೇಷೇ ಸತಿ ಉತ್ತಮಬ್ರಾಹ್ಮಣಗೃಹೇ ಫಲವಿಶೇಷೇ ಚ ಸತಿ ಪರಪಾಕೋ ದೋಷಾಯ ನ। ಕ್ಷತ್ರಿಯಾಣಾಂ ಚ ಬ್ರಹ್ಮಚರ್ಯಾಶ್ರಮೇ ಪರಪಾಕೋ ದೋಷಾಯ ನ। ಅತ ಏವ ಏಕಚಕ್ರಾನಗರೇ ಭಿಕ್ಷಾಟನಂ ಕೃತಮ್। ಬ್ರಾಹ್ಮಣಾನಾಂ ತು ಶ್ರಾದ್ಧಾದಿಷು ಭೋಜನಸ್ಯ ವಿಹಿತತ್ವಾತ್ ನ ತೇಷಾಮಿಹ ಗೋಷ್ಠೀ। ತಥಾಸತಿ ವಿಪ್ರಸ್ಯ ಕ್ಷತ್ರಿಯಸ್ಯೇತ್ಯವಕ್ಷ್ಯತ್। ಅಥವಾ, ವಿಶೇಷತಃ = ವಿಧಿವಿಶೇಷಂ ವಿನಾ ಯೋಗ್ಯೋ ನ। ಅನ್ಯಥಾ "ಶೂದ್ರವೇಷಸ್ತತೋಽಭವತ್" ಇತಿ ವಕ್ಷ್ಯಮಾಣತ್ವಾತ್ ಶೂದ್ರಕೃತಂ ಪಾಕಂ ಕಥಂ ಸ್ವೀಕುರ್ಯಾತ್। ಯದ್ವಾ, ವಿಶೇಷತಃ= ಪ್ರಾಯಶಃ। ಅನ್ಯಥಾ ವಿರಾಟೋಽಪ್ಯೇತತ್ಕೃತಪಾಕಂ ಕಥಮಶ್ನೀಯಾತ್। ಅತಃ ಸಾಮಾನ್ಯಧರ್ಮೋಽಯಮಿತಿ ಜ್ಞೇಯಮ್ ॥ –(ವಾ.)

ಸಿರಲಿಲ್ಲ. ಭೀಮಸೇನ ರಾಜಸೂಯ ಯಾಗದ ಸಂದರ್ಭದಲ್ಲೂ ಮಹಾನಸಾಧ್ಯಕ್ಷನಾಗಿ ಶ್ರೀಕೃಷ್ಣ–ನಿಂದಲೇ ನಿಯಮಿತನಾಗಿದ್ದ ವಿವರ ಈಗಾಗಲೇ ಬಂದಿದೆ (೨೧/೨೬೦; ಭಾಗವತ ೧೦/೭೫/೪).

೩) ಕ್ಷತ್ರಿಯರಿಗೆ ಪರಾನ್ನ ವಿಶೇಷವಾಗಿ ನಿಷಿದ್ಧವಾಗಲು ಅವರ ರಕ್ಷಣೆಯ ವ್ಯವಸ್ಥೆ ಮತ್ತೊಂದು ಕಾರಣ ಎಂದೂ ತಿಳಿಯಬಹುದು. ಪರಾನ್ನದಿಂದ ವಿಷ ಪ್ರಯೋಗಾದಿಗಳಿಗೆ ಸುಲಭ–ವಾದ ಅವಕಾಶ ದೊರೆಯುವುದರಿಂದ ಅದನ್ನು ತೊರೆಯುವುದು ಶ್ರೇಷ್ಠವೆಂದು ಕರೆಯಲಾಗಿದೆ. ದೇಹದ ಯಾವುದೇ ರೋಗ ರುಜಿನಕ್ಕೂ ಆಹಾರದಲ್ಲಿನ ವ್ಯತ್ಯಾಸ ಪ್ರಧಾನವಾದ ಕಾರಣ. ಅಂತಹ ಆಹಾರ ಮತ್ತೊಬ್ಬರದಾದಾಗ ಅಶುದ್ಧಿಗೆ ಅವಕಾಶ ಹೆಚ್ಚುವುದರಿಂದ ಆರೋಗ್ಯಹಾನಿಗೂ, ಆ ಮೂಲಕ ಸಾಧನೆಯ ವಿಘ್ನಕ್ಕೂ ಕಾರಣ.

೪) ಭೀಮಸೇನ ತಾನು ಸೂದವೇಷವನ್ನು ಧರಿಸುವ ಮೂಲಕ ತನಗೆ ಮಾತ್ರವಲ್ಲದೇ ಧರ್ಮರಾಜಾದಿ ತನ್ನವರಿಗೂ ಸಹ ಪರಪಾಕದ ಅಪಾಯವನ್ನು ತಪ್ಪಿಸಿ ಲೋಕಕ್ಕೆ ಶ್ರೇಷ್ಠ ಆದರ್ಶ–ವನ್ನು ಸಾರಿದ ಎಂದು ತಿಳಿಯಬೇಕು.

೫) ಹೆಂಡತಿ, ಮಗಳು, ಸೊಸೆ ಮಾಡಿದ ಅಡಿಗೆ, ಗುರುಗಳು ಹಾಗೂ ಸೋದರಮಾವನ ಮನೆಯ ಅನ್ನ ಸಹ ಸ್ವಯಂಪಾಕವೆನ್ನಿಸುವುದು ಎಂಬ ವಿಶೇಷಾಂಶ ಸ್ಮೃತಿಗಳಲ್ಲಿದೆ. ಅದರಂತೆ ಶ್ರೋತ್ರಿಯರ ಮನೆಯ ಅನ್ನ ಸಹ ಪರಪಾಕವೆನ್ನಿಸದೆ, ಗ್ರಾಹ್ಯವೆನ್ನಿಸದು.

---

೪. ಏಕಚಕ್ರಾನಗರೇ ಭಿಕ್ಷಾನ್ನವ್ಯಾವೃತ್ತ್ಯರ್ಥಂ ಗೃಹಸ್ಥಸ್ಯೇತಿ । ಗೃಹಸ್ಥಾಶ್ರಮಂ ಪ್ರಾಪ್ತಸ್ಯೇತ್ಯರ್ಥಃ । ಕ್ಷತ್ರಿಯಸ್ಯ ವಿಶೇಷತಃ । ಬಂಧುತ್ವಶೇಷಾತ್ ಶ್ರೋತ್ರಿಯಾನ್ನಭೋಜನೇ ಫಲವಿಶೇಷಾಚ್ಚ ಪರಪಾಕೋ ನ ದೋಷಾಯ । ಅನ್ಯದಾ ಪರಪಾಕೋ ಯೋಗ್ಯೋ ನೇತ್ಯರ್ಥಃ ।

'ಪತ್ನೀಪಾಕಂ ಪುತ್ರೀಪಾಕಂ ಸ್ನುಷಾಪಾಕಂ ತಥೈವ ಚ ।
ಗುರೋರ್ಮಾತುಲಪಾಕಂ ಚ ಸ್ವಯಂಪಾಕಂ ತು ಪಂಚಧಾ ॥
ಸ್ವಯಂ ಹಿ ಪಾಕಂ ಕುರುತೇ ಸದೈವ ದಾರೈಃ ಸುಪುತ್ರೈರಥ ವಾ ಸುಶಿಷ್ಯೈಃ ।
ಸುಬಂಧುಭಿಃ ಶ್ರೋತ್ರಿಯಮುಖ್ಯವರ್ಯೈಃ ಕೃತೋ ಹಿ ಪಾಕಃ ಸ್ವಕೃತೋ ಹಿ ಪಾಕಃ ॥
ಸುಹೃದನ್ನಂ ಗುರೋರನ್ನಂ ಯದನ್ನಂ ಮಾತುಲಸ್ಯ ಚ ।
ಶ್ವಶುರಾನ್ನಂ ಶ್ರೋತ್ರಿಯಾನ್ನಂ ಪರಾನ್ನಂ ನ ವಿದುರ್ಬುಧಾಃ ॥
ಯಸ್ತು ಸರ್ವಾನ್ ಪರಿತ್ಯಜ್ಯ ಸ್ವಯಂಪಾಕಂ ಸಮಾಚರೇತ್ ।
ಯಸ್ತು ಸರ್ವತ್ರ ಭುಂಜೀತ ತಾವುಭೌ ಪತಿತೌ ಸ್ಮೃತೌ ॥ ಇತ್ಯುಕ್ತೇಃ ॥

ಅನ್ಯಥಾ ಭೀಮಸ್ಯ ದಿಗ್ವಿಜಯಕಾಲೇ ಮಾತೃಸ್ವಸೃಗೃಹಾನ್ನಭೋಕ್ತೃತ್ವಾನುಪಪತ್ತೇಃ । ಉಕ್ತಂ ಚೈತತ್ –
'ಮಾತೃಸ್ವಸೃಗೃಹೇ ಚೋಷ್ಯ ದಿವಸಾನ್ ಕತಿಚಿತ್ ಸುಖಮ್' ಇತಿ । –(ರಾ.)

೪. 'ಪರಪಾಕೋ ಗೃಹಸ್ಥಸ್ಯೇತ್ಯತ್ರ ಪರಾಗ್ನಿನಾ ಕೃತಃ ಪಾಕ ಇತಿ ಕೇಚಿತ್ । ಶಿಷ್ಯಾದಿವ್ಯತಿರಿಕ್ತಪುರುಷಾದಿಕೃತಃ ಪರಪಾಕ ಇತಿ ವಾ । –(ತಿ.)

೪. ಉಪಾಸತೇ ಯೇ ಗೃಹಸ್ಥಾಃ ಪರಪಾಕಮಬುದ್ಧಯಃ ।
ತೇನ ತೇ ಪ್ರೇತ್ಯ ಪಶುತಾಂ ವ್ರಜಂತ್ಯನ್ನಾದಿದಾಯಿನಾಮ್ ॥ –ಮನುಸ್ಮೃತಿ (೩/೧೦೪)

೫) ಪರಪಾಕ ಉಣ್ಣುವವರು ಅನ್ನ ನೀಡಿದವರ ಮನೆಯಲ್ಲಿ ಪಶುಗಳಾಗಿ ಜನಿಸುವರು.

೬) ಪರಾನ್ನವೆಂಬುದಕ್ಕೆ 'ಪರರು ಬೇಯಿಸಿದ ಅನ್ನ' ಎಂಬ ಅರ್ಥ ಮಾತ್ರವಲ್ಲದೇ 'ಪರರ ಒಡೆತನಕ್ಕೇ ಸೇರಿದ ಅನ್ನ' ಎಂಬ ಅರ್ಥವೂ ಉಂಟು. ಇಲ್ಲಿ ಎರಡು ಅರ್ಥಗಳಲ್ಲೂ ಪರಪಾಕ ನಿಷಿದ್ಧವೆನ್ನುವುದು ಶಾಸ್ತ್ರಗಳ ಆಶಯ.

೭) ಭೀಮಸೇನ ಸ್ವತಃ ತಾನೇ ಅಡಿಗೆ ಮಾಡುತ್ತಿದ್ದದ್ದರಿಂದ ಅದು ಪರಾಗ್ನಿಯೂ ಆಗಲಿಲ್ಲ ಎಂಬುದು ವಿಶೇಷ. ಪರರು ನೀಡುವ ಅನ್ನದಲ್ಲಿ ಆಹಾರದೊಷಗಳು ಮಾತ್ರವಲ್ಲದೇ ಅವರ ಮನೋದೋಷಗಳೂ ಸಹ ಸೇರಿ ದೇಹದ ಅನಾರೋಗ್ಯಕ್ಕೆ ಮಾತ್ರವಲ್ಲದೇ, ಅನಾರೋಗ್ಯಕರ ಚಿಂತನೆಗೂ ಕಾರಣವಾಗುವ ಅಪಾಯವು ತಪ್ಪಿದ್ದಲ್ಲ. ಈ ಹಿನ್ನೆಲೆಯಲ್ಲಿ ಶಾಸ್ತ್ರಗಳು ಆಹಾರದ ಬಗ್ಗೆ ತುಂಬಾ ವಿಶೇಷವಾದ ವಿಧಿನಿಯಮಗಳನ್ನು ಸಾರಿವೆ ಎಂದು ತಿಳಿಯಬೇಕು.

ವೈದಿಕವ್ಯವಹಾರೇಷು ಜ್ಞಾನಾಧಿಕ್ಯಪ್ರಸಿದ್ಧಿತಃ ।
ಜಾನೀಯುರ್ಭೀಮ ಇತ್ಯೇವ ಶೂದ್ರವೇಷಸ್ತತೋಽಭವತ್ ॥ ೫ ॥

ಅ: ವೈದಿಕ ವ್ಯವಹಾರಗಳಲ್ಲಿ ಜ್ಞಾನದ ಹಿರಿಮೆ ಎದ್ದು ಕಾಣುವುದರಿಂದ ತನ್ನನ್ನು ಭೀಮ ಎಂದು ಜನ ತಿಳಿಯುವರು ಎಂಬ ಕಾರಣದಿಂದಲೂ ಭೀಮಸೇನ ಶೂದ್ರ ವೇಷವನ್ನು ಧರಿಸಿದ.

ವಿ: ೧) ಭೀಮಸೇನ ಆಯ್ದುಕೊಂಡ ವೃತ್ತಿ ಸೂದ ವೃತ್ತಿ ಎಂದರೆ ಅಡಿಗೆಮನೆ ಕೆಲಸ. ಅದಕ್ಕಾಗಿ ಹಾಕಿಕೊಂಡ ವೇಷ ಶೂದ್ರವೇಷ ಎಂಬುದು ಇಲ್ಲಿಯ ಮತ್ತೊಂದು ವಿಶೇಷ.

೨) ಸೂದವೇಷವನ್ನು ಹಾಕಿಕೊಳ್ಳಲು ಪರಪಾಕ ನಿಷಿದ್ಧವೆಂಬುದು ಮುಖ್ಯ ಕಾರಣ–ವಾದರೆ, ಶೂದ್ರ ವೇಷಕ್ಕೆ ಕಾರಣವನ್ನು ಇಲ್ಲಿ ತಿಳಿಸಲಾಗಿದೆ. ಭೀಮಸೇನ ಬ್ರಾಹ್ಮಣಾದಿ ವೇಷಗಳನ್ನು ಧರಿಸಿದಲ್ಲಿ ರಾಜಸಭೆಗಳಲ್ಲಿ ನಡೆಯುವ ವಿದ್ವದ್ಗೋಷ್ಠಿಯಲ್ಲಿ ಪಾಲ್ಗೊಳ್ಳುವ ಪ್ರಸಂಗ ಒದಗುವುದು. ಅಂದಿನ ರಾಜಾಸ್ಥಾನಗಳಲ್ಲಿ ವಿದ್ವದ್ಗೋಷ್ಠಿಗೆ ಅಗ್ರಸ್ಥಾನವಿದ್ದುದು ಸುಪ್ರಸಿದ್ಧವಾದ ವಿಚಾರ. ಹಾಗೆ ಬ್ರಾಹ್ಮಣವೇಷದಲ್ಲಿದ್ದಾಗ ವಿದ್ವದ್ಗೋಷ್ಠಿಯಲ್ಲಿ ಪಾಲ್ಗೊಳ್ಳುವುದೂ ಸಹ ಕಡ್ಡಾಯ ಎಂಬುದು ಶಾಸ್ತ್ರವಿಧಿ. ಜ್ಞಾನರಕ್ಷಣೆ ಬ್ರಾಹ್ಮಣಾದಿಗಳ ಪ್ರಧಾನಕರ್ತವ್ಯವಷ್ಟೇ. ಹಾಗೆ ಪಾಲ್ಗೊಂಡಲ್ಲಿ ತನ್ನ ಪೂರ್ಣಪ್ರಜ್ಞತ್ವದಿಂದಾಗಿ ಭೀಮಸೇನನ ಹಿರಿಮೆ ಸಹಜವಾಗಿಯೇ ವ್ಯಕ್ತವಾಗುವುದು. ಅಂತಹ ಹಿರಿಮೆಯನ್ನು ಕಂಡ ಜನ ಅದು ಭೀಮನ ಹೊರತು ಮತ್ತಾರಲ್ಲೂ ಇರುವಂತಹುದಲ್ಲ ಎಂಬ ಕಾರಣದಿಂದ ಆ ವ್ಯಕ್ತಿ ಭೀಮಸೇನನೇ ಎಂದು ತಿಳಿದುಬಿಡುವರು. ಆ ರೀತಿ ಗುರುತಿಸಿದಲ್ಲಿ ಅಜ್ಞಾತವಾಸದ ಕಾರ್ಯಕ್ಕೆ ಭಂಗವಾಗುವುದು. ಆದ್ದರಿಂದ ಭೀಮಸೇನ ವೈದಿಕ ವ್ಯವಹಾರಗಳಿಗೆ ಸರ್ವಥಾ ಅವಕಾಶವಿಲ್ಲದ ಶೂದ್ರ ವೇಷವನ್ನೇ ಧರಿಸಿದ ಎಂದರ್ಥ. ಶೂದ್ರರಿಗೆ ವೇದಾಧಿಕಾರವಿಲ್ಲವೆಂಬುದು ಸ್ಪಷ್ಟವೇ ಇದೆ.

೩) ಅಂತೂ ಭೀಮಸೇನ ಅಲ್ಲಿ ಧರಿಸಿದ್ದು ಸೂದವೇಷ ಮತ್ತು ಶೂದ್ರವೇಷ. ಆಗ ಮತ್ತೊಂದು ಪ್ರಶ್ನೆಗೆ ಅವಕಾಶವಿದೆ, ಶೂದ್ರ ಮಾಡಿದ ಅಡಿಗೆಯನ್ನು ಬ್ರಾಹ್ಮಣಾದಿಗಳು ಸ್ವೀಕರಿಸಬಹುದೇ? ಅದಕ್ಕೂ ಸ್ಮೃತಿಗಳಲ್ಲಿ ಉತ್ತರವಿದೆ ('ವರ್ಣತ್ರಯಸ್ಯ ಶುಶ್ರೂಷಾಂ ಕುರ್ಯಾತ್ ಶೂದ್ರಃ ಪ್ರಯತ್ನತಃ । ಪಾಕಯಜ್ಞವಿಧಾನೇನ ಯಜೇದ್ದೇವಮತಂದ್ರಿತಃ ॥' – ಹಾರೀತಸ್ಮೃತಿ). ಎಂದರೆ ಶೂದ್ರನಿಗೆ ವಿಹಿತವಾಗಿರುವುದು ಬ್ರಾಹ್ಮಣಾದಿ ಮೂರು ವರ್ಣಗಳ

---

೫. ಸೂದವೇಷಗ್ರಹಣೇ ನಿಮಿತ್ತಾಂತರಮಾಹ – 'ವೈದಿಕೇತಿ' । ಬ್ರಾಹ್ಮಣವೇಷಗ್ರಹಣೇ ವೈದಿಕವ್ಯವಹಾರಸ್ಯಾವರ್ಜನೀಯತ್ವಾತ್ । ತಥಾ ಸತಿ ಜ್ಞಾನಾಧಿಕ್ಯಪ್ರಸಿದ್ಧ್ಯಾ ಭೀಮ ಇತಿ । ಜಾನೀಯುರಿತಿ ಭಾವಃ । ನನು ಕ್ಷತ್ರಿಯಸ್ಯ ಪರಪಾಕ ಏವಾಯೋಗ್ಯತ್ವೇ ಪಾಂಡವಾನಾಂ ವಿರಾಟಸ್ಯ ಚ ಸಂಬಂಧವಿಶೇಷಸ್ಯ ಚಾಭಾವಾತ್ ಕಥಂ ತದ್ಭ್ರವ್ಯೋಪಜೀವನಮಿತಿ? ಅತ ಆಹ – 'ಸ್ವೀಯಮಿತಿ' । ಸರ್ವಂ ತಂಡುಲಮಾಷಮುದ್ಗಾದಿಪದಾರ್ಥಜಾತಂ ಷಷ್ಠಾಂಶೇನ ಸ್ವೀಯಮಿತ್ಯರ್ಥಃ । ತದುಕ್ತಂ ವಾಯುಪುರಾಣೇ ಮ್ಲಾಘಮಾಹಾತ್ಮ್ಯೇ – 'ಆರ್ಜಕಾನಂ ಚ ಷಷ್ಠಾಂಶಃ ವಿಪ್ರಾಣಾಂ ಸ್ವೀಯಮುಚ್ಯತೇ' ಇತಿ ।

ನನು ವೇದಾನಧಿಕಾರಿಣಾಂ ಸೂದಾನಾಂ ಕಥಂ ಪಾಕಾಧಿಕಾರಃ ? । ಕ್ಷತ್ರಿಯಾಣಾಂ ತತ್ಕೃತಾನ್ನಭೋಜನಂ ವಾ ಕಥಮಿತಿ ಚೇತ್ ಸತ್ಯಮ್ । ಸ್ತ್ರೀಣಾಂ ವೇದಾಧಿಕಾರಾಭಾವೇऽಪಿ ವೈಷ್ಣವಮಂತ್ರಾಧಿಕಾರಸದ್ಭಾವಾತ್ ಪಾಕಾಧಿಕಾರ ಇತಿ ವಕ್ತವ್ಯಮ್ । 'ಸ್ತ್ರೀಶೂದ್ರಬ್ರಹ್ಮಬಂಧೂನಾಂ ತಂತ್ರಜ್ಞಾನೇऽಧಿಕಾರಿತೇ'ತಿ ಭಾಷ್ಯೋಕ್ತೇಃ । ತಾವಪಿ ದ್ವಿವಿಧೌ । ವಿವಾಹಿತಕನ್ಯಾಪ್ರಸೂತೌ ಅವಿವಾಹಿತಕನ್ಯಾಪ್ರಸೂತಾವಿತಿ । ವಿವಾಹಿತಕನ್ಯಾಪ್ರಸೂತೌ ಸೂದಸೂತೌ । ವೇದಾಧಿಕಾರಿಣೋ ದ್ವಿಜಾತಿವತ್ ಸಂಸ್ಕಾರಯುಕ್ತೌ । ಕ್ರಿಯಾಸುಷ್ಠಿತಾರೌ । ತದೇತದುಕ್ತಂ –

ಅನುಲೋಮೇಷು ಯೇ ಕೇಚಿತ್ ತ್ರಯೀವಿದ್ಯಾಧಿಕಾರಿಣಃ ।
ತೇऽಪಿ ದ್ವಿಜಾತಿವಜ್ಜ್ಞೇಯಾಸ್ತೇಷಾಂ ದೀಕ್ಷಾದಿಕಂ ತಥಾ ॥
ಸಚ್ಛೂದ್ರಾ ಅಪಿ ಯೇ ಕೇಚಿತ್ ಸೂತಾದ್ಯಾಃ ಪ್ರತಿಲೋಮಿನಃ ।
ದ್ವಿಜಸ್ತ್ರೀವತ್ ಸಂಸ್ಕಾರ್ಯಾಸ್ತಥಾ ಮಂತ್ರೋಪದೇಶಿನಃ ॥
ಬ್ರಾಹ್ಮಣಾಕ್ಷತ್ರಿಯಾವೈಶ್ಯಾಸ್ತ್ರಯೋ ವರ್ಣಾ ದ್ವಿಜಾತಯಃ ।
ತೈರಾದೌ ವೈದಿಕಂ ಕರ್ಮ ಸಂಧ್ಯಾಮಂತ್ರಜಪಾದಿಕಮ್ ॥
ಕೃತ್ವೈವ ತಾಂತ್ರಿಕೀಂ ಪೂಜಾಂ ತತ್ರ ಮಂತ್ರಜಪಾದಿಕಮ್ ।
ಕರ್ತವ್ಯಂ ನಾನ್ಯಥಾ ಕುರ್ಯಾತ್ ಕಥಂ ತೇಭ್ಯಃ ಫಲಂ ಲಭೇತ್ ॥
ವಿನೋಪನಯನಂ ಯದ್ವನ್ನಾಧಿಕಾರೀ ಶ್ರುತಿಶ್ರುತೌ ।
ತಥಾ ವಿನಾ ನಿತ್ಯಕರ್ಮಾನಧಿಕಾರೀ ತು ತಾಂತ್ರಿಕೇ ॥
ವೈದಿಕೇ ಹ್ಯನಧಿಕಾರಾ ಯೇ ಸ್ತ್ರೀಶೂದ್ರಪತಿತಾದಯಃ ।
ತೇಷಾಂ ತಾಂತ್ರಿಕಮೇವ ಸ್ಯಾತ್ ಪೂಜಾಕರ್ಮಜಪಾದಿಕಮ್ ॥

ಇತ್ಯಾದಿವಿಷ್ಣುರಹಸ್ಯೇ ನವಮೇऽಧ್ಯಾಯೇ ಸೂದಾನಾಂ ಪಾಕಾಧಿಕಾರ ಉಕ್ತಃ ।

ಹಾರೀತಸ್ಮೃತೌ –

ತ್ರಿವರ್ಣಸ್ಯ ಚ ಶುಶ್ರೂಷಾಂ ಕುರ್ಯಾಚ್ಛೂದ್ರಃ ಪ್ರಯತ್ನತಃ ।
ಪಾಕಯಜ್ಞವಿಧಾನೇನ ಭಜೇದ್ದೇವಮನಂತರಮ್ ॥ ಇತಿ ॥ – (ರಾ.)

ಪರಿಚರ್ಯೆ. ಆ ಪರಿಚರ್ಯೆಯಲ್ಲಿ ಪಾಕಯಜ್ಞವೂ ಸೇರಿದೆ. ಆದ್ದರಿಂದ ಶೂದ್ರ ಬೇಯಿಸಿದ ಅನ್ನ ಬ್ರಾಹ್ಮಣಾದಿಗಳಿಗೆ ನಿಷಿದ್ಧವಲ್ಲ ಎಂದಾಗುವುದು. ಅದರಿಂದಾಗಿ ಭೀಮಸೇನ ಶೂದ್ರವೇಷ–ದೊಂದಿಗೆ ಸೂದವೇಷವನ್ನು ಧರಿಸಿದ್ದು ಯುಕ್ತವೇ ಆಯಿತು ಎಂದು ಭಾವ.

೪) ಆದರೆ, ಕಲಿಯುಗದಲ್ಲಿ ಶೂದ್ರಾನ್ನ ನಿಷಿದ್ಧ ಎಂಬುದು ಸ್ಮೃತಿಗಳೇ ವಿಧಿಸಿರುವ ಮತ್ತೊಂದು ವಿಶೇಷ. ಆದ್ದರಿಂದ ಕಲಿಯುಗದಲ್ಲಿ ಶೂದ್ರ ಸೂದನಾಗುವಂತಿಲ್ಲ. ಅಂದು ಮಾತ್ರ ಅದಕ್ಕೆ ಅವಕಾಶವಿತ್ತು ಅಂದಿನ ಕಾಲದಲ್ಲಿ ಜ್ಞಾನಕಾರ್ಯದಲ್ಲಿ ತೊಡಗದ ವಿಪ್ರರೇ ಇರುತ್ತಿರ–ಲಿಲ್ಲವಾದ್ದರಿಂದ ಅಡಿಗೆ ಕಾರ್ಯಕ್ಕೆ ಬ್ರಾಹ್ಮಣ ಸಿಕ್ಕುವ ಸಂಭವವೂ ಇರಲಿಲ್ಲ ಎಂಬುದನ್ನೂ ಗಮನಿಸಬೇಕು.

೫) ಮುಂದೆ ಶ್ರೀಕೃಷ್ಣನೂ ಸಹ ಶೂದ್ರ ವರ್ಣದಲ್ಲಿ ಜನಿಸಿದ್ದ ವಿದುರನ ಮನೆಯಲ್ಲಿ ಭಕ್ಷ್ಯ, ಭೋಜ್ಯಗಳ ಸಮೇತವಾದ ಭೋಜನವನ್ನೇ ಸ್ವೀಕರಿಸಿದ ವಿವರ ಬಂದಿರುವುದೂ (೨೪/೬೮) ಸಹ ಇದರಿಂದಾಗಿ ಸೂಕ್ತವೆಂದು ನಿರ್ಣಯವಾಗುವುದು. ಹೀಗೆ ಭೀಮಸೇನ ಸೂದನೂ, ಶೂದ್ರನೂ ಆದದ್ದು ಸೂಕ್ತ ಎಂದು ಸಿದ್ಧಪಡುವುದು.

ಪಾಂಡವರು ಅನ್ಯಾಶ್ರಯ ಮಾಡಲಿಲ್ಲ

ಸ್ವೀಯಂ ವೇದವಿದಾಂ ಸರ್ವಂ ದೇವೇಶಾನಾಂ ಚ ಕಿಂ ಪುನಃ ।
ಅತಸ್ತೇಽನ್ಯಾಶ್ರಯಂ ನೈವ ಚಕ್ರುಃ ಸ್ವಬಲಸಂಶ್ರಯಾತ್ ॥ ೬ ॥

ಅ: ವೇದಗಳನ್ನು ಅರಿತವರಿಗೆ ಇತರರ ಸ್ವತ್ತು ತಮ್ಮ ಸ್ವತ್ತೇ ಆಗುವುದು ಎಂಬ ನಿಯಮವಿರುವಾಗ ದೇವಶ್ರೇಷ್ಠರಾದ ಪಾಂಡವರ ಬಗ್ಗೆ ಹೇಳಬೇಕಾದ್ದೇನಿದೆ. ಅದರಿಂದಾಗಿ ಅವರು ತಮ್ಮ ಬಲವನ್ನೇ ಆಶ್ರಯಿಸಿ ನೆಲೆಸಿದ್ದರಿಂದ ಅನ್ಯಾಶ್ರಯವನ್ನು ಸರ್ವಥಾ ಮಾಡಲಿಲ್ಲ.

ವಿ: ೧) ಪರಪಾಕವೆಂಬುದು ಪರರು ಬೇಯಿಸಿದ ಎಂಬ ಅರ್ಥದಲ್ಲಿ ತಿಳಿದಾಗ ಭೀಮ ಸೂದವೇಷವನ್ನು ಧರಿಸಿದ್ದರಿಂದ ಆ ಸಮಸ್ಯೆ ಪರಿಹಾರವಾಯಿತು ಎಂದು ತಿಳಿಯಬಹುದು. ಆದರೆ, ಅದು ವಿರಾಟನ ರಾಜ್ಯವಾದ್ದರಿಂದ ಆ ಅರ್ಥದಲ್ಲಿ ಪರಾನ್ನವೇ ಆಗುವುದರಿಂದ ಅದನ್ನು ಸ್ವೀಕರಿಸಿದ ದೋಷ ಹೇಗೆ ತಪ್ಪುವುದು ಎಂಬ ಪ್ರಶ್ನೆಗೆ ಇಲ್ಲಿ ಉತ್ತರವಿದೆ.

೨) ಮೇಲ್ನೋಟಕ್ಕೆ ವಿರಾಟರಾಜನ ಸ್ವತ್ತನ್ನು ಆಶ್ರಯಿಸಿ ಪಾಂಡವರು ಬದುಕಿದಂತೆ ಕಾಣುವುದು. ವಸ್ತುಸ್ಥಿತಿ ಹಾಗಲ್ಲ. ಅವರು ವಿರಾಟರಾಜನಿಗಿಂತ ತುಂಬಾ ಬಲಿಷ್ಠರಾದ್ದರಿಂದ ವಾಸ್ತವವಾಗಿ ಇವರೇ ಅವನಿಗಿಂತ ಮಿಗಿಲಾದವರು. ಕ್ಷತ್ರಿಯರಲ್ಲಿ ಬಲದ ಹಿರಿಮೆಯೇ

ಯೋಗ್ಯತೆಯ ಹಿರಿಮೆಯ ತೀರ್ಮಾನಕ್ಕೆ ಮುಖ್ಯ ಆಧಾರ ಎಂಬ ಮಾತು ಈಗಾಗಲೇ ಬಂದಿದೆ : 'ಯೋ ಯ ಏವ ಬಲಜ್ಯೇಷ್ಠಃ ಕ್ಷತ್ರಿಯೇಷು ಸ ಉತ್ತಮಃ' (೨/೧೭). ಅದರಂತೆ ಪಾಂಡವರು ತುಂಬಾ ಬಲಿಷ್ಠರಾದ್ದರಿಂದ ಅದು ಅವರ ಸ್ವತ್ತೇ ಹೊರತು ವಿರಾಟನ ಸ್ವತ್ತಾಗದು.

೩) ಅಲ್ಲದೇ ವೇದ ಬಲ್ಲ ಜ್ಞಾನಿಗಳಿಗೆ ಸಹಜವಾಗಿಯೇ ಇತರರ ಸ್ವತ್ತಿನ ಮೇಲೆ ಅಧಿಕಾರ ತಾನಾಗಿಯೇ ಉಂಟಾಗುವುದು ಎಂಬುದು ಶಾಸ್ತ್ರದ ಮತ್ತೊಂದು ವಿಧಿ.

೪) ಪಾಂಡವರು ಬರೀ ವೇದಬಲ್ಲ ಜ್ಞಾನಿಗಳಷ್ಟೇ ಅಲ್ಲದೇ ವೇದಪ್ರತಿಪಾದ್ಯರಾದ ವಾಯು, ಇಂದ್ರ, ಯಮ ಮತ್ತು ಅಶ್ವಿನೀದೇವತೆಗಳೆಂಬ ದೇವಶ್ರೇಷ್ಠರೇ ಆಗಿರುವರು. ಎಂದ ಮೇಲೆ ಭೂಲೋಕದ ರಾಜರ ಸ್ವತ್ತು ಸಹಜವಾಗಿಯೇ ಅವರ ಅಧೀನ್ಯಕ್ಕೆ ಒಳಪಡುವುದರಿಂದ ಅವರು ವಿರಾಟರಾಜನ ಸ್ವತ್ತನ್ನು ಆಶ್ರಯಿಸಿ ಬದುಕಿದವರಲ್ಲ ಎಂಬುದು ಸ್ಥಿರಪಡುವುದು.

೫) ರಾಜಸೂಯ ಯಾಗದ ಸಂದರ್ಭದಲ್ಲಿ ಭೀಮಸೇನ ಪೂರ್ವದಿಕ್ಕಿನ ದಿಗ್ವಿಜಯಕ್ಕೆಂದು ತೆರಳಿದಾಗ ವಿರಾಟರಾಜನನ್ನು ಸೋಲಿಸಿ ಅವನನ್ನು ತನ್ನ ವಶವರ್ತಿಯನ್ನಾಗಿ ಮಾಡಿಕೊಂಡು ಕಪ್ಪ ಕಾಣಿಕೆಗಳನ್ನು ಸ್ವೀಕರಿಸಿದ ವಿವರ ಈಗಾಗಲೇ ಬಂದಿದೆ(೨೧/೧೯೨). ಎಂದರೆ ಪಾಂಡವರ ಚಕ್ರಾಧಿಪತ್ಯದಲ್ಲಿ ವಿರಾಟ ಒಬ್ಬ ಸಾಮಂತರಾಜಮಾತ್ರ. ಅದರಂತೆ ಅವನೇ ಅವರಿಗೆ ಅಧೀನ–

---

೬. ವೇದವಿದಾಂ ವೇದದ್ರಷ್ಟೃಣಾಮೃಷೀಣಾಮಿತ್ಯರ್ಥಃ। – (ಜ.)

೬. ಯದಿ ಪ್ರಸಾದಮಾತ್ರೇಣ ಸ್ವಾಧಮಸಂಬಂಧಿ ಸ್ವೀಯಂ ಭವತಿ । ಮನುಷ್ಯಾ ತದಾ ಜ್ಞಾನವೃತ್ತಿಪ್ರೇರಕತ್ವೇನ ಶಾಸ್ತ್ರಕರ್ತೃತ್ವೇನ ಸಂಪ್ರದಾಯಪ್ರವರ್ತಕತ್ವೇನ ಚ ಗುರೂಣಾಮನ್ನಾದಿದಾತೃತ್ವೇನ ಸ್ವಾಮಿನಾ ಜನಕತ್ವೇನ ಮಾತಾ-ಪಿತೃಣಾಂ ಸಕಲಪದಾರ್ಥಸ್ವರೂಪಸತ್ತಾಪ್ರದಾತೃಣಾಂ ದೇವೋತ್ತಮಾನಾಂ ಸರ್ವಂ ಸ್ವೀಯಂ ಭವತೀತಿ ಕಿಮು ವಾಚ್ಯಮ್ । ಅತೋ ದೇವೇಶತ್ವಾದ್ವೇದವಿತ್ತ್ವಾತ್ ಸ್ವಬಲಸಂಶ್ರಯಾನ್ನಾನ್ಯಾಶ್ರಯಂ ಚಕ್ರುಃ ಬಲವತಾಮನ್ಯಾ-ಶ್ರಯಸ್ಯ ಕರತುಲ್ಯತ್ವಾದಿತಿ ಭಾವಃ । ತದುಕ್ತಂ ಗೀತಾತಾತ್ಪರ್ಯನಿರ್ಣಯೇ–

ಬಾಹ್ವೋರ್ಬಲೇऽಧಿಕೋ ಯಶ್ಚ ಕ್ಷತ್ರಿಯೋ ವಿದ್ಯಯಾऽಧಿಕಃ ।
ವಿಪ್ರೋ ಭಾಗವತಶ್ಚೈತೌ ಸೇಶಾ ಲೋಕಾಸ್ತಯೋರಿಮೇ ॥ ಇತಿ ।

ನ್ಯಾಯದೀಪೇ ಚ ಸರ್ವಸ್ಯ ತದಧೀನತ್ವಾನ್ನ ಪರೋಪಜೀವನಮಿತಿ ಭಾವ ಇತಿ । ಕೇಚಿತ್ ತು 'ಆರ್ಜಕಾನಾಂ ಷಷ್ಠಾಂಶೋ ವಿಪ್ರಾಣಾಂ ಸ್ವೀಯಮುಚ್ಯತೇ' ಇತಿ ಮಾಘಮಾಹಾತ್ಮ್ಯೇ । ತಂಡುಲಮಾಷಾದಿಕಂ ಸರ್ವಂ ಷಷ್ಠಾಂಶೇನ ಸ್ವೀಯಮಿತ್ಯರ್ಥಃ । ಅನ್ಯಥಾ ಜ್ಞಾನಿನಾಂ ಪರದ್ರವ್ಯಾಪಹಾರೇ ದೋಷೋ ನ ಸ್ಯಾದಿತ್ಯಾಹುಃ । – (ತಾ.)

೬. ವೇದವಿದಾಂ = ವೇದಪ್ರತಿಪಾದ್ಯಭಗವಜ್ಜ್ಞಾನಿನಾಮ್ ... । – (ಸ.)

೬. ಸೇನಾಪತ್ಯಂ ಚ ರಾಜ್ಯಂ ಚ ದಂಡನೇತೃತ್ವಮೇವ ಚ ।
ಸರ್ವಲೋಕಾಧಿಪತ್ಯಂ ಚ ವೇದಶಾಸ್ತ್ರವಿದರ್ಹತಿ ॥ – ಮನುಸ್ಮೃತಿ (೧೨/೧೦೦)

ನಾದವನು, ಎಂದಮೇಲೆ ಅವರು ಆಶ್ರಯಿಸಿದ್ದು ತಮ್ಮ ಸ್ವತ್ತನ್ನೇ ಹೊರತು ವಿರಾಟನ ಸ್ವತ್ತನ್ನಲ್ಲ ಎಂಬುದು ಖಚಿತಪಡುವುದು.

೬) ದುರ್ಯೋಧನ ಅದನ್ನೀಗ ಗೆದ್ದಿರುವುದರಿಂದ ದುರ್ಯೋಧನನ ಸ್ವತ್ತೆಂದು ತಿಳಿಯಬಹುದೇ ಎಂಬು ಶಂಕಿಸುವುದು ಸಹ ಸೂಕ್ತವಲ್ಲ. ಅವನು ಹಾಗೆ ಗೆದ್ದಿರುವುದು ಜೂಜಿನಲ್ಲಿ. ಅದೂ ಕಪಟ ದ್ಯೂತದಲ್ಲಿ. ಎಂದರೆ ಅದಕ್ಕೆ ಮಾನ್ಯತೆ ಇಲ್ಲ ಎಂಬುದು ಈಗಾಗಲೇ ನಿರೂಪಿತ–ವಾಗಿದೆ (೨೨/೧೦೬). ಅದರ ಮೇಲಿನ ಪಾಂಡವರ ಆಧಿಪತ್ಯ ಚ್ಯುತಿ ಹೊಂದಿಲ್ಲ. ಈಗಲೂ ಅದು ಪಾಂಡವರ ಸ್ವತ್ತೇ. ಆದ್ದರಿಂದ ಪಾಂಡವರ ವಿರಾಟನಗರದ ವಾಸ ತಮ್ಮದೇ ನಗರದ ವಾಸವಾಯಿತೇ ಹೊರತು ಮತ್ತೊಬ್ಬರ ಬಳಿಯ ವಾಸವಾಗಲಿಲ್ಲ ಎಂದು ಸ್ಫುಟಪಡುವುದು.

೭) ಇನ್ನು ವಾಯುದೇವರ ಅವತಾರರಾದ ಭೀಮಸೇನನಂತೂ ಇಡೀ ಜಗತ್ತನ್ನೇ ಧಾರಣೆ ಮಾಡಿದ ಪ್ರಾಣಶಕ್ತಿ ಕೂರ್ಮರೂಪದಿಂದ ಬ್ರಹ್ಮಾಂಡವನ್ನು ಹೊತ್ತಿದ್ದರೆ, ಪ್ರತಿಯೊಬ್ಬರ ಒಳಗೂ ಶ್ವಾಸೋಛ್ವಾಸಗಳ ಪ್ರವರ್ತಕ ದೇವತೆಯಾಗಿರುವನು, ಜಗತ್ಪ್ರಾಣನಾಗಿರುವನು. ಆದ್ದರಿಂದ ರುದ್ರಾದಿ ದೇವತೆಗಳೂ ಅವನನ್ನೇ ಅವಲಂಬಿಸಿರುವಾಗ ಸಾಮಾನ್ಯನಾದ ವಿರಾಟನನ್ನು ಅವರೆಂತು ಆಶ್ರಯಿಸಿಯಾರು ಎಂಬ ವಿವರ **'ದೇವೇಶಾನಾಂ ಚ ಕಿಂಪುನಃ'** ಎಂಬ ಮಾತಿನಲ್ಲಿ ಬಂದಿದೆ ಎಂದು ತಿಳಿಯಬೇಕು.

೮) ಗೀತೆಯಲ್ಲೂ ದೇವತೆಗಳು ನೀಡುವ ಅನ್ನವನ್ನೇ ಉಪಜೀವಿಸಿ ಮಾನವರು ಬದುಕಿರುವ ವಿವರ ಸ್ಪಷ್ಟವಾಗಿ * ಬಂದಿದೆ.

ಅರ್ಜುನಾದಿಗಳ ವೇಷಗಳ ಹಿನ್ನೆಲೆ

ಶಾಪಾದೇವಾರ್ಜುನಃ ಷಂಡವೇಷೋಽಭೂನ್ನಕುಲಸ್ತಥಾ।
ಕ್ಷತ್ರಿಯಾನಂತರತ್ವಾತ್ ತು ಸೂತಜಾತೇಸ್ತಥಾಽಭವತ್ ॥ ೭ ॥

ಅ: ಶಾಪದ ಕಾರಣದಿಂದಾಗಿಯೇ ಅರ್ಜುನ ಬೃಹನ್ನಳೆಯ ವೇಷವನ್ನು ಧರಿಸಿದ. ಅದರಂತೆ ನಕುಲ ಕ್ಷತ್ರಿಯ ಜಾತಿಯ ಅನಂತರದ ಜಾತಿ ಎಂಬ ಕಾರಣದಿಂದ ಸೂತಜಾತಿಗೆ ಸೇರಿದ ಅಶ್ವಪಾಲಕನಾದ.

---

* ಇಷ್ಟಾನ್ ಭೋಗಾನ್ ಹಿ ವೋ ದೇವಾ ದಾಸ್ಯಂತೇ ಯಜ್ಞಭಾವಿತಾಃ।
ತೈರ್ದತ್ತಾನಪ್ರದಾಯೈಭ್ಯೋ ಯೋ ಭುಂಕ್ತೇ ಸ್ತೇನ ಏವ ಸಃ ॥ – ಗೀತಾ (೩/೧೨)

ವಿ: ೧) ಅರ್ಜುನನು ಬೃಹನ್ನಳೆಯ ವೇಷವನ್ನು ಧರಿಸಲು ಅವನಿಗೆ ಇಂದ್ರಲೋಕದಲ್ಲಿ ಉರ್ವಶಿ ನೀಡಿದ ಶಾಪ ಕಾರಣವಾಯಿತು (೨೨/೧೪೯).

೨) ಕ್ಷತ್ರಿಯರು ಆಪತ್ಕಾಲದಲ್ಲಿ ಬೇರೆ ವರ್ಣದ ಧರ್ಮವನ್ನು ಆಶ್ರಯಿಸುವಾಗಲೂ ತಮ್ಮ ಅನಂತರದ ವರ್ಣದ ಧರ್ಮವನ್ನೇ ಮೊದಲಿಗೆ ಆಶ್ರಯಿಸಬೇಕೆಂಬುದು ಮುಖ್ಯವಿಧಿ (೨೯/೨೭). ಅದರಂತೆ ನಕುಲ ಕ್ಷತ್ರಿಯ ಜಾತಿಯ ಅನಂತರದ ಸೂತಜಾತಿಯನ್ನು ಆಶ್ರಯಿಸಿ ಅಶ್ವಪಾಲಕನಾದ ಎಂದರ್ಥ.

೩) ಸೂತಜಾತಿ ಸಂಕರಜಾತಿ, ಕ್ಷತ್ರಿಯ ಪುರುಷನಿಂದ ಬ್ರಾಹ್ಮಣ ಸ್ತ್ರೀಯಲ್ಲಿ ಜನಿಸಿದವನು ಸೂತನೆನಿಸುವನು. ಇದು ಪ್ರತಿಲೋಮಜಾತಿ. ಪ್ರತಿಲೋಮಜಾತಿಗಳಲ್ಲಿ ದ್ವಿಜವರ್ಣಕ್ಕೆ ಸೇರುವ ಏಕಮಾತ್ರ ಜಾತಿ ಎಂಬುದು ಸೂತಜಾತಿಯ ವಿಶೇಷ. ವರ್ಣದ ತಾರತಮ್ಯದಲ್ಲಿ ಅವನ ಸ್ಥಾನ ಕ್ಷತ್ರಿಯರ ಅನಂತರದ್ದು, ವೈಶ್ಯನಿಗಿಂತ ಮೇಲಿನದು. ಆದ್ದರಿಂದಲೇ ನಕುಲ ಸೂತಜಾತಿಯ ಅಶ್ವಪಾಲಕನಾದ ಎಂದರ್ಥ. ಮಹಾಭಾರತದಲ್ಲೂ ಸ್ಪಷ್ಟವಾಗಿ ಈ ವಿವರ ಬಂದಿರುವುದನ್ನು ಗಮನಿಸಬೇಕು.

೪) ಭೀಮಾದಿಗಳು ಹಾಗೆ ಮೊದಲು ಅಂತಹ ವೇಷವನ್ನೇ ಧರಿಸಬೇಕಾದದ್ದು ವಿಹಿತವಾಗಿದ್ದರೂ, ಹಿಂದೆ ಹೇಳಿದಂತೆ ವಿಶೇಷಕಾರಣಗಳಿಂದಾಗಿ ಭೀಮ ಸೂದನಾಗಿಯೂ, ಅರ್ಜುನ ಬೃಹನ್ನಳೆಯಾಗಿಯೂ ಆದರು ಎಂದು ತಿಳಿಯುವುದು.

---

೭. ಕ್ಷತ್ರಿಯಾನಂತರತ್ವಾತ್ತು ಸೂತಜಾತೇರಿತ್ಯತ್ರ ರಥಾಶ್ವಯಂತಾ ಸೂತಃ। ತಸ್ಮಾದಶ್ವಪಾಲಃ ಸೂತ ಇತಿ ಭಾವಃ ॥ – (ವಾ.)

೭. ಭೀಮಾರ್ಜುನೌ ನಿಮಿತ್ತಾತ್ ನೀಚವೇಷಧಾರಿಣೌ ಬಭೂವತುಃ। ನಕುಲಃ ಸೂತಜಾತೇಃ ಕ್ಷತ್ರಿಯಾನಂತರತ್ವಾತ್ ತಥಾ ಸೂತಜಾತಿರಭವತ್। ನಕುಲಃ ಸ್ವಸ್ಯ ಕ್ಷತ್ರಿಯ ಸೇವಾಧಿಕಾರಾರ್ಥಂ ಸ್ವಜಾತೇಃ ಕಿಂಚಿದೂನಜಾತಿವೇಷೋಽಭೂದಿತಿ ಭಾವಃ। – (ಜ.)

೭. ಬ್ರಾಹ್ಮಣ್ಯಾಂ ಕ್ಷತ್ರಿಯಾತ್ ಸೂತಃ ಪ್ರಾತಿಲೋಮ್ಯೇನ ಜಾಯತೇ । ಕ್ಷತ್ರಿಯಾಣಾಮಸೌ ಧರ್ಮಂ ಕರ್ತುಮರ್ಹತ್ಯಶೇಷತಃ । ಕಿಂಚಿತ್ ಕ್ಷತ್ರಜಾತಿಭ್ಯೋಽನ್ಯೂನತಾ ತಸ್ಯ ಜಾಯತೇ । ವೈಶ್ಯಧರ್ಮೇಷು ತಸ್ಯಾಧಿಕಾರಃ ಕ್ವಚಿದ್ಭವೇದಿತಿ ವಚನಾತ್ । – (ಜ.)

೭. ಬ್ರಾಹ್ಮಣ್ಯಾಂ ಕ್ಷತ್ರಿಯಾಜ್ಜಾತಃ ಸೂತೋ ಭವತಿ ಪಾರ್ಥಿವ ।
ಪ್ರಾತಿಲೋಮ್ಯೇನ ಜಾತಾನಾಂ ಸ ಹ್ಯೇಕೋ ದ್ವಿಜ ಏವ ತು ॥ ...
ಕ್ಷತ್ರಿಯಾದವರಂ ವೈಶ್ಯಾದ್ ವಿಶಿಷ್ಟಮಿತಿ ಚಕ್ಷತೇ ॥ – ಭಾರತ (೪/೧೬/೫೧)

ಅಕ್ಷಾನ್ ಪ್ರಯೋಕ್ತುಂ ಕುಶಲೋಽಸ್ಮಿ ದೇವಿನಾಮ್ । (ಯುಧಿಷ್ಠಿರನ ವಚನ) – ಭಾರತ (ವಿರಾಟ. ೭/೧೨)

ಸ ಹ್ಯಕ್ಷಹೃದಯಜ್ಞಸ್ತಾನ್ ಕ್ರೀಡಯಾಮಾಸ ಪಾಂಡವಃ ॥ – ಭಾರತ (ವಿರಟ. ೧೩/೫)

೫) ಧರ್ಮರಾಜ ಯತಿ ವೇಷ ಧರಿಸಿದ್ದಕ್ಕೆ ಕಾರಣ ಮುಂದೆ ಬಂದಿದೆ (ಶ್ಲೋ. ೯).

೬) ನಕುಲ ಮಾತ್ರ ಆಪದ್ಧರ್ಮಕ್ಕೆ ವಿಹಿತ ರೀತಿಯಲ್ಲಿ ಕ್ಷತ್ರಿಯ ಜಾತಿಗೆ ಅನಂತರದಲ್ಲಿ ತುಂಬ ಹತ್ತಿರದ ಜಾತಿಯೆನಿಸಿದ ಸೂತ ಜಾತಿಗೆ ಉಚಿತವಾದ ಅಶ್ವಪಾಲಕ ವೇಷವನ್ನು ಧರಿಸಿದ.

೭) ದ್ವಿಜವರ್ಗಕ್ಕೆ ಸೇರುವುದರಿಂದ ಈ ಜಾತಿಗೆ ವೇದಾಧ್ಯಯನಾದಿ ಅರ್ಹತೆಯೂ ಇರುವುದು ಮತ್ತೊಂದು ವಿಶೇಷ. ಕರ್ಣ ಅದರಿಂದಾಗಿಯೇ ಸಕಲಶಸ್ತ್ರಾಸ್ತ್ರಗಳನ್ನು ಅಧ್ಯಯನ ಮಾಡಿದ ವಿವರ ನಿರೂಪಿತವಾಗಿದೆ ಎಂದು ಗಮನಿಸಬೇಕು (೧೧/೧೫೯).

ಸೂತಸ್ಯಾನಂತರತ್ವಾತ್ ತು ವೈಶ್ಯಜಾತೇಸ್ತಥಾऽಭವತ್।
ಸಹದೇವೋ ವೈಶ್ಯಜಾತಿರ್ಗೋಪಾಲಸ್ತೇಷು ಚೋತ್ತಮಃ ॥ ೮ ॥

ತತೋ ಗೋಪಾಲತಾಮಾಪ ಯತಿಃ ಪೂಜ್ಯೋऽಖಿಲೈರ್ಯತಃ।
ಯತಿರಾಸೀದ್ಧರ್ಮಜೋऽತಃ ಸೋऽಭ್ಯಾಸಾರ್ಥಂ ಸದೈವ ಚ।
ಅಭ್ಯಾಸಕ್ಕೋऽಭವತ್ ಪಶ್ಚಾದ್ದರ್ಶಯಿಷ್ಯನ್ ಸ್ವಶಿಷ್ಟತಾಮ್ ॥ ೯ ॥

ಅ: ಸೂತನ ಅನಂತರ ವೈಶ್ಯ ಜಾತಿಯಾದ್ದರಿಂದ ಸಹದೇವನು ವೈಶ್ಯ ಜಾತಿಯವನಾದ. ಗೋಪಾಲಕ ವೈಶ್ಯರಲ್ಲಿ ಮಿಗಿಲಾದವನು. ಅದಕ್ಕೆಂದೇ ಅವನು ಗೋಪಾಲ ವೃತ್ತಿಯನ್ನೇ ಅವಲಂಬಿಸಿದ. ಯತಿಯು ಸರ್ವರಿಂದಲೂ ಪೂಜ್ಯನಾದ್ದರಿಂದ ಧರ್ಮರಾಜ ಯತಿವೇಷವನ್ನು ಧರಿಸಿದ. ಅದರಂತೆ ಅವನು ಅಭ್ಯಾಸಕ್ಕೋಸ್ಕರ ಸದಾಕಾಲ ಜೂಜಿನಲ್ಲೇ ನಿರತನಾಗಿದ್ದ. ಬಳಿಕ ಅದರಲ್ಲಿ ತನ್ನ ನೈಪುಣ್ಯವನ್ನು ತೋರಿಸುವುದು ಅವನ ಉದ್ದೇಶವಾಗಿತ್ತು.

ವಿ: ೧) ಸಹದೇವ ಗೋಪಾಲಕನಾದದ್ದು ಹಿಂದೆ ಹೇಳಿದ ಕಾರಣದಂತೆ ಸೂತಜಾತಿಯ ಅನಂತರ ವೈಶ್ಯಜಾತಿಯ ಸ್ಥಾನವಾಗಿರುವುದೇ ಆಗಿತ್ತು.

೨) ಹಿರಿಯರು ಆಪತ್ಕಾಲದಲ್ಲಿ ವಹಿಸುವ ವೃತ್ತಿಯ ಅನಂತರದ ವೃತ್ತಿಯನ್ನು ಅವಲಂಬಿಸ–ಬೇಕಾದದ್ದು ಕಿರಿಯರಿಗೆ ವಿಹಿತ ಎಂಬುದು ಶಾಸ್ತ್ರವಿಧಿ. ನಕುಲ ಸೂತಜಾತಿಯ ಅಶ್ವಪಾಲ ವೃತ್ತಿಯನ್ನು ಆಶ್ರಯಿಸಿದ್ದರಿಂದ ಸಹದೇವ ಅದಕ್ಕಿಂತ ಕೆಳಗಿನದ್ದಾದ ವೈಶ್ಯ ಜಾತಿಯ ವೃತ್ತಿಯನ್ನು ಆಶ್ರಯಿಸಿದ ಎಂದರ್ಥ.

೩) ವೈಶ್ಯ ಜಾತಿಯಲ್ಲೂ ಸಹ ಕೃಷಿ, ವಾಣಿಜ್ಯ, ಗೋರಕ್ಷಣೆ ಮೊದಲಾದ ಅನೇಕ ಬಗೆಯ ವೃತ್ತಿಗಳಿದ್ದರೂ ಅದರಲ್ಲಿ ಗೋಪಾಲನ ವೃತ್ತಿ ಉಳಿದ ವೃತ್ತಿಗಳಿಗಿಂತ ಮಿಗಿಲಾದದ್ದು. ಅದಕ್ಕೆಂದೇ ಸಹದೇವ ಕೃಷಿ ಮೊದಲಾದವುಗಳನ್ನು ಆರಿಸಿಕೊಳ್ಳದೇ ಗೋಪಾಲಕನ ವೃತ್ತಿಯನ್ನೇ ಆರಿಸಿಕೊಂಡ ಎಂಬುದು ಇಲ್ಲಿಯ ನಿರೂಪಣೆ.

೪) ಇನ್ನು ಧರ್ಮರಾಜ ಯತಿವೇಷವನ್ನು ಧರಿಸಿದ ವಿಚಾರ. ಅವನು ಶಾಸ್ತ್ರೋಕ್ತವಾಗಿ ರಾಜಸೂಯಯಾಗವನ್ನು ಆಚರಿಸಿದ ಚಕ್ರವರ್ತಿ. ಅಂತಹ ಚಕ್ರವರ್ತಿಯು ಬ್ರಾಹ್ಮಣರಿಂದಲೂ ಸಹ ವಿಶೇಷ ರೀತಿಯಲ್ಲಿ ಗೌರವಿಸಲ್ಪಡಬೇಕು ಎಂಬ ವಿಧಿ *ಬೃಹದಾರಣ್ಯಕೋಪನಿದ್ಭಾಷ್ಯದಲ್ಲಿದೆ. ಇನ್ನು ಇತರ ಸಕಲ ಕ್ಷತ್ರಿಯರಿಗಿಂತಲೂ ಅವನೇ ಮಿಗಿಲು ಎಂಬುದಂತು ಸುನಿಶ್ಚಿತ. ಅದಕ್ಕೆಂದು ಧರ್ಮರಾಜ ಯತಿವೇಷವನ್ನು ಧರಿಸಿದ.

೫) ಬೇರೆ ಯಾವ ವೇಷವನ್ನು ಧರಿಸಿದ್ದರೂ ಸಹ ಅವನು ವಿರಾಟನಿಗೆ ಆಶ್ರಯದಾತನೆಂಬ ಮೇಲ್ನೋಟದ ಕಾರಣದಿಂದ ನಮಸ್ಕಾರವನ್ನು ಸಲ್ಲಿಸಬೇಕಿತ್ತು ಅದು ಅವನಿಗಿಂತ ಮಿಗಿಲಾಗಿ ವಿರಾಟನಿಗೆ ಶ್ರೇಯೋಹಾನಿಗೆ ಕಾರಣ. ಅವನಿಗೆ ಅಶ್ರೇಯಸ್ಸಾಗದಿರಲಿ ಎಂಬ ಕೃಪಾದೃಷ್ಟಿ–ಯಿಂದಲೂ ಧರ್ಮರಾಜ ಯತಿವೇಷವನ್ನು ಧರಿಸಿದ. ಯತಿವೇಷ ಅತ್ಯಂತ ಪೂಜ್ಯವಾದ ವೇಷವಾದ್ದರಿಂದ ಅವನು ವಿರಾಟನಿಗೆ ನಮಸ್ಕರಿಸುವ ಸಂದರ್ಭ ಒದಗದೇ ಅವನ ಧರ್ಮಕ್ಕೂ ಸಾಧಕವಾಯಿತು. ವಿರಾಟನ ಶ್ರೇಯಸ್ಸಿಗೂ ಬಾಧಕವಾಗದಂತಾಯಿತು ಎಂದರ್ಥ.

೬) ಅವನು ದ್ಯೂತದಲ್ಲಿ ತೊಡಗಿದ್ದು ಮಾತ್ರ ಯತಿಧರ್ಮವೇನಲ್ಲ. ಆದರೂ ಅವನು ಅದರಲ್ಲಿ ತೊಡಗಲು ಮತ್ತೊಂದು ವಿಶೇಷ ಕಾರಣವಿದ್ದಿತು. ಜೂಜಿನಲ್ಲಿ ಪರಾಭವಗೊಂಡು ವನವಾಸಕ್ಕೆ ತೆರಳಿದ್ದ ಅವನು ವನವಾಸಕಾಲದಲ್ಲಿ ನಳ ದಮಯಂತಿಯರ ಕಥೆಯನ್ನು ಕೇಳಿದ

---

೯. ಸೋಽಭ್ಯಾಸಾರ್ಥಮಿತ್ಯತ್ರ ಪಶ್ಚಾತ್ = ಅಜ್ಞಾತವಾಸಾನಂತರಂ ಸ್ವಶಿಷ್ಟತಾಂ = ಸ್ವಸ್ಯ ದ್ಯೂತಕ್ರೀಡಾಸು ಶ್ರೇಷ್ಠತಾಂ ''ಶಿಷ್ಟೋ ವಿಶಿಷ್ಟಃ ಶ್ರೇಷ್ಠ'' ಇತಿ ಪರ್ಯಾಯಃ। ದರ್ಶಯಿಷ್ಯನ್ ಅಭ್ಯಾಸಾರ್ಥಂ = ಸ್ವಾಭ್ಯಾಸಕೌಶಲ-ಪ್ರದರ್ಶನಾರ್ಥಂ ಅಕ್ಷಾಸಕ್ತೋಽಭವದಿತಿ ಯೋಜನಾ। ಅಕ್ಷವಿದ್ಯಾಯಾಮತೀವಕುಶಲಃ ಶಕುನಿನಾ ತು ಛದ್ಮನೈವ ಜಿತಮಿತಿ ಅಜ್ಞಾತವಾಸಾನಂತರಂ ವಿರಾಟಂ ಪ್ರತಿ ದರ್ಶಯಿತುಮಿತಿ ಭಾವಃ ॥ – (ವಾ.)

೯. ಪಶ್ಚಾದಜ್ಞಾತವಾಸಾನಂತರಮ್ । ಸ್ವಸ್ಯ ದ್ಯೂತೇ ಶಿಷ್ಟತಾಂ ನಿಪುಣತಾಂ ಪ್ರಾಗನ್ಯಾಯತೋ ಜಿತ ಇತಿ ಸೂಚಯಿತುಂ ದರ್ಶಯಿಷ್ಯನ್ನಿತ್ಯರ್ಥಃ ॥ – (ತಾ.)

೯. ಅನೇನ ಶಕುನಿನಾ ಪ್ರಥಮತೋ ದೇವನಸಮಯೇ ಧರ್ಮರಾಜೋ ದ್ಯೂತಂ ಸಮ್ಯಗ್ ನಾಜಾನಾದಿತಿ ಸೂಚಿತಮ್ । ಅತ ಏವಾರಣ್ಯಪರ್ವಣಿ - 'ಭಗವನ್ನಕ್ಷಹೃದಯಂ ಜ್ಞಾತುಮಿಚ್ಛಾಮಿ ತತ್ತ್ವತಃ ।' ಇತಿ ಬೃಹದಶ್ವ-ಪ್ರಾರ್ಥನ ಪೂರ್ವಕಂ - 'ತತೋಽಕ್ಷಹೃದಯಂ ಪ್ರಾದಾತ್ ಪಾಂಡವಾಯ ಮಹಾತ್ಮನೇ । ಲಬ್ಧ್ವಾಚ ಪಾಂಡವೋ ರಾಜಾ ವಿಶೋಕಃ ಸಮಪದ್ಯತ ।' ಇತಿ ದ್ಯೂತೇ ಪರಾಜಯಾನಂತರಂ ಅಭ್ಯಾಸಕಥನಾತ್ । ಅನ್ಯಥಾಽಭ್ಯಾಸಪದ-ವೈಯರ್ಥ್ಯಾಪತ್ತೇಃ । ಲೋಕೇ ತಾವದಭ್ಯಾಸೇಽಜ್ಞಾತಸ್ಯೈವಾಭ್ಯಾಸದರ್ಶನಾತ್ । 'ಶಕುನಿರ್ಬುದ್ಧಿಪೂರ್ವಂ ಹಿ ಕುಂತೀಪುತ್ರಂ ಸಮಾಹ್ವಯತ್ । ಅನಕ್ಷಜ್ಞಂ ಮತಾಕ್ಷಃ ಸನ್ ಕ್ಷತ್ರವೃತ್ತೇ ಸ್ಥಿತಂ ಶುಚಿಂ' ಇತ್ಯುದ್ಯೋಗ ಪರ್ವಣಿ ಶಕುನಿನಾ ಸಾಕಂ ದೇವನ ಸಮಯೇ ಅಕ್ಷಾನಜ್ಞತ್ವೋಕ್ತೇಃ । – ಪ್ರಮಾಣಸಂಗ್ರಹ

* ಶ್ರೇಯಸೀ ಸರ್ವಜಾತಿಭ್ಯಃ ಕ್ಷತ್ರಜಾತಿರಿತಿ ಶ್ರುತಿಃ ।
ನೈವ ಕ್ಷತ್ರಾತ್ ಪರಾ ಜಾತಿರ್ಬ್ರಹ್ಮಜಾತಿಂ ವಿನಾ ಕ್ವಚಿತ್ ।
ಬ್ರಾಹ್ಮಣಾಚ್ಚ ಪರೋ ರಾಜಾ ರಾಜಸೂಯಾಶ್ವಮೇಧಯೋಃ ।
ಉಪಾಸ್ತೇ ರಾಜಸೂಯೇಽತೋ ಬ್ರಾಹ್ಮಣೋ ರಾಜಸೂಯಿನಮ್ ।
ಆಸೀನ ಆಸನಾಧಸ್ತಾತ್ ತಥಾಽಪಿ ಬ್ರಾಹ್ಮಣೋ ಗುರುಃ । – ಬೃಹದ್ಭಾಷ್ಯೋದಾಹೃತವಾಮನಪುರಾಣವಚನ

ನಂತರ ಅದನ್ನು ತಿಳಿಸಿದ ಬೃಹದಶ್ವ ಮುನಿಗಳಿಂದ ಅಕ್ಷವಿದ್ಯೆಯನ್ನು *ಅಭ್ಯಾಸ ಮಾಡಿದ್ದ. ಹಾಗೆ ಅಭ್ಯಾಸ ಮಾಡಿದ್ದ ವಿದ್ಯೆಯನ್ನು ಈ ಅಜ್ಞಾತವಾಸಕಾಲದಲ್ಲಿ ವಿಶೇಷವಾಗಿ ಪ್ರತಿನಿತ್ಯದ ಅಭ್ಯಾಸವನ್ನಾಗಿ ಮಾಡಿಕೊಂಡು ಅಜ್ಞಾತವಾಸ ಮುಗಿದ ನಂತರ ಮತ್ತೊಮ್ಮೆ ಜೂಜಾಟ ನಡೆದಲ್ಲಿ ತಾನೇ ಗೆಲ್ಲುವ ಮೂಲಕ ತನ್ನ ಕೌಶಲವನ್ನು ಮೆರೆಯಬೇಕು ಎಂಬುದು ಅವನ ಉದ್ದೇಶವಾಗಿತ್ತು. ಅದರಿಂದಾಗಿ ಜೂಜಾಟದ ನಿತ್ಯವಿಧಿಯನ್ನು ಮಾಡಿಕೊಂಡಿದ್ದನೇ ಹೊರತು ಅದರ ಮೇಲಿನ ಚಟದಿಂದಾಗಿ ಅಲ್ಲ ಎಂದು ತಿಳಿಯಬೇಕು.

೭) ಶಕುನಿಯೊಂದಿಗೆ ಜೂಜಾಟವಾಡಿದಾಗ ಅವನಿಗೆ ಅದರಲ್ಲಿ ಎಷ್ಟುಮಾತ್ರಕ್ಕೂ ಪರಿಣತಿ ಇರಲಿಲ್ಲ ಎಂಬ ವಿಚಾರ ಮಹಾಭಾರತದಲ್ಲೇ ಬಂದಿದೆ – 'ದ್ಯೂತಪ್ರಿಯಶ್ಚ ಕೌಂತೇಯೋ ನ ಸ ಜಾನಾತಿ ದೇವಿತುಮ್' (ಸಭಾ. ೪೮/೧೯).

ದ್ರೌಪದಿಯ ಸೈರಂಧ್ರಿವೇಷದ ಮರ್ಮ

ಭೀಮಸೇನಸಧರ್ಮಾರ್ಥಂ ಶೂದ್ರಾ ಸೈರಂಧ್ರಿಕಾऽಭವತ್।
ದ್ರೌಪದೀ ಭರ್ತೃಸಾಧರ್ಮ್ಯಂ ಸ್ತ್ರೀಣಾಂ ಧರ್ಮೋ ಯತಃ ಸದಾ ॥ ೧೦ ॥

ಅ: ಭೀಮಸೇನನಿಗೆ ಸಹಧರ್ಮಿಣಿ ಎನ್ನಿಸುವ ಉದ್ದೇಶದಿಂದ ದ್ರೌಪದಿ ಶೂದ್ರ ಜಾತಿಯ ಸೈರಂಧ್ರಿ ವೇಷವನ್ನು ಧರಿಸಿದಳು. ಸ್ತ್ರೀಯರಿಗೆ ಪತಿಗೆ ಸಮಾನ ಧರ್ಮಿಣಿ ಎನ್ನಿಸುವುದೇ ಸದಾ ಧರ್ಮವಾಗಿದೆಯಲ್ಲವೇ!

ವಿ: ೧) ಇಲ್ಲಿ ದ್ರೌಪದಿಯು ಸೈರಂಧ್ರಿಯ ವೇಷವನ್ನು ಧರಿಸಿದ್ದಕ್ಕೆ ಕಾರಣ ನೀಡಲಾಗಿದೆ. ದ್ರೌಪದಿಯೂ ಸಹ ಮೇಲೆ ಹೇಳಿದ ಆಪದ್ಧರ್ಮ ನಿಯಮದಂತೆ ಕ್ಷತ್ರಿಯಸ್ತ್ರೀಯ ಅನಂತರದ ವೇಷವಾದ ಸೂತಸ್ತ್ರೀ, ವೈಶ್ಯಸ್ತ್ರೀ ಮೊದಲಾದವುಗಳನ್ನು ಧರಿಸಬೇಕಿತ್ತು. ಆದರೆ ಹಾಗೆ ಧರಿಸದೇ ಶೂದ್ರ ವೇಷವನ್ನು ಧರಿಸಿದ್ದೇಕೆ ಎಂಬ ಶಂಕೆಗೆ ಇದು ಉತ್ತರ. ಸ್ತ್ರೀಯರಿಗೆ ವಿಹಿತವಾದ ಮುಖ್ಯ ನಿಯಮ ತನ್ನ ಪತಿಗೆ ಸಮಾನವೆನ್ನಿಸುವ ಧರ್ಮವನ್ನು ಸ್ವೀಕರಿಸುವುದೇ ಹೊರತು ಮೇಲೆ ಹೇಳಿದಂತೆ ಜಾತಿ ಧರ್ಮವಲ್ಲ. ಇಲ್ಲಿ ದ್ರೌಪದಿಯ ಪತಿ ಹಿಂದೆ ಸ್ಪಷ್ಟಪಡಿಸಿರುವಂತೆ ಭೀಮಸೇನನೇ

---

* ತತೋ ಹೃಷ್ಟಮನಾ ರಾಜಾ ಬೃಹದಶ್ವಮುವಾಚ ಹ।
ಭಗವನ್ನಕ್ಷಹೃದಯಂ ಜ್ಞಾತುಮಿಚ್ಛಾಮಿ ತತ್ತ್ವತಃ ॥
ತತೋऽಕ್ಷಹೃದಯಂ ಪ್ರಾದಾತ್ ಪಾಂಡವಾಯ ಮಹಾತ್ಮನೇ।
ದತ್ತ್ವಾ ಚಾಶ್ವಶಿರೋऽಗಚ್ಛದುಪಸ್ಪೃಶ್ಯಂ ಮಹಾತಪಾಃ ॥ – ಭಾರತ (ವನ. ೭೯/೨೦,೨೧)

೧೦. ನನು ದ್ರೌಪದೀ ಗಂಧಕರ್ತ್ರೀ ಜಾತೇತ್ಯುಕ್ತಂ ತತ್ರ ಬ್ರಾಹ್ಮಣೀತ್ವೇऽಪಿ ಸೈರಂಧ್ರೀವೇಷಸ್ಯ ಸಂಪಾದಯಿತುಂ ಶಕ್ಯತ್ವಾಚ್ಛೂದ್ರಾ ಕಿಮರ್ಥಮಭವದಿತ್ಯತ ಆಹ – ಭೀಮೇತಿ। ಸೈರಂಧ್ರಿಕಾऽಪಿ ದ್ರೌಪದೀ ಭೀಮಸೇನಸಮಾನ-ಧರ್ಮಾಚರಣಾರ್ಥಂ ಶೂದ್ರಾ ಶೂದ್ರಜಾತಿರಭವತ್ ॥ – (ವ.)

ಹೊರತು ಇತರರಲ್ಲ. ಇಲ್ಲಿ ಭೀಮಸೇನ ಸ್ವೀಕರಿಸಿದ್ದು ಶೂದ್ರ ವೇಷವನ್ನಾದ್ದರಿಂದ ದ್ರೌಪದಿ ಅದಕ್ಕೆ ಅನುಗುಣವಾಗಿ ತಾನೂ ಸಹ ಶೂದ್ರ ವೇಷವನ್ನೇ ಧರಿಸಿದಳು.

೨) ಶೂದ್ರ ಸ್ತ್ರೀ ವೃತ್ತಿಯಲ್ಲೂ ಸಹ ಅನೇಕ ಬಗೆಯಿದ್ದರೂ, ಸೈರಂಧ್ರಿ ಎಂಬುದು ಗಂಧಾದಿಗಳನ್ನು ಸಿದ್ಧಪಡಿಸಿಕೊಡುವ ಸೇವಕಿಯ ವೇಷ, ಅದು ಅತ್ಯುತ್ತಮವಾದುದು. ಅದಕ್ಕೆಂದೇ ದ್ರೌಪದಿ ಸೈರಂಧ್ರಿ ವೇಷವನ್ನು ಧರಿಸಿದ್ದು ಎಂದರ್ಥ.

೩) ಹೀಗೆ ಪ್ರತಿ ಸಂದರ್ಭದಲ್ಲೂ ದ್ರೌಪದಿ ಭೀಮಪತ್ನಿ ಎಂಬುದು ಸ್ಫುಟಪಡುವುದು ಮತ್ತೊಂದು ವಿಶೇಷ ಎಂಬುದನ್ನು ಗಮನಿಸಬೇಕು.

೪) ಅಜ್ಞಾತವಾಸವನ್ನು ಆರಂಭಿಸುವ ಮುನ್ನ ಧರ್ಮರಾಜ ದ್ರೌಪದಿಯು ತಳೆಯಬೇಕಾದ ವೇಷದ ಬಗ್ಗೆ ಜಿಜ್ಞಾಸೆ ನಡೆಸುತ್ತಾ ದ್ರೌಪದಿ ನಮಗೆಲ್ಲಾ ತಾಯಿಯಿದ್ದಂತೆ, ಹಿರಿಯ ಸೋದರಿ–ಯಿದ್ದಂತೆ, ಈಕೆಯನ್ನು ಗೌರವದಿಂದ ಕಾಣಬೇಕಾದದ್ದು ತಮ್ಮ ಕರ್ತವ್ಯ ಎನ್ನುವುದು ತುಂಬಾ ಗಮನಾರ್ಹ*. ಇದರಿಂದ ಅರ್ಜುನಾದಿಗಳೆಲ್ಲಾ ದ್ರೌಪದಿಯನ್ನು ಪತ್ನಿ ಎಂದು ಕಾಣದೇ ಪೂಜ್ಯ–ಳೆಂದೇ ತಿಳಿದಿದ್ದರು ಎಂದಾಗುವುದು.

೫) ಆ ವೇಳೆಗೆ ಅವರಲ್ಲಿ ಶಚಿ ಮೊದಲಾದ ಇತರ ದೇವತಾಸ್ತ್ರೀಯರ ಆವೇಶ ಮರೆ–ಯಾಗುತ್ತಾ ಸಾಗಿದ್ದರಿಂದ ಅರ್ಜುನಾದಿಗಳಿಗೆ ದ್ರೌಪದಿ ಪತಿತ್ವ ಸಹಜವಾಗಿಯೇ ದೂರವಾಗಿತ್ತು ಎಂದರ್ಥ, ಆಕೆ ಮುಖ್ಯವಾಗಿ ಭಾರತಿಯೇ ಆಗಿದ್ದರಿಂದ ಆಕೆಯ ನಿಯತ ಪತಿಯಾದ ಭೀಮನಿಗೆ ಅನುಗುಣವಾಗಿ ಶೂದ್ರಸ್ತ್ರೀ ವೇಷವನ್ನೇ ಧರಿಸಿದಳು ಎಂದು ತಾತ್ಪರ್ಯ.

ಜೀಮೂತನ ವಧ

ಅಥಾಜಗಾಮ ಮಲ್ಲಕಃ ಸಮಸ್ತಭೂಮಿಮಂಡಲೇ।
ವರೇಣ ಯೋಽಜಿತೋ ಜಯೀ ಶಿವಸ್ಯ ಸಂಜಗರ್ಜ ಚ ॥ ೧೧ ॥

---

* ಇಯಂ ಹಿ ನಃ ಪ್ರಿಯಾ ಭಾರ್ಯಾ ಪ್ರಾಣೇಭ್ಯೋಽಪಿ ಗರೀಯಸೀ।
ಮಾತೇವ ಪರಿಪಾಲ್ಯಾ ಚ ಪೂಜ್ಯಾ ಜ್ಯೇಷ್ಠೇವ ಚ ಸ್ವಸಾ ॥
ಕೇನ ಸ್ಮ ದ್ರೌಪದೀ ಕೃಷ್ಣಾ ಕರ್ಮಣಾ ವಿಚರಿಷ್ಯತಿ। ...
ಸುಕುಮಾರೀ ಚ ಬಾಲಾ ರಾಜಪುತ್ರೀ ಯಶಸ್ವಿನೀ।
ಪರಿವ್ರತಾ ಮಹಾಭಾಗಾ ಕಥಂ ನು ವಿಚರಿಷ್ಯತಿ ॥ – ಭಾರತ (ವಿರಾಟ. ೩/೧೪)

೧೧. ಅಥ ಮಾಸೇ ಚತುರ್ಥೇ ತು ಬ್ರಹ್ಮಣಃ ಸುಮಹೋತ್ಸವಃ।
ತತ್ರ ಮಲ್ಲಾಃ ಸಮಾಪೇತುರ್ದಿಗ್ಭ್ಯೋ ರಾಜನ್ ಸಹಸ್ರಶಃ ॥
ತೇಷಾಮೇಕೋ ಮಹಾನಾಸೀತ್.... ಜೀಮೂತಂ ನಾಮ ತಂ ಮಲ್ಲಮ್॥ – ಭಾರತ (೪/೧೩/೧೪,೧೮,೨೩)

ಅ: ಬಳಿಕ ಮಲ್ಲನೊಬ್ಬ ಆಗಮಿಸಿ, ಅವನು ಸಮಸ್ತ ಭೂಮಂಡಲದಲ್ಲಿ ಶಿವನ ವರದಿಂದಾಗಿ ಯಾರಿಗೂ ಸೋಲದವನಾಗಿದ್ದವನು. ಎಲ್ಲರನ್ನೂ ಜಯಿಸುತ್ತಿದ್ದವನು. ಅವನು ಅಲ್ಲಿಗೆ ಬಂದು ಜೋರಾಗಿ ಘರ್ಜಿಸಿದ.

ವಿ: ೧) ಆ ವೇಳೆಗೆ ಅಜ್ಞಾತವಾಸದ ನಾಲ್ಕು ತಿಂಗಳುಗಳು ಕಳೆದಿದ್ದವು. ಆಗೊಮ್ಮೆ ಉತ್ಸವ ಪ್ರಯುಕ್ತವಾಗಿ ಮಲ್ಲಯುದ್ಧವೊಂದು ನಡೆದಿದ್ದಾಗ ಅಲ್ಲಿಗೆ ಜೀಮೂತ ಎಂಬ ಮಲ್ಲನೊಬ್ಬ ಬಂದು ಮಲ್ಲಯುದ್ಧಕ್ಕೆ ವಿರಾಟ ರಾಜನ ಮಲ್ಲರನ್ನು ಆಹ್ವಾನಿಸಿದ. ಪಂಪಭಾರತ ದಲ್ಲಿ ಇವನ ಹೆಸರು 'ವಿಷಮಪರ್ವರ' ಎಂದಿದೆ.

೨) ಅವನಿಗೆ ಶಿವನ ವರದ ಬೆಂಬಲವಿದ್ದದ್ದರಿಂದ ಯಾರಿಗೂ ಸೋಲದೇ ಎಲ್ಲೆಡೆಗಳಲ್ಲಿ ಜಯಶಾಲಿಯಾಗಿಯೇ ಬಂದಿದ್ದ ಎಂದರ್ಥ.

ತಮೀಕ್ಷ್ಯ ಸರ್ವಮಲ್ಲಕಾ ವಿರಾಟರಾಜಸಂಶ್ರಯಾಃ।
ಪ್ರದುದ್ರುವುರ್ಭಯಾರ್ದಿತಾಸ್ತದಾऽವದದ್ಯುಧಿಷ್ಠಿರಃ ॥ ೧೨ ॥

ಅ: ಅವನನ್ನು ಕಂಡು ವಿರಾಟರಾಜನ ಆಶ್ರಯದಲ್ಲಿದ್ದ ಮಲ್ಲರೆಲ್ಲ ಭಯದಿಂದ ಕಂಗೆಟ್ಟು ಓಡಿಹೋದರು. ಆಗ ಧರ್ಮರಾಜ ತಿಳಿಸಿದ.

ವಿ: ೧) ಜೀಮೂತನ ಅಗಾಧಬಲಕ್ಕೆ ಅಂಜಿ ಅವನೊಂದಿಗೆ ಕಾದುವ ಧೈರ್ಯವನ್ನೂ ಸಹ ತೋರದೇ ವಿರಾಟನ ಆಸ್ಥಾನದಲ್ಲಿದ್ದ ಮಲ್ಲರೆಲ್ಲ ಪಲಾಯನ ಮಾಡಿದರು. ಅವನ ಆಕೃತಿ ಮತ್ತು ಕೀರ್ತಿ ಅವರಲ್ಲಿ ಅಪಾರವಾದ ಭಯವನ್ನು ಹುಟ್ಟಿಸಿದ್ದವು. ಆಗ ಕಂಗೆಟ್ಟ ವಿರಾಟ ರಾಜನಿಗೆ ಧರ್ಮರಾಜ 'ನಿನ್ನಲ್ಲಿ ಅಡಿಗೆಯವನಾಗಿ ಸೇರಿಕೊಂಡಿರುವ ಬಲ್ಲವನನ್ನು ಕರೆಸು, ಅವನಿಗೆ ಮಲ್ಲವಿದ್ಯೆಯಲ್ಲೂ ಅಪಾರ ಕೌಶಲವಿದೆ. ಅವನು ಹುಲಿ, ಕರಡಿ, ಸಿಂಹ, ಆನೆಗಳೊಂದಿಗೂ ಹೋರಾಡಬಲ್ಲ ಮಹಾಸಮರ್ಥ' ಎಂದು ತಿಳಿಸಿದ.

೨) ಏಕಚಕ್ರನಗರದಲ್ಲಿ ಬಕನ ಬಳಿಗೆ ಕುಂತಿ ಭೀಮನನ್ನು ಕಳುಹಿಸಲು ಸಿದ್ಧಳಾಗಿದ್ದಾಗ ಕಂಗೆಟ್ಟು ಅವಳನ್ನು ಪ್ರಶ್ನಿಸಿದ್ದ (೧೯/೮೩–೮೫) ಧರ್ಮರಾಜ ಈಗ ಜೀಮೂತನ ಮೇಲೆ ಭೀಮಸೇನನನ್ನು ಸ್ವತಃ ಹೋರಾಟಕ್ಕೆ ಕಳುಹಿಸುವ ಸಲಹೆ ನೀಡುವುದು ಆ ವೇಳೆಗೆ ಭೀಮನ ಬಗ್ಗೆ ಹೊಂದಿದ್ದ ವಿಶೇಷವಾದಂತಹ ವಿಶ್ವಾಸಕ್ಕೆ ಇದು ದ್ಯೋತಕವಾಗಿದೆ.

---

೧೨. ಯದಾ ಸರ್ವೇ ವಿಮನಸಸ್ತೇ ಮಲ್ಲಾ ಹತಚೇತಸಃ।
ಅಥ ಸೂದೇನ ತಂ ಮಲ್ಲಂ ಯೋಧಯಾಮಾಸ ಮತ್ಸ್ಯರಾಟ್ ॥ – ಭಾರತ (೪/೧೩/೧೯)

೩) ಹಾಗೆ ಹೇಳುವ ಮೂಲಕ ತಮಗೆ ಆಸರೆ ನೀಡಿದ ವಿರಾಟನಿಗೆ ನೆರವಾಗುವ ಕಾರಣದೊಂದಿಗೆ ಅದಕ್ಕಿಂತ ಮುಖ್ಯವಾಗಿ ಜೀಮೂತನಂತಹ ಮಹಾಪಾಪಿಯೊಬ್ಬನನ್ನು ಸದೆ–ಬಡಿಯುವ ಮೂಲಕ ಭೀಮಸೇನನ ಪುಣ್ಯ ಕೀರ್ತಿಗಳು ಹೆಚ್ಚಲಿ ಎಂಬುದು ಮುಖ್ಯಕಾರಣವಾಗಿತ್ತು ಎಂದು ತಿಳಿಯಬೇಕು.

ಯ ಏಷ ಸೂದ ಆಶು ತಂ ನಿಹತ್ಯ ಮಲ್ಲಮೋಜಸಾ।
ಯಶಸ್ತವಾಭಿವರ್ಧಯೇತ್ ಸಮಾಹ್ವಯಾದ್ಯ ತಂ ನೃಪ ॥ ೧೩ ॥

ಅ: 'ರಾಜನೇ, ನಿನ್ನ ಬಳಿಯಿರುವ ಈ ಸೂದ ಈ ಮಲ್ಲನನ್ನು ಕೂಡಲೇ ಕೊಂದು ನಿನ್ನ ಕೀರ್ತಿಯನ್ನು ಹೆಚ್ಚಿಸಬಲ್ಲನು. ಅವನನ್ನೀಗ ಕರೆಸು'.

ವಿ: ವಿರಾಟ ಸಂಶಯ ವ್ಯಕ್ತಪಡಿಸಿದಾಗ ಧರ್ಮರಾಜ ಈ ಮಾತುಗಳ ಮೂಲಕ ಅವನಿಗೆ ಧೈರ್ಯ ತುಂಬಿದ. ಈ ಮಲ್ಲ ಸಾಮಾನ್ಯನಲ್ಲ, ಭೀಮನ ಬಳಿ ಇದ್ದವನು, ಭೀಮಬಲದವನು. ಇವನಿಗೆ ಎದುರಾಗಿ ನಿಲ್ಲಬಲ್ಲ ಮತ್ತೊಬ್ಬ ಮಲ್ಲನೇ ಇಲ್ಲ ಎಂದೆಲ್ಲಾ ತಿಳಿಸಿ ಅವನ ಸಂಶಯವನ್ನು ನಿವಾರಿಸಿದ ಎಂದರ್ಥ.

ಇತೀರಿತೇ ಸಮಾಹುತೋ ಜಗಾದ ಮಾರುತಿರ್ವಚಃ।
ಪ್ರಸಾದತೋ ಹರೇರಹಂ ನಿಸೂದಯೇಽದ್ಯ ಮಲ್ಲಕಮ್ ॥ ೧೪ ॥

ಅ: ಧರ್ಮರಾಜ ಹೀಗೆನ್ನಲು ವಿರಾಟ ಭೀಮನನ್ನು ಅಲ್ಲಿಗೆ ಕರೆಸಿದ. ಭೀಮ ನುಡಿದ 'ಶ್ರೀಹರಿಯ ಅನುಗ್ರಹದಿಂದ ನಾನು ಈಗಲೇ ಈ ಮಲ್ಲನನ್ನು ಸದೆಬಡಿಯುವೆ'.

ವಿ: ಎಂದಿನಂತೆ ಭೀಮ ತನ್ನ ಶೈಲಿಯಲ್ಲೇ ಧೈರ್ಯ ತುಂಬಿದ. ಈ ಮಲ್ಲನಿಗೆ ಅಂಜಬೇಕಿಲ್ಲ, ಅವನಿಗೆ ಹರನ ವರವಿದ್ದರೆ ನನಗೆ ಹರಿಯ ಅನುಗ್ರಹವಿದೆ. ನಾನು ಇವನನ್ನು ಸದೆಬಡಿಯುವುದು ಖಚಿತ ಎಂದು ವಿಶ್ವಾಸ ಹುಟ್ಟಿಸಿದ.

---

೧೩. ತತೋ ಯುಧಿಷ್ಠಿರೋಽವಾದೀಚ್ಛ್ರುತ್ವಾ ಮತ್ಸ್ಯಪತೇರ್ವಚಃ।
ಅಸ್ತಿ ಮಲ್ಲೋ ಮಹಾರಾಜ ಮಯಾ ದೃಷ್ಟೋ ಯುಧಿಷ್ಠಿರೇ।
ಅನೇನ ಸಹ ಮಲ್ಲೇನ ಯೋದ್ಧುಂ ಶಕ್ನೋತಿ ಭೂಪತೇ ॥
ಯೋಽಸೌ ಮಲ್ಲೋ ಮಯಾ ದೃಷ್ಟಃ ಪೂರ್ವಂ ಯೌಧಿಷ್ಠಿರೇ ಪುರೇ।
ಸೋಽಯಂ ಮಲ್ಲೋ ವಸತ್ಯೇಷ ರಾಜಂಸ್ತವ ಮಹಾನಸೇ ॥ –BORI ಭಾರತ(ಪು. ೩೦೭)

ಮಹಾದೇವ ಎಂದರೆ ಶ್ರೀಹರಿ

ಸಮಸ್ತದೇವವೃಂದತೋ ಮಹಾನ್ ಯ ಏವ ಕೇಶವಃ ।
ಸಮಸ್ತದೇವನಾಮವಾಂಸ್ತದೀಯಭಕ್ತಿತೋ ಬಲಮ್ ॥ ೧೫ ॥

ಅ: 'ಸಮಸ್ತ ದೇವತೆಗಳ ಗುಂಪಿಗಿಂತಲೂ ತುಂಬಾ ದೊಡ್ಡವನಾದವನು ಬ್ರಹ್ಮ, ರುದ್ರಾದಿ ಪ್ರವರ್ತಕನಾದ ಶ್ರೀಹರಿ, ಎಲ್ಲ ದೇವತೆಗಳ ಹೆಸರನ್ನು ಹೊಂದಿರುವವನೂ ಅವನು. ಅವನಲ್ಲಿ ಭಕ್ತಿಮಾಡುವುದರಿಂದಾಗಿ ನನ್ನಲ್ಲಿ ಬಲವಿದೆ'.

ವಿ: ೧) ಮಹಾಭಾರತದಲ್ಲಿ ಭೀಮು ಮಹಾದೇವನಲ್ಲಿಯ ಭಕ್ತಿಯಿಂದಾಗಿ ನಾನು ಈ ಮಲ್ಲನನ್ನು ಜಯಿಸುವೆ ಎನ್ನುವನು. ಮೇಲ್ನೋಟಕ್ಕೆ ಇದು ಜೀಮೂತ ಶಿವಭಕ್ತನಾಗಿದ್ದಂತೆ ತಾನೂ ಶಿವಭಕ್ತ ಆದ್ದರಿಂದ ಅವನನ್ನು ಗೆಲ್ಲುವೆ ಎಂದು ಹೇಳಿದಂತಾಗುವುದು. ಆದರೆ, ವಾಯುವಿನ ಅವತಾರವಾದ ಭೀಮು ಸ್ವತಃ ಶಿವನಿಗಿಂತ ಮಿಗಿಲಾದವನು. ಹಾಗೆ ಹೇಳಿಕೊಳ್ಳುವುದು ಅಸಂಭಾವಿತ. ಅದರ ಆಂತರ್ಯವನ್ನು ಆಚಾರ್ಯರು ಇಲ್ಲಿ ತಿಳಿಸಿರುವರು.

೨) ಇಲ್ಲಿ ಮಹಾದೇವ ಎಂದರೆ ದೊಡ್ಡ ದೇವತೆಯಾದ ಶ್ರೀಹರಿ ಎಂದರ್ಥ. ಮಹಾದೇವ ಎಂಬ ಹೆಸರಿನ ಶಿವನಲ್ಲ. ಅವನು ಸಮಸ್ತ ದೇವತೆಗಳ ಹೆಸರನ್ನೂ ಹೊಂದಿರುವುದರಿಂದ ಮಹಾ–ದೇವ ಎನ್ನಿಸಿರುವನು. ಅವನ ದಯೆ ಇರುವುದರಿಂದ ತನಗೆ ಇವನೆಂದೂ ಸಾಟಿಯಾಗನು ಎಂದು ತಿಳಿಸಿದ ಎಂದರ್ಥ.

---

೧೫. ಪೂರ್ವಂ ಭೀಮೇನ ಹರೇಃ ಪ್ರಸಾದೋಽಸ್ತೀತ್ಯುಕ್ತಮ್। ಪಶ್ಚಾತ್ ಸಭಾಯಾಂ ಪ್ರತಿಮಲ್ಲಸ್ಯ ಮಹಾದೇವಪ್ರಸಾದೋಽಸ್ತೀತಿ ಸಭಾಸದೈರುಕ್ತೇ ಮಮಾಪಿ ಮಹಾದೇವಪ್ರಸಾದೋಽಸ್ತೀತ್ಯುಕ್ತಮ್। ಯುಧಿಷ್ಠಿರ-ರಾಜ್ಯಕಾಲೇ ತಸ್ಯ ಸ್ವಯಂ ಪಾಕಂ ಕೃತ್ವಾ ಬಹುಕಾಲಂ ಸ್ಥಿತಮ್। ತೇನ ಯುಧಿಷ್ಠಿರಪ್ರಸಾದೋಽಪ್ಯಸ್ತೀತ್ಯುಕ್ತಮ್। ಇದಾನೀಮನ್ನದಾತುಸ್ತವ ಪ್ರಸಾದೋಽಪ್ಯಸ್ತೀತ್ಯುಕ್ತಮ್। ಅಸ್ಯ ವಾಕ್ಯಚತುಷ್ಟಯಸ್ಯಾಷ್ಟೇಕವಾಕ್ಯತಾಂ ಕರೋತಿ ಸಮಸ್ತದೇವವೃಂದತ ಇತಿ। ಸಮಸ್ತದೇವವೃಂದತಃ ಮಹಾನಿತಿ ಕೃತ್ವಾ ದೇವೇಷು ಮಹಾನ್ ಮಹಾದೇವ ಇತಿ ವ್ಯುತ್ಪತ್ತ್ಯಾ ಹರಿರೇವ ಮಹಾದೇವ ಇತಿ ಭಾವಃ। ''ಕ ಇತಿ ಬ್ರಹ್ಮಣೋ ನಾಮ ಈಶೋಽಹಂ ಸರ್ವದೇಹಿನಾಮ್। ಆವಾಂ ತವಾಂಗಸಂಭೂತೌ ತತಃ ಕೇಶವನಾಮವಾನ್'' ಇತಿ ಸ್ಮೃತೇಸ್ತತ್ರ ಪ್ರಾಮಾಣ್ಯಸೂಚನಾಯ ಕೇಶವಪದಂ ಪ್ರಯುಕ್ತಮ್ ॥ –(ವಾ.)

೧೫. ಭೀಮಸೇನೋ ವಿರಾಟೇನ ಆಹೂತಶ್ಚೋದಿಸ್ತದಾ ।
ಯೋದ್ಧುಂ ತತೋಽಬ್ರವೀದ್ವಾಕ್ಯಂ ಯೋದ್ಧುಂ ಶಕ್ನೋಮಿ ಭೂಪತೇ ॥
ನರೇಂದ್ರ ತೇ ಪ್ರಭಾವೇನ ಶ್ರಿಯಾ ಶಕ್ತ್ಯಾ ಚ ಶಾಸನಾತ್ ।
ಅನೇನ ಸಹ ಮಲ್ಲೇನ ಯೋದ್ಧುಂ ರಾಜೇಂದ್ರ ಶಕ್ನುಯಾಮ್ ।
ಯುಧಿಷ್ಠಿರಕೃತಂ ಜ್ಞಾತ್ವಾ ಶ್ರಿಯಾ ತವ ವಿಶಾಂಪತೇ ॥
ಮಹಾದೇವಸ್ಯ ಭಕ್ತ್ಯಾ ಚ ತಂ ಮಲ್ಲಂ ಪಾತಯಾಮ್ಯಹಮ್ ॥ –BORI ಭಾರತ (೪/ ಪು. ೩೦೭)

ಯ ಏವ ದೇವನಾಮಧಾ ಇತಿ ಶ್ರುತಿರ್ಜಗಾದ ಹಿ।
ಮಹಾಂಶ್ಚ ದೇವ ಏಷ ತತ್ ಸ ಮೇ ಜಯಂ ವಿಧಾಸ್ಯತಿ ॥ ೧೬ ॥

ಅ: 'ಯ ಏವ ದೇವನಾಮಧಾ' (ಎಲ್ಲ ದೇವತೆಗಳ ಹೆಸರನ್ನು ಧರಿಸಿದವನು ಶ್ರೀಹರಿ) ಎಂದು ಶ್ರುತಿ ತಿಳಿಸಿದೆ. ಅದರಿಂದ ಹಿರಿದಾದ ದೈವ ಎನ್ನಿಸಿರುವನು ಶ್ರೀಹರಿ. ಅವನೇ ನನಗೆ ಜಯವನ್ನು ನೀಡುವನು.

ವಿ: ೧) 'ಯೋ ದೇವಾನಾಂ ನಾಮಧಾ ಏಕ ಏವ' ಎಂಬ ವಿಶ್ವಕರ್ಮ ಶ್ರುತಿಯಲ್ಲಿನ ಭಾವವನ್ನು ಇಲ್ಲಿ ಯ ಏವ ದೇವನಾಮಧಾ ಎಂಬುದಾಗಿ ಸಂಗ್ರಹಿಸಿರುವರು. ಎಲ್ಲ ದೇವತೆಗಳ ಹೆಸರೂ ಸಹ ಮುಖ್ಯವಾಗಿ ಅನ್ವಯಿಸುವುದು ಶ್ರೀಹರಿಗೇ ಎಂಬುದು ಇದರ ಭಾವ.

೨) ಮಹಾದೇವ ಎಂಬ ಹೆಸರಿದ್ದ ಮಾತ್ರಕ್ಕೆ ಶಿವ ಸರ್ವೋತ್ತಮನಾಗಬೇಕಿಲ್ಲ. ಪುರಾಣ–ಗಳಲ್ಲೂ ಮಹಾವರಾಹ ಎಂಬುದು ಉಪಪುರಾಣವಾಗಿದ್ದರೆ, ವರಾಹ ಎಂಬುದು ಮಹಾಪುರಾಣ–ವಾಗಿರುವುದು ಗಮನಾರ್ಹ. ಪರ್ವಕಾಲಗಳಲ್ಲಿ ಮಹೋದಯ ಪರ್ವಕಾಲಕ್ಕಿಂತ ಅರ್ಧೋದಯ ಪರ್ವಕಾಲವು ಮಿಗಿಲೆನ್ನಿಸುವುದು ಜ್ಯೋತಿಃಶಾಸ್ತ್ರದಿಂದ ಸಿದ್ಧವಾಗಿರುವ ವಿಚಾರ.

೩) ಅದರಂತೆ ಮಹಾದೇವ ಎಂಬ ಹೆಸರಿನ ಶಿವನಿಗಿಂತ ಮುಖ್ಯವಾಗಿ ಮಹತ್ತರವಾದ ದೇವನಾಗಿರುವವನು ದೇವದೇವನಾದ ಶ್ರೀಹರಿಯೇ ಎಂಬುದು ಇಲ್ಲಿಯ ಒಟ್ಟು ಭಾವ.

ಯುಧಿಷ್ಠಿರ ಶಬ್ದವು ಶ್ರೀಹರಿವಾಚಕ

ಯುಧಿಷ್ಠಿರಾಭಿಧಶ್ಚ ಯೋ ಯುಧಿಷ್ಠಿರೇ ಸ್ಥಿತಃ ಸದಾ ।
ತ್ವಯಿ ಸ್ಥಿತಸ್ತ್ವಮಿತ್ಯಸೌ ಸದಾऽಭಿಧೀಯತೇ ಹರಿಃ ॥ ೧೭ ॥

ಅ: ಯುಧಿಷ್ಠಿರನೊಳಗೆ ನೆಲೆಸಿರುವ ಶ್ರೀಹರಿಯು ಯುಧಿಷ್ಠಿರ ಎನ್ನಿಸಿರುವನು. ನಿನ್ನಲ್ಲಿರುವ ಶ್ರೀಹರಿಯು ತ್ವಂ ಎನ್ನಿಸಿರುವನು. ಹೀಗೆ ಶ್ರೀಹರಿಯೇ ಈ ಎಲ್ಲ ಪದಗಳಿಂದ ವಾಚ್ಯನಾದವನು.

ವಿ: ೧) ಭೀಮಸೇನ ಯುಧಿಷ್ಠಿರನ ದಯೆಯಿಂದಲೂ ತಾನು ಗೆಲ್ಲುವುದು ಖಚಿತವೆಂದು ತಿಳಿಸಿದ. ಭೀಮು ವಿರಾಟರಾಜನ ಮುಂದೆ ಪ್ರಥಮ ಬಾರಿ ತಿಳಿಸುವಾಗ ತಾನು ಯುಧಿಷ್ಠಿರನ

---

೧೬. ಪ್ರಕಾರಾಂತರೇಣಾಪಿ ಹರೇರ್ಮಹಾದೇವಾದಿನಾಮವತ್ತ್ವಮುಪಪಾದಯತಿ। ಯ ಏವ ದೇವನಾಮಧಾ ಇತಿ। ''ಯೋ ದೇವಾನಾಂ ನಾಮಧಾ ಏಕ ಏವೇ'' ತಿ ಶ್ರುತ್ಯನುಶಾಸನಾತ್ ಸಮಸ್ತದೇವಾನಾಮಂತರ್ಗತತ್ವಾತ್ ಮಹಾದೇವನಾಮವಾನ್ ಹರಿರಿತಿ ಭಾವಃ। ಅನೇನ ''ಶಿವೋ ಮಮ ಬಲಂ ರುದ್ರೋ ಮಮ ಬಲಮ್'' ಇತ್ಯಾದಿರೌದ್ರನಾಮಾಂತರಮುದೀರ್ಯ ಮಲ್ಲೇನೋಕ್ತೇऽಪಿ ಸ್ವಸ್ಯಾಪಿ ತಥೈವ ಪ್ರತಿವಚನಸಂಭವಂ ಸೂಚಯತಿ। ಪ್ರಕಾರಾಂತರೇಣಾಪಿ ಹರೇರ್ಮಹಾದೇವನಾಮ ಘಟಯತಿ। ಮಹಾಂಶ್ಚ ದೇವ ಏಷ ಇತಿ। ಏಷ ಇತ್ಯುಕ್ತ್ಯಾ ''ಏಷ ಸರ್ವೇಶ್ವರಃ'' ''ದೇವಸ್ಯೈಷ'' ಇತ್ಯಾದಿಶ್ರುತಿಂ ಸ್ವೋಕ್ತಾರ್ಥೇ ಪ್ರಮಾಣಂ ಸೂಚಯತಿ ॥ –(ವಾ.)

ಬಳಿಯಲ್ಲಿ ಅಡುಗೆ ಮಾಡಿಕೊಂಡಿದ್ದವನು ಎಂದು ಪರಿಚಯ ಮಾಡಿಕೊಂಡಿದ್ದನು. ಅದರಂತೆ ಇಲ್ಲಿ ಅವನ ದಯೆಯೂ ತನ್ನ ಮೇಲಿರುವುದರಿಂದ ತಾನು ಗೆಲ್ಲುವುದು ನಿಶ್ಚಯ ಎನ್ನುವ ಮೂಲಕ ತಾನು ಯುಧಿಷ್ಠಿರಾದಿಗಳನ್ನು ತಿಳಿದವನಾಗಿದ್ದರೂ ಭೀಮನೇ ಎಂಬ ಸಂಶಯ ಬರದಂತೆ ನುಡಿದಿರುವನು.

೨) ಇಲ್ಲಿ ಯುಧಿಷ್ಠಿರ ಶಬ್ದಕ್ಕೂ ಸಹ ಅವನೊಳಗಿನ ಯುಧಿಷ್ಠಿರ ಶಬ್ದವಾಚ್ಯನಾದ ಶ್ರೀಹರಿಯೇ ಎಂದರ್ಥ. ಅಣ್ಣನಾಗಿ ಹಿರಿಯನಾಗಿದ್ದರೂ ಯುಧಿಷ್ಠಿರ ಸ್ವರೂಪದಲ್ಲಿ ತುಂಬಾ ಕಡಿಮೆಯವನಾದ್ದರಿಂದ ಅವನ ಅನುಗ್ರಹದಿಂದ ಭೀಮ ಗೆಲ್ಲುವ ಪ್ರಶ್ನೆ ಉದ್ಭವಿಸದು. ಆದ್ದರಿಂದ ಯುಧಿಷ್ಠಿರ ಶಬ್ದದಿಂದ ಶ್ರೀಹರಿಯೇ ಮುಖ್ಯವಾಗಿ ವಾಚ್ಯನಾದವನು ಎಂದರ್ಥ.

೩) ಅದರಂತೆ ರಾಜನಾದ ನಿನ್ನ ದಯೆಯಿಂದಲೂ ನಾನು ಗೆಲ್ಲುವೆ ಎಂದು ಭೀಮ ನುಡಿದದ್ದೂ ಸಹ ಇದೇ ಅರ್ಥದಲ್ಲಿ. ತ್ವಂ ಎಂದರೆ ವಿರಾಟ ಎಂದರ್ಥವಲ್ಲ, ತ್ವಂ ಶಬ್ದವಾಚ್ಯನಾದ ಶ್ರೀಹರಿ ಎಂದರ್ಥ. ತ್ವಂ ಮೊದಲಾದ ಶಬ್ದಗಳೆಲ್ಲಾ ಮುಖ್ಯವಾಗಿ ಶ್ರೀಹರಿವಾಚಕ ಎಂಬ ವಿಷಯವನ್ನು ಶ್ರೀಮದಾಚಾರ್ಯರು ವಿಷ್ಣುತತ್ವವಿನಿರ್ಣಯಾದಿ ಗ್ರಂಥಗಳಲ್ಲಿ ಸಮರ್ಥಿಸಿರುವರು.

೪) ಹೀಗೆ ಮೇಲ್ನೋಟಕ್ಕೆ ಯುಧಿಷ್ಠಿರನ ದಯ, ವಿರಾಟ ರಾಜನ ದಯ ಎಂದಿದ್ದೆಲ್ಲಾ ಲೋಕನೀತಿಯನ್ನು ತಿಳಿಸಲೆಂದು ಮಾತ್ರ. ವಾಸ್ತವಿಕವಾಗಿ ಮುಖ್ಯವಾಗಿ ಭೀಮನಿಗೆ ಶ್ರೀಹರಿಯ ದಯೆಯೊಂದೇ ಶ್ರೀರಕ್ಷೆ ಎಂದು ತಾತ್ಪರ್ಯ.

೫) ರಾಜರಲ್ಲಿ ಶ್ರೀಹರಿಯ ವಿಭೂತಿರೂಪ ಇರುವ ವಿವರ ಗೀತೆಯಲ್ಲಿದೆ – 'ನರಾಣಾಂ ಚ ನರಾಧಿಪಮ್'(೧೦/೨೭); ವಿರಾಟರಾಜನಲ್ಲಿಯ ವಿಭೂತಿರೂಪದ ಅನುಗ್ರಹದಿಂದ ಎಂದೂ ಇದಕ್ಕೆ ಅರ್ಥ ಮಾಡಿಕೊಳ್ಳಬಹುದು.

---

೧೭. ಯುಧಿಷ್ಠಿರಾಭಧಶ್ಚೇತಿ ವದತಾ ಯುಧಿ ಸ್ಥಿರತ್ವಾತ್ ಯುಧಿಷ್ಠಿರನಾಮಧೇಯಃ ಹರಿರಿತಿ ಸೂಚಿತಮ್। ನಿರುಕ್ತತ್ವಾತ್ಸಕಾರಸ್ಯ ಷಕಾರಃ। ''ಷ್ಟುನಾ ಷ್ಟು'' ರಿತಿ (೮/೪/೪೧) ಸೂತ್ರಾತ್ ಥಕಾರಸ್ಯ ಠಕಾರ ಇತಿ ಭಾವಃ। ಅವರಾಂ ಚ ವೃತ್ತಿಮಾಹ ಯುಧಿಷ್ಠಿರೇ ಸ್ಥಿತ ಇತಿ। ತವ ಬಲಾತ್ ಜೇಷ್ಯಾಮೀತ್ಯಸ್ಯ ತಾತ್ಪರ್ಯಮಾಹ ತ್ವಯಿ ಸ್ಥಿತ ಇತಿ। ಸದಾऽಭಧೀಯತ ಇತಿ ವದತಾ ''ತನು ವಿಸ್ತಾರ'' ಇತಿ ಧಾತೋಃ ವ್ಯಾಪ್ತತ್ವಾತ್ ''ವಾ ಗತಿಗಂಧನಯೋಃ'' ಇತಿ ಧಾತೋಃ ಜ್ಞಾನರೂಪತ್ವಾತ್ ಸಕಲಜಗತ್ಸರ್ಗಭೀಕರಣಶೀಲತ್ವಾಚ್ಚ ತ್ವಮಿತಿ ಯೋಗೋऽಪಿ ಸೂಚಿತಃ। ''ಸರ್ವಾಂತರ್ಯಾಮಕೋ ವಿಷ್ಣುಃ ಸರ್ವನಾಮ್ನಾऽಭಧೀಯತೇ। ಏಷೋऽಹಂ ತ್ವಮಸೌ ಚೇತಿ ನ ತು ಸರ್ವ-ಸ್ವರೂಪತ'' ಇತಿ ಸ್ಮೃತೇಃ। ಅಭಧೀಯತೇ ಇತಿ ವದತಾ ಸಂತಪ್ತಾಯಸಃ ಅಗ್ನಿಸನ್ನಿಧಾನಾತ್ ಅಗ್ನಿಶಬ್ದವಾಚ್ಯತ್ವವತ್ ಮುಖ್ಯತೋ ಭಗವದಭಧಾಯಕೈಸ್ತೈಸ್ತೈಃ ಶಬ್ದೈಃ ಭಗವತ್ಸನ್ನಿಧಾನಾತ್ತೇऽಪ್ಯುಚ್ಯಂತ ಇತಿ ಸೂಚಿತಮ್। ಅತಃ ಪ್ರಕಾರಚತುಷ್ಟಯೇನಾಪಿ ಹರೇರೇವ ಪ್ರಾರ್ಥನಂ ಕೃತಮಿತಿ ಭಾವಃ ॥ – (ವಾ.)

೧೭. 'ಅಹಂನಾಮಾ ಹರಿರ್ನಿತ್ಯಮಹೇಯತ್ವಾತ್ತತ್ಕೀರ್ತಿತಃ। ತ್ವಂ ಚಾಸೌ ಪ್ರತಿಯೋಗಿತ್ವಾತ್ ಸ ಇತ್ಯಪಿ । ಸರ್ವಾಂತರ್ಯಾಮಿಣಃ ಹರಾವಸ್ಮಚ್ಛಬ್ದವಿಭಕ್ತಯಃ। ಯುಷ್ಮಚ್ಛಬ್ದಗತಾಶ್ಚೈವ ಸರ್ವಾಸ್ತಚ್ಛಬ್ದಗಾ ಅಪಿ।' ಇತಿ ನಾರಾಯಣಶ್ರುತೌ। 'ಸರ್ವಾಂತರ್ಯಾಮಿಕೋ ವಿಷ್ಣುಃ ಸರ್ವನಾಮಾऽಭಧೀಯತೇ। ಏಷೋऽಹಂ ತ್ವಮಸೌ ಚೇತಿ ನ ತು ಸರ್ವಸ್ವರೂಪತಃ।' – (ಜ.)

ಯಮಲೋಕಕ್ಕೆ ಜೀಮೂತ

ಇತಿ ಬ್ರುವಾಣೋ ಮಲ್ಲಂ ತಮಭಿಯಾತೋ ವೃಕೋದರಃ ।
ಅನಯನ್ಮೃತ್ಯುಲೋಕಾಯ ಬಲಾಢ್ಯೈರಪಿ ದುರ್ಜಯಮ್ ॥ ೧೮ ॥

ಅ: ಹೀಗೆ ನುಡಿಯುತ್ತಾ ಭೀಮಸೇನ ಆ ಮಲ್ಲನನ್ನು ಎದುರಿಸಿದ. ಬಲಾಢ್ಯರಿಂದಲೂ ಮಣಿಸಲಾಗದಿದ್ದ ಅವನನ್ನು ಯಮಲೋಕಕ್ಕೆ ಅಟ್ಟಿದ.

ವಿ: ೧) ಭೀಮಸೇನ ಮೊದಲಿಗೆ ಎಂದಿನಂತೆ ವಾಗ್ಯುದ್ಧದಲ್ಲಿ ಅವನನ್ನು ಸೋಲಿಸಿ ಬಳಿಕ ಮಲ್ಲಯುದ್ಧದಲ್ಲೂ ಸೋಲಿಸಿ ಕೊಂದು ಹಾಕಿದ ಎಂದರ್ಥ.

೨) ಮಹಾಭಾರತದ ಕೆಲವು ಪ್ರತಿಗಳಲ್ಲಿ ಜೀಮೂತ ಮೊದಲಾದ ಒಂದು ಮಲ್ಲರ ತಂಡವೇ ಅಲ್ಲಿಗೆ ಆಗಮಿಸಿತ್ತು, ಅವರೆಲ್ಲ ಪಾಂಡವರ ಅನ್ವೇಷಣೆಗಾಗಿ ದುರ್ಯೋಧನನಿಂದ ಕಳಿಸಲ್ಪಟ್ಟಿದ್ದ ಮಲ್ಲರು ಎಂಬ ಉಲ್ಲೇಖವುಂಟು. ಕುಮಾರವ್ಯಾಸ ಭಾರತದಲ್ಲೂ ಇರುವುದು ಹಾಗೆಯೇ.

೩) ಆದರೆ ಪುಣೆಯ ಭಂಡಾರ್ಕರ್ ಸಂಶೋಧಿತ ಪ್ರತಿಯಲ್ಲಿ ಗೃಹೀತವಾಗಿರುವುದು ಶ್ರೀಮದಾಚಾರ್ಯರು ತಿಳಿಸಿರುವಂತೆ ಎಂಬುದು ಗಮನಾರ್ಹ. ಎಂದರೆ ಅಲ್ಲಿಗೆ ಆಗಮಿಸಿದ್ದು ಜೀಮೂತ ಎಂಬ ಒಬ್ಬ ಮಲ್ಲ ಮಾತ್ರ, ಅವನು ಶಿವವರದಿಂದಾಗಿ ಅಜೇಯನೂ, ಅವಧ್ಯನೂ ಆಗಿದ್ದ. ಅವನನ್ನು ಭೀಮ ಸೋಲಿಸಿ ಕೊಂದುಹಾಕಿದ.

೪) ಜೀಮೂತ ಎಂಬುದಕ್ಕೆ ಸಂಸ್ಕೃತದಲ್ಲಿ ಮೇಘ ಎಂಬ ಅರ್ಥವೂ ಉಂಟು (‘ಘನಜೀಮೂತಮುದಿರಜಲಮುಗ್ಧಮಯೋನಯಃ’ – ಅಮರಕೋಶ). ಭೀಮಸೇನ ಜೀಮೂತನನ್ನು ಸಂಹರಿಸಿದ್ದು ವಾಯು ಮೇಘಗಳಿಂದ ಮಳೆ ಸುರಿಸುವುದಕ್ಕೆ ಸಂಕೇತ.

೫) ವಿರಾಟಪರ್ವದ ಶ್ರವಣ, ಪಠಣಗಳಿಂದ ಮಳೆ ಬರುವುದು ಎಂಬ ಶಾಸ್ತ್ರಪ್ರಮಿತ ವಿಚಾರಕ್ಕೆ ಈ ಅರ್ಥ ಗಮಕವಾಗಿದೆ ಎಂಬುದನ್ನು ಗಮನಿಸಬೇಕು.

ಕೀಚಕನ ಆಗಮನ

ಏವಂ ನಿವಸತಾಂ ತತ್ರ ಪಾಂಡವಾನಾಂ ಮಹಾತ್ಮನಾಮ್ ।
ಸಂವತ್ಸರೇ ದ್ವಿಮಾಸೋನೇ ವಿಜಿತ್ಯ ದಿಶ ಆಗತಃ ।
ಕೀಚಕೋ ಮತ್ಸ್ಯನೃಪತೇಃ ಶ್ಯಾಲೋ ಬಲವತಾಂ ವರಃ ॥ ೧೯ ॥

---

೧೮. ಇತಿ ಬ್ರುವಾಣೋ ಮಲ್ಲಂ ತಮಿತ್ಯತ್ರ ಇತಿ ಭಾವೇನ ಚತುರ್ಥಾ ಬ್ರುವಾಣಃ ॥ – (ವಾ.)

೧೮. ಭ್ರಾಮಯಿತ್ವಾ ಶತಗುಣಂ ಗತಸತ್ವಮಚೇತನಮ್ ।
ಪ್ರಕ್ಷಿಪಂಷನ್ಮಹಾಬಾಹುರ್ಮಲ್ಲಂ ಭುವಿ ವೃಕೋದರಃ ॥ – ಭಾರತ (ವಿರಾಟ. ೧೩/೩೬)

ಆ: ಹೀಗೆ ಮಹಾತ್ಮರಾದ ಪಾಂಡವರು ಅಲ್ಲಿ ವಾಸ ಮಾಡುತ್ತಿದ್ದಾಗ ಒಂದು ವರ್ಷ ಕಳೆಯಲು ಎರಡು ತಿಂಗಳುಗಳು ಮಾತ್ರ ಬಾಕಿ ಇದ್ದಾಗ ವಿರಾಟರಾಜನ ಹೆಂಡತಿಯ ಸಹೋದರನಾದ ಬಲಶಾಲಿಗಳಲ್ಲಿ ಶ್ರೇಷ್ಠನೆನ್ನಿಸಿದ ಕೀಚಕ ದಿಕ್ಕುಗಳನ್ನು ಗೆದ್ದು ಮರಳಿ ಬಂದ.

ಎ: ೧) ಪಾಂಡವರ ಅಜ್ಞಾತವಾಸ ಕಾಲದ ಹತ್ತು ತಿಂಗಳುಗಳು ಕಳೆದವು. ಆ ವೇಳೆಗೆ ಕೀಚಕ ಅಲ್ಲಿಗೆ ಆಗಮಿಸಿದ ಎಂದರ್ಥ.

೨) ಕೀಚಕ ವಿರಾಟನಿಗೆ ಮೈದುನ, ರಾಣಿ ಸುದೇಷ್ಣೆಗೆ ಅವನು *ಅಣ್ಣ. ಅವನು ಸುದೇಷ್ಣೆಯ ತಮ್ಮ ಎಂಬ ಪಂಪ, ಕುಮಾರವ್ಯಾಸ ಮೊದಲಾದವರ ನಿರೂಪಣೆ ಮಹಾಭಾರತಕ್ಕೆ ಅನುಗುಣವಾದುದಲ್ಲ.

೩) ಅವನು ಶಿವ ವರದಿಂದಾಗಿ ತುಂಬಾ ಬಲಾಢ್ಯ ಎನ್ನಿಸಿದ್ದವನು. ಆ ಹತ್ತು ತಿಂಗಳುಗಳ ಕಾಲ ಅವನು ದಿಗ್ವಿಜಯಕ್ಕೆಂದು ತೆರಳಿದ್ದರಿಂದ ವಿರಾಟ ನಗರದಲ್ಲಿ ಇರಲಿಲ್ಲ. ಆ ದಿಗ್ವಿಜಯ ಕಾರ್ಯವನ್ನು ಪೂರೈಸಿ ಅವನು ಅಲ್ಲಿಗೆ ಬಂದ ಎಂದರ್ಥ.

೪) ಸುದೇಷ್ಣೆ ಕ್ಷತ್ರಿಯ ಕುಲದವಳು, ಕೀಚಕ ಸೂತಜಾತಿಯವನು. ಅವರಿಬ್ಬರ ತಂದೆ ಒಬ್ಬನೇ ಆಗಿದ್ದರಿಂದ ಅವರು ಅಣ್ಣ ತಂಗಿ ಎಂಬುದು ಉಚಿತ. ಇಬ್ಬರೂ ಕೇಕಯ ದೇಶದವರೇ.

೫) ಆ ಕೀಚಕನಿಗೆ ನೂರೈದು ಜನ ತಮ್ಮಂದಿರು. ಅವರಿಗೂ ಅವನಂತೆ ಶಿವನ ವರ–ವಿದ್ದಿತು. ವಿರಾಟ ರಾಜನಿಗೆ ಸೇನಾಧಿಪತಿಯಾಗಿಯೂ ಇದ್ದ ಅವನು ಸ್ವಭಾವತಃ ದುಷ್ಟನಾದ್ದರಿಂದ ತನ್ನ ಬಲದ ಹಮ್ಮಿನಿಂದ ಪ್ರಜಾಪೀಡಕನಾಗಿ ಭಯೋತ್ಪಾದಕನಾಗಿದ್ದ.

೬) ಹೆಸರಿಗೆ ಮಾತ್ರ ವಿರಾಟನು ರಾಜ, ಸೇನಾಧಿಪತಿಯಾದ ತನ್ನ ಕೈಯಲ್ಲಿಯೇ ರಾಜ್ಯಸೂತ್ರವೆಲ್ಲಾ ಸೇರಿದೆ ಎಂದು ಕೀಚಕ ಸೊಕ್ಕಿನಿಂದ ಹೇಳಿಕೊಳ್ಳುತ್ತಿದ್ದವನು.

೭) ಅವನು ಬಾಣ ಎಂಬ ಅಸುರನ ಅಂಶ ಎಂಬ ವಿವರ ಈಗಾಗಲೇ ಬಂದಿದೆ (೧೧/೨೧೬).

---

೧೯. ವಸಮಾನೇಷು ಪಾರ್ಥೇಷು ಮತ್ಸ್ಯಸ್ಯ ನಗರೇ ತದಾ ।
ಮಹಾರಥೇಷು ಛನ್ನೇಷು ಮಾಸಾ ದಶ ಸಮಾಯಯುಃ ॥ – ಭಾರತ (ವಿರಾಟ. ೧೪/೧)

* ಶ್ಯಾಲೋ ರಾಜ್ಞೋ ವಿರಾಟಸ್ಯ ಸೇನಾಪತಿರುದಾರಧೀಃ ।
ಸುದೇಷ್ಣಾಯಾಃ ಸ ವೈ ಜ್ಯೇಷ್ಠಃ ಶೂರೋ ವೀರೋ ಗತವ್ಯಥಃ ॥ – ಭಾರತ (ವಿರಾಟ. ೨೫/೨೧)
... ಕೃತಾಂತರಂಗನಾಗಿ ತಮ್ಮಕ್ಕನನೀಕೆ ಯಾರ್ಗೆಂದು ... । – ಪಂಪಭಾರತ (೮/೬೪)
ಅಗ್ರಜೆಯ ಬೆಸಗೊಂಡ । – ಕುಮಾರವ್ಯಾಸಭಾರತ (ವಿರಾಟ. ಸಂಧಿ ೨, ಪದ್ಯ ೧೩)

+ ಪ್ರವಾದೇನೇಹ ಮತ್ಸ್ಯಾನಾಂ ರಾಜಾ ನಾಮ್ನಾಯಮುಚ್ಯತೇ ।
ಅಹಮೇವ ಹಿ ಮತ್ಸ್ಯಾನಾಂ ರಾಜಾ ವೈ ವಾಹಿನೀಪತಿಃ ॥ – ಭಾರತ (ವಿರಾಟ. ೨೨/೯)

ದ್ರೌಪದಿಯನ್ನು ಕಾಮಿಸಿದ ನೀಚ ಕೀಚಕ

ಸ ದ್ರೌಪದೀಮೀಕ್ಷ್ಯ ಮನೋಭವಾರ್ತಃ
ಸಂಪ್ರಾರ್ಥಯಾಮಾಸ ತಯಾ ನಿರಸ್ತಃ ।
ಮಾಸೇ ಗತೇ ಭಗಿನೀಂ ಸ್ವಾಂ ಸುದೇಷ್ಣಾಂ
ಸಂಪ್ರಾರ್ಥಯಾಮಾಸ ತದರ್ಥಮೇವ ॥ ೨೦ ॥

ಅ: ಅವನು ದ್ರೌಪದಿಯನ್ನು ನೋಡಿ ಕಾಮಾರ್ತನಾಗಿ ಪರಿಪರಿಯಾಗಿ ಬೇಡಿದ, ಅವಳಿಂದ ತಿರಸ್ಕೃತನಾದ. ಒಂದು ತಿಂಗಳು ಕಳೆಯಲು ಕೀಚಕ ಸುದೇಷ್ಣೆಯನ್ನು ದ್ರೌಪದಿಗಾಗಿ ಬಗೆಬಗೆಯಿಂದ ಕೇಳಿಕೊಂಡ.

ವಿ: ೧) ದ್ರೌಪದಿಯನ್ನು ನೋಡಿ ಕೀಚಕ ಕಾಮ ಪೀಡಿತನಾದ. ದ್ರೌಪದಿ ಅವತರಿಸುವಾಗಲೇ ಯೌವನವತಿಯಾಗಿದ್ದರಿಂದ ವಿವಾಹದ ಕಾಲಕ್ಕೆ ಅವಳ ವಯಸ್ಸು ಸುಮಾರು ಇಪ್ಪತ್ತು ಎಂದಾಗುವುದು. ಎಂದರೆ ಅಜ್ಞಾತವಾಸದ ಕಾಲದಲ್ಲಿ ದ್ರೌಪದಿಯ ವಯಸ್ಸು ಅರವತ್ತನ್ನೂ ದಾಟಿತ್ತು ಎಂದು ಸ್ಫುಟಪಡುವುದು. ಈ ಅಂಶವನ್ನು ಯಾವ ವಿಮರ್ಶಕರೂ ಗಮನಿಸದಿರುವುದು ಆಶ್ಚರ್ಯಕರ. ಹಾಗೆ ಅರವತ್ತು ಮೀರಿದ ವಯಸ್ಸಿನಲ್ಲೂ ದ್ರೌಪದಿ ಸುರಸುಂದರಿಯಾಗಿದ್ದುದು ಮಹಾವಿಶೇಷ.

೨) ಅದಕ್ಕೆ ಆಕೆ ಯಜ್ಞಕುಂಡದಲ್ಲಿ ಅಯೋನಿಜೆಯಾಗಿ ಜನಿಸಿದವಳು ಎಂದು ಒಂದು ಕಾರಣವಾದರೆ, ಮೂಲತಃ ಸಾಕ್ಷಾತ್ ವಾಯುಪತ್ನಿಯಾದ ಭಾರತಿ ಎಂಬುದು ಮುಖ್ಯ ಕಾರಣ.

೩) ಋಜುಗಳಿಗೆ ವಯೋಮಾನದ ಪರಿಣಾಮ ಉಂಟಾಗದು ಎಂಬುದು ಶಾಸ್ತ್ರಪ್ರಮಿತ ವಿಚಾರ. ಅವರ ದೇಹ ಶುದ್ಧ ಸತ್ವಾತ್ಮಕವಾದ್ದರಿಂದ ವಯೋಮಾನದ ವಿಕಾರಾದಿಗಳಿಗೆ ಸರ್ವಥಾ ತುತ್ತಾಗದು ಎಂಬುದು ಗಮನಾರ್ಹ.

೪) ಅವರು ಅವತರಿಸಿದಾಗಲೇ ಅಶರೀರವಾಣಿ ದ್ರೌಪದಿಯನ್ನು **'ಅಜರಾ ಲೋಕಸುಂದರೀ'** ಮುಪ್ಪಿಲ್ಲದವಳು ಎಂದು ಸಾರಿರುವುದನ್ನು ಗಮನಿಸಬೇಕು(೧೮/೧೦೨). ಕೀಚಕ ಅವಳನ್ನು ನೋಡಿ ಕಾಮಾರ್ತನಾಗಿದ್ದು ಅವಳ ಆ ವಯಸ್ಸಿನ ಸೌಂದರ್ಯವನ್ನು ಸ್ಫುಟಪಡಿಸುವಂತಹ ಅಮೋಘ ವಿವರ.

---

೨೦. ತಸ್ಮಿನ್ ವರ್ಷೇ ಗತಪ್ರಾಯೇ ಕೀಚಕಸ್ತು ಮಹಾಬಲಃ ।
ಸೇನಾಪತಿರ್ವಿರಾಟಸ್ಯ ದದರ್ಶ ದ್ರುಪದಾತ್ಮಜಾಮ್ ॥ – ಭಾರತ (ವಿರಾಟ. ೧೪/೪)

೫) ಕೀಚಕ ಅವಳನ್ನು ನೋಡಿ ಸಾಮಾನ್ಯ ಆಕರ್ಷಣೆ ಹೊಂದದೇ 'ನಿನ್ನಂತಹ ಸುಂದರಿ–ಯನ್ನು ನಾನು ಲೋಕದಲ್ಲೆಲ್ಲೂ ಕಂಡಿಲ್ಲ; ನೀನು ಲಕ್ಷ್ಮಿ ಮೊದಲಾದ ದೇವತೆಯೇ ಇರಬೇಕು' ಎನ್ನುವುದು *ಗಮನಾರ್ಹ.

೬) ದ್ರೌಪದಿ ಸೈರಂಧ್ರಿಯ ವೇಷದಲ್ಲಿ ನಿರಾಭರಣ ಸುಂದರಿಯಾಗಿ ತೀರಾ ಸಾಮಾನ್ಯ ವೇಷದಲ್ಲಿ ವಿರಾಟನಗರವನ್ನು ಪ್ರವೇಶಿಸಿದಾಗಲೂ ಸುದೇಷ್ಣೆ ಅವಳ ಸೌಂದರ್ಯಕ್ಕೆ ದಿಗ್ಭ್ರಾಂತರಾಗಿ 'ಇವಳೇನು, ಧರೆಗಿಳಿದ ಭಾರತಿಯೋ, ಶಚಿಯೋ, ಶ್ಯಾಮಲೆಯೋ!' ಮೊದಲಾಗಿ ಆಶ್ಚರ್ಯಪಡುತ್ತಾ ಮನುಷ್ಯರಿರಲಿ, ಮರ ಗಿಡಗಳಂತಹ ಸ್ಥಾವರಗಳೂ ಸಹ ದ್ರೌಪದಿಯ ಸೌಂದರ್ಯಕ್ಕೆ ಆಕರ್ಷಿತವಾಗಿ ಅವಳ ಕಡೆಗೆ ವಾಲುತ್ತಿರುವಂತಿವೆ ಎಂದು ಉಲ್ಲೇಖಿಸಿದ ವಿವರ +ಮಹಾಭಾರತದಲ್ಲಿ ಬಂದಿದೆ.

ತಯಾ ನಿಷಿದ್ಧೋಽಪಿ ಪುನಃ ಪುನಸ್ತಾಂ
ಯದಾ ಯಯಾಚೇಽಥ ಚ ಸಾಽಽಹ ಕೃಷ್ಣಾಮ್ ।
ಸಮಾನಯಾಶ್ವೇವ ಸುರಾಂ ಮದರ್ಥ–
ಮಿತೀರಿತಾ ನೇತಿ ಭೀತಾಽವದತ್ ಸಾ ॥ ೨೧ ॥

ಅ: ಅವಳು ತಡೆದರೂ ಕೇಳದೇ ಕೀಚಕ ಮತ್ತೆ ಮತ್ತೆ ಬೇಡತೊಡಗಿದಾಗ ಸುದೇಷ್ಣೆ ದ್ರೌಪದಿಗೆ ಹೇಳಿದಳು : 'ನೀನು ಕೂಡಲೇ ನನಗಾಗಿ ಅವನಿಂದ ಸುರೆಯನ್ನು ತೆಗೆದುಕೊಂಡು ಬಾ'; ಅವಳು ಭೀತಳಾಗಿ 'ಆಗದು' ಎಂದಳು.

ವಿ: ೧) ಕೀಚಕ ಸುದೇಷ್ಣೆಯ ಕಾಲಿಗೂ ಬಿದ್ದು ತನ್ನ ಬಯಕೆಯನ್ನು ಈಡೇರಿಸಲು ಒತ್ತಾಯಿಸಿ–ದಾಗ ತಂಗಿಯಾದ ಅವಳು ಬೇರೊಂದು ದಾರಿ ಕಾಣದೇ ಸುರೆ ತರುವ ನೆಪದಿಂದ ಸೈರಂಧ್ರಿಯನ್ನು

---

* ಏವಂರೂಪಾ ಮಯಾ ನಾರೀ ಕಾಚಿದನ್ಯಾ ಮಹೀತಲೇ ।
ನ ದೃಷ್ಟಪೂರ್ವಾ ಸುಶ್ರೋಣಿ ಯಾದೃಶೀ ತ್ವಮನಿಂದಿತೇ ॥
ಲಕ್ಷ್ಮೀಃ ಪದ್ಮಾಲಯಾ ಕಾ ತ್ವಮಥ ಭೂತಿಃ ಸುಮಧ್ಯಮೇ ।
ಹ್ರೀಃ ಶ್ರೀಃ ಕೀರ್ತಿರಥೋ ಕಾಂತಿರಾಸಾಂ ಕಾ ತ್ವಂ ವರಾನನೇ ॥... – ಭಾರತ (ವಿರಾಟ. ೧೪/೧೫, ೧೬)

\+ ಇಂದ್ರಾಣೀ ವಾರುಣೀ ವಾ ತ್ವಂ ತ್ವಷ್ಟುರ್ಧಾತುಃ ಪ್ರಜಾಪತೇಃ ।
ದೇವ್ಯೋ ದೇವೇಷು ವಿಖ್ಯಾತಾಸ್ತಾಸಾಂ ತ್ವಂ ಕತಮಾ ಶುಭೇ ॥ ...
ವೃಷ್ಣಾಂಶ್ಚಾವಸ್ಥಿತಾನ್ ಪಶ್ಯ ಯ ಇಮೇ ಮಮ ವೇಶ್ಮನಿ ।
ತೇಽಪಿ ತ್ವಾ ಸಂನಮಂತೀವ ಪುಮಾಂಸಂ ಕಂ ನ ಮೋಹಯೇಃ ॥ – ಭಾರತ (ವಿರಾಟ. ೯/೧೬, ೨೪)

ಕಳಿಸುವುದಾಗಿಯೂ, ಮುಂದಾಗುವ ಅನಾಹುತಕ್ಕೆ ತಾನು ಜವಾಬ್ದಾರಳಲ್ಲ ಎಂದು ಎಚ್ಚರ ನೀಡಿಯೇ ವಚನವಿತ್ತಳು. ಮುಂದೆ ಹಾಗೆ ಕಳಿಸಿದಳೂ ಸಹ.

೨) ಹಾಗೆ ಹೇಳಿದಾಗ ದ್ರೌಪದಿ ಭಯದಿಂದ ಆಗದು ಎಂದಳು. ಅಂತಹ ಭಯಕ್ಕೆ ದ್ರೌಪದಿಗೆ ಅಶಕ್ತಿ ಮೊದಲಾದವುಗಳು ಕಾರಣವಲ್ಲ, ಭೀಮಪತ್ನಿಯಾದ ಅವಳಿಗೆ ಯಾರ ಭಯ ತಾನೇ ಇರಲು ಸಾಧ್ಯ? ಅಂತಹ ಪಾಪಿಯ ಸ್ಪರ್ಶ ತನಗಾಗುವುದು ಎಂಬ ಅಪಾವಿತ್ರ್ಯದ ಭಯವೇ ಹೊರತು ಅಶಕ್ತಿಯ ಭಯವಲ್ಲ ಎಂಬ ವಿಶೇಷಾರ್ಥವನ್ನು ಶ್ರೀವಾದಿರಾಜಸ್ವಾಮಿಗಳು ತಿಳಿಸಿರುವರು:

ನೇತಿ ಭೀತಾऽವದತ್ಸೇತ್ಯತ್ರ, ಅಸ್ಪೃಶ್ಯಸ್ಪರ್ಶಾದ್ಭೀತಾ। ನ ತು ಸರ್ವಥಾ ಭೀತಾ। ಭೀಮಪತ್ನ್ಯಾಃ ಭಯಾಭಾವಾದಿತಿ ಭಾವಃ ॥

ಬಲಾತ್ ತಯಾ ಪ್ರೇರಿತಾ ತದ್ಗೃಹಾಯ
ಯದಾऽಗಮತ್ ತೇನ ಹಸ್ತೇ ಗೃಹೀತಾ।
ವಿಧೂಯ ತಂ ಪ್ರಾದ್ರವತ್ ಸಾ ಸಭಾಯೈ
ಸ್ಮೃತ್ವಾऽऽದಿತ್ಯಸ್ಥಂ ವಾಸುದೇವಂ ಪರೇಶಮ್ ॥ ೨೨ ॥

ಅ: ಬಲಾತ್ಕಾರದಿಂದ ಅವಳು ಅವನ ಮನೆಗೆ ಕಳುಹಿಸಲು ದ್ರೌಪದಿ ಅಲ್ಲಿಗೆ ತೆರಳಿದಳು. ದ್ರೌಪದಿಯನ್ನು ಅವನು ಕೈ ಹಿಡಿಯಲು ಹೋದ. ಅವಳು ಅವನನ್ನು ಕೈಕೊಡವಿ ಬೀಳಿಸಿ ಸಭೆ-ಯತ್ತ ಓಡಿದಳು. ಹಾಗೆ ಓಡುವಾಗ ಸೂರ್ಯಾಂತರ್ಗತನಾದ ಪರೇಶನಾದ ಶ್ರೀಹರಿಯನ್ನು ನೆನೆದಳು.

ವಿ: ೧) ದ್ರೌಪದಿಯನ್ನು ಕೀಚಕ ಬಲಾತ್ಕರಿಸಲೆಂದು ಕೈಹಿಡಿದಾಗ ದ್ರೌಪದಿ ಕೈಕೊಡವಿ-ಕೊಂಡು ಸೂರ್ಯಾಂತರ್ಯಾಮಿಯಾದ ಹರಿಯನ್ನು ಪ್ರಾರ್ಥಿಸಿ ಹೊರಕ್ಕೋಡಿದಳು ಎಂದರ್ಥ.

೨) ಮೂಲದಲ್ಲಿನ **'ಉಪಾತಿಷ್ಠತ ಸಾ ಸೂರ್ಯಂ'** ಎಂಬುದಕ್ಕೆ **'ಆದಿತ್ಯಸ್ಥಂ ವಾಸುದೇವಂ'** ಎಂಬುದು ನಿರ್ಣಯ. ಸ್ವತಃ ಸೂರ್ಯೋತ್ತಮೆಯಾದ ದ್ರೌಪದಿ ಸ್ಮರಿಸಿದ್ದು ಸೂರ್ಯಾಂತರ್ಯಾ-ಮಿಯಾದ ನಾರಾಯಣನನ್ನೇ ಹೊರತು ಸೂರ್ಯನನ್ನಲ್ಲ ಎಂದು ತಾತ್ಪರ್ಯ.

೩) ಮನೆ ಬಿಡುವ ಮುನ್ನ ಹಾಗೆ ಸೂರ್ಯಾಂತರ್ಯಾಮಿಯಾದ ಶ್ರೀಹರಿಯನ್ನು ಪ್ರಾರ್ಥಿಸಿದರೆ ದುರ್ಜನರಿಂದ ಅತ್ಯಾಚಾರಾದಿಗಳ ಭಯವಿರದು ಎಂಬ ತತ್ತ್ವವೂ ಇದರಿಂದ

---

೨೨. ಉಪಾತಿಷ್ಠತ್ ಸಾ ಸೂರ್ಯ ಮುಹೂರ್ತಮಬಲಾ ತತಃ।
ಸ ತಸ್ಯಾಸ್ತನುಮಧ್ಯಾಯಾಃ ಸರ್ವಂ ಸೂರ್ಯೋऽವಬುದ್ಧವಾನ್ ॥
ಅಂತರ್ಹಿತಂ ತತಸ್ತಸ್ಯಾ ರಕ್ಷೋ ರಕ್ಷಾರ್ಥಮಾದಿಶತ್ ॥
ತಚ್ಚೈನಾಂ ನಾಜಹಾತ್ ತತ್ರ ಸರ್ವಾವಸ್ಥಾಸ್ವನಿಂದಿತಾಮ್ ॥ – ಭಾರತ (೪/೧೫/೧೯,೨೦)

ಸೂಚಿತ ಎಂದು ತಿಳಿಯಬಹುದು. ದ್ರೌಪದಿ ಹಾಗೆ ಓಡಿದ್ದು ವಿರಾಟನ ಸಭೆಯತ್ತ, ಆ ಸಭೆಯಲ್ಲಿ ವಿರಾಟನೊಂದಿಗೆ ಧರ್ಮರಾಜನೂ ಇದ್ದಿದ್ದು ಅದಕ್ಕೆ ಕಾರಣ.

ಅನುದ್ರುತ್ಯೈನಾಂ ಪಾತಯಿತ್ವಾ ಪದಾ ಸ
ಸಂತಾಡಯಾಮಾಸ ತದಾ ರವಿಸ್ಥಿತಃ।
ನಾರಾಯಣೋ ಹೇತಿನಾಮೈವ ರಕ್ಷೋ
ನ್ಯಯೋಜಯತ್ ತದದೃಶ್ಯಂ ಸಮಾಗಾತ್ ॥ ೨೩ ॥

ಅ: ಬೆನ್ನಟ್ಟಿ ತೆರಳಿದ ಕೀಚಕ ದ್ರೌಪದಿಯನ್ನು ಕೆಳಗೆ ಬೀಳಿಸಿ ಕಾಲಿಂದ ಒದ್ದ. ಆಗ ಸೂರ್ಯಾಂತರ್ಯಾಮಿಯಾಗಿದ್ದ ನಾರಾಯಣ ಹೇತಿ ಎಂಬ ರಾಕ್ಷಸನನ್ನು ಕಳುಹಿಸಿದ ಅವನು ಅದೃಶ್ಯನಾಗಿಯೇ ಅನುಸರಿಸಿ ಬಂದಿದ್ದ.

ವಿ: ಹಾಗೆ ಓಡುತ್ತಿದ್ದ ದ್ರೌಪದಿಯನ್ನು ಕೀಚಕ ಅಟ್ಟಿಸಿಕೊಂಡು ಹೋಗಿ ಕೆಳಗೆ ಬೀಳಿಸಿ, ಕಾಲಿನಿಂದ ಒದ್ದು ಅವಮಾನಿಸಿದ. ಆ ವೇಳೆಗೆ ಶ್ರೀಹರಿ ಕಳುಹಿಸಿದ್ದ ಹೇತಿ ಎಂಬ ರಾಕ್ಷಸ ಅದೃಶ್ಯನಾಗಿ ಹಿಂಬಾಲಿಸಿ ಬಂದವನು ಅದನ್ನು ಕಂಡ ಎಂದರ್ಥ.

ವಾಯುವಿನಿಂದ ಕೀಚಕನ ಪರಾಭವ

ವಾಯುಸ್ತಮಾವಿಶ್ಯ ಚ ಕೀಚಕಂ ತಂ
ನ್ಯಪಾತಯತ್ ತಾಂ ಸಮೀಕ್ಷ್ಯೈವ ಭೀಮಃ।
ಚುಕೋಪ ವೃಕ್ಷಂ ಚ ಸಮೀಕ್ಷಮಾಣಂ
ತಂ ವಾರಯಾಮಾಸ ಯುಧಿಷ್ಠಿರೋಽಗ್ರಜಃ ॥ ೨೪ ॥

ಅ: ವಾಯುವು ಆ ರಾಕ್ಷಸನೊಳಗೆ ಪ್ರವೇಶಿಸಿ ಆ ಕೀಚಕನನ್ನು ಹೊಡೆದು ಬೀಳಿಸಿದ. ದ್ರೌಪದಿಯನ್ನು ಹಾಗೆ ಕಾಣುತ್ತಲೇ ಭೀಮಸೇನ ಕೋಪಗೊಂಡ. ವೃಕ್ಷವೊಂದನ್ನು ದಿಟ್ಟಿಸುತ್ತಿದ್ದ ಅವನನ್ನು ಅಣ್ಣನಾದ ಧರ್ಮರಾಜ ತಡೆದ.

---

೨೩. ತಾಂ ಕೀಚಕಃ ಪ್ರಧಾವಂತೀಂ ಕೇಶಪಾಶೇ ಪರಾಮೃಶತ್।
ಅಥೈನಾಂ ಪಶ್ಯತೋ ರಾಜ್ಞಃ ಪಾತಯಿತ್ವಾ ಪದಾऽವಧೀತ್ ॥
ತಸ್ಯ ಯೋऽಸೌ ತದಾರ್ಕೇಣ ರಾಕ್ಷಸಃ ಸನ್ನಿಯೋಜಿತಃ।
ಸ ಕೀಚಕಮಪೋವಾಹ ವಾತವೇಗೇನ ಭಾರತ ॥
ಸ ಪಪಾತ ತದಾ ಭೂಮೌ ರಕ್ಷೋಬಲಸಮಾಹತಃ।
ವಿಘೂರ್ಣಮಾನೋ ನಿಶ್ಲೇಷ್ಟಶ್ಛಿನ್ನಮೂಲ ಇವ ದ್ರುಮಃ ॥ – ಭಾರತ (೪/೧೬/೧೦/೧೨)

ವಿಃ ೧) ಕೀಚಕನನ್ನು ಹೊಡೆದು ಬೀಳಿಸಲೆಂದು ಆ ಹೇತಿ ರಾಕ್ಷಸನೊಳಗೆ ವಾಯುದೇವರು ಪ್ರವೇಶಿಸಿದರು ಎಂದರ್ಥ. ಅವನ ಪೆಟ್ಟಿಗೆ ಕೀಚಕ ಉರುಳಿಬಿದ್ದ. ಆ ವೇಳೆಗೆ ಸಭೆಯಲ್ಲಿದ್ದವರೆಲ್ಲ ಅದನ್ನು ನೋಡಿಯೂ ಸುಮ್ಮನೇ ಇದ್ದುದನ್ನು ಗಮನಿಸಿ ಭೀಮಸೇನ ಅವನನ್ನು ಹೊಡೆದು ಹಾಕಲೆಂದು ಅಲ್ಲಿದ್ದ ಮರವೊಂದನ್ನು ದಿಟ್ಟಿಸಿ ನೋಡಿದ. ಅದನ್ನು ಗಮನಿಸಿದ ಧರ್ಮರಾಜ 'ಎಲವೋ, ಸೂದ ಅಡಿಗೆಗೆ ಈ ಮರವೇಕೆ, ಕಾಡಿನಲ್ಲಿ ಸಾಕಷ್ಟಿಲ್ಲವೇನು' ಎಂದು ತಡೆದ.

೨) ದ್ರೌಪದಿಯನ್ನು ಆ ಸ್ಥಿತಿಯಲ್ಲಿ ಕಂಡಾಗಲೂ ವಿರಾಟರಾಜ ಯಾವ ಪ್ರತಿಕ್ರಿಯೆಯನ್ನೂ ತೋರದೇ ಸುಮ್ಮನಿದ್ದ. ದ್ಯೂತಸಭೆಯಲ್ಲಿ ರಾಜನಾಗಿದ್ದ ಧೃತರಾಷ್ಟ್ರ ಕುರುಡನಾಗಿ ವಸ್ತ್ರಾಪಹರಣ–ದಂತಹ ಹೀನ ಪ್ರಯತ್ನವನ್ನು ತಡೆಯದೇ ಸುಮ್ಮನಿದ್ದರೆ, ಈ ಸಭೆಯಲ್ಲಿ ವಿರಾಟರಾಜ ಕಣ್ಣಿದ್ದವನಾಗಿಯೂ ಕುರುಡನಂತೆ ಸುಮ್ಮನಿದ್ದ.

೩) ಧೃತರಾಷ್ಟ್ರ ಸುಮ್ಮನಿರಲು ಅವನಿಗೆ ಪುತ್ರವ್ಯಾಮೋಹ ಕಾರಣವಾಗಿದ್ದರೆ, ಇಲ್ಲಿ ವಿರಾಟ ಸುಮ್ಮನಿರಲು ಕೀಚಕನ ಭಯ ಕಾರಣವಾಗಿತ್ತು. ಅಲ್ಲಿ ಹೆಸರಿಗೆ ಧೃತರಾಷ್ಟ್ರ ರಾಜನಾಗಿದ್ದು ದುರ್ಯೋಧನನ ಕೈಯಲ್ಲಿ ರಾಜ್ಯ ಸೂತ್ರವಿದ್ದರೆ, ಇಲ್ಲಿ ವಿರಾಟ ಹೆಸರಿಗೆ ರಾಜನಾಗಿದ್ದು ಕೀಚಕನ ಕೈಯಲ್ಲಿ ಅಧಿಕಾರವಿದ್ದದ್ದು ಕಾರಣವಾಗಿತ್ತು.

೪) ಹೀಗೆ ರಾಜರನ್ನು ಮೂಲೆಗುಂಪು ಮಾಡಿ ತಮ್ಮ ಅಧಿಕಾರದ ದುರ್ಬಳಕೆ ಮಾಡಿಕೊಳ್ಳುವ ಪದ್ಧತಿಗೆ ದುರ್ಯೋಧನ ಕೀಚಕರೇ ಪ್ರವರ್ತಕರು ಎಂದು ಭಾವಿಸಬಹುದು.

೫) ಅಲ್ಲಿ ಧೃತರಾಷ್ಟ್ರ ದ್ಯೂತವನ್ನು ತಡೆಯದೇ ಸುಮ್ಮನೇ ಕೂತಿದ್ದರೆ, ಇಲ್ಲಿ ವಿರಾಟರಾಜ ತಾನೇ ದ್ಯೂತದಲ್ಲಿ ತೊಡಗಿಬಿಟ್ಟಿದ್ದ ಎಂಬುದು ವಿಶೇಷ.

೬) ವಿರಾಟನಿಗೆ ದ್ಯೂತವ್ಯಸನಕ್ಕಿಂತ ಹೆಚ್ಚಾಗಿ ಕೀಚಕನ ಭಯ ಕಾಡುತ್ತಿತ್ತು. ಆ ಭಯವನ್ನು ತೋರಗೊಡದಿರಲು ಅವನು ದ್ಯೂತವನ್ನು ಆಶ್ರಯಿಸಿದ್ದ ಎಂದು ತಿಳಿಯಬೇಕು.

---

೨೪. ತಸ್ಯ ಭೀಮೋ ವಧಂ ಪ್ರೇಪ್ಸುಃ ಕೀಚಕಸ್ಯ ದುರಾತ್ಮನಃ।
ದಂತೈರ್ದಂತಾಂಸ್ತದಾ ರೋಷಾನ್ನಿಷ್ಪಿಪೇಷ ಮಹಾಮನಾಃ ॥
ಧೂಮಚ್ಛಾಯಾಂ ಹ್ಯಭಜತಾಂ ನೇತ್ರೇ ಚೋಚ್ಚೈ ರ್ತಪಕ್ಷ್ಮಣೇ।
ಸಸ್ವೇದಾ ಭ್ರುಕುಟೀ ಚೋಗ್ರಾ ಲಲಾಟೇ ಸಮವರ್ತತ ॥
ಹಸ್ತೇನ ಮಮೃಜೇ ಚೈವ ಲಲಾಟಂ ಪರವೀರಹಾ।
ಭೂಯಶ್ಚತ್ವರಿತಃ ಕ್ರುದ್ಧಃ ಸಹಸೋತ್ಥಾತುಮೈಚ್ಛತ ॥ – ಭಾರತ (ವಿರಾಟ ೧೬/೧೪-೧೬)

ಪ್ರಬೋಧನಭಯಾದ್ರಾಜಾ ಭೀಮಂ ತಂ ಪ್ರತ್ಯಷೇಧಯತ್।
ತಂ ಮತ್ತಮಿವ ಮಾತಂಗಂ ಈಕ್ಷಮಾಣಂ ವನಸ್ಪತಿಮ್ ॥
ಸ ತಮಾವಾರಯಾಮಾಸ ಭೀಮಸೇನಂ ಯುಧಿಷ್ಠಿರಃ ॥
ಆಲೋಕಯಸಿ ಕಿಂ ವೃಕ್ಷಂ ಸೂದ ದಾರುಕೃತೇನ ವೈ।
ಯದಿ ತೇ ದಾರುಭಿಃ ಕೃತ್ಯಂ ಬಹಿರ್ವಕ್ಷ್ಯಾನ್ನಿಗೃಹ್ಯತಾಮ್ ॥
ಇಂಗಿತಜ್ಞಃ ಸ ತು ಭಾನುಸ್ತೂಷ್ಣೀಮಾಸೀದ್ವೃಕೋದರಃ ॥ – ಭಾರತ (ವಿರಾಟ ೧೬/೧೭-೧೯)

೭) ಧರ್ಮರಾಜ ಆಗ ಹತಾಶನಾಗಿ ಸುಮ್ಮನಿದ್ದರೆ ಈಗ ಅಜ್ಞಾತವಾಸಕಾಲದಲ್ಲಿ ತಮ್ಮ ಗುರುತು ಸಿಕ್ಕಬಾರದು ಎಂಬ ಕಾರಣದಿಂದ ಸುಮ್ಮನಿದ್ದ ಎಂದು ತಿಳಿಯಬೇಕು.

೮) ಆದರೆ ಭೀಮನಿಗೆ ಈ ಮರ ಬೇಕಿಲ್ಲ, ಕಾಡಿನಲ್ಲಿ ಬೇಕಾದಷ್ಟು ಮರಗಳುಂಟು ಎಂದು ಹೇಳುವ ಮೂಲಕ ಕೀಚಕನನ್ನು ನೀನು ಕೊಲ್ಲಲು ಅಡ್ಡಿಯಿಲ್ಲ, ಆದರೆ ಎಲ್ಲರಿಗೆ ತಿಳಿಯುವಂತೆ ಕೊಲ್ಲುವುದು ಬೇಡ ಎಂದು ಸೂಚಿಸಿದ ಎಂದು ತಿಳಿಯಬಹುದು. ಅವನ ಸೂಚನೆಯನ್ನು ಗ್ರಹಿಸಿದ ಭೀಮಸೇನ ಆಗ ಸುಮ್ಮನಾದದ್ದು ಆ ಕಾರಣದಿಂದಲೇ ಎಂದು ತಿಳಿಯಬೇಕು.

ಭೀಮನ ಬಳಿಗೆ ದ್ರೌಪದಿ

ಕೃಷ್ಣಾ ರಾತ್ರೌ ಭೀಮಸಕಾಶಮೇತ್ಯ
ಹಂತುಂ ಪಾಪಂ ಕೀಚಕಂ ಪ್ರೈರಯತ್ ತಮ್।
ಭೀಮಸ್ಯ ಬುದ್ಧ್ಯಾ ನಿಶಿ ಸಾ ಕೀಚಕಂ ಚ
ಜಗಾದ ಗಂತುಂ ಶೂನ್ಯಗೃಹಂ ಸ ಚಾಗಾತ್ ॥ ೨೫ ॥

ಅ: ಅಂದು ರಾತ್ರಿಯಲ್ಲಿ ದ್ರೌಪದಿ ಭೀಮನ ಬಳಿಗೆ ತೆರಳಿ ಪಾಪಿಯಾದ ಕೀಚಕನನ್ನು ಕೊಲ್ಲಲು ಅವನನ್ನು ಪ್ರೇರಿಸಿದಳು. ಭೀಮ ತಿಳಿಸಿದಂತೆ ಮಾರನೆಯ ದಿನ ರಾತ್ರಿ ಅವಳು ಕೀಚಕನಿಗೆ ಶೂನ್ಯಗೃಹಕ್ಕೆ ತೆರಳಲು ತಿಳಿಸಿದಳು. ಅವನೂ ಅಲ್ಲಿಗೆ ಹೋದ.

ವಿ: ೧) ಅಂದು ದ್ರೌಪದಿ ಮಧ್ಯರಾತ್ರಿಯಲ್ಲಿ ಭೀಮಸೇನನ ಬಳಿಗೆ ತೆರಳಿದಳು. ಹಾಗೆ ತೆರಳಿ–ದಾಗ ಭೀಮಸೇನ ಅಡಿಗೆ ಮನೆಯಲ್ಲಿ ಮಲಗಿದ್ದಾಗ ಅವನ ತೇಜಸ್ಸಿನಿಂದ ಅದೆಲ್ಲಾ ಬೆಳಗುತ್ತಿತ್ತಂತೆ.

೨) ವಾಯುದೇವರ ಅವತಾರರಾದ ಶ್ರೀಮಧ್ವಾಚಾರ್ಯರ ಕಾಲಿನ ಅಂಗುಷ್ಠದ ಉಗುರಿನ ತುದಿಯಿಂದಲೇ ಪ್ರಕಾಶ ಹೊರಹೊಮ್ಮಿದ ವಿವರ ಸುಮಧ್ವವಿಜಯದಲ್ಲಿದೆ (೧೬/೬).

---

೨೫. ಅದ್ಯ ತಂ ಸೂದಯಿಷ್ಯಾಮಿ ಕೀಚಕಂ ಸಹಬಾಂಧವಮ್ ।
ಯೈಷಾ ನರ್ತನಶಾಲೇಹ ಮತ್ಸ್ಯರಾಜೇನ ಕಾರಿತಾ ॥
ದಿವಾऽತ್ರ ಕನ್ಯಾ ನೃತ್ಯಂತಿ ರಾತ್ರೌ ಯಾಂತಿ ಯಥಾಗೃಹಮ್ ।
ತತ್ರಾಸ್ತಿ ಶಯನಂ ದಿವ್ಯಂ ದೃಢಾಂಗಂ ಸುಪ್ರತಿಷ್ಠಿತಮ್ ॥
ತತ್ರಾಸ್ಯ ದರ್ಶಯಿಷ್ಯಾಮಿ ಪೂರ್ವಪ್ರೇತಾನ್ ಪಿತಾಮಹಾನ್ ॥
(ದ್ರೌಪದಿಯನ್ನು ಕುರಿತು ಭೀಮನ ವಚನ) – ಭಾರತ (ವಿರಾಟ. ೨೨/೧-೩)

೨೫. ಭೀಮಸ್ಯ ಬುದ್ಧ್ಯಾ - ಭೀಮಶಿಕ್ಷಿತಬುದ್ಧ್ಯೇತ್ಯರ್ಥಃ। – (ಜ.)

ದ್ರೌಪದಿಯೂ ಅಲ್ಲಿಗೆ ಆಗಮಿಸಿ ಭೀಮನನ್ನು ತಬ್ಬಿ ತನ್ನ ವಿಚಾರವನ್ನು ಹೇಳಿಕೊಳ್ಳುವಳು. ಭೀಮು ಅವಳಿಗೆ ಅಭಯ ನೀಡಿ ಕೀಚಕನನ್ನು ಮಾರನೆಯ ರಾತ್ರಿ ಕೊಲ್ಲುವುದಾಗಿ ವಚನವಿತ್ತು ಅದಕ್ಕೆ ಉಪಾಯವನ್ನು ತಿಳಿಸುವನು.

೩) ಇಲ್ಲಿ ಭೀಮು ದ್ರೌಪದಿಯರಿಬ್ಬರೂ ಒಬ್ಬರನ್ನೊಬ್ಬರು ಪೂರ್ಣ ಅರಿತಿದ್ದ ಋಜು ದೇವತೆಗಳು. ಅವರ ಮಾತುಕಥೆಗಳಲ್ಲಿ ವಿಡಂಬನೆ ಅಸುರ ಮೋಹನಗಳು ಏದ್ದುಕಾಣುವವು.

೪) ಇಲ್ಲಿ ಶೂನ್ಯಗೃಹ ಎಂದರೆ ನರ್ತನ ಶಾಲೆ ಎಂದು ಹೆಸರು. ಇಡೀ ದಿನ ಅಲ್ಲಿ ಅರ್ಜುನ ಬೃಹನ್ನಳೆಯ ವೇಷದಿಂದ ಉತ್ತರೆ ಮೊದಲಾದ ಅಂತಃಪುರಸ್ತ್ರೀಯರಿಗೆ ನೃತ್ಯಗೀತಾದಿಗಳನ್ನು ಹೇಳಿಕೊಡುತ್ತಿದ್ದ. ರಾತ್ರಿಯಲ್ಲಿ ಮಾತ್ರ ಊರ ಹೊರಗಿದ್ದ ಅದರಲ್ಲಿ ಯಾರೂ ಇರದೇ ಶೂನ್ಯಗೃಹ–ವಾಗುತ್ತಿತ್ತು, ಅದಕ್ಕೆಂದೇ ಅದನ್ನು ಶೂನ್ಯಗೃಹ ಎಂದು ಇಲ್ಲಿ ಕರೆಯಲಾಗಿದೆ. ಇಂದು ರಾತ್ರಿ ನರ್ತನ ಶಾಲೆಗೆ ಬಾ, ಅಲ್ಲಿ ನಿನ್ನ ಗತಿ ಪೂರೈಸುವುದು ಎಂದು ದ್ರೌಪದಿ ನುಡಿಯಲು ಕೀಚಕ ಅಲ್ಲಿಗೆ ತೆರಳಿದ.

೫) ದ್ರೌಪದಿಯು ಅರ್ಜುನಾದಿಗಳನ್ನು ಕೇಳದೇ ಭೀಮನನ್ನು ಕೇಳಿದ್ದು ಗಮನಾರ್ಹ.

ಕೀಚಕನ ವಧೆ

ತತ್ರೈನಮಾಸಾದ್ಯ ಚ ಭೀಮಸೇನೋ
ವಿಜಿತ್ಯ ತಂ ಬಾಹುಯುದ್ಧೇ ನಿಹತ್ಯ।
ಶಿರೋ ಗುದೇ ಪಾಣಿಪಾದೌ ಚ ತಸ್ಯ
ಪ್ರವೇಶಯಾಮಾಸ ವಿಮೃದ್ಯ ವೀರಃ ॥ ೨೬ ॥

ಅ: ಅಲ್ಲಿಗೆ ಭೀಮಸೇನ ತಲುಪಿ, ಅವನನ್ನು ಬಾಹುಯುದ್ಧದಲ್ಲಿ ಗೆದ್ದು, ಕೊಂದುಹಾಕಿದ; ಬಳಿಕ ವೀರನಾದ ಅವನು ಅವನ ಶಿರಸ್ಸು ಮತ್ತು ಕೈಕಾಲುಗಳನ್ನು ಅವನ ಗುದದಲ್ಲಿ ಸೇರಿಸಿದ.

ವಿ: ೧) ಕೀಚಕನನ್ನು ಭೀಮಸೇನ ಅನಾಯಾಸವಾಗಿ ಸೋಲಿಸಿ ಕೊಂದುಹಾಕಿದ. ಬಳಿಕ ಅವನ ಗುದದ ಮೂಲಕ ಅವನ ತಲೆ ಕೈಕಾಲುಗಳನ್ನು ದೇಹದೊಳಗೆ ಸೇರಿಸಿ ಮಾಂಸದ ಮುದ್ದೆಯನ್ನಾಗಿ ಮಾಡಿ ಕಾಲ್ಚೆಂಡಿನಂತೆ ಒದ್ದು ಅವನ ವಿಕೃತದೇಹವನ್ನು ದ್ರೌಪದಿಗೆ ತೋರಿಸಿದ.

---

೨೬. ಆಕ್ರಮ್ಯ ಚ ಕಟೀದೇಶೇ ಜಾನುನಾ ಕೀಚಕಾಧಮಮ್ ।
ಅಪೀಡಯತ ಬಾಹುಭ್ಯಾಂ ಪಶುಮಾರಮಮಾರಯತ್ ॥
ತಸ್ಯ ಪಾದೌ ಚ ಪಾಣೀ ಚ ಶಿರೋ ಗ್ರೀವಾಂ ಚ ಸರ್ವಶಃ ।
ಕಾಯೇ ಪ್ರವೇಶಯಾಮಾಸ ಪಶೋರಿವ ಪಿನಾಕಧೃಕ್ ॥ – ಭಾರತ (ವಿರಾಟ. ೨೨/೭೭,೮೨)

೩) ಭೀಮಸೇನ ಅವನನ್ನು ಸಂಹರಿಸಿದ ಅನಂತರ ಹಾಗೆ ಮಾಂಸದ ಮುದ್ದೆಯನ್ನಾಗಿ ಮಾಡಲು ಕಾರಣ ಕೀಚಕನ ಸಂಹಾರ ತನ್ನಿಂದಲೇ ಆಗಿದೆ ಎಂದು ದುರ್ಯೋಧನಾದಿಗಳಿಗೆ ಮನವರಿಕೆ ಮಾಡಿಕೊಡಲೆಂದು ಮುಂದಿನ ಪ್ರಸಂಗಗಳಿಂದ ತಿಳಿಯುವುದು. ಆ ಮೂಲಕ ಭೀಮಸೇನ ಪರಸ್ತ್ರೀಯರನ್ನು ಕೆಣಕುವವರಿಗೆ ಆಗುವ ದುರ್ಗತಿಯನ್ನು ಜಗತ್ತಿಗೆ ಸಾರಿದ ಎಂದೂ ತಿಳಿಯಬೇಕು.

೪) ಇಂದಿಗೂ ವಿರಾಟನಗರವೆಂದು ಕರೆಯಲಾಗುವ ಜೈಪುರದ ಬಳಿಯ ಛೋಟಾ ಕುರುಕ್ಷೇತ್ರವೆಂಬಲ್ಲಿ ಭೀಮನ ದೇವಸ್ಥಾನವೊಂದಿದ್ದು ಅಲ್ಲಿಗೆ ವಿವಾಹವಾದ ನವದಂಪತಿಗಳು ಸಂದರ್ಶನ ನೀಡುವ ಪದ್ಧತಿಯಿದೆ ಎಂದು ಪ್ರತೀತಿ. ಅಲ್ಲಿಗೆ ಸಂದರ್ಶನ ನೀಡುವ ವರ ತನ್ನ ಪತ್ನಿಯನ್ನು ಕೆಣಕಿದವನನ್ನು ಸದೆಬಡಿದು ಹಾಕಲು ಶಕ್ತಿ ನೀಡು ಎಂದು ಭೀಮನನ್ನು ಪ್ರಾರ್ಥಿಸುವ ಪರಿಪಾಠವೂ ಉಂಟು ಎನ್ನುವರು.

೫) ಭೀಮಸೇನ ಹಾಗೆ ತೆರಳಿದ್ದು ಸ್ತ್ರೀ ವೇಷದಲ್ಲಿ ಎಂಬ ಉಲ್ಲೇಖ ಕೆಲವೆಡೆ ಉಂಟು. ಆದರೆ, ಮೂಲಮಹಾಭಾರತದಲ್ಲಿ ಆ ವಿವರ ಬಂದಿಲ್ಲ. ತಾತ್ಪರ್ಯನಿರ್ಣಯದಲ್ಲೂ ಅದು ಗೃಹೀತವಾಗಿಲ್ಲ. ಅಂಧಕಾರ ತುಂಬಿದ ಆ ಶೂನ್ಯಗೃಹದಲ್ಲಿ ಸ್ತ್ರೀವೇಷವನ್ನು ಹಾಕಿಕೊಂಡು ತೆರಳುವ ಔಚಿತ್ಯ ಕಂಡು ಬರುವುದಿಲ್ಲ.

೬) ಭೀಮಸೇನ ಗುಪ್ತವಾಗಿ ಅಲ್ಲಿಗೆ ತೆರಳಿದ ಎಂಬ ಉಲ್ಲೇಖ ಮಾತ್ರ ಮಹಾಭಾರತ–ದಲ್ಲಿದೆ (**'ಛನ್ನ ಉಪಾವಿಶತ್'** – ೪/೨೨/೩೮). ಶ್ರೀವಿಜಯದಾಸರ **'ಭೀಮ ಶಾಮ ಕಾಮಿನಿ–ಯಾದನು'** ಎಂಬ ಕೀರ್ತನೆಯೊಂದರಲ್ಲಿ ಭೀಮಸೇನ ಸ್ತ್ರೀವೇಷವನ್ನು ಧರಿಸಿದ ಉಲ್ಲೇಖ ಇರುವಂತೆ ಕಾಣುವುದು. ಆದರೆ, ಅದೇ ಕೀರ್ತನೆಯಲ್ಲಿ ಕೊನೆಗೆ **'ಧೀರ ಭೀಮರಾಯ ಭೋರಿಡುತ ಹಾರಿ ಕೋರೆಮೀಸೆಯನೇರಿಸಿ ಹುರಿ ಮಾಡಿ...'**(ನುಡಿ ೧೪) ಎಂದು ಸ್ಪಷ್ಟ ಉಲ್ಲೇಖವಿರುವುದ–ರಿಂದ ಆಗ ಧರಿಸಿದ್ದು ನಿಜವಾಗಿಯೂ ಸ್ತ್ರೀವೇಷವಲ್ಲ ಎಂಬುದು ಸ್ಫುಟಪಡುವುದು. ದಾಸರಾಯರು ಕೀಚಕನ ಭ್ರಮೆಯನ್ನು ಸುಂದರ ರೂಪಕವಾಗಿ ಹಾಗೆ ಚಿತ್ರಿಸಿರುವರು ಎಂದು ಭಾವಿಸಿದರೆ ಯಾವ ವಿರೋಧವೂ ಇರದು ಎಂದು ತಿಳಿಯಬೇಕು.

ಉಪಕೀಚಕರ ವಧೆ

ಅವಧ್ಯಂ ತಂ ನಿಹತಂ ವೀಕ್ಷ್ಯ ತಸ್ಯ
ಪಂಚೋತ್ತರಂ ಶತಮೇವಾನುಜಾನಾಮ್।
ಸರ್ವಂ ವರಾಚ್ಛಂಕರಸ್ಯ ಹ್ಯವಧ್ಯಂ
ಸಹೈವ ಕೃಷ್ಣಾಂ ತೇನ ದಗ್ಧುಂ ಬಬಂಧ ॥ ೨೭ ॥

ಅ: ಅವಧ್ಯನಾದ ಅವನು ಹತನಾದದ್ದನ್ನು ನೋಡಿ, ಶಿವನ ವರದಿಂದ ಅವಧ್ಯರಾಗಿದ್ದ ಅವನ ನೂರೈದು ಜನ ತಮ್ಮಂದಿರೆಲ್ಲರೂ ಅವನೊಂದಿಗೇ ಸುಡಲೆಂದು ದ್ರೌಪದಿಯನ್ನು ಕಟ್ಟಿದರು.

ವಿ: ೧) ದ್ರೌಪದಿ ಅನಂತರ ಜೋರಾಗಿ ಕೂಗಿ ತನ್ನನ್ನು ಕೆಣಕಿದವನ ಗತಿಯನ್ನು ನೋಡಬನ್ನಿ ಎಂದು ಕರೆಯಲು ಕೀಚಕನ ನೂರೈದು ಜನ ತಮ್ಮಂದಿರು ಅಲ್ಲಿಗೆ ಬಂದು ಅವನ ಶವವನ್ನು ನೋಡುವರು. ಆಗ 'ಇವನ ತಲೆ ಎಲ್ಲಿ? ಕತ್ತೆಲ್ಲಿ? ಕೈಕಾಲುಗಳೆಲ್ಲಿ?' ಎಂದು ದಿಗ್ಭ್ರಾಂತರಾಗುವರು. ಪರಸ್ತ್ರೀಯನ್ನು ಕೆಣಕುವವನಿಗೆ ತಲೆ ಮೊದಲಾದ ಯಾವುವೂ ಉಳಿಯಲಾರವು ಎಂಬುದಕ್ಕೆ ಅದು ಸಂಕೇತವಾಗಿರುವುದು ಗಮನಾರ್ಹ.

೨) ದ್ರೌಪದಿಯ ಕಾರಣದಿಂದಾಗಿ ಅವನು ಸತ್ತಿರುವುದರಿಂದ ಅವಳನ್ನೂ ಜೊತೆಯಲ್ಲಿ ಸುಟ್ಟರೆ ಅವನ ಆಸೆ ಪರಲೋಕದಲ್ಲಾದರೂ ತೀರೀತು ಎಂಬ ಭ್ರಮೆಯಿಂದ ಅವರು ಹಾಗೆ ಮಾಡಿದರು ಎಂದು ತಿಳಿಯಬೇಕು. ಹಾಗೆ ಮಾಡುವ ಮೂಲಕ ಅವರು ತಮ್ಮ ಸಾವಿಗೆ ತಾವೇ ಆಹ್ವಾನ ನೀಡಿಕೊಂಡರು ಎಂಬುದು ಮುಂದೆ ಸ್ಫುಟಪಡುವುದು. ವಿದ್ಯೆಯನ್ನು ಹಾಳುಮಾಡ ಬಯಸುವ ಜನ ತಮ್ಮ ಸಾವಿಗೆ ತಾವೇ ಆಹ್ವಾನ ನೀಡಿಕೊಳ್ಳುವರು ಎಂಬ ಸೂಚನೆ ಇದರಲ್ಲಿದೆ.

ಸಾ ನೀಯಮಾನಾ ಕೀಚಕೈಃ ಸಂರುರಾವ
ಶ್ರುತ್ವೈವ ತಂ ಭೀಮಸೇನೋ ಮಹಾಂತಮ್ ।
ಉದ್ಧೃತ್ಯ ವೃಕ್ಷಂ ತೇನ ಜಘಾನ ಸರ್ವಾ-
ನಾದಾಯ ಕೃಷ್ಣಾಂ ಪುನರಾಗಾತ್ ಪುರಂ ಚ ॥ ೨೮ ॥

---

* ಗೃಹಂ ಚ (ಜ. ಪಾಠ); ಸ್ವಗೃಹಂ ಸ್ವವಾಸಭೂತಂ ಗೃಹಮಿತ್ಯರ್ಥಃ। –(ಜ.)

೨೮. ತಸ್ಯಾಸ್ತಾಃ ಕೃಪಣಾ ವಾಚಃ ಕೃಷ್ಣಾಯಾಃ ಪರಿದೇವಿತಮ್ ।
ಶ್ರುತ್ವೈವಾಭ್ಯಾಪತದ್ ಭೀಮಃ ಶಯನಾದವಿಚಾರಯನ್ ॥ –ಭಾರತ (ವಿರಾಟ. ೨೩/೧೫)

ಸ ತಂ ವೃಕ್ಷಂ ದಶವ್ಯಾಮಂ ಸಸ್ಕಂಧವಿಟಪಂ ಬಲೀ ।
ಪ್ರಗೃಹ್ಯಾಭ್ಯದ್ರವತ್ ಸೂತಾನ್ ದಂಡಪಾಣಿರಿವಾಂತಕಃ ॥
ಊರುವೇಗೇನ ತಸ್ಯಾಥ ನ್ಯಗ್ರೋಧಾಶ್ವತ್ಥಕಿಂಶುಕಾಃ ।
ಭೂಮೌ ನಿಪತಿತಾ ವೃಕ್ಷಾಃ ಸಂಘಶಸ್ತತ್ರ ಶೇರತೇ ॥
ದ್ರವತಸ್ತಾಂಸ್ತು ಸಂಪ್ರೇಕ್ಷ್ಯ ಸ ವಜ್ರೀ ದಾನವಾನಿವ ।
ಶತಂ ಪಂಚಾಧಿಕಂ ಭೀಮಃ ಪ್ರಾಹಿಣೋದ್ ಯಮಸಾದನಮ್ ॥
ವೃಕ್ಷೇಣೈಕೇನ ರಾಜೇಂದ್ರ ಪ್ರಭಂಜನಸುತೋ ಬಲೀ ।
ತತ ಆಶ್ವಾಸಯತ್ ಕೃಷ್ಣಾಂ ಸ ವಿಮುಚ್ಯ ವಿಶಾಂಪತೇ ॥ –ಭಾರತ (ವಿರಾಟ. ೨೩/೨೨,೨೩,೨೭,೨೮)

ಅ: ಕೀಚಕರಿಂದ ಕರೆದೊಯ್ಯಲ್ಪಡುತ್ತಿದ್ದ ಅವಳು ಜೋರಾಗಿ ಕೂಗಿಕೊಂಡಳು. ಅದನ್ನು ಕೇಳುತ್ತಲೇ ಭೀಮಸೇನ ದೊಡ್ಡ ವೃಕ್ಷವೊಂದನ್ನು ಕಿತ್ತಿಕೊಂಡು ಅದರಿಂದಲೇ ಅವರನ್ನೆಲ್ಲಾ ಕೊಂದುಹಾಕಿದನು. ಬಳಿಕ ದ್ರೌಪದಿಯನ್ನು ಕರೆದುಕೊಂಡು ಪಟ್ಟಣಕ್ಕೆ ತೆರಳಿದ.

ಎ: ೧) ದ್ರೌಪದಿ ಆಗ ಮಾಡಿದ್ದು ಅವಿವೇಕ ಎಂಬಂತೆ ಕೆಲವರಿಗೆ ತೋರುವುದುಂಟು. ಆದರೆ, ಕೀಚಕನೊಂದಿಗೆ ಅವನ ತಮ್ಮಂದಿರನ್ನೂ ಕೊಲ್ಲಿಸಿಹಾಕುವ ಮೂಲಕ ವಿರಾಟ ನಗರಕ್ಕೆ ನೆಮ್ಮದಿ ನೀಡುವುದು ದ್ರೌಪದಿಯ ಉದ್ದೇಶವಾಗಿತ್ತು. ಅದಕ್ಕೆಂದೇ ಜೋರಾಗಿ ಕೂಗಿ ಅವನ ತಮ್ಮಂದಿರೆಲ್ಲ ಅಲ್ಲಿಗೆ ಬರುವಂತೆ ಮಾಡಿದಳು.

೨) ಅವರು ನಡೆದ ದುರಂತವನ್ನು ಅರ್ಥ ಮಾಡಿಕೊಳ್ಳುವ ಬದಲು ಅವಳನ್ನೇ ಸುಡುವ ಪ್ರಯತ್ನ ಮಾಡಿದಾಗ ಅವಳು ಭೀಮನನ್ನು ಕೂಗುವ ಮೂಲಕ ಕರೆದಳು. ಭೀಮಸೇನ ಅದನ್ನು ಕೇಳಿಸಿಕೊಂಡು ಅಲ್ಲಿಗೆ ಆಗಮಿಸಿದ.

೩) ಅಡುಗೆ ಮನೆಯಲ್ಲಿ ಇದ್ದ ಭೀಮಸೇನ ಊರ ಹೊರವಲಯದ ದ್ರೌಪದಿಯ ಕೂಗನ್ನು ಕೇಳಿಸಿಕೊಂಡು ಅಲ್ಲಿಗೆ ಹಾಗೆ ಬಂದದ್ದು ವಾಯುದೇವರ ಸರ್ವಾಂತರ್ಯಾಮಿತ್ವಕ್ಕೆ ಸೂಚಕ. ಊರಿನ ಬೇರಾವ ಜನಕ್ಕೂ ಕೇಳದ ಕೂಗು ಭೀಮಸೇನನಿಗೆ ಮಾತ್ರ ಕೇಳಿಸಿದ್ದು ಆತನ ಸೂಕ್ಷ್ಮ-ವೇದಿತ್ವಕ್ಕೆ ನಿದರ್ಶನ.

೪) ಭೀಮಸೇನ ಅಡುಗೆಮನೆಯಿಂದ ಮೇಲಕ್ಕೆ ನೆಗೆದು, ಅಲ್ಲಿಂದ ಮರಗಳಿಂದ ಮರಗಳಿಗೆ ನೆಗೆಯುತ್ತಾ ಆ ಸ್ಮಶಾನಕ್ಕೆ ಧಾವಿಸಿ ಅಲ್ಲಿದ್ದ ದೊಡ್ಡ ವೃಕ್ಷವೊಂದನ್ನು ಹುಲ್ಲುಕಡ್ಡಿಯೆಂಬಂತೆ ಕಿತ್ತಿ ಕೈಯಲ್ಲಿ ಹಿಡಿದು ಅದರ ಎಲೆಗಳನ್ನೆಲ್ಲಾ ನೆಲಕ್ಕೆ ಅಪ್ಪಳಿಸಿ ಬೀಳಿಸಿ ಅದನ್ನು ಕೋಲಿನಂತೆ ಮಾಡಿಕೊಂಡು ಆ ನೂರೈದು ಜನರನ್ನೂ ಹೊಡೆದು ಬೀಳಿಸಿದ ಎಂಬ ರಮ್ಯಚಿತ್ರ ಮಹಾಭಾರತದಲ್ಲಿದೆ.

೫) ಭೀಮಸೇನನ ಬಲ, ಜ್ಞಾನಾದಿ ಗುಣಗಳನ್ನೆಲ್ಲಾ ಅಪೂರ್ವವಾಗಿ ವರ್ಣಿಸುವ ವಿಶಿಷ್ಟ ಭಾಗವಿದು. ಭೀಮಸೇನ ಹಾಗೆಲ್ಲಾ ಮಾಡಿದಾಗಲೂ ದ್ರೌಪದಿಗೆ ಹೀಗೇಕೆ ಮಾಡಿದೆ ಎಂದು ವಿವೇಕ ಹೇಳದೇ ಪ್ರಶಂಸೆ ಮಾಡಿಯೇ ಕರೆದೊಯ್ಯುವುದು ದ್ರೌಪದಿ ಮಾಡಿದ್ದು ಅವಿವೇಕದ ಕಾರ್ಯವಾಗದೇ ಭೀಮನಿಗೆ ಸಮ್ಮತವಾದ ಶ್ರೇಷ್ಠ ಕಾರ್ಯವೇ ಆಗಿತ್ತು ಎಂಬುದಕ್ಕೆ ನಿದರ್ಶನ.

ಏವಂ ಯತ್ನಾತ್ ತಪಸಾ ತೈರವಾಪ್ತೋ
ವರಃ ಶಿವಾದಜಯತ್ವಂ ರಣೇಷು।
ಅವಧ್ಯತಾ ಚೈವ ಷಡುತ್ತರಾಸ್ತೇ
ಶತಂ ಹತಾ ಭೀಮಸೇನೇನ ಸಂಖ್ಯೇ ॥ ೨೯ ॥

ಅ: ಹೀಗೆ ಪ್ರಯತ್ನ ಮಾಡಿ ಶಿವನಿಂದ ಯುದ್ಧದಲ್ಲಿ ಅಜೇಯತ್ವ ವರವನ್ನು, ಅವಧ್ಯತ್ವ ವರವನ್ನು ಪಡೆದುಕೊಂಡಿದ್ದ ಆ ನೂರ ಆರು ಜನರು ಯುದ್ಧದಲ್ಲಿ ಭೀಮಸೇನನಿಂದ ಹತರಾದರು.

ವಿ: ೧) ಹೀಗೆ ನೂರಾರು ಜನ ಕೀಚಕರು ಹತರಾಗುವುದು ಮುಂದೆ ಭೀಮನಿಂದ ನೂರು ಜನ ಕೌರವರು ಹತರಾಗುವುದಕ್ಕೆ ಮುನ್ಸೂಚನೆಯಾಯಿತು ಎಂದು ತಿಳಿಯಬೇಕು.

೨) ಕೀಚಕ ಕಾಮದ ಸಂಕೇತ ಎಂದು ಶ್ರೀವಾದಿರಾಜ ಸ್ವಾಮಿಗಳು ತಿಳಿಸಿರುವರು – **'ಕಾಮೀ ಯೇನ ಹಿ ಕೀಚಕೋ ವಿನಿಹತಃ'** (ಮಧ್ವಾಷ್ಟಕ ಶ್ಲೋ. ೫). ಎಂದರೆ ನೂರಾರು ಕೀಚಕರು ನೂರಾರು ಕಾಮನೆಗಳ ಸಂಕೇತ, ಭೀಮ ಜ್ಞಾನದ ಸಂಕೇತ. ಜ್ಞಾನ ಮೂಡಿದಾಗ ದುಷ್ಕಾಮನೆ–ಗಳೆಲ್ಲಾ ಹಾಗೆ ನಾಶವಾಗಿ ಹೋಗುವವು ಎಂದು ಇದರ ಅಂತರಾರ್ಥ.

ಅಜ್ಞಾತವಾಸದ ಪರಿಸಮಾಪ್ತಿ

ಗಂಧರ್ವ ಇತ್ಯೇವ ನಿಹತ್ಯ ಸರ್ವಾನ್
ಮುಮೋದ ಭೀಮೋ ದ್ರೌಪದೀ ಚಾಥ ಕೃಷ್ಣಾಮ್।
ಯಾಹೀತ್ಯೂಚೇ ತಾಂ ಸುದೇಷ್ಣಾ ಭಯೇನ
ತ್ರಯೋದಶಾಹಂ ಪಾಲಯೇತ್ಯಾಹ ತಾಂ ಸಾ
ಅಸ್ತ್ವೇತ್ಯೇನಾಮಾಹ ಭಯಾತ್ ಸುದೇಷ್ಣಾ
ತಥಾऽವಸನ್ ಪೂರ್ಣಮಬ್ದಂ ಚ ತೇऽತ್ರ ॥ ೩೦ ॥

---

೩೦. ಸೈರಂಧ್ರಿ ಗಮ್ಯತಾಂ ಶೀಘ್ರಂ ಯತ್ರ ಕಾಮಯಸೇ ಗತಿಮ್ ।
ರಾಜಾ ಬಿಭೇತಿ ತೇ ಭದ್ರೇ ಗಂಧರ್ವೇಭ್ಯಃ ಪರಾಭವಾತ್ ॥
ತ್ವಂ ಚಾಪಿ ತರುಣೇ ಸುಭ್ರು ರೂಪೇಣಾಪ್ರತಿಮಾ ಭುವಿ ।
ಪುಂಸಾಮಿಷ್ಟಶ್ಚ ವಿಷಯೋ ಗಂಧರ್ವಾಶ್ಚಾತಿಕೋಪನಾಃ ॥
(ದ್ರೌಪದಿಯನ್ನು ಕುರಿತು ಸುದೇಷ್ಣೆಯ ವಚನ) – ಭಾರತ (ವಿರಾಟ. ೨೪/೨೭,೨೮)

ತ್ರಯೋದಶಾಹಮಾತ್ರಂ ಮೇ ರಾಜಾ ಕ್ಷಾಮ್ಯತು ಭಾಮಿನಿ ।
ಕೃತಕೃತ್ಯಾ ಭವಿಷ್ಯಂತಿ ಗಂಧರ್ವಾಸ್ತೇ ನ ಸಂಶಯಃ ॥
ತತೋ ಮಾಮುಪನೇಷ್ಯಂತಿ ಕರಿಷ್ಯಂತಿ ಚ ಮೇ ಪ್ರಿಯಮ್ ।
ಧ್ರುವಂ ಚ ಶ್ರೇಯಸಾ ರಾಜಾ ಯೋಕ್ಷ್ಯತೇ ಸಹ ಬಾಂಧವೈಃ ॥ – ಭಾರತ (ವಿರಾಟ. ೨೪/೨೯,೩೦)

ವಸ ಭದ್ರೇ ಯಥೇಷ್ಟಂ ತ್ವಂ ತ್ವಾಮಹಂ ಶರಣಂ ಗತಾ ।
ತ್ರಾಯಸ್ವ ಮಮ ಭರ್ತಾರಂ ಪುತ್ರಾಂಶ್ಚೈವ ವಿಶೇಷತಃ ॥ – ಭಾರತ (ವಿರಾಟ. ೨೪/೩೨)

ಅ: ಭೀಮಸೇನ ಗಂಧರ್ವನೆಂಬುದಾಗಿಯೇ ಅವರೆಲ್ಲರನ್ನೂ ಕೊಂದು ಸಂತೋಷಿಸಿದ. ದ್ರೌಪದಿಯೂ ಹಾಗೇ ಸಂತೋಷಿಸಿದಳು. ಬಳಿಕ ಸುದೇಷ್ಣೆ ದ್ರೌಪದಿಗೆ ಭಯದಿಂದ ತೆರಳು ಎಂದು ಕೇಳಿಕೊಂಡಳು. ಅವಳು 'ಇನ್ನು ಹದಿಮೂರು ದಿನಗಳು ಮಾತ್ರ ಪಾಲಿಸು' ಎಂದಳು. ಅದಕ್ಕೆ ಸುದೇಷ್ಣೆ 'ಆಗಲಿ' ಎಂದು ಭಯದಿಂದ ಅಂಗೀಕರಿಸಿದಳು. ಹೀಗೆ ಅವರು ಒಂದು ವರ್ಷ ಅಜ್ಞಾತವಾಸವನ್ನು ಪೂರ್ಣವಾಗಿ ಕಳೆದರು.

ವಿ: ೧) ಹೀಗೆ ಪಾಂಡವರು ವಾಸಿಸುವಾಗ ದ್ರೌಪದಿ ಸುದೇಷ್ಣೆಯ ಮುಂದೆ ತಾನೊಬ್ಬ ಗಂಧರ್ವರ ಪತ್ನಿ ಎಂದು, ತನ್ನ ಐವರು ಪತಿಗಳಾದ ಗಂಧರ್ವರು ಅಪಾರ ಬಲಶಾಲಿಗಳು. ಕಾರಣಾಂತರದಿಂದ ತಾನು ಒಂದು ವರ್ಷ ಮಾತ್ರ ಇಲ್ಲಿರಬೇಕಾಗಿದೆ. ತನ್ನನ್ನು ಸರ್ವವಿಧದಲ್ಲೂ ತನ್ನ ಗಂಡಂದಿರು *ಪಾಲಿಸುವರು. ಅವರಲ್ಲೂ ಒಬ್ಬನು ಮಹಾಬಲಿಷ್ಠನಾದವನು. ಅವನನ್ನು ದೇವತೆಗಳು ಸಹ ಎದುರಿಸಿ ಗೆಲ್ಲಲಾರರು ಎಂದು ತಿಳಿಸಿದ್ದಳು. ಮುಂದೆ ಕೀಚಕ ಕೆಣಕಿದಾಗ ಸುದೇಷ್ಣೆಗೆ ಅವನಿನ್ನು ತನ್ನ ಮಹಾಬಲಿಷ್ಠನಾದ ಪತಿ ಗಂಧರ್ವರಾಜನಿಗೆ ಬಲಿಯಾಗುವುದು ನಿಶ್ಚಿತ ಎಂದು ಎಚ್ಚರಿಸಿದ್ದಳು. ಅವರೆಲ್ಲ ಸತ್ತನಂತರ ಅವರನ್ನು ಕೊಂದಿದ್ದು ತನ್ನ ಪತಿಯಾದ ಗಂಧರ್ವನೇ ಎಂದು ತಿಳಿಸಿದಳು. ಇದೆಲ್ಲವನ್ನು ಇಲ್ಲಿ ಗಂಧರ್ವ ಇತ್ಯೇವ ಎಂಬ ಪದದಿಂದ ತಿಳಿಸಿರುವರು ಎಂದು ತಿಳಿಯಬೇಕು.

೨) ದ್ರೌಪದಿ ಅಂದು ಪ್ರಾತಃ ಕಾಲದಲ್ಲಿ ಸ್ನಾನ ಪೂರೈಸಿ ನಗರದತ್ತ ತೆರಳುವಾಗ ಅಡುಗೆಮನೆ ಬಾಗಿಲಲ್ಲಿ ನಿಂತ ಭೀಮನನ್ನು ನೋಡಿ **'ಗಂಧರ್ವರಾಜಾಯ ನಮೋ ಯೇನಾಸ್ಮಿ ಪರಿವೋಚಿತಾ'** ಎಂದು ವಂದಿಸಿದ ವಿವರ ಮಹಾಭಾರತದಲ್ಲಿದೆ (೪/೨೪/೧೫).

೩) ಕೀಚಕರ ವಧೆಯಿಂದ ಕಂಗೆಟ್ಟ, ಸುದೇಷ್ಣೆ ಈ ಗತಿ ಮುಂದೆ ತನ್ನ ಗಂಡನಾದ ವಿರಾಟನಿಗೂ ಎಲ್ಲಿ ಒದಗುವುದೋ ಎಂಬ ಭಯದಿಂದ ನೀನೀಗಲೇ ತೆರಳಿಬಿಡು ಎಂದು ದ್ರೌಪದಿಗೆ ಒತ್ತಾಯಿಸುವಳು. ಅದಕ್ಕೆ ದ್ರೌಪದಿ ಒಳ್ಳೆಯವರಿಗೆಂದೂ ತಮ್ಮಿಂದ ಕೇಡಾಗದು ಎಂದು ಅಭಯ ನೀಡಿ, ಇನ್ನು ತಾವು ಅಲ್ಲಿರುವುದು ಹದಿಮೂರು ದಿವಸಗಳು ಮಾತ್ರ ಎಂದು ತಿಳಿಸುವಳು.

೪) ಆಗಲೂ ಸುದೇಷ್ಣೆ ಈಗಲೇ ತೆರಳು ಎಂದು ಒತ್ತಾಯಿಸಿದರೆ ಎಲ್ಲಿ ಗಂಧರ್ವ ಕೆರಳುವನೋ ಎಂಬ ಭಯದಿಂದ, ತನ್ನ ಗಂಡ ಮಕ್ಕಳ ರಕ್ಷಣೆ ನಿನಗೆ ಸೇರಿದ್ದು ಎಂದು ಕೇಳಿಕೊಂಡೇ ಅದಕ್ಕೆ ಸಮ್ಮತಿಸುವಳು.

೫) ಹೀಗೆ ಮುಂದೆ ಹದಿಮೂರು ದಿನಗಳು ಕಳೆದು ಪಾಂಡವರ ಅಜ್ಞಾತವಾಸದ ಒಂದು ವರ್ಷ ಪೂರೈಸಿತು ಎಂದು ಭಾವ.

---

* ಗಂಧರ್ವಾಃ ಪತಯೋ ಮಹ್ಯಂ ಯುವಾನಃ ಪಂಚ ಭಾಮಿನಿ ॥...
ಪ್ರಚ್ಛನ್ನಾಶ್ಚಾಪಿ ರಕ್ಷಂತಿ ತೇ ಮಾಂ ನಿತ್ಯಂ ಶುಚಿಸ್ಮಿತೇ ॥ (ದ್ರೌಪದಿಯ ವಚನ) – ಭಾರತ (೪/೯/೩೦, ೩೫)

ಗೋಗ್ರಹಣಕ್ಕೆ ಕೌರವರ ನಿಶ್ಚಯ

ತದಾ ಪಾರ್ಥಾನ್ ಪ್ರವಿಚಿಂತ್ಯಾಖಿಲಾಯಾಂ
ಪೃಥ್ವ್ಯಾಂ ಛನ್ನಾನ್ ಧಾರ್ತರಾಷ್ಟ್ರಸ್ಯ ದೂತಾಃ ।
ಅವಿಜ್ಞಾಯ ಪ್ರಯಯುರ್ಧಾರ್ತರಾಷ್ಟ್ರ-
ಮೂಚುರ್ಹತಂ ಕೀಚಕಂ ಯೋಷಿದರ್ಥೇ ॥ ೩೧ ॥

ಅ: ಆ ವೇಳೆಗೆ ಅಜ್ಞಾತವಾಗಿದ್ದ ಪಾಂಡವರನ್ನು ದುರ್ಯೋಧನನ ಚಾರರು ಹುಡುಕಿ ಸಮಸ್ತ ಭೂಮಂಡಲದಲ್ಲಿ ಕಾಣದೇ ದುರ್ಯೋಧನನ ಬಳಿಗೆ ಬಂದರು; ಹೆಣ್ಣಿಗಾಗಿ ಕೀಚಕ ಹತನಾದದ್ದನ್ನು ತಿಳಿಸಿದರು.

ವಿ: ಪಾಂಡವರ ಅಜ್ಞಾತವಾಸ ಮುಗಿಯುವ ವೇಳೆಗೆ ದುರ್ಯೋಧನನ ಗೂಢಚಾರರು ಪಾಂಡವರ ಸುಳಿವು ಸಿಗಲಿಲ್ಲವೆಂಬ ವಾರ್ತೆಯನ್ನು ದುರ್ಯೋಧನನಿಗೆ ತಿಳಿಸಿದರು ಎಂದರ್ಥ. ಪಾಂಡವರು ಸಿಕ್ಕಲಿಲ್ಲ, ಆದರೆ ವಿರಾಟ ರಾಜನಿಗೆ ರಕ್ಷಣೆಯಾಗಿದ್ದ ಕೀಚಕ ಒಬ್ಬ ಹೆಣ್ಣಿನ ನಿಮಿತ್ತ ಹತನಾದ ವಿವರವನ್ನು ತಾವು ಕೇಳಿದ್ದಾಗಿ ಹೇಳಿದರು.

ತೇನಾವದದ್ದ್ರೌಪದೀಕಾರಣೇನ
ದುರ್ಯೋಧನೋ ನಿಹತಂ ಕೀಚಕಂ ತಮ್ ।
ಭೀಮೇನಾಗುಸ್ತತ್ರ ದುರ್ಯೋಧನಾದ್ಯಾ
ಭೀಷ್ಮಾದಿಭಿಃ ಸಹ ಕರ್ಣೇನ ಚೈವ ॥ ೩೨ ॥

---

೩೧. ತದಾ ಪಾರ್ಥಾನ್ ಪ್ರವಿಚಿಂತ್ಯೇತ್ಯತ್ರ ಅಖಿಲಾಯಾಂ ಧರಾಯಾಂ ಛನ್ನಾನ್= ಕ್ವಚಿಚ್ಛನ್ನಾನ್ ಪ್ರವಿಚಿಂತ್ಯ= ಆಲೋಚ್ಯೇತಿ ಸಂಬಂಧಃ ॥ – (ವಾ.)

೩೧. ಶ್ಯಾಲೋ ರಾಜ್ಞೋ ವಿರಾಟಸ್ಯ ಸೇನಾಪತಿರುದಾರಧೀಃ ।
ಸುದೇಷ್ಣಾಯಾಃ ಸ ವೈ ಜ್ಯೇಷ್ಠಃ ಶೂರೋ ವೀರೋ ಗತವ್ಯಥಃ ॥
ಸ ಹತೋ ನಿಶಿ ಗಂಧರ್ವೈಃ ಸ್ತ್ರೀನಿಮಿತಂ ನರಾಧಿಪ ॥ – ಭಾರತ (ವಿರಾಟ. ೨೫/೨೧,೨೨)

೩೨. ಶಂಕೇ ಕೃಷ್ಣಾನಿಮಿತ್ತಂ ತು ಭೀಮಸೇನೇನ ಕೀಚಕಃ ।
ಗಂಧರ್ವವ್ಯಪದೇಶೇನ ಹತೋ ನಿಶಿ ಮಹಾಬಲಃ ॥
ಕೋ ಹಿ ಶಕ್ತಃ ಪರೋ ಭೀಮಾತ್ ಕೀಚಕಂ ಹಂತುಮೋಜಸಾ ।
ಶಸ್ತ್ರಂ ವಿನಾ ಬಾಹುವೀರ್ಯಾತ್ ತಥಾ ಸರ್ವಾಂಗಚೂರ್ಣನೇ ॥
ಮರ್ದಿತುಂ ವಾ ತಥಾ ಶೀಘ್ರಂ ಚರ್ಮಮಾಂಸಾಸ್ಥಿಚೂರ್ಣಿತಮ್ ॥
(ದುರ್ಯೋಧನನ ವಚನ)–ಭಾರತ (ವಿರಾಟ. ೨೯/೧೪,೧೫)

ಅ: ಅದರಿಂದ ದುರ್ಯೋಧನ ಹೇಳಿದ 'ಆ ಕೀಚಕನು ಭೀಮನಿಂದ ಹತನಾದದ್ದು ದ್ರೌಪದಿಯ ಕಾರಣದಿಂದ'. ಬಳಿಕ ದುರ್ಯೋಧನ ಮೊದಲಾದವರು ಭೀಷ್ಮಾದಿಗಳೊಂದಿಗೂ, ಕರ್ಣನೊಂದಿಗೂ ವಿರಾಟ ನಗರಕ್ಕೆ ತೆರಳಿದರು.

ವಿ: ೧) ದೂತರು ಹೇಳಿದ ಮಾತನ್ನು ಕೇಳಿ ದುರ್ಯೋಧನ ಮಂತ್ರಾಲೋಚನೆ ಸಭೆ ನಡೆಸಿದ. ಅದರಲ್ಲಿ ಪಾಂಡವರ ಸುಳಿವು ಸಿಕ್ಕದ್ದರ ಬಗ್ಗೆ ವಿಚಾರ ನಡೆಯಿತು. ಅದರಲ್ಲಿ ಕೆಲವರು 'ಪಾಂಡವರು ಸತ್ತಿರಬೇಕು' ಎಂದು ನುಡಿದಾಗ ದ್ರೋಣರು 'ಕೃಷ್ಣರಕ್ಷಿತರಾದ ಅವರೆಂದೂ ಸಾಯುವವರಲ್ಲ' ಎಂದು ಖಚಿತವಾಗಿ *ತಿಳಿಸಿದರು.

೨) ಬಳಿಕ ಭೀಷ್ಮರು ಪಾಂಡವರು ತುಂಬಾ ಧರ್ಮಾತ್ಮರು, ಅವರೆಂದೂ ಸುರಕ್ಷಿತವಾಗಿರುವವರೇ. ಮಾತ್ರವಲ್ಲದೇ ಅವರಿರುವ ಸ್ಥಳದಲ್ಲಿಯೂ ಸಹ ಮಳೆ–ಬೆಳೆಗಳಿಂದ ದೇಶ ಸುಭಿಕ್ಷವಾಗಿರುವುದು. ವಿರಾಟನ ರಾಜ್ಯ ಅಂತಹ ಸುಭಿಕ್ಷವಾದ ರಾಜ್ಯವೆಂದು ತಿಳಿದುಬಂದಿರುವುದರಿಂದ ಪಾಂಡವರು ಬಹುಶಃ ಅವನ ರಾಜ್ಯದಲ್ಲಿರಬಹುದು ಎಂಬ ಊಹೆ +ಮುಂದಿಟ್ಟರು.

೩) ಆಗ ದುರ್ಯೋಧನ ನುಡಿದ 'ಸತ್ತಿರುವುದು ಕೀಚಕ, ಅದೂ ಒಂದು ಹೆಣ್ಣಿಗಾಗಿ, ಕೊಂದವನೂ ಸಹ ಶಸ್ತ್ರವನ್ನು ಪ್ರಯೋಗಿಸಿಲ್ಲ. ಅವನ ಹೆಣ ಮಾಂಸದ ಮುದ್ದೆಯಾಗಿ ಬಿದ್ದಿದೆ. ಈ ವಿವರ ಗಮನಿಸಿದಾಗ ಕೀಚಕನು ದ್ರೌಪದಿಯನ್ನು ಕೆಣಕಿ ಸತ್ತಿರಬೇಕು ಎಂದಾಗುವುದು. ಮಹಾಬಲಾಢ್ಯನಾದ ಕೀಚಕನನ್ನು ಕೊಲ್ಲಲು ಅವನಿಗಿಂತ ಹೆಚ್ಚಿನ ಬಲದವರು ಮೂವರು ಮಾತ್ರ –ಭೀಮಸೇನ, ಬಲರಾಮ ಮತ್ತು ಶಲ್ಯ. ಹೆಣ್ಣಿಗಾಗಿ ಸತ್ತಿರುವ ವಿವರ ಬಂದಿರುವುದರಿಂದ ಆ ಹೆಣ್ಣು ದ್ರೌಪದಿಯೇ ಆಗಿರಬೇಕು, ಅದರಂತೆ ಕೊಂದವನು ಭೀಮನೇ ಆಗಿರಬೇಕು. ಕೀಚಕ ಮಾಂಸದ ಮುದ್ದೆಯಾಗುವಂತೆ ಕೊಲ್ಲಬಲ್ಲ ಸಮರ್ಥ ಭೀಮನ ಹೊರತು ಮತ್ತೊಬ್ಬರಿಲ್ಲ.

೪) ಆದ್ದರಿಂದ ಪಾಂಡವರು ವಿರಾಟ ನಗರದಲ್ಲಿರುವುದು ನಿಶ್ಚಿತ. ಅವರ ಸುಳಿವು ಸಿಕ್ಕಿರುವುದರಿಂದ ನಾವೀಗ ಗೋಗ್ರಹಣಕ್ಕೆಂದು ವಿರಾಟ ನಗರಕ್ಕೆ ತೆರಳಿದರೆ, ಗೋರಕ್ಷಣೆಗಾಗಿ ಪಾಂಡವರು ಧಾವಿಸಿ ಬರುವರು. ಆಗ ಅವರನ್ನು ಪುನಃ ಹನ್ನೆರಡು ವರ್ಷ ವನವಾಸ, ಒಂದು ವರ್ಷ ಅಜ್ಞಾತವಾಸಕ್ಕೆ ಕಳಿಸಬಹುದು' ಎಂದು ನುಡಿದ. ಅದರಂತೆ ಎಲ್ಲರೂ ಗೋಗ್ರಹಣಕ್ಕೆಂದು ವಿರಾಟ ನಗರಕ್ಕೆ ತೆರಳಿದರು ಎಂದರ್ಥ.

---

* ಕ್ಷತ್ರಧರ್ಮರತಾ ನಿತ್ಯಂ ಕೇಶವಾನುಗತಾಃ ಸದಾ । –ಭಾರತ (ವಿರಾಟ. ೨೮/೭)

\+ ಸದಾ ಚ ತತ್ರ ಪರ್ಜನ್ಯಃ ಸಮ್ಯಗ್ವರ್ಷೀ ನ ಸಂಶಯಃ ।
ಸಂಪನ್ನಸಸ್ಯಾ ಚ ಮಹೀ ನಿರಾತಂಕಾ ಭವಿಷ್ಯತಿ ॥ ... (ಇತ್ಯಾದಿ ಭೀಷ್ಮರ ವಚನ) –ಭಾರತ (೪/೨೮/೧೯)

ದಕ್ಷಿಣ ಗೋಗ್ರಹಣ

ಅಗ್ರೇ ಯಯೌ ತತ್ರ ಯೋದ್ಧುಂ ಸುಶರ್ಮಾ
ಸ ಗಾ ವಿರಾಟಸ್ಯ ಸಮಾಜಹಾರ ।
ಶ್ರುತ್ವಾ ವಿರಾಟೋಽನುಯಯೌ ಸಸೇನ-
ಸ್ತಂ ಪಾಂಡವಾಶ್ಚಾನುಯಯುರ್ವಿನಾಽರ್ಜುನಮ್ ॥ ೩೩ ॥

ಅ: ಮೊದಲಿಗೆ ಸುಶರ್ಮ ಯುದ್ಧ ಮಾಡಲೆಂದು ವಿರಾಟ ನಗರಕ್ಕೆ ತೆರಳಿದ, ಅಲ್ಲಿ ವಿರಾಟನ ಗೋವುಗಳನ್ನು ಸೆರೆ ಹಿಡಿದ. ಅದನ್ನು ಕೇಳಿ ವಿರಾಟನು ಸೇನೆಯೊಂದಿಗೆ ತೆರಳಿದ. ಅರ್ಜುನನ ಹೊರತು ಇತರ ಪಾಂಡವರು ವಿರಾಟನನ್ನು ಹಿಂಬಾಲಿಸಿದರು.

ವಿ: ೧) ಹಾಗೆ ಗೋಗ್ರಹಣಕ್ಕೆ ತೆರಳಿದ ಕೌರವರು ಎರಡು ಗುಂಪುಗಳಾಗಿ ಗೋವುಗಳನ್ನು ಸೆರೆ ಹಿಡಿದರು. ಒಂದು ಗುಂಪು ಸಂಶಪ್ತಕರ ಮುಖಂಡನಾದ ಸುಶರ್ಮನ ನೇತೃತ್ವದಲ್ಲಿ ದಕ್ಷಿಣ ಗೋಗ್ರಹಣ ಮಾಡಿತು. ಅಂದು ಕೃಷ್ಣಪಕ್ಷದ *ಸಪ್ತಮಿ.

೨) ಆ ದಕ್ಷಿಣದಿಕ್ಕಿನಲ್ಲಿದ್ದ ವಿರಾಟನ ಗೋವುಗಳ ಸಂಖ್ಯೆ ಒಂದು ಲಕ್ಷ ಎಂಬ ವಿವರ ಮಹಾಭಾರತದಲ್ಲಿದೆ.

೩) ಆಗ ವಿರಾಟ ಸೇನಾಸಮೇತನಾಗಿ ಗೋಮೋಚನಕ್ಕೆಂದು ನಡೆದ. ತನ್ನೊಂದಿಗೆ ಯುಧಿಷ್ಠಿರನ ಸಲಹೆಯಂತೆ ಭೀಮನನ್ನು, ಅಶ್ವಪಾಲ ಗೋಪಾಲರಾದ ನಕುಲ ಸಹದೇವರನ್ನೂ ಕರೆದೊಯ್ದ. ಯುಧಿಷ್ಠಿರ ತಾನು ಯತಿಯಾಗಿದ್ದರೂ ಗೋಗಳ ಸಂರಕ್ಷಣೆಗಾಗಿ ಕಾದುವುದು ಧರ್ಮವಾದ್ದರಿಂದ ತಾನೂ ಜೊತೆಗೂಡುವುದಾಗಿ ಹೇಳಿ ಹಿಂಬಾಲಿಸಿದ. ಅಂತೂ ವಿರಾಟನಿಗೆ ಭೀಮಾದಿಗಳ ನೆರವು ದಕ್ಕಲು ಸಾಧ್ಯವಾದದ್ದು ಧರ್ಮರಾಜನ ಸಲಹೆ. ಜ್ಞಾನಾದಿಗಳ ನೆರವು ದೊರೆಯಲು ಧರ್ಮದ ಸಹಕಾರ ಅಗತ್ಯ ಎನ್ನಲು ಇದು ನಿದರ್ಶನ.

೪) ಅರ್ಜುನನು ಬೃಹನ್ನಳೆಯ ವೇಷದಿಂದ ಇದ್ದುದರಿಂದ ಅವನನ್ನು ಕರೆದೊಯ್ಯುವ ಪ್ರಸಂಗ ಒದಗಲಿಲ್ಲ. ಹೀಗೆ ನಾಲ್ವರು ಪಾಂಡವರೊಂದಿಗೆ ಸೇನಾ ಸಮೇತನಾಗಿ ವಿರಾಟ ದಕ್ಷಿಣ ಗೋಮೋಚನೆಗೆ ಧಾವಿಸಿದ.

---

೩೩. ಗವಾಂ **ಶತಸಹಸ್ರಾಣಿ** ಶ್ರೀಮಂತಿ ಗುಣವಂತಿ ಚ । – ಭಾರತ (೪/೩೦/೨೪)

* ಆದಾತುಂ ಗಾಃ ಸುಶರ್ಮಾಥ **ಕೃಷ್ಣಪಕ್ಷಸ್ಯ ಸಪ್ತಮೀಮ್** ।
ಅಪರೇ ದಿವಸೇ ಸರ್ವೇ ರಾಜನ್ ಸಂಭೂಯ ಕೌರವಾಃ ।
ಅಷ್ಟಮ್ಯಾಂ ತೇ ನ್ಯಗೃಹ್ಣಂತ ಗೋಕುಲಾನಿ ಸಹಸ್ರಶಃ ॥ – ಭಾರತ (ವಿರಾಟ. ೩೦/೨೬, ೨೭)

ಭೀಮನಿಂದ ಗೋಮೋಚನ

ವಿಜಿತ್ಯ ಸಂಖ್ಯೇ ಜಗೃಹೇ ವಿರಾಟಂ
ತದಾ ಸುಶರ್ಮಾ ತಮಯಾದ್ವಕೋದರಃ ।
ಸ ತಸ್ಯ ಸೇನಾಂ ವಿನಿಹತ್ಯ ಮಾತ್ಸ್ಯಂ
ವಿಮೋಚ್ಯ ಜಗ್ರಾಹ ಸುಶರ್ಮರಾಜಮ್ ॥ ೩೪ ॥

ಅ: ಸುಶರ್ಮ ಆಗ ಯುದ್ಧದಲ್ಲಿ ವಿರಾಟನನ್ನು ಸೋಲಿಸಿ ಅವನನ್ನು ಸೆರೆ ಹಿಡಿದ. ಆಗ ಭೀಮ ಅವನ ಮೇಲೇರಿ ಹೋದ. ಅವನ ಸೇನೆಯನ್ನು ಸಂಹರಿಸಿ ವಿರಾಟನನ್ನು ಬಿಡುಗಡೆ ಮಾಡಿ ಸುಶರ್ಮರಾಜನನ್ನು ಸೆರೆ ಹಿಡಿದನು.

ವಿ: ೧) ಮೊದಲಿಗೆ ವಿರಾಟ ಮಾಡಿದ ಯುದ್ಧದಲ್ಲಿ ಸುಶರ್ಮನಿಗೆ ಜಯ ಲಭಿಸಿ ಅವನು ವಿರಾಟನನ್ನು ಸೆರೆ ಹಿಡಿದ. ಆಗ ಯುಧಿಷ್ಠಿರ ಭೀಮನಿಗೆ ಅವನನ್ನು ಬಿಡುಗಡೆ ಮಾಡಲು ಸೂಚಿಸಲು, ಭೀಮ ತಕ್ಷಣ ಅದಕ್ಕೆ ಉದ್ಯುಕ್ತನಾದ.

೨) ಆಗ ಧರ್ಮರಾಜ ನೀನು ಪೂರ್ಣ ಶಕ್ತಿಯನ್ನು ತೋರಿಸದೇ ಸಾಮಾನ್ಯನಂತೆ ಯುದ್ಧ ಮಾಡು ಎಂದು ಕೋರಿದ. ಅದರಂತೆ ಭೀಮ ಸಾಮಾನ್ಯ ರೀತಿಯಲ್ಲೇ ಯುದ್ಧ ಮಾಡಿ ಕ್ಷಣಮಾತ್ರದಲ್ಲಿ ಸುಶರ್ಮನ ಸೇನೆಯನ್ನು ನಾಶ ಮಾಡಿ ವಿರಾಟನನ್ನು ಬಿಡುಗಡೆ ಮಾಡಿ ಸುಶರ್ಮನನ್ನೇ ಸೆರೆ ಹಿಡಿದ (ಭಾರತ, ವಿರಾಟಪರ್ವ ಅಧ್ಯಾಯ ೩೩).

ಯುಧಿಷ್ಠಿರೋ ಮೋಚಯಾಮಾಸ ತಂ ಚ
ತತೋ ರಾತ್ರೌ ನ್ಯವಸನ್ ಬಾಹ್ಯತಸ್ತೇ ॥ ೩೫ ॥

ಅ: ಯುಧಿಷ್ಠಿರನು ಸುಶರ್ಮನನ್ನು ಬಿಡುಗಡೆ ಮಾಡಿಸಿದ. ಬಳಿಕ ರಾತ್ರಿಯಲ್ಲಿ ಪಾಂಡವರು ನಗರದ ಹೊರವಲಯದಲ್ಲಿ ಬೀಡು ಬಿಟ್ಟರು.

ವಿ: ೧) ಆಗ ಧರ್ಮರಾಜ ಸುಶರ್ಮನನ್ನು ಬಿಡುಗಡೆ ಮಾಡಿಸಿದ. ಅವನು ದಾಸನೆಂದು ಒಪ್ಪಿಕೊಂಡ ಮೇಲೆ ಅವನನ್ನು ಬಿಡುಗಡೆ ಮಾಡಿದರು (ಭಾರತ ೪/೩೪/೧).

೨) ಸುಶರ್ಮನನ್ನು ಭೀಮ ಹಾಗೆ ಸೋಲಿಸಿದ್ದನ್ನು ಕಂಡು ವಿರಾಟನಿಗಾದ ಸಂಭ್ರಮಕ್ಕೆ ಮಿತಿ ಇರಲಿಲ್ಲ. ಅವನು ಆಗಲೇ ಘೋಷಿಸಿದ : 'ನನ್ನ ಗೋಸಂಪತ್ತು ಪ್ರಾಣ ಎಲ್ಲವನ್ನೂ ನೀವೀಗ ರಕ್ಷಿಸಿರುವಿರಿ. ಈ ರಾಜ್ಯ ನಿಮ್ಮದೇ'. ಅದಕ್ಕೆ ಯುಧಿಷ್ಠಿರ 'ನಿನ್ನ ಬಿಡುಗಡೆಯಷ್ಟೇ ನಮಗೆ ಪ್ರಿಯವಾದ ವಿಚಾರ, ಬೇರೇನೂ ಬೇಡ'. ಇದರಿಂದಾಗಿ ಅವರ ಮೇಲಿನ ಗೌರವ ಇನ್ನೂ ಹೆಚ್ಚಿತು.

೨) ವಿರಾಟ ಮಾರನೆಯ ದಿನ ಸಂಭ್ರಮದಿಂದ ಅವರೊಂದಿಗೆ ನಗರ ಪ್ರವೇಶ ಮಾಡ-ಬೇಕೆಂಬ ಯೋಚನೆಯಿಂದ ಅಂದು ರಾತ್ರಿ ನಗರದ ಹೊರವಲಯದಲ್ಲೇ ಸೈನ್ಯದೊಂದಿಗೆ ನೆಲೆಸಿದ.

ಉತ್ತರ ಗೋಗ್ರಹಣಕ್ಕೆ ಭೀಷ್ಮಾದಿಗಳ ನಿಶ್ಚಯ

ತತೋಽಪರದಿನೇ ಸರ್ವೇ ಭೀಷ್ಮದ್ರೋಣಪುರಃಸರಾಃ ।
ರಹಿತಂ ಕೀಚಕೈರ್ಮಾತ್ಸ್ಯಂ ಶಕ್ಯಂ ಮತ್ವಾಽಭಿನಿರ್ಯಯುಃ ॥ ೩೬ ॥

ಅ: ಮರುದಿನ ಭೀಷ್ಮ, ದ್ರೋಣ ಮುಂತಾದವರೆಲ್ಲರೂ ಕೀಚಕರಿಲ್ಲದ ವಿರಾಟನನ್ನು ಸೋಲಿಸುವುದು ಸುಲಭ ಎಂದುಬಗೆದು ತೆರಳಿದರು.

ವಿ: ೧) ನಗರದ ಉತ್ತರ ದಿಕ್ಕಿನ [+]ಅರವತ್ತು ಸಾವಿರ ಸಂಖ್ಯೆಯ ಗೋವುಗಳನ್ನು ಸೆರೆ ಹಿಡಿಯಲು ಅದರ ಮಾರನೆಯ ದಿನ ಎಂದರೆ ಕೃಷ್ಣಪಕ್ಷದ ಅಷ್ಟಮಿಯ ದಿನ ಕೌರವರು ಭೀಷ್ಮರ ನೇತೃತ್ವದಲ್ಲಿ ಗೋಗ್ರಹಣ ಮಾಡಿದರು ಎಂದರ್ಥ.

೨) ಕೀಚಕರು ಹತರಾದ್ದರಿಂದ ಅವರ ನೆರವಿಲ್ಲದ ವಿರಾಟನನ್ನು ಗೆಲ್ಲುವುದು ಸುಲಭ ಎನ್ನುವುದು ಅವರ ವಿಚಾರವಾಗಿತ್ತು.

ಕೀಚಕಸ್ಯ ಹಿಡಿಂಬಸ್ಯ ಬಕಕಿರ್ಮೀರಯೋರಪಿ।
ಜರಾಸಂಧಸ್ಯ ನೃಪತೇಃ ಕಂಸಾದೀನಾಂ ಚ ಸರ್ವಶಃ ॥ ೩೭ ॥

ನ ಬಾಧನಾಯ ಭೀಷ್ಮಾದ್ಯಾ ಅಪಿ ಶೇಕುಃ ಕಥಂಚನ।
ತಸ್ಮಾತ್ ತೇ ಕೀಚಕಂ ಶಾಂತಂ ಶ್ರುತ್ವಾ ಮಾತ್ಸ್ಯಂ ಯಯುರ್ಯುಧೇ ॥ ೩೮ ॥

ಅ: ಕೀಚಕ, ಹಿಡಿಂಬ, ಬಕ, ಕಿರ್ಮೀರ, ರಾಜನಾದ ಜರಾಸಂಧ, ಕಂಸ ಮೊದಲಾದವ-ರನ್ನೆಲ್ಲ ನಿಗ್ರಹಿಸಲು ಭೀಷ್ಮಾದಿಗಳಿಗೂ ಸಾಧ್ಯವಾಗಿರಲಿಲ್ಲ. ಅದರಿಂದ ಕೀಚಕನು ಸತ್ತಿರುವುದನ್ನು ಕೇಳಿ ವಿರಾಟನ ಮೇಲೆ ಯುದ್ಧಕ್ಕೆ ತೆರಳಿದರು.

---

* ತೇ ಗತ್ವಾ ತತ್ರಂ ತಾಂ ರಾತ್ರಿಮಥ ಸೂರ್ಯೋದಯಂ ಪ್ರತಿ ।
ವಿರಾಟಸ್ಯ ಪುರಾಭ್ಯಾಶೇ ದೂತಾ ಜಯಮಘೋಷಯನ್ ॥ – ಭಾರತ (ವಿರಾಟ. ೩೪/೧೯)

೩೬. ಶಕ್ಯಂ ಮತ್ವೇತ್ಯತ್ರ ಶಕ್ಯಂ= ಅಸ್ಮಚ್ಛಕ್ತಿವಿಷಯಂ ಮತ್ವೇತ್ಯರ್ಥಃ ॥ – (ವಾ.)

೩೬. ಅಪರೇ ದಿವಸೇ ಸರ್ವೇ ರಾಜನ್ ಸಂಭೂಯ ಕೌರವಾಃ ।
ಅಷ್ಟಮ್ಯಾಂ ತೇ ನ್ಯಗೃಹ್ಣಂತ ಗೋಕುಲಾನಿ ಸಹಸ್ರಶಃ ॥ – ಭಾರತ (ವಿರಾಟ. ೩೦/೨೭)

\+ ಷಷ್ಟಿಂ ಗವಾಂ ಸಹಸ್ರಾಣಿ ಕುರವಃ ಕಾಲಯಂತಿ ಚ । – ಭಾರತ (ವಿರಾಟ. ೩೫/೫)

ವಿ: ೧) ಭೀಷ್ಮಾದಿಗಳು ಮಹಾಬಲಾಢ್ಯರೇ ಆದರೂ ಶಿವನಿಂದ ರಕ್ಷಿತರಾದ ಕೀಚಕರಿಂದ ಪಾಲಿತನಾಗಿದ್ದ ವಿರಾಟನನ್ನು ಗೆಲ್ಲಲು ಅವರಿಗೂ ಸಾಧ್ಯವಾಗಿರಲಿಲ್ಲ. ಈಗ ಕೀಚಕರು ಸತ್ತಿರುವುದ–ರಿಂದ ವಿರಾಟನನ್ನು ಸೆರೆ ಹಿಡಿದು ತಮ್ಮ ಸಾಮರ್ಥ್ಯವನ್ನು ಮೆರೆಯಬೇಕೆಂದು ಅವರೆಲ್ಲ ತೆರಳಿದರು ಎಂದರ್ಥ.

೨) ಆದರಂತೆ ಹಿಡಿಂಬ, ಬಕ, ಕಿರ್ಮೀರಾದಿಗಳ ಜಯವೂ ಅವರಿಂದ ಸಾಧ್ಯವಾಗಿರಲಿಲ್ಲ; ಅವರಲ್ಲಿ ಒಬ್ಬೊಬ್ಬರನ್ನು ಗೆಲ್ಲಲೂ ಅವರಿಂದ ಅಸಾಧ್ಯವಾಗಿತ್ತು. ಆದರೆ, ಅವರೆಲ್ಲರನ್ನೂ ಭೀಮಸೇನ ಒಬ್ಬನೇ ಸಂಹರಿಸಿದ್ದು ಅವರೆಲ್ಲರಿಗಿಂತಲೂ ಭೀಮಸೇನ ಅತ್ಯಂತ ಶ್ರೇಷ್ಠ ಎಂಬುದಕ್ಕೆ ಗಮಕ.

ಯತಿಷ್ಯೇ ರಕ್ಷಿತುಂ ಭೀಮಾದ್ಧಾರ್ತರಾಷ್ಟ್ರಾನಿತಿ ಸ್ವಕಾಮ್।
ಸತ್ಯಾಂ ಕರ್ತುಂ ಪ್ರತಿಜ್ಞಾಂ ತು ಯಯೌ ದ್ರೋಣಃ ಸಪುತ್ರಕಃ ॥ ೩೯ ॥

ಅ: ಕೌರವರನ್ನು ಭೀಮನಿಂದ ರಕ್ಷಿಸಲು ಪ್ರಯತ್ನಿಸುವೆನೆಂದು ನೀಡಿದ್ದ ವಚನವನ್ನು ಸತ್ಯಗೊಳಿಸಲೆಂದು ದ್ರೋಣರು ಪುತ್ರಸಮೇತರಾಗಿ ಅವರೊಂದಿಗೆ ಯುದ್ಧಕ್ಕೆ ತೆರಳಿದರು.

ವಿ: ೧) ದ್ರೋಣರು ಮೊಟ್ಟಮೊದಲ ಬಾರಿಗೆ ಶಸ್ತ್ರ ಹಿಡಿದದ್ದು ಈ ಸಂದರ್ಭದಲ್ಲಿ. ಆ ಮುನ್ನ ಬ್ರಾಹ್ಮಣಧರ್ಮವನ್ನು ಸರ್ವಾತ್ಮನಾ ಪಾಲಿಸಿದ್ದ ಅವರು ಈ ಕಾರಣದಿಂದಾಗಿ ಶಸ್ತ್ರ ಹಿಡಿದು ಕೌರವರೊಂದಿಗೆ ತೆರಳಿದರು. ದುಷ್ಟರ ಸಹವಾಸ ಅವರ ಧರ್ಮಹಾನಿಗೆ ಕಾರಣವಾಯಿತು ಎಂಬುದು ಇದರ ಹಿನ್ನೆಲೆ.

೨) ದ್ರೋಣರೊಂದಿಗೆ ಅವರ ಪುತ್ರ ಅಶ್ವತ್ಥಾಮ ಹಾಗೂ ಮೈದುನ ಕೃಪಾಚಾರ್ಯರೂ ತೆರಳಿದರು. ಬ್ರಾಹ್ಮಣರು ಶಸ್ತ್ರ ಹಿಡಿಯುವಂತಾದ ಪ್ರಸಂಗ ಮೊದಲ ಬಾರಿಗೆ ವಿಶೇಷ ರೀತಿಯಲ್ಲಿ ನಡೆಯಿತು ಎಂಬುದು ಗಮನಾರ್ಹ.

ಯದಿ ಯುದ್ಧಾಯ ನಿರ್ಯಾಂತಿ ಜ್ಞಾತಾಃ ಸ್ಯುಃ ಪಾಂಡವಾಸ್ತದಾ।
ನ ಚೇದ್ವಿರಾಟಮನತಂ ನಮಯಿಷ್ಯಾಮಹೇ ವಯಮ್ ।
ಇತಿ ಮತ್ವಾ ವಿರಾಟಸ್ಯ ಜಗೃಹುರ್ಗಾಃ ಸಮಂತತಃ ॥ ೪೦ ॥

ಅ: ಪಾಂಡವರು ಯುದ್ಧಕ್ಕೆಂದು ಹೊರಬಂದರೆ ಆಗ ಅವರು ಗುರುತಿಸಲ್ಪಡುವರು, ಇಲ್ಲವಾದರೆ ಆ ವರೆಗೂ ವಶನಾಗದಿದ್ದ ವಿರಾಟನನ್ನು ನಾವು ಮಣಿಸಬಹುದು ಎಂದು ಬಗೆದು ಅವರು ಎಲ್ಲೆಡೆಗಳಿಂದಲೂ ವಿರಾಟನ ಗೋವುಗಳನ್ನು ಹಿಡಿದರು.

---

೪೦. ಅನತಂ - ಉದ್ಧತಮ್ – (ಜ.)

ವಿಃ ೧) ಪಾಂಡವರ ಗುರುತು ಸಿಕ್ಕಲ್ಲಿ ಒಂದು ಬಗೆಯ ಯಶಸ್ಸು, ಇಲ್ಲವಾದಲ್ಲಿ ವಿರಾಟನನ್ನು ಮೊದಲ ಬಾರಿಗೆ ಸೋಲಿಸಿದ ಕೀರ್ತಿ. ಅಂತೂ ತಮ್ಮ ಗೋಗ್ರಹಣ ಕಾರ್ಯ ವ್ಯರ್ಥವಾಗದು ಎಂಬುದು ಅವರ ವಿಚಾರವಾಗಿತ್ತು ಎಂದರ್ಥ.

೨) ಗೋಗ್ರಹಣ ಅತ್ಯಂತ ನಿಂದ್ಯವಾದ ಕಾರ್ಯ. ಸ್ವಭಾವತಃ ಪರಮ ಪಾಪಿಗಳಾದ ಕೌರವರು ಆ ರೀತಿ ಗೋಗ್ರಹಣಕ್ಕೆ ಯತ್ನಿಸಿದ್ದು ಅವರ ಯೋಗ್ಯತೆಗೆ ಅನುಗುಣವಾದುದೇ ಆಗಿದೆ.

೩) ಆದರೆ, ಅಂಥವರ ಸಹವಾಸದಿಂದಾಗಿ ಭೀಷ್ಮ, ದ್ರೋಣರಂಥವರೂ ಸಹ ಅಂತಹ ಹೀನ ಕೃತ್ಯಕ್ಕೆ ತೊಡಗುವಂತಾಯಿತು ಎಂಬುದು ವಿಷಾದಕರ.

೪) ಭೀಷ್ಮರ ಹುಟ್ಟಿಗೆ ಕಾರಣವಾದುದು ಮೂಲತಃ ಅವರು ದ್ಯುನಾಮ ವಸುವಾಗಿದ್ದಾಗ ವಸಿಷ್ಠರ ಧೇನುವನ್ನು ಅಪಹರಿಸಲು ಮಾಡಿದ ಪ್ರಯತ್ನವೇ ಆಗಿತ್ತು. ಅವತಾರದಲ್ಲಿಯೂ ಹೀಗೆ ಅವರಿಗೆ ಆ ಪ್ರಸಂಗ ಒದಗಿದ್ದು ಅವರ ಪ್ರಾರಬ್ಧ ಎಂದು ತಿಳಿಯಬೇಕು.

೫) ಕೌರವರ ಈ ಗೋಗ್ರಹಣ ಕಾರ್ಯ ದುಷ್ಟರು ಸಚ್ಛಾಸ್ತ್ರಗಳೆಂಬ ಗೋವುಗಳನ್ನು ಬಲಾತ್ಕಾರದಿಂದ ಅಪಾರ್ಥ ಮಾಡುವುದಕ್ಕೂ ಸಂಕೇತ.

ಉತ್ತರ ಗೋಮೋಚನೆಗೆ ಅರ್ಜುನ

ತದೋತ್ತರಃ ಸಾರಥಿತ್ವೇ ಪ್ರಕಲ್ಪ್ಯ
ಪಾರ್ಥಂ ಯಯೌ ತಾನ್ ನಿಶಾಮ್ಯೈವ ಭೀತಃ।
ತತೋಽರ್ಜುನಃ ಸಾರಥಿಂ ತಂ ವಿಧಾಯ
ಕೃಚ್ಛ್ರೇಣ ಸಂಸ್ಥಾಪ್ಯ ಚ ತಂ ಯಯೌ ಕುರೂನ್ ॥ ೪೧ ॥

ಅ: ಆಗ ಉತ್ತರನು ಅರ್ಜುನನನ್ನು ಸಾರಥಿಯನ್ನಾಗಿ ಮಾಡಿಕೊಂಡು ಗೋಮೋಚನೆ-ಗೆಂದು ತೆರಳಿದ. ಅವನು ಕೌರವರನ್ನು ಕಾಣುತ್ತಲೇ ಭೀತನಾದ. ಆಗ ಅರ್ಜುನ ಬಹಳ ಶ್ರಮದಿಂದ ಅವನನ್ನು ತಡೆದು ನಿಲ್ಲಿಸಿ ಸಾರಥಿಯನ್ನಾಗಿ ಮಾಡಿಕೊಂಡು ಕೌರವರ ಮೇಲೆ ತೆರಳಿದ.

ವಿಃ ೧) ಉತ್ತರಕುಮಾರ ಸುದೇಷ್ಣೆಯ ಮಗ; ಉತ್ತರೆಯ ಅಣ್ಣ. ಭೂಮಿಂಜಯ ಎಂಬುದು ಅವನ ಮತ್ತೊಂದು ಹೆಸರು. ವಿರಾಟನೊಂದಿಗೆ ಉಳಿದ ರಾಜಕುಮಾರರೂ ಸಹ ದಕ್ಷಿಣ ಗೋಮೋಚನೆಗೆಂದು ತೆರಳಿದ್ದರಿಂದ ಉತ್ತರ ಕುಮಾರನೊಬ್ಬನೇ ನಗರದಲ್ಲಿ ಉಳಿದಿದ್ದ. ಅದರಿಂದ ಅವನೇ ಉತ್ತರ ಗೋಮೋಚನೆಗೆ ತೆರಳಬೇಕಾಯಿತು.

೨) ಉತ್ತರ ತನ್ನ ಪರಾಕ್ರಮದ ಬಗ್ಗೆ ಸಲ್ಲದ ರೀತಿಯಲ್ಲಿ ಕೊಚ್ಚಿಕೊಂಡು ತನಗೆ ಸಾರಥಿ ಇದ್ದಲ್ಲಿ ಕೌರವರನ್ನೆಲ್ಲ ಲೀಲಾಜಾಲವಾಗಿ ಗೆಲ್ಲುವೆ ಎಂದು ತಿಳಿಸಿದ.

೩) ಆಗ ದ್ರೌಪದಿಯ ಮಾತಿನಂತೆ ಅರ್ಜುನ ಅವನ ಸಾರಥ್ಯವನ್ನು ಅಂಗೀಕರಿಸಿದ; ತಾನು ಅರ್ಜುನನ ಸಾರಥ್ಯ ಮಾಡಿ ಅನುಭವ ಪಡೆದವನು ಎಂದು ಅವನನ್ನು ನಂಬಿಸಿದ.

೪) ಉತ್ತರ ಕುಮಾರನಿಗೆ ಅವನ ತಂಗಿ ಉತ್ತರೆ ಕೌರವರ ಉತ್ತರೀಯಾದಿ ವಸ್ತ್ರಗಳನ್ನು ತರಲು ಕೇಳಿಕೊಂಡಾಗ ಆಗಲಿ ಎಂದು ನುಡಿದು ತೆರಳಿದ.

೫) ಮುಂದೆ ಸಾಗರದಂತಹ ಕುರು ಸೇನೆಯನ್ನು ಕಾಣುತ್ತಲೇ ಭಯದಿಂದ ಕಂಗೆಟ್ಟು ಉತ್ತರ ಹಿಂದಕ್ಕೆ ಓಡಲು ತೊಡಗಿದ. ಅರ್ಜುನ ಅವನನ್ನು ಬಗೆಬಗೆಯ ರೀತಿಯಲ್ಲಿ ಸಮಾಧಾನ ಮಾಡಿದರೂ ಅವನು ಕೇಳದಾದಾಗ ಒಪ್ಪದಿದ್ದಲ್ಲಿ ಶಿಕ್ಷಿಸುವೆ ಎಂದು ಅಂಜಿಸಿ ಅವನನ್ನು ತನ್ನ ಸಾರಥಿಯನ್ನಾಗಿ ಕೂಡಿಸಿಕೊಂಡು ಯುದ್ಧಕ್ಕೆ ತೆರಳಿದ.

೬) ಆ ಮುನ್ನ ಶಮೀವೃಕ್ಷದಲ್ಲಿ ಶವಾಕಾರದಲ್ಲಿ ತಾವು ಕಟ್ಟಿರಿಸಿದ್ದ ಅಸ್ತ್ರಗಳನ್ನು ಉತ್ತರನ ಮೂಲಕ ಕೆಳಕ್ಕೆ ಇಳಿಸಿದ. ಉತ್ತರ ಅಂಜಿಯೇ ಆ ಕಾರ್ಯವನ್ನು ಮಾಡಿದ.

೭) ಮುಂದೆ ಆಯುಧಗಳನ್ನು ಕಂಡಾಗ ಉತ್ತರ ಅವುಗಳ ಅದ್ಭುತ ತೇಜಸ್ಸಿಗೆ ಬೆರಗಾದ. ಅರ್ಜುನ ಅವುಗಳನ್ನು ಪರಿಚಯ ಮಾಡಿಕೊಟ್ಟು, ಕೊನೆಗೆ ತಾವೆಲ್ಲಾ ಪಾಂಡವರು ಎಂಬುದನ್ನು ತಿಳಿಸಿ, ತಾನೇ ಅರ್ಜುನ ಎಂಬುದನ್ನು ಅರುಹಿದ. ಅದರಿಂದ ಉತ್ತರನಿಗಾದ ಆನಂದಕ್ಕೆ ಮಿತಿಯೇ ಇರಲಿಲ್ಲ. ಅವನು ತುಂಬಾ ಉತ್ಸಾಹದಿಂದ ಸಾರಥ್ಯಕ್ಕೆ ಸಿದ್ಧನಾದ.

೮) ಆಗ ಅರ್ಜುನ ತನ್ನ ದಿವ್ಯರಥ ಹಾಗೂ ವಾನರಧ್ವಜವನ್ನು ಸ್ಮರಿಸಿಕೊಂಡು ಅವುಗಳನ್ನು ಪಡೆದ. ಅರ್ಜುನ ಗಾಂಡೀವವನ್ನು, ಅಕ್ಷಯ ಬತ್ತಳಿಕೆಯನ್ನು ಧರಿಸಿ ದೇವದತ್ತ ಶಂಖವನ್ನು ಊದುತ್ತಾ ನಡೆದ; ಅದರ ಧ್ವನಿಯಿಂದ ಉತ್ತರ ಮೂರ್ಛಿತನಾಗಲು ಅರ್ಜುನ ಅವನಿಗೆ ಧೈರ್ಯ ಹೇಳಿದ.

ಅರ್ಜುನನ ಅದ್ಭುತ ವಿಜಯ

ಆದಾಯ ಗಾಂಡೀವಮಥ ಧ್ವಜಂ ಚ
ಹನೂಮದಂಕಂ ಸದರೋಽಗ್ರತೋ ಗಾಃ।
ನಿವರ್ತ್ಯ ಯುದ್ಧಾಯ ಯಯೌ ಕುರೂಂಸ್ತಾನ್
ಜಿಗ್ಯೇ ಸರ್ವಾನ್ ದ್ವೈರಥೇನೈವ ಸಕ್ತಾನ್ ॥ ೪೨ ॥

ಅ: ಗಾಂಡೀವವನ್ನು ತೆಗೆದುಕೊಂಡು ಹನುಮಂತನ ಚಿಹ್ನೆಯಿಂದ ಕೂಡಿದ್ದ ಧ್ವಜವನ್ನು, ದೇವದತ್ತ ಶಂಖವನ್ನು ಹಿಡಿದು ಅರ್ಜುನ ಮೊದಲಿಗೆ ಗೋವುಗಳನ್ನು ಹಿಂದಿರುಗಿಸಿ ಕೌರವರ

ಮೇಲೆ ಯುದ್ಧಕ್ಕೆ ತೊಡಗಿದ. ಅವರೆಲ್ಲ ಒಬ್ಬೊಬ್ಬರಾಗಿ ರಥದಲ್ಲಿ ದ್ವಂದ್ವಯುದ್ಧಕ್ಕೆ ತೊಡಗಿದರು.

ವಿ: ೧) ಅರ್ಜುನ ಮೊದಲು ಗೋವುಗಳನ್ನು ಹಿಂದಿರುಗಿಸಿದ್ದು ಅವುಗಳ ರಕ್ಷಣೆಯ ಕಾರ್ಯದ ಪ್ರಾಮುಖ್ಯವನ್ನು ಸೂಚಿಸುವುದು.

೨) ಗಾಂಡೀವ ಅಗ್ನಿದತ್ತವಾದ ಬ್ರಹ್ಮ ಧನುಸ್ಸಾದರೆ, ಶಂಖ ಸಕಲ ದೇವತೆಗಳು ನೀಡಿದ್ದ ದೇವದತ್ತ ಶಂಖವಾಗಿತ್ತು (೨೨/೩೧೯). ಧ್ವಜದಲ್ಲಂತೂ ಹನುಮಂತನೇ ನಿಂತು ಗರ್ಜನೆಯಿಂದ ಶತ್ರುಗಳನ್ನು ಎದೆಗುಂದಿಸುವುದಾಗಿ ಭರವಸೆ ನೀಡಿದ್ದ. ಹೀಗೆ ಅರ್ಜುನ ಸಕಲ ಕೌರವರೊಂದಿಗೆ ಒಂಟಿಯಾಗಿ ಹೋರಾಟಕ್ಕೆ ಇಳಿದ.

೩) ಅವನ ಓಡುವ ಶೈಲಿ ಮೊದಲಾದವುಗಳನ್ನು ಗಮನಿಸಿ ದ್ರೋಣರು ಭೀಷ್ಮರಿಗೆ ಅವನು ಅರ್ಜುನ ಎಂಬುದನ್ನು ಗೂಢ ವಾಕ್ಯಗಳಿಂದ ತಿಳಿಸಿದ ವಿವರ ಮಹಾಭಾರತದಲ್ಲಿದೆ: 'ನದೀಜ ಲಂಕೇಶವನಾರಿಕೇತುರ್ನಗಾಹ್ವಯೋ ನಾಮ ನಗಾರಿಸೂನುಃ' (೪/೩೯/೧೦).

ಏಕೀಭೂತಾನ್ ಪುನರೇವಾನುಯಾತಾನ್
ಸಮ್ಮೋಹನಾಸ್ತ್ರೇಣ ವಿಮೋಹಯಿತ್ವಾ।
ಜಗ್ರಾಹ ತೇಷಾಮುತ್ತರೀಯಾಣ್ಯ ಪೃತೇ ತು
ಭೀಷ್ಮಸ್ಯ ವೇದಾಸ್ತ್ರಘಾತಂ ಸ ಏವ ॥ ೪೩ ॥

ಅ: ಕೌರವರೆಲ್ಲ ಒಟ್ಟಾಗಿ ಪುನಃ ಯುದ್ಧಕ್ಕೆ ಬಂದಾಗ ಅರ್ಜುನ ಭೀಷ್ಮರ ಹೊರತು ಇತರ ಎಲ್ಲರನ್ನೂ ಸಮ್ಮೋಹನಾಸ್ತ್ರದಿಂದ ಮೂರ್ಛಿತರನ್ನಾಗಿ ಮಾಡಿ ಅವರ ಉತ್ತರೀಯಗಳನ್ನು ತೆಗೆಸಿದ. ಭೀಷ್ಮರೊಬ್ಬರೇ ಸಮ್ಮೋಹನಾಸ್ತ್ರಕ್ಕೆ ಪ್ರತ್ಯಸ್ತ್ರವನ್ನು ಬಲ್ಲವರಾಗಿದ್ದರು.

---

೪೨. ದ್ವೈರಥೇನೈವ ಸಕ್ತಾನಿತ್ಯತ್ರ ಕುರುಕಟಕಂ ವಿಹಾಯ ಆಗ್ರೇ ಗಾಃ ನಿವರ್ತಯಿತುಂ ಗಚ್ಛಂತಮರ್ಜುನಂ ಪ್ರತಿ ಯೋದ್ಧುಮೇಕೋ ರಥೀ ಅನುಯಾತಃ । ಅತೋ ದ್ವೈರಥೇನೇತ್ಯುಕ್ತಮ್ । ಅತಃ ದ್ವೌ ರಥೌ ಯಯೋಸ್ತೌ ದ್ವಿರಥೌ । ತಯೋರ್ಭಾವಃ ದ್ವೈರಥಮ್ ॥ – (ವಾ.)

೪೨. ದ್ವೈರಥೇನ ರಥತೋ ದ್ವಂದ್ವಯುದ್ಧೇನ। – (ತಾ.)

೪೩. ಅಸ್ತ್ರಘಾತಂ ಸ ಏವೇತ್ಯತ್ರ ಅಸ್ತ್ರಘಾತಂ= ವಿಜ್ಞಾನಾಸ್ತ್ರೇಣ ಸಮ್ಮೋಹನಾಸ್ತ್ರಘಾತಮ್ ॥ – (ವಾ.)

೪೩. ಅಸ್ತ್ರಘಾತಂ ಸಂಮೋಹನಾಸ್ತ್ರಪ್ರತೀಕಾರಮ್ । – (ಜ.)

೪೩. ಭೀಷ್ಮಸ್ಯ ಸಂಜ್ಞಾಂ ತು ತಥೈವ ಮನ್ಯೇ ಜಾನಾತಿ ಸೋऽಸ್ತ್ರಪ್ರತಿಘಾತಮೇಷಃ ॥ – ಭಾರತ (೪/೬೬/೧೪)

ಎ: ೧) ಸೋತ ಕೌರವರೆಲ್ಲ ಒಟ್ಟಾಗಿ ಯುದ್ಧಕ್ಕೆ ಬರಲು ಆಗಲೂ ಅರ್ಜುನ ಅವರನ್ನೆಲ್ಲ ಅಪೂರ್ವರೀತಿಯಲ್ಲೇ ಸೋಲಿಸಿದ. ಕೊನೆಗೆ ಸಮ್ಮೋಹನಾಸ್ತ್ರವನ್ನು ಪ್ರಯೋಗಿಸಿ ಅವರೆಲ್ಲರನ್ನೂ ಮೂರ್ಛಿತರನ್ನಾಗಿಸಿದ.

೨) ಭೀಷ್ಮರಿಗೆ ಅದರ ಪ್ರತ್ಯಸ್ತ್ರ ತಿಳಿದಿದ್ದರಿಂದ ಅವರು ಮಾತ್ರ ಹಾಗೆ ಮೋಹಕ್ಕೊಳ-ಗಾಗಲಿಲ್ಲ. ಅದು ಅರ್ಜುನನಿಗೂ ತಿಳಿದಿದ್ದರಿಂದ ಅವರ ಬಳಿಗೆ ತೆರಳದಂತೆ ಉತ್ತರನಿಗೆ ತಿಳಿಸಿದ.

೩) ಆಗ ಉತ್ತರನಿಗೆ ಹೇಳಿ ದುರ್ಯೋಧನಾದಿಗಳ ಮೈಮೇಲಿನ ಉತ್ತರೀಯಾದಿಗಳನ್ನು ಸೆಳೆಸಿ ತರಿಸಿದ. ಆ ಮೂಲಕ ತುಂಬಿದ ಸಭೆಯಲ್ಲಿ ದ್ರೌಪದಿಯ ಮೇಲೆ ವಸ್ತ್ರಾಪಹರಣದಂತಹ ಕುಕೃತ್ಯ ಮಾಡಿದ ಅವರಿಗೆ ಪಾಠ ಕಲಿಸಿದ. ಅವರೆಲ್ಲರ ಮೈಮೇಲಿನ ವಸ್ತ್ರಗಳನ್ನು ಹರಣ ಮಾಡುವ ಮೂಲಕ ತನಗಿರುವ ಸಾಮರ್ಥ್ಯವನ್ನೂ ಶ್ರುತಪಡಿಸಿದ.

ಮರಳಿ ವಿರಾಟನಗರಕ್ಕೆ

ವಿಧಾಯ ಭೀಷ್ಮಂ ವಿರಥಂ ಜಗಾಮ
ತದಾ ಶ್ರುತ್ವಾ ಮತ್ಸ್ಯಪತಿರ್ಜಿತಾನ್ ಕುರೂನ್।
ಮುಮೋದ ಪುತ್ರೇಣ ಜಿತಾ ಇತಿ ಸ್ಮ
ತದಾऽऽಹ ಷಂಡೇನ ಜಿತಾನ್ ಯುಧಿಷ್ಠಿರಃ ॥ ೪೪ ॥

ಅ: ಅರ್ಜುನ ಭೀಷ್ಮನನ್ನು ವಿರಥನನ್ನಾಗಿ ಮಾಡಿ ತೆರಳಿದ. ವಿರಾಟರಾಜನು ಕೌರವರೆಲ್ಲಾ ಪರಾಜಿತರಾದುದನ್ನು ಕೇಳಿ ಅದು ತನ್ನ ಮಗನಿಂದ ಎಂದು ತಿಳಿದು ಸಂತೋಷಿಸಿದ; ಆಗ ಯುಧಿಷ್ಠಿರ ಅವರು ಸೋತಿದ್ದು ಬೃಹನ್ನಳೆಯಿಂದ ಎಂದು ನುಡಿದ.

ಎ: ೧) ಅರ್ಜುನ ಹಾಗೆ ಅವರೆಲ್ಲರ ವಸ್ತ್ರಗಳ ಸಮೇತ ಮುಂದೆ ಸಾಗುತ್ತಿದ್ದಾಗ ಭೀಷ್ಮರು ಅರ್ಜುನನನ್ನು ತಡೆಯಲು ಧಾವಿಸಿದಾಗ ಅರ್ಜುನ ಅವರ ರಥವನ್ನು ಮುರಿದು ಹಾಕಿ ಸೋಲಿಸಿ ಹಿಮ್ಮೆಟ್ಟಿಸಿದ. ತಾನು ಗೋವುಗಳೊಂದಿಗೆ ತೆರಳಿದ.

೨) ಆಗ ದುರ್ಯೋಧನಾದಿಗಳು ಅರ್ಜುನನನ್ನು ಬೆನ್ನಟ್ಟಿ ಹೋಗುವ ಕಾತರ ತೋರಿದಾಗ ಭೀಷ್ಮರು ಅವನೊಬ್ಬನಿಂದ ಅಷ್ಟು ಜನ ಸೋತಾಗಲೂ ಅರ್ಥ ಮಾಡಿಕೊಳ್ಳದೇ ಮತ್ತೆ ಯುದ್ಧಕ್ಕೆ

---

೪೪. ಪಶ್ಯ ಪುತ್ರೇಣ ಮೇ ಯುದ್ಧೇ ತಾದೃಶಾಃ ಕುರವೋ ಜಿತಾಃ॥ (ವಿರಾಟನ ವಚನ) – ಭಾರತ(೫/೬೮/೩೬)
ಧ್ರುವ ಏವ ಜಯಸ್ತಸ್ಯ ಯಸ್ಯ ಯಂತಾ ಬೃಹನ್ನಲಾ। (ಯುಧಿಷ್ಠಿರನ ವಚನ) – ಭಾರತ (೫/೬೮/೨೧)

ಹೋಗುವುದು ಅವಿವೇಕವೆಂದು, ಹಾಗೆ ತೆರಳಿದಲ್ಲಿ ಮೈಮೇಲೆ ಕೆಲವು ಬಟ್ಟೆಗಳನ್ನಾದರೂ ಉಳಿಸಿ ಮಾನ ಕಾಪಾಡಿರುವ ಅರ್ಜುನ ಅವುಗಳನ್ನೂ ಅಪಹರಿಸಿದಲ್ಲಿ ನಿಮ್ಮ ಗತಿಯೇನಾಗುವುದು ಎಂದು ಎಚ್ಚರಿಸಿದರು. ಆಗ ಅವರೆಲ್ಲಾ ಹತಾಶರಾಗಿ ಹಸ್ತಿನಾಪುರಕ್ಕೆ ಮರಳಿದರು.

೩) ಅರ್ಜುನ ಶಮೀವೃಕ್ಷದ ಬಳಿಗೆ ಬಂದು ಪುನಃ ತನ್ನ ಗಾಂಡೀವಾದಿಗಳನ್ನು ಎಂದಿನಂತೆ ಅದರಲ್ಲಿ ಇರಿಸಿ ತಾನು ಸಾರಥಿಯ ಸ್ಥಾನದಲ್ಲಿ ಕುಳಿತು ಉತ್ತರನೊಂದಿಗೆ ವಿರಾಟ ನಗರಕ್ಕೆ ತೆರಳಿದ. ಉತ್ತರನಿಗೆ ಗೋಮೋಚನೆ ಮಾಡಿದ್ದು ತಾನೇ ಎಂದು ತಿಳಿಸದಿರಲು ಸೂಚಿಸಿದನು. ಉತ್ತರ ಅದಕ್ಕೆ ಸಮ್ಮತಿಸದಿದ್ದಾಗ ತಾನು ತಿಳಿಸುವ ವರೆಗೂ ಆ ವಿಷಯವನ್ನು ಪ್ರಕಟಿಸುವುದು ಬೇಡ ಎಂದು ಹೇಳಿದ.

೪) ಇತ್ತ ನಗರದಲ್ಲಿ ತಾನು ಆಗಮಿಸುವ ವೇಳೆಗೆ ಉತ್ತರ ಕುಮಾರ ಒಬ್ಬನೇ ಉತ್ತರ ಗೋಮೋಚನೆಗೆಂದು ತೆರಳಿದ ವಿಚಾರವನ್ನು ಕೇಳಿ ವಿರಾಟರಾಜ ಬಹಳವಾಗಿ ವ್ಯಥೆ ಪಟ್ಟ.

೫) ಆ ವೇಳೆಗೆ ಗೋಮೋಚನ ಕಾರ್ಯದಿಂದ ಉತ್ತರ ಕುಮಾರ ವಿಜಯಿಯಾಗಿ ಮರಳಿ ಬರುತ್ತಿರುವುದನ್ನು ಕೇಳಿ ಸಂಭ್ರಮಿಸಿದ. ಹಾಗೆ ಗೆದ್ದದ್ದು ತನ್ನ ಮಗನೇ ಎಂದು ಕಂಕನ ಮುಂದೆ ಹೆಮ್ಮೆಯಿಂದ ಹೇಳಿಕೊಂಡ. ಅದನ್ನು ಒಪ್ಪದ ಕಂಕ ನಿಜಕ್ಕೂ ಯುದ್ಧದಲ್ಲಿ ಗೆದ್ದವನು ಬೃಹನ್ನಳೆ ಎಂದು ಹೇಳಿದ. ಆ ರೀತಿಯಾಗಿ ಮಾತಿಗೆ ಮಾತು ನಡೆದು ವಿರಾಟ ಕೋಪಗೊಂಡ.

ವಿರಾಟನ ಅಪರಾಧ, ಭೀಮಾರ್ಜುನರ ಕೋಪ

ತದಾ ಕ್ರುದ್ಧಃ ಪ್ರಾಹರತ್ ತಂ ವಿರಾಟಃ
ಸೋಽಕ್ಷೇಣ ತದ್ಭೀಮಧನಂಜಯಾಭ್ಯಾಮ್ ।
ಶ್ರುತಂ ತದಾ ತೌ ಕುಪಿತೌ ನಿಶಾಮ್ಯ
ನ್ಯವಾರಯತ್ ತಾವಪಿ ಧರ್ಮಸೂನುಃ ॥ ೪೫ ॥

ಅ: ಆಗ ಕೆರಳಿದ ವಿರಾಟ ದಾಳದಿಂದ ಧರ್ಮರಾಜನನ್ನು ಹೊಡೆದ; ಭೀಮಾರ್ಜುನರು ಅದನ್ನು ಕೇಳಿ ಬಹಳವಾಗಿ ಕೋಪಗೊಂಡರು; ಧರ್ಮರಾಜ ಅವರನ್ನು ತಡೆದ.

ವಿ: ೧) ಮತ್ತೆ ಮತ್ತೆ ಗೆದ್ದಿದ್ದು ಉತ್ತರನಲ್ಲ, ಬೃಹನ್ನಳೆಯೆಂದು ಧರ್ಮರಾಜ ಹೇಳಿದ್ದನ್ನು ಕೇಳಿ ಕೋಪಗೊಂಡ ವಿರಾಟ ದ್ಯೂತದ ದಾಳದಿಂದಲೇ ಅವನ ಮೂಗಿನ ಮೇಲೆ ಅಪ್ಪಳಿಸಿದ. ಆಗ ಅವನ ಮೂಗಿನಿಂದ ರಕ್ತ ಸುರಿಯಲು ಅಲ್ಲಿಗೆ ಧಾವಿಸಿದ ದ್ರೌಪದಿ ಅದು ಕೆಳಗೆ ಬೀಳದಂತೆ ಚಿನ್ನದ

---

೪೫. ತತಃ ಪ್ರಕುಪಿತೋ ರಾಜಾ ತಮಕ್ಷೇಣಾಹನದ್ ಭೃಶಮ್ ॥ – ಭಾರತ (೫/೬೮/೪೬)

ಪಾತ್ರೆಯಲ್ಲಿ ಹಿಡಿದಳು. ಸನ್ಯಾಸಿಯ ರಕ್ತ ನೆಲಕ್ಕೆ ಬಿದ್ದಲ್ಲಿ ಆಯುರ್ನಾಶ, ದೇಶನಾಶ, ಅನಾವೃಷ್ಟಿ ಎಂಬ ಕಾರಣದಿಂದ ಹಾಗೆ ಮಾಡಿದಳು ಎಂದು ತಿಳಿಯಬೇಕು.

೨) ಧರ್ಮರಾಜನ ರಕ್ತವನ್ನು ಕೆಳಕ್ಕೆ ಬೀಳಿಸುವವರನ್ನು ಸಂಹರಿಸುವುದಾಗಿ ಭೀಮಾರ್ಜುನರ ಪ್ರತಿಜ್ಞೆ; ಅದಕ್ಕೆಂದೇ ದ್ರೌಪದಿ ವಿರಾಟನನ್ನು ಉಳಿಸಲೆಂದು ಹಾಗೆ ರಕ್ತ ಕೆಳಕ್ಕೆ ಬೀಳದಂತೆ ಪಾತ್ರೆಯಲ್ಲಿ ಹಿಡಿದಿಟ್ಟಳು ಎಂದರ್ಥ. ಮುಂದೆ ವಿಷಯ ತಿಳಿದ ಭೀಮಾರ್ಜುನರು ಕೆರಳಲು ಧರ್ಮರಾಜ ಅವರಿಬ್ಬರನ್ನೂ ಸಮಾಧಾನಪಡಿಸಿದ.

ನಿಜಸ್ವರೂಪೇಣ ಸಮಾಸ್ಥಿತಾನ್ ನೋ
ಯದಿ ಸ್ಮ ನಾಸೌ ಪ್ರಣಿಪಾತಪೂರ್ವಕಮ್।
ಕ್ಷಮಾಪಯೇದ್ವಧ್ಯ ಇತ್ಯಾತ್ಮರೂಪಂ
ಸಮಾಸ್ಥಿತಾಸ್ತಸ್ಥುರಥಾಪರೇ ದಿನೇ ॥ ೪೬ ॥

ಅ: 'ನಿಜರೂಪದಿಂದ ನಾವು ಕಾಣಿಸಿಕೊಂಡಾಗ ಅವನು ನಮ್ಮನ್ನು ವಂದಿಸಿ ಕ್ಷಮೆ ಕೇಳದಿದ್ದಲ್ಲಿ ಅವನನ್ನು ಕೊಲ್ಲಬಹುದು' ಎಂದನು; ಮಾರನೆಯ ದಿನ ಪಾಂಡವರು ತಮ್ಮ ನಿಜ ರೂಪವನ್ನು ತಳೆದು ನಿಂತರು.

ವಿ: ೧) ಅವರಿಗೆ ರೂಪ ಬದಲಾವಣೆಗೂ, ನಿಜರೂಪಪ್ರಾಪ್ತಿಗೂ ಸಂಕಲ್ಪ ಮಾತ್ರದಿಂದಲೇ ಸಿದ್ಧಿಯೆಂಬುದಾಗಿ ಯಮ ವರ ನೀಡಿದ್ದನ್ನು ಗಮನಿಸಬೇಕು (೨೨/೪೪೪).

ಪಾತ್ರಂ ಗೃಹೀತ್ವಾ ಸೌವರ್ಣಂ ಜಲಪೂರ್ಣಮನಿಂದಿತಾ ।
ತಚ್ಛೋಣಿತಂ ಪ್ರತ್ಯಗೃಹ್ಣಾದ್ಯತ್ ಪ್ರಸುಸ್ರಾವ ನಸ್ತತಃ ॥ –ಭಾರತ (೪/೬೮/೪೯)

ಯದಿ ಹ್ಯೇತತ್ ಪತೇದ್ಭೂಮೌ ರುಧಿರಂ ಮಮ ನಸ್ತತಃ ।
ಸರಾಷ್ಟ್ರಸ್ತ್ವಂ ಮಹಾರಾಜ ವಿನಶ್ಯೇಥಾ ನ ಸಂಶಯಃ ॥ – ಭಾರತ (ವಿರಾಟ. ೬೮/೬೪)

೪೬. ಅಸೌ ವಿರಾಟಃ ನಿಜಸ್ವರೂಪೇಣ ಸಮಾಸ್ಥಿತಾನ್ ನೋ ಯದಿ ಪ್ರಣಿಪಾತಪೂರ್ವಕಮ್ । ನ ಕ್ಷಮಾಪಯೇದಥಾ ಅಥ ತರ್ಹಿ ಅಥೇತಿದೀರ್ಘಃ ಛಾಂದಸಃ ವಧ್ಯ ಇತಿ ವಿಚಾರ್ಯ ಪಾಂಡವಾಃ ಪರೇ ಪರಸ್ಮಿನ್ ದಿನೇ ಆತ್ಮರೂಪಂ ಸಮಾಸ್ಥಿತಾಸ್ತಸ್ಥುಃ ಸ್ಮೇತಿ । – (ಸ.)

೪೬. ರಾಜವೇಷೇಣ ಸಂಯುಕ್ತಾನ್ ಯದಿ ತತ್ರ ನ ಮಂಸ್ಯತೇ ।
ಪಶ್ಚಾದ್ವಧ್ಯಾಮಹೇ ಸರ್ವಾನ್ ವಿರಾಟೇನ ಸಬಾಂಧವಾನ್ ॥ – ಆಕ್ಕಐ ಭಾರತ(ಪು. ೩೩೯)

ನ ಪ್ರತ್ಯುಪಸ್ಥಾಸ್ಯತಿ ಚೇತ್ಸದಾರಃ ಪ್ರಸಾದನೇ ಸಮ್ಯಗಥಾಸ್ತು ವಧ್ಯಃ - ಇತಿ ಚ ತತ್ರೈವ ।

ನಿಜರೂಪದಲ್ಲಿ ಪಾಂಡವರು

ತದಾ ವಿರಾಟಾಸನಮಾಸ್ಥಿತಂ ನೃಪಂ
ಯುಧಿಷ್ಠಿರಂ ವೀಕ್ಷ್ಯ ವಿರಾಟ ಆಹ।
ಕಿಮೇತದಿತ್ಯೂಚಿವಾನುತ್ತರೋಽಸ್ಮೈ
ತಾನ್ ಪಾಂಡವಾನ್ ಗೋಗ್ರಹಣೇ ಚ ವೃತ್ತಮ್ ॥ ೪೭ ॥

ಅ: ಆಗ ವಿರಾಟನ ಸಿಂಹಾಸನದಲ್ಲಿ ಧರ್ಮರಾಜ ಕುಳಿತಿದ್ದುದನ್ನು ಕಂಡು ವಿರಾಟ 'ಇದೇನು' ಎಂದ; ಆಗ ಉತ್ತರ ಅವನಿಗೆ ಅವರೆಲ್ಲ ಪಾಂಡವರು ಎಂದು ತಿಳಿಸಿ ಗೋಗ್ರಹಣದಲ್ಲಿ ನಡೆದದ್ದನ್ನು ತಿಳಿಸಿದ.

ವಿ: ೧) ತನ್ನ ಆಸನದಲ್ಲಿ ಕುಳಿತ ಪಾಂಡವರನ್ನು ಕಂಡು ವಿರಾಟ ದಿಗ್ಭ್ರಾಂತನಾದಾಗ ಉತ್ತರ– ಕುಮಾರ ತಾನು ಅರ್ಜುನನಿಂದ ಕೇಳಿದ ವಿವರಗಳನ್ನೆಲ್ಲಾ ತಿಳಿಸಿ ಅವರೆಲ್ಲಾ ಪಾಂಡವರು ಎಂದು ಹೇಳಿದ.

೨) ಗೋಗ್ರಹಣದ ವಿಚಾರವನ್ನೂ ತಿಳಿಸಿ ಅದರಲ್ಲಿ ಕಂಕ ಹೇಳಿದಂತೆ ಗೆದ್ದವನು ಅರ್ಜುನನೇ ಹೊರತು ತಾನಲ್ಲ ಎಂಬುದನ್ನು ಸ್ಪಷ್ಟಪಡಿಸಿದ.

ಅಭಿಮನ್ಯುವಿವಾಹ

ತತೋ ವಿರಾಟೋ ಭಯಕಂಪಿತಾಂಗಃ
ಪ್ರಣಮ್ಯ ಪಾರ್ಥಾನ್ ಶರಣಂ ಜಗಾಮ।
ದದೌ ಚ ಕನ್ಯಾಮುತ್ತರಾಂ ಫಲ್ಗುನಾಯ
ಪುತ್ರಾರ್ಥಮೇವ ಪ್ರತಿಜಗ್ರಾಹ ಸೋಽಪಿ ॥ ೪೮ ॥

ಅ: ಆಗ ವಿರಾಟನು ಭಯದಿಂದ ನಡುಗುತ್ತಾ ಪಾಂಡವರಿಗೆ ಸಾಷ್ಟಾಂಗ ವಂದಿಸಿ ಶರಣು ಹೊಂದಿದ. ತನ್ನ ಮಗಳಾದ ಉತ್ತರೆಯನ್ನು ಅರ್ಜುನನಿಗಾಗಿ ನೀಡಿದ. ಅವನು ಅವಳನ್ನು ತನ್ನ ಮಗನಾದ ಅಭಿಮನ್ಯುವಿಗೆಂದು ಸ್ವೀಕರಿಸಿದ.

---

೪೭. ಸನಂ ಸಿಂಹಾಸನಮ್। – (ಜ.)

೪೮. ಪ್ರಸಾದಯಾಮೋ ಭದ್ರಂ ತೇ ಸಾನುಜಂ ಪಾಂಡವರ್ಷಭಮ್ ।
ಉತ್ತರಾಂ ಚ ಪ್ರಯಚ್ಛಾಮಿ ಪಾರ್ಥಾಯ ಯದಿ ಮನ್ಯಸೇ ॥ – ಭಾರತ (೫/೭೧/೨೬,೨೩)

ಸ್ನುಷಾರ್ಥಮುತ್ತರಾಂ ರಾಜನ್ ಪ್ರತಿಗೃಹ್ಣಾಮಿ ತೇ ಸುತಾಮ್॥ (ಅರ್ಜುನನ ವಚನ)–ಭಾರತ (೫/೭೨/೭)

ಎ: ೧) ಪಾಂಡವರಂತಹ ಮಹಾನುಭಾವರು ತನ್ನ ಬಳಿಯಲ್ಲಿ ಹಾಗೆ ಅಧೀನರಂತೆ ಇದ್ದುದನ್ನು, ತಾನು ಅವರ ಬಗ್ಗೆ ತಪ್ಪಾಗಿ ನಡೆದುಕೊಂಡದ್ದನ್ನು ಸ್ಮರಿಸಿಕೊಂಡ ವಿರಾಟ ಪಶ್ಚಾತ್ತಾಪದಿಂದ ನೊಂದು ಭಯದಿಂದ ನಡುಗಿ ಅವರಿಗೆ ಶರಣಾಗಲು ಅವರು ಅವನನ್ನು ಕ್ಷಮಿಸಿದರು.

೨) ವಿರಾಟ ಅವರನ್ನು ಸಮಾಧಾನ ಪಡಿಸಲೆಂದು ತನ್ನ ಮಗಳಾದ ಉತ್ತರೆಯನ್ನು ಅರ್ಜುನನಿಗೆ ಧಾರೆಯೆರೆಯಲು ಸಿದ್ಧನಾದ; ಅರ್ಜುನ ಅವಳನ್ನು ತನ್ನ ಮಗನಾದ ಅಭಿಮನ್ಯುವಿಗೆ ಪತ್ನಿಯನ್ನಾಗಿ ಸ್ವೀಕಸಿದ.

೩) ಅರ್ಜುನ ತನಗೆ ನೀಡಿದ ಉತ್ತರೆಯನ್ನು ತಾನು ಸ್ವೀಕರಿಸಲಿಲ್ಲ. ತನ್ನ ಶಿಷ್ಯೆಯಾದ ಅವಳು ಮಗಳಿಗೆ ಸಮಾನ, ಅವಳನ್ನು ತಾನೇ ಸ್ವೀಕಸಿದಲ್ಲಿ ಅವರಿಬ್ಬರ ಚಾರಿತ್ರವನ್ನು ಜನ ಶಂಕಿಸುವರು. ಅದರಿಂದಾಗಿ ಗುರು ಶಿಷ್ಯರ ಪವಿತ್ರ ಬಾಂಧವ್ಯಕ್ಕೆ ಅಪಚಾರವೆಸಗಿದಂತಾಗುವುದು. ಹಾಗಾಗದಿರಲಿ ಎಂಬ ಕಾರಣದಿಂದ ಅರ್ಜುನ ಅವಳನ್ನು ತನ್ನ ಸೊಸೆಯನ್ನಾಗಿ ಸ್ವೀಕರಿಸಿದ; ಆ ಮೂಲಕವಾಗಿ ತನ್ನ ಹಾಗೂ ಅವಳ ಪಾವಿತ್ರ್ಯವನ್ನು ಜಗತ್ತಿಗೆ ಸಾರಿದ.

೪) ಅರ್ಜುನನ ಇಂತಹ ವರ್ತನೆಗೆ ಜರಾಸಂಧನ ಪುತ್ರನಾದ ಸಹದೇವ ನೀಡಿದ ಅವನ ತಂಗಿಯನ್ನು ಭೀಮಸೇನ ತಾನು ಸ್ವೀಕರಿಸದೇ ತನ್ನ ತಮ್ಮನಾದ ಸಹದೇವನಿಗಾಗಿ ಸ್ವೀಕರಿಸಿದ ಪ್ರಸಂಗ ಸ್ಫೂರ್ತಿಯಾಯಿತೆಂದು ಭಾವಿಸಬಹುದು (೨೧/೧೬೮).

ದಕ್ಷಿಣಗೋಗ್ರಹಣದಲ್ಲಿ ಭೀಮಾದಿಗಳ ಸಾಧನೆ

ಏವಂ ವಿರಾಟಂ ಮೋಚಯಿತ್ವೈವ ಗಾಶ್ಚ
ತಮಸ್ಯಂಧೇ ಕೀಚಕಾನ್ ಪಾತಯಿತ್ವಾ|
ಪ್ರಾಪ್ತೋ ಧರ್ಮಃ ಸುಮಹಾನ್ ವಾಯುಜೇನ
ತಸ್ಯಾನು ಪಾರ್ಥೇನ ಚ ಗೋವಿಮೋಕ್ಷಣಾತ್ ॥ ೪೯ ॥

ಅ: ಹೀಗೆ ವಿರಾಟನನ್ನು, ಗೋವುಗಳನ್ನು ಬಿಡುಗಡೆ ಮಾಡಿ ಕೀಚಕರನ್ನು ಅಂಧಂತಮಸ್ಸಿಗೆ ಹಾಕಿದ್ದರಿಂದ ಭೀಮಸೇನನಿಗೆ ತುಂಬಾ ಮಹತ್ತರವಾದ ಪುಣ್ಯ ಲಭಿಸಿತು. ಅವನ ಅನಂತರದ ಪುಣ್ಯಶಾಲಿ ಎನ್ನಿಸಿದ್ದು ಗೋವುಗಳನ್ನು ಬಿಡಿಸಿದ್ದರಿಂದಾಗಿ ಅರ್ಜುನ.

---

೪೯. ಏವಂ ವಿರಾಟಂ ಮೋಚಯಿತ್ವೈವೇತ್ಯತ್ರ ಏವಕಾರಸ್ಯ ಅಂಧೇ ತಮಸ್ಯೇವ ಕೀಚಕಾನ್ ಪಾತಯಿತ್ವೇತಿ ಸಂಬಂಧಃ ॥ –(ವಾ.)

ವಿ: ೧) ಅಜ್ಞಾತವಾಸ ಕಾಲದಲ್ಲಿ ಸಹ ಪಾಂಡವರಿಂದ ವಿಶೇಷವಾದ ಭಗವತ್ಸೇವೆ ನಡೆಯಿತು, ಅದರಲ್ಲಿ ಪ್ರಥಮ ಸ್ಥಾನ ಭೀಮಸೇನನದ್ದು. ಅದಕ್ಕೆ ದಕ್ಷಿಣ ದಿಕ್ಕಿನ ಗೋವುಗಳನ್ನು ಮೋಚನೆ ಮಾಡಿದ್ದು, ರಾಜನಾದ ವಿರಾಟನನ್ನು ಸುಶರ್ಮನ ಸೆರೆಯಿಂದ ಬಿಡಿಸಿ ಕಾಪಾಡಿದ್ದು ಕಾರಣ.

೨) ಅರ್ಜುನ ಉತ್ತರ ಗೋಮೋಚನವನ್ನಷ್ಟೇ ಮಾಡಿದವನಾದ್ದರಿಂದ ಅನಂತರದ ಪುಣ್ಯಶಾಲಿ ಎನಿಸಿದ ಎಂದರ್ಥ.

೩) ಅದರಂತೆ ಭೀಮ ಪಾಲನೆ ಮಾಡಿದ ಗೋವುಗಳ ಸಂಖ್ಯೆ ಒಂದು ಕೋಟಿಯಾದರೆ, ಅರ್ಜುನ ಪಾಲನೆ ಮಾಡಿದ ಗೋವುಗಳ ಸಂಖ್ಯೆ ಅರವತ್ತು ಲಕ್ಷ ಮಾತ್ರ. ಇದರಿಂದಾಗಿಯೂ ಭೀಮನ ಪುಣ್ಯ ಅರ್ಜುನನಿಗಿಂತ ಮಿಗಿಲಾದದ್ದು ಎಂದು ಸ್ಫುಟಪಡುವುದು.

೪) ಅದರಂತೆ ಭೀಮಸೇನ ನಿರಾಯುಧನಾಗಿ ಅಷ್ಟೆಲ್ಲಾ ಕಾರ್ಯವನ್ನು ಸಾಧಿಸಿದರೆ, ಅರ್ಜುನ ರಥ, ಗಾಂಡೀವಾದಿಗಳನ್ನೆಲ್ಲಾ ಉಪಯೋಗಿಸಿದ್ದು ಅವನ ಪುಣ್ಯ ನ್ಯೂನತೆಗೆ ಮತ್ತೊಂದು ಕಾರಣ ಎಂದೂ ತಿಳಿಯಬಹುದು.

೫) ಅರ್ಜುನನಿಗಿಂತಲೂ ಹೆಚ್ಚಿನ ಪುಣ್ಯಶಾಲಿಯೆನಿಸಿದ್ದು ದ್ರೌಪದಿ ಎಂಬುದು ಇಲ್ಲಿಯ ಮತ್ತೊಂದು ವಿಶೇಷ. ಅದಕ್ಕೆ ಅವಳು ಶಿವವರದಿಂದ ಕೂಡಿದ್ದ ಕೀಚಕ, ಉಪಕೀಚಕರ ಸಂಹಾರಕ್ಕೆ ನಿಮಿತ್ತಳಾದದ್ದು ಮುಖ್ಯ ಕಾರಣ.

೬) ಭೀಮಸೇನ ರಾಜಮೋಚನೆ, ಗೋಮೋಚನೆಗಳೊಂದಿಗೆ ಜೀಮೂತವಧೆ, ಕೀಚಕ–ವಧೆ, ಉಪಕೀಚಕವಧೆ ಮೊದಲಾದವುಗಳನ್ನೂ ನಡೆಸಿದ ಮಹಾಸಮರ್ಥನಾದ್ದರಿಂದ ಅವನ ಪುಣ್ಯ ಅಪಾರ ಎಂದರ್ಥ.

ಅಭಿಮನ್ಯುವಿವಾಹದ ವೈಭವ

ಅಯಾತಯನ್ ಕೇಶವಾಯಾಥ ದೂತಾನ್
ಸಹಾಭಿಮನ್ಯುಃ ಸೋಽಪಿ ರಾಮೇಣ ಸಾರ್ಧಮ್ ।
ಆಗಾದನಂತಾನಂದಚಿದ್ವಾಸುದೇವೋ
ವಿವಾಹಯಾಮಾಸುರಥಾಭಿಮನ್ಯುಮ್ ॥ ೫೦ ॥

ಅ: ಆ ಬಳಿಕ ಪಾಂಡವರು ಶ್ರೀಕೃಷ್ಣನ ಬಳಿಗೆ ದೂತರನ್ನು ಕಳುಹಿಸಿಕೊಟ್ಟರು. ಅನಂತ ಜ್ಞಾನಾನಂದಸ್ವರೂಪನಾದ ಕೃಷ್ಣ, ಬಲರಾಮನೊಂದಿಗೆ ಅಭಿಮನ್ಯುವನ್ನು ಕರೆದುಕೊಂಡು ಆಗಮಿಸಿದ. ಬಳಿಕ ಅಭಿಮನ್ಯುವಿನ ವಿವಾಹ ನಡೆಸಿದರು.

---

೫೦. ತತ್ರಾಗಮದ್ವಾಸುದೇವೋ ವನಮಾಲೀ ಹಲಾಯುಧಃ ॥ – ಭಾರತ (ವಿರಾಟ. ೭೨/೨೧)

ಆಸೀನ್ಮಹಾನುತ್ಸವಸ್ತತ್ರ ತೇಷಾಂ
ದಾಶಾರ್ಹವೀರೈಃ ಸಹ ಪಾಂಡವಾನಾಮ್ ।
ಸಪಾಂಚಾಲಾನಾಂ ವಾಸುದೇವೇನ ಸಾರ್ಧ-
ಮಜ್ಞಾತವಾಸಂ ಸಮತೀತ್ಯ ಮೋದತಾಮ್ ॥ ೫೧ ॥

ಅ: ಆ ಪಾಂಡವರಿಗೂ, ಪಾಂಚಾಲರಿಗೂ, ಯಾದವ ವೀರರಿಗೂ, ಅದೊಂದು ಮಹೋತ್ಸವವೆನಿಸಿತು. ಅವರು ಅಜ್ಞಾತವಾಸವನ್ನು ಪೂರೈಸಿ ಕೃಷ್ಣನೊಂದಿಗೆ ಮಹಾನಂದವನ್ನು ಹೊಂದಿದರು.

ವಿ: ಅಜ್ಞಾತವಾಸ ಸಮಾಪ್ತಿ, ಅಭಿಮನ್ಯುವಿನ ವಿವಾಹ, ಎಲ್ಲಕ್ಕಿಂತ ಮಿಗಿಲಾಗಿ ಕೃಷ್ಣನ ಸಮಾಗಮ ಮೊದಲಾದವುಗಳಿಂದ ಪಾಂಡವರಿಗಾದ ಆನಂದಕ್ಕೆ ಪಾರವಿಲ್ಲವಾಯಿತು ಎಂದರ್ಥ.

ದುರ್ಯೋಧನಾದಿಗಳ ಕುಯುಕ್ತಿ

ದುರ್ಯೋಧನಾದ್ಯಾಃ ಸೂತಪುತ್ರೇಣ ಸಾರ್ಧಂ
ಸಸೌಬಲೇಯಾ ಯುಧಿ ಪಾರ್ಥಪೀಡಿತಾಃ ।
ಭೀಷ್ಮಾದಿಭಿಃ ಸಾರ್ಧಮುಪೇತ್ಯ ನಾಗ-
ಪುರಂ ಮಂತ್ರಂ ಮಂತ್ರಯಾಮಾಸುರತ್ರ ॥ ೫೨ ॥

ಅ: ಯುದ್ಧದಲ್ಲಿ ಅರ್ಜುನನಿಂದ ಬಹಳವಾಗಿ ಪೀಡಿತರಾದ ದುರ್ಯೋಧನ ಮೊದಲಾದವರೆಲ್ಲ ಕರ್ಣನೊಂದಿಗೂ, ಶಕುನಿಯೊಂದಿಗೂ ಕೂಡಿ ಭೀಷ್ಮಾದಿಗಳೊಂದಿಗೆ ಹಸ್ತಿನಾಪುರವನ್ನು ಸೇರಿ ಅಲ್ಲಿ ಮಂತ್ರಾಲೋಚನೆಗೆ ತೊಡಗಿದರು.

---

೫೦. ಪ್ರತಿಗೃಹ್ಯ ಚ ತಾಂ ಪಾರ್ಥಃ ಪುರಸ್ಕೃತ್ಯ ಜನಾರ್ದನಮ್ ।
ವಿವಾಹಂ ಕಾರಯಾಮಾಸ ಸೌಭದ್ರಸ್ಯ ಮಹಾತ್ಮನಃ ॥ – ಭಾರತ (ವಿರಾಟ. ೭೨/೩೫)

೫೧. ಏವಂ ತವ ಪ್ರಸಾದಾದ್ವೈ ವರ್ಷಾಣ್ಯೇತಾನಿ ಸರ್ವಶಃ ।
ತ್ರಯೋದಶಾಪಿ ದಾಶಾರ್ಹ ತಥಾ ಸ ಸಮಯಃ ಕೃತಃ ।
ಉಷಿತಾಃ ಸ್ಮೋ ಜಗನ್ನಾಥ ತ್ವಂ ನಾಥೋ ನೋ ಜನಾರ್ದನ ॥
ರಕ್ಷಸ್ವ ದೇವ ದೇವೇಶ ತ್ವಾಮದ್ಯ ಶರಣಂ ಗತಾಃ ॥
(ಪಾಂಡವವಚನ) – BORI ಭಾರತ (ವಿರಾಟ. ಪು. ೩೪೦)

ವಿ: ಮತ್ತೆ ಯಾವ ಯೋಜನೆಯನ್ನು ಹೂಡಿ ಪಾಂಡವರನ್ನು ವನವಾಸಕ್ಕೆ ಕಳುಹಿಸುವುದು ಎಂಬ ಕುತಂತ್ರವನ್ನು ಯೋಜಿಸಲು ಅವರೆಲ್ಲ ತೊಡಗಿದರು ಎಂದರ್ಥ.

ಅಜ್ಞಾತವಾಸೇ ಫಲ್ಗುನೋ ನೋ೽ದ್ಯ ದೃಷ್ಟ-
ಸ್ತಸ್ಮಾತ್ ಪುನರ್ಯಾಂತು ಪಾರ್ಥಾ ವನಾಯ।
ಇತಿ ಬ್ರುವಾಣಾನಾಹ ಭೀಷ್ಮೋ೽ಭ್ಯತೀತ-
ಮಜ್ಞಾತವಾಸಂ ದ್ರೋಣ ಆಹೈವಮೇವ ॥ ೫೩ ॥

ಅ: ಅಜ್ಞಾತವಾಸ ಕಾಲದಲ್ಲಿ ಅರ್ಜುನ ನಮಗಿಂದು ಕಂಡನು. ಆದ್ದರಿಂದ ಪಾಂಡವರು ಮರಳಿ ವನವಾಸಕ್ಕೆ ತೆರಳಬೇಕು ಎಂದು ಕೌರವರು ನುಡಿಯಲು ಭೀಷ್ಮರು ತಿಳಿಸಿದರು ''ಅಜ್ಞಾತವಾಸ ಕಳೆದಿದೆ''. ದ್ರೋಣರೂ ಹಾಗೆಯೇ ಹೇಳಿದರು.

ವಿ: ಕೌರವರ ಕೆಟ್ಟ ವಿಚಾರವನ್ನು ಒಪ್ಪದ ಭೀಷ್ಮರು ಅಜ್ಞಾತವಾಸ ಪೂರೈಸಿರುವುದರಿಂದ ಅರ್ಜುನ ಕಂಡದ್ದು ನಿಯಮದ ಉಲ್ಲಂಘನೆಯಲ್ಲ, ಆದ್ದರಿಂದ ಅವರು ವನವಾಸಾದಿಗಳಿಗೆ ತೆರಳುವುದು ಉಚಿತವಲ್ಲ ಎಂದು ತಿಳಿಸಿದರು. ದ್ರೋಣರೂ ಅವರ ಮಾತನ್ನೇ ಸಮರ್ಥಿಸಿದರು ಎಂದರ್ಥ.

ತಯೋರ್ವಾಕ್ಯಂ ತೇ ತ್ವನಾದೃತ್ಯ ಪಾಪಾ
ವನಂ ಪಾರ್ಥಾಃ ಪುನರೇವ ಪ್ರಯಾಂತು ।
ಇತಿ ಸ್ಮ ದೂತಂ ಪ್ರೇಷಯಾಮಾಸುರತ್ರ
ಜಾನಂತಿ ವಿಪ್ರಾ ಇತಿ ಧರ್ಮಜೋ೽ವದತ್ ॥ ೫೪ ॥

ಅ: ಅವರಿಬ್ಬರ ಮಾತನ್ನು ಕಡೆಗಣಿಸಿ ಆ ಪಾಪಿಗಳಾದ ಕೌರವರು 'ಪಾಂಡವರು ಮತ್ತೆ ಕಾಡಿಗೆ ತೆರಳಲೇ ಬೇಕು' ಎಂದು ಅವರ ಬಳಿಗೆ ದೂತರನ್ನು ಕಳುಹಿಸಿದರು. ಬ್ರಾಹ್ಮಣರು ಇದನ್ನು ಬಲ್ಲರು ಎಂದು ಧರ್ಮರಾಜ ಉತ್ತರಿಸಿದ.

---

೫೩. ತೇಷಾಂ ಕಾಲಾತಿರೇಕೇಣ ಜ್ಯೋತಿಷಾಂ ಚ ವ್ಯತಿಕ್ರಮಾತ್ ।
ಪಂಚಮೇ ಪಂಚಮೇ ವರ್ಷೇ ದ್ವೌ ಮಾಸಾವುಪಜಾಯತಃ ॥
ಏಷಾಮಭ್ಯಧಿಕಾ ಮಾಸಾಃ ಪಂಚ ಚ ದ್ವಾದಶ ಕ್ಷಪಾಃ ।
ತ್ರಯೋದಶಾನಾಂ ವರ್ಷಾಣಾಮಿತಿ ಮೇ ವರ್ತತೇ ಮತಿಃ ॥
ಸರ್ವಂ ಯಥಾವಚ್ಚರಿತಂ ಯದ್ ಯದೇಭಿಃ ಪ್ರತಿಶ್ರುತಮ್ ॥
ಏವಮೇತದ್ ಧ್ರುವಂ ಜ್ಞಾತ್ವಾ ತತೋ ಬೀಭತ್ಸುರಾಗತಃ ॥
(ಭೀಷ್ಮರ ವಚನ) – ಭಾರತ (ವಿರಾಟ. ೫೮/೩-೫)

ವಿ: ಧರ್ಮರಾಜ ದುರ್ಯೋಧನನ ವಾದವನ್ನು ಒಪ್ಪದೇ ತಾವು ಅಜ್ಞಾತವಾಸವನ್ನು ಸರಿಯಾಗಿ ಪೂರೈಸಿರುವ ವಿಚಾರವನ್ನು ದ್ರೋಣ ಮೊದಲಾದ ಜ್ಞಾನಿಗಳು ತಿಳಿದಿರುವರು. ಆದ್ದರಿಂದ ಇವರ ವಾದವನ್ನು ಒಪ್ಪಲು ಸಾಧ್ಯವಿಲ್ಲ ಎಂದು ತಿಳಿಸಿದ ಎಂದರ್ಥ.

ಚಾಂದ್ರಮಾನದ ಪ್ರಶಸ್ತಿ

ಸೌರಮಾಸಾನುಸಾರೇಣ ಧಾರ್ತರಾಷ್ಟ್ರೈ ಅಪೂರ್ಣತಾಮ್।
ಆಹುಶ್ಚಾಂದ್ರೇಣ ಮಾಸೇನ ಪೂರ್ಣಃ ಕಾಲೋಽಖಿಲೋಽಪ್ಯಸೌ ॥ ೫೫ ॥

ಅ: ಕೌರವರು ಅಜ್ಞಾತವಾಸ ಪೂರೈಸಿಲ್ಲ ಎಂದು ನುಡಿದದ್ದು ಸೌರಮಾನದ ಲೆಕ್ಕದಲ್ಲಿ. ಆದರೆ ಆ ಕಾಲವೆಲ್ಲ ಚಾಂದ್ರಮಾನಕ್ಕೆ ಅನುಗುಣವಾಗಿ ಪೂರೈಸಿತ್ತು.

ವಿ: ಸೌರ, ಚಾಂದ್ರ, ಸಾವನ, ನಾಕ್ಷತ್ರ ಮತ್ತು ಬಾರ್ಹಸ್ಪತ್ಯ ಎಂಬುದಾಗಿ ಐದು ಬಗೆಯ ಕಾಲಗಣನೆ ಪ್ರಸಿದ್ಧವಾದುದು. ಚೈತ್ರಾದಿ ಮಾಸಕ್ರಮ ಚಾಂದ್ರಮಾನದ್ದು, ಮೇಷಾದಿ ಮಾಸಕ್ರಮ ಸೌರಮಾನದ್ದು, ನಕ್ಷತ್ರಗಳಿಗನುಗುಣವಾಗಿ ಇಪ್ಪತ್ತೇಳು ದಿನಗಳ ತಿಂಗಳು ನಕ್ಷತ್ರಮಾನದ್ದು. ಒಂದು ರಾಶಿಯಿಂದ ಮತ್ತೊಂದು ರಾಶಿಗೆ ಗುರು ತೆರಳುವ ಮಾನ ಬಾರ್ಹಸ್ಪತ್ಯಮಾನ. ಸಾವನ ಮಾಸದಂತೆ ವರ್ಷಕ್ಕೆ ಸರಿಯಾಗಿ ಮುನ್ನೂರ ಅರವತ್ತು ದಿನಗಳು.

---

೫೫. ಅಜ್ಞಾತವಾಸೋಽತೀತ ಇತಿ ವದತಾಂ ಭೀಮಾದೀನಾಂ ನಾತೀತ ಇತಿ ವದತಾಂ ದುರ್ಯೋಧನಾದೀನಾಂ ಚಾಭಿಪ್ರಾಯಮಾಹ ಸೌರೇತಿ। ರವಿಸಂಕ್ರಮಾತ್ಸಂಕ್ರಮಾವಧಿಃ ಸೌರಮಾಸಃ। ಪೌರ್ಣಮಾಸೀತಃ ಪೌರ್ಣಮಾಸೀಪರ್ಯಂತಂ ಚಾಂದ್ರಮಾಸಃ। ದರ್ಶಾದ್ದರ್ಶಾವಧಿಃ ಪಿತೃಮಾಸಃ। ತತ್ರ ಚಾಂದ್ರಮಾಸೇ ಪಿತೃಮಾಸೇ ಚ ಪಂಚಪಂಚವರ್ಷಸಮಾಪ್ತೌ ಏಕೈಕೋಽಧಿಕಮಾಸೋಽಸ್ತಿ। ಏವಂ ಚ ದಶವರ್ಷೇಷು ದ್ವೌ ಮಾಸಾವಧಿಕೌ। ತಾಭ್ಯಾಂ ಮಾಸಾಭ್ಯಾಂ ಸಹ ಗಣನಾಯಾಂ "ದ್ವಾದಶ ಮಾಸಾಃ ಸಂವತ್ಸರಃ" ಇತಿ ವಚನಾತ್। ದ್ವಾದಶದ್ವಾದಶಮಾಸಾನಾಮೇಕೈಕಃ ಸಂವತ್ಸರ ಇತಿ ಸಂಖ್ಯಾಯಾಃ ತ್ರಯೋದಶವರ್ಷಾಣ್ಯತೀತಾನಿ। ಪುನಶ್ಚ ಕತಿಪಯದಿನಾನ್ಯಧಿಕಾನಿ ಚ ಜಾತಾನೀತಿ ಭಾವೋ ಭೀಷ್ಮಾದೀನಾಮ್। ಸೌರಮಾಸೇ ತು ಸಂಕ್ರಮಣಾತ್ಸಂಕ್ರಮಣಾಂತರೇ ವಾ ಕೇಷುಚಿನ್ಮಾಸೇಷು ಏಕತ್ರಿಂಶದ್ದಿನಾನಿ ದ್ವಾತ್ರಿಂಶದ್ದಿನಾನಿ ಚ ಕಲ್ಪಯಿತ್ವಾ ಅಧಿಕಮಾಸಮಂತರ್ಭಾವಯಂತಿ। ತೇನ ತ್ರಯೋದಶವರ್ಷಾಣಾಂ ಕಿಂಚಿದಧಿಕಮಾಸದ್ವಯಂ ನ್ಯೂನಮಿತಿ ಕರ್ಣಾದೀನಾಂ ಭಾವಃ। ಗೋದಾವರ್ಯಾಃ ದಕ್ಷಿಣೇ ತೀರೇ ಉತ್ತರೇ ತೀರೇ ಚ ಚಾಂದ್ರಸೌರಮಾಸರೀತ್ಯಾ ಪ್ರವರ್ತನಾತ್। ಸ್ವದೇಶಾಚಾರಮಜಾನಾನಾಃ ಕೌರವಾ ಏವ ಮೂಢಾ ಇತಿ ಭಾವಃ ॥ – (ವಾ.)

೫೫. ದರ್ಶಾವರ್ಧಿಮಾಸಮುಶಂತಿ ಚಾಂದ್ರಂ ಸೌರಂ ತಥಾ ಭಾಸ್ಕರರಾಶಿಚಾರಾತ್ ತ್ರಿಂಶದ್ದಿನಂ ಸಾವನಮಾಹುರಾರ್ಯಾನಾಕ್ಷತ್ರಮಿಂದೋರ್ಭಗಣಭ್ರಮಾಚ್ಚೇತಿ ರತ್ನಮಾಲಾಯಮ್। ಚಾಂದ್ರೋಽಪಿ ಶುಕ್ಲಪಕ್ಷಾದಿಕೃಷ್ಣಾದಿರ್ವೇತಿ ಚ ದ್ವಿಧಾ। ಕೃಷ್ಣಪಕ್ಷಾದಿಕಂ ಮಾಸಂ ನಾಂಗೀಕುರ್ವಂತಿ ಕೇಚನ। ಯೇಽಪೀಚ್ಛಂತಿ ನ ತೇಷಾಮಪೀಷ್ಟೋ ವಿಂಧ್ಯಸ್ಯ ದಕ್ಷಿಣೇತಿ ತ್ರಿಕಾಂಡಮಂಡನೇ। – (ಜ.)

ದಿನಾನಾಮಧಿಪಃ ಸೂರ್ಯಃ ಪಕ್ಷಮಾಸಾಬ್ದಪಃ ಶಶೀ।
ತಸ್ಮಾತ್ ಸೌಮ್ಯಾಬ್ದಮೇವಾತ್ರ ಮುಖ್ಯಮಾಹುರ್ಮನೀಷಿಣಃ ॥ ೫೬ ॥

ಅ: ದಿನಗಳ ಅಧಿಪತಿ ಸೂರ್ಯ, ಪಕ್ಷ, ಮಾಸ ಮತ್ತು ವರ್ಷಗಳಿಗೆ ಅಧಿಪತಿ ಚಂದ್ರ. ಆದ್ದರಿಂದ ಸೌಮ್ಯ ವರ್ಷವನ್ನೇ ಜ್ಞಾನಿಗಳು ಮಾಸ ಗಣನೆಗೆ ಮುಖ್ಯ ಎಂಬುದಾಗಿ ಹೇಳುವರು.

ವಿ: ದಿನಾಧಿಪತಿ ಸೂರ್ಯನಾದ್ದರಿಂದ ದಿನದ ಲೆಕ್ಕವನ್ನು ಸೌರಮಾನದ ಮೂಲಕವೇ ಮಾಡಬೇಕು. ಆದರೆ ಪಕ್ಷ, ಮಾಸ ಮತ್ತು ವರ್ಷಗಳಿಗೆ ಚಂದ್ರನೇ ಅಧಿಪತಿಯಾದ್ದರಿಂದ ಅವುಗಳ ಗಣನೆಗೆ ಚಾಂದ್ರಮಾನವೇ ವಿಹಿತ. ಪಾಂಡವರ ವನವಾಸ ಅಜ್ಞಾತವಾಸಗಳು ವರ್ಷದ ಲೆಕ್ಕಕ್ಕೆ ಸೇರಿದ್ದರಿಂದ ಅವುಗಳನ್ನು ಚಾಂದ್ರಮಾನಕ್ಕೆ ಅನುಗುಣವಾಗಿಯೇ ನಿರ್ಣಯಿಸಬೇಕು ಎಂದು ತಾತ್ಪರ್ಯ.

ಸೌಮ್ಯಂ ಕಾಲಂ ತತೋ ಯಜ್ಞೇ ಗೃಹ್ಣಂತಿ ನ ತು ಸೂರ್ಯಜಮ್।
ತದೇತದವಿಚಾರ್ಯೈವ ಲೋಭಾಚ್ಚ ಧೃತರಾಷ್ಟ್ರಜೈಃ ॥ ೫೭ ॥

ರಾಜ್ಯಂ ನ ದತ್ತಂ ಪಾರ್ಥೇಭ್ಯಃ ಪಾರ್ಥಾಃ ಕಾಲಸ್ಯ ಪೂರ್ಣತಾಮ್।
ಖ್ಯಾಪಯಂತೋ ವಿಪ್ರವರೈರುಪಪ್ಲಾವ್ಯಮುಪಾಯಯುಃ ॥ ೫೮ ॥

---

೫೬. ಪ್ರಕಾರಾಂತರೇಣಾಪಿ ಕೌರವಾ ಮೂಢಾ ಇತ್ಯಾಹ । ದಿನಾನಾಮಧಿಪ ಇತಿ ಸೂರ್ಯೋದಯಮಾರಭ್ಯ ಸೂರ್ಯೋದಯಪರ್ಯಂತಮೇಕೈಕದಿನಂ ಭವತಿ । ಅತಃ ದಿನಾನಾಮಧಿಪಃ ಸೂರ್ಯ ಏವ। ಚಂದ್ರೋದಯಸ್ತು ರಾತ್ರೌ ಭವನ್ ಅಹ್ನ್ಯನಿಯಮೇನ ಭವನ್ ದಿನಸಂಖ್ಯಾಯೈ ನಾಲಮ್। ಅತಃ ಸೂರ್ಯ ಏವ ದಿನಾನಾಮಧಿಪ ಇತಿ ಭಾವಃ। ಪಕ್ಷಸ್ತು ಚಾಂದ್ರಮಾಸರೀತ್ಯಾ ಪೂರ್ವಪೌರ್ಣಮಾಸೀಮಾರಭ್ಯ ಅಮಾವಾಸ್ಯಾಪರ್ಯಂತಮೇಕಃ ಪಕ್ಷಃ। ಸ ಕೃಷ್ಣಪಕ್ಷ ಇತ್ಯುಚ್ಯತೇ ಅಮಾವಾಸ್ಯಾಮಾರಭ್ಯ ಪುನಃ ಪೌರ್ಣಮಾಸೀಪರ್ಯಂತಮಪರಃ ಪಕ್ಷಃ। ಸ ಶುಕ್ಲಪಕ್ಷ ಇತ್ಯುಚ್ಯತೇ। ಅತಃ ಪಕ್ಷಾಧಿಪಃ ಮಾಸಾಧಿಪಃ ಅಬ್ದಾಧಿಪಶ್ಚಂದ್ರ ಏವ। ಯಾಕಾನಾಂ ಯತೀನಾಂ ಚ ಸರ್ವದೇಶೇಷ್ವಪಿ ಸೌಮ್ಯಮಾಸೇನೈವ ಪ್ರವರ್ತನಾತ್ ಸ ಏವ ಮಾಸೋಽಬ್ದಶ್ಚ ಶ್ಲಾಘ್ಯಃ। ಅತ ಏವ ಮಾಸಪೂರ್ತೇರವಧಿದಿನತ್ವಾತ್ ಪೌರ್ಣಮಾಸೀತ್ಯಾಹುರಿತಿ ಸರ್ವಮವದಾತಮ್ ॥ – (ವಾ.)

೫೭. ಪಂಚಮೇ ಪಂಚಮೇ ವರ್ಷೇ ದ್ವೌ ಮಾಸೌ, ಸಾರ್ಧವರ್ಷದ್ವಯೇ ಏಕೋಽಧಿಮಾಸಃ, ತ್ರಯೋದಶಾನಾಂ ವರ್ಷಾಣಾಂ ಪಂಚಅಧಿಮಾಸಾಃ । ದಶವರ್ಷಾಣಾಂ ಚತ್ವಾರಃ । ಪುನಃ ಸಾರ್ಧವರ್ಷದ್ವಯಸ್ಯ ಏಕೋಮಾಸಃ । ಏವಂ ಸಾರ್ಧದ್ವಾದಶವರ್ಷಾಣಾಂ ಪಂಚಾಧಿಕಮಾಸಾಃ । ಪುನರುರ್ವರಿತಷಣ್ಮಾಸಾನಾಂ ದ್ವಾದಶಕ್ಷಪಾಃ। ಕ್ಷಪಾಶಬ್ದೇನ ತ್ರಿಂಶದ್ಘಟಿಕಾತ್ಮಕಮರ್ಧದಿನಮುಚ್ಯತೇ। ಸಂಪೂರ್ಣಾಃ ಷಡ್ ದಿವಸಾ ಇತಿಯಾವತ್। ತಸ್ಮಾದಾಪಾತದರ್ಶಿನಃ ತ್ರಯೋದಶವರ್ಷಾಣಾಂ ಷಡ್ದಿನಾಧಿಕಪಂಚಮಾಸೈರ್ನ್ಯೂನತಾಮಾಶಂಕಂತೇ । ದೇವಪಿತೃಕಾರ್ಯಾರ್ಥೇ ಸಾಧಿಕಮಾಸ ಸಂವತ್ಸರಾನುಸರಣೇಽಪಿ ಸ್ವೋಕ್ತ ನಿಯಮರಕ್ಷಣಾಯ ಪೌರ್ಣಮಾಸೀತಃ ಪೌರ್ಣಮಾಸೀ ಪರ್ಯಂತಮೇಕೋ ಮಾಸ ಇತಿ ಚಾಂದ್ರಮಾಸಾನುಸರಣೇನೈವ ಕೃತಕೃತ್ಯತ್ವಾದಿತಿ ಭಾವಃ । – ಲಕ್ಷಾಲಂಕಾರ

ಅ: ಆದ್ದರಿಂದಲೇ ಯಜ್ಞದಲ್ಲಿ ಚಾಂದ್ರಮಾನವನ್ನೇ ಗ್ರಹಿಸುವರು. ಸೌರಮಾನವನ್ನಲ್ಲ. ಇದನ್ನೆಲ್ಲಾ ವಿಚಾರ ಮಾಡದೇ ಕೌರವರು ಲೋಭಕ್ಕೆ ವಶರಾಗಿ ಪಾಂಡವರಿಗೆ ರಾಜ್ಯ ನೀಡಲಿಲ್ಲ. ಪಾಂಡವರು ಅಜ್ಞಾತವಾಸ ಕಾಲ ಸರಿಯಾಗಿ ಮುಕ್ತಾಯವಾದುದನ್ನು ಬ್ರಾಹ್ಮಣರ ಮೂಲಕ ಘೋಷಿಸುತ್ತಾ ಉಪಪ್ಲಾವ್ಯ ನಗರಕ್ಕೆ ತೆರಳಿದರು.

ವಿ: ೧) ಹೀಗೆ ಚಾಂದ್ರಮಾನವೇ ವರ್ಷಾದಿ ಗಣನೆಗೆ ಪ್ರಧಾನವಾದ್ದರಿಂದ ಪಾಂಡವರು ಅದಕ್ಕೆ ಅನುಗುಣವಾಗಿ ತಮ್ಮ ಅಜ್ಞಾತವಾಸದ ಅವಧಿಯನ್ನು ಪೂರೈಸಿದ್ದರಿಂದ ಅವರು ಮರಳಿ ವನವಾಸಾದಿಗಳಿಗೆ ತೆರಳಬೇಕಿಲ್ಲ ಎಂದು ಭಾವ.

೨) ದುರ್ಯೋಧನಾದಿಗಳಿಗೆ ಈ ರೀತಿಯಾದ ಕಾಲಮಾನ ಗಣನೆಯ ಪರಿವೆ ಇಲ್ಲದ್ದು ಒಂದು ಕಾರಣವಾದರೆ, ಪಾಂಡವರಿಗೆ ರಾಜ್ಯ ನೀಡದೇ ತಾವೇ ಇರಿಸಿಕೊಳ್ಳಬೇಕೆಂಬ ದುರಾಸೆ ಮತ್ತೊಂದು ಕಾರಣವಾಗಿತ್ತು ಎಂದು ತಿಳಿಯಬೇಕು.

೩) ಈ ರೀತಿಯಾಗಿ ವಿವಾದ ಹುಟ್ಟಿಸಬೇಕೆಂಬ ಆಲೋಚನೆಯಿಂದಲೇ ಅವರು ಆ ಸಮಯ ನಿಬಂಧನೆ ಮಾಡಿದಾಗ ಯಾವ ಮಾನಕ್ಕೆ ಅನುಗುಣವಾಗಿ ಎಂಬುದನ್ನು ಸ್ಪಷ್ಟಪಡಿಸಿರ–ಲಿಲ್ಲ ಎಂದೂ ತಿಳಿಯಬಹುದು.

೪) ಪಾಂಡವರು ಆ ಬಗ್ಗೆ ಸ್ಪಷ್ಟಪಡಿಸದಿರಲು ಜ್ಞಾನಿಗಳೆಲ್ಲಾ ಅನುಸರಿಸುವ ಚಾಂದ್ರ–ಮಾನವೇ ಪ್ರಸಕ್ತವಾದ ಅವಧಿಯೆಂಬ ಭಾವ ಕಾರಣವಾಗಿತ್ತು ಆದ್ದರಿಂದ ಅವರಲ್ಲಿ ಕಪಟವಿರಲಿಲ್ಲ; ಕೌರವರು ಮಾತ್ರ ದುರುದ್ದೇಶದಿಂದ ಹಾಗೆ ಮಾಡಿದ್ದರೆಂದು ತಿಳಿಯಬಹುದು.

೫) ಅಲ್ಲದೇ ಪಾಂಡವರನ್ನು ಅಜ್ಞಾತವಾಸದ ಅವಧಿಯಲ್ಲಿ ಅವರು ನಿಜರೂಪದಲ್ಲೇ ಓಡಾಡಿದರೂ ಕೌರವರಿಗೆ ಗುರುತಿಸಲು ಸಾಧ್ಯವಾಗದಿರಲಿ ಎಂಬ ವರವನ್ನು ಯಮ ನೀಡಿದ್ದ ಎಂಬುದನ್ನೂ ಗಮನಿಸಬೇಕು.

೬) ಅದರಂತೆ ವಿರಾಟನಗರವನ್ನು ಪ್ರವೇಶಿಸುವ ಮುನ್ನ ಧರ್ಮರಾಜ ದುರ್ಗಾ–ಸ್ತೋತ್ರವನ್ನು ಮಾಡಿದಾಗ ದರ್ಶನವಿತ್ತ ದುರ್ಗಾದೇವಿ ಅಜ್ಞಾತವಾಸಕಾಲದಲ್ಲಿ ನಿಮ್ಮ ಗುರುತನ್ನು ಕೌರವರು ಹಿಡಿಯಲಾರರು ಎಂದೇ *ವರ ನೀಡಿದ್ದಳು.

---

* ಮತ್ಪ್ರಸಾದಾಚ್ಚ ವಃ ಸರ್ವಾನ್ ವಿರಾಟನಗರೇ ಸ್ಥಿತಾನ್ ।
ನ ಪ್ರಜ್ಞಾಸ್ಯಂತಿ ಕುರವೋ ನರಾ ವಾ ತನ್ನಿವಾಸಿನಃ ॥ (ದುರ್ಗಾದೇವಿ ಪಾಂಡವರಿಗೆ ನೀಡಿದ ವರ)
– ಭಾರತ (ವಿರಾಟ. ೬/೩೪)

೭) ಹೀಗೆ ಎರಡು ದೈವಿಕ ಕಾರಣಗಳಿಂದಲೂ ಪಾಂಡವರು ಅಜ್ಞಾತವಾಸವನ್ನು ಯಶಸ್ವಿಯಾಗಿ ಪೂರೈಸಿರುವರು ಎಂದು ದೃಢಪಡುವುದು ಎಂಬುದನ್ನು ಗಮನಿಸಬೇಕು. ಆದರೆ, ಕೌರವರು ಕೇವಲ ದುರುದ್ದೇಶದಿಂದ ಹಾಗೆ ಮಿಥ್ಯಾರೋಪವನ್ನು ಪಾಂಡವರ ಮೇಲೆ ಮಾಡಿದರು ಎಂಬುದು ಸ್ಫುಟಪಡುವುದು.

ಉಪಪ್ಲಾವ್ಯಕ್ಕೆ ಪಾಂಡವರು

ಸವಾಸುದೇವಾ ಅಖಿಲೈಶ್ಚ ಯಾದವೈಃ
ಪಾಂಚಾಲಮಾತ್ಸ್ಯೈಶ್ಚ ಯುತಾಃ ಸಭಾರ್ಯಾಃ ।
ಉಪಪ್ಲಾವ್ಯೇ ತೇ ಕತಿಚಿದ್ದಿನಾನಿ
ವಾಸಂ ಚಕ್ರುಃ ಕೃಷ್ಣಸಂಶಿಕ್ಷಿತಾರ್ಥಾಃ ॥ ೫೯ ॥

॥ ಇತಿ ಶ್ರೀಮದಾನಂದತೀರ್ಥಭಗವತ್ಪಾದಾಚಾರ್ಯವಿರಚಿತೇ
ಶ್ರೀಮಹಾಭಾರತತಾತ್ಪರ್ಯನಿರ್ಣಯೇ ಪಾಂಡವಾಜ್ಞಾತವಾಸಸಮಾಪ್ತಿರ್ನಾಮ
ತ್ರಯೋವಿಂಶೋಽಧ್ಯಾಯಃ ॥ ೨೩ ॥

ಅ: ಪಾಂಡವರು ಕೃಷ್ಣನೊಂದಿಗೂ, ಸಕಲ ಯಾದವರೊಂದಿಗೂ ಪಾಂಚಾಲರೊಂದಿಗೂ, ಮಾತ್ಸ್ಯರೊಂದಿಗೂ ಕೂಡಿಕೊಂಡು ಸಪತ್ನೀಕರಾಗಿ ಕೃಷ್ಣನಿಂದ ಉಪದೇಶ ಪಡೆಯುತ್ತಾ ಕೆಲವು ದಿನಗಳ ಕಾಲ ಉಪಪ್ಲಾವ್ಯ ನಗರದಲ್ಲಿ ನೆಲೆಸಿದರು.

॥ ಶ್ರೀಮದಾನಂದತೀರ್ಥಭಗವತ್ಪಾದಾಚಾರ್ಯಪ್ರಣೀತ ಮಹಾಭಾರತತಾತ್ಪರ್ಯನಿರ್ಣಯದಲ್ಲಿ 'ಪಾಂಡವಾಜ್ಞಾತವಾಸಸಮಾಪ್ತಿ' ಎಂಬ ಇಪ್ಪತ್ತಮೂರನೆಯ ಅಧ್ಯಾಯ ಮುಗಿಯಿತು ॥ ೨೩ ॥

॥ ಶ್ರೀಕೃಷ್ಣಾರ್ಪಣಮಸ್ತು ॥

★★★★★

---

೫೯. ತತಸ್ತ್ರಯೋದಶೇ ವರ್ಷೇ ನಿವೃತ್ತೇ ಪಂಚ ಪಾಂಡವಾಃ ।
ಉಪಪ್ಲಾವ್ಯಂ ವಿರಾಟಸ್ಯ ಸಮಪದ್ಯಂತ ಸರ್ವಶಃ ॥ – ಭಾರತ (ವಿರಾಟ. ೭೨/೧೪)

ಅಧ್ಯಾಯ - ೨೪

(ಯುದ್ಧೋದ್ಯೋಗಃ)

(ಅರ್ಜುನದುರ್ಯೋಧನರಿಗೆ ಕೃಷ್ಣನ ಸಹಾಯ, ಪಾಂಡವಕೌರವರ ಯುದ್ಧಸಿದ್ಧತೆ, ಶ್ರೀಕೃಷ್ಣ ರಾಯಭಾರ, ವಿಶ್ವರೂಪಪ್ರದರ್ಶನ, ಕರ್ಣಪ್ರಸಂಗ)

ಧೃತರಾಷ್ಟ್ರನ ಬಳಿಗೆ ದ್ರುಪದ ಪುರೋಹಿತ

ತತಃ ಸಮ್ಮಂತ್ರ್ಯಾನುಮತೇ ಕೃಷ್ಣಸ್ಯ ಸ್ವಪುರೋಹಿತಮ್।
ದ್ರುಪದಃ ಪ್ರೇಷಯಾಮಾಸ ಧೃತರಾಷ್ಟ್ರಾಯ ಶಾಂತಯೇ ॥ ೧ ॥

ಅ: ಬಳಿಕ ಮಂತ್ರಾಲೋಚನೆ ಮಾಡಿ ಕೃಷ್ಣನ ಅನುಮತಿಯಂತೆ ದ್ರುಪದರಾಜ ತನ್ನ ಪುರೋಹಿತನನ್ನು ಸಂಧಾನಕ್ಕಾಗಿ ಧೃತರಾಷ್ಟ್ರನ ಬಳಿಗೆ ಕಳಿಸಿದ.

ವಿ ೧) ದುರ್ಯೋಧನನು ರಾಜ್ಯ ನೀಡಲು ಮುಂದಾಗದಾದಾಗ ಪಾಂಡವರು ಕೃಷ್ಣನ ನೇತೃತ್ವದಲ್ಲಿ ಮಂತ್ರಾಲೋಚನೆ ನಡೆಸಿದರು.

೨) ಕೌರವರು ಪಾಂಡವರ ರಾಜ್ಯವನ್ನು ಹಿಂದಿರುಗಿಸುವ ಬಗ್ಗೆ ಅವರ ಮನೋಭಾವನ್ನು ತಿಳಿಯಲು ದೂತನೊಬ್ಬನನ್ನು ಕಳುಹಿಸುವ ಪ್ರಸ್ತಾವನೆಯನ್ನು ಶ್ರೀಕೃಷ್ಣ ಮುಂದಿರಿಸಿದ; ಬಲರಾಮ ಅದನ್ನು ಒಪ್ಪಿದರೂ, ಜೂಜಾಟ ತಿಳಿಯದ ಧರ್ಮರಾಜ ಜೂಜಾಟಕ್ಕೆ ತೊಡಗಿ ಸೋತುಹೋದದ್ದು ಅವನ ತಪ್ಪು. ಆದ್ದರಿಂದ ರಾಜ್ಯವನ್ನು ಹಿಂದಿರುಗಿಸಬೇಕೆಂದು *ವಿನಯದಿಂದ ಕೇಳಿಕೊಳ್ಳಬೇಕೇ ಹೊರತು ಹಕ್ಕಿನಂತೆ ಪ್ರತಿಪಾದಿಸಬಾರದು ಎಂದು ವಾದಿಸಿದ.

೩) ಅದನ್ನು ಒಪ್ಪದ ಸಾತ್ಯಕಿ ಧರ್ಮರಾಜ ಜೂಜಾಡಲು ತಿಳಿಯನೆಂಬುದನ್ನು ಆರಿತೇ ದುರ್ಯೋಧನ ಮೋಸದಿಂದ ಅವನ ರಾಜ್ಯವನ್ನು ಅಪಹರಿಸಿರುವುದರಿಂದ ಅಂತಹ ದುಷ್ಟರಲ್ಲಿ ವಿನಯವನ್ನೇನೂ ತೋರಿಸಬೇಕಿಲ್ಲ, ಪಾಂಡವರು ಸರಿಯಾದ ರೀತಿಯಲ್ಲೇ ವನವಾಸ ಅಜ್ಞಾತ–ವಾಸಗಳನ್ನು ಪೂರೈಸಿರುವರೆಂದು ಮನವರಿಕೆ ಮಾಡಿಕೊಟ್ಟು, ರಾಜ್ಯಪ್ರದಾನವನ್ನು ಹಕ್ಕನ್ನಾಗಿಯೇ ಪ್ರತಿಪಾದಿಸಬೇಕು ಎಂದು ತಿಳಿಸಿದ.

೪) ಕೊನೆಗೆ ಶ್ರೀಕೃಷ್ಣ ದುರ್ಯೋಧನನಂಥವನಿಗೆ ಸಾಮ ಉಚಿತವಲ್ಲ, ದಂಡವೇ ಉಚಿತ ಎಂಬ ದ್ರುಪದನ ಮಾತನ್ನು ಅಂಗೀಕರಿಸಿ ಅದರಂತೆ ಮುಂದಿನ ಕಾರ್ಯತಂತ್ರವನ್ನು ರೂಪಿಸಲು ತಿಳಿಸಿ ದ್ವಾರಕೆಗೆ ತೆರಳಿದ.

---

* ಸರ್ವಾಸ್ವವಸ್ಥಾಸು ಚ ತೇ ನ ಕೋಪ್ಯಾ ಗ್ರಸ್ತೋ ಹಿ ಸೋऽರ್ಥೋ ಬಲಮಾಶ್ರಿತೈಸ್ತೈಃ।
ಪ್ರಯಾಚ್ಯುಪೇತಸ್ಯ ಯುಧಿಷ್ಠಿರಸ್ಯ ದ್ಯೂತೇ ಪ್ರಸಕ್ತಸ್ಯ ಹೃತಂ ಚ ರಾಜ್ಯಮ್ ॥...
ಸಂರಂಭಮಾಣೋ ವಿಜಿತಃ ಪ್ರಸಹ್ಯ ತತ್ಕಾಪರಾಧಃ ಶಕುನೇರ್ನ ಕಶ್ಚಿತ್ ॥ – ಭಾರತ (೫/೨/೮, ೧೨)

ಪುರೋಹಿತನ ಸಂದೇಶ

ಸ ಗತ್ವಾ ಧೃತರಾಷ್ಟ್ರಂ ತಂ ಭೀಷ್ಮದ್ರೋಣಾದಿಭಿರ್ಯುತಮ್ ।
ಉವಾಚ ನ ವಿರೋಧಸ್ತ ಉತ್ಪಾದ್ಯೋ ಧರ್ಮಸೂನುನಾ ॥ ೨ ॥

ಅ: ದ್ರುಪದನ ಪುರೋಹಿತ ಹಸ್ತಿನಾಪುರಕ್ಕೆ ತೆರಳಿ ಭೀಷ್ಮ, ದ್ರೋಣಾದಿಗಳೊಂದಿಗೆ ಕೂಡಿದ್ದ ಧೃತರಾಷ್ಟ್ರನಿಗೆ ತಿಳಿಸಿದ 'ಧರ್ಮರಾಜನೊಂದಿಗೆ ವಿರೋಧ ಕಟ್ಟಿಕೊಳ್ಳುವುದು ನಿನಗೆ ತರವಲ್ಲ.

ಯಸ್ಯ ಭೀಮಾರ್ಜುನೌ ಯೋಧೌ ನೇತಾ ಯಸ್ಯ ಜನಾರ್ದನಃ ।
ಶ್ರುತಾಸ್ತೇ ಭೀಮನಿಹತಾ ಜರಾಸಂಧಾದಯೋಽಖಿಲಾಃ ॥ ೩ ॥

ಅ: 'ಧರ್ಮರಾಜನಿಗೆ ಭೀಮಾರ್ಜುನರು ಪ್ರಧಾನ ಯೋಧರು; ಶ್ರೀಕೃಷ್ಣ ಅವರಿಗೆ ನಾಯಕ. ಜರಾಸಂಧ ಮೊದಲಾದವರೆಲ್ಲ ಭೀಮನಿಂದ ಹತರಾಗಿರುವುದನ್ನು ನೀನು ಕೇಳಿಯೇ ಇರುವಿ'.

ಭೀಮನಿಂದ ಆದ ರಾಕ್ಷಸಹನನ

ಯಥಾ ಚ ರುದ್ರವಚನಾದವಧ್ಯಾ ರಾಕ್ಷಸಾಧಿಪಾಃ ।
ತೀರ್ಥವಿಘ್ನಕರಾಃ ಸರ್ವೇ ತೀರ್ಥಾನ್ಯಾಚ್ಛಾದ್ಯ ಸಂಸ್ಥಿತಾಃ ॥ ೪ ॥

ತಿಸ್ರಃ ಕೋಟ್ಯೋ ಮಹಾವೀರ್ಯಾ ಭೀಮೇನೈವ ನಿಷೂದಿತಾಃ ।
ಭ್ರಾತೄಣಾಂ ಬ್ರಾಹ್ಮಣಾನಾಂ ಚ ಲೋಕಾನಾಂ ಚ ಹಿತೈಷಿಣಾ ।
ತತೋ ಹಿ ಸರ್ವತೀರ್ಥಾನಿ ಗಮ್ಯಾನ್ಯಾಸನ್ ನೃಣಾಂ ಕ್ಷಿತೌ ॥ ೫ ॥

ಅ: ರುದ್ರದೇವರ ವರದಿಂದಾಗಿ ಅವಧ್ಯರಾಗಿದ್ದ ಮೂರು ಕೋಟಿ ಮಹಾರಾಕ್ಷಸರು ಎಲ್ಲ ತೀರ್ಥಗಳಲ್ಲೂ ಆವರಿಸಿ ತೀರ್ಥಯಾತ್ರೆಗಳಿಗೆ ವಿಘ್ನವನ್ನು ಉಂಟು ಮಾಡತೊಡಗಿದ್ದರು. ಸಹೋದರರಾದ ಪಾಂಡವರಿಗೂ, ಬ್ರಾಹ್ಮಣರಿಗೂ, ಲೋಕಗಳಿಗೂ ಹಿತೈಷಿಯಾದ ಭೀಮ ಅಂತಹ ಮಹಾಪರಾಕ್ರಮಿಗಳಾದ ಅವರನ್ನೆಲ್ಲಾ ಕೊಂದುಹಾಕಿದ. ಆದ್ದರಿಂದ ಭೂಮಿಯಲ್ಲಿನ ತೀರ್ಥಕ್ಷೇತ್ರಗಳೆಲ್ಲಾ ಮನುಷ್ಯರಿಗೆ ಗಮ್ಯವೆನ್ನಿಸಿವೆ.

ವಿ: ೧) ಭೀಮಾರ್ಜುನರು ಧರ್ಮರಾಜನಿಗೆ ಪ್ರಧಾನ ಯೋಧರು ಎಂದು ತಿಳಿಸಿದ ದ್ರುಪದ ಪುರೋಹಿತ ಮೊದಲಿಗೆ ಭೀಮನ ಮಹಿಮೆಯನ್ನು ವಿವರಿಸಿದ.

೨) ವನಪರ್ವದಲ್ಲಿ ನಿರೂಪಿತವಾಗದಿದ್ದ ವಿಶೇಷ ವಿವರ ಇಲ್ಲಿ ಬಂದಿದೆ. ಬಗೆಬಗೆಯ ಕ್ಷೇತ್ರಗಳಲ್ಲಿ ಶಿವನ ವರದಿಂದಾಗಿ ಅವಧ್ಯರೆನ್ನಿಸಿ ತೀರ್ಥಯಾತ್ರೆಗೆ ವಿಘ್ನ ಉಂಟುಮಾಡಲೆಂದು

ನೆಲೆಸಿದ್ದ ಮೂರು ಕೋಟಿ ರಾಕ್ಷಸರನ್ನು ಭೀಮ ಸಂಹರಿಸಿದ. ಅದರಿಂದಾಗಿಯೇ ಜನಗಳಿಗೆ ತೀರ್ಥಯಾತ್ರೆ ಮಾಡಲು ಸಾಧ್ಯವಾಗಿದೆ ಎಂದರ್ಥ. ಅಂತಹ ಭೀಮನನ್ನು ಎದುರಿಸಲು ಕೌರವ–ರಿಂದ ಹೇಗೆ ಸಾಧ್ಯ ಎಂದರ್ಥ.

ಜಟಾಸುರವಧೆ

ಯಥಾ ಜಟಾಸುರಃ ಪಾಪಃ ಶರ್ವಾಣೀವರಸಂಶ್ರಯಾತ್ ।
ಅವಧ್ಯೋ ವಿಪ್ರರೂಪೇಣ ವಂಚಯನ್ನೇವ ಪಾಂಡವಾನ್ ॥ ೬ ॥

ಅ: ಪಾಪಿಯಾದ ಜಟಾಸುರ ಪಾರ್ವತೀ ವರವನ್ನು ಆಶ್ರಯಿಸಿ ಅವಧ್ಯನಾಗಿದ್ದ. ಅವನು ಬ್ರಾಹ್ಮಣ ರೂಪದಿಂದ ಪಾಂಡವರನ್ನು ವಂಚಿಸುತ್ತಾ ಅವರ ಬಳಿ ನೆಲೆಸಿದ್ದ.

ವಿ: ರಾಕ್ಷಸರು ವಿಪ್ರಾದಿವೇಷದಿಂದಲೂ ಲೋಕನಾಶಕ್ಕೆ ತೊಡಗುವ ವಿಶೇಷಾಂಶ ಇಲ್ಲಿದೆ.

ಜ್ಞಾತ್ವಾऽಪಿ ಭೀಮಸೇನೇನ ವಿಪ್ರರೂಪಸ್ಯ ನೋ ವಧಃ ।
ಯೋಗ್ಯ ಇತ್ಯಹತೋ ಭೀಮೇ ಮೃಗಯಾರ್ಥಂ ಗತೇ ಕ್ವಚಿತ್ ॥ ೭ ॥

ಯಮೌ ಯುಧಿಷ್ಠಿರಂ ಕೃಷ್ಣಾಂ ಚಾದಾಯೈವ ಪರಾದ್ರವತ್ ।
ದೃಷ್ಟ್ವೋ ಭೀಮೇನ ತಾಂಸ್ಯಕ್ತ್ವಾ ಸಂಸಕ್ತಸ್ತೇನ ಸಂಗರೇ ।
ನಿಪಾತ್ಯ ಭೂಮೌ ಪಾದೇನ ಸಂಚೂರ್ಣಿತಶಿರಾಸ್ತಮಃ ॥ ೮ ॥

---

೭. ವಿಜ್ಞಾತೋऽಸಿ ಮಯಾ ಪೂರ್ವಂ ಪಾಪ ಅಸ್ತ್ರಪರೀಕ್ಷಣೇ ।
ಅಸ್ಥಾ ತು ತ್ವಯಿ ಮೇ ನಾಸ್ತಿ ಯತೋऽಸಿ ನ ಹತಸ್ತದಾ ॥
ಅತಿಥಿಂ ಬ್ರಹ್ಮರೂಪಂ ಚ ಕಥಂ ಹನ್ಯಾಮನಾಗಸಮ್ ।
ರಾಕ್ಷಸಂ ಜಾನಮಾನೋऽಪಿ ಯೋ ಹನ್ಯಾನ್ನರಕಂ ವ್ರಜೇತ್ ॥
ಅಪಕ್ವಸ್ಯ ಚ ಕಾಲೇನ ವಧಸ್ತವ ನ ವಿದ್ಯತೇ ॥
(ಜಟಾಸುರನನ್ನು ಕುರಿತು ಭೀಮನ ವಚನ) – ಭಾರತ (ವನ. ೧೫೭/೪೦-೪೩)

೮. ಸ ಭೀಮಸೇನೇ ನಿಷ್ಕ್ರಾಂತೇ ಮೃಗಯಾರ್ಥಮರಿಂದಮೇ । – ಭಾರತ (ವನ. ೧೫೭/೭)

೯. ರಹಿತಾನ್ ಭೀಮಸೇನೇನ ಕದಾಚಿತ್ ತಾನ್ ಯದೃಚ್ಛಯಾ ।
ಜಹಾರ ಧರ್ಮರಾಜಾನಂ ಯಮೌ ಕೃಷ್ಣಾಂ ಚ ರಾಕ್ಷಸಃ ॥
ಬ್ರಾಹ್ಮಣೋ ಮಂತ್ರಕುಶಲಃ ಸರ್ವಶಾಸ್ತ್ರವಿದುತ್ತಮಃ ।
ಇತಿ ಬ್ರುವನ್ ಪಾಂಡವೇಯಾನ್ ಪರ್ಯುಪಾಸ್ತೇ ಸ್ಮ ನಿತ್ಯದಾ ।
ದುಷ್ಟಾತ್ಮಾ ಪಾಪಬುದ್ಧಿಃ ಸ ನಾಮ್ನಾ ಖ್ಯಾತೋ ಜಟಾಸುರಃ ॥ – ಭಾರತ (ವನ. ೧೫೭/೨೯೩)

ಜಗಾಮ ಕಿಮು ತೇ ಪುತ್ರಾಃ ಶಕ್ಯಾ ಹಂತುಮಿತಿ ಸ್ಮ ಹ ।
ನಿವಾತಕವಚಾಶ್ಚೈವ ಹತಾಃ ಪಾರ್ಥೇನ ತೇ ಶ್ರುತಾಃ ॥ ೯ ॥

ಅ: ಭೀಮಸೇನ ಅವನು ಅಸುರನೆಂದು ತಿಳಿದಿದ್ದರೂ ಬ್ರಾಹ್ಮಣ ವೇಷದಲಿದ್ದದ್ದರಿಂದ ಕೊಲ್ಲುವುದು ತರವಲ್ಲ ಎಂದು ಕೊಂದಿರಲಿಲ್ಲ. ಒಮ್ಮೆ ಭೀಮಸೇನ ಬೇಟೆಗೆಂದು ಒಂದೆಡೆ ತೆರಳಿದ್ದಾಗ ಅವನು ಧರ್ಮರಾಜನನ್ನು, ನಕುಲ ಸಹದೇವರನ್ನು ದ್ರೌಪದಿಯನ್ನು ಎತ್ತಿಕೊಂಡು ಓಡತೊಡಗಿದ. ಭೀಮ ಅವನನ್ನು ನೋಡಿದಾಗ ಅವನು ಅವರನ್ನೆಲ್ಲಾ ಬಿಟ್ಟು ಭೀಮನೊಡನೆ ಯುದ್ಧಕ್ಕೆ ತೊಡಗಿದ. ಭೀಮ ಆ ಪಾಪಿಯನ್ನು ಭೂಮಿಯ ಮೇಲೆ ಬೀಳಿಸಿ ಪಾದದಿಂದ ತಲೆಯನ್ನು ಪುಡಿ ಮಾಡಿದ; ಅವನು ತಮಸ್ಸಿಗೇ ತೆರಳಿದ. ಇನ್ನು ಅವನು ನಿನ್ನ ಪುತ್ರರನ್ನು ಕೊಲ್ಲಲು ಶಕ್ತನೆಂದು ಹೇಳಬೇಕೇನು? ನಿವಾತಕವಚರೂ ಸಹ ಅರ್ಜುನಿಂದ ಹತರಾದುದನ್ನು ನೀನು ಕೇಳಿರುವಿ.

ವಿ: ೧) ವನಪರ್ವದಲ್ಲಿ ನಡೆದ ಜಟಾಸುರವಧ ಪ್ರಸಂಗವನ್ನು ಇಲ್ಲಿ ನಿರೂಪಿಸಿರುವರು. ಜಟಾಸುರ ಸ್ವರೂಪತಃ ಅಸುರನಾದರೂ, ಬ್ರಾಹ್ಮಣ ವೇಷದಲ್ಲಿ ಪಾಂಡವರ ಬಳಿ ಪ್ರವೇಶ ಪಡೆದು ಭೀಮನಿಲ್ಲದ ಸಮಯದಲ್ಲಿ ಉಳಿದವರನ್ನು ಅಪಹರಿಸಿ ಒಯ್ಯಲು ಹೊಂಚುತ್ತಿದ್ದ.

೨) ಆಗಿನ್ನೂ ಅರ್ಜುನ ಸ್ವರ್ಗಲೋಕದಿಂದ ಮರಳಿರಲಿಲ್ಲ. ಭೀಮ ಅವನನ್ನು ನೋಡುತ್ತಲೇ ಅಸುರನೆಂದು ಗುರುತಿಸಿದರೂ, ಅವನು ಬ್ರಾಹ್ಮಣ ವೇಷದಲ್ಲಿ ಇದ್ದುದ್ದರಿಂದ ಆ

---

೮. ಸಂಸಕ್ತಸ್ತೇನ ಸಂಗರ ಇತ್ಯುಕ್ತ್ಯಾತೇನೈವ ಸಂಗರೇ ಸಂಸಕ್ತತ್ವಾತ್ ವಿಪ್ರರೂಪಸ್ಯಾಪಿ ತಸ್ಯ ಹನನಂ ನ ದೋಷ ಇತಿ ಸೂಚಯತಿ ॥ – (ವಾ.)

೮. ತಸ್ಯ ಗಾತ್ರಾಣಿ ಸರ್ವಾಣಿ ಚೂರ್ಣಯಾಮಾಸ ಪಾಂಡವಃ ।
ಅರತ್ನಿನಾ ಚಾಭಿಹತ್ಯ ಶಿರಃ ಕಾಯಾದಪಾಹರತ್ ॥
ಸಂದಷ್ಟೌಷ್ಠಂ ವಿವೃತಾಕ್ಷಂ ಫಲಂ ವೃಕ್ಷಾದಿವ ಚ್ಯುತಮ್ ।
ಜಟಾಸುರಸ್ಯ ತು ಶಿರೋ ಭೀಮಸೇನಬಲಾದ್ಧತಮ್ ॥
ಪಪಾತ ರುಧಿರಾಧಿಗ್ಧಂ ಸಂದಷ್ಟದಶನಚ್ಛದಮ್ ॥ – ಭಾರತ (ವನ. ೧೫೭/೭೦, ೭)

೯. ಕಿಮು ತೇ ಪುತ್ರಾಃ ಶಕ್ಯಾ ಇತ್ಯತ್ರ ತೇ ಪುತ್ರಾಃ ಹಂತುಂ ಶಕ್ಯಾ ಇತಿ ಕಿಮು= ಕಿಂ ವಕ್ತವ್ಯಮಿತ್ಯರ್ಥಃ। ''ಸ್ಮಾತೀತೇ ಚ ಪ್ರಸಿದ್ಧೌ ಚ'' ಇತಿ ಅಭಿಧಾನಾತ್ ಸ್ಮಹೇತಿ ನಿಪಾತಾಭ್ಯಾಂ ಹತ್ಯಭಾವಾತ್ ಜರಾಸಂಧಾದಯೋ ಹತಾ ಇತಿ ಪ್ರಾಗುಕ್ತವಾಕ್ಯೇ ಆದಿಪದೇನ ಸಂಗ್ರಹಾಯೋಗ್ಯಘೋಷಯಾತ್ರೋತ್ತರಗೋಗ್ರಹಣಯೋಃ ಪ್ರಸಿದ್ಧಿಂ ಸೂಚಯತಿ। ನಿವಾತಕವಚಾ ಇತ್ಯುಕ್ತ್ಯಾ ಯೇಷಾಂ ಕವಚೇಷು ವಾತೋಽಪಿ ನ ಪ್ರವಿಶತಿ ತೇಷಾಂ ಹನನಂ ಅತಿದುಸ್ತರಮಿತಿ ಸೂಚಿತಮ್। ಚಶಬ್ದೇನ ಪೌಲೋಮಕಾಲೇಯವಧಂ ಸಮುಚ್ಚಿನೋತಿ। ಏವಶಬ್ದಸ್ಯ ಹತಾ ಏವೇತಿ ಸಂಬಂಧಃ। ಹತಾ ಏವ ನತು ಪಲಾಯಿತಾ ಇತ್ಯರ್ಥಃ ॥ – (ವಾ.)

ವೇಷದಲ್ಲಿದ್ದಾಗ ಕೊಲ್ಲುವುದು ಉಚಿತವಲ್ಲವೆಂದು ಸುಮ್ಮನಿದ್ದ. ಭೀಮು ಸರ್ವಜ್ಞನೆಂಬುದಕ್ಕೆ ಇದೂ ಒಂದು ನಿದರ್ಶನ. ಮುಂದೊಮ್ಮೆ ಭೀಮಸೇನ ಬೇಟೆಗೆಂದು ತೆರಳಿದ ಸಮಯವನ್ನು ಸಾಧಿಸಿ ಜಟಾಸುರ ದ್ರೌಪದಿಯನ್ನು, ಧರ್ಮರಾಜಾದಿಗಳನ್ನು ಹೊತ್ತು ನಿಜರೂಪ ಧರಿಸಿ ಗಗನಮಾರ್ಗ–ವಾಗಿ ತೆರಳಲು ಉದ್ಯುಕ್ತನಾದ. ಆಗ ಸಹಾಯಕ್ಕೆಂದು ಭೀಮನನ್ನು ಧರ್ಮರಾಜಾದಿಗಳು ಕೂಗ–ತೊಡಗಿದರು. ಭೀಮು ಕೂಡಲೆ ಅಲ್ಲಿಗೆ ಧಾವಿಸಿದ.

೩) ಜಟಾಸುರ ವೇಗದಿಂದ ಸಾಗಲು ಅಡ್ಡಿಯಾಗಲೆಂದು ಧರ್ಮರಾಜ ತನ್ನ ಗರಿಮಾ–ಯೋಗ ಶಕ್ತಿಯಿಂದ ಬಹಳಷ್ಟು ಭಾರವಾದ ಒಂದು ವಿಶಿಷ್ಟ ಉಲ್ಲೇಖ *ಮಹಾಭಾರತದಲ್ಲಿದೆ. ಭೀಮನನ್ನು ಕಾಣುತ್ತಲೇ ಅವರನ್ನೆಲ್ಲ ಬಿಟ್ಟು ಯುದ್ಧಕ್ಕೆ ಜಟಾಸುರ ತೊಡಗಿದ.

೪) ಪಾರ್ವತೀವರದಿಂದ ಕೂಡಿದ್ದ ಜಟಾಸುರನಂತಹ ಮಹಾಬಲಿಷ್ಠನನ್ನು ಭೀಮಸೇನ ತಲೆತುಳಿದು ಪುಡಿಮಾಡಿ ಕೊಂದದ್ದು ಅವನ ಅಪಾರ ಬಲಕ್ಕೆ ಸಾಕ್ಷಿ.

೫) ಭೀಮು ಅವನನ್ನು ಹಾಗೆ ಕೊಲ್ಲುವ ಮುನ್ನ ಅವನ ವಿಷಯವನ್ನೆಲ್ಲಾ ತಾನು ಮುಂಚೆಯೇ ತಿಳಿದಿದ್ದುದನ್ನು, ಬ್ರಾಹ್ಮಣ ವೇಷದಲ್ಲಿದ್ದುದರಿಂದ ಕೊಲ್ಲದೇ ಬಿಟ್ಟಿದ್ದುದನ್ನು, ಆ ಸಮಯ ಒದಗಿದ್ದರಿಂದ ಕೊಲ್ಲುತ್ತಿರುವುದನ್ನು ತಿಳಿಸಿದನು ಎಂಬ ವಿವರವೂ ಮಹಾಭಾರತದಲ್ಲಿದೆ.

೬) ಜಟಾಸುರ ಬ್ರಾಹ್ಮಣ ವೇಷದಲ್ಲಿ ಜಟಾದಿಗಳನ್ನು ಧರಿಸಿ ಧರ್ಮಿಷ್ಠರನ್ನು ವಂಚಿಸುವ ಪಾಪಿ ಜನಗಳಿಗೆ ಸಂಕೇತ. ಅಂತಹ ಜನ ಹೇಗೆ ಹೊಂಚು ಹಾಕಿ ಧರ್ಮಿಷ್ಠರನ್ನು ಹಾಳು ಮಾಡಲು ಬಯಸುವರು ಎಂಬುದು ಇದರಿಂದ ತಿಳಿಯುವುದು.

೭) ಆದರೆ, ಭೀಮನ ರಕ್ಷಣೆಯಿದ್ದ ಪಾಂಡವರನ್ನು ಅಪಹರಿಸಲು ಅವನಿಂದ ಸಾಧ್ಯ–ವಾಗಲೇ ಇಲ್ಲ. ಜ್ಞಾನದ ಶ್ರೀರಕ್ಷೆ ಇರುವವರೆಗೆ ಎಂತಹ ಆಷಾಢಭೂತಿಗಳಿಂದಲೂ ಅಪಾಯ ತಟ್ಟದು ಎಂಬುದಕ್ಕೂ ಇದು ಸೂಚಕ.

೮) ಭೀಮನ ಮಹಿಮೆಯನ್ನು ವರ್ಣಿಸಿದ ಬಳಿಕ ಅರ್ಜುನನ ಸಾಮರ್ಥ್ಯವನ್ನು ತಿಳಿಸಿದ.

೯) ಮೂಲಮಹಾಭಾರತದಲ್ಲಿ ಜಟಾಸುರ ವಧಪರ್ವ ಎಂಬ ಒಂದು ಅಧ್ಯಾಯದಿಂದ ಕೂಡಿದ ಒಂದು ಉಪಪರ್ವದಲ್ಲಿ ನಿರೂಪಿತವಾದ ಜಟಾಸುರ ವಧೆಯ ವಿವರವನ್ನು ಇಲ್ಲಿ ಕೇವಲ ಐದು ಶ್ಲೋಕಗಳಲ್ಲಿ ಸಂಗ್ರಹಿಸಿರುವುದು ಶ್ರೀಮದಾಚಾರ್ಯರ ವೈಶಿಷ್ಟ್ಯ.

---

* ತತೋ ಯುಧಿಷ್ಠಿರಸ್ತಸ್ಯ ಗುರುಕಃ ಸಮಪದ್ಯತ ।
ಸ ತು ಭಾರಾಭಿಭೂತಾತ್ಮಾ ನ ತಥಾ ಶೀಘ್ರಗೋऽಭವತ್ ॥ – ಭಾರತ (ವನ. ೧೫೭/೨೭,೨೮)

ಶ್ರೀಹರಿಯ ಮಾಹಾತ್ಮ್ಯ

ಜಾನಾಸಿ ಚ ಹರೇರ್ವೀರ್ಯಂ ಯಸ್ಯೇದಮಖಿಲಂ ವಶೇ ।
ಸ ಬ್ರಹ್ಮರುದ್ರಶಕ್ರಾದ್ಯಂ ಚೇತನಾಚೇತನಾತ್ಮಕಮ್ ॥ ೧೦ ॥

ಅ: ಶ್ರೀಹರಿಯ ಸಾಮರ್ಥ್ಯವನ್ನಂತೂ ನೀನು ತಿಳಿದೇ ಇರುವಿ. ಅವನ ಅಧೀನದಲ್ಲೇ ಬ್ರಹ್ಮ ಶಿವ ಇಂದ್ರ ಮೊದಲಾದವರಿಂದ ಕೂಡಿದ ಜಡಚೇತನಾತ್ಮಕವಾದ ಸಕಲವೂ ಇರುವುದು.

ಮಾತು ಕೇಳದ ಧೃತರಾಷ್ಟ್ರ

ತಸ್ಮಾದೇತೈಃ ಪಾಲಿತಸ್ಯ ಧರ್ಮಜಸ್ಯ ಸ್ವಕಂ ವಸು ।
ದೀಯತಾಮಿತಿ ತೇನೋಕ್ತೋ ಧೃತರಾಷ್ಟ್ರೋ ನ ಚಾಕರೋತ್ ॥ ೧೧ ॥

ಅ: ಆದ್ದರಿಂದ ಇವರಿಂದ ಪಾಲಿತವಾದ ಧರ್ಮರಾಜನಿಗೆ ಅವನ ಸಂಪತ್ತನ್ನು ನೀಡು. ಅವನು ಹೀಗೆ ತಿಳಿಸಿದರೂ ಧೃತರಾಷ್ಟ್ರ ಅದನ್ನು ನಡೆಸಲಿಲ್ಲ.

ಶ್ರೀಕೃಷ್ಣನ ಬಳಿಗೆ ಅರ್ಜುನ ದುರ್ಯೋಧನರು

ತತಃ ಸಹೈವ ಯದುಭಿಃ ಕೃಷ್ಣಂ ದ್ವಾರವತೀಂ ಗತಮ್ ।
ಯುದ್ಧಸಾಹಾಯ್ಯಮಿಚ್ಛಂತೌ ಧಾರ್ತರಾಷ್ಟ್ರಧನಂಜಯೌ ।
ಯುಗಪದ್ಯಯತುಸ್ತತ್ರ ವೇಗೇನಾಜಯದರ್ಜುನಮ್ ॥ ೧೨ ॥

ಅ: ಬಳಿಕ ಯಾದವರೊಂದಿಗೆ ದ್ವಾರಾವತಿಗೆ ತೆರಳಿದ ಕೃಷ್ಣನ ಬಳಿಗೆ ಯುದ್ಧಕ್ಕೆ ಸಹಾಯವನ್ನು ಬಯಸಿ ಅರ್ಜುನದುರ್ಯೋಧನರು ಏಕಕಾಲದಲ್ಲಿ ನಡೆದರು. ದುರ್ಯೋಧನ ವೇಗದಲ್ಲಿ ಅರ್ಜುನನನ್ನು ಮೀರಿಸಿದ.

ವಿ: ೧) ಕೃಷ್ಣನ ಬಳಿ ಸಹಾಯ ಯಾಚಿಸಲೆಂದು ಅಣ್ಣಂದಿರ ಸೂಚನೆಯಂತೆ ಅರ್ಜುನ ತೆರಳಿದ.

೨) ಅದನ್ನು ಗೂಢಚಾರರ ಮುಖದಿಂದ ತಿಳಿದ ದುರ್ಯೋಧನ ತಾನೂ ಅದಕ್ಕೆಂದೇ ಹೊರಟ. ದುರ್ಯೋಧನ ಅರ್ಜುನನಿಗಿಂತ ವೇಗವಾಗಿಯೇ ತೆರಳಿ ದ್ವಾರಕೆಯನ್ನು ಮುಂಚಿತವಾಗಿಯೇ ತಲುಪಿದ. ಕಲಿ ಇಂದ್ರಾದಿ ದೇವತೆಗಳನ್ನು ಹೇಗೆ ವೇಗದಲ್ಲಿ ಮೀರಿಸುವನು ಎಂಬುದಕ್ಕೆ ಇದೊಂದು ನಿದರ್ಶನ.

೩) ಒಂದು ವೇಳೆ ಭೀಮನೇ ತೆರಳಿದ್ದಲ್ಲಿ ದುರ್ಯೋಧನ ಸೋಲುತ್ತಿದ್ದುದು ಅನಿವಾರ್ಯವಾಗುತ್ತಿತ್ತು. ಆಗ ಅವನಿಗೆ ಕೃಷ್ಣನಿಂದ ಯಾವುದೇ ರೀತಿಯ ಪ್ರಯೋಜನ ಪಡೆಯಲು

ಸಾಧ್ಯವಾಗುತ್ತಿರಲಿಲ್ಲ. ಅರ್ಜುನನೇ ಮೊದಲು ತಲುಪಿದ ಎಂದು ಪಂಪ(೯/೧೧), ಕುಮಾರ–ವ್ಯಾಸರು (ಉದ್ಯೋಗ. ೧/೨೪) ತಪ್ಪಾಗಿ ಉಲ್ಲೇಖಿಸಿರುವರು.

ದುರ್ಯೋಧನನ ದುರಹಂಕಾರ

ದುರ್ಯೋಧನಃ ಶಿರಸ್ಥಾನ ಆಸೀನೋऽಭೂದ್ಧರೇಸ್ತದಾ ।
ದರ್ಪಾನ್ನಾಹಂ ರಾಜರಾಜ ಉಪಾಸ್ಯೇ ಪಾದಯೋರಿತಿ ॥ ೧೩ ॥

ಅ: ದುರ್ಯೋಧನ 'ರಾಜರಾಜನಾದ ನಾನು ಪಾದಗಳ ಬಳಿ ಕುಳ್ಳಿರಲಾರೆ' ಎಂದು ಸೊಕ್ಕಿನಿಂದ ಶ್ರೀಕೃಷ್ಣನ ತಲೆಯ ಬಳಿಯಲ್ಲಿ ಕುಳಿತ.

ವಿ: ೧) ದುರ್ಯೋಧನ ಬಂದಿರುವುದು ಸಹಾಯ ಕೇಳಲಿಕ್ಕಾದರೂ ತಾನು ರಾಜರಾಜ ಎಂಬ ಸೊಕ್ಕನ್ನು ಬಿಟ್ಟಿಲ್ಲ ಎಂಬುದನ್ನು ಗಮನಿಸಬೇಕು. ಅವನು ಅಧಿಕೃತವಾಗಿ ರಾಜ್ಯ ಸಂಪಾದಿಸಿದವನೇ ಅಲ್ಲ, ಒಂದು ಸಮರದಲ್ಲೂ ಶತ್ರುಗಳನ್ನು ಗೆದ್ದವನೂ ಅಲ್ಲ. ಹೀಗೆ ಸರಿಯಾಗಿ ರಾಜನೇ ಆಗದ ಅವನು ತನ್ನನ್ನು ರಾಜರಾಜ ಎಂದು ತಿಳಿದದ್ದು ಮತ್ತೊಂದು ಬಗೆಯ ಭ್ರಾಂತಿ.

೨) ಅಂತಹ ದುರಹಂಕಾರದ ಅವನು ಅಲ್ಲಿಗೆ ಹೋಗಬೇಕಿರಲಿಲ್ಲ. ಹೋದಮೇಲೆ ವಿನಯದಿಂದ ವರ್ತಿಸಲೇಬೇಕಿತ್ತು. ದುಷ್ಟರ ರೀತಿ ಇಂತಹುದೇ. ಅವರಿಗೆ ಫಲ ಬೇಕು. ಸಾಧನ ಬೇಕಿಲ್ಲ. ಕೃಷ್ಣನ ಪಾದದ ಬಳಿ ಕುಳ್ಳಿರಲಾರೆ, ತಲೆಯ ಬಳಿ ಕುಳಿತುಕೊಳ್ಳುವೆ ಎನ್ನುವ ಅವನು ಶ್ರೀಹರಿ ಸ್ವಗತಭೇದವಿವರ್ಜಿತ, ಅವನಿಗೆ ಶಿರಸ್ಸು, ಪಾದ ಮೊದಲಾದ ಭೇದ ಎಷ್ಟು ಮಾತ್ರಕ್ಕೂ ಇಲ್ಲ ಎಂಬ ಶಾಸ್ತ್ರತತ್ವವನ್ನು ತಿಳಿದಿಲ್ಲ ಎಂಬುದು ಸ್ಪಷ್ಟ – 'ಸರ್ವತಃ ಪಾಣಿಪಾದಂ ತತ್' (ಗೀತಾ). ಇದರಿಂದಾಗಿ ಭಗವತ್ತತ್ತ್ವ ತಿಳಿಯದ ಅವನಿಗೆ ಸೂಕ್ತ ಫಲ ದೊರೆಯದ್ದು ಉಚಿತವೇ ಆಯಿತು ಎಂದರ್ಥ.

೩) ಸರ್ವಜ್ಞನಾದ ಕೃಷ್ಣನಿಗೆ ಸರ್ವಥಾ ನಿದ್ರಾದಿ ದೋಷಗಳಿಲ್ಲ ಎಂಬ ಪರಿಜ್ಞಾನವೂ ಅವನಿಗಿರಲಿಲ್ಲ ಎಂಬುದು ಇಲ್ಲಿನ ಮತ್ತೊಂದು ವಿಶೇಷ. ಬ್ರಹ್ಮನಿಗೆ ಅಜ್ಞಾನದ ಮುಸುಕು ಎಂದು ವಾದಿಸುವವರ ಗುಂಪಿಗೆ ಸೇರಿದ ಅವಿವೇಕಿ ದುರ್ಯೋಧನ ಎಂಬುದು ಇದರಿಂದ ಸ್ಫುಟ–ಪಡುವುದು.

---

೧೩. ತತಃ ಶಯಾನೇ ಗೋವಿಂದೇ ಪ್ರವಿವೇಶ ಸುಯೋಧನಃ ।
ಉಚ್ಚೈರ್ಜತಶ್ಚ ಕೃಷ್ಣಸ್ಯ ನಿಷಸಾದ ವರಾಸನೇ ॥ – ಭಾರತ (ಉದ್ಯೋಗ. ೭/೮)

ಅರ್ಜುನನ ಹರಿಭಕ್ತಿ

ತಯೋರಾಗಮನಂ ಪೂರ್ವಂ ಜ್ಞಾತ್ವೈವ ಹಿ ಹರಿಃ ಪ್ರಭುಃ ।
ಅಸುಪ್ತಃ ಸುಪ್ತವಚ್ಚಿಶ್ಯೇ ತತ್ರಾತಿಷ್ಠದ್ಧನಂಜಯಃ ।
ಪ್ರಣಮ್ಯ ಪಾದಯೋಃ ಪ್ರಹ್ವೋ ಭಕ್ತ್ಯುದ್ರೇಕಾತ್ ಕೃತಾಂಜಲಿಃ ॥ ೧೪ ॥

ಅ: ಅವರಿಬ್ಬರ ಆಗಮನವನ್ನು ಕೃಷ್ಣ ಮೊದಲೇ ತಿಳಿದಿದ್ದ ಸರ್ವಸಮರ್ಥ. ಅವನು ನಿದ್ರೆ ಇಲ್ಲದವನಾದರೂ ನಿದ್ರಿಸಿದವನಂತೆ ನಟಿಸುತ್ತಾ ಮಲಗಿದ್ದ. ಅರ್ಜುನ ಕೃಷ್ಣನ ಎರಡೂ ಪಾದಗಳಿಗೆ ವಂದಿಸಿ ಭಕ್ತ್ಯುದ್ರೇಕದಿಂದಾಗಿ ಬಾಗಿ ಕೈಜೋಡಿಸಿಕೊಂಡು ನಿಂತುಬಿಟ್ಟನು.

ಏ: ೧) ಬಳಿಕ ಬಂದ ಅರ್ಜುನ ಕೃಷ್ಣನಿಗೆ ನಮಸ್ಕರಿಸಿ ಕೈಜೋಡಿಸಿ ಮೈಬಾಗಿಸಿ ನಿಂತುಕೊಂಡ. ಮಲಗಿದವರಿಗೆ ನಮಸ್ಕಾರ ನಿಷಿದ್ಧ ಎಂಬುದು ಶಾಸ್ತ್ರತತ್ವ. ಅರ್ಜುನ ಕೃಷ್ಣನಿಗೆ ನಮಸ್ಕರಿಸುವ ಮೂಲಕ ಕೃಷ್ಣ ನಿದ್ರಾರಹಿತನೆಂದು ತಾನು ಅರಿತಿರುವುದನ್ನು ಸ್ಫುಟಪಡಿಸಿದ ಎಂದು ತಿಳಿಯುವುದು.

೨) ದುರ್ಯೋಧನ ಕೃಷ್ಣನ ತಲೆಯ ಕೆಳಗೆ ಕುಳಿತರೆ, ಅರ್ಜುನ ಪಾದದ ಬಳಿ ನಿಂತದ್ದು ಮತ್ತೊಂದು ವಿಶೇಷ. ಅರ್ಜುನನು ಕುಳಿತನೆಂಬ ತಪ್ಪು ಉಲ್ಲೇಖ *ಪಂಪಭಾರತದಲ್ಲಿದೆ. ದುರ್ಯೋಧನನ ಪ್ರತಿಯೊಂದು ವರ್ತನೆಯಲ್ಲೂ ಔದ್ಧತ್ಯ ಎದ್ದು ಕಾಣುತ್ತಿದ್ದರೆ, ಅರ್ಜುನನ ವರ್ತನೆಯಲ್ಲಿ ಭಕ್ತಿಭಾವ ಎದ್ದು ಕಾಣುವುದು ಎಂಬುದನ್ನೂ ಗಮನಿಸಬೇಕು.

೩) ದುರ್ಯೋಧನನ ವರ್ತನೆಯಲ್ಲಿ 'ಈಶ್ವರೋಽಹಂ' (ಗೀತಾ ೧೬/೧೪) ಎಂಬ ತಾಮಸ ಪ್ರವೃತ್ತಿ ಗೋಚರಿಸಿದರೆ, ಪಾದದ ಬಳಿ ನಿಂತ ಅರ್ಜುನನಲ್ಲಿ 'ದಾಸೋಽಹಂ' ಎಂಬ ಸಾತ್ವಿಕಭಾವನೆ ಗೋಚರಿಸುವುದು.

೪) ದುರ್ಯೋಧನ ಹಿರಣ್ಯಕಶಿಪು ಮೊದಲಾದವರಂತೆ ಬ್ರಹ್ಮೈಕ್ಯವಾದಿಯಾದರೆ, ಅರ್ಜುನ ಪ್ರಹ್ಲಾದ ಮೊದಲಾದವರಂತೆ ದಾಸ್ಯತತ್ತ್ವವಾದಿ ಎಂಬುದನ್ನು ಗಮನಿಸಬೇಕು. ಹೀಗೆ ಈ ಪ್ರಸಂಗ ಅತ್ಯದ್ಭುತವಾದ ತಾತ್ವಿಕ ಪ್ರಸಂಗವಾಗಿಯೂ ತುಂಬಾ ರೋಚಕ.

---

೧೪. ತತಃ ಕಿರೀಟೀ ತಸ್ಯಾನು ಪ್ರವಿವೇಶ ಮಹಾಮನಾಃ ।
ಪಶ್ಚಾಚ್ಚೈವ ಸ ಕೃಷ್ಣಸ್ಯ ಪ್ರಹ್ವೋಽತಿಷ್ಠತ್ ಕೃತಾಂಜಲಿಃ ॥ – ಭಾರತ (ಉದ್ಯೋಗ ೭/೯)

* ಪವಡಿಸಿದನಂತನೊಸೆದು । ಪ್ಪವಡಿಸಿ ತನ್ನೆರಡುಮಡಿಯನೊತ್ತುತ್ತಿರ್ದಾ ।
ಹವ ವಿಜಯಿಯಪ್ಪ ವಿಜಯನ । ನೆ ವಲಂ ಮುಂ ಕಂಡು ಬಟ್ಟಿಕೆ ನೃಪನಂ ಕಂಡು ॥
– ಪಂಪಭಾರತ (೯/೧೧)

ಉಭಯರನ್ನೂ ಕಂಡ ಕೃಷ್ಣ

ತಮೈಕ್ಷತ್ ಪ್ರಥಮಂ ದೇವೋ ಜಾನನ್ನಪಿ ಸುಯೋಧನಮ್ ।
ಸ್ವಾಗತಂ ಫಲ್ಗುನೇತ್ಯುಕ್ತೇ ಪೂರ್ವಮಾಗಾಮಹಂ ತ್ವಿತಿ ।
ಆಹ ದುರ್ಯೋಧನಸ್ತಂ ಚ ಸ್ವಾಗತೇನಾಭ್ಯಪೂಜಯತ್ ॥ ೧೫ ॥

ಅ: ದೇವನಾದ ಶ್ರೀಕೃಷ್ಣ ಮೊದಲು ಬಂದವನು ದುರ್ಯೋಧನ ಎಂದು ತಿಳಿದಿದ್ದರೂ ಅರ್ಜುನನನ್ನೇ ಮೊದಲಿಗೆ ಕಂಡು 'ಅರ್ಜುನ! ಸ್ವಾಗತ' ಎಂದು ನುಡಿದ. ಅವನು ಹಾಗೆನ್ನಲು ದುರ್ಯೋಧನ ಹೇಳಿಕೊಂಡ * 'ಮೊದಲು ಬಂದವನು ನಾನೇ'. ಕೃಷ್ಣ ಅವನನ್ನೂ ಸ್ವಾಗತಿಸಿ ಸತ್ಕರಿಸಿದ.

ವಿ: ೧) ಕೃಷ್ಣ ನಿದ್ರೆಯ ನಾಟಕವನ್ನು ತೊರೆದು ಕಣ್ತೆರೆದಂತೆ ಮಾಡಿ ಅರ್ಜುನನನ್ನು ಸ್ವಾಗತಿಸಿದ. ಹಾಗೆ ಮಾಡುವ ಮೂಲಕ ಕೃಷ್ಣ 'ದಾಸೋಽಹಂ' ಎನ್ನುವ ಭಕ್ತರಿಗೆ ಒಲಿಯುವ ಸೂಚನೆಯನ್ನು ನೀಡಿದ.

೨) ದುರ್ಯೋಧನ ಆಗ ತಾನು ಮೊದಲು ಬಂದವನು ಎಂದು ಸಾರಿಕೊಂಡಾಗ ಕೃಷ್ಣ ಅವನನ್ನೂ ಸ್ವಾಗತಿಸಿದ. ಹಾಗೆ ಮಾಡುವ ಮೂಲಕ ತಾನು ನಿಷ್ಪಕ್ಷಪಾತಿ ಎಂದು ಲೋಕಕ್ಕೆ ಸಾರಿದ.

ಸಮವಾಗಿ ಸಹಾಯ

ತಯೋರಾಗಮನೇ ಹೇತುಂ ಶ್ರುತ್ವಾ ಪ್ರಾಹ ಜನಾರ್ದನಃ ।
ಏಕಃ ಪೂರ್ವಾಗತೋಽತ್ರಾನ್ಯಃ ಪೂರ್ವದೃಷ್ಟೋ ಮಯಾ ಯತಃ ॥ ೧೬ ॥

ಸಮಂ ಕರಿಷ್ಯೇ ಯುವಯೋರೇಕತ್ರಾಹಂ ನಿರಾಯುಧಃ ।
ಅನ್ಯತ್ರ ದಶಲಕ್ಷಂ ಮೇ ಪುತ್ರಾಃ ಶೂರಾಃ ಪದಾತಯಃ ॥ ೧೭ ॥

ಅ: ಅವರಿಬ್ಬರ ಆಗಮನದ ಕಾರಣವನ್ನು ಕೇಳಿ ಕೃಷ್ಣ ನುಡಿದ 'ಒಬ್ಬನು ಮೊದಲು ಬಂದವನು, ಮತ್ತೊಬ್ಬನು ಮೊದಲು ಕಂಡವನು. ಆದ್ದರಿಂದ ನಿಮ್ಮಿಬ್ಬರಿಗೂ ನಾನು

---

* ಅಹಂ ಚಾಭಿಗತಃ ಪೂರ್ವಂ ತ್ವಾಮದ್ಯ ಮಧುಸೂದನ। – ಭಾರತ (ಉದ್ಯೋಗ. ೭/೧೩)

೧೭. ತವ ಪೂರ್ವಾಭಿಗಮನಾತ್ ಪೂರ್ವಂ ಚಾಪ್ಯಸ್ಯ ದರ್ಶನಾತ್ ।
ಸಾಹಾಯ್ಯಮುಭಯೋರೇವ ಕರಿಷ್ಯಾಮಿ ಸುಯೋಧನ ॥ – ಭಾರತ (ಉದ್ಯೋಗ. ೭/೧೬)

ಸಮವಾಗಿಯೇ ಸಹಾಯ ನೀಡುವೆ. ಒಂದೆಡೆ ನಿರಾಯುಧನಾದ ನಾನು, ಮತ್ತೊಂದೆಡೆ ಶೂರರೂ, ಪದಾತಿಗಳೂ ಆದ ನನ್ನ ಹತ್ತುಲಕ್ಷ ಪುತ್ರರು'.

ವಿ: ಸರ್ವಜ್ಞನಾದರೂ ಅವರಿಂದ ವಿಷಯ ತಿಳಿದಂತೆ ಮಾಡಿದ ಕೃಷ್ಣ ಇಬ್ಬರಿಗೂ ಸಹಾಯ ಮಾಡುವುದಾಗಿ ನುಡಿದ; ಹಾಗೆ ಹೇಳುವಾಗ ಸಮವಾಗಿ ಮಾಡುವೆ ಎಂದು ಹೇಳುವ ಮೂಲಕ ಅವರಿಗೆ ಅವರವರ ಯೋಗ್ಯತೆಗೆ ಉಚಿತವಾದ ಫಲವನ್ನೇ ನೀಡುವೆ ಎಂಬುದನ್ನು ಸೂಚಿಸಿದ. ಹಾಗೆ ನುಡಿದು ಒಂದೆಡೆ ನಿರಾಯುಧನಾದ ಅವನು ಮತ್ತೊಂದೆಡೆ ಸಾಯುಧರಾದ ಅವನ ದಶಲಕ್ಷ ಪುತ್ರರು. ಈ ಎರಡರಲ್ಲಿ ಒಂದನ್ನು ಆಯ್ಕೆಮಾಡಿಕೊಳ್ಳುವ ಅವಕಾಶ ನೀಡುವುದಾಗಿ ತಿಳಿಸಿದನು.

ಅರ್ಜುನ ದುರ್ಯೋಧನರ ಆಯ್ಕೆ

ಇತ್ಯುಕ್ತೇ ಫಲ್ಗುನಃ ಕೃಷ್ಣಂ ವವ್ರೇ ತದ್ಭಕ್ತಿಮಾನ್ ಯತಃ ।
ಅನ್ಯಸತ್ತ್ವಾಭಕ್ತಿಮತ್ತ್ವಾದ್ವವ್ರೇ ಗೋಪಾನ್ ಪ್ರಯುಧ್ಯತಃ ॥ ೧೮ ॥

ಅ: ಕೃಷ್ಣ ಹೀಗೆನ್ನಲು ಅರ್ಜುನ ಕೃಷ್ಣನನ್ನೇ ಆರಿಸಿಕೊಂಡ, ಅವನು ಅವನಲ್ಲಿ ಭಕ್ತಿಯುಳ್ಳವನಾಗಿದ್ದೇ ಅದಕ್ಕೆ ಕಾರಣ. ದುರ್ಯೋಧನನು ಭಕ್ತಿಹೀನನಾದ್ದರಿಂದ ಯುದ್ಧ ಮಾಡುವಂತಹ ಕೃಷ್ಣಪುತ್ರರನ್ನೇ ಆರಿಸಿಕೊಂಡ.

ವಿ: ೧) ಕೃಷ್ಣ ಮೊದಲಿಗೆ ಆರಿಸಿಕೊಳ್ಳುವ ಅವಕಾಶವನ್ನು ಚಿಕ್ಕವನೆಂಬ ಕಾರಣದಿಂದ ಅರ್ಜುನನಿಗೆ ನೀಡಿದ; ಅರ್ಜುನ ಆಗ ನಿಶ್ಶಂಕೆಯಿಂದ ಕೃಷ್ಣನನ್ನೇ ಆರಿಸಿಕೊಂಡ, ಅದಕ್ಕೆ ಅವನು ಕೃಷ್ಣನ ಪರಿಪೂರ್ಣವಾದ ಯೋಗ್ಯತೆಯನ್ನು ಅರಿತಿದ್ದ ಶ್ರೇಷ್ಠ ಭಕ್ತನಾಗಿದ್ದೇ ಕಾರಣ.

೨) ದುರ್ಯೋಧನನಿಗೆ ಭಕ್ತಿ ಇರಲಿಲ್ಲವಾದ್ದರಿಂದ ಅವನಿಗೆ ಯುದ್ಧ ಮಾಡದ ಒಬ್ಬ ಕೃಷ್ಣನಿಗಿಂತ ಯುದ್ಧ ಮಾಡುವ ಹತ್ತುಲಕ್ಷ ಜನ ಅವನ ಪುತ್ರರೇ ಮಿಗಿಲು ಎಂದು ತೋರಿದ್ದೇ ಕಾರಣ.

೩) ಕೃಷ್ಣ ಹೀಗೆ ಆಯ್ಕೆಯನ್ನು ಅವರಿಗೆ ಬಿಡುತ್ತಾ ಅವರ ಸ್ವರೂಪ ಯೋಗ್ಯತೆಯನ್ನು ಪ್ರಕಟಿಸಿದ ಎಂದು ತಿಳಿಯಬೇಕು.

---

೧೮. ಪ್ರವಾರಣಂ ತು ಬಾಲಾನಾಂ ಪೂರ್ವಂ ಕಾರ್ಯಮಿತಿ ಶ್ರುತಿಃ ।
ತಸ್ಮಾತ್ ಪ್ರವಾರಣಂ ಪೂರ್ವಮರ್ಹಃ ಪಾರ್ಥೋ ಧನಂಜಯಃ ॥ – ಭಾರತ (ಉದ್ಯೋಗ. ೭/೧೭)

ಅಯುಧ್ಯಮಾನಃ ಸಂಗ್ರಾಮೇ ನ್ಯಸ್ತಶಸ್ತ್ರೋಽಹಮೇಕತಃ । – ಭಾರತ (ಉದ್ಯೋಗ. ೭/೧೯)

೧೮. ಏವಮುಕ್ತಸ್ತು ಕೃಷ್ಣೇನ ಕುಂತೀಪುತ್ರೋ ಧನಂಜಯಃ ।
ಅಯುಧ್ಯಮಾನಂ ಸಂಗ್ರಾಮೇ ವರಯಾಮಾಸ ಕೇಶವಮ್ ॥ – ಭಾರತ (ಉದ್ಯೋಗ. ೭/೨೧)

೪) ದುರ್ಯೋಧನನಿಗೆ ಮೊದಲ ಅವಕಾಶ ನೀಡಿದ್ದರೂ ಅವನು ಆರಿಸಿಕೊಳ್ಳುತ್ತಿದ್ದುದು ಕೃಷ್ಣನ ಪುತ್ರರನ್ನೇ, ಅರ್ಜುನ ಕೃಷ್ಣನನ್ನೇ. ಆದರೂ, ಕೃಷ್ಣ ಅರ್ಜುನನಿಗೆ ಮೊದಲ ಅವಕಾಶವನ್ನು ನೀಡಲು ಅವನು ತನ್ನನ್ನೇ ಆರಿಸಿಕೊಳ್ಳುವ ಪರಮ ಭಕ್ತ ಎಂದು ತೋರಿಸಿಕೊಡುವುದು ಮುಖ್ಯವಾಗಿತ್ತು ಎಂದು ತಿಳಿಯಬೇಕು.

೫) ದುರ್ಯೋಧನ ಸೈನ್ಯವನ್ನು ಆರಿಸಿಕೊಳ್ಳುವಾಗ ತನಗೆ ಕೃಷ್ಣ ಬೇಕಿತ್ತು ಆದರೆ ಅರ್ಜುನ ಅವನನ್ನು ಆರಿಸಿಕೊಂಡದ್ದರಿಂದ ಅನಿವಾರ್ಯವಾಗಿ ಅವನ ಪುತ್ರರನ್ನು ಆರಿಸಿಕೊಳ್ಳುತ್ತಿರುವೆ ಎಂದೇನೂ ನುಡಿಯದೇ ತತ್ಕ್ಷಣವೇ ಕೃಷ್ಣಪುತ್ರರನ್ನು ಆರಿಸಿಕೊಳ್ಳುವ ಮೂಲಕ ತನಗೇ ಆಯ್ಕೆಯ ಮೊದಲ ಅವಕಾಶ ದೊರೆತಿದ್ದರೂ ಅವರನ್ನೇ ಆರಿಸಿಕೊಳ್ಳುತ್ತಿದ್ದು ಎಂಬುದನ್ನು ದೃಢಪಡಿಸಿದ. ಅಲ್ಲದೇ ಕೃಷ್ಣನೇ ಮೋಸಹೋದ ಎಂಬ ಭ್ರಮೆಯನ್ನು ಹೊಂದಿ, ಕೃತಾರ್ಥಭಾವದಿಂದ ಸೇನೆಯೊಂದಿಗೆ ತೆರಳಿದ.

೬) ಅರ್ಜುನ ಕೃಷ್ಣ 'ಏಕಮೇವಾದ್ವಿತೀಯಂ ಬ್ರಹ್ಮ' ಎಂಬ ತತ್ವ ಬಲ್ಲ ದಿವ್ಯಜ್ಞಾನಿ, ಸ್ವತಂತ್ರನಾದ ಹರಿಯೊಬ್ಬನೇ ಎಲ್ಲವನ್ನೂ ಸಾಧಿಸಬಲ್ಲ ಸರ್ವೋತ್ತಮ ಎಂದು ತಿಳಿದಿದ್ದವನು. ಅವನ ಗೆಲುವಿಗೆ ಅಸ್ತ್ರ ಶಸ್ತ್ರಗಳ ಅಗತ್ಯ ಸರ್ವಥಾ ಇಲ್ಲ ಎಂದೂ ಬಲ್ಲವನು.

೭) ಆದರೆ, ದುರ್ಯೋಧನ ದೈವ ಸ್ವರೂಪವನ್ನು ಅರಿಯದ ಅವಿವೇಕಿ, ಅವನಿಗೆ ಮುಖ್ಯವಾಗಿದ್ದುದು ಸಂಖ್ಯೆ ಮತ್ತು ಆಯುಧಗಳೇ ಹೊರತು ಸತ್ವವಲ್ಲ. ಅದಕ್ಕಾಗಿ ಅವನು ಕೃಷ್ಣಪುತ್ರರನ್ನು ಆರಿಸಿಕೊಂಡ.

೮) ಜನಗಳ ಪ್ರವೃತ್ತಿ ಸಾಮಾನ್ಯವಾಗಿ ಇಂತಹುದೇ. ಜನಾರ್ದನನನ್ನು ತೊರೆದು, ಜನಗಳನ್ನು ಆರಿಸಿಕೊಳ್ಳುವುದು. ಜನರನ್ನು ನಂಬುವ ಜನ ಜನಾರ್ದನನನ್ನು ನಂಬದೇ ಅಧೋ–ಗತಿಗೆ ತೆರಳುವರು. ಆದರೆ, ಜನಾರ್ದನನನ್ನು ಆಯ್ಕೆಮಾಡಿಕೊಳ್ಳುವವನಿಗಷ್ಟೇ ಜಯ ಖಚಿತ ಎಂಬುದು ಮುಂದಿನ ಪ್ರಸಂಗದಿಂದ ಸ್ಪಷ್ಟ.

೯) ಕೃಷ್ಣನನ್ನು ಆರಿಸಿಕೊಂಡ ಅರ್ಜುನ ಜಯ, ರಾಜ್ಯ, ಕೋಶ, ಕೀರ್ತಿ, ಕೊನೆಗೆ ಮೋಕ್ಷ ಮೊದಲಾದ ಎಲ್ಲವನ್ನೂ ಕಂಡ. ಆದರೆ, ಕೃಷ್ಣನನ್ನು ಬಿಟ್ಟ ದುರ್ಯೋಧನ ಜಯ, ರಾಜ್ಯ ಮೊದಲಾಗಿ ಎಲ್ಲವನ್ನೂ ಕಳೆದುಕೊಂಡು ಶಾಶ್ವತ ಅಧೋಗತಿಗೆ ತೆರಳಿದ. ಆದ್ದರಿಂದ ದೈವವನ್ನು ಮರೆಯದೇ ಆರಾಧಿಸುವುದೇ ಯಶಸ್ಸಿನ ಮೂಲಸೂತ್ರ ಎಂಬುದು ಮಹಾಭಾರತದ ಸಂದೇಶ ಎಂದು ಇದರಿಂದ ತಿಳಿಯುವುದು.

೧೦) ಕೃಷ್ಣನ ಬಳಿಗೆ ಬಂದೂ ದುರ್ಯೋಧನ ಪರಾಜಿತನಾದ, ಕೃಷ್ಣನ ಕಣ್ಣಿಗೆ ಕಂಡ ಅರ್ಜುನ ಯಶಸ್ವಿಯಾದ. ದೇವರ ಕಣ್ಣಿಗೆ ಬೀಳುವುದರಲ್ಲಿ ಜೀವನ ಸಾರ್ಥ್ಯಕ್ಯವಿದೆ ಎಂಬುದು ಇದರ ಸಂಕೇತ – **'ಯಮೇವೈಷ ವೃಣುತೇ ತೇನ ಲಭ್ಯಃ...'** (ಕಠೋಪನಿಷತ್).

೧೧) ದುರ್ಯೋಧನ ಆರಿಸಿಕೊಂಡ ಕೃಷ್ಣ ಪುತ್ರರ ಗುಂಪಿಗೆ *ನಾರಾಯಣೇಸೇನಾ ಎಂದು ಹೆಸರು. ಅವರೆಲ್ಲಾ ಕೃಷ್ಣನಿಂದ ಗೋಪಿಕಾಸ್ತ್ರೀಯರಲ್ಲಿ ಜನಿಸಿದವರು ಎಂಬ ವಿವರ ಈಗಾಗಲೇ ಬಂದಿದೆ (೧೩/೭೪).

ಪಾರ್ಥಾನಾಮೇವ ಸಾಹಾಯ್ಯಂ ಕರಿಷ್ಯನ್ನಪಿ ಕೇಶವಃ ।
ತಸ್ಯಾಭಕ್ತಿಂ ದರ್ಶಯಿತುಂ ಚಕ್ರೇ ಸಮವದೀಶ್ವರಃ ।
ತತಃ ಪಾರ್ಥೇನ ಸಹಿತಃ ಪಾಂಡವಾನ್ ಕೇಶವೋ ಯಯೌ ॥ ೧೯ ॥

ಅ: ಶ್ರೀಕೃಷ್ಣ ಸಹಾಯವನ್ನು ಪಾಂಡವರಿಗೆ ಮಾತ್ರವೇ ಮಾಡುವವನಾದರೂ, ದುರ್ಯೋಧನನಿಗೆ ತನ್ನಲ್ಲಿ ಭಕ್ತಿಯಿಲ್ಲ ಎಂದು ತೋರಿಸಲೆಂದು ಹಾಗೆ ಸಮನಾಗಿ ನೀಡುವವನಂತೆ ಮಾಡಿದ. ಬಳಿಕ ಕೃಷ್ಣ ಅರ್ಜುನನೊಂದಿಗೆ ಪಾಂಡರ ಬಳಿಗೆ ತೆರಳಿದ.

ವಿ: ೧) ಭಗವಂತ ಹಾಗೆ ಮಾಡುವ ಮೂಲಕ ಎಂತಹ ಉತ್ತಮ ಅವಕಾಶ ನೀಡಿದರೂ ಅಸುರರ ಆಯ್ಕೆ ಎಂದೂ ನಶ್ವರವಾದ ಭೌತಿಕ ಪದಾರ್ಥಗಳೇ ಹೊರತು ಶಾಶ್ವತವಾದ ಬ್ರಹ್ಮತತ್ತ್ವವಲ್ಲ ಎಂಬುದನ್ನು ಜಗತ್ತಿಗೆ ತಿಳಿಸಿಕೊಟ್ಟ ಎಂದರ್ಥ.

೨) ಇಲ್ಲಿ ಸಮ ಎಂಬುದಕ್ಕೂ ಶಾಸ್ತ್ರೋಕ್ತವಾದ ಅರ್ಥವನ್ನೇ ಮಾಡಬೇಕು. ಮೇಲ್ನೋಟಕ್ಕೂ ಇಲ್ಲಿ ಸಾಮ್ಯವೇನಿಲ್ಲ; ಒಂದೆಡೆ ಒಬ್ಬ ನಿರಾಯುಧನಾದ ಕೃಷ್ಣ ಮತ್ತೊಂದೆಡೆ ಸಾಯುಧವಾದ ದಶಲಕ್ಷ ಸಂಖ್ಯೆಯ ನಾರಾಯಣೀ ಸೇನೆ. ಸಂಖ್ಯಾಸಾಮ್ಯವಾಗಲಿ ಸತ್ತ್ವಸಾಮ್ಯವಾಗಲಿ ಇಲ್ಲಿಲ್ಲ. ಆದ್ದರಿಂದ ಕೃಷ್ಣ ಹಾಗೆ ನುಡಿಯುವ ಮೂಲಕ ತಿಳಿಸಿದ ಸಾಮ್ಯ ಇಂತಹ ಬಾಹ್ಯ ಸಾಮ್ಯವಲ್ಲದೇ ಅವರವರ ಯೋಗ್ಯತೆಗೆ ಅನುಗುಣವಾಗುವ ಫಲಸಾಮ್ಯ ಎಂದು ತಿಳಿಯಬೇಕು – **'ಸಮಬುದ್ಧಿರ್ವಿಶಿಷ್ಯತೇ'** (ಗೀತಾ – ೬/೯).

೩) ಅರ್ಜುನ ಮತ್ತು ದುರ್ಯೋಧನ ಇಬ್ಬರೂ ಸಹ ತಮಗೆ ಬಯಸಿದ್ದೇ ದೊರೆಯಿತು ಎಂಬ ಸಂತೃಪ್ತಿ ಹೊಂದಿದ್ದರಿಂದ ಅವರಿಬ್ಬರಿಗೂ ಸಮನಾಗಿಯೇ ಫಲ ಲಭಿಸಿತು ಎಂಬ ಕೃಷ್ಣನ

---

* ಮತ್ಸಂಹನನತುಲ್ಯಾನಾಂ ಗೋಪಾನಾಮರ್ಬುದಂ ಮಹತ್ ।
ನಾರಾಯಣಾ ಇತಿ ಖ್ಯಾತಾಃ ಸರ್ವೇ ಸಂಗ್ರಾಮಯೋಧಿನಃ ॥
ತೇ ವಾ ಯುಧಿ ದುರಾಧರ್ಷಾ ಭವಂತ್ವೇಕಸ್ಯ ಸೈನಿಕಾಃ ॥ – ಭಾರತ (ಉದ್ಯೋಗ. ೭/೧೮)

೧೯. ದುರ್ಯೋಧನಸ್ತು ತತ್ಸೈನ್ಯಂ ಸರ್ವಮಾವರಯತ್ ತದಾ ।
ಸಹಸ್ರಾಣಾಂ ಸಹಸ್ರಂ ತು ಯೋಧಾನಾಂ ಪ್ರಾಪ್ಯ ಭಾರತ ॥
ಕೃಷ್ಣಂ ಚಾಪಹೃತಂ ಜ್ಞಾತ್ವಾ ಸಂಪ್ರಾಪ ಪರಮಾಂ ಮುದಮ್ ॥ – ಭಾರತ (ಉದ್ಯೋಗ ೩/೨೪)

ಸಂಕಲ್ಪ ಸಿದ್ಧಿಸಿದ್ದು ತಿಳಿಯುವುದು. ಶ್ರೀಕೃಷ್ಣ ಈ ಸಂದರ್ಭದಲ್ಲಿ ಭಕ್ತನ ಹಿರಿಮೆಯನ್ನು, ಅಭಕ್ತನ ಅವಿವೇಕವನ್ನೂ ಸಹ ಜಗತ್ತಿಗೆ ತಿಳಿಸಿಕೊಟ್ಟಿರುವನು ಎಂದು ಸಹ ತಿಳಿಯಬೇಕು.

೪) ಕೃಷ್ಣನ ಬಳಿಗೆ ಹೀಗೆ ಅರ್ಜುನ ದುರ್ಯೋಧನರಿಬ್ಬರೂ ತೆರಳಿದಂತೆ ದೇವಸ್ಥಾನಗಳಿಗೆ ಯೋಗ್ಯರು, ಅಯೋಗ್ಯರೂ ಸಹ ತೆರಳುವರು, ಯೋಗ್ಯರು ಮಾತ್ರ ಅರ್ಜುನನಂತೆ ದೈವಭಕ್ತಿ ಮೊದಲಾದ ಸತ್ಫಲಗಳನ್ನು ಅಯೋಗ್ಯರು ದುರ್ಯೋಧನನಂತೆ ನೂರಾರು ಐಹಿಕ ಫಲಗಳನ್ನು ಬಯಸಿ ತಮ್ಮ ತಮ್ಮ ಯೋಗ್ಯತೆಗೆ ಅನುಗುಣವಾಗಿಯೇ ವರ್ತಿಸುವರು ಎಂಬುದಕ್ಕೂ ಇದು ದ್ಯೋತಕ.

೫) ಬ್ರಹ್ಮದೇವರ ಬಳಿಗೆ ತೆರಳಿದ ಇಂದ್ರ ಮತ್ತು ವಿರೋಚನರು ಅವರಿಂದ ಒಂದೇ ವಿಧವಾದ ಉಪದೇಶವನ್ನು ಪಡೆದರೂ ಇಂದ್ರ ಹರಿಸರ್ವೋತ್ತಮತ್ವರೂಪವಾದ ಸತ್ಸಿದ್ಧಾಂತವನ್ನೇ ಅದರಿಂದ ಅರ್ಥಮಾಡಿಕೊಂಡರೆ, ವಿರೋಚನ 'ಈಶ್ವರೋಽಹಂ' ಎಂಬುದಾಗಿ ದುಸ್ಸಿದ್ಧಾಂತ–ವನ್ನೇ ತಿಳಿದ ಎಂಬ ಪ್ರಸಂಗ ಇಂತಹುದೇ ಎಂಬುದನ್ನು ಗಮನಿಸಬೇಕು(ಛಾಂದೋಗ್ಯೋ–ಪನಿಷತ್) ಇಲ್ಲಿ ಹರಿಯ ಬಳಿಗೆ ಇವರಿಬ್ಬರು ಬಂದಿದ್ದರೆ, ಅಲ್ಲಿ ಬ್ರಹ್ಮದೇವರ ಬಳಿಗೆ ಇಬ್ಬರೂ ತೆರಳಿದ್ದರು ಎಂದಾಗುವುದು. ಸರ್ವೋತ್ತಮನ ಬಳಿಗೇ ತೆರಳಲಿ, ಜೀವೋತ್ತಮನ ಬಳಿಗೇ ತೆರಳಲಿ ಅವರವರ ಸ್ವರೂಪಕ್ಕೆ ತಕ್ಕಂತೆಯೇ ಜನ ವರ್ತಿಸುವರು ಎಂದರ್ಥ.

೬) ದುರ್ಯೋಧನನದು ಅಸದುಪಾಸನೆಯಾದರೆ, ಅರ್ಜುನನದು ಸದುಪಾಸನೆ. ಅದಕ್ಕೆ ಅಂತಹ ಫಲವ್ಯತ್ಯಾಸ ಎಂಬ ವಿಶ್ಲೇಷಣೆ *ಹರಿಕಥಾಮೃತಸಾರದಲ್ಲಿದೆ. ಈ ಎರಡು ಕಡೆಗಳಲ್ಲೂ ಇಂದ್ರನ ಪಾತ್ರವಿರುವುದು ಗಮನಾರ್ಹ. ಅದರಂತೆ ವಿರೋಚನ ದುರ್ಯೋಧನರಿಬ್ಬರೂ ಅಸುರರೆಂಬುದೂ ಸಹ.

ಸಹಾಯ ನೀಡಲು ನಿರಾಕರಿಸಿದ ಬಲರಾಮ

ದುರ್ಯೋಧನೋ ಯಯೌ ರಾಮಂ ಸ ಭಯಾತ್ ಕೇಶವಸ್ಯ ತಮ್।
ನ ಸಾಹಾಯ್ಯಂ ಕರೋಮೀತಿ ಪ್ರಾಹ ತತ್ಸ್ನೇಹವಾನಪಿ ॥ ೨೦ ॥

---

* ಪರಮ ಸತ್ಪುರುಷಾರ್ಥ ರೂಪನು
ಹರಿಯು ಲೋಕಕೆ ಎಂದು ಪರಮಾ-
ದರದಿ ಸದುಪಾಸನೆಯಗೈವರಿಗಿತ್ತಪನು ತನ್ನ।
ಮರೆದು ಧರ್ಮಾರ್ಥಗಳ ಕಾಮಿಸು-
ವರಿಗೆ ನಗುತತಿಶೀಘ್ರದಿಂದಲಿ
ಸುರಪತನಯ ಸುಯೋಧನರಿಗಿತ್ತಂತೆ ಕೊಡುತಿಪ್ಪ ॥ – ಹರಿಕಥಾಮೃತಸಾರ (೨/೭)

ಅ: ದುರ್ಯೋಧನ ಬಲರಾಮನ ಬಳಿಗೆ ತೆರಳಿದ. ಬಲರಾಮ ಅವನ ಬಗ್ಗೆ ಸ್ನೇಹ-ವುಳ್ಳವನಾದರೂ ಕೃಷ್ಣನ ಭಯದಿಂದಾಗಿ 'ಸಹಾಯವನ್ನು ಮಾಡಲಾರೆ' ಎಂದ.

ಉಪಪ್ಲಾವ್ಯೇ ಸಭಾಯಾಂ ಹಿ ತತ್ಕ್ಷೀಯಂ ವಚೋ ಬ್ರುವನ್।
ನಿರಾಕೃತಃ ಸಾತ್ಯಕಿನಾ ಸಮಕ್ಷಂ ಕೇಶವಸ್ಯ ಚ ॥ ೨೧ ॥

ಅ: ಉಪಪ್ಲಾವ್ಯದಲ್ಲಿ ನಡೆದ ಸಭೆಯಲ್ಲಿ ದುರ್ಯೋಧನನ ಪರವಾಗಿ ಬಲರಾಮ ಮಾತನಾಡಿದಾಗ ಸಾತ್ಯಕಿ ಕೃಷ್ಣನ ಎದುರೇ ಅವನ ವಾದವನ್ನು ನಿರಾಕರಿಸಿದ್ದ.

ವಿ: ೧) ಬಲರಾಮನಿಗೆ ದುರ್ಯೋಧನನ ಮೇಲೆ ವಿಶೇಷ ಸ್ನೇಹವೇ ಇದ್ದರೂ ಹಾಗೆ ಅವನಿಗೆ ಸಹಾಯ ಮಾಡಿದಲ್ಲಿ ಕೃಷ್ಣನಿಗೆ ಅಪ್ರೀತಿಯಾದೀತು ಎಂಬ ಭಯದಿಂದ ತೆರಳಲಿಲ್ಲ ಎಂದರ್ಥ. ಈ ಅರ್ಥದಲ್ಲೂ ಬಲರಾಮನದು ಅತ್ಯಂತ ಶುದ್ಧ ಧರ್ಮವಲ್ಲ ಎಂದು ತಿಳಿಯುವುದು. ಬಲರಾಮ ತಾನು ಬರದಿರುವ ಕಾರಣವನ್ನೂ ಸಹ ಸ್ಪಷ್ಟವಾಗಿ ಹಾಗೆಯೇ ಹೇಳಿದ್ದು ವಿಶೇಷ.

೨) ತಾನು ಕೃಷ್ಣನ ಅಪ್ರೀತಿಯನ್ನು ಸರ್ವಥಾ ಬಯಸುವವನಲ್ಲ, ಕೃಷ್ಣ ಪಾಂಡವರ ಪಕ್ಷ ವಹಿಸಿರುವಾಗ ತಾನು ನಿನ್ನ ಪಕ್ಷ ವಹಿಸುವುದು ತರವಲ್ಲ ಎಂದು ನುಡಿದು ಅವನ ಸಮಾಧಾನಕ್ಕಾಗಿ ತಾನು ಪಾಂಡವರ ಪಕ್ಷವನ್ನೂ ವಹಿಸುವುದಿಲ್ಲ, ತೀರ್ಥಯಾತ್ರೆಗೆ ತೆರಳುವೆ ಎಂದ.

ಪಾಂಡವ ಕೌರವರ ಸೇನಾಸಂಗ್ರಹ

ತತೋ ದುರ್ಯೋಧನಂ ನಾಯಾತ್ ಸ ಚ ಹಾರ್ದಿಕ್ಯಸಂಯುತಃ।
ಜಗಾಮ ಹಸ್ತಿನಪುರಮಕ್ಷೌಹಿಣ್ಯೋ ದಶಾಭವನ್ ।
ಏಕಾ ಚ ಧಾರ್ತರಾಷ್ಟ್ರಸ್ಯ ನಾನಾದೇಶ್ಯೈರ್ನರೈಃ ಪೈರ್ಯುತಾಃ ॥ ೨೨ ॥

---

೨೦. ಯನ್ಮಯೋಕ್ತಂ ವಿರಾಟಸ್ಯ ಪುರಾ ವೈವಾಹಿಕೇ ತದಾ।
ನಿಗೃಹ್ಯೋಕ್ತೋ ಹೃಷೀಕೇಶಸ್ತ್ವದರ್ಥಂ ಕುರುನಂದನ ॥
ಮಯಾ ಸಂಬಂಧಕಂ ತುಲ್ಯಮಿತಿ ರಾಜನ್ ಪುನಃ ಪುನಃ।
ನ ಚ ತದ್ವಾಕ್ಯಮುಕ್ತಂ ವೈ ಕೇಶವಂ ಪ್ರತ್ಯಪದ್ಯತ ॥
ನ ಚಾಹಮುತ್ಸಹೇ ಕೃಷ್ಣಂ ವಿನಾ ಸ್ಥಾತುಮಪಿ ಕ್ಷಣಮ್ ॥
ನಾಹಂ ಸಹಾಯಃ ಪಾರ್ಥಸ್ಯ ನಾಪಿ ದುರ್ಯೋಧನಸ್ಯ ವೈ।
ಇತಿ ಮೇ ನಿಶ್ಚಿತಾ ಬುದ್ಧಿರ್ವಾಸುದೇವಮವೇಕ್ಷ್ಯ ಹ ॥ (ಬಲರಾಮನ ವಚನ) – ಭಾರತ (೫/೭/೨೭-೨೯)

೨೧. ತತ್ಕ್ಷೀಯಂ ವಚೋ ಬ್ರುವನ್ನಿತ್ಯತ್ರ ರಾಮ ಇತಿ ಯೋಗ್ಯಪದಾಧ್ಯಾಹಾರಃ ॥ – (ವಾ.)

ಅ: ಆದ್ದರಿಂದ ದುರ್ಯೋಧನನ ಬಳಿಗೆ ತೆರಳಲಿಲ್ಲ, ದುರ್ಯೋಧನ ಕೃತವರ್ಮನೊಂದಿಗೆ ಕೂಡಿ ಹಸ್ತಿನಾಪುರಕ್ಕೆ ತೆರಳಿದನು. ಇತರರ ನಾನಾದೇಶದ ರಾಜರುಗಳಿಂದ ಕೂಡಿ ದುರ್ಯೋಧನನದು ಒಟ್ಟು ಹನ್ನೊಂದು ಅಕ್ಷೋಹಿಣಿ ಸೇನೆ ಆಯಿತು.

ಪಾಂಡವರ ಏಳು ಅಕ್ಷೋಹಿಣಿ

ಸಪ್ತ ಪಾಂಡುಸುತಾನಾಂ ಚ ಮಾತ್ಸ್ಯದ್ರುಪದಕೇಕಯೈಃ ।
ಧೃಷ್ಟಕೇತುಜರಾಸಂಧಸುತಕಾಶೀನ್ಯಪೈರ್ಯುತಾಃ ॥ ೨೩ ॥

ಅ: ವಿರಾಟ, ದ್ರುಪದ, ಕೇಕಯ, ಧೃಷ್ಟಕೇತು, ಜರಾಸಂಧಪುತ್ರನಾದ ಸಹದೇವ, ಕಾಶಿರಾಜ - ಇವರುಗಳಿಂದ ಕೂಡಿದ ಪಾಂಡವರದು ಏಳು ಅಕ್ಷೋಹಿಣಿ ಸೇನೆಯಾಯಿತು.

ಪುರುಜಿತ್ ಕುಂತಿಭೋಜಶ್ಚ ಚೇಕಿತಾನಶ್ಚ ಸಾತ್ಯಕಿಃ ।
ಪಾಂಡವಾನ್ ಸೇನಯಾ ಯುಕ್ತಾಃ ಸಮೀಯುರ್ದೇವಪಕ್ಷಿಣಃ ॥ ೨೪ ॥

ಅ: ಪುರುಜಿತ್, ಕುಂತಿಭೋಜ, ಚೇಕಿತಾನ, ಸಾತ್ಯಕಿ ಮೊದಲಾದ ದೇವಪಕ್ಷದವರೆಲ್ಲಾ ಸೇನೆಯೊಂದಿಗೆ ಕೂಡಿ ಪಾಂಡವರ ಬಳಿಗೇ ತೆರಳಿದರು.

ವಿ: ಪಾಂಡವರ ಸೇನೆ ಒಟ್ಟು ಏಳು ಅಕ್ಷೋಹಿಣಿಯಾಯಿತು. ಪುರುಜಿತ್ ಮತ್ತು ಕುಂತಿಭೋಜ ಇಬ್ಬರೂ ಕುಂತಿಯ ಸಹೋದರರು (ಉದ್ಯೋಗ. ೧೭೨/೨). ಚೇಕಿತಾನ ಮತ್ತು ಸಾತ್ಯಕಿ ಇಬ್ಬರೂ ಯಾದವರು. ಅದರಂತೆ ದೇವಪಕ್ಷದವರೆಲ್ಲ ಪಾಂಡವರ ಪಕ್ಷವನ್ನೇ ವಹಿಸಿದರು. ಯಾದವರಲ್ಲಿ ಕೃತವರ್ಮನೊಬ್ಬನೇ ದುರ್ಯೋಧನನ ಕಡೆಗೆ ನಡೆದ.

ಕೌರವರ ಹನ್ನೊಂದು ಅಕ್ಷೋಹಿಣಿ

ವಿಂದಾನುವಿಂದಾವಾವಂತ್ಯೌ ಜಯತ್ಸೇನೋಽನ್ಯಕೇಕಯಾಃ ।
ಕ್ಷೇಮಧೂರ್ತಿರ್ದಂಡಧರಃ ಕಲಿಂಗೋಽಂಬಷ್ಠ ಏವ ಚ ॥ ೨೫ ॥

---

೨೨. ತತಃ= ಕೃಷ್ಣಸಮಕ್ಷಂ ಸಾತ್ಯಕಿನಾ ನಿರಾಕೃತತ್ವಾತ್। ದುರ್ಯೋಧನಂ= ಸ್ವಪುರಂ ಯಾಂತಂ ದುರ್ಯೋಧನಂ ನಾಗಾತ್। ಸ ಚ = ದುರ್ಯೋಧನಶ್ಚ ಹಾರ್ದಿಕ್ಯೇನ ಸಂಯುತಃ। ಚಶಬ್ದೇನ ದಶಲಕ್ಷಗೋಪೈಶ್ಚ ಸಂಯುತ ಇತಿ ಸಮುಚ್ಚಿನೋತಿ ॥ –(ವಾ.)

ಶ್ರುತಾಯುರಚ್ಯುತಾಯುಶ್ಚ ಬೃಹದ್ಬಲಸುದಕ್ಷಿಣೌ ।
ಶ್ರುತಾಯುಧಃ ಸೈಂಧವಶ್ಚ ರಾಕ್ಷಸೋಽಲಂಬುಸಸ್ತಥಾ ॥ ೨೬ ॥

ಅಲಾಯುಧೋಽಲಂಬಲಶ್ಚ ದೈತ್ಯಾ ದುರ್ಯೋಧನಂ ಯಯುಃ ।
ಗತ್ವಾ ದುರ್ಯೋಧನಾಹೂತೋ ಭಗದತ್ತೋಽಪಿ ತಂ ಯಯೌ ॥ ೨೭ ॥

ಅ: ಆವಂತೀ ದೇಶದ ವಿಂದಾನುವಿಂದರು, ಜಯತ್ಸೇನ, ಬೇರೆ ಕೇಕಯರು, ಕ್ಷೇಮ-ಧೂರ್ತಿ, ದಂಡಧರಾ, ಕಲಿಂಗ, ಅಂಬಷ್ಠ, ಶ್ರುತಾಯು, ಅಚ್ಯುತಾಯು, ಬೃಹದ್ಬಲ, ಸುದಕ್ಷಿಣ, ಶ್ರುತಾಯುಧ, ಜಯದ್ರಥ, ರಾಕ್ಷಸ ಅಲಂಬುಸ, ಅಲಾಯುಧ, ಅಲಂಬಲ ಮೊದಲಾದ ದೈತ್ಯರೆಲ್ಲ ದುರ್ಯೋಧನನ ಪಕ್ಷ ವಹಿಸಿದರು. ದುರ್ಯೋಧನನು ಸ್ವತಃ ಹೋಗಿ ಕರೆದದ್ದರಿಂದ ಭಗದತ್ತ ಅವನ ಕಡೆಗೇ ತೆರಳಿದ.

ವಿ: ೧) ದೇವಪಕ್ಷದವರೆಲ್ಲ ಪಾಂಡವ ಪಕ್ಷ ವಹಿಸಿದಂತೆ, ದೈತ್ಯರೆಲ್ಲ ದುರ್ಯೋಧನನ ಪಕ್ಷ ವಹಿಸಿದರು. ಹೀಗೆ ಕುರು ಪಾಂಡವರ ಯುದ್ಧ ದೇವಾಸುರರ ಮಹಾಸಂಗ್ರಾಮಕ್ಕೆ ಸಂಕೇತವಾಯಿತು ಎಂದು ತಿಳಿಯಬೇಕು.

೨) ದುರ್ಯೋಧನನ ಪಕ್ಷದಲ್ಲಿ ಭೀಷ್ಮ, ದ್ರೋಣ, ಕೃಪ, ಅಶ್ವತ್ಥಾಮ, ಬಾಹ್ಲೀಕ, ಸೋಮದತ್ತ ಅವನ ಭೂರಿ ಭೂರಿಶ್ರವಸ್ ಮತ್ತು ಶಲ ಎಂಬ ಮೂವರು ಪುತ್ರರು, ಭಗದತ್ತ ಮೊದಲಾದ ಕೆಲವರನ್ನು ಹೊರತು ಪಡಿಸಿದರೆ ಇತರರೆಲ್ಲ ಕೇವಲ ಅಸುರರೇ ಆಗಿದ್ದವರು.

೩) ಪಾಂಡವರ ಪಕ್ಷದಲ್ಲಿ ಒಬ್ಬ ಅಸುರನೂ ಇರಲಿಲ್ಲ ಎಂಬುದು ವಿಶೇಷ. ಘಟೋತ್ಕಚ ಮೊದಲಾದವರು ರಾಕ್ಷಸರಾದರೂ ಸ್ವರೂಪತಃ ದೇವತೆಗಳು.

೪) ರುಗ್ಮಿ ಎಂಬ ಒಬ್ಬ ದೈತ್ಯ ಪಾಂಡವರ ಪಕ್ಷ ಹಾಗೂ ಕೌರವಪಕ್ಷಗಳಲ್ಲಿ ಸೇರಲು ಪ್ರಯತ್ನಿಸಿ ಅವರಿಬ್ಬರೂ ನಿರಾಕರಿಸಿದ್ದರಿಂದ ಹಿಂದಿರುಗಿದ ಎಂಬ ಅಪೂರ್ವ ವಿವರ ಮಹಾ-ಭಾರತದಲ್ಲಿದೆ (ಉದ್ಯೋಗ. ಅಧ್ಯಾಯ ೧೫೮, ಶ್ಲೋ.೮-೩೮). ಈ ರುಗ್ಮಿ ಬಲರಾಮನಿಂದ ಆ ಮೊದಲೇ ಹತನಾಗಿದ್ದ ರುಗ್ಮಿಯಲ್ಲ; ಭೀಷ್ಮಕಪುತ್ರನಾದ *ರುಗ್ಮರಥ ಎಂಬ ಮತ್ತೊಬ್ಬನು.

---

೨೭. ಗತ್ವಾ ದುರ್ಯೋಧನಾಹೂತ ಇತ್ಯತ್ರ ಸ್ವಯಮೇವ ಪ್ರಾಗ್ಜ್ಯೋತಿಷಪುರಂ ಗತ್ವಾ ದುರ್ಯೋಧನೇನಾಹೂತ ಇತ್ಯರ್ಥಃ ॥ – (ವಾ.)

೨೭. ಅಪಿಶಬ್ದೇನ ಭಗದತ್ತಸ್ಯ ದೇವತ್ವೇ ಸತ್ಯಪೀತ್ಯರ್ಥಃ । – (ಜ.)

* ರುಗ್ಮಿಣಃ ಪ್ರಾಗೇವ ಬಲರಾಮೇಣ ಮೃತತ್ವಾತ್ ರುಗ್ಮಿಣೋಽನುಜೋ ರುಗ್ಮರಥಾಖ್ಯಃ ಕಶ್ಚಿದ್ಭೀಷ್ಮಕಪುತ್ರಃ ॥ – ಲಕ್ಷಾಲಂಕಾರ

೫) ದುರ್ಯೋಧನ ಪಕ್ಷವಹಿಸಿದ ಭೀಷ್ಮಾದಿಗಳಲ್ಲಿ ಅಸುರಾವೇಶವಿದ್ದವರು ಕೆಲವರಾದರೆ, ಕೆಲವರು ಭಗವತ್ಸಂಕಲ್ಪವಿಶೇಷದಿಂದಾಗಿ ಅಲ್ಲಿ ಸೇರಿದ್ದವರಾಗಿದ್ದರು.

೬) ಸೋಮದತ್ತ ಹಾಗೂ ಜರಾಸಂಧಪುತ್ರ ಸಹದೇವ ಇಬ್ಬರೂ ಪತ್ರತಾಪ ಎಂಬ ರುದ್ರನ ಅವತಾರ. ಇವರಲ್ಲಿ ಸೋಮದತ್ತ ಕೌರವ ಪಕ್ಷ ವಹಿಸಿದರೆ ಸಹದೇವ ಪಾಂಡವಪಕ್ಷ ವಹಿಸಿದ. ಹೀಗೆ ಎರಡೂ ಪಕ್ಷಗಳಲ್ಲಿ ಸೇರಿದ್ದ ಒಬ್ಬ ದೇವತೆ ಇವನೊಬ್ಬನೇ.

ಬಾಹ್ಲೀಕಾದಿಗಳು ಕೌರವರ ಕಡೆ - ಪಾಂಡವರ ಕಡೆಗೆ ಪಾಂಡ್ಯ

ಸಪುತ್ರಪೌತ್ರೋ ಬಾಹ್ಲೀಕೋ ಭೀಷ್ಮದ್ರೋಣಕೃಪಾ ಅಪಿ ।
ಪ್ರೀತ್ಯರ್ಥಂ ಧೃತರಾಷ್ಟ್ರಸ್ಯ ಬಭೂವುಸ್ತತ್ಸುತಾನುಗಾಃ ।
ಪಾಂಡ್ಯಶ್ಚ ವೀರಸೇನಾಖ್ಯಃ ಪಾಂಡವಾನೇವ ಸಂಶ್ರಿತಃ ॥ ೨೮ ॥

ಅ: ಪುತ್ರ ಪೌತ್ರ ಸಮೇತನಾಗಿ ಬಾಹ್ಲೀಕ, ಭೀಷ್ಮ, ದ್ರೋಣ ಮತ್ತು ಕೃಪಾಚಾರ್ಯರು ಧೃತರಾಷ್ಟ್ರನ ಪ್ರೀತಿಗಾಗಿ ಅವನ ಪುತ್ರನಾದ ದುರ್ಯೋಧನನ ಪಕ್ಷವಹಿಸಿದರು. ವೀರಸೇನ-ನೆಂಬ ಪಾಂಡ್ಯ ದೇಶದ ರಾಜ ಪಾಂಡವರನ್ನೇ ಆಶ್ರಯಿಸಿದ.

ಎ: ೧) ಬಾಹ್ಲೀಕರಾಜ ಪ್ರಹ್ಲಾದಾಂಶಸಂಭೂತನೂ, ವಾಯುದೇವರ ಆವೇಶದಿಂದ ಕೂಡಿ–ದ್ದವನೂ ಆದ ಸಾತ್ವಿಕ. ಅದರಂತೆ ಅವನ ಮಗ ಸೋಮದತ್ತ ಮತ್ತು ಮೊಮ್ಮಕ್ಕಳಾದ ಭೂರಿ, ಭೂರಿಶ್ರವಸ್ ಮತ್ತು ಶಲ – ಇವರೆಲ್ಲರೂ ತುಂಬಾ ಯೋಗ್ಯರಾದವರು. ಆದರೂ ಧೃತರಾಷ್ಟ್ರನ ಪ್ರೀತಿಗೋಸ್ಕರವಾಗಿ ದುರ್ಯೋಧನನ ಪಕ್ಷ ವಹಿಸಿದ್ದರು.

೨) ಈ ವೀರಸೇನ ಅರ್ಜುನನ ಮಾವ, ಚಿತ್ರಾಂಗದೆಯ ತಂದೆ ಎಂಬ ವಿವರ ಈಗಾಗಲೇ ಬಂದಿದೆ(೨೦/೧೬೦).

೩) ಉಭಯ ಪಕ್ಷಗಳಲ್ಲಿ ಭಾಗವಹಿಸಿದ ರಾಜರುಗಳೆಲ್ಲ ತಮ್ಮ ಉತ್ತರಾಧಿಕಾರಿ– ಗಳನ್ನು ನಿಯೋಜಿಸಿಯೇ ಬಂದವರಾದ್ದರಿಂದ ಇವರ ಮರಣಾನಂತರವೂ ಆ ರಾಜ್ಯಗಳೆಲ್ಲ ಹಾಗೆಯೇ ಮುಂದುವರೆದವು ಎಂದು ತಿಳಿಯಬೇಕು.

---

೩೨. ಪಾಂಡ್ಯಃ ಪಾಂಡ್ಯದೇಶಪತಿರ್ವೀರಸೇನಾಖ್ಯಃ । –(ಜ.)

ದುರ್ಯೋಧನನ ಶಲ್ಯಗ್ರಹಣ

ಶಲ್ಯಂ ಚ ಪಾಂಡವಾನೇವ ಯಾಂತಂ ಜ್ಞಾತ್ವಾ ಸುಯೋಧನಃ ।
ಸುಸಭಾಃ ಕಾರಯಾಮಾಸ ಸರ್ವಭೋಗಸಮನ್ವಿತಾಃ ॥ ೨೯ ॥

ಅ: ಶಲ್ಯನು ಪಾಂಡವ ಪಕ್ಷಕ್ಕೇ ತೆರಳುತ್ತಿದ್ದುದನ್ನು ತಿಳಿದು ದುರ್ಯೋಧನ ಹಾದಿಯುದ್ದಕ್ಕೂ ಸಕಲ ಭೋಗ ಸಾಮಗ್ರಿಗಳಿಂದ ಕೂಡಿದ್ದ ಒಳ್ಳೆಯ ಸಭೆಗಳನ್ನು ಏರ್ಪಡಿಸಿದ.

ವಿ: ೧) ಶಲ್ಯ ಮಾದ್ರಿಯ ಸಹೋದರ, ನಕುಲ ಸಹದೇವರಿಗೆ ಸಾಕ್ಷಾತ್ ಸೋದರಮಾವ. ಅದರಿಂದಾಗಿ ಇತರ ಪಾಂಡವರಿಗೂ ಸೋದರಮಾವನೇ. ಮೇಲಾಗಿ ಪ್ರಹ್ಲಾದನ ಸಹೋದರನಾದ ಸಹ್ಲಾದನ ಅವತಾರ.

೨) ಅವನು ಸಹಜವಾಗಿಯೇ ಪಾಂಡವರ ಪಕ್ಷವನ್ನೇ ಸೇರಲೆಂದು ಹೊರಟಿದ್ದ ಅದನ್ನು ತಿಳಿದ ದುರ್ಯೋಧನ ಅವನನ್ನು ತನ್ನೆಡೆಗೆ ಸೆಳೆದುಕೊಳ್ಳಲೆಂದು ಅವನು ತೆರಳುತ್ತಿದ್ದ ದಾರಿಯುದ್ದಕ್ಕೂ ಬಗೆಬಗೆಯ ಭೋಗ ವಸ್ತುಗಳಿಂದ ಕೂಡಿದ್ದ ಸಭಾ ಭವನಗಳನ್ನು ನಿರ್ಮಿಸಿದ. ಅವುಗಳೆಲ್ಲ ಈಜುಕೊಳಗಳಿಂದಲೂ ಸಹ ಕೂಡಿದ್ದ ಅತ್ಯಂತ ಭವ್ಯವಾಗಿದ್ದ ತಂಗುದಾಣಗಳಾಗಿದ್ದವು ಎಂದು ಮಹಾಭಾರತ ವರ್ಣಿಸಿದೆ. 'ಸುಸಭಾಃ' ಎಂಬ ಪದದಿಂದ ಇದನ್ನೆಲ್ಲ ಶ್ರೀಮದಾಚಾರ್ಯರು ಸೂಚಿಸಿರುವರು.

ತಾ ಯುಧಿಷ್ಠಿರಕ್ಲೃಪ್ತಾಃ ಸ ಮತ್ವಾ ಶಲ್ಯೋಽಬ್ರವೀದಿದಮ್ ।
ಯ ಏತಾಃ ಕಾರಯಾಮಾಸ ತದಭೀಷ್ಟಂ ಕರೋಮ್ಯಹಮ್ ॥ ೩೦ ॥

ಅ: ಅವುಗಳೆಲ್ಲ ಧರ್ಮರಾಜನಿಂದ ಏರ್ಪಡಿಸಲ್ಪಟ್ಟವು ಎಂದು ಭಾವಿಸಿ ಶಲ್ಯ ಹೀಗೆ ನುಡಿದ 'ಇವುಗಳನ್ನು ಏರ್ಪಡಿಸಿದವನ ಅಭೀಷ್ಟವನ್ನು ನಾನು ಈಡೇರಿಸುವೆ'.

---

೨೯. ಕಾರಯಾಮಾಸ ಪೂಜಾರ್ಥಂ ತಸ್ಯ ದುರ್ಯೋಧನಃ ಸಭಾಃ ।
ರಮಣೀಯೇಷು ದೇಶೇಷು ರತ್ನಚಿತ್ರಾಃ ಸ್ವಲಂಕೃತಾಃ ॥ – ಭಾರತ (ಉದ್ಯೋಗ. ೮/೮-೧೧)

೨೯. ಸುಸಭಾಃ ಕಾರಯಾಮಾಸೇತ್ಯತ್ರ ಮಾರ್ಗೇ ಮಾರ್ಗೇಽವಸ್ಥಾನಾರ್ಥಂ ಸುಸಭಾಃ ಕಾರಯಾಮಾಸೇತ್ಯರ್ಥಃ ॥ – (ವಾ.)

೩೦. ಯುಧಿಷ್ಠಿರಸ್ಯ ಪುರುಷಾಃ ಕೇಽತ್ರ ಚಕ್ರುಃ ಸಭಾ ಇಮಾಃ ।
ಆನೀಯಂತಾಂ ಸಭಾಕಾರಾಃ ಪ್ರದೇಯಾರ್ಹಾ ಹಿ ಮೇ ಮತಾಃ ॥ – ಭಾರತ (ಉದ್ಯೋಗ. ೮/೧೪)

ಏಃ ಅಲ್ಲಿಯ ಅಂತಹ ಏರ್ಪಾಟಿನಿಂದ ಸುಪ್ರೀತನಾದ ಶಲ್ಯ ತನಗಾಗಿ ಧರ್ಮರಾಜ ಹಾಗೆ ವ್ಯವಸ್ಥೆ ಮಾಡಿರುವನು ಎಂದು ತಿಳಿದ. ಆ ಸಂತೋಷದ ಭರದಲ್ಲಿ ಹಾಗೆ ಏರ್ಪಾಟು ಮಾಡಿದವ– ನಿಗೆ ಬಯಸಿದ್ದನ್ನು ನೀಡುವ ವಚನವಿತ್ತ

ಲೀನಃ ಶ್ರುತ್ವಾ ಧಾರ್ತರಾಷ್ಟ್ರಃ ಸತ್ಯಂ ಕುರ್ವಿತ್ಯಭಾಷತ ।
ದೇಹಿ ಮೇ ಯುದ್ಧಸಾಹಾಯ್ಯಮಿತಿ ಸೋಽಪಿ ಯಶೋಽರ್ಥಯನ್ ।
ರಕ್ಷಾರ್ಥಮಾತ್ಮವಾಕ್ಯಸ್ಯ ತಥೇತ್ಯೇವಾಭ್ಯಭಾಷತ ॥ ೩೧ ॥

ಆ: ಅಡಗಿದ್ದ ದುರ್ಯೋಧನ ಅದನ್ನು ಕೇಳಿ 'ನಿನ್ನ ಮಾತನ್ನು ಸತ್ಯಮಾಡು, ನನಗೆ ಯುದ್ಧದಲ್ಲಿ ನೆರವು ನೀಡು' ಎಂದು ಕೇಳಿಕೊಂಡ. ಶಲ್ಯ ಕೀರ್ತಿಯನ್ನು ಆಶಿಸಿ ತನ್ನ ಮಾತನ್ನು ಉಳಿಸಿಕೊಳ್ಳಲೆಂದು 'ಹಾಗೆಯೇ ಆಗಲಿ' ಎಂದು ನುಡಿದ.

ಏಃ ೧) ಆವರೆಗೂ ಮುಂದೆ ಕಾಣಿಸಿಕೊಳ್ಳದಿದ್ದ ದುರ್ಯೋಧನ ಶಲ್ಯ ಹಾಗೆ ನುಡಿಯುತ್ತಲೇ ಕಾಣಿಸಿಕೊಂಡು ತನ್ನ ಪಕ್ಷ ಸೇರುವ ಮೂಲಕ ತನ್ನ ಮಾತನ್ನು ಸತ್ಯಮಾಡಿಕೊಳ್ಳಲು ಅವನಿಗೆ ತಿಳಿಸುವನು. ವಿಷಯ ತಿಳಿದ ಶಲ್ಯ ಸತ್ಯವಚನನಾಗುವ ಬಯಕೆಯಿಂದ ಅದನ್ನು ಅಂಗೀಕರಿಸಿದ ಎಂದರ್ಥ.

೨) ಹೀಗೆ ದುರ್ಯೋಧನ ಕುತಂತ್ರದಿಂದ ಶಲ್ಯನನ್ನು ತನ್ನೆಡೆಗೆ ಸೆಳೆದುಕೊಂಡ. ಅವನು ಅಶ್ವತ್ಥಾಮರನ್ನೂ ಸಹ ಬಾಲ್ಯದಲ್ಲಿಯೇ ಒಮ್ಮೆ ಹಾಲು ನೀಡುವ ಮೂಲಕ ತನ್ನ ಪಕ್ಷಕ್ಕೆ ಸೆಳೆದುಕೊಂಡ ವಿವರ ಈಗಾಗಲೇ ಬಂದಿದೆ(೧೫/೯). ಹೀಗೆ ಕೊಡುವ ನೆಪದಲ್ಲಿ ತನ್ನ ವಶ ಮಾಡಿಕೊಳ್ಳುವ ದುರ್ಯೋಧನನ ಕುತಂತ್ರಕ್ಕೆ ಅಶ್ವತ್ಥಾಮ, ಶಲ್ಯರಂಥವರೂ ಒಳಗಾದದ್ದು ವಿಶೇಷ. ಕಲಿಯ ಆವೇಶಕ್ಕೆ ಅವರೆಲ್ಲ ಒಳಗಾಗುವವರೇ ಎಂಬುದು ಇದರಿಂದ ಸಿದ್ಧಪಡುವುದು.

ಸ ಪಾಂಡವಾಂಸ್ತತೋ ಗತ್ವಾ ತೈರನುಜ್ಞಾತ ಏವ ಚ ।
ತೇಜೋವಧಾರ್ಥಂ ಕರ್ಣಸ್ಯ ಧನಂಜಯಕೃತೇಽರ್ಥಿತಃ ।
ತಥೇತ್ಯುಕ್ತ್ವಾ ಯಯೌ ಧರ್ಮನಂದನಂ ಕೌರವಾನ್ ಪ್ರತಿ ॥ ೩೨ ॥

---

೩೧. ಗೂಢೋ ದುರ್ಯೋಧನಸ್ತತ್ರ ದರ್ಶಯಾಮಾಸ ಮಾತುಲಮ್ ॥ – ಭಾರತ (ಉದ್ಯೋಗ. ೮/೧೬)

ಸತ್ಯವಾಗ್ ಭವ ಕಲ್ಯಾಣ ವರೋ ವೈ ಮಮ ದೀಯತಾಮ್ ।
ಸರ್ವಸೇನಾಪ್ರಣೇತಾ ವೈ ಭವಾನ್ ಭವಿತುಮರ್ಹತಿ ॥ – ಭಾರತ (ಉದ್ಯೋಗ. ೮/೧೮)

೩೨. ತೇಜೋವಧಾರ್ಥಂ ಕರ್ಣಸ್ಯೇತ್ಯತ್ರ ಮಹಾರಥಿಕೋಽಪಿ ತ್ವಮಸ್ಯದರ್ಥಂ ಕರ್ಣಸಾರಥ್ಯಂ ಕೃತ್ವಾ ಧಿಕ್ಕಾರ-ವಚನೈಸ್ತಸ್ಯ ತೇಜೋವಧಂ ಕುರ್ವಿತಿ ತಸ್ಯ ತೇಜೋವಧಾರ್ಥಮರ್ಥಿತ ಇತ್ಯರ್ಥಃ ॥ – (ವಾ.)

ಅ: ಬಳಿಕ ಶಲ್ಯ ಪಾಂಡವರ ಬಳಿಗೆ ಹೋಗಿ ತಾನು ಕೌರವರ ಬಳಿಗೆ ತೆರಳಲು ಅನುಮತಿ ಪಡೆದುಕೊಂಡ. ಧರ್ಮರಾಜ ಅರ್ಜುನನಿಗಾಗಿ ಕರ್ಣನ ತೇಜೋವಧೆ ಮಾಡಲೆಂದು ನುಡಿದಾಗ 'ಆಗಲಿ' ಎಂದು ನುಡಿದು ಅವನು ಕೌರವರ ಬಳಿಗೆ ತೆರಳಿದ.

ವಿ: ೧) ಶಲ್ಯ ತನ್ನ ಸೇನೆಯನ್ನು ದುರ್ಯೋಧನನ ವಶಕ್ಕೆ ಒಪ್ಪಿಸಿ, ಪಾಂಡವರ ಅನುಮತಿ ಪಡೆಯಲೆಂದು ಅವರ ಬಳಿಗೆ ತೆರಳಿ, ವಿಷಯವನ್ನು ತಿಳಿಸಿ ತಾನು ನೀಡಿರುವ ವಚನವನ್ನು ಸತ್ಯ ಮಾಡಲೆಂದು ಕೌರವರ ಪಕ್ಷ ಸೇರುವುದು ಅನಿವಾರ್ಯವಾಗಿದೆ ಎಂದು ತಿಳಿಸಿದ;

೨) ಧರ್ಮರಾಜ ಅದಕ್ಕೆ ಸಮ್ಮತಿಸಿ ಮುಂದೆ ಪ್ರಸಂಗ ಒದಗಿದಾಗ ಅರ್ಜುನನ ಹಿತಕ್ಕಾಗಿ ಕರ್ಣನ ತೇಜೋವಧೆ ಮಾಡಬೇಕೆಂಬ ಕೋರಿಕೆಯನ್ನು ಮುಂದಿಡುವನು. ಶಲ್ಯ ಅದಕ್ಕೆ ಸಮ್ಮತಿಸಿ ದುರ್ಯೋಧನನತ್ತ ತೆರಳಿದ.

ಸಂಜಯನ ರಾಯಭಾರ

ಸಂಜಯಂ ಪ್ರೇಷಯಾಮಾಸ ಧೃತರಾಷ್ಟ್ರೋಽಥ ಶಾಂತಯೇ ।
ಪಾಂಡವಾನ್ ಪ್ರತ್ಯಧರ್ಮಂ ಚ ಯುದ್ಧಂ ಸ ಪ್ರತ್ಯಪಾದಯತ್ ॥ ೩೩ ॥

ಅ: ಬಳಿಕ ಧೃತರಾಷ್ಟ್ರ ಸಂಧಾನಕ್ಕೆಂದು ಸಂಜಯನನ್ನು ಪಾಂಡವರ ಬಳಿಗೆ ಕಳುಹಿಸಿದ; ಸಂಜಯನು ಯುದ್ಧ ಮಾಡುವುದು ಅಧರ್ಮ ಎಂದು ಪ್ರತಿಪಾದಿಸಿದ.

ವಿ: ೧) ಧೃತರಾಷ್ಟ್ರ ತನ್ನ ರಾಯಭಾರಿಯನ್ನಾಗಿ ಸಂಧಾನ ಕಾರ್ಯಕ್ಕೆ ಸಂಜಯನನ್ನು ತೊಡಗಿಸಿದ. ಅವನು ಪಾಂಡವರ ಬಳಿಗೆ ತೆರಳಿ ಕೃಷ್ಣನ ನೇತೃತ್ವದಲ್ಲಿ ಸೇರಿದ್ದ ಸಭೆಯಲ್ಲಿ ಯುದ್ಧದ

---

೩೨. ಕರ್ಣಾರ್ಜುನಾಭ್ಯಾಂ ಸಂಪ್ರಾಪ್ತೇ ದ್ವೈರಥೇ ರಾಜಸತ್ತಮ ।
ಕರ್ಣಸ್ಯ ಭವತಾ ಕಾರ್ಯಂ ಸಾರಥ್ಯಂ ನಾತ್ರ ಸಂಶಯಃ ॥
ತೇಜೋವಧಶ್ಚತೇ ಕಾರ್ಯಃ ಸೌತೇರಸ್ಯಜ್ಜಯಾವಹಃ ॥
(ಶಲ್ಯನನ್ನು ಕುರಿತು ಯುಧಿಷ್ಠಿರನ ವಚನ) – ಭಾರತ (೫/೮/೪೪)

೩೩. ಅಧರ್ಮಂ ಚ ಯುದ್ಧಮಿತ್ಯತ್ರ ಚಶಬ್ದೇನ ಯುದ್ಧಸ್ಯಾಕರ್ತವ್ಯತ್ವೇ ಅಸ್ಮದ್ಭಾಗಸ್ಯಾದಾನೇ ಚ ಕಥಂ ಜೀವಿತವ್ಯಮಿತಿ ಶಂಕಾಯಾಃ ದೈವದತ್ತೇನ ವಿತ್ತೇನ ವರ್ತಿತವ್ಯಮಿತಿ ಪರಿಹಾರಂ ಸಮುಚ್ಚಿನೋತಿ ॥ – (ವಾ.)

೩೩. ಯತ್ರ ಭೀಷ್ಮಃ ಶಾಂತನವೋ ಹತಃ ಸ್ಯಾದ್ಯತ್ರ ದ್ರೋಣಃ ಸಹಪುತ್ರೋ ಹತಃ ಸ್ಯಾತ್ ।...
ಏತಾನ್ ಹತ್ವಾ ಕೀದೃಶಂ ತತ್ ಸುಖಂ ಸ್ಯಾದ್ಧಿಂದೇಥಾಸ್ತದನು ಬ್ರೂಹಿ ಪಾರ್ಥ॥–ಭಾರತ (೫/೨೫/೯)

೩೩. ನ ಚೇದ್ಭಾಗಂ ಕುರವೋಽನ್ಯತ್ರ ಯುದ್ಧಾದ್ ಪ್ರಯಚ್ಛೇರಂಸ್ತುಭ್ಯಮಜಾತಶತ್ರೋ ।
ಭೈಕ್ಷಚರ್ಯಾಮಂಧಕವೃಷ್ಣಿರಾಜ್ಯೇ ಶ್ರೇಯೋ ಮನ್ಯೇ ನ ತು ಯುದ್ಧೇನ ರಾಜ್ಯಮ್ ॥ – ಭಾರತ(೫/೨೭/೨)

ದುಷ್ಪರಿಣಾಮಗಳನ್ನು ತಿಳಿಸಿ ಅಂತಹ ಯುದ್ಧವನ್ನು ಮಾಡುವುದು ಧರ್ಮವಲ್ಲ ಎಂದು ಪ್ರತಿ–ಪಾದಿಸಿದ. ಯುದ್ಧ ನಡೆದರೆ ಭೀಷ್ಮ, ದ್ರೋಣಾದಿ ಗುರು ಹಿರಿಯರನ್ನು ಕೊಲ್ಲಬೇಕಾಗಿ ಬರುವುದು. ಹಾಗೆ ಬಂದ ರಾಜ್ಯದಲ್ಲಿ ಸುಖ ಸಂತೋಷಾದಿಗಳಿರವು.

೨) 'ಹಾಗೆ ರಾಜ್ಯಪಡೆಯುವುದಕ್ಕಿಂತ ವೃಷ್ಣಿ ಅಂಧಕ ಮೊದಲಾದವರಲ್ಲಿ ಭಿಕ್ಷೆ ಬೇಡುವುದು ಲೇಸು. ಧರ್ಮಜ್ಞರೂ, ಯಜ್ಞಯಾಗಾದಿಗಳನ್ನು ಮಾಡಿದವರೂ ಆದ ನೀವು ರಾಜ್ಯದ ಮೇಲಿನ ಆಸೆಗೋಸ್ಕರ ಲೋಕನಾಶಕವಾದ ಯುದ್ಧದಲ್ಲಿ ತೊಡಗುವ ಬದಲು, ಈ ನಶ್ವರಜೀವನಕ್ಕೋಸ್ಕರ ಹೇಗೋ ಬದುಕುವುದೇ ಲೇಸು' ಎಂದು ತಿಳಿಸುವನು.

ಯುದ್ಧಕ್ಕೆ ಸ್ಥಿರನಾದ ಯುಧಿಷ್ಠಿರ

ಹತವಾದೇऽವದದ್ಭೀಮೋ ಯಂ ಧರ್ಮಂ ದ್ರೌಪದೀ ತಥಾ ।
ತಮೇವೋಕ್ತ್ವಾ ಧರ್ಮಜಸ್ತು ಚಕಾರ ಚ ನಿರುತ್ತರಮ್ ।
ಕೃಷ್ಣೋऽಪಿ ತಸ್ಯ ಧರ್ಮಸ್ಯ ಪ್ರಾಮಾಣ್ಯಂ ಪ್ರತ್ಯಪಾದಯತ್ ॥ ೩೪ ॥

ಅ: ಹತವಾದದಲ್ಲಿ ಭೀಮ ಮತ್ತು ಹಾಗೆಯೇ ದ್ರೌಪದಿ ತಿಳಿಸಿದ ಧರ್ಮವನ್ನೇ ಧರ್ಮರಾಜ ಪ್ರತಿಪಾದಿಸಿ ಸಂಜಯನನ್ನು ನಿರುತ್ತರನನ್ನಾಗಿ ಮಾಡಿದ; ಶ್ರೀಕೃಷ್ಣನೂ ಸಹ ಆ ಧರ್ಮದ ಪ್ರಾಮಾಣಿಕತೆಯನ್ನು ಪ್ರತಿಪಾದಿಸಿದ.

ವಿ: ೧) ಧರ್ಮರಾಜ ಆವರೆಗೂ ಸಹ ಧೃತರಾಷ್ಟ್ರನ ಯಾವ ಮಾತನ್ನೂ ನಿರಾಕರಿಸಿದವನಲ್ಲ. ಆದರೆ ಈ ಬಾರಿ ಮಾತ್ರ ಅವನ ಮಾತನ್ನು ಅಂಗೀಕರಿಸದೆ ನ್ಯಾಯವಾಗಿ ತಮಗೆ ಸಲ್ಲಬೇಕಾದ ರಾಜ್ಯವನ್ನು ನೀಡದಿದ್ದಲ್ಲಿ ಯುದ್ಧ ಅನಿವಾರ್ಯ ಎಂದು ಪ್ರತಿಪಾದಿಸಿದ.

೨) ಹಾಗೇ ಅವನು ಯುದ್ಧದಲ್ಲಿ ಸ್ಥಿರನಾಗಲು ವನವಾಸ ಕಾಲದಲ್ಲಿ ಭೀಮ, ದ್ರೌಪದಿಯರು ಕ್ಷತ್ರಿಯಧರ್ಮ, ರಾಜಧರ್ಮಗಳನ್ನು ವಿವರವಾಗಿ ವಿಶ್ಲೇಷಿಸಿ ದುಷ್ಟರ ಮೇಲೆ ಸಮರವೇ ಶ್ರೇಷ್ಠರಾಜಧರ್ಮ ಎಂದು ತಿಳಿಸಿ ಯುದ್ಧಕ್ಕೆ ಅವನನ್ನು ಅಣಿಮಾಡಿದ್ದುದೇ ಕಾರಣ–ವಾಗಿತ್ತು ಎಂದು ತಿಳಿಯಬೇಕು (೨೨/೬೪–೧೧೫).

೩) ಭೀಮ ದ್ರೌಪದಿಯರ ಧರ್ಮಪ್ರತಿಪಾದನೆಯ ಮಹತ್ವ ಹೀಗೆ ಸ್ಫುಟಪಡುವುದು ಎಂಬುದು ಗಮನಾರ್ಹ. ಧರ್ಮರಾಜನ ನಿರ್ಣಯವನ್ನು ಕೃಷ್ಣ ಸಮರ್ಥಿಸಿದ್ದು ಮತ್ತೊಂದು ವಿಶೇಷ. ಇದು ಭೀಮ, ದ್ರೌಪದಿಯರ ಧರ್ಮಬೋಧನೆಗೆ ಕೃಷ್ಣನಿಂದ ದೊರೆತ ಅಂಗೀಕಾರ–ವಾದ್ರೆ ಎಂದು ತಿಳಿಯುವುದು.

ಸಂಜಯನ ಸೋಲು

ತತೋ ನಿರುತ್ತರಃ ಕೃಷ್ಣಂ ಪಾಂಡವಾಂಶ್ಚ ಪ್ರಣಮ್ಯ ಸಃ ।
ಧೃತರಾಷ್ಟ್ರಂ ಯಯೌ ತಂ ಚ ವಿನಿಂದ್ಯ ಪ್ರಯಯೌ ಗೃಹಮ್ ॥ ೩೫ ॥

ಅ: ಬಳಿಕ ಉತ್ತರ ನೀಡಲಾಗದ ಸಂಜಯ ಕೃಷ್ಣನನ್ನು, ಪಾಂಡವರನ್ನು ವಂದಿಸಿ ಧೃತರಾಷ್ಟ್ರನ ಬಳಿಗೆ ತೆರಳಿದ. ಹಾಗೆ ತೆರಳಿದವನು ಧೃತರಾಷ್ಟ್ರನನ್ನು ಬೈದು ತನ್ನ ಮನೆಗೆ ಹೊರಟ.

ವಿ: ಧೃತರಾಷ್ಟ್ರ ಅಂತಹ ಸಂದೇಶ ನೀಡಿದ ಅಧರ್ಮಿಯಾದರೆ, ಅದನ್ನು ನಿರೂಪಿಸಲೆಂದು ಪ್ರಯತ್ನಿಸುವ ಸಂಜಯನೂ ಸಹ ಒಂದರ್ಥದಲ್ಲಿ ಅಧರ್ಮಿಯೇ ಆಗುವನು ಎಂದು ಕೃಷ್ಣನುಡಿದಾಗ ಸಂಜಯ ತಾನು ಮಾಡಿದ ಕಾರ್ಯ ಸರಿಯಲ್ಲ ಎಂದು ಅರಿತು ಹಸ್ತಿನಾಪುರಕ್ಕೆ ಮರಳಿ ಅಂತಹ ಕಾರ್ಯಕ್ಕೆ ತನ್ನನ್ನು ತೊಡಗಿಸಿದ್ದಕ್ಕಾಗಿ ಧೃತರಾಷ್ಟ್ರನನ್ನು ಬೈದ; ಅಲ್ಲಿ ನಡೆದದ್ದೇನು ಎಂದು ಧೃತರಾಷ್ಟ್ರ ಪ್ರಶ್ನಿಸಿದಾಗ ಅದನ್ನೆಲ್ಲ ಮಾರನೆಯ ದಿನ ಸಭೆಯಲ್ಲೇ ತಿಳಿಸುವುದಾಗಿ ಹೇಳಿ ತನ್ನ ಮನೆಗೆ ಹೊರಟುಬಿಟ್ಟ.

ವಿದುರನೀತಿ

ನಿಂದಿತಃ ಸಂಜಯೇನಾಸಾವಾಹೂಯ ವಿದುರಂ ನಿಶಿ ।
ಪಪ್ರಚ್ಛ ಸೋಽವದದ್ಧರ್ಮಂ ಪಾರ್ಥಾನಾಂ ರಾಜ್ಯದಾಪನಮ್ ॥ ೩೬ ॥

ಅ: ಸಂಜಯನಿಂದ ಹಾಗೆ ನಿಂದಿಸಲ್ಪಟ್ಟ ಧೃತರಾಷ್ಟ್ರ ರಾತ್ರಿಯಲ್ಲಿ ವಿದುರನನ್ನು ಕರೆಸಿಕೊಂಡು ಧರ್ಮದ ಬಗ್ಗೆ ಪ್ರಶ್ನಿಸಿದನು. ಆಗ ವಿದುರ ಪಾಂಡವರಿಗೆ ರಾಜ್ಯವನ್ನು ನೀಡುವುದೇ ಧರ್ಮ ಎಂದು ತಿಳಿಸಿದ.

ವಿ: ೧) ಹಾಗೆ ಉಗ್ರವಾಗಿ ನಿಂದಿಸಿ ಸಂಜಯ ತೆರಳಿದಾಗ ಧೃತರಾಷ್ಟ್ರ ಅದನ್ನು ತಿಳಿಯುವ ಕಾತರದಿಂದ ನಿದ್ರೆಯಿಲ್ಲದೇ ಕಳೆದ; ಆಗ ವಿದುರನನ್ನು ಕರೆಸಿಕೊಂಡು ರಾತ್ರಿಯೆಲ್ಲ ಧರ್ಮದ ಬಗ್ಗೆ ಅನೇಕ ವಿಚಾರಗಳನ್ನು ವಿದುರನಿಂದ ಕೇಳಿ ತಿಳಿದ.

---

೩೫. ಅನುಜ್ಞಾತೋ ರಥವೇಗಾವಧೂತಃ ಶ್ರಾಂತೋಽಭಪದ್ಯೇ ಶಯನಂ ನೃಸಿಂಹ ।
ಪ್ರಾತಃ ಶ್ರೋತಾರಃ ಕುರವಃ ಸಭಾಯಾಮಜಾತಶತ್ರೋರ್ವಚನಂ ಸಮೇತಾಃ ॥ – ಭಾರತ (೫/೩೨/೩೧)

೩೬. ಸ ತ್ವಾಂ ಗರ್ಹೇ ಭಾರತಾನಾಂ ವಿರೋಧಾದಂತೋ ನೂನಂ ಭವಿತಾಯಂ ಪ್ರಜಾನಾಮ್ ।
ನೋ ಚೇದಿದಂ ತವ ಕರ್ಮಾಪರಾಧಾತ್ ಕುರೂನ್ ದಹೇತ್ ಕೃಷ್ಣವರ್ತ್ಮೇವ ಕಕ್ಷಮ್ ॥
(ಸಂಜಯನ ವಚನ) – ಭಾರತ (ಉದ್ಯೋಗ. ೩೨/೨೮-೩೦)

೨) ಮಹಾಭಾರತದ ಉದ್ಯೋಗ ಪರ್ವದ ವಿದುರನೀತಿಯ ಈ ಭಾಗಕ್ಕೆ 'ಪ್ರಜಾಗರ–ಪರ್ವ' ಎಂದು ಹೆಸರು. ವಿದುರ ತಿಳಿಸಿದ ನೀತಿಯ ಸಾರಸರ್ವಸ್ವವನ್ನು ಆಚಾರ್ಯರು ಪಾಂಡವ–ರಿಗೆ ರಾಜ್ಯ ನೀಡುವುದೇ ಅತ್ಯಂತ ಪ್ರಧಾನವಾದ ಧರ್ಮ ಎಂದು ಇಲ್ಲಿ ಸಂಗ್ರಹಿಸಿರುವರು.

ಐಹಿಕಸ್ಯ ಸುಖಸ್ಯಾಪಿ ಕಾರಣಂ ತದನಿಂದಿತಮ್ ।
ಅನ್ಯಥಾ ಸರ್ವಪುತ್ರಾಣಾಂ ನಾಶಂ ಧರ್ಮಾತಿಲಂಘನಮ್ ॥ ೩೭ ॥

ಅ: ಪಾಂಡವರಿಗೆ ರಾಜ್ಯ ನೀಡುವುದು ಇಹಲೋಕದ ಸುಖಕ್ಕೂ ಕಾರಣವಾಗುವುದು. ನಿಂದೆಗೆ ಅವಕಾಶ ಒದಗಿಸದು. ಕೊಡದಿದ್ದಲ್ಲಿ ಧರ್ಮೋಲ್ಲಂಘನೆಯಾಗಿ ನಿನ್ನ ಸಕಲ ಪುತ್ರರ ವಿನಾಶಕ್ಕೂ ಕಾರಣವಾಗುವುದು.

ವಿ: ಪಾಂಡವರಿಗೆ ರಾಜ್ಯ ಕೊಡುವುದು ವಿದುರ ನೀತಿಯ ಸಾರ ಎಂದರೆ ಧರ್ಮಾದಿಗಳ ಪಾಲನ್ನು ಧರ್ಮಾದಿಗಳಿಗೇ ಒಪ್ಪಿಸುವುದು ಎಂದು ವಿದುರ ನೀತಿಯ ಸಾರಸರ್ವಸ್ವ ಎಂದರ್ಥ. ಧರ್ಮಾದಿಗಳಿಗೆ ಅನುಗುಣವಾಗಿ ನಡೆದಲ್ಲಿ ಪರಲೋಕ ಸುಖಕ್ಕೆ ಮಾತ್ರವಲ್ಲದೇ ಇಹಲೋಕದ ಸುಖಕ್ಕೂ ಅದು ಸಾಧನವಾಗುವುದು. ಹಾಗೆ ಧರ್ಮ ತಪ್ಪುವುದು ರಾಜ್ಯನಾಶಕ್ಕೆ ಮಾತ್ರವಲ್ಲದೇ ಪುತ್ರನಾಶಕ್ಕೂ ಕಾರಣ ಎನ್ನುವ ಮೂಲಕ ಧರ್ಮವಿರೋಧಿಗಳು ಸಂತತಿರಹಿತರಾಗಿ ವ್ಯಥೆ ಪಡುವರು ಎಂಬ ವಿಶೇಷಾಂಶವೂ ಸೂಚಿತ.

ತತ್ರ ಭಾವಮಕೃತ್ವಾ ಸ ಜ್ಞಾನಾದಿಚ್ಛನ್ನಘಕ್ಷಯಮ್ ।
ವಿಷ್ಣೋಃ ಸ್ವರೂಪಂ ಪಪ್ರಚ್ಛ ಸೋಽಸ್ಮರಚ್ಚ ಸನಾತನಮ್ ॥ ೩೮ ॥

---

೩೭. ಪ್ರದಾಯೈಷಾಮುಚಿತಂ ತಾತ ರಾಜ್ಯಂ ಸುಖೀ ಪುತ್ರೈಃ ಸಹಿತೋ ಮೋದಮಾನಃ ॥
– ಭಾರತ (ಉದ್ಯೋಗ. ೩೩/೧೨೩)

೩೮. ಏವಮೇತದ್ ಯಥಾ ತ್ವಂ ಮಾಮನುಶಾಸಸಿ ನಿತ್ಯದಾ ।
ಮಮಾಪಿ ಚ ಮತಿಃ ಸೌಮ್ಯ ಭವತ್ಯೇವಂ ಯಥಾऽऽತ್ಥ ಮಾಮ್ ॥
ಸಾ ತು ಬುದ್ಧಿಃ ಕೃತಾऽಷ್ಯೇವಂ ಪಾಂಡವಾನ್ ಪ್ರತಿ ಮೇ ಸದಾ ।
ದುರ್ಯೋಧನಂ ಸಮಾಸಾದ್ಯ ಪುನರ್ವಿಪರಿವರ್ತತೇ ॥
(ವಿದುರನನ್ನು ಕುರಿತು ಧೃತರಾಷ್ಟ್ರನ ವಚನ) – ಭಾರತ (ಉದ್ಯೋಗ. ೪೦/೩೦,೩೧)

೩೮. ಚಿಂತಯಾಮಾಸ ವಿದುರಸ್ತಮೃಷಿಂ ಶಂಸಿತವ್ರತಮ್ ।
ಸ ಚ ತಚ್ಚಿಂತಿತಂ ಜ್ಞಾತ್ವಾ ದರ್ಶಯಾಮಾಸ ಭಾರತ ॥ - ಭಾರತ (ಉದ್ಯೋಗ. ೪೧/೮)

೩೮. ಸ ವಿದುರಃ ಸನಾತನಂ ಸನಾತನಾಖ್ಯಂ ಋಷಿಂ ಅಸ್ಮರತ್ ಚಿಂತಯಾಮಾಸ । – (ಜ.)

ಅ: ಅದಕ್ಕೆ ಮನಸ್ಸು ಮಾಡದೆ ಧೃತರಾಷ್ಟ್ರ ಬ್ರಹ್ಮಜ್ಞಾನದಿಂದ ಪಾಂಡವದ್ವೇಷದ ಪಾತಕವನ್ನು ಕಳೆದುಕೊಳ್ಳಲೆಂದು ವಿಷ್ಣುವಿನ ಸ್ವರೂಪದ ಬಗ್ಗೆ ಕೇಳಿದ; ವಿದುರ ಆಗ ಸನಾತನನನ್ನು ಸ್ಮರಿಸಿದ.

ವಿ: ೧) 'ಸಕಲ ಪಾಪಗಳನ್ನೂ ಸಹ ಬ್ರಹ್ಮಜ್ಞಾನ ನಾಶಪಡಿಸುವುದು' ಎಂಬ ಶಾಸ್ತ್ರವಚನವನ್ನು ಗಮನಿಸಿ ಧೃತರಾಷ್ಟ್ರ ಪಾಂಡವರಿಗೆ ರಾಜ್ಯವನ್ನು ನೀಡಬಯಸದೆ ಅದರಿಂದ ಬರುವ ಪಾಪವನ್ನು ಬ್ರಹ್ಮಜ್ಞಾನದಿಂದ ಕಳೆದುಕೊಳ್ಳಬಯಸಿ ಅಂತಹ ಪರಬ್ರಹ್ಮನಾದ ವಿಷ್ಣುವಿನ ಸ್ವರೂಪವನ್ನು ತಿಳಿಸಲು ವಿದುರನನ್ನು ಕೇಳಿಕೊಂಡ.

೨) ಆಗ ವಿದುರ ತಾನು ಶೂದ್ರ ಯೋನಿಯಲ್ಲಿ ಜನಿಸಿದವನಾದ್ದರಿಂದ ಬ್ರಹ್ಮ ತತ್ವದ ವಿವೇಚನೆಗೆ ಅರ್ಹತೆ ಇಲ್ಲದವನು ಎಂದು ತಿಳಿಸಿ ಧೃತರಾಷ್ಟ್ರನ ಅಪೇಕ್ಷೆಯನ್ನು ಪೂರೈಸಲೆಂದು ತನ್ನ ಗುರುವಾದ ಸನತ್ಸುಜಾತರನ್ನು ನೆನೆದ.

೩) ಸನತ್ಸುಜಾತರಿಗೆ ಸನಾತನ ಎಂದು ಮತ್ತೊಂದು ಹೆಸರು ಎಂಬುದನ್ನು ಸೂಚಿಸಲೆಂದು ಇಲ್ಲಿ ಸನತ್ಸುಜಾತಂ ಎನ್ನುವ ಬದಲು ಸನಾತನಂ ಎಂದಿರುವರು ಎಂದು ತಿಳಿಯಬೇಕು.

ಸನತ್ಸುಜಾತೀಯ

ಸ ಆಗತ್ಯಾವದತ್ ತತ್ತ್ವಂ ವಿಷ್ಣೋರ್ಮಾಯಾವಿನಃ ಶುಭಾ ।
ನ ಗತಿಶ್ಚೇತ್ಯಥ ಪ್ರಾತಃ ಸಂಜಯಃ ಪಾಂಡವೋದಿತಮ್ ।
ಅವದದ್ಧೃತರಾಷ್ಟ್ರಾಯ ಸಭಾಯಾಂ ಕುರುಸನ್ನಿಧೌ ॥ ೩೯ ॥

---

೩೮. ಸೋಽಸ್ಮರಚ್ಚ ಸನಾತನಮಿತಿ । ದುರ್ಯೋಧನಾದಿಮಾಯಾವಿನಾಂ ಶುಭಗತಿರ್ನಾಸ್ತೀತಿ ಪರ್ಯವಸಾನಸ್ಯ ಕರ್ತವ್ಯತ್ವಾತ್ । ಸ್ವೇನೈವ ತದುಕ್ತಾ ದುರ್ಯೋಧನಾದ್ಯಸೂಯಯಾ ವಕ್ತೀತಿ ರಾಜ್ಞಃ ಅವಿಶ್ವಾಸಃ ಸ್ಯಾದತಃ ಸನಾತನಮೃಷಿಮಸ್ಮರದಿತಿ ಭಾವ ಇತಿ ಕೇಚಿತ್ । ವಸ್ತುತಸ್ತು –

ಶೂದ್ರಯೋನಾವಹಂ ಜಾತೋಽನ್ಯದ್ವಕ್ತುಮುತ್ಸಹೇ ।
ಕವೇರಸ್ಯ ತು ಯಾ ಬುದ್ಧಿರ್ವೇದ ತಾಂ ಶಾಶ್ವತೀಮಹಮ್ ।
ಬ್ರಾಹ್ಮೀಂ ತು ಯೋನಿಮಾಪನ್ನೋ ಸುಗುಹ್ಯಮಪಿ ಯೋ ವದೇತ್ ॥'

ಇತ್ಯಾದಿ ಭಾರತೇ ವಿದುರೇಣ ಸ್ವಯಂವಕ್ತವ್ಯಮುಕ್ತ್ವಾ ಯಚ್ಚ ಸ್ವೇನಾವಕ್ತವ್ಯಂ ತದ್ವಚನಾಯ ಋಷಿರಸ್ಮರದಿತಿ ನಿಮಿತ್ತಮುಕ್ತಮ್ । ಶೂದ್ರಾಣಾಮುತ್ಸರ್ಗತೋ ನೋಪದೇಶಾಧಿಕಾರ ಇತಿ ಶಿಷ್ಟಾರ್ಥಂ ವಿದುರೇಣ ತಥೋಕ್ತಮಿತಿ ಜ್ಞೇಯಮ್। –(ತಾ.)

೩೯. ವಿಷ್ಣೋರ್ಮಾಯಾವಿನ ಇತ್ಯತ್ರ ವಿಷ್ಣೋಸ್ತತ್ತ್ವಂ ಮಾಯಾವಿನಃ ಶುಭಾ ಗತಿಶ್ಚನೇತ್ಯವದತ್ ॥ – (ವಾ.)

೩೯. ಮಾಯಾವಿನಃ ಕಪಟಿನಃ । – (ಜ.)

ಅ: ಸನತ್ಸುಜಾತ ಅಲ್ಲಿಗೆ ಆಗಮಿಸಿ ವಿಷ್ಣುವಿನ ಸ್ವರೂಪವನ್ನು ತಿಳಿಸಿಕೊಟ್ಟ, ಕಪಟಿಗೆ ಸದ್ಗತಿ ಲಭಿಸದೆಂದೂ ತಿಳಿಸಿದ. ಮಾರನೆಯ ದಿನ ಪ್ರಾತಃಕಾಲದಲ್ಲಿ ಸಭೆಯಲ್ಲಿ ಸಂಜಯ ಕೌರವರೆಲ್ಲರ ಸಮಕ್ಷದಲ್ಲಿ ಪಾಂಡವರ ಸಂದೇಶವನ್ನು ತಿಳಿಸಿದ.

ವಿ: ಸನತ್ಸುಜಾತ ಉಪದೇಶಿಸಿದ ಆ ತಾತ್ವಿಕ ಭಾಗ ಮಹಾಭಾರತದಲ್ಲಿ ಸನತ್ಸುಜಾತ ಪರ್ವ ಎಂಬ ಉಪಪರ್ವದಲ್ಲಿ ಸಂಗೃಹೀತವಾಗಿದೆ.

ಧರ್ಮರಾಜನ ಧರ್ಮಜಿಜ್ಞಾಸೆ

ತಚ್ಛ್ರುತ್ವಾ ಸ ತು ಭೀತೋಽಪಿ ಪುತ್ರಸ್ನೇಹಾನುಗೋ ನೃಪಃ ।
ರಾಜ್ಯಂ ನಾದಾತ್ ಪಾಂಡವಾನಾಂ ತತೋ ಧರ್ಮಸುತೋ ನೃಪಃ ॥ ೪೦ ॥

ಯದುಕ್ತವಾನ್ ಸಂಜಯಾಯ ಯದಿ ದಿತ್ಸತಿ ನಃ ಪಿತಾ ।
ರಾಜ್ಯಂ ತದಾ ತ್ವಮಾಗಚ್ಛ ವಿದುರೋ ವಾ ನ ಚೇನ್ನ ಚ ॥ ೪೧ ॥

ಅ: ಅದನ್ನು ಕೇಳಿ ಧೃತರಾಷ್ಟ್ರ ಭಯಗೊಂಡರೂ ಪುತ್ರಮೋಹಕ್ಕೆ ವಶನಾದವನಾಗಿ ಪಾಂಡವರಿಗೆ ರಾಜ್ಯ ನೀಡದಾದ. ಬಳಿಕ ರಾಜನಾದ ಯುಧಿಷ್ಠಿರ ಸಂಜಯನಿಗೆ 'ನಮ್ಮ ತಂದೆ ನಮಗೆ ರಾಜ್ಯ ನೀಡುವುದಿದ್ದಲ್ಲಿ ನೀನು ಬಾ, ಅಥವಾ ವಿದುರ ಬರಲಿ. ಇಲ್ಲವಾದಲ್ಲಿ ಬೇಡ' ಎಂದು ತಿಳಿಸಿದ್ದ.

ವಿ: ೧) ಸಂಜಯ ತಿಳಿಸಿದ ಪಾಂಡವರ ಸಂದೇಶದಿಂದ ಯುದ್ಧ ಅನಿವಾರ್ಯ ಎಂದು ತಿಳಿದ ಧೃತರಾಷ್ಟ್ರ ಅದರಲ್ಲಿ ತನ್ನ ಮಕ್ಕಳು ಅಳಿಯುವರು ಎಂದು ಭಯಗೊಂಡ. ಆದರೂ ಪುತ್ರವ್ಯಾಮೋಹದಿಂದಾಗಿ ಪಾಂಡವರಿಗೆ ರಾಜ್ಯ ಕೊಡಿಸುವ ಕಾರ್ಯದಲ್ಲಿ ತೊಡಗದಾದ.

೨) ಅತ್ತ ಧರ್ಮರಾಜ ರಾಜ್ಯ ನೀಡುವುದಿದ್ದಲ್ಲಿ ಸಂಜಯ ಅಥವಾ ವಿದುರರಲ್ಲಿ ಒಬ್ಬರು ಬಂದು ಆ ವಿಷಯವನ್ನು ತಿಳಿಸಬೇಕು ಎಂದು ತಿಳಿಸಿದ್ದ. ಹಾಗೆ ಅವರಾರೂ ಬಾರದಿದ್ದಾಗ ಮುಂದಿನ ಕಾರ್ಯದ ಬಗ್ಗೆ ಆಲೋಚಿಸಲೆಂದು ಕೃಷ್ಣನೊಂದಿಗೆ ಮಂತ್ರಾಲೋಚನೆ ನಡೆಸಿದ ಎಂದರ್ಥ.

---

೩೯. ಮಾಯಾವಿನಃ ಶುಭಾ ನ ಗತಿಶ್ಚೇತಿ–

'ಬಾಹ್ಯಾನಿ ನಿರ್ಮಲಾನ್ಯೇವ ಇಂದ್ರಿಯಾಣಿ ಭವಂತಿ ಚ ।
ಕೂಲಾನಿ ಭಾವಯಂತೀ ಚ ಮನಶ್ಚ ಕಲುಷಂ ಭವೇತ್ ॥
ತಥಾ ತಂ ಮುಷ್ಣಾ ಮೇಧ್ಯಂ ಗೃಹೀತ್ವಾ ಯೋ ವ್ಯವಸ್ಥಿತಃ ।
ಬಹಿಃಪ್ರಕ್ಷಾಲನಂ ಕುರ್ಯಾತ್ ಕಿಂ ಭವೇತ್ ತಸ್ಯ ಕೇಶವ' ಇತಿ ಹರಿವಂಶೇ । – (ಮ.)

ರಾಯಭಾರಕ್ಕೆ ಶ್ರೀಕೃಷ್ಣ

ತಾವಥಾನಾಗತೌ ಜ್ಞಾತ್ವಾ ಮಂತ್ರಯಾಮಾಸ ಶೌರಿಣಾ ।
ಸೋಽಪ್ಯಾಹಾಹಂ ಗಮಿಷ್ಯಾಮಿ ಸಭಾಯಾಮೃಷಿಸನ್ನಿಧೌ ॥ ೪೨ ॥

ವಕ್ಷ್ಯೇ ಪಥ್ಯಾನಿ ಯುಕ್ತಾನಿ ಯದಿ ನಾಸೌ ಗ್ರಹಿಷ್ಯತಿ ।
ವಧ್ಯಃ ಸರ್ವಸ್ಯ ಲೋಕಸ್ಯ ಸ ಭವೇತ್ ಸರ್ವಧರ್ಮಹಾ ॥ ೪೩ ॥

ಅ: ಅವರಿಬ್ಬರೂ ಬಾರದಿದ್ದುದನ್ನು ತಿಳಿದು ಕೃಷ್ಣನೊಂದಿಗೆ ಮಂತ್ರಾಲೋಚನೆಯಲ್ಲಿ ತೊಡಗಿದ. ಆಗ ಕೃಷ್ಣನುಡಿದ 'ನಾನು ತೆರಳುವೆ, ಸಭೆಯಲ್ಲಿ ಋಷಿಗಳ ಸಮಕ್ಷಮದಲ್ಲಿ ಹಿತಕರವಾದ ಯುಕ್ತ ವಚನಗಳನ್ನಾಡುವೆ. ಅವನು ಅದನ್ನು ಒಪ್ಪಿಕೊಳ್ಳದಿದ್ದಲ್ಲಿ ಸಕಲ ಧರ್ಮಗಳನ್ನೂ ಪರಿತ್ಯಾಗ ಮಾಡಿ ಎಲ್ಲ ಜನರ ಕಣ್ಣಿಗೂ ದುರ್ಯೋಧನ ವಧಾರ್ಹನೆನ್ನಿಸುವನು'.

ವಿ: ೧) ಸಂಜಯ ವಿದುರರ ಮೂಲಕ ಧೃತರಾಷ್ಟ್ರನ ಪ್ರತಿಸಂದೇಶ ಬಾರದಿದ್ದುದರಿಂದ ಅವರು ರಾಜ್ಯ ನೀಡಲಾರರು ಎಂಬುದು ಸ್ಪಷ್ಟ. ಆದರೂ ಜನಾಪವಾದಕ್ಕೆ ಅವಕಾಶ ನೀಡದಿರಲಿ ಎಂದು ಕೃಷ್ಣ ತಾನೇ ರಾಯಭಾರಿಯಾಗಿ ಕೌರವ ಸಭೆಗೆ ತೆರಳಿದ.

೨) ಕೃಷ್ಣ ಹೀಗೆ ಮಾಡುವ ಮೂಲಕ ಯುದ್ಧದಂತಹ ಆಪತ್ತನ್ನು ಆದಷ್ಟು ತಪ್ಪಿಸುವುದು ಕರ್ತವ್ಯ, ಅತ್ಯಂತ ಅನಿವಾರ್ಯವಲ್ಲದ ಹೊರತು ಯುದ್ಧ ಉಚಿತವಲ್ಲ ಎಂಬ ತತ್ವವನ್ನು ಜಗತ್ತಿಗೆ ಸಾರಿದ ಎಂದು ತಿಳಿಯಬೇಕು.

೩) ಸಭೆಯಲ್ಲಿ ಸರ್ವರ ಸಮಕ್ಷದಲ್ಲಿ ಅಂತಹ ಸಂದೇಶ ನೀಡಿದಾಗ ಒಪ್ಪದ ದುರ್ಯೋಧನ ವಧಾರ್ಹ ಎಂದು ಸಕಲರಿಗೂ ಮನವರಿಕೆಯಾಗುವುದು. ಅದರಿಂದ ಲೋಕನಾಶ ಮಾಡಿದ ಅಪಕೀರ್ತಿ ಪಾಂಡವರಿಗೆ ತಟ್ಟದು ಎಂಬುದು ಕೃಷ್ಣನ ಉದ್ದೇಶವಾಗಿತ್ತು ಎಂದರ್ಥ.

---

೪೨. ಅವಾಚ್ಯಾಸ್ತು ಭವಿಷ್ಯಾಮಃ ಸರ್ವಲೋಕೇ ಮಹೀಕ್ಷಿತಾಮ್ ।
ನ ಚಾಪಿ ಮಮ ಪರ್ಯಾಪ್ತಾಃ ಸಹಿತಾಃ ಸರ್ವಪಾರ್ಥಿವಾಃ ॥
ಕ್ರುದ್ಧಸ್ಯ ಸಂಯುಗೇ ಸ್ಥಾತುಂ ಸಿಂಹಸ್ಯೇವೇತರೇ ಮೃಗಾಃ ।
ಅಯಂ ಚೇತ್ ತೇ ಪ್ರವರ್ತಂತೇ ಮಯಿ ಕಿಂಚಿದಸಾಂಪ್ರತಮ್ ॥
ನಿರ್ದಹೇಯಂ ಕುರೂನ್ ಸರ್ವಾನಿತಿ ಮೇ ಧೀಯತೇ ಮತಿಃ ॥
ನ ಜಾತು ಗಮನಂ ಪಾರ್ಥ ಭವೇತ್ ತತ್ರ ನಿರರ್ಥಕಮ್ ॥
ಅರ್ಥಪ್ರಾಪ್ತಿಃ ಕದಾಚಿತ್ ಸ್ಯಾದಂತತೋ ವಾಽಪ್ಯವಾಚ್ಯತಾ ॥
(ಯುಧಿಷ್ಠಿರನನ್ನು ಕುರಿತು ಶ್ರೀಕೃಷ್ಣನ ವಚನ) – ಭಾರತ(ಉದ್ಯೋಗ. ೭೨/೮೫-೮೮)

೪೩. ಯದಿ ನಾಸೌ ಗ್ರಹಿಷ್ಯತೀತ್ಯತ್ರ ಅಸೌ = ದುರ್ಯೋಧನಃ ॥ – (ವಾ.)

ಭೀಮನ ಲೋಕಸಂಗ್ರಹ

ಇತ್ಯುಕ್ತೇ ವೈರಮಾತ್ಮೋತ್ಥಂ ಲೋಕಮಧ್ಯೇ ಪ್ರಹಾಪಯನ್ ।
ಲೋಕಸಂಗ್ರಹಣಾರ್ಥಾಯ ಭೀಮಸೇನೋऽಬ್ರವೀದ್ವಚಃ ॥ ೪೪ ॥

ಅ: ಶ್ರೀಕೃಷ್ಣ ಹೀಗೆನ್ನಲು ಭೀಮಸೇನ ಅಂತಹ ವೈರ ತನ್ನಿಂದಾಯಿತು ಎಂಬ ಲೋಕ-ನಿಂದೆಯನ್ನು ತೊಡೆಯಲೆಂದು ಲೋಕಶಿಕ್ಷಣಕ್ಕೆಂದು ಹೀಗೆ ನುಡಿದ.

ನಾಸ್ಮನ್ನಿಮಿತ್ತಂ ನಾಶಃ ಸ್ಯಾತ್ ಕುಲಸ್ಯಾಪಿ ವಯಂ ಕುಲಮ್ ।
ರಕ್ಷಿತುಂ ಧಾರ್ತರಾಷ್ಟ್ರಸ್ಯ ಭವೇಮಾಧಶ್ಚರಾ ಇತಿ ॥ ೪೫ ॥

ಅ: 'ನನ್ನ ನಿಮಿತ್ತದಿಂದಾಗಿ ಕುಲನಾಶವಾಗದಿರಲಿ; ಕುಲರಕ್ಷಣೆಗೋಸ್ಕರವಾಗಿ ನಾವು ದುರ್ಯೋಧನನ ಕೆಳಗೆ ನಡೆಯುವೆವು'.

ವಿ: ೧) 'ಭೀಮಸೇನ ಕೌರವದ್ವೇಷಿ, ಅವನಿಂದಾಗಿ ಕುಲನಾಶವಾಗುವಂತಹ ಭಯಂಕರ ಯುದ್ಧ ನಡೆಯಿತು' ಎಂದು ಜನ ತಿಳಿಯುವುದು ಬೇಡ ಎಂಬ ಕಾರಣದಿಂದ ಭೀಮಸೇನ ತಾನು ದುರ್ಯೋಧನನಿಗಿಂತ ಕೆಳಗೆ ಇರಲು ಸಿದ್ಧ ಎನ್ನುವನು. ಎಂದರೆ, ದುರ್ಯೋಧನನ ಕೈ ಮೇಲಾದಂತೆ ಕಂಡರೂ ತಾವು ಸಂಧಿಗೆ ಸಿದ್ಧ ಎಂದು ಭೀಮನ ಮಾತಿನ ಭಾವ.

೨) ಭೀಮಸೇನ ಶುದ್ಧ ಭಾಗವತ ಧರ್ಮದಲ್ಲಿ ನಿರತ, ದುರ್ಯೋಧನನಂತಹ ಪಾಪಿಯ ಕೆಳಗೆ ನಡೆಯುವುದು ಅವನಿಂದ ಸರ್ವಥಾ ಸಾಧ್ಯವಾಗದ ಮಾತು. ಆದರೂ ಭೀಮ ಹಾಗೆ ಹೇಳಿದ್ದರ ಅಂತರಾರ್ಥ ಬೇರೆಯೇ ಆಗಿತ್ತು; ಯುದ್ಧ ನಡೆದು ದುರ್ಯೋಧನ ಮರಣಾನಂತರ ಕೆಲವು ಕಾಲ ಕೃತಕ ಸ್ವರ್ಗದಲ್ಲಿ ನೆಲೆಸುವನು. ಆಗ ಪಾಂಡವರು ಭೂಲೋಕದಲ್ಲಿ ರಾಜ್ಯಭಾರ

---

೪೪. ಲೋಕಸಂಗ್ರಹಣಾರ್ಥಾಯ ವಚೋऽಬ್ರವೀತ್। – (ಜ.)

೪೫. ಧಾರ್ತರಾಷ್ಟ್ರಸ್ಯ ಭವೇಮಾಧಶ್ಚರಾ ಇತ್ಯತ್ರ ಅಚ್ಛಿನ್ನಧರ್ಮೋ ಭೀಮಃ ಲೋಕಸಂಗ್ರಹಾಯಾಪಿ ಕೇವಲಂ ನಾನೃತಂ ವದೇತ್। ಅತಃ ಯುದ್ಧೇ ಮರಣಾನಂತರಂ ಕಿಂಚಿತ್ಕಾಲಂ ವೀರಸ್ವರ್ಗೇ ಸ್ಥಿತಸ್ಯ ಧಾರ್ತರಾಷ್ಟ್ರಸ್ಯ ಅಧಃ= ಭೂಲೋಕೇ। ಚರಾಃ = ರಾಜ್ಯಪರಿಪಾಲನಾಯ ಇತಸ್ತತಃ ಸಂಚಾರವಂತೋ ಭವೇಮ ಇತ್ಯಾಂತರೋऽರ್ಥಃ ॥ – (ವಾ.)

೪೫. ಅಧಶ್ಚರಾಃ ಸೇವಕಾಃ। – (ಜ.)

೪೫. ಅಪಿ ದುರ್ಯೋಧನಂ ಕೃಷ್ಣ ಸರ್ವೇ ವಯಮಧಶ್ಚರಾಃ।
ನೀಚೈರ್ಭೂತ್ವಾऽನುಯಾಸ್ಯಾಮೋ ಮಾ ಸ್ಮ ನೋ ಭಾರತಾ ನಶನ್ ॥ – ಭಾರತ (ಉದ್ಯೋಗ. ೭೪/೨೦)

ಮಾಡುತ್ತಾ ಇದ್ದದ್ದರಿಂದ ಅವನ ಕೆಳಗೆ ಇದ್ದಂತಾಗುವುದು ಎಂಬ ವಿಶೇಷಾರ್ಥ ವಾದಿರಾಜೀಯ–ದಲ್ಲಿದೆ.

೩) ಎಂದರೆ ದುರ್ಯೋಧನನಿಗೆ ತಗ್ಗಿ ನಡೆಯುವಂತೆ ತಾವು ವರ್ತಿಸಲು ಸಿದ್ಧ ಎಂಬುದು ಭೀಮಸೇನನ ಮಾತಿನ ಲೋಕರೀತಿಯ ನುಡಿಯಾದರೆ, ಅವನು ಕೆಲಕಾಲ ಸ್ವರ್ಗಲೋಕದಲ್ಲಿದ್ದಾಗ ತಾವು ಭೂಲೋಕದಲ್ಲಿ ರಾಜ್ಯಭಾರ ಮಾಡುತ್ತಾ ಕೆಳಗಿರುವೆವು ಎಂಬುದು ಅಂತರಾರ್ಥವಾಗಿತ್ತು ಎಂದರ್ಥ.

ಇಚ್ಛತಾऽಪ್ಯಖಿಲಾನ್ ಹಂತುಂ ಧಾರ್ತರಾಷ್ಟ್ರಾನ್ ದೃಢಾತ್ಮನಾ ।
ಭೀಮೇನೋಕ್ತೋ ವಾಸುದೇವೋ ಲೋಕಸಂಗ್ರಹಣೇಚ್ಛಯಾ ॥ ೪೬ ॥

ಅ: ಕೌರವರನ್ನೆಲ್ಲ ಕೊಲ್ಲಲೆಂದು ದೃಢವಾಗಿ ನಿಶ್ಚಯಿಸಿದ್ದರೂ ಭೀಮಸೇನ ಹಾಗೆ ಹೇಳಿದ್ದು ಲೋಕನೀತಿಯನ್ನು ತೋರಿಸಿಕೊಡುವ ಇಚ್ಛೆಯಿಂದ ಮಾತ್ರ.

ವಧಂ ತೇಷಾಂ ಧರ್ಮಮೇವ ಲೋಕೇ ಖ್ಯಾಪಯಿತುಂ ಹರಿಃ ।
ಆಕ್ಷಿಪನ್ನಿವ ಭೀಮಂ ತಂ ಯುದ್ಧಾಯ ಪ್ರೇರಯದ್ದೃಢಮ್ ॥ ೪೭ ॥

ಅ: ಕೌರವ ವಧೆ ಧರ್ಮವೇ ಆಗಿದೆ ಎಂದು ಲೋಕಕ್ಕೆ ತಿಳಿಸಿಕೊಡಲೆಂದು ಶ್ರೀಕೃಷ್ಣ ಭೀಮಸೇನನನ್ನು ಆಕ್ಷೇಪಿಸುವವನಂತೆ ತೋರಿ ಅವನನ್ನು ಯುದ್ಧಕ್ಕೆ ದೃಢವಾಗಿ ಪ್ರೇರಿಸಿದ.

ವಿ: ೧) ಮಹಾಭಾರತದಲ್ಲಿ ಭೀಮ ಕೃಷ್ಣರ ಮಧ್ಯೆ ಆಗ ವಾಗ್ವಾದ ನಡೆದಂತೆ ಕಾಣುವುದು. ಭೀಮ ಯುದ್ಧದಿಂದ ಹಿಮ್ಮೆಟ್ಟಿದಂತೆಯೂ, ಅವನ ಆ ಧೋರಣೆಯನ್ನು ಕೃಷ್ಣ ಆಕ್ಷೇಪಿಸಿದಂತೆಯೂ ಕಾಣುವುದು. ಇದು ಕೃಷ್ಣಭೀಮರಲ್ಲಿ ಒಮ್ಮತ ಇರಲಿಲ್ಲವೆಂಬಂತೆ ಕಾಣುವ ವಿಚಿತ್ರ ಪ್ರಸಂಗ.

೨) ಅದರ ಆಂತರ್ಯವನ್ನು ಶ್ರೀಮದಾಚಾರ್ಯರು ಇಲ್ಲಿ ವಿವರಿಸಿರುವರು. ವಾಸ್ತವವಾಗಿ ಕೃಷ್ಣಭೀಮರಲ್ಲಿ ಯಾವ ರೀತಿಯ ಭಿನ್ನಾಭಿಪ್ರಾಯವೂ ಸರ್ವಥಾ ಇಲ್ಲ. ಹಾಗೆ ಅವರು ವರ್ತಿಸಿದ್ದು ಲೋಕನೀತಿಯನ್ನು ತಿಳಿಸಿಕೊಡುವ ಸಲುವಾಗಿ ಮಾತ್ರ. ಕೌರವರ ವಧೆ ಅತ್ಯಂತ ಧರ್ಮ ಎಂದು ಲೋಕಕ್ಕೆ ತೋರಿಸಿಕೊಡುವುದು ಒಟ್ಟಾಗಿ ಅವರ ಮಾತಿನ ಭಾವವಾಗಿತ್ತು

---

೪೭. ಅಹೋ ಯುದ್ಧಾಭಿಕಾಂಕ್ಷಾಣಾಂ ಯುದ್ಧಕಾಲ ಉಪಸ್ಥಿತೇ ।
ಚೇತಾಂಸಿ ವಿಪ್ರತೀಪಾನಿ ಯತ್ ತ್ವಾಂ ಭೀರ್ಭೀಮ ವಿಂದತಿ ॥ – ಭಾರತ। (ಉದ್ಯೋಗ ೭೫/೧೫)

ಹರಿಯ ಮತವೇ ಹನುಮನ ಮತವು

ಅಭಿಪ್ರಾಯಂ ಕೇಶವಸ್ಯ ಜಾನನ್ ಭೀಮೋ ನಿಜಂ ಬಲಮ್ ।
ರಾಜ್ಞಾಂ ಮಧ್ಯೇऽವದತ್ ತಚ್ಚ ಕೃಷ್ಣೋ ಹ್ಯಧಿಕಮೇವ ಹಿ ॥ ೪೮ ॥

ಅ: ಶ್ರೀಕೃಷ್ಣನ ಮನೋಗತವನ್ನು ತಿಳಿದಿದ್ದ ಭೀಮ ತನ್ನ ನಿಜವಾದ ಬಲವನ್ನು ರಾಜರ ಮಧ್ಯೆ ಹೇಳಿಕೊಂಡ. ಕೃಷ್ಣ ಅದನ್ನು ಅದಕ್ಕಿಂತ ಮಿಗಿಲಾದುದು ಎಂದೇ ತಿಳಿಸಿದ.

ವಿ: ೧) ಭೀಮನ ಶಾಂತಿ ಪ್ರಸ್ತಾವನೆಯಂತಹ ಮಾತಿಗೆ ಕೃಷ್ಣ 'ಓಹೋ, ಭೀಮ ಯುದ್ಧಕ್ಕೆ ಅಂಜಿದಂತೆ ಕಾಣುವುದು, ಭೀಮನ ಈ ವರ್ತನೆ ಪರ್ವತ ಹಗುರವಾದಂತೆ, ಸಾಗರ ಬರಿದಾದಂತೆ ಅತ್ಯಾಶ್ಚರ್ಯಕರ' ಎನ್ನುವನು. ಆಗ ಭೀಮಸೇನ ತನಗೆ ಲೋಕದಲ್ಲಿ ಗೊತ್ತಿರದ ಒಂದೇ ಪದವೆಂದರೆ ಭಯ, ಇಂದ್ರಾದಿ ದೇವತೆಗಳೂ ತನ್ನ ಬಾಹುಗಳ ಮಧ್ಯೆ ಸಿಲುಕಿ ತಪ್ಪಿಸಿಕೊಳ್ಳಲಾರರು ಎಂದ ಮೇಲೆ ಈ ದುರ್ಯೋಧನಾದಿಗಳ ಭಯ ತನಗೆಲ್ಲಿದೆ. ಇಡೀ ಭೂಮಿಯನ್ನು ಸೀಳಿ ಹಾಕುವ ಸಾಮರ್ಥ್ಯ ತನ್ನದು ಎಂದು ತಿಳಿಸುವನು.

೨) ಕೃಷ್ಣ ಭೀಮನ ಆ ಮಾತುಗಳನ್ನು ಬಹಳವಾಗಿ ಅಭಿನಂದಿಸಿ ಭೀಮನ ನೈಜ ಸಾಮರ್ಥ್ಯ ಅವನು ತಿಳಿಸಿರುವುದಕ್ಕಿಂತ ಸಾವಿರಾರು ಪಾಲು ಮಿಗಿಲಾದುದು ಎಂದು ತಾನು ಬಲ್ಲೆ ಎಂದು ತಿಳಿಸಿದ. ಮುಂದೆ ನಡೆಯುವ ಯುದ್ಧದ ಭಾರ ಅವನದು ಎಂದೂ ಹೇಳಿದ.

---

೪೮. ಸರ್ವಥಾऽನಾರ್ಯಕರ್ಮೈತತ್ ಪ್ರಶಂಸಾ ಸ್ವಯಮಾತ್ಮನಃ ॥
ಅತಿವಾದಾಪವಿದ್ಧಸ್ತು ವಕ್ಷ್ಯಾಮಿ ಬಲಮಾತ್ಮನಃ ।
ಪಶ್ಯೇಮೇ ರೋದಸೀ ಕೃಷ್ಣ ಯಯೋರಾಸನ್ನಿಮಾಃ ಪ್ರಜಾಃ ॥
ಅಚಲೇ ಚಾಪ್ಯಪ್ರತಿಷ್ಠೇ ಚಾಪ್ಯನಂತಂ ಸರ್ವಮಾತರೌ ।
ಯದೀಮೇ ಸಹಸಾ ಕ್ರುದ್ಧೇ ಸಮೇಯಾತಾಂ ಶಿಲೇ ಇವ ॥
ಅಹಮೇತೇ ನಿಗೃಹ್ಣೀಯಾಂ ಬಾಹುಭ್ಯಾಂ ಸಚರಾಚರೇ ।
ಪಶ್ಯೈತದಂತರಂ ಬಾಹ್ವೋರ್ಮಹಾಪರಿಘಯೋರಿವ ॥
ಯ ಏತತ್ ಪ್ರಾಪ್ಯ ಮುಚ್ಯೇತ ನ ತಂ ಪಶ್ಯಾಮಿ ಪೂರುಷಮ್ ।
ಹಿಮವಾಂಶ್ಚ ಸಮುದ್ರಶ್ಚ ವಜ್ರೀ ವಾ ಬಲಭಿತ್ ಸ್ವಯಮ್ ॥
ಮಯಾऽಭಿಪನ್ನಂ ತ್ರಾಯೇರನ್ ಬಲಮಾಸ್ಥಾಯ ನ ತ್ರಯಃ ।
ಯುದ್ಧಾರ್ಹಾನ್ ಕ್ಷತ್ರಿಯಾನ್ ಸರ್ವಾನ್ ಪಾಂಡವೇಷ್ವಾತತಾಯಿನಃ ॥
ಅಧಃ ಪಾದತಲೇನೈತಾನಧಿಷ್ಯಾಸ್ಯಾಮಿ ಭೂತಲೇ ।...
ಸರ್ವಲೋಕಾದಭಿಕ್ರುದ್ಧಾನ್ನ ಭಯಂ ವಿದ್ಯತೇ ಮಮ ।
ಕಿಂತು ಸೌಹೃದಮೇವೈತತ್ ಕೃಪಯಾ ಮಧುಸೂದನ ।
ಸರ್ವಾಂಸ್ತಿತಿಕ್ಷೇ ಸಂಕ್ಲೇಶಾನ್ ಮಾ ಸ್ಮ ನೋ ಭರತಾನಶನ್ ॥

(ಶ್ರೀಕೃಷ್ಣನನ್ನು ಕುರಿತು ಭೀಮನ ವಚನ) – ಭಾರತ (ಉದ್ಯೋಗ. ೭೬/೬-೧೨,೧೮)

೩) ಭೀಮನ ಕೌರವರ ಮೇಲಿನ ದ್ವೇಷ ತಾತ್ತ್ವಿಕವಾದುದೇ ಹೊರತು ವೈಯಕ್ತಿಕ–ವಾದುದಲ್ಲ ಎಂಬ ಸತ್ಯವನ್ನು ಲೋಕ ಅರಿಯಲಿ ಎಂದು ಕೃಷ್ಣ ಹಾಗೆ ಮಾಡಿದ ಎಂಬುದು ಒಟ್ಟು ತಾತ್ಪರ್ಯ.

ಶಶಂಸ ಸತ್ಯೈಃ ಸದ್ವಾಕ್ಯೈ ರಾಜ್ಞಾಂ ಮಧ್ಯೇ ಪ್ರಕಾಶಯನ್ ।
ವಧಂ ಕುರೂಣಾಂ ಸದ್ಧರ್ಮಂ ಗುಣಾನ್ ಭೀಮಸ್ಯ ಚಾಮಿತಾನ್ ॥ ೪೯ ॥

ಅ: ಕೃಷ್ಣ ತತ್ವಪ್ರತಿಪಾದಕವಾದ ಉತ್ತಮ ವಾಕ್ಯಗಳಿಂದ ಕೌರವರ ವಧೆ ಉತ್ತಮ ಧರ್ಮವೆಂಬುದನ್ನು, ಭೀಮನ ಗುಣಗಳು ಅಪರಿಮಿತವೆಂಬುದನ್ನು ರಾಜರ ಮಧ್ಯೆ ಪ್ರಕಾಶ-ಪಡಿಸಿದ.

ನಿತ್ಯಮೇಕಮನಸ್ಕೌ ತಾವಪಿ ಕೇಶವಮಾರುತೀ ।
ಏವಂ ಲೋಕಸ್ಯ ಸಂವಾದಹೇತೋಃ ಸಂವಾದಮಕ್ರತಾಮ್ ॥ ೫೦ ॥

ಅ: ಕೃಷ್ಣ, ಭೀಮರು ಇಬ್ಬರೂ ಸದಾ ಒಂದೇ ವಿಧವಾದ ಮನೋಭಾವ ಹೊಂದಿದವರು. ಆದರೂ ಲೋಕಕ್ಕೆ ಆ ಬಗ್ಗೆ ನಿಶ್ಚಯ ಜ್ಞಾನ ಹುಟ್ಟಲಿ ಎಂಬ ಕಾರಣದಿಂದ ಹಾಗೆ ತೋರಿಕೆಯ ವಿವಾದವನ್ನು ಮಾಡಿದರು.

---

೪೯. ಭಾವಂ ಜಿಜ್ಞಾಸಮಾನೋಽಹಂ ಪ್ರಣಯಾದಿದಮಬ್ರುವಮ್ ।
ನ ಚಾಕ್ಷೇಪಾನ್ನ ಪಾಂಡಿತ್ಯಾನ್ನ ಕ್ರೋಧಾನ್ನ ವಿವಕ್ಷಯಾ ॥
ವೇದಾಹಂ ತವ ಮಾಹಾತ್ಮ್ಯಮುತ ತೇ ವೇದ ಯದ್ಬಲಮ್ ।
ಉತ ತೇ ವೇದ ಕರ್ಮಾಣಿ ನ ತ್ವಾಂ ಪರಿಭವಾಮ್ಯಹಮ್ ॥
ಯತ್ ಕಿಂಚಾತ್ಮನಿ ಕಲ್ಯಾಣಂ ಸಂಭಾವಯಸಿ ಪಾಂಡವ ।
ಸಹಸ್ರಗುಣಮಪ್ಯೇತತ್ ತ್ವಯಿ ಸಂಭಾವಯಾಮ್ಯಹಮ್ ॥
ಯಾದೃಶೇ ಚ ಕುಲೇ ಜನ್ಮ ಸರ್ವರಾಜಾಭಿಪೂಜಿತೇ ।
ಬಂಧುಭಿಶ್ಚ ಸುಹೃದ್ಭಿಶ್ಚ ಭೀಮ ತ್ವಮಸಿ ತಾದೃಶಃ ॥
ಅಸ್ಮಿನ್ ಯುದ್ಧೇ ಭೀಮಸೇನ ತ್ವಯಿ ಭಾರಃ ಸಮಾಹಿತಃ ।
ಧೂರರ್ಜುನೇನ ವೋಢವ್ಯಾ ವೋಢವ್ಯ ಇತರೋ ಜನಃ ॥ – ಭಾರತ (ಉದ್ಯೋಗ. ೭೭/೧-೪,೧೮)

೫೦. ಸಂವಾದಮಕ್ರತಾಮಿತ್ಯತ್ರ ಲೋಕಸಂವಾದಹೇತೋಃ ಸಮೀಚೀನೋ ಭೀಮ ಇತಿ ವಚನೋಪ-ಪಾದನಾರ್ಥಂ ಸಂವಾದಂ= ಹೃದಿ ಸಮೀಚೀನಬಹಿರ್ವಾದಂ ವಿವಾದಂ ಅಕ್ರತಾಮಿತಿ ವೈದಿಕಃ ಪ್ರಯೋಗಃ । ಅಕುರುತಾಮಿತ್ಯರ್ಥಃ । ಸಂವಾದಸ್ಯ ಮನಃ ಪೂರ್ವಕತ್ವಾಭಾವಸೂಚನಾಯ ಪ್ರಯೋಗವ್ಯತ್ಯಾಸಃ ॥ – (ವಾ.)

ವಿ: ೧) ಕೃಷ್ಣ ಭೀಮರ ಮಧ್ಯೆ ಎಂದೂ ಯಾವ ವಿಷಯದ ಬಗ್ಗೆಯೂ ಎಷ್ಟು ಮಾತ್ರಕ್ಕೂ ಭಿನ್ನಾಭಿಪ್ರಾಯ ಸರ್ವಥಾ ಇಲ್ಲ. ಆದರೂ ಅವರು ಹಾಗೆ ತೋರಿಕೆಯ ವಿವಾದವನ್ನು ಮಾಡಿದ್ದು ಆ ಮೂಲಕ ಕೌರವರ ವಧೆ ತಾತ್ವಿಕ ಹಿನ್ನೆಲೆಯಲ್ಲಿ ಅತ್ಯಂತ ಅನಿವಾರ್ಯ ಎಂದು ಜಗತ್ತಿಗೆ ಸಾರಲು ಎಂದು ತಿಳಿಯಬೇಕು ಎಂದರ್ಥ.

೨) ಅದು ಮೇಲ್ನೋಟಕ್ಕೆ ವಿವಾದವಾದರೂ ವಾಸ್ತವಿಕವಾಗಿ ಸಂವಾದವೇ ಆಗಿತ್ತು ಎಂಬುದು ಇದರ ತಾತ್ಪರ್ಯ. ಕೃಷ್ಣ ಭೀಮರ ಈ ವಿವಾದ ತೋರಿಕೆಯದು ಎಂಬುದನ್ನು ಸೂಚಿಸ–ಲೆಂದೇ '**ಅಕುರುತಾಂ**' ಎಂಬ ಲೌಕಿಕ ಪ್ರಯೋಗದ ಬದಲು '**ಅಕೃತಾಂ**' ಎಂಬ ವೈದಿಕಪ್ರಯೋಗ ಬಂದಿದೆ ಎಂಬ ವಿಶೇಷಾಂಶ ವಾದಿರಾಜೀಯದಲ್ಲಿದೆ.

ಅರ್ಜುನಾದಿಗಳ ಅಭಿಪ್ರಾಯ

ತತಃ ಕೃಷ್ಣೋಽರ್ಜುನಂ ಚೈವ ಕೃಪಾಳುಂ ಸಂಧಿಕಾಮುಕಮ್ ।
ಹೇತುಮದ್ಭಿಃ ಶುಭೈರ್ವಾಕ್ಯೈ ರನುನೀಯ ಜಗತ್ಪತಿಃ ।
ಉಕ್ತೋ ಮಾನುಷಯಾ ಬುದ್ಧ್ಯಾ ನಕುಲೇನ ಸುನೀತಿವತ್ ॥ ೫೧ ॥

ಅ: ಬಳಿಕ ಕೃಷ್ಣ ಸಂಧಿಯನ್ನು ಬಯಸಿದ ಕರುಣಾಳುವಾದ ಅರ್ಜುನನನ್ನು ಸಕಾರಣವಾದ ಶುಭವಾಕ್ಯಗಳಿಂದ ಸಮಾಧಾನಪಡಿಸಿದ. ಜಗತ್ಪತಿಯಾದ ಅವನನ್ನು ಕುರಿತು ಮನುಷ್ಯನೆಂಬ ಭಾವನೆಯಿಂದ ನಕುಲ ಒಬ್ಬ ನೀತಿಜ್ಞನಂತೆ ನುಡಿದ.

ವಿ: ೧) ಅರ್ಜುನ ತನ್ನ ನಿಲುವಿನಲ್ಲಿ ಖಚಿತತೆಯನ್ನು ತೋರದೇ ಸಂಧಿಯಾದರೂ ಸರಿ, ಯುದ್ಧವಾದರೂ ಸರಿ ಎಂಬ ಭಾವನೆಯನ್ನು ವ್ಯಕ್ತಪಡಿಸಿದ; ಕೃಷ್ಣ ಆಗ ಯುಕ್ತಿಯುಕ್ತವಾಗಿ ಯುದ್ಧವೇ ಅಂತಹ ಅಯೋಗ್ಯರ ಮೇಲೆ ಉಚಿತ ಎಂಬುದನ್ನು ತಿಳಿಸಿದ.

೨) ಆಗ ನಕುಲ ಕೃಷ್ಣನನ್ನು ಒಬ್ಬ ಮಾನವನೆಂದು ತಪ್ಪು ತಿಳಿದು ರಾಜನೀತಿಜ್ಞನಂತೆ ಸಂಧಾನದ ವಿಧಿವಿಧಾನದ ಬಗ್ಗೆ ಮಾತನಾಡಿದ. ನಕುಲ ಭಿನ್ನಧರ್ಮನಾದ ಪ್ರಸಂಗದಲ್ಲಿ ಇದೂ ಒಂದು ಎಂದು ತಿಳಿಯಬಹುದು.

ಶೌರ್ಯಪ್ರಕಾಶನಾಯೈವ ಯುದ್ಧಂ ಯೋಜಯತಾಂ ಭವಾನ್ ।
ಇತ್ಯುಕ್ತಃ ಸಹದೇವೇನ ಯುಯುಧಾನೇನ ಚಾಚ್ಯುತಃ ॥ ೫೨ ॥

ಅ: ಆಗ ಸಹದೇವ ತನ್ನ ಪರಾಕ್ರಮವನ್ನು ತೋರಿಸಿಕೊಳ್ಳಲೆಂದು ಯುದ್ಧವನ್ನೇ ಏರ್ಪಡಿಸುವಂತೆ ಸಲಹೆ ನೀಡಿದ; ಸಾತ್ಯಕಿಯೂ ಸಹ ಹಾಗೆಯೇ ಹೇಳಿದ.

ವಿ: ಸಹದೇವ ಸಾತ್ಯಕಿಯರು ಯುದ್ಧವನ್ನು ಕರ್ತವ್ಯ ಎಂದು ಯಥಾರ್ಥವಾಗಿಯೇ ಹೇಳಿದರೂ ಅದರ ಹಿಂದಿನ ಭಾವ ಧರ್ಮಬುದ್ಧಿಯೊಂದಿಗೆ, ಶೌರ್ಯ ಪ್ರದರ್ಶನ ಮಾತ್ರ ಆಗಿತ್ತು ಎಂದರ್ಥ.

ದ್ರೌಪದಿಯ ದೃಢನಿಶ್ಚಯ

ದಸ್ಯೂನಾಂ ನಿಗ್ರಹೋ ಧರ್ಮಃ ಕ್ಷತ್ರಿಯಾಣಾಂ ಯತಃ ಪರಃ ।
ಅತೋ ನ ಧಾರ್ತರಾಷ್ಟ್ರೈರ್ನಃ ಸಂಧಿಃ ಸ್ಯಾದಿತಿ ಪಾರ್ಷತೀ ।
ಜಗಾದ ಕೃಷ್ಣಂ ಸೋಽಪ್ಯೇನಾಮೋಮಿತ್ಯುಕ್ತ್ವಾವಿನಿರ್ಯಯೌ ॥ ೫೩ ॥

ಅ: ಆಗ ದ್ರೌಪದಿ 'ದಸ್ಯುಗಳನ್ನು ನಿಗ್ರಹಿಸುವುದು ಕ್ಷತ್ರಿಯರಿಗೆ ಪರಮ ಧರ್ಮ, ಆದ್ದರಿಂದ ಕೌರವರೊಂದಿಗೆ ನಮಗೆ ಸರ್ವಥಾ ಸಂಧಿ ಕೂಡದು; ಎಂದು ಕೃಷ್ಣನಿಗೆ ತಿಳಿಸಿದಳು. ಕೃಷ್ಣ ಅವಳಿಗೆ 'ಹಾಗೇ ಆಗಲಿ' ಎಂದು ವಚನವಿತ್ತು ತೆರಳಿದ.

೫೩.. ದಸ್ಯೂನಾಂ ನಿಗ್ರಹಃ ಜೀವಗ್ರಾಹಃ ಹನನಮಿತ್ಯರ್ಥಃ। – (ಜ.)

೫೩.. ನ ಹಿ ಸಾಮ್ನಾ ನ ದಾನೇನ ಶಕ್ಯೋಽರ್ಥಸ್ತೇಷು ಕಶ್ಚನ।
ತಸ್ಮಾತ್ ತೇಷು ನ ಕರ್ತವ್ಯಾ ಕೃಪಾ ತೇ ಮಧುಸೂದನ ॥
ಸಾಮ್ನಾ ದಾನೇನ ವಾ ಕೃಷ್ಣಯೇ ನ ಶಾಮ್ಯಂತಿ ಶತ್ರವಃ।
ಯೋಕ್ತವ್ಯಸ್ತೇಷು ದಂಡಃ ಸ್ಯಾಜ್ಜೀವಿತಂ ಪರಿರಕ್ಷತಾ ॥
ತಸ್ಮಾತ್ ತೇಷು ಮಹಾದಂಡಃ ಕ್ಷೇಪ್ತವ್ಯಃ ಕ್ಷಿಪ್ರಮಚ್ಯುತ।
ತ್ವಯಾ ಚೈವ ಮಹಾಬಾಹೋ ಪಾಂಡವೈಃ ಸಹ ಸೃಂಜಯೈಃ ॥
ಯದಿ ತೇಽಹಮನುಗ್ರಾಹ್ಯಾ ಯದಿ ತೇಽಸ್ತಿ ಕೃಪಾ ಮಯಿ।
ಧಾರ್ತರಾಷ್ಟ್ರೇಷು ವೈ ಕೋಪಃ ಸರ್ವಃ ಕೃಷ್ಣವಿಧೀಯತಾಮ್ ॥
– ಶ್ರೀಕೃಷ್ಣನನ್ನು ಕುರಿತು ದ್ರೌಪದೀವಚನ। ಭಾರತ (ಉದ್ಯೋಗ ೮೨/೧೩-೧೫,೩೨)

೫೩.. ಚಲೇದ್ಧಿ ಹಿಮವಾನ್ ಶೈಲೋ ಮೇದಿನೀ ಶತಧಾ ಫಲೇತ್।
ದ್ಯೌಃ ಪತೇಚ್ಚ ಸನಕ್ಷತ್ರಾ ನ ಮೇ ಮೋಘಂ ವಚೋ ಭವೇತ್ ॥
ಸತ್ಯಂ ತೇ ಪ್ರತಿಜಾನಾಮಿ ಕೃಷ್ಣೇ ಬಾಷ್ಪೋ ನಿಗೃಹ್ಯತಾಮ್।
ಹತಾಮಿತ್ರಾನ್ ಶ್ರಿಯಾ ಯುಕ್ತಾನಚಿರಾದ್ದ್ರಕ್ಷ್ಯಸೇ ಪತೀನ್ ॥
(ದ್ರೌಪದಿಯನ್ನು ಕುರಿತು ಶ್ರೀಕೃಷ್ಣವಚನ) – ಭಾರತ (ಉದ್ಯೋಗ. ೮೨/೪೮,೪೯)

ಶ್ರೀಕೃಷ್ಣರಾಯಭಾರ

ಸಸಾತ್ಯಕಿಃ ಸ್ಯಂದನವರ್ಯಸಂಸ್ಥಿತಃ
ಪೃಥಾತನೂಜೈರಖಿಲೈಃ ಸ ಭೂಮಿಪೈಃ ।
ಅನ್ವಾಗತೋ ದೂರತರಂ ಗಿರ್ತಾ ತಾನ್
ಸಂಸ್ಥಾಪ್ಯ ವಿಪ್ರಪ್ರವರೈರ್ಯಯೌ ಕುರೂನ್ ॥ ೫೪ ॥

ಅ: ಸಾತ್ಯಕಿಯೊಡನೆ ಉತ್ತಮವಾದ ರಥದಲ್ಲಿ ಕುಳಿತ ಶ್ರೀಕೃಷ್ಣನನ್ನು ಪಾಂಡವರು, ಇತರ ರಾಜರು ಬಹುದೂರದ ವರೆಗೆ ಅನುಸರಿಸಿ ನಡೆದರು; ಕೃಷ್ಣ ಅವರನ್ನು ಮಾತಿನಿಂದ ಅಲ್ಲಿಯೇ ನಿಲ್ಲಿಸಿ ಬ್ರಾಹ್ಮಣ ಶ್ರೇಷ್ಠರುಗಳೊಂದಿಗೆ ಕೌರವರ ಬಳಿಗೆ ತೆರಳಿದ.

ವಿ: ಕೃಷ್ಣ ಹಾಗೆ ತೆರಳಿದ್ದು ಸಾತ್ಯಕಿಯೊಬ್ಬನನ್ನು ಮಾತ್ರ ತನ್ನೊಡನೆ ಕರೆದುಕೊಂಡು. ಅಂದು ಕಾರ್ತೀಕ ಮಾಸದ *ರೇವತೀ ನಕ್ಷತ್ರ ಇದ್ದ ದಿವಸ.

ಏಕೋಽಪಿ ವಿಷ್ಣುಃ ಸ ತು ಭಾರ್ಗವಾತ್ಮಾ
ವ್ಯಾಸಾತ್ಮಕಶ್ಚಾನುಗತೋ ಮುನೀಂದ್ರೈಃ ।
ಯಯೌ ತದುಕ್ತೇರ್ಹಿ ಗುಣಾನ್ ಪ್ರವೇತ್ತುಂ
ನಾನ್ಯೋ ಹಿ ಶಕ್ತಸ್ತಮೃತೇ ಯತಃ ಪ್ರಭುಮ್ ॥ ೫೫ ॥

ಅ: ಪರಶುರಾಮರೂಪದ ಮತ್ತು ವೇದವ್ಯಾಸರೂಪದ ಶ್ರೀಹರಿಯೂ ಸಹ ಮುನಿವರ್ಯರೊಂದಿಗೆ ಕೂಡಿಕೊಂಡು ತೆರಳಿದ. ಅವರೆಲ್ಲ ಒಬ್ಬನೇ ವಿಷ್ಣು ಆದರೂ ಅವನ

---

* ಕೌಮುದೇ ಮಾಸಿ ರೇವತ್ಯಾಂ ಶರದಂತೇ ಹಿಮಾಗಮೇ । – ಭಾರತ (ಉದ್ಯೋಗ. ೮೩/೭)

ಏವಮೇತೈರ್ಮಹಾಭಾಗೈರ್ಮಹರ್ಷಿಗಣಸಾಧುಭಿಃ ।
ಪೂಜಿತಃ ಪ್ರಯಯೌ ಕೃಷ್ಣಃ ಕುರೂಣಾಂ ಸದನಂ ಪ್ರತಿ ॥ – ಭಾರತ (ಉದ್ಯೋಗ. ೮೪/೨೯)

೫೫. ಏಕೋಽಪಿ ವಿಷ್ಣುಃ ಸ ಚೇತಿ ಕ್ವಚಿತ್ಪಾಠಃ । – (ಜ.)

೫೫. ತದುಕ್ತೇರ್ಹಿ ಗುಣಾನ್ ಪ್ರವೇತ್ತುಂ ನಾನ್ಯೋ ಹೀತ್ಯತ್ರ ಗುಣಾನಾಮನಂತತ್ವಪ್ರಸಿದ್ಧಿಂ ಅನ್ಯೇಷಾಮಸರ್ವಜ್ಞತ್ವಪ್ರಸಿದ್ಧಿಂ ಚ ಸೂಚಯಿತುಮುಭಯತ್ರ ಹಿಶಬ್ದೌ ॥ – (ವಾ.)

೫೫. ಸ ಕೃಷ್ಣಃ ಭಾರ್ಗವಾತ್ಮಾ ಚ ವ್ಯಾಸಾತ್ಮಕಶ್ಚ ವಿಷ್ಣುರೇಕೋಽಪಿ ನಿರ್ವಿಶೇಷೋಽಪಿ ತದುಕ್ತೇಃ ಕೃಷ್ಣೋಕ್ತೇಃ ಗುಣಾನ್ ಪ್ರವೇತ್ತುಂ ಪ್ರಕರ್ಷೇಣ ವೇತ್ತುಂ ಮುನೀಂದ್ರೈರನುಗತಃ ಸನ್ ಯಯೌ । ಯತಃ ಕಾರಣಾತ್ ತಂ ಪ್ರಭುಂ ವಿಷ್ಣುಮೃತೇಽನ್ಯೋ ವಿಷ್ಣೋರನ್ಯಃ ಶಕ್ತೋ ನೇತ್ಯೇತದ್ಧಿ ಪ್ರಸಿದ್ಧಮ್ ॥ – (ಸ.)

ಮಾತಿನ ಅನಂತಗುಣಗಳನ್ನು ತಿಳಿಯಲು ಪ್ರಭುವಾದ ಅವನ ಹೊರತು ಬೇರಾರೂ ಸಮರ್ಥರಾಗಲಾರಲ್ಲವಷ್ಟೇ!

ವಿ: ಕೃಷ್ಣ ಉಪಪ್ಲಾವ್ಯದಿಂದ ಹಸ್ತಿನಾಪುರಕ್ಕೆ ತೆರಳುತ್ತಿದ್ದಂತೆ ದಾರಿಯಲ್ಲಿ ವೇದವ್ಯಾಸರು ಮತ್ತು ಪರಶುರಾಮರು ಅವನ ಜೊತೆಗೂಡಿದರು. ಆಗ ಪರಶುರಾಮರು ನುಡಿಯುವರು. ಶ್ರೀಹರಿಯ ಅತ್ಯಂತ ಅರ್ಥಗರ್ಭಿತವಾದ ಮಾತುಗಳ ಪೂರ್ಣ ಸ್ವಾರಸ್ಯವನ್ನು ತಿಳಿಯಲು ಬೇರಾರಿಗೂ ಆಗದು. ಅದಕ್ಕೆಂದೇ ತನ್ನ ಮಾತುಗಳ ಸ್ವಾರಸ್ಯವನ್ನು ತಾನೇ ಸವಿಯಲೋ ಎಂಬಂತೆ ಮೂರು ರೂಪಗಳಿಂದ ಭಗವಂತ ಅಲ್ಲಿಗೆ ತೆರಳಿದ ಎಂದರ್ಥ.

ಜನತೆಯ ಕೃಷ್ಣದರ್ಶನ ಕಾತರ

ಸ ವಂದ್ಯಮಾನೋಽಖಿಲರಾಷ್ಟ್ರವಾಸಿಭಿಃ
ಪ್ರಸೂನವರ್ಷೈರಭಿವರ್ಷಿತಃ ಸುರೈಃ ।
ಸಂಸ್ತೂಯಮಾನಃ ಪ್ರಣತೋಽಬ್ಜಜಾದಿಭಿ-
ರ್ಗಜಾಹ್ವಯಂ ಪ್ರಾಪ ಪರೋಽಪ್ರಮೇಯಃ ॥ ೫೬ ॥

ಅ: ದಾರಿಯುದ್ದಕ್ಕೂ ಸಕಲ ರಾಷ್ಟ್ರವಾಸಿಗಳಿಂದ ಕೃಷ್ಣ ವಂದಿತನಾದ. ಬ್ರಹ್ಮಾದಿ ದೇವತೆಗಳು ಹೂಮಳೆಗಳನ್ನು ಸುರಿಸಿ ಅವನನ್ನು ಬಹಳವಾಗಿ ಸ್ತುತಿಸಿ ವಂದಿಸಿದರು. ಅಪ್ರಮೇಯನೂ; ಸರ್ವೋತ್ತಮನೂ ಆದ ಕೃಷ್ಣ ಹಸ್ತಿನಾಪುರವನ್ನು ತಲುಪಿದ.

ವಿ: ೧) ದುರ್ಯೋಧನ ಶಲ್ಯನನ್ನು ವಶಪಡಿಸಿಕೊಂಡಂತೆ ಕೃಷ್ಣನನ್ನೂ ವಶಪಡಿಸಿಕೊಳ್ಳ–ಲೆಂದು ದಾರಿಯುದ್ದಕ್ಕೂ ಅನೇಕ ವಿಶ್ರಾಂತಿಗೃಹಗಳನ್ನು ಏರ್ಪಡಿಸಿದ್ದ. ಸಕಲಭೋಗಸಾಮಗ್ರಿ–ಗಳೊಂದಿಗೆ ಅವುಗಳನ್ನು ಅಣಿಗೊಳಿಸಿದ್ದ. ಆದರೆ, ಕೃಷ್ಣ ಅವುಗಳತ್ತ ಕಣ್ಣೆತ್ತಿಯೂ ನೋಡದೆ ತೆರಳಿದ.

೨) ದುರ್ಯೋಧನನ ತಂತ್ರ ಹೀಗೆ ವಿಫಲವಾದುದು ಇಬ್ಬರ ಮೇಲೆ ಮಾತ್ರ – ಅವರಲ್ಲಿ ಒಬ್ಬ ಕೃಷ್ಣ ಮತ್ತೊಬ್ಬ ಭೀಮ. ಭೀಮನು ದುರ್ಯೋಧನ ನೀಡಿದ್ದ ವಿಷದ ಭೋಜನವನ್ನು

---

೫೬. ದೇವಬ್ರಹ್ಮರ್ಷಯಶ್ಚೈವ ಕೃಷ್ಣಂ ಯದುಸುಖಾವಹಮ್ ।
ಪ್ರದಕ್ಷಿಣಮವರ್ತಂತ ಸಹಿತಾ ವಾಸವಾನುಜಮ್ ॥ – ಭಾರತ (ಉದ್ಯೋಗ ೮೩/೨೮)

೫೬. ತಾಃ ಸಭಾಃ ಕೇಶವಃ ಸರ್ವಾ ರತ್ನಾನಿ ವಿವಿಧಾನಿ ಚ ।
ಅಸಮೀಕ್ಷ್ಯೈವ ದಾಶಾರ್ಹ ಉಪಾಯಾತ್ ಕುರುಸದ್ಮತತ್ ॥ – ಭಾರತ ಉದ್ಯೋಗ ೮೫/೧೮)

ಜೀರ್ಣಿಸಿಕೊಂಡು ಅವನಿಗೇ ಸಮಸ್ಯೆಯಾದ. ಕೃಷ್ಣ ಅವನು ನೀಡಿದ ಯಾವುದೇ ವ್ಯವಸ್ಥೆಯನ್ನು ಉಪಯೋಗಿಸಿಕೊಳ್ಳದೇ ನಿರಾಶೆಗೊಳಿಸಿದ.

೩) ದುಷ್ಟರ ಆಹಾರ ವಿಷವಿದ್ದಂತೆ, ಅದರ ಪ್ರಭಾವಕ್ಕೆ ಒಳಗಾಗದಿರಲು ಉಪಾಯ ಎರಡು ಬಗೆ – ಅದನ್ನು ತಿಂದು ನಾಶವಮಾಡುವುದು, ಇಲ್ಲದೇ ಕಣ್ಣೆತ್ತಿಯೇ ನೋಡದೇ ಪರಿತ್ಯಜಿಸುವುದು. ಶ್ರೀಕೃಷ್ಣ ದುರ್ಯೋಧನ ಏರ್ಪಡಿಸಿದ್ದ ಆ ಸಭಾಭವನಗಳ ಉಪಯೋಗವನ್ನು ಪಡೆಯದಿರಲು ಅವನು ಅಭಕ್ತ ಎಂಬುದು ಮುಖ್ಯ ಕಾರಣವಾಗಿತ್ತು.

೪) ಭಕ್ತಿಯಿಲ್ಲದವರು ಸಮರ್ಪಿಸುವ ಏನನ್ನೂ ಶ್ರೀಹರಿ ಸ್ವೀಕರಿಸಲಾರ ಎಂಬುದಕ್ಕೂ ಇದು ನಿದರ್ಶನ.

೫) ಕೃಷ್ಣ ಬರುವ ವಿಷಯವನ್ನು ತಿಳಿದ ದುರ್ಯೋಧನಾದಿಗಳು ಸಭೆಯಲ್ಲಿ ಮಂತ್ರಾ-ಲೋಚನೆಗೆ ತೊಡಗಿದಾಗ ದುರ್ಯೋಧನ ಕೃಷ್ಣನನ್ನು ಸೆರೆ ಹಿಡಿಯುವ ಯೋಜನೆಯನ್ನು ಮುಂದಿಟ್ಟ. ಅವನ ಆ ದುರ್ವಿಚಾರಕ್ಕೆ ಕೆರಳಿದ ಭೀಷ್ಮರು ಉಗ್ರವಾಗಿ ಪ್ರತಿಭಟಿಸಿ ಸಭಾತ್ಯಾಗ ಮಾಡಿದ ವಿವರ *ಮಹಾಭಾರತದಲ್ಲಿದೆ.

೬) ದ್ರೌಪದೀ ವಸ್ತ್ರಾಪಹರಣ ಪ್ರಯತ್ನದಂತಹ ಅತ್ಯಂತ ಹೇಯ ಪ್ರಸಂಗದಲ್ಲಿ ಸಭಾತ್ಯಾಗವನ್ನು ಮಾಡದಂತಹ ಭೀಷ್ಮರು ಕೃಷ್ಣನಿಗೆ ಅವಮಾನ ಮಾಡುವ ಯೋಚನೆಯ ಈ ಪ್ರಸಂಗದಲ್ಲಿ ಪ್ರತಿಭಟಿಸಿದ್ದು ಅವರು ಸ್ವಲ್ಪ ಬದಲಾದುದಕ್ಕೆ ನಿದರ್ಶನ ಎಂದು ತಿಳಿಯಬಹುದು.

೭) ದುರ್ವಿಚಾರಗಳು ಸಭೆಯಲ್ಲಿ ನಡೆದಾಗ ಅಂತಹ ಸಭೆಗೆ ತೆರಳಲೇಬಾರದು. ಒಂದು ವೇಳೆ ತೆರಳಿದ್ದಲ್ಲಿ ಅಲ್ಲಿ ಕುಳ್ಳಿರದೇ ಹೊರಕ್ಕೆ ನಡೆಯಬೇಕು ಎಂಬ ಸ್ಮೃತಿವಾಕ್ಯ ಇಂತಹ ಸಭಾತ್ಯಾಗವನ್ನು ಸಮರ್ಥಿಸಿದೆ ('ಕರ್ಣೌ ಪಿಧಾಯ ನಿರಿಯಾತ್' – ಭಾಗವತ; 'ಸಭಾಂ ವಾ ನ ಪ್ರವೇಷ್ಟವ್ಯಂ....' ಮನುಸ್ಮೃತಿ ೮/೧೩).

ಸ ಭೀಷ್ಮಮುಖ್ಯೈಃ ಸರಸಾऽಭಿಯಾತಃ
ಸಹೈವ ತೈಃ ಪ್ರಯಯೌ ರಾಜಮಾರ್ಗೇ ।
ದಿದೃಕ್ಷವಸ್ತಂ ಜಗದೇಕಸುಂದರಂ
ಗುಣಾರ್ಣವಂ ಪ್ರಾಯಯುರತ್ರ ಸರ್ವೇ ॥ ೫೭ ॥

---

* ಇತ್ಯುಕ್ತ್ವಾ ಭರತಶ್ರೇಷ್ಠೋ ವೃದ್ಧಃ ಪರಮಮನ್ಯುಮಾನ್ ।
ಉತ್ಥಾಯ ತಸ್ಮಾತ್ ಪ್ರತಿಷ್ಠದ್ಭೀಷ್ಮಃ ಸತ್ಯಪರಾಕ್ರಮಃ ॥ –ಭಾರತ (ಉದ್ಯೋಗ. ೮೮/೨೩)

ಅ: ಶ್ರೀಕೃಷ್ಣನನ್ನು ಭೀಷ್ಮ ಮೊದಲಾದವರು ಭಕ್ತಿಪೂರ್ವಕವಾಗಿ ಇದಿರುಗೊಂಡರು. ಕೃಷ್ಣ ಅವರೊಂದಿಗೆ ರಾಜಮಾರ್ಗದಲ್ಲಿ ನಡೆದ. ಜಗದೇಕಸುಂದರನಾದ, ಗುಣಸಮುದ್ರ ಕೃಷ್ಣನನ್ನು ಕಾಣುವ ಬಯಕೆಯಿಂದ ಸಕಲ ಪ್ರಜೆಗಳು ಅಲ್ಲಿಗೆ ಧಾವಿಸಿದರು.

ಬಿ: ೧) ಕೃಷ್ಣ ಜಗದೇಕಸುಂದರನೆಂದು ಕೇಳಿ ತಿಳಿದಿದ್ದ ಜನ ಅವನನ್ನು ಕಾಣುವ ಸುಯೋಗ ಲಭಿಸಿದ್ದಕ್ಕಾಗಿ ಅತ್ಯಂತ ಸಂಭ್ರಮದಿಂದ ರಾಜಮಾರ್ಗದಲ್ಲಿ ನೆರೆದರು. ಆ ಸಮಯದಲ್ಲಿ ದಾರಿಯಲ್ಲಿ ಮಾತ್ರವಲ್ಲದೇ, ಮನೆಯ ಉಪ್ಪರಿಗೆಗಳಲ್ಲಿ ಮೊದಲಾದ ಸಕಲ ಸ್ಥಳಗಳಲ್ಲೂ ಜನ ಕಿಕ್ಕಿರಿದು ಆತನ ಆಗಮನವನ್ನು ನಿರೀಕ್ಷಿಸತೊಡಗಿದರು.

೨) ಆ ಕಾಲದಲ್ಲಿ ಮನೆಯೊಳಗೆ ಹೆಂಗಸರು, ಮಕ್ಕಳು, ವೃದ್ಧರು ಮೊದಲಾಗಿ ಯಾರೂ ಉಳಿದಿರಲಿಲ್ಲ ಎಂಬ ವಿಶೇಷ ಉಲ್ಲೇಖ ಮಹಾಭಾರತದಲ್ಲಿದೆ.

೩) ಆ ವಿವರವನ್ನು ಕೇಳಿದ ಧೃತರಾಷ್ಟ್ರ ತನ್ನ ಜೀವನದಲ್ಲಿ ಮೊದಲ ಬಾರಿಗೆ ತನಗೆ ಕಣ್ಣಿಲ್ಲದಿರುವುದರ ಬಗ್ಗೆ ವ್ಯಥೆಪಟ್ಟ ಎಂಬ ವಿಶೇಷವಿವರವೂ ಅಲ್ಲಿದೆ.

೪) ಕೃಷ್ಣನನ್ನು ಕಾಣಲೆಂದೇ ಕಣ್ಣಿನ ಸದುಪಯೋಗ ಎಂಬ ತತ್ತ್ವ ಅದರಿಂದ ಸೂಚಿತ (**'ತೇ ಚ ನೇತ್ರೇ ಮಹಾಭಾಗೇ ಯಾಭ್ಯಾಂ ಸಂದೃಶ್ಯತೇ ಹರಿಃ'** – ಕೃಷ್ಣಾಮೃತಮಹಾರ್ಣವ ಶ್ಲೋ.೮೧). ಶ್ರೀರಾಮ ಮಿಥಿಲೆಯನ್ನು ಪ್ರವೇಶಿಸಿದಾಗ ಆ ಪಟ್ಟಣದ ನರನಾರಿಯರೆಲ್ಲ ಅವನನ್ನು ಅತ್ಯಂತ ಸಂಭ್ರಮದಿಂದ ವೀಕ್ಷಿಸಿದ ರಾಮಾಯಣದ ಪ್ರಸಂಗವನ್ನು ಇಲ್ಲಿ ಸ್ಮರಿಸಿಕೊಳ್ಳಬಹುದು; (೪/೧೨, ೧೩).

---

೫೭. ಸಸ್ತ್ರೀಪುರುಷಬಾಲಂ ಚ ನಗರಂ ಮಧುಸೂದನಮ್ ।
ಉದೀಕ್ಷತಾಂ ಮಹಾತ್ಮಾನಂ ಭಾನುಮಂತಮಿವ ಪ್ರಜಾಃ ॥ – ಭಾರತ (ಉದ್ಯೋಗ. ೮೬/೧೭)

ನ ಚ ಕಶ್ಚಿದ್ ಗೃಹೇ ರಾಜಂಸ್ತದಾऽऽಸೀದ್ ಭರತರ್ಷಭ ।
ನ ಸ್ತ್ರೀ ನ ವೃದ್ಧೋ ನ ಶಿಶುರ್ವಾಸುದೇವದಿದೃಕ್ಷಯಾ ॥
ರಾಜಮಾರ್ಗೇ ನರಾಸ್ತಸ್ಮಿನ್ ಸಂಸ್ತುವಂತ್ಯವನಿಂ ಗತಾಃ ।
ತಸ್ಮಿನ್ ಕಾಲೇ ಮಹಾರಾಜ ಹೃಷೀಕೇಶಪ್ರವೇಶನೇ ॥
ಆವೃತಾನಿ ವರಸ್ತ್ರೀಭಿರ್ಗಹಾಣಿ ಸುಮಹಾಂತ್ಯಪಿ ।
ಪ್ರಚಲಂತೀವ ಭಾರೇಣ ದೃಶ್ಯಂತೇ ಸ್ಮ ಮಹೀತಲೇ ॥
ತಥಾ ಚ ಗತಿಮಂತಸ್ತೇ ವಾಸುದೇವಸ್ಯ ವಾಜಿನಃ ।
ಪ್ರಣಷ್ಟಗತಯೋऽಭೂವನ್ ರಾಜಮಾರ್ಗೇ ನರೈರ್ವೃತೇ ॥ – ಭಾರತ (ಉದ್ಯೋಗ. ೮೯/೭-೧೦)

ಧೃತರಾಷ್ಟ್ರನ ಬಳಿಗೆ ಕೃಷ್ಣ

ಸಭಾಜಿತಸ್ತೈಃ ಪರಮಾದರೇಣ
ವಿವೇಶ ಗೇಹಂ ನೃಪತೇರನಂತಃ ।
ಸ ಭೀಷ್ಮಮುಖ್ಯಾನ್ ಪುರತೋ ನಿಧಾಯ
ವೈಚಿತ್ರವೀರ್ಯೇಣ ಸಮರ್ಚಿತೋಽಜಃ ।
ರೌಕ್ಮೇ ನಿಷಣ್ಣಃ ಪರಮಾಸನೇ ಪ್ರಭು-
ರ್ಬಭೌ ಸ್ವಭಾಸಾ ಕಕುಭೋಽವಭಾಸಯನ್ ॥ ೫೪ ॥

ಅ: ಅವರಿಂದ ಪರಮ ಭಕ್ತಿಯಿಂದ ಆದರಿಸಲ್ಪಟ್ಟವನಾಗಿ ಅನಂತನಾದ ಶ್ರೀಕೃಷ್ಣ ಧೃತರಾಷ್ಟ್ರನ ಮನೆಗೆ ತೆರಳಿದ. ಭೀಷ್ಮ ಮೊದಲಾದವರನ್ನು ಮುಂದಿಟ್ಟುಕೊಂಡು ಧೃತರಾಷ್ಟ್ರ ಕೃಷ್ಣನನ್ನು ವಿಶೇಷವಾಗಿ ಪೂಜಿಸಿದ. ಚಿನ್ನದ ಉತ್ತಮ ಪೀಠದಲ್ಲಿ ಮಂಡಿಸಿದ ಕೃಷ್ಣ ತನ್ನ ಕಾಂತಿಯಿಂದ ದಿಕ್ಕುಗಳನ್ನು ಬೆಳಗುತ್ತಾ ಕಂಗೊಳಿಸಿದ.

ದುರ್ಯೋಧನನ ಆತಿಥ್ಯದ ನಿರಾಕರಣೆ

ಯಥೋಚಿತಂ ತೇಷು ವಿಧಾಯ ಕೇಶವೋ
ದೌರ್ಯೋಧನಂ ಪ್ರಾಪ್ಯ ಗೃಹಂ ಚ ಪೂಜಿತಃ ।
ಪೂಜಾಂ ತದೀಯಾಂ ಗುಣವದ್ವಿಡಿತ್ಯಸೌ
ಜಗ್ರಾಹ ನೋ ವಿದುರಂ ಚಾಜಗಾಮ ॥ ೫೯ ॥

ಅ: ಅವರಿಗೆಲ್ಲ ಯಥೋಚಿತವಾದ ಪ್ರತಿಕ್ರಿಯೆಯನ್ನು ನೀಡಿದ ಕೃಷ್ಣ ದುರ್ಯೋಧನನ ಮನೆಗೆ ತೆರಳಿದ. ಅವನೂ ಕೃಷ್ಣನನ್ನು ಸತ್ಕರಿಸಿದ. ಆದರೆ, ಅವನು ನೀಡಿದ ಪೂಜೆಯನ್ನು ಅವನು ಗುಣವಂತರಾದ ಪಾಂಡವರ ದ್ವೇಷಿ ಎಂಬ ಕಾರಣದಿಂದ ಸ್ವೀಕರಿಸಲಿಲ್ಲ; ವಿದುರನ ಮನೆಗೆ ತೆರಳಿದ.

ವಿ: ೧) ಧೃತರಾಷ್ಟ್ರನ ಮನೆಯಿಂದ ಕೃಷ್ಣ ದುರ್ಯೋಧನನ ಆಹ್ವಾನದಂತೆ ಅವನ ಮನೆಗೂ ತೆರಳಿದ. ಅಲ್ಲಿ ದುರ್ಯೋಧನ ಬಗೆಬಗೆಯ ಭಕ್ಷ್ಯ ಭೋಜ್ಯಗಳಿಂದ ಕೂಡಿದ ಅನುಪಮ ಆಹಾರವನ್ನು ಕೃಷ್ಣನಿಗೆ ನೀಡಿ ಸ್ವೀಕರಿಸಲು ಕೇಳಿಕೊಂಡ. ಕೃಷ್ಣ ಅವುಗಳನ್ನು ನಿರಾಕರಿಸುತ್ತಾ ನುಡಿದ 'ದುರ್ಯೋಧನ ಮತ್ತೊಬ್ಬರ ಮನೆಯ ಅನ್ನವನ್ನು ತಿನ್ನುವುದು ಎರಡು ಪ್ರಸಂಗಗಳಲ್ಲಿ ಮಾತ್ರ –

ಒಂದು ಅನಿವಾರ್ಯವಾದ ಆಪತ್ತು ಒದಗಿದ್ದಾಗ, ಮತ್ತೊಂದು ಅವರು ತುಂಬಾ ಪ್ರೀತಿಪಾತ್ರ–ರಾಗಿದ್ದಾಗ. ನಿನ್ನ ಅನ್ನ ತಿನ್ನುವಂತಹ ಆಪತ್ತು ನನಗೆ ಸರ್ವಥಾ ಇಲ್ಲ, ನೀನಂತೂ ಇವುಗಳನ್ನು ಪ್ರೀತಿಯಿಂದ ನೀಡಿದವನೂ ಅಲ್ಲ' ಎಂದು *ನುಡಿದ.

೨) ಮುಂದುವರೆಸಿ ಹೇಳಿದ 'ಶತ್ರುಗಳ ಅನ್ನವನ್ನು ತಿನ್ನಕೂಡದು, ಶತ್ರುವಿಗೆ ಅನ್ನ ನೀಡಲೂ ಕೂಡದು. ನೀನು ನೇರವಾಗಿ ನನ್ನ ಶತ್ರುವಲ್ಲ ನಿಜ, ಆದರೆ ನನ್ನ ಪರಮ ಭಕ್ತರಾದ ಪಾಂಡವರನ್ನು ದ್ವೇಷಿಸುತ್ತಿರುವವನು. ಪಾಂಡವರು ನನಗೆ ಪಂಚಪ್ರಾಣ. ಅವರ ದ್ವೇಷಿ ನನ್ನ ದ್ವೇಷಿಯೂ ಸಹ. ಆದ್ದರಿಂದ ನಿನ್ನ ಅನ್ನ ಬೇಕಿಲ್ಲ' ಎಂದು ನುಡಿದು ಅಲ್ಲಿಂದ ತೆರಳಿದ.

೩) ಕೃಷ್ಣ ಹಾಗೆ ಹೇಳುವ ಮೂಲಕ ತಾನು ಅಲ್ಲಿಗೆ ತೆರಳಿದ್ದು ದುರ್ಯೋಧನನ ಅನ್ನವನ್ನು ನಿರಾಕರಿಸಲು ಮಾತ್ರ ಎಂದು ಸ್ಪಟಪಡಿಸಿದ. ಈ ಪ್ರಸಂಗದಲ್ಲಿ ನೈವೇದ್ಯತತ್ವವೇ ಅಡಗಿದೆ. ಬಗೆಬಗೆಯ ಪದಾರ್ಥಗಳು ಇಟ್ಟ ಮಾತ್ರಕ್ಕೆ ದೇವರು ಅವನ್ನು ಸ್ವೀಕರಿಸಲಾರ. ಭಕ್ತಿಯಿಂದ ನೀಡಿದಾಗ ಮಾತ್ರ ಅವನು ಅವುಗಳನ್ನು ಸ್ವೀಕರಿಸುವನು. ಅವು ಭಕ್ಷಭೋಜ್ಯಗಳಾಗದೇ ಪತ್ರ ಪುಷ್ಪಗಳಾಗಿದ್ದರೂ ಸರಿ. ತನ್ನ ದ್ವೇಷಿಗಳ ಅನ್ನ ಮಾತ್ರವಲ್ಲದೇ ವೈಷ್ಣವ ದ್ವೇಷಿಗಳ ಅನ್ನವನ್ನೂ ಅವನು ಸ್ವಿಕರಿಸಲಾರ. ನೈವೇದ್ಯ ಸಮರ್ಪಿಸುವವನು ಹರಿಭಕ್ತನಾಗಿರುವಂತೆ ವೈಷ್ಣವ ಭಕ್ತನೂ ಆಗಿರಲೇಬೇಕು ಎಂಬುದು ಇದರಿಂದ ಸ್ಪಟಪಡುವುದು. ಪಾಂಡವರನ್ನು ತನ್ನ ಪ್ರಾಣ ಎಂದು ಕರೆಯುವ ಮೂಲಕ ಕೃಷ್ಣ ಮತ್ತೊಂದು ಬಗೆಯ ವಿಶೇಷವನ್ನು ತಿಳಿಸಿದ.

---

* ಸಂಪ್ರೀತಿಭೋಜ್ಯಾನ್ಯನ್ನಾನಿ ಆಪದ್ಭೋಜ್ಯಾನಿ ವಾ ಪುನಃ।
ನ ಚ ಸಂಪ್ರೀಯಸೇ ರಾಜನ್ ನ ಚೈವಾಪದ್ಗತಾ ವಯಮ್ ॥
ಅಕಸ್ಮಾದ್ ದ್ವೇಷ್ಟಿವೈ ರಾಜನ್ ಜನ್ಮಪ್ರಭೃತಿಪಾಂಡವಾನ್।
ಪ್ರಿಯಾನುವರ್ತಿನೋ ಭಾತೄನ್ ಸರ್ವಾನ್ ಪ್ರಮುದಿತೈಃ ಗುಣೈಃ ॥
ಯಸ್ತಾನ್ ದ್ವೇಷ್ಟಿಸ ತಾನ್ ದ್ವೇಷ್ಟಿಯಸ್ತಾನನು ಸ ಮಾಮನು।
ಏಕಾತ್ಮ್ಯಂ ಮಾಂ ಗತಂ ವಿದ್ಧಿ ಪಾಂಡವೈರ್ಧರ್ಮಚಾರಿಭಿಃ ॥
ಕಾಮಕ್ರೋಧಾನುವರ್ತೀ ಹಿ ಯೋ ಮೋಹಾದ್ ವಿರುರುತ್ಸತಿ।
ಗುಣವಂತಂ ಚ ಯೋ ದ್ವೇಷ್ಟಿತಮಾಹುಃ ಪುರುಷಾಧಮಮ್ ॥
ಯಃ ಕಲ್ಯಾಣಗುಣಾನ್ ಜ್ಞಾತೀನ್ ಮೋಹಾಲ್ಲೋಭಾದ್ ದಿದೃಕ್ಷತೇ।
ಸೋऽಜಿತಾತ್ಮಾ ಜಿತಕ್ರೋಧೋ ನ ಚಿರಂ ತಿಷ್ಠತಿ ಶ್ರಿಯಮ್ ॥
ಅಥ ಯೋ ಗುಣಸಂಪನ್ನಾನ್ ಹೃದಯಸ್ಯಾಪ್ರಿಯಾನಪಿ।
ಪ್ರಿಯೇಣ ಕುರುತೇ ವಶ್ಯಾಂಶ್ಚಿರಂ ಯಶಸಿ ತಿಷ್ಠತಿ ॥
ದ್ವಿಷದನ್ನಂ ನ ಭೋಕ್ತವ್ಯಂ ದ್ವಿಷಂತಂ ನೈವ ಭೋಜಯೇತ್ ॥
ಪಾಂಡವಾನ್ ದ್ವಿಷಸೇ ರಾಜನ್ ಮಮ ಪ್ರಾಣಾ ಹಿ ಪಾಂಡವಾಃ ॥ – ಭಾರತ (ಉದ್ಯೋಗ.೯೧/೨೫-೩೦)

೪) ಐವರು ಪಾಂಡವರಲ್ಲಿ ಭೀಮ ಸಾಕ್ಷಾತ್ ಮುಖ್ಯಪ್ರಾಣ. ಇತರ ನಾಲ್ವರಲ್ಲಿ ವಾಯುದೇವರ ಸೌಮ್ಯ, ವೀರ. ಶೃಂಗಾರ ಮತ್ತು ಸುನೀತಿ ಎಂಬ ನಾಲ್ಕು ರೂಪಗಳ ಆವೇಶವಿರುವ ವಿಚಾರ ಈಗಾಗಲೇ ಬಂದಿದೆ. ಆದ್ದರಿಂದ ಐವರೂ ತನಗೆ ಪ್ರಾಣಪ್ರಿಯರು ಎಂದು ತಿಳಿಸಿದ. ಎಂದರೆ ವೈಷ್ಣವದ್ವೇಷಿಗಳ, ವಿಶೇಷವಾಗಿ ವಾಯುದ್ವೇಷಿಗಳ ಅನ್ನವನ್ನು ಭಗವಂತ ಸರ್ವಥಾ ಸ್ವೀಕರಿಸುವುದಿಲ್ಲ ಎಂಬುದು ಇದರ ಅಂತರಾರ್ಥ.

೫) ಕೃಷ್ಣ ಹಾಗೆ ದುರ್ಯೋಧನನ ಆತಿಥ್ಯವನ್ನು ನಿರಾಕರಿಸುವ ಮೂಲಕ ಅವನ ಅಂತ್ಯಕಾಲ ಸನ್ನಿಹಿತ ಎನ್ನುವುದನ್ನೂ ಸೂಚಿಸಿದ. ಕೃಷ್ಣ ನೈವೇದ್ಯ ಸ್ವೀಕರಿಸದ ಮನೆ ಸರ್ವನಾಶದ ಅಂಚಿಗೆ ತೆರಳುವುದು ಖಚಿತ ಎಂಬ ತತ್ತ್ವ ಇದರಿಂದ ಸೂಚಿತ.

ವಿದುರನ ಭಾಗ್ಯ

ಸ ಭೀಷ್ಮಮುಖ್ಯೈರಭಿಯಾಚಿತೋಽಪಿ
ಜಗಾಮ ನೈಷಾಂ ಗೃಹಮಾದಿದೇವಃ ।
ಉಪೇಕ್ಷಿತಾ ದ್ರೌಪದೀತ್ಯಪ್ರಮೇಯೋ
ಜಗಾಮ ಗೇಹಂ ವಿದುರಸ್ಯ ಶೀಘ್ರಮ್ ॥ ೬೦ ॥

ಅ: ಭೀಷ್ಮ ಮೊದಲಾದವರು ಬಹಳವಾಗಿ ಬೇಡಿಕೊಂಡರೂ ಆದಿದೇವನಾದ ಕೃಷ್ಣ ಅವರ ಮನೆಗೆ ತೆರಳಲಿಲ್ಲ. ಅದಕ್ಕೆ ಅವರು ದ್ರೌಪದಿಯನ್ನು ಉಪೇಕ್ಷಿಸಿದ್ದರು ಎಂಬುದೇ ಕಾರಣ. ಅಪ್ರಮೇಯನಾದ ಅವನು ಕೂಡಲೇ ವಿದುರನ ಮನೆಗೆ ನಡೆದ.

ವಿ: ೧) ದುರ್ಯೋಧನನ ಆತಿಥ್ಯವನ್ನು ಸ್ವೀಕರಿಸದ ಕೃಷ್ಣನನ್ನು ಭೀಷ್ಮ, ದ್ರೋಣಾದಿಗಳು ತಮ್ಮ ಮನೆಗೆ ಆಹ್ವಾನಿಸಿದಾಗ ಕೃಷ್ಣ ಅವರಲ್ಲಿಗೂ ತೆರಳಲಿಲ್ಲ. ಅವರೆಲ್ಲ ದ್ರೌಪದಿ ವಸ್ತ್ರಾಪಹರಣ ಪ್ರಸಂಗದಲ್ಲಿ ಪಾಂಡವರನ್ನು, ವಿಶೇಷವಾಗಿ ದ್ರೌಪದಿಯನ್ನು ಉಪೇಕ್ಷಿಸಿದ್ದುದೇ ಮುಖ್ಯ ಕಾರಣವಾಗಿತ್ತು. ತನ್ನ ಪರಮ ಭಕ್ತಳಾದ ದ್ರೌಪದಿಗೆ ನ್ಯಾಯ ಸಲ್ಲಿಸದ ಅವರ ಆತಿಥ್ಯ ತನಗೆ ಪ್ರಿಯವಲ್ಲ ಎಂದು ಆ ಮೂಲಕ ಸಾರಿದ.

---

೬೦. ಸರ್ವಮೇತನ್ನ ಭೋಕ್ತವ್ಯಮನ್ನಂ ದುಷ್ಪಾಭಿಸಂಹಿತಮ್ ।
ಕ್ಷತ್ತುರೇಕಸ್ಯ ಭೋಕ್ತವ್ಯಮಿತಿ ಮೇ ನಿಶ್ಚಿತಾ ಮತಿಃ ॥ – ಭಾರತ (ಉದ್ಯೋಗ. ೯೧/೩೨)

೬೦. ಕುತಃ ದ್ರೌಪದೀವಸ್ತ್ರಾಹರಣಸಮಯೇ ಉಪೇಕ್ಷಿತೇತಿ ಹೇತೋರಿತ್ಯರ್ಥಃ । – (ವ.)

೨) ದ್ರೌಪದಿ ಭಾವಿ ಸರಸ್ವತಿ, ಎಂದರೆ ಸರ್ವ ವಿದ್ಯೆಯ ಅಭಿಮಾನಿನಿ ದೇವತೆ. ಅವಳ ಅವಮಾನವೆಂದರೆ ವಿದ್ಯೆಗೆ ಮಾಡಿದ ಅವಮಾನವೇ ಸರಿ. ವಿದ್ಯೆಯನ್ನು ಅವಮಾನಿಸುವವರನ್ನು ಹೇಗೋ ಹಾಗೆ ಅದರ ಅವಮಾನವನ್ನು ಪ್ರತಿಭಟಿಸದವರನ್ನೂ ಸಹ ಶ್ರೀಹರಿ ಮೆಚ್ಚಲಾರ ಎಂಬುದಕ್ಕೆ ಇದು ಅಪೂರ್ವ ನಿದರ್ಶನ.

೩) ವಿದ್ಯೆಯನ್ನು ಅಭ್ಯಾಸ ಮಾಡದಿರುವುದೂ ಸಹ ಒಂದು ಬಗೆಯ ವಿದ್ಯಾಭಿಮಾನಿನಿಯ ದ್ರೋಹವೇ ಆದ್ದರಿಂದ ಅಜ್ಞಾನಿಗಳ ನೈವೇದ್ಯಾದಿಗಳನ್ನು ಸಹ ಶ್ರೀಹರಿ ಸ್ವೀಕರಿಸನು.

೪) ಹೀಗೆ ಅವರೆಲ್ಲರ ಆತಿಥ್ಯವನ್ನು ನಿರಾಕರಿಸಿದ ಕೃಷ್ಣ ಕೊನೆಗೆ ತೆರಳಿದ್ದು ವಿದುರನ ಮನೆಗೆ. ಭೀಷ್ಮಾದಿಗಳ ಆತಿಥ್ಯವನ್ನು ಸ್ವೀಕರಿಸದ ಮೂಲಕ ಕೃಷ್ಣ ಅವರ ಅಂತ್ಯವನ್ನೂ ಸೂಚಿಸಿದ ಎಂದು ತಿಳಿಯಬೇಕು. ಮುಂದೆ ಗೀತೆಯಲ್ಲಿ ಭೀಷ್ಮಾದಿಗಳೆಲ್ಲ ತನ್ನಿಂದ ಈಗಾಗಲೇ ಹತರಾಗಿರುವರು ಎಂದು ನುಡಿಯುವುದು ಇದಕ್ಕೆ ಗಮಕ (೧೧/೩೪). ಅದಕ್ಕೆ ಕಾರಣವನ್ನು ಅವನೇ ಇಲ್ಲಿ ತಿಳಿಸಿರುವನು.

೫) ದ್ರೌಪದಿಗೆ ನ್ಯಾಯ ಸಲ್ಲಿಸಲೆಂದು ಹೋರಾಡಿದವನು ವಿದುರನೊಬ್ಬನೇ. ಅದಕ್ಕೆಂದೇ ಅವನ ಆತಿಥ್ಯ ಕೃಷ್ಣನಿಗೆ ಪ್ರಿಯ. ವಿದ್ಯೆಯ ಮೇಲಿನ ಆದರವನ್ನು ವಿದುರ ಅದರ ಅವಮಾನದ ವಿರುದ್ಧ ಪ್ರತಿಭಟನೆ ನಡೆಸಿ ತೋರಿದ್ದ. ವಿದುರ ಅದರಲ್ಲಿ ಯಶಸ್ವಿಯಾಗದಿದ್ದರೂ ಪ್ರಾಮಾಣಿಕವಾಗಿ ಪ್ರಯತ್ನ ಮಾಡಿದ್ದ. ಅದನ್ನು ಮೆಚ್ಚಿ ಕೃಷ್ಣ ಅವನ ಆತಿಥ್ಯವನ್ನು ಸ್ವೀಕರಿಸಲೆಂದು ತಾನಾಗಿಯೇ ಅವನ ಬಳಿಗೆ ತೆರಳಿದ.

೬) ಆ ಘಟನೆ ನಡೆದು ಹದಿಮೂರು ವರ್ಷಗಳಷ್ಟು ದೀರ್ಘಕಾಲ ಕಳೆದಿದ್ದರೂ ಕೃಷ್ಣ ಅದನ್ನು ಮರೆತಿಲ್ಲ ಎಂಬುದನ್ನು ಗಮನಿಸಬೇಕು.

೭) ಸತ್ಕಾರ್ಯ ದುಷ್ಕಾರ್ಯಗಳು ಎಷ್ಟೇ ಕಾಲದ ಅನಂತರವಾಗಲೀ ಫಲಿಸುವುದು ನಿಶ್ಚಿತ ಎಂದು ಆ ಮೂಲಕ ತಿಳಿಸಿದ.

೮) ಆ ಪ್ರಸಂಗದಲ್ಲಿ ಲೋಕ ದೃಷ್ಟಿಯಲ್ಲಿ ಕೃಷ್ಣ ಅಲ್ಲಿರಲಿಲ್ಲ ಎಂದರೆ ಪರೋಕ್ಷದಲ್ಲೇ ಆಗಲೀ ಕೃಷ್ಣ ವಿದ್ಯೆಗೆ ಅವಮಾನ ಆಗುವುದನ್ನು ಮೆಚ್ಚನು ಎಂದು ಇದರಿಂದ ತಿಳಿಯುವುದು.

೯) ಆದರೆ ದ್ರೌಪದಿಯ ಮೇಲಿನ ತನ್ನ ಪ್ರೀತಿಯನ್ನು ಕೇವಲ ಮಾತುಗಳಿಂದ ಮಾತ್ರವಲ್ಲದೇ ಕೃತಿಯಿಂದಲೂ ಪ್ರತಿಭಟನೆ ಮಾಡಿ, ಪ್ರತಿಜ್ಞೆಗಳನ್ನೂ ಮಾಡಿ ಮುಂದೆ ಕುರುಕ್ಷೇತ್ರದಲ್ಲಿ ಅವುಗಳನ್ನು ನೆರವೇರಿಸಿದ ಅಪ್ರತಿಮ ವಿದ್ಯಾಪ್ರಿಯ ಭೀಮಸೇನ. ಆದ್ದರಿಂದ ವಿದುರನ ಆತಿಥ್ಯವನ್ನು ಒಮ್ಮೆ ಸ್ವೀಕರಿಸಿದ ಕೃಷ್ಣ ಭೀಮಸೇನನೇ ಆದ ಶ್ರೀವಾಯುದೇವರ ಆತಿಥ್ಯವನ್ನು ಸರ್ವದಾ ಸ್ವೀಕರಿಸುವನು ಎಂದರ್ಥ.

೮) ಅದೇಕೆ, ಶ್ರೀಹರಿ ಸರ್ವದಾ ನೈವೇದ್ಯವನ್ನು ಸ್ವೀಕರಿಸುವುದು ಭಾರತೀರಮಣ–ಮುಖ್ಯಪ್ರಾಣ ಸಮರ್ಪಿಸಿದಾಗಲೇ; ಇತರರು ಭಾರತೀರಮಣಮುಖ್ಯಪ್ರಾಣಾಂತರ್ಗತ ಎಂದು ಸಮರ್ಪಿಸಿದಾಗಲೇ (**'ವಾಯೌ ಮುಖ್ಯಧಿಯಾ'**). ಹೀಗೆ ನೈವೇದ್ಯ ಸಮರ್ಪಣೆಯ ಹಿಂದಿನ ಅನುಸಂಧಾನದ ಬಗೆಯನ್ನು ಅತ್ಯಂತ ಮನೋಜ್ಞವಾಗಿ ಈ ಪ್ರಸಂಗ ವಿಶ್ಲೇಷಿಸುವುದು ಎಂಬುದನ್ನು ಗಮನಿಸಬೇಕು.

ಸ ತೇನ ಭಕ್ತ್ಯಾऽಭಿಗತಃ ಪ್ರಸನ್ನಃ
ಪ್ರವಿಶ್ಯ ಚಾಂತರ್ಗೃಹಮೀಶ್ವರೋऽಜಃ ।
ಭಕ್ತ್ಯಾऽಭಿಪೂರ್ಣೇನ ಸಸಂಭ್ರಮೇಣ
ಸಂಪೂಜಿತಃ ಸರ್ವಸಮರ್ಪಣೇನ ॥ ೬೧ ॥

ಅ: ವಿದುರನಿಂದ ಭಕ್ತಿಪೂರ್ವಕವಾಗಿ ಸ್ವಾಗತಿಸಲ್ಪಟ್ಟ ಕೃಷ್ಣ ಪ್ರಸನ್ನನಾಗಿ ಅವನ ಮನೆಯೊಳಗೆ ಹೊಕ್ಕ. ವಿದುರ ಭಕ್ತಿಪೂರ್ವಕವಾಗಿ ಅತ್ಯಂತ ಸಂಭ್ರಮದಿಂದ ಸರ್ವ ಸಮರ್ಪಣೆ ಮಾಡಿ ಕೃಷ್ಣನನ್ನು ಪೂಜಿಸಿದ.

ವಿ: ೧) ಕೃಷ್ಣನನ್ನು ವಿದುರ ಪರಮ ಭಕ್ತಿಯಿಂದ ಸ್ವಾಗತಿಸಿ ಬಗೆಬಗೆಯ ಭಕ್ಷ್ಯ ಭೋಜ್ಯಗಳಿಂದ ಕೂಡಿದ್ದ ಅನ್ನವನ್ನು ನೀಡಿ ಸತ್ಕರಿಸಿದ. ಕೃಷ್ಣ ಅವುಗಳನ್ನೆಲ್ಲ ವಿಪ್ರವೃಂದದ ಸಮೇತನಾಗಿಯೇ ಸ್ವೀಕರಿಸಿದ. ಎಂದರೆ ಜನ ತಿಳಿದಿರುವಂತೆ ಕೃಷ್ಣ ವಿದುರನ ಮನೆಯಲ್ಲಿ ಹಾಲನ್ನು ಮಾತ್ರ ಸ್ವೀಕರಿಸಿದ್ದಲ್ಲ ಎಂಬುದು ಸ್ಫುಟಪಡುವುದು.

೨) ಹರಿಕಥಾಮೃತಸಾರ ಮೊದಲಾದ ಕೃತಿಗಳಲ್ಲಿ 'ವಿದುರನ ಆಲಯದಿ ಪಾಲುಂಡು' ಎಂಬರ್ಥದ ಮಾತುಗಳು ಬಂದಿರುವುದು ಬೇರೆ ಅರ್ಥದಲ್ಲಿ ಎಂದು ತಿಳಿಯಬೇಕು. ಅಲ್ಲಿ ಪಾಲು

---

೬೧. ತಾನುವಾಚ ಮಹಾತೇಜಾಃ ಕೌರವಾನ್ ಮಧುಸೂದನಃ ।
ಸರ್ವೇ ಭವಂತೋ ಗಚ್ಛಂತು ಸರ್ವಾ ಮೇऽಪಚಿತಿಃ ಕೃತಾ ॥ – ಭಾರತ (ಉದ್ಯೋಗ. ೯೧/೩೭)

೬೧. ತತಃ ಕ್ಷತ್ತಾऽನ್ನಪಾನಾನಿ ಶುಚೀನಿ ಗುಣವಂತಿ ಚ ।
ಉಪಾಹರದನೇಕಾನಿ ಕೇಶವಾಯ ಮಹಾತ್ಮನೇ ॥
ತೈಸ್ತರ್ಪಯಿತ್ವಾ ಪ್ರಥಮಂ ಬ್ರಾಹ್ಮಣಾನ್ ಮಧುಸೂದನಃ ।
ವೇದವಿದ್ಭ್ಯೋ ದದೌ ಕೃಷ್ಣಃ ಪರಮದ್ರವಿಣಾನ್ಯಪಿ ॥
ತತೋऽನುಯಾಯಿಭಿಃ ಸಾರ್ಧಂ ಮರುದ್ಭಿರಿವ ವಾಸವಃ ।
ವಿದುರಾನ್ನಾನಿ ಬಭುಜೇ ಶುಚೀನಿ ಗುಣವಂತಿ ಚ ॥ – ಭಾರತ (ಉದ್ಯೋಗ. ೯೧/೩೯-೪೧)

೬೧. ಸರ್ವಸಮರ್ಪಣೇನ ದೇಹೇಂದ್ರಿಯಪುತ್ರಾದ್ಯರ್ಥಸಮರ್ಪಣೇನ । – (ಜ.)

ಎಂಬುದಕ್ಕೆ ತನ್ನ ಭಾಗ ಎಂದು, ಅಥವಾ ಅವೆಲ್ಲ ಹಾಲಿನಂತೆ ಪರಿಶುದ್ಧವಾದ ಪದಾರ್ಥ–ಗಳಾಗಿದ್ದವು ಎಂದು ಅರ್ಥಮಾಡಿಕೊಳ್ಳಬೇಕು.

೩) ಶ್ರೀಪುರಂದರದಾಸರು 'ವಿದುರನ ಭಾಗ್ಯವಿದು' ಎಂಬ ದೇವರನಾಮದಲ್ಲಿ ಈ ವಿದುರಾತಿಥ್ಯಪ್ರಸಂಗವನ್ನು ಅಪೂರ್ವವಾಗಿ ವಿವರಿಸಿರುವರು.

೪) ಶ್ರೀಮದಾಚಾರ್ಯರು ಸರ್ವಸಮರ್ಪಣೇನ ಎಂಬ ಇಲ್ಲಿಯ ಪದದಿಂದ ಮಹಾ–ಭಾರತದಲ್ಲಿ ಬಗೆಬಗೆಯ ಅನ್ನಪಾನಗಳಿಂದ ಎಂದು ತಿಳಿಸಿರುವ ಅರ್ಥವನ್ನೇ ಸೂಚಿಸಿರುವರು ಎಂದು ತಿಳಿಯಬೇಕು.

೫) ವಿದುರ ಹೀಗೆ ತನ್ನ ವಿಶಿಷ್ಟ ಭಕ್ತಿಯಿಂದಾಗಿ ಶ್ರೀಕೃಷ್ಣನಿಗೆ ತುಂಬಾ ಪ್ರಿಯನೆನ್ನಿಸಿದರೂ ಅವನ ಭಕ್ತಿಯ ಹಿರಿಮೆ ಭೀಮ, ದ್ರೌಪದಿಯರ ಮಟ್ಟದ್ದಾಗಿರಲಿಲ್ಲ ಎಂಬ ಅಂಶವೂ ಅದೇ ಪ್ರಸಂಗದಲ್ಲಿ ಬಂದಿರುವುದನ್ನು ಗಮನಿಸಬೇಕು. ವಿದುರ ಅಂದು ರಾತ್ರಿ ಕೃಷ್ಣನೊಂದಿಗೆ ಬಗೆಬಗೆಯ ಮಾತುಕಥೆಗಳಲ್ಲಿ ತೊಡಗಿ ಕೃಷ್ಣ ಹಾಗೆ ಅವಿವೇಕಿಯಾದ ದುರ್ಯೋಧನನಿಗೆ ಬುದ್ಧಿ ಹೇಳಲು ಬಂದಿದ್ದು ಸರಿಯಲ್ಲವೆಂದು, ಆ ದುಷ್ಟ ಕೃಷ್ಣನನ್ನು ಅವಮಾನಿಸುವ ದುಷ್ಕಾರ್ಯಕ್ಕೂ ಎಳೆಸುವ ಅಪಾಯವಿರುವುದರಿಂದ ದುರ್ಯೋಧನನ ಸಭೆಗೆ ಹೋಗುವುದು ತರವಲ್ಲವೆಂದು ಸಲಹೆ* ನೀಡಿದ. ಇಲ್ಲಿ ಕೃಷ್ಣನ ಬಗ್ಗೆ ಅವನ ಪರಿಜ್ಞಾನ ಯಥಾರ್ಥವಾಗಿರಲಿಲ್ಲ, ಒಂಟಿಯಾದ ಕೃಷ್ಣನಿಗೆ ಅಪಾಯ ತಪ್ಪುವುದು ಎಂಬ ಅವನ ಶಂಕೆಯಲ್ಲಿ ಕೃಷ್ಣನ ಸರ್ವಸಾಮರ್ಥ್ಯದ ಬಗ್ಗೆ ವಿಸ್ಮರಣೆ ಉಂಟಾಗಿತ್ತು ಎನ್ನದೇ ವಿಧಿಯಿಲ್ಲ. ಇದರಿಂದಾಗಿ ಅವನದು ಭಿನ್ನಭಾಗವತಧರ್ಮ ಎಂದಾಗುವುದು (೧೮/೨೨).

ಕುರುಸಭೆಯಲ್ಲಿ ಶ್ರೀಕೃಷ್ಣ

ಪರೇ ದಿನೇ೨ಸೌ ಧೃತರಾಷ್ಟ್ರಸೂನುನಾ
ಸಮಾನೀತಃ ಸಂಸದಿ ಕೌರವಾಣಾಮ್ ।
ವಿವೇಶ ದಿವ್ಯೇ ಮಣಿಕಾಂಚನಾಸನೇ
ಸಾರ್ಧಂ ಮುನೀಂದ್ರೈಃ ಪರಮಾರ್ಥವೇದಿಭಿಃ ॥ ೬೨ ॥

---

* ತಂ ಭುಕ್ತವಂತಮಾಶ್ವಸ್ತಂ ನಿಶಾಯಾಂ ವಿದುರೋ೨ಬ್ರವೀತ್ ।
ನೇದಂ ಸಮ್ಯಗ್ ವ್ಯವಸಿತಂ ಕೇಶವಾಗಮನಂ ತವ ॥ ...
ತ್ಯಕ್ತಾತ್ಮನಃ ಸಹ ದುರ್ಯೋಧನೇನ ಹ್ಯಪ್ಯಾಯೋದ್ಧುಂ ಪಾಂಡವಾನ್ ಸರ್ವಯೋದ್ಧಾ ।
ತೇಷಾಂ ಮಧ್ಯೇ ಪ್ರವಿಶೇಥಾ ಯದಿ ತ್ವಂ ನ ತನ್ಮತಂ ಮಮ ದಾಶಾರ್ಹವೀರ ॥ –ಭಾರತ(೫/೯೨/೧,೨೬)

ಅ: ಮಾರನೆಯ ದಿನ ಕೃಷ್ಣನನ್ನು ದುರ್ಯೋಧನ ಕೌರವರ ಸಭೆಗೆ ಕರೆದೊಯ್ದ. ಕೃಷ್ಣ ಅಲ್ಲಿ ಮಣಿಖಚಿತವಾದ ದಿವ್ಯವಾದ ಚಿನ್ನದ ಪೀಠದ ಮೇಲೆ ಪರತತ್ತ್ವ ತಿಳಿದಿದ್ದ ಮುನಿಶ್ರೇಷ್ಠರು-ಗಳೊಂದಿಗೆ ಮಂಡಿಸಿದ.

ವಿ: ೧) ಮಾರನೆಯ ದಿನ ಕೃಷ್ಣನನ್ನು ಸಭೆಗೆ ಕರೆದೊಯ್ಯಲೆಂದು ದುರ್ಯೋಧನ ಶಕುನಿಯೊಂದಿಗೆ ವಿದುರನ ಮನೆಗೆ ತೆರಳಿ ಕೃಷ್ಣನನ್ನು ಸಭೆಗೆ ಬರಲೆಂದು ಆಹ್ವಾನಿಸಿ ತನ್ನ ರಥದಲ್ಲಿ ಕೂಡಲು ಕೇಳಿಕೊಂಡ. ತನ್ನ ರಥದಲ್ಲಿ ಕರೆದೊಯ್ಯುವ ಮೂಲಕ ಕೃಷ್ಣನನ್ನು ತನ್ನ ವಶ ಮಾಡಿಕೊಳ್ಳುವ ಕುತಂತ್ರ ಅವನದಾಗಿತ್ತು. ಆದರೆ ಸರ್ವಜ್ಞನಾದ ಕೃಷ್ಣ ತನ್ನ ರಥದಲ್ಲಿ ಸಭೆಗೆ ತೆರಳಿದನೇ ಹೊರತು ಅವನ ರಥದಲ್ಲಲ್ಲ. ಹೀಗೆ ಮಾಡುವ ಮೂಲಕ ದುಷ್ಟರ ಹಂಗಿಗೆ ಸರ್ವಥಾ ಒಳಗಾಗಬಾರದು ಎಂಬ ತತ್ವವನ್ನು ಜಗತ್ತಿಗೆ ಸಾರಿದ.

೨) ದುಷ್ಟಶಕ್ತಿಗಳು ಶಿಷ್ಟರನ್ನು ತಮ್ಮ ವಶಕ್ಕೆ ತೆಗೆದುಕೊಳ್ಳಲು ಬಗೆಬಗೆಯ ಪ್ರಯತ್ನಗಳನ್ನು ನಡೆಸುತ್ತಲೇ ಇರುವವು. ಅವುಗಳ ಬಗ್ಗೆ ಸರ್ವಾತ್ಮನಾ ಎಚ್ಚರದಿಂದಿದ್ದು ಅವುಗಳ ಅಂತಹ ಪ್ರಯತ್ನಗಳನ್ನೆಲ್ಲಾ ವಿಫಲಗೊಳಿಸಬೇಕೆಂಬುದು ಕೃಷ್ಣನ ಸಂದೇಶ.

೩) ಸಭೆಗೆ ತೆರಳಿದ ಮೇಲೆ ಕೃಷ್ಣನನ್ನು ಉನ್ನತವಾದ ಮಣಿಖಚಿತ ಸ್ವರ್ಣಪೀಠದಲ್ಲಿ ಕೂಡಲೆಂದು ಪ್ರಾರ್ಥಿಸಿದಾಗ ಅವನು 'ಅಪಾರಸಂಖ್ಯೆಯ ಋಷಿಮುನಿಗಳೆಲ್ಲ ನಿಂತುಕೊಂಡಿರುವಾಗ ತಾನು ಕೂಡುವುದು* ಹೇಗೆ?' ಎಂದು ಅಂತರಿಕ್ಷದಲ್ಲಿ ನೆರೆದಿದ್ದ ಮುನಿವೃಂದವನ್ನು ತೋರಿಸುವನು. ಅವರಿಗೆಲ್ಲಾ ಆಸನವ್ಯವಸ್ಥೆಯಾದ ಮೇಲೆಯೇ ತಾನು ತನ್ನ ಪೀಠದಲ್ಲಿ ಕುಳಿತ. ಮುನಿಜನರೆಲ್ಲ ಅಲ್ಲಿ ಹಾಗೆ ಸೇರಿದ್ದುದು ಕೃಷ್ಣನ ಮಾತುಗಳನ್ನು ಕೇಳುವ ಭಾಗ್ಯ ಪಡೆಯಲೆಂದು. ಹೀಗೆ ಮಾಡುವ ಮೂಲಕ ಮುನಿಜನರಿಗೆ ಗೌರವ ಸಲ್ಲಿಸಬೇಕಾದ ವಿಧಿಯನ್ನು ತಿಳಿಸಿಕೊಡುವನು. ಈ ಪ್ರಸಂಗವನ್ನು ಶ್ರೀಮದಾಚಾರ್ಯರು ಇಲ್ಲಿ **'ಸಾರ್ಧಂ ಮುನೀಂದ್ರೈಃ'** ಎಂಬ ಪದದಿಂದ ತಿಳಿಸಿರುವರು.

೪) ಕುಮಾರವ್ಯಾಸ ಭಾರತದಲ್ಲಿ ಈ ಪ್ರಸಂಗದಲ್ಲಿ ಕೃಷ್ಣ ಬರುವ ಮುನ್ನ ದುರ್ಯೋಧನ ಸಿಂಹಾಸನದಲ್ಲಿ ಕುಳಿತಿದ್ದವನು ಹಾಗೆಯೇ ಕುಳಿತಿದ್ದನೆಂದು, ಇತರರೆಲ್ಲ ಎದ್ದು ನಿಂತು ಕೃಷ್ಣನಿಗೆ ಗೌರವ ಸೂಚಿಸಿದರು, ಅವನು ಮಾತ್ರ ಅಗೌರವ ತೋರಲೆಂದು ಹಾಗೆ ಮಾಡಿದ್ದನೆಂದು, ಅದನ್ನು ಕಂಡ ಕೃಷ್ಣ ತನ್ನ ಪಾದದ ಹೆಬ್ಬೆರಳಿನಿಂದ ನೆಲವನ್ನು ಒತ್ತಿದಾಗ ದುರ್ಯೋಧನ ತನ್ನ ಪೀಠದ

---

೬೨. ಪಾರ್ಥಿವೀಂ ಸಮಿತಿಂ ದ್ರಷ್ಟುಮೃಷಯೋऽಭ್ಯಾಗತಾ ನೃಪ ॥
ನಿಮಂತ್ರ್ಯಂತಾಮಾಸನೈಶ್ಚ ಸತ್ಕಾರೇಣ ಚ ಭೂಯಸಾ ।
ನೈತೇಷ್ವನುಪವಿಷ್ಟೇಷು ಶಕ್ಯಂ ಕೇನಚಿದಾಸಿತುಮ್ ॥ ... (ಶ್ರೀಕೃಷ್ಣನ ವಚನ) – ಭಾರತ (೫/೯೪/೪೨, ೪೩)

ಸಮೇತವಾಗಿ ಕೃಷ್ಣನ ಪಾದದ ಮೇಲೆ ಉರುಳಿಬಿದ್ದನೆಂದು, ಕೃಷ್ಣ ಅವನನ್ನು ಹಿಡಿದೆತ್ತಿ 'ನಾನಾಗಿಯೇ ನಿನ್ನ ಬಳಿ ಬರುತ್ತಿದ್ದೆ, ನಮಸ್ಕರಿಸಲು ನಿನಗೇಕೆ ಆತುರ' ಎಂದು ವಿನೋದ ಮಾಡಿ ಅವನ ಆಂತರ್ಯವನ್ನು ಬಯಲು ಮಾಡಿದನೆಂದು ಉಲ್ಲೇಖವಿದೆ ('ಕವಿದು ಬಿದ್ದನು ಹರಿಯ ಚರಣದಲಿ' – ಉದ್ಯೋಗ. ೮/೫೯). ಆದರೆ, ಮೂಲಮಹಾಭಾರತದ ಉಲ್ಲೇಖದಂತೆ ದುರ್ಯೋಧನ ಕೃಷ್ಣನನ್ನು ಕರೆತರಲೆಂದು ಹೊರಟು ಅವನೊಂದಿಗೇ ಸಭೆಯನ್ನು ಪ್ರವೇಶಿಸು–ತ್ತಿರುವುದರಿಂದ ಈ ಘಟನೆ ಸಂಪೂರ್ಣವಾಗಿ ಕವಿ ಕಲ್ಪನೆ ಮಾತ್ರ ಎಂದು ಸ್ಪುಟಪಡುವುದು. ಕೇವಲ ಕೃಷ್ಣನ ಹಿರಿಮೆಯನ್ನು ಸಾರಲೆಂದು ಕವಿಯು ಹಾಗೆ ಪ್ರಸಂಗವನ್ನು ಕಲ್ಪಿಸಿರುವುದು ಸ್ಪಷ್ಟ. ಆದರೆ, ಶ್ರೀಮದಾಚಾರ್ಯರು ಮಹಾಭಾರತದ ಇತಿಹಾಸವನ್ನು ಅತ್ಯಂತ ಪ್ರಾಮಾಣಿಕವಾಗಿ ನಿರೂಪಿಸಿರುವರು ಎಂದು ಗಮನಿಸಬೇಕು.

೫) ಭಾಸನ 'ದೂತವಾಕ್ಯ'ದಲ್ಲಿ ಮತ್ತೊಂದು ಕಲ್ಪನೆಯಿದೆ – ಕೃಷ್ಣ ಸಭೆಗೆ ಆಗಮಿಸುವುದನ್ನು ತಿಳಿದ ದುರ್ಯೋಧನ ಸಭೆಯಲ್ಲಿದ್ದ ರಾಜರುಗಳಿಗೆಲ್ಲ ಆಜ್ಞಾಪಿಸುವನು – ಕೃಷ್ಣ ಬಂದಾಗ ಯಾರೂ ಸಹ ಎದ್ದು ನಿಂತು ಅವನಿಗೆ ಗೌರವವನ್ನು ಸೂಚಿಸಬಾರದು, ಹಾಗೆ ಏಳುವವರಿಗೆ ಹನ್ನೆರಡು ಸುವರ್ಣ ಭಾರಗಳ ದಂಡ ವಿಧಿಸಲಾಗುವುದು. ಮುಂದೆ ಕೃಷ್ಣ ಪ್ರವೇಶಿಸಿದಾಗ ಆ ಎಲ್ಲ ರಾಜರುಗಳೂ ಸಹ ಅವನ ಮಾತನ್ನು ಉಲ್ಲಂಘಿಸಿ ಎದ್ದು ನಿಲ್ಲುವರು. ಅವರೆಲ್ಲ ತೀರ್ಮಾನಿಸಿದರಂತೆ – 'ಕೃಷ್ಣನಂತಹ ಸರ್ವಮಾನ್ಯನಾದವನು ಪ್ರವೇಶಿಸಿದಾಗ ಎದ್ದು ನಿಂತು ಗೌರವ ಸೂಚಿಸದೇ ಪ್ರಾಣ ಕಳೆದುಕೊಳ್ಳುವುದಕ್ಕಿಂತ ಈ ಪಾಪಿ ದುರ್ಯೋಧನನಿಗೆ ಹನ್ನೆರಡು ಸುವರ್ಣ ಭಾರಗಳ ದಂಡವನ್ನು ತೆರುವುದೇ ಮೇಲು'. ಮುಂದೆ ನಡೆದದ್ದು ಇನ್ನೂ ಸೋಜಿಗ. ಅವರಿಗೆಲ್ಲ ಹಾಗೆ ಹೇಳಿದ ದುರ್ಯೋಧನ ಕೃಷ್ಣ ಬಂದಾಗ ಅವನ ವರ್ಚಸ್ಸಿಗೆ ಸೋತು ಸ್ವತಃ ತಾನೇ ಎದ್ದು ನಿಂತು *ಗೌರವ ಸೂಚಿಸಿಬಿಡುವನು. ಇದೂ ಸಹ ಕವಿಯ ಕಲ್ಪನೆಯೇ ಆದರೂ ಮಹಾಭಾರತದ ಇತಿಹಾಸವಲ್ಲ ಎಂಬುದನ್ನು ಗಮನಿಸಬೇಕು. ಶ್ರೀಮದ್ಧ್ವಾಚಾರ್ಯರು ಎಲ್ಲಿಯೂ ಕಲ್ಪನೆಗೆ ಅವಕಾಶ ನೀಡದೇ ಇತಿಹಾಸ ಪುರಾಣಗಳನ್ನು ಅತ್ಯಂತ ಪ್ರಾಮಾಣಿಕ ನೆಲೆಗಟ್ಟಿನಲ್ಲೇ ನಿರೂಪಿಸಿರುವರು, ಇದು ಸಾರಸ್ವತ ಪ್ರಪಂಚದ ಮಹತ್ಸಾಧನೆಗಳಲ್ಲೊಂದು.

ಸಂಪೂಜಿತೋ ಭೀಷ್ಮಮುಖ್ಯೈಃ ಸಮಸ್ತೈ
ರರಾಜ ರಾಜೀವಸಮಾನನೇತ್ರಃ ।
ಯಥೋಚಿತಾಸ್ತತ್ರ ವಿಧಾಯ ವಾರ್ತಾ
ಜಗಾದ ಕಾಲೇ ಕಲಿಕಲ್ಮಷಾಪಹಃ ॥ ೬೩ ॥

---

* ಕೇಶವಸ್ಯ ಪ್ರಭಾವೇನ ಚಲಿತೋಽಸ್ಮ್ಯಾಸನಾದಹಮ್ ॥ – ದೂತವಾಕ್ಯ (೧/೧೭)

ಅ: ಕಲಿಯ ದೋಷವನ್ನು ಪರಿಹರಿಸುವವನೂ, ಕಮಲನೇತ್ರನೂ ಆದ ಕೃಷ್ಣ ಭೀಷ್ಮ ಮೊದಲಾದವರಿಂದ ಪೂಜಿತನಾಗಿ ಶೋಭಿಸಿದ. ಅವರೊಂದಿಗೆ ಯಥೋಚಿತವಾದ ಮಾತು-ಗಳನ್ನಾಡಿ, ಯೋಗ್ಯ ಕಾಲದಲ್ಲಿ ತಾನು ನುಡಿದ.

ವಿ: ಮುಂದೆ ಭೀಷ್ಮಾದಿಗಳಿಂದ ಪೂಜಿತನಾದ ಕೃಷ್ಣ ಪಾಂಡವರೊಂದಿಗೆ ಸಂಧಾನ ಮಾಡಿ-ಕೊಳ್ಳುವುದೇ ನಿಜವಾದ ವಿವೇಕ ಎಂದು ತಿಳಿಸಿದ ಎಂದರ್ಥ.

ಶ್ರೀಕೃಷ್ಣಸಂದೇಶ

ವೈಚಿತ್ರವೀರ್ಯ ಸ್ವಕುಲಸ್ಯ ವೃದ್ಧ್ಯೈ
ಪ್ರದೇಹಿ ರಾಜ್ಯಂ ತವ ಸತ್ಸುತಾಯ ।
ಯಶಶ್ಚ ಧರ್ಮಂ ಪರಮಂ ಪ್ರಸಾದಂ
ಮಮ ತ್ವಮಾಪ್ನೋಷಿ ತದೈವ ರಾಜನ್ ॥ ೬೪ ॥

ಅ: 'ಧೃತರಾಷ್ಟ್ರನೇ, ನಿನ್ನ ಕುಲದ ಏಳಿಗೆಗಾಗಿ ನಿನ್ನ ಸುಪುತ್ರನಾದ ಧರ್ಮರಾಜನಿಗೆ ರಾಜ್ಯವನ್ನು ನೀಡು. ಆಗಲೇ ನೀನು ಕೀರ್ತಿ, ಪುಣ್ಯ ಹಾಗೂ ನನ್ನ ಪರಮ ಪ್ರಸಾದವನ್ನು ಪಡೆಯುವಿ'.

ವಿ: ೧) ಕೃಷ್ಣ ಇಲ್ಲಿ ಪಾಂಡುಪುತ್ರನಾದ ಧರ್ಮರಾಜನನ್ನು ಧೃತರಾಷ್ಟ್ರನಿಗೆ ಸತ್ಪುತ್ರ ಎಂದು ಕರೆಯುವ ಮೂಲಕ ಧೃತರಾಷ್ಟ್ರನಿಗೆ ಸದ್ಗತಿ ಲಭಿಸುವುದು ಧರ್ಮರಾಜನಿಗೆ ರಾಜ್ಯ ನೀಡಿದಾಗಲೇ ಹೊರತು ದುರ್ಯೋಧನನಿಗೆ ರಾಜ್ಯ ನೀಡಿದಾಗ ಅಲ್ಲ ಎಂಬ ತತ್ವವನ್ನು ಸೂಚಿಸಿದ.

೨) ಪಾಂಡವರಿಗೆ ರಾಜ್ಯ ನೀಡಿದಾಗ ಧೃತರಾಷ್ಟ್ರ ನಿಷ್ಪಕ್ಷಪಾತಿ ಎಂಬ ಕೀರ್ತಿಯು, ಪಾಂಡವರಂತಹ ಅರ್ಹರಿಗೆ ರಾಜ್ಯ ನೀಡಿದ್ದರಿಂದಾಗಿ ಪುಣ್ಯವು, ಹಾಗೆ ಸ್ವಧರ್ಮವನ್ನು ಪಾಲಿಸಿದ್ದ-ರಿಂದಾಗಿ ಶ್ರೀಕೃಷ್ಣನ ಪರಮ ಪ್ರಸಾದವೂ ಲಭಿಸುವವು ಎಂದರ್ಥ.

ಅತೋಽನ್ಯಥಾ ಯಶಸೋ ಧರ್ಮತಶ್ಚ
ಹೀನಃ ಪ್ರತೀಪತ್ವಮುಪೈಷಿ ಮೇಽತಃ ।
ಇತೀರಿತಃ ಪ್ರಾಹ ಮಮಾತಿವರ್ತಿನಂ
ಸುತಂ ಸ್ವಯಂ ಮೇ ಪ್ರತಿಬೋಧಯೇತಿ ॥ ೬೫ ॥

---

೬೪. ತವ ಸತ್ಸುತಾಯೇತಿ ವದತಾ ದುರ್ಯೋಧನಾದಯೋ ದುಷ್ಪುತ್ರಾ ಇತಿ ಸೂಚಿತಮ್ ॥ – (ವಾ.)

ಅ: 'ಹಾಗೆ ಮಾಡದಿದ್ದಲ್ಲಿ ಕೀರ್ತಿಯನ್ನೂ, ಪುಣ್ಯವನ್ನೂ ಕಳೆದುಕೊಳ್ಳುವಿ. ನನಗೆ ವಿರೋಧಿಯೂ ಆಗುವಿ'. ಕೃಷ್ಣ ಹೀಗೆನ್ನಲು ಧೃತರಾಷ್ಟ್ರ ನುಡಿದ 'ನನ್ನ ಮಾತನ್ನು ಮೀರುವ ನನ್ನ ಮಗನಿಗೆ ನೀನೇ ತಿಳಿಹೇಳು'.

ವಿ: ಪಾಂಡವರಿಗೆ ರಾಜ್ಯ ನೀಡದಿರುವುದು ಕೀರ್ತಿ ಪುಣ್ಯಗಳ ನಾಶದೊಂದಿಗೆ ಕೃಷ್ಣನ ಆಗ್ರಹಕ್ಕೂ ಕಾರಣವಾಗುವುದು ಎಂದರ್ಥ. ಕೃಷ್ಣ ಹೀಗೆಂದಾಗಲೂ ಧೃತರಾಷ್ಟ್ರ ರಾಜ್ಯ ನೀಡುವ ಬದಲು ತನ್ನ ಮಗನಿಗೇ ಬೋಧಿಸಲು ಕೇಳಿಕೊಂಡದ್ದು ಅವನ ಅಸಾಮರ್ಥ್ಯಕ್ಕೆ ದ್ಯೋತಕ.

ಕೃಷ್ಣಬಂಧನಕ್ಕೆ ದುಷ್ಟಕೂಟದ ಸಂಚು

ಸ ವಾಸುದೇವೇನ ವಿಬೋಧಿತೋಽಪಿ
ಪಾಪಾಭಿಸಂಧಿರ್ಧೃತರಾಷ್ಟ್ರಸೂನುಃ।
ಉತ್ಥಾಯ ತಸ್ಮಾದನುಜೈರಮಾತ್ಯೈ-
ರ್ನಿಯಂತುಮೀಶಂ ಕುಮತಿರ್ವ್ಯಧಾನ್ಮತಿಮ್ ॥ ೬೬ ॥

ಅ: ಕೃಷ್ಣನಿಂದ ವಿಶೇಷವಾಗಿ ತಿಳಿಹೇಳಲ್ಪಟ್ಟರೂ ಪಾಪಬುದ್ಧಿಯ ದುರ್ಯೋಧನ ಅಲ್ಲಿಂದ ಮೇಲೆದ್ದು ತನ್ನ ತಮ್ಮಂದಿರೊಂದಿಗೂ, ಮಂತ್ರಿಗಳೊಂದಿಗೂ ಕೂಡಿ ಸರ್ವಸಮರ್ಥನಾದ ಕೃಷ್ಣನನ್ನು ಕಟ್ಟಿಹಾಕುವ ಮನಸ್ಸು ಮಾಡಿದ.

ವಿ: ೧) ಕೃಷ್ಣ ಸಭೆಯಲ್ಲಿ ಬಗೆಬಗೆಯಾಗಿ ಪಾಂಡವರ ಹಿರಿಮೆಯನ್ನು ವರ್ಣಿಸಿ ಅಂತಹ ಧರ್ಮಿಷ್ಠರು, ಬಲಿಷ್ಠರೂ ಆದ ಪಾಂಡವರ ರಾಜ್ಯವನ್ನು ಪಾಂಡವರಿಗೆ ನೀಡುವುದೇ ಮುಖ್ಯ ಕರ್ತವ್ಯ, ಪಾಂಡವರು ಈ ಸಮಯದಲ್ಲಿ ನೀನು ಪೂರ್ಣ ರಾಜ್ಯ ನೀಡದಿದ್ದರೂ ಸಂಧಾನಕ್ಕೆ ಸಿದ್ಧರಾಗಿರುವರು. ಅವರಿಗೆ ಐದು *ಗ್ರಾಮಗಳನ್ನು ನೀಡಿದರೂ ಯುದ್ಧ ತಪ್ಪುವುದು.

---

೬೫. ಅತೋಽನ್ಯಥೇತ್ಯತ್ರ ಅತೋಽನ್ಯಥಾ = ಅತೋಽನ್ಯಥಾ ಕರೋಷಿ ಚೇತ್ ಅತಃ= ಪೂರ್ವೋಕ್ತಾತ್ ಯಶಸೋ ಧರ್ಮತಶ್ಚ ಹೀನ ಇತ್ಯತಃ ಪದದ್ವಯಸ್ಯ ಸಂಬಂಧಃ ॥ – (ವಾ.)

೬೬. ನಿಯಂತುಮೀಶಮಿತ್ಯತ್ರ ನಿಯಂತುಂ= ಬದ್ಧುಮ್। ಕೇಶವಸಂಯಮಾಯೇತ್ಯತ್ರ ಸಂಯಮಃ ''ಯಮ ಉಪರಮಃ'' ಇತಿ ಧಾತೋಃ ಸಮ್ಯಗ್ಯಮಃ ಗಮನಾದಿಕಾರ್ಯಾಣಾಮುಪರಮೋ ಯಸ್ಮಾತ್ಸ ಸಂಯಮಃ। ಬಂಧನಮಿತಿ ಯಾವತ್ ॥ – (ವಾ.)

* **ಅವಿಸ್ಥಲಂ ವೃಕಸ್ಥಲಂ ಮಾಕಂದೀಂ ವಾರಣಾವತಮ್ ।**
ಅವಸಾನಂ ಭವತ್ವತ್ರ ಕಿಂಚಿದೇಕಂ ಚ ಪಂಚಮಮ್ ॥ – ಕೃ.ಭಾರತ (ಉದ್ಯೋಗ. ೩೧/೧೯)

೨) 'ಹಾಗೆ ಅವರು ಸಂಧಿಗೆ ಸಿದ್ಧರಿರುವುದು ಅಶಕ್ತಿಯಿಂದಲ್ಲ. ಭಯಂಕರ ಯುದ್ಧ ನಡೆದಾಗ ಸಂಭವಿಸುವ ಅಪಾರ ಮನುಕುಲದ ನಾಶವನ್ನು ತಪ್ಪಿಸಲೆಂದು ಮಾತ್ರ'.

೩) 'ಅವರ ಸಾಮರ್ಥ್ಯ ಅಪಾರವಾದುದು. ಅವರೊಂದಿಗೆ ಕಾದುವ ಯೋಗ್ಯತೆ ನಿನಗೆ ಸರ್ವಥಾ ಇಲ್ಲ. ಅವರನ್ನು ಗೆಲ್ಲಬಲ್ಲವರೆಂದು ನೀನು ಭ್ರಮಿಸಿರುವ ಭೀಷ್ಮ, ದ್ರೋಣ, ಕರ್ಣ ಮೊದಲಾದ ಸಮಸ್ತರೂ ಭೀಮಸೇನನೊಂದಿಗೆ ಯುದ್ಧ ಮಾಡುವುದಿರಲಿ ಅವನ ಕೆರಳಿದ ಮುಖ ನೋಡಲೂ ಸಹ * ಸಮರ್ಥರಾದವರಲ್ಲ. ನೀನೂ ಇದಕ್ಕೆ ಹೊರತಾದವನಲ್ಲ'.

೪) ಅರ್ಜುನನಂತಹ ಅಸ್ತ್ರಜ್ಞನ ವಿರುದ್ಧ ನಿಲ್ಲಬಲ್ಲ ಧನುರ್ಧಾರಿ ನಿನ್ನಲ್ಲಿ ಯಾರೂ ಇಲ್ಲ. ಹೀಗೆ ಬಲಿಷ್ಠರಾದ ಅವರು ಸಂಧಿಗೆ ಬಂದಿರುವುದು ನಿನ್ನ ಪುಣ್ಯ. ಈ ಅವಕಾಶವನ್ನು ನೀನು ಉಪಯೋಗಿಸಿಕೊಂಡು ಬದುಕುವ ದಾರಿ ಹುಡುಕು, ಇಲ್ಲವಾದಲ್ಲಿ ಪುತ್ರ ಮಿತ್ರ ಬಂಧು ಬಾಂಧವಸಮೇತನಾಗಿ× ನಾಶಹೊಂದುವುದು ಖಚಿತ.

೫) ಕೃಷ್ಣನ ಉಪದೇಶ ಪಾಪಿಯಾದ ದುರ್ಯೋಧನನಿಗೆ ಸಹಜವಾಗಿಯೇ ಹಿಡಿಸಲಿಲ್ಲ. ಶಾಸ್ತ್ರೋಪದೇಶ ದುಷ್ಟರಿಗೆ ಹಿಡಿಸುವುದಾದರೂ ಎಂತು? ರೋಗಿಗೆ ಷಡ್ರಸಾನ್ನ ಭೋಜನವೂ ಕಹಿಯೆಂದೇ ತೋರುವುದಲ್ಲವೇ. ದುರ್ಯೋಧನ ಕೃಷ್ಣನ ಮಾತುಗಳನ್ನು ಒಪ್ಪುವುದಿರಲಿ, ಅವು–ಗಳನ್ನು ಸರಿಯಾಗಿ ಕೇಳುವ ಸೌಜನ್ಯವನ್ನೂ ತೋರದೇ, ತನ್ನ ತಮ್ಮಂದಿರೊಂದಿಗೂ, ಅನುಯಾಯಿ–ಗಳೊಂದಿಗೂ ಸಭಾತ್ಯಾಗ ಮಾಡಿದ; ಹಾಗೆ ತೆರಳಿದವನು ಶಕುನಿ ಕರ್ಣಾದಿಗಳೊಂದಿಗೆ ಮಂತ್ರಾಲೋಚನೆ ಮಾಡಿ ಕೃಷ್ಣನನ್ನು ಸೆರೆ ಹಿಡಿಯುವ ಕುತಂತ್ರವೊಂದನ್ನು ಯೋಜಿಸಿದ.

೬) ಹನುಮಂತನ ಹಿತೋಕ್ತಿಗಳನ್ನು ನಿರ್ಲಕ್ಷಿಸಿ ಅವನನ್ನು ಕಟ್ಟಿಹಾಕುವ ರಾವಣನ ಪ್ರಯತ್ನ–ದಂತೆ, ಇಲ್ಲಿ ದುರ್ಯೋಧನನ ಪ್ರಯತ್ನವಿರುವುದು ಗಮನಾರ್ಹ. ಇಬ್ಬರೂ ರಾಯಭಾರಿಗಳನ್ನು ಕಟ್ಟಿಹೊರಟ ಮಹಾಪಾತಕಿಗಳು.

ಯೇ ಯೇ ತದಾ ಕೇಶವಸಂಯಮಾಯ
ನ್ಯಮಂತ್ರಯಂಸ್ತೇ ವಿಬುಧಪ್ರತೀಪಾಃ ।
ಅತೋ ವಿಕರ್ಣಪ್ರಮುಖಾ ಅಪಿ ಸ್ಮ
ವಧ್ಯತ್ವಮಾಯನ್ ನ ಶುಭಾಂ ಗತಿಂ ಚ ॥ ೬೭ ॥

---

* ನ ಹೀಮೇ ಸರ್ವರಾಜಾನಃ ಪರ್ಯಾಪ್ತಾಃ ಸಹಿತಾಸ್ತ್ವಯಾ ।
ಕ್ರುದ್ಧಸ್ಯ ಭೀಮಸೇನಸ್ಯ ಪ್ರೇಕ್ಷಿತುಂ ಮುಖಮಾಹವೇ ॥ – ಭಾರತ (೫/೧೨೪/೪೭, ೪೮)

× ಪಾಂಡವೈಃ ಸಂಶಮಂ ಕೃತ್ವಾ ಕೃತ್ವಾ ಚ ಸುಹೃದಾಂ ವಚಃ ।
ಸಂಪ್ರೀಯಮಾಣೋ ಮಿತ್ರೈಶ್ಚ ಚಿರಂ ಭದ್ರಾಣ್ಯವಾಪ್ಸ್ಯಸಿ ॥ – ಭಾರತ (೫/೧೨೪/೬೨)

ಅ: ಯಾರು ಯಾರು ಆಗ ಕೃಷ್ಣನ ಬಂಧನಕ್ಕೆಂದು ಆಲೋಚಿಸಿದರೋ, ಅವರೆಲ್ಲ ಸುರ-ವಿರೋಧಿಗಳು. ಆದ್ದರಿಂದ ವಿಕರ್ಣ ಮೊದಲಾದವರೆಲ್ಲ ವಧ್ಯರೆನ್ನಿಸಿದರು. ಶುಭಗತಿಯಿಂದ ವಂಚಿತರಾದರು.

ವಿ: ೧) ಆ ಸಮಯದಲ್ಲಿ ಕೃಷ್ಣನ ಬಂಧನಕಾರ್ಯಕ್ಕೆ ಸಹಮತ ವ್ಯಕ್ತಪಡಿಸಿದವರೆಲ್ಲ ಸ್ವರೂಪತಃ ಅಸುರರು ಎಂದು ಭಾವ. ಆದ್ದರಿಂದ ವಿಕರ್ಣ ಮೊದಲಾದ ಸಕಲರೂ ಅಸುರರೆಂದೇ ಸಿದ್ಧವಾಗುವುದು. ಅದರಿಂದಾಗಿಯೇ ಅವರು ವಧಾರ್ಹರಾದರು; ದುರ್ಗತಿಗೆ ತೆರಳಿದರು.

೨) ಯಶೋದೆ ಕೃಷ್ಣನನ್ನು ಕಟ್ಟಹೊರಟ ಪ್ರಸಂಗವನ್ನು ಇಲ್ಲಿ ಸ್ಮರಿಸಿಕೊಳ್ಳಬಹುದು. ಅಲ್ಲಿ ಕೃಷ್ಣನ ಬಂಧನದ ಉದ್ದೇಶ ದ್ವೇಷಾಸೂಯೆಗಳಿಂದಲ್ಲ, ಕೇವಲ ಪ್ರೇಮಾತಿಶಯದಿಂದ, ಅದರಿಂ-ದಾಗಿ ಅವಳ ಪ್ರಯತ್ನ ದೋಷವಾಗಲಿಲ್ಲ ಮಾತ್ರವಲ್ಲದೇ ಇವರಾರಿಗೂ ಸಿಗದ ಶ್ರೀಕೃಷ್ಣ ಅವಳಿಗೆ ಸಿಕ್ಕಂತೆಮಾಡಿ ಅನುಗ್ರಹಿಸಿದ. ಒಬ್ಬ ಸ್ತ್ರೀಯಿಂದಾದ ಕೆಲಸ ಅಸಂಖ್ಯ ಪುರುಷರಿಂದಲೂ ಆಗದ್ದು ಅವಳ ಸಾತ್ವಿಕ ಸ್ವಭಾವಕ್ಕೆ ದ್ಯೋತಕವಾಗಿರುವಂತೆ ಇವರ ತಾಮಸ ಸ್ವಭಾವಕ್ಕೂ ದ್ಯೋತಕ ಎಂದು ತಿಳಿಯಬೇಕು.

೩) ವಿಕರ್ಣ ತುಂಬಿದ ಸಭೆಯಲ್ಲಿ ದ್ರೌಪದಿಯ ಪರ ವಾದಿಸಿದಂತೆ ತೋರಿದರೂ, ಅವನೀಗ ಕೃಷ್ಣನ ಬಂಧನಕಾರ್ಯದಲ್ಲಿ ಸಹಮತ ಹೊಂದಿದ್ದರಿಂದ ಸ್ವರೂಪತಃ ಅಸುರನೆಂದೇ ಸಿದ್ಧವಾಗುವುದು ಎಂಬುದನ್ನು ಸೂಚಿಸಲು 'ವಿಕರ್ಣಪ್ರಮುಖಾಃ' ಎಂದು ವಿಶೇಷವಾಗಿ ಅವನ ಹೆಸರನ್ನು ಉಲ್ಲೇಖಿಸಿರುವರು ಎಂದು ತಿಳಿಯಬೇಕು. ಇದು ಸಭಾಪರ್ವನಿರ್ಣಯದಲ್ಲಿ ಆಚಾರ್ಯರು ವಿಕರ್ಣನದು ಡಂಭಾಚಾರ(೨೧/೩೩) ಎಂದು ಹೇಳಿದ್ದಕ್ಕೆ ಆಧಾರವೂ ಆಗುವುದು.

ಕರ್ಣಃ ಸುರಾಗ್ಯೋ೭ಪಿ ಸುಯೋಧನಾರ್ಥೇ
ನ್ಯಮಂತ್ರಯದ್ಭಾವತೋ ನೈವ ದುಷ್ಟಃ ।
ಅತೋ ಗತಿಶ್ಚಾಸ್ಯ ಸುಶೋಭನಾ೭ಭೂದ್
ಯೇ೭ತ್ರಾನುಕೂಲಾಃ ಪರಮಸ್ಯ ತೇ ಶುಭಾಃ ॥ ೬೮ ॥

---

೬೭. ಅತೋ೭ಸ್ಮದಪರಾಧಾದಪಿ ವಿಕರ್ಣಪ್ರಮುಖಾ ಧಾರ್ತರಾಷ್ಟ್ರಾ ಇತಿ ಯಾವತ್ । ವಧ್ಯತ್ವಮಾಯನ್ನಿತಿ ವೇದಾಂಗತೀರ್ಥೀಯೇ । – (ತಾ.)

೬೮. ಸಹಸ್ರವರ್ಮಾಖ್ಯಾಸುರಾವೇಶಾದಿತಿ ಭಾವಃ। ಭಾವತಃ ಸ್ವಭಾವಾತ್। – (ಜ.)

ಅ: ಕರ್ಣನು ದೇವತಾಂಶಸಂಭೂತನಾದರೂ ಅಸುರಾವೇಶದಿಂದಾಗಿ ದುರ್ಯೋಧನನಿಗೋಸ್ಕರ ಆ ಕೆಟ್ಟ ಯೋಜನೆಯಲ್ಲಿ ತೊಡಗಿದ್ದ. ಅವನ ಹೃದಯ ಕೆಟ್ಟದ್ದಲ್ಲ. ಆದ್ದರಿಂದ ಅವನಿಗೆ ಸದ್ಗತಿಯೇ ಲಭಿಸಿತು. ಕೃಷ್ಣನಿಗೆ ಅನುಕೂಲರಾಗಿ ನಡೆದವರೆಲ್ಲಾ ಶುದ್ಧ ಸ್ವಭಾವ- ದವರು.

ವಿ: ೧) ಹಾಗೆ ಕೃಷ್ಣನನ್ನು ಕಟ್ಟಲು ಯೋಜಿಸಿದವರಲ್ಲಿ ಕರ್ಣನೂ ಸೇರಿದ್ದ, ಆದರೆ ಕರ್ಣ ಅವರೆಲ್ಲರಂತೆ ಅಸುರನಾಗಿರದೇ ಶ್ರೇಷ್ಠದೇವತೆಗಳಲ್ಲೊಬ್ಬನಾದ ಸೂರ್ಯನ ಅವತಾರವಾಗಿದ್ದ. ಆದರೂ ಅವನು ದುರ್ಯೋಧನನ ಪ್ರೀತ್ಯರ್ಥವಾಗಿ ಕೃಷ್ಣನ ಬಂಧನ ಕಾರ್ಯದಲ್ಲಿ ಸಹಮತ ವ್ಯಕ್ತಪಡಿಸಿದ್ದ.

೨) ಹೀಗೆ ಅವನದು ಸ್ವಾಭಾವಿಕ ಕೃಷ್ಣ ದ್ವೇಷವಲ್ಲವಾದ್ದರಿಂದ ದುರ್ಗತಿಗೆ ಕಾರಣವಾಗಲಿಲ್ಲ. ಆದರೆ, ಅವನೊಳಗೆ ಆಗ ಸೇರಿದ್ದ ರಾಕ್ಷಸನಾದ ನರಕಾಸುರನಿಗೆ ದುರ್ಗತಿ ಆಗಿಯೇ ಆಯಿತು ಎಂಬುದು ನಿಶ್ಚಿತ.

೩) ಇದರಂತೆ ಕೃಷ್ಣನ ಬಂಧನಕಾರ್ಯಕ್ಕೆ ವಿರೋಧಿಸಿದವರು ಕೃಷ್ಣನ ಉಪದೇಶವನ್ನು ಅನುಮೋದಿಸಿದವರು ಸ್ವಭಾವತಃ ಸುಜೀವಿಗಳು ಎಂಬ ವಿಶೇಷಾಂಶವನ್ನು ಇಲ್ಲಿ ತಿಳಿಸಿರುವರು.

ದುರ್ಯೋಧನನ ದುಷ್ಟಸ್ವರೂಪ

ಋಷಿಭಿರ್ಜಾಮದಗ್ನ್ಯೇನ ವ್ಯಾಸೇನಾಪ್ಯಮಿತೌಜಸಾ ।
ವಾಸುದೇವಾತ್ಮನಾ ಚೈವ ತ್ರಿರೂಪೇಣೈವ ವಿಷ್ಣುನಾ ॥ ೬೯ ॥

ಮಾತಾಪಿತೃಭ್ಯಾಂ ಭೀಷ್ಮಾದ್ಯೈ ರನುಶಿಷ್ಟೋ*ಽಪಿ ದುರ್ಮತಿಃ ।
ದುರ್ಯೋಧನೋ ಮಂತ್ರಯತೇ ಮುಕುಂದಸ್ಯಾಶು ಬಂಧನಮ್ ॥ ೭೦ ॥

ಅ: ಋಷಿಗಳು, ಪರಶುರಾಮ, ಅಮಿತ ತೇಜಸ್ಸಿನ ವೇದವ್ಯಾಸರು, ಶ್ರೀಕೃಷ್ಣ, ತಂದೆತಾಯಿಗಳು, ಭೀಷ್ಮ ಮೊದಲಾದವರು ಉಪದೇಶಿಸಿದರೂ, ಸ್ವಭಾವತಃ ದುರ್ಬುದ್ಧಿಯವನಾಗಿದ್ದ ದುರ್ಯೋಧನ ಕೃಷ್ಣನನ್ನು ಕಟ್ಟಿಹಾಕಲು ಯೋಚಿಸಿದ.

---

೬೯. ಮುಕುಂದಸ್ಯಾನುಬಂಧನಮಿತ್ಯತ್ರ ಭವಬಂಧನಮೋಚಕಸ್ಯ ಹರೇಃ ಬಂಧನಮಸಾಧ್ಯಮಿತಿ ಸೂಚಯಿತುಂ ಮುಕುಂದಪದಮ್। ಅನು = ಈದೃಶಬುದ್ಧಿಕರಣಾನಂತರಂ ಬಂಧನಮಂಧೇ ತಮಸಿ ಸ್ವಸ್ಯಾಪಿ ಶೃಂಖಲಾದಿಭಿರ್ಬಂಧನಂ ಯಸ್ಮಾತ್ ತದನುಬಂಧನಮ್। ತಮೋಗತೇರನುಕೂಲಂ ಬಂಧನಂ ವಾ ॥ – (ವಾ.)

* ಮುಕುಂದ್ಯಾನುಬಂಧನಮ್ – (ಪಾಠಾಂತರ)

ಎ: ೧) ಪಾಂಡವರ ರಾಜಸೂಯ ಯಾಗದ ಸಭೆಯಲ್ಲಿ ಇದ್ದಂತೆ ಇಲ್ಲಿಯೂ ಸಹ ಶ್ರೀಹರಿಯು ಪರಶುರಾಮ, ವ್ಯಾಸ ಮತ್ತು ಕೃಷ್ಣ ಎಂಬ ಮೂರು ರೂಪಗಳಿಂದ ಉಪಸ್ಥಿತನಿದ್ದ. ಆ ಮೂರು ರೂಪಗಳಿಂದಲೂ ಬೋಧಿಸಿದ ಎಂಬುದು ವಿಶೇಷ.

೨) ಅದರಂತೆ ನಾರದಾದಿ ಋಷಿಗಳಿಂದಲೂ, ತಂದೆ ತಾಯಿಗಳಾದ ಧೃತರಾಷ್ಟ್ರ–ಗಾಂಧಾರಿಯರಿಂದಲೂ, ಭೀಷ್ಮಾದಿ ಕುರುವೃದ್ಧರಿಂದಲೂ ಬಗೆಬಗೆಯಾಗಿ ತಿಳಿವಳಿಕೆ ನೀಡುವ ಪ್ರಯತ್ನ ನಡೆದರೂ ದುರ್ಯೋಧನ ತನ್ನ ದುರಾಲೋಚನೆಯನ್ನು ಕೈಬಿಡಲಿಲ್ಲ. ಇದು ಅವನು ಸ್ವಭಾವತಃ ಎಂತಹ ಪಾಪಿ ಎಂಬುದಕ್ಕೆ ದ್ಯೋತಕ.

೩) ತಿಳಿ ಹೇಳುವ ಜ್ಞಾನಿಗಳು ಇದ್ದಾಗಲೂ ಸುಜ್ಞಾನ ಪಡೆಯದೇ ಇರುವುದು ಸ್ವರೂಪತಃ ತಾಮಸ ಪ್ರವೃತ್ತಿಯಾಗಿರುವುದಕ್ಕೆ ದ್ಯೋತಕ ಎಂಬ ಮಾತು ಹಿಂದೆ *ಬಂದಿದೆ (೧/೯೦). ತನಗೆ ದೊರೆತ ಜ್ಞಾನಲಾಭದ ಸುವರ್ಣಾವಕಾಶವನ್ನು ಸರ್ವಾತ್ಮನಾ ವ್ಯರ್ಥ ಮಾಡಿಕೊಂಡ ಪರಮಪಾಪಿಗಳು ಅವನು ಮತ್ತು ಅವನ ಅನುಯಾಯಿಗಳು.

೪) ಶಾಸ್ತ್ರೋಪದೇಶ ಹೊಂದುವ ಸುಯೋಗ ಲಭಿಸಿದಾಗಲೂ ಅದರ ಸದುಪಯೋಗ ಪಡೆಯದ ಜನಗಳೆಲ್ಲ ಈ ತೆರನಾದವರು ಎಂಬ ಸೂಚನೆಯೂ ಇಲ್ಲಿದೆ.

೫) ಸಂಸಾರಬಂಧನದಿಂದ ಬಿಡುಗಡೆ ಮಾಡುವ ಶ್ರೀಕೃಷ್ಣನನ್ನೇ ಬಂಧಿಸಹೊರಟ ದುರ್ಯೋಧನ ಎಂತಹ ಪಾಪಿ ಎಂಬುದನ್ನು, ಮೋಚಕನಾದ ಕೃಷ್ಣನ ಬಂಧನ ಸರ್ವಾತ್ಮನಾ ಅಶಕ್ಯ ಎಂಬುದನ್ನು 'ಮುಕುಂದಸ್ಯ' ಎಂಬ ಪದದಿಂದ ಸೂಚಿಸಿರುವರು.

೬) ಪರಶುರಾಮ ದಂಭೋದ್ಭವನ ಕಥೆಯನ್ನೂ ತಿಳಿಸಿ ನರ–ನಾರಾಯಣರೇ ಕೃಷ್ಣಾರ್ಜುನರು ಎನ್ನುವರು, ಕಣ್ವ ಮುನಿ ಇಂದ್ರ–ಉಪೇಂದ್ರರ ಕಥೆಯನ್ನು ಹೇಳಿ ಗರುಡನ ಗರ್ವಭಂಗದ ವಿವರವನ್ನೂ ತಿಳಿಸಿ ದುರ್ಯೋಧನನಿಗೆ ಎಚ್ಚರ ನೀಡುವರು.

ಸಾತ್ಯಕಿಃ ಕೃತವರ್ಮಾ ಚ ತಚ್ಛ್ರುತ್ವಾತುರಂಜಸಾ ।
ಸಂಸ್ಥಾಪ್ಯ ಕೃತವರ್ಮಾಣಂ ರಹಃ ಸಾತ್ಯಕಿರತ್ರ ಚ ।
ಅಭ್ಯೇತ್ಯ ಕೇಶವಂ ಪ್ರಾಹ ದುರ್ಯೋಧನವಿನಿಶ್ಚಯಮ್ ॥ ೭೧ ॥

---

* ಅಸುರಾಣಾಂ ತಮಃಪ್ರಾಪ್ತಿಸ್ತದಾ ನಿಯಮತೋ ಭವೇತ್ ।
ಯದಾ ತು ಜ್ಞಾನಿಸದ್ಭಾವೇ ನೈವ ಗೃಹ್ಣಂತಿ ತತ್ಪರಮ್ ॥ – (೧/೯೦)

ಅ: ಸಾತ್ಯಕಿ ಮತ್ತು ಕೃತವರ್ಮರು ಆ ಕೃಷ್ಣ ಬಂಧನದ ವಿಚಾರವನ್ನು ಚೆನ್ನಾಗಿ ಕೇಳಿಸಿಕೊಂಡರು. ಸಾತ್ಯಕಿ ಕೃತವರ್ಮನನ್ನು ಬೇರೆಡೆ ನಿಲ್ಲಿಸಿ ಕೃಷ್ಣನನ್ನು ಏಕಾಂತದಲ್ಲಿ ಸಂಧಿಸಿ ದುರ್ಯೋಧನನ ಆ ದುರ್ವಿಚಾರವನ್ನು ತಿಳಿಸಿದ.

ವಿ: ೧) ಸಾತ್ಯಕಿ ಕೃಷ್ಣನೊಂದಿಗೆ ಬಂದವನಾಗಿದ್ದರೆ, ಕೃತವರ್ಮ ಆಗಲೇ ದುರ್ಯೋಧನನ ಪಕ್ಷ ವಹಿಸಿ ಅಲ್ಲಿಗೆ ಬಂದ ಎಂಬ ವಿವರ ಈಗಾಗಲೇ ಬಂದಿದೆ (ಶ್ಲೋ. ೨೫).

೨) ಕೃತವರ್ಮ ಹಾಗೆ ಕೌರವ ಪಕ್ಷ ವಹಿಸಿದ್ದರೂ ಸ್ವರೂಪತಃ ಸಾತ್ವಿಕನಾದ್ದರಿಂದ ಕೃಷ್ಣ ಬಂಧನದ ಕೌರವರ ದುರಾಲೋಚನೆಗೆ ಅವನ ಸಹಮತವಿರಲಿಲ್ಲ ಎಂಬುದು ಇದರಿಂದ ತಿಳಿಯುವುದು.

೩) ಸಾತ್ಯಕಿ ಕೃಷ್ಣನಿಗೆ ಈ ವಿಷಯವನ್ನು ತಿಳಿಸಿ ಹೇಳಿದ್ದು ಯುಯುತ್ಸು ಭೀಮನಿಗೆ ಅವನ ವಿಷಪ್ರಯೋಗದ ವಿವರ ತಿಳಿಸಿದ ವಿವರದಂತಹುದು. ಕೃಷ್ಣ ಭೀಮರಿಬ್ಬರೂ ಸರ್ವಜ್ಞರೇ ಆದರೂ ಇವರಿಬ್ಬರೂ ಅವರಿಗೆ ಹಾಗೆ ತಿಳಿಸುವ ಮೂಲಕ ತಮ್ಮ ಕರ್ತವ್ಯ ಪಾಲನೆಯನ್ನು ಮಾಡಿದರು ಎಂದಷ್ಟೇ ಇದರ ಅಭಿಪ್ರಾಯ.

ವಿಶ್ವರೂಪಪ್ರದರ್ಶನ

ಜಾನನ್ನಪ್ಯಖಿಲಂ ಕೃಷ್ಣಸ್ತಚ್ಛ್ರುತ್ವಾ ಸಾತ್ಯಕೇರ್ಮುಖಾತ್ ।
ವೈಚಿತ್ರ್ಯವೀರ್ಯಮವದತ್ ಪಶ್ಯ ಮಾಮಿತಿ ಸರ್ವಗಮ್ ॥ ೭೨ ॥

ಅ: ಸರ್ವಜ್ಞನಾದ ಕೃಷ್ಣ ಅದನ್ನೆಲ್ಲ ಬಲ್ಲವನೇ ಆದರೂ ಸಾತ್ಯಕಿಯ ಮುಖದಿಂದ ಅದನ್ನು ಕೇಳಿ ಧೃತರಾಷ್ಟ್ರನಿಗೆ ತಿಳಿಸಿದ 'ಸರ್ವತ್ರ ವ್ಯಾಪ್ತನಾದ ನನ್ನನ್ನು ನೋಡು'

ವಿ: ೧) ಅರ್ಜುನನಿಗೆ ವಿಶ್ವರೂಪ ತೋರಿಸಲು ದಿವ್ಯದೃಷ್ಟಿ ನೀಡುವಂತೆ ಇಲ್ಲಿ ಕೃಷ್ಣ ಧೃತರಾಷ್ಟ್ರನಿಗೂ ದಿವ್ಯದೃಷ್ಟಿಯನ್ನು ನೀಡಿದ ಎಂದು ತಿಳಿಯಬೇಕು. ಅರ್ಜುನನಂತಹ ಉತ್ತಮಾ-ಧಿಕಾರಿಗೇ ಬರಿಗಣ್ಣಿನಿಂದ ವಿಶ್ವರೂಪದರ್ಶನ ಅಸಾಧ್ಯವೆಂದಮೇಲೆ, ಹೊರಗಣ್ಣು ಇಲ್ಲದ ಧೃತರಾಷ್ಟ್ರನಿಗೆ ದಿವ್ಯದೃಷ್ಟಿ ಅವಶ್ಯಕ ಎಂಬುದು ಕೈಮುತ್ಯಸಿದ್ಧ.

೨) ಹುಟ್ಟು ಕುರುಡನಿಗೆ ದಿವ್ಯದೃಷ್ಟಿ ನೀಡಿದ್ದು ಕೃಷ್ಣನ ಸರ್ವೋತ್ತಮತ್ವಕ್ಕೆ ಮತ್ತೊಂದು ನಿದರ್ಶನ.

---

೭೨. ಅತ್ರ ವಿಶ್ವರೂಪಂ ಸಜ್ಜನಾದಿಸರ್ವಜನೈರ್ದರ್ಶಮಿತಿ ದುರ್ಯೋಧನಾದಿಭಿರ್ದರ್ಶಯತ್ವಾತ್ ॥ – (ತಿ.)

೭೨. ಪಶ್ಯ ಮಾಮಿತಿ ವದತಸ್ತಸ್ಯ ನೇತ್ರೇ ಅಪಿ ದತ್ತೇ ಇತಿ ಸೂಚಿತಮ್ ॥ – (ವಾ.)

೩ ಕೃಷ್ಣ ವಿಶ್ವರೂಪದರ್ಶನವನ್ನು ಮಾಡಿಸಿದ ಭಾರತ–ಭಾಗವತಗಳ ಅನೇಕ ಪ್ರಸಂಗಗಳಲ್ಲಿ ಇದೂ ಒಂದು ಎಂದು ತಿಳಿಯಬೇಕು.

ಅಥ ತೇನಾಹುತೇ ಪುತ್ರೇ ಸಾಮಾತ್ಯೇ ಪುರುಷೋತ್ತಮಃ ।
ಸ್ವರೂಪಂ ದರ್ಶಯಾಮಾಸ ಸರ್ವಗಂ ಪೂರ್ಣಷಡ್ಗುಣಮ್ ॥ ೭೩ ॥

ಅ: ಬಳಿಕ ಧೃತರಾಷ್ಟ್ರ ಮಂತ್ರಿಗಳ ಸಮೇತವಾಗಿ ದುರ್ಯೋಧನನನ್ನು ಅಲ್ಲಿಗೆ ಕರೆಸಿದಾಗ ಪುರುಷೋತ್ತಮನಾದ ಶ್ರೀಕೃಷ್ಣ ತನ್ನ ಷಡ್ಗುಣಪೂರ್ಣನಾದ ಸರ್ವತ್ರ ವ್ಯಾಪ್ತವಾದ ರೂಪವನ್ನು ತೋರಿಸಿದ.

ವಿ: ಕೃಷ್ಣ ಅವರೆಲ್ಲರ ಮುಂದೆ ಸಭೆಯಲ್ಲಿ ವಿಶ್ವರೂಪ ತೋರಿಸಿದ್ದು ಇಲ್ಲಿಯ ವಿಶೇಷ. ಧೃತರಾಷ್ಟ್ರ ಕೃಷ್ಣ ಪುರಪ್ರವೇಶ ಮಾಡುವ ವಾರ್ತೆ ಕೇಳಿದಾಗ ತನಗೂ ಕೃಷ್ಣನನ್ನು ನೋಡುವ ಕಣ್ಣುಗಳು ಇರಬಾರದಿತ್ತೇ ಎಂದು ಪರಿತಪಿಸಿದ್ದರ ಫಲ ಇಲ್ಲಿ ದೊರಕಿತು ಎಂದು ತಿಳಿಯಬಹುದು. ಭಗವಂತ ತನ್ನ ಭಕ್ತರ ಬಯಕೆಗಳನ್ನು ಸರ್ವಥಾ ಪೂರೈಸುವನು ಎಂಬುದಕ್ಕೆ ಇದೊಂದು ಅಪೂರ್ವ ನಿದರ್ಶನ (‘ಪ್ರಾರಂಭಮಾತ್ರಮಿಚ್ಛಾ ವಾ ವಿಷ್ಣುಧರ್ಮೇ ನ ನಿಷ್ಫಲಾ’).

ಕಣ್ಣಿದ್ದೂ ಕುರುಡರು

ತತ್ ಕಾಲಸೂರ್ಯಾಮಿತದೀಪ್ತಿ ಸರ್ವ-
ಜಗದ್ಭರಂ ಶಾಶ್ವತಮಪ್ರಮೇಯಮ್ ।
ದೃಷ್ಟ್ವೈವ ಚಕ್ಷೂಂಷಿ ಸುಯೋಧನಾದ್ಯಾ
ನ್ಯಮೀಲಯನ್ ದೀಧಿತಿವಾರಿತಾನಿ ॥ ೭೪ ॥

ಅ: ಪ್ರಳಯ ಕಾಲದ ಸೂರ್ಯರಂತಹ ಅಪರಿಮಿತ ಪ್ರಕಾಶದಿಂದ ಕೂಡಿದ, ಸಕಲಜಗತ್ತುಗಳನ್ನೂ ಧರಿಸಿದ, ಶಾಶ್ವತವಾದ, ಸಾಕಲ್ಯೇನ ಅರಿಯಲಾಗದ ಆ ವಿಶ್ವರೂಪವನ್ನು ಕಾಣುತ್ತಲೇ ದುರ್ಯೋಧನ ಮೊದಲಾದವರು ಕಾಂತಿಯನ್ನು ಕಾಣಲಾಗದೆ ಕಣ್ಣು ಮುಚ್ಚಿಕೊಂಡರು.

---

೭೪. ಸರ್ವಜಗದ್ಭರಮಿತ್ಯತ್ರ ಬಲರಾಮಾರ್ಜುನಯಾದವಾದಿಸರ್ವಜಗದ್ಭರಂ* ಸಕಲಲೋಕಭರಿತಂ ಚ। ಚಕ್ಷೂಂಷಿ ಸುಯೋಧನಾದ್ಯಾ ಇತ್ಯತ್ರ ತದ್ರೂಪದರ್ಶನಾಯೋಗ್ಯಾನಾಮೇವ ಸಂಗ್ರಹಾಯ ಸುಯೋಧನಮಾದೀಚಕಾರೇತಿ ಜ್ಞೇಯಮ್ ॥ –(ವಾ.)

---

* ಅಂಧಕಾ ವೃಷ್ಣಯಶ್ಚೈವ ಪ್ರದ್ಯುಮ್ನಪ್ರಮುಖಾಸ್ತತಃ ॥ –ಭಾರತ (ಉದ್ಯೋಗ. ೧೩೧/೯)

ವಿ: ೧) ಕೃಷ್ಣನ ಆ ವಿಶ್ವರೂಪದ ಅಪಾರ ಕಾಂತಿಯನ್ನು ನೋಡಲಾಗದೇ ದುರ್ಯೋಧನಾದಿ ದುಷ್ಟರೆಲ್ಲ ಆಗ ಕಣ್ಣುಗಳನ್ನು ಮುಚ್ಚಿಕೊಂಡರು. ಇದು ಅವರಿಗೆ ಆ ರೂಪ ನೋಡುವ ಅರ್ಹತೆ ಇಲ್ಲವೆಂಬುದಕ್ಕೆ ನಿದರ್ಶನ. ಹಾಗೆ ಅವರು ಕಣ್ಣು ಮುಚ್ಚಿಕೊಂಡದ್ದು ಮುಂದೆ ಅವರೆಲ್ಲ ಶಾಶ್ವತ–ವಾಗಿ ಕಣ್ಮುಚ್ಚಿಕೊಳ್ಳುವುದಕ್ಕೆ ಸೂಚಕವೂ ಆಯಿತು.

೨) ಕಣ್ಣಿದ್ದವರು ಕಣ್ಮುಚ್ಚಿ, ಕಣ್ಣಿಲ್ಲದ ಕುರುಡ ಧೃತರಾಷ್ಟ್ರ ಕಣ್ತೆರೆದು ಕಣ್ಣಾರೆ ಕಂಡದ್ದು ಆ ವಿಶ್ವರೂಪ ದರ್ಶನದ ಮಹಾವಿಶೇಷಗಳಲ್ಲೊಂದಾಯಿತು.

೩) ಧೃತರಾಷ್ಟ್ರನೊಂದಿಗೆ ಭೀಷ್ಮಾದಿ ಇತರ ಸುಜೀವಿಗಳೆಲ್ಲರಿಗೂ ಕೃಷ್ಣ ಆ ಸಮಯದಲ್ಲಿ ದಿವ್ಯದೃಷ್ಟಿ ನೀಡಿದ್ದರಿಂದ ಅವರಿಗೆಲ್ಲ ಯಥೋಚಿತವಾಗಿ ಆ ವಿಶ್ವರೂಪದ ದರ್ಶನವಾಯಿತು ಎಂಬ ವಿಶೇಷಾಂಶ ಮಹಾಭಾರತದಲ್ಲಿದೆ (ಉದ್ಯೋಗ. ೧೩೧. ಶ್ಲೋ. ೧೪, ೧೫).

ಕಂಗಳ ಪಡೆದ ಕುರುಡ

ಪಿಧಾಯ ರೂಪಂ ಪುನರೇವ ತದ್ಧರಿ–
ರ್ವೈಚಿತ್ರವೀರ್ಯೇಣ ಸಮರ್ಥಿತಃ ಪುನಃ ।
ಕೃತ್ವಾಽಂಧಮೇವ ಪ್ರಯಯೌ ಸುಯೋಧನಂ
ಸಹಾನುಗಂ ಪಾಪತಮಂ ಪ್ರಕಾಶ್ಯ ॥ ೭೫ ॥

ಅ: ಶ್ರೀಕೃಷ್ಣ ಆ ವಿಶ್ವರೂಪವನ್ನು ಮರೆಮಾಡಿದ. ಧೃತರಾಷ್ಟ್ರ ಬಹಳವಾಗಿ ಬೇಡಿ–ಕೊಂಡಿದ್ದರಿಂದ ಅವನನ್ನು ಮುಂಚಿನಂತೆಯೇ ಕುರುಡನನ್ನಾಗಿಸಿದ; ದುರ್ಯೋಧನ ಮತ್ತು ಅವನ ಅನುಯಾಯಿಗಳೆಲ್ಲಾ ಮಹಾಪಾಪಿಗಳೆಂಬುದನ್ನು ಲೋಕಕ್ಕೆ ತೋರಿಸಿ, ತೆರಳಿದ.

ವಿ: ೧) 'ನಿನ್ನ ಈ ಅದ್ಭುತವಾದ ದಿವ್ಯರೂಪವನ್ನು ಕಂಡ ತನಗೆ ಬೇರಾವುದನ್ನೂ ಕಾಣುವ ಬಯಕೆಯಿಲ್ಲ, ನಿನ್ನ ಈ ರೂಪದ ಚಿಂತನೆಯೊಂದೇ ಸದಾ ನನ್ನ ಮನಸ್ಸಿನಲ್ಲಿ ಉಳಿಯುವಂತಾಗ–

---

೭೪. ತಂ ದೃಷ್ಟ್ವಾ ಘೋರಮಾತ್ಮಾನಂ ಕೇಶವಸ್ಯ ಮಹಾತ್ಮನಃ ।
ನ್ಯಮೀಲಯಂತ ನೇತ್ರಾಣಿ ರಾಜಾನಸ್ತತ್ಚೇತಸಃ ॥
ಋತೇ ದ್ರೋಣಂ ಚ ಭೀಷ್ಮಂ ಚ ವಿದುರಂ ಚ ಮಹಾಮತಿಮ್ ॥
ಸಂಜಯಂ ಚ ಮಹಾಭಾಗಮೃಷೀಂಶ್ಚೈವ ತಪೋಧನಾನ್ ॥
ಪ್ರಾದಾತ್ ತೇಷಾಂ ಸ ಭಗವಾನ್ ದಿವ್ಯಂ ಚಕ್ಷುರ್ಜನಾರ್ದನಃ ॥ – ಭಾರತ (ಉದ್ಯೋಗ. ೧೩೧/೧೪,೧೫)

೭೪. ತತ್ರಾದ್ಭುತಂ ಮಹಾರಾಜ ಧೃತರಾಷ್ಟ್ರಶ್ಚ ಚಕ್ಷುಷೀ ।
ಲಬ್ಧವಾನ್ ವಾಸುದೇವಾಚ್ಚ ವಿಶ್ವರೂಪದಿದೃಕ್ಷಯಾ ॥ – ಭಾರತ (೫/೧೩೧/೨೦)

ಬೇಕು. ಅದಕ್ಕೆಂದು ತನ್ನನ್ನು ಮುಂಚಿನಂತೆಯೇ ಕುರುಡನನ್ನಾಗಿಸು' ಎಂದು ಧೃತರಾಷ್ಟ್ರ ಬೇಡಿಕೊಂಡ ಎಂದು *ಮಹಾಭಾರತದಲ್ಲಿದೆ.

೨) ಶ್ರೀಹರಿಯ ಹೊರತು ಮತ್ತೇನನ್ನೂ ನೋಡದ ಕುರುಡು ನಿಜವಾದ ಕಣ್ಣಿನ ಸಂಕೇತ ಎಂಬುದು ಇಲ್ಲಿಯ ಆಂತರ್ಯ. ಕೃಷ್ಣ ಅದರಂತೆಯೇ ಮಾಡಿ ಅವನನ್ನು ಅನುಗ್ರಹಿಸಿದ ಎಂದರ್ಥ. ಅವನು ಮುಂದೆ ಅಲ್ಲಿಂದ ರಥವನ್ನೇರಿ ನಡೆದದ್ದು ಕುಂತಿಯ ಮನೆಗೆ.

ಶ್ರೀಕೃಷ್ಣನ ಸ್ವಾತಂತ್ರ್ಯದ ಅರ್ಥ

ಅನಂತಶಕ್ತಿಃ ಪುರುಷೋತ್ತಮೋಽಸೌ
ಶಕ್ತೋಽಪಿ ದುರ್ಯೋಧನಚಿತ್ತನಿಗ್ರಹೇ ।
ನೈವ ವ್ಯಧಾದೇನಮಥೋಕ್ತಕಾರಿಣಂ
ನಿಪಾತಯನ್ನಂಧತಮಸ್ಯನಂತಃ ॥ ೭೬ ॥

ಅ: ಅನಂತಶಕ್ತಿಸಂಪನ್ನನಾದ, ಪುರುಷೋತ್ತಮನಾದ ಶ್ರೀಕೃಷ್ಣ ದುರ್ಯೋಧನನ ಮನಸ್ಸನ್ನು ನಿಯಂತ್ರಿಸುವ ಸಮರ್ಥನಾದರೂ ತನ್ನ ಮಾತಿನಂತೆ ನಡೆಯಲು ಪ್ರೇರಿಸಲಿಲ್ಲ. ಅವನನ್ನು ಅಂಧಂತಮಸ್ಸಿನಲ್ಲಿ ಬೀಳಿಸಿದ.

ವಿ: ೧) ಕೃಷ್ಣ ಸಂಧಾನದ ಫಲಶ್ರುತಿಯ ವಿಶ್ಲೇಷಣೆ ಇಲ್ಲಿದೆ. ಹಲವರು ತಪ್ಪು ತಿಳಿದಿರುವಂತೆ ಕೃಷ್ಣ ತನ್ನ ಸಂಧಾನ ಕಾರ್ಯದಲ್ಲಿ ವಿಫಲನಾಗಲಿಲ್ಲ. ಕೃಷ್ಣನಿಗೆ ಬೇಕಿದ್ದುದು ವಾಸ್ತವವಾಗಿ ಸಂಧಾನವಲ್ಲ, ಸಂಘರ್ಷವೇ. ಹಾಗೆಂದು ಅವನು ದ್ರೌಪದಿಗೆ ವಚನ ನೀಡಿಯೇ ಬಂದಿರುವನು (ಶ್ಲೋ. ೫೯).

೨) ಆದರೂ ಹೀಗೆ ಸಂಧಾನಕ್ಕೆ ಬಂದಿದ್ದು ರಾಜನೀತಿಯನ್ನು ಲೋಕಕ್ಕೆ ತಿಳಿಸಿಕೊಡ–ಲೆಂದು. ಅನಿವಾರ್ಯವಲ್ಲದ ಹೊರತು ಯುದ್ಧ ಕರ್ತವ್ಯವಲ್ಲ, ಅನಿವಾರ್ಯವಾದಾಗ ಅದು ಕರ್ತವ್ಯವಾಗುವುದು ನಿಶ್ಚಿತ ಎಂಬುದು ಅದರ ಭಾವ.

---

* ಭಗವನ್ ಮಮ ನೇತ್ರಾಣಾಮಂತರ್ಧಾನಂ ವೃಣೇ ಪುನಃ ।
ಭವಂತಂ ದ್ರಷ್ಟುಮಿಚ್ಛಾಮಿ ನಾನ್ಯಂ ದ್ರಷ್ಟುಮಿಹೋತ್ಸಹೇ ॥
(ಧೃತರಾಷ್ಟ್ರನ ಪ್ರಾರ್ಥನೆ) – ಭಾರತ (ಉದ್ಯೋಗ. ೧೩೧/೧೮)

೭೬. ಏನಮಥೋಕ್ತಕಾರಿಣಮಿತ್ಯತ್ರ ಅಥ= ಮರಣಾನಂತರಂ ಅಂಧೇ ತಮಸಿ ನಿಪಾತಯನ್ ಪಾತನಸ್ಯ ಬಹುದೂರತ್ವಾಭಾವಾತ್ ವರ್ತಮಾನಪ್ರಯೋಗಃ। ಏನಂ= ದುರ್ಯೋಧನಂ ಉಕ್ತಕಾರಿಣಂ= ಸ್ವೋಕ್ತಕಾರಿಣಂ ನೈವ ವ್ಯಧಾತ್ ॥ – (ವಾ.)

೩) ಕೃಷ್ಣ ನಿಜಕ್ಕೂ ಸಂಧಾನಕ್ಕೆ ಇಷ್ಟಪಟ್ಟಿದ್ದಲ್ಲಿ ಅದು ಅವನಿಗೆ ಸರ್ವಥಾ ಅಶಕ್ಯವಾದ ಕಾರ್ಯವಾಗಿರಲಿಲ್ಲ. ಸರ್ವತಂತ್ರಸ್ವತಂತ್ರನಾದ ಅವನಿಗೆ ಅಸಾಧ್ಯವೆಂಬುದು ಇಲ್ಲವೇ ಇಲ್ಲ. ಆದರೂ, ಅವರವರ ಸ್ವರೂಪ ಯೋಗ್ಯತೆಗೆ ತಕ್ಕಂತೆ ಪ್ರೇರೇಪಣೆ ಮಾಡಿ ಅದಕ್ಕೆ ಅನುಗುಣವಾದ ಫಲವನ್ನು ನೀಡುವುದು ಅವನ ಸಂಕಲ್ಪವಾದ್ದರಿಂದ ಇಲ್ಲೂ ಸಹ ಹಾಗೆಯೇ ಮಾಡಿ ದುರ್ಯೋಧನಾದಿಗಳು ಮಹಾಪಾಪಿಗಳು ಎಂದು ಲೋಕಕ್ಕೆ ಸಾರಿ ಅವರನ್ನು ಅಂಧಂತಮಸ್ಸಿಗೆ ಬೀಳಿಸಿದ ಎಂದರ್ಥ.

೪) ಶ್ರೀಹರಿಯು ಜೀವರ ಸ್ವರೂಪವನ್ನೂ ಸಹ ಬದಲಾಯಿಸಬಲ್ಲ ಮಹಾಸಮರ್ಥನೇ ಎಂಬ ಪ್ರಶ್ನೆಗೆ ಇಲ್ಲಿ ಸೂಕ್ತ ಉತ್ತರವಿದೆ. ಅವನು ಅದಕ್ಕೆ ಸಮರ್ಥ ಎಂಬುದು ಉತ್ತರ. ಆದರೆ ಹಾಗೆ ಮಾಡದಿರುವುದು ಅವನ ಸಂಕಲ್ಪವಾದುದರಿಂದ ಹಾಗೆ ಮಾಡುವುದಿಲ್ಲ ಎಂಬುದು ಅದಕ್ಕೆ ಪರಿಹಾರ.

ಕುಂತಿಯ ಸಂದೇಶ - ಕರ್ಣನಿಗೆ ಹಿತೋಕ್ತಿ

ಪುನಶ್ಚ ಕುಂತೀಗೃಹಮೇತ್ಯ ಕೃಷ್ಣ
ಸ್ತಯೋದ್ಯೋಗಂ ಧರ್ಮಸುತಸ್ಯ ಶಿಷ್ಟಮ್ ।
ಶ್ರುತ್ವಾ ಯಯೌ ಸೂರ್ಯಜಮಾತ್ಮಯಾನೇ
ನಿಧಾಯ ತಸ್ಯಾವದದಾತ್ಮಜನ್ಮ ।
ಆಯಾಹಿ ಪಾಂಡೂನಿತಿ ತದ್ವಚಃ ಸ
ನೈವಾಕರೋನ್ಮಾನಿತೋ ಧಾರ್ತರಾಷ್ಟ್ರೈಃ ॥ ೭೭ ॥

ಅ: ಕೃಷ್ಣ ಮತ್ತೆ ಕುಂತಿಯ ಮನೆಗೆ ತೆರಳಿ, ಅವಳು ಧರ್ಮರಾಜನಿಗೆ ನೀಡಿದ ಸಂದೇಶವನ್ನು ಕೇಳಿ, ತನ್ನ ರಥದಲ್ಲಿ ಕರ್ಣನನ್ನು ಕೂಡಿಸಿಕೊಂಡು ತೆರಳಿದ. ಅವನಿಗೆ ಅವನ ಜನ್ಮವೃತ್ತಾಂತ-

---

೭೭. ತಯೋದ್ಯೋಗಂ ಧರ್ಮಸುತಸ್ಯ ಶಿಷ್ಟಮಿತ್ಯತ್ರ ತಯಾ= ಕುಂತ್ಯಾ ಶಿಷ್ಟಂ= ಅನುಶಿಷ್ಟಂ ಉಕ್ತಮಿತ್ಯರ್ಥಃ। ಧರ್ಮಸುತಸ್ಯೋ= ಯುದ್ಧೋತ್ಸಾ ಸಾऽಪಿ ಧರ್ಮಸುತೇನ ಚ ಯುದ್ಧೋ= ಕರ್ಣಸ್ಯ ಆತ್ಮಜನ್ಮ= ಆತ್ಮನಃ= ಸ್ವಸ್ಯ ಕರ್ಣಸ್ಯ ಜನ್ಮ। ಕುಂತೀಪುತ್ರಸ್ತ್ವಮಿತ್ಯವದದಿತ್ಯರ್ಥಃ ॥ – (ವಾ.)

೭೭. ಯಯೌ ಪೂರ್ವದಿನೇ ಕುಂತೀಗೃಹಂ ಪ್ರತ್ಯಾಗತ್ಯ ಪಾರ್ಥಾನಾಮನಾಮಯಮುಕ್ತ್ವಾ ತಾಂ ಸಾಂತ್ವಯಿತ್ವಾ ಪರೇ ದಿನೇ ವಿಶ್ವರೂಪಂ ದರ್ಶಯಿತ್ವಾ ತವ ಪುತ್ರಾಣಾಂ ಕಿಂ ವಕ್ತವ್ಯಮಿತಿ ಪ್ರಷ್ಟುಂ ಪುನಃ ಕುಂತೀಗೃಹಂ ಪ್ರತ್ಯಾಗತ ಇತಿ ಭಾರತಕಥಾಸೂಚನಾರ್ಥಂ ಪುನರಿತ್ಯುಕ್ತಮ್। .... ಕುಂತೀಪದಾಧ್ಯಾಹಾರೇಣ ಕೇಷಾಂಚಿದ್ವ್ಯಾಖ್ಯಾನೇ ಭಾರತವಾಕ್ಯವಿರೋಧೋ ದೃಶ್ಯತೇ। ತದ್ವಚಃ ಕೃಷ್ಣವಚಃ ನೈವಾಕರೋದಿತ್ಯತ್ರ ಸ್ವವಚನೇऽಪಿ ವ್ಯಾಘಾತಃ। – (ಜ.)

ವನ್ನು ತಿಳಿಸಿ 'ಪಾಂಡವಪಕ್ಷಕ್ಕೆ ಬಾ' ಎಂದು ಕರೆದ. ಕೌರವರಿಂದ ಬಹಳವಾಗಿ ಸಮ್ಮಾನಿತನಾಗಿದ್ದ ಕರ್ಣ ಕೃಷ್ಣನ ಮಾತನ್ನು ನಡೆಸಲಿಲ್ಲ.

ವಿಃ ೧) ಕುಂತಿಯ ಬಳಿಗೆ ಪುನಃ ಹೋಗಿ ಎಂಬ ಮಾತಿನಿಂದ ಕೃಷ್ಣ ಹಸ್ತಿನಾಪುರಕ್ಕೆ ಬಂದ ಅನಂತರ ಆಗಲೇ ಒಮ್ಮೆ ಅವಳನ್ನು ಕಂಡು ಬಂದಿದ್ದರ ಸೂಚನೆಯನ್ನು ನೀಡಿರುವರು. ಕುಂತಿ ಆಗ ವಿದುಲೋಪಾಖ್ಯಾನವನ್ನು ತಿಳಿಸಿ ಅದನ್ನು ಧರ್ಮರಾಜಾದಿಗಳಿಗೆ ತನ್ನ ಸಂದೇಶವನ್ನಾಗಿ ತಿಳಿಸಬೇಕೆಂದು ಕೇಳಿಕೊಳ್ಳುವಳು.

೨) ವಿದುಲಾ ಎಂಬ ವೀರಮಾತೆ ಸಮರಕ್ಕೆ ಅಂಜಿ ಮನೆ ಸೇರಿದ್ದ ಸೃಂಜಯ ಎಂಬ ತನ್ನ ಮಗನನ್ನು ಬಗೆಬಗೆಯ ಮಾತುಗಳಿಂದ ಉತ್ತೇಜಿಸಿ ಪುನಃ ಯುದ್ಧಕ್ಕೆ ಕಳುಹಿಸಿಕೊಟ್ಟ ಅಪೂರ್ವ ಉಪಾಖ್ಯಾನದಲ್ಲಿ ಕ್ಷತ್ರಿಯರ ಮುಖ್ಯಕರ್ತವ್ಯವಾದ ಧಾರ್ಮಿಕಸಂಗ್ರಾಮದ ಮಹತ್ವ ತಿಳಿಸಲ್ಪಟ್ಟಿದೆ.

೩) ಬಳಿಕ ಕೃಷ್ಣ ಕರ್ಣನ ಬಳಿಗೆ ತೆರಳಿ, ಅವನನ್ನೂ ತನ್ನ ರಥದಲ್ಲಿ ಕೂಡಿಸಿಕೊಂಡು ಹೊರಟ. ಅವನು ಕುಂತೀಪುತ್ರ ಎಂಬ ವಿವರವನ್ನು ತಿಳಿಸಿದ; ಪಾಂಡವರ ಪಕ್ಷಕ್ಕೆ ಸೇರಿ ದುರ್ಯೋಧನನ ವಿರುದ್ಧ ಕಾದಲು ಪ್ರೇರೇಪಿಸಿದ.

೩) ಆದರೆ, ಕರ್ಣ ಕೃಷ್ಣನ ಆ ಹಿತೋಕ್ತಿಯನ್ನು ಆದರಿಸದೇ ಸಲ್ಲದ ಕಾರಣಗಳನ್ನು ಮುಂದಿರಿಸಿ ತಾನು ಕೌರವ ಪಕ್ಷದಲ್ಲೇ ಉಳಿಯುವುದಾಗಿ ತಿಳಿಸಿದ. ಹಾಗೆ ತಿಳಿಸುತ್ತಾ ಜಯ ಪಾಂಡವರಿಗೆ ನಿಶ್ಚಯ, ದುರ್ಯೋಧನನೊಂದಿಗೆ ತಾವೆಲ್ಲಾ ಅಳಿದು ಹೋಗುವವರು ಎಂದು ತಿಳಿದ.

೪) ಕೃಷ್ಣ ನೀಡಿದ ಹಿತೋಕ್ತಿ ಕರ್ಣನ ಕರ್ಣಕ್ಕೆ ರುಚಿಸದಿರಲು ಅವನಿಗಿದ್ದ ದುರ್ಯೋಧನ ಪಕ್ಷಪಾತ ಕಾರಣವಾಯಿತು. ಕಲಿ ಪ್ರಭಾವಕ್ಕೆ ಒಳಗಾದವರ ಕರ್ಣಗಳಿಗೆ ವ್ಯಾಸವಾಣಿಯಂತಹ ಹಿತೋಕ್ತಿಗಳು ರುಚಿಸಲಾರವು ಎಂಬುದಕ್ಕೆ ಇದು ನಿದರ್ಶನ.

೫) ದುರ್ಯೋಧನ ಕರ್ಣನನ್ನು ಹಿಡಿತದಲ್ಲಿಟ್ಟುಕೊಂಡಿದ್ದಂತೆ ಕಲಿಯುಗದಲ್ಲಿ ಸಜ್ಜನರ ಕರ್ಣಗಳೆಲ್ಲ ಲೋಕವಾರ್ತೆಯ ಹಿಡಿತಕ್ಕೆ ಸಿಕ್ಕಿ ಪರಲೋಕೈಕನಾಥನಾದ ಶ್ರೀಹರಿಯ ವಾರ್ತೆಯಿಂದ ವಿಮುಖವಾಗುವ ದುರಂತಕ್ಕೆ ಇದು ಸೂಚಕ.

೬) ಇಲ್ಲಿಯೂ ಸಹ ಕೃಷ್ಣ ಕರ್ಣನನ್ನು ಪಾಂಡವಪಕ್ಷಕ್ಕೆ ಕರೆತರಬಲ್ಲ ಸಂಪೂರ್ಣ ಸಮರ್ಥನಾದರೂ, ಕರ್ಣನ ಅವಸಾನ ಕೌರವಪಕ್ಷದಲ್ಲಿದ್ದೇ ಆಗಬೇಕು ಎಂಬ ತನ್ನ ಸಂಕಲ್ಪಕ್ಕೆ ಅನುಗುಣವಾಗಿ ಅವನನ್ನು ಅಲ್ಲಿಯೇ ಉಳಿಸಿದ ಎಂದು ತಿಳಿಯಬೇಕು. ಅದರೊಂದಿಗೆ ಭೂಭಾರ–

ಹರಣ ಕಾರ್ಯದೊಂದಿಗೆ ಕರ್ಣನಿಗೆ ಭೀಮಾದಿಗಳ ವಿರೋಧದ ದುಷ್ಫಲದ ಅನುಭವವೂ ಆಗಬೇಕು ಎಂಬುದು ಅವನ ವಿಚಾರವಾಗಿತ್ತು.

ಅಶ್ವತ್ಥಾಮರಿಗೆ ಹಿತೋಕ್ತಿ

ಸಂಸ್ಥಾಪ್ಯ ತಂ ಭಗವಾನ್ ದ್ರೌಣಯೇ ಚ
ರಹೋಽವದನ್ಮಿತ್ರಭಾವಂ ಪೃಥಾಜೈಃ ।
ಯಾವತ್ಪಿತುರ್ಮರಣಂ ಸೋಽಪಿ ಮೈತ್ರೀಂ
ವವ್ರೇ ಪಾರ್ಥೈಸ್ತಂ ಚ ವಿಸೃಜ್ಯ ಕೃಷ್ಣಃ ।
ಯಯೌ ಕುರೂನ್ ಪೂರ್ವಮೇವೋದ್ವಿಸೃಜ್ಯ
ಪೃಥಾಸುತಾನಾಂ ಸ ಸಕಾಶಮೀಶಃ ॥ ೭೮ ॥

ಅ: ಭಗವಂತನಾದ ಶ್ರೀಕೃಷ್ಣ ಕರ್ಣನನ್ನು ಅಲ್ಲಿಯೇ ನಿಲ್ಲಿಸಿ, ಅಶ್ವತ್ಥಾಮನಿಗೂ ಪಾಂಡವರೊಂದಿಗೆ ಸ್ನೇಹಭಾವ ತಳೆಯಲು ಏಕಾಂತದಲ್ಲಿ ಉಪದೇಶಿಸಿದ. ಅಶ್ವತ್ಥಾಮ ತನ್ನ ತಂದೆ ಬದುಕಿರುವವರೆಗೂ ಅವರೊಂದಿಗೆ ಸ್ನೇಹ ಭಾವವನ್ನು ಹೊಂದುವುದಾಗಿ ತಿಳಿಸಿದ. ಕೃಷ್ಣ ಅವನನ್ನು ಬೀಳ್ಕೊಟ್ಟ. ಆ ಮುಂಚೆಯೇ ಕೌರವರಿಂದ ಬೀಳ್ಕೊಂಡಿದ್ದ ಕೃಷ್ಣ ಪಾಂಡವರ ಬಳಿಗೆ ತೆರಳಿದ.

ವಿ: ೧) ಕರ್ಣನಿಗೆ ತಿಳಿಸಿದಂತೆಯೇ ಕೃಷ್ಣ ಅಶ್ವತ್ಥಾಮರಿಗೂ ಹಿತೋಕ್ತಿಯನ್ನು ತಿಳಿಸಿ ಸಾತ್ವಿಕರಾದ ಅವರು ಪಾಂಡವರಂತಹ ಧರ್ಮಿಷ್ಠರ ಪಕ್ಷದಲ್ಲಿ ಇರುವುದೇ ಉಚಿತವೆಂದು ಹೇಳಿದ. ದುರ್ಯೋಧನನಿಂದ ಬಹುವಾಗಿ ಸಮ್ಮಾನಿತರಾಗಿದ್ದ ಅಶ್ವತ್ಥಾಮರು ಸಹ ಕರ್ಣನಂತೆ ಕೌರವ ಪಕ್ಷದಲ್ಲೇ ಉಳಿಯುವುದಾಗಿ ತಿಳಿಸಿ ತಂದೆಯಾದ ದ್ರೋಣಾಚಾರ್ಯರು ಬದುಕಿರುವವರೆಗೂ ಪಾಂಡವರೊಂದಿಗೆ ಸ್ನೇಹದಿಂದಲೇ ವರ್ತಿಸುವುದಾಗಿ ತಿಳಿಸಿದರು. ಹಾಗೆ ತಿಳಿಸುವ ಮೂಲಕ ದ್ರೋಣರ ಸಾವು ಖಚಿತ ಎಂದು ತಾವು ತಿಳಿದದ್ದನ್ನು ಪ್ರಕಟಿಸಿದರೂ ಸಹ.

೨) ಮಹಾಭಾರತದ ಪ್ರಚಲಿತ ಪ್ರತಿಗಳಲ್ಲಿ ಈ ಕೃಷ್ಣ ಅಶ್ವತ್ಥಾಮರ ಪ್ರಸಂಗ ಕಾಣಸಿಕ್ಕುವುದಿಲ್ಲ. ಆದರೆ, ಮೂಲಪಾಠದಲ್ಲಿ ಆ ವಿಷಯದ ಉಲ್ಲೇಖವಿರುವುದು ಪಂಪ ಭಾರತದ ಉಲ್ಲೇಖದಿಂದ ಸ್ಫುಟಪಡುವುದು.

---

೭೮. "ತ್ರೈಲೋಕ್ಯಗುರು ಗುರುತನೂಜನಂ ಕೈಯ್ಕಂ ಪಿಡಿದರಮನೆಯಂ ಪೊರಮಟ್ಟು ಕಪಟಪ್ರಪಂಚದಿಂದಾತನುಮಂ ತನಗೆ ಮಾಡಿ" – ಪಂಪನ ವಿಕ್ರಮಾದಿತ್ಯವಿಜಯ(೯/೬೦)

೩) ಮಹಾಭಾರತ ಹೀಗೆ ಅನೇಕ ಬದಲಾವಣೆಗಳೊಂದಿಗೆ ಪ್ರಚಾರದಲ್ಲಿ ಬಂದು ಮೂಲಪಾಠ ಜನಗಳ ಗಮನಕ್ಕೆ ಬರದಂತಾಗಿದೆ ಎನ್ನಲು ಇದೂ ಒಂದು ನಿದರ್ಶನ.

ಕುಂತೀ ಕರ್ಣ ಸಮಾಗಮ

ಸಂಪ್ರಾರ್ಥಿತಃ ಪೃಥಯಾ ಚೈವ ಕರ್ಣಃ
ಪಾರ್ಥೈರ್ಯೋಗಂ ಯಾಹಿ ಸೂನುರ್ಮಮಾಸಿ ।
ತೇನಾಪ್ಯುಕ್ತಾ ವಾಸವಿನಾ ವಿನಾऽಹಂ
ಹನ್ಯಾಂ ಸುತಾಂಸ್ತೇ ನ ಕಥಂಚನೇತಿ ॥ ೭೯ ॥

ಅ: 'ನೀನು ನನ್ನ ಮಗ, ಪಾಂಡವರೊಂದಿಗೆ ಸೇರಿಕೋ' ಎಂದು ಕುಂತಿ ಬಹಳವಾಗಿ ಬೇಡಿಕೊಂಡರೂ ಕರ್ಣ ಅದಕ್ಕೆ ಒಪ್ಪದೇ 'ಅರ್ಜುನನ ಹೊರತು ನಿನ್ನ ಬೇರಾವ ಪುತ್ರರನ್ನೂ ನಾನು ಸರ್ವಥಾ ಕೊಲ್ಲುವುದಿಲ್ಲ' ಎಂದು ವಚನ ನೀಡಿದ.

ವಿ: ೧) ಕೃಷ್ಣ ಪಾಂಡವರ ಬಳಿಗೆ ಮರಳಿದ ಮೇಲೆ ಕುಂತಿ ವಿದುರನ ಮಾತಿನಂತೆ ಕರ್ಣನನ್ನು ಗಂಗಾತೀರದಲ್ಲಿ ಏಕಾಂತದಲ್ಲಿ ಸಂಧಿಸಿ ಅವನು ತನ್ನ ಮಗ ಎಂಬುದನ್ನು ತಿಳಿಸಿ, ಪಾಂಡವರ ಪಕ್ಷವನ್ನು ಸೇರಲು ಕೇಳಿಕೊಂಡಳು. ಆದರೆ, ಕರ್ಣ ಅವಳನ್ನು ಹೀಯಾಳಿಸಿ ಅದನ್ನು ನಿರಾಕರಿಸಿದ.

೨) ಬಳಿಕ ಅರ್ಜುನನ ಹೊರತು ಬೇರಾರನ್ನೂ ಯುದ್ಧದಲ್ಲಿ ಕೊಲ್ಲಲಾರೆ ಎಂದು ವಚನ ನೀಡುವನು. ಅದರಿಂದ ತಮ್ಮಿಬ್ಬರಲ್ಲಿ ಯಾರು ಸತ್ತರೂ ಕುಂತಿಗೆ ಮುಂಚಿನಂತೆಯೇ ಐವರು ಪುತ್ರರೂ ಉಳಿಯುವರು ಎಂಬುದು ಅವನ ವಿಚಾರವಾಗಿತ್ತು.

೩) ಪಂಪ ಮತ್ತು ಕುಮಾರವ್ಯಾಸರ ಭಾರತಸಂಗ್ರಹಗಳಲ್ಲಿ ಕುಂತಿ ಕರ್ಣನಿಂದ ತೊಟ್ಟ ಬಾಣವನ್ನು ಮರಳಿ ತೊಡದಂತೆ ವಚನ ಪಡೆಯುವಳು ಎಂಬ *ಉಲ್ಲೇಖವಿದೆ. ಆದರೆ

---

೭೯. ನ ತೇऽಯಂ ಸಮಾರಂಭೋ ಮಯಿ ಮೋಘೋ ಭವಿಷ್ಯತಿ ।
ವಧ್ಯಾನ್ ವಿಷಹ್ಯಾನ್ ಸಂಗ್ರಾಮೇ ನ ಹನಿಷ್ಯಾಮಿ ತೇ ಸುತಾನ್ ॥
ಯುಧಿಷ್ಠಿರಂ ಚ ಭೀಮಂ ಚ ಯಮೌ ಚೈವಾರ್ಜುನಾದೃತೇ ॥
ನ ತೇ ಜಾತು ಶಿಷ್ಯಂತಿ ಪುತ್ರಾಃ ಪಂಚ ಯಶಸ್ವಿನಿ ॥
ನಿರರ್ಜುನಾಃ ಸಕರ್ಣಾ ವಾ ಸಾರ್ಜುನಾ ವಾ ಹತೇ ಮಯಿ ॥
– ಕುಂತಿಯನ್ನು ಕುರಿತು ಕರ್ಣನ ವಚನ । ಭಾರತ (ಉದ್ಯೋಗ.೧೪೬/೨೦, ೨೩)

* ಪಿಡಿಯೆಂ ಪುರುಗಣೆಯಂ – ಪಂಪಭಾರತ (೯/೮೭)

ಹೋದ ಬಾಣವ ಮರಳಿ ತೊಡದಿರು – ಕುಮಾರವ್ಯಾಸಭಾರತ (ಉದ್ಯೋಗ. ಸಂಧಿ ೧೦, ಪದ್ಯ ೩೫)

ಮೂಲಭಾರತದಲ್ಲಿ ನಿರ್ಣಯದಲ್ಲಿ ಕಾಣಸಿಗದ ಅದು ಕೇವಲ ಕಲ್ಪನೆ ಮಾತ್ರ. ಅದು ಕರ್ಣ ಕುಂತಿ ಇಬ್ಬರ ವ್ಯಕ್ತಿತ್ವಕ್ಕೂ ಕುಂದುಂಟು ಮಾಡುವ ಕೆಟ್ಟಕಲ್ಪನೆ. ಈ ಬಗ್ಗೆ ಹೆಚ್ಚಿನ ವಿವರಗಳನ್ನು ೨೭ನೇ ಅಧ್ಯಾಯದ ಕೊನೆಯ ವಿವರಣೆಗಳಲ್ಲಿ ಕಾಣಬಹುದು.

ಕುರು ಪಾಂಡವರ ಯುದ್ಧೋದ್ಯೋಗ

ತತೋ ಯಯುಃ ಕೌರವಾಃ ಪಾಂಡವಾಶ್ಚ
ಕುರುಕ್ಷೇತ್ರಂ ಯೋದ್ಧುಕಾಮಾಃ ಸಕೃಷ್ಣಾಃ।
ಚಕ್ರುಶ್ಚ ತೇ ಶಿಬಿರಾಣ್ಯತ್ರ ಸರ್ವೇ
ಶುಭೇ ದೇಶೇ ಪಾಂಡವಾಃ ಕೃಷ್ಣಬುದ್ಧ್ಯಾ ॥ ೮೦ ॥

॥ ಇತಿ ಶ್ರೀಮದಾನಂದತೀರ್ಥಭಗವತ್ಪಾದಾಚಾರ್ಯವಿರಚಿತೇ ಶ್ರೀಮಹಾಭಾರತತಾತ್ಪರ್ಯನಿರ್ಣಯೇ ಯುದ್ಧೋದ್ಯೋಗೋ ನಾಮ ಚತುರ್ವಿಂಶೋಽಧ್ಯಾಯಃ ॥ ೨೪ ॥

ಅ: ಬಳಿಕ ಪಾಂಡವರು ಮತ್ತು ಕೌರವರು ಕಾದುವ ಬಯಕೆಯಿಂದ ಕೃಷ್ಣನೊಂದಿಗೆ ಕುರುಕ್ಷೇತ್ರಕ್ಕೆ ತೆರಳಿದರು. ಅಲ್ಲಿ ಅವರೆಲ್ಲ ಶಿಬಿರಗಳನ್ನು ನಿರ್ಮಿಸಿಕೊಂಡರು. ಪಾಂಡವರು ಕೃಷ್ಣ ತಿಳಿಸಿದಂತೆ ಒಂದು ಶುದ್ಧ ಸ್ಥಳದಲ್ಲಿ ತಮ್ಮ ಶಿಬಿರಗಳನ್ನು ನಿರ್ಮಿಸಿಕೊಂಡರು.

॥ ಶ್ರೀಮದಾನಂದತೀರ್ಥಭಗವತ್ಪಾದಾಚಾರ್ಯಪ್ರಣೀತ ಮಹಾಭಾರತತಾತ್ಪರ್ಯನಿರ್ಣಯದಲ್ಲಿ 'ಯುದ್ಧೋದ್ಯೋಗ' ಎಂಬ ಇಪ್ಪತ್ತನಾಲ್ಕನೆಯ ಅಧ್ಯಾಯ ಮುಗಿಯಿತು ॥ ೨೪ ॥

॥ ಶ್ರೀಕೃಷ್ಣಾರ್ಪಣಮಸ್ತು ॥

★★★★★

---

೮೦. ಶಿಬಿರಾಣ್ಯತ್ರ ಸರ್ವ ಇತ್ಯತ್ರ ಶಿಬಿರಾಣಿ = ಪಟಕುಡ್ಯಾದಿನಾ ಕೃತಸ್ವಕಟಕಗೃಹಾಣಿ ॥ – (ವಾ.)

ಅಧ್ಯಾಯ - ೨೫

(ಭೀಷ್ಮಪಾತಃ)

(ಭೀಷ್ಮಸೇನಾಪತ್ಯ, ಗೀತೋಪದೇಶ, ಶ್ರೀಕೃಷ್ಣನ ಚಕ್ರಧಾರಣ,
ಇರಾವಂತನ ವಧೆ, ಭೀಮಾರ್ಜುನರ ಅದ್ಭುತಪರಾಕ್ರಮ, ಭೀಷ್ಮಪಾತ)

ಕುರು ಪಾಂಡವರ ಯುದ್ಧದ ಪ್ರಾರಂಭ

ತೇ ಸೇನೇ ಸಮರಾರಂಭೇ ಸಮೇತೇ ಸಾಗರೋಪಮೇ ।
ಭೀಮಭೀಷ್ಮಮುಖೇ ವೀಕ್ಷ್ಯ ಪ್ರಾಹ ವಾಸವಿರಚ್ಯುತಮ್ ॥ ೧ ॥

ಅ: ಯುದ್ಧದ ಪ್ರಾರಂಭದಲ್ಲಿ ಭೀಮ-ಭೀಷ್ಮರ ನೇತೃತ್ವದಲ್ಲಿ ಎರಡು ಸಾಗರಗಳಂತೆ ನೆರೆದಿದ್ದ ಸೇನೆಗಳನ್ನು ಕಂಡು ಅರ್ಜುನ ಶ್ರೀಕೃಷ್ಣನನ್ನು ಹೇಳಿದ.

ವಿ: ೧) ಇಲ್ಲಿ ಅಗಾಧವಾದ ಕುರು–ಪಾಂಡವ ಸೇನೆಗಳನ್ನು ಸಮುದ್ರಗಳಿಗೆ ಹೋಲಿಸಿರುವುದು ಗಮನಾರ್ಹ. ಕೌರವರ ಸೇನಾಪತಿ ಭೀಷ್ಮರು, ಪಾಂಡವರ ಸೇನಾಪತಿ ಧೃಷ್ಟದ್ಯುಮ್ನ.

೨) ಇಲ್ಲಿ ಧೃಷ್ಟದ್ಯುಮ್ನನ ಉಲ್ಲೇಖವನ್ನು ಮಾಡದೇ, ಭೀಮನ ಉಲ್ಲೇಖವನ್ನು ಮಾಡಿರುವುದು ಹೆಸರಿಗೆ ಧೃಷ್ಟದ್ಯುಮ್ನ ಸೇನಾಧಿಪತಿಯಾದರೂ ಅವನಿಗೂ ಬಲವಾಗಿ ಇಡೀ ಸೇನೆಗೆ ಪ್ರಧಾನ ರಕ್ಷಕನಾಗಿ *ಭೀಮಸೇನನೇ ಇದ್ದುದರಿಂದ ಅತ್ಯಂತ ಉಚಿತವಾದುದು ಎಂದು ತಿಳಿಯಬೇಕು.

೩) ಈ ನಿರೂಪಣೆ ಭಗವದ್ಗೀತೆಯಲ್ಲಿನ ೧/೨೦ ಶ್ಲೋಕಕ್ಕೆ ಅನುಗುಣವಾದುದು.

೪) ಧೃಷ್ಟದ್ಯುಮ್ನ ಅಗ್ನಿಯ ಅವತಾರ, ಭೀಮಸೇನ ವಾಯು. ಅಗ್ನಿಯು ತನ್ನ ಜ್ವಲನ ಕಾರ್ಯದಲ್ಲಿ ವಾಯುವಿನ ಸಹಕಾರವನ್ನು ಪೂರ್ಣವಾಗಿ ಅವಲಂಬಿಸಿರುವಂತೆ ಧೃಷ್ಟದ್ಯುಮ್ನ ಭೀಮನನ್ನು ಸರ್ವಾತ್ಮನಾ ಅವಲಂಬಿಸಿರುವನು ಎಂದೂ ತಿಳಿಯುವುದು.

---

೧. ತೇ ಸೇನೇ ಸಮರಾರಂಭ ಇತ್ಯತ್ರ ಸಮರಾರಂಭೇ ಸತಿ ತೇ ಸೇನೇ ವೀಕ್ಷ್ಯೇತ್ಯರ್ಥಃ ॥ – (ವಾ.)

೧. ಪಾಪಾಶಂಕೀ ಪಾಪವಿಷಯೇ ಆಶಂಕಾ ವಿದ್ಯತೇ ಯಸ್ಯ ಸ ತಥಾ। ಮೇ ಪಾಪಂ ಸ್ಯಾದಿತಿ ಶಂಕಾವಾನಿತ್ಯರ್ಥಃ। – (ಜ.)

* ಅಪರ್ಯಾಪ್ತಂ ತದಸ್ಮಾಕಂ ಬಲಂ ಭೀಷ್ಮಾಭಿರಕ್ಷಿತಮ್ ।
ಪರ್ಯಾಪ್ತಂ ತ್ವಿದಮೇತೇಷಾಂ ಬಲಂ ಭೀಮಾಭಿರಾಕ್ಷಿತಮ್ ॥ – ಗೀತಾ (೧/೧೦)

ಅರ್ಜುನವಿಷಾದಯೋಗ

ಸೇನಯೋರುಭಯೋರ್ಮಧ್ಯೇ ರಥಂ ಸ್ಥಾಪಯ ಮೇಽಚ್ಯುತ ।
ಇತ್ಯುಕ್ತಃ ಸ ತಥಾ ಚಕ್ರೇ ಪಾರ್ಥೋ*ಽಪಶ್ಯಚ್ಚ ಬಾಂಧವಾನ್ ।
ವಿಸಸರ್ಜ ಧನುಃ ಪಾಪಾಶಂಕೀ ತತ್ರಾಹ ಮಾಧವಃ ॥ ೨ ॥

ಅ: 'ಅಚ್ಯುತ! ಎರಡೂ ಸೇನೆಗಳ ಮಧ್ಯದಲ್ಲಿ ನನ್ನ ರಥವನ್ನು ನಿಲ್ಲಿಸು'. ಅವನು ಹೀಗೆ ಕೇಳಿಕೊಳ್ಳಲು ಕೃಷ್ಣ ಹಾಗೆಯೇ ಮಾಡಿದ. ಅರ್ಜುನ ಎರಡೂ ಸೇನೆಗಳಲ್ಲಿ ಬಾಂಧವರನ್ನು ಕಂಡನು. ಪಾಪಭೀರುವಾಗಿ ಅರ್ಜುನ ಧನುಸ್ಸನ್ನು ತೊರೆದ.

ವಿ: ೧) ಅರ್ಜುನ ಕಾಣಬಯಸಿದ್ದು ಒಂದಾದರೆ, ಕಂಡದ್ದು ಮತ್ತೊಂದೇ ಆಯಿತು. ಎರಡೂ ಸೇನೆಗಳ ಮಧ್ಯದಲ್ಲಿ ನಾನಾ ತೆರನಾದ ಬಂಧುಗಳನ್ನು ಕಂಡ ವಿವರ ಗೀತೆಯಲ್ಲಿ ಬಂದಿದೆ (೧/೨೬,೨೭).

೨) ಹೀಗೆ ಕನಿಷ್ಠ ಆರು ತಲೆಮಾರುಗಳ ಜನ ನೆರೆದಿದ್ದ ಅತ್ಯಂತ ವಿಶಿಷ್ಟವಾದ ಯುದ್ಧ ಆ ಕುರು ಪಾಂಡವ ಯುದ್ಧ. ಅದರಿಂದಾಗಿಯೇ ಅರ್ಜುನನಿಗೆ ಅದನ್ನು ಕಂಡಾಗ ಕರುಣೆ ಉಕ್ಕಿತು ಎಂದು ತಿಳಿಯಬೇಕು.

ಗೀತೋಪದೇಶ

ಸ್ವಧರ್ಮೋ ದುಷ್ಟನಿಧನಂ ಧರ್ಮಜ್ಞಾನಾನುಪಾಲನಮ್ ।
ಕ್ಷತ್ರಿಯಸ್ಯ ತಮುತ್ಸೃಜ್ಯ ನಿಂದಿತೋ ಯಾತ್ಯಧೋ ಧ್ರುವಮ್ ॥ ೩ ॥

ಅ: ಆಗ ಕೃಷ್ಣ ಅವನಿಗೆ ಹೇಳಿದ 'ಕ್ಷತ್ರಿಯರಿಗೆ ದುಷ್ಟ ಶಿಕ್ಷಣ, ಧರ್ಮಜ್ಞಾನಗಳ ಪರಿಪಾಲನೆ ಸ್ವಧರ್ಮ. ಅದನ್ನು ತೊರೆದಲ್ಲಿ ಅವನು ನಿಂದಿತನಾಗಿ ಅಧೋಗತಿಯನ್ನು ನಿಶ್ಚಯವಾಗಿ ಹೊಂದುವನು'.

ವಿ: ೧) ಬಂಧುಗಳನ್ನು ಕೊಲ್ಲುವುದು ಅಧರ್ಮ, ಅದರಿಂದಾಗಿ ಪಾಪಪ್ರಾಪ್ತಿ ಎಂಬುದು ಅರ್ಜುನನ ವಿಚಾರವಾಗಿತ್ತು ಅದಕ್ಕೆ ಕೃಷ್ಣನ ಉತ್ತರ ಸ್ವಧರ್ಮಾಚರಣೆ ಎಂದೂ ಅಧರ್ಮವಾಗದು, ಕ್ಷತ್ರಿಯನ ಪಾಲಿಗೆ ದುಷ್ಟಶಿಕ್ಷಣ ಹಾಗೂ ಧರ್ಮಜ್ಞಾನಗಳ ಪರಿಪಾಲನೆ ಅತ್ಯಂತ ಪ್ರಧಾನವಾದ ಕರ್ತವ್ಯ. ಕೌರವಸೇನೆಯಲ್ಲಿ ನೆರೆದಿರುವ ಕೌರವರಂತೂ ಆತತಾಯಿಗಳಾದ ಪರಮಪಾಪಿಗಳು.

---

* ಪಾರ್ಥಃ ಪಶ್ಯಂಶ್ಚ – (ಪಾಠಾಂತರ)

೨) ಭೀಷ್ಮ, ದ್ರೋಣಾದಿ ಕೆಲವು ಸಾತ್ತ್ವಿಕರು ಸ್ವರೂಪತಃ ದುಷ್ಟರಲ್ಲದಿದ್ದರೂ ಕೌರವರಂತಹ ದೈವದ್ರೋಹಿಗಳಿಗೆ ನೆರವು ನೀಡುವ ಮೂಲಕ ಪಾಪಕಾರ್ಯವನ್ನು ಪ್ರೋತ್ಸಾಹಿಸುವ ಪಾತಕಕ್ಕೆ ಇಳಿದವರು. ಅಂಥವರನ್ನು ಸಂಹರಿಸುವುದರಲ್ಲಿ ಯಾವ ಪಾತಕವೂ ಸರ್ವಥಾ ಬಾರದು. ಆದ್ದರಿಂದ ಕರ್ತವ್ಯವಾದ ಯುದ್ಧವನ್ನು ಮಾಡಲೇಬೇಕು ಎಂದು ಭಾವ. ಪಾಪ ಬರುವುದು ಅಂತಹ ಧರ್ಮಯುದ್ಧವನ್ನು ಮಾಡುವುದರಿಂದಲ್ಲ, ಅದನ್ನು ತೊರೆಯುವುದರಿಂದ. ಯುದ್ಧತ್ಯಾಗ ಎಂದರೆ ಧರ್ಮತ್ಯಾಗವೇ.

ಯತಃ ಪ್ರವೃತ್ತಿರ್ಭೂತಾನಾಂ ಯೇನ ಸರ್ವಮಿದಂ ತತಮ್ ।
ಸ್ವಕರ್ಮಣಾ ತಮಭ್ಯರ್ಚ್ಯ ಸಿದ್ಧಿಂ ವಿಂದತಿ ಮಾನವಃ ॥ ೪ ॥

ಅ: ಸಕಲ ಭೂತಗಳ ಪ್ರವೃತ್ತಿ ಯಾರಿಂದಾಗುವುದೋ, ಯಾರಿಂದ ಈ ಸಕಲ ಜಗತ್ತೂ ವ್ಯಾಪಿಸಲ್ಪಟ್ಟಿದೆಯೋ ಅಂತಹ ಭಗವಂತನನ್ನು ಸ್ವಧರ್ಮದಿಂದ ಚೆನ್ನಾಗಿ ಆರಾಧಿಸಿ ಮಾನವನು ಸಿದ್ಧಿಯನ್ನು ಪಡೆಯುವನು.

ವಿ: ವಿಷ್ಣು ಸರ್ವಜಗತ್ತಿಗೂ ಸರ್ವವಿಧದಲ್ಲೂ ಪ್ರೇರಕನಾದವನು, ಸರ್ವತ್ರವ್ಯಾಪ್ತನಾದವನೂ ಅವನೇ, ಅವನ ಆರಾಧನೆಯೇ ಸಿದ್ಧಿಗೆ ಸೋಪಾನ. ಸ್ವಧರ್ಮಾಚರಣೆಯೇ ಅವನಿಗೆ

---

೩. ವಿಸೃಜ್ಯ ಸಶರಂ ಚಾಪಂ ಶೋಕಸಂವಿಗ್ನಮಾನಸ ಇತ್ಯುಕ್ತ ಯುದ್ಧ ಪ್ರತಿಬಂಧಕಶೋಕಸ್ತ್ಯಾ ನ ಕಾರ್ಯಃ। ಕಾರಣಾಭಾವಾತ್। ತಥಾ ಹಿ। ಕಿಂ ಯುದ್ಧಾತ್ ಪರಲೋಕೇ ದುಃಖಿಂ ಭವತೀತಿ ಶೋಕಃ? ಉತ ಬಾಂಧವಾದೀನಾಂ ಹಾನಿರ್ಭವಿಷ್ಯತೀತಿ ಕೃಪಾಧಿಯಾ ಶೋಕಃ? ಉತ ಪರಮ ಪ್ರೇಮಾಸ್ಪದಾನಾಂ ಬಾಂಧವಾದೀನಾಂ ದರ್ಶನ ಸ್ಪರ್ಶನಾದ್ಯಭಾವಾತ್ ಸುಖಹಾನಿಃ, ತಥಾ ತೇಷಾಂ ಛೇದಭೇದಾದಿದರ್ಶನೇನ ದುಃಖಾವಾಪ್ತಿಶ್ಚೇತ್ಕೈಹಿಕ ಪ್ರಾಪ್ತಿಃ? ತತ್ರಾದ್ಯಂ ತಾವದ್ ದೂಷಯತಿ ಸ್ವಧರ್ಮ ಇತಿ। ಸ್ವಧರ್ಮತ್ವಂ ಕುತ ಇತ್ಯತೋ ನಾರಾಯಣ ದ್ವಿಟ್ ತದನುಬಂಧಿನಿಗ್ರಹರೂಪತ್ವಾದಿತಿ ಸ್ಥಿತೇಽಪಿ ಹೇತ್ವಂತರಮಾಹ ಧರ್ಮಜ್ಞಾನಯೋರನುಪಾಲನಂ ಯೇನೇತಿ। ತಥಾ ಚ ಯುದ್ಧಸ್ಯ ಪರಮಧರ್ಮತ್ವಾತ್ ಅಸತ್ಕರ್ಮಣಃ ಸುಖಾಭಾವವತ್ ಸತ್ಕರ್ಮಣೋ ದುಃಖಾಭಾವಾತ್ ಶೋಕೋ ನ ಕಾರ್ಯ ಇತಿ ಭಾವಃ। ಏತೇನ ಸ್ವಧರ್ಮಮಪಿ ಚಾವೇಕ್ಷ್ಯ ನ ವಿಕಂಪಿತುಮರ್ಹಸಿ। 'ನಾಸತೋ ವಿದ್ಯತೇ ಭಾವೋ ನಾಭಾವೋ ವಿದ್ಯತೇ ಸತಃ' ಇತ್ಯಾದ್ಯುಕ್ತೇಸ್ತಾತ್ಪರ್ಯಮುಕ್ತಂ ಭವತಿ। ಏತೇನ ಶುದ್ಧೇಷು ಯತಿಧರ್ಮೇಷು ಸತ್ಸು ಅವರ್ಜನೀಯ ಕಾಮಕ್ರೋಧೇಷು ಯುದ್ಧಾದಿಷು ವಿಧಾನಮಯುಕ್ತಮಿತ್ಯರ್ಜುನಶಂಕಾಯಾ, 'ಲೋಕೇಽಸ್ಮಿನ್ ದ್ವಿವಿಧಾ ನಿಷ್ಠಾ', 'ಶ್ರೇಯಾನ್ ಸ್ವಧರ್ಮೋ ವಿಗುಣ' ಇತ್ಯಾದಿನಾ ಯತ್ ಸಮಾಧಾನಮುಕ್ತಂ ತದಪಿ ಸಂಗೃಹೀತಂ ಭವತಿ। ತವ ಜನಕಾದಿವದಾಧಿಕಾರಿತ್ವೇನ ಅವರ್ಜನೀಯರಾಗಾದ್ಯುಪೇತೇಽಪಿ ಕರ್ಮಣ್ಯಧಿಕೃತತ್ವೇನ ತಸ್ಯ ವಿಗುಣತ್ವೇಽಪಿ ಸ್ವಧರ್ಮತ್ವೇನ ಕಾರ್ಯತ್ವಾದಿತಿ। ನ ಕೇವಲಮಾಮುಷ್ಮಿಕದುಃಖಾಭಾವಾತ್ ಕಾರ್ಯತ್ವಮ್। ಅಕರಣೇ ಲೌಕಿಕ ವೈದಿಕಾ ನರ್ಥಾ ಚ ಭವತ ಇತ್ಯಾಹ ತಮುತ್ಸೃಜ್ಯೇತಿ। ಏತೇನ ತತಃ ಸ್ವಧರ್ಮಂ ಕೀರ್ತಿಂ ಚ ಹಿತ್ವಾ ಪಾಪಮವಾಪ್ಸ್ಯಸೀತಾದ್ಯುಕ್ತಾತ್ಪರ್ಯಂ ಭವತಿ। – (ತಾ.)

೪. ಗೀತಾ (೧೮/೪೬)

ಪರಮಪ್ರಿಯವಾದ ಆರಾಧನೆ. ಆದ್ದರಿಂದ ಯುದ್ಧವೆಂಬ ಸ್ವಧರ್ಮಾಚರಣೆಯನ್ನು ತಪ್ಪದೇ ಮಾಡುವ ಮೂಲಕ ಶ್ರೀಹರಿಯನ್ನು ಆರಾಧಿಸಿ ಮೋಕ್ಷಸಿದ್ಧಿಯನ್ನು ಪಡೆಯಬೇಕು ಎಂದು ಭಾವ.

ನ ಚ ಶೋಕಸ್ತ್ವಯಾ ಕಾರ್ಯೋ* ಬಂಧೂನಾಂ ನಿಧನೇಕ್ಷಯಾ ।
ದೇಹಸ್ಯ ಸರ್ವಥಾ ನಾಶಾದನಾಶಾಚ್ಚೇತನಸ್ಯ ಚ ॥ ೫ ॥

ಅ: ಬಂಧುಗಳನ್ನು ಕೊಲ್ಲಬೇಕಲ್ಲ ಎಂದು ಭಾವಿಸಿ ನೀನು ಶೋಕಿಸಬೇಕಿಲ್ಲ, ಏಕೆಂದರೆ ದೇಹಕ್ಕೆ ನಾಶ ಸರ್ವಥಾ ತಪ್ಪಿದ್ದಲ್ಲ. ಅದರಂತೆ ಚೇತನಕ್ಕೆ ಸರ್ವಥಾ ನಾಶ ಬರುವಂತಹುದೂ ಅಲ್ಲ.

ವಿ: ೧) ಅರ್ಜುನನ ಶೋಕ ಜೀವನಾಶ ಪ್ರಯುಕ್ತವೋ ಅಥವಾ ದೇಹನಾಶ ಪ್ರಯುಕ್ತವೋ ಎಂಬುದು ಮುಖ್ಯಪ್ರಶ್ನೆ. ದೇಹನಾಶಕ್ಕಾಗಿ ಅಳುವುದು ತರವಲ್ಲ, ಏಕೆಂದರೆ ಯುದ್ಧ ಮಾಡಲೀ ಮಾಡದಿರಲಿ ಅದು ಅಳಿಯುವುದು ತಪ್ಪಿದ್ದಲ್ಲ, ದೇಹದಲ್ಲಿ ಬಾಲ್ಯ, ಯೌವನ, ವೃದ್ಧಾಪ್ಯಗಳು ಎಂತೋ ಅಂತೇ ದೇಹ ತೊರೆದು ಮತ್ತೊಂದು ದೇಹವನ್ನು ಪಡೆಯುವ ಸಾವೂ ಸಹ. ಆದ್ದರಿಂದ ಅದಕ್ಕಾಗಿ ಅಳುವುದು ಉಚಿತವೆನ್ನಿಸದು.

೨) ಇನ್ನು ಜೀವನಾಶದ ಪ್ರಶ್ನೆ – ಜೀವ ಭಗವಂತನಂತೆ ಅನಾದಿ ನಿತ್ಯನಾದವನು. ಅವನಿಗೆ ಹುಟ್ಟೂ ಇಲ್ಲ, ಸಾವೂ ಇಲ್ಲ, ಸರ್ವಥಾ ಸಾಯದ ಜೀವನ ಬಗ್ಗೆ ಅಳುವುದು ಹೇಗೆ ವಿವೇಕ–ವಾದೀತು? ಹೀಗೆ ಯಾವ ಕಾರಣದಿಂದಲೂ ಸಾವಿಗಾಗಿ ಅಳಬೇಕಿಲ್ಲ ಎಂದರ್ಥ(ಗೀತಾ. ೨/೨೦).

---

* ನಿಧನೇಕ್ಷಯಾ ನಿಧನಸಂದರ್ಶನೇನ। – (ವೇ.)

೫. ಗೀತಾ (೧೮/೪೬)

೫. ನಿಧನವಿಷಯಕಮದಿಚ್ಛಯೇತ್ಯರ್ಥಃ। – (ಸ.)

೫. ದ್ವಿತೀಯಂ ದೂಷಯತಿ ನ ಚೇತಿ। ಕುತ ಇತಿ ಚೇದ್ವಿಕಲ್ಪಾಸಹತ್ವಾತ್। ತಥಾಹಿ। ಕಿಂ ಬಂಧುಶಬ್ದೇನ ತದ್ದೇಹೋ ವಿವಕ್ಷಿತಃ, ಉತ ಚೈತನ್ಯಂ? ಆದ್ಯಂ ದೂಷಯತಿ ದೇಹೇತಿ। ಕೌಮಾರಾದಿವದವಶ್ಯಂ ನಾಶಾದಿತ್ಯರ್ಥಃ। ಏತೇನ 'ದೇಹಿನೋಽಸ್ಮಿನ್ ಯಥಾದೇಹೇ', 'ವಾಸಾಂಸಿ ಜೀರ್ಣಾನಿ ಯಥಾ ವಿಹಾಯ' 'ಜಾತಸ್ಯ ಹಿ ಧ್ರುವೋ ಮೃತ್ಯುಃ' ಇತ್ಯಾದಿತಾತ್ಪರ್ಯಮುಕ್ತಂ ಭವತಿ। ದ್ವಿತೀಯಂ ದೂಷಯತಿ ಅನಾಶಾದಿತಿ। ಸರ್ವಥೇತಿ ವರ್ತತೇ। ಸರ್ವಪ್ರಕಾರೇಣ ಉಪಾಧಿಬಿಂಬಸನ್ನಿಧಿನಾಶಾಭಾವೇನ ಶಸ್ತ್ರಜಲಾನಿಲಾನಲೈರ್ವಾ ದಕ್ಷಶಿರಶ್ಛೇದವದ್ ವಿಶೇಷ ನಿಮಿತ್ತೇನ ವಾ ಚೇತನಸ್ಯಾನಾಶಾದಿತ್ಯರ್ಥಃ। ಏತೇನ 'ನ ತ್ವೇವಾಹಂ ಜಾತು ನಾಸಂ', 'ಅಜೋ ನಿತ್ಯಃ ಶಾಶ್ವತೋಽಯಂ ಪುರಾಣಃ', 'ನೈನಂ ಛಿಂದಂತಿ ಶಸ್ತ್ರಾಣಿ' ಇತ್ಯಾದಿ ಬಹುಗ್ರಂಥತಾತ್ಪರ್ಯಮುಕ್ತಂ ಭವತಿ। – (ತಾ.)

ನಾಪಿ ತೃತೀಯಃ। ಅಭಿಮಾನಸಹಿತವಿಷಯಸಂಬಂಧಸ್ಯೈವ ಸುಖದುಃಖಪ್ರದತ್ವಸ್ಯಾನ್ವಯವ್ಯತಿರೇಕಸಿದ್ಧತ್ವಾತ್ ಬಾಂಧವಾದಿಷ್ವಭಿಮಾನಂ ಪರಿತ್ಯಜ್ಯ ತದ್ದರ್ಶನಾದಿ ನಿಮಿತ್ತಂ ದುಃಖಂ ಸೋಢವ್ಯಮಿತಿ 'ಮಾತ್ರಾ ಸ್ಪರ್ಶಾಸ್ತು ಕೌಂತೇಯ' ಇತ್ಯತ್ರೋಕ್ತೇರಿತಿ ಭಾವಃ ॥ – (ತಾ.)

೩) ಜೀವನು ಯುದ್ಧದಲ್ಲಿ ಮಾತ್ರವಲ್ಲದೇ ಎಲ್ಲೂ ಅಳಿಯಲಾರದವನು. ಅಗ್ನಿ ಅವನನ್ನು ಸುಡದು, ನೀರು ಅವನನ್ನು ನೆನೆಸದು, ಶಸ್ತ್ರಗಳು ಅವನನ್ನು ತುಂಡರಿಸವು (೨/೨೩). ಅವನೊಳಗಿನ ಬಿಂಬರೂಪಿಯಾದ ಭಗವಂತ ಸದಾ ಅವನನ್ನು ಅವನೊಳಗೆ ನೆಲೆಸಿದ್ದೇ ಸಂರಕ್ಷಿಸುತ್ತಿರುವನು ಎಂದರ್ಥ.

ಸೃಷ್ಟಿಸ್ಥಿತ್ಯಪ್ಯಯಾಜ್ಞಾನಬಂಧಮೋಕ್ಷಪ್ರವೃತ್ತಯಃ ।
ಪ್ರಕಾಶನಿಯಮೌ ಚೈವ ಬ್ರಹ್ಮೇಶಾದಿಕ್ಷರಸ್ಯ ಚ ।
ಅಕ್ಷರಪ್ರಕೃತೇಶ್ಚೈವ ಮತ್ತ ಏವ ನ ಚಾನ್ಯತಃ ॥ ೬ ॥

ಅ: ಬ್ರಹ್ಮ, ರುದ್ರಾದಿಕ್ಷರರಿಗೂ, ಅಕ್ಷರ ಪ್ರಕೃತಿಯಾದ ಮಹಾಲಕ್ಷ್ಮಿಗೂ ಸೃಷ್ಟಿ, ಸ್ಥಿತಿ, ಲಯ, ಜ್ಞಾನ, ಬಂಧ, ಮೋಕ್ಷ, ಪ್ರವೃತ್ತಿ, ನಿಯಮನಗಳು ಆಗುವುದು ನನ್ನಿಂದಲೇ ಹೊರತು ಇತರರಿಂದಲ್ಲ. ಇದು ಕ್ಷರಾಕ್ಷರ ಉತ್ತಮೋತ್ತಮವನ್ನು ಶ್ರೀಹರಿ ನಿರೂಪಿಸುವ ಹದಿನೈದನೆಯ ಅಧ್ಯಾಯದ ಸಾರ.

ವಿ: ಇದು 'ಜನ್ಮಾದ್ಯಸ್ಯ ಯತಃ' ಎಂಬ ಬ್ರಹ್ಮಸೂತ್ರದ ಅರ್ಥ. ಎಂದರೆ ಜಡ ಚೇತನಾತ್ಮಕವಾದ ಸಮಸ್ತ ವಿಶ್ವದ ಹುಟ್ಟು ಮೊದಲಾದ ಸಕಲಕಾರ್ಯಗಳೂ ಅತ್ಯಂತ ಮುಖ್ಯವಾಗಿ ನಡೆಯುವವು ಶ್ರೀಹರಿಯಿಂದಲೇ ಹೊರತು ಬೇರಾರಿಂದಲೂ ಅಲ್ಲ.

ನ ಮೇ ಕುತಶ್ಚಿತ್ ಸರ್ಗಾದ್ಯಾಃ ಸ್ವಾತಂತ್ರ್ಯಾದ್ಗುಣಪೂರ್ತಿತಃ ।
ಅತಃ ಸಮಾಧಿಕಾಭಾವಾನ್ಮಮ ಮದ್ವಶಮೇವ ಚ ॥ ೭ ॥

ಅ: ಸ್ವಾತಂತ್ರ್ಯವಿರುವುದರಿಂದ, ಗುಣಪೂರ್ಣತ್ವ ಇರುವುದರಿಂದ, ಬೇರಾರಿಂದಲೂ ಸೃಷ್ಟ್ಯಾದಿಗಳು ನನಗೆ ಸರ್ವಥಾ ಒದಗವು. ಹೀಗೆ ಸಮಾನನಾಗಲೀ, ಉತ್ತಮನಾಗಲೀ ಇಲ್ಲದಿರುವುದರಿಂದ ಸರ್ವವೂ ನನ್ನ ವಶದಲ್ಲಿಯೇ ಇರುವುದು.

---

* **ಅಕ್ಷರಪ್ರಕೃತೇಃ ಸಂತೋ** – (ಪಾಠಾಂತರ)

ಸಂತೋ ವಿದ್ಯಮಾನಾಃ । ಅಕ್ಷರಪ್ರಕೃತೇಃ ಪ್ರಾಕೃತದೇಹಾಭಾವಾತ್ ನಿತ್ಯಮುಕ್ತತ್ವಾತ್ ಸರ್ವಜ್ಞತ್ವಾತ್ ಸೃಷ್ಟ್ಯಪ್ಯಯಾಜ್ಞಾನಬಂಧಮೋಕ್ಷಾಣಾಮಭಾವಾತ್ ಸಂತ ಇತ್ಯುಕ್ತಮ್ । – (ವೇ.)

೬. ತದೇವಂ ಪ್ರಥಮಷಟ್ಕೇನ ಸ್ವವಿಹಿತವೃತ್ತ್ಯಾ ಭಗವದಾರಾಧನಂ ಕಾರ್ಯಮಿತಿ ಕರ್ಮಯೋಗಂ ಧ್ಯಾನಯೋಗಂ ಚ ನಿರೂಪ್ಯ ತದ್ಭಕ್ತಿಪೂರ್ವಮನುಷ್ಠಿತಮೇವ ಜ್ಞಾನ ಸಾಧನಂ, ನಾನ್ಯಥಾ, ಅತೋ ಭಕ್ತ್ಯರ್ಥಂ ಭಗವನ್ಮಹಿಮೋಚ್ಯತೇ। ಮಯ್ಯಾಸಕ್ತಮನಾ ಇತಿ ಸಪ್ತಮೋಪಕ್ರಮೇ ಪ್ರತಿಜ್ಞಾಯ ಪಂಚದಶೇ ದ್ವಾವಿಮೌ ಪುರುಷೌ ಲೋಕ ಇತ್ಯಾದಿನಾ ತತ್ವಸಾರೋಪಸಂಹಾರಃ ಕೃತಃ। ತದಂತ ಗ್ರಂಥ ತಾತ್ಪರ್ಯಮಾಹ ಸೃಷ್ಟಿರಿತ್ಯಾದಿನಾ। – (ತಾ.)

ವಿ: ೧) ಇತರ ಜಗತ್ತಿಗೆ ಸೃಷ್ಟ್ಯಾದಿಗಳಿರುವಂತೆ ಶ್ರೀಹರಿಗೂ ಇರಬಹುದೆಂಬ ಶಂಕೆಗೆ ಇಲ್ಲಿ ಉತ್ತರವಿದೆ. ಇತರರು ಅಸ್ವತಂತ್ರರಾದ್ದರಿಂದ ಅವರಿಗೆ ಸೃಷ್ಟ್ಯಾದಿಗಳ ಪ್ರಸಕ್ತಿ ಇದೆ, ಆದರೆ ಶ್ರೀಹರಿಯು ಸ್ವತಂತ್ರನೂ, ಗುಣಪೂರ್ಣನೂ ಆದ್ದರಿಂದ ಅವನಿಗೆ ಸೃಷ್ಟ್ಯಾದಿಗಳ ಪ್ರಸಕ್ತಿ ಸರ್ವಥಾ ಇಲ್ಲ. ಅವನಿಗೆ ಸಮಾನನಾಗಲೀ, ಉತ್ತಮನಾಗಲೀ ಇಲ್ಲವೇ ಇಲ್ಲ.

೨) ಆದ್ದರಿಂದ ಅವನ ಸ್ವರೂಪ, ಪ್ರಮಿತಿ, ಪ್ರವೃತ್ತಿರೂಪ ಇರುವಿಕೆ ಅನ್ಯಾಧೀನ–ವಾದುದಲ್ಲ ಎಂದರ್ಥ.

ಜ್ಞಾತ್ವೈಷಾಂ ನಿಧನಾದ್ಯಂ ಚ ಜೀವಾದೇರಸ್ವತಂತ್ರತಾಮ್ ।
ಅಸ್ವಾತಂತ್ರ್ಯಾನ್ನಿವೃತ್ತೌ ಚ ಮಾಮನುಸ್ಮರ ಯುಧ್ಯ ಚ ॥ ೮ ॥

ಅ: ಈ ಬಂಧುಗಳ ಮರಣಾದಿಗಳನ್ನು, ಜೀವ ಜಡಗಳ ಅಸ್ವಾತಂತ್ರ್ಯವನ್ನು ತಿಳಿದು ಯುದ್ಧವನ್ನು ತೊರೆಯಲು ನೀನು ಅಸ್ವತಂತ್ರನೆಂಬುದನ್ನು ತಿಳಿದು ನನ್ನನ್ನು ಸ್ಮರಿಸುತ್ತಾ ಯುದ್ಧವನ್ನು ಮಾಡು.

ಯೇ ತು ಸರ್ವಾಣಿ ಕರ್ಮಾಣಿ ಮಯಿ ಸನ್ಯಸ್ಯ ಮತ್ಪರಾಃ ।
ಅನನ್ಯೇನೈವ ಯೋಗೇನ ಮಾಂ ಧ್ಯಾಯಂತ ಉಪಾಸತೇ ॥ ೯ ॥

ತೇಷಾಮಹಂ ಸಮುದ್ಧರ್ತಾ ಮೃತ್ಯುಸಂಸಾರಸಾಗರಾತ್ ।
ಭವಾಮಿ ನ ಚಿರಾತ್ ಪಾರ್ಥ ಮಯ್ಯಾವೇಶಿತಚೇತಸಾಮ್ ॥ ೧೦ ॥

ಅ: ಯಾರು ಸಕಲ ಕರ್ಮಗಳನ್ನು ನನ್ನಲ್ಲಿಯೇ ಸಮರ್ಪಿಸಿ, ನನ್ನನ್ನೇ ಸರ್ವೋತ್ತಮನೆಂದು ಬಗೆದು ಅನನ್ಯವಾದ ಯೋಗದಿಂದ ನನ್ನನ್ನು ಧ್ಯಾನಿಸಿ ಉಪಾಸನೆ ಮಾಡುವರೋ ಅಂತಹ ನನ್ನಲ್ಲೇ ಮನಸ್ಸನ್ನು ನೆಲೆಗೊಳಿಸಿದವರನ್ನು ಮೃತ್ಯುಸಂಸಾರ ಸಾಗರದಿಂದ ನಾನು ಬೇಗನೆ ಮೇಲೆತ್ತುವವನಾಗುವೆ.

---

೯. ಗೀತಾ (೧೨/೬)

೯. ಅನನ್ಯೇನೈವ ಯೋಗೇನೇತ್ಯತ್ರ ನ ವಿದ್ಯತೇ ಅನ್ಯೋ ವಿಷಯೋ ಯಸ್ಯ ಸೋಽಯಮನನ್ಯಃ। ತೇನ ಯೋಗೇನ = ಮನೋಯೋಗೇನ ॥ –(ವಾ.)

೧೦. ಗೀತಾ (೧೨/೭)

ವಿ: ಸರ್ವಕರ್ಮಗಳನ್ನು ವಿಧ್ಯುಕ್ತವಾಗಿ ಆಚರಿಸಿ, ಅವುಗಳ ಫಲಗಳನ್ನಾಶಿಸದೇ, ಅವುಗಳನ್ನೆಲ್ಲ ನನಗೆ ಸಮರ್ಪಿಸಿ, ನನ್ನನ್ನು ಸರ್ವೋತ್ತಮನೆಂದು ಅನನ್ಯಯೋಗದಿಂದ ಧ್ಯಾನಿಸುವವರ ಉಪಾಸನೆಯನ್ನು ನಾನು ಸ್ವೀಕರಿಸಿ ಸಂಸಾರದಿಂದ ಕೂಡಲೇ ಉದ್ಧರಿಸುವೆ ಎಂದು ಶ್ರೀಕೃಷ್ಣ ಇಲ್ಲಿ ಖಚಿತಪಡಿಸಿರುವನು. ಇದು ಹನ್ನೆರಡನೆಯ ಅಧ್ಯಾಯದ ಸಾರ.

ಮಯಾ ತತಮಿದಂ ಸರ್ವಂ ಜಗದವ್ಯಕ್ತಮೂರ್ತಿನಾ ।
ಮತ್ಸ್ಥಾನಿ ಸರ್ವಭೂತಾನಿ ನ ಚಾಹಂ ತೇಷ್ವವಸ್ಥಿತಃ ॥ ೧೧ ॥

ಅ: ಅವ್ಯಕ್ತರೂಪನಾದ ನನ್ನಿಂದ ಈ ಜಗತ್ತೆಲ್ಲ ವ್ಯಾಪಿಸಲ್ಪಟ್ಟಿದೆ. ಸಕಲ ಜೀವಿಗಳೂ ನನ್ನನ್ನೇ ಆಶ್ರಯಿಸಿರುವರು. ನಾನು ಅವರನ್ನು ಆಶ್ರಯಿಸಿಕೊಂಡಿಲ್ಲ.

ವಿ: ೧) ಶ್ರೀಹರಿ ಸರ್ವತ್ರ ವ್ಯಾಪಿಸಿರುವನು, ಆದರೂ ಅವನು ಕಾಣದಿರಲು ಅವನು ಅವ್ಯಕ್ತರೂಪನಾಗಿರುವುದು ಮುಖ್ಯ ಕಾರಣ. ಸಕಲ ಜೀವಿಗಳೂ ಅವನನ್ನೇ ಆಶ್ರಯಿಸಿ ಬದುಕಿವೆ. ಆದರೆ, ಶ್ರೀಹರಿ ಯಾರನ್ನೂ ಆಶ್ರಯಿಸದೇ ಸ್ವತಂತ್ರನಾಗಿಯೇ ಇರುವನು.

೨) ಜೀವರಿಗೆ ಹರಿ ಆಧಾರವಾಗಿರುವಂತೆ, ಹರಿಗೆ ಜೀವರು ಸರ್ವಥಾ ಆಧಾರರಾಗಿಲ್ಲ ಎಂದು ಭಾವ. ಹೀಗೆ ಶ್ರೀಹರಿಯನ್ನು ಆಶ್ರಯಿಸಿರುವುದರಿಂದಲೇ ಜೀವರಿಗೆ ಅವನ ಪೂಜಾ–ರೂಪವಾದ ಸ್ವಧರ್ಮಾಚರಣೆ ಕಡ್ಡಾಯವಾದುದು ಎಂದರ್ಥ.

ಸಂಪೂರ್ಣಸತ್ವರ್ವಗುಣದೇಹೋಽಹಂ ಸರ್ವದಾ ಪ್ರಭುಃ ।
ಅಸ್ಪೃಷ್ಟಾಖಿಲದೋಷೈಕನಿತ್ಯಸತ್ತನುರವ್ಯಯಃ ।
ಇತ್ಯುಕ್ತೋ ವಾಸವಿಃ ಪ್ರಾಹ ವ್ಯಾಪ್ತಿಂ* ತೇ ದರ್ಶಯೇಶ ಮೇ ॥ ೧೨ ॥

---

೧೧. ನ ಚಾಹಂ ತೇಷ್ವವಸ್ಥಿತ ಇತ್ಯತ್ರ ತೇಷು = ಭೂತೇಷು ಅವಸ್ಥಿತೋಽಪ್ಯವಸ್ಥಿತೋ ನ। ತೇಷಾಂ ಮಾಂ ಪ್ರತ್ಯಾಧಾರತ್ವಾಭಾವಾತ್ ತತ್ಕೃತಪುಣ್ಯಪಾಪಾದಿಲೇಪಾಭಾವಾಚ್ಚ। ಯಥಾ ಅಂಗವೇಷ್ಟನಸ್ಯ ಅಂತಃಸ್ಥಿತ ಏವ ಪುರುಷ ಆಧಾರಃ, ಯಥಾ ವಾ ಕೃತ್ರಿಮಕರಿತುರಗಾದೇರದೃಶ್ಯತಯಾ ಅಂತಃಸ್ಥಿತ ಏವ ಪುರುಷ ಆಧಾರಃ, ಯಥಾ ಚ ದೇಹಾಂತಃಸ್ಥಿತಜೀವ ಏವಾನ್ವಯವ್ಯತಿರೇಕಾಭ್ಯಾಂ ಜಡದೇಹಸ್ಯ ಪ್ರವರ್ತಕಃ। ತಥಾಽಂತಃಸ್ಥಿತೋಽಪ್ಯಹಮೇವ ತೇಷಾಮಾಧಾರಃ। ನ ತು ತೇ ಮಮಾಧಾರಾ ಇತಿ ಭಾವಃ। ಅತ ಏವ ಮಯಾ ಅ = ಸಮ್ಯಕ್ ತನ್ನಿಯಮನಾರ್ಥಮಿತಿ ಯಾವತ್। ತತಂ= ವ್ಯಾಪ್ತಮಿತಿ ಪ್ರಾಗುಕ್ತಮಿತಿ ಭಾವಃ ॥ – (ವಾ.)

೧೧. ಗೀತಾ (೯/೪)

೧೨. ಏತದೇವ ವಿಶದಯತಿ – **ಸುಪೂರ್ಣೇತಿ** ॥ – (ವಾ.)

* **ವ್ಯಾಪ್ತಂ** (ಪಾಠಾಂತರ); ವ್ಯಾಪ್ತಂ ರೂಪಮಿತಿ ಶೇಷಃ । –(ವೇ.)

ಅ: ನಾನು ಪರಿಪೂರ್ಣವಾದ ಉತ್ತಮವಾದ ಸಕಲಗುಣಗಳನ್ನೇ ದೇಹವನ್ನಾಗಿ ಉಳ್ಳವನು, ಸರ್ವಶಕ್ತನಾದವನು, ಸಕಲದೋಷರಹಿತವಾದ, ನಿತ್ಯವಾದ ಉತ್ತಮದೇಹವುಳ್ಳವನು, ನಾಶ-ರಹಿತನು. ಶ್ರೀಕೃಷ್ಣ ಹೀಗೆನ್ನಲು ಅರ್ಜುನ ಪ್ರಾರ್ಥಿಸಿದ : 'ಈಶನೇ ನಿನ್ನ ವ್ಯಾಪ್ತಿಯನ್ನು ನನಗೆ ತೋರಿಸು'.

ವಿ: ಅರ್ಜುನ ಈ ಹಂತದಲ್ಲಿ ಕೃಷ್ಣನ ವಿಶ್ವರೂಪವನ್ನು ಕಾಣಲು ಬಯಸಿ ಅದನ್ನು ತೋರಿಸಲು ಪ್ರಾರ್ಥಿಸಿಕೊಂಡ.

ವಿಶ್ವರೂಪಪ್ರದರ್ಶನ

ಅಥ ದಿವ್ಯದೃಶಂ ತಸ್ಯ ದತ್ತ್ವಾ ವ್ಯಾಪ್ತಂ ನಿಜಂ ವಪುಃ ।
ದೇಶತಃ ಕಾಲತಶ್ಚೈವ ಪೂರ್ಣಂ ಸರ್ವಗುಣೈಃ ಸದಾ ।
ದರ್ಶಯಾಮಾಸ ಭಗವಾನ್ ಯಾವತ್ಯರ್ಜುನಯೋಗ್ಯತಾ ॥ ೧೩ ॥

ಅ: ಬಳಿಕ ಅವನಿಗೆ ದಿವ್ಯದೃಷ್ಟಿಯನ್ನು ನೀಡಿ ಸರ್ವತ್ರ ವ್ಯಾಪ್ತವೂ, ದೇಶತಃ ಕಾಲತಃ ಸಕಲ ಗುಣಗಳಿಂದ ಪರಿಪೂರ್ಣವೂ ಆದ ತನ್ನ ದಿವ್ಯರೂಪವನ್ನು ಭಗವಂತನಾದ ಶ್ರೀಕೃಷ್ಣ ಅರ್ಜುನನ ಯೋಗ್ಯತೆಗೆ ಅನುಗುಣವಾಗಿ ತೋರಿಸಿದ.

ವಿ: ೧) ತನ್ನ ರೂಪ ಕಾಣಲು ಈ ಬರಿಗಣ್ಣಿಗೆ ಸಾಧ್ಯವಾಗದು, ದಿವ್ಯದೃಷ್ಟಿಯನ್ನು ನೀಡುವೆ ಎಂದು ನುಡಿದು ಶ್ರೀಕೃಷ್ಣ ಅರ್ಜುನನಿಗೆ ದಿವ್ಯದೃಷ್ಟಿಯನ್ನು ನೀಡಿ ತನ್ನ ವಿಶ್ವರೂಪವನ್ನು ತೋರಿದ ಎಂದರ್ಥ.

---

೧೩. ವ್ಯಾಪ್ತಂ ತೇ ದರ್ಶಯೇಶ ಮ ಇತ್ಯತ್ರ ತೇ ವ್ಯಾಪ್ತಂ ರೂಪಮ್ ॥ – (ವಾ.)

೧೩. ವಿಶ್ವರೂಪಂ ಭಗವತೋ ಬ್ರಹ್ಮಾಪಶ್ಯಚ್ಚತುರ್ಮುಖಃ। ತಚ್ಛತಾಂಶೇನ ರುದ್ರಸ್ತು ತಚ್ಛತಾಂಶೇನ ವಾಸವಃ। ಯಥೇಂದ್ರೇಣ ಪುರಾ ದೃಷ್ಟಂ ಅಪಶ್ಯತ್ ಸೋಽರ್ಜುನೋಽಪಿತು। ತದನ್ಯೇ ತು ಕ್ರಮೇಣೈವ ತಚ್ಛತಾಂಶಾದಿದರ್ಶಿನಃ ಇತಿ ಗೀತಾತಾತ್ಪರ್ಯೋದಾಹೃತಪ್ರಮಾಣಾನುಸಾರೇಣ ಯಾವತ್ಯರ್ಜುನ ಯೋಗ್ಯತಾ ತಾವದ್ ದರ್ಶಯಾಮಾಸೇತ್ಯರ್ಥಃ। ಬಹುಸಾಹಸ್ರವರ್ಷೇಣ ಮಹತ್ತತ್ತ್ವಂ ಕ್ವಚಿತ್ ಕ್ವಚಿತ್ ಇತ್ಯುಕ್ತರೀತ್ಯಾ ಬಹುಸಾಧನ ವಶೇನಾಹಂಕಾರವ್ಯಾಪ್ತ-ದರ್ಶಿನೋಽಪಿ ಅನಂತದೇಶವ್ಯಾಪ್ತಭಗವದ್ದರ್ಶನಂ ಕದಾಚಿದವಿರುದ್ಧಮ್ । ಏವ್ಯತಂ ಚೈತದ್ ವಿರೋಧೋದ್ಧಾರೇ । – (ತಾ.)

೧೩. ಯಥೈವ ಕೃಷ್ಣಕೇಶಸ್ಯ ಕೃಷ್ಣಸ್ಯ ಬ್ರಹ್ಮತಾऽಖಿಲಾ ।
ದರ್ಶಿತಾ ಚೈವ ಪಾರ್ಥಾಯ ನಿಃಸೀಮಾಃ ಶಕ್ತಯೋऽಸ್ಯ ಹಿ ॥ – ಅನುವ್ಯಾಖ್ಯಾನ (೧/೧/೧೬೪)

೨) ಎಲ್ಲ ದೇಶಗಳನ್ನೂ, ಎಲ್ಲ ಕಾಲಗಳನ್ನೂ ವ್ಯಾಪಿಸಿದಂತಹ ಅದ್ಭುತವಾದ ರೂಪ; ಅದಕ್ಕೆಂದೇ ಅದಕ್ಕೆ ವಿಶ್ವರೂಪ ಎಂದು ಹೆಸರು. ಎಲ್ಲ ರೂಪಗಳು ಹಾಗೆ ವ್ಯಾಪ್ತವೇ ಆದರೂ ನೋಡುವವರಿಗೆ ವ್ಯಾಪ್ತವಾಗಿಯೇ ಗೋಚರಿಸುವುದು ವಿಶೇಷ.

೩) ಶ್ರೀಹರಿಯ ವಿಶ್ವರೂಪ ಒಂದೇ ತೆರನಾದರೂ ಅದನ್ನು ಕಾಣಲು ಸಾಧ್ಯವಾಗುವುದು ಅವರವರ ಯೋಗ್ಯತೆಗೆ ಅನುಗುಣವಾಗಿ ಮಾತ್ರ. ಸಮುದ್ರ ಒಂದೇಯಾದರೂ ಅದರೊಳಗೆ ಪ್ರವೇಶಿಸಲು ಅವರವರ ಯೋಗ್ಯತೆಗೆ ಅನುಗುಣವಾಗಿ ಮಾತ್ರವೇ ಸಾಧ್ಯವಾಗುವುದಷ್ಟೇ!

ತತ್ಪ್ರಾರ್ಥಿತಃ ಪುನಃ ಕೃಷ್ಣಸ್ತದ್ರೂಪಂ ಲೋಕಮಾನತಃ ।
ಪೂರ್ವವದ್ದರ್ಶಯಾಮಾಸ ಪುನಶ್ಚೈನಮಶಿಕ್ಷಯತ್ ॥ ೧೪ ॥

ಯುದ್ಧಕ್ಕೆ ಸಿದ್ಧನಾದ ಅರ್ಜುನ

ಜ್ಞಾನಂ ಜ್ಞೇಯಂ ಪ್ರಕೃತ್ಯಾದಿ ಜ್ಞಾಪಯನ್ ಪುರುಷೋತ್ತಮಃ ।
ತೇನಾನುಶಿಷ್ಟಃ ಪಾರ್ಥಸ್ತು ಸಶರಂ ಧನುರಾದದೇ ॥ ೧೫ ॥

ಅ: ಅರ್ಜುನ ಪ್ರಾರ್ಥಿಸಲು ಕೃಷ್ಣ ತನ್ನ ಲೋಕದೃಷ್ಟಿಗೆ ಅನುಸಾರವಾದ ಮೊದಲ ರೂಪವನ್ನೇ ತೋರಿಸಿದ. ಮತ್ತೆ ಅವನಿಗೆ ಉಪದೇಶ ನೀಡಿದ. ಜ್ಞಾನ, ಜ್ಞೇಯ, ಪ್ರಕೃತಿ ಮೊದಲಾದವುಗಳನ್ನು ಪುರುಷೋತ್ತಮನಾದ ಅವನು ತಿಳಿಸಿದ. ಅವನಿಂದ ಉಪದೇಶ ಪಡೆದ ಅರ್ಜುನ ಬಿಲ್ಲು ಬಾಣಗಳನ್ನು ಕೈಗೆತ್ತಿಕೊಂಡ.

---

೧೪. ಪೂರ್ವಮಪಿ ವ್ಯಾಪ್ತಿಸದ್ಭಾವಾತ್ ಬ್ರಹ್ಮಾದೀನಾಂ ತದ್ದರ್ಶನಭಾವಾಚ್ಚೋಕ್ತಂ ಲೋಕಮಾನತ ಇತಿ। ಲೋಕದೃಷ್ಟ್ಯನುಸಾರೇಣೇತ್ಯರ್ಥಃ। – (ತಾ.)

೧೪. ತವ ಜನ್ಮಕಾಲೇ ಸ್ಥಿತಂ ಚತುರ್ಭುಜಂ ರೂಪಂ ಯುದ್ಧಾರಂಭಸಮಯಸ್ಥಿತಂ ದ್ವಿಭುಜಂ ವಾ ರೂಪಂ ಪ್ರದರ್ಶಯ, ನೇದಂ ಘೋರಂ ರೂಪಂ ಪ್ರದರ್ಶಯೇತಿ ತೇನೈವ ರೂಪೇಣ ಚತುರ್ಭುಜೇನೇತ್ಯಸ್ಯಾರ್ಥತ್ವಾತ್, 'ನನು ಚತುರ್ಭುಜಂ ರೂಪ ಪ್ರದರ್ಶಯೇತಿ ಪ್ರಾರ್ಥಿತತ್ವಾತ್ ದ್ವಿಭುಜರೂಪಪ್ರದರ್ಶನಂ ಕಥಮ್' ಇತ್ಯೇತಚ್ಚೋದ್ಯಂ ನಿರಾಕೃತಂ ವೇದಿತವ್ಯಮ್। – ಪ್ರಮಾಣಸಂಗ್ರಹ

೧೫. ಜ್ಞಾನಜ್ಞೇಯಪ್ರಕೃತ್ಯಾದೀತ್ಯತ್ರ ಪ್ರಕೃತಿಃ = ಸ್ವಭಾವಃ ಯೋಗ್ಯತೇತಿ ಯಾವತ್। ತಾಂ ಜ್ಞಾಪಯನ್ = ಸಾತ್ವಿಕ-ರಾಜಸತಾಮಸಭೇದೇನ ತ್ರಿವಿಧಾಮಿತಿ ಜ್ಞಾಪಯನ್ನಿತ್ಯರ್ಥಃ॥ – (ವಾ.)

ವಿ: ಶ್ರೀಕೃಷ್ಣನ ವಿಶ್ವರೂಪಕ್ಕೂ, ಅವತಾರ ರೂಪಗಳಿಗೂ ಯಾವುದೇ ವಿಧವಾದ ವ್ಯತ್ಯಾಸವೂ ಎಷ್ಟು ಮಾತ್ರಕ್ಕೂ ಸರ್ವಥಾ ಇಲ್ಲ. ಅವನು ಸ್ವಗತಭೇದವಿವರ್ಜಿತನಾದವನು. ಆದರೂ, ಹಿಂದಿನ ಕೃಷ್ಣರೂಪ ಈಗಿನ ವಿಶ್ವರೂಪ ಮೊದಲಾದ ಮಾತುಗಳೆಲ್ಲ ಲೋಕದೃಷ್ಟಿಯ ಹಿನ್ನೆಲೆಯಲ್ಲಿ ಬಂದಿರುವ ಮಾತುಗಳು ಎಂದು ತಿಳಿಯಬೇಕು ಎಂದರ್ಥ.

ಪ್ರಥಮ ದಿವಸದ ಯುದ್ಧ - ಮೊದಲ ಹೆಜ್ಜೆ ಇಟ್ಟ ಭೀಮ

ಅಥ ವ್ಯೂಢೇಷ್ವನೀಕೇಷು ನದನ್ ವಾಯುಸುತೋಽಭ್ಯಯಾತ್ ।
ಸಮಿತಿಂ ಧಾರ್ತರಾಷ್ಟ್ರಾಣಾಂ ತೇ ತಂ ಸರ್ವೇಽಭ್ಯವಾರಯನ್ ॥ ೧೬ ॥

---

೧೫. ತೇಷಾಮೇವಾವತಾರೇಷು ಸೇನಾಮಧ್ಯೇऽರ್ಜುನಾಯ ಚ ।
ಪ್ರಾದಾದ್ಗೀತೇತಿನಿರ್ದಿಷ್ಟಂ ಸಂಕ್ಷೇಪೇಣಾಯುಯುತ್ಸವೇ ।
ಯಥಾ ಕುರ್ವಂತಿ ಕರ್ಮಾಣಿ ಯಥಾ ಜಾನಂತಿ ದೇವತಾಃ ।
ಸರ್ವೇ ಕಾರ್ತಯುಗಾಶ್ಚೈವ ನೃಪಾಶ್ಚಮನುಪೂರ್ವಕಾಃ ।
ಜ್ಞಾತವ್ಯಂ ಚೈವ ಕರ್ತವ್ಯಂ ಯಥಾ ಸರ್ವೈರ್ಮುಮುಕ್ಷುಭಿಃ ।
ತ್ರೈತಾದಿತ್ರಿಷು ಜಾತೈಶ್ಚ ಗೀತಾಯಾಂ ತದುದಾಹೃತಮ್ ।
ಪಾಂಡವಾದ್ಯಾಃ ಕ್ಷೇಮಕಾಂತಾಃ ಕರಿಷ್ಯಂತಿ ಚ ಜಾನತೇ ।
ತಥೈವ ತೇನ ಗೀತಾಯಾ ನಾಸ್ತಿ ಶಾಸ್ತ್ರಂ ಸಮಂ ಕ್ವಚಿತ್ ।
ವೇದಾರ್ಥಪೂರ್ವಕಂ ಜ್ಞೇಯಂ ಪಂಚರಾತ್ರಂ ಯತೋऽಖಿಲಮ್ ।
ತತ್ಸಂಕ್ಷೇಪಶ್ಚ ಗೀತೇಯಂ ತಸ್ಮಾನ್ನಾಸ್ಯಾಃ ಸಮಂ ಕ್ವಚಿತ್' ಇತಿ ಬ್ರಹ್ಮವೈವರ್ತೇ ॥ – ಗೀ.ತಾ.(೪/೧)

೧೬. ಅಥ ವ್ಯೂಢೇಷು ಇತ್ಯತ್ರ ವ್ಯೂಢೇಷು= ವಿರುದ್ಧತಯಾ ಪ್ರಾಪ್ತೇಷು। 'ವಹ ಪ್ರಾಪಣ' ಇತಿ ಧಾತುಃ ॥ – (ವಾ.)

೧೬. ತಸ್ಮಿನ್ ಸಮುತ್ಥಿತೇ ಶಬ್ದೇ ತುಮುಲೇ ಲೋಮಹರ್ಷಣೇ ।
ಭೀಮಸೇನೋ ಮಹಾಬಾಹುಃ ಪ್ರಾಣದದ್ ಗೋವೃಷೋ ಯಥಾ ॥
ಶಂಖದುಂದುಭಿನಿರ್ಘೋಷಂ ವಾರಣಾನಾಂ ಚ ಬೃಂಹಿತಮ್ ।
ಸಿಂಹನಾದಂ ಚ ಸೈನ್ಯಾನಾಂ ಭೀಮಸೇನರವೋऽಭ್ಯಭೂತ್ ॥
ಹಯಾನಾಂ ಹ್ರೇಷಮಾಣಾನಾಮನೀಕೇಷು ಸಹಸ್ರಶಃ ।
ಸರ್ವಾನಭ್ಯಭವತ್ ಶಬ್ದಾನ್ ಭೀಮಸ್ಯ ನದತಃ ಸ್ವನಃ ॥
ತಂ ಶ್ರುತ್ವಾ ನಿನದಂ ತಸ್ಯ ಸೈನ್ಯಾಸ್ತವ ವಿತತ್ರಸುಃ ।
ಜೀಮೂತಸ್ಯೇವ ನದತಃ ಶಕ್ರಾಶನಿಸಮಸ್ವನಮ್ ॥
ವಾಹನಾನಿ ಚ ಸರ್ವಾಣಿ ಶಕೃನ್ಮೂತ್ರಂ ಪ್ರಸುಸ್ರುವುಃ ।
ಶಬ್ದೇನ ತಸ್ಯ ವೀರಸ್ಯ ಸಿಂಹಸ್ಯೇವೇತರೇ ಮೃಗಾಃ ॥ – ಭಾರತ (ಭೀಷ್ಮ. ೪೪/೮-೧೨)

ಅ: ಸೇನೆಗಳೆಲ್ಲ ವ್ಯೂಹರೂಪದಲ್ಲಿ ರಚಿತವಾಗಿ ಯುದ್ಧ ಪ್ರಾರಂಭವಾಗಲು ಸಿಂಹನಾದ ಮಾಡುತ್ತಾ ಭೀಮಸೇನ ಕೌರವರ ಸೇನೆಯನ್ನು ಎದುರಿಸಿದ. ಅವನನ್ನು ಅವರೆಲ್ಲ ತಡೆಯಲು ಪ್ರಯತ್ನಿಸಿದರು.

ವಿ: ೧) ಗೀತೋಪದೇಶದ ಅನಂತರ ಧರ್ಮರಾಜ ತನ್ನ ರಥದಿಂದ ಕೆಳಗಿಳಿದು ಕಿರೀಟ, ಕವಚಾದಿಗಳನ್ನು ತೆಗೆದಿರಿಸಿ ಪಾದಚಾರಿಯಾಗಿ ಕುರು ಸೇನೆಯತ್ತ ಸಾಗಿದ; ಅವನನ್ನು ಹಿಂಬಾಲಿಸಿ ಅವನ ಸೋದರರು, ಕೃಷ್ಣನು ತೆರಳಿದರು; ಕೌರವರ ಕಡೆಯವರು ಧರ್ಮರಾಜ ಯುದ್ಧಕ್ಕೆ ಅಂಜಿ ಶರಣಾಗಲು ಬರುತ್ತಿರುವನೆಂದು ತಿಳಿದು ಆನಂದದಿಂದ ಕುಣಿದಾಡಿದರು :

ವ್ಯಕ್ತಂ ಭೀತ ಇವಾಭ್ಯೇತಿ ರಾಜಾಸೌ ಭೀಷ್ಮಮಂತಿಕಮ್ ।...
ಹೃಷ್ಟಾಃ ಸುಮನಸೋ ಭೂತ್ವಾ ಚೈಲಾನಿ ದುಧುವುಶ್ಚ ಹ ॥

– ಭಾರತ (ಭೀಷ್ಮ. ೪೩/೨೭, ೩೦)

೨) ಆದರೆ, ಧರ್ಮರಾಜ ಹಾಗೆ ತೆರಳಿದವನೇ ಭೀಷ್ಮ, ದ್ರೋಣ, ಕೃಪರನ್ನು ನಮಸ್ಕರಿಸಿ ಯುದ್ಧವಿಂದು ಅನಿವಾರ್ಯವಾಗಿದೆ. ತಮ್ಮಂತಹ ಪೂಜ್ಯರ ಮೇಲೆ ಯುದ್ಧ ಮಾಡುವುದು ತರವಲ್ಲ ಎಂಬುದು ನಮಗೆ ತಿಳಿದಿದೆ. ಆದರೆ, ತಾತ್ತ್ವಿಕವಾಗಿ ನಾವಿಂದು ಹೋರಾಡುವುದು ಅನಿವಾರ್ಯ–ವಾಗಿರುವುದರಿಂದ ತಾವು ಅದಕ್ಕೆ ಅನುಮತಿ ನೀಡಿ ಅನುಗ್ರಹಿಸಬೇಕು ಎಂದು ಕೇಳಿಕೊಂಡ :

ಆಮಂತ್ರಯೇ ತ್ವಾಂ ದುರ್ಧರ್ಷ ತ್ವಯಾ ಯೋತ್ಸ್ಯಮಹೇ ಸಹ ।
ಅನುಜಾನೀಹಿ ಮಾಂ ತಾತ ಆಶಿಷಶ್ಚ ಪ್ರಯೋಜಯ ॥– ಭಾರತ (ಭೀಷ್ಮ. ೪೩/೩೭)

೩) ಅವನ ಸದ್ವರ್ತನೆಯಿಂದ ಬಹಳವಾಗಿ ಪ್ರಭಾವಿತರಾದ ಭೀಷ್ಮಾದಿಗಳೆಲ್ಲ ಅವನನ್ನು ಬಹಳವಾಗಿ ಪ್ರಶಂಸಿಸಿ ತಾವೆಲ್ಲ ಧನ ಮೊದಲಾದ *ಕಾರಣಗಳಿಂದಾಗಿ ದುರ್ಯೋಧನನಿಗೆ ಮಾರಿಕೊಂಡವರು. ಆದರೆ ಪಾಂಡವರು ಪರಮ ಧರ್ಮಶೀಲರು, ಅವರಿಗೆ ಕೃಷ್ಣನ ದಯೆಯಿದೆ. ಜಯ ಅವರದು ಎಂಬುದು ನಿಶ್ಚಿತ ಎಂದು ಹಾರೈಸಿ ಬೀಳ್ಕೊಡುವರು.

೪) ಅವರ ಸಂಹಾರದ ಬಗ್ಗೆ ಅವರ ವಿಚಾರವನ್ನು ತಿಳಿಯಬಯಸಿದ ಯುಧಿಷ್ಠಿರನಿಗೆ ಭೀಷ್ಮರು ಅದನ್ನು ಮುಂದೊಮ್ಮೆ ತಿಳಿಸುವುದಾಗಿ ಹೇಳಿದರೆ, ದ್ರೋಣರು ತಾವು ಅತ್ಯಂತ ಅಪ್ರಿಯವಾದ ವಾರ್ತೆಯನ್ನು ಕೇಳಿದಾಗ ಶಸ್ತ್ರ ತೊರೆಯುವುದಾಗಿಯೂ, ಆಗ ತಮ್ಮನ್ನು ಕೊಲ್ಲಬಹು ದೆಂಬುದಾಗಿಯೂ +ತಿಳಿಸಿದರು.

---

* ಅರ್ಥಸ್ಯ ಪುರುಷೋ ದಾಸೋ ದಾಸಸ್ತ್ವರ್ಥೋ ನ ಕಸ್ಯಚಿತ್ ।
ಇತಿ ಸತ್ಯಂ ಮಹಾರಾಜ ಬದ್ಧೋಽಸ್ಮ್ಯರ್ಥೇನ ಕೌರವೈಃ ॥ – ಭಾರತ (ಭೀಷ್ಮ. ೪೩/೪೧)

\+ ಶಸ್ತ್ರಂ ಚಾಹಂ ರಣೇ ಜಹ್ಯಾಂ ಶ್ರುತ್ವಾ ತು ಮಹದಪ್ರಿಯಮ್ ।
ಶ್ರದ್ಧೇಯವಾಕ್ಯಾತ್ ಪುರುಷಾದೇತತ್ ಸತ್ಯಂ ಬ್ರವೀಮಿ ತೇ ॥ – ಭಾರತ (ಭೀಷ್ಮ. ೪೩/೬೬)

೫) ಕೃಪರು ತಾನು ಚಿರಂಜೀವಿಯಾದ್ದರಿಂದ ಸಾಯುವವರಲ್ಲ, ಆದರೂ ತಮ್ಮಿಂದ ಅವರ ಜಯಕ್ಕೆ ಯಾವ ಅಡ್ಡಿಯೂ ಆಗದು ಎಂದು *ನುಡಿದರು.

೬) ಬಳಿಕ ಧರ್ಮರಾಜ ಪುನಃ ತನ್ನ ರಥಕ್ಕೆ ಮರಳಿ ಕವಚ ಮೊದಲಾದವುಗಳನ್ನು ಧರಿಸಿ ಯುದ್ಧಕ್ಕೆ ಸಿದ್ಧನಾದ ಮತ್ತು ಕೌರವ ಸೇನೆಯಲ್ಲಿ ಯಾರಾದರೂ ತನ್ನ ಪಕ್ಷ ಸೇರಲು ಬಯಸುವುದಾದಲ್ಲಿ ಅದನ್ನು ಸ್ವಾಗತಿಸುವುದಾಗಿಯೂ, ಅಂಥವರನ್ನು ಸುರಕ್ಷಿತವಾಗಿ ನೋಡಿಕೊಳ್ಳುವ ಹೊಣೆ ಹೊರುವುದಾಗಿಯೂ ಘೋಷಿಸುವನು.

೭) ಅದಕ್ಕೆ ಪ್ರತಿಕ್ರಿಯಿಸಿ ಯುಯುತ್ಸು ಎಂಬ ಧೃತರಾಷ್ಟ್ರಪುತ್ರ ಪಾಂಡವರ ಕಡೆಗೆ ಹೊರಟುಬಿಡುವನು. ಬಳಿಕ ಯುದ್ಧ ಪ್ರಾರಂಭವಾಗುವುದು ಎಂಬುದು ಮಹಾಭಾರತದಲ್ಲಿ ಬಂದಿರುವ ಉಲ್ಲೇಖ.

೮) ಭೀಮನ ಸಿಂಹನಾದ ಅಲ್ಲಿಯ ಸಕಲನಾದಗಳಿಗಿಂತ ಅದ್ಭುತನಾದವಾಗಿತ್ತು ಎಂದರ್ಥ.

೯) ಇವೆಲ್ಲವನ್ನೂ ಸಹ ಶ್ರೀಮದಾಚಾರ್ಯರು ಅಥ ಶಬ್ದದಿಂದ ಸೂಚಿಸಿರುವರು ಎಂದು ತಿಳಿಯಬೇಕು.

ससृजुः शरवृष्टिं च भीमसेनस्य मूर्धनि।
क्षिप्रं नैव प्रहर्तव्यं ज्ञातिषु प्रहरत्स्वपि ।
इत्येवाप्रहरत्यस्मिन् शत्रुभिः शरविक्षतैः ॥ ೧೭ ॥

अमुचन् धार्तराष्ट्रेषु शस्त्रवृष्टिं दुरासदाम् ।
सौभद्रप्रमुखा वीराः सर्वे पाण्डुसुतात्मजाः ॥ ೧೮ ॥

ಅ: ಅವರೆಲ್ಲ ಭೀಮಸೇನನ ತಲೆಯ ಮೇಲೆ ಬಾಣಗಳ ಮಳೆಯನ್ನು ಕರೆದರು. ಬಂಧುಗಳು ಹೊಡೆಯುತ್ತಿದ್ದರೂ ಕೂಡಲೇ ಪ್ರತಿಯಾಗಿ ಹೊಡೆಯುವುದು ತರವಲ್ಲ ಎಂಬ ಕಾರಣದಿಂದ ಭೀಮಸೇನ ತಾನು ಪ್ರತಿಯಾಗಿ ಹೊಡೆಯದಲೇ ಶತ್ರುಗಳ ಬಾಣಗಳ ಹೊಡೆತವನ್ನು ಸ್ವೀಕರಿಸಿದ. ಪಾಂಡವರ ಪುತ್ರರಾದ ಉಪಪಾಂಡವರು ಮತ್ತು ಅಭಿಮನ್ಯು ಮೊದಲಾದ ಪ್ರಧಾನ ವೀರರು ಕೌರವರ ಮೇಲೆ ಸಹಿಸಲಾಗದ ಶಸ್ತ್ರವೃಷ್ಟಿಯನ್ನು ಸುರಿಸಿದರು.

---

* तं गौतमः प्रत्युवाच विज्ञायास्य विवक्षितम् ।
अवध्योऽहं महीपाल युद्ध्यस्व जयमाप्नुहि ॥ –ಭಾರತ (ಭೀಷ್ಮ. ೪೩/೭೪)

ವಿ: ೧) ಯುದ್ಧದಲ್ಲಿ ಮೊದಲ ಹೆಜ್ಜೆಯಿಟ್ಟ ಕೀರ್ತಿ ಭೀಮಸೇನನದಾಯಿತು. ಅರ್ಜುನ ಯುದ್ಧವನ್ನು ಅಧರ್ಮವೆಂದು ಬಗೆದು ಕೃಷ್ಣನ ಉಪದೇಶದ ಅನಂತರವೇ ಅದಕ್ಕೆ ಸಿದ್ಧನಾದ. ಆದರೆ, ಮೊದಲು ಹೋರಾಟಕ್ಕೆ ತೊಡಗಿದ್ದು ಮಾತ್ರ ಭೀಮಸೇನನೇ ಎಂಬುದು ಇಲ್ಲಿಯ ವಿಶೇಷ.

೨) ಹಾಗೆ ನುಗ್ಗಿದ ಭೀಮನ ಮೇಲೆ ಕೌರವರು ಬಾಣಗಳ ಮಳೆಯನ್ನು ಸುರಿಸಿದರೂ ಭೀಮಸೇನ ಕೂಡಲೇ ಉಗ್ರ ಹೋರಾಟಕ್ಕೆ ಇಳಿಯಲಿಲ್ಲ; ಜ್ಞಾತಿಗಳ ಮಧ್ಯೆ ಸಂಘರ್ಷ ನಡೆದಾಗ ಕೂಡಲೇ ಉಗ್ರ ಹೋರಾಟ ತರವಲ್ಲ ಎಂದು ಸೂಚಿಸುವುದು ಆ ಕಾರ್ಯದ ಉದ್ದೇಶವಾಗಿತ್ತು ಎಂದರ್ಥ – 'ದೀರ್ಘಃ ಸಹೋದರಗತಃ ನ ಭವೇದ್ಧಿ ಕೋಪಃ' (೬/೧೪).

೩) ಶ್ರೀರಾಮ ವಾಲಿಯನ್ನು ಮೊದಲಬಾರಿ ಸಂಹರಿಸದೆ ಬಿಟ್ಟ ಪ್ರಸಂಗ ಇಂದು ಹೋಲುತ್ತಿದ್ದುದನ್ನು ಗಮನಿಸಬೇಕು.

ವಿ: ಭೀಮನ ಮೇಲೆ ಅವರೆಲ್ಲ ಹಾಗೆ ಶರವೃಷ್ಟಿ ಕರೆದಾಗ ಭೀಮ ವ್ಯೂಹಯೋಧಿಯಾಗಿ– ದ್ದುದನ್ನು ತಪ್ಪಾಗಿ ಅರ್ಥಮಾಡಿಕೊಂಡು ಅಭಿಮನ್ಯು ಮೊದಲಾದವರೆಲ್ಲ ಭೀಮನ ರಕ್ಷಣೆಗೆಂದು ಧಾವಿಸಿದರು ಎಂದರ್ಥ.

ಭೀಮಸೇನನ ಪರಾಕ್ರಮ

ಅಪೀಡಯಂಸ್ತಾನ್ ಶಸ್ತ್ರೌಘೈರ್ಧಾರ್ತರಾಷ್ಟ್ರಾಃ ಸಮಂತತಃ ।
ರರಕ್ಷ ತಾನ್ ವಾಯುಸುತೋ ವಿಸೃಜನ್ ಶರಸಂಚಯಾನ್ ॥ ೧೯ ॥

ಅ: ಅವರನ್ನೆಲ್ಲ ಕೌರವರು ಎಲ್ಲೆಡೆಗಳಿಂದಲೂ ಶಸ್ತ್ರಸಮೂಹಗಳಿಂದ ನೋಯಿಸಿದರು. ಬಾಣಗಳ ಸಮೂಹವನ್ನು ಸುರಿಸುತ್ತಾ ಭೀಮಸೇನ ಅವರನ್ನು ಸಂರಕ್ಷಿಸಿದ.

ವಿ: ೧) ಭೀಮನ ರಕ್ಷಣೆಗೆಂದು ಧಾವಿಸಿದ ಅಭಿಮನ್ಯು ಮೊದಲಾದವರ ಮೇಲೆ ಕೌರವರು ಶಸ್ತ್ರಾಸ್ತ್ರವೃಷ್ಟಿಗರೆದಾಗ ಅವರೆಲ್ಲ ನೊಂದರು. ಭೀಮ ಕೌರವರ ಮೇಲೆ ಪ್ರತಿಯಾಗಿ ಬಾಣಗಳನ್ನು ಪ್ರಯೋಗಿಸಿ ಅಭಿಮನ್ಯು ಮೊದಲಾದವರನ್ನು ಸಂರಕ್ಷಿಸಿದ ಎಂದರ್ಥ.

೨) ಭೀಮನ ರಕ್ಷಣೆಗೆಂದು ಧಾವಿಸಿದ ಅವರೆಲ್ಲ ಭೀಮನ ರಕ್ಷಣೆಯಿಂದಲೇ ಉಳಿದು– ಕೊಳ್ಳುವಂತಾಯಿತು ಎಂಬುದು ಇಲ್ಲಿಯ ಮುಖ್ಯಾಂಶ. ಆ ಮೂಲಕ ಭೀಮಸೇನ ತನ್ನ ವ್ಯೂಹಯುದ್ಧ ಉದ್ದೇಶಪೂರ್ವಕವಾಗಿತ್ತೆಂಬುದನ್ನು ಅವರಿಗೆ ಮನವರಿಕೆ ಮಾಡಿಕೊಟ್ಟ ಎಂದು ತಿಳಿಯಬೇಕು.

ತತ್ರ ಭೀಮಶರೈರ್ನುನ್ನಾ ಧಾರ್ತರಾಷ್ಟ್ರಾಃ ಸಮಂತತಃ ।
ಭಗ್ನಾಸ್ತಾನಥ ಗಾಂಗೇಯೋ ದಿವ್ಯಾಸ್ತ್ರವಿದಧಾರಯತ್ ॥ ೨೦ ॥

ಅ: ಆಗ ಭೀಮನ ಬಾಣಗಳಿಂದ ಪೀಡಿತರಾಗಿ ಕೌರವರು ಎಲ್ಲೆಡೆಗಳಿಂದಲೂ ಭಂಗ-ಪಟ್ಟರು. ದಿವ್ಯಾಸ್ತ್ರ ಬಲ್ಲಂತಹ ಭೀಷ್ಮರು ಅವರನ್ನು ರಕ್ಷಿಸಲು ಧಾವಿಸಿದರು.

ವಿ: ಬಳಿಕ ಭೀಮ ಉಗ್ರಯುದ್ಧಕ್ಕೆ ತೊಡಗಲು, ಕೌರವರು ಸೋತು ಓಡತೊಡಗಿದರು ಎಂದರ್ಥ.

ಕುರು ಪಾಂಡವರ ದ್ವಂದ್ವಯುದ್ಧ

ಅಥ ದ್ವಂದ್ವಾನಿ ಯುದ್ಧಾನಿ ಬಭೂವುರ್ವಿಜಿಗೀಷತಾಮ್ ।
ದ್ರೋಣಪಾರ್ಷತಯೋಶ್ಚೈವ ಶೈನೇಯಕೃತವರ್ಮಣೋಃ ॥ ೨೧ ॥

ಅ: ಬಳಿಕ ಪರಸ್ಪರ ಗೆಲ್ಲಬಯಸಿದ, ದ್ರೋಣ-ಧೃಷ್ಟದ್ಯುಮ್ನ, ಸಾತ್ಯಕಿ-ಕೃತವರ್ಮ ಮೊದಲಾದ ವೀರರಲ್ಲಿ ದ್ವಂದ್ವಯುದ್ಧಗಳು ನಡೆಯತೊಡಗಿತು.

ದುಃಶಾಸನೇನ ವೀರಸ್ಯ ಮಾದ್ರೇಯಸ್ಯ ಯವೀಯಸಃ ।
ನಕುಲಸ್ಯ ವಿಕರ್ಣಸ್ಯ ಕಾರ್ಷ್ಣೇಯೈರ್ದುರ್ಮುಖಾದಿನಾಮ್ ॥ ೨೨ ॥

ವೃತ್ತೇ ದ್ವಂದ್ವಮಹಾಯುದ್ಧೇ ತತ್ರ ಧರ್ಮಜಪಕ್ಷಗಾಃ ।
ಜಿತಾ ವಿನೈವ ಶೈನೇಯಂ ಸೋಽಜಯದ್ಬೃದಿಕಾತ್ಮಜಮ್ ॥ ೨೩ ॥

ಅ: ದುಶ್ಶಾಸನನಿಗೂ ಮಾದ್ರೇಯರಲ್ಲಿ ಕಿರಿಯನಾದ ಸಹದೇವನಿಗೂ, ನಕುಲನಿಗೂ ವಿಕರ್ಣನಿಗೂ, ಉಪಪಾಂಡವರಿಗೂ ದುರ್ಮುಖ ಮೊದಲಾದವರಿಗೂ ದೊಡ್ಡ ದ್ವಂದ್ವಯುದ್ಧ ನಡೆಯತೊಡಗಲು ಅದರಲ್ಲಿ ಸಾತ್ಯಕಿಯ ಹೊರತು ಪಾಂಡವರ ಪಕ್ಷದವರೆಲ್ಲ ಪರಾಭವ-ಗೊಂಡರು. ಸಾತ್ಯಕಿ ಕೃತವರ್ಮನನ್ನು ಸೋಲಿಸಿದ.

ಅಥ ಭೀಷ್ಮದ್ರೋಣಮುಖೈರ್ಭಗದತ್ತಾದಿಭಿಸ್ತಥಾ ।
ವಿದ್ರಾವ್ಯಮಾಣಂ ಸ್ವಬಲಂ ಸ್ಥಾಪಯಾಮಾಸ ಮಾರುತಿಃ ॥ ೨೪ ॥

ಅ: ಬಳಿಕ ಭೀಷ್ಮ, ದ್ರೋಣ ಮೊದಲಾದವರು ಹಾಗೆಯೇ ಭಗದತ್ತ ಮುಂತಾದವರು ತಮ್ಮ ಸೈನ್ಯವನ್ನು ಹೊಡೆದೋಡಿಸುತ್ತಿದ್ದುದನ್ನು ಭೀಮಸೇನ ತಡೆದು ನಿಲ್ಲಿಸಿದ.

ವಿ: ೧) ದ್ವಂದ್ವಯುದ್ಧದ ಬಳಿಕ ನಡೆದ ಯುದ್ಧದಲ್ಲಿ ಪಾಂಡವಸೇನೆ ಭೀಷ್ಮಾದಿಗಳಿಂದ ಪರಾಭವಗೊಂಡು ಓಡತೊಡಗಿದಾಗ ಅದರ ರಕ್ಷಣೆಗೆ ಭೀಮಸೇನ ಧಾವಿಸಿದ ಎಂದರ್ಥ.

೨) ಪ್ರಚಲಿತಪಾಠದಲ್ಲಿ ದ್ವಂದ್ವಯುದ್ಧದ ವಿವರಗಳಲ್ಲಿ ಕಂಡು ಬರುವ ವ್ಯತ್ಯಾಸವನ್ನು ಪಾಠ ವ್ಯತ್ಯಾಸ ಅಥವಾ ಪುರುಷ ವ್ಯತ್ಯಾಸಕ್ರಮದಲ್ಲಿ ಹೊಂದಿಸಿಕೊಳ್ಳಬೇಕು.

ದ್ರೋಣಂ ಚ ಭಗದತ್ತಂ ಚ ಕೃಪಂ ದುರ್ಯೋಧನಂ ತಥಾ ।
ಕೇವಲಂ ಬಾಹುವೀರ್ಯೇಣ ವ್ಯಜಯದ್ಭೀಮವಿಕ್ರಮಃ ॥ ೨೫ ॥

ಅ: ಭೀಮಪರಾಕ್ರಮಿಯಾದ ಭೀಮಸೇನ ಕೇವಲ ಬಾಹುಬಲದಿಂದಲೇ ದ್ರೋಣ, ಭಗದತ್ತ, ಕೃಪ ಮತ್ತು ದುರ್ಯೋಧನರನ್ನು ಸೋಲಿಸಿದ.

ವಿ: ಅಷ್ಟು ಜನ ಅಸ್ತ್ರಜ್ಞರನ್ನು ಭೀಮ ಒಂಟಿಯಾಗಿ ಕೇವಲ ಬಾಹುಬಲದಿಂದ ಸೋಲಿಸಿದ್ದು ಆತನ ಭೀಮಪರಾಕ್ರಮಕ್ಕೆ ನಿದರ್ಶನ.

ಉತ್ತರನ ವಧೆ

ಹತ್ವೋತ್ತರಂ ಮದ್ರರಾಜೋ ವ್ಯದ್ರಾವಯದನೀಕಿನೀಮ್ ।
ಅಥ ಭೀಷ್ಮಮುದೀರ್ಣಾಸ್ತ್ರಂ ದ್ರಾವಯಂತಂ ವರೂಥಿನೀಮ್ ।
ಸಸೌಮದತ್ತಿಂ ಸೌಭದ್ರಸಹಾಯೋಽರ್ಜುನ ಆಸದತ್ ॥ ೨೬ ॥

ಅ: ಶಲ್ಯರಾಜ ಉತ್ತರಕುಮಾರನನ್ನು ಸಂಹರಿಸಿ ಸೇನೆಯನ್ನು ಓಡಿಸಿದ. ಬಳಿಕ ಮಹಾಸ್ತ್ರಗಳನ್ನು ಪ್ರಯೋಗಿಸುತ್ತಾ ತಮ್ಮ ಸೈನ್ಯವನ್ನು ಓಡಿಸುತ್ತಿದ್ದ ಭೀಷ್ಮ ಮತ್ತು ಭೂರಿಶ್ರವರನ್ನು ಅರ್ಜುನ ಮತ್ತು ಅಭಿಮನ್ಯು ಎದುರಿಸಿದರು.

ವಿ: ಕುರುಕ್ಷೇತ್ರಸಮರದಲ್ಲಿ ಸರ್ವಪ್ರಥಮನಾಗಿ ಹತನಾದ ಮಹಾವೀರ *ಉತ್ತರಕುಮಾರ. ಅವನ ಬಗ್ಗೆ ವಿವರಗಳು ವಿರಾಟಪರ್ವದಲ್ಲಿ ಬಂದಿವೆ(೨೩/೪೦). ಶಲ್ಯ ಅವನನ್ನು ಶಕ್ತ್ಯಾಯುಧದಿಂದ

---

೨೬. ಉದೀರ್ಣಾಸ್ತ್ರಂ ಉತ್ಕೃಷ್ಟಾಸ್ತ್ರಂ ಭೀಷ್ಮಮ್। – (ಜ.)

* ಉತ್ತರಾಂತಕರೀಂ **ಶಕ್ತಿಂ** ಚಿಕ್ಷೇಪ ಭುಜಗೋಪಮಾಮ್ ।
ತಯಾ ಭಿನ್ನತನುತ್ರಾಣಃ ಪ್ರವಿಶ್ಯ ವಿಪುಲಂ ತಮಃ ॥ – ಭಾರತ (ಭೀಷ್ಮ. ೪೭/೩೮)

ವಧಿಸಿದ ವಿವರ ಮಹಾಭಾರತದಲ್ಲಿದೆ. ಆಗ ಭೀಷ್ಮರನ್ನು ಎದುರಿಸಿದ ಉತ್ತರನ ಸೋದರ ಶ್ವೇತನು ಭೀಷ್ಮರ * ಬ್ರಹ್ಮಾಸ್ತ್ರದಿಂದ ಹತನಾದ ಎಂದೂ ಮಹಾಭಾರತದಲ್ಲಿದೆ.

ಭೀಷ್ಮರ ಪರಾಕ್ರಮ

ಸೌಭದ್ರಂ ತತ್ರ ವಿಕ್ರಾಂತಮತೀತ್ಯ ದ್ಯುಸರಿತ್ಸುತಃ ।
ದ್ರಾವಯಾಮಾಸ ಪಾಂಚಾಲಾನ್ ಪಶ್ಯತಃ ಸವ್ಯಸಾಚಿನಃ ॥ ೨೭ ॥

ಅ: ವಿಕ್ರಮಶೀಲನಾದ ಅಭಿಮನ್ಯುವನ್ನು ದೇವಗಂಗೆಯ ಪುತ್ರ ಭೀಷ್ಮರು ದಾಟಿ ಅರ್ಜುನ ನೋಡುತ್ತಿದ್ದಂತೆಯೇ ಪಾಂಚಾಲರನ್ನು ಓಡಿಸತೊಡಗಿದರು.

ಮೊದಲ ದಿನದ ಯುದ್ಧದ ಮುಕ್ತಾಯ

ತಸ್ಯ ವಿಕ್ರಮಮಾಲಕ್ಷ್ಯ ಪಾರ್ಥಂ ತದ್ಗೌರವಾನುಗಮ್।
ದೃಷ್ಟ್ವಾ ಯುಧಿಷ್ಠಿರೋ ರಾಜಾ ಕ್ರುದ್ಧಃ ಸೇನಾಮಪಾಹರತ್ ॥ ೨೮ ॥

ಅ: ಧರ್ಮರಾಜ ಭೀಷ್ಮರ ಪರಾಕ್ರಮವನ್ನೂ, ಅರ್ಜುನ ಭೀಷ್ಮರ ಬಗ್ಗೆ ಗೌರವದಿಂದ ವರ್ತಿಸುತಿದ್ದುದನ್ನೂ ಗಮನಿಸಿ ಕೋಪಗೊಂಡು ಸೇನೆಯನ್ನು ಹಿಂತೆಗೆದುಕೊಂಡ.

ವಿ: ಇಲ್ಲಿಗೆ ಪ್ರಥಮ ದಿವಸದ ಯುದ್ಧ ಮುಕ್ತಾಯವಾಯಿತು ಎಂದರ್ಥ.

ಎರಡನೆಯ ದಿನದ ಯುದ್ಧ

ರಾತ್ರೌ ಯುಧಿಷ್ಠಿರಶ್ಚಿಂತಾಮಾಪ್ಯ ಪಾರ್ಥಂ ವ್ಯಗರ್ಹಯತ್ ।
ಸ ಕೃಷ್ಣಾದ್ಯೈಃ ಸಾಂತ್ವಿತಶ್ಚ ಪುನರ್ಯುದ್ಧಾಯ ನಿರ್ಯಯೌ ॥ ೨೯ ॥

ಅ: ರಾತ್ರಿಯಲ್ಲಿ ಧರ್ಮರಾಜ ಚಿಂತೆಗೊಳಗಾಗಿ ಅರ್ಜುನನನ್ನು ಬಹಳವಾಗಿ ತೆಗಳಿದ. ಕೃಷ್ಣ ಮೊದಲಾದವರು ಅವನನ್ನು ಸಮಾಧಾನಪಡಿಸಿದರು. ಬಳಿಕ ಪುನಃ ಯುದ್ಧಕ್ಕೆಂದು ತೆರಳಿದ.

---

* ವಿಕೃಷ್ಯ ಬಲವಾನ್ ಭೀಷ್ಮಃ ಸಮಾಧತ್ತ ದುರಾಸದಮ್ ।
ಬ್ರಹ್ಮಾಸ್ತ್ರೇಣ ಸುಸಂಯುಕ್ತಂ ತಂ ಶರಂ ಲೋಮವಾಹಿನಮ್ ॥... – ಭಾರತ (ಭೀಷ್ಮ. ೪೮/೧೧೨)

೨೯. ಸೋಽರ್ಜುನಃ ಪುನಃ ಕೃಷ್ಣಾದ್ಯೈಃ ಸಾಂತ್ವಿತೋ ಬೋಧಿತಃ। ಯದ್ವಾ ಯುಧಿಷ್ಠಿರಃ ಸಾಂತ್ವಿತಃ ಪೂರ್ವಂ ಕ್ರುದ್ಧಇತಿ ಶೇಷಃ। – (ಜ.)

ವಿ: ೧) ಅಂದಿನ ರಾತ್ರಿಯ ಸಭೆಯಲ್ಲಿ ಧರ್ಮರಾಜ ಭೀಮನ ಹೊರತು ಬೇರಾರಿಂದಲೂ ಸಮರ್ಥರೀತಿಯಲ್ಲಿ ಯುದ್ಧ ನಡೆಯುತ್ತಿಲ್ಲ ಎಂದು ತನ್ನ ವ್ಯಥೆಯನ್ನು ತೋಡಿಕೊಂಡ. ಅರ್ಜುನ–ನಂತೂ ಮಧ್ಯಸ್ಥನಂತೆ ಇರುವನೇ ಹೊರತು ಶತ್ರುಗಳ ಮೇಲೆ ಹೋರಾಡುತ್ತಲೇ ಇಲ್ಲ ಎಂದು ಆಕ್ಷೇಪಿಸಿದ.

೨) ಅಂಥವನನ್ನು ನಂಬಿಕೊಂಡು ಯುದ್ಧಕ್ಕೆ ತೊಡಗಿದ್ದು ಉಚಿತವಾಗಲಿಲ್ಲ ಎಂಬ ಕೊರಗನ್ನೂ ವ್ಯಕ್ತಪಡಿಸಿದ.

೩) ಬಳಿಕ ಕೃಷ್ಣ ಅವನನ್ನು ಸಮಾಧಾನಪಡಿಸಲು, ನೆಮ್ಮದಿಹೊಂದಿ ಮಾರನೆಯ ದಿನ ಯುದ್ಧಕ್ಕೆ ತೆರಳಿದ ಎಂದರ್ಥ

ಭೀಷ್ಮರ ಸೇನಾಪತ್ಯ ಒಟ್ಟು ಹತ್ತು ದಿನ

ಏವಂ ಭೀಷ್ಮೋ ದಶಾಹಾನಿ ಸೇನಾಪತ್ಯಂ ಚಕಾರ ಹ ।
ಕೃತ್ವಾಽಪಿ ಪಾಂಡವೈರ್ಯುದ್ಧಂ ತತ್ಕರ್ತುಮಕೃತೋಪಮಮ್ ॥ ೩೦ ॥

ಅ: ಹೀಗೆ ಭೀಷ್ಮ ಹತ್ತು ದಿನಗಳ ಕಾಲ ಸೇನಾಪತ್ಯವನ್ನು ನಿರ್ವಹಿಸಿ ಪಾಂಡವರೊಂದಿಗೆ ಯುದ್ಧಮಾಡಿದ. ಅವರು ಮಾಡಿದ್ದು ಇತರರಿಂದ ಮಾಡಲು ಅಶಕ್ಯವೆಂಬಂತಿತ್ತು.

ವಿ: ಒಟ್ಟು ಕುರುಕ್ಷೇತ್ರ ಸಮರದ ಹದಿನೆಂಟು ದಿನಗಳಲ್ಲಿ ಭೀಷ್ಮರ ಸೇನಾಧಿಪತ್ಯದಲ್ಲಿ ನಡೆದ ಯುದ್ಧ ಹತ್ತುದಿನಗಳದ್ದಾಗಿತ್ತು; ಅವರು ಅಷ್ಟು ದಿನಗಳ ಕಾಲ ಅನುಪಮವಾದ ಯುದ್ಧವನ್ನೇ ಮಾಡಿದರು ಎಂದರ್ಥ.

---

೨೯. ಏಕೋ ಭೀಮಃ ಪರಂ ಶಕ್ತ್ಯಾ ಯುಧ್ಯತ್ಯೇವ ಮಹಾಭುಜಃ ।
ಕೇವಲಂ ಬಾಹುವೀರ್ಯೇಣ ಕ್ಷತ್ರಧರ್ಮಮನುಸ್ಮರನ್ ॥ – ಭಾರತ (ಭೀಷ್ಮ. ೫೦/೧೭)

೨೯. ಕಿಂ ನು ಕೃತ್ವಾ ಹಿತಂ ಮೇ ಸ್ಯಾದ್ಬ್ರೂಹಿ ಮಾಧವ ಮಾಚಿರಮ್ ।
ಮಧ್ಯಸ್ಥಮಿವ ಪಶ್ಯಾಮಿ ಸಮರೇ ಸವ್ಯಸಾಚಿನಮ್ ॥ – ಭಾರತ (ಭೀಷ್ಮ. ೫೦/೧೬)

೩೦. ತತ್ಕರ್ತುಮಕೃತೋಪಮಮಿತ್ಯತ್ರ ಕೃತಾ ಉಪಮಾ ಯಸ್ಯ ನ ತದಕೃತೋಪಮಂ = ಅಸದೃಶಮ್। ಏಕಾಂಗ-ವೀರತಯಾ ಸ್ವೇನೈವ ಕೃತಂ ಕರ್ತುಮಿತಿ ಯಾವತ್ ॥ – (ವಾ.)

೩೦. ಅಕೃತೋಪಮಂ ಅನ್ಯೈಃ ಅಕೃತಾ ನ ಕೃತಾ ಉಪಮಾ ಯಸ್ಯ ತತ್ತಥಾ ಅಸದೃಶಂ ಭೀಷ್ಮಕೃತಯುದ್ಧಮಿತಿ ಯಾವತ್ ॥ – (ಜ.)

ಸಮರಕ್ಕೆ ಬಾರದ ಕರ್ಣ

ಕರ್ಣೋ೭ರ್ಧರಥ ಇತ್ಯುಕ್ತ್ವಾ ತಾವದ್ಯುದ್ಧಾತ್ ಪ್ರಯಾಪಿತಃ ।
ಯಾವತ್ ತ್ವಂ ಯೋತ್ಸ್ಯಸೇ ತಾವನ್ನ ಯೋತ್ಸ್ಯಮೀತಿ ನಿರ್ಗತೇ ॥ ೩೧ ॥

ಭೀಷ್ಮ ಪ್ರತಿಜ್ಞೆ

ಕರ್ಣೇ೭ಯುತರಥಾನಾಂ ಸ ನಿತ್ಯಶೋ ವಧಮಾಹವೇ ।
ಪ್ರತಿಜಜ್ಞೇ೭ಕರೋತ್ ತಚ್ಚ ಪುನಶ್ಚಾಸ್ತ್ರವಿದಾಂ ವರಃ ॥ ೩೨ ॥

ಅ: ಕರ್ಣನು ಭೀಷ್ಮರಿಂದ ಅರ್ಧರಥ ಎಂದು ಕರೆಸಿಕೊಂಡು ಯುದ್ಧದಲ್ಲಿ ಪಾಲ್ಗೊಂಡಿರಲಿಲ್ಲ. ನೀನು ಯುದ್ಧ ಮಾಡುತ್ತಿರುವವರೆಗೂ ನಾನು ಯುದ್ಧ ಮಾಡಲಾರೆ ಎಂದು ಕರ್ಣ ತೆರಳಿದ ಮೇಲೆ ಭೀಷ್ಮರು ಪ್ರತಿನಿತ್ಯ ಹತ್ತು ಸಾವಿರ ರಥಿಕರನ್ನು ಕೊಲ್ಲುವುದಾಗಿ ಪ್ರತಿಜ್ಞೆ ಮಾಡಿದರು. ಅಸ್ತ್ರಜ್ಞರಲ್ಲಿ ಅಗ್ರೇಸರನಾದ ಅವರು ಅದನ್ನು ಪೂರೈಸಿದರು ಸಹ.

ವಿ: ೧) ಭೀಷ್ಮರಿಗೆ ಸೇನಾಧಿಪತ್ಯ ವಹಿಸಿ ತನ್ನ ಸೈನ್ಯದ ಪ್ರಮುಖರ ಬಲಾಬಲಗಳ ಬಗ್ಗೆ ದುರ್ಯೋಧನ ಅವರನ್ನು ಕೇಳಿದಾಗ ಭೀಷ್ಮರು ಅತಿರಥ ಮಹಾರಥರ ಪಟ್ಟಿಯನ್ನು ನೀಡುವರು. ಅದರಲ್ಲಿ ಕರ್ಣನ ಹೆಸರು ಇಲ್ಲದ್ದನ್ನು ಗಮನಿಸಿ ಕಾರಣ ಕೇಳಿದಾಗ ಭೀಷ್ಮರು ತಿಳಿಸಿದರು – ಇವನು ಕವಚ ಕುಂಡಲಗಳನ್ನು ಕಳೆದುಕೊಂಡವನು, ಗುರು ಪರಶುರಾಮರ ಶಾಪ, ಋಷಿಯೊಬ್ಬನ ಶಾಪಗಳಿಗೆ ಗುರಿಯಾದವನು. ಆದ್ದರಿಂದ ಇವನು ಅತಿರಥನಾಗಲೀ, ಮಹಾರಥನಾಗಲೀ ಆಗಲಾರ, ಕೇವಲ ಅರ್ಧರಥ ಮಾತ್ರ ಎಂದು ತಿಳಿಸಿದ್ದರು.

---

೩೧. ಏಷ ನೈವ ರಥಃ ಕರ್ಣೋ ನ ಚಾಪ್ಯತಿರಥೋ ರಣೇ ।
ವಿಯುಕ್ತಃ ಕವಚೇನೈಷ ಸಹಜೇನ ವಿಚೇತನಃ ॥
ಕುಂಡಲಾಭ್ಯಾಂ ಚ ದಿವ್ಯಾಭ್ಯಾಂ ವಿಯುಕ್ತಃ ಸತತಂ ಫೃಣೇ ।
ಅಭಿಶಾಪಾಚ್ಚ ರಾಮಸ್ಯ ಬ್ರಾಹ್ಮಣಸ್ಯ ಚ ಭಾಷಣಾತ್ ॥
ಕರಣಾನಾಂ ವಿಯೋಗಾಚ್ಚ ತೇನ ಮೇ೭ರ್ಧರಥೋ ಮತಃ ॥
(ಭೀಷ್ಮರ ವಚನ) – ಭಾರತ (ಉದ್ಯೋಗ. ೧೬೮/೫೫,೬)

೩೧. ನಾಹಂ ಜೀವತಿ ಗಾಂಗೇಯೇ ಯೋತ್ಸ್ಯೇ ರಾಜನ್ ಕಥಂಚನ ।
ಹತೇ ಭೀಷ್ಮೇ ತು ಯೋದ್ಧಾ೭ಸ್ಮಿ ಸರ್ವೈರೇವ ಮಹಾರಥೈಃ ॥
– (ಕರ್ಣವಚನ) – ಭಾರತ (ಉದ್ಯೋಗ ೧೬೮/೨೯)

೩೧. 'ರಥೀ ತ್ವೇಕೇನ ಯೋ ಯುದ್ಧೇತ್ ನ್ಯೂನೋ **ಅರ್ಧರಥಃ** ಸ್ಮೃತಃ ॥ ಇತಿ ವಿಷ್ಣುಪುರಾಣೇ । – (ಮ.)

೨) ಅದರಿಂದ ಕೆರಳಿದ ಕರ್ಣ ಭೀಷ್ಮರ ಮಾತುಗಳನ್ನು ಅರ್ಥಮಾಡಿಕೊಳ್ಳುವ ಬದಲು ಅವರು ಯುದ್ಧ ಮಾಡುವವರೆಗೂ ತಾನು ಯುದ್ಧ ಮಾಡದಿರುವ ಶಪಥವನ್ನು ಕೈಗೊಂಡ. ಭೀಷ್ಮರನ್ನೇ ಅರ್ಧರಥ ಎಂದು ಮೂದಲಿಸಿದ. ಅದರಿಂದಾಗಿ ಮೊದಲ ಹತ್ತುದಿನಗಳ ಯುದ್ಧದಲ್ಲಿ ಕರ್ಣ ಒಮ್ಮೆಯೂ ಪಾಲ್ಗೊಳ್ಳಲಿಲ್ಲ ಎಂಬುದು ವಿಶೇಷ.

೩) ಕರ್ಣ ಹಾಗೆ ಯುದ್ಧದಿಂದ ಹಿಂದುಳಿದುದನ್ನು ಕಂಡು ಭೀಷ್ಮರು ಅದರಿಂದ ಏನೂ ನಷ್ಟವಿಲ್ಲವೆಂದು ತಿಳಿಸಲು ತಾವು ಪ್ರತಿನಿತ್ಯ ಅತಿಕಡಿಮೆಯೆಂದರೂ ಹತ್ತುಸಾವಿರ ರಥಿಕರನ್ನು ಕೊಲ್ಲುವುದಾಗಿ *ಶಪಥ ಮಾಡಿದರು.

೪) ಭೀಷ್ಮರು ಶಸ್ತ್ರ ಹಿಡಿಯೆನೆಂದು ಪ್ರತಿಜ್ಞೆ ಮಾಡಿರುವ ಕೃಷ್ಣ ಶಸ್ತ್ರ ಹಿಡಿಯುವಂತೆ ಮಾಡುವೆ ಎಂಬುದಾಗಿ ಮತ್ತೊಂದು ಪ್ರತಿಜ್ಞೆಯನ್ನೂ ಅವರು ಮಾಡಿದ ವಿವರ ಸುಪ್ರಸಿದ್ಧ–ವಾದುದು.

ಭೀಮಾರ್ಜುನರು ಭೀಷ್ಮರನ್ನು ವಧಿಸದಿರಲು ಕಾರಣ

ಸುಸಮರ್ಥಾವಪಿ ವಧೇ ತಸ್ಯ ಭೀಮಧನಂಜಯೌ ।
ಸ್ನೇಹೇನ ಯಂತ್ರಿತೌ ತಸ್ಯ ಗೌರವಾಚ್ಚಾನ್ವವರ್ತತಾಮ್ ॥ ೩೩ ॥

ಅ: ಭೀಷ್ಮರನ್ನು ಕೊಲ್ಲಲು ಭೀಮಾರ್ಜುನರು ಅತ್ಯಂತ ಸಮರ್ಥರೇ ಆಗಿದ್ದರೂ ಅವರ ಮೇಲಿನ ಪ್ರೀತಿಯಿಂದ ತಡೆದರು. ಅವರ ಮೇಲಿನ ಗೌರವದಿಂದಾಗಿ ಅವರಿಗೆ ಅನುಕೂಲ-ವಾಗಿಯೇ ವರ್ತಿಸಿದರು.

ವಿ: ೧) ಭೀಷ್ಮರನ್ನು ಕೊಲ್ಲಲು ಪಾಂಡವರ ಕಡೆಯ ಯಾರಿಂದಲೂ ಸಾಧ್ಯವಿರಲಿಲ್ಲ ಎಂಬ ತಪ್ಪು ಕಲ್ಪನೆಗೆ ಇಲ್ಲಿ ಉತ್ತರವಿದೆ.

೨) ಭೀಷ್ಮರು ಮಹಾವೀರರೇ ಆಗಿದ್ದರೂ, ಭೀಮಾರ್ಜುನರ ಸಾಮರ್ಥ್ಯದ ಮುಂದೆ ಅವರ ಸಾಮರ್ಥ್ಯ ಗಣನೆಗೆ ಬರುವಂತಹುದಾಗಿರಲಿಲ್ಲ. ಭೀಮಸೇನ ಸಾಕ್ಷಾತ್ ಮುಖ್ಯಪ್ರಾಣನ ಅವತಾರ, ಭೀಷ್ಮರು ಒಬ್ಬ ವಸು ಮಾತ್ರ. ಅದರಂತೆ ಅರ್ಜುನ ಸಾಕ್ಷಾತ್ ಇಂದ್ರಾವತಾರ. ಗಾಂಡೀವ, ಪಾಶುಪತಾಸ್ತ್ರ ಮೊದಲಾದವುಗಳಿಂದ ಕೂಡಿದ್ದವನು. ಅವರನ್ನು ಎದುರಿಸುವ ಪೂರ್ಣ ಸಾಮರ್ಥ್ಯ ಸರ್ವಥಾ ಭೀಷ್ಮರದಾಗಿರಲಿಲ್ಲ.

---

* ಹನ್ಯಾಮಹಂ ಮಹಾಭಾಗ ಪಾಂಡವಾನಾಮನೀಕಿನೀಮ್ ।
ದಿವಸೇ ದಿವಸೇ ಕೃತ್ವಾ ಭಾಗಂ ಪ್ರಾಗಾಹ್ನಿಕಂ ಮಮ ॥
ಯೋಧಾನಾಂ ದಶಸಾಹಸ್ರಂ ಕೃತ್ವಾ ಭಾಗಂ ಮಹಾದ್ಯುತೇ ।
ಸಹಸ್ರಂ ರಥಿನಾಮೇಕಮೇಷ ಭಾಗೋ ಮತೋ ಮಮ ॥ —ಭಾರತ (ಉದ್ಯೋಗ. ೧೯೩/೧೨)

೩) ಸ್ವತಃ ದುರ್ಯೋಧನನೂ ಇದನ್ನು ಮನಗಂಡಿದ್ದವನೇ :

ಅಪರ್ಯಾಪ್ತಂ ತದಸ್ಮಾಕಂ ಬಲಂ ಭೀಷ್ಮಾಭಿರಕ್ಷಿತಮ್ । – ಗೀತಾ (೧/೧೦)

ಎಂದರೆ ಭೀಷ್ಮವಧೆ ಭೀಮಾರ್ಜುನರಿಗೆ ಯಾವ ರೀತಿಯಲ್ಲೂ ಸವಾಲಾಗಿರಲಿಲ್ಲ ಎಂದರ್ಥ.

೪) ಆದರೂ ಭೀಷ್ಮರು ಪರಮ ಕೃಷ್ಣಭಕ್ತರು, ಪಿತಾಮಹ ಎಂಬ ಪ್ರೀತಿಯಿಂದಲೂ, ಗೌರವದಿಂದಲೂ* ಕೊಲ್ಲದೆ ಸುಮ್ಮನಿದ್ದರು ಎಂದರ್ಥ.

ಬಗೆಬಗೆಯ ಯುದ್ಧಗಳು

ಬಭೂವುಸ್ತತ್ರ ಯುದ್ಧಾನಿ ಚಿತ್ರಾಣಿ ಸುಬಹೂನಿ ಚ ।
ತಾನ್ಯಂಬರೇ ವಿಮಾನಸ್ಥಾ ಬ್ರಹ್ಮರುದ್ರಪುರಃ ಸರಾಃ ।
ಅಪಶ್ಯನ್ ದೇವತಾಃ ಸರ್ವಾ ಗಂಧರ್ವಾಪ್ಸರಸೋಽಸುರಾಃ ॥ ೩೪ ॥

ಅ: ಅಲ್ಲಿ ರೋಚಕವಾದ ಅನೇಕ ಯುದ್ಧಗಳು ನಡೆದವು. ಅವುಗಳನ್ನು ಗಗನದಲ್ಲಿ ವಿಮಾನಗಳಲ್ಲಿ ಕುಳಿತು ಬ್ರಹ್ಮ, ರುದ್ರ ಮೊದಲಾದ ದೇವತೆಗಳು, ಸರ್ವ ಗಂಧರ್ವರು, ಅಪ್ಸರೆಯರು, ಅಸುರರು ವೀಕ್ಷಿಸಿದರು.

ವಿ: ಕುರುಪಾಂಡವಯುದ್ಧ ದೇವದೈತ್ಯರೂ ವೀಕ್ಷಿಸುವಷ್ಟು ಅದ್ಭುತವಾಗಿತ್ತು ಎಂದರ್ಥ.

ಧೃಷ್ಟದ್ಯುಮ್ನೋ ಮಹೇಷ್ವಾಸಃ ಪ್ರತಿವ್ಯೂಹ್ಯಾಪಗಾಸುತಮ್।
ಚಕ್ರೇ ಯುದ್ಧಾನಿ ಸುಬಹೂನ್ಯಜೇಯಃ ಶತ್ರುಭೀ ರಣೇ ॥ ೩೫ ॥

ಅ: ಶ್ರೇಷ್ಠ ಬಿಲ್ಲುಗಾರನಾದ ಧೃಷ್ಟದ್ಯುಮ್ನ ಭೀಷ್ಮರ ವ್ಯೂಹರಚನೆಗೆ ಪ್ರತಿಯಾಗಿ ವ್ಯೂಹವನ್ನು ರಚಿಸಿ ಶತ್ರುಗಳಿಗೆ ಸೋಲದವನಾಗಿ ಯುದ್ಧದಲ್ಲಿ ಅನೇಕ ಯುದ್ಧಗಳನ್ನು ಮಾಡಿದ.

ವಿ: ಭೀಷ್ಮರ ವ್ಯೂಹ ರಚನೆಗೆ ಪ್ರತಿಯಾಗಿ ಧೃಷ್ಟದ್ಯುಮ್ನನೂ ವ್ಯೂಹಗಳನ್ನು ರಚಿಸಿ ತುಂಬಾ ಸಮರ್ಥ ರೀತಿಯಲ್ಲಿ ಕಾದಾಡಿದ ಎಂದರ್ಥ.

---

* ಅರ್ಜುನೋ ಹಿ ಶರೈಸ್ತೀಕ್ಷ್ಣೈರ್ವಧ್ಯಮಾನೋಽಪಿ ಸಂಯುಗೇ ।
ಕರ್ತವ್ಯಂ ನಾಭಿಜಾನಾತಿ ರಣೇ ಭೀಷ್ಮಸ್ಯ ಗೌರವಾತ್ ॥ – ಭಾರತ (ಭೀಷ್ಮ. ೫೯/೭೨)

ಚಕ್ರ ಹಿಡಿದ ಚಕ್ರಪಾಣಿ - ಮೂರನೆಯ ದಿನದ ಯುದ್ಧ

ತತ್ರೋದ್ದಧಾರ ಕೃಷ್ಣೋಽಪಿ ಫಲ್ಗುನಂ ಮೃದುಯೋಧಿನಮ್ ।
ದೃಷ್ಟ್ವಾ ಚಕ್ರಂ ತಥೋದ್ಯಮ್ಯ ಬಾಹುಂ ಭೀಷ್ಮಾಯ ಜಗ್ಮಿವಾನ್ ॥ ೩೬ ॥

ಅ: ಅಲ್ಲಿ ಕೃಷ್ಣನು ಅರ್ಜುನ ಮೃದುವಾಗಿ ಹೋರಾಡುತ್ತಿದ್ದುದನ್ನು ಕಂಡು ಚಕ್ರವನ್ನು ಕೈಗೆತ್ತಿಕೊಂಡು ಭೀಷ್ಮರ ಕಡೆಗೆ ಸಾಗಿದ.

ವಿ: ೧) ಅರ್ಜುನ ಗೀತೆಯನ್ನು ಕೇಳಿದ ಅನಂತರವೂ, ಧರ್ಮರಾಜ ರಾತ್ರಿಯ ಸಭೆಯಲ್ಲಿ ಹೀಗಳೆದ ಮೇಲೂ ತನ್ನ ನೈಜ ಸಾಮರ್ಥ್ಯಕ್ಕೆ ತಕ್ಕ ಯುದ್ಧವನ್ನು ಮಾಡದಿದ್ದುದನ್ನು ಕಂಡು ಕೃಷ್ಣ ಅವನಿಗೆ ವಿವೇಕ ನೀಡಬೇಕೆಂದು ಚಕ್ರವನ್ನು ಕೈಗೆತ್ತಿಕೊಂಡು ತಾನೇ ಭೀಷ್ಮರನ್ನು ಕೊಲ್ಲುವಂತೆ ನಟಿಸುತ್ತಾ ತೆರಳಿದನು ಎಂದರ್ಥ :

ಕ್ಷುರಾಂತಮುದ್ಯಮ್ಯ ಭುಜೇನ ಚಕ್ರಂ ರಥಾದವಪ್ಲುತ್ಯ ವಿಸೃಜ್ಯ ವಾಹಾನ್ ।
ಸಂಕಂಪಯನ್ ಗಾಂ ಚರಣೈರ್ಮಹಾತ್ಮಾ ವೇಗೇನ ಕೃಷ್ಣಃ ಪ್ರಸಸಾರ ಭೀಷ್ಮಮ್ ॥
– ಭಾರತ (ಭೀಷ್ಮ. ೫೯/೮೮, ೮೯)

೨) ಕೃಷ್ಣ ಹಾಗೆ ತೆರಳಲು ಭೀಷ್ಮರು ಮಾಡಿದ ಪ್ರತಿಜ್ಞೆಯನ್ನು ಸತ್ಯವಾಡುವ ಮತ್ತೊಂದು ಉದ್ದೇಶವೂ ಇತ್ತು ಎಂಬುದು ಶ್ರೀಮದ್ಭಾಗವತದಿಂದ ತಿಳಿಯುವುದು :

ಸ್ವನಿಯಮಮಪಹಾಯ ಮತ್ಪ್ರತಿಜ್ಞಾಮೃತಮಧಿಕರ್ತುಮವಪ್ಲುತೋ ರಥಸ್ಥಃ ।
ಧೃತರಥಚರಣೋಽಭ್ಯಯಾಚ್ಚಲದ್ಗುರ್ಹರಿರಿವ ಹಂತುಮಿಭಂ ಗತೋತ್ತರೀಯಃ ॥
– ಭಾಗವತ (೧/೯/೩೭)

ತೇನ ಸ್ತುತೋ ಗೃಹೀತಶ್ಚ ಫಲ್ಗುನೇನ ಪ್ರಣಮ್ಯ ಚ ।
ಪ್ರಾರ್ಥಿತೋ ರಥಮಾರೂಢಃ ಪುನಃ ಶಂಖಮಪೂರಯತ್ ॥ ೩೭ ॥

ಅ: ಭೀಷ್ಮರು ಕೃಷ್ಣನನ್ನು ಸ್ತುತಿಸಿದರು, ಅರ್ಜುನ ಕೃಷ್ಣನನ್ನು ತಡೆದು ನಮಸ್ಕರಿಸಿ ಪ್ರಾರ್ಥಿಸಿದ. ಕೃಷ್ಣ ರಥವನ್ನೇರಿ ಶಂಖವನ್ನು ಮೊಳಗಿಸಿದ.

---

೩೭. ನ ಹಾಸ್ಯತೇ ಕರ್ಮ ಯಥಾಪ್ರತಿಜ್ಞಂ ಪುತ್ರೈಃ ಶಪೇ ಕೇಶವ ಸೋದರೈಶ್ಚ।
ಅಂತಂ ಕರಿಷ್ಯಾಮಿ ಯಥಾ ಕುರೂಣಾಂ ತ್ವಯಾಽಹಮಿಂದ್ರಾನುಜ ಸಂಪ್ರಯುಕ್ತಃ ॥
(ಅರ್ಜುನನ ವಚನ) – ಭಾರತ (ಭೀಷ್ಮ. ೫೯/೧೦೩)

ಎ: ೧) ಕೃಷ್ಣನು ಚಕ್ರಪಾಣಿಯಾಗಿ ತನ್ನತ್ತ ಧಾವಿಸಿ ಬರುವುದನ್ನು ಕಂಡು ಭೀಷ್ಮರು ಶಸ್ತ್ರಾಸ್ತ್ರಗಳನ್ನು ತೊರೆದು ಕೃಷ್ಣನನ್ನು ಅಪೂರ್ವ ರೀತಿಯಲ್ಲಿ ಸ್ತುತಿಸತೊಡಗಿದರು.

ಏಹ್ಯೇಹಿ ದೇವೇಶ ಜಗನ್ನಿವಾಸ ನಮೋಽಸ್ತು ತೇ ಮಾಧವ ಚಕ್ರಪಾಣೇ ।
ಪ್ರಸಹ್ಯ ಮಾಂ ಪಾತಯ ಲೋಕನಾಥ ರಥೋತ್ತಮಾತ್ ಸರ್ವಶರಣ್ಯ ಸಂಖ್ಯೇ ॥
ತ್ವಯಾ ಹತಸ್ಯಾಪಿ ಮಮಾದ್ಯ ಕೃಷ್ಣ ಶ್ರೇಯಃ ಪರಸ್ಮಿನ್ನಿಹ ಚೈವ ಲೋಕೇ ।
ಸಂಭಾವಿತೋಽಸ್ಮ್ಯಂಧಕವೃಷ್ಣಿನಾಥ ಲೋಕೈಸ್ತ್ರಿಭಿರ್ವೀರ ತವಾಭಿಯಾನಾತ್ ॥

– ಭಾರತ (ಭೀಷ್ಮ, ೫೯/೯೬-೯೮)

೨) ಇತ್ತ ಅರ್ಜುನ ಕೃಷ್ಣನ ಹಿಂದೆ ಓಡುತ್ತಾ ಬಂದು ಗಟ್ಟಿಯಾಗಿ ಕಾಲನ್ನು ಹಿಡಿದುಕೊಂಡ. ಕೃಷ್ಣ ಅವನನ್ನು ಎಳೆದುಕೊಂಡೇ ಮುಂದೆ ಸಾಗಿದ.

ಪಾರ್ಥಸ್ತು ವಿಷ್ಟಭ್ಯ ಬಲೇನ ಪಾದೌ ಭೀಷ್ಮಾಂತಿಕಂ ತೂರ್ಣಮಭಿದ್ರವಂತಮ್ ।
ಬಲಾನ್ನಿಜಗ್ರಾಹ ಹರಿಂ ಕಿರೀಟೀ ಪದೇಽಥ ರಾಜನ್ ದಶಮೇ ಕಥಂಚಿತ್ ॥

– ಭಾರತ (ಭೀಷ್ಮ. ೫೯/೧೦೧)

೩) ಕೊನೆಗೂ ಅವನು ಬಹಳವಾಗಿ ಪ್ರಾರ್ಥಿಸಿದಾಗ ಯಾವ ಮಾತನ್ನೂ ಆಡದೇ ಬಂದು ಪುನಃ ರಥವನ್ನೇರಿ ಸಾರಥ್ಯವನ್ನು ಮುಂದುವರಿಸಿದ.

ಅರ್ಜುನನ ಪರಾಕ್ರಮ

ತತೋ ಭೀಷ್ಮೋಽರ್ಜುನಶ್ಚೈವ ಶಸ್ತ್ರಾಸ್ತ್ರೈರಭ್ಯವರ್ಷತಾಮ್।
ಅಯತ್ನೇನ ಜಿತಶ್ಚೈವ ಫಲ್ಗುನೇನಾಪಗಾಸುತಃ ॥ ೩೮ ॥

ಅ: ಬಳಿಕ ಭೀಷ್ಮ ಮತ್ತು ಅರ್ಜುನರು ಪರಸ್ಪರರ ಮೇಲೆ ಶಸ್ತ್ರಾಸ್ತ್ರಗಳ ಮಳೆಗರೆದರು, ಆಗ ಅರ್ಜುನ ಭೀಷ್ಮರನ್ನು ಅನಾಯಾಸದಿಂದ ಪರಾಭವಗೊಳಿಸಿದ.

ಎ: ಅರ್ಜುನ ತನ್ನ ನೈಜ ಪರಾಕ್ರಮವನ್ನು ಮೆರೆದಾಗ ಭೀಷ್ಮರು ಕೂಡಲೇ ಸೋತು ಹೋದರು ಎಂದರ್ಥ.

ಮೂರನೆಯ ದಿನದ ಯುದ್ಧದ ಪರಿಸಮಾಪ್ತಿ

ಅಯುತಾನಿ ಬಹೂನ್ಯಾಜೌ ರಥಾನಾಂ ನಿಜಘಾನ ಚ।
ಜಿತಾಃ ಸೇನಾಪಹಾರಂ ಚ ಚಕ್ರುರ್ಭೀಷ್ಮಮುಖಾಸ್ತತಃ ॥ ೩೯ ॥

ಅ: ಯುದ್ಧದಲ್ಲಿ ಅರ್ಜುನ ಬಹುಸಂಖ್ಯೆಯ ಹತ್ತು ಸಾವಿರ ರಥಿಗಳನ್ನು ಕೊಂದು ಹಾಕಿದನು. ಭೀಷ್ಮ ಮೊದಲಾದವರು ಪರಾಭವಗೊಂಡು ತಮ್ಮ ಸೇನೆಯನ್ನು ಹಿಂತೆಗೆದುಕೊಂಡು ತೆರಳಿದರು.

ಏಃ ಅರ್ಜುನ ಅನಂತರದ ಅಲ್ಪಾವಧಿಯಲ್ಲೇ ಅನೇಕ ಹತ್ತು ಸಾವಿರ ಸಂಖ್ಯೆಯ ರಥಿಕರನ್ನು ಸಂಹರಿಸುವಂತಹ ಅಪೂರ್ವ ಯುದ್ಧವನ್ನು ಮಾಡಿದ ಎಂದರ್ಥ.

ನಾಲ್ಕನೆಯ ದಿನದ ಯುದ್ಧ

ಕದಾಚಿದಗ್ರಗೋ ಭೀಮೋ ಭೀಷ್ಮದ್ರೋಣೌ ವಿಸಾರಥೀ।
ಕೃತ್ವಾ ವಿದ್ರಾವ್ಯ ತಾನಶ್ವಾನ್ ಭಿತ್ವಾ ವ್ಯೂಹಂ ವಿವೇಶ ಚ ॥ ೪೦ ॥

ಅಃ ಒಮ್ಮೆ ಭೀಮಸೇನ ಯುದ್ಧದಲ್ಲಿ ಮುಂದಾಳಾಗಿ ತೆರಳಿ ಭೀಷ್ಮ ದ್ರೋಣರನ್ನು ಸಾರಥಿ ಹೀನರನ್ನಾಗಿ ಮಾಡಿದ. ಅವರ ಕುದುರೆಗಳನ್ನು ಓಡಿಸಿ ವ್ಯೂಹವನ್ನು ಭೇದಿಸಿ ಒಳಕ್ಕೆ ನುಗ್ಗಿದ.

ಪುನಃ ಸಂಸ್ಥಾಪಿತರಥೌ ವಿಜಿತ್ಯಾಯತ್ನತೋ ಬಲೀ ।
ಯತಮಾನೌ ಮಹೇಷ್ವಾಸೌ ಧಾರ್ತರಾಷ್ಟ್ರಾನ್ ಜಘಾನ ಹ ॥ ೪೧ ॥

ಅಃ ಮಹಾ ಬಿಲ್ಗಾರರಾದ ಭೀಷ್ಮ, ದ್ರೋಣರು ಪುನಃ ರಥಗಳನ್ನು ಅಣಿಮಾಡಿಕೊಂಡು ಬಂದು ಎಷ್ಟು ಪ್ರಯತ್ನಿಸಿದರೂ ಭೀಮ ಅವರನ್ನು ಮತ್ತೊಮ್ಮೆ ಅನಾಯಾಸವಾಗಿಯೇ ಸೋಲಿಸಿದ; ಕೌರವರನ್ನು ವಧಿಸಿದ; ಆಶ್ಚರ್ಯ!

ಇಪ್ಪತ್ತೈದು ಕೌರವರ ವಧೆ - ನಾಲ್ಕನೆಯ ದಿನದ ಯುದ್ಧದ ಪರಿಸಮಾಪ್ತಿ

ಪಂಚವಿಂಶದ್ಧತಾಸ್ತತ್ರ ಧಾರ್ತರಾಷ್ಟ್ರಾ ಮಹಾಬಲಾಃ ।
ಭಗದತ್ತದ್ರೌಣಿಕೃಪಶಲ್ಯದುರ್ಯೋಧನಾದಯಃ ॥ ೪೨ ॥

ಸರ್ವೇ ಜಿತಾ ದ್ರಾವಿತಾಶ್ಚ ಸೇನಾ ಚ ಬಹುಲಾ ಹತಾ ।
ವಿರಥೋ ವ್ಯಾಯುಧಶ್ಚೈವ ದೃಢವೇಧವಿಮೂರ್ಚ್ಛಿತಃ ॥ ೪೩ ॥

ಕೃತೋ ದುರ್ಯೋಧನಃ ಸರ್ವರಾಜ್ಞಾಂ ಭೀಮೇನ ಪಶ್ಯತಾಮ್ ।
ತತೋಽಪಹಾರಂ ಸೈನ್ಯಸ್ಯ ಭೀತಾಶ್ಚಕ್ರುಶ್ಚ ಕೌರವಾಃ ॥ ೪೪ ॥

---

೪೩. ಬಹುಲಾ ಬಹ್ವೀ। – (ಜ.)

ಆ: ಅಲ್ಲಿ ಮಹಾಬಲಿಷ್ಠರಾದ ಇಪ್ಪತ್ತೈದು ಕೌರವರು ಭೀಮನಿಂದ ಹತರಾದರು. ಭಗದತ್ತ, ಅಶ್ವತ್ಥಾಮ, ಕೃಪ, ಶಲ್ಯ, ದುರ್ಯೋಧನ ಮೊದಲಾದವರೆಲ್ಲ ಸೋತು ಪಲಾಯನ ಮಾಡಿದರು. ಸೇನೆ ಬಹುವಾಗಿ ನಾಶವಾಯಿತು. ದುರ್ಯೋಧನ ವಿರಥನೂ, ಆಯುಧರಹಿತನೂ ಆಗಿ ಬಹಳವಾಗಿ ಪೆಟ್ಟು ತಿಂದು ಗಾಢಮೂರ್ಛೆಗೆ ಒಳಗಾದ. ಎಲ್ಲ ರಾಜರು ನೋಡುತ್ತಿದ್ದಂತೆಯೇ ಭೀಮ ಹಾಗೆ ಮಾಡಿದ. ಬಳಿಕ ಕೌರವರು ಭೀತರಾಗಿ ಸೇನೆಯನ್ನು ಹಿಂತೆಗೆದುಕೊಂಡರು.

ವಿ: ೧) ಮುಂದೆ ಭಗದತ್ತ ಮೊದಲಾದವರೆಲ್ಲ ಭೀಮನಿಗೆ ಸೋತು ಓಡಿದರು. ಸೇನೆ ಬಹಳವಾಗಿ ನಾಶವಾಯಿತು.

೨) ಸ್ವತಃ ದುರ್ಯೋಧನ ರಥಾದಿಗಳನ್ನು ಕಳೆದುಕೊಂಡು ಗಾಢ ಮೂರ್ಛೆಗೆ ಒಳಗಾದ. ಭೀಮನ ಆ ಪರಾಕ್ರಮಕ್ಕೆ ಪ್ರತಿಯಾಗಿ ಏನೂ ಮಾಡಲು ತೋಚದ ಕೌರವರು ಸೇನೆಯನ್ನು ಹಿಂತೆಗೆದುಕೊಂಡು ಅಂದಿನ ಯುದ್ಧವನ್ನು ಮುಕ್ತಾಯ ಮಾಡಿದರು ಎಂದರ್ಥ. ಹಾಗೆ ಸತ್ತವರಲ್ಲಿ ಕೆಲವರ ಹೆಸರುಗಳು ಹೀಗಿವೆ :

ಪ್ರತ್ಯುದ್ಯಯುಸ್ತತೋ ಭೀಮಂ ತವ ಪುತ್ರಾಶ್ಚತುರ್ದಶ ।
ಸೇನಾಪತಿಃ ಸುಷೇಣಶ್ಚ ಜಲಸಂಧಃ ಸುಲೋಚನಃ ॥
ಉಗ್ರೋ ಭೀಮರಥೋ ಭೀಮೋ ವೀರಬಾಹುರಲೋಲುಪಃ ।
ದುರ್ಮುಖೋ ದುಷ್ಪ್ರಧರ್ಷಶ್ಚ ವಿವಿತ್ಸುರ್ವಿಕಟಃ ಸಮಃ ॥...

– ಭಾರತ (ಭೀಷ್ಮ. ೫೯/೧೦೧)

ಭೀಷ್ಮರಿಂದ ಕೃಷ್ಣಮಹಿಮೆಯ ವರ್ಣನೆ - ವಿಶ್ವೋಪಾಖ್ಯಾನ

ದುರ್ಯೋಧನೋ ನಿಶಾಯಾಂ ಚ ಯಯೌ ಯತ್ರ ನದೀಸುತಃ ।
ಪೀಡಿತೋ ಭೀಮಬಾಣೈಶ್ಚ ಕ್ಷರದ್ಭಾಸ್ಕ್ರೋ ನನಾಮ ತಮ್ ॥ ೪೫ ॥

ಉವಾಚ ಹೇತುನಾ ಕೇನ ವಯಂ ಕ್ಷೀಯಾಮ ಸರ್ವದಾ ।
ಪಾಂಡವಾಶ್ಚ ಜಯಂ ನಿತ್ಯಂ ಲಬ್ಧ್ವಾ ಹರ್ಷಮವಾಪ್ನುವನ್ ॥ ೪೬ ॥

---

೪೬. ತತ್ರ ಮೇ ಸಂಶಯೋ ಜಾತಸ್ತನ್ಮಾಚಕ್ಷ್ವ ಪೃಚ್ಛತಃ ।
ಯಂ ಸಮಾಶ್ರಿತ್ಯ ಕೌಂತೇಯಾ ಜಯಂತ್ಯಸ್ಮಾನ್ ಕ್ಷಣೇ ಕ್ಷಣೇ ॥
(ದುರ್ಯೋಧನವಚನ) – ಭಾರತ (ಭೀಷ್ಮ. ೬೫/೩೪)

ಅ: ರಾತ್ರಿಯಲ್ಲಿ ದುರ್ಯೋಧನ ಭೀಷ್ಮರಿದ್ದಲ್ಲಿಗೆ ತೆರಳಿದ. ಭೀಮನ ಬಾಣದಿಂದ ಪೆಟ್ಟು ತಿಂದಿದ್ದ ಅವನ ದೇಹದಲ್ಲಿ ಗಾಯವಾಗಿ ನೆತ್ತರು ಸುರಿಯುತ್ತಿತ್ತು. ಅವನು ಭೀಷ್ಮರನ್ನು ನಮಸ್ಕರಿಸಿ ಕೇಳಿದ - 'ನಾವು ಸದಾ ಸೋಲುತ್ತಿರುವುದೇಕೆ? ಮತ್ತು ಪಾಂಡವರು ಪ್ರತಿನಿತ್ಯ ಜಯಗಳಿಸಿ ನಲಿಯುತ್ತಿರುವುದೇಕೆ?'.

ವಿ: ಪಾಂಡವರು ಸದಾ ಗೆಲ್ಲುವುದು ತಾವು ಸದಾ ಸೋಲುವುದು ಏತಕ್ಕೆ ಎಂಬುದು ದುರ್ಯೋಧನನ ಪ್ರಶ್ನೆ. ಈ ರಾತ್ರಿಯಲ್ಲಿ ಪಾಂಡವರ ಅಪಾರ ಪರಾಕ್ರಮದ ವರ್ಣನೆ ಇದೆ.

ತಮಾಹ ಭೀಷ್ಮಸ್ತೇऽಜೇಯಾ ದೇವಾಸ್ತೇ ಧರಣೀಂ ಗತಾಃ ।
ವಿಶೇಷತಃ ಕೇಶವೇನ ಪಾಲಿತಾಸ್ತತ್ಪ್ರಿಯಾಃ ಸದಾ ॥ ೪೭ ॥

ಅ: ಭೀಷ್ಮರು ಅವನಿಗೆ ತಿಳಿಸಿದರು 'ಅವರು ಭೂಮಿಗಿಳಿದು ಬಂದಿರುವ ಅಜೇಯರಾದ ದೇವತೆಗಳು, ವಿಶೇಷವಾಗಿ ಕೃಷ್ಣನಿಂದ ಪಾಲಿತರಾದವರು, ಸದಾ ಅವನಿಗೆ ಪ್ರೀತಿಪಾತ್ರರು'.

ವಿ: ೧) ಪಾಂಡವರು ಸ್ವರೂಪತಃ ದೇವತೆಗಳಾಗಿರುವುದರೊಂದಿಗೆ ವಿಶೇಷವಾಗಿ ಕೃಷ್ಣನಿಂದ ರಕ್ಷಿತರಾಗಿರುವುದು, ಅವನಿಗೆ ಪ್ರಿಯರಾಗಿರುವುದು ಅವರ ನಿತ್ಯ ಜಯಕ್ಕೆ ಕಾರಣ ಎಂದರ್ಥ.

೨) ಶ್ರೀಹರಿಗೆ ಪ್ರಿಯರಾದವರಿಗೆ ಜಯ ನಿಶ್ಚಿತ ಎಂಬ ತತ್ತ್ವ ಇದರಲ್ಲಿದೆ.

ಮಾನಸೋತ್ತರಶೈಲೇ ಹಿ ಪುರಾ ಬ್ರಹ್ಮಪುರಃಸರಾಃ ।
ಸ್ಥಿತಾ ದೇವಾಸ್ತದಾऽಪಶ್ಯದ್ಬ್ರಹ್ಮೈಕೋ ಹರಿಮಂಬರೇ ॥ ೪೮ ॥

ಅ: ಹಿಂದೆ ಮಾನಸೋತ್ತರ ಪರ್ವತದಲ್ಲಿ ಬ್ರಹ್ಮ ಮೊದಲಾದ ದೇವತೆಗಳೆಲ್ಲ ನೆರೆದಿದ್ದರು, ಆಗ ಬ್ರಹ್ಮನೊಬ್ಬನೇ ಗಗನದಲ್ಲಿ ಹರಿಯನ್ನು ಕಂಡ.

ವಿ: ಈ ಬಗ್ಗೆ ವಿವರಗಳು ಹನ್ನೊಂದನೆಯ ಅಧ್ಯಾಯದಲ್ಲಿ ಬಂದಿವೆ(೧೧/೨೧೫).

ಸ್ತುತ್ವಾ ಸಂಪೂಜ್ಯ ಭೂಮೇಃ ಸ ಭಾರಾವತರಣಾಯ ತಮ್ ।
ಪ್ರಾರ್ಥಯಾಮಾಸ ತೇನೋಕ್ತಂ ದೇವಾನಾಮವದದ್ವಿಭುಃ ॥ ೪೯ ॥

ಅ: ಬ್ರಹ್ಮ ಶ್ರೀಹರಿಯನ್ನು ಸ್ತುತಿಸಿ ಬಹಳವಾಗಿ ಪೂಜಿಸಿ ಭೂಭಾರವನ್ನು ಇಳಿಸಲೆಂದು ಅವನನ್ನು ಕೇಳಿಕೊಂಡ. ಆಗ ಶ್ರೀಹರಿ ತಿಳಿಸಿದ್ದನ್ನು ದೇವತೆಗಳಿಗೆ ಹೇಳಿದ.

ಅಯಂ ನಾರಾಯಣೋ ದೇವಃ ಪೂರ್ಣಾನಂತಗುಣಾರ್ಣವಃ ।
ಆಜ್ಞಾಪಯತಿ ವಃ ಸರ್ವಾನ್ ಪ್ರಾದುರ್ಭಾವಾಯ ಭೂತಲೇ ।
ಸ್ವಯಂ ಚ ದೇವಕೀಪುತ್ರೋ ಭವಿಷ್ಯತಿ ಜಗತ್ಪ್ರಭುಃ ॥ ೫೦ ॥

ಅ: ಇವನು ದೇವನಾದ ನಾರಾಯಣ. ಪೂರ್ಣವೂ, ಅನಂತವೂ ಆದ ಗುಣಸಾಗರ, ಭೂಮಿಯ ಮೇಲೆ ಅವತರಿಸಲೆಂದು ನಿಮಗೆಲ್ಲ ಆದೇಶಿಸಿರುವನು. ಜಗತ್ಪತಿಯಾದ ಅವನು ಸ್ವತಃ ದೇವಕೀತನಯನಾಗಿ ಪ್ರಾದುರ್ಭವಿಸುವನು.

ಏವಂ ತೇನ ಸಮಾದಿಷ್ಟಾ ಧರ್ಮವಾಯ್ವಾದಯೋಽಖಿಲಾಃ।
ಅಭವನ್ ಪಾಂಡವಾದ್ಯಾಸ್ತೇ ಸೇಂದ್ರಾಃ ಸಹಮರುದ್ಗಣಾಃ ॥ ೫೧ ॥

ಅ: ಹೀಗೆ ಬ್ರಹ್ಮದೇವರಿಂದ ಆಜ್ಞಪ್ತರಾದ ಯಮ, ವಾಯು ಮೊದಲಾದ ದೇವತೆಗಳು, ಇಂದ್ರ ಮತ್ತು ಮರುದ್ಗಣಗಳೊಂದಿಗೆ ಪಾಂಡವರೇ ಮೊದಲಾದವರಾಗಿ ಅವತರಿಸಿದರು.

ಸ ಚ ನಾರಾಯಣೋ ದೇವೋ ದೇವಕೀನಂದನೋಽಭವತ್।
ತೇನೈತೇ ಪಾಲಿತಾಃ ಪಾರ್ಥಾ ಅಜೇಯಾ ದೇವಸರ್ಗಿಣಃ ।
ತಸ್ಮಾತ್ ತೈಃ ಸಂಧಿಮನ್ವಿಚ್ಛ ಯದೀಚ್ಛಸ್ಯಪರಾಭವಮ್ ॥ ೫೨ ॥

ಅ: ದೇವನಾದ ಆ ನಾರಾಯಣನು ದೇವಕೀನಂದನನಾಗಿ ಪ್ರಾದುರ್ಭವಿಸಿರುವನು. ಅವನಿಂದ ಪಾಲಿತರಾಗಿರುವ ಪಾಂಡವರು ಅಜೇಯರಾಗಿರುವ ದೇವಾಂಶಸಂಭೂತರು. ನೀನು ಸೋಲನ್ನು ಬಯಸೆಯಾದರೆ, ಅವರೊಂದಿಗೆ ಸಂಧಿ ಮಾಡಿಕೊ.

ವಿ: ಭೀಷ್ಮರು ಹೀಗೆ ಶ್ರೀಕೃಷ್ಣ ಹಾಗೂ ಪಾಂಡವರ ಅವತಾರದ ಹಿನ್ನೆಲೆಯನ್ನು ನಿರೂಪಿಸಿದ ಈ ಭಾಗ ಮಹಾಭಾರತದಲ್ಲಿ ಭೀಷ್ಮಪರ್ವದಲ್ಲಿ **ವಿಶ್ವೋತ್ಪಾಖ್ಯಾನ** ಎಂಬುದಾಗಿ ಪ್ರಸಿದ್ಧವಾಗಿದೆ (ಭೀಷ್ಮ. ಅಧ್ಯಾಯ ೬೫ – ೬೮).

---

೫೨. ಏವಮೇವಂ ವಿಜಾನೀಹಿ ಆಚಾರ್ಯಂ ಪಿತರಂ ಗುರುಮ್ ।
ಕೃಷ್ಣೋ ಯಸ್ಯ ಪ್ರಸೀದೇತ ಲೋಕಾಸ್ತೇನಾಕ್ಷಯಾ ಜಿತಾಃ ॥
ಯೇ ಚ ಕೃಷ್ಣಂ ಪ್ರಪದ್ಯಂತೇ ತೇ ನ ಮುಹ್ಯಂತಿ ಮಾನವಾಃ ।
ಭಯೇ ಮಹತಿ ಮಗ್ನಾಂಶ್ಚ ಪಾತಿ ನಿತ್ಯಂ ಜನಾರ್ದನಃ ॥ (ಭೀಷ್ಮರ ವಚನ) – ಭಾರತ (ಭೀಷ್ಮ. ೬೭/೨೨,೨೪)

೫೩. ಮನ್ಯೇ ತ್ವಾಂ ರಾಕ್ಷಸಂ ಕ್ರೂರಂ ತಥಾ ಚಾಸಿ ತಮೋವೃತಃ ।
ಯಸ್ಮಾದ್ ದ್ವಿಷಸಿ ಗೋವಿಂದಂ ಪಾಂಡವಂ ತಂ ಧನಂಜಯಮ್ ॥ – ಭಾರತ (ಭೀಷ್ಮ. ೬೬/೩೧)

ದುರ್ಯೋಧನನ ಡಂಭಬುದ್ಧಿ

ಇತ್ಯುಕ್ತ್ವೋ ಡಂಭಬುದ್ಧ್ಯೈವ ನತ್ವಾ ವಿಷ್ಣುಂ ತತೋ ಯಯೌ ।
ಪ್ರಾತರ್ನಿರ್ಯಾತಯಾಮಾಸ ಸೇನಾಂ ಯುದ್ಧಾಯ ದುರ್ಮತಿಃ ॥ ೫೩ ॥

ಅ: ಭೀಷ್ಮರು ಹೀಗೆನ್ನಲು ದುರ್ಯೋಧನ ಕಪಟದಿಂದಲೇ ಶ್ರೀಹರಿಗೆ ನಮಸ್ಕರಿಸಿ ಅಲ್ಲಿಂದ ತೆರಳಿದ. ದುರ್ಬುದ್ಧಿಯವನಾದ ಅವನು ಬೆಳಿಗ್ಗೆ ಯುದ್ಧಕ್ಕೆ ತನ್ನ ಸೇನೆಯನ್ನು ಹೊರಡಿಸಿದ.

ವಿ: ೧) ಶ್ರೀಕೃಷ್ಣನನ್ನು ಹಾಗೆ ಭೀಷ್ಮರು ವರ್ಣಿಸಿದಾಗ ದುರ್ಯೋಧನ ಕೃಷ್ಣನನ್ನು ದೊಡ್ಡವ–ನೆಂದು ತಿಳಿದ ಉಲ್ಲೇಖ ಮಹಾಭಾರತದಲ್ಲಿದೆ :

ಪುಣ್ಯಂ ಶ್ರುತ್ವೈದಖ್ಯಾನಂ ಮಹಾರಾಜ ಸುತಸ್ತವ ।
ಕೇಶವಂ ಬಹು ಮೇನೇ ಸ ಪಾಂಡವಾಂಶ್ಚ ಮಹಾರಥಾನ್॥

– ಭಾರತ(೬/೬೮/೧೩)

ಆದರೆ ಅದು ಭಕ್ತಿಪೂರ್ವಕವಾದ ನಮಸ್ಕಾರವಾಗಿರದೆ, ಡಂಭಬುದ್ಧಿಯ ನಮಸ್ಕಾರ–ವಾಗಿತ್ತು.

೨) ಅದಕ್ಕೆ ಮಾರನೆಯ ದಿನ ಅವನು ಭೀಷ್ಮರ ಮಾತಿನಂತೆ ಸಂಧಾನಕ್ಕೆ ಸಿದ್ಧನಾಗದೆ ಪುನಃ ಯುದ್ಧಕ್ಕೆ ತೆರಳಿದ್ದೇ ನಿದರ್ಶನ ಎಂದು ತಿಳಿಯಬೇಕು.

ಐದನೆಯ ದಿನದ ಯುದ್ಧ

ದಿವ್ಯೌಷಧೇನ ಭೀಷ್ಮಸ್ಯ ಭೂತ್ವಾ ಚ ನಿರುಜಸ್ತತಃ ।
ಭೀಷ್ಮಮಗ್ರೇ ನಿಧಾಯೈವ ಯಯೌ ಯುದ್ಧಾಯ ದಂಶಿತಃ ॥ ೫೪ ॥

ಅ: ಭೀಷ್ಮರ ದಿವ್ಯೌಷಧದ ಪ್ರಭಾವದಿಂದ ದುರ್ಯೋಧನ ನೋವು ನೀಗಿದವನಾಗಿ ಕವಚಾದಿಗಳನ್ನು ಧರಿಸಿ ಭೀಷ್ಮರನ್ನು ಮುಂದಿಟ್ಟುಕೊಂಡು ಯುದ್ಧಕ್ಕೆ ತೆರಳಿದ.

---

೫೩. ರಾಜಾ ಚ ಶಿಬಿರಂ ಪ್ರಾಯಾತ್ ಪ್ರಣಿಪತ್ಯ ಮಹಾತ್ಮನೇ ।
ಶಿಶ್ಯೇ ಚ ಶಯನೇ ಶುಭ್ರೇ ರಾತ್ರಿಂ ತಾಂ ಭರತರ್ಷಭ ॥ – ಭಾರತ (ಭೀಷ್ಮ. ೬೮/೨೦)

೫೪. ಯಯೌ ಯುದ್ಧಾಯ ದಂಶಿತ ಇತ್ಯತ್ರ ''ಸನ್ನದ್ಧೋ ದಂಶಿತಸ್ತಥಾ'' ಇತ್ಯನುಶಾಸನಾತ್ ಕವಚಾದಿಯುದ್ಧ-ಸನ್ನಾಹವಾನಿತ್ಯರ್ಥಃ ॥ – (ವಾ.)

೫೪. ನಿರುಜೋ ಭೂತ್ವಾ ನಿರೋಗೋ ಭೂತ್ವಾ। ನಿರುಜ ಇತಿಟಾಪಂಚೈವೇತ್ಯಜಂತಃ ದಂಶಿತಃ ಕವಚೀ। – (ಜ.)

ಭೀಮನ ಅಪೂರ್ವ ಪರಾಕ್ರಮ

ತತ್ರಾಽಸೀದ್ಯುದ್ಧಮತುಲಂ ಭೀಮಭೀಷ್ಮಾನುಯಾಯಿನಾಮ್ ।
ಪಾಂಡವಾನಾಂ ಕುರೂಣಾಂ ಚ ಶೂರಾಣಾಮನಿವರ್ತಿನಾಮ್ ॥ ೫೫ ॥

ಅ: ಅಂದು ಶೂರರೂ, ಯುದ್ಧದಲ್ಲಿ ಹಿಮ್ಮೆಟ್ಟದವರೂ ಆದ ಭೀಮಾನುಯಾಯಿಗಳಾದ ಪಾಂಡವರಿಗೂ, ಭೀಷ್ಮಾನುಯಾಯಿಗಳಾದ ಕೌರವರಿಗೂ ದೊಡ್ಡ ಯುದ್ಧ ನಡೆಯಿತು.

ಧೃಷ್ಟದ್ಯುಮ್ನಸ್ತತ್ರ ಭೀಮಾನುಯಾಯೀ
ದುರ್ಯೋಧನಸ್ಯಾವರಜೈಃ ಪ್ರಯುಧ್ಯನ್।
ಸಮ್ಮೋಹನಾಸ್ತ್ರೇಣ ವಿಮೋಹಯಿತ್ವಾ
ವಿಕರ್ಣಪೂರ್ವಾನಹನಚ್ಚ ಸೇನಾಮ್ ॥ ೫೬ ॥

ಅ: ಧೃಷ್ಟದ್ಯುಮ್ನ ಭೀಮನನ್ನು ಹಿಂಬಾಲಿಸಿ ದುರ್ಯೋಧನನ ತಮ್ಮಂದಿರೊಂದಿಗೆ ಯುದ್ಧ ಮಾಡುತ್ತಾ ವಿಕರ್ಣ ಮೊದಲಾದವರನ್ನು ಸಮ್ಮೋಹನಾಸ್ತ್ರದಿಂದ ಮೂರ್ಛಿತರನ್ನಾಗಿ ಮಾಡಿ ಸೇನೆಯನ್ನು ನಾಶಮಾಡತೊಡಗಿದ.

ವಿ: ೧) ಸಮ್ಮೋಹನಾಸ್ತ್ರ ಎಂಬುದು ಅರಿವಳಿಕೆ ಇದ್ದಂತೆ, ಅಂತಹ ಅಸ್ತ್ರವೊಂದನ್ನು ಪ್ರಯೋಗಿಸಿ ಅರ್ಜುನ ಉತ್ತರ ಗೋಗ್ರಹಣ ಪ್ರಸಂಗದಲ್ಲಿ ಭೀಷ್ಮರ ಹೊರತು ಉಳಿದೆಲ್ಲರನ್ನೂ ಗಾಢ ಮೂರ್ಛೆಗೆ ಒಳಗಾಗಿಸಿದ್ದ ವಿವರ ಈಗಾಗಲೇ ಬಂದಿದೆ (೨೩/೪೩).

೨) ಅಲ್ಲಿ ಅದರಿಂದ ಸ್ವತಃ ಮೂರ್ಛೆಗೊಳಗಾಗಿದ್ದ ದ್ರೋಣರು ಇಲ್ಲಿ ತಾವು ಮೂರ್ಛೆಗೊಳಗಾಗದೇ ವಿಜ್ಞಾನಾಸ್ತ್ರದಿಂದ ಎಚ್ಚರಿಸಲು ಸಾಧ್ಯವಾಗಿದ್ದು ಈ ಸಮ್ಮೋಹನಾಸ್ತ್ರ ಬೇರೆ ಬಗೆಯದಾಗಿತ್ತು ಎಂಬುದಕ್ಕೆ ದ್ಯೋತಕ ಎಂದು ತಿಳಿಯಬಹುದು.

ತತೋ ದ್ರೋಣಸ್ತಾನ್ ಸಮುತ್ಥಾಪ್ಯ ಸರ್ವಾನ್
ವಿಜ್ಞಾನಾಸ್ತ್ರೇಣಾಸದತ್ ಪಾರ್ಷತಂ ಚ ।
ತಂ ಭೀಮಸೇನಃ ಸೂತಹೀನಂ ವಿಧಾಯ
ವ್ಯದ್ರಾವಯಚ್ಛತ್ರುಗಣಾನ್ಶರೌಘೈಃ ॥ ೫೭ ॥

ಅ: ಆಗ ದ್ರೋಣರು ವಿಜ್ಞಾನಾಸ್ತ್ರದಿಂದ ಅವರೆಲ್ಲರನ್ನೂ ಪ್ರಜ್ಞೆ ಮರಳಿದವರನ್ನಾಗಿ ಮಾಡಿ ಧೃಷ್ಟದ್ಯುಮ್ನನ ಮೇಲೆ ಏರಿ ಹೋದರು. ಭೀಮಸೇನ ದ್ರೋಣರನ್ನು ಸೂತಹೀನರನ್ನಾಗಿ ಮಾಡಿ, ಬಾಣಗಳ ಸಮೂಹಗಳಿಂದ ಶತ್ರುಗಳ ಸಮೂಹಗಳನ್ನು ಓಡಿಸಿದ.

ಅಥಾಸದತ್ ಕೃತವರ್ಮಾ ರಥೇನ
ಧೃಷ್ಟದ್ಯುಮ್ನಂ ಸೋಽಭ್ಯಯಾತ್ ತಾವುಭೌ ಚ ।
ವವರ್ಷತುಃ ಶರವರ್ಷೈರಥೋಗ್ರೈ-
ಸ್ತತ್ರಾಕರೋದ್ದ್ವಿರಥಂ ದ್ರೌಪದಿಸ್ತಮ್ ॥ ೫೮ ॥

ಅ: ಬಳಿಕ ಕೃತವರ್ಮ ರಥದಿಂದ ಧೃಷ್ಟದ್ಯುಮ್ನನನ್ನು ಎದುರಿಸಿ ಬಂದ. ಅವರಿಬ್ಬರೂ ಭಯಂಕರವಾದ ಶರವೃಷ್ಟಿಯನ್ನು ಪರಸ್ಪರ ಸುರಿಸಿಕೊಂಡರು. ಧೃಷ್ಟದ್ಯುಮ್ನ ಕೃತವರ್ಮನನ್ನು ವಿರಥನನ್ನಾಗಿ ಮಾಡಿದ.

ತಸ್ಮಿನ್ ಜಿತೇ ರಥವೀರೇ ಸ್ವಯಂ ತಂ
ದುರ್ಯೋಧನಃ ಪಾರ್ಷತಮಾಸಸಾದ ।
ತಂ ಭೀಮಸೇನೋ ವಿರಥಾಯುಧಂ ಚ
ಕೃತ್ವಾ ಬಾಣೇನಾಹನಜ್ಜತ್ರುದೇಶೇ ॥ ೫೯ ॥

ಅ: ಮಹಾರಥಿಕನಾದ ಕೃತವರ್ಮ ಹಾಗೆ ಸೋಲಲು ದುರ್ಯೋಧನ ಧೃಷ್ಟದ್ಯುಮ್ನನ ಮೇಲೆ ಏರಿಹೋದ. ಭೀಮಸೇನ ದುರ್ಯೋಧನನನ್ನು ವಿರಥನನ್ನಾಗಿಯೂ, ಆಯುಧರಹಿತನನ್ನಾಗಿಯೂ ಮಾಡಿ ಒಂದು ಬಾಣದಿಂದ ಅವನ ಕಂಠದ ಬಳಿಯ ಪ್ರದೇಶದಲ್ಲಿ ಜೋರಾಗಿ ಹೊಡೆದ.

ವಿಮೂರ್ಛಿತಂ ತಂ ರುಧಿರೌಘಮುಚ್ಚೈ-
ರ್ವಮಂತಮಾಶು ಸ್ವರಥೇ ನಿಧಾಯ ।
ಕೃಪೋ ಯಯೌ ಮಾರುತಿರ್ಧಾರ್ತರಾಷ್ಟ್ರೀಂ
ವ್ಯದ್ರಾವಯತ್ ಪೃತನಾಂ ಬಾಣಪೂಗೈಃ ॥ ೬೦ ॥

ಅ: ರಕ್ತದ ಪ್ರವಾಹವನ್ನು ಕಾರುತ್ತಾ ಗಾಢವಾಗಿ ಮೂರ್ಛಿತನಾಗಿ ಬಿದ್ದ ದುರ್ಯೋಧನನನ್ನು ಕೃಪ ಕೂಡಲೇ ತನ್ನ ರಥದಲ್ಲಿ ಹಾಕಿಕೊಂಡು ತೆರಳಿದ. ಭೀಮಸೇನನು ಕೌರವ ಸೇನೆಯನ್ನು ಬಾಣಗಳ ಪ್ರವಾಹದಿಂದ ಹೊಡೆದೋಡಿಸತೊಡಗಿದ.

---

೫೯. ಜತ್ರುದೇಶೇ ಕಂಠೋರಃಸಂಧೌ। – (ಜ.)

ಅರ್ಜುನನ ಪರಾಕ್ರಮ

ಅಥೇಂದ್ರಸೂನುಃ ಕೇಶವಪ್ರೇರಿತೇನ
ರಥೇನ ಶತ್ರೂನ್ ವಿಧಮನ್ ಶರೌಘೈಃ ।
ರಥಾನ್ ರಣೇ ಪಂಚವಿಂಶತ್ಸಹಸ್ರಾನ್
ನಿನಾಯ ವೈವಸ್ವತಸಾದನಾಯ ॥ ೬೧ ॥

ಅ: ಬಳಿಕ ಶ್ರೀಕೃಷ್ಣ ಓಡಿಸುತ್ತಿದ್ದ ರಥದೊಂದಿಗೆ ಅರ್ಜುನ ಬಾಣಗಳ ಪ್ರವಾಹಗಳಿಂದ ಶತ್ರುಗಳನ್ನು ಕಂಗೆಡಿಸುತ್ತಾ ಇಪ್ಪತ್ತೈದು ಸಾವಿರ ರಥಿಕರನ್ನು ಯಮಪುರಿಗೆ ಅಟ್ಟಿದ.

ವಿ: ಇಪ್ಪತ್ತೈದು ಸಾವಿರ ರಥಿಕರನ್ನು ಅಷ್ಟು ಅಲ್ಪ ಕಾಲದಲ್ಲಿ ಸಂಹರಿಸಿದ ಅರ್ಜುನನ ಪರಾಕ್ರಮ ಎಷ್ಟು ಅಮೋಘ ಎಂಬುದು ಗಮನಾರ್ಹ.

ಸಾತ್ಯಕಿ ಭೂರಿಶ್ರವರ ಯುದ್ಧ

ತಮನ್ವಯಾದ್ಯುಯುಧಾನಃ ಸುಧನ್ವಾ
ವಿದ್ರಾವಯನ್ ಧಾರ್ತರಾಷ್ಟ್ರಸ್ಯ ಸೇನಾಮ್ ।
ತಮಭ್ಯಯಾತ್ ಸೌಮದತ್ತಿಸ್ತಥೋಶ್ಚ
ಸುಯುದ್ಧಮಾಸೀದತಿಭೈರವಾಸ್ತ್ರಮ್ ॥ ೬೨ ॥

ಅ: ಉತ್ತಮ ಧನುರ್ಧಾರಿಯಾದ ಸಾತ್ಯಕಿ ಕೌರವ ಸೇನೆಯನ್ನು ಹೊಡೆದಟ್ಟುತ್ತಾ ಅರ್ಜುನನನ್ನು ಹಿಂಬಾಲಿಸಿದ. ಅವನನ್ನು ಎದುರಿಸಿ ಭೂರಿಶ್ರವಸ್ ತೆರಳಿದ. ಅವರಿಬ್ಬರೊಳಗೆ ಅತ್ಯಂತ ಭಯಂಕರವಾದ ಅಸ್ತ್ರಗಳಿಂದ ದೊಡ್ಡ ಯುದ್ಧ ನಡೆಯಿತು.

ಭೂರಿಶ್ರವನಿಂದ ಸಾತ್ಯಕಿಯ ದಶಪುತ್ರರ ವಧೆ

ಪುತ್ರಾನ್ ದಶಾಸ್ಯಾಶು ನಿಹತ್ಯ ವೀರಃ
ಸ ಸಾತ್ಯಕೇಃ ಸೌಮದತ್ತಿಃ ಸಕಾಶೇ ।
ಸಮರ್ಪಯಾಮಾಸ ಶರೀರದಾರಣೈಃ
ಶರೈರುಭೌ ತೌ ವಿರಥೌ ಚ ಚಕ್ರತುಃ ॥ ೬೩ ॥

---

೬೧. ವಿಧಮನ್ ಸಂತಾಪಯನ್। – (ಜ.)

೬೨. ಅತಿಭೈರವಾಸ್ತ್ರಂ ಅತಿಶಯೇನ ಭಯಂಕರಾಣ್ಯಸ್ತ್ರಾಣಿ ಯಸ್ಮಿನ ಯುದ್ಧೇ ತತ್ತಥಾ। – (ಜ.)

ಅ: ವೀರನಾದ ಭೂರಿಶ್ರವಸ್ ಸಾತ್ಯಕಿಯ ಎದುರೇ ಅವನ ಹತ್ತು ಮಕ್ಕಳನ್ನು ಸಂಹರಿಸಿ ಬೀಳಿಸಿದ. ಶರೀರವನ್ನು ಸೀಳಿ ಹಾಕುವಂತಹ ಬಾಣಗಳಿಂದ ಅವನನ್ನೂ ಪೀಡಿಸಿದ. ಅವರಿಬ್ಬರೂ ಪರಸ್ಪರರನ್ನು ವಿರಥರನ್ನಾಗಿ ಮಾಡಿಕೊಂಡರು.

ವಿ: ಸಾತ್ಯಕಿಯೊಂದಿಗೆ ಅವನ ಹತ್ತು ಮಕ್ಕಳೂ ಸಹ ಆ ಯುದ್ಧದಲ್ಲಿ ಪಾಲ್ಗೊಂಡ ವಿವರ ಇಲ್ಲಿದೆ.

ಸೌಮದತ್ತಿಸ್ತತಃ ಕ್ರುದ್ಧಸ್ತೇಷಾಂ ಚಾಪಾನಿ ಭಾರತ ।
ಚಿಚ್ಛೇದ ಸಮರೇ ರಾಜನ್ ಯುದ್ಧ್ಯಮಾನೋ ಮಹಾರಥೈಃ ॥

– ಭಾರತ (ಭೀಷ್ಮ. ೭೪/೨೪)

ಭೀಮನಿಂದ ಸಾತ್ಯಕಿಯ ರಕ್ಷಣೆ

ಅಥಾಸಿಪಾಣಿಂ ಯುಯುಧಾನಮಾಶು
ಮಹಾಸಿಹಸ್ತೇನ ಚ ಸೌಮದತ್ತಿನಾ ।
ಆಸಾದಿತಂ ವೀಕ್ಷ್ಯ ರಥಂ ಸ್ವಕೀಯ-
ಮಾರೋಪಯಾಮಾಸ ಸುತೋಽನಿಲಸ್ಯ ॥ ೬೪ ॥

ಅ: ಬಳಿಕ ಖಡ್ಗ ಹಿಡಿದು ಬಂದ ಸಾತ್ಯಕಿಯನ್ನು ಸೌಮದತ್ತಿಯು ಮಹಾ ಖಡ್ಗಪಾಣಿಯಾಗಿ ಎದುರಿಸಿ ಹೊರಟದ್ದನ್ನು ಕಂಡು ಭೀಮಸೇನ ಸಾತ್ಯಕಿಯನ್ನು ತನ್ನ ರಥವನ್ನೇರಿಸಿಕೊಂಡ.

ವಿ: ೧) ಸಾತ್ಯಕಿ ಭೂರಿಶ್ರವರಿಬ್ಬರು ಮೂಲತಃ ತುಂಬ ಸಾತ್ವಿಕರು, ದುರ್ಯೋಧನನಿಂದಾಗಿ ಅಂಥವರ ಮಧ್ಯೆಯೂ ಹೀಗೆ ಹೋರಾಟ ಸಾಗಿತ್ತು. ಆಗ ನಡೆಯಬಹುದಿದ್ದ ಮಹಾ ಭಯಂಕರವಾದ ಯುದ್ಧವನ್ನು ಭೀಮಸೇನ ಸಾತ್ಯಕಿಯನ್ನು ತನ್ನ ರಥದಲ್ಲಿ ಕೂಡಿಸಿಕೊಳ್ಳುವ ಮೂಲಕ ತಡೆದ.

೨) ವೈಷ್ಣವರ ಮಧ್ಯೆ ನಡೆಯುವ ಹೋರಾಟವನ್ನು ಯಾವುದೇ ರೀತಿಯಲ್ಲಿ ನಿಲ್ಲಿಸುವುದು ಸಹ ಹರಿಪ್ರೀತಿಕರವಾದ ಧರ್ಮ ಎಂದು ಜಗತ್ತಿಗೆ ಆ ಮೂಲಕ ತೋರಿದ ಎಂದು ತಿಳಿಯಬಹುದು.

ಸುಯೋಧನಃ ಸೌಮದತ್ತಿಂ ಸ್ವಕೀಯ-
ರಥೇ ವ್ಯವಸ್ಥಾಪ್ಯ ಚ ಭೀಮಸೇನಾತ್ ।
ಅಪಾದ್ರವದ್ವಾಸವಿರ್ಭೀಷ್ಮಮಾಜೌ
ಸಮಾಸಸಾದಾಶು ಮಹೇಂದ್ರಕಲ್ಪಃ ॥ ೬೫ ॥

ಅ: ದುರ್ಯೋಧನ ಭೂರಿಶ್ರವಸ್ಸನ್ನು ತನ್ನ ರಥದಲ್ಲಿ ಕೂಡಿಸಿಕೊಂಡು ಭೀಮಸೇನನಿಂದ ದೂರಕ್ಕೆ ಪಲಾಯನ ಮಾಡಿದ. ಮಹೇಂದ್ರನಿಗೆ ಸಮನಾದ ಅರ್ಜುನ ಯುದ್ಧದಲ್ಲಿ ಭೀಷ್ಮರನ್ನು ಎದುರಿಸಿದ.

ವಿ: ೧) ಭೀಮ ಸಾತ್ಯಕಿಯನ್ನು ತನ್ನ ರಥದಲ್ಲಿ ಕೂಡಿಸಿಕೊಂಡಂತೆ, ದುರ್ಯೋಧನ ಭೂರಿಶ್ರವಸ್ಸನ್ನು ತನ್ನ ರಥದಲ್ಲಿ ಕೂಡಿಸಿಕೊಂಡ; ಭೀಮನನ್ನು ಎದುರಿಸಲಾಗದೆ ಪಲಾಯನವನ್ನೇ ಮಾಡಿದ.

೨) ಕಲಿ ವಾಯುವಿಗೆ ಅಂಜುವುದಕ್ಕೆ ಇದೊಂದು ಉತ್ತಮ ನಿದರ್ಶನ. ಅರ್ಜುನ ಸಾಕ್ಷಾತ್ ಇಂದ್ರಾವತಾರನೇ ಆದ್ದರಿಂದ ಅವನನ್ನು '**ಮಹೇಂದ್ರಕಲ್ಪಃ**' ಎಂದು ಕರೆದಿರುವುದು ಸಾರ್ಥಕ.

ಆರನೆಯ ದಿನದ ಯುದ್ಧ

ಉಭೌ ಚ ತಾವಸ್ತ್ರವಿದಾಂ ಪ್ರಬರ್ಹೌ
ಶರೈರ್ಮಹಾಶೀವಿಷಸನ್ನಿಕಾಶೈಃ ।
ತತಕ್ಷತುರ್ನಾಕಸದಾಂ ಸಮಕ್ಷಂ
ಮಹಾಬಲೌ ಸಂಯತಿ ಜಾತದರ್ಪೌ ॥ ೬೬ ॥

ಅ: ದೇವತೆಗಳು ನೋಡುತ್ತಿದ್ದಂತೆಯೇ ಮಹಾಬಲಿಷ್ಠರೂ, ಸ್ವಾಭಿಮಾನಿಗಳೂ, ಅಸ್ತ್ರಜ್ಞ-ರಲ್ಲಿ ಶ್ರೇಷ್ಠರೂ ಆದ ಭೀಷ್ಮಾರ್ಜುನರು ಮಹಾಸರ್ಪದ ವಿಷಕ್ಕೆ ಸದೃಶವಾದ ಬಾಣಗಳಿಂದ ಒಬ್ಬರನ್ನೊಬ್ಬರು ಯುದ್ಧದಲ್ಲಿ ನೋಯಿಸಿಕೊಂಡರು.

ವಿ: ಭೀಷ್ಮಾರ್ಜುನರ ಆ ಅಮೋಘವಾದ ಯುದ್ಧವನ್ನು ದೇವತೆಗಳು ಗಗನದಲ್ಲಿ ನೆರೆದು ನೋಡುತ್ತಿದ್ದರು ಎಂಬುದು ವಿಶೇಷ.

ಅರ್ಜುನನಿಂದ ಭೀಷ್ಮರ ಪರಾಭವ

ಸ್ವಬಾಹುವೀರ್ಯೇಣ ಜಿತಃ ಸ ಭೀಷ್ಮಃ
ಕಿರೀಟಿನಾ ಲೋಕಮಹಾರಥೇನ ।
ಸೇನಾಮಪಾಹೃತ್ಯ ಯಯೌ ನಿಶಾಯಾ-
ಮಾಸಾದಿತಾಯಾಮಥ ಪಾಂಡವಾಶ್ಚ ॥ ೬೭ ॥

ಅ: ಲೋಕದಲ್ಲಿ ಮಹಾರಥನಾದ ಅರ್ಜುನನು ಭೀಷ್ಮರನ್ನು ತನ್ನ ಬಾಹುಬಲದಿಂದ ಪರಾಭವಗೊಳಿಸಿದ. ಭೀಷ್ಮ ಸೇನೆಯನ್ನು ಹಿಂತೆಗೆದುಕೊಂಡ. ರಾತ್ರಿ ಕವಿಯುತ್ತಿದ್ದರಿಂದ ಪಾಂಡವರೂ ಸೇನೆಯನ್ನು ಹಿಂತೆಗೆದುಕೊಂಡರು.

ವಿ: ಈ ಹಂತದಲ್ಲಿ ಅಂದಿನ ಯುದ್ಧ ಮುಗಿದು ಉಭಯ ಪಕ್ಷದವರೂ ಶಿಬಿರಗಳಿಗೆ ಮರಳಿದರು ಎಂದರ್ಥ. ಕೌರವರು ತೆರಳಿದ್ದು ಪರಾಭವಗೊಂಡಾದರೆ, ಪಾಂಡವರು ತೆರಳಿದ್ದು ಕತ್ತಲಾಯಿತೆಂದು ಎಂಬುದು ವಿಶೇಷ.

ಏಳನೆಯ ದಿನದ ಯುದ್ಧ - ಭೀಮನ ಪರಾಕ್ರಮ

ತತಃ ಪರೇದ್ಯುಃ ಪುನರೇವ ಭೀಮ-
ಭೀಷ್ಮೌ ಪುರಸ್ಕೃತ್ಯ ಸಮೀಯತುಸ್ತೇ ।
ಸೇನೇ ತದಾ ಸಾರಥಿಹೀನಮಾಶು
ಭೀಷ್ಮಂ ಕೃತ್ವಾ ಮಾರುತಿರಭ್ಯಗಾತ್ ಪರಾನ್ ॥ ೬೮ ॥

ಅ: ಮಾರನೆಯ ದಿನ ಭೀಮ, ಭೀಷ್ಮರನ್ನು ಮುಂದಿರಿಸಿಕೊಂಡು ಆ ಎರಡೂ ಸೇನೆಗಳು ಮತ್ತೆ ಯುದ್ಧಕ್ಕೆ ತೊಡಗಿದವು. ಭೀಮಸೇನ ಕೂಡಲೇ ಭೀಷ್ಮರನ್ನು ಸಾರಥಿರಹಿತನನ್ನಾಗಿ ಮಾಡಿ ಶತ್ರುಗಳ ಮೇಲೆ ನುಗ್ಗಿದ.

ನಿಪಾತಿತಾಸ್ತೇನ ರಥೇಭವಾಜಿನಃ
ಪ್ರದುದ್ರುವುಶ್ಚಾವಶಿಷ್ಟಾಃ ಸಮಸ್ತಾಃ ।
ದುರ್ಯೋಧನಾದ್ಯೇಷು ಪರಾಜಿತೇಷು
ಭೀಷ್ಮದ್ರೋಣದ್ರೌಣಿಪುರಃಸರೇಷು ॥ ೬೯ ॥

ಅ: ದುರ್ಯೋಧನ, ಭೀಷ್ಮ, ದ್ರೋಣ, ಅಶ್ವತ್ಥಾಮ ಮೊದಲಾದವರೆಲ್ಲ ಪಲಾಯನ ಮಾಡಲು ಭೀಮಸೇನ ರಥಗಳನ್ನು, ಆನೆಗಳನ್ನು, ಕುದುರೆಗಳನ್ನು ಕೊಂದು ಬೀಳಿಸಿದ. ಉಳಿದವರೆಲ್ಲ ದಿಕ್ಕೆಟ್ಟು ಓಡತೊಡಗಿದರು.

---

೬೯. ತೇನ ಭೀಮೇನ ರಥಾಃ ಇಭಾಃ ಗಜಾಃ ವಾಜಿನೋಽಶ್ವಾಃ ಯೇಷಾಂ ತೇ ತಥಾ । ರಥಾದಿಮಂತೋ ವೀರಾಃ ನಿಪಾತಿತಾಃ ಹತಾಃ । ಅವಶಿಷ್ಟಾಃ ಉರ್ವರಿತಾಃ ಪ್ರದುದ್ರುವುಃ । ಪರಾಜಿತೇಷು ಭೀಮಸೇನೇತಿ ಶೇಷಃ ॥ – (ಜ.)

ಭಗದತ್ತ ಘಟೋತ್ಕಚರ ಯುದ್ಧ

ಮಹಾಗಜಸ್ಥೋ ಭಗದತ್ತ ಆಗಾ-
ದಾಯನ್ ಬಾಣಾನ್ ಭೀಮಸೇನೇऽಮುಚಚ್ಚ ।
ತೇನಾತಿವಿದ್ಧೋ ಭೀಮಸೇನೇऽಸ್ಯ ಪುತ್ರ
ಉದ್ಯಚ್ಛಮಾನಂ ಪಿತರಂ ನಿವಾರ್ಯ ।
ಘಟೋತ್ಕಚೋऽಭ್ಯದ್ರವದಾಶು ವೀರಃ
ಸ್ವಮಾಯಯಾ ಹಸ್ತಿಚತುಷ್ಪಯಸ್ಥಃ ॥ ೭೦ ॥

ಅ: ಆಗ ದೊಡ್ಡ ಆನೆಯನ್ನೇರಿ ಭಗದತ್ತ ಆಗಮಿಸಿದ. ಭೀಮಸೇನನ ಮೇಲೆ ಬಾಣಗಳನ್ನು ಬಿಡತೊಡಗಿದ. ಭೀಮನ ಮೇಲೆ ಬಾಣಗಳು ಬಹಳವಾಗಿ ಬೀಳುತ್ತಿರಲು ಅವನ ಪುತ್ರನಾದ ವೀರ ಘಟೋತ್ಕಚ ಮುನ್ನುಗ್ಗುತ್ತಿದ್ದ ತಂದೆಯನ್ನು ತಡೆದು ತನ್ನ ಮಾಯೆಯಿಂದ ನಾಲ್ಕು ಆನೆಗಳ ಮೇಲೆ ನಾಲ್ಕು ರೂಪಗಳಿಂದ ಕುಳಿತು ಭಗದತ್ತನನ್ನು ಎದುರಿಸಿದ.

ವಿ: ೧) ಸುಪ್ರತೀಕವೆಂಬ ದಿಗ್ಗಜದ ಮೇಲೆ ಭಗದತ್ತ ಯುದ್ಧ ಮಾಡುತ್ತಿದ್ದುದರಿಂದ ಘಟೋತ್ಕಚ ತಾನೂ ನಾಲ್ಕು ಆನೆಗಳ ಮೇಲೆ ನಾಲ್ಕು ರೂಪಗಳಿಂದ ಕುಳಿತು ಅವನನ್ನು ಎದುರಿಸಿದ ಎಂದರ್ಥ.

೨) ತನ್ನ ಮಗನೇ ಅವನನ್ನು ಎದುರಿಸಿ ಜಯಿಸುತ್ತಿರುವಾಗ ತನ್ನ ಹಿರಿಮೆ ಕೈಮುತ್ಯ ಸಿದ್ಧ ಎಂಬುದನ್ನು ಭೀಮಸೇನ ತೋರಿಸಲೆಂದು ತಾನಾಗಿಯೇ ಭಗದತ್ತನನ್ನು ಎದುರಿಸಿ ಹೋಗಲಿಲ್ಲ ಎಂದು ತಿಳಿಯಬೇಕು. ಆ ರೀತಿಯಾಗಿ ಘಟೋತ್ಕಚ ನಾಲ್ಕು ಆನೆಗಳ ಮೇಲೆ ನಾಲ್ಕು ರೂಪಗಳಲ್ಲಿ ಕುಳಿತು ಹೋರಾಡಿದ.

೩) ಭಗದತ್ತ ಉತ್ತರದಿಕ್ಪಾಲಕನಾದ ಕುಬೇರನ ಅವತಾರನಾದರೆ, ಘಟೋತ್ಕಚ ನೈರ್ಋತ್ಯದಿಕ್ಪಾಲಕನಾದ ನಿರ್ಋತಿಯ ಅವತಾರ. ಹೀಗೆ ಅದೊಂದು ಇಬ್ಬರು ದಿಕ್ಪಾಲಕರ ನಡುವಿನ ಯುದ್ಧವಾಯಿತು ಎಂಬುದು ಗಮನಾರ್ಹ. ಅವರಿಬ್ಬರಲ್ಲೂ ಶಿವನ ಆವೇಶವಿದ್ದುದು ಮತ್ತೊಂದು ವಿಶೇಷ.

---

೭೦. ಹಸ್ತಿಚತುಷ್ಪಯಸ್ಥಃ ಸ್ವಯಮೇವ ಹಸ್ತಿಚತುಷ್ಪಯಂ ಭೂತ್ವಾ ತತ್ರಸ್ಥಃ ಘಟೋತ್ಕಚಾಖ್ಯಃ ಉದ್ಯಚ್ಛಮಾನಂ ಯೋದ್ಧುಂ ಪ್ರಯತಮಾನಮ್ । – (ಜ.)

೭೦. ಅತೋ ಭಾವತೋ ಸ್ವಭಾವತೋ ನೈವ ದುಷ್ಟಃ । – (ವ.)

ಭಗದತ್ತನ ಬಳಿ ವೈಷ್ಣವಾಸ್ತ್ರ

ಸ ವೈಷ್ಣವಾಸ್ತ್ರಂ ಭಗದತ್ತಸಂಸ್ಥಂ
ವಿಜ್ಞಾಯ ವಿಷ್ಣೋರ್ವರತೋ ವಿಶೇಷತಃ ।
ಅಮೋಘಮನ್ಯತ್ರ ಹರೇರ್ಮರುತ್ಸುತಃ
ಪುತ್ರೇ ಯಾತೇ ನ ಸ್ವಯಮಭ್ಯಧಾವತ್ ॥ ೭೧ ॥

ಅ: ಭಗದತ್ತನಲ್ಲಿ ವೈಷ್ಣವಾಸ್ತ್ರವಿದ್ದುದನ್ನು, ಹರಿಯ ವರದಿಂದಾಗಿ ವಿಶೇಷತಃ ಹರಿಯ ಹೊರತು ಬೇರೆಯವರ ವಿಚಾರದಲ್ಲಿ ಅಮೋಘವೆಂಬುದನ್ನು ತಿಳಿದು ಭೀಮಸೇನ ತನ್ನ ಮಗನಾದ ಘಟೋತ್ಕಚ ತೆರಳಿದ ಮೇಲೆ ತಾನು ಎದುರಿಸಿ ಹೋಗಲಿಲ್ಲ.

ವಿ: ೧) ಭಗದತ್ತನ ಮೇಲೆ ಭೀಮ ತಾನೇ ತೆರಳದಿರಲು ಮುಖ್ಯ ಕಾರಣವನ್ನು ಇಲ್ಲಿ ತಿಳಿಸಿರುವರು. ಭಗದತ್ತನಲ್ಲಿ ವರಾಹ ರೂಪದ ಶ್ರೀಹರಿ ನರಕಾಸುರನಿಗೆ ನೀಡಿದ್ದ ವೈಷ್ಣವಾಸ್ತ್ರವಿತ್ತು. ಅದು ಬೇರೆ ಯಾರ ಮೇಲೆ ಪ್ರಯೋಗಿಸಿದರೂ ಅಮೋಘವೇ ಎಂಬುದಾಗಿ ಶ್ರೀಹರಿಯ ಸಂಕಲ್ಪವಾಗಿತ್ತು. ಅದನ್ನು ಭಗದತ್ತ ಈಗ ತನ್ನೊಡನೆ ತಂದದ್ದನ್ನು ಗಮನಿಸಿ ಭೀಮಸೇನ ಅವನನ್ನು ತಾನೇ ಎದುರಿಸಲಿಲ್ಲ ಎಂದರ್ಥ.

೨) ಭೀಮನ ಮೇಲೆ ಆ ಅಸ್ತ್ರ ಬಿದ್ದರೂ ಅವನಿಗೇನೂ ಆಗದು, ಅಂತಹ ವಿಶೇಷವಾದ ಹರಿಯ ಅನುಗ್ರಹ ಅವನ ಮೇಲೆ ಸದಾ ಇರುವುದು. ಆದರೂ, ಶ್ರೀಹರಿಯ ವರ ಅಮೋಘ– ವೆಂದು ಜಗತ್ತು ಮನಗಾಣಲೆಂದು ಭೀಮ ತಾನಾಗಿ ತೆರಳಲಿಲ್ಲ. ಎಂದರೆ ಭೀಮನಿಗೆ ಅಸ್ತ್ರದ ಭಯವಲ್ಲ, ಹರಿ ಸಂಕಲ್ಪ ಮೋಘವಾಗಬಾರದು ಎಂಬ ಆಲೋಚನೆ ಮಾತ್ರ ಎಂದು ತಿಳಿಯಬೇಕು.

ಅನುಗ್ರಹಾದಭ್ಯಧಿಕಾದವಧ್ಯಂ
ಜಾನನ್ನಪಿ ಸ್ವಂ ವಾಸುದೇವಸ್ಯ ನಿತ್ಯಮ್ ।
ತದ್ಭಕ್ತಿವೈಶೇಷ್ಯತ ಏವ ತಸ್ಯ
ಸತ್ಯಂ ವಾಕ್ಯಂ ಕರ್ತುಮರಿಂ ನ ಚಾಯಾತ್ ॥ ೭೨ ॥

ಅ: ಶ್ರೀಹರಿಯ ಪರಮಾನುಗ್ರಹದಿಂದಾಗಿ ತಾನು ಸರ್ವಥಾ ಅವಧ್ಯನೆಂಬುದನ್ನು ಭೀಮ ಬಲ್ಲವನೇ ಆಗಿದ್ದ. ಶ್ರೀಹರಿಯ ಮೇಲಿನ ಭಕ್ತಿವಿಶೇಷದಿಂದಾಗಿ ಅವನ ಮಾತನ್ನು ಸತ್ಯಗೊಳಿಸ-ಲೆಂದು ಶತ್ರುವಿನ ಮೇಲೆ ಸ್ವತಃ ತಾನೇ ತೆರಳಲಿಲ್ಲ.

ಘಟೋತ್ಕಚ ಗೆದ್ದದ್ದು ಭೀಮಸೇನ ಗೆಲ್ಲುವುದಕ್ಕೆ ಕೈಮುತ್ಕಸಿದ್ದ

ಯದಾ ಸ್ವಪುತ್ರೇಣ ಜಿತೋ ಭವೇತ್ ಸ
ಕಿಮ್ವಾತ್ಮನೇತ್ಯೇವ ತದಾ ಪ್ರವೇತ್ತುಮ್ ।
ಸ ವಿಸ್ಮೃತಾಸ್ತ್ರಸ್ತು ಯದಾ ಭವೇತ
ತದಾ ಭೀಮೋ ಭಗದತ್ತಂ ಪ್ರಯಾತಿ ।
ಋತೇ ಭೀಮಂ ಚಾರ್ಜುನಂ ನಾಸ್ತ್ರಮೇಷ
ಪ್ರಮುಂಚತೀತ್ಯೇವ ಹಿ ವೇದ ಭೀಮಃ ॥ ೭೩ ॥

ಅ: ತನ್ನ ಪುತ್ರನಿಂದಲೇ ಅವನು ಪರಾಜಿತನಾಗುವಾಗ, ತನ್ನಿಂದ ಪರಾಜಿತನಾಗುವನೆಂದು ಹೇಳಬೇಕೇನು! ಎಂದು ತಿಳಿಸುವ ಕಾರಣದಿಂದಲೂ ಭೀಮ ತಾನಾಗಿ ಅವನನ್ನು ಎದುರಿಸಲಿಲ್ಲ. ಭಗದತ್ತ ಅಸ್ತ್ರವನ್ನು ಮರೆತಿದ್ದಾಗ ಭೀಮ ಅವನನ್ನು ಎದುರಿಸಿ ತೆರಳುತ್ತಿದ್ದ. ಭೀಮನ ಮೇಲೆ ಅಥವಾ ಅರ್ಜುನನ ಮೇಲೆ ಹೊರತು ಇತರರ ಮೇಲೆ ಭಗದತ್ತ ಆ ವೈಷ್ಣವಾಸ್ತ್ರವನ್ನು ಸರ್ವಥಾ ಪ್ರಯೋಗಿಸಲಾರ ಎಂಬುದನ್ನು ಭೀಮ ತಿಳಿದಿದ್ದ.

ವಿ: ೧) ಭೀಮ ಭಗದತ್ತರ ಯುದ್ಧ ಕೆಲವು ಬಾರಿ ನಡೆದ ಉಲ್ಲೇಖ ಮಹಾಭಾರತದಲ್ಲಿದೆ, ಅಂತಹ ಸಮಯದಲ್ಲಿ ಭೀಮ ಅವನನ್ನು ಎದುರಿಸುತ್ತಿದ್ದುದು ಭಗದತ್ತ ಆ ಅಸ್ತ್ರವನ್ನು ಮರೆತಿದ್ದಾಗ ಮಾತ್ರ.

೨) ಅವನು ಅಸ್ತ್ರವನ್ನು ಮರೆಯದಿದ್ದಾಗ ಹಾಗೆ ಎದುರಿಸುತ್ತಿರಲಿಲ್ಲ ಎಂಬುದು ಇಲ್ಲಿಯ ಸೂಕ್ಷ್ಮವಿಚಾರ ಎಂದು ತಿಳಿಯಬೇಕು.

೩) ವೈಷ್ಣವಾಸ್ತ್ರವನ್ನು ಭಗದತ್ತ ಮರೆಯದಿದ್ದಾಗ ಭೀಮ ತಾನಾಗಿ ಎದುರಿಸದೇ ತನ್ನ ಮಗ ಘಟೋತ್ಕಚನನ್ನು ಮುಂದೆ ಮಾಡಿದ್ದು ಉಚಿತವೇ ಎಂಬ ಪ್ರಶ್ನೆಗೆ ಇಲ್ಲಿ ಉತ್ತರವಿದೆ. ಭಗದತ್ತ ಆ ಅಸ್ತ್ರವನ್ನು ಭೀಮ ಅಥವಾ ಅರ್ಜುನನ ಹೊರತು ಬೇರಾರ ಮೇಲೂ ಬಿಡಲು ಬಯಸಿರಲಿಲ್ಲ, ಆದ್ದರಿಂದ ಆ ವೈಷ್ಣವಾಸ್ತ್ರದಿಂದ ಘಟೋತ್ಕಚನಿಗೆ ಯಾವುದೇ ಅಪಾಯದ ಪ್ರಸಕ್ತಿಇರಲಿಲ್ಲ.

೪) ಅಂತಹ ಅವೋಘವಾದ ಅಸ್ತ್ರ ಭೀಮಾರ್ಜುನರಂಥವರ ಮೇಲೆ ಪ್ರಯೋಗಿಸ-ಲ್ಪಡಬೇಕೇ ಹೊರತು ಸಾಮಾನ್ಯರಾದ ಇತರರ ಮೇಲಲ್ಲ ಎಂಬುದು ಅವನ ಸಂಕಲ್ಪವಾಗಿತ್ತು.

---

೭೩. ತದಾ ಪ್ರವೇತ್ತುಮಿತ್ಯತ್ರ ಆತ್ಮನಾ ಕಿಮಿತಿ ಪ್ರವೇತ್ತುಂ= ವೇದಯಿತುಂ ಅರಿಂ= ಭಗದತ್ತಂ ಸ್ವಯಂ ನಾಗಾದಿತಿ ಪೂರ್ವೇಣಾನ್ವಯಃ ॥ -(ವಾ.)

೫) ಹೀಗೆ ಭೀಮಸೇನ ಸರ್ವ ವಿಷಯಗಳನ್ನೂ ಸಹ ಅತ್ಯಂತ ಪರಿಪೂರ್ಣವಾಗಿ ತಿಳಿಯಬಲ್ಲ ಪೂರ್ಣಪ್ರಜ್ಞ ಎಂಬುದು ಈ ಪ್ರಸಂಗದಿಂದಲೂ ಸ್ಫುಟಪಡುವುದು.

ಘಟೋತ್ಕಚನ ಪರಾಕ್ರಮ

ಚತುರ್ಗಜಾತ್ಮೋಪರಿಗಾತ್ಮಕಶ್ಚ
ಘಟೋತ್ಕಚಃ ಸುಪ್ರತೀಕಂ ಚ ತಂ ಚ ।
ನಾನಾಪ್ರಹಾರೈರ್ವಿತುದಂಶ್ಚಕಾರ
ಸಂದಿಗ್ಧಜೀವೌ ಜಗತಾಂ ಸಮಕ್ಷಮ್ ॥ ೭೪ ॥

ಅ: ನಾಲ್ಕು ಆನೆಗಳ ಮೇಲೆ ನಾಲ್ಕು ರೂಪಗಳಿಂದ ಕುಳಿತಿದ್ದ ಘಟೋತ್ಕಚ ಆ ಭಗದತ್ತನನ್ನೂ, ಆ ಸುಪ್ರತೀಕವೆಂಬ ಆನೆಯನ್ನೂ ಬಗೆಬಗೆಯ ಪೆಟ್ಟುಗಳಿಂದ ನೋಯಿಸುತ್ತಾ ಜಗತ್ತಿನ ಸಮಕ್ಷದಲ್ಲಿ ಅವರು ಬದುಕುವುದೇ ಸಂಶಯ ಎಂಬಂತೆ ಮಾಡಿದ.

ವಿ: ಘಟೋತ್ಕಚನು ಆಗ ಅದ್ಭುತ ಪರಾಕ್ರಮವನ್ನು ತೋರಿ ಭಗದತ್ತ ಹಾಗೂ ಅವನ ಆನೆಇನ್ನು ಬದುಕಲಾರರು ಎಂದು ಜಗತ್ತು ತಿಳಿಯುವಂತೆ ಮಾಡಿಬಿಟ್ಟನು ಎಂದರ್ಥ.

ಗಜಾರ್ತನಾದಂ ತು ನಿಶಮ್ಯ ಭೀಷ್ಮ-
ಮುಖಾಃ ಸಮಾಪೇತುರಮುಂ ಚ ದೃಷ್ಟ್ವಾ ।
ಮಹಾಕಾಯಂ ಭೀಮಮಮುಷ್ಯ ಪೃಷ್ಠ-
ಗೋಪಂ ಚ ವಾಯ್ವಾತ್ಮಜಮತ್ರಸನ್ ಭೃಶಮ್ ।
ತೇ ಭೀತಭೀತಾಃ ಪೃತನಾಪಹಾರಂ
ಕೃತ್ವಾऽಪಜಗ್ಮುಃ ಶಿಬಿರಾಯ ಶೀಘ್ರಮ್ ॥ ೭೫ ॥

---

೭೪. ಚತುರ್ಗಜಾತ್ಮೋಪರಿಗಾತ್ಮಕಶ್ಚೇತ್ಯತ್ರ ಚತುರ್ಗಜಾತ್ಮಾ = ಚತುರ್ಗಜಸ್ವರೂಪಃ ಉಪರಿಗಾತ್ಮಕಃ = ಉಪರಿಗತರೂಪಚತುಷ್ಟಯವಾಂಶ್ಚೇತ್ಯರ್ಥಃ ॥ – (ವಾ.)

೭೪. ಉಪರಿಗಾತ್ಮಕಶ್ಚ ಚತುರ್ಗಜಾನಾಂ ಪರಿತಃ ಪೃಷ್ಠೇ ವಿದ್ಯಮಾನಾಃ ಆತ್ಮನಃ ಸ್ವರೂಪಾಣಿ ಯಸ್ಯ ಸ ತಥಾ। ಚತುರ್ಗಜ ಸ್ವರೂಪಂ ಧೃತ್ವಾ ತೇಷಾಮುಪರಿಚತುಃಸ್ವರೂಪೇಣ ಸ್ವಯಮೇವ ತಿಷ್ಠತೀತಿ ಭಾವಃ। ..... ಸಂದಿಗ್ಧಜೀವೌ ಜೀವನವಿಷಯೇ ಸಂಶಯವಂತೌ ಚಕಾರ। – (ಜ.)

೭೫. ಅಮುಷ್ಯ ಪೃಷ್ಠಗೋಪಮಿತ್ಯತ್ರ ಅಮುಷ್ಯ = ಘಟೋತ್ಕಚಸ್ಯ ಪೃಷ್ಠಗೋಪಂ = ಪೃಷ್ಠರಕ್ಷಕಮಿತ್ಯರ್ಥಃ ॥– (ವಾ.)

ಅ: ಆನೆಯ ಆರ್ತನಾದವನ್ನು ಕೇಳಿ ಭೀಷ್ಮ ಮೊದಲಾದವರು ಅಲ್ಲಿಗೆ ಧಾವಿಸಿ ಬಂದರು. ಮಹಾಕಾಯನಾದ ಘಟೋತ್ಕಚನನ್ನು, ಅವನ ಹಿಂದೆ ಬೆಂಗಾವಲಾಗಿದ್ದ ಭೀಮನನ್ನು ಕಂಡು ಅವರೆಲ್ಲ ಬಹಳವಾಗಿ ಭೀತರಾದರು. ತುಂಬಾ ಭಯಗೊಂಡ ಭೀಷ್ಮ ಮೊದಲಾದವರೆಲ್ಲ ಕೂಡಲೇ ಸೈನ್ಯವನ್ನು ಹಿಂತೆಗೆದುಕೊಂಡು ಶಿಬಿರಗಳತ್ತ ನಡೆದರು.

ವಿ: ೧) ಭಗದತ್ತನ ರಕ್ಷಣೆಗಾಗಿ ಧಾವಿಸಿದ ಅವರಿಗೆ ಭೀಮ, ಘಟೋತ್ಕಚರನ್ನು ಕಾಣುತ್ತಲೇ ಬಹಳವಾಗಿ ಭಯವುಂಟಾಯಿತು ಎಂದರ್ಥ. ರಕ್ಷಿಸಲು ಬಂದ ಅವರೇ ರಕ್ಷಣೆಗಾಗಿ ಮತ್ತೊಂದು ಕಡೆ ನೋಡುವಂತಾಯಿತು.

೨) ಭೀಮ, ಘಟೋತ್ಕಚರ ಮೇಲೆ ಯುದ್ಧ ಮಾಡುವುದಿರಲಿ, ಅವರನ್ನು ಎದುರಿಸುವ ಯೋಚನೆ ಮಾಡುವ ಸ್ಥಿತಿಯಲ್ಲೂ ಭೀಷ್ಮಾದಿಗಳು ಇರಲಿಲ್ಲ ಎಂಬ ಮಾತಿನಲ್ಲಿ ಅವರಿಬ್ಬರ ಅಗಾಧ ಹಿರಿಮೆಯ ಸ್ಪಷ್ಟ ಚಿತ್ರ ದೊರೆಯುವುದು.

ಎಂಟನೆಯ ದಿನದ ಯುದ್ಧ - ಇರಾವಂತನ ಪರಾಕ್ರಮ

ದಿನೇ ಪರೇ ಚೈವ ಪುನಃ ಸಮೇತಾಃ
ಪರಸ್ಪರಂ ಪಾಂಡವಾಃ ಕೌರವಾಸ್ತೇ ।
ತತ್ರಾಸದನ್ನಾಗಸುತಾಸಮುದ್ಭವಃ
ಪಾರ್ಥಾತ್ಮಜಃ ಶಾಕುನೇಯಾನ್ ಷಡೇಕಃ ॥ ೭೬ ॥

ಅ: ಮಾರನೆಯ ದಿನ ಪಾಂಡವಕೌರವರು ಪುನಃ ಒಂದಾಗಿ ಪರಸ್ಪರರನ್ನು ಎದುರಿಸಿದರು. ಅರ್ಜುನನಿಗೆ ನಾಗಕನ್ಯೆಯಾದ ಉಲೂಪಿಯಲ್ಲಿ ಜನಿಸಿದ ಇರಾವಂತ ಒಂಟಿಯಾಗಿ ಶಕುನಿಯ ಆರುಜನ ಪುತ್ರರನ್ನು ಎದುರಿಸಿದ.

ವಿ: ಆ ಶಾಕುನೇಯರ ಹೆಸರುಗಳು ಹೀಗಿವೆ : ಗಜ, ಗವಾಕ್ಷ, ವೃಷಭ, ಚರ್ಮವಾನ್, ಆರ್ಜವ ಮತ್ತು ಶುಕ :

ಗಜೋ ಗವಾಕ್ಷಃ ವೃಷಭಃ ಚರ್ಮವಾನಾರ್ಜವಃ ಶುಕಃ ।
ಷಡೇತೇ ಬಲಸಂಪನ್ನಾ ನಿರ್ಯಯುರ್ಮಹತೋ ಬಲಾತ್ ॥

– ಭಾರತ (ಭೀಷ್ಮ. ೯೦/೨೭)

---

೭೬. ತತ್ರ ತದ್ದಿನಯುದ್ಧೇ ನಾಗಸುತಾಯಾಂ ಉಲೂಪಿಕಾಯಾಂ ಸಮುದ್ಭವಃ ಪಾರ್ಥಾತ್ಮಜಃ ಇರಾವಾನೇಕಃ ಷಟ್ ಶಾಕುನೇಯಾನ್ ಶಕುನಿಪುತ್ರಾನಾಸದತ್ । – (ಜ.)

ಇರಾವಂತನಿಂದ ಶಕುನಿಪುತ್ರರ ವಧೆ

ತೈಃ ಪ್ರಾಸಹಸ್ತೈಃ ಕ್ಷತಕಾಯೋಽತಿರೂಢ-
ಕೋಪಃ ಸ ಖಡ್ಗೇನ ಚಕರ್ತ ತೇಷಾಮ್ ।
ಶಿರಾಂಸಿ ವೀರೋ ಬಲವಾನಿರಾವಾನ್
ಭಯಂ ದಧದ್ಧಾರ್ತರಾಷ್ಟ್ರೇಷು ಚೋಗ್ರಮ್ ॥ ೭೭ ॥

ಅ: ಪ್ರಾಸವೆಂಬ ಆಯುಧವನ್ನು ಕೈಯಲ್ಲಿ ಹಿಡಿದು ಅವರೆಲ್ಲ ಇವನನ್ನು ಗಾಯಗೊಳಿಸಿದಾಗ ಬಹಳವಾಗಿ ಕೆರಳಿದ ವೀರನಾದ ಇರಾವಂತ ಖಡ್ಗದಿಂದ ಅವರ ತಲೆಗಳನ್ನು ಕತ್ತರಿಸಿಹಾಕಿದ. ಅದರಿಂದ ಕೌರವರಿಗೆಲ್ಲ ಉಗ್ರವಾದ ಭಯ ಕವಿಯಿತು.

ಅಲಂಬುಸ ಇರಾವಂತರ ಯುದ್ಧ - ಇರಾವಂತನ ವಧೆ

ದೃಷ್ಟ್ವಾತಮುಗ್ರಂ ಧೃತರಾಷ್ಟ್ರಪುತ್ರೋ
ದಿದೇಶ ರಕ್ಷೋಽಲಂಬುಸನಾಮಧೇಯಮ್ ।
ಜಹ್ಯಾರ್ಜುನಿಂ ಕ್ಷಿಪ್ರಮಿತಿ ಸ್ಮ ತಚ್ಚ
ಸಮಾಸದನ್ನಾಗಸುತಾತನೂಜಮ್ ॥ ೭೮ ॥

ಅ: ದುರ್ಯೋಧನ ಭಯಂಕರನಾದ ಆ ಇರಾವಂತನನ್ನು ಕಂಡು 'ಅರ್ಜುನಪುತ್ರನಾದ ಇವನನ್ನು ಬೇಗನೇ ಕೊಂದುಹಾಕು' ಎಂದು ಹೇಳಿ ಅಲಂಬುಸ ಎಂಬ ಹೆಸರಿನ ರಾಕ್ಷಸನನ್ನು ಕಳುಹಿಸಿಕೊಟ್ಟ. ಅವನು ಇರಾವಂತನನ್ನು ಎದುರಿಸಿದ.

ತಯೋರಭೂದ್ಯುದ್ಧಮತೀವ ದಾರುಣಂ
ಮಾಯಾಯುಜೋರ್ವೀರ್ಯವತೋರ್ಮಹಾದ್ಭುತಮ್ ।
ಸಸಾದಿನೋಽಶ್ವಾನ್ ಸ ತು ರಾಕ್ಷಸೋಽಸೃಜತ್
ತೇ ಪಾರ್ಥಪುತ್ರಸ್ಯ ಚ ಸಾದಿನೋಽಹನನ್ ।
ತತಸ್ತ್ವನಂತಾಕೃತಿಮಾಪ್ತಮಾರ್ಜುನಿಂ
ಸುಪರ್ಣರೂಪೋಽಹನದಾಶು ರಕ್ಷಃ ॥ ೭೯ ॥

---

೭೭. ಭಯಂ ದಧದಿತ್ಯತ್ರ ದಧತ್ = ವಿದಧತ್ ॥ – (ವಾ.)

೭೯. ಸಾದಿನಃ ಅಶ್ವಾರೂಢಪುರುಷೈಃ ಸಹಿತಾನ್ । – (ಜ.)

ಅ: ಮಾಯೆಯನ್ನು ಪ್ರಯೋಗಿಸಿದ ಶಕ್ತಿಶಾಲಿಗಳಾದ ಅವರಿಬ್ಬರಿಗೂ ತುಂಬಾ ಅದ್ಭುತವೂ, ದಾರುಣವೂ ಆದ ದೊಡ್ಡ ಯುದ್ಧ ನಡೆಯಿತು. ಅಲಂಬುಸ ಅಶ್ವಗಳನ್ನು, ಅಶ್ವಾರೋಹಿಗಳನ್ನು ಮಾಯೆಯಿಂದ ಸೃಷ್ಟಿಸಿದನು.ಅವು ಇರಾವಂತನ ಅಶ್ವಾರೋಹಿ ಸೈನ್ಯಗಳನ್ನು ಕೊಂದು-ಹಾಕಿದವು. ಆಗ ಇರಾವಂತ ಸರ್ಪದ ಆಕಾರವನ್ನು ತಳೆಯಲು ಅಲಂಬುಸರಾಕ್ಷಸನು ಗರುಡನ ರೂಪವನ್ನು ತಳೆದು ಅವನನ್ನು ಕೂಡಲೇ ಸಂಹರಿಸಿದ.

ಏ: ಅವರಿಬ್ಬರು ಹಾಗೆ ವಿವಿಧ ರೂಪಗಳನ್ನು ತಳೆಯಲು ಸಾಧ್ಯವಾಗಿದ್ದು ಮಾಯಾವಿಗಳಾ-ಗಿದ್ದರಿಂದಾಗಿ ಎಂಬುದನ್ನು 'ಮಾಯಾಯುಜೋಃ' ಎಂಬ ಪದದಿಂದ ತಿಳಿಸಿರುವರು.

ಘಟೋತ್ಕಚನ ಪರಾಕ್ರಮ

ಹತಂ ನಿಶಮ್ಯಾರ್ಜುನಿಮುಗ್ರಪೌರುಷೋ
ನನಾದ ಕೋಪೇನ ವೃಕೋದರಾತ್ಮಜಃ ।
ಚಚಾಲ ಭೂರ್ನಾನದತೋಽಸ್ಯ ರಾವತಃ
ಸಸಾಗರಾಗೇಂದ್ರನಗಾ ಭೃಶಂ ತದಾ ॥ ೮೦ ॥

ಅ: ಅರ್ಜುನಪುತ್ರನಾದ ಇರಾವಂತ ಹತನಾದದ್ದನ್ನು ಕೇಳಿ ಭೀಮಪುತ್ರನಾದ ಘಟೋತ್ಕಚ ಕೋಪದಿಂದ ಗರ್ಜಿಸಿದ. ಅವನು ಗರ್ಜಿಸುತ್ತಿದ್ದಂತೆ ಆ ಶಬ್ದದಿಂದ ಸಮುದ್ರಗಳು, ವೃಕ್ಷಗಳು, ಬೆಟ್ಟಗಳೊಂದಿಗೆ ಭೂಮಿ ಜೋರಾಗಿ ಕಂಪಿಸಿತು.

ಅಲಂಬುಸಸ್ತಂ ಪ್ರಸಮೀಕ್ಷ್ಯ ಮಾರುತೇಃ
ಸುತಂ ಬಲಾಢ್ಯಂ ಭಯತಃ ಪರಾದ್ರವತ್।
ಪರಾದ್ರವನ್ ಧಾರ್ತರಾಷ್ಟ್ರಸ್ಯ ಸೇನಾಃ
ಸರ್ವಾಸ್ತಮಾರಾಧ ಸುಯೋಧನೋ ನೃಪಃ ॥ ೮೧ ॥

ಅ: ಬಲಾಢ್ಯನಾದ ಭೀಮಪುತ್ರ ಘಟೋತ್ಕಚನನ್ನು ಕಂಡು ಅಲಂಬುಸ ಭಯದಿಂದ ಪಲಾಯನ ಮಾಡಿದ. ದುರ್ಯೋಧನನ ಸೇನೆಗಳೂ ಸಹ ಪಲಾಯನಗೈಯ್ಯತೊಡಗಿದವು. ಆಗ ದುರ್ಯೋಧನ ಘಟೋತ್ಕಚನನ್ನು ಎದುರಿಸಿದ.

ಸ ಭೀಮಪುತ್ರಸ್ಯ ಜಘಾನ ಮಂತ್ರಿಣೋ
ಮಹಾಬಲಾಂಶ್ಚತುರೋಽನ್ಯಾಂಸ್ತಥೈವ।
ಹತಾವಶೇಷೇಷು ಚ ವಿದ್ರವತ್ಸು
ಘಟೋತ್ಕಚೋಽಭ್ಯಾಹನದಾಶು ತಂ ನೃಪಮ್ ॥ ೮೨ ॥

ಅ: ದುರ್ಯೋಧನನು ಘಟೋತ್ಕಚನ ಮಹಾಬಲಿಷ್ಠರಾದ ಮಂತ್ರಿಗಳನ್ನು ಹಾಗೂ ಇತರರನ್ನು ಕೊಂದು ಹಾಕಿದ. ಬದುಕುಳಿದವರು ಪಲಾಯನ ಮಾಡುತ್ತಿರಲು ಅವನು ಕೂಡಲೇ ದುರ್ಯೋಧನನನ್ನು ಬಲವಾಗಿ ಹೊಡೆಯತೊಡಗಿದ.

ಸಂಪೀಡ್ಯಮಾನೋ ಯುಧಿ ತೇನ ರಕ್ಷಸಾ
ಪ್ರವೇಶಯಾಮಾಸ ಶರಂ ಘಟೋತ್ಕಚೇ।
ದೃಢಾಹತಸ್ತೇನ ತದಾ ಬಲೀಯಸಾ
ಘಟೋತ್ಕಚಃ ಪ್ರವ್ಯಥಿತೇಂದ್ರಿಯೋ ಭೃಶಮ್ ।
ತಸ್ಥೌ ಕಥಂಚಿದ್ಭುವಿ ಪಾತ್ಯಮಾನಃ
ಪುನಃ ಶರಾನಪ್ಯಸೃಜತ್ ಸುಯೋಧನೇ ॥ ೮೩ ॥

ಅ: ಘಟೋತ್ಕಚನಿಂದ ಪೀಡಿತನಾದ ದುರ್ಯೋಧನ ಅವನ ಮೇಲೆ ಬಾಣವೊಂದನ್ನು ಮೈಯ್ಯೊಳಗೆ ತೂರಿಸಿದ. ಬಲಿಷ್ಠನಾದ ಅವನಿಂದ ಹಾಗೆ ಬಲವಾಗಿ ಹೊಡೆತ ತಿಂದ ಘಟೋತ್ಕಚನ ಇಂದ್ರಿಯಗಳು ಗಾಸಿಗೊಂಡವು. ನೆಲದ ಮೇಲೆ ಬೀಳುತ್ತಾ ಅವನು ಹೇಗೋ ನಿಂತುಕೊಂಡ. ಪುನಃ ದುರ್ಯೋಧನನ ಮೇಲೆ ಬಾಣಗಳನ್ನು ಬಿಡತೊಡಗಿದ.

ಭೀಮನಿಂದ ಘಟೋತ್ಕಚನ ಸಂರಕ್ಷಣೆ

ಚಿರಂ ಪ್ರಯುದ್ಧ್ವಾ ನೃಪರಾಕ್ಷಸಾಧಿಪೌ
ಪರಸ್ಪರಾಜೇಯತಮೌ ರಣಾಜಿರೇ ।
ದ್ರೋಣಾದಯೋ ವೀಕ್ಷ್ಯ ರಿರಕ್ಷಿಷಂತಃ
ಸುಯೋಧನಂ ಪ್ರಾಪುರಮಿತ್ರಸಾಹಾಃ ॥ ೮೪ ॥

---

೮೪. ಅಮಿತ್ರಂ ಸಹಂತೇ ತೇಽಮಿತ್ರಸಾಹಾಃ। ದ್ವೇಷಿಣಾಂ ಪರಾಕ್ರಮಂ ಸೋಢುಮೀಶಾ ಇತ್ಯರ್ಥಃ – (ಜ.)

೮೪. ಪರಸ್ಪರಾಜೇಯತ್ವೇ ಶರೀರದಾರ್ಢ್ಯಂ ನಿಮಿತ್ತಮಿತಿ ಸೂಚನಾರ್ಥಃ। – (ಸ.)

ಅ: ನೃಪಾಧಿಪ, ರಕ್ಷೋಧಿಪರಾದ ದುರ್ಯೋಧನ ಘಟೋತ್ಕಚರು ರಣರಂಗದಲ್ಲಿ ಬಹುಹೊತ್ತು ಯುದ್ಧ ಮಾಡಿದರು. ಒಬ್ಬರು ಇನ್ನೊಬ್ಬರನ್ನು ಗೆಲ್ಲಲಾಗಲಿಲ್ಲ. ಅದನ್ನು ಕಂಡು ಶತ್ರುಗಳನ್ನು ಎದುರಿಸಬಲ್ಲ ದ್ರೋಣಾದಿಗಳು ದುರ್ಯೋಧನನನ್ನು ರಕ್ಷಿಸಬಯಸಿದವರಾಗಿ ಅವನ ಬಳಿಗೆ ಧಾವಿಸಿದರು.

ಸದ್ರೋಣಶಲ್ಯೌ ಗುರುಪುತ್ರಗೌತಮೌ
ಭೂರಿಶ್ರವಃಕೃತವರ್ಮಾದಿಕಾಂಶ್ಚ ।
ವವರ್ಷ ಬಾಣೈರ್ಗಗನಂ ಸಮಾಶ್ರಿತೋ
ಘಟೋತ್ಕಚಃ ಸ್ಥೂಲತಮೈಃ ಸುವೇಗೈಃ ॥ ೮೫ ॥

ಅ: ಘಟೋತ್ಕಚ ಗಗನದಲ್ಲಿ ನಿಂತವನಾಗಿ ದ್ರೋಣ, ಶಲ್ಯ, ಅಶ್ವತ್ಥಾಮ, ಕೃಪಾಚಾರ್ಯ, ಭೂರಿಶ್ರವಸ್, ಕೃತವರ್ಮ ಮೊದಲಾದವರ ಮೇಲೆ ತುಂಬಾ ದೊಡ್ಡ ಗಾತ್ರದ ಬಹುವೇಗದ ಬಾಣಗಳ ಮಳೆಯನ್ನು ಸುರಿಸಿದ.

ತಮೇಕಮಗ್ರ್ಯೈ ರಥಿಭಿಃ ಪರಿಷ್ಕೃತಂ
ನಿರೀಕ್ಷ್ಯ ಭೀಮೋಽಭ್ಯಗಮತ್ ಸಮಸ್ತಾನ್ ।
ದ್ರೋಣೋಽತ್ರ ಭೀಮಪ್ರಹಿತೈಃ ಶರೌತ್ತಮೈಃ
ಸುಪೀಡಿತಃ ಪ್ರಾಪ್ತಮೂರ್ಛಃ ಪಪಾತ ॥ ೮೬ ॥

ಅ: ಅವನು ಒಂಟಿಯಾಗಿ ಶ್ರೇಷ್ಠ ರಥಿಕರಿಂದ ಆಕ್ರಮಿಸಲ್ಪಟ್ಟದ್ದನ್ನು ನೋಡಿ ಭೀಮಸೇನ ಅವರೆಲ್ಲರನ್ನು ಎದುರಿಸಿ ಹೊರಟ. ಆಗ ಭೀಮ ಬಿಟ್ಟ ಬಾಣಗಳಿಂದ ಬಹಳ ನೊಂದ ದ್ರೋಣರು ಮೂರ್ಛೆಗೊಳಗಾಗಿ ಬಿದ್ದರು.

ದ್ರೌಣಿಂ ಕೃಪಾದ್ಯಾನ್ ಸಸುಯೋಧನಾಂಶ್ಚ
ಚಕಾರ ಭೀಮೋ ವಿರಥಾನ್ ಕ್ಷಣೇನ ।
ನಿವಾರ್ಯಮಾಣಾಂಸ್ತು ವೃಕೋದರೇಣ
ಘಟೋತ್ಕಚಸ್ತಾನ್ ಪ್ರವವರ್ಷ ಸಾಯಕೈಃ ॥ ೮೭ ॥

ಅ: ಭೀಮಸೇನನು ಅಶ್ವತ್ಥಾಮ, ಕೃಪ ಮೊದಲಾದವರನ್ನು, ದುರ್ಯೋಧನಾದಿಗಳನ್ನು ಕ್ಷಣಮಾತ್ರದಲ್ಲಿ ವಿರಥರನ್ನಾಗಿ ಮಾಡಿದ. ಭೀಮ ಅವರನ್ನು ತಡೆಯುತ್ತಿದ್ದಂತೆಯೇ ಘಟೋತ್ಕಚ ಅವರ ಮೇಲೆ ಬಾಣಗಳ ಮಳೆಯನ್ನು ಸುರಿಸಿದ.

ಕೌರವರ ಪರಾಭವ

ತೇನಾಂಬರಸ್ಥೇನ ತರುಪ್ರಮಾಣೈ-
ರಭ್ಯರ್ದಿತಾ ಕುರವಃ ಸಾಯಕೌಘೈಃ ।
ಭೂಮೌ ಚ ಭೀಮೇನ ಶರೌಘಪೀಡಿತಾಃ
ಪೇತುರ್ನೇದುಃ ಪ್ರಾದ್ರವಂಶ್ಚಾತಿಭೀತಾಃ ॥ ೮೮ ॥

ಅ: ಗಗನದಲ್ಲಿದ್ದ ಘಟೋತ್ಕಚನ ವೃಕ್ಷದಷ್ಟು ದೊಡ್ಡ ಗಾತ್ರದ ಬಾಣಗಳ ಗುಂಪುಗಳಿಂದ ಬಹಳವಾಗಿ ಪೀಡಿತರಾದ ಕೌರವರು ಅತ್ತ ಭೂಮಿಯ ಮೇಲೆ ಭೀಮನ ಬಾಣಗಳಿಂದಲೂ ಪೀಡಿತರಾಗಿ ಬಿದ್ದರು, ಆರ್ತನಾದ ಮಾಡಿದರು, ತುಂಬಾ ಭಯಗೊಂಡವರಾಗಿ ದಿಕ್ಕೆಟ್ಟು ಪಲಾಯನಗೈದರು.

ಸರ್ವಾಂಶ್ಚ ತಾನ್ ಶಿಬಿರಂ ಪ್ರಾಪಯಿತ್ವಾ
ಏನಾ ಭೀಷ್ಮಂ ಕೌರವಾನ್ ಭೀಮಸೇನಃ ।
ಘಟೋತ್ಕಚಶ್ಚಾನದತಾಂ ಮಹಾಸ್ವನೌ
ನಾದೇನ ಲೋಕಾನಭಿಪೂರಯಂತೌ ॥ ೮೯ ॥

ಅ: ಭೀಷ್ಮರ ಹೊರತು ಕೌರವರನ್ನೆಲ್ಲ ಶಿಬಿರಗಳಿಗೆ ಅಟ್ಟಿ ಭೀಮಸೇನ ಮತ್ತು ಘಟೋತ್ಕಚ ಇಬ್ಬರೂ ಮಹಾಧ್ವನಿಯಿಂದ ಲೋಕಗಳನ್ನೆಲ್ಲ ತುಂಬಿಸಿ ಗರ್ಜಿಸಿದರು.

ದುರ್ಯೋಧನೋಽಥ ಸ್ವಜನೈಃ ಸಮೇತಃ
ಪುನಃ ಪ್ರಾಯಾದ್ರಣಭೂಮಿಂ ಸ ಭೀಷ್ಮಮ್ ।
ಜಯೋಪಾಯಂ ಭೈಮಸೇನೇರಪೃಚ್ಛತ್
ಸ್ವಸ್ಯೈವ ಸ ಪ್ರಾಹ ನ ತಂ ವ್ರಜೇತಿ ॥ ೯೦ ॥

ಅ: ಬಳಿಕ ದುರ್ಯೋಧನ ತನ್ನವರೊಂದಿಗೆ ಸಮೇತನಾಗಿ ಮತ್ತೆ ರಣಭೂಮಿಗೆ ತೆರಳಿ ಭೀಷ್ಮರನ್ನು ತಾನು ಘಟೋತ್ಕಚನನ್ನು ಜಯಿಸುವ ಉಪಾಯವನ್ನು ಕೇಳಿದ. ಭೀಷ್ಮರು ಅವನಿಗೆ ನೀನು ಅವನ ಮೇಲೆ ತೆರಳಬೇಡ ಎಂದರು.

ವಿ: ೧) ದುರ್ಯೋಧನ ಕೇಳಿದ್ದು ತಾನು ಘಟೋತ್ಕಚನನ್ನು ಗೆಲ್ಲುವ ಉಪಾಯವನ್ನು ತಿಳಿಸಲು. ಅವರು ಹೇಳಿದ್ದು ನೀನು ಅವನ ಮೇಲೆ ಯುದ್ಧಕ್ಕೇ ತೆರಳಬೇಡ ಎಂದು.

೨) ಹಾಗೆ ಹೇಳುವ ಮೂಲಕ ದುರ್ಯೋಧನನಿಗೆ ಭೀಮರಕ್ಷಿತನಾದ ಘಟೋತ್ಕಚನನ್ನು ಗೆಲ್ಲಲು ಸಾಧ್ಯವಾಗದು ಎಂದು ತಿಳಿಸಿದರು ಎಂದರ್ಥ.

ಭಗದತ್ತ ಘಟೋತ್ಕಚರ ಯುದ್ಧ

ಪ್ರಾಗ್ಜ್ಯೋತಿಷಂ ಚೈವ ಘಟೋತ್ಕಚಾಯ
ಸಂಪ್ರೇಷಯಾಮಾಸ ಸುರಾಪಗಾಸುತಃ ।
ಸಂಪ್ರಾಪ್ಯ ಹೈಡಿಂಬಮಯೋಧಯದ್ಬಲೀ
ಸ ಚಾರ್ದಯಾಮಾಸ ಸಕುಂಜರಂ ತಮ್ ॥ ೯೧ ॥

ಅ: ಘಟೋತ್ಕಚನ ಮೇಲೆ ಭಗದತ್ತನನ್ನು ಭೀಷ್ಮ ಕಳುಹಿಸಿಕೊಟ್ಟರು. ಬಲಿಷ್ಠನಾದ ಭಗದತ್ತ ಘಟೋತ್ಕಚನನ್ನು ತಲುಪಿ ಯುದ್ಧಕ್ಕೆ ತೊಡಗಿದ. ಘಟೋತ್ಕಚ ಅವನನ್ನೂ, ಅವನ ಆನೆಯನ್ನೂ ಪೀಡಿಸಿದ.

ವಿ: ಇದು ದ್ವಿತೀಯ ಬಾರಿಯ ಭಗದತ್ತ-ಘಟೋತ್ಕಚರ ಯುದ್ಧ.

ತೇನಾರ್ದಿತಃ ಪ್ರಾಹಿಣೋಚ್ಛೂಲಮಸ್ಮೈ
ವಿಯತ್ಯಭಿಪ್ಲುತ್ಯ ತದಾ ಘಟೋತ್ಕಚಃ ।
ಪ್ರಗೃಹ್ಯ ಶೂಲಂ ಪ್ರಬಭಂಜ ಜಾನು-
ಮಾರೋಪ್ಯ ದೇವಾ ಜಹೃಷುಸ್ತದೀಕ್ಷ್ಯ ॥ ೯೨ ॥

ಅ: ಘಟೋತ್ಕಚನಿಂದ ಪೀಡಿತನಾದ ಭಗದತ್ತ ಅವನ ಮೇಲೆ ಶೂಲವನ್ನು ಪ್ರಯೋಗಿಸಿದ. ಆಗ ಘಟೋತ್ಕಚ ಗಗನಕ್ಕೆ ನೆಗೆದು ಶೂಲವನ್ನು ಕೈಯಲ್ಲಿ ಹಿಡಿದು ಮೊಳಕಾಲ ಮೇಲೆ ಇರಿಸಿಕೊಂಡು ಮುರಿದು ಹಾಕಿದ. ಅದನ್ನು ಕಂಡು ದೇವತೆಗಳು ನಲಿದರು.

ವಿ: ತ್ರಿಶೂಲಪಾಣಿಯಾದ ಶಿವನ ಆವೇಶವನ್ನು ಹೊಂದಿದ್ದ ಘಟೋತ್ಕಚನಿಗೆ ಈ ಭಗದತ್ತನೆಸೆದ ಶೂಲ ಯಾವ ಲೆಕ್ಕಕ್ಕೂ ಬಾರದಾಯಿತು ಎಂದರ್ಥ. ಕುಂಭಕರ್ಣ ಎಸೆದ ಶೂಲವನ್ನು ಹನುಮಂತ ಮುರಿದೆಸೆದಿದ್ದ ವಿವರ ರಾಮಾಯಣದಲ್ಲಿದೆ (೮/೧೧೮); ಅಲ್ಲಿ ಹಾಗೆ ಮಾಡಿದ್ದು ಹನುಮಂತನಾದರೆ, ಇಲ್ಲಿ ಹೀಗೆ ಮಾಡಿದ್ದು ಹನುಮಂತನ ಮತ್ತೊಂದು ರೂಪವೇ ಆದ ಭೀಮಸೇನನ ಪುತ್ರ ಎಂಬುದು ವಿಶೇಷ.

ತದಾ ಸ ತಸ್ಯೈವ ಪದಾನುಗಾನ್ ನೃಪೋ
ಜಘಾನ ತಂ ಮಾರುತಿರಭ್ಯಯಾದ್ರಣೇ ।
ಸ ಪ್ರಾಹಿಣೋದ್ಭೀಮಸೇನಾಯ ವೀರೋ
ಗಜಂ ತಮಸ್ತಂಭಯದಾಶು ಸಾಯಕೈಃ ॥ ೯೩ ॥

ಅ: ಆಗ ಭಗದತ್ತ ಘಟೋತ್ಕಚನ ಅನುಯಾಯಿಗಳನ್ನು ಕೊಲ್ಲತೊಡಗಿದ. ಅವನ ಮೇಲೆ ಭೀಮಸೇನ ಯುದ್ಧದಲ್ಲಿ ಅವನನ್ನು ಎದುರಿಸಿದ. ಭಗದತ್ತ ಭೀಮಸೇನನ ಮೇಲೆ ಆನೆಯನ್ನು ನುಗ್ಗಿಸಿದ. ಭೀಮ ಕೂಡಲೇ ಆನೆಯನ್ನು ಬಾಣಗಳಿಂದ ತಡೆದು ನಿಲ್ಲಿಸಿದ.

ವಿ: ಭೀಮ ಈಗ ಭಗದತ್ತನ ಮೇಲೆ ಯುದ್ಧಕ್ಕೆ ಬರಲು ಭಗದತ್ತ ವೈಷ್ಣವಾಸ್ತ್ರವನ್ನು ಮರೆತಿದ್ದುದೇ ಕಾರಣವಾಗಿತ್ತು ಎಂದು ತಿಳಿಯಬೇಕು.

ಸಂಸ್ತಂಭಿತೇ ಬಾಣವರೈಸ್ತು ನಾಗೇ
ಭೀಮಸ್ಯಾಶ್ವಾನ್ ಸಾಯಕೈರರ್ದಯತ್ ಸಃ ।
ಸೋಽಭ್ಯರ್ದಿತಾಶ್ವೋಽಥ ಗದಾಂ ಪ್ರಗೃಹ್ಯ
ಹಂತುಂ ನೃಪಂ ತಂ ಸಗಜಂ ಸಮಾಸದತ್ ॥ ೯೪ ॥

ಅ: ಉತ್ತಮ ಬಾಣಗಳಿಂದ ಆನೆ ಸ್ತಬ್ಧಗೊಳ್ಳಲು ಭಗದತ್ತ ಭೀಮನ ಕುದುರೆಗಳನ್ನು ಬಾಣಗಳಿಂದ ಪೀಡಿಸಿದ. ಕುದುರೆಗಳು ಪೀಡಿತವಾದದ್ದನ್ನು ಕಂಡು ಭೀಮಸೇನ ಆನೆಯ ಸಮೇತ ಭಗದತ್ತನನ್ನು ಕೊಲ್ಲಲೆಂದು ಗದೆಯನ್ನೆತ್ತಿಕೊಂಡು ಧಾವಿಸಿದ.

---

೯೩. ಅಸ್ತಂಭಯತ್ ರೋಧಯಾಮಾಸ। – (ಜ.)

೯೪. ಸ ಭಗದತ್ತಃ ಅಭ್ಯರ್ದಿತಾಃ ಪೀಡಿತಾಃ ಅಶ್ವಾ ಯಸ್ಯ ಸ ತಥಾ। – (ಜ.)

ಭಗದತ್ತನ ಪಲಾಯನ

ಸ ಹಂತುಕಾಮೇನ ರುಷಾಽಭಿಪನ್ನೋ
ಭೀಮೇನ ರಾಜಾ ಪುರತಃ ಪೃಷ್ಠತಶ್ಚ ।
ಕೃಷ್ಣೇನಾಸ್ತ್ರಂ ವೈಷ್ಣವಂ ತದ್ಗೃಹೀತುಂ
ಸಹಾರ್ಜುನೇನಾಪಯಯೌ ಸುಭೀತಃ ॥ ೯೫ ॥

ಅ: ತನ್ನನ್ನು ಕೊಲ್ಲಲೆಂದು ಕೋಪದಿಂದ ಭೀಮ ಮುಂದಿನಿಂದ ಧಾವಿಸುತ್ತಿದ್ದುದನ್ನು, ಹಿಂದಿನಿಂದ ಅರ್ಜುನನೊಂದಿಗೆ ಕೃಷ್ಣ ತನ್ನ ವೈಷ್ಣವಾಸ್ತ್ರವನ್ನು ಕಿತ್ತುಕೊಳ್ಳಲೆಂದು ಬರುತ್ತಿದ್ದುದನ್ನು ಕಂಡು ಭಯಗೊಂಡ ಭಗದತ್ತ ಪಲಾಯನ ಮಾಡಿದ.

ವಿ: ಸ್ವತಃ ಮಹಾವಿಷ್ಣುವಾದ ಕೃಷ್ಣನೇ ಬಂದದ್ದನ್ನು ಕಂಡು ವೈಷ್ಣವಾಸ್ತ್ರ ಅವನ ಮೇಲೆ ಯಾವ ಪರಿಣಾಮವನ್ನೂ ಬೀರದೆಂದು ಗಮನಿಸಿದ ಭಗದತ್ತ ಅದನ್ನು ಉಳಿಸಿಕೊಳ್ಳಲೆಂದು ಓಡಿದ ಎಂದರ್ಥ.

ಎಂಟನೆಯ ದಿನದ ಯುದ್ಧದ ಪರಿಸಮಾಪ್ತಿ

ತಸ್ಮಿನ್ ಗತೇ ಭೀಮಸೇನಾರ್ಜುನಾಭ್ಯಾಂ
ವಿದ್ರಾವಿತೇ ರಾಜಸಂಘೇ ಸಮಸ್ತೇ ।
ಭೀಷ್ಮಃ ಸೇನಾಮಪಹೃತ್ಯಾಪಯಾತೋ
ದುರ್ಯೋಧನಸ್ತಂ ನಿಶಿ ಚೋಪಜಗ್ಮಿವಾನ್ ॥ ೯೬ ॥

ಅ: ಭಗದತ್ತ ಹಾಗೆ ಪಲಾಯನಗೈಯ್ಯಲು ಭೀಮಾರ್ಜುನರಿಂದ ರಾಜರ ಗುಂಪೆಲ್ಲ ಓಡಿಸಲ್ಪಡಲು ಭೀಷ್ಮರು ಸೇನೆಯನ್ನು ಹಿಂತೆಗೆದುಕೊಂಡು ಹೊರಟರು; ಅಂದು ರಾತ್ರಿಯಲ್ಲಿ ದುರ್ಯೋಧನ ಭೀಷ್ಮರ ಬಳಿಗೆ ಬಂದನು.

---

೯೫. ಸ ಹಂತುಕಾಮೇನತ್ಯತ್ರ ಸ ರಾಜಾ ವೈಷ್ಣವಾಸ್ತ್ರಂ ಗೃಹೀತುಂ ಪೃಷ್ಠತಃ ಕೃಷ್ಣೇನ ಅರ್ಜುನೇನ ಚ ಸಹ ಪುರತಃ ಭೀಮೇನಾಭಿಪನ್ನಃ= ಪ್ರಾಪ್ತ ಇತಿ ಯೋಜನಾ ॥ – (ವಾ.)

೯೫. ... ಅಭಿಪನ್ನಃ ಪ್ರಾಪ್ತಃ । ತದ್ವರಾಹದತ್ತಂ ವೈಷ್ಣವಮಸ್ತ್ರಂ ಗೃಹೀತುಂ ಆದಾತುಂ ಸಹಾರ್ಜುನೇನ ಕೃಷ್ಣೇನ ಪೃಷ್ಠತಶ್ಚಾಭಿಪನ್ನಃ ಸ ಭಗದತ್ತಃ ಭೀತಃ ಸನ್ ಅಪಯಯೌ ಪರಾವೃತ್ಯ ಯಯೌ । – (ಜ.)

೯೬. ತಂ = ಭೀಮಸೇನಮ್ । – (ಜ.)

ಒಂಭತ್ತನೆಯ ದಿನದ ಯುದ್ಧ - ಭೀಷ್ಮರ ಪರಾಕ್ರಮ

ಸಂಶ್ರಾವಿತಃ ಕ್ರೂರವಚಃ ಸ ತೇನ
ಚಕ್ರೇ ಸತ್ಯಂ ಮೃತ್ಯುಭಯಂ ವಿಹಾಯ ।
ಶಕ್ತ್ಯಾ ಹನಿಷ್ಯಾಮಿ ಪರಾನಿತಿ ಸ್ಮ
ಚಕ್ರೇ ಚ ತತ್ಕರ್ಮ ತಥಾ ಪರೇದ್ಯುಃ ॥ ೯೭ ॥

ಅ: ದುರ್ಯೋಧನ ನಿಷ್ಠುರ ಮಾತುಗಳನ್ನು ನುಡಿದಾಗ ಭೀಷ್ಮರು ಮರಣಭಯವನ್ನು ತೊರೆದು ವೈರಿಗಳನ್ನು ಪೂರ್ಣಶಕ್ತಿಯನ್ನು ವಿನಿಯೋಗಿಸಿ ಕೊಲ್ಲುವುದಾಗಿ ವಚನವಿತ್ತರು. ಮಾರನೆಯ ದಿನ ಆ ಕಾರ್ಯವನ್ನು ಮಾಡಿಯೂಬಿಟ್ಟರು.

ವಿ: ದುರ್ಯೋಧನ ಭೀಷ್ಮಾದಿ ಹಿರಿಯರನ್ನು ಹಾಗೆ ಕೆಟ್ಟ ಮಾತುಗಳಿಂದ ನೋಯಿಸುವ ಮೂಲಕ ಅವರನ್ನು ಕೊಂದ ಪಾಪಕ್ಕೇ ಗುರಿಯಾದನು ಎಂದು ತಿಳಿಯಬೇಕು. ಗುರುಹಿರಿಯರನ್ನು ಹಾಗೆ ನಿಂದಿಸುವುದು ಕೊಲ್ಲುವುದಕ್ಕೆ ಸಮಾನ ಎಂಬ ಮಾತು ಮುಂದೆ ಬರುವುದು (೨೭/೧೨೪).

ತಂ ಶಕ್ತಿತೋ ಜುಗುಪುರ್ಧಾರ್ತರಾಷ್ಟ್ರಾ-
ಸ್ತೇನಾರ್ದಿತಾಶ್ಚೇದಿಪಾಂಚಾಲಮತ್ಸ್ಯಾಃ ।
ಪರಾದ್ರವನ್ ಭೀಷ್ಮಬಾಣೋರುಭೀತಾಃ
ಸಿಂಹಾರ್ದಿತಾಃ ಕ್ಷುದ್ರಮೃಗಾ ಇವಾರ್ತಾಃ ॥ ೯೮ ॥

ಅ: ಕೌರವರು ಭೀಷ್ಮರನ್ನು ತಮ್ಮ ಕೈಲಾದಷ್ಟು ರಕ್ಷಿಸಿದರು. ಭೀಷ್ಮರಿಂದ ಪೀಡಿತರಾದ ಚೇದಿ, ಪಾಂಚಾಲ ಮತ್ತು ಮತ್ಸ್ಯ ದೇಶದ ರಾಜರು ಪಲಾಯನ ಮಾಡಿದರು. ಭೀಷ್ಮರ ಬಾಣಗಳಿಗೆ ಬಹಳವಾಗಿ ಅಂಜಿದ ಅವರು ಸಿಂಹದಿಂದ ಪೀಡಿತವಾದ ಕ್ಷುದ್ರಮೃಗಗಳಂತೆ ದುಃಖಿತರಾದರು.

ಅಭಿಮನ್ಯುವಿನ ಪರಾಕ್ರಮ

ಸಂಸ್ಥಾಪ್ಯ ತಾನ್ ಭೀಷ್ಮಮಭಿಪ್ರಯಾಂತ-
ಮಲಂಬುಸೋಽವಾರಯತ್ ಪಾರ್ಥಸೂನುಮ್ ।
ವಿಜಿತ್ಯ ತಂ ಕೇಶವಭಾಗಿನೇಯೋ
ಯಯೌ ಭೀಷ್ಮಂ ಧಾರ್ತರಾಷ್ಟ್ರೋಽಮುಮಾರ ॥ ೯೯ ॥

ಅ: ಅವರನ್ನು ಓಡದಂತೆ ತಡೆದು ನಿಲ್ಲಿಸಿ ಭೀಷ್ಮರ ಮೇಲೆ ಏರಿ ಹೋಗುತ್ತಿದ್ದ ಅರ್ಜುನ ಹೊರಟ. ಪುತ್ರನಾದ ಅಭಿಮನ್ಯುವನ್ನು ಅಲಂಬುಸ ರಾಕ್ಷಸ ಅಡ್ಡಗಟ್ಟಿದ. ಅಭಿಮನ್ಯು ಅವನನ್ನು ಗೆದ್ದು ಭೀಷ್ಮರ ಮೇಲೆ ಧಾವಿಸಿದ. ಆಗ ದುರ್ಯೋಧನ ಅಭಿಮನ್ಯುವನ್ನು ಎದುರಿಸಿದ.

ತದ್ಯುದ್ಧಮಾಸೀನ್ನೃಪಪಾರ್ಥಪುತ್ರಯೋ-
ರ್ವಿಚಿತ್ರಮತ್ಯದ್ಭುತಮುಗ್ರರೂಪಮ್।
ಸಮಂ ಚಿರಂ ತತ್ರ ಧನುಶ್ಚಕರ್ತ
ಧ್ವಜಂ ಚ ರಾಜಾ ಸಹಸಾऽಭಿಮನ್ಯೋಃ ॥ ೧೦೦ ॥

ಅ: ದುರ್ಯೋಧನನಿಗೂ ಅಭಿಮನ್ಯುವಿಗೂ ಅತ್ಯಂತ ವಿಚಿತ್ರವೂ, ಅತ್ಯದ್ಭುತವೂ, ಭಯಂಕರವೂ ಆದ ಯುದ್ಧ ಬಹುಕಾಲ ಸಮವಾಗಿಯೇ ನಡೆಯಿತು. ಬಳಿಕ ದುರ್ಯೋಧನ ಅಭಿಮನ್ಯುವಿನ ಧನುಸ್ಸು ಮತ್ತು ಧ್ವಜಗಳನ್ನು ಕೂಡಲೇ ಕತ್ತರಿಸಿ ಬೀಳಿಸಿದ.

ಅಥೈನಮುಗ್ರೈಶ್ಚ ಶರೈರ್ಮಹರ್ಷ
ಸೂತಂ ಚ ತಸ್ಯಾಶು ಜಘಾನ ವೀರಃ।
ತದಾऽऽಸದದ್ಭೀಮಸೇನೋ ನೃಪಂ ತಂ
ಜಘಾನ ಚಾಶ್ವಾನ್ ಧೃತರಾಷ್ಟ್ರಜಸ್ಯ ॥ ೧೦೧ ॥

ಅ: ಬಳಿಕ ವೀರನಾದ ದುರ್ಯೋಧನ ಅಭಿಮನ್ಯುವಿನ ಮೇಲೆ ಬಾಣಗಳ ಮಳೆ ಸುರಿಸಿ ಅವನ ಸೂತನನ್ನು ಕೊಂದುಹಾಕಿದ. ಆಗ ಆ ದುರ್ಯೋಧನನನ್ನು ಭೀಮಸೇನ ಎದುರಿಸಿ ಅವನ ಕುದುರೆಗಳನ್ನು ಕೊಂದುಹಾಕಿದ.

ವಿ: ಭೀಮಸೇನ ಅಭಿಮನ್ಯುವಿಗಿಂತ ಎಷ್ಟು ಅಪಾರ ಬಲಶಾಲಿ ಎಂಬುದು ಇದರಿಂದ ತಿಳಿಯುವುದು.

ಭೀಮನ ಅದ್ಭುತ ಪರಾಕ್ರಮ

ದ್ರೋಣಕೋ ದ್ರೌಣಿರ್ಭಗದತ್ತಃ ಕೃಪಶ್ಚ
ಸಚಿತ್ರಸೇನಾ ಅಭ್ಯಯುರ್ಭೀಮಸೇನಮ್।
ಸರ್ವಾಂಶ್ಚ ತಾನ್ ವಿಮುಖೀಕೃತ್ಯ ಭೀಮಃ
ಸ ಚಿತ್ರಸೇನಾಯ ಗದಾಂ ಸಮಾದದೇ ॥ ೧೦೨ ॥

ಅ: ದ್ರೋಣ, ಅಶ್ವತ್ಥಾಮ, ಭಗದತ್ತ, ಕೃಪ, ಚಿತ್ರಸೇನ ಭೀಮಸೇನನನ್ನು ಮುತ್ತಿದರು. ಭೀಮಸೇನ ಅವರನ್ನೆಲ್ಲ ಹಿಮ್ಮೆಟ್ಟಿಸಿ ಚಿತ್ರಸೇನನಿಗೆಂದು ಗದೆಯನ್ನು ಕೈಗೆತ್ತಿಕೊಂಡ.

ತಾಮುದ್ಯತಾಂ ವೀಕ್ಷ್ಯ ಪರಾದ್ರವಂಸ್ತೇ
ಸ ಚಿತ್ರಸೇನಶ್ಚ ರಥಾದವಪ್ಲುತಃ ।
ಸಂಚೂರ್ಣಿತೋ ಗದಯಾ ತದ್ರಥಶ್ಚ
ತಜ್ಜೀವನೇನೋದ್ಧೃಷಿತಾಶ್ಚ ಕೌರವಾಃ ॥ ೧೦೩ ॥

ಅ: ಹಾಗೆ ಗದೆ ಕೈಗೆತ್ತಿಕೊಂಡದ್ದನ್ನು ಕಂಡು ಅವರೆಲ್ಲ ಪಲಾಯನ ಮಾಡಿದರು. ಆ ಚಿತ್ರಸೇನ ರಥದಿಂದ ಕೆಳಕ್ಕೆ ನೆಗೆದ. ಭೀಮನ ಗದೆಯಿಂದ ಅವನ ರಥ ಪುಡಿಯಾಯಿತು. ಚಿತ್ರಸೇನ ಬದುಕಿ ಉಳಿದುದ್ದಕ್ಕೆ ಕೌರವರು ಸಂತೋಷಿಸಿದರು.

ವಿ: ೧) ಭೀಮಸೇನ ಗದೆ ಕೈಗೆತ್ತಿಕೊಂಡಾಗ ಅವರೆಲ್ಲರಿಗೂ ಉಂಟಾದ ಭಯದ ಚಿತ್ರ ಇಲ್ಲಿದೆ. ಚಿತ್ರಸೇನ ಬದುಕಿದನು ಎಂಬುದಷ್ಟೇ ಅವರಿಗೆ ನೆಮ್ಮದಿಯ ವಿಷಯವಾಗಿತ್ತು.

೨) ಭೀಮ ಚಿತ್ರಸೇನನನ್ನು ಮುಂದೆ ಕೊಲ್ಲುವ ವಿಚಾರದಿಂದ ಆಗ ಕೊಲ್ಲದೇ ಬಿಟ್ಟ. ಅವನು ಬದುಕಿದ್ದು ಅದರಿಂದಲೇ ಹೊರತು ಚಿತ್ರಸೇನನ ಕೌಶಲ್ಯದಿಂದೇನೂ ಅಲ್ಲ ಎಂಬುದನ್ನು ಗಮನಿಸಬೇಕು.

ಭೀಷ್ಮರ ಪರಾಕ್ರಮ

ಭೀಷ್ಮಸ್ತು ಪಾಂಚಾಲಕರೂಶಚೇದಿ
ಷ್ವಹನ್ ಸಹಸ್ರಾಣಿ ಚತುರ್ದಶೋಗ್ರಃ ।
ರಥಪ್ರಬರ್ಹಾನತಿತಿಗ್ಮತೇಜಾ
ವಿದ್ರಾವಯಾಮಾಸ ಪರಾನವೀನಿವ ॥ ೧೦೪ ॥

ಅ: ಅತ್ಯಂತ ಪ್ರಖರತೇಜಸ್ಸಿನ ಭೀಷ್ಮರು ಪಾಂಚಾಲ, ಕರೂಶ ಮತ್ತು ಚೇದಿ ದೇಶದ ರಾಜರಿಗೆ ಸೇರಿದ ಹದಿನಾಲ್ಕು ಸಾವಿರ ಮಹಾರಥರನ್ನು ಸಂಹರಿಸಿದ; ತೋಳ ಕುರಿಗಳನ್ನು ಓಡಿಸುವಂತೆ ಶತ್ರುಗಳನ್ನು ಓಡಿಸಿದರು.

---

೧೦೩. ಉದ್ಧೃಷಿತಾಃ ಉತ್ಕೃಷ್ಟಾನಂದಿನಃ ಬಭೂವುರಿತಿ ಶೇಷಃ । – (ಜ.)

೧೦೪. ವೃಕ ಇತಿ ಶೇಷಃ । – (ಜ.)

ವಿದ್ರಾವ್ಯ ಸರ್ವಾಮಪಿ ಪಾಂಡುಸೇನಾಂ
ವಿಶ್ರಾವ್ಯ ಲೋಕೇಷು ಚ ಕೀರ್ತಿಮಾತ್ಮನಃ।
ಸೇನಾಂ ಸಮಾಹೃತ್ಯ ಯಯೌ ನಿಶಾಗಮೇ
ಸಂಪೂಜ್ಯಮಾನೋ ಧೃತರಾಷ್ಟ್ರಪುತ್ರೈಃ ॥ ೧೦೫ ॥

ಅ: ಪಾಂಡವರ ಸೇನೆಯನ್ನೆಲ್ಲ ಓಡಿಸಿ ಲೋಕಗಳಲ್ಲಿ ತನ್ನ ಕೀರ್ತಿಯನ್ನು ಹರಡಿಸಿ ಭೀಷ್ಮರು ರಾತ್ರಿಯಾದಾಗ ಸೇನೆಯನ್ನು ಹಿಂತೆಗೆದುಕೊಂಡು ಕೌರವರಿಂದ ಹೊಗಳಿಸಿಕೊಳ್ಳುತ್ತಾ ಶಿಬಿರಕ್ಕೆ ಮರಳಿದರು.

ವಿ: ಅಂತೂ ವಚನ ನೀಡಿದ್ದಂತೆ ಅಂದಿನ ದಿನ ಭೀಷ್ಮರು ತಮ್ಮ ಅಪೂರ್ವ ಪರಾಕ್ರಮವನ್ನು ಮೆರೆದು ಕೌರವರಲ್ಲಿ ಒಂದು ಬಗೆಯ ನಲಿವಿಗೆ ಕಾರಣರಾದರು. ಅದರಿಂದಾಗಿ ಕೌರವರು ಅವರನ್ನು ಬಹಳವಾಗಿ ಕೊಂಡಾಡಿದರು.

ಶಂಖನವಧೆ

ದ್ರೋಣೋ ವಿರಾಟಸ್ಯ ಪುರೋ ನಿಹತ್ಯ
ಶಂಖಂ ಸುತಂ ತಸ್ಯ ವಿಜಿತ್ಯ ತಂ ಚ ।
ವಿದ್ರಾವ್ಯ ಸೇನಾಮಪಿ ಪಾಂಡವಾನಾಂ
ಯಯೌ ನದೀಜೇನ ಸಹೈವ ಹೃಷ್ಟಃ ॥ ೧೦೬ ॥

ಅ: ದ್ರೋಣರು ವಿರಾಟನ ಎದುರೇ ಅವನ ಮಗನಾದ ಶಂಖನನ್ನು ಸಂಹರಿಸಿದರು. ವಿರಾಟನನ್ನೂ ಸೋಲಿಸಿದರು. ಪಾಂಡವರ ಸೇನೆಯನ್ನು ಓಡಿಸಿ ಸಂತೋಷದಿಂದ ಭೀಷ್ಮ-ರೊಂದಿಗೆ ನಡೆದರು.

ವಿ: ಭೀಷ್ಮರಂತೆ ದ್ರೋಣರೂ ಸಹ ಒಳ್ಳೆ ಯುದ್ಧವನ್ನೇ ಮಾಡಿ ತಮ್ಮ ಪರಾಕ್ರಮವನ್ನು ಮೆರೆದರು ಎಂದರ್ಥ.

ಭೀಮಾರ್ಜುನರ ಪರಾಕ್ರಮ - ಒಂಭತ್ತನೆಯ ದಿನದ ಯುದ್ಧದ ಪರಿಸಮಾಪ್ತಿ

ಭೀಮಾರ್ಜುನಾವಪಿ ಶತ್ರೂನ್ ನಿಹತ್ಯ
ವಿದ್ರಾವ್ಯ ಸರ್ವಾಂಶ್ಚ ಯುಧಿ ಪ್ರವೀರಾನ್ ।
ಯುಧಿಷ್ಠಿರೇಣಾಪಹೃತೇ ಸ್ವಸೈನ್ಯೇ
ಭೀತೇನ ಭೀಷ್ಮಾಚ್ಛಿಬಿರಂ ಪ್ರಜಗ್ಮತುಃ ॥ ೧೦೭ ॥

ಅ: ಭೀಮಾರ್ಜುನರೂ ಸಹ ಶತ್ರುಗಳನ್ನು ಕೊಂದು ಮಹಾವೀರರನ್ನೆಲ್ಲ ಯುದ್ಧದಲ್ಲಿ ಓಡಿಸಿದರು. ಧರ್ಮರಾಜ ಭೀಷ್ಮರ ಭಯದಿಂದ ತಮ್ಮ ಸೈನ್ಯವನ್ನು ಹಿಂತೆಗೆದುಕೊಳ್ಳಲು ತಾವೂ ಶಿಬಿರಕ್ಕೆ ತೆರಳಿದರು.

ವಿ: ಅಂದಿನ ಮಟ್ಟಿಗೆ ಭೀಷ್ಮರ ಪರಾಕ್ರಮ ಧರ್ಮರಾಜನ ಪಾಲಿಗೆ ಆತಂಕ ಹುಟ್ಟಿಸಿತ್ತು ಎಂದರ್ಥ.

ಭೀಷ್ಮರ ಬಳಿಗೆ ಯುಧಿಷ್ಠಿರ

ಯುಧಿಷ್ಠಿರೋ ಭೀಷ್ಮಪರಾಕ್ರಮೇಣ
ಭೀತೋ ಭೀಷ್ಮಂ ಸ್ವವಧೋಪಾಯಮೇವ ।
ಪ್ರಷ್ಟುಂ ಯಯೌ ನಿಶಿ ಕೃಷ್ಣೋಽನುಜಾಶ್ಚ
ತಸ್ಯಾನ್ವಯುಸ್ತಂ ಸ ಪಿತಾಮಹೋ ಯತ್ ॥ ೧೦೮ ॥

ಅ: ಧರ್ಮರಾಜ ಭೀಷ್ಮರ ಪರಾಕ್ರಮದಿಂದ ಭಯಗೊಂಡು ಅವರ ವಧೆಯ ಉಪಾಯವನ್ನು ಅವರನ್ನೇ ಕೇಳಲೆಂದು ರಾತ್ರಿಯಲ್ಲಿ ಅವರ ಬಳಿಗೆ ತೆರಳಿದ. ಕೃಷ್ಣ ಮತ್ತು ಧರ್ಮರಾಜನ ತಮ್ಮಂದಿರು ಭೀಷ್ಮರು ಪಿತಾಮಹರು ಎಂಬ ಕಾರಣದಿಂದ ಅವನನ್ನು ಹಿಂಬಾಲಿಸಿ ನಡೆದರು.

ಭೀಮಾರ್ಜುನೌ ಶಕ್ನುವಂತಾವಪಿ ಸ್ಮ
ನರ್ತೇಽನುಜ್ಞಾಂ ಹಂತುಮಿಮಂ ತದೈಚ್ಛತಾಮ್ ।
ಪೂಜ್ಯೋ ಯತೋ ಭೀಷ್ಮ ಉದಾರಕರ್ಮಾ
ಕೃಷ್ಣೋಽಪ್ಯಯಾತ್ ತೇನ ಹಿ ಪಾಂಡವಾರ್ಥೇ ॥ ೧೦೯ ॥

ಅ: ಭೀಮಾರ್ಜುನರು ಅತ್ಯಂತ ಸಮರ್ಥರಾಗಿದ್ದರೂ ಭೀಷ್ಮರನ್ನು ಅವರ ಅನುಜ್ಞೆ ಇಲ್ಲದೇ ಕೊಲ್ಲಲು ಅಪೇಕ್ಷಿಸಿರಲಿಲ್ಲ. ಭೀಷ್ಮರು ಶ್ರೇಷ್ಠ ಕರ್ಮವನ್ನಾಚರಿಸುವ ಪೂಜ್ಯರಾಗಿದ್ದರು ಎಂಬುದೇ ಅದಕ್ಕೆ ಕಾರಣ. ಪಾಂಡವರಿಗೋಸ್ಕರ ಕೃಷ್ಣನೂ ಅಲ್ಲಿಗೆ ತೆರಳಿದ.

ವಿ: ಧರ್ಮರಾಜನಿಗೆ ಇದ್ದ ಆತಂಕ ಕೃಷ್ಣನಿಗಾಗಲೀ, ಭೀಮಾರ್ಜುನರಿಗಾಗಲೀ ಇರಲಿಲ್ಲ ಎಂಬುದು ಇಲ್ಲಿಯ ವಿಶೇಷ. ಅವರು ಅವನನ್ನು ಹಿಂಬಾಲಿಸಿದ್ದು ಪಿತಾಮಹರೆಂಬ ಗೌರವದಿಂದಲೇ

---

೧೦೯. ಆಜ್ಞಾಂ ದಾಪಯಿತುಮಿತಿ ವಾಕ್ಯಶೇಷಃ । – (ಜ.)

ಹೊರತು ಧರ್ಮರಾಜನಂತೆ ಅವರ ವಧೋಪಾಯವನ್ನು ತಿಳಿಯುವ ಕುತೂಹಲದಿಂದಲ್ಲ. ಅವರಿಗೆ ಭೀಷ್ಮವಧೆ ಸಮಸ್ಯೆಯಾಗಿರಲಿಲ್ಲ ಎಂಬ ಮಾತು ಈಗಾಗಲೇ ಬಂದಿದೆ (ಶ್ಲೋ. ೨೫/೩೬).

ಹತ್ತನೆಯ ದಿನದ ಯುದ್ಧ

ಪ್ರಾಪ್ಯಾನುಜ್ಞಾಂ ಭೀಷ್ಮತಸ್ತೇ ವಧಾಯ
ಶಿಖಂಡಿನಂ ತದ್ವಚಸಾऽಗ್ರ್ಯಾಯಿನಮ್।
ಕೃತ್ವಾ ಪರೇದ್ಯುರ್ಯುಧಯೇ ವಿನಿರ್ಗತಾ
ಭೀಷ್ಮಂ ಪುರಸ್ಕೃತ್ಯ ತಥಾऽಪರೇऽಪಿ ॥ ೧೧೦ ॥

ಅ: ಪಾಂಡವರು ಅವರನ್ನು ಕೊಲ್ಲಲು ಭೀಷ್ಮರಿಂದ ಅನುಜ್ಞೆ ಪಡೆದು ಅವರ ಮಾತಿನಂತೆ ಶಿಖಂಡಿಯನ್ನು ಮುಂದಾಳುವನ್ನಾಗಿ ಮಾಡಿಕೊಂಡು ಮಾರನೆಯ ದಿನ ಯುದ್ಧಕ್ಕೆಂದು ಹೊರಟು ನಿಂತರು. ಕೌರವರೂ ಸಹ ಭೀಷ್ಮರನ್ನು ಮುಂದಿಟ್ಟುಕೊಂಡು ಯುದ್ಧಕ್ಕೆ ಹೊರಟರು.

ವಿ: ೧) ಅಂತೂ ಪಾಂಡವರು ಪಡೆದದ್ದು ಭೀಷ್ಮರನ್ನು ಕೊಲ್ಲಲು ಅನುಮತಿಯನ್ನೇ ಹೊರತು ಉಪಾಯವನ್ನೇನಲ್ಲ. ಭೀಷ್ಮರಂತಹ ಹಿರಿಯರನ್ನು ಅವರು ಅಪೇಕ್ಷಿಸಿದ ರೀತಿಯಲ್ಲೇ ಕೊಲ್ಲುವ ಮೂಲಕ ಅವರಿಗೆ ತೃಪ್ತಿ ನೀಡುವುದು, ಅದರೊಂದಿಗೆ ಭೀಷ್ಮರು ಇತರರಂತೆ ಯಾವುದೋ ರೀತಿಯಲ್ಲಿ ಸಾಯಲಿಲ್ಲ ಎಂಬ ಕೀರ್ತಿಯನ್ನು ಹೊಂದಲು ಅವಕಾಶ ನೀಡುವುದು ಪಾಂಡವರ ಉದ್ದೇಶವಾಗಿತ್ತೇ ಹೊರತು ಕೊಲ್ಲುವ ಉಪಾಯ ತಿಳಿಯುವುದಾಗಿರಲಿಲ್ಲ.

೨) ಶಿಖಂಡಿಯನ್ನು ಮುಂದಿಟ್ಟುಕೊಂಡು ಯುದ್ಧಕ್ಕೆ ಬಂದಲ್ಲಿ ತಾವು ಅವನೊಂದಿಗೆ ಕಾದಬಯಸದೆ ಶಸ್ತ್ರತ್ಯಾಗ ಮಾಡುವುದಾಗಿಯೂ, ಆಗ ತಮ್ಮನ್ನು ಕೊಂದಲ್ಲಿ ತಮ್ಮ ಕೀರ್ತಿಗೆ ಕಳಂಕ ತಟ್ಟದಾಗಿಯೂ ಭೀಷ್ಮರು ತಮ್ಮ ಅಪೇಕ್ಷೆಯನ್ನು ತಿಳಿಸಿದಾಗ ಪಾಂಡವರು ಅದಕ್ಕೆ ಸಮ್ಮತಿಸಿ ಅದರಂತೆಯೇ ಮಾಡಿದರು ಎಂದರ್ಥ :

ಅರ್ಜುನಃ ಸಮರೇ ಶೂರಃ ಪುರಸ್ಕೃತ್ಯ ಶಿಖಂಡಿನಮ್ ।
ಮಾಮೇವ ವಿಶಿಖೈಸ್ತೀಕ್ಷ್ಣೈರಭದ್ರವತು ದಂಶಿತಃ ॥...
ತದಂತರಂ ಸಮಾಸಾದ್ಯ ಪಾಂಡವೋ ಮಾಂ ಧನಂಜಯಃ ।
ಶರೈರ್ಘಾತಯತು ಕ್ಷಿಪ್ರಂ ಸಮಂತಾದ್ಭರತರ್ಷಭ ॥

– ಭಾರತ (ಭೀಷ್ಮ. ೧೦೭/೮೨-೮೪)

---

೧೧೦. ಯುಧಯೇ ವಿನಿರ್ಗತಾ ಇತ್ಯತ್ರ ಯುದ್ಧ್ಯಂತಿ ಅತ್ರೇತಿ ಯುಧಿಃ ಯುದ್ಧಮ್ ॥ – (ವಾ.)

ಶಿಖಂಡಿನೋ ರಕ್ಷಕಃ ಫಲ್ಗುನೋಽಭೂದ್
ಭೀಷ್ಮಸ್ಯ ದುಃಶಾಸನ ಆಸ ಚಾಗ್ರೇ।
ಅನ್ಯೇಽಪಿ ಸರ್ವೇ ಜುಗುಪುರ್ಭೀಷ್ಮಮೇವ
ನ್ಯವಾರಯನ್ ಭೀಮಸೇನಾದಯಸ್ತಾನ್ ॥ ೧೧೧ ॥

ಅ: ಶಿಖಂಡಿಗೆ ರಕ್ಷಕನಾಗಿ ಅರ್ಜುನ ಹೊರಟ. ಭೀಷ್ಮರ ಮುಂಭಾಗದಲ್ಲಿ ದುಃಶಾಸನ ನಿಂತ. ಇತರ ಎಲ್ಲರೂ ಭೀಷ್ಮರನ್ನೇ ರಕ್ಷಿಸತೊಡಗಿದರು. ಭೀಮಸೇನ ಮೊದಲಾದವರು ಅವರನ್ನು ತಡೆಯಲು ಹೊರಟರು.

ಏ: ದುರ್ಯೋಧನ ಯುದ್ಧಾರಂಭದಲ್ಲಿಯೇ ಭೀಷ್ಮರನ್ನು ತಾವೆಲ್ಲಾ ರಕ್ಷಿಸಬೇಕು ಎಂದು ದ್ರೋಣರನ್ನು ಪ್ರಾರ್ಥಿಸಿಕೊಂಡದ್ದನ್ನು ಇಲ್ಲಿ ಗಮನಿಸಬೇಕು (ಗೀತಾ ೧/೧೧).

ಭೀಷ್ಮಾಯ ಯಾಂತಂ ಯುಯುಧಾನಮಾಜೌ
ನ್ಯವಾರಯದ್ರಾಕ್ಷಸೋಽಲಂಬುಸೋಽಥ ।
ತಂ ವಜ್ರಕಲ್ಪೈರತುದದ್ವೃಷ್ಣಿವೀರಃ
ಶರೈಃ ಸ ಮಾಯಾಮಸೃಜತ್ ತದೋಗ್ರಾಮ್ ॥ ೧೧೨ ॥

ಅ: ಭೀಷ್ಮರ ಮೇಲೆ ತೆರಳಿದ ಸಾತ್ಯಕಿಯನ್ನು ರಾಕ್ಷಸ ಅಲಂಬುಸ ಅಡ್ಡಗಟ್ಟಿದ. ಯಾದವ ವೀರನಾದ ಸಾತ್ಯಕಿ ವಜ್ರಸದೃಶವಾದ ಬಾಣಗಳಿಂದ ಅವನನ್ನು ನೋಯಿಸಿದ. ಅವನಾಗ ಭಯಂಕರವಾದ ಮಾಯೆಯನ್ನು ಸೃಷ್ಟಿಸಿದ.

ಅಸ್ತ್ರೇಣ ಮಾಯಾಮಪನುದ್ಯ ವೀರೋ
ವ್ಯದ್ರಾವಯದ್ರಾಕ್ಷಸಂ ಸಾತ್ಯಕಿಸ್ತಮ್।
ತಸ್ಮಿನ್ ಗತೇ ಯುಯುಧಾನೋ ರಥೇನ
ಯಯೌ ಭೀಷ್ಮಂ ಪಾರ್ಥಮನ್ವೇವ ಧನ್ವೀ ॥ ೧೧೩ ॥

---

೧೧೩. ಅಸ್ತ್ರೇಣ ಮಾಯಾಮಿತ್ಯತ್ರ ಅಸ್ತ್ರೇಣ= ವಿಜ್ಞಾನಾಸ್ತ್ರೇಣ ॥ – (ವಾ.)

೧೧೩. ಐಂದ್ರಮಸ್ತ್ರಂ ಚ ವಾರ್ಷ್ಣೇಯೋ ಯೋಜಯಾಮಾಸ ಭಾರತ। – ಭಾರತ (ಭೀಷ್ಮ. ೮೨/೪೨)

ಅ: ಅಸ್ತ್ರದಿಂದ ರಾಕ್ಷಸನ ಮಾಯೆಯನ್ನು ನಾಶಮಾಡಿ ವೀರನಾದ ಸಾತ್ಯಕಿ ಅವನನ್ನು ದೂರಕ್ಕೆ ಅಟ್ಟಿದ. ಅವನು ಓಡಿದ ಮೇಲೆ ಸಾತ್ಯಕಿ ರಥದಿಂದ ಅರ್ಜುನನ ಹಿಂದೆ ಧನುರ್ಧಾರಿಯಾಗಿ ಭೀಷ್ಮರತ್ತ ಸಾಗಿದ.

ಭೀಮನ ಪರಾಕ್ರಮ

ದ್ರೋಣೋ ದ್ರೌಣಿರ್ಧಾರ್ತರಾಷ್ಟ್ರಶ್ಚ ರಾಜಾ
ಭೂರಿಶ್ರವಾ ಭಗದತ್ತಃ ಕೃಪಶ್ಚ।
ಶಲ್ಯೋ ಬಾಹ್ಲೀಕಃ ಕೃತವರ್ಮಾ ಸುಶರ್ಮಾ
ಸರ್ವಾಶ್ಚ ಸೇನಾ ವಾರಿತಾ ವಾಯುಜೇನ ॥ ೧೧೪ ॥

ಅ: ದ್ರೋಣ, ಅಶ್ವತ್ಥಾಮ, ದುರ್ಯೋಧನ, ಭೂರಿಶ್ರವಸ್, ಭಗದತ್ತ, ಕೃಪ, ಶಲ್ಯ, ಬಾಹ್ಲೀಕ, ಕೃತವರ್ಮ, ಸುಶರ್ಮರನ್ನು, ಸಕಲ ಸೇನೆಯನ್ನೂ ಭೀಮಸೇನ ತಡೆದು ನಿಲ್ಲಿಸಿದ.

ವಿ: ಭೀಮಸೇನನೊಬ್ಬನೇ ದ್ರೋಣಾದಿ ಮಹಾರಥಿಕರನ್ನೆಲ್ಲ ಅವರ ಸೇನಾಸಮೇತವಾಗಿ ತಡೆದು ನಿಲ್ಲಿಸಿದ್ದು 'ಭೀಮಸೇನ ಸಮೋ ನಾಸ್ತಿ' ಎಂಬುದಕ್ಕೆ ಮತ್ತೊಂದು ಅಪೂರ್ವ ನಿದರ್ಶನ.

ಸ ತಾನ್ ಮುಹುರ್ವಿರಥೀಕೃತ್ಯ ವೀರಃ
ಪ್ರಾಗ್ಜ್ಯೋತಿಷಂ ಸಗಜಂ ದ್ರಾವಯಿತ್ವಾ।
ನ್ಯವಾರಯತ್ ಫಲ್ಗುನಂ ರೋದ್ಧುಕಾಮಂ
ಪಾರ್ಥಶ್ಚ ದೇವವ್ರತಮಾಸಸಾದ ॥ ೧೧೫ ॥

ಅ: ವೀರನಾದ ಭೀಮಸೇನ ಅವರನ್ನೆಲ್ಲ ಮತ್ತೆ ಮತ್ತೆ ವಿರಥರನ್ನಾಗಿ ಮಾಡಿದ. ಅರ್ಜುನನನ್ನು ತಡೆಯಬಯಸಿದ ಭಗದತ್ತನನ್ನು ಆನೆಯೊಂದಿಗೆ ಹೊಡೆದೋಡಿಸಿದ. ಅರ್ಜುನ ಭೀಷ್ಮರನ್ನು ಸಮೀಪಿಸತೊಡಗಿದ.

---

೧೧೫. ನ್ಯವರಾಯತ್ ಫಲ್ಗುನಂ ರೋದ್ಧುಕಾಮಮಿತ್ಯತ್ರ ಪ್ರಾಗ್ಜ್ಯೋತಿಷಂ ದ್ರಾವಯಿತ್ವಾ ಫಲ್ಗುನಂ ರೋದ್ಧುಂ ಯಃ ಕಾಮಃ ತಂ ನ್ಯವಾರಯದಿತಿ ಯೋಜನಾ। ಫಲ್ಗುನಪ್ರತಿರೋಧೇಚ್ಛಾಂ ದೂರೀಚಕಾರೇತಿ ಭಾವಃ। ಪುನರಭ್ಯಾಗಮನಂ ನ್ಯವಾರಯದಿತಿ ವಾ। ವಿದ್ರಾವಯಿತ್ವೈವ ನ್ಯವಾರಯತ್ ನ ತು ಸಮತಯಾ ಯುದ್ಧಂ ಕುರ್ವಾಣಮಿತಿ ವಾ। ಅತ ಏವಾಹ ಪಾರ್ಥಶ್ಚ ದೇವವ್ರತಮಾಸಸಾದೇತಿ ॥ – (ವಾ.)

* ಯೋದ್ಧುಕಾಮಮ್ – (ಪಾಠಾಂತರ)

ಯುಧಿಷ್ಠಿರಾದಿಗಳಿಂದ ಶಕುನಿಯ ಪರಾಭವ

ಯುಧಿಷ್ಠಿರಂ ಭೀಷ್ಮಮಭಿಪ್ರಯಾಂತಂ
ಮಾದ್ರೀಸುತಾಭ್ಯಾಂ ಸಹಿತಂ ನೃವೀರಮ್ ।
ನ್ಯವಾರಯಚ್ಛಕುನಿಃ ಸಾದಿನಾಂ ಚ
ಯುತೋಽಯುತೇನೈವ ವರಾಶ್ವಗೇನ ॥ ೧೧೬ ॥

ಅ: ನಕುಲ, ಸಹದೇವರೊಂದಿಗೆ ಭೀಷ್ಮರತ್ತ ಹೊರಟಿದ್ದ ಮಹಾವೀರನಾದ ಧರ್ಮರಾಜನನ್ನು ಶ್ರೇಷ್ಠ ಅಶ್ವಾರೋಹಿಗಳಾಗಿದ್ದ ಹತ್ತುಸಾವಿರ ಸೈನಿಕರೊಂದಿಗೆ ಶಕುನಿ ಅಡ್ಡಗಟ್ಟಿದ.

ವಿ: ಧರ್ಮರಾಜ ಧರ್ಮದ ಪ್ರತೀಕವಾದರೆ, ಶಕುನಿ ನಾಸ್ತಿಕ್ಯದ ಪ್ರತೀಕ. ಧರ್ಮರಾಜನನ್ನು ಶಕುನಿ ಎದುರಿಸಿದ್ದು ಧರ್ಮವನ್ನು ನಾಸ್ತಿಕ್ಯ ಎದುರಿಸುವುದಕ್ಕೆ ದ್ಯೋತಕ. ಅವನ ಹತ್ತು ಸಾವಿರ ಸೈನಿಕರು ಕೆಟ್ಟ ಹತ್ತು ಇಂದ್ರಿಯಗಳ ಸಂಕೇತ.

ತಾನ್ ಸಾದಿನೋಽಶ್ವಾಂಶ್ಚ ನಿಹತ್ಯ ಸರ್ವಾನ್
ವಿಜಿತ್ಯ ತಂ ಶಕುನಿಂ ಪಾಂಡವಾಸ್ತೇ।
ಪ್ರಾಪುರ್ಭೀಷ್ಮಂ ದ್ರೌಪದೇಯಾಶ್ಚ ಸರ್ವೇ
ತಥಾ ವಿರಾಟದ್ರುಪದೌ ಕುಂತಿಭೋಜಃ ॥ ೧೧೭ ॥

ಅ: ಆ ಮೂವರು ಪಾಂಡವರು ಆ ಕುದುರೆಗಳನ್ನು, ಅಶ್ವಾರೋಹಿಗಳನ್ನು ಸಂಪೂರ್ಣವಾಗಿ ನಾಶಮಾಡಿ, ಶಕುನಿಯನ್ನು ಸೋಲಿಸಿ ಭೀಷ್ಮರನ್ನು ತಲುಪಿದರು. ದ್ರೌಪದೀಪುತ್ರರು, ಹಾಗೆಯೇ ವಿರಾಟ, ದ್ರುಪದ, ಕುಂತಿಭೋಜರು ಅಲ್ಲಿಗೆ ತಲುಪಿದರು.

ಧೃಷ್ಟದ್ಯುಮ್ನನಿಂದ ಜಯದ್ರಥನ ಪರಾಭವ

ಧೃಷ್ಟದ್ಯುಮ್ನಂ ಭೀಷ್ಮಮಭಿಪ್ರಯಾಂತಂ
ನ್ಯವಾರಯತ್ ಸೈಂಧವಸ್ತಂ ಸ ಬಾಣೈಃ ।
*ಹತಾಶ್ವಸೂತಂ ಸಗಣಂ ದ್ರಾವಯಿತ್ವಾ
ಸಮಾಸದದ್ಭೀಷ್ಮಮೇವಾಶು ವೀರಃ ॥ ೧೧೮ ॥

---

* ಹತಾಶ್ಚ ಸೂತಂ – (ಜ. ಪಾಠ)

ಅ: ಭೀಷ್ಮರ ಮೇಲೆ ಏರಿ ಹೊರಟ ಧೃಷ್ಟದ್ಯುಮ್ನನನ್ನು ಜಯದ್ರಥ ಬಾಣಗಳಿಂದ ತಡೆದ. ಧೃಷ್ಟದ್ಯುಮ್ನ ಅವನ ಕುದುರೆಗಳನ್ನು, ಸಾರಥಿಯನ್ನು ಕೊಂದು ಸೇನೆಯೊಂದಿಗೆ ಅವನನ್ನು ಓಡಿಸಿದ. ಬಳಿಕ ಬೇಗನೆ ವೀರನಾದ ಅವನು ಭೀಷ್ಮರನ್ನು ಸಮೀಪಿಸಿದ.

ಪಾರ್ಥರಕ್ಷಣೆಯಲ್ಲಿ ಶಿಖಂಡಿ

ಗುಪ್ತೋಽಥ ಪಾರ್ಥೇನ ರಣೇ ಶಿಖಂಡೀ
ಭೀಷ್ಮಂ ಸಮಾಸಾದ್ಯ ಶರೈರತಾಡಯತ್।
ಭೀಷ್ಮಃ ಸ್ತ್ರೀತ್ವಂ ತಸ್ಯ ಜಾನನ್ ನ ತಸ್ಮೈ
ಮುಮೋಚ ಬಾಣಾನ್ ಸ ತು ತಂ ತುತೋದ ॥ ೧೧೯ ॥

ಅ: ಅರ್ಜುನನಿಂದ ರಕ್ಷಿತನಾದ ಶಿಖಂಡಿ ಯುದ್ಧದಲ್ಲಿ ಭೀಷ್ಮರನ್ನು ಎದುರಿಸಿ ಬಾಣಗಳಿಂದ ಹೊಡೆಯತೊಡಗಿದ. ಭೀಷ್ಮರು ಅವನು ಹೆಣ್ಣೆಂಬುದನ್ನು ತಿಳಿದು ಅವನ ಮೇಲೆ ಬಾಣಗಳನ್ನು ಪ್ರಯೋಗಿಸಲಿಲ್ಲ. ಶಿಖಂಡಿ ಮಾತ್ರ ಭೀಷ್ಮರನ್ನು ಪೀಡಿಸುತ್ತಲೇ ಇದ್ದ.

ವಿ: ಶಿಖಂಡಿ ಮೂಲತಃ ಭೀಷ್ಮಪತ್ನಿಯಾದ ಅಂಬೆಯೇ; ದ್ಯುನಾಮವಸುವಿನ ಪತ್ನಿ ವರಾಂಗಿಯೇ ಅಂಬೆ. ಅಂಬೆ ಶಿಖಂಡಿಯಾಗಿ ಜನಿಸಿದ್ದೇ ಭೀಷ್ಮರ ವಧೆಗೆ ಕಾರಣವಾಗಬೇಕೆಂದು. ಶಿವನಿಂದ ಅವಳು ವರ ಪಡೆದಿದ್ದುದ್ದೇ ಹಾಗೆ (೧೧/೨೬). ಅದರಂತೆ ಈಗ ತನ್ನ ಕೋಪವನ್ನೆಲ್ಲ ಭೀಷ್ಮರನ್ನು ಬಾಣಗಳಿಂದ ನೋಯಿಸುವ ಮೂಲಕ ತೀರಿಸಿಕೊಳ್ಳುತ್ತಿದ್ದಳು ಎಂದರ್ಥ.

ಶಿಖಂಡಿನಂ ವಾರಯಾಮಾಸ ಬಾಣೈ-
ರ್ದುರ್ಮರ್ಷಣೋಽಮರ್ಷಣವಿಹ್ವಲೇಕ್ಷಣಃ।
ನಾತ್ಯೇತುಮೇನಮಶಕಚ್ಛಿಖಂಡೀ
ದುಃಶಾಸನಃ ಪಾರ್ಥಮವಾರಯತ್ ತದಾ ॥ ೧೨೦ ॥

ಅ: ದುರ್ಮರ್ಷಣ ಬಾಣಗಳಿಂದ ಶಿಖಂಡಿಯನ್ನು ತಡೆಯಲು ನೋಡಿದ; ಕೋಪದಿಂದ ಅವನು ಕಣ್ಣುಗಳನ್ನು ತಿರುಗಿಸುತ್ತಿದ್ದ, ಅವನನ್ನು ದಾಟಿ ಹೋಗಲು ಶಿಖಂಡಿಗೆ ಸಾಧ್ಯವಾಗಲಿಲ್ಲ ದುಃಶಾಸನ ಆಗ ಅರ್ಜುನನನ್ನು ತಡೆದ.

ವಿ: ದುರ್ಮರ್ಷಣ ದುರ್ಯೋಧನನ ತಮ್ಮಂದಿರಲ್ಲಿ ಒಬ್ಬ (ಭಾರತ ಆದಿ. ೧೧೬/೩).

ಅರ್ಜುನ ದುಃಶಾಸನರ ಯುದ್ಧ

ಸ ಲೋಕವೀರೋಽಪಿ ದುರಾತ್ಮನಾಽಮುನಾ
ರುದ್ಧೋಽಶಕನ್ನೈನಮತೀತ್ಯ ಯಾತುಮ್ ।
ಭೀಷ್ಮಂ ಪಾರ್ಥಃ ಸಾಯಕಾಶ್ಚಾಸ್ಯ ತಸ್ಮಿನ್
ಸಸಜ್ಜಿರೇ ಪರ್ವತೇಷ್ವಪ್ಯಸಕ್ತಾಃ ॥ ೧೨೧ ॥

ಅ: ಅರ್ಜುನ ಲೋಕವೀರನಾದರೂ ದುರಾತ್ಮನಾದ ದುಃಶಾಸನ ತಡೆದಾಗ ಅವನನ್ನು ದಾಟಿ ಭೀಷ್ಮರತ್ತ ತೆರಳಲು ಅವನಿಗೆ ಸಾಧ್ಯವಾಗದಾಯಿತು. ಪರ್ವತಗಳನ್ನು ಭೇದಿಸಿಕೊಂಡು ಹೋಗಬಲ್ಲ ಅವನ ಬಾಣಗಳು ದುಃಶಾಸನನನ್ನು ದಾಟಿ ಹೋಗಲು ಸಮರ್ಥವಾಗಲಿಲ್ಲ.

ಅಮರ್ಷಯುಕ್ತೌ ಚಿರಮೇವ ವೀರಾ-
ವಯುಧ್ಯತಾಮರ್ಜುನಧಾರ್ತರಾಷ್ಟ್ರೌ ।
ಸಮಂ ತದಾಸೀನ್ಮಹದದ್ಭುತಂ ಚ
ದಿವೌಕಸಾಂ ಪಶ್ಯತಾಂ ಭೂಭೃತಾಂ ಚ ॥ ೧೨೨ ॥

ಅ: ವೀರರಾದ ಅರ್ಜುನ ದುಃಶಾಸನರು ಕೆರಳಿದವರಾಗಿ ಬಹುಕಾಲ ಯುದ್ಧ ಮಾಡಿದರು. ದೇವತೆಗಳು, ರಾಜರು ನೋಡುತ್ತಿದ್ದ ಆ ಯುದ್ಧ ಅದ್ಭುತವಾಗಿ, ಸಮನಾಗಿ ನಡೆಯಿತು.

ತದಾ ವಿರಾಟದ್ರುಪದೌ ಕುಂತಿಭೋಜಂ
ಕೃಷ್ಣಾಸುತಾನ್ ಕೇಕಯಾಂಶ್ಚೇಕಿತಾನಮ್ ।
ಭೂರಿಶ್ರವಾಃ ಸೋಮದತ್ತೋ ವಿಕರ್ಣಃ
ಸಕೇಕಯಾ ವಾರಯಾಮಾಸುರುಚ್ಚೈಃ ॥ ೧೨೩ ॥

---

೧೨೧. ಸಾಯಕಾಶ್ಚಾಸ್ಯ ತಸ್ಮಿನ್ ಸಸಜ್ಜಿರ ಇತ್ಯತ್ರ ಅಸ್ಯ = ಅರ್ಜುನಸ್ಯ । ಪರ್ವತೇಷ್ವಪ್ಯಸಕ್ತಾಃ = ಪರ್ವತೇಷು ಪ್ರಯೋಗೇಽಪಿ ಸಕ್ತಾ ನ ಭವಂತಿ ಸಂಬದ್ಧ ಸ್ಥಿತಾ ನ ಭವಂತಿ। ಕಿಂತು ಪರ್ವತಮಪಿ ವಿದಾರ್ಯ ಗಚ್ಛಂತೀತ್ಯರ್ಥಃ। **ಪರ್ವತೇಷ್ವಪ್ಯಮುಕ್ತಾ** ಇತಿ ಪಾಠೇ ಸ್ವಮೂಲರೂಪೇಣ ಪರ್ವತೈಃ ಸಹ ಯುದ್ಧೇಽಪಿ ಪರ್ವತೇಷ್ವಮುಕ್ತಾ ಇತ್ಯರ್ಥಃ। ಸಾಯಕಾಃ ತಸ್ಮಿನ್ = ದುಶ್ಶಾಸನೇ ಸಸಜ್ಜಿರೇ = ಸೃಷ್ಟಾ ಆಸನ್ ॥ – (ವಾ.)

೧೨೧ ವಿವೃತಂ ಚೈತತ್ ವಿರೋದೋದ್ಧಾರೇ । – (ತಾ.)

೧೨೧ ... ತೇನ ನೈಕಾದಶಾಧ್ಯಾಯವಿರೋಧ ಇತಿ ಜ್ಞೇಯಮ್ । ಸಸಜ್ಜಿರ ಇತಿ ಪರ್ವತೇಷ್ವಪ್ಯಸಕ್ತಾ ನ ಸಂಬದ್ಧಾಃ । ಪರ್ವತಭೇದಿನೋಽಪಿ ಶರಾಃ ದುಃಶಾಸನಾರ್ಜುನದೇಹಯೋಃ ಸಸಜ್ಜಿರೇ । ಸಂಬದ್ಧಾಽಭವನ್ನಿತ್ಯರ್ಥಃ ॥ – (ತಾ.)

ಅ: ಆಗ ವಿರಾಟ, ದ್ರುಪದ, ಕುಂತಿಭೋಜ, ಉಪಪಾಂಡವರು, ಕೇಕಯರು, ಚೇಕಿತಾನ-ರನ್ನು ಭೂರಿ, ಶಲ, ಸೋಮದತ್ತ, ವಿಕರ್ಣ ಮತ್ತು ಕೇಕಯರು ಬಲವಾಗಿ ತಡೆದು ನಿಲ್ಲಿಸಿದರು.

ವಿ: ಪಾಂಡವರ ಕಡೆಯ ವಿರಾಟಾದಿಗಳನ್ನು ಕೌರವರ ಕಡೆಯ ಭೂರಿ ಮೊದಲಾದವರು ಮುಂದೆ ಸಾಗದಂತೆ ತಡೆದು ನಿಲ್ಲಿಸಿದರು ಎಂದರ್ಥ.

ಜಿತ್ವೈವ ತಾಂಸ್ತೇऽಭಿಯಯುಶ್ಚ ಭೀಷ್ಮಂ
ತತೋऽರ್ಜುನೋऽತೀತ್ಯ ದುಃಶಾಸನಂ ಚ ।
ಭೀಷ್ಮಂ ಶರೈರಾರ್ಧದರಿಪ್ರಮಾಥಿಭಿಃ
ಶಿಖಂಡಿನಂ ಧಾರ್ತರಾಷ್ಟ್ರಾದ್ವಿಮುಚ್ಯ ॥ ೧೨೪ ॥

ಅ: ಅವರೆಲ್ಲ ಅವರನ್ನು ಸೋಲಿಸಿ ಭೀಷ್ಮರ ಬಳಿಗೆ ತೆರಳಿದರು. ಆಗ ಅರ್ಜುನ ದುಃಶಾಸನನನ್ನು ದಾಟಿ, ಶಿಖಂಡಿಯನ್ನು ದುರ್ಮರ್ಷಣನಿಂದ ಬಿಡಿಸಿಕೊಂಡು ಶತ್ರುಗಳನ್ನು ನಾಶಮಾಡುವಂತಹ ಬಾಣಗಳಿಂದ ಭೀಷ್ಮರನ್ನು ಪೀಡಿಸತೊಡಗಿದನು.

ಭೀಷ್ಮರ ಅದ್ಭುತ ಪರಾಕ್ರಮ

ಸ ತೈಃ ಸಮಸ್ತೈರ್ಬಹುಶಸ್ತ್ರಪೂಗೈ-
ರ್ಭೃಶಂ ಮರ್ಮಸ್ವರ್ದಿತಶ್ಚಾಪಮುಕ್ತೈಃ ।
ಶರೈಃ ಸಮಸ್ತಾನ್ ವಿರಥಾಂಶ್ಚಕಾರ
ಶೈನೇಯಪಾಂಚಾಲಯುಧಿಷ್ಠಿರಾದ್ಯಾನ್ ॥ ೧೨೫ ॥

ಅ: ಭೀಷ್ಮರು ಆ ಎಲ್ಲರ ಬಹುಶಸ್ತ್ರಗಳ ಸಮುದಾಯದಿಂದ, ಬಹಳವಾಗಿ ಮರ್ಮ-ಸ್ಥಾನಗಳಲ್ಲಿ ಪೀಡಿತರಾದರು. ಬಳಿಕ ಧನುಸ್ಸಿನಲ್ಲಿ ಹೂಡಿಬಿಟ್ಟ ಬಾಣಗಳಿಂದ ಸಾತ್ಯಕಿ, ಧೃಷ್ಟದ್ಯುಮ್ನ, ಧರ್ಮರಾಜ ಮೊದಲಾದವರನ್ನು ವಿರಥರನ್ನಾಗಿ ಮಾಡಿದರು.

ಸ ಚೇದಿಪಾಂಚಾಲಕರೂಶಮುಖ್ಯಾನ್
ರಥೋತ್ತಮಾನ್ ಪಂಚವಿಂಶತ್ಸಹಸ್ರಾನ್।
ಸಂಪ್ರೇಷಯಾಮಾಸ ಯಮಾಯ ಬಾಣೈ
ರ್ಯುಗಾಂತಕಾಲಾಗ್ನಿರಿವ ಪ್ರವೃದ್ಧಃ ॥ ೧೨೬ ॥

---

೧೨೧. ಸಸಜ್ಜಿರೇ ಸಂಶ್ಲೇಷವಂತೋ ಬಭೂವುಃ । ದೇಹಂ ವಿದಾರ್ಯ ನ ನಿರ್ಗತಾ ಇತ್ಯರ್ಥಃ । – (ಜ.)

೧೨೪. ಆರ್ಚ್ಛತ್ ಅಪೀಡಯತ್। – (ಜ.)

ಅ: ಭೀಷ್ಮರು ಪ್ರಳಯಕಾಲದ ಅಗ್ನಿಯಂತೆ ಪ್ರಜ್ವಲಿಸುತ್ತಾ ಚೇದಿ, ಪಾಂಚಾಲ, ಕರೂಶ ಮೊದಲಾದ ಇಪ್ಪತ್ತೈದು ಸಾವಿರ ಶ್ರೇಷ್ಠ ರಥಿಕರನ್ನು ಬಾಣಗಳಿಂದ ಯಮನ ಬಳಿಗೆ ಅಟ್ಟಿದರು.

ಏ: ಆ ವೇಳೆಗಾಗಲೇ ಭೀಷ್ಮರಿಗೆ ಶರೀರತ್ಯಾಗ ಮಾಡುವ ಬಯಕೆ ಮೂಡಿತ್ತು. ಅವರು ಧರ್ಮರಾಜನಿಗೆ ಬೇಗ ತನ್ನನ್ನು ಕೊಲ್ಲುವ ಪ್ರಯತ್ನ ಮಾಡಲು ತಿಳಿಸಿದರು. ಭೀಷ್ಮರ ಆ ನಿರ್ಧಾರ ಮುನಿಗಳಿಗೂ, ವಸುಗಳಿಗೂ ಪ್ರಿಯವಾಯಿತು. ವ್ಯಾಸರ ಅನುಗ್ರಹ ಹೊಂದಿದ್ದ ಸಂಜಯನಿಗೆ ಆ ಮಾತು ಕಿವಿಗೆ ಬಿದ್ದವು :

ನ ಚ ತಚ್ಛುಶ್ರುವೇ ಕಶ್ಚಿತ್ ತೇಷಾಂ ಸಂವದತಾಂ ನೃಪ ।
ಋತೇ ಭೀಷ್ಮಂ ಮಹಾಬಾಹುಂ ಮಾಂ ಚಾಪಿ ಮುನಿತೇಜಸಾ॥

– ಭಾರತ (೬/೧೧೯/೪೦)

ಭೀಷ್ಮಾರ್ಜುನರ ಯುದ್ಧ

ನಿರೀಕ್ಷ್ಯ ತಂ ಸೂರ್ಯಮಿವಾತಪಂತಂ
ಸಂಚೋದಿತೋ ವಾಸುದೇವೇನ ಪಾರ್ಥಃ ।
ಚಿಚ್ಛೇದ ತತ್ಕಾರ್ಮುಕಂ ಲೋಕವೀರೋ
ರಣೇಽರ್ಧಚಂದ್ರೇಣ ಸ ಚಾನ್ಯದಾದದೇ ॥ ೧೨೭ ॥

ಅ: ಭೀಷ್ಮರು ರಣರಂಗದಲ್ಲಿ ಸೂರ್ಯನಂತೆ ಪ್ರಜ್ವಲಿಸುತ್ತಿದ್ದುದನ್ನು ನೋಡಿ ಕೃಷ್ಣನಿಂದ ಪ್ರೇರಿತನಾದ ಲೋಕವೀರನಾದ ಅರ್ಜುನ ಅವರ ಬಿಲ್ಲನ್ನು ಅರ್ಧಚಂದ್ರಾಕೃತಿಯ ಬಾಣದಿಂದ ಕತ್ತರಿಸಿದ; ಕೂಡಲೇ ಅವರು ಮತ್ತೊಂದು ಬಿಲ್ಲನ್ನು ಕೈಗೆತ್ತಿಕೊಂಡರು.

ಅರ್ಜುನನ ಪರಾಕ್ರಮ

ಚಿಚ್ಛೇದ ತಚ್ಚೈವಮಷ್ಟೌ ಧನೂಂಷಿ
ಶಕ್ತಿಂ ಚ ಚರ್ಮಾಸಿವರಂ ಪರಾಣಿ ।
ಧನೂಂಷಿ ದತ್ತಾನಿ ನೃಭಿರ್ನೃಪಸ್ಯ
ಸರ್ವಾಣಿ ಚಿಚ್ಛೇದ ಸ ಪಾಕಶಾಸನಿಃ ॥ ೧೨೮ ॥

---

೧೨೮. ಚರ್ಮ ಶತಚಂದ್ರಂ ....। – (ಜ.)

ಅ: ಅರ್ಜುನ ಅದನ್ನೂ ಕತ್ತರಿಸಿದ. ಹೀಗೆ ಎಂಟು ಧನುಸ್ಸುಗಳನ್ನು, ಶಕ್ತ್ಯಾಯುಧವನ್ನು, ಗುರಾಣಿಯನ್ನು, ಖಡ್ಗವನ್ನು ಕತ್ತರಿಸಿದ. ದುರ್ಯೋಧನನ ಜನರು ನೀಡಿದ ಇತರ ಬಿಲ್ಲು-ಗಳನ್ನೆಲ್ಲಾ ಇಂದ್ರಪುತ್ರನಾದ ಅವನು ತುಂಡರಿಸಿಹಾಕಿದ.

ಭೀಷ್ಮರ ಪತನ

ತತಃ ಶರೈಃ ಸೂರ್ಯಕರಪ್ರಕಾಶೈ-
ರ್ವಿವ್ಯಾಧ ಸರ್ವೇ ಚ ಯುಧಿಷ್ಠಿರಾದ್ಯಾಃ ।
ತೈರರ್ದಿತೋ ನ್ಯಪದದ್ಭೂತಲೇ ಸ
ಪ್ರಾಣಾನ್ ದಧಾರಾಪಿ ತಥೋತ್ತರಾಯಣಾತ್ ॥ ೧೨೯ ॥

ಅ: ಬಳಿಕ ಸೂರ್ಯಕಿರಣದಂತೆ ಬೆಳಗುತ್ತಿದ್ದ ಬಾಣಗಳಿಂದ ಧರ್ಮರಾಜಾದಿಗಳೆಲ್ಲ ಭೀಷ್ಮರನ್ನು ಹೊಡೆಯತೊಡಗಿದರು. ಅವರಿಂದ ಪೀಡಿತರಾದ ಭೀಷ್ಮರು ಭೂತಲಕ್ಕೆ ಬಿದ್ದರು. ಅದರಂತೆ ಉತ್ತರಾಯಣದವರೆಗೆ ಪ್ರಾಣಗಳನ್ನು ತಡೆಹಿಡಿದರು.

ವಿ: ೧) ಶಿಖಂಡಿಯ ಬಾಣಗಳಿಗೆ ಸ್ವಲ್ಪವೂ ನೋಯದಿದ್ದ ಭೀಷ್ಮರು ಅರ್ಜುನನ ಬಾಣಗಳಿಂದ ಮಾತ್ರ ಜರ್ಜರಿತರಾಗುತ್ತಿದ್ದರು. ಅರ್ಜುನನ ಬಾಣಗಳು ಒಂದಂಗುಲ ಸ್ಥಳವನ್ನೂ ಬಿಡದಂತೆ ಅವರ ದೇಹದಲ್ಲಿ ಸೇರಿಹೋದವು. ಆ ರೀತಿ ಬಾಣಗಳು ಬೀಳುತ್ತಿದ್ದಾಗ ಭೀಷ್ಮರು 'ಶಿಖಂಡಿಯ ಬಾಣಗಳಲ್ಲ; ಅರ್ಜುನನ ಬಾಣಗಳು' ಎಂದು ನುಡಿಯುತ್ತಾತಾವು ಒಬ್ಬ ಹೆಣ್ಣಾದವನ ಬಾಣಗಳಿಗೆ ಬೀಳದೇ ಲೋಕವೀರನಾದ ಅರ್ಜುನನ ಬಾಣಗಳಿಗೆ ಬೀಳುತ್ತಿರುವುದನ್ನು ಸಂತೋಷದಿಂದ ಸ್ವೀಕರಿಸಿದರು :

ವಜ್ರಾಶನಿಸಮಸ್ಪರ್ಶಾ ಅರ್ಜುನೇನ ಶರಾ ಯುಧಿ ॥
ಮುಕ್ತಾಃ ಸರ್ವೇಽವ್ಯವಚ್ಛಿನ್ನಾ ನೇಮೇ ಬಾಣಾಃ ಶಿಖಂಡಿನಃ ।
ನಿಕೃಂತಮಾನಾ ಮರ್ಮಾಣಿ ದೃಢಾವರಣಭೇದಿನಃ ॥
ಮುಸಲಾ ಇವ ಮೇ ಘ್ನಂತಿ ನೇಮೇ ಬಾಣಾಃ ಶಿಖಂಡಿನಃ ।

---

೧೨೯. ವಿವ್ಯಾಧ ಸರ್ವೇಽಪಿ ಯುಧಿಷ್ಠಿರಾದ್ಯಾ ಇತ್ಯತ್ರ ಸಃ = ಅರ್ಜುನಃ। ವಿವ್ಯಾಧ। ಯುಧಿಷ್ಠಿರಾ ಪಂಚಮೀ। ಉತ್ತರಾಯಣಂ ಪ್ರತೀಕ್ಷ್ಯೇತ್ಯರ್ಥಃ॥ – (ವಾ.)

೧೨೯. ಧಾರಯಾಮಾಸ ಚ ಪ್ರಾಣಾನ್ ಪತಿತೋಽಪಿ ಮಹೀತಲೇ ।
ಉತರಾಯಣಮನ್ವಿಚ್ಛನ್ ಭೀಷ್ಮಃ ಕುರುಪಿತಾಮಹಃ ॥ – ಭಾರತ (ಭೀಷ್ಮ. ೧೧೯/೯೬)

೧೨೯. ತಥೋತ್ತರಾಯಣಾದಿತ್ಯತ್ರ 'ತಥಾ ಆ ಉತ್ತರಾಯಣಾತ್' ಇತಿ ಪದತ್ರಯಂ ಜ್ಞೇಯಮ್। – (ಜ.)

ವಜ್ರದಂಡಸಮಸ್ಪರ್ಶಾ ವಜ್ರವೇಗದುರಾಸದಾಃ ॥
ಮಮ ಪ್ರಾಣಾನಾರುಜಂತಿ ನೇಮೇ ಬಾಣಾಃ ಶಿಖಂಡಿನಃ ।
ನಾಶಯಂತೀವ ಮೇ ಪ್ರಾಣಾನ್ ಯಮದೂತಾ ಇವಾಹಿತಾಃ ॥
ಗದಾಪರಿಘಸಂಸ್ಪರ್ಶಾ ನೇಮೇ ಬಾಣಾಃ ಶಿಖಂಡಿನಃ ।
ಭುಜಗಾ ಇವ ಸಂಕ್ರುದ್ಧಾ ಲೇಲಿಹಾನಾ ವಿಷೋಲ್ಬಣಾಃ ॥
ಸಮಾವಿಶಂತಿ ಮರ್ಮಾಣಿ ನೇಮೇ ಬಾಣಾಃ ಶಿಖಂಡಿನಃ ।
ಅರ್ಜುನಸ್ಯ ಇಮೇ ಬಾಣಾ ನೇಮೇ ಬಾಣಾಃ ಶಿಖಂಡಿನಃ ॥

– ಭಾರತ (ಭೀಷ್ಮ. ೧೧೯/೬೦-೬೫)

೨) ಅವರು ನೆಲಕ್ಕೆ ಉರುಳಿದರೂ ಬಾಣಗಳು ನೆಟ್ಟಿದ್ದರಿಂದ ಭೂಸ್ಪರ್ಶವಾಗದಂತೆ ಮಲಗಿದರು. ಬಾಣಗಳೇ ಮಂಚದಂತಾದವು; ಹಾಗೆ ಕೆಳಕ್ಕೆ ಬಿದ್ದರೂ ಉತ್ತರಾಯಣದವರೆಗೆ ಪ್ರಾಣ ಬಿಡದಂತೆ ದೇವತೆಗಳು ಅಂತರಿಕ್ಷದಲ್ಲಿ ಸೂಚನೆ ನೀಡಿದ್ದರಿಂದ ಮತ್ತು ಗಂಗೆ ಮುನಿಗಳನ್ನು ಹಂಸ ರೂಪದಿಂದ ಕಳಿಸಿ ತಿಳಿಸಿದ್ದರಿಂದ ಆಗಲೇ ಪ್ರಾಣ ಬಿಡದೇ ಉತ್ತರಾಯಣದವರೆಗೂ ಆ ಶರಮಂಚದ ಮೇಲೆಯೇ ಒರಗಿದ :

ಅಂತರಿಕ್ಷೇ ಸ ಶುಶ್ರಾವ ದಿವ್ಯಾ ವಾಚಃ ಸಮಂತತಃ ॥
ಕಥಂ ಮಹಾತ್ಮಾ ಗಾಂಗೇಯಃ ಸರ್ವಶಸ್ತ್ರಭೃತಾಂ ವರಃ ।
ಕಾಲಕರ್ತಾ ನರವ್ಯಾಘ್ರಃ ಸಂಪ್ರಾಪ್ತೇ ದಕ್ಷಿಣಾಯನೇ ॥
ಸ್ಥಿತೋಽಸ್ಮೀತಿ ಚ ಗಾಂಗೇಯಸ್ತಚ್ಛ್ರುತ್ವಾ ವಾಕ್ಯಮಬ್ರವೀತ್ ।
ಧಾರಯಾಮಾಸ ಚ ಪ್ರಾಣಾನ್ ಪತಿತೋಽಪಿ ಮಹೀತಲೇ ॥
ಉತ್ತರಾಯಣಮನ್ವಿಚ್ಛನ್ ಭೀಷ್ಮಃ ಕುರುಪಿತಾಮಹಃ ।
ತಸ್ಯ ತನ್ಮತಮಾಜ್ಞಾಯ ಗಂಗಾ ಹಿಮವತಃ ಸುತಾ ॥
ಮಹರ್ಷೀನ್ ಹಂಸರೂಪೇಣ ಪ್ರೇಷಯಾಮಾಸ ತತ್ರ ವೈ ।
ತತಃ ಸಂಪಾತಿನೋ ಹಂಸಾಸ್ತ್ವರಿತಾ ಮಾನಸೌಕಸಃ ॥
ಆಜಗ್ಮುಃ ಸಹಿತಾ ದ್ರಷ್ಟುಂ ಭೀಷ್ಮಂ ಕುರುಪಿತಾಮಹಮ್ ।

– ಭಾರತ (ಭೀಷ್ಮ. ೧೧೯/೯೪-೯೯)

ಮಹೋಪನಿಷದಂ ಚೈವ ಯೋಗಮಾಸ್ಥಾಯ ವೀರ್ಯವಾನ್ ।
ಜಪನ್ ಶಾಂತನವೋ ಧೀಮಾನ್ ಕಾಲಾಕಾಂಕ್ಷೀ ಸ್ಥಿತೋಽಭವತ್ ॥

– ಭಾರತ (ಭೀಷ್ಮ. ೧೧೯/೧೨೧, ೧೨೨)

೩) ತಂದೆ ಶಂತನು ನೀಡಿದ್ದ ಇಚ್ಛಾಮೃತ್ಯುತ್ವ ವರದಿಂದ ಅವರಿಗೆ ಅದು ಸಾಧ್ಯವಾಯಿತು. ದಕ್ಷಿಣಾಯನದ ಮೃತ್ಯು ನಿಷಿದ್ಧವಲ್ಲವಾದರೂ, ಉತ್ತರಾಯಣದವರೆಗೆ ಕಾಯುವ ಸಾಮರ್ಥ್ಯ–ವಿದ್ದದ್ದರಿಂದ ಅವರು ಹಾಗೆ ಅದರ ಪ್ರಯೋಜನವನ್ನು ಪಡೆಯಲು ನಿಶ್ಚಯಿಸಿದರು ಎಂದರ್ಥ.

೪) ಅವರ ಆ ಕಾರ್ಯ ಮುಂದೆ ವಿಶೇಷವಾದ ತತ್ತ್ವೋಪದೇಶದ ಸದವಕಾಶವಾಗಿ ಪರಿಣಮಿಸಿದ್ದು ಅವರ ಮೇಲಿದ್ದ ಕೃಷ್ಣನ ವಿಶೇಷಾನುಗ್ರಹದ ಫಲ.

ನಿಪಾತಿತೇಽಸ್ಮಿನ್ ಮಾರುತಿರ್ದ್ರೋಣಮುಖ್ಯಾನ್
ವಿದ್ರಾವ್ಯ ತತ್ರಾಗಮದಾಶು ತೇಽಪಿ ।
ತದಾಯುಧಾನಿ ಪ್ರಣಿಧಾಯ ವೀರಾಃ
ಪಾರ್ಥಾಃ ಪರೇ ಚೈನಮುಪಾಸದನ್ ಸ್ಮ ॥ ೧೩೦ ॥

ಅ: ಭೀಷ್ಮರು ಬಿದ್ದಮೇಲೆ ಭೀಮಸೇನನು ದ್ರೋಣ ಮೊದಲಾದವರನ್ನು ಓಡಿಸಿ ಅಲ್ಲಿಗೆ ಆಗಮಿಸಿದ. ಅವರೂ ಕೂಡಲೇ ಆಯುಧಗಳನ್ನು ಕೆಳಗಿಟ್ಟು ಅಲ್ಲಿ ನೆರೆದರು. ಪಾಂಡವರು, ಕೌರವರು, ಇತರ ಎಲ್ಲ ವೀರರೂ ಅಲ್ಲಿಗೆ ಬಂದು ಸೇರಿದರು.

ವಿ: ೧) ಭೀಷ್ಮರು ಬೀಳುತ್ತಲೇ ಅಂದಿನ ಯುದ್ಧವನ್ನು ನಿಲ್ಲಿಸಿ ಎಲ್ಲರೂ ಅಲ್ಲಿ ನೆರೆದರು ಎಂದರ್ಥ.

೨) ದ್ರೋಣಾದಿಗಳು ಮಾತ್ರ ಭೀಮನಿಂದ ಪರಾಜಿತರಾಗಿಯೇ ಯುದ್ಧ ನಿಲ್ಲಿಸಿ ಅಲ್ಲಿ ಸೇರಿದರು.

ಪ್ರಣಮ್ಯ ತಂ ತದ್ವಚನಾತ್ ಸಮೀಯು-
ಸ್ತಸ್ಮಿನ್ ದಿನೇ ಶಿಬಿರಾಣ್ಯೇವ ಸರ್ವೇ।
ಪರೇ ದಿನೇ ಸರ್ವ ಏವೋಪತಸ್ಥು-
ರ್ಭೀಷ್ಮಂ ಯದೂನಾಂ ಪತಿನಾ ಸಹೈವ ॥ ೧೩೧ ॥

ಅ: ಭೀಷ್ಮರನ್ನು ವಂದಿಸಿ ಅವರ ಮಾತಿನಂತೆ ಎಲ್ಲರೂ ಆ ದಿನ ಶಿಬಿರಗಳಿಗೆ ತೆರಳಿದರು. ಮಾರನೆಯ ದಿನ ಎಲ್ಲರೂ ಭೀಷ್ಮರ ಬಳಿಗೆ ಬಂದರು. ಯದುಪತಿಯಾದ ಕೃಷ್ಣನೂ ಅಲ್ಲಿಗೆ ಆಗಮಿಸಿದ.

ವಿ: ಕೃಷ್ಣ ಅವರ ಬಳಿಗೆ ಹಾಗೆ ತೆರಳಿದ್ದು ಅವರ ಅಂತ್ಯಕಾಲಕ್ಕೆ ಅವನು ತನ್ನ ದರ್ಶನ ನೀಡುವುದಕ್ಕೆ ಮುನ್ಸೂಚನೆಯಂತಾಯಿತು ಎಂದೂ ತಿಳಿಯಬಹುದು (೩೦/೧).

ಭೀಷ್ಮರಿಗೆ ಅರ್ಜುನ ನೀಡಿದ ಬಾಣದ ತಲೆದಿಂಬು

ಸ ಪೂರ್ವದಿವಸೇ ಪಾರ್ಥದತ್ತಬಾಣೋಪಬರ್ಹಣಃ ।
ತದಾಽಪಿ ತೃಟ್ಪರೀತಾತ್ಮಾ ಯೋಗ್ಯಂ ಪೇಯಮಯಾಚತ ॥ ೧೩೨ ॥

ಅ: ಹಿಂದಿನ ದಿನ ಅರ್ಜುನ ನೀಡಿದ ಬಾಣದ ತಲೆದಿಂಬನ್ನು ಹೊಂದಿದ್ದ ಭೀಷ್ಮರು, ಆ ದಿನ ಬಾಯಾರಿಕೆಯಿಂದ ಪೀಡಿತನಾಗಿ ಯೋಗ್ಯವಾದ ನೀರನ್ನು ಕೋರಿದರು.

ವಿ: ೧) ಭೀಷ್ಮರು ನೆಲಕ್ಕೆ ಬಿದ್ದಾಗ ಮೈಮೇಲೆಲ್ಲ ಬಾಣಗಳಿದ್ದರಿಂದ ದೇಹ ಭೂಮಿಗೆ ತಾಕಲಿಲ್ಲ. ಆದರೆ, ತಲೆ ಜೋಲಾಡುವಂತಿತ್ತು. ಆಗ ಅವರು ತಮಗೆ ತಲೆದಿಂಬೊಂದನ್ನು ನೀಡಲು ಕೇಳಿಕೊಂಡರು. ದುರ್ಯೋಧನ ರಾಜಯೋಗ್ಯವಾದ ಬಗೆಬಗೆಯ ದಿಂಬುಗಳನ್ನು ತಂದುಕೊಟ್ಟಾಗ ತನ್ನಂತಹ ಮಹಾವೀರನಿಗೆ ಇಂತಹ ದಿಂಬುಗಳು ಒಪ್ಪುವವೇ ಎಂದು ತಿರಸ್ಕರಿಸಿದರು :

ಅಥಾಬ್ರವೀನ್ನರವ್ಯಾಘ್ರಃ ಪ್ರಹಸನ್ನಿವ ತಾನ್ ನೃಪಾನ್ ।
ನೈತಾನಿ ವೀರಶಯ್ಯಾಸು ಯುಕ್ತರೂಪಾಣಿ ಪಾರ್ಥಿವಾಃ ॥

– ಭಾರತ (ಭೀಷ್ಮ. ೧೨೦/೩೬)

೨) ಆಗ ಅವರು ಅರ್ಜುನನನ್ನು ಕೇಳಿಕೊಳ್ಳಲು ಅರ್ಜುನ ಮೂರು ಬಾಣಗಳನ್ನು ಪ್ರಯೋಗಿಸಿ ಅವು ಅವನ ತಲೆಗೆ ಆಧಾರವಾಗಿ ನಿಂತು ನೆಮ್ಮದಿ ನೀಡಿದವು. ಆಗ ಭೀಷ್ಮರು ತುಂಬಾ ತೃಪ್ತರಾಗಿ ಅರ್ಜುನನನ್ನು ಪ್ರಶಂಸಿಸುವರು :

ತ್ರಿಭಿಸ್ತೀಕ್ಷ್ಣೈರ್ಮಹಾವೇಗೈರನ್ವಗೃಹ್ಣಚ್ಛಿರಃ ಶರೈಃ ।
ಅಭಿಪ್ರಾಯೇ ತು ವಿದಿತೇ ಧರ್ಮಾತ್ಮಾ ಸವ್ಯಸಾಚಿನಾ ॥
ಅತುಷ್ಯದ್ಭರತಶ್ರೇಷ್ಠೋ ಭೀಷ್ಮೋ ಧರ್ಮಾರ್ಥತತ್ತ್ವವಿತ್ ।
ಉಪಧಾನೇನ ದತ್ತೇನ ಪ್ರತ್ಯನಂದದ್ಧನಂಜಯಮ್ ॥

– ಭಾರತ (ಭೀಷ್ಮ. ೧೨೦/೪೫-೪೬)

೩) ಸಂಸಾರವೆಂದರೆ ಇಂತಹುದೇ – ಮೈಯೆಲ್ಲಾ ತಾಪತ್ರಯ ಎಂಬುದು ಲೋಕನುಡಿ. ಮೈಗೆ ತಾಪವಿರುವುದು ಸಾಮಾನ್ಯರ ಗಮನಕ್ಕೆ ಬಂದರೆ, ತಲೆ ಹೊಯ್ದಾಡುವುದು ಭೀಷ್ಮರಂತಹ ಜ್ಞಾನಿಗಳ ಗಮನಕ್ಕೆ ಬರುವುದು. ತಲೆ ವಿಚಾರದ ಸಂಕೇತ. ಅದನ್ನು ಭೌತಿಕವಾದ ದಿಂಬುಗಳು ಎಂದೂ ಸ್ಥಿರಗೊಳಿಸಲು ಶಕ್ತವಾಗವು. ಅರ್ಜುನನು ನೀಡಿದ ಮೂರು ಬಾಣಗಳು ಶ್ರವಣ,

---

೧೩೨. ಗೃಹ್ಯಾನುಮಂತ್ರ್ಯ ಗಾಂಡೀವಂ ಶರಾನ್ ಸಂನತಪರ್ವಣಃ ।
ಅನುಮಾನ್ಯ ಮಹಾತ್ಮಾನಂ ಭರತಾನಾಂ ಮಹಾರಥಮ್ ॥
ತ್ರಿಭಿಸ್ತೀಕ್ಷ್ಣೈರ್ಮಹಾವೇಗೈರನ್ವಗೃಹ್ಣಚ್ಛಿರಃ ಶರೈಃ ॥
ಅಭಿಪ್ರಾಯೇ ತು ವಿದಿತೇ ಧರ್ಮಾತ್ಮಾ ಸವ್ಯಸಾಚಿನಾ ।
ಅತುಷ್ಯದ್ ಭರತಶ್ರೇಷ್ಠೋ ಭೀಷ್ಮೋ ಧರ್ಮಾರ್ಥತತ್ತ್ವವಿತ್ ॥
ಉಪಧಾನೇನ ದತ್ತೇನ ಪ್ರತ್ಯನಂದದ್ಧನಂಜಯಮ್ ॥ – ಭಾರತ (ಭೀಷ್ಮ. ೧೨೦/೪೪-೪೬)

೧೩೩. ಶೂರಕರ್ತೃಕಾನಯನಕ್ರಿಯಾಯೋಗ್ಯಂ ಪೇಯಮಿತ್ಯರ್ಥಃ । – (ಸ.)

ಮನನ, ಧ್ಯಾನಗಳ ಸಂಕೇತ. ಶ್ರವಣ, ಮನನ, ಧ್ಯಾನಗಳು ವಿಚಾರಕ್ಕೆ ನೀಡುವ ಭದ್ರತೆಗೆ ಇದು ಸೂಚಕ. ಹೀಗೆ ಭೀಷ್ಮರು ಶರಮಂಚದ ಮೇಲೆ ಒರಗಿದ್ದೂ; ಬಾಣಗಳ ತಲೆದಿಂಬನ್ನು ಅರ್ಜುನ–ನಿಂದ ಪಡೆದದ್ದು ಸಹ ಅಧ್ಯಾತ್ಮಗರ್ಭಿತ ಎಂಬುದು ಮಹಾಭಾರತದ ಶಾಸ್ತ್ರೋತ್ತಮತ್ವಕ್ಕೆ ಮತ್ತೊಂದು ನಿದರ್ಶನ ಎಂದು ತಿಳಿಯಬೇಕು.

೪) ಮೂರನೆಯ ದಿನ ಯುದ್ಧಕ್ಕೆ ಮುನ್ನ ಎಲ್ಲರೂ ಭೀಷ್ಮರ ಬಳಿಗೆ ಬಂದಾಗ ತಮಗೆ ಬಾಯಾರಿಕೆಯ ಪರಿಹಾರಕ್ಕಾಗಿ ಯೋಗ್ಯ ನೀರನ್ನು ಬೇಡುವರು. ಎಂದಿನಂತೆ ದುರ್ಯೋಧನ ಬಗೆಬಗೆಯ ಪೇಯಗಳನ್ನು ತಂದು ನೀಡಿದಾಗ ಭೀಷ್ಮರು ಅವನ್ನು ತಿರಸ್ಕರಿಸಿ ಪುನಃ ಅರ್ಜುನನನ್ನೇ ಕೇಳುವರು. ಅರ್ಜುನ ಆಗ ವಜ್ರಾಸ್ತ್ರದಿಂದ ಭೂಮಿಯನ್ನು ಕೊರೆದು, ವಾರುಣಾಸ್ತ್ರದಿಂದ ಅದರಲ್ಲಿ ನೀರನ್ನು ತುಂಬಿಸಿ ಅದರಿಂದ ನೇರವಾಗಿ ನೀರು ಊರ್ಧ್ವಧಾರೆಯಾಗಿ ಅವರ ಬಾಯಲ್ಲಿ ಬೀಳುವಂತೆ ತನ್ನ ಅಸ್ತ್ರಕೌಶಲವನ್ನು ಮೆರೆದ.

ಭೀಷ್ಮರು ಅದನ್ನು ಸವಿದು, ಅರ್ಜುನನನ್ನು ಬಹಳವಾಗಿ ಪ್ರಶಂಸಿಸಿದರು (ಭಾರತ ೬/೧೨೧/೨೯–೫೬).

ಅರ್ಜುನನಿಂದ ದೊರೆತ ನೀರು ಸತ್ತೀರ್ಥಕ್ಕೆ ಸಂಕೇತ. ಅಂತ್ಯಕಾಲದಲ್ಲಿ ಮುದನೀಡುವ ಜಲ ಎಂದರೆ ಅದೇ. ಆಗ ಭಗವದ್ಗೀತಾದಿಗಳ ಪಠಣದ ಮೂಲಕ ಮನಸ್ಸಿಗೆ ದೊರೆಯುವ ನೆಮ್ಮದಿ ಬೇರಾವ ಜಲದಿಂದಲೂ ದೊರೆಯದು ಎಂಬುದಕ್ಕೆ ಇದು ಸೂಚಕ.

೫) ಭೀಷ್ಮರು ಬೀಳುತ್ತಲೇ ದುರ್ಯೋಧನ ವೈದ್ಯರ ತಂಡವೊಂದನ್ನು ಕರೆಸಿ ಅವರ ಚಿಕಿತ್ಸೆಯ ವ್ಯವಸ್ಥೆಗೆ ಮುಂದಾದಾಗ ಭೀಷ್ಮರು ಅದನ್ನು ನಿರಾಕರಿಸಿ ತಮಗಿನ್ನು ಬದುಕುವ ಇಚ್ಛೆಯಿಲ್ಲ, ಯಾವ ಚಿಕಿತ್ಸೆಯೂ ತಮಗೆ ಬೇಕಿಲ್ಲ ಎಂದು ನುಡಿದು ಹಾಗೆ ಕರೆತರಿಸಿದ ವೈದ್ಯರನ್ನು ಹಾಗೆಯೇ ಕಳಿಸದೇ, ಅವರಿಗೆ ಉಚಿತವಾದ ದ್ರವ್ಯವನ್ನು ನೀಡಿ ಕಳುಹಿಸಲು ತಿಳಿಸುವರು :

ಉಪಾತಿಷ್ಠನ್ನಥೋ ವೈದ್ಯಾಃ ಶಲ್ಯೋದ್ಧರಣಕೋವಿದಾಃ ॥
ಸರ್ವೋಪಕರಣೈರ್ಯುಕ್ತಾಃ ಕುಶಲೈಃ ಸಾಧುಶಿಕ್ಷಿತಾಃ ।

---

೧೩೨. ಸಂಧಾಯ ಚ ಶರಂ ದೀಪ್ತಮಭಿಮಂತ್ರ್ಯ ಸ ಪಾಂಡವಃ ।
ಪರ್ಜನ್ಯಾಸ್ತ್ರೇಣ ಸಂಯೋಜ್ಯ ಸರ್ವಲೋಕಸ್ಯ ಪಶ್ಯತಃ ॥
ಅವಿಧ್ಯತ್ ಪೃಥಿವೀಂ ಪಾರ್ಥಃ ಪಾರ್ಶ್ವೇ ಭೀಷ್ಮಸ್ಯ ದಕ್ಷಿಣೇ ।
ಉತ್ಪಪಾತ ತತೋ ಧಾರಾ ವಾರಿಣೋ ವಿಮಲಾ ಶುಭಾ ॥
ಶೀತಾಸ್ಯಾಮೃತಕಲ್ಪಸ್ಯ ದಿವ್ಯಗಂಧರಸಸ್ಯ ಚ ।
ಅತರ್ಪಯತ್ ತತಃ ಪಾರ್ಥಃ ಶೀತಯಾ ಜಲಧಾರಯಾ ॥
ಭೀಷ್ಮಂ ಕುರೂಣಾಮೃಷಭಂ ದಿವ್ಯಕರ್ಮಪರಾಕ್ರಮಮ್ ॥ – ಭಾರತ (ಭೀಷ್ಮ. ೧೨೧/೨೩-೨೫)

ತಾನ್ ದೃಷ್ಟ್ವಾ ಜಾಹ್ನವೀಪುತ್ರಃ ಪ್ರೋವಾಚ ತನಯಂ ತವ ॥
ಧನಂ ದತ್ತ್ವಾ ವಿಸೃಜ್ಯಂತಾಂ ಪೂಜಯಿತ್ವಾ ಚಿಕಿತ್ಸಕಾಃ ।...
– ಭಾರತ (ಭೀಷ್ಮ. ೧೨೦/೫೫-೫೭)

ಭೀಷ್ಮರ ಧರ್ಮಪ್ರಜ್ಞೆ ಹೀಗೆ ಸದಾ ಆದರ್ಶಪ್ರಾಯವಾದದ್ದು ಅವರ ಉನ್ನತಿಗೆ ದ್ಯೋತಕ. ಹಾಗೆ ಬಿದ್ದ ಭೀಷ್ಮರು ತಮ್ಮನ್ನು ತಮ್ಮ ದೇಹಕ್ಕೆ ಚುಚ್ಚಿದ ಬಾಣಗಳ ಸಮೇತವಾಗಿಯೇ ದಹನ ಮಾಡಬೇಕೆಂಬ ತಮ್ಮ ಅಪೇಕ್ಷೆಯನ್ನೂ ಎಲ್ಲರಿಗೆ ತಿಳಿಸಿದರು :

ಏಭಿರೇವ ಶರೈಶ್ಚಾಹಂ ದಗ್ಧವ್ಯೋಽಸ್ಮಿ ನರಾಧಿಪಾಃ । – ಭಾರತ (ಭೀಷ್ಮ. ೧೨೦/೫೯)

ಅರ್ಜುನನಿಂದ ಭೀಷ್ಮರಿಗೆ ಜಲದಾನ

ಧಾರ್ತರಾಷ್ಟ್ರೈರವಿಜ್ಞಾತಂ ತದಭಿಜ್ಞಾಯ ವಾಸವಿಃ ।
ವಾರುಣಾಸ್ತ್ರೇಣ ಭಿತ್ತ್ವಾ ಚ ಭೂಮಿಂ ವಾರಿ ಸುಗಂಧಿ ಚ ।
ಊರ್ಧ್ವಧಾರಮಧಾದಾಸ್ಯೇ ತರ್ಪಿತೋಽನೇನ ಸೋಽವದತ್ ॥ ೧೩೩ ॥

ಅ: ಕೌರವರಿಗೆ ತಿಳಿಯದೇ ಇದ್ದುದನ್ನು ತಿಳಿದ ಅರ್ಜುನ ವಾರುಣಾಸ್ತ್ರದಿಂದ ಭೂಮಿಯನ್ನು ಭೇದಿಸಿ ಊರ್ಧ್ವಧಾರೆಯಾಗಿ ಚಿಮ್ಮಿದ ಪರಿಮಳಭರಿತವಾದ ನೀರನ್ನು ಭೀಷ್ಮರ ಬಾಯಲ್ಲಿ ಸುರಿಸಿದ. ಅದರಿಂದ ತೃಪ್ತರಾದ ಭೀಷ್ಮರು ನುಡಿದರು.

ಭೀಷ್ಮರಿಂದ ಭೀಮಾರ್ಜುನರ ಪ್ರಶಂಸೆ

ಯಾದೃಶ್ಯಸ್ತ್ರಜ್ಞತಾ ಪಾರ್ಥೇ ದೃಷ್ಟಾಽತ್ರ ಕುರುನಂದನಾಃ ।
ಯಾದೃಗ್ಬಾಹುಬಲಂ ಭೀಮೇ ಸಂಯುಗೇಷು ಪುನಃ ಪುನಃ ॥ ೧೩೪ ॥

ಯಾದೃಶಂ ಚೈವ ಮಾಹಾತ್ಮ್ಯಮನಂತಮಜರಂ ಹರೇಃ ।
ವಿಜ್ಞಾತಂ ಸರ್ವಲೋಕಸ್ಯ ಸಭಾಯಾಂ ದೃಷ್ಟಮೇವ ಚ ॥ ೧೩೫ ॥

ಅ: 'ಕೌರವರೇ, ಅರ್ಜುನನಲ್ಲಿ ಎಂತಹ *ಅಸ್ತ್ರಪರಿಜ್ಞಾನವಿದೆ ಎಂಬುದನ್ನು ನೀವಿಲ್ಲಿ ನೋಡಿದಿರಿ. ಭೀಮನ ಬಾಹುಬಲ ಎಂತಹುದೆಂಬುದನ್ನೂ ಯುದ್ಧದಲ್ಲಿ ಮತ್ತೆ ಮತ್ತೆ

---

* ಸರ್ವಸ್ಮಿನ್ ಮಾನುಷೇ ಲೋಕೇ ವೇತ್ತ್ಯೇಕೋ ಹಿ ಧನಂಜಯಃ ।
ಕೃಷ್ಣೋ ವಾ ದೇವಕೀಪುತ್ರೋ ನಾನ್ಯೋ ವೇದೇಹ ಕಶ್ಚನ ॥ – ಭಾರತ (ಭೀಷ್ಮ. ೧೨೧/೪೨)

ಕಂಡಿರುವಿರಿ. ಶ್ರೀಕೃಷ್ಣನ ಅಳಿವಿರದ, ಮುಪ್ಪಿರದ ಮಹಿಮೆಯೂ ಎಂತಹುದೆಂಬುದನ್ನು ಅರಿತಿರುವಿರಿ. ಅದು ಎಲ್ಲ ಜನರೆದುರು ಸಭೆಯಲ್ಲಿ ನಿಮಗೆ ಕಂಡದ್ದೇ ಆಗಿದೆ'.

ವಿ: ೧) ಅರ್ಜುನ, ಭೀಮ ಮತ್ತು ಕೃಷ್ಣರ ಅಸ್ತ್ರಜ್ಞತೆ, ಬಾಹುಬಲ ಮತ್ತು ಅಪಾರ ಮಹಿಮೆ–ಗಳನ್ನು ಭೀಷ್ಮರು ಕೊಂಡಾಡುವ ಮೂಲಕ ಇತರ ಎಲ್ಲರಿಗಿಂತ ಆ ಮೂವರು ಮಿಗಿಲಾದವರು ಎಂಬುದನ್ನು ಸೂಚಿಸುವರು.

೨) ಇದೂ ಸಹ ಆರೋಹಣ ಕ್ರಮದಲ್ಲಿ ಬಂದಿರುವ ಹಿರಿಮೆ ಎಂಬುದನ್ನು ಗಮನಿಸಬೇಕು.

ಉಪಾರಮತ ತದ್ಯುದ್ಧಂ ಸುಖಿನಃ ಸಂತು *ಭೂಮಿಪಾಃ ।
ಯಥೋಚಿತಂ ವಿಭಕ್ತಾಂ ಚ ಭುಜ್ಯಧ್ವಂ ಭೂಪಾಃ ಸದಾ ಭುವಮ್ ।
ಇತ್ಯುಕ್ತಃ ಪ್ರಯಯೌ ತೂಷ್ಣೀಂ ಧಾರ್ತರಾಷ್ಟ್ರಃ ಸ್ವಕಂ ಗೃಹಮ್ ॥ ೧೩೬ ॥

ಅ: ಆದ್ದರಿಂದ ಯುದ್ಧವನ್ನು ನಿಲ್ಲಿಸಿರಿ, ರಾಜರು *ನೆಮ್ಮದಿಯಿಂದ ಬದುಕಲಿ. ಯಥೋಚಿತವಾಗಿ ರಾಜ್ಯವನ್ನು ನೀವು ಹಂಚಿಕೊಂಡು ಅನುಭವಿಸಿರಿ. ಭೀಷ್ಮರು ಹೀಗೆ ಹೇಳಲು ದುರ್ಯೋಧನ ಸುಮ್ಮನೆ ತನ್ನ ಮನೆಗೆ ತೆರಳಿದ.

ವಿ: ಭೀಷ್ಮರ ಹಿತವಚನವನ್ನು ಕಡೆಗಣಿಸಿದ ದುರ್ಯೋಧನ ಮರಳಿ ಯುದ್ಧಕ್ಕೆ ಅಣಿಯಾಗ–ಲೆಂದು ಹಾಗೆ ತೆರಳಿದ ಎಂದರ್ಥ.

ಭೀಷ್ಮ ಪಾತದಿಂದ ಧೃತರಾಷ್ಟ್ರನ ಶೋಕ - ಪಾಂಡವರ ಹರ್ಷ

ವ್ಯಾಸದತ್ತೋರುವಿಜ್ಞಾನಾತ್ ಸಂಜಯಾದಖಿಲಂ ಪಿತಾ ।
ಶ್ರುತ್ವಾ ತದಾ ಪರ್ಯತಪ್ಯತ್ ಪಾಂಡವಾಃ ಕೃಷ್ಣದೇವತಾಃ ।
ಮುಮುದುಃ ಶಿಬಿರಂ ಪ್ರಾಪ್ಯ ಸರ್ವೇ ಕೃಷ್ಣಾನುಮೋದಿತಾಃ ॥ ೧೩೭ ॥

॥ ಇತಿ ಶ್ರೀಮದಾನಂದತೀರ್ಥಭಗವತ್ಪಾದಾಚಾರ್ಯವಿರಚಿತೇ
ಶ್ರೀಮಹಾಭಾರತತಾತ್ಪರ್ಯನಿರ್ಣಯೇ ಭೀಷ್ಮಪಾತೋ ನಾಮ ಪಂಚವಿಂಶೋಽಧ್ಯಾಯಃ ॥ ೨೫ ॥

---

* ಭೀಷ್ಮಸ್ಯಾಂತಾದಸ್ತು ವಃ ಸೌಹೃದಂ ಚ ಜೀವಂತು ಶೇಷಾಃ ಸಾಧು ರಾಜನ್ ಪ್ರಸೀದ ॥
– ಭಾರತ (ಭೀಷ್ಮ. ೧೨೧/೫೨)

ಅ: ವೇದವ್ಯಾಸರು ನೀಡಿದ ದಿವ್ಯಜ್ಞಾನವನ್ನು ಹೊಂದಿದ ಸಂಜಯನ ಮೂಲಕ ಎಲ್ಲವನ್ನೂ ತಿಳಿದ ಧೃತರಾಷ್ಟ್ರ ಅದನ್ನು ಕೇಳಿ ಬಹಳವಾಗಿ ಪರಿತಪಿಸಿದ. ಪಾಂಡವರು ಕೃಷ್ಣನನ್ನೇ ಪರದೈವ-ವೆಂದು ಬಗೆದು ಶಿಬಿರಗಳನ್ನು ಸೇರಿ ಕೃಷ್ಣನ ಆದೇಶದಂತೆ ನಲಿದರು.

ವಿ: ೧) ವೇದವ್ಯಾಸರು ಯುದ್ಧದ ಆರಂಭದ ಮುನ್ನ ಧೃತರಾಷ್ಟ್ರನ ಬಳಿಗೆ ಆಗಮಿಸಿ ಅವನನ್ನು ಕೇಳಿದರು :

ವರಾಣಾಮೀಶ್ವರೋ ವ್ಯಾಸಃ ಸಂಜಯಾಯ ವರಂ ದದೌ ।
ಏಷ ತೇ ಸಂಜಯೋ ರಾಜನ್ ಯುದ್ಧಮೇತದ್ವದಿಷ್ಯತಿ ॥
ಏತಸ್ಯ ಸರ್ವಸಂಗ್ರಾಮೇ ನ ಪರೋಕ್ಷಂ ಭವಿಷ್ಯತಿ ।
ಚಕ್ಷುಷಾ ಸಂಜಯೋ ರಾಜನ್ ದಿವ್ಯೇನೈವ ಸಮನ್ವಿತಃ ॥
ಕಥಯಿಷ್ಯತಿ ತೇ ಯುದ್ಧಂ ಸರ್ವಜ್ಞಶ್ಚ ಭವಿಷ್ಯತಿ ।
ಪ್ರಕಾಶಂ ವಾऽಪ್ರಕಾಶಂ ವಾ ದಿವಾ ವಾ ಯದಿ ವಾ ನಿಶಿ ।
ಮನಸಾ ಚಿಂತಿತಮಥ ಸರ್ವಂ ವೇತ್ಸ್ಯತಿ ಸಂಜಯಃ ॥

– ಭಾರತ (ಭೀಷ್ಮ. ೨/೮-೧೧)

ನಿನಗೆ ಈ ಕುರು–ಪಾಂಡವರ ಸಮರವನ್ನು ನೋಡುವ ಬಯಕೆಯೋ, ಕೇಳುವ ಬಯಕೆಯೋ? ಹಾಗೆ ಕೇಳುವ ಮೂಲಕ ತಾವು ಎಲ್ಲದಕ್ಕೂ ಸಮರ್ಥರೆಂಬುದನ್ನು ಸೂಚಿಸಿದರು. ಆಗ ಧೃತರಾಷ್ಟ್ರ ಉತ್ತರಿಸಿದ – 'ನನಗೆ ಕಾಣುವ ಬಯಕೆಯಿಲ್ಲ, ಕೇಳುವ ಬಯಕೆ ಮಾತ್ರ' :

ನ ರೋಚತೇ ಜ್ಞಾತಿವಧಂ ದ್ರಷ್ಟುಂ ಬ್ರಹ್ಮರ್ಷಿಸತ್ತಮ ।
ಯುದ್ಧಮೇತತ್ ತ್ವಶೇಷೇಣ ಶೃಣುಯಾಂ ತವ ತೇಜಸಾ ॥ – ಭಾರತ (ಭೀಷ್ಮ.೨/೭)

೨) ಕೃಷ್ಣನನ್ನು ಕಂಡ ತನ್ನ ಕಣ್ಣುಗಳು ಬೇರೇನನ್ನೂ ಕಾಣಬಾರದು ಎಂದು ಆಗಲೇ ನಿಶ್ಚಯಿಸಿದ್ದ ಅವನು ಸಹಜವಾಗಿಯೇ ಆ ಯುದ್ಧವನ್ನು ನೋಡಲು ಬಯಸದೇ ಅದರ ವಿವರ–ಗಳನ್ನು ಕೇಳಲು ಮಾತ್ರ ಬಯಸಿದ.

೩) ವ್ಯಾಸರು ಅವನ ಪ್ರಾರ್ಥನೆಯನ್ನು ಮನ್ನಿಸಿ ಅವನಿಗೆ ಪರಮಾಪ್ತನೆನ್ನಿಸಿದ್ದ ಸಂಜಯ–ನಿಗೆ ದಿವ್ಯದೃಷ್ಟಿಯನ್ನಿತ್ತು ಕುರುಕ್ಷೇತ್ರದ ಸಮರವನ್ನು ಕಣ್ಣಾರೆ ಕಂಡು ಅದರ ವಿವರಗಳನ್ನೆಲ್ಲ

---

೧೩೬. ತತ್ರ ರಣಭೂಮೌ ಸ್ಥಿತ್ವೈಕೈಕಸ್ಮಿನ್ ಸೇನಾಪತೌ ಪತಿತೇ ಸತಿ ರಣಭೂಮೇಃ ಸಕಾಶಾತ್ ರಾತ್ರೌ ಹಸ್ತಿನಪುರ-ಮಾಗತ್ಯ ಏಕೈಕಸ್ಯ ಸೇನಾಪತೇರ್ಯುದ್ಧಾದಿಕಂ ಧೃತರಾಷ್ಟ್ರಾಯ ವಕ್ತೀತಿ । ತಥಾ ಚೋಕ್ತಮ್ .... ॥ – (ವಿ.)

೧೩೭. ಏತಜ್ಜ್ಞಾನಂ ಚ ದುರ್ಯೋಧನವಧಪರ್ಯಂತಮಸ್ತಿ । ತತೋ ನಶ್ಯತೀತಿ ಧ್ಯೇಯಮ್ ।

'ಹತೇ ದುರ್ಯೋಧನೇ ಚೈವ ಹತೇ ಸೈನ್ಯೇ ಚ ಸರ್ವಶಃ ।
ಸಂಜಯೋ ವಿಗತಪ್ರಾಜ್ಞೋ ಧೃತರಾಷ್ಟ್ರಮುಪಾಶ್ರಿತಃ' ಇತಿ ಭಾರತವಚನಾತ್ ॥ – (ವಿ.)

ಧೃತರಾಷ್ಟ್ರನಿಗೆ ಅವನ ಅಪೇಕ್ಷೆಯಂತೆ ತಿಳಿಸಲು ಆದೇಶವಿತ್ತರು. ಅದರಿಂದಾಗಿ ಸಂಜಯನಿಗೆ ರಣರಂಗದ ಪ್ರತಿಯೊಂದು ಆಗುಹೋಗುಗಳು ಕಣ್ಣಾರೆ ಕಾಣುತ್ತಿದ್ದವು, ವ್ಯಾಸರ ಸಾಮರ್ಥ್ಯ ಅನುಪಮವಾದುದು.

೪) ಸ್ವತಃ ಯೋಧನಲ್ಲದ ಸಂಜಯನಿಗೆ ಕುರುಕ್ಷೇತ್ರಮಹಾಸಮರದಂತಹ ವಿಶ್ವ–ದಾಖಲೆಯ ಸಮರದ ವಿವರಗಳನ್ನೆಲ್ಲ ನೀಡುವ ಪರಿಜ್ಞಾನವನ್ನೂ, ಸಾಮರ್ಥ್ಯವನ್ನು ನೀಡಿದ್ದು ವಿಶ್ವದ ಪರಮಾದ್ಭುತಗಳಲ್ಲೊಂದು. ವಿಶ್ವದ ಇತಿಹಾಸದಲ್ಲಿ ಈ ಬಗೆಯ ಅದ್ಭುತಜ್ಞಾನ ನೀಡಿದ ಮತ್ತೊಂದು ದೃಷ್ಟಾಂತ ಎಲ್ಲೂ ಕಾಣಸಿಗದು. ಇಂತಹ ಅನನ್ಯಸಾಧಾರಣವಾದ ಕಾರ್ಯ ಶ್ರೀವೇದವ್ಯಾಸರನ್ನು ಸಾಕ್ಷಾದ್ಭಗವಂತ ಎಂದು ಸ್ಫುಟಪಡಿಸುವುದು.

೫) ಭಗವದ್ಗೀತೆಯ ನಿರೂಪಣೆಯ ಕೊನೆಯಲ್ಲೂ ಸಂಜಯ ವ್ಯಾಸರು ನೀಡಿದ ಅಂತಹ ಅಪೂರ್ವ ಅವಕಾಶವನ್ನು ವಿಶೇಷವಾಗಿ ಸ್ಮರಿಸಿರುವುದನ್ನು ಗಮನಿಸಬೇಕು :

ವ್ಯಾಸಪ್ರಸಾದಾಚ್ಛ್ರುತವಾನೇತದ್ಗುಹ್ಯಮಹಂ ಪರಮ್ ।
ಯೋಗಂ ಯೋಗೇಶ್ವರಾತ್ ಕೃಷ್ಣಾತ್ ಸಾಕ್ಷಾತ್ ಕಥಯತಃ ಸ್ವಯಮ್॥ಯ
ರಾಜನ್ ಸಂಸ್ಮೃತ್ಯ ಸಂಸ್ಮೃತ್ಯ ಸಂವಾದಮಿಮಮದ್ಭುತಮ್ ।
ಕೇಶವಾರ್ಜುನಯೋಃ ಪುಣ್ಯಂ ಹೃಷ್ಯಾಮಿ ಚ ಮುಹುರ್ಮುಹುಃ ॥

– ಗೀತಾ(೧೮/೭೫,೭೬)

೬) ಯುದ್ಧದಲ್ಲಿ ಕಣ್ಣಿಗೆ ಕಾಣುವುದು ಮಾತ್ರವಲ್ಲದೇ ಯೋಧರು ಮನಸ್ಸಿನಲ್ಲಿ ಚಿಂತಿಸು–ತ್ತಿದ್ದುದನ್ನೂ ಸಹ ಅರಿಯುವಂತಹ ಅಗಾಧಸಾಮರ್ಥ್ಯವನ್ನು ಅವರು ಅವನಿಗೆ ನೀಡಿದ್ದರು. ಜನಗಳ ಸಂಖ್ಯೆ, ಆ ಯೋಧರ ಸಂಖ್ಯೆ, ಆನೆ ಕುದುರೆಗಳ ಸಂಖ್ಯೆ, ಪ್ರತಿಯೊಬ್ಬನು ಬಿಡುವ ಅಸ್ತ್ರಾಸ್ತ್ರಗಳ ಸಂಖ್ಯೆ, ಅವುಗಳಿಗೆ ಪ್ರತಿವೀರರು ಪ್ರಯೋಗಿಸುತ್ತಿದ್ದ ಪ್ರತಿಶಸ್ತ್ರಾಸ್ತ್ರಗಳ ವಿವರ, ಸತ್ತ ಜನಗಳ ಮಾಹಿತಿ ಮೊದಲಾದ ಸಮಸ್ತವನ್ನೂ ಸಹ ಕರಾರುವಾಕ್ಕಾಗಿ ತಿಳಿಯುವಂತಹ ಅತ್ಯದ್ಭುತವಾದ ಸಾಮರ್ಥ್ಯವನ್ನು ನೀಡಿದ ವ್ಯಾಸರು ಕೇವಲ ಮಹಾಭಾರತದ ಲೇಖಕರು ಮಾತ್ರವಲ್ಲದೇ ಸರ್ವಾತ್ಮನಾ ಅದರ ಪ್ರವರ್ತಕ ಸೂತ್ರಧಾರರೇ ಆಗಿದ್ದರು ಎಂಬುದಕ್ಕೆ ಇದು ಅತ್ಯಂತ ಸ್ಪಷ್ಟವಾದ ನಿದರ್ಶನ.

॥ ಶ್ರೀಮದಾನಂದತೀರ್ಥಭಗವತ್ಪಾದಾಚಾರ್ಯಪ್ರಣೀತ ಮಹಾಭಾರತತಾತ್ಪರ್ಯನಿರ್ಣಯದಲ್ಲಿ 'ಭೀಷ್ಮಪಾತ' ಎಂಬ ಇಪ್ಪತ್ತೈದನೆಯ ಅಧ್ಯಾಯ ಮುಗಿಯಿತು ॥ ೨೫ ॥

॥ ಶ್ರೀಕೃಷ್ಣಾರ್ಪಣಮಸ್ತು ॥

★★★★★

ಅಧ್ಯಾಯ - ೨೬

(ನಾರಾಯಣಾಸ್ತ್ರೋಪಶಮನಮ್)

(ಭೀಮನಿಂದ ಶಲ್ಯನ ಪರಾಭವ, ಭಗದತ್ತವಧೆ, ಅಭಿಮನ್ಯುವಧೆ, ಘಟೋತ್ಕಚವಧೆ, ಬಾಹ್ಲೀಕಾದಿಹನನ, ದ್ರೋಣರ ನಿರ್ಯಾಣ, ನಾರಾಯಣಾಸ್ತ್ರಪ್ರಸಂಗ, ಭೀಮನ ಭಾಗವತಧರ್ಮದ ಹಿರಿಮೆ)

ಸೇನಾಪತಿಯಾಗಿ ದ್ರೋಣರು

ಅಥಾಖಿಲಾನಾಂ ಪೃಥಿವೀಪತೀನಾ-
ಮಾಚಾರ್ಯಮಗ್ರ್ಯಂ ರಥಿನಾಂ ಸುವಿದ್ಯಮ್ ।
ರಾಮಸ್ಯ ವಿಶ್ವಾಧಿಪತೇಃ ಸುಶಿಷ್ಯಂ
ಚಕ್ರೇ ಚಮೂಪಂ ಧೃತರಾಷ್ಟ್ರಪುತ್ರಃ ॥ ೧ ॥

ಅ: ಭೀಷ್ಮರ ಅನಂತರ ಸಕಲ ರಾಜರಿಗೂ ಅಸ್ತ್ರವಿದ್ಯಾಗುರುವಾದ, ರಥಿಕರಲ್ಲಿ ಅಗ್ರೇಸರರಾದ, ಉತ್ತಮ ವಿದ್ಯಾವಂತರಾದ, ಜಗದೀಶ್ವರನಾದ ಶ್ರೀಪರಶುರಾಮನ ಉತ್ತಮ ಶಿಷ್ಯರಾದ ದ್ರೋಣರನ್ನು ದುರ್ಯೋಧನ ಸೇನಾಪತಿಯನ್ನಾಗಿ ಮಾಡಿದ.

ವಿ: ೧) ದ್ರೋಣರ ಹಿರಿಮೆಯ ಸಾರಸರ್ವಸ್ವವನ್ನು ಸುಂದರವಾಗಿ ಸೆರೆ ಹಿಡಿದಿರುವ ಅಪೂರ್ವ ಶ್ಲೋಕವಿದು. ಇಂತಹ ಹಿರಿಮೆಯ ದ್ರೋಣರೂ ಸಹ ಗೆಲುವನ್ನು ಸಾಧಿಸಲಾಗದ್ದಕ್ಕೆ ಅವರಿಗೆ ಪಟ್ಟಾಭಿಷೇಕ ಮಾಡಿದ್ದು ಕಲಿಯ ಅವತಾರನಾದ ದುರ್ಯೋಧನನ ಎಂಬುದೇ ಕಾರಣ ಎಂಬ ಸೂಚನೆಯೂ ಇಲ್ಲಿದೆ.

೨) ಕಲಿ ತಲೆಯ ಮೇಲೆ ಕೈಯಿಟ್ಟು ಯಾವನು ತಾನೇ ಕಲಿಯಾಗಿ ಹೋರಾಡಬಲ್ಲ ಎಂಬ ಇಲ್ಲಿಯ ಧ್ವನಿ ಅತ್ಯಂತ ಮನೋಜ್ಞ.

೩) ಸೇನಾಪತಿಯಾಗುತ್ತಲೇ ದ್ರೋಣರು ದುರ್ಯೋಧನನಿಗೆ ಅಪೇಕ್ಷೆ ಮುಂದಿಡಲು ಕೇಳಿದರು. ಅದಕ್ಕೆ ದುರ್ಯೋಧನ ಧರ್ಮರಾಜನನ್ನು ಸೆರೆ ಹಿಡಿದು ಕೊಡಲು ಕೇಳಿಕೊಂಡ. ಕೊಲ್ಲುವ ಬದಲು ಸೆರೆ ಹಿಡಿಯುವ ಅಪೇಕ್ಷೆಯನ್ನು ಮುಂದಿಡುವ ಕಾರಣವನ್ನು ಕೇಳಿದಾಗ ದುರ್ಯೋಧನ ತಿಳಿಸಿದ : 'ಧರ್ಮರಾಜ ಸತ್ತರೆ ಇತರ ಯಾರಿಗಾದರೂ ಕೃಷ್ಣ ರಾಜ್ಯ ನೀಡಿಯೇ ನೀಡುವನು. ಕೊನೆಗೆ ದ್ರೌಪದಿಗೋ, ಕುಂತಿಗೋ ಕೊಟ್ಬೇಕೊಡುವನು. ಯುದ್ಧದಲ್ಲಿ ಗೆಲುವು ಎಂದೂ ತನ್ನದಾಗಲು ಸಾಧ್ಯವಿಲ್ಲ ಆದ್ದರಿಂದ ಧರ್ಮರಾಜನ ಸೆರೆ ಹಿಡಿದು ತಂದಿತ್ತರೆ ಅವನೊಂದಿಗೆ ಪುನಃ ದ್ಯೂತವಾಡಿ ಕಾಡಿಗಟ್ಟುವ ಯೋಚನೆ ತನ್ನದು' :

ದದಾಸಿ ಚೇದ್ವರಂ ಮಹ್ಯಂ ಜೀವಗ್ರಾಹಂ ಯುಧಿಷ್ಠಿರಮ್ ।
ಗೃಹೀತ್ವಾ ರಥಿನಾಂ ಶ್ರೇಷ್ಠಂ ಮತ್ಸಮೀಪಮಿಹಾನಯ ॥
ಯದಿ ಸರ್ವೇ ಹನಿಷ್ಯಂತೇ ಪಾಂಡವಾಃ ಸಸುತಾ ಮೃಧೇ ।
ತತಃ ಕೃತ್ಸ್ನಂ ವಶೇ ಕೃತ್ವಾ ನಿಃಶೇಷಂ ನೃಪಮಂಡಲಮ್ ॥
ಸಸಾಗರವನಾಂ ಸ್ಫೀತಾಂ ವಿಜಿತ್ಯ ವಸುಧಾಮಿಮಾಮ್ ।
ವಿಷ್ಣುರ್ದಾಸ್ಯತಿ ಕೃಷ್ಣಾಯೈ ಕುಂತ್ಯೈ ವಾ ಪುರುಷೋತ್ತಮಃ ॥...
ಅತೋ ನ ವಧಮಿಚ್ಛಾಮಿ ಧರ್ಮರಾಜಸ್ಯ ಕರ್ಹಿಚಿತ್ ॥

– ಭಾರತ(ದ್ರೋಣ. ೧೨/೬, ೧೫, ೧೮)

೪) ಅವನಿಗೆ ಧರ್ಮರಾಜ ವನವಾಸಕಾಲದಲ್ಲಿ ಬೃಹದಶ್ವಮುನಿಯಿಂದ ಅಕ್ಷವಿದ್ಯೆಯನ್ನು ಕಲಿತಿದ್ದ ವಿವರ ತಿಳಿಯದ್ದು ಇದರಿಂದ ಸ್ಪಷ್ಟ.

ಯುದ್ಧಕ್ಕೆ ಕರ್ಣನ ಆಗಮನ

ಕರ್ಣೋಽಪಿ ಭೀಷ್ಮಾನುಮತೋ ಧನುಷ್ಮಾನ್
ಯುದ್ಧೋದ್ಯತೋಽಭೂತ್ ತದಸತ್ಯತಃ ಪುರಾ ।
ತಸ್ಮಿನ್ ಸ್ಥಿತೇಽನಾತ್ತಧನುಸ್ತದೈವ
ರಥಂ ಸಮಾಸ್ಥಾಯ ಗುರುಂ ಸಮನ್ವಯಾತ್ ॥ ೨ ॥

ಅ: ಹಿಂದೆ ಭೀಷ್ಮರಿಂದ ಅವಮಾನಿತನಾಗಿ ಅವರಿರುವವರೆಗೂ ಧನುಸ್ಸು ಹಿಡಿಯದಿದ್ದ ಧನುರ್ಧಾರಿಯಾದ ಕರ್ಣನು ಸಹ ಭೀಷ್ಮರ ಅನುಮತಿಯನ್ನು ಪಡೆದು ಯುದ್ಧಕ್ಕೆ ಸಿದ್ಧನಾದ. ರಥವನ್ನೇರಿ ದ್ರೋಣರನ್ನು ಹಿಂಬಾಲಿಸಿದ.

ವಿ : ೧) ಕರ್ಣ ಭೀಷ್ಮರ ಬಳಿಗೆ ಪಶ್ಚಾತ್ತಾಪದಿಂದ ಆಗಮಿಸಿ ಮನ್ನಿಸಲು ಕೇಳಿದಾಗ ಅವನಿಗೆ 'ಪಾಂಡವರ ಮೇಲೆ ಜಯವಂತೂ ದುರ್ಲಭ; ಸ್ವರ್ಗ ಲಭಿಸುವಂತೆ ಯುದ್ಧ ಮಾಡು' ಎಂದು ಸಂದೇಶ ನೀಡುವರು.

---

೨. ತಸ್ಮಿನ್ ಸ್ಥಿತೇಽನಾತ್ತಧನುರಿತ್ಯತ್ರ ತಸ್ಮಿನ್ = ಭೀಷ್ಮೇ ಸ್ಥಿತೇ ಸತಿ ಪ್ರಾಗನಾತ್ತಧನುಃ ತದೈವ = ತಸ್ಮ ಯುದ್ಧೋ-ಪರಮಾನಂತರಮೇವ। ರಥಂ ಸಮಾಸ್ಥಾಯೇತ್ಯುಪಲಕ್ಷಣಮ್। ಧನುಶ್ಚಾದಾಯೇತಿ ಸಂಬಂಧಃ ॥ – (ವಾ.)

೨. ಅಹಂ ತ್ವಾಮನುಜಾನಾಮಿ ಯದಿಚ್ಛಸಿ ತದಾಪ್ನುಹಿ ।
ಕ್ಷತ್ರಧರ್ಮಜಿತಾನ್ ಲೋಕಾನವಾಪ್ಸ್ಯಸಿ ಧನಂಜಯಾತ್ ॥ (ಭೀಷ್ಮರ ವಚನ) – ಭಾರತ (೬/೧೨೨/೩೬)

* ಅಹಂ ತ್ವಾಮನುಜಾನಾಮಿ ಯದಿಚ್ಛಸಿ ತದಾಪ್ನುಹಿ ।
ಕ್ಷತ್ರಧರ್ಮಜಿತಾನ್ ಲೋಕಾನವಾಪ್ಸ್ಯಸಿ ಧನಂಜಯಾತ್॥ –ಭಾರತ(೬/೧೨೨/೩೬)

೨) ಇದರಲ್ಲಿ ಭೀಷ್ಮರು ಕೌರವಪಕ್ಷದಲ್ಲಿದ್ದು ಹೋರಾಡಿದರೂ ಮಾನಸಿಕವಾಗಿ ಪಾಂಡವ–ಪಕ್ಷದವರೇ ಆಗಿದ್ದರು ಎನ್ನುವುದು ಸ್ಫುಟಪಡುವುದು. ಅದರಿಂದಾಗಿಯೇ ಅವರು ಮಾಡಿದ ಯುದ್ಧ ಭೂಭಾರಹರಣಕ್ಕೆ ಸಾಧನವಾಗಿ ಹರಿಪ್ರೀತಿಗೆ ಕಾರಣವಾಯಿತು ಎಂದು ತಿಳಿಯಬೇಕು.

ಹನ್ನೊಂದನೆಯ ದಿನದ ಯುದ್ಧ - ದ್ರೋಣರ ಪ್ರತಿಜ್ಞೆ

ದ್ರೋಣೋ ವೃತೋ ಧಾರ್ತರಾಷ್ಟ್ರೇಣ ಧರ್ಮ–
ಸುತಗ್ರಹೇ ತೇನ ಕೃತೇ ಪ್ರತಿಶ್ರವೇ ।
ಜ್ಞಾತ್ವಾ ಯತಾಃ ಪಾಂಡವಾಸ್ತಂ ಸಮೀಯು–
ರ್ಯುದ್ಧಾಯ ತತ್ರಾಭವದುಗ್ರಯುದ್ಧಮ್ ॥ ೩ ॥

ಅ: ದುರ್ಯೋಧನ ದ್ರೋಣರನ್ನು ಧರ್ಮರಾಜನನ್ನು ಸೆರೆ ಹಿಡಿದು ನೀಡುವಂತೆ ಕೇಳಿಕೊಂಡ. ಅವರು ಹಾಗೆ ಮಾಡುವುದಾಗಿ ವಚನವಿತ್ತರು. ಅದನ್ನು ತಿಳಿದ ಪಾಂಡವರು ಸನ್ನದ್ಧರಾಗಿ ಯುದ್ಧಕ್ಕೆ ಆಗಮಿಸಿದರು. ಅವರಲ್ಲಿ ಉಗ್ರಯುದ್ಧ ನಡೆಯಿತು.

ಭೀಮ ಶಲ್ಯರ ಘೋರಯುದ್ಧ

ಪತತ್ರಿಭಿಸ್ತತ್ರ ದುಧಾವ ಶಾತ್ರವಾನ್
ದ್ರೋಣೋ ಧನುರ್ಮಂಡಲಮಂತ್ರನಿಃಸೃತೈಃ ।
ತಮಾಸಸಾದಾಶು ವೃಕೋದರೋ ನದಂ–
ಸ್ತಮಾಸದನ್ ದ್ರೌಣಿಕೃಪೌ ಚ ಮದ್ರರಾಟ್ ॥ ೪ ॥

ಅ: ವೃತ್ತಾಕಾರವಾಗಿ ಬಗ್ಗಿಸಿದ ಬಿಲ್ಲಿನಿಂದ ಮಂತ್ರಪೂರ್ವಕ ಪ್ರಯೋಗಿಸಲ್ಪಡುತ್ತಿದ್ದ ಬಾಣಗಳಿಂದ ದ್ರೋಣರು ಶತ್ರುಗಳನ್ನು ಕಂಗೆಡಿಸಿದರು. ಕೂಡಲೇ ಭೀಮಸೇನ ಸಿಂಹನಾದ ಮಾಡುತ್ತಾ ಅವರನ್ನು ಎದುರಿಸಿದ. ಅವನ ಮೇಲೆ ಅಶ್ವತ್ಥಾಮ, ಕೃಪ, ಶಲ್ಯರು ಯುದ್ಧಕ್ಕೆ ಆಗಮಿಸಿದರು.

---

೩. ಅಹಂ ಗೃಹೀತ್ವಾ ರಾಜಾನಂ ಸತ್ಯಧರ್ಮಪರಾಯಣಮ್ ।
ಆನಯಿಷ್ಯಾಮಿ ತೇ ರಾಜನ್ ವಶಮದ್ಯ ನ ಸಂಶಯಃ ॥ – ಭಾರತ (ದ್ರೋಣ. ೧೨/೨೬)

೪. ದುಧಾವ ಶಾತ್ರವಾನಿತ್ಯತ್ರ 'ಧೂಞ್ ಕಂಪನ' ಇತಿ ಧಾತೋಃ ಲಿಟಿ ರೂಪಮ್। ಕಂಪಯಾಮಾಸೇತ್ಯರ್ಥಃ ॥ – (ವಾ.)

ಸ ತಾನ್ ವಿಧೂಯಾಭ್ಯಪತದ್ರಣೇಽಗ್ರಣೀಃ
ದ್ರೋಣಂ ತಮನ್ವರ್ಜುನಿರಭ್ಯಯಾತ್ ಪರಾನ್।
ವವಾರ ತಂ ಮದ್ರಪತಿಸ್ತಯೋರಭೂದ್
ರಣೋ ಮಹಾಂಸ್ತತ್ರ ಗದಾಂ ಸಮಾದದೇ ॥ ೫ ॥

ಶಲ್ಯೋಽಥ ಭೀಮೋಽಭಿಯಯೌ ಗದಾಧರ-
ಸ್ತಮೇತಯೋರತ್ರ ಬಭೂವ ಸಂಗರಃ।
ಉಭಾವಜೇಯೌ ಗದಿನಾಮನುತ್ತಮಾ-
ವತುಲ್ಯವೀರ್ಯೌ ಪ್ರವರೌ ಬಲೀಯಸಾಮ್ ॥ ೬ ॥

ಅ: ಯುದ್ಧದಲ್ಲಿ ಅಗ್ರೇಸರನಾದ ಭೀಮಸೇನ ಅವರನ್ನೆಲ್ಲ ಹಿಮ್ಮೆಟ್ಟಿಸಿ ದ್ರೋಣರನ್ನು ಎದುರಿಸಿದ. ಅಭಿಮನ್ಯು ಭೀಮನನ್ನು ಹಿಂಬಾಲಿಸಿ ಶತ್ರುಗಳನ್ನು ಎದುರಿಸಿದ; ಅವನನ್ನು ಶಲ್ಯರಾಜ ತಡೆದ; ಶಲ್ಯ ಗದೆಯನ್ನು ಕೈಗೆತ್ತಿಕೊಂಡ; ಅವರಿಬ್ಬರಿಗೂ ಮಹತ್ತರವಾದ ಯುದ್ಧ ನಡೆಯಿತು.

ಭೀಮಸೇನ ಗದಾಪಾಣಿಯಾಗಿ ಅವನನ್ನು ಎದುರಿಸಿದ. ಅವರಿಬ್ಬರಿಗೂ ಅಲ್ಲಿ ಯುದ್ಧ ನಡೆಯಿತು. ಅವರಿಬ್ಬರೂ ಸೋಲು ಕಾಣದವರು, ಗದಾಯುದ್ಧದಲ್ಲಿ ಅತ್ಯುತ್ತಮರಾದವರು, ಮಹಾ ಶಕ್ತಿಶಾಲಿಗಳು, ಬಲಿಷ್ಠರಲ್ಲಿ ತುಂಬಾ ಶ್ರೇಷ್ಠರೆನ್ನಿಸಿದ್ದವರು.

ವಿ : ೧) ಭೀಮನ ಹಿರಿಮೆಗೆ ಆತ ವಾಯುವಿನ ಅವತಾರವಾಗಿದ್ದುದು ಕಾರಣವಾದರೆ, ಶಲ್ಯನ ಹಿರಿಮೆಗೆ ಅವನೊಳಗೆ ವಾಯುವಿನ ಆವೇಶವಿದ್ದುದು ಕಾರಣವಾಯಿತು ಎಂದು ತಿಳಿಯಬೇಕು. ಬಲಶಾಲಿಗಳಲ್ಲಿ ಮೊದಲ ಸ್ಥಾನ ಭೀಮನದಾದರೆ, ಮೂರನೆಯ ಸ್ಥಾನ ಶಲ್ಯನದಾಗಿತ್ತು ಎಂಬ ಮಾತು ಈಗಾಗಲೇ ಬಂದಿದೆ :

---

೫. ಅತ್ರ ವವಾರ ತಂ ಮದ್ರಪತಿರಿತ್ಯತ್ರ ತಚ್ಛಬ್ದೇನ ಭೀಮಸೇನಂ ಗೃಹೀತ್ವಾ ತಯೋರಭವದ್ರಣ ಇತ್ಯತ್ರ ಭೀಮಶಲ್ಯಯೋರಿತಿ ಕೇಷಾಂಚಿದ್ವ್ಯಾಖ್ಯಾನಮನಾದೇಯಮ್ । 'ತಸ್ಮಾದಾರ್ತಾಯನೇ ಯುದ್ಧಂ ಸೌಭದ್ರಸ್ಯ ಚ ಶಂಸ ಮೇ । ಸಂಜಯಃ – 'ಸಾದಿತಂ ಪ್ರೇಕ್ಷ್ಯರಂ ಯಂತಾರಂ ಶಲ್ಯಃ ಸರ್ವಾಯಸೀಂ ಗದಾಮ್ । ಸಮುತ್ಕ್ಷಿಪ್ಯ ನದನ್ ಕ್ರುದ್ಧಃ ಪ್ರಚಸ್ಕಂದ ರಥೋತ್ತಮಾತ್ । ತಂ ದೀಪ್ತಮಿವ ಕಾಲಾಗ್ನಿಂ ದಂಡಹಸ್ತಮಿವಾಂತಕಮ್ । ಜವೇನಾಭ್ಯ-ಪತದ್ಭೀಮಃ ಪ್ರಗೃಹ್ಯ ಮಹತೀಂ ಗದಾಮ್॥' ಇತಿ * ದ್ರೋಣಪರ್ವಗತವಾಕ್ಯವಿರೋಧಾತ್ । – (ಜ.)

---

* ದ್ರೋಣಪರ್ವ (೧೫೫/೩-೬)

ಭೀಮಶ್ಚ ಬಲಭದ್ರಶ್ಚ ಮದ್ರರಾಜಶ್ಚ ವೀರ್ಯವಾನ್ ।
ಚತುರ್ಥಃ ಕೀಚಕಸ್ತೇಷಾಂ ಪಂಚಮಂ ನಾನುಶುಶ್ರುಮಃ ॥

– ಭಾರತ (ವಿರಾಟ. ೨೯/೧೪)

೨) ಅದರಿಂದಾಗಿಯೇ ಅವರಿಬ್ಬರ ಯುದ್ಧ ಅತ್ಯಂತ ರೋಚಕವಾಯಿತು ಎಂದು ತಿಳಿಯಬೇಕು.

೩) ಭೀಮು ಶಲ್ಯನನ್ನು ದ್ರೌಪದೀಸ್ವಯಂವರಪ್ರಸಂಗದಲ್ಲಿ ಎರಡುಸಲ ಪರಾಭವಗೊಳಿಸಿದ ವಿವರವನ್ನು ಇಲ್ಲಿ ಗಮನಿಸಬೇಕು (೧೯/೧೨೫, ೧೩೮).

ವಿಚೇರತುಶ್ಚಿತ್ರತಮಂ ಪ್ರಪಶ್ಯತಾಂ
ಮನೋಹರಂ ತಾವಭಿನರ್ದಮಾನೌ ।
ಗದಾಪ್ರಪಾತಾಂಕಿತವಜ್ರಗಾತ್ರೌ
ದದರ್ಶ ಲೋಕೋಽಖಿಲ ಏವ ತೌ ರಣೇ ॥ ೭ ॥

ಅ: ಅವರಿಬ್ಬರೂ ನೋಡುವವರಿಗೆ ಅತ್ಯಂತ ಮನೋಹರವಾಗಿ ಅತ್ಯಾಶ್ಚರ್ಯಕರವಾದ ರೀತಿಯಲ್ಲಿ ಕಾದಾಡಿದರು. ಗದೆ ಅಪ್ಪಳಿಸಿದಾಗ ಅದರಿಂದ ಉಂಟಾದ ಗುರುತುಗಳನ್ನು ಹೊಂದಿದ ವಜ್ರಶರೀರಿಗಳಾದ ಅವರಿಬ್ಬರನ್ನೂ ಸಮಸ್ತ ಲೋಕ ಯುದ್ಧದಲ್ಲಿ ಕಂಡಿತು.

ಶಲ್ಯರಾಜನ ಮೂರ್ಛೆ

ಗದಾಭಿಘಾತೇನ ವೃಕೋದರಸ್ಯ
ವಿಚೇತನಃ ಪ್ರಾಪತದತ್ರ ಮದ್ರರಾಟ್ ।
ಭೀಮೋಽಪಿ ಕೋಪಾತ್ ಪ್ರಚಲತ್ಪದಃ ಕ್ಷಿತೌ*
ವಿಧಾಯ ಜಾನುಂ ಸಹಸೋತ್ಥಿತಃ ಕ್ಷಣಾತ್ ॥ ೮ ॥

ಅ: ಭೀಮಸೇನನ ಗದೆಯ ಪೆಟ್ಟಿನಿಂದ ಶಲ್ಯರಾಜ ಎಚ್ಚರತಪ್ಪಿ ಬಿದ್ದ. ಭೀಮನು ಕೋಪದಿಂದ ಕಾಲುಗಳನ್ನು ಚಲಿಸುವವನಾಗಿ ಮೊಣಕಾಲನ್ನೂರಿ ನೆಲದ ಮೇಲೆ ನಿಂತು ಕೂಡಲೇ ಮೇಲೆದ್ದ.

---

* ಕ್ಷಿತೌ ಜಾನುಂ ಸಹಸಾ ನಿಧಾಯ ಕ್ಷಣಾದುತ್ಥಿತಃ । – (ವೇ.)

ವಿ : ೧) ಭೀಮನ ಪೆಟ್ಟಿಗೆ ಶಲ್ಯರಾಜ ಮೂರ್ಛಿತನಾದರೆ ಭೀಮ ಮಾತ್ರ ನೆಲಕ್ಕೂ ಬೀಳದೇ ಮೊಣಕಾಲೂರಿ ತಕ್ಷಣ ಮೇಲೆದ್ದನು.

೨) ಭೀಮ ಇಷ್ಟನ್ನು ಮಾಡಿದ್ದು ಸಹ ಲೋಕದೃಷ್ಟಿಯಿಂದ ಮಾತ್ರ.

ವಿಚೇತನಂ ಪತಿತಂ ಮದ್ರರಾಜಂ
ವಿಲೋಕ್ಯ ಭೀಮಂ ಚ ತಮಾಹ್ವಯಂತಮ್ ।
ರಥಂ ಸಮಾರೋಪ್ಯ ಜನಸ್ಯ ಪಶ್ಯತಃ
ಪುರಶ್ಚ ಭೀಮಸ್ಯ ಕೃಪೋಽಪಜಗ್ಮಿವಾನ್ ॥ ೯ ॥

ಅ: ಶಲ್ಯ ಪ್ರಜ್ಞಾಹೀನನಾಗಿ ಬಿದ್ದುದನ್ನು ಭೀಮ ಅವನನ್ನು ಯುದ್ಧಕ್ಕೆ ಆಹ್ವಾನಿಸುತ್ತಿದ್ದುದನ್ನೂ ಕಂಡು ಜನರು ನೋಡುತ್ತಿದ್ದಂತೆಯೇ ಕೃಪ ಶಲ್ಯನನ್ನು ತನ್ನ ರಥದಲ್ಲಿ ಹಾಕಿಕೊಂಡು ಹೊರಟು ಹೋದ.

ವಿ : ಮಹಾಭಾರತದಲ್ಲಿ ಹಾಗೆ ಶಲ್ಯನನ್ನು ಕರೆದೊಯ್ದದ್ದು ಕೃತವರ್ಮ ಎಂದಿದೆ :

ತತಃ ಸ್ವರಥಮಾರೋಪ್ಯ ಮದ್ರಾಣಾಮಧಿಪಂ ರಣೇ ।
ಅಪೋವಾಹ ರಣಾತ್ ತೂರ್ಣಂ ಕೃತವರ್ಮಾ ಮಹಾರಥಃ ॥

– ಭಾರತ (ದ್ರೋಣ. ೧೫೫/೩೦)

ಇದನ್ನು ಪುರುಷವ್ಯತ್ಯಾಸ (೯/೧೩೯) ಎಂದು ತಿಳಿಯಬಹುದು.

ಭೀಮನಿಂದ ಸೇನಾಹನನ

ವಿಜಿತ್ಯ ಮದ್ರಾಧಿಪಮೋಜಸಾಽರಿಹಾ
ನದನ್ ರಥಂ ಪ್ರಾಪ್ಯ ನಿಜಂ ಸ ಮಾರುತಿಃ ।
ವ್ಯದ್ರಾವಯದ್ಬಾಣಗಣೈಃ ಪರೇಷಾ-
ಮನೀಕಿನೀಂ ದ್ರೋಣಸಮಕ್ಷಮೇವ ॥ ೧೦ ॥

ಅ: ಭೀಮಸೇನ ಪರಾಕ್ರಮದಿಂದ ಮದ್ರಾಧಿಪನಾದ ಶಲ್ಯನನ್ನು ಸೋಲಿಸಿ ಸಿಂಹನಾದವನ್ನು ಮಾಡುತ್ತಾ ತನ್ನ ರಥಕ್ಕೆ ತೆರಳಿ ಬಾಣಗಳ ಸಮೂಹಗಳಿಂದ ಶತ್ರುಗಳ ಸೈನ್ಯವನ್ನು ದ್ರೋಣರ ಕಣ್ಣೆದುರೇ ಹೊಡೆದೋಡಿಸತೊಡಗಿದ.

ಅರ್ಜುನನ ಪರಾಕ್ರಮ

ವಿದ್ರಾವಯತ್ಯಾಶು ಕುರೂನ್ ವೃಕೋದರೇ
ವಿಧೂಯ ಸೌಭದ್ರಮುಖಾನ್ ಸಸಾತ್ಯಕೀನ್ ।
ದ್ರೋಣೋऽಭಿಪೇದೇ ನೃಪತಿಂ ಗೃಹೀತುಂ
ತಮಾಸಸಾದಾಶು ಧನಂಜಯೋ ರಥೀ ॥ ೧೧ ॥

ಅ: ಭೀಮಸೇನ ಅಷ್ಟು ವೇಗದಿಂದ ಕೌರವರನ್ನು ಓಡಿಸುತ್ತಿದ್ದಂತೆ ದ್ರೋಣರು ಅಭಿಮನ್ಯು, ಸಾತ್ಯಕಿ ಮೊದಲಾದವರನ್ನು ಸೋಲಿಸಿ ಧರ್ಮರಾಜನನ್ನು ಸೆರೆ ಹಿಡಿಯಲೆಂದು ಅವನ ಬಳಿಗೆ ಧಾವಿಸಿದರು. ಅವರನ್ನು ರಥದಲ್ಲಿ ಕುಳಿತು ಅರ್ಜುನ ಎದುರಿಸಿದ.

ಸ ವಾಸುದೇವಪ್ರಯತೇ[೧೨] ರಥೇ ಸ್ಥಿತಃ
ಶರೈಃ ಶರೀರಾಂತಕರೈಃ ಸಮಂತತಃ ।
ನಿಹತ್ಯ ನಾಗಾಶ್ವರಥಾನ್ ಪ್ರವರ್ತಯ-
ನ್ನದೃಶ್ಯತಾಶ್ವೇವ ಚ ಶೋಣಿತಾಪಗಾಃ ॥ ೧೨ ॥

ಅ: ಶ್ರೀಕೃಷ್ಣನು ನಿಯಂತ್ರಿಸುತ್ತಿದ್ದ ರಥದಲ್ಲಿ ಇದ್ದ ಅರ್ಜುನ ದೇಹನಾಶಕವಾದ ಬಾಣ-ಗಳಿಂದ ಸುತ್ತಲೂ ಆನೆ, ಕುದುರೆ, ರಥಗಳನ್ನು ನಾಶಪಡಿಸುತ್ತಾ ರಕ್ತದ ಹೊಳೆ ಹರಿಸುವವನಾಗಿ ಲೋಕಕ್ಕೆ ಕಾಣಿಸಿಕೊಂಡ.

ಹನ್ನೊಂದನೆಯ ದಿನದ ಯುದ್ಧದ ಪರಿಸಮಾಪ್ತಿ

ನಿಹನ್ಯಮಾನಾಸು ಕಿರೀಟಿನಾ ಚಮೂ-
ಷ್ವಾರಕ್ಷಿತೇ ಧರ್ಮಸುತೇ ತಥಾऽऽಪದಃ ।
ಚಮೂಂ ಚ ಭೀಮಾರ್ಜುನಬಾಣಭಗ್ನಾಂ
ದ್ರೋಣೋऽಪಹೃತ್ಯಾऽಶು ಯಯೌ ನಿಶಾಗಮೇ ॥ ೧೩ ॥

ಅ: ಸೇನೆಗಳೆಲ್ಲಾ ಅರ್ಜುನನಿಂದ ಬಹಳವಾಗಿ ನಾಶಹೊಂದುತ್ತಿರಲು ಧರ್ಮರಾಜನು ಸುರಕ್ಷಿತನಾಗಿ ಆಪತ್ತಿನಿಂದ ಪಾರಾಗಲು ಭೀಮಾರ್ಜುನರ ಬಾಣಗಳಿಂದ ಅಳಿಯುತ್ತಿದ್ದ ತಮ್ಮ ಸೇನೆಯನ್ನು ರಾತ್ರಿಯಾಗುತ್ತಿದ್ದಂತೆ ದ್ರೋಣರು ಹಿಂತೆಗೆದುಕೊಂಡು ತೆರಳಿದರು.

---

೧೨. ಪ್ರಯತೇ ಪ್ರವರ್ತಿತೇ –(ಜ.)

ವಿ: ಹನ್ನೊಂದನೆಯ ದಿವಸದ ಯುದ್ಧವೂ ಹೀಗೆ ಎಂದಿನಂತೆ ಪಾಂಡವರ ವಿಜಯದಲ್ಲಿಯೇ ಮುಕ್ತಾಯವಾಯಿತು ಎಂಬುದು ಗಮನಾರ್ಹ.

ದ್ರೋಣರ ಶಪಥ

ಸ ಧಾರ್ತರಾಷ್ಟ್ರೇಣ ಯುಧಿಷ್ಠಿರಾಗ್ರಹಾತ್
ಸಂಶ್ರಾವಿತಃ ಕ್ರೂರವಚೋ ನಿಶಾಯಾಮ್ ।
ಜಗಾದ ದೂರಂ ಸಮರಾದ್ವಿನೀಯತಾಂ
ಪಾರ್ಥಸ್ತತೋ ಧರ್ಮಸುತಂ ಗ್ರಹೀಷ್ಯೇ ॥ ೧೪ ॥

ಅ: ರಾತ್ರಿಯಲ್ಲಿ ದುರ್ಯೋಧನ ದ್ರೋಣರನ್ನು ಅವರು ಧರ್ಮರಾಜನನ್ನು ಸೆರೆ ಹಿಡಿಯದಿದ್ದಕ್ಕಾಗಿ ಕ್ರೂರ ಮಾತುಗಳಿಂದ ನಿಂದಿಸಿದ. ಅವರು ನುಡಿದರು : 'ಅರ್ಜುನನನ್ನು ಯುದ್ಧದಿಂದ ದೂರಕ್ಕೆ ಕರೆದೊಯ್ಯಿರಿ; ಬಳಿಕ ನಾನು ಧರ್ಮರಾಜನನ್ನು ಸೆರೆ ಹಿಡಿಯುವೆ'.

ವಿ: ಅರ್ಜುನನಂತಹ ಮಹಾವೀರ ಧರ್ಮರಾಜನನ್ನು ರಕ್ಷಿಸುತ್ತಿರುವಾಗ ಅವನನ್ನು ಸೆರೆ ಹಿಡಿಯಲು ಎಂತು ಸಾಧ್ಯ, ಅವನನ್ನು ದೂರಕ್ಕೆ ಕರೆದೊಯ್ದಲ್ಲಿ ಸೆರೆ ಹಿಡಿಯಲು ಸಾಧ್ಯವಾದೀತು ಎಂದು ದ್ರೋಣರು ದುರ್ಯೋಧನನಿಗೆ ತಿಳಿಸಿದರು ಎಂದರ್ಥ.

ಹನ್ನೆರಡನೆಯ ದಿನದ ಯುದ್ಧ

ತತಃ ಸುಶರ್ಮಾ ಸಹಿತೋ ಮಹಾರಥೈಃ
ಸಂಶಪ್ತಕೈರ್ದೂರತರಂ ಪ್ರಣೇತುಮ್ ।
ಯುದ್ಧಾಯ ಭೀಮಾನುಜಮಾಶು ಕ್ಲೃಪ್ತೋ
ದುರ್ಯೋಧನೇನೋಮಿತಿ ಸೋಽಪ್ಯವಾದೀತ್ ॥ ೧೫ ॥

ಅ: ಆಗ ಸುಶರ್ಮ ಮಹಾರಥಿಕರಿಂದ ಕೂಡಿದ ಸಂಶಪ್ತಕರೊಂದಿಗೆ ಅರ್ಜುನನನ್ನು ಯುದ್ಧದಿಂದ ತುಂಬಾ ದೂರಕ್ಕೆ ಕರೆದೊಯ್ಯಲು ದುರ್ಯೋಧನನಿಂದ ನಿಯೋಜಿತನಾದ. ಅವನು ಆಗಲಿ ಎಂದ.

---

೧೪. ಅಪನೀತೇ ತು ಯೋಗೇನ ಕೇನಚಿಚ್ಛ್ವೇತವಾಹನೇ ।
ತತ ಏಷ್ಯತಿ ಮೇ ರಾಜನ್ ವಶಮೇಷ ಯುಧಿಷ್ಠಿರಃ ॥ – ಭಾರತ (ದ್ರೋಣ. ೧೭/೫೫)

ಎ: ೧) ಸುಶರ್ಮ ತ್ರಿಗರ್ತಾಧಿಪತಿ, ಅವನು ದಕ್ಷಿಣಗೋಗ್ರಹಣದಲ್ಲಿ ಭೀಮನಿಂದ ಪರಾಜಿತನಾಗಿ ತಾನು 'ದಾಸ' ಎಂದು ಒಪ್ಪಿಕೊಂಡು ಬಿಡುಗಡೆ ಹೊಂದಿದ್ದ (೨೩/೩೪, ೩೫).

೨) ಸತ್ಯರಥ, ಸತ್ಯವರ್ಮ, ಸತ್ಯವ್ರತ, ಸತ್ಯೇಷು, ಸತ್ಯಕರ್ಮ ಎಂಬ ಐವರು ಸೋದರರು ಅರ್ಜುನನನ್ನು ಕೊಲ್ಲುವ ಪ್ರತಿಜ್ಞೆಯನ್ನು ಅಗ್ನಿಸಾಕ್ಷಿಕವಾಗಿ ಕೈಗೊಂಡರು.

೩) ಅರ್ಜುನನ ಬಗ್ಗೆ ಹಾಗೆ ದುಷ್ಟ ಪ್ರತಿಜ್ಞೆ ಕೈಗೊಂಡಿದ್ದರಿಂದ ಅವರಿಗೆ ಸಂಶಪ್ತಕ ಎಂಬ ಪ್ರಸಿದ್ಧಿಯುಂಟಾಯಿತು. ಸುಶರ್ಮನೊಂದಿಗೆ ಸುರಥ, ಸುಧರ್ಮ, ಸುಧನ್ವ ಮತ್ತು ಸುಬಾಹುಗಳು ಸೇರಿಕೊಂಡರು. ಕೃಷ್ಣಕಳುಹಿಸಿದ್ದ ನಾರಾಯಣೀ ಸೇನೆಯೂ ಜೊತೆಗೂಡಿತು.

೪) ಅವರೆಲ್ಲ ಅಂದಿನಿಂದ ಅರ್ಜುನನನ್ನು ಯುದ್ಧಕ್ಕೆ ಆಹ್ವಾನಿಸುತ್ತಲೇ ಮುಂದಿನ ದಿನಗಳನ್ನು ಕಳೆದರು.

೫) ಕುಮಾರವ್ಯಾಸ ಭಾರತದಲ್ಲಿ ಸಂಶಪ್ತಕ ಶಬ್ದದ ಬದಲು ಸಂಸಪ್ತಕ ಎಂಬ ಶಬ್ದ ಬಳಸಲ್ಪಟ್ಟಿದೆ. ಅದು ಮೂಲದ ಅರ್ಥವನ್ನು ಸಮರ್ಥವಾಗಿ ಕೊಡಲಾರದು.

ಸಂಶಪ್ತಕರೊಂದಿಗೆ ಅರ್ಜುನನ ಯುದ್ಧ

ಸಮಾಹ್ವಯಾಮಾಸುರಥಾರ್ಜುನಂ ತೇ
ಪ್ರಾತರ್ಹುತಾಶಸ್ಯ ದಿಶಂ ರಣಾಯ ।
ಅಯೋಧಯತ್ ತಾನ್ ಸ ಚ ತತ್ರ ಗತ್ವಾ
ಭೀಮೋ ಗಜಾನೀಕಮಥಾತ್ರ ಚಾವಧೀತ್ ॥ ೧೬ ॥

ಅ: ಅವರೆಲ್ಲ ಬೆಳಿಗ್ಗೆ ಅರ್ಜುನನನ್ನು ಆಗ್ನೇಯ ದಿಕ್ಕಿಗೆ ಸಮರಕ್ಕೆ ಆಹ್ವಾನಿಸಿದರು. ಅರ್ಜುನ ಅಲ್ಲಿಗೆ ತೆರಳಿ ಅವರೊಂದಿಗೆ ಯುದ್ಧಕ್ಕೆ ತೊಡಗಿದ. ಇತ್ತ ಭೀಮ ಗಜಸೇನೆಯನ್ನು ಕೊಲ್ಲ-ತೊಡಗಿದ.

ಭಗದತ್ತನ ಪರಾಕ್ರಮ

ನಿಹನ್ಯಮಾನೇಷು ಗಜೇಷು ಸರ್ವಶೋ
ವಿದ್ರಾವ್ಯಮಾಣೇಷ್ವಖಿಲೇಷು ರಾಜಸು ।
ಪ್ರಾಗ್ಜ್ಯೋತಿಷೋ ಧಾರ್ತರಾಷ್ಟ್ರಾರ್ಥಿತಸ್ತಂ
ಸಮಾಸದತ್ ಸುಪ್ರತೀಕೇನ ಧನ್ವೀ ॥ ೧೭ ॥

ಅ: ಎಲ್ಲೆಡೆಗಳಿಂದಲೂ ಭೀಮ ಆನೆಗಳನ್ನು ಕೊಂದುಹಾಕುತ್ತಿರಲು ರಾಜರೆಲ್ಲಾ ಪರಾಜಿತರಾಗಿ ದಿಕ್ಕೆಟ್ಟು ಓಡುತ್ತಿರಲು ದುರ್ಯೋಧನನ ಕೋರಿಕೆಯಂತೆ ಭಗದತ್ತ ಧನುರ್ಧಾರಿಯಾಗಿ ಸುಪ್ರತೀಕದೊಂದಿಗೆ ಧಾವಿಸಿದ.

ವಿ: ಗಜಸೇನೆಯನ್ನು ಸದೆಬಡಿಯುತ್ತಿದ್ದ ಭೀಮನನ್ನು ಎದುರಿಸಲು ದುರ್ಯೋಧನ ಭಗದತ್ತನನ್ನು ಬೇಡಿಕೊಂಡ. ಅವನು ಯುದ್ಧಕ್ಕೆ ಧಾವಿಸಿದ.

ವಿಭೀಷಿತಾಃ ಸುಪ್ರತೀಕೇನ ಭೀಮ-
ಹಯಾ ನ ತಸ್ಥುಸ್ತದನು ಸ್ಮ ಸಾತ್ಯಕಿಃ ।
ಸೌಭದ್ರಮುಖ್ಯಾಶ್ಚ ಗಜಂ ತಮಭ್ಯಯು-
ಶ್ಚಿಕ್ಷೇಪ ತೇಷಾಂ ಸ ರಥಾನಥಾಂಬರೇ ॥ ೧೮ ॥

ಅ: ಸುಪ್ರತೀಕಕ್ಕೆ ಬೆದರಿದ ಭೀಮನ ಕುದುರೆಗಳು ನಿಲ್ಲದಾದವು. ಬಳಿಕ ಸಾತ್ಯಕಿ ಅಭಿಮನ್ಯು ಮೊದಲಾದವರು ಆ ಆನೆಯನ್ನು ಎದುರಿಸಿದರು. ಆನೆ ಅವರನ್ನು ರಥಸಮೇತರನ್ನಾಗಿ ಗಗನಕ್ಕೆತ್ತಿ ಎಸೆಯಿತು.

ವಿ: ಭಗದತ್ತನಲ್ಲಿ ಆಗ ವೈಷ್ಣವಾಸ್ತ್ರ ಇದ್ದುದರಿಂದ ಭೀಮ ಕುದುರೆಗಳನ್ನು ನಿಯಂತ್ರಿಸಿ ಭಗದತ್ತನ ಮೇಲೆ ಹೋರಾಡಲು ಇಚ್ಛಿಸಲಿಲ್ಲ ಎಂದು ತಿಳಿಯಬೇಕು.

ಶೈನೇಯಪೂರ್ವೇಷು ರಥೋಜ್ಝಿತೇಷು
ಭೂಮಾವವಪ್ಲುತ್ಯ ಕಥಂಚಿದೇವ ।
ಸ್ಥಿತೇಷು ಭೀಮೇ ಚ ವಿಭೀಷಿತಾಶ್ವಾನ್
ಸಂಯಮ್ಯ ಯುಧ್ಯತ್ಯಪಿ ಕೃಷ್ಣ ಐಕ್ಷತ್ ॥ ೧೯ ॥

ಅ: ಸಾತ್ಯಕಿ ಮೊದಲಾದವರು ರಥವಿಲ್ಲದವರಾಗಿ ಬಹುಕಷ್ಟದಿಂದ ಭೂಮಿಗೆ ಹಾರಿ ನಿಂತರು. ಭೀಮ ಅಂಜಿದ ಅಶ್ವಗಳನ್ನು ಹತೋಟಿಗೆ ತಂದು ಯುದ್ಧಕ್ಕೆ ಸಿದ್ಧನಾಗುತ್ತಿದ್ದ. ಅದನ್ನು ಕೃಷ್ಣ ಗಮನಿಸಿದ.

ವಿ : ರಣರಂಗದಲ್ಲಿ ಅತಿ ದೂರದಲ್ಲಿದ್ದ ಶ್ರೀಕೃಷ್ಣ ಆ ದೃಶ್ಯವನ್ನು ಕಣ್ಣಾರೆ ಕಂಡಿದ್ದು ಅವನ ವಿಶ್ವತಶ್ಚಕ್ಷುತ್ವಕ್ಕೆ ದ್ಯೋತಕ ಎಂದು ತಿಳಿಯಬೇಕು.

ಸಂಕ್ಲೇಶಿತೋ ವೈಷ್ಣವಾಸ್ತ್ರಂ ವಿಮುಂಚೇತ್
ಪ್ರಾಗ್ಜ್ಯೋತಿಷೋ ಭೀಮಸೇನೇ ತತೋಽಹಮ್ ।
ಯಾಮ್ಯರ್ಜುನೇನೈವ ತದಸ್ತ್ರಮಾತ್ಮನಃ
ಸ್ವೀಕರ್ತುಮನ್ಯೇನ ವರಾದಧಾರ್ಯಮ್ ॥ ೨೦ ॥

ಅ: ಕ್ಲೇಶಕ್ಕೊಳಗಾಗುವ ಭಗದತ್ತ ಭೀಮನ ಮೇಲೆ ವೈಷ್ಣವಾಸ್ತ್ರವನ್ನು ಪ್ರಯೋಗಿಯಾನು. ಆದ್ದರಿಂದ ನಾನು ಅರ್ಜುನನೊಂದಿಗೆ ತೆರಳಿ ವರದಿಂದಾಗಿ ಇತರರಿಗೆ ಧರಿಸಲಾಗದ ನನ್ನ ಆ ಅಸ್ತ್ರವನ್ನು ಸ್ವೀಕರಿಸುವೆ.

ಅರ್ಜುನನಿಂದ ಸಂಮೋಹನಾಸ್ತ್ರಪ್ರಯೋಗ

ಇತಿ ಸ್ಮ ಸಂಚಿಂತ್ಯ ಸಹಾರ್ಜುನೇನ
ತತ್ರಾಯಯಾವಥ ಪಾರ್ಥಂ ತ್ರಿಗರ್ತಾಃ ।
ನ್ಯವಾರಯಂಸ್ತ್ವಷ್ಟ್ರಮಸ್ತ್ರಂ ಸ ತೇಷು
ವ್ಯವಾಸೃಜನ್ಮೋಹನಾಯಾಶು ವೀರಃ ॥ ೨೧ ॥

ಅ: ಹೀಗೆ ಆಲೋಚಿಸಿ ಶ್ರೀಕೃಷ್ಣ ಅರ್ಜುನನೊಂದಿಗೆ ಅಲ್ಲಿಗೆ ನಡೆದ. ಆಗ ತ್ರಿಗರ್ತರು ಅರ್ಜುನನನ್ನು ಹೋಗದಂತೆ ತಡೆದರು. ವೀರನಾದ ಅರ್ಜುನ ಅವರ ಮೇಲೆ ಸಮ್ಮೋಹನಾ-ಸ್ತ್ರವನ್ನು ಪ್ರಯೋಗಿಸಿದ.

ವಿ : ಅರ್ಜುನ ಸಮ್ಮೋಹನಾಸ್ತ್ರವನ್ನು ಪ್ರಯೋಗಿಸಿದ್ದು ಇದು ಮೂರನೆಯ ಬಾರಿ ಎಂಬುದನ್ನು ಗಮನಿಸಬೇಕು.

ಸಂಮೋಹಿತರಾದ ಸಂಶಪ್ತಕರು

ತದಸ್ತ್ರವೀರ್ಯೇಣ ವಿಮೋಹಿತಾಸ್ತೇ
ಪರಸ್ಪರಂ ಕೃಷ್ಣಪಾರ್ಥಾವಿತಿ ಸ್ಮ ।
ಜಘ್ನುಸ್ತದಾ ವಾಸವಿಸಾನ್ತ್ ವಿಸೃಜ್ಯ
ಪ್ರಾಗ್ಜ್ಯೋತಿಷಂ ಹಂತುಮಿಹಾಭ್ಯಗಾತ್ ದ್ರುತಮ್ ॥ ೨೨ ॥

---

೨೧. ಅಥಾಸ್ತ್ರಮರಿಸಂಘಘ್ನಂ ತ್ವಾಷ್ಟ್ರಮಭ್ಯಸ್ಯದರ್ಜುನಃ । – ಭಾರತ (ದ್ರೋಣ. ೧೯/೧೧)

೨೨. ಅಯಂ ಕೃಷ್ಣಃ ಅಯಂ ಪಾರ್ಥ ಇತಿ ಬುದ್ಧ್ಯಾ ಪರಸ್ಪರಂ .... । – (ಜ.)

೨೨. ಅಯಮರ್ಜುನೋಽಯಂ ಗೋವಿಂದ ಇಮೌ ಪಾಂಡವಯಾದವೌ ।
ಇತಿ ಬ್ರುವಾಣಾಃ ಸಂಮೂಢಾ ಜಘ್ನುರನ್ಯೋನ್ಯಮಾಹವೇ ॥ – ಭಾರತ(೧೯/೧೩)

ಅ: ಆ ಸಮ್ಮೋಹನಾಸ್ತ್ರದ ಪ್ರಭಾವದಿಂದ ಮೋಹಕವಿದ ಅವರು ಪರಸ್ಪರರನ್ನು ಕೃಷ್ಣ, ಅರ್ಜುನರೆಂದು ಭ್ರಮಿಸಿ ಒಬ್ಬರನ್ನೊಬ್ಬರು ಹೊಡೆದುಕೊಳ್ಳತೊಡಗಿದರು. ಅರ್ಜುನ ಅವರನ್ನು ಬಿಟ್ಟು ಬೇಗನೇ ಭಗದತ್ತನನ್ನು ಕೊಲ್ಲಲೆಂದು ಅವನಿದ್ದಲ್ಲಿಗೆ ತೆರಳಿದ.

ವಿ : ೧) ಶಿಷ್ಯರೊಂದಿಗೆ ತೆರಳುತ್ತಿದ್ದ ತಮ್ಮನ್ನು ದ್ವಿತೀಯ ಬದರೀಯಾತ್ರೆಯ ಸಂದರ್ಭದಲ್ಲಿ ಕಳ್ಳರ ತಂಡವೊಂದು ಆಕ್ರಮಿಸಿದಾಗ, ಆಚಾರ್ಯ ಶ್ರೀಮಧ್ವರು ತಮ್ಮ ಶಾಟಿಯನ್ನು ಗಂಟಿನಂತೆ ಮಾಡಿ ಅವರ ಮಧ್ಯೆ ಎಸೆದಾಗ ಅವರೆಲ್ಲ ಅದನ್ನು ಧನದ ಗಂಟೆಂದು ಭ್ರಮಿಸಿ ಒಬ್ಬರನ್ನೊಬ್ಬರು ಹೊಡೆದು ನಾಶವಾದ ಪ್ರಸಂಗ ಸುಮಧ್ವವಿಜಯದಲ್ಲಿದೆ :

ಕದಾಚಿಚ್ಚೋರಾಣಾಂ ನಿಕರಮವಲೋಕ್ಯಾಭಿಪತತಾ-
ಮವಸ್ಥಾಪ್ಯ ಸ್ವೀಯಾನ್ ಕರಗಪಟಪಿಂಡಾರ್ಥಮತಿಕೃತ್ ।
ಚರನ್ನೇತೇಷ್ವೇತಾನಥ ಮಿಥ ಇಹಾಘಾತಯದಹೋ
ವಿಭುಃ ಸಮ್ಮೋಹ್ಯ ಪ್ರಾಗ್ವಿಜಯ ಇವ ಸಂಶಪ್ತಕಗಣಾನ್ ॥

– ಸುಮಧ್ವವಿಜಯ (೧೦/೨೦)

೨) ಅದು ಅರ್ಜುನ ಮಾಡಿದ ಈ ಪ್ರಸಂಗಕ್ಕೆ ಅನುಗುಣವಾದಂತಹುದು. ಆದರೆ, ಅರ್ಜುನ ಮಂತ್ರಿಸಿದ ಸಮ್ಮೋಹನಾಸ್ತ್ರದಿಂದ ಈ ಕಾರ್ಯವನ್ನು ಸಾಧಿಸಿದ್ದರೆ, ಶ್ರೀಮಧ್ವರು ಕೇವಲ ಶಾಟಿಯ ಗಂಟನ್ನು ಎಸೆಯುವ ಮೂಲಕ ಸಾಧಿಸಿದರು ಎಂಬುದು ವಿಶೇಷ.

ಭಗದತ್ತನ ಬಳಿಗೆ ಕೃಷ್ಣಾರ್ಜುನರು

ವಿಸೃಜ್ಯ ಭೀಮಂ ಸ ಚ ಪಾರ್ಥಮೇವ
ಯಯೌ ಗಜಸ್ಕಂಧಗತೋ ಗಜಂ ತಮ್ ।
ಪ್ರಚೋದಯಾಮಾಸ ರಥಾಯ ತಸ್ಯ
ಚಕ್ರೇಽಪಸವ್ಯಂ ಹರಿರೇನಮಾಶು ॥ ೨೩ ॥

ಅ: ಭಗದತ್ತ ಭೀಮನನ್ನು ಬಿಟ್ಟು ಆನೆಯ ಮೇಲೆ ಕುಳಿತು ಅರ್ಜುನನನ್ನೇ ಎದುರಿಸಿದ. ತನ್ನ ಆನೆಯನ್ನು ಅರ್ಜುನನ ರಥದ ಕಡೆಗೆ ಪ್ರೇರೇಪಿಸಿದ. ಶ್ರೀಕೃಷ್ಣ ಆನೆಯ ಸುತ್ತಲೂ ಅಪ್ರದಕ್ಷಿಣವಾಗಿ ವೇಗದಿಂದ ರಥವನ್ನು ಓಡಿಸಿದ.

ವಿ : ಅರ್ಜುನನ ರಥವನ್ನು ತನ್ನ ಆನೆ ಸೊಂಡಿಲಿನಿಂದ ಎತ್ತಿ ಸಾತ್ಯಕಿ ಮೊದಲಾದವರ ರಥದಂತೆ ಎಸೆಯಬೇಕು ಎಂಬುದು ಭಗದತ್ತನ ಉದ್ದೇಶವಾಗಿತ್ತು. ಆದರೆ ಕೃಷ್ಣ ಆನೆಯ ಕೈಗೆ ರಥ ಸಿಕ್ಕದಂತೆ ವೇಗದಿಂದ ಓಡಿಸತೊಡಗಿದ್ದರಿಂದ ಆನೆಗೆ ಅದು ಸಂಪೂರ್ಣ ಅಸಾಧ್ಯವಾಯಿತು ಎಂದರ್ಥ.

ಕೃಷ್ಣನ ಸಾರಥ್ಯದ ವೈಭವ

ಮನೋಜವೇನೈವ ರಥೇ ಪರೇಣ
ಸಂಭ್ರಾಮ್ಯಮಾಣೇ ನ ತು ತಂ ಗಜಃ ಸಃ ।
ಪ್ರಾಪ್ತುಂ ಶಶಾಕಾಥ ಶರೈಃ ಸುತೀಕ್ಷ್ಣೈ-
ರಭ್ಯರ್ದಯಾಮಾಸ ನೃಪಂ ಸ ವಾಸವಿಃ ॥ ೨೪ ॥

ಅ: ಕೃಷ್ಣ ಮನೋವೇಗದಿಂದ ರಥವನ್ನು ಸುತ್ತಲೂ ಓಡಿಸುತ್ತಿದ್ದುದರಿಂದ ಆ ಆನೆಗೆ ಅದನ್ನು ಹಿಡಿಯಲು ಸಾಧ್ಯವಾಗಲಿಲ್ಲ. ಅರ್ಜುನ ಅತ್ಯಂತ ಹರಿತವಾದ ಬಾಣಗಳಿಂದ ಭಗದತ್ತನನ್ನು ಪೀಡಿಸಿದ.

ಭಗದತ್ತನಿಂದ ವೈಷ್ಣವಾಸ್ತ್ರಪ್ರಯೋಗ

ಅಸ್ತ್ರೈಶ್ಚ ಶಸ್ತ್ರೈಃ ಸುಚಿರಂ ನೃವೀರಾ-
ವಯುದ್ಧ್ಯತಾಂ ತೌ ಬಲಿನಾಂ ಪ್ರಬರ್ಹೌ ।
ಅಥೋ ಚಕರ್ತಾಸ್ಯ ಧನುಃ ಸ ಪಾರ್ಥಃ
ಸ ವೈಷ್ಣವಾಸ್ತ್ರಂ ಚ ತದಾಽಂಕುಶೇಽಕರೋತ್ ॥ ೨೫ ॥

ಅ: ಮಹಾವೀರರೂ, ಬಲಶಾಲಿಗಳಲ್ಲಿ ಶ್ರೇಷ್ಠರೂ ಆದ ಅರ್ಜುನ, ಭಗದತ್ತರು ಬಹು ಹೊತ್ತು ಅಸ್ತ್ರಗಳಿಂದಲೂ, ಶಸ್ತ್ರಗಳಿಂದಲೂ ಯುದ್ಧ ಮಾಡಿದರು. ಆಗ ಅರ್ಜುನ ಭಗದತ್ತನ ಧನುಸ್ಸನ್ನು ಕತ್ತರಿಸಿದ. ಆಗ ಭಗದತ್ತ ಅಂಕುಶದಲ್ಲಿ ವೈಷ್ಣವಾಸ್ತ್ರವನ್ನು ಅಭಿಮಂತ್ರಿಸಿದ.

ವೈಜಯಂತೀಮಾಲೆಯಾದ ವೈಷ್ಣವಾಸ್ತ್ರ

ತಸ್ಮಿನ್ನಸ್ತ್ರೇ ತೇನ ತದಾ ಪ್ರಮುಕ್ತೇ
ದಧಾರ ತದ್ವಾಸುದೇವೋಽಮಿತೌಜಾಃ ।
ತದಂಸದೇಶೇಽಸ್ಯ ತು ವೈಜಯಂತೀ
ಬಭೂವ ಮಾಲಾಽಖಿಲಲೋಕಭರ್ತುಃ ॥ ೨೬ ॥

---

೨೪. ತಮಾಪತಂತಂ ದ್ವಿರದಂ ದೃಷ್ಟ್ವಾಕ್ರುದ್ಧಮಿವಾಂತಕಮ್ ।
ಚಕ್ರೇಽಪಸವ್ಯಂ ತ್ವರಿತಃ ಸ್ಯಂದನೇನ ಜನಾರ್ದನಃ ॥ – ಭಾರತ (ದ್ರೋಣ. ೨೮/೨೮)

೨೫. ವಿದ್ಧಸ್ತತೋಽತಿವ್ಯಥಿತೋ ವೈಷ್ಣವಾಸ್ತ್ರಮುದೀರಯನ್ ।
ಅಭಿಮಂತ್ರ್ಯಾಽಂಕುಶೇ ಕ್ರುದ್ಧೋ ವ್ಯಸೃಜತ್ ಪಾಂಡವೋರಸಿ ॥ – ಭಾರತ (ದ್ರೋಣ. ೨೯/೧೭)

---

೨೬. ವೈಜಯಂತ್ಯಭವನ್ಮಾಲಾ ತದಸ್ತ್ರಂ ಕೇಶವೋರಸಿ ।
ಪ್ರಾಗ್ಜೋತಿಷೇಽಪಿ ನಿರ್ಮುಕ್ತೋ ಸರ್ವತುಕುಸುಮಾಕುಲಾ' ಇತಿ ಭಾರತೇ । – (ತಾ.)

೨೬ ವೈಜಯಂತೀಮಾಲಾ ಮಾಲೇವೇತಿ ಲುಪ್ತೋಪಮಾ ಅಸ್ತ್ರಸಹಿತಾಂಕುಶಸ್ಯ ಮಾಲಾರೂಪತಾಯಾ ಬಾಧಿತತ್ವಾತ್ । ಅಸ್ತ್ರಾಭಿಮಾನಿನೋ ಮಾಲಾಭಿಮಾನಿನಶ್ಚೈಕ್ಯಾದೇವಮುಕ್ತಿರ್ವಾ ॥ – (ತಿ.)

೨೬ ವೈಜಯಂತೀಮಾಲಾ ನೀಲಮುಕ್ತಾಮಣಿಮಾಣಿಕ್ಯವೈಡೂರ್ಯರತ್ನಯುಕ್ತಾ ತುಲಸೀದಲಸಂಯುಕ್ತಾ ಪುಷ್ಪೈಶ್ಚತುರ್ಗುಣಾ ಮಾಲೇತ್ಯರ್ಥಃ ।

ಭುವೋ ನೀಲಮಪಾಂ ಮುಕ್ತಂ ಮಾಣಿಕ್ಯಂ ತೇಜಸೋಜ್ಜ್ವಲಮ್ ।
ವೈಡೂರ್ಯಂ ವಾಯುಜಂ ಪ್ರೋಕ್ತಂ ರತ್ನಮಾಕಾಶಸಂಭವಮ್ ॥
ಅನೇಕರತ್ನಸಂಯುಕ್ತಾ ತುಲಸೀದಲಮಿಶ್ರಿತಾ ।
ವಿಷ್ಣುವಕ್ಷಃಸ್ಥಿತಾ ಮಾಲಾ ವೈಜಯಂತೀತ್ಯುದಾಹೃತಾ ॥

ಇತಿ ವಚನಾತ್ ।

'ಪುಷ್ಪೈಶ್ಚತುರ್ಗುಣಾಂ ಮಾಲಾಂ ವೈಜಂಯಂತೀಂ ವಿದುರ್ಬುಧಾ' ಇತ್ಯಭಿಧಾನಾಚ್ಚ।

ಉಕ್ತಂ ವಿಷ್ಣುಪುರಾಣೇ –

ಪಂಚಸ್ವರೂಪಾ ಯಾ ಮಾಲಾ ವೈಜಯಂತೀ ಗದಾಭೃತಃ ।
ಸಾ ಭೂತಹೇತುಸಂಭೂತಭೂತಮಾಲಾ ಚ ವೈ ದ್ವಿಜ ॥ ಇತಿ ॥

ವೈಜಯಂತೀಸ್ವರೂಪಂ ತು ದ್ರೋಣಪರ್ವಣಿ ವರ್ಣಿತಮ್ ।
ವಾಸುದೇವಾದಿಚತುಃಸ್ವರೂಪಃ ಸೋಽನಿರುದ್ಧೋಽಖಿಲಸ್ಯ ತು ।

ಹೃದಿ ಚ ಸ್ಥಿತಶ್ಚ । ಇದಮುಕ್ತಂ ಭವತಿ । ಮನಃ ಪಂಚವಿಧಮ್ । ಮನೋಬುದ್ಧಿರಹಂಕಾರಶ್ಚಿತ್ತಂ ಚೇತನೇತಿ । ತತ್ರ ಚಿತ್ತಸ್ಯ ಮಹತ್ತತ್ತ್ವನಿಯಂತೃತ್ವೇನ ತದ್ಗತೋ ವಾಸುದೇವೋ ನಿಯಂತಾ । ಅಹಂಕಾರಸ್ಯ ಸೂಕ್ಷ್ಮ-ಸ್ಥೂಲಪ್ರಭೇದವಿಭಿನ್ನಾಕಾರತತ್ವನಿಯಾಮಕೌ ಸಂಕರ್ಷಣಪ್ರದ್ಯುಮ್ನೌ ನಿಯಂತಾರೌ । ಮನಸಸ್ತ್ವನಿರುದ್ಧ ಇತಿ ವಾಸುದೇವಾದಿರೂಪಚತುಷ್ಪಯೇನ ಸರ್ವಮನಃಪ್ರೇರಕತ್ವೇನ ಸರ್ವಸ್ಯ ಹೃದಿ ಸ್ಥಿತ ಇತಿ । ತದುಕ್ತಮ್ –

ಯತ್ತತ್ಸತ್ತ್ವಗುಣಂ ಸ್ವಚ್ಛಂ ಶಾಂತಂ ಭಗವತಃ ಪದಮ್ ।
ಯದಾಹುರ್ವಾಸುದೇವಾಖ್ಯಂ ಚಿತ್ತಂ ತನ್ಮಹದಾತ್ಮಕಮ್ ॥ ಇತಿ ತೃತೀಯಸ್ಕಂಧೇ ।

ಪ್ರಕೃತೇಃ ಕ್ಷೋಭಕಂ ರೂಪಂ ದೇವಂ ನಾರಾಯಣಾಭಿಧಮ್ ।
ಪ್ರಕೃತೌ ಮಹತಃ ಸ್ರಷ್ಟಾ ಪರಮಃ ಪುರುಷೋತ್ತಮಃ ॥
ತದೇವ ವಾಸುದೇವಾಖ್ಯಂ ಮಹತತ್ತ್ವನಿಯಾಮಕಮ್ ।
ಸಂಕರ್ಷಣಾಖ್ಯಸ್ತು ಹರಿಃ ಸೂಕ್ಷ್ಮಾಹಂಕಾರಯಾಮಕಃ ॥
ಸ್ಥೂಲಾಹಂಕಾರನಿಯಮೀ ವಿಷ್ಣುಃ ಪ್ರದ್ಯುಮ್ನನಾಮಕಃ ।
ಅನಿರುದ್ಧೋ ಮನಸ್ತತ್ತ್ವನಿಯಂತಾ ಭಗವಾನ್ ಹರಿಃ ॥
ಮಹತತ್ತಾತ್ತ್ವಾದಿಜೀವಾಸ್ತು ಬ್ರಹ್ಮಾ ಶೇಷೋಽಂಗಜಸ್ತಥಾ ।
ಸೂಕ್ಷ್ಮಸ್ಥೂಲವಿಭೇದೇನ ಕಾಮಜಶ್ಚಾನಿರುದ್ಧಕಃ ॥ ಇತಿ ಕಾಪಿಲೇಯೇ ॥ – (ವಿ.)

ಅ: ಭಗದತ್ತನಿಂದ ಆ ವೈಷ್ಣವಾಸ್ತ್ರವು ಪ್ರಯೋಗಿಸಲ್ಪಟ್ಟಾಗ ಅಮಿತ ಪರಾಕ್ರಮದ ಶ್ರೀಕೃಷ್ಣ ಅದನ್ನು ತಾನು ಧರಿಸಿದ, ಅದು ಸಕಲ ಲೋಕಗಳನ್ನೂ ಧರಿಸುವ ಶ್ರೀಕೃಷ್ಣನ ಭುಜದಲ್ಲಿ ವೈಜಯಂತೀಮಾಲೆಯಾಗಿ ಶೋಭಿಸಿತು.

ವಿ : ೧) ಭಗದತ್ತನ ವೈಷ್ಣವಾಸ್ತ್ರ ಬರುತ್ತಿದ್ದಂತೆಯೇ ಕೃಷ್ಣ ತನ್ನ ಎದೆ ನೀಡಿದ; ಅದು ಅವನಿಗೆ ವೈಜಯಂತೀಮಾಲೆಯಾಗಿ ಶೋಭಿಸಿತು.

೨) ವೈಜಯಂತೀ ಮಾಲೆಯ ಲಕ್ಷಣ ಹೀಗಿದೆ :

ಅನೇಕರತ್ನಸಂಯುಕ್ತಾ ತುಲಸೀದಲಮಿಶ್ರಿತಾ ।
ವಿಷ್ಣುವಕ್ಷಸ್ಥಲೇ ಮಾಲಾ ವೈಜಯಂತೀತ್ಯುದಾಹೃತಾ ॥

೩) ಪ್ರತಿನಿತ್ಯ ಪೂಜಾ ಕಾಲದಲ್ಲಿ ಶ್ರೀಹರಿಗೆ ವೈಜಯಂತೀಮಾಲೆಯನ್ನು ಸಮರ್ಪಿಸಬೇಕು ಎಂಬ ವಿಧಿಯೂ ಇದೆ. ಅದಕ್ಕೆ ಸಾಕ್ಷಾತ್ ಮಹಾಲಕ್ಷ್ಮಿಯೇ ಅಭಿಮಾನಿ ದೇವತೆ.

೪) ಅದರಂತೆ ವೈಜಯಂತೀ ಮಾಲೆಯು ನೀಲಮಣಿ, ಮುತ್ತು, ಮಾಣಿಕ್ಯ, ವೈಡೂರ್ಯ, ರತ್ನ, ತುಳಸಿಗಳಿಂದ ಶೋಭಿಸುವ ನಾಲ್ಕು ದಂಡೆಗಳ ಹೂಮಾಲೆ. ನೀಲಮಣಿ ಮೊದಲಾದ ಐದು ಮಣಿಗಳು ಕ್ರಮವಾಗಿ ಭೂಮಿ ಮೊದಲಾದ ಪಂಚಭೂತಗಳಿಗೆ ಸಂಕೇತವಾಗಿರುವುದರಿಂದ ಅದನ್ನು ಭೂತಮಾಲೆ ಎಂಬ ಹೆಸರಿನಿಂದಲೂ ಪುರಾಣಗಳು ಕರೆದಿವೆ. ವೈಷ್ಣವಾಸ್ತ್ರವನ್ನು ವರಾಹ ರೂಪದಿಂದ ಶ್ರೀಹರಿ ನರಕಾಸುರನಿಗೆ ನೀಡಿದ್ದ, ಅದು ಅವನಿಂದ ಅವನ ಪುತ್ರನಾದ ಭಗದತ್ತನಿಗೆ ಲಭಿಸಿತ್ತು. ಅದರ ವಿವರ ಮುಂದೆ ೨೯–೩೦ನೇ ಶ್ಲೋಕಗಳಲ್ಲಿ ಬಂದಿದೆ.

ಅರ್ಜುನನಿಗೆ ವೈಷ್ಣವಾಸ್ತ್ರರಹಸ್ಯದ ವಿವರಣೆ

ದೃಷ್ಟ್ವೈವ ತದ್ಧಾರಿತಮಚ್ಯುತೇನ
ಪಾರ್ಥಃ ಕಿಮರ್ಥಂ ವಿಧೃತಂ ತ್ವಯೇತಿ ।
ಊಚೇ ತಮಾಹಾಶು ಜಗನ್ನಿವಾಸೋ
ಮಯಾऽಖಿಲಂ ಧಾರ್ಯತೇ ಸರ್ವದೈವ ॥ ೨೭ ॥

---

೨೬. ವಿಸೃಷ್ಟಂ ಭಗದತ್ತೇನ ತದಸ್ತ್ರಂ ಸರ್ವಘಾತಿ ವೈ ।
ಉರಸಾ ಪ್ರತಿಜಗ್ರಾಹ ಪಾರ್ಥಂ ಸಂಚ್ಛಾದ್ಯ ಕೇಶವಃ ॥
ವೈಜಯಂತ್ಯಭವನ್ಮಾಲಾ ತದಸ್ತ್ರಂ ಕೇಶವೋರಸಿ ॥
ಪದ್ಮಕೋಶವಿಚಿತ್ರಾಢ್ಯಾ ಸರ್ವರ್ತುಕುಸುಮೋತ್ಕಟಾ ।
ಜ್ವಲನಾರ್ಕೇಂದುವರ್ಣಾಭಾ ಪಾವಕೋಜ್ಜ್ವಲಪಲ್ಲವಾ ॥
ತಯಾ ಪದ್ಮಪಲಾಶಿನ್ಯಾ ವಾತಕಂಪಿತಪತ್ರಯಾ ।
ಶುಶುಭೇऽಭ್ಯಧಿಕಂ ಶೌರಿರತಸೀಪುಷ್ಪಸನ್ನಿಭಃ ॥ – ಭಾರತ (ದ್ರೋಣ. ೨೯/೧೮-೨೦)

ಅ: ಶ್ರೀಕೃಷ್ಣನಿಂದ ಅದು ಧರಿಸಲ್ಪಟ್ಟದ್ದನ್ನು ನೋಡಿ ಅರ್ಜುನ ''ಏತಕ್ಕಾಗಿ ನೀನು ಅದನ್ನು ಧರಿಸಿದೆ'' ಎಂದು ಕೇಳಿದ. ಜಗನ್ನಿವಾಸನಾದ ಶ್ರೀಕೃಷ್ಣ ನುಡಿದ ''ಎಲ್ಲವನ್ನೂ ಸದಾ ಧರಿಸುವವನು ನಾನೇ ಆಲ್ಲವೇ''.

ವಿ: ವೈಷ್ಣವಾಸ್ತ್ರವನ್ನು ಮಾತ್ರವಲ್ಲದೇ ಸಮಸ್ತ ವಿಶ್ವವನ್ನೂ ಧರಿಸಿದ ವಿಶ್ವಂಭರ ತಾನು ಎಂದು ಶ್ರೀಕೃಷ್ಣ ತಿಳಿಸಿಕೊಟ್ಟ ಎಂದರ್ಥ.

ಶ್ರೀಕೃಷ್ಣಮಹಿಮೆ

ನ ಮಾದೃಶೋಽನ್ಯೋಽಸ್ತಿ ಕುತಃ ಪರೋ ಮತ್
ಸೋಽಹಂ ಚತುರ್ಧಾ ಜಗತೋ ಹಿತಾಯ ।
ಸ್ಥಿತೋಽಸ್ಮಿ ಮೋಕ್ಷಪ್ರಲಯಸ್ಥಿತೀನಾಂ
ಸೃಷ್ಟೇಶ್ಚ ಕರ್ತಾ ಕ್ರಮಶಃ ಸ್ವಮೂರ್ತಿಭಿಃ ।
ಸ ವಾಸುದೇವಾದಿಚತುಃಸ್ವರೂಪಃ
ಸ್ಥಿತೋಽನಿರುದ್ಧೋ ಹೃದಿ ಚಾಖಿಲಸ್ಯ ॥ ೨೮ ॥

ಅ: ನನ್ನಂಥವನು ಮತ್ತೊಬ್ಬನಿಲ್ಲ, ಮಿಗಿಲಾದವನು ಎಲ್ಲಿರುವನು! ಅಂತಹ ನಾನು ಜಗತ್ತಿನ ಹಿತಕ್ಕಾಗಿ ನಾಲ್ಕು ರೂಪಗಳನ್ನು ಧರಿಸಿರುವೆ. ಅವುಗಳಿಂದ ಮೋಕ್ಷ, ಪ್ರಳಯ, ಸ್ಥಿತಿ ಮತ್ತು ಸೃಷ್ಟಿಗಳನ್ನು ಕ್ರಮವಾಗಿ ಮಾಡುವೆ. ಆ ವಾಸುದೇವಾದಿ ನಾಲ್ಕುರೂಪಗಳ ನಾನು ಅನಿರುದ್ಧನಾಗಿ ಸಕಲರ ಹೃದಯದಲ್ಲೂ ನೆಲೆಸಿರುವೆ.

ವಿ : ಇಲ್ಲಿ ನಾಲ್ಕು ರೂಪಗಳು ಎಂದರೆ ವಾಸುದೇವ, ಸಂಕರ್ಷಣ, ಪ್ರದ್ಯುಮ್ನ ಮತ್ತು ಅನಿರುದ್ಧ ರೂಪಗಳು ಎಂದರ್ಥ. ಕೃಷ್ಣ ಹೀಗೆ ತಿಳಿಸುವ ಮೂಲಕ ವಾಸುದೇವಾದಿ ರೂಪದ ಕೃಷ್ಣ ತಾನೇ ಎಂದು ಮತ್ತೊಮ್ಮೆ ಮನವರಿಕೆ ಮಾಡುತ್ತಿರುವನು ಎಂದು ತಿಳಿಯಬೇಕು :

ಚತುರ್ಮೂರ್ತಿರಹಂ ಶಶ್ವಲ್ಲೋಕತ್ರಾಣಾರ್ಥಮುದ್ಯತಃ ।
ಆತ್ಮಾನಂ ಪ್ರವಿಭಜ್ಯೇಹ ಲೋಕಾನಾಂ ಹಿತಮಾದಧೇ ॥ – ಭಾರತ (೭/೨೯/೨೬)

---

೨೭. ತತೋಽರ್ಜುನಃ ಕ್ಲಾಂತಮನಾಃ ಕೇಶವಂ ಪ್ರತ್ಯಭಾಷತ ।
ಅಯುಧ್ಯಮಾನಸ್ತುರಗಾನ್ ಸಂಯಂತಾ ऽಸ್ಮೀತಿ ಚಾನಘ ॥
ಇತ್ಯುಕ್ತ್ವಾ ಪುಂಡರೀಕಾಕ್ಷ ಪ್ರತಿಜ್ಞಾಂ ಸ್ವಾಂ ನ ರಕ್ಷಸಿ ॥ – ಭಾರತ (ದ್ರೋಣ. ೨೬/೨೨)

೨೮. ಕ್ರಮಶಃ= ಶಾಸ್ತ್ರೋಕ್ತಕ್ರಮೇಣ ॥ – (ವಾ.)

ವರಾಹ ನೀಡಿದ ವೈಷ್ಣವಾಸ್ತ್ರ

ಸ ಏವ ಚ ಕ್ರೋಡತನುಃ ಪುರಾಽಹಂ
ಭೂಮಿಪ್ರಿಯಾರ್ಥಂ ನರಕಾಯ ಚಾದಾಮ್ ।
ಅಸ್ತ್ರಂ ಮದೀಯಂ ವರಮಸ್ಯ ಚಾದಾ-
ಮವಧ್ಯತಾಂ ಯಾವದಸ್ತ್ರಂ ಸಸೂನೋಃ ॥ ೨೯ ॥

ಅ: ಚತುರ್ಮೂರ್ತಿ ರೂಪನಾದ ನಾನೇ ಹಿಂದೆ ವರಾಹ ರೂಪದಿಂದ ಭೂದೇವಿಯ ಪ್ರೀತಿಗೆಂದು ನನ್ನ ಅಸ್ತ್ರವನ್ನು ನರಕಾಸುರನಿಗೆ ನೀಡಿದ್ದೆ, ಅವನಿಗೂ, ಅವನ ಮಗನಿಗೂ ಅಸ್ತ್ರವಿರುವವರೆಗೂ ಅವಧ್ಯತ್ವವನ್ನು ವರವನ್ನಾಗಿ ಕೊಟ್ಟಿದ್ದೆ.

ವಿ : ೧) ಕೃಷ್ಣನೊಂದಿಗೆ ಯುದ್ಧ ಮಾಡುವಾಗ ನರಕಾಸುರ ಕೃಷ್ಣ ಸಾಕ್ಷಾತ್ ಮಹಾವಿಷ್ಣುವೇ ಎಂಬ ಕಾರಣದಿಂದ ಅವನ ಮೇಲೆ ವೈಷ್ಣವಾಸ್ತ್ರವನ್ನು ಪ್ರಯೋಗಿಸಿರಲಿಲ್ಲ ಎಂದು ತಿಳಿಯಬೇಕು.

೨) ಅವನು ಆಗ ಪ್ರಯೋಗಿಸಿದ್ದರೂ ಆಗಲೂ ಅದು ಹೀಗೆಯೇ ಕೃಷ್ಣನ ಕೊರಳಲ್ಲಿ ವೈಜಯಂತೀ ಮಾಲೆಯಾಗಿಯೇ ಶೋಭಿಸುತ್ತಿತ್ತು ಎಂದೂ ತಿಳಿಯಬೇಕು.

ಅಸ್ತ್ರಸ್ಯ ಚಾನ್ಯೋ ನ ತು ಕಶ್ಚಿದಸ್ತಿ
ಯೋಽವಧ್ಯ ಏತಸ್ಯ ಕುತಶ್ಚ ಮತ್ತಃ ।
ಇತಿ ಸ್ಮ ತೇನೈವ ಮಯಾ ಧೃತಂ ತ-
ದಸ್ತ್ರಂ ತದೇನಂ ಜಹಿ ಚಾಸ್ತ್ರಹೀನಮ್ ॥ ೩೦ ॥

---

೨೯. ಅತ ಏವಾಸ್ಯೇ ಸತ್ಯಪಿ ಅನ್ಯಸ್ಯ ಹಂತುಮಶಕ್ಯತ್ವಾತ್ ಸ್ವಯಮೇವ ಕೃಷ್ಣೋ ನರಕಮಹನ್ನಿತಿ ಭಾವಃ। **ಅಸ್ತ್ರಂ ಚ ಸೂನೋರಿತಿ ವಾ ಪಾಠಃ ।** – (ಜ.)

೨೯. ಯಾವದಸ್ತ್ರಂ ಸಸೂನೋರಿತ್ಯತ್ರ ಸಸೂನೋಃ= ಸೂನುನಾ ಸಹಿತಸ್ಯ ಅಸ್ಯ= ನರಕಸ್ಯ ॥ – (ವಾ.)

೩೦. ಏವಂ ವರಮಹಂ ಶ್ರುತ್ವಾ ಜಗತ್ಯಾಸ್ತನಯೇ ತದಾ ।
ಅಮೋಘಮಸ್ತ್ರಂ ಪ್ರಾಯಚ್ಛಂ ವೈಷ್ಣವಂ ಪರಮಂ ಪುರಾ ॥
ತಸ್ಮಾತ್ ಪ್ರಾಗ್ಜ್ಯೋತಿಷಂ ಪ್ರಾಪ್ತಂ ತದಸ್ತ್ರಂ ಪಾರ್ಥ ಮಾಮಕಮ್ ।
ನಾಸ್ಯಾವಧ್ಯೋಽಸ್ತಿ ಲೋಕೇಷು ಸೇಂದರುದ್ರೇಷು ಮಾರಿಷ ॥
ತನ್ಮಯಾ ತ್ವತ್ಕೃತೇ ಚೈತದನ್ಯಥಾ ವ್ಯಪನಾಮಿತಮ್ ॥ – ಭಾರತ (ದ್ರೋಣ. ೨೯/೨೨,೩೬,೩೭)

ಅ: ಈ ಅಸ್ತ್ರಕ್ಕೆ ಅವಧ್ಯನಾದವನು ನನ್ನ ಹೊರತು ಮತ್ತೊಬ್ಬನು ಸರ್ವಥಾ ಇಲ್ಲ. ಅದ-ರಿಂದಾಗಿ ನಾನೇ ಅಸ್ತ್ರವನ್ನು ಧರಿಸಿದೆ. ಈಗ ಅಸ್ತ್ರವಿಲ್ಲದವನಾದ ಇವನನ್ನು ನೀನು ಸಂಹರಿಸು.

ವಿ: ಅರ್ಜುನ ಕೃಷ್ಣನನ್ನು ಹಾಗೆ ಪ್ರಶ್ನಿಸಲು ತಾನು ಯುದ್ಧ ಮಾಡುವುದಿಲ್ಲ ಎಂದು ಕೃಷ್ಣ ನೀಡಿದ್ದ ವಚನ ಕಾರಣವಾಗಿತ್ತು. ಅದಕ್ಕೆ ಕೃಷ್ಣ ಇಷ್ಟೆಲ್ಲ ವಿವರಗಳನ್ನು ನೀಡಿ, ನಾನು ಯುದ್ಧ–ವನ್ನೇನೂ ಮಾಡಿಲ್ಲ, ನನ್ನ ವಚನವನ್ನು ತಪ್ಪಿಲ್ಲ, ಆದರೆ ಅನನ್ಯಧಾರ್ಯವಾದ ಈ ಅಸ್ತ್ರವನ್ನು ನಾನೇ ಧರಿಸಿ ನಿನ್ನನ್ನು ಸಂರಕ್ಷಿಸಿರುವೆನು ಎಂದು ತಿಳಿಸಿದ ಎಂದು ತಿಳಿಯಬೇಕು.

ಅರ್ಜುನನಿಂದ ಭಗದತ್ತ ಸುಪ್ರತೀಕಗಳ ವಧೆ

ಇತ್ಯುಕ್ತಮಾಕರ್ಣ್ಯ ಸ ಕೇಶವೇನ
ಸಂಮ್ಮಂತ್ರ್ಯ ಬಾಣಂ ಹೃದಯೇ ಮುಮೋಚ ।
ಪ್ರಾಗ್ಜ್ಯೋತಿಷಸ್ಯಾಪರಮುತ್ತಮಂ ಶರಂ
ಗಜೇಂದ್ರಕುಂಭಸ್ಥಲ ಆಶ್ವಮಜ್ಜಯತ್ ॥ ೩೧ ॥

ಅ: ಕೃಷ್ಣ ಹೀಗೆ ಹೇಳಿದ್ದನ್ನು ಕೇಳಿ ಅರ್ಜುನ ಅವನೊಂದಿಗೆ ಮಂತ್ರಾಲೋಚನೆ ಮಾಡಿ ಒಂದು ಬಾಣವನ್ನು ಭಗದತ್ತನ ಎದೆಯ ಮೇಲೆ ಪ್ರಯೋಗಿಸಿದ, ಮತ್ತೊಂದು ಬಾಣವನ್ನು ಸುಪ್ರತೀಕ ಗಜೇಂದ್ರನ ಕುಂಭಸ್ಥಳದಲ್ಲಿ ನಾಟುವಂತೆ ಮಾಡಿದ.

ವಿ : ಅರ್ಜುನ ಕೃಷ್ಣನೊಂದಿಗೆ ಸಮಾಲೋಚಿಸಿ ಒಂದು ಬಾಣದಿಂದ ಭಗದತ್ತನನ್ನು, ಮತ್ತೊಂದು ಬಾಣದಿಂದ ಅವನ ಆನೆಯನ್ನೂ ಏಕಕಾಲಕ್ಕೆ ಅತ್ಯಂತ ವೇಗದಿಂದ ಹೊಡೆದನು ಎಂದರ್ಥ. ಆಗ ಬಹಳ ವೃದ್ಧನಾಗಿದ್ದ ಭಗದತ್ತನ ಕಣ್ಣಿನ ರೆಪ್ಪೆಗಳು ಅವನ ಕಣ್ಣುಗಳನ್ನು ಮುಚ್ಚುವಷ್ಟು ಜೋತುಬಿದ್ದಿದ್ದವು. ಅವುಗಳನ್ನು ಅವನು ಮೇಲೆತ್ತಿ ಕಟ್ಟಿಕೊಂಡು ಯುದ್ಧ ಮಾಡುತ್ತಿದ್ದ. ಅರ್ಜುನ ಬಾಣವೊಂದರಿಂದ ಆ ಕಟ್ಟನ್ನು ಕತ್ತರಿಸಿದಾಗ ರೆಪ್ಪೆ ಮತ್ತೆ ಕಣ್ಣನ್ನು ಆವರಿಸಿ ಅವನಿಗೆ ಏನೂ ಕಾಣದಂತಾಯಿತು. ಆಗ ಅರ್ಜುನ ಅವನ ಎದೆಗೆ ಬಾಣವನ್ನು ಪ್ರಯೋಗಿಸಿದ ಎಂಬ ವಿವರ ಮಹಾಭಾರತದಲ್ಲಿದೆ :

ದೇವವಾಕ್ಯಾತ್ ಪ್ರಚಚ್ಛೇದ ಶರೇಣ ಭೃಶಮರ್ಜುನಃ ।
ಛಿನ್ನಮಾತ್ರೇಽಂಶುಕೇ ತಸ್ಮಿನ್ ರುದ್ಧನೇತ್ರೋ ಬಭೂವ ಸಃ ॥
ತಮೋಮಯಂ ಜಗನ್ಮೇನೇ ಭಗದತ್ತಃ ಪ್ರತಾಪವಾನ್ ।
ಬಿಭೇದ ಹೃದಯಂ ರಾಜ್ಞೋ ಭಗದತ್ತಸ್ಯ ಪಾಂಡವಃ ॥ – ಭಾರತ (೭/೨೯/೪೬,೪೭)

ಉಭೌ ಚ ತೌ ಪೇತತುರದ್ರಿಸನ್ನಿಭೌ
ಮಹೇಂದ್ರವಜ್ರಾಭಿಹತಾವಿವಾಶು ।
ನಿಹತ್ಯ ತೌ ವಾಸವಿರುಗ್ರಪೌರುಷೌ
ಮುಮೋದ ಸಾಧು ಸ್ವಜನಾಭಿಪೂಜಿತಃ ॥ ೩೨ ॥

ಅ: ಪರ್ವತಸದೃಶರಾದ ಭಗದತ್ತ ಹಾಗೂ ಅವನ ಆನೆ ಇಬ್ಬರೂ ಮಹೇಂದ್ರನ ವಜ್ರಾಯುಧದಿಂದ ಅಪ್ಪಳಿಸಲ್ಪಟ್ಟವರಂತೆ ಕೂಡಲೇ ನೆಲಕ್ಕುರುಳಿದರು. ಉಗ್ರಪೌರುಷನಾದ ಅರ್ಜುನ ಅವರಿಬ್ಬರನ್ನೂ ಸಂಹರಿಸಿ, ತನ್ನ ಜನರಿಂದ ಪೂಜಿತನಾಗಿ ಬಹಳವಾಗಿ ಆನಂದಿಸಿದ.

ವಿ: ಮಹೇಂದ್ರನ ವಜ್ರಾಯುಧದ ಪೆಟ್ಟಿಗೆ ಹೇಗೋ ಹಾಗೆ, ಮಹೇಂದ್ರನ ಅವತಾರನೇ ಆದ ಅರ್ಜುನನ ಹೊಡೆತಕ್ಕೆ ಅವರು ಮೃತರಾದರು ಎಂಬಲ್ಲಿನ ಉಪಮೆಯ ಸ್ವಾರಸ್ಯ ಗಮನಾರ್ಹ.

ಅರ್ಜುನನಿಂದ ಶಕುನಿಯ ತಮ್ಮಂದಿರ ವಧೆ

ಅಥಾಚಲಂ ವೃಷಕಂ ಚೈವ ಹತ್ವಾ
ಕನೀಯಸೌ ಶಕುನೇಸ್ತಂ ಚ ಬಾಣೈಃ ।
ವಿವ್ಯಾಧ ಮಾಯಾಮಸೃಜತ್ ಸ ತಾಂ ಚ
ವಿಜ್ಞಾನಾಸ್ತ್ರೇಣಾಶು ನಾಶಾಯ ಚಕ್ರೇ ॥ ೩೩ ॥

ಅ: ಬಳಿಕ ಅರ್ಜುನ ಶಕುನಿಯ ತಮ್ಮಂದಿರಾದ ಅಚಲ ಮತ್ತು ವೃಷಕ ಎಂಬವರನ್ನು ಬಾಣಗಳಿಂದ ಸಂಹರಿಸಿದ. ಶಕುನಿಯನ್ನೂ ಬಾಣಗಳಿಂದ ನೋಯಿಸಿದ. ಶಕುನಿ ಆಗ ಮಾಯೆಯನ್ನು ಸೃಷ್ಟಿಸಿದ; ಅರ್ಜುನ ವಿಜ್ಞಾನಾಸ್ತ್ರದಿಂದ ಆ ಮಾಯೆಯನ್ನು ನಾಶಪಡಿಸಿದ.

ವಿ : ೧) ಕೆಲವು ಪಾಠಗಳಲ್ಲಿ ವೃಷಭ ಎಂದಿದೆ. ಮಹಾಭಾರತದಂತೆ ಆಗ ಯುದ್ಧಕ್ಕೆ ತೊಡಗಿದ್ದ ಶಕುನಿಯ ತಮ್ಮಂದಿರು ವೃಷಕ ಮತ್ತು ಅಚಲ, ಆದ್ದರಿಂದ ವೃಷಕ ಎಂಬ ಪಾಠವೇ ಸರಿ ಎಂದಾಗುವುದು ('...**ಭ್ರಾತರೌ ವೃಷಕಾಚಲೌ**' – ದ್ರೋಣಪರ್ವ ೩೦/೨).

---

೩೨. ಅಯಂ ಭಾವಃ । ಮಹೇಂದ್ರವಜ್ರಾಭಿಹತಾನಾಂ ಪರ್ವತಾನಾಂ ಯಥಾಪಾತಃ ಏವಮರ್ಜುನಶರಾಭಿಹತಯೋರ್ಭಗದತ್ತಗಜಯೋಃ ಪಾತ ಇತಿ । – (ಸ.)

೩೩. ಏವಂ ಬಹುವಿಧಾ ಮಾಯಾಃ ಸೌಬಲಸ್ಯ ಕೃತಾಃ ಕೃತಾಃ ।
ಜಘಾನಾತ್ರಬಲೇನಾಶು ಪ್ರಹಸನ್ನರ್ಜುನಸ್ತದಾ ॥ – ಭಾರತ (ದ್ರೋಣ. ೩೦/೨೬)

೨) ಅರ್ಜುನ ಅವರಿಬ್ಬರನ್ನೂ ಒಂದೇ ಬಾಣದಿಂದ ಕೊಂದ ಎಂಬ ಉಲ್ಲೇಖವೂ ಭಾರತದಲ್ಲಿದೆ :

ತೌ ರಥಸ್ಥೌ ನರವ್ಯಾಘ್ರೌ ರಾಜಾನೌ ವೃಷಕಾಚಲೌ ।
ಸಂಶ್ಲಿಷ್ಟಾಂಗೌ ಸ್ಥಿತೌ ರಾಜನ್ ಜಘಾನೈಕೇಷುಣಾऽರ್ಜುನಃ ॥

– ಭಾರತ (ದ್ರೋಣ. ೩೦/೧೧)

೩) ಜೂಜಿನ ಮಾಯೆಯನ್ನು ಬಲ್ಲ ಶಕುನಿಯ ಮಾಯೆ ಅರ್ಜುನನ ವಿಜ್ಞಾನಾಸ್ತ್ರದ ಮುಂದೆ ನಾಶವಾಗಿ ಹೋಯಿತು ಎಂದರ್ಥ.

೪) ಶಕುನಿಗೆ ಹೀಗೆ ಇಬ್ಬರು ಸೋದರರಿದ್ದ ವಿವರದಿಂದ ದುರ್ಯೋಧನ ಶಕುನಿಯ ಸೋದರರನ್ನೆಲ್ಲ ಕೊಲ್ಲಿಸಿದ್ದ. ಶಕುನಿ ಮಾತ್ರ ಅವರಲ್ಲಿ ಉಳಿದು ಆ ಸೇಡನ್ನು ತೀರಿಸಲೆಂದು ದುರ್ಯೋಧನನ ವಿನಾಶಕ್ಕೆ ಕಾರಣವಾಗುವಂತೆ ದುರ್ಬೋಧೆ ಮಾಡಿದ ಎಂಬ ಕಥೆ ಯಥಾರ್ಥ–ವಾದುದಲ್ಲ ಎಂದು ಸ್ಪುಟಪಡುವುದು.

ಸ ನಷ್ಟಮಾಯಃ ಪ್ರಾದ್ರವತ್ ಪಾಪಕರ್ಮಾ
ತತಃ ಪಾರ್ಥಃ ಶರಪೂಗೈಶ್ಚಮೂಂ ತಾಮ್ ।
ವಿದ್ರಾವಯಾಮಾಸ ತದಾ ಗುರೋಃ ಸುತೋ
ಮಾಹಿಷ್ಮತೀಪತಿಮಾಜೌ ಜಘಾನ ॥ ೩೪ ॥

ಅ: ಪಾಪಕರ್ಮಿಯಾದ ಶಕುನಿ ತನ್ನ ಮಾಯೆ ನಾಶವಾಗಲು ಅಲ್ಲಿಂದ ಓಡಿಹೋದ. ಬಳಿಕ ಅರ್ಜುನ ಬಾಣಗಳ ಗುಂಪುಗಳಿಂದ ಆ ಸೇನೆಯನ್ನು ಹೊಡೆದೋಡಿಸತೊಡಗಿದ. ಆಗ ಗುರುಪುತ್ರನಾದ ಅಶ್ವತ್ಥಾಮ ಮಾಹಿಷ್ಮತೀಪತಿಯಾದ ನೀಲನನ್ನು ಯುದ್ಧದಲ್ಲಿ ಸಂಹರಿಸಿದ.

ವಿ : ೧) ನೀಲ ಎಂಬ ಹೆಸರಿನ ಇಬ್ಬರು ರಾಜರಿದ್ದು ಒಬ್ಬನು ಮಾಹಿಷ್ಮತೀ ದೊರೆಯಾದರೆ, ಮತ್ತೊಬ್ಬನು ಅನೂಪದ ದೊರೆಯಾಗಿದ್ದ. ಅನೂಪದ ನೀಲ ಭೀಮನ ಪ್ರಿಯಮಿತ್ರ, ಎಂದರೆ ಪಾಂಡವಪಕ್ಷಕ್ಕೆ ಸೇರಿದವನು.

೨) ಮಾಹಿಷ್ಮತಿಯು* ದಕ್ಷಿಣಾಪಥದ ಅನೂಪಕ್ಕೆ ಸೇರಿದ ನಗರ. ಆದರಿಂದ ಅನೂಪದೇಶದ ನೀಲ ಮಾಹಿಷ್ಮತಿಯ ನೀಲ ಎನ್ನಿಸುವನು. ಅವನನ್ನು ಅಶ್ವತ್ಥಾಮ ಸಂಹರಿಸಿದ ಎಂದರ್ಥ.

---

* '...ನೀಲನಾಮಕಃ ಪಾಂಚಾಲ್ಯೋ ರಾಜಾ...' – ಲಕ್ಷಾಲಂಕಾರ

ಭೀಮನ ಪರಾಕ್ರಮ - ಹನ್ನೆರಡನೆಯ ದಿನದ ಯುದ್ಧದ ಪರಿಸಮಾಪ್ತಿ

ತದಾ ಭೀಮಸ್ತಸ್ಯ ನಿಹತ್ಯ ವಾಹಾನ್
ವ್ಯದ್ರಾವಯದ್ದಾರ್ತರಾಷ್ಟ್ರೀಂ ಚಮೂಂ ಚ ।
ಭೀಮಾರ್ಜುನಾಭ್ಯಾಂ ಹನ್ಯಮಾನಾಂ ಚಮೂಂ ತಾಂ
ದೃಷ್ಟ್ವಾ ದ್ರೋಣಃ ಕ್ಷಿಪ್ರಮಪಾಜಹಾರ ॥ ೩೫ ॥

ಅ: ಆಗ ಭೀಮ ಅಶ್ವತ್ಥಾಮನ ಕುದುರೆಗಳನ್ನು ಸಂಹರಿಸಿ ಕೌರವ ಸೇನೆಯನ್ನು ಓಡಿಸ-ತೊಡಗಿದ. ಭೀಮಾರ್ಜುನರಿಂದ ತನ್ನ ಸೇನೆ ಹತವಾಗುತ್ತಿದ್ದುದನ್ನು ಕಂಡು ದ್ರೋಣರು ಕೂಡಲೇ ಅದನ್ನು ಹಿಂದಕ್ಕೆ ತೆಗೆದುಕೊಂಡರು.

ವಿ : ಹನ್ನೆರಡನೆಯ ದಿನದ ಯುದ್ಧವೂ ಸಹ ಹೀಗೆ ಭಗದತ್ತನಂತಹ ಮಹಾವೀರನ ವಧೆ–ಯೊಂದಿಗೆ ಕೌರವರ ಪರಾಭವದಲ್ಲೇ ಮುಕ್ತಾಯವಾಯಿತು.

ಮತ್ತೊಂದು ದ್ರೋಣ ಪ್ರತಿಜ್ಞೆ

ಪ್ರಾಗ್ಜ್ಯೋತಿಷೇ ನಿಹತೇ ಚಾಗ್ರಹಾಚ್ಚ
ಯುಧಿಷ್ಠಿರಸ್ಯಾತಿವಿಷಣ್ಣರೂಪಃ ।
ದುರ್ಯೋಧನೋಽಶ್ರಾವಯದ್ದೀನವಾಕ್ಯೈ-
ರ್ನತ್ರ ದ್ರೋಣಂ ಸೋಽಪಿ ನೃಪಂ ಜಗಾದ ॥ ೩೬ ॥

ಅ: ಭಗದತ್ತನು ಹತನಾದದ್ದರಿಂದಲೂ, ಯುಧಿಷ್ಠಿರನನ್ನು ಸೆರೆ ಹಿಡಿಯದ್ದರಿಂದಲೂ ದುರ್ಯೋಧನ ಅತ್ಯಂತ ವಿಷಣ್ಣನಾಗಿ ದ್ರೋಣರ ಬಳಿಗೆ ತೆರಳಿ ಕಟು ಮಾತುಗಳಿಂದ ಅವರನ್ನು ನಿಂದಿಸಿದ. ಆಗ ದ್ರೋಣರು ಅವನಿಗೆ ತಿಳಿಸಿದರು.

ವಿ : ಅಂದಿನ ಯುದ್ಧದಲ್ಲಿ ಧರ್ಮರಾಜ ಸೆರೆ ಸಿಕ್ಕದಿದ್ದದ್ದು ಮಾತ್ರವಲ್ಲದೇ ಭಗದತ್ತ, ಅಚಲ, ವೃಷಕ ಮೊದಲಾದ ದುರ್ಯೋಧನಪಕ್ಷದ ಅನೇಕರು ಹತರಾಗಿದ್ದರು. ಅದರಿಂದಾಗಿ

---

೩೬. ವರಂ ದತ್ತ್ವಾ ಮಮ ಪ್ರೀತಃ ಪಶ್ಚಾದ್ ವಿಕೃತವಾನಸಿ ।
ಆಶಾಭಂಗಂ ನ ಕುರ್ವಂತಿ ಭಕ್ತಸ್ಯಾರ್ಯಾಃ ಕಥಂಚನ ॥
(ದುರ್ಯೋಧನನ ವಚನ) – ಭಾರತ (ದ್ರೋಣ. ೩೩/೭-೯)

೩೭. ಸತ್ಯಂ ತಾತ ಬ್ರವೀಮ್ಯದ್ಯ ನೈತಜ್ಜಾತ್ವನ್ಯಥಾ ಭವೇತ್ ।
ಆದ್ಯೈಕಂ ಪ್ರವರಂ ಕಂಚಿತ್ ಪಾತಯಿಷ್ಯೇ ಮಹಾರಥಮ್ ॥ – ಭಾರತ (ದ್ರೋಣ. ೩೩/೧೩)

ಹತಾಶೆಯಿಂದ ನೊಂದ ದುರ್ಯೋಧನ ಅದನ್ನೆಲ್ಲ ದ್ರೋಣರ ಮೇಲೆ ತೀರಿಸಿಕೊಂಡ ಎಂದು ತಿಳಿಯಬೇಕು.

ಪಾರ್ಥೇ ಗತೇ ಶ್ವೋ ನೃಪತಿಂ ಗೃಹೀಷ್ಯೇ
ನಿಹನ್ಮಿ ವಾ ತತ್ಸದೃಶಂ ತದೀಯಮ್ ।
ಇತಿ ಪ್ರತಿಜ್ಞಾಂ ಸ ವಿಧಾಯ ಭೂಯಃ
ಪ್ರಾತರ್ಯಯೌ ಯುದ್ಧಮಾಕಾಂಕ್ಷಮಾಣಃ ॥ ೩೭ ॥

ಅ: ನಾಳೆ ಅರ್ಜುನ ದೂರ ತೆರಳಿದ ಮೇಲೆ ನಾನು ಧರ್ಮರಾಜನನ್ನು ಸೆರೆ ಹಿಡಿಯುವೆ ಅಥವಾ ಅವನಿಗೆ ಸಮಾನನಾದ ಅವನ ಕಡೆಯ ವೀರನೊಬ್ಬನನ್ನು ಕೊಲ್ಲುವೆ ಎಂದು ಪ್ರತಿಜ್ಞೆಮಾಡಿ ಪುನಃ ಮಾರನೆಯ ಬೆಳಿಗ್ಗೆ ಯುದ್ಧವನ್ನು ಬಯಸಿ ದ್ರೋಣರು ತೆರಳಿದರು.

ವಿ: ೧) ತನ್ನ ಪ್ರತಿಯೊಂದು ವ್ಯೂಹರಚನೆ ಮೊದಲಾದ ಪ್ರಯತ್ನಕ್ಕೂ ಅರ್ಜುನನಿಗೆ ಪರಿಹಾರ ತಿಳಿದಿರುವುದರಿಂದ ಅವನು ಧರ್ಮರಾಜನನ್ನು ರಕ್ಷಿಸುವವರೆಗೂ ಅವನನ್ನು ಸೆರೆ ಹಿಡಿಯಲು ಸಾಧ್ಯವಿಲ್ಲ. ಆದ್ದರಿಂದ ಅರ್ಜುನನನ್ನು ದೂರ ಕರೆದೊಯ್ದರೆ ಮಾತ್ರ ತನ್ನ ಹೋರಾಟ ಸಫಲ ಎಂದು ದ್ರೋಣರು ತಿಳಿಸಿದರು.

೨) ಅಂದು ಸಂಶಪ್ತಕರು ಅರ್ಜುನನನ್ನು ದೂರ ಕರೆದೊಯ್ದಿದ್ದರೂ ಮಧ್ಯದಲ್ಲಿ ಅರ್ಜುನ ಪುನಃ ಹಿಂತಿರುಗಿದ್ದರಿಂದ ತಮ್ಮ ಪ್ರಯತ್ನ ಯಶಸ್ವಿಯಾಗಲಿಲ್ಲ ಎಂಬ ಕಾರಣವನ್ನು ದ್ರೋಣರು ನೀಡಿ ಅವನನ್ನು ಸಮಾಧಾನಪಡಿಸಿದರು ಎಂದರ್ಥ.

ಹದಿಮೂರನೆಯ ದಿನದ ಯುದ್ಧ - ಪದ್ಮವ್ಯೂಹ ನಿರ್ಮಾಣ

ಪದ್ಮವ್ಯೂಹಂ ವ್ಯೂಹ್ಯ ಪರೈರಭೇದ್ಯಂ
ವರಾದ್ವಿಷ್ಣೋಸ್ತಸ್ಯ* ಮಂತ್ರಂ ಹಿ ಜಪ್ತ್ವಾ ।
ಪಾರ್ಥಾಶ್ಚ ತಂ ಪ್ರಾಪುರ್ಯತೇಽರ್ಜುನೇನ
ಸಂಶಪ್ತಕೈರ್ಯುಯುಧೇ ಸೋಽಪಿ ವೀರಃ ॥ ೩೮ ॥

---

* ಮಂತ್ರಂ ಹ್ಯಜಪ್ತ್ವಾ (ಪಾಠಾಂತರ);

ವಿಷ್ಣೋರ್ವರಾತ್ ತಸ್ಯ ಭೇದನಸ್ಯ ಅಂಗಂ ಮಂತ್ರಮಜಪ್ತ್ವಾ ಪರೈಃ ಶತ್ರುಭಿರಭೇದ್ಯಂ ಪದ್ಮವ್ಯೂಹಂ ವ್ಯೂಹ್ಯ ತಸ್ಥಾವಿತಿ ಶೇಷಃ । – (ವೇ.)

ಅ: ವಿಷ್ಣುವಿನ ವರದಿಂದ ಶತ್ರುಗಳಿಗೆ ಅಭೇದ್ಯವಾದ ಪದ್ಮವ್ಯೂಹವನ್ನು ರಚಿಸಿ ದ್ರೋಣರು ಯುದ್ಧಕ್ಕೆ ತೊಡಗಿದರು. ಅರ್ಜುನನ್ನು ಹೊರತು ಇತರ ಪಾಂಡವರೂ ಸಹ ದ್ರೋಣನನ್ನು ಎದುರಿಸಿದರು. ಅರ್ಜುನ ಸಂಶಪ್ತಕರೊಂದಿಗೆ ಯುದ್ಧಕ್ಕೆ ತೊಡಗಿದ.

ವಿ : ದ್ರೋಣರು ವಿಷ್ಣುಮಂತ್ರವನ್ನು ಜಪಿಸಿ ವಿಷ್ಣುವರದಿಂದಲೇ ಪದ್ಮವ್ಯೂಹವನ್ನು ನಿರ್ಮಿಸಿದರು; ಅದು ವಿಷ್ಣುಮಂತ್ರ ತಿಳಿಯದವರಿಂದ ಸರ್ವಥಾ ಭೇದಿಸಲಾಗದ ಅಪೂರ್ವ ವ್ಯೂಹವಾಗಿತ್ತು ಎಂದು ಭಾವ.

ಪಾರ್ಥಾ ವ್ಯೂಹಂ ತು ತಂ ಪ್ರಾಪ್ಯ ನಾಶಕನ್ ಭೇತ್ತುಮುದ್ಯತಾಃ ।
ಜಾನಂಶ್ಚ ಪ್ರತಿಭಾಯೋಗಾತ್ ಕಾಮ್ಯಂ ನೈವಾಜಪನ್ಮನುಮ್ ॥ ೩೯ ॥

ಅ: ಪಾಂಡವರು ಆ ವ್ಯೂಹದ ಬಳಿಗೆ ಬಂದು ಪ್ರಯತ್ನಿಸಿದರೂ ಅದನ್ನು ಭೇದಿಸಲು ಶಕ್ತರಾಗಲಿಲ್ಲ. ಭೀಮ ತನ್ನ ಪ್ರತಿಭೆಯ ಬಲದಿಂದ ಆ ವ್ಯೂಹ ಭೇದಿಸುವ ಮಂತ್ರವನ್ನು ತಿಳಿದಿದ್ದರೂ, ಕಾಮ್ಯವೆಂಬ ಕಾರಣದಿಂದ ಅದನ್ನು ಜಪಿಸಲಿಲ್ಲ.

ಪದ್ಮವ್ಯೂಹಭೇದನಕ್ಕೆ ಅಭಿಮನ್ಯು

ಭೀಮೋ ಯುಧಿಷ್ಠಿರಸ್ತತ್ರ ತಜ್ಜ್ಞಂ ಸೌಭದ್ರಮಬ್ರವೀತ್ ।
ಭಿಂಧಿ ವ್ಯೂಹಮಿಮಂ ತಾತ ವಯಂ ತ್ವಾಮನುಯಾಮಹೇ ॥ ೪೦ ॥

ಅ: ಧರ್ಮರಾಜ ಆ ವ್ಯೂಹ ಭೇದವನ್ನು ತಿಳಿದಿದ್ದ ಅಭಿಮನ್ಯುವಿಗೆ ನುಡಿದ ''ಮಗು ಈ ವ್ಯೂಹವನ್ನು ನೀನು ಭೇದಿಸು; ನಿನ್ನ ಹಿಂದೆ ನಾವೂ ಬರುವೆವು''.

ವಿ : ೧) ಇತರ ಪಾಂಡವರಿಗೆ ವ್ಯೂಹಭೇದ ಅಸಾಧ್ಯವಾಗಲು, ಅದರ ಮಂತ್ರ ತಿಳಿಯದಿದ್ದುದು ಕಾರಣವಾಗಿದ್ದರೆ, ಭೀಮ ಅದನ್ನು ಭೇದಿಸದಿರಲು ಆ ಮಂತ್ರ ತಿಳಿದಿದ್ದರೂ ಅದು ಕಾಮ್ಯವೆಂಬುದು ಕಾರಣವಾಗಿತ್ತು ಎಂದು ತಿಳಿಯಬೇಕು.

---

೩೮. 'ಪದ್ಮವ್ಯೂಹ್ಯಂ ವ್ಯೂಹ್ಯ ಪರೈರಭೇದ್ಯಂ ವರಾದ್ವಿಷ್ಣೋಸ್ತಸ್ಯ ಮಂತ್ರಂ ಹ್ಯಜಪ್ತ್ವಾ' ಇತಿ ಪಾಠ ಏವ ಸಾಧುಃ । ತಸ್ಯಾರ್ಥಃ। ವಿಷ್ಣೋರ್ವರಾದಭೇದ್ಯಂ । ತರ್ಹಿ ಅಭಿಮನ್ಯುನಾ ಕಥಂ ಭಿನ್ನಮ್ ? ಅತೋ ವಿಷ್ಣುವರಮೇವ ವಿಶದಯತಿ – 'ತಸ್ಯೇತಿ' । ಪ್ರತಿಘಾತಕಮಿತಿ ಶೇಷಃ । ತಥಾ ಚ ತಸ್ಯ ಪದ್ಮವ್ಯೂಹಸ್ಯ ಪ್ರತಿಘಾತಕಂ ಮಂತ್ರಮಜಪ್ತ್ವಾ ಸ್ಥಿತೇನ ಪುರುಷೇಣಾಭೇದ್ಯಮ್ । ಯಸ್ತು ಪ್ರತಿಘಾತಕಂ ಮಂತ್ರಂ ಜಪಿಷ್ಯತಿ ತೇನ ಭೇದ್ಯಂ ಭವಷ್ಟಿತಿ ಭಗವದ್ವರಾಭಿಪ್ರಾಯಃ । ಪ್ರತಿಘಾತಕಂ ಚ ಮಂತ್ರಂ ಅರ್ಜುನಿರೇವ ವೇತ್ತಿ ನಾನ್ಯಃ ಕೋಽಪೀತಿ ಭಾವಃ । ಅತ ಏವೋತ್ತರತ್ರ ಭೀಮಃ 'ಕಾಮ್ಯಂ ನೈವಾಜಪನ್ಮನುಮ್' ಇತಿ ಪ್ರತಿಘಾತಕಂ ಮಂತ್ರಂ ನ ಜಜಾಪೇತ್ಯುಕ್ತಮ್ । ತಥಾ ಚ ಯದ್ಯಭೇದ್ಯತ್ವವರೋ ವಿಷ್ಣುನಾ ದತ್ತಃ ತರ್ಹಿ ಅಭಿಮನ್ಯುರಪಿ ಕಥಮಭಿನದಿತಿ ಶಂಕಾನವಕಾಶ ಇತಿ ದ್ರಷ್ಟವ್ಯಮ್ । **ಏವಮೇವ ವ್ಯಾಸತೀರ್ಥಟಿಪ್ಪಣ್ಯಾಂ ವೇದಾಂಗತೀರ್ಥಟಿಪ್ಪಣ್ಯಾಂ ಚ ವ್ಯಾಖ್ಯಾತಮ್ ॥** – (ಚ.)

೨) ಅದರೊಂದಿಗೆ ಅಂದು ಆ ವ್ಯೂಹದಲ್ಲಿ ಅಭಿಮನ್ಯು ಹತನಾಗಬೇಕೆಂಬುದು ಕೃಷ್ಣನ ಸಂಕಲ್ಪ ಎಂದು ಪೂರ್ಣಪ್ರಜ್ಞನಾದ ಭೀಮು ತಿಳಿದಿದ್ದುದು ಸಹ ಕಾರಣವಾಗಿತ್ತು ಎಂಬ ವಿಶೇಷಾಂಶ ಮುಂದೆ ಬಂದಿದೆ.

೩) ಭೀಮನಿಗೆ ಮಂತ್ರ ಜಪಿಸದೆಯೂ ಆ ವ್ಯೂಹಭೇದನ ಸಾಧ್ಯ, ಹಾಗೆ ಮಾಡದಿರಲು ಶ್ರೀಹರಿಯ ಸಂಕಲ್ಪದ ಪರಿಜ್ಞಾನವೇ ಮುಖ್ಯ ಕಾರಣ ಎಂದರ್ಥ.

೪) ಆಗ ಧರ್ಮರಾಜ ಅಭಿಮನ್ಯುವಿಗೆ 'ಆ ವ್ಯೂಹದ ಭೇದ ಕೃಷ್ಣ, ಅರ್ಜುನ, ಪ್ರದ್ಯುಮ್ನ ಮತ್ತು ಅಭಿಮನ್ಯುವಿನ ಹೊರತು ಬೇರಾರಿಗೂ ಅಸಾಧ್ಯ. ಅರ್ಜುನ ಈಗ ಬೇರೆಡೆ ತೆರಳಿರುವುದರಿಂದ ಅಭಿಮನ್ಯುವೇ ಮಾಡಬೇಕು' ಎಂದು ತಿಳಿಸುವನು :

ಚಕ್ರವ್ಯೂಹಸ್ಯ ನ ವಯಂ ವಿದ್ಮೋ ಭೇದಂ ಕಥಂಚನ ॥
ತ್ವಂ ವಾರ್ಜುನೋ ವಾ ಕೃಷ್ಣೋ ವಾ ಭಿಂದ್ಯಾತ್ ಪ್ರದ್ಯುಮ್ನ ಏವ ವಾ ।
ಚಕ್ರವ್ಯೂಹಂ ಮಹಾಬಾಹೋ ಪಂಚಮೋ ನೋಪಪದ್ಯತೇ ॥

– ಭಾರತ (ದ್ರೋಣ. ೩೫/೧೪, ೧೫)

೫) ಅಭಿಮನ್ಯು ಅವನ ಮಾತನ್ನು ಅಂಗೀಕರಿಸಿ ತನಗೆ ವ್ಯೂಹಪ್ರವೇಶ ಮಾತ್ರ ತಿಳಿದಿದೆಯೇ ಹೊರತು, ಅದರಿಂದ ಹೊರಬರುವ ವಿದ್ಯೆ ತಿಳಿದಿಲ್ಲ ಎಂದು ತಿಳಿಸಿ, ತಾನು ಅತ್ಯಂತ ಅಪೂರ್ವವಾದ ಯುದ್ಧವನ್ನು ಮಾಡುವುದಾಗಿ ಶಪಥ ತೊಟ್ಟು ಆ ಕಾರ್ಯಕ್ಕೆ ಸಿದ್ಧನಾದ :

ಉಪದಿಷ್ಟೋ ಮೇ ಪಿತ್ರಾ ಯೋಗೋಽನೀಕವಿಶಾತನೇ ।
ನೋತ್ಸಹೇ ಹಿ ವಿನಿರ್ಗಂತುಮಹಂ ಕಸ್ಯಾಂಚಿದಾಪದಿ ॥ –ಭಾರತ (೭/೩೫/೧೯)

ನಾಹಂ ಪಾರ್ಥೇನ ಜಾತಃ ಸ್ಯಾಂ ನ ಚ ಜಾತಃ ಸುಭದ್ರಯಾ ।
ಯದಿ ಮೇ ಸಂಯುಗೇ ಕಶ್ಚಿಜ್ಜೀವಿತೋ ನಾದ್ಯ ಮುಚ್ಯತೇ ॥
ಯದಿ ಚೈಕರಥೇನಾಹಂ ಸಮಗ್ರಂ ಕ್ಷತ್ರಮಂಡಲಮ್ ।
ನ ಕರೋಮ್ಯಷ್ಟಧಾ ಯುದ್ಧೇ ನ ಭವಾಮ್ಯರ್ಜುನಾತ್ಮಜಃ ॥

– ಭಾರತ(೭/೩೫/೨೭, ೨೮)

ಜಯದ್ರಥನಿಂದ ಪ್ರತಿರೋಧ

ಸ ಏವಮುಕ್ತೋ ರಥಿನಾಂ ಪ್ರಬರ್ಹೋ
ವಿವೇಶ ಭಿತ್ವಾ ದ್ವಿಷತಾಂ ಚಮೂಂ ತಾಮ್ ।
ಅನ್ವೇವ ತಂ ವಾಯುಸುತಾದಯಶ್ಚ
ವಿವಿಕ್ಷವಃ ಸೈಂಧವೇನೈವ ರುದ್ಧಾಃ ॥ ೪೧ ॥

ಅ: ರಥಿಕರಲ್ಲಿ ಶ್ರೇಷ್ಠನಾದ ಅಭಿಮನ್ಯು ಧರ್ಮರಾಜ ಹೀಗೆನ್ನಲು ಆ ವ್ಯೂಹವನ್ನು ಭೇದಿಸಿ ಶತ್ರುಸೈನ್ಯವನ್ನು ಪ್ರವೇಶಿಸಿದ. ಅವನ ಹಿಂದೆಯೇ ಭೀಮಸೇನ ಮೊದಲಾದವರು ಪ್ರವೇಶಿಸಲು ಬಯಸಿದಾಗ ಸೈಂಧವ ಅವರನ್ನೆಲ್ಲ ತಡೆದ.

ವಿ : ವನಪರ್ವದಲ್ಲಿ ದ್ರೌಪದಿಯನ್ನು ಕೆಣಕಿ ಭೀಮಾರ್ಜುನರಿಂದ ನಿಗ್ರಹಿಸಲ್ಪಟ್ಟಿದ್ದ ಜಯದ್ರಥ ಶಿವನನ್ನು ಆರಾಧಿಸಿ ಒಂದು ದಿನದ ಮಟ್ಟಿಗೆ ಅರ್ಜುನನ ಹೊರತು ಇತರ ಪಾಂಡವರನ್ನು ತಡೆಯುವ ಸಾಮರ್ಥ್ಯವನ್ನು ವರವನ್ನಾಗಿ ಪಡೆದಿದ್ದ ವಿವರ ಬಂದಿದೆ (೨೨/೩೮೮). ಆ ವರವನ್ನು ಅವನಿಂದು ಬಳಸಿಕೊಂಡ ಎಂದು ತಿಳಿಯಬೇಕು.

ವರೇಣ ರುದ್ರಸ್ಯ ನಿರುದ್ಧ್ಯಮಾನೋ
ಜಯದ್ರಥೇನಾತ್ರ ವೃಕೋದರಸ್ತು।
ವಿಷ್ಣೋರಭೀಷ್ಟಂ ವಧಮಾರ್ಜುನೇಸ್ತದಾ
ವಿಜ್ಞಾಯ ಶಕ್ತೋಽಪಿ ನ ಚಾತ್ಯವರ್ತತ ॥ ೪೨ ॥

ಅ: ಶಿವನ ವರದಿಂದ ಜಯದ್ರಥ ತನ್ನನ್ನು ತಡೆದಾಗ ಭೀಮಸೇನ ಆಗ ಅಭಿಮನ್ಯುವಿನ ವಧೆ ನಡೆಯಬೇಕೆಂಬ ಕೃಷ್ಣನ ಸಂಕಲ್ಪವನ್ನು ತಿಳಿದಿದ್ದರಿಂದ ಶಕ್ತನಾಗಿದ್ದರೂ ಆ ವರವನ್ನು ಮೀರಿ ನಡೆಯಲಿಲ್ಲ.

ವಿ : ೧) ಜಯದ್ರಥನ ವರ ಭೀಮ ಒಳನುಗ್ಗದಿರಲು ಮೇಲಿನ ಕಾರಣ. ಆದರೆ, ಶಿವನ ವರ ಶಿವೋತ್ತಮನಾದ ಭೀಮನಿಗೆ ಸರ್ವಥಾ ಅಡ್ಡಿಯಾಗದು ಎಂಬುದು ವಸ್ತುಸ್ಥಿತಿ. ಅಂದು ಅಭಿಮನ್ಯುವಿನ ವಧೆ ಶ್ರೀಕೃಷ್ಣನ ಸಂಕಲ್ಪ ಎಂಬುದು ಒಳಗಿನ ಕಾರಣ.

೨) ಅದನ್ನು ತಿಳಿದಿದ್ದರಿಂದಾಗಿಯೇ ಭೀಮ ವ್ಯೂಹಪ್ರವೇಶಕ್ಕೆ ಸರ್ವಸಮರ್ಥನಾಗಿದ್ದರೂ ಮುನ್ನುಗ್ಗಲಿಲ್ಲ ಎಂದರ್ಥ.

೩) ಮಾರನೆಯ ದಿನ ಆ ಪದ್ಮವ್ಯೂಹಕ್ಕಿಂತ ಮಿಗಿಲಾಗಿದ್ದ ಶಕಟಾಬ್ಜಚಕ್ರ ಎಂಬ ವ್ಯೂಹವನ್ನು ಭೀಮ ಅನಾಯಾಸವಾಗಿ ಭೇಧಿಸುವ ಪ್ರಸಂಗ ಬರುತ್ತದೆ. ಅದು ಇಂದು ಭೀಮಸೇನ ಈ ಪದ್ಮವ್ಯೂಹವನ್ನು ಭೇಧಿಸದಿರಲು ಹರಿಸಂಕಲ್ಪವೇ ಮುಖ್ಯ ಕಾರಣ ಎಂಬುದನ್ನು ದೃಢ–ಪಡಿಸುವುದು.

ಜಯದ್ರಥಸ್ಥೇನ ವೃಷಧ್ವಜೇನ
ಪ್ರಯುಧ್ಯಮಾನೇಷು ವೃಕೋದರಾದಿಷು ।
ಪ್ರವಿಶ್ಯ ವೀರಃ ಸ ಧನಂಜಯಾತ್ಮಜೋ
ವಿಲೋಡಯಾಮಾಸ ಪರೋರುಸೇನಾಮ್ ॥ ೪೩ ॥

ಅ: ಜಯದ್ರಥನೊಳಗಿದ್ದ ಶಿವನೊಂದಿಗೆ ಭೀಮಸೇನ ಮೊದಲಾದವರು ಯುದ್ಧಕ್ಕೆ ತೊಡಗಿದ್ದಂತೆಯೇ ವೀರನಾದ ಅಭಿಮನ್ಯು ವ್ಯೂಹದೊಳಗೆ ಹೊಕ್ಕು ಶತ್ರುಗಳ ಮಹಾಸೈನ್ಯವನ್ನು ಉಲ್ಲೋಲ ಕಲ್ಲೋಲಗೊಳಿಸಿದ.

ವಿ : ಭೀಮಾದಿಗಳು ಜಯದ್ರಥನಿಗೆ ಸೋತು ಹಿಂದಿರುಗಿದವರಲ್ಲ, ಇಡೀ ದಿನ ಅವನೊಂದಿಗೆ ಯುದ್ಧದಲ್ಲಿ ತೊಡಗಿಯೇ ಇದ್ದರು. ಈಶ್ವರನ ವರ ಇದ್ದದ್ದೂ ಸಹ ಅವರನ್ನು ತಡೆಯಲೆಂದೇ ಹೊರತು ಸೋಲಿಸಲೆಂದಲ್ಲ ಎಂಬುದನ್ನು ಗಮನಿಸಬೇಕು (೨೨/೩೮೮). ಭೀಮನನ್ನು ತಡೆಯುವ ಸಾಮರ್ಥ್ಯ ಮಾತ್ರ ಅದಕ್ಕಿರಲಿಲ್ಲ.

ಅಭಿಮನ್ಯುವಿನ ಅದ್ಭುತ ಪರಾಕ್ರಮ

ಸ ದ್ರೋಣದುರ್ಯೋಧನಕರ್ಣಶಲ್ಯ-
ದ್ರೌಣ್ಯಗ್ರಣೀಭಿಃ ಕೃತವರ್ಮಯುಕ್ತೈಃ ।
ರುದ್ಧಶ್ಚಚಾರಾರಿಬಲೇಷ್ವಭೀತಃ
ಶಿರಾಂಸಿ ಕೃಂತಂಸ್ತದನುವ್ರತಾನಾಮ್ ॥ ೪೪ ॥

ಅ: ಅಭಿಮನ್ಯುವು ದ್ರೋಣ, ದುರ್ಯೋಧನ, ಕರ್ಣ, ಶಲ್ಯ, ಅಶ್ವತ್ಥಾಮ, ಕೃತವರ್ಮ ಮೊದಲಾದ ಯೋಧಾಗ್ರೇಸರರಿಂದ ತಡೆಯಲ್ಪಟ್ಟರೂ ಶತ್ರುಸೇನೆಗಳಲ್ಲಿ ನಿರ್ಭೀತಿಯಿಂದ ಅವರ ಅನುಯಾಯಿಗಳ ತಲೆಗಳನ್ನು ಕತ್ತರಿಸಿಹಾಕುತ್ತಲೇ ಸಂಚರಿಸಿದ.

ವಿ : ಏಕಾಂಗಿಯಾಗಿ ವ್ಯೂಹದೊಳಗೆ ಹೊಕ್ಕ ಅಭಿಮನ್ಯು ಸ್ವಲ್ಪವೂ ಭಯಪಡದೆ ದ್ರೋಣ, ಕರ್ಣ ಮೊದಲಾದ ಮಹಾರಥಿಕರೊಂದಿಗೆ ನಿರ್ಭಯದಿಂದ ಹೋರಾಡಲು ಅವನೊಳಗೆ ಯುಧಿಷ್ಠಿರಾದಿಗಳ ಆವೇಶ ಹಾಗೂ ವಿಶೇಷವಾಗಿ ಕೃಷ್ಣನ ಸನ್ನಿಧಿ ಇದ್ದುದು ಕಾರಣ (೨೦/೨೧೩). ಅಭಿಮನ್ಯುವಿನ ಅಂದಿನ ಸಾಹಸ ಅವನನ್ನು ಮಹಾವೀರರ ಸಾಲಿನಲ್ಲಿ ಚಿರಸ್ಥಾಯಿಯನ್ನಾಗಿಸಿದೆ.

ಅಭಿಮನ್ಯುವಿನಿಂದ ಲಕ್ಷಣನ ವಧೆ

ಸ ಲಕ್ಷಣಂ ರಾಜಸುತಂ ಪ್ರಸಹ್ಯ
ಪಿತುಃ ಸಮೀಪೇऽನಯದಾಶು ಮೃತ್ಯವೇ ।
ಬೃಹದ್ಬಲಂ ಚೋತ್ತಮವೀರ್ಯಕರ್ಮಾ
ವರಂ ರಥಾನಾಮಯುತಂ ಪತತ್ರಿಭಿಃ ॥ ೪೫ ॥

ಅ: ಅಭಿಮನ್ಯು ದುರ್ಯೋಧನಪುತ್ರನಾದ ಲಕ್ಷಣನನ್ನು ಅವನ ತಂದೆಯಾದ ದುರ್ಯೋಧನನ ಎದುರೇ ಬಲಾತ್ಕಾರದಿಂದ ಹಿಡಿದು ಕೊಂದು ಹಾಕಿದ. ಬೃಹದ್ಬಲನನ್ನು ಸಂಹರಿಸಿದ. ಉತ್ತಮ ಸಾಮರ್ಥ್ಯ ಹಾಗೂ ಕರ್ಮಗಳನ್ನುಳ್ಳ ಅಭಿಮನ್ಯು ಹತ್ತು ಸಹಸ್ರ ಮಹಾರಥರನ್ನೂ ಸಹ ಬಾಣಗಳಿಂದ ಸಂಹರಿಸಿದ.

ವಿ : ಲಕ್ಷಣನು ರಾಮಾಯಣದಲ್ಲಿ ರಾವಣಪುತ್ರನಾದ ಅಕ್ಷಕುಮಾರನಾಗಿದ್ದವನು ಎಂಬ ವಿವರ ಈಗಾಗಲೇ ಬಂದಿದೆ (೧೯/೨೦೧). ಅಭಿಮನ್ಯು ಅವನ ಶಿರಸ್ಸನ್ನು ಚಕ್ರದಿಂದ ಕತ್ತರಿಸಿದ ಉಲ್ಲೇಖ ಮಹಾಭಾರತದಲ್ಲಿದೆ. ಬೃಹದ್ಬಲ ಶಕುನಿಯ ಮತ್ತೊಬ್ಬ ಸೋದರ. ಅವರಿಬ್ಬರೂ ಅಭಿಮನ್ಯು–ವಿನಿಂದ ಹತರಾದ ಪ್ರಮುಖರು.

ದ್ರೋಣಾದಯಸ್ತ್ವ ಹರಿಕೋಪಭೀತಾಃ
*ಪ್ರತ್ಯಕ್ಷತೋ ಹಂತುಮಶಕ್ನುವಂತಃ ।
ಸಮ್ಮಂತ್ರ್ಯ ಕರ್ಣಂ ಪುರತೋ ನಿಧಾಯ
ಚಕ್ರುರ್ವಿಚಾಪಾಶ್ವರಥಂ ಕ್ಷಣೇನ ॥ ೪೬ ॥

---

೪೫. ಉತ್ತಮಂ ಉತ್ಕೃಷ್ಟಂ ವೀರ್ಯಂ ಪರಾಕ್ರಮಃ ಕರ್ಮ ಯುದ್ಧಾದಿಕರ್ಮ ಯಸ್ಯ ಸ ತಥಾ । .... 'ತಥಾ ಬೃಹದ್ಬಲಂ ಹತ್ವಾ ಸೌಭದ್ರೋ ವ್ಯಚರದ್ರಣ' *ಇತಿ 'ಬೃಹದ್ಬಲಂ ಚ ರಾಜಾನಂ ಸ್ವರ್ಗೇಣಾದೌ ಪ್ರಯೋಜ್ಯ ಹ' +ಇತಿ ಚ ದ್ರೋಣಪರ್ವಣ್ಯುಕ್ತೇಃ । ಬೃಹದ್ಬಲಮಿತಿ ಅಯುತಸ್ಯ ವಿಶೇಷಣಮಿತಿ ಕೇಚಿತ್। – (ಜ.)

೪೫. ಸ ತಸ್ಯ ಭುಜನಿರ್ಮುಕ್ತೋ ಲಕ್ಷಣಸ್ಯ ಸುದರ್ಶನಮ್ ।
ಸುನಸಂ ಸುಭ್ರು ಕೇಶಾಂತಂ ಶಿರೋऽಹಾರ್ಷೀತ್ ಸಕುಂಡಲಮ್ ॥ – ಭಾರತ (ದ್ರೋಣ. ೪೬/೧೭)

೪೫. ಹತ್ವಾ ದಶಸಹಸ್ರಾಣಿ ಕೌಸಲ್ಯಂ ಚ ಮಹಾರಥಮ್ । – ಭಾರತ (ದ್ರೋಣ. ೪೯/೩೮)

* ಪ್ರತ್ಯಕ್ಷತಃ ಸಾಕ್ಷಾತ್ । – (ವೇ.)

---

* ಭಾರತ (ದ್ರೋಣ. ೪೭/೨೪) + ಭಾರತ (ದ್ರೋಣ. ೭೩/೧೪)

ಅ: ದ್ರೋಣ ಮುಂತಾದವರು ಕೃಷ್ಣನ ಕೋಪಕ್ಕೆ ಅಂಜಿ ಅಭಿಮನ್ಯುವನ್ನು ಎದುರಿನಲ್ಲಿ ಹೋರಾಡಿ ಕೊಲ್ಲಲು ಅಶಕ್ತರಾಗಿ ಮಂತ್ರಾಲೋಚನೆ ಮಾಡಿ ಕರ್ಣನನ್ನು ಮುಂದಿಟ್ಟುಕೊಂಡು ಅವನ ಧನುಸ್ಸು, ಕುದುರೆ ಮತ್ತು ರಥಗಳನ್ನು ಕ್ಷಣದಲ್ಲಿಯೇ ನಾಶಮಾಡಿದರು.

ವಿ: ೧) ದ್ರೋಣಾದಿಗಳು ಮಹಾವೀರರಾದರೂ ತುಂಬಾ ಕಿರಿಯನಾದ ಅಭಿಮನ್ಯುವನ್ನು ಕೊಲ್ಲಲು ಅಸಮರ್ಥರಾದರು. ಅದಕ್ಕೆ ಕಾರಣ ಶ್ರೀಕೃಷ್ಣನ ಅಪ್ರೀತಿ ಉಂಟಾಗುವುದೆಂಬ ಭೀತಿ.

೨) ಕರ್ಣನನ್ನು ಮುಂದಿಟ್ಟುಕೊಂಡು ಅಭಿಮನ್ಯುವನ್ನು ಹಂತ ಹಂತವಾಗಿ ಸೋಲಿಸುವ ಯೋಜನೆಯನ್ನು ರೂಪಿಸಿದರು ಎಂದರ್ಥ.

ಕರ್ಣೋ ಧನುಸ್ತಸ್ಯ ಕೃಪಶ್ಚ ಸಾರಥಿಂ
ದ್ರೋಣೋ ಹಯಾನಾಶು ವಿಧಮ್ಯ ಸಾಯಕೈಃ।
ಸಚರ್ಮಖಡ್ಗಂ ರಥಚಕ್ರಮಸ್ಯ
ಪ್ರಣುದ್ಯ ಹಸ್ತಸ್ಥಿತಮೇವ ಚಕ್ರುಃ ॥ ೪೭ ॥

ಅ: ಅಭಿಮನ್ಯುವಿನ ಧನುಸ್ಸನ್ನು ಕರ್ಣ, ಸಾರಥಿಯನ್ನು ಕೃಪ, ಕುದುರೆಗಳನ್ನು ದ್ರೋಣರು ಕೂಡಲೇ ಬಾಣಗಳಿಂದ ನಾಶಮಾಡಿದರು. ಅವನ ಕೈಯಲ್ಲಿದ್ದ ಕತ್ತಿ, ಗುರಾಣಿಗಳನ್ನು, ರಥದ ಚಕ್ರವನ್ನು ನಾಶಮಾಡಿ ಅವನು ಬರಿಗೈಯಲ್ಲಿ ನಿಲ್ಲುವಂತೆ ಮಾಡಿದರು.

ವಿ: ೧) ಅವರೆಲ್ಲ ಹಾಗೆ ಮಾಡಿದ್ದೂ ಸಹ ಅವನ ಎದುರು ನಿಂತು ಅಲ್ಲದೇ ಹಿಂಭಾಗದಿಂದ ಆಕ್ರಮಿಸಿ ಎಂಬುದು ಗಮನಾರ್ಹ.

೨) ಹೀಗೆ ಪ್ರಥಮ ಬಾರಿಗೆ ಯುದ್ಧದ ನಿಯಮಗಳನ್ನು ಗಾಳಿಗೆ ತೂರಿ ಏಕಾಂಗಿಯಾದ ಕುಮಾರನನ್ನು ಬಹುಸಂಖ್ಯಾಕರಾದ ಮಹಾರಥರು ಸಂಹರಿಸಲು ಕುಟಿಲೋಪಾಯದಲ್ಲಿ ತೊಡಗುವ ಮೂಲಕ ಕೌರವರು ತಮ್ಮ ವಿನಾಶಕ್ಕೆ ತಾವೇ ನಾಂದಿ ಹಾಡಿಕೊಂಡರು ಎಂದು ತಿಳಿಯಬೇಕು.

---

೪೭. ರಥಚಕ್ರಂ ಪ್ರಣುದ್ಯೇತಿ ಕ್ವಚಿತ್ಪಾಠಃ । ತತ್ರ ರಥಶಬ್ದೇನ ರಥಚಕ್ರಂ ಲಕ್ಷ್ಯತೇ । ರಥಚಕ್ರಸದೃಶಂ ಯಚ್ಚಕ್ರಾಖ್ಯಮಾಯುಧಂ ತತ್ ಪ್ರಣುದ್ಯ ಚ್ಛಿತ್ವಾ ಹಸ್ತಸ್ಥಿತಮೇವ ಹಸ್ತಾಭ್ಯಾಂ ಸ್ಥಿತಮೇವಚಕ್ರುಃ । ನ ತು ಹತವಂತಃ। ತಸ್ಥುರಿತಿ ಪಾಠೇ ಹಸ್ತಗೃಹೀತಂ ಯಥಾ ತಥಾ ಕೃತ್ವಾ ತೂಷ್ಣೀಂ ತಸ್ಥುರಿತ್ಯರ್ಥಃ। 'ಆಸ್ಥಿತಶ್ಚಕ್ರಮುದ್ಯಮ್ಯ' (೭/೪೮/೩೯) ಇತಿ- ದ್ರೋಣಪರ್ವಣ್ಯುಕ್ತೇಃ। – (ಜ.)

೪೭. ರಥಚಕ್ರಮಸ್ಯ ಪ್ರಣುದ್ಯೇತ್ಯತ್ರ ರಥಶ್ಚ ಚಕ್ರಂ ಚೇತಿ ದ್ವಂದ್ವೈಕವದ್ಭಾವಃ । ಆಸ್ಥಿತಶ್ಚ ಕ್ರಮುದ್ಯಮ್ಯೇತಿ ತಥಾ ತಚ್ಚಕ್ರಂ ಭೃಶಮುದ್ವಿಗ್ನಾ ಸಂಚಿಚ್ಛಿದುರನೇಕಧಾ' ಇತಿ ದ್ರೋಣಪರ್ವವಚನಾತ್ ಸರ್ವಾಯುಧನಾಶಾನಂತರಂ ಗದೈಕೋರ್ವರಿತೇತಿ ಜ್ಞಾತವ್ಯಮ್ । 'ತೇಷ್ವಾಸಸಾದಾಶು ಗದಾಯುಧಂ ಗದೀ'ತ್ಯುತ್ತರವಾಕ್ಯಾತ್ (೨೬/೪೮)। – (ತಿ.)

ಇದನ್ನು ಅರಿಯದ ಜನ ಪಾಂಡವರೇ ಮೋಸದ ಯುದ್ಧ ಮಾಡಿ ಅನ್ಯಾಯಕ್ಕೆ ನಾಂದಿ ಹಾಡಿದರು ಎಂದು ಮಿಥ್ಯಾರೋಪ ಮಾಡುವರು.

ಅಭಿಮನ್ಯುವಿನ ವಧೆ

ಭೀತೇಷು ಕೃಷ್ಣಾದಥ ತದ್ವಧಾಯ
ತೇಷ್ವಾಸಸಾದಾಶು ಗದಾಯುಧಂ ಗದೀ ।
ದೌಃಶಾಸನಿಸ್ತೌ ಯುಗಪಚ್ಚ ಮಮ್ರತು
ರ್ಗದಾಭಿಘಾತೇನ ಮಿಥೋಽತಿಪೌರುಷೌ ॥ ೪೮ ॥

ಅ: ಕೃಷ್ಣನ ಭಯದಿಂದಾಗಿ ಅವನನ್ನು ಕೊಲ್ಲಲು ಅವರೆಲ್ಲ ಹಿಂಜರಿದಾಗ ಗದಾಪಾಣಿಯಾಗಿ ದುಃಶಾಸನನ ಪುತ್ರ ಗದೆ ಹಿಡಿದಿದ್ದ ಅಭಿಮನ್ಯುವನ್ನು ಎದುರಿಸಿದ. ಮಹಾಪೌರುಷಶಾಲಿಗಳಾದ ಅವರಿಬ್ಬರೂ ಪರಸ್ಪರರ ಗದೆಯ ಪೆಟ್ಟಿಗೆ ಜೊತೆಯಾಗಿಯೇ ಹತರಾದರು.

ವಿ : ೧) ಕೊನೆಗೂ ಗದಾಯುದ್ಧದಲ್ಲಿ ಅಭಿಮನ್ಯು ಮಡಿದ. ಆ ವೇಳೆಗೆ ಇಡೀ ದಿನ ಹೋರಾಡಿ ಅವನು ಸಾಕಷ್ಟು ಬಳಲಿದ್ದ. ಆಗ ತಾನೇ ಹೊಸತಾಗಿ ಧಾವಿಸಿದ ದುಃಶಾಸನನ ಪುತ್ರನೊಂದಿಗೆ ಹೋರಾಡಿ ಅವನನ್ನೂ ಕೊಂದು, ತಾನೂ ಮಡಿದ.

೨) ದುರ್ಯೋಧನನ ಪುತ್ರನಾದ ಲಕ್ಷಣನೊಂದಿಗೆ ದುಃಶಾಸನನ ಪುತ್ರನನ್ನೂ ಸಂಹರಿಸಿದ ಮಹಾಸಾಹಸ ಅಭಿಮನ್ಯುವಿನದಾಯಿತು. ಪಾಂಡವರಲ್ಲಿ ಅರ್ಜುನಪುತ್ರನಾದ ಅಭಿಮನ್ಯು ಮಾತ್ರ ಮಡಿದರೆ, ಕೌರವರ ಕಡೆಯಲ್ಲಿ ಇಬ್ಬರು ರಾಜಪುತ್ರರು ಮಡಿದಿದ್ದರು.

ಭೀಮನಿಂದ ಕುರುಸೈನ್ಯದ ನಾಶ

ತಸ್ಮಿನ್ ಹತೇ ಶತ್ರುರವಂ ನಿಶಮ್ಯ
ಹರ್ಷೋದ್ಭವಂ ಮಾರುತಿರುಗ್ರವಿಕ್ರಮಃ ।
ವಿಜಿತ್ಯ ಸರ್ವಾನಪಿ ಸೈಂಧವಾದೀನ್
ಯುಧಿಷ್ಠಿರಸ್ಯಾನುಮತೇ ನ್ಯಷೀದತ್ ॥ ೪೯ ॥

---

೪೮. ವಿಚೇತಾ ನ್ಯಪತದ್ ಭೂಮೌ ಸೌಭದ್ರಃ ಪರವೀರಹಾ ।
ಏವಂ ವಿನಿಹತೋ ರಾಜನ್ನೇಕೋ ಬಹುಭಿರಾಹವೇ ॥ – ಭಾರತ (ದ್ರೋಣ. ೪೯/೧೪)

ಚೋದಿತೋ ದ್ರೋಣಕರ್ಣಾಭ್ಯಾಂ ದೌಃಶಾಸನಿವಶಂ ಗತಃ ॥ – ಭಾರತ (ದ್ರೋಣ. ೪೯/೧೪)

* ವಿಜಿತ್ಯ ಪುನಶ್ಚ ಯೋತ್ಸ್ಯನ್ ಅಥ ಯುದ್ಧಾತ್ ಪ್ರಯೋಜನಾಭಾವಾದ್ಯುದ್ಧಂ ನ ಕಾರ್ಯಮಿತಿ ಯುಧಿಷ್ಠಿರಸ್ಯಾನುಮತೇ ನ್ಯಷೀದತ್ । ಯುದ್ಧಾದುಪರತ ಇತಿ ಭಾವಃ । – (ವೇ.)

ಅ: ಅಭಿಮನ್ಯು ಹತನಾಗುತ್ತಲೇ ಶತ್ರುಗಳ ಸಂಭ್ರಮದ ಧ್ವನಿಯನ್ನು ಕೇಳಿ ಉಗ್ರ-ಪರಾಕ್ರಮಿಯಾದ ಭೀಮಸೇನ ಜಯದ್ರಥ ಮೊದಲಾದವರನ್ನೆಲ್ಲ ಪರಾಭವಗೊಳಿಸಿ ಧರ್ಮರಾಜನ ಬಳಿಗೆ ತೆರಳಿದ.

ವಿ: ೧) ಕೌರವರಿಗೆ ತಮ್ಮ ಇಬ್ಬರು ರಾಜಕುಮಾರರು ಮಡಿದ ದುಃಖಕ್ಕಿಂತ ಅಭಿಮನ್ಯು ಒಬ್ಬನು ಮಡಿದ ಸಂತೋಷವೇ ಮಿಗಿಲೆನ್ನಿಸಿತು. ತಮ್ಮ ಎರಡು ಕಣ್ಣು ಹೊದರೂ ಚಿಂತೆಯಿಲ್ಲ ಮತ್ತೊಬ್ಬನ ಒಂದು ಕಣ್ಣು ಹೋಯಿತಲ್ಲ ಎಂದು ನಲಿಯುವಂತಹ ಮಹಾಪಾಪಿಗಳು ಅವರು ಎಂಬುದು ಇದರಿಂದ *ಸ್ಫುಟಪಡುವುದು.

೨) ಅಭಿಮನ್ಯುವಿನ ವಧೆಯ ಬಳಿಕ ಹರಿ ಸಂಕಲ್ಪ ಪೂರೈಸಿದ್ದರಿಂದ ಭೀಮಸೇನ ಶಿವವರವನ್ನು ಲೆಕ್ಕಿಸದೇ ಜಯದ್ರಥ ಮೊದಲಾದ ಎಲ್ಲರನ್ನೂ ಪರಾಭವಗೊಳಿಸಿದ. ಇದು ಅವನ ಸರ್ವಜ್ಞತ್ವಕ್ಕೂ, ಮಹಾಸಾಮರ್ಥ್ಯಕ್ಕೂ ದ್ಯೋತಕ ಎಂದು ತಿಳಿಯಬೇಕು.

ಶ್ರೀವೇದವ್ಯಾಸರಿಂದ ಯುಧಿಷ್ಠಿರನ ಸಾಂತ್ವನ

ವ್ಯಾಸಸ್ತದಾ ತಾನಮಿತಾತ್ಮವೈಭವೋ
ಯುಧಿಷ್ಠಿರಾದೀನ್ ಗ್ಲಪಿತಾನಬೋಧಯತ್ ।
ವಿಜಿತ್ಯ ಸಂಶಪ್ತಕಪೂಗಮುಗ್ರೋ
ನಿಶಾಗಮೇ ವಾಸವಿರಾಪ ಸಾಚ್ಯುತಃ ॥ ೫೦ ॥

ಅ: ಆಗ ದುಃಖಿತರಾದ ಧರ್ಮರಾಜ ಮೊದಲಾದವರನ್ನು ಅಪ್ರಮೇಯವಾದ ಸ್ವರೂಪ ವೈಭವದಿಂದ ಕೂಡಿದ ವೇದವ್ಯಾಸರು ಸಮಾಧಾನಪಡಿಸಿದರು. ಸಂಶಪ್ತಕರ ಗುಂಪನ್ನು ಸೋಲಿಸಿ ಮಹಾಪರಾಕ್ರಮಿಯಾದ ಅರ್ಜುನ ರಾತ್ರಿಯ ವೇಳೆಗೆ ಕೃಷ್ಣನೊಂದಿಗೆ ಆಗಮಿಸಿದ.

ವಿ: ವೇದವ್ಯಾಸರು ಅಲ್ಲಿಗೆ ಆಗಮಿಸಿ ವಿಶೇಷವಾಗಿ ಧರ್ಮರಾಜನನ್ನು ಅನೇಕ ಅಪೂರ್ವ ಕಥಾನಕಗಳ ನಿರೂಪಣೆಯಿಂದ ಸಮಾಧಾನಪಡಿಸಿದರು. ಆ ಸಮಯದಲ್ಲೇ ಬ್ರಹ್ಮನು ತಾನು ಸೃಷ್ಟಿಸಿದ ಪ್ರಾಣಿಗಳ ವಧೆಗೆಂದು ಮೃತ್ಯುದೇವತೆಯನ್ನು ನಿರ್ಮಿಸಿದ ವಿವರ ಬಂದಿದೆ. ಅದರೊಂದಿಗೆ ವಾಯುರ್ಭಿಮೋ ಎಂಬುದಾಗಿ ವಾಯುದೇವರ ಮಹತ್ವವನ್ನು ನಿರೂಪಿಸುವ ಅಪೂರ್ವಶ್ಲೋಕವೂ ಬಂದಿದೆ (ದ್ರೋಣ. ೫೪/೪೭):

---

* ಸ್ವಾನಾಸಿಕಾಛೇದಮಪೀಹ ಸೋಢ್ವಾ ಖಲೋ ನಿರುಂಧೇ ಖಲು ಸತ್ಕ್ರಿಯಾಣಮ್ ।
– ರುಕ್ಮಿಣೀಶವಿಜಯ (೫/೮)

ವಾಯುರ್ಭೀಮೋ ಭೀಮನಾದೋ ಮಹೌಜಾ ಭೇತ್ತಾ ದೇಹಾನ್ ಪ್ರಾಣಿನಾಂ ಸರ್ವಗೋಽಸೌ ।
ನೋ ವಾऽऽವೃತ್ತಿಂ ನೈವ ವೃತ್ತಿಂ ಕದಾಚಿತ್ ಪ್ರಾಪ್ನೋತ್ಯಗ್ರೋऽನಂತತೇಜೋ ವಿಶಿಷ್ಟಃ ॥

ಅರ್ಜುನನ ಶೋಕ - ಜಯದ್ರಥವಧೆಗೆ ಪ್ರತಿಜ್ಞೆ

ನಿಶಮ್ಯ ಪುತ್ರಸ್ಯ ವಧಂ ಭೃಶಾರ್ತಃ
ಪ್ರತಿಶ್ರವಂ ಸೋऽಥ ಚಕಾರ ವೀರಃ ।
ಜಯದ್ರಥಸ್ಯೈವ ವಧೇ ನಿಶಾಯಾಂ
ಸ್ವಪ್ನೇऽನಯತ್ ತಂ ಗಿರಿಶಾಂತಿಕಂ ಹರಿಃ ॥ ೫೧ ॥

ಅ: ತನ್ನ ಪುತ್ರನಾದ ಅಭಿಮನ್ಯುವಿನ ಹತ್ಯೆಯನ್ನು ಕೇಳಿ ಬಹಳ ದುಃಖಿತನಾದ ವೀರನಾದ ಅರ್ಜುನ ಜಯದ್ರಥನ ವಧೆಗೆ ಪ್ರತಿಜ್ಞೆ ಮಾಡಿದ. ಆ ರಾತ್ರಿಯಲ್ಲಿ ಕೃಷ್ಣ ಅವನನ್ನು ಶಿವ ಬಳಿಗೆ ಕರೆದೊಯ್ದ.

ವಿ : ೧) ಅರ್ಜುನ ಆಗ ಮಾಡಿದ ಪ್ರತಿಜ್ಞೆ ಮಾರನೆಯ ದಿನ ಸೂರ್ಯಾಸ್ತವಾಗುವುದರ ಒಳಗೆ ಜಯದ್ರಥನನ್ನು ಸಂಹರಿಸುವೆ ಎಂದು. ತಪ್ಪಿದಲ್ಲಿ ಅಗ್ನಿಪ್ರವೇಶ ಮಾಡುವುದಾಗಿಯೂ ಶಪಥ ತೊಟ್ಟ.

---

೫೧ ನಿಶಮ್ಯ ಪುತ್ರಸ್ಯ ವಧಂ ಭೃಶಾರ್ತಃ ಪ್ರತಿಶ್ರವಂ ಸೋऽಥ ಚಕಾರೇತ್ಯತ್ರ ಪ್ರತಿಜ್ಞಾऽರ್ಜುನಸ್ಯ ಪ್ರತೀಯತೇ । ತತ್ರ ಶ್ವೋಭೂತೇ ಸೂರ್ಯಾಸ್ತಮಯಾತ್ ಪ್ರಾಗೇವೇತಿ ಪೂರಣೀಯಮ್ । ತತ್ಕಾಲೇ ವಧಾಕರಣೇ 'ಅಹಂ ವಹ್ನಿಂ ಪ್ರವೇಕ್ಷ್ಯೇ' ಇತಿ ಚ ವಹ್ನಿಂ ವಿವಕ್ಷನ್ನಿತ್ಯುತ್ತರವಾಕ್ಯಾತ್ । ತಮೋ ವ್ಯಾಪ್ತೇ ಗಗನೇ ಸೂರ್ಯಮಸ್ತಂಗತಂ ಮಾತ್ವಾ ದ್ರೌಣಿಪೂರ್ವಾಃ ಸಮಸ್ತಾಃ ವಿವಿಶ್ರಮುಃ । ಸೈಂಧವಶ್ಚಾರ್ಜುನಸ್ಯ ಹತಪ್ರತಿಜ್ಞಸ್ಯ ಮುಖಂ ಸಮ್ಮೈಕ್ಷತೇತ್ಯುತ್ತರವಾಕ್ಯೇ ಸೂರ್ಯಮಸ್ತಂಗತಂ ಮತ್ವಾ ಸೈಂಧವಃ ಹತಪ್ರತಿಜ್ಞಸ್ಯಾರ್ಜುನಸ್ಯ ಮುಖಂ ಸಮ್ಮೈಕ್ಷತೇತ್ಯುಕ್ತತ್ವಾತ್ । – (ತಿ.)

೫೧. ಸ್ವಪ್ನೇऽನಯತ್ತಂ ಗಿರಿಶಾಂತಿಕಂ ಹರಿರಿತ್ಯತ್ರ ಅಂಶೇನೇತಿ ಶೇಷಃ । ತತಶ್ಚೈವಮಕ್ಷರಾರ್ಥಃ । – (ತಿ.)

೫೧. ಸತ್ಯಂ ವಃ ಪ್ರತಿಜಾನಾಮಿ ಶ್ವೋऽಸ್ಮಿ ಹಂತಾ ಜಯದ್ರಥಮ್ ।
ನ ಚೇದ್ ವಧಭಯಾದ್ ಭೀತೋ ಧಾರ್ತರಾಷ್ಟ್ರಾನ್ ಪ್ರಹಾಸ್ಯತಿ ॥
ನ ಚಾಸ್ಮಾನ್ ಶರಣಂ ಗಚ್ಛೇತ್ ಕೃಷ್ಣಂ ವಾ ಪುರುಷೋತ್ತಮಮ್ ॥
ಯದ್ಯಸ್ಮಿನ್ನ ಹತೇ ಪಾಪೇ ಸೂರ್ಯೋऽಸ್ತಮುಪಯಾಸ್ಯತಿ ।
ಇಹೈವ ಸಂಪ್ರವೇಷ್ಟಾऽಹಂ ಜ್ವಲಿತಂ ಜಾತವೇದಸಮ್ ॥
(ಇತ್ಯಾದಿ ಅರ್ಜುನವಚನ) – ಭಾರತ (ದ್ರೋಣ. ೭೩/೨೦-೪೭)

೫೧. ಅಂಶೇನ ಜೀವಮಾದಾಯ ಕ್ವಚಿದೀಶೋ ಬಹಿರ್ನಯೇತ್ ।
ಸ್ವಪ್ನೇಷು ಫಲ್ಗುನಂ ಯದ್ವತ್ಕೃಷ್ಣಃ ಕೈಲಾಸಮಾನಯತ್ ।
ವಾಸನಾರೂಪಕಾನ್ ಪ್ರಾಯಸ್ತ್ವಂತರೇವ ಪ್ರದರ್ಶಯೇತ್ ।
ಅತೋ ಬಹಿಃ ಕುಲಾಯಾದಿತ್ಯಪಿ ವಾಙ್ ನ ವಿರುಧ್ಯತೇ' ಇತಿ । – ಬೃಹದ್ಭಾಷ್ಯ

೨) ಧರ್ಮರಾಜಾದಿಗಳನ್ನು ವ್ಯೂಹದೊಳಕ್ಕೆ ಪ್ರವೇಶಿಸದಂತೆ ತಡೆಯುವ ಮೂಲಕ ಅಭಿಮನ್ಯುವಿನ ಹತ್ಯೆಗೆ ಕಾರಣನಾದ ಎಂಬ ಭಾವನೆಯಿಂದ ಜಯದ್ರಥವಧೆಗಾಗಿ ಅರ್ಜುನ ಶಪಥತೊಟ್ಟ.

೩) ಆ ಶಪಥವನ್ನು ಪೂರೈಸದಿದ್ದಲ್ಲಿ ತನಗೆ ಬಗೆಬಗೆಯ ಪಾಪಗಳೆಲ್ಲ ಒದಗಲಿ ಎಂದು ನುಡಿದ. ಆ ಪಾಪಗಳ ಪಟ್ಟಿ ಒಂದು ವಿಧದಲ್ಲಿ ಮನುಷ್ಯರು ಮಾಡುವ ಬಗೆಬಗೆಯ ಪಾಪಗಳ ಬಗ್ಗೆ ವಿವರ ನೀಡುವ ಧರ್ಮಶಾಸ್ತ್ರ ವಚನದಂತಿರುವುದು ಗಮನಾರ್ಹ. ಹಗಲಲ್ಲಿ ನಿದ್ರಿಸುವುದು ಮೊದಲಾದವುಗಳು ಮಹಾಪಾಪಗಳು ಎಂಬ ವಿವರಣೆ ಅಲ್ಲಿದೆ.

ಯದ್ಯೇತದೇವಂ ಸಂಗ್ರಾಮೇ ನ ಕುರ್ಯಾಂ ಪುರುಷರ್ಷಭಾಃ ।
ಮಾ ಸ್ಮ ಪುಣ್ಯಕೃತಾಂ ಲೋಕಾನ್ ಪ್ರಾಪ್ನುಯಾಂ ಶೂರಸಮ್ಮತಾನ್ ॥
ಯೇ ಲೋಕಾ ಮಾತೃಹಂತೃಣಾಂ ಯೇ ಚಾಪಿ ಪಿತೃಘಾತಿನಾಮ್ ।
ಗುರುದಾರಗತಾನಾಂ ಯೇ ಪಿಶುನಾನಾಂ ಚ ಯೇ ಸದಾ ॥
ಸಾಧೂನಸೂಯತಾಂ ಯೇ ಚ ಯೇ ಚಾಪಿ ಪರಿವಾದಿನಾಮ್ ।
ಯೇ ಚ ನಿಕ್ಷೇಪಹರ್ತೃಣಾಂ ಯೇ ಚ ವಿಶ್ವಾಸಘಾತಿನಾಮ್ ॥
ಭುಕ್ತಪೂರ್ವಾಂ ಸ್ತ್ರಿಯಂ ಯೇ ಚ ವಿಂದತಾಮಫಶಂಸಿನಾಮ್ ।
ಬ್ರಹ್ಮಘ್ನಾನಾಂ ಚ ಯೇ ಲೋಕಾ ಯೇ ಚ ಗೋಘಾತಿನಾಮಪಿ ॥
ಪಾಯಸಂ ವಾ ಯವಾನ್ನಂ ವಾ ಶಾಕಂ ಕೃಸರಮೇವ ವಾ ।
ಸಂಯಾವಾಪೂಪಮಾಂಸಾನಿ ಯೇ ಚ ಲೋಕಾ ವೃಥಾऽಶ್ನತಾಮ್ ॥
ತಾನನ್ವಾಯಾಧಿಗಚ್ಛೇಯಂ ನ ಚೇದ್ಧನ್ಯಾಂ ಜಯದ್ರಥಮ್ ।
ವೇದಾಧ್ಯಾಯಿನಮತ್ಯರ್ಥೇ ಸಂಶಿತಂ ವಾ ದ್ವಿಜೋತ್ತಮಮ್ ॥
ಅವಮನ್ಯಮಾನೋ ಯಾನ್ ಯಾತಿ ವೃದ್ಧಾನ್ ಸಾಧೂನ್ ಗುರೂಂಸ್ತಥಾ ।
ಸ್ಪೃಶತೋ ಬ್ರಾಹ್ಮಣಂ ಗಾಂ ಚ ಪಾದೇನಾಗ್ನಿಂ ಚ ಯಾ ಭವೇತ್ ॥
ಯಾऽಪ್ಸು ಶ್ಲೇಷ್ಮ ಪುರೀಷಂ ಚ ಮೂತ್ರಂ ವಾ ಮುಂಚತಾಂ ಗತಿಃ ।
ತಾಂ ಗಚ್ಛೇಯಂ ಗತಿಂ ಕಷ್ಟಾಂ ನ ಚೇದ್ಧನ್ಯಾಂ ಜಯದ್ರಥಮ್ ॥
ನಗ್ನಸ್ಯ ಸ್ನಾಯಮಾನಸ್ಯ ಯಾ ಚ ವಂಧ್ಯಾऽತಿಥೇರ್ಗತಿಃ ।
ಉತ್ಕೋಚಿನಾಂ ಮೃಷೋತ್ಕೀನಾಂ ವಂಚಕಾನಾಂ ಚ ಯಾ ಗತಿಃ ॥
ಆತ್ಮಾಪಹಾರಿಣಾಂ ಯಾ ಚ ಯಾ ಚ ಮಿಥ್ಯಾಭಿಶಂಸಿನಾಮ್ ।
ಭೃತ್ಯೈಃ ಸಂದಿಶ್ಯಮಾನಾನಾಂ ಪುತ್ರದಾರಾಶ್ರಿತೈಸ್ತಥಾ ॥
ಅಸಂವಿಭಜ್ಯ ಕ್ಷುದ್ರಾಣಾಂ ಯಾ ಗತಿರ್ಮಿಷ್ಟಮಶ್ನತಾಮ್ ।
ತಾಂ ಗಚ್ಛೇಯಂ ಗತಿಂ ಘೋರಾಂ ನ ಚೇದ್ಧನ್ಯಾಂ ಜಯದ್ರಥಮ್ ॥
ಸಂಶ್ರಿತಂ ಚಾಪಿ ಯಸ್ತ್ಯಕ್ತ್ವಾ ಸಾಧುಂ ತದ್ವಚನೇ ರತಮ್ ।
ನ ಬಿಭರ್ತಿ ನೃಶಂಸಾತ್ಮಾ ನಿಂದತೇ ಚೋಪಕಾರಿಣಮ್ ॥
ಅರ್ಹತೇ ಪ್ರಾತಿವೇಶ್ಯಾಯ ಶ್ರಾದ್ಧಂ ಯೋ ನ ದದಾತಿ ಚ ।
ಅನರ್ಹೇಭ್ಯಶ್ಚ ಯೋ ದದ್ಯಾದ್ ವೃಷಲೀಪತಯೇ ತಥಾ ॥

೪) ಅಂದು ರಾತ್ರಿಯಲ್ಲಿ ಕೃಷ್ಣ ಅರ್ಜುನ ಮಲಗಿದ್ದಾಗ ಅವನನ್ನು ಗಗನಮಾರ್ಗದಲ್ಲಿ ಕೈಲಾಸಕ್ಕೆ ಕರೆದೊಯ್ದು ಶಿವನಿಂದ ವಿಶೇಷವಾದ ಅನುಗ್ರಹವನ್ನು ಮಾಡಿಸಿದ.

೫) ಪಾಶುಪತಾಸ್ತ್ರವನ್ನು ಮತ್ತೊಮ್ಮೆ ಉಪದೇಶಿಸಿದ ಎಂಬ ವಿವರ ಮಹಾಭಾರತದಲ್ಲಿದೆ.

ಮನಸಾ ಚಿಂತಯಾಮಾಸ ತನ್ಮೇ ಸಂಪದ್ಯತಾಮಿತಿ ।
ತಸ್ಯ ತನ್ಮತಮಾಜ್ಞಾಯ ಪ್ರಾದಾತ್ ಪ್ರೀತಃ ವರಂ ಭವಃ ॥
ತಚ್ಚ ಪಾಶುಪತಂ ಘೋರಂ ಪ್ರತಿಜ್ಞಾಯಾಶ್ಚ ಪಾರಣಮ್ ।
ತತಃ ಪಾಶುಪತಂ ದಿವ್ಯಮವಾಪ್ಯ ಪುನರೀಶ್ವರಾತ್ ॥ – ಭಾರತ (೭/೮೧/೨೧,೨೨)

ಮತ್ತೊಮ್ಮೆ ಪಾಶುಪತಾಸ್ತ್ರಪ್ರಾಪ್ತಿ

ಸ್ವಯಮೇವಾಖಿಲಜಗದ್ರಕ್ಷಾದ್ಯಮಿತಶಕ್ತಿಮಾನ್ ।
ಅಪ್ಯಚ್ಯುತೋ ಗುರುದ್ವಾರಾ ಪ್ರಸಾದಕೃದಹಂ ತ್ವಿತಿ ॥ ೫೨ ॥

ಮದ್ಯಪೋ ಭಿನ್ನಮರ್ಯಾದಃ ಕೃತಘ್ನೋ ಭರ್ತೃನಿಂದಕಃ ।
ತೇಷಾಂ ಗತಿಮಿಯಾಂ ಕ್ಷಿಪ್ರಂ ನ ಚೇದ್ಧನ್ಯಾಂ ಜಯದ್ರಥಮ್ ॥
ಭುಂಜಾನಾನಾಂ ತು ಸಮ್ಯೇನ ಉತ್ಸಂಗೇ ಚಾಪಿ ಖಾದತಾಮ್ ।
ಪಾಲಾಶಮಾಸನಂ ಚೈವ ತಿಂದುಕೈರ್ದಂತಧಾವನಮ್ ॥
ಯೇ ಚಾವರ್ಜಯತಾಂ ಲೋಕಾಃ ಸ್ವಪತಾಂ ಚ ತಥೋಷಸಿ ।
ಶೀತಭೀತಾಶ್ಚ ಯೇ ವಿಪ್ರಾ ರಣಭೀತಾಶ್ಚ ಕ್ಷತ್ರಿಯಾಃ ॥
ಏಕಕೂಪೋದಕಗ್ರಾಮೇ ವೇದಧ್ವನಿವಿವರ್ಜಿತೇ ।
ಷಣ್ಮಾಸಂ ತತ್ರ ವಸತಾಂ ತಥಾ ಶಾಸ್ತ್ರಂ ವಿನಿಂದತಾಮ್ ॥
ದಿವಾಮೈಥುನಾನಾಂ ಚಾಪಿ ದಿವಸೇಷು ಚ ಶೇರತೇ ।
ಆಗಾರದಾಹಿನಾಂ ಚೈವ ಗರದಾನಾಂ ಚ ಯೇ ಮತಾಃ ॥
ಅಗ್ನ್ಯಾತಿಥ್ಯವಿಹೀನಾಶ್ಚ ಗೋಪಾನೇಷು ಚ ವಿಘ್ನದಾಃ ।
ರಜಸ್ವಲಾಂ ಸೇವಯಂತಃ ಕನ್ಯಾಂ ಶುಲ್ಕೇನ ದಾಯಿನಃ ॥
ಯಾ ಚ ವೈ ಬಹುಯಾಜಿನಾಂ ಬ್ರಾಹ್ಮಣಾನಾಂ ಶ್ವವೃತ್ತಿನಾಮ್ ।
ಆಸ್ಯಮೈಥುನಿಕಾನಾಂ ಚ ಯೇ ದಿವಾಮೈಥುನೇ ರತಾಃ ॥
ಬ್ರಾಹ್ಮಣಸ್ಯ ಪ್ರತಿಶ್ರುತ್ಯ ಯೋ ವೈ ಲೋಭಾದ್ದದಾತಿ ನ ।
ತೇಷಾಂ ಗತಿಂ ಗಮಿಷ್ಯಾಮಿ ಶ್ವೋ ನ ಹನ್ಯಾಂ ಜಯದ್ರಥಮ್ ॥
ಧರ್ಮಾದಪೇತಾ ಯೇ ಚಾನ್ಯೇ ಮಯಾ ನಾತ್ರಾನುಕೀರ್ತಿತಾಃ ।
ಯೇ ಚಾನುಕೀರ್ತಿತಾಸ್ತೇಷಾಂ ಗತಿಂ ಕ್ಷಿಪ್ರಮವಾಪ್ನುಯಾಮ್ ॥
ಯದಿ ವ್ಯಷ್ಟಾಮಿಮಾಂ ರಾತ್ರಿಂ ಶ್ವೋ ನ ಹನ್ಯಾಂ ಜಯದ್ರಥಮ್ ।
ಇಮಾಂ ಚಾಪ್ಯಪರಾಂ ಭೂಯಃ ಪ್ರತಿಜ್ಞಾಂ ಮೇ ನಿಬೋಧತ ॥ – ಭಾರತ (ದ್ರೋಣ..೭೩/೨೪-೪೬)

ಜ್ಞಾಪಯನ್ ಫಲ್ಗುನಸ್ಯಾಸ್ತ್ರಗುರುಂ ಗಿರಿಶಮಂಜಸಾ ।
ಪ್ರಾಪಯಿತ್ವೈನಮೇವೈತತ್ಪ್ರಸಾದಾದಸ್ತ್ರಮುಲ್ಬಣಮ್ ।
ಚಕ್ರೇ ತದರ್ಥಮೇವಾಸ್ಯ ರಕ್ಷಾಂ ಚಕ್ರೇ ತದಾತ್ಮಿಕಾಮ್ ॥ ೫೩ ॥

ಅ: ಶ್ರೀಹರಿಯು ಸ್ವತಃ ತಾನೇ ಸಕಲ ಜಗತ್ತಿನ ರಕ್ಷಣೆ ಮೊದಲಾದವುಗಳನ್ನು ಮಾಡುವ ಅಪರಿಮಿತ ಶಕ್ತಿಸಂಪನ್ನನಾದರೂ ಗುರುಗಳ ಮೂಲಕವೇ ಅನುಗ್ರಹ ಮಾಡುವೆನು ಎಂದು ತಿಳಿಸಿಕೊಡಲೆಂದು ಅರ್ಜುನನಿಗೆ ಅಸ್ತ್ರಗುರುವಾದ ಶಿವನ ಬಳಿಗೆ ಚೆನ್ನಾಗಿ ಕರೆದೊಯ್ದು ಅವನ ಪ್ರಸಾದದಿಂದ ಉಲ್ಬಣವಾದ ಅಸ್ತ್ರವನ್ನು ಕೊಡಿಸಿದ. ಅವನಿಗೆಂದೇ ವಿಶೇಷವಾದ ಶಿವನ ರಕ್ಷೆಯನ್ನೂ ದೊರಕಿಸಿಕೊಟ್ಟ.

ವಿ : ೧) ಅಂದು ಸ್ವಪ್ನದಲ್ಲಿ ಕೃಷ್ಣ ಅರ್ಜುನನನ್ನು ಮತ್ತೊಮ್ಮೆ ಶಿವನ ಬಳಿಗೆ ಕರೆದೊಯ್ದು ಪಾಶುಪತಾಸ್ತ್ರಪ್ರದಾನ ಮೊದಲಾದವುಗಳನ್ನು ಮಾಡಿಸಿದ. ಅದಕ್ಕೆ ಕಾರಣ ತಾನು ಅಶಕ್ತನೆಂದಲ್ಲ, ವಸ್ತುತಃ ಸರ್ವಶಕ್ತನಾದವನು ಅವನೇ.

೨) ಆದರೂ ಹಾಗೆ ಮಾಡಿದ್ದು ತಾನು ಪ್ರತಿಯೊಬ್ಬರನ್ನೂ ಅವರ ಗುರುಗಳ ಮೂಲಕವೇ ಅನುಗ್ರಹಿಸುವ ಸಂಕಲ್ಪ ಉಳ್ಳವನು ಎಂದು ತೋರಿಸಲು ಮಾತ್ರ. ಇಂದ್ರಾವತಾರನಾದ ಅರ್ಜುನನಿಗೆ ಅಸ್ತ್ರವಿದ್ಯಾಗುರು ಶಿವನೇ ಆದ್ದರಿಂದ ಅರ್ಜುನನನ್ನು ಶಿವನ ಬಳಿಗೆ ಕರೆದೊಯ್ದು ವಿಶೇಷಾನುಗ್ರಹವನ್ನು ಮಾಡಿಸಿದ ಎಂದು ತಿಳಿಯಬೇಕು.

ಹದಿನಾಲ್ಕನೆಯ ದಿನದ ಯುದ್ಧ

ಸಾಂತ್ವಯಿತ್ವಾ ಸುಭದ್ರಾಂ ಚ ಗತ್ವೋಪಪ್ಲಾವ್ಯಮಚ್ಯುತಃ ।
ಯೋಜಯಿತ್ವಾ ರಥಂ ಪ್ರಾತಃ ಸಾರ್ಜುನೋ ಯುದ್ಧಮಭ್ಯಯಾತ್ ॥ ೫೪ ॥

---

೫೩. ಉಲ್ಬಣಂ ವೀರ್ಯವದಸ್ತ್ರಂ ...। .....ಸೈಂಧವಸ್ಯ ಶಿರಃ ತತ್ಪಿತುರಂಕೇ ನಿಧಾಪಯಿತುಂ ವೀರ್ಯವದಸ್ತ್ರಂ ಚಕ್ರ ಇತಿ ಭಾವಃ। – (ಜ.)

೫೩. ನನು ಸ್ವಪ್ನೇ ಆನಯನಂ ನಾಮ ಕಿಂ ವಾಸನಾಮಯಮುತ ಚೈತನ್ಯಸ್ಯ ತತ್ರಾಗಮನಂ ವಿವಕ್ಷಿತಂ? ನಾದ್ಯಃ ತಾವತಾ ರುದ್ರವರಾದೇರವಾಸನಾಮಯತ್ವಾಯೋಗಾತ್। ನ ದ್ವಿತೀಯಃ। ಸ್ವಪ್ನತ್ವಾಯೋಗಾದಿತಿ ಚೇನ್ನ। ಸ್ವಪ್ನೇ ವಾಸನಾಮಯದರ್ಶನಸ್ಯೌತ್ಸರ್ಗಿಕತ್ವೇನಾಂಶೇನ ದೇಹೇऽವಸ್ಥಾನಮಂಶೇನ ರುದ್ರಸಮೀಪಗಮನಂ ಚೇತ್ಯಂಗೀಕಾರಾತ್। ಅತ ಏವ ಬಹಿಃಕುಲಾಯಾದಮೃತಶ್ಚರಿತ್ವೇತಿಬೃಹದಾರಣ್ಯಕಸ್ಯ ಭಾಷ್ಯೇ ಅಂಶೇನ ಜೀವಮಾದಾಯ ಕ್ವಚಿದಿಶೋ ಬಹಿರ್ಗಯೇತ್। ಸ್ವಪ್ನೇಷು ಫಲ್ಗುಗಂ ಯದ್ವತ್ ಕೃಷ್ಣಃ ಕೈಲಾಸಮಾನಯದಿತಿ ಭಗವತಾऽऽಚಾರ್ಯೇಣೇದಮೇವ ದೃಷ್ಟಾಂತೀಕೃತಮಿತಿ ರಹಸ್ಯಮ್ ॥ – (ತಾ.)

ಅ: ಶ್ರೀಕೃಷ್ಣ ಉಪಪ್ಲಾವ್ಯಕ್ಕೆ ತೆರಳಿ ಸುಭದ್ರೆಯನ್ನು ಸಮಾಧಾನಪಡಿಸಿ ಪ್ರಾತಃಕಾಲದಲ್ಲಿ ರಥವನ್ನು ಹೂಡಿ ಅರ್ಜುನನೊಂದಿಗೆ ಯುದ್ಧಕ್ಕೆಂದು ತೆರಳಿದ.

ತತೋಽರ್ಜುನಗೃಹಂ ಗತ್ವಾ ವಾಸುದೇವಃ ಸುದುರ್ಮನಾಃ ।
ಭಗಿನೀಂ ಪುತ್ರಶೋಕಾರ್ತಾಮಾಶ್ವಾಸಯತ ದುಃಖಿತಾಮ್ ॥

– ಭಾರತ (ದ್ರೋಣ. ೭೭/೧೧)

ದ್ರೋಣರಿಂದ ಶಕಟಾಬ್ಜಚಕ್ರವ್ಯೂಹದ ನಿರ್ಮಾಣ

ಶ್ರುತ್ವಾ ಪ್ರತಿಜ್ಞಾಂ ಪುರುಹೂತಸೂನೋ-
ರ್ದುರ್ಯೋಧನೇನಾರ್ಥಿತಃ ಸಿಂಧುರಾಜಮ್ ।
ತ್ರಾತಾಽಸ್ಮ್ಯಹಂ ಸರ್ವಥೇತಿ ಪ್ರತಿಜ್ಞಾಂ
ಕೃತ್ವಾ ದ್ರೋಣೋ ವ್ಯೂಹಮಭೇದ್ಯಮಾತನೋತ್ ॥ ೫೫ ॥

ಅ: ಅರ್ಜುನನ ಪ್ರತಿಜ್ಞೆಯನ್ನು ಕೇಳಿ ದುರ್ಯೋಧನನಿಂದ ಪ್ರಾರ್ಥಿತನಾಗಿ ಸಿಂಧು ರಾಜನನ್ನು ಸರ್ವಥಾ ರಕ್ಷಿಸುವೆ ಎಂದು ದ್ರೋಣರು ಪ್ರತಿಜ್ಞೆಯನ್ನು ಮಾಡಿ ಅಭೇದ್ಯವಾದ ವ್ಯೂಹವನ್ನು ರಚಿಸಿದರು.

ವಿ: ೧) ಅರ್ಜುನನ ಪ್ರತಿಜ್ಞೆಯನ್ನು ಕೇಳಿ ಅಂಜಿದ ಜಯದ್ರಥ ಅಂದೇ ತಾನು ತನ್ನ ದೇಶಕ್ಕೆ ಮರಳುವುದಾಗಿ ದುರ್ಯೋಧನನಿಗೆ ತಿಳಿಸಲು ದುರ್ಯೋಧನ ಅವನನ್ನು ದ್ರೋಣರ ಬಳಿಗೆ ಕರೆತಂದು ಅವರಿಂದ ಅವನಿಗೆ ಅಭಯ ನೀಡಿಸಿದ.

೨) ಜಯದ್ರಥ ಯುದ್ಧರಂಗವನ್ನು ತೊರೆದಲ್ಲಿ ಅರ್ಜುನ ಪ್ರತಿಜ್ಞೆ ಪೂರೈಸುವ ಪ್ರಸಂಗ ಒದಗುವುದಿಲ್ಲ, ಅವನು ಯುದ್ಧರಂಗದಲ್ಲಿ ಇದ್ದರೆ ಮಾತ್ರ ವಧಿಸುವುದಾಗಿ ಅರ್ಜುನ ಪ್ರತಿಜ್ಞೆ ಮಾಡಿದ್ದ.

೩) ಆದರೆ, ಅವನು ಯುದ್ಧರಂಗದಲ್ಲಿ ಇದ್ದು ಅರ್ಜುನನ ಪ್ರತಿಜ್ಞೆ ಭಂಗವಾದರೆ ಅರ್ಜುನ ಅಗ್ನಿಪ್ರವೇಶ ಮಾಡುವನು ಎಂಬ ಯೋಚನೆಯಿಂದ ದುರ್ಯೋಧನ ಜಯದ್ರಥನನ್ನು ಹೋಗಗೊಡದೇ ಯುದ್ಧದಲ್ಲೇ ನಿಲ್ಲಿಸಿಕೊಂಡ ಎಂದು ತಿಳಿಯಬೇಕು. ತನ್ನ ತಂಗಿಯ ಗಂಡನನ್ನು ಬಲಿಪಶು ಮಾಡಿದರೂ ಚಿಂತೆಯಿಲ್ಲ, ಅರ್ಜುನನನ್ನು ಸಾವಿಗೀಡುಮಾಡುವ ತಂತ್ರ ಫಲಿಸಿದರೆ ಸಾಕು ಎಂಬುದು ಅವನ ದುರಾಲೋಚನೆಯಾಗಿತ್ತು ಎಂಬುದು ಸ್ಪಷ್ಟ.

ಸ ದಿವ್ಯಮಗ್ರ್ಯಂ ಶಕಟಾಬ್ಜಚಕ್ರಂ
ಕೃತ್ವಾ ಸ್ವಯಂ ವ್ಯೂಹಮುಖೇ ವ್ಯವಸ್ಥಿತಃ ।
ಪೃಷ್ಠೇ ಕರ್ಣದ್ರೌಣಿಕೃಪೈಃ ಸಶಲ್ಯೈ-
ರ್ಜಯದ್ರಥಂ ಗುಪ್ತಮಧಾತ್ ಪರೈಶ್ಚ ॥ ೫೬ ॥

ಅ: ದ್ರೋಣರು ದಿವ್ಯವೂ, ಶ್ರೇಷ್ಠವೂ ಆದ ಶಕಟಾಬ್ಜಚಕ್ರವ್ಯೂಹವನ್ನು ರಚಿಸಿ ವ್ಯೂಹದ ದ್ವಾರದಲ್ಲಿ ತಾವೇ ನಿಂತರು. ಹಿಂಭಾಗದಲ್ಲಿ ಕರ್ಣ, ಅಶ್ವತ್ಥಾಮ, ಕೃಪ, ಶಲ್ಯ ಮೊದಲಾದವರ ರಕ್ಷಣೆಯಲ್ಲಿ ಜಯದ್ರಥನನ್ನು ನಿಲ್ಲಿಸಿದರು.

ವಿ : ಶಕಟಾಬ್ಜಚಕ್ರವ್ಯೂಹವೆಂದರೆ ಶಕಟ ವ್ಯೂಹ, ಪದ್ಮವ್ಯೂಹ ಮತ್ತು ಚಕ್ರವ್ಯೂಹಗಳೆಂಬ ಮೂರು ವ್ಯೂಹಗಳ ಸಂಗಮ. ಮೊದಲಿಗೆ ಶಕಟ ವ್ಯೂಹ, ಅದರೊಳಗೆ ಪದ್ಮವ್ಯೂಹ, ಅದರೊಳಗೆ ಚಕ್ರವ್ಯೂಹ. ಹೀಗೆ ವ್ಯೂಹತ್ರಯಗಳನ್ನು ನಿರ್ಮಿಸಿದ್ದು ದ್ರೋಣರ ಕೌಶಲ. ಹಿಂದಿನ ದಿನ ಅವರು ನಿರ್ಮಿಸಿದ್ದು ಬರೀ ಪದ್ಮವ್ಯೂಹವಾಗಿದ್ದರೆ, ಅಂದು ನಿರ್ಮಿಸಿದ್ದು ಇಂತಹ ವಿಚಿತ್ರವಾದ ವ್ಯೂಹ–ವಾಗಿತ್ತು

ದೀರ್ಘೋ ದ್ವಾದಶ ಗವ್ಯೂತಿಃ ಪಶ್ಚಾರ್ಧೇ ಪಂಚ ವಿಸ್ತೃತಃ ।
ವ್ಯೂಹಸ್ತು ಚಕ್ರಶಕಟೋ ಭಾರದ್ವಾಜೇನ ನಿರ್ಮಿತಃ ॥ – ಭಾರತ (೭/೮೭/೨೨)

---

೫೬. ಶಕಟಾಬ್ಜಚಕ್ರಮಿತ್ಯತ್ರ ಬಹಿಃ ಶಕಟಾಕಾರಃ ಅಂತಶ್ಚಕ್ರಾಕಾರಃ ತಯೋರ್ಮಧ್ಯೇ ಪದ್ಮಾಕಾರ ಇತಿ ವ್ಯೂಹ-ತ್ರಯೇಣ ಏಕತ್ರೈವ ನಿರ್ಮಿತಮಿತಿ ಜ್ಞೇಯಮ್ ॥ – (ವಾ.)

೫೬ ಶಕಟಾಬ್ಜಚಕ್ರಂ ಶಕಟಚಕ್ರೇಣ ಯುತಮಬ್ಜಚಕ್ರಮಿತ್ಯರ್ಥಃ । ತಥಾ ಚೋಕ್ತಂ–

ವ್ಯೂಹಂ ಸಚಕ್ರಂ ... ಭಾರದ್ವಾಜೋ ಽಕರೋನ್ನೃಪ ।
ಗಜಾಶ್ಚ ರಥಪತ್ಯಾದ್ಯೈಃ ದ್ರೋಣೇನ ಪಿಹಿತಸ್ತ್ವಯಮ್ ॥
ತಸ್ಯಾರ್ಧೇ ಸ ಚ ಪದ್ಮಸ್ತು ಗರ್ಭವ್ಯೂಹಃ ಪುನಃ ಕೃತಃ ।
ಸೂಚೀ ಪದ್ಮಸುಮಧ್ಯೇ ಚ ದೃಢವ್ಯೂಹೇ ಜಯದ್ರಥಃ ॥
ಏವಮೇತನ್ಮಹಾವ್ಯೂಹಂ ವ್ಯೂಹ್ಯ ದ್ರೋಣೋ ವ್ಯವಸ್ಥಿತಃ ।
ಶಕಟಸ್ಯ ಪುನಸ್ತುಂಡೇ ಭಾರದ್ವಾಜೋ ವ್ಯವಸ್ಥಿತಃ ॥
ಇತ್ಯಾದಿದ್ರೋಣಪರ್ವಣಿ ॥ – (ವಿ.)

೫೬. ಪಶ್ಚಾರ್ಧೇ ತಸ್ಯ ಪದ್ಮಸ್ತು ಗರ್ಭವ್ಯೂಹ್ವಃ ಸುದುರ್ಭದಃ ।
ಸೂಚೀ ಪದ್ಮಸ್ಯ ಗರ್ಭಸ್ಥೋ ಗೂಢೋ ವ್ಯೂಹಃ ಕೃತಃ ಪುನಃ ॥ – ಭಾರತ (ದ್ರೋಣ. ೮೭/೨೪)

ಅರ್ಜುನನಿಂದ ಯುದ್ಧಾರಂಭ

ಅಥಾರ್ಜುನೋ ದಿವ್ಯರಥೋಪರಿ ಸ್ಥಿತಃ
ಸುರಕ್ಷಿತಃ ಕೇಶವೇನಾವ್ಯಯೇನ ।
ವಿಜಿತ್ಯ ದುರ್ಮರ್ಷಣಮಗ್ರತೋಽಭ್ಯಯಾದ್
ದ್ರೋಣಂ ಸುಧನ್ವಾ ಗುರುಮುಗ್ರಪೌರುಷಃ ॥ ೫೭ ॥

ಅ: ಬಳಿಕ ದಿವ್ಯರಥದ ಮೇಲೆ ಕುಳಿತು ಅವ್ಯಯನಾದ ಶ್ರೀಕೃಷ್ಣನಿಂದ ಸಂರಕ್ಷಿತನಾಗಿ ಉಗ್ರಪರಾಕ್ರಮಿಯೂ, ಶ್ರೇಷ್ಠ ಧನುರ್ಧಾರಿಯೂ ಆದ ಅರ್ಜುನ ಯುದ್ಧಕ್ಕೆ ನಡೆದ. ಮೊದಲಿಗೆ ದುರ್ಮರ್ಷಣನನ್ನು ಸೋಲಿಸಿ ಅನಂತರ ಗುರುವಾದ ದ್ರೋಣರನ್ನು ಎದುರಿಸಿದ.

ವಿ: ದುರ್ಮರ್ಷಣ ಕೌರವರಲ್ಲಿ ಒಬ್ಬ. ಈ ಹಿಂದೆ ಶಿಖಂಡಿಯನ್ನು ಎದುರಿಸಿದ್ದ (೨೫/೧೨೦).

ದ್ರೋಣರಿಗೆ ವಂದಿಸಿ ವ್ಯೂಹಪ್ರವೇಶ

ಪ್ರದಕ್ಷಿಣೀಕೃತ್ಯ ತಮಾಶ್ವಗಾತ್ ತತಃ
ಕಾಲಾತ್ಯಯಂ ತ್ವೇವ ವಿಶಂಕಮಾನಃ ।
ರಥಂ ಮನೋವೇಗಮಥಾನಯದ್ಧರಿ-
ರ್ಯಥಾ ಶರಾಃ ಪೇತುರಮುಷ್ಯ ಪೃಷ್ಠತಃ ॥ ೫೮ ॥

ಅ: ಕಾಲ ಮೀರೀತೆಂದು ಶಂಕಿಸಿ ಅರ್ಜುನ ಕೂಡಲೇ ದ್ರೋಣರಿಗೆ ಪ್ರದಕ್ಷಿಣೆ ಮಾಡಿ ಮುಂದೆ ತೆರಳಿದ. ಶ್ರೀಕೃಷ್ಣ ಅರ್ಜುನನ ಬಾಣಗಳು ಅವನ ಹಿಂದೆ ಬೀಳುವಂತೆ ಮನೋವೇಗದಲ್ಲಿ ರಥವನ್ನು ಓಡಿಸಿದ.

ವಿ : ೧) ದ್ರೋಣರೊಂದಿಗೆ ಯುದ್ಧವನ್ನು ಮಾಡುತ್ತಾ ನಿಂತಲ್ಲಿ ತಾನು ವಿಧಿಸಿಕೊಂಡಿರುವ ಸೂರ್ಯಾಸ್ತದ ವೇಳೆಯೊಳಗೆ ಜಯದ್ರಥನ ವಧೆ ಸಾಧ್ಯವಾಗಲಾರದು ಎಂದು ಭಾವಿಸಿ ಅರ್ಜುನ

---

೫೮. ಯಥಾ ಶರಾಃ ಪೇತುರಮುಷ್ಯ ಪೃಷ್ಠತ ಇತ್ಯತ್ರ ಅಮುಷ್ಯ = ಅರ್ಜುನಸ್ಯ ಪ್ರಯುಕ್ತಾಃ ಶರಾಃ ಪೃಷ್ಠತಃ = ಅಮುಷ್ಯ ಅರ್ಜುನಸ್ಯ ಪೃಷ್ಠತಃ ಯಥಾ ಪೇತುಃ ತಥಾ ರಥಮನಯದಿತಿ ಯೋಜನಾ ॥ – (ವಾ.)

೫೮. ರಥಂ ಮನೋವೇಗಮಿತಿ । ಯಥಾ ದ್ರೋಣಮುಕ್ತಾರ್ಜುನಮುಕ್ತಾಶ್ಚ ಶರಾಃ ಯಥಾಮುಷ್ಯಾರ್ಜುನಸ್ಯ ಪೃಷ್ಠತಃ ಪೇತುಃ ತಥಾನಯದಿತ್ಯರ್ಥಃ । – (ವ್ಯಾ.)

ಅವರಿಗೆ ಪ್ರದಕ್ಷಿಣೆ ಮಾಡಿ ಶಿಷ್ಯರಾದ ತಾನು ಅವರಿಗೆ ಮಗನಿದ್ದಂತೆ ಎಂದು ತಿಳಿಸಿ, ಅಲ್ಲಿಂದ ಮುಂದೆ ಹೊರಟು ಕುರುಸೇನೆಯೊಳಗೆ ನುಗ್ಗಿದನು (ದ್ರೋಣ. ೯೧/೩೩, ೩೪) :

ತತಃ ಪ್ರದಕ್ಷಿಣಂ ಕೃತ್ವಾ ದ್ರೋಣಂ ಪ್ರಾಯಾನ್ಮಹಾಭುಜಮ್ ।...
ಗುರುರ್ಭವಾನ್ ನ ಮೇ ಶತ್ರುಃ ಶಿಷ್ಯಃ ಪುತ್ರಸಮೋಽಸ್ತಿ ತೇ ।
ನ ಚಾಸ್ತಿ ಸ ಪುಮಾನ್ ಲೋಕೇ ಯಸ್ತ್ವಾಂ ಯುಧಿ ಪರಾಜಯೇತ್ ॥

– ಭಾರತ(ದ್ರೋಣ. ೯೧/೩೩, ೩೪)

ಇದರಿಂದಾಗಿ ಪ್ರಸನ್ನರಾದ ದ್ರೋಣರು ಅವನಿಗೆ ವ್ಯೂಹದೊಳಗೆ ಪ್ರವೇಶಿಸಲು ಅವಕಾಶ ನೀಡಿದರು ಎಂದು ತಿಳಿಯಬೇಕು.

೨) ಕೃಷ್ಣ ರಥ ಓಡಿಸಿದ ಪರಿಯನ್ನು ಇಲ್ಲಿ ವರ್ಣಿಸಿರುವ ರೀತಿ ಅತ್ಯಂತ ಅಪೂರ್ವ–ವಾದುದು. ಕೃಷ್ಣನ ರಥ ಓಡಿಸುವ ವೇಗ ಅರ್ಜುನನ ಬಾಣಗಳ ವೇಗಕ್ಕಿಂತ ಮಿಗಿಲಾಗಿತ್ತು. ಮನೋವೇಗದಲ್ಲಿ ಕೃಷ್ಣ ರಥ ಓಡಿಸಿದ್ದರಿಂದ ಅರ್ಜುನನ ಬಾಣಗಳು ಹಿಂದುಳಿದು ರಥವೇ ಮುಂದೆ ಸಾಗುತ್ತಿತ್ತು ಎಂದರ್ಥ.

೩) ಇದು ವಸ್ತುಸ್ಥಿತಿಯಾಗಿರುವಂತೆ ಅಪೂರ್ವಕಾವ್ಯವೂ ಆಗಿದೆ ಎಂಬುದನ್ನು ಗಮನಿಸಬೇಕು.

ಅರ್ಜುನನಿಂದ ಕೃತವರ್ಮನ ಪರಾಭವ

ವಿಜೆತ್ಯ ಹಾರ್ದಿಕ್ಯಮಥಾಪ್ರಯತ್ನತಃ
ಸ ಇಂದ್ರಸೂನುಃ ಪ್ರವಿವೇಶ ತದ್ಬಲಮ್ ।
ವಿಲೋಲಯಾಮಾಸ ಚ ಸಾಯಕೋತ್ತಮೈ–
ರ್ಯಥಾ ಗಜೇಂದ್ರೋ ನಲಿನೀಂ ಬಲೋದ್ಧತಃ ॥ ೫೯ ॥

ಅ: ಬಳಿಕ ಕೃತವರ್ಮನನ್ನು ಅನಾಯಾಸದಿಂದ ಸೋಲಿಸಿ ಅರ್ಜುನ ಆ ಸೈನ್ಯವನ್ನು ಪ್ರವೇಶಿಸಿದ. ಉತ್ತಮ ಬಾಣಗಳಿಂದ ಬಲೋದ್ಧತವಾದ ಗಜೇಂದ್ರ ಪದ್ಮಗಳ ಕೊಳವನ್ನು ಹೇಗೋ ಹಾಗೆ ಶತ್ರುಸೈನ್ಯವನ್ನು ಕದಡಿ ಹಾಕಿದ.

ವಿ : ಅರ್ಜುನ ಶತ್ರುಸೈನ್ಯವನ್ನು ಉಲ್ಲೋಲಕಲ್ಲೋಲಗೊಳಿಸಿದ ರೀತಿಯನ್ನು ಪದ್ಮಗಳ ಕೊಳ–ವನ್ನು ಮದ್ದಾನೆ ಕದಡುವ ರೀತಿಗೆ ಹೋಲಿಸಿರುವುದು ಮಹಾಭಾರತದಲ್ಲಿಯ ವಿವರವೇ ಆಗಿದೆ :

ಲೋಡಯಂತಮನೀಕಾನಿ ದ್ವಿಪಂ ಪದ್ಮಸರೋ ಯಥಾ ।
ನಾಶಕ್ನುವನ್ ವಾರಯಿತುಂ ಪಾರ್ಥಂ ಕ್ಷತ್ರಿಯಪುಂಗವಾಃ ॥

– ಭಾರತ (ದ್ರೋಣ. ೯೩/೩೦)

ಸ ಉಚ್ಚಕಾಶೇऽತಿರಥೋ ರಥೋತ್ತಮೇ
ಸವಾಸುದೇವೋ ಹರಿಣಾ ಯಥೇಂದ್ರಃ ।
ಚಕರ್ತ ಚೋಗ್ರೋ ದ್ವಿಷತಾಂ ಶಿರಾಂಸಿ
ಶರೈಃ ಶರೀರಾಂತಕರೈಃ ಸಮಂತತಃ ॥ ೬೦ ॥

ಅ: ಅತಿರಥನಾದ ಅರ್ಜುನ ಕೃಷ್ಣನೊಂದಿಗೆ ಶ್ರೇಷ್ಠ ರಥದಲ್ಲಿ ಉಪೇಂದ್ರನ ಜೊತೆಗಿರುವ ದೇವೇಂದ್ರನಂತೆ ಕಂಗೊಳಿಸಿದ. ಶತ್ರುಭಯಂಕರನಾದ ಅವನು ದೇಹನಾಶ ಮಾಡುವಂತಹ ಬಾಣಗಳಿಂದ ಶತ್ರುಗಳ ತಲೆಗಳನ್ನು ಎಲ್ಲೆಡೆಗಳಿಂದಲೂ ಕತ್ತರಿಸಿಹಾಕಿದ.

ವಿ: ಉಪೇಂದ್ರ ಇಂದ್ರರೇ ಆದ ಕೃಷ್ಣಾರ್ಜುನರನ್ನು ಉಪೇಂದ್ರ, ಇಂದ್ರರಿಗೆ ಹೋಲಿಸಿರು–ವುದು ಇಲ್ಲಿಯ ವಿಶೇಷ. ಒಂದು ರೀತಿಯಲ್ಲಿ ಇದು ಅನನ್ವಯಾಲಂಕಾರವೇ ಆಗಿದೆ.

ದೃಢಾಯು ಅಚ್ಯುತಾಯು ಮೊದಲಾದವರ ವಧೆ

ದೃಢಾಯುಮಚ್ಯುತಾಯುಂ ಚ ಹತ್ವಾ ವಿಂದಾನುವಿಂದಕೌ ।
ಶರಾಭ್ಯಾಂ ಪ್ರೇಷಯಾಮಾಸ ಯಮಾಯ ವಿಜಯೋ ಯುಧಿ ॥ ೬೧ ॥

ಅ: ಎರಡು ಬಾಣಗಳಿಂದ ದೃಢಾಯು, ಅಚ್ಯುತಾಯುಗಳನ್ನು ಸಂಹರಿಸಿ ಮತ್ತೆರಡು ಬಾಣಗಳಿಂದ ವಿಂದ ಮತ್ತು ಅನುವಿಂದರನ್ನು ಅರ್ಜುನ ಯುದ್ಧದಲ್ಲಿ ಯಮನ ಬಳಿಗೆ ಅಟ್ಟಿದ.

ವಿ: ಇಲ್ಲಿ ಅರ್ಜುನನಿಂದ ಹತರಾದ ವಿಂದಾನುವಿಂದರು ಅವಂತೀದೇಶದ ರಾಜರು. ವಿಂದಾನುವಿಂದ ಎಂಬ ದುರ್ಯೋಧನನ ತಮ್ಮಂದಿರು ಭೀಮನಿಂದ ಹತರಾಗುವರು. ಅದೇ ಹೆಸರಿನ ಕೇಕಯರು ಸಾತ್ಯಕಿಯಿಂದ ಹತರಾಗುವರು ಎಂಬುದನ್ನೂ ಗಮನಿಸಬೇಕು.

ಶ್ರುತಾಯುಧನ ವಧೆ

ಸುದಕ್ಷಿಣಂ ಚ ಕಾಂಬೋಜಂ ನಿಹತ್ಯಾಂಬಷ್ಠಮೇವ ಚ ।
ಶ್ರುತಾಯುಧಂ ನದೀಜಾತಂ ವರುಣಾದಾಸಸಾದ ಹ ।
ಯಸ್ಯಾದಾದ್ವರುಣೋ ದಿವ್ಯಾಮಮೋಘಾಂ ಮಹತೀಂ ಗದಾಮ್ ॥ ೬೨ ॥

---

೬೦. ಹರಿಣಾ ಯಥೇಂದ್ರ ಇತ್ಯತ್ರ ಹರಿಣಾ= ಬಲಿಮದಾಪಹಾರಿಣಾ ವಾಮನೇನ ॥ –(ವಾ.)

೬೦. ಪಾರ್ಥಮುಕ್ತಶರಾದಪ್ಯಗ್ರೇ ರಥೋऽಗಾದಿತಿ ಭಾವಃ । –(ಜ.)

೬೧. ಶರಾಭ್ಯಾಂ ಪ್ರೇಷಯಮಾಸೇತ್ಯತ್ರ ಶರಾಭ್ಯಾಂ ದೃಢಾಯುಮಚ್ಯುತಾಯುಂ ಚ ಹತ್ವಾ ಪುನಶ್ಶರಾಭ್ಯಾಂ ವಿಂದಾನುವಿಂದಕೌ ಯಮಾಯ ಪ್ರೇಷಯಾಮಾಸೇತಿ ಆವೃತ್ತ್ಯಾಯೋಜನಾ ॥ –(ವಾ.)

ಅ: ಅರ್ಜುನ ಕಾಂಬೋಜದೇಶದ ಸುದಕ್ಷಿಣನನ್ನು, ಅಂಬಷ್ಠನನ್ನು ಸಂಹರಿಸಿ, ವರುಣನಿಂದ ನದಿಯೊಂದರಲ್ಲಿ ಜನಿಸಿದ ಶ್ರುತಾಯುಧನನ್ನು ಎದುರಿಸಿದ. ಅವನಿಗೆ ವರುಣ ದಿವ್ಯವೂ, ಅಮೋಘವೂ ಆದ ದೊಡ್ಡ ಗದೆಯೊಂದನ್ನು ನೀಡಿದ್ದ.

ಎ : ಶ್ರುತಾಯುಧ ಪರ್ಣಾಶ ಎಂಬ ನದಿಯ ಪುತ್ರ ಎಂದು ಮಹಾಭಾರತದಲ್ಲಿದೆ :

ವರುಣಸ್ಯಾತ್ಮಜೋ ವೀರಃ ಸ ತು ರಾಜಾ ಶ್ರುತಾಯುಧಃ ।
ಪರ್ಣಾಶಾ ಜನನೀ ಯಸ್ಯ ಶೀತತೋಯಾ ಮಹಾನದೀ ॥ – (೭/೯೨/೪೪,೪೫)

ಸ ತು ತೇನ ಶರೈಸ್ತೀಕ್ಷ್ಣೈರರ್ಪಿತೋ ವಿರಥಂ ಕ್ಷಣಾತ್ ।
ಚಕಾರ ಪಾರ್ಥಸ್ಯ ರಥಮಾರುಹ್ಯಾರಿಧರಾಯ ತಾಮ್ ॥ ೬೩ ॥

ಗದಾಂ ಚಿಕ್ಷೇಪ ಸಾ ತಸ್ಯ ವಾರುಣೇಃ ಶಿರ ಏವ ತು ।
ಬಿಭೇದ ಶತಧಾ ಶೀರ್ಣಮಸ್ತಿಷ್ಕಃ ಸೋಽಪತದ್ಭುವಿ ॥ ೬೪ ॥

ಅ: ಅರ್ಜುನನ ಮೇಲೆ ಅವನು ತೀಕ್ಷ್ಣವಾದ ಬಾಣಗಳನ್ನು ಪ್ರಯೋಗಿಸಿದಾಗ ಅರ್ಜುನ ಅವನನ್ನು ಕ್ಷಣಮಾತ್ರದಲ್ಲಿ ವಿರಥನನ್ನಾಗಿ ಮಾಡಿದ. ಅವನು ಅರ್ಜುನನ ರಥವನ್ನು ಏರಿ ಚಕ್ರಪಾಣಿಯಾದ ಕೃಷ್ಣನ ಮೇಲೆ ಆ ಗದೆಯನ್ನು ಅಪ್ಪಳಿಸಿದ. ಅದು ವರುಣಪುತ್ರನಾದ ಆ ಶ್ರುತಾಯುಧನ ತಲೆಯನ್ನೇ ಒಡೆಯಿತು; ನೂರು ಹೋಳುಗಳಾಗಿ ತಲೆ ಸಿಡಿದು ಅವನು ನೆಲದ ಮೇಲೆ ಬಿದ್ದ.

ಅಯುಧ್ಯಂತಂ ಸ್ವಗದಯಾ ಯದಿ ತಾಡಯಸಿ ಸ್ವಯಮ್ ।
ತಯಾ ವಿಶೀರ್ಣಮಸ್ತಿಷ್ಕೋ ಮರಿಷ್ಯಸಿ ನ ಸಂಶಯಃ ।
ಅಮೋಘಾ ಚಾನ್ಯಥಾ ಸೇಯಂ ಗದಾ ತವ ಭವಿಷ್ಯತಿ ॥ ೬೫ ॥

ಅ: ಯುದ್ಧ ಮಾಡದಿರುವವನನ್ನು ನಿನ್ನ ಗದೆಯಿಂದ ಹೊಡೆದೆಯಾದಲ್ಲಿ ಅದರಿಂದ ನಿನ್ನ ತಲೆಯೇ ಒಡೆದು ಸಾಯುವಿ, ಸಂಶಯವಿಲ್ಲ. ಇಲ್ಲವಾದಲ್ಲಿ ಈ ಗದೆ ನಿನಗೆ ಅಮೋಘವೇ ಆಗುವುದು.

---

೬೨. ಶಾಪಾತ್ ಶ್ರುತಾಯುಧೋ ರಾಜಾ ಜಜ್ಞೇ ಪೂರ್ವಂ ತು ವಾರುಣಃ । – ಇತಿ ಅಂಶಾವತಾರೇ (೭೭)

೬೩. ತದುಕ್ತಂ ದ್ರೋಣಪರ್ವಣಿ – 'ತತಃ ಕಾಂಬೋಜರಾಜಸ್ಯ ಪುತ್ರಃ ಶೂರಃ ಸುದಕ್ಷಿಣ' ಇತಿ। – (ಜ.)

ಇತ್ಯಬ್ರವೀತ್ ತಂ ವರುಣಃ ಪುರಾ ತೇನ ಸ ಕೇಶವೇ ।
ಅಯುಧ್ಯತಿ ಗದಾಕ್ಷೇಪಾತ್ ತಯಾ ಶೀರ್ಣಶಿರಾ ಅಭೂತ್ ॥ ೬೬ ॥

ಅ: ಹೀಗೆ ಶ್ರುತಾಯುಧನಿಗೆ ವರುಣ ತಿಳಿಸಿದ್ದ. ಯುದ್ಧ ಮಾಡದಿದ್ದ ಕೃಷ್ಣನ ಮೇಲೆ ಎಸೆದದ್ದರಿಂದ ಆ ಗದೆಯಿಂದ ಅವನ ತಲೆಯೇ ಒಡೆಯಿತು.

ವಿ : ೧) ಪರ್ಣಾಶಾ ನದಿಯ ಅಪೇಕ್ಷೆಯಂತೆ ವರುಣ ಅವನಿಗೆ ಗದೆಯೊಂದನ್ನು ನೀಡಿ ಅದನ್ನು ಯುದ್ಧ ಮಾಡದವನ ಮೇಲೆ ಸರ್ವಥಾ ಪ್ರಯೋಗಿಸಬಾರದು, ಹಾಗೆ ಮಾಡಿದರೆ ಅದು ತಿರುಗಿ ಇವನನ್ನೇ ಹೊಡೆಯುವುದು, ಇಲ್ಲವಾದಲ್ಲಿ ಇದು ಅಮೋಘವಾದ ಗದೆಯಾಗುವುದು ಎಂದು ಹೇಳಿದ್ದ.

೨) ಅಮೋಘವಾದ ಗದೆ ಹೀಗೆ ಆತ್ಮಘಾತಕವಾದದ್ದು ಶ್ರುತಾಯುಧನ ದುರಂತ. ಎಂತಹ ಅಮೋಘ ವರಗಳೂ ಸಹ ಅಯೋಗ್ಯರ ಪಕ್ಷವನ್ನು ಸೇರಿದರೆ ಆತ್ಮಘಾತಕವಾಗುವುದು ನಿಶ್ಚಿತ ಎಂಬುದಕ್ಕೆ ಇದು ನಿದರ್ಶನ.

೩) ಜರಾಸಂಧನಿಗೆ ಶಿವ ನೀಡಿದ್ದ ಗದೆ, ಅವನ ತಾಯಿ ಜರೆಯ ಹತ್ಯೆಗೆ ಕಾರಣವಾದರೆ, ವರುಣ ನೀಡಿದ್ದ ಗದೆ ಶ್ರುತಾಯುಧನ ಸಾವಿಗೇ ಕಾರಣವಾಯಿತು. ಅವರಿಬ್ಬರೂ ಗದೆಯನ್ನು ಕೃಷ್ಣನ ಮೇಲೆಯೇ ಪ್ರಯೋಗಿಸಿ ದುರಂತ ಕಂಡವರು ಎಂಬುದು ವಿಶೇಷ.

ದುರ್ಯೋಧನನಿಂದ ದ್ರೋಣನಿಂದೆ

ಹತೇಷು ವೀರೇಷು ನಿಜೇಷು ಸಂಘಶೋ
ವಿದ್ರಾವಿತೇಷ್ವಾಲುಳಿತೇ ಚ ಸೈನ್ಯೇ ।
ದುರ್ಯೋಧನೋ ದ್ರೋಣಮುಪೇತ್ಯ ದೀನ-
ಮುವಾಚ ಹಾ ಪಾರ್ಥ ಉಪೇಕ್ಷಿತಸ್ತ್ವಯಾ ॥ ೬೭ ॥

ಅ: ತನ್ನ ಕಡೆಯ ವೀರರು ಗುಂಪುಗುಂಪಾಗಿ ಸಾಯುತ್ತಿದ್ದಂತೆ, ಕದಡಿದ ತನ್ನ ಸೇನೆ ಹಿಂಡುಹಿಂಡಾಗಿ ದೂರಕ್ಕೆ ಪಲಾಯನ ಮಾಡುತ್ತಿದ್ದಂತೆ ದುರ್ಯೋಧನ ದ್ರೋಣರ ಬಳಿಗೆ ತೆರಳಿ ದೈನ್ಯದಿಂದ ನುಡಿದ 'ಅಯ್ಯೋ! ನೀವು ಪಾರ್ಥನನ್ನು ಉಪೇಕ್ಷಿಸಿದಿರಿ'.

---

೬೬. ಅಯುಧ್ಯತಿ ನ ಮೋಕ್ತವ್ಯಾ ಸಾ ತ್ವಯ್ಯೇವ ಪತೇದಿತಿ । ಹನ್ಯಾದೇಷಾ ಪ್ರತೀಪಂ ಹಿ ಪ್ರಯೋಕ್ತಾರಮಪಿ ಪ್ರಭೋ ॥ – ಭಾರತ (ದ್ರೋಣ. ೯೨/೫೧)

ವಿ : ೧) ದುರ್ಯೋಧನ ದ್ರೋಣರ ಬಳಿಗೆ ತೆರಳಿ ಅರ್ಜುನನನ್ನು ತಡೆಯದೇ ಬಿಟ್ಟಿದ್ದಕ್ಕಾಗಿ ಕ್ರೂರ ವಚನಗಳಿಂದ ನಿಂದಿಸಿದ.

೨) ಹೀಗೆ ಪುನಃ ಪುನಃ ಗುರುಗಳನ್ನು ನಿಂದಿಸುವುದು ಸಹ ದುರ್ಯೋಧನನ ಅಸುರ–ಸ್ವಭಾವಕ್ಕೆ ದ್ಯೋತಕ.

ದ್ರೋಣರು ನೀಡಿದ ಮಂತ್ರಕವಚ

ಇತೀರಿತೇऽಭೇದ್ಯಮಮುಷ್ಯ ವರ್ಮ
ಬಧ್ವಾ ಮಹಾಮಂತ್ರಬಲಾತ್ ಸ ವಿಪ್ರಃ ।
ಜಗಾದ ಯೇನೈವ ಬಲೇನ ಪಾರ್ಥೈ–
ರ್ವಿರುಧ್ಯಸೇ ತೇನ ಹಿ ಯಾಹಿ ಫಲ್ಗುನಮ್ ॥ ೬೮ ॥

ಅ: ದುರ್ಯೋಧನನು ಹೀಗೆನ್ನಲು ಮಹಾಮಂತ್ರದ ಬಲದಿಂದಾಗಿ ಆ ದ್ರೋಣರು ಅಭೇದ್ಯವಾದ ಕವಚವನ್ನು ಅವನಿಗೆ ತೊಡಿಸಿದರು - 'ಯಾವ ಬಲದಿಂದ ನೀನು ಎಲ್ಲ ಪಾಂಡವರೊಂದಿಗೆ ಹೋರಾಡುವಿಯೋ, ಅದೇ ಬಲದಿಂದ ಅರ್ಜುನನೊಂದಿಗೆ ಯುದ್ಧ ಮಾಡು, ನಡೆ' ಎಂದನು.

ವಿ : ೧) ಎಲ್ಲ ಪಾಂಡವರ ಮೇಲೆ ಒಮ್ಮೆಲೇ ಆಕ್ರಮಣ ನಡೆಸುವಷ್ಟು ವಿಶೇಷ ಸಾಮರ್ಥ್ಯ–ದಿಂದ ಅರ್ಜುನನ ಮೇಲೆ ನೀನು ಹೋರಾಡು. ಈ ಕವಚವನ್ನು ಭೇದಿಸಲು ಸುರರೂ, ಅಸುರರೂ ಮೊದಲಾಗಿ ಯಾರಿಗೂ ಸಾಧ್ಯವಾಗದು ಎಂದು ತಿಳಿಸಿದರು (ಭಾರತ ೭/೯೪/೩೫–೩೭) :

ಏಷ ತೇ ಕವಚಂ ರಾಜಂಸ್ತಥಾ ಬಧ್ನಾಮಿ ಕಾಂಚನಮ್ ।
ಯಥಾ ನ ಬಾಣಾ ನಾಸ್ತ್ರಾಣಿ ಪ್ರಹರಿಷ್ಯಂತಿ ತೇ ರಣೇ ॥

---

೬೮. ಯೈನೈವ ಬಲೇನೇತ್ಯತ್ರ ಯೇನ ಬಲೇನ = ಮಯಾ ಆಮಂತ್ರ್ಯ ನಿಬದ್ಧಕವಚಬಲೇನ ಪಾರ್ಥೈರಪಿ = ಸಕಲ-ಪಾರ್ಥೈರಪಿ ವಿರುಧ್ಯಸೇ = ವಿರೋಧಂ ಕರ್ತುಂ ಶಕ್ನೋಷೀತಿ ಯಾವತ್। ತೇನ = ಕವಚಬಲೇನ ಬಲಿನಮೇಕಮ-ರ್ಜುನಂ ಯಾಹಿ। ಏತದ್ವರ್ಮಬಲೇನ ಸರ್ವಾನ್ ಪಾರ್ಥಾನಪಿ ಜೇತುಂ ಶಕ್ತಸ್ಯ ತವ ಏಕೋऽರ್ಜುನಃ ಕಿಮು ವಕ್ತವ್ಯ ಇತಿ ಭಾವಃ ॥ – (ವಾ.)

೬೮. ಯೇನೈವ ಯಾವತಾ ಬಲೇನ ಪಾರ್ಥೈರ್ಧರ್ಮಾದಿಚತುರ್ಭಿರ್ವಿರುಧ್ಯಸೇ ವಿರೋಧಂ ಕರಿಷ್ಯಸಿ ತೇನ ತಾವತಾ ಬಲೇನ ಫಲ್ಗುನಂ ಪ್ರತಿ ಯಾಹಿ। – (ಜ.)

೬೮. ಏವಮುಕ್ತ್ವಾ ತ್ವರನ್ ದ್ರೋಣಃ ಸ್ಪೃಷ್ಟ್ವಾಂಭಾ ವರ್ಮ ಭಾಸ್ವರಮ್ ।
ಆಬಬಂಧಾದ್ಭುತತಮಂ ಜಪನ್ ಮಂತ್ರಂ ಯಥಾವಿಧಿ ॥ – ಭಾರತ (ದ್ರೋಣ. ೯೪/೩೯)

ಯದಿ ತ್ವಾಂ ಸಾಸುರಸುರಾಃ ಸಯಕ್ಷೋರಗರಾಕ್ಷಸಾಃ ।
ಯೋಧಯಂತಿ ತ್ರಯೋ ಲೋಕಾಃ ಸನರಾ ನಾಸ್ತಿ ತೇ ಭಯಮ್ ॥

೨) ದ್ರೋಣರು ತೊಡಿಸಿದ್ದ ಆ ಕವಚ ಶಿವ ವೃತ್ರಾಸುರ ಸಂಹಾರದ ಕಾಲದಲ್ಲಿ ತನ್ನ ಶರೀರದಿಂದ ತೆಗೆದು ಇಂದ್ರನಿಗೆ ಕೊಟ್ಟಿದ್ದ ಮಂತ್ರ ಕವಚ. ಅದು ಇಂದ್ರನ ಮೂಲಕ ಅಂಗೀರಸ–ನಿಗೂ, ಅವನಿಂದ ಬೃಹಸ್ಪತಿಗೂ, ಅವನಿಂದ ಅಗ್ನಿವೇಶ್ಯನಿಗೂ, ಅವನಿಂದ ದ್ರೋಣರಿಗೂ ಉಪದಿಷ್ಟವಾಗಿ ಬಂದಿತ್ತು. ಇಂದ್ರನ ವಜ್ರಾಯುಧಕ್ಕೂ ಅಭೇದ್ಯವಾದ ಕವಚ ಎಂಬುದು ಅದರ ವಿಶೇಷ. ವಾಯವ್ಯಾಸ್ತ್ರದಿಂದ ಮಾತ್ರ ಅದು ಭೇದಿಸಲ್ಪಡುವಂತಹುದು ಎಂಬ ವಿಶೇಷಾಂಶ ಮಹಾಭಾರತದಲ್ಲಿದೆ; ಅದನ್ನು ಇಂದ್ರನ ಮೇಲೆಯೇ ಬಳಸಿದ್ದು ವಿಶೇಷ.

ತತೋ ಜಘಾನ ಸಮರೇ ವೃತ್ರಂ ದೇವಪತಿಃ ಸ್ವಯಮ್ ।
ತಂ ಚ ಮಂತ್ರಮಯಂ ಬಂಧಂ ವರ್ಮ ಚಾಂಗಿರಸೇ ದದೌ ॥
ಅಂಗಿರಾಃ ಪ್ರಾಹ ಪುತ್ರಸ್ಯ ಮಂತ್ರಜ್ಞಸ್ಯ ಬೃಹಸ್ಪತೇಃ ।
ಬೃಹಸ್ಪತಿರಥೋವಾಚ ಅಗ್ನಿವೇಶ್ಯಾಯ ಧೀಮತೇ ॥
ಆಗ್ನಿವೇಶ್ಯೋ ಮಮ ಪ್ರಾದಾತ್ ತೇನ ಬಧ್ನಾಮಿ ವರ್ಮ ತೇ ।

– ಭಾರತ (೭/೯೪/೬೫-೬೮)

ಅರ್ಜುನ ದುರ್ಯೋಧನರ ಯುದ್ಧ

ಇತೀರಿತೋ ಧಾರ್ತರಾಷ್ಟ್ರಃ ಸ ಚಾಪ–
ಮಾದಾಯ ಸೌವರ್ಣರಥೋಪರಿಸ್ಥಿತಃ ।
ಜಗಾಮ ಪಾರ್ಥಂ ತಮವಾರಯಚ್ಚ
ಶರೈರನೇಕೈರನಲಪ್ರಕಾಶೈಃ ॥ ೬೯ ॥

ಅ: ದ್ರೋಣರು ಹೀಗೆನ್ನಲು ದುರ್ಯೋಧನ ಬಿಲ್ಲನ್ನು ತೆಗೆದುಕೊಂಡು ಚಿನ್ನದ ರಥದಲ್ಲಿ ಕುಳಿತು ಅರ್ಜುನನ ಮೇಲೆ ಸಾಗಿದ. ಅಗ್ನಿಯಂತೆ ಹೊಳೆಯುವ ಅನೇಕ ಬಾಣಗಳಿಂದ ಅವನನ್ನು ತಡೆದ.

ವಿವ್ಯಾಧ ಪಾರ್ಥೋಽಪಿ ತಮುಗ್ರವೇಗೈಃ
ಶರೈರ್ನ ತೇ ತಸ್ಯ ಚ ವರ್ಮಭೇದನಮ್ ।
ಚಕ್ರುಸ್ತತೋ ವಾಸವಿರ್ದಿವ್ಯಮಸ್ತ್ರಂ
ತದ್ವರ್ಮಭೇದಾಯ ಸಮಾದದೇ ರುಷಾ ॥ ೭೦ ॥

ಅ: ಅರ್ಜುನನೂ ಸಹ ಭಯಂಕರ ವೇಗದ ಬಾಣಗಳಿಂದ ದುರ್ಯೋಧನನನ್ನು ಹೊಡೆದ. ಆದರೆ, ಅವು ಅವನ ಕವಚವನ್ನು ಭೇದಿಸಲಿಲ್ಲ. ಬಳಿಕ ಅರ್ಜುನ ಕೋಪದಿಂದ ಅವನ ಕವಚವನ್ನು ಭೇದಿಸಲೆಂದು ದಿವ್ಯಾಸ್ತ್ರವೊಂದನ್ನು ಕೈಗೆತ್ತಿಕೊಂಡ.

ವಿ : ಅರ್ಜುನ ಹಾಗೆ ಕೈಗೆತ್ತಿಕೊಂಡ ದಿವ್ಯಾಸ್ತ್ರವೂ ಸಹ ಬೃಹಸ್ಪತಿ, ಇಂದ್ರರ ಮೂಲಕ ಅವನಿಗೆ ಬಂದದ್ದು ಎಂದು ಮಹಾಭಾರತದಲ್ಲಿದೆ :

ಪರಾಜಯಿಷ್ಯೇ ಕೌರವ್ಯಂ ಕವಚೇನಾಪಿ ರಕ್ಷಿತಮ್ ॥
ಇದಮಂಗಿರಸೇ ಪ್ರಾದಾದ್ದೇವೇಶೋ ವರ್ಮ ಭಾಸ್ವರಮ್ ।
ತಸ್ಮಾದ್ಬೃಹಸ್ಪತಿಃ ಪ್ರಾಪ ತತಃ ಪ್ರಾಪ ಪುರಂದರಃ ॥
ಪುನರ್ದದೌ ಸುರಪತಿರ್ಮಹ್ಯಂ ವರ್ಮ ಸಸಂಗ್ರಹಮ್ ॥

– ಭಾರತ (ದ್ರೋಣ. ೧೦೩/೧೯-೨೦)

ಅರ್ಜುನ ಹಾಗೆ ಮಾಡಿದಾಗ ಕೃಷ್ಣ ಅವನಿಗೆ ಪ್ರೇರೇಪಣೆ ನೀಡಿದ. ಆಗ ಅದರ ರಹಸ್ಯವನ್ನು ಅರಿತ ಅರ್ಜುನ ದುರ್ಯೋಧನನ ಅಂಗೈಗಳಿಗೆ ಬಾಣಗಳನ್ನು ಹೊಡೆದು ಅಲ್ಲಿಂದ ಓಡಿಸಿದ.

ಅರ್ಜುನನಿಂದ ದುರ್ಯೋಧನನ ಪರಾಭವ

ಸಂಧೀಯಮಾನಂ ತು ಗುರೋಃ ಸುತಸ್ತ-
ಚ್ಚಿಚ್ಛೇದ ಪಾರ್ಥೋಽಥ ಸುಯೋಧನಾಶ್ವಾನ್ ।
ಹತ್ವಾ ತಲೇಽವಿಧ್ಯದಥೈನಮುಗ್ರೈ-
ರ್ದ್ರೌಣಿಃ ಶರೈಃ ಪಾರ್ಥಮವಾರಯದ್ಯುಧಿ ॥ ೭೧ ॥

---

೭೧. ತಲೇ ಹಸ್ತತಲೇಽವಿಧ್ಯತ್ । – (ಜ.)

೭೧. ವಿರಥತ್ವಾತ್ ತಲೇ ಭೂತಲೇ ವಿದ್ಯಮಾನಂ ದುರ್ಯೋಧನಮವಿಧ್ಯತ್ । – (ವ.)

೭೧. ವಿಕೃಷ್ಯಮಾಣಾಂಸ್ತೇನೈವ ಧನುರ್ಮಧ್ಯಗತಾನ್ ಶರಾನ್ ।
ತಾನಸ್ಯಾಸ್ತ್ರೇಣ ಚಿಚ್ಛೇದ ದ್ರೌಣಿಃ ಸರ್ವಾಸ್ತ್ರಘಾತಿನಾ ॥ – ಭಾರತ (ದ್ರೋಣ. ೧೦೩/೨೨)

ದುರ್ಯೋಧನಂ ಚ ಬಾಣಾಭ್ಯಾಂ ತೀಕ್ಷ್ಣಾಭ್ಯಾಂ ವಿರಥೀಕೃತಮ್ ।
ಆವಿಧ್ಯದ್ದುಸ್ತಲಯೋರುಭಯೋರರ್ಜುನಸ್ತದಾ ॥
ಪ್ರಯತ್ನಜ್ಞೋ ಹಿ ಕೌಂತೇಯೋ ನವಮಾಂಸಾಂತರೇಷುಭಿಃ ।
ಸ ವೇದನಾಭರಾವಿಗ್ನಃ ಪಲಾಯನಪರಾಯಣಃ ॥ – ಭಾರತ(ದ್ರೋಣ. ೧೦೩/೩೧,೩೨)

ಅ: ಅರ್ಜುನ ಆ ದಿವ್ಯಾಸ್ತ್ರವನ್ನು ಧನುಸ್ಸಿನಲ್ಲಿ ಹೂಡುತ್ತಿದ್ದಂತೆಯೇ ಗುರುಪುತ್ರನಾದ ಅಶ್ವತ್ಥಾಮ ಅದನ್ನು ತುಂಡರಿಸಿದ. ಬಳಿಕ ಅರ್ಜುನ ದುರ್ಯೋಧನನ ಕುದುರೆಗಳನ್ನು ಕೊಂದು ಅವನ ಅಂಗೈಗಳಿಗೆ ಹೊಡೆದ. ಅಶ್ವತ್ಥಾಮ ತೀಕ್ಷ್ಣವಾದ ಬಾಣಗಳಿಂದ ಯುದ್ಧದಲ್ಲಿ ಅರ್ಜುನನನ್ನು ತಡೆದ.

ವಿ: ಅರ್ಜುನ ಆ ಕವಚದ ಛೇದನಕ್ಕಾಗಿ ಮಾನವಾಸ್ತ್ರವನ್ನು ಹೂಡಿದಾಗ, ಅಶ್ವತ್ಥಾಮ ಅದನ್ನು ತುಂಡರಿಸಿದ. ಆ ದಿವ್ಯಾಸ್ತ್ರವನ್ನು ಎರಡನೆಯ ಬಾರಿ ಪ್ರಯೋಗಿಸುವಂತಿರಲಿಲ್ಲ. ಆಗ ಅರ್ಜುನ ಶ್ರೀಕೃಷ್ಣನ ಸಲಹೆಯಂತೆ ದುರ್ಯೋಧನನ ಅಂಗೈಗಳಿಗೆ ಬಾಣಗಳಿಂದ ಹೊಡೆದು ನೋಯಿಸಿ ಓಡಿಸಿದ ಎಂದರ್ಥ. ದೇಹವನ್ನೆಲ್ಲ ಆವರಿಸಿದ್ದ ಕವಚ ಅಂಗೈಗಳನ್ನು ಮಾತ್ರ ಮುಚ್ಚಿರಲಿಲ್ಲ.

ಅಶ್ವತ್ಥಾಮಾದಿಗಳೊಂದಿಗೆ ಅರ್ಜುನನ ಯುದ್ಧ

ಸ ದ್ರೌಣಿಕರ್ಣಪ್ರಮುಖೈರ್ಧನಂಜಯೋ
ಯುಯೋಧ ತೈ ಶ್ಚೈನಮವಾರಯಂಛರೈಃ ।
ಬಭೂವ ಯುದ್ಧಂ ತದತುಲ್ಯಮದ್ಭುತಂ
ಜಯದ್ರಥಾರ್ಥೇಽದ್ಭುತವೀರ್ಯಕರ್ಮಣಾಮ್ ॥ ೭೨ ॥

ಅ: ಅರ್ಜುನ ಅಶ್ವತ್ಥಾಮ, ಕರ್ಣ ಮೊದಲಾದವರೊಂದಿಗೆ ಯುದ್ಧ ಮಾಡಿದ. ಅವರು ಬಾಣಗಳಿಂದ ಅವನನ್ನು ತಡೆದರು. ಜಯದ್ರಥನನಿಗೋಸ್ಕರವಾಗಿ ಅದ್ಭುತ ವೀರ್ಯ ಕರ್ಮಗಳುಳ್ಳ ಅವರ ನಡುವೆ ಅಸದೃಶವಾದ ಅದ್ಭುತ ಯುದ್ಧ ಸಾಗಿತು.

ವಿ: ಅರ್ಜುನನದು ಜಯದ್ರಥನನ್ನು ಕೊಲ್ಲುವ ಶಪಥವಾಗಿದ್ದರೆ, ಅಶ್ವತ್ಥಾಮಾದಿಗಳದು ಅವನನ್ನು ಉಳಿಸುವ ಪ್ರಯತ್ನವಾಗಿತ್ತು; ಹೀಗೆ ಜಯದ್ರಥನಿಗಾಗಿ ಅವರ ನಡುವೆ ಅಂತಹ ಅಪೂರ್ವಯುದ್ಧ ನಡೆಯಿತು ಎಂದರ್ಥ.

ದ್ರೋಣರ ಪರಾಕ್ರಮ

ಪಾರ್ಥೇ ಪ್ರವಿಷ್ಟೇ ಕುರುಸೈನ್ಯಮಧ್ಯಂ
ದ್ರೋಣೋಽವಿಶತ್ ಪಾಂಡವಸೈನ್ಯಮಾಶು ।
ಸ ತದ್ರಥಾನೀಕಮುದಾರವೇಗೈಃ
ಶರೈರ್ವಿಧೂಯ ನ್ಯಹನಚ್ಚ ವೀರಾನ್ ॥ ೭೩ ॥

ಅ: ಅರ್ಜುನನು ಕೌರವ ಸೇನೆಯ ಮಧ್ಯದಲ್ಲಿ ಹೊಕ್ಕಮೇಲೆ ದ್ರೋಣರು ಕೂಡಲೇ ಪಾಂಡವ ಸೇನೆಯೊಳಗೆ ಪ್ರವೇಶಿಸಿದರು; ಪಾಂಡವರ ರಥಸೇನೆಯನ್ನು ಮಹಾವೇಗದಿಂದ ಕೂಡಿದ ಬಾಣಗಳಿಂದ ಓಡಿಸಿ ವೀರರನ್ನು ಸಂಹರಿಸಿದರು.

ಸ ವೀರವರ್ಯಃ ಸ್ಥವಿರೋಽಪಿ ಯೂನಾಂ
ಯುವೇವ ಮಧ್ಯೇ ಪ್ರಚಚಾರ ಧನ್ವಿನಾಮ್ ।
ಪ್ರಪಾತಯನ್ ವೀರಶಿರಾಂಸಿ ಬಾಣೈ-
ರ್ಯುಧಿಷ್ಠಿರಂ ಚಾಸದದುಗ್ರವೀರ್ಯಃ ॥ ೭೪ ॥

ಅ: ವೀರಶ್ರೇಷ್ಠರಾದ ದ್ರೋಣರು ವೃದ್ಧರಾಗಿದ್ದರೂ ತರುಣರಲ್ಲಿ ತರುಣರಂತೆ ಧನುರ್ಧಾರಿಗಳ ಮಧ್ಯದಲ್ಲಿ ವೇಗದಿಂದ ಸಂಚರಿಸಿದರು; ಭಯಂಕರ ಪರಾಕ್ರಮಿಗಳಾದ ವೀರರ ತಲೆಗಳನ್ನು ಬಾಣಗಳಿಂದ ಕತ್ತರಿಸಿ ಕೆಳಗುರುಳಿಸುತ್ತಾ ಯುಧಿಷ್ಠಿರನನ್ನು ಸಮೀಪಿಸಿದರು.

ದ್ರೋಣರಿಂದ ಸತ್ಯಜಿದ್ವಧೆ

ನೃಪಗ್ರಹೇಚ್ಛುಂ ತಮವೇಕ್ಷ್ಯ ಸತ್ಯಜಿ-
ನ್ನ್ಯವಾರಯದ್ದ್ರೌಪದಿರಾಶು ವೀರ್ಯವಾನ್ ।
ನಿವಾರಿತಸ್ತೇನ ಶಿರಃ ಶರೇಣ
ಚಕರ್ತ ಪಾಂಚಾಲಸುತಸ್ಯ ವಿಪ್ರಃ ॥ ೭೫ ॥

ಅ: ಧರ್ಮರಾಜನ್ನು ಸೆರೆ ಹಿಡಿಯಲೆಂದು ಅವರು ಬಯಸಿದ್ದನ್ನು ತಿಳಿದು ದ್ರುಪದ ಪುತ್ರನಾದ ಶಕ್ತಿಶಾಲಿ ಸತ್ಯಜಿತ್ ಕೂಡಲೇ ಅವನನ್ನು ತಡೆದ. ಹಾಗೆ ತಡೆದ ಅವನ ತಲೆಯನ್ನು ಬಾಣವೊಂದರಿಂದ ದ್ರೋಣರು ತುಂಡರಿಸಿದರು.

ದ್ರೋಣರಿಂದ ಯುಧಿಷ್ಠಿರನ ಪರಾಭವ

ನಿಹತ್ಯ ತಂ ವೀರತಮೋ ರಣೋತ್ಕಟಂ
ಯುಧಿಷ್ಠಿರಂ ಬಾಣಗಣೈಃ ಸಮರ್ದಯತ್ ।
ಸ ಶಕ್ತಿತಸ್ತೇನ ವಿಧಾಯ ಸಂಗರಂ
ನಿರಾಯುಧೋ ವ್ಯಶ್ವರಥಃ ಕೃತಃ ಕ್ಷಣಾತ್ ॥ ೭೬ ॥

ಅ: ಮಹಾವೀರರಾದ ದ್ರೋಣರು ಯುದ್ಧಚತುರನಾದ ಆ ಸತ್ಯಜಿತನನ್ನು ಸಂಹರಿಸಿ ಧರ್ಮರಾಜನನ್ನು ಬಾಣಗಳ ಸಮೂಹಗಳಿಂದ ಬಹಳವಾಗಿ ಪೀಡಿಸಿದರು. ಧರ್ಮರಾಜ ತನ್ನ ಶಕ್ತಿಯಿದ್ದಷ್ಟು ಹೋರಾಡಿದರೂ ದ್ರೋಣರು ಅವನನ್ನು ನಿರಾಯುಧನನ್ನಾಗಿಯೂ, ಕುದುರೆ ರಥಗಳಿಲ್ಲದವನನ್ನಾಗಿಯೂ ಕ್ಷಣದಲ್ಲಿಯೇ ಮಾಡಿದರು.

ವಿ: ಬೃಹಸ್ಪತಿಯ ಅವತಾರರಾದ ದ್ರೋಣರು ಯಮಾವತಾರನಾದ ಧರ್ಮರಾಜನಿಗಿಂತ ತಾರತಮ್ಯದಲ್ಲಿ ತುಂಬಾ ಮಿಗಿಲಾದವರಾದ್ದರಿಂದ ಹಾಗೆ ಅನಾಯಾಸವಾಗಿ ಅವನನ್ನು ಸೋಲಿಸಲು ಸಮರ್ಥರಾದರು ಎಂದು ತಿಳಿಯಬೇಕು.

ಸ ಊರ್ಧ್ವಬಾಹುರ್ಭುವಿ ಸಂಸ್ಥಿತೋಽಪಿ
ಗೃಹೀತುಮಾಜೌ ಗುರುಣಾಽಭಿಪನ್ನಃ ।
ಮಾದ್ರೀಸುತಸ್ಯಾವರಜಸ್ಯ ಯಾನ-
ಮಾರುಹ್ಯ ವೇಗಾದಪಜಗ್ಮಿವಾಂಸ್ತತಃ ॥ ೭೭ ॥

ಅ: ಅವನು ಕೈಗಳನ್ನು ಮೇಲೆತ್ತಿಕೊಂಡು ನೆಲದ ಮೇಲೆ ನಿಂತಾಗ ಅವನನ್ನು ಯುದ್ಧದಲ್ಲಿ ಸೆರೆ ಹಿಡಿಯಲು ದ್ರೋಣರು ಧಾವಿಸಿದರು. ಆಗ ಧರ್ಮರಾಜ ಕೂಡಲೇ ಸಹದೇವನ ರಥವನ್ನು ಏರಿ ಅಲ್ಲಿಂದ ವೇಗವಾಗಿ ದೂರಕ್ಕೆ ತೆರಳಿದ.

ವಿ: ಸಹದೇವ ವಿನಯದ ಸಂಕೇತ, ಅವನಿಂದ ಧರ್ಮರಾಜನಿಗೆ ಆಗ ರಕ್ಷಣೆ ದೊರೆತದ್ದು ಧರ್ಮಕ್ಕೆ ವಿನಯವೇ ರಕ್ಷಣೆ ಎಂಬುದಕ್ಕೆ ಸೂಚಕವಾಯಿತು ಎಂಬ ಧ್ವನಿ ಇಲ್ಲಿದೆ. ರಾಜ್ಯವಾಳುವ ಸಂದರ್ಭದಲ್ಲೂ ಯುಧಿಷ್ಠಿರನಿಗೆ ಸಹದೇವ ಅಂಗರಕ್ಷನಾಗಿದ್ದ ವಿವರ ಈಗಾಗಲೇ ಬಂದಿದೆ(೨೦/೫).

ದ್ರೋಣರಿಂದ ಧೃಷ್ಟಕೇತು ಮೊದಲಾದವರ ವಧೆ

ದ್ರೋಣಂ ತತಃ ಶೈಶುಪಾಲಿಃ ಸಪುತ್ರೋ
ಜರಾಸಂಧಿಃ ಕಾಶಿರಾಜಃ ಸಶೈಬ್ಯಃ ।
ಸಮಾಸದನ್ ಕೇಕಯಾಶ್ಚೈವ ಪಂಚ
ಸಮರ್ದಯನ್ ಬಾಣಗಣೈಶ್ಚ ಸರ್ವಶಃ ॥ ೭೮ ॥

---

೭೭. ತತಸ್ತ್ವರಿತಮಾರುಹ್ಯ ಸಹದೇವರಥಂ ನೃಪಃ ।
ಅಪಾಯಾಜ್ಜವನೈರಶ್ವೈಃ ಕುಂತೀಪುತ್ರೋ ಯುಧಿಷ್ಠಿರಃ ॥ (ದ್ರೋಣ. ೧೦೬/೪೭)

ಅ: ಬಳಿಕ ದ್ರೋಣರನ್ನು ಶಿಶುಪಾಲ ಪುತ್ರನಾದ ಧೃಷ್ಟಕೇತು, ಅವನ ಮಕ್ಕಳು, ಜರಾಸಂಧನ ಮಗನಾದ ಸಹದೇವ, ಕಾಶಿರಾಜ, ಶೈಬ್ಯ, ಐವರು ಕೇಕಯರು ಎಲ್ಲೆಡೆಗಳಿಂದಲೂ ಎದುರಿಸಿದರು. ಬಾಣಗಳ ಸಮೂಹಗಳಿಂದ ಪೀಡಿಸತೊಡಗಿದರು.

ಸ ತಾನ್ ಕ್ರಮೇಣೈವ ನಿಕೃತ್ತಕಂಧರಾನ್
ಶರೋತ್ತಮೈರತ್ರ ವಿಧಾಯ ವಿಪ್ರಃ ।
ನಿನಾಯ ಲೋಕಂ ಪರಮರ್ಕಮಂಡಲಂ
ವ್ರಜಂತಿ ನಿರ್ಭಿದ್ಯ ಯಮೂರ್ಧ್ವರೇತಸಃ ॥ ೭೯ ॥

ಅ: ದ್ರೋಣರು ಅವರನ್ನೆಲ್ಲ ಕ್ರಮವಾಗಿ ಉತ್ತಮ ಬಾಣಗಳಿಂದ ತಲೆ ಕತ್ತರಿಸಿ ನೈಷ್ಠಿಕ ಬ್ರಹ್ಮಚರ್ಯ ನಿರತರಾದವರು ಸೂರ್ಯ ಮಂಡಲವನ್ನು ಭೇದಿಸಿ ಯಾವ ಉತ್ತಮ ಲೋಕವನ್ನು ಸೇರುವರೋ ಅಂತಹ ಲೋಕಕ್ಕೆ ಕಳುಹಿಸಿದರು.

ವಿ: ಇದರ ಉತ್ತರಾರ್ಧ ಭಾಗವತದಲ್ಲಿ ಯಥಾವತ್ತಾಗಿಯೇ ಇದೆ (೪/೧೧/೫). ಅಲ್ಲಿ ಇದು ಧ್ರುವ ಕುಬೇರನ ಯಕ್ಷಸೇನೆಯನ್ನು ಸಂಹರಿಸಿದಾಗ ಬಂದಿರುವ ವರ್ಣನೆ. ನೈಷ್ಠಿಕಬ್ರಹ್ಮಚಾರಿಗಳು ಸೇರುವ ಉತ್ತಮಲೋಕವನ್ನೇ ದೇವತಾಂಶಸಂಭೂತರಾದ ಧೃಷ್ಟಕೇತು ಮೊದಲಾದವರು ಹೊಂದಿದರು ಎಂದರ್ಥ.

---

೭೯. ಪರಮರ್ಕಮಂಡಲಂ ವ್ರಜಂತಿ । ನಿರ್ಭಿದ್ಯೇತಿ । ಸೂರ್ಯ ದ್ವಾರೇಣ ವಿರಜಾಃ ಪ್ರಯಾಂತಿ । ದೇಹೇ ವಾ ಸೂರ್ಯ ಏವ ವಾ ಇತ್ಯುಕ್ತೇರಧಿಕಾರಿಣಾಂ ಕ್ಷೀಣಪ್ರಾರಬ್ಧಾನಾಂ ಸೂರ್ಯಮಂಡಲವಿವರಂ ದದಾತೀತಿ ಅಪ್ರತಿಬಂಧಕಮಿತಿ ಭಾವಃ। 'ಆದಿತ್ಯಮಂಡಲಾಕಾರಂ ರಶ್ಮಿಜ್ವಾಲಾಸಮಾಕುಲಮ್। ತಸ್ಯ ಮಧ್ಯಗತೋ ವಹ್ನಿಃ ಪ್ರಜ್ವಲೇದ್ದೀಪವರ್ತಿವತ್। 'ದೀಪಶೀಲತಯಾ ಮಾತ್ರಾ ಸಾ ಮಾತ್ರಾ ಪರಮೇಷ್ಠಿನೀ 'ಇತಿ ವದಂತಿ ಯೋಗಿನಃ ಸೂರ್ಯಂ ಯೋಗಾಭ್ಯಾಸೇನ ವೈ ಪುನಃ । ದ್ವಿತೀಯಂ ಸುಷುಮ್ನಾದ್ವಾರಂ ಪರಿಶುಭ್ರಂ ಸಮರ್ಪಿತಮ್ । ಕಪೋತಸಂಪುಟಂ ಪೀತ್ವಾ ತತಃ ಪತತಿ ತತ್ಪೃಥಕ್' ಇತಿ ವಚನೋಕ್ತಪ್ರಕಾರೇಣ ಸೂರ್ಯಮಂಡಲ ಜ್ಞೇಯ ಇತ್ಯೇಕೇ। – (ತಾ.)

೭೯. ಆದಿತ್ಯಮಂಡಲಾಕಾರಂ ರಶ್ಮಿಜ್ವಾಲಾಸಮಾಕುಲಮ್ ।
ತಸ್ಯ ಮಧ್ಯಗತೋ ವಹ್ನಿಃ ಪ್ರಜ್ವಲೇದ್ದೀಪವರ್ತಿವತ್ ॥
ದೀಪಶೀಲೇ ತು ಯಾ ಮಾತ್ರಾ ಸಾ ಮಾತ್ರಾ ಪರಮೇಷ್ಠಿನೀ ।
ಭಂದಂತಿ ಯೋಗಿನಃ ಸೂರ್ಯಂ ಯೋಗಾಭ್ಯಾಸೇನ ವೈ ಪುನಃ ॥
ದ್ವಿತೀಯಂ ಸುಷುಮ್ನಾದ್ವಾರಂ ಪರಿಶುಭ್ರಂ ಸಮರ್ಪಿತಮ್ ।
ಕಪೋತಸಂಪುಟಂ ಪೀತ್ವಾ ತತಃ ಪತತಿ ತತ್ಪಥಮ್॥
– ಇತಿ ಮಂತ್ರೋಪನಿಷದನುಸಾರೇಣ ಸೂರ್ಯಮಂಡಲಭೇದೋ ಜ್ಞೇಯಃ ॥ – (ಶ್ರೀ.)

ವಿಧೂಯಮಾನೇ ಗುರುಣೋರುಸೈನ್ಯೇ
ಪೃಥಾಸುತಾನಾಂ ಪೃತನಾಃ ಪರೇಷಾಮ್ ।
ಪ್ರಾಯೋ ರಣೇ ಮಾರುತಸೂನುನೈವ
ಹತಪ್ರವೀರಾ ಮೃದಿತಾಃ ಪರಾದ್ರವನ್ ॥ ೮೦ ॥

ಅ: ದ್ರೋಣರು ಪಾಂಡವರ ಮಹಾಸೇನೆಯನ್ನು ನಾಶಗೊಳಿಸುತ್ತಿದ್ದಾಗ ಭೀಮಸೇನ ಕೌರವರ ಸೇನೆಯನ್ನು ನಾಶಗೊಳಿಸುತ್ತಿದ್ದ. ಅವನಿಂದ ಪೆಟ್ಟುತಿಂದು ಬದುಕುಳಿದ ವೀರರು ಓಡತೊಡಗಿದರು.

ವಿ : ಪಾಂಡವರ ಸೇನೆಯಲ್ಲಿ ದ್ರೋಣರ ಪರಾಕ್ರಮ ಮೆರೆಯುತ್ತಿದ್ದರೆ, ಕೌರವರ ಸೇನೆಯಲ್ಲಿ ಭೀಮನ ಪರಾಕ್ರಮ ಮೆರೆಯುತ್ತಿತ್ತು ಎಂದರ್ಥ.

ಭೀಮ ಅಲಂಬುಸರ ಯುದ್ಧ - ಭೀಮನ ಅಸ್ತ್ರವಿದ್ಯಾ ಕೌಶಲ

ಅಲಂಬುಸೋ ನಾಮ ತದೈವ ರಾಕ್ಷಸಃ
ಸಮಾಸದನ್ಮಾರುತಿಮುಗ್ರಪೌರುಷಮ್ ।
ಸ ಪೀಡಿತಸ್ತೇನ ಶರೈಃ ಸುತೇಜನೈಃ
ಕ್ಷಣಾದದೃಶ್ಯತ್ವಮವಾಪ ಮಾಯಯಾ ॥ ೮೧ ॥

ಅ: ಆಗಲೇ ಅಲಂಬುಸನೆಂಬ ರಾಕ್ಷಸ ಮಹಾಪರಾಕ್ರಮಿಯಾದ ಭೀಮಸೇನನನ್ನು ಎದುರಿಸಿ ಬಂದ. ಭೀಮಸೇನ ಮಹಾತೇಜಸ್ಸಿನ ಬಾಣಗಳಿಂದ ಅವನನ್ನು ನೋಯಿಸಿದಾಗ ಅವನು ಮಾಯೆಯಿಂದ ಅದೃಶ್ಯನಾದ.

ಸೋಽದೃಶ್ಯರೂಪೋಽನುಚರಾನಪೀಡಯದ್
ಭೀಮಸ್ಯ ತದ್ವೀಕ್ಷ್ಯ ಚುಕೋಪ ಮಾರುತಿಃ ।
ಅಸ್ತ್ರಜ್ಞತಾಮಾತ್ಮನಿ ಕೇಶವಾಜ್ಞಯಾ
ಸಂದರ್ಶಯನ್ನಾಗತಧರ್ಮಸಂಕಟಃ ॥ ೮೨ ॥

---

೮೨. 'ಅಸ್ತ್ರಜ್ಞತಾಮಾತ್ಮನಿ ಕೇಶವಾಜ್ಞಯಾ' ಇತ್ಯತ್ರ ಕೇಶವಾಜ್ಞಯೇತ್ಯಧಿಕಂ ಕೇಶವಾಜ್ಞಯಾ 'ಸಂಶಾಮಯಾಮಾಸ ಸುತೋಽನಿಲಸ್ಯ' ಇತಿ (೨೭/೯) ಪೂರ್ವಮೇವೋಕ್ತತ್ವಾದಿತಿ ತು ಶಿಷ್ಯಾನುಜಿಘೃಕ್ಷಯಾ ಪುನಸ್ತಥೋಕ್ತಮಿತ್ಯದೋಷಃ । – (ತಿ.)

೮೨. ಆಗತಧರ್ಮಸಂಕಟಃ ಪ್ರಾಪ್ತಧರ್ಮಯುದ್ಧವಿಷಯಸಂಕಟಃ ಸನ್ ಅದೃಶ್ಯರೂಪ ಏವ ಭೀಮಸ್ಯಾನುಚರಾನ-ಪೀಡಯತ್ । – (ಸ.)

ತ್ವಾಷ್ಟ್ರಾಸ್ತ್ರಮಾದತ್ತ ಸ ಕಾಮ್ಯಕರ್ಮ-
ಹೀನೋಽಪಿ ಭೀಮಸ್ತತ ಉತ್ಥಿತಾಃ ಶರಾಃ ।
ತೇ ಬಾಣವರ್ಷಾಸ್ತದದೃಶ್ಯವೇಧಿನೋ
ರಕ್ಷೋ ವಿದಾರ್ಯಾವಿವಿಶುರ್ಧರಾತಲಮ್ ॥ ೮೩ ॥

ಅ: ಅವನು ಅದೃಶ್ಯರೂಪನಾಗಿದ್ದೇ ಭೀಮನ ಅನುಯಾಯಿಗಳನ್ನು ಪೀಡಿಸತೊಡಗಿದ. ಅದನ್ನು ಕಂಡು ಭೀಮ ಕೆರಳಿದ. ಶ್ರೀಹರಿಯ ಆದೇಶದಂತೆ ತನ್ನ ಅಸ್ತ್ರಪರಿಜ್ಞಾನವನ್ನು ತೋರಿಸಲೆಂದು ತ್ವಾಷ್ಟಾಸ್ತ್ರವನ್ನು ಕೈಗೆತ್ತಿಕೊಂಡ. ಅವನು ಕಾಮ್ಯಕರ್ಮವನ್ನು ಸರ್ವಥಾ ಮಾಡಲಾರನಾದರೂ, ಧರ್ಮಸಂಕಟ ಒದಗಿದ್ದರಿಂದ ಹಾಗೆ ಮಾಡಿದ. ಬಳಿಕ ಅದರಿಂದ ಬಾಣಗಳು ಹೊರಬರತೊಡಗಿದವು. ಆ ಶ್ರೇಷ್ಠ ಬಾಣಗಳು ಮರೆಯಾಗಿದ್ದೇ ಹೊಡೆಯುತ್ತಾ ರಾಕ್ಷಸನನ್ನು ಸೀಳಿ ಭೂತಲವನ್ನು ಹೊಕ್ಕವು.

ವಿ: ೧) ಅಲಂಬುಸ ಬಕಾಸುರನ ಅಣ್ಣ ಎಂದರೆ ಅವನೂ ರಾಮಾಯಣದ ಕಾಲದವನು. ಅವನು ಅದೃಶ್ಯನಾಗಿ ಭೀಮನ ಮೇಲೆ ಯುದ್ಧಕ್ಕೆ ತೊಡಗಿದ್ದು ರಾವಣನ ಪುತ್ರನಾದ ಇಂದ್ರಜಿತನು ಅದೃಶ್ಯನಾದ ರಾಮನ ಕಪಿಯ ಸೇನೆಯ ಮೇಲೆ ಯುದ್ಧಕ್ಕೆ ತೊಡಗಿದ ದೃಶ್ಯದಂತಿತ್ತು; ಅವನ ತಂದೆಯ ಸೋದರಮಾವನ ಅಣ್ಣನೇ ಇವನು. ಲೋಕದೃಷ್ಟಿಯಲ್ಲಿ ಭೀಮನಿಗೆ ಆಗ ಒದಗಿದ್ದು ಧರ್ಮಸಂಕಟ.

೨) ಅಂತಹ ಧರ್ಮಸಂಕಟ ಬಂದಾಗ ಅಸ್ತ್ರಯುದ್ಧವನ್ನು ಮಾಡಬಹುದು ಎಂಬುದು ಶ್ರೀಕೃಷ್ಣನ ಆದೇಶ, ಅದಕ್ಕಾಗಿ ಭೀಮಸೇನ ಅಸ್ತ್ರಯುದ್ಧವನ್ನು ಮಾಡಿದನೇ ಹೊರತು ಭೀಮನಿಗೆ ನಿಜವಾದ ಅರ್ಥದಲ್ಲಿ ಧರ್ಮಸಂಕಟ ಬರುವುದು ಸಾಧ್ಯವೇ ಇಲ್ಲ; ಶ್ರೀಕೃಷ್ಣ ಭೀಮನಿಗೆ ಅಸ್ತ್ರ-ಪರಿಜ್ಞಾನವಿರುವುದನ್ನು ಸಾರಲೆಂದು ಎರಡು ಪ್ರಸಂಗಗಳಲ್ಲಿ ಮಾತ್ರ ಅಸ್ತ್ರಯುದ್ಧವನ್ನು ಮಾಡಲು ಅಜ್ಞೆಯಿತ್ತಿದ್ದ ವಿವರ ಆಗಲೇ ಬಂದಿದೆ (೧೮/೧೨). ಹೀಗೆ ಭೀಮನ ಅಪಾರ ಅಸ್ತ್ರಜ್ಞತ್ವವನ್ನು ನಿರೂಪಿಸುವ ಅಪೂರ್ವ ಪ್ರಸಂಗವಾಗಿ ಇದು ನಿರೂಪಿತವಾಗಿದೆ.

---

೮೩. ಕಾಮ್ಯಕರ್ಮಹೀನೋಪಿ ಸ ಭೀಮಃ ಅಸ್ತ್ರಪ್ರಯೋಗೇ ಕೃತೇ ಭಗವದ್ಧರ್ಮಹಾನಿಃ । ಅಪ್ರಯೋಗೇ ಸ್ವಾನುಚರಬಾಧ ಇತಿ ಧರ್ಮಸಂಕಟಮಿತ್ಯರ್ಥಃ। – (ಜ.)

ಆಗತಧರ್ಮಸಂಕಟ ಇತಿ ವಿಶೇಷಣಮಲಂಬುಸಸ್ಯೈವ ನ ತು ಭೀಮಸ್ಯೇತ್ಯಂಗೀಕಾರಾತ್ ॥ – (ಸ.)

೮೩. ಸಂದಧೇ ತ್ವಾಷ್ಟಮಸ್ತ್ರಂ ಸ ಸ್ವಯಂ ತ್ವಷ್ಟೇವ ಮಾರುತಿಃ । – ಭಾರತ (ದ್ರೋಣ. ೧೦೮/೩೯)

೮೩. ತದಸ್ತ್ರಂ ಪ್ರೇರಿತಂ ತೇನ ಭೀಮಸೇನೇನ ಸಂಯುಗೇ ।
ರಾಕ್ಷಸಸ್ಯ ಮಹಾಮಾಯಾಂ ಹತ್ವಾ ರಾಕ್ಷಸಮಾರ್ದಯತ್ ॥ – ಭಾರತ (ದ್ರೋಣ. ೧೦೮/೪೧)

ತದ್ದನ್ಯಮಾನಂ ಪ್ರವಿಹಾಯ ಭೀಮ-
ಮಪಾದ್ರವದ್ದೂರತರಂ ಸುಭೀತಮ್ ।
ತತಸ್ತು ಭೀಮೋ ದ್ವಿಷತಾಂ ವರೂಥಿನೀಂ
ವಿದ್ರಾವಯಾಮಾಸ ಶರೈಃ ಸುಮುಕ್ತೈಃ ॥ ೮೪ ॥

ಅ: ಭೀಮ ಹಾಗೆ ಹೊಡೆಯುತ್ತಿದ್ದಂತೆ ಭಯಗೊಂಡ ಅಲಂಬುಸ ರಾಕ್ಷಸ ಅವನನ್ನು ಬಿಟ್ಟು ಬಹಳ ದೂರಕ್ಕೆ ಓಡಿದ. ಬಳಿಕ ಭೀಮ ಚೆನ್ನಾಗಿ ಪ್ರಯೋಗಿಸಲ್ಪಟ್ಟ ಬಾಣಗಳಿಂದ ಶತ್ರುಗಳ ಸೈನ್ಯವನ್ನು ಹೊಡೆದೋಡಿಸತೊಡಗಿದ.

ವಿ : ಅಲಂಬುಸ ರಾಕ್ಷಸ ಭೀಮನಿಗೆ ಅಂಜಿ ಪಲಾಯನ ಮಾಡಿದ್ದು ಸಮಸ್ತ ರಾಕ್ಷಸಶಕ್ತಿಗಳೂ ವಾಯುದೇವರಿಗೆ ಅಂಜುವುದಕ್ಕೆ ಸೂಚಕ ಎಂದು ತಿಳಿಯಬೇಕು – 'ಜನ್ಮಾಧಿವ್ಯಾಧ್ಯು-ಪಾಧಿಪ್ರತಿಹತಿವಿರಹಪ್ರಾಪಕಾಣಾಮ್...' (ವಾಯುಸ್ತುತಿ ಶ್ಲೋ. ೩).

ಘಟೋತ್ಕಚನಿಂದ ಅಲಂಬುಸನವಧೆ

ತದೈವ ಕೃಷ್ಣಾತನಯಾಃ ಸಮೇತಾ
ಜಘ್ನುಃ ಶಲಂ ಸಂಯತಿ ಸೌಮದತ್ತಿಮ್ ।
ಅಲಂಬುಸಂ ಪ್ರಾಪ ತದಾ ಘಟೋತ್ಕಚಃ
ಪರಸ್ಪರಂ ತೌ ರಥಿನಾವಯುಧ್ಯತಾಮ್ ॥ ೮೫ ॥

ಅ: ಆಗಲೇ ದ್ರೌಪದಿಯ ಮಕ್ಕಳೆಲ್ಲಾ ಒಟ್ಟಾಗಿ ಯುದ್ಧದಲ್ಲಿ ಸೋಮದತ್ತನ ಮಗನಾದ ಶಲನನ್ನು ಕೊಂದುಹಾಕಿದರು. ಆಗ ಘಟೋತ್ಕಚ ಅಲಂಬುಸನನ್ನು ಎದುರಿಸಿದ. ಅವರಿಬ್ಬರೂ ರಥವನ್ನೇರಿ ಪರಸ್ಪರ ಯುದ್ಧದಲ್ಲಿ ತೊಡಗಿದರು.

ವಿ : ಶಲ ಸೋಮದತ್ತನ ಮೂವರು ಪುತ್ರರಲ್ಲಿ ಕೊನೆಯವನು. ವಿರೂಪಾಕ್ಷ ಎಂಬ ರುದ್ರನ ಅವತಾರ (೧೧/೧೧, ೧೨).

ಘಟೋತ್ಕಚಸ್ತಂ ವಿರಥಂ ವಿಧಾಯ
ಖಸ್ಥಂ ಖ ಏವಾಭಿಯುಯೋಧ ಸಂಸ್ಥಿತಃ ।
ತತಸ್ತು ತಂ ಭೀಮಸುತೋ ನಿಗೃಹ್ಯ
ನಿಪಾತ್ಯ ಭೂಮೌ ಪ್ರದದೌ ಪ್ರಹಾರಮ್ ॥ ೮೬ ॥

ಪದಾ ಶಿರಸ್ಯೇವ ಸ ಪಿಷ್ಟಮಸ್ತಕೋ
ಮಮಾರ ಮಧ್ಯೇ ಪೃಥಿವೀಪತೀನಾಮ್ ।
ತಸ್ಮಿನ್ ಹತೇ ಭೈಮಸೇನಿಃ ಕುರೂಣಾಂ
ವ್ಯದ್ರಾವಯದ್ರಥವ್ರಾತಂ ಸಮಂತಾತ್ ॥ ೪೭ ॥

ಅ: ಘಟೋತ್ಕಚ ಅಲಂಬುಸನನ್ನು ವಿರಥನನ್ನಾಗಿ ಮಾಡಿ ಗಗನಕ್ಕೇರಿದ ಅವನನ್ನು ಗಗನದಲ್ಲಿದ್ದೇ ಎದುರಿಸಿದನು. ಬಳಿಕ ಭೀಮಪುತ್ರನಾದ ಅವನು ಅವನನ್ನು ಹಿಡಿದು ಭೂಮಿಗೆ ಕೆಡವಿ ಪಾದದಿಂದ ಶಿರಸ್ಸಿನ ಮೇಲೆ ಜೋರಾಗಿ ಒದ್ದ. ತಲೆ ಪುಡಿಯಾದ ಅವನು ರಾಜರ ಮಧ್ಯದಲ್ಲಿ ಸತ್ತುಬಿದ್ದ. ಅವನು ಸತ್ತಮೇಲೆ ಘಟೋತ್ಕಚ ಕೌರವರ ರಥ ಸೇನೆಯನ್ನು ಎಲ್ಲೆಡೆಗಳಿಂದಲೂ ಓಡಿಸತೊಡಗಿದ.

ವಿ : ೧) ಅದೃಶ್ಯನಾಗಿ ಯುದ್ಧ ಮಾಡಿದ ಇಂದ್ರಜಿತ್ತನ್ನು ಶ್ರೀರಾಮ ತಾನು ಸಂಹರಿಸದೆ ತನ್ನ ತಮ್ಮನಾದ ಲಕ್ಷ್ಮಣನಿಂದ ಸಂಹಾರ ಮಾಡಿಸಿದಂತೆ, ಅದೃಶ್ಯನಾಗಿ ಯುದ್ಧ ಮಾಡಿದ ಅಲಂಬುಸ–ನನ್ನು ಭೀಮ ತಾನು ಸಂಹರಿಸದೇ ತನ್ನ ಪುತ್ರನಾದ ಘಟೋತ್ಕಚನಿಂದ ಸಂಹಾರ ಮಾಡಿಸಿದ.

೨) ಅದೃಶ್ಯರಾಗಿ ಯುದ್ಧ ಮಾಡುವವರು ಹೇಡಿಗಳು, ಅಂಥವರನ್ನು ಮಹಾವೀರ–ನಾದವನು ತಾನಾಗಿಯೇ ಸಂಹರಿಸುವುದು ಭೂಷಣವಲ್ಲ, ತನಗಿಂತ ಕಡಿಮೆಯಾದವರಿಂದಲೇ ಸಂಹರಿಸುವುದು ಉಚಿತ ಎಂಬ ತತ್ವಕ್ಕೆ ಇದು ಸೂಚಿತ.

೩) ಘಟೋತ್ಕಚ ಹಾಗೆ ಅಲಂಬುಸನ ತಲೆಯನ್ನು ತುಳಿದದ್ದು ಮುಂದೆ ಭೀಮಸೇನ ದುರ್ಯೋಧನನ ತಲೆಯನ್ನು ತುಳಿಯುವುದಕ್ಕೆ ಮುನ್ಸೂಚನೆಯಂತಿತ್ತು ಎಂದೂ ಭಾವಿಸಬಹುದು.

ಕೃತವರ್ಮನ ಪರಾಕ್ರಮ

ತದಾಽಽಸದತ್ ಕೃತವರ್ಮಾ ರಥೇನ
ಸೇನಾಂ ಪಾಂಡೂನಾಂ ಶರವರ್ಷಂ ಪ್ರಮುಂಚನ್ ।
ದದೌ ವರಂ ತಸ್ಯ ಹಿ ಪೂರ್ವಮಚ್ಯುತಃ
ಪ್ರೀತಃ ಸ್ತುತ್ಯಾ ಸರ್ವಜಯಂ ಮುಹೂರ್ತೇ ॥ ೪೮ ॥

ಅ: ಆಗ ಕೃತವರ್ಮ ರಥದಿಂದ ಪಾಂಡವರ ಸೇನೆಯನ್ನು ಬಾಣಗಳ ಮಳೆಯನ್ನು ಸುರಿಸುತ್ತಾ ಎದುರಿಸಿದ. ಹಿಂದೆ ಅವನಿಂದ ಸ್ತುತಿಸಲ್ಪಟ್ಟು ಪ್ರಸನ್ನನಾದ ಕೃಷ್ಣ ಒಂದು ಮುಹೂರ್ತ ಕಾಲ ಎಲ್ಲರನ್ನೂ ಜಯಿಸುವ ವರವನ್ನು ಅವನಿಗೆ ನೀಡಿದ್ದ.

ವಿ : ಕೃಷ್ಣನಿಂದ ವರ ಪಡೆದಿದ್ದ ಕೃತವರ್ಮ ಆಗ ಒಂದು ಮುಹೂರ್ತ ಕಾಲ ಅಪಾರ ಸಾಮರ್ಥ್ಯದಿಂದ ಎಲ್ಲರನ್ನೂ ಗೆಲ್ಲುವಂತಹ ಯುದ್ಧವನ್ನು ಮಾಡಿದ ಎಂದರ್ಥ.

ಸ ತೇನ ಪಾಂಚಾಲಗಣಾನ್ ವಿಜಿಗ್ಯೇ
ಯಮೌ ಚ ಭೀಮಸ್ಯ ಪುರೋಽಥ ತಂ ಚ ।
ವಿವ್ಯಾಧ ಬಾಣೇನ ಸ ವಾಸುದೇವ-
ವರಂ ವಿಜಾನನ್ ನ ತದಾ ಸಮಭ್ಯಯಾತ್ ॥ ೮೯ ॥

ಅ: ಆ ವರದಿಂದಾಗಿ ಕೃತವರ್ಮ ಪಾಂಚಾಲರ ಗುಂಪನ್ನು ಗೆದ್ದ. ಭೀಮನ ಎದುರೇ ನಕುಲ, ಸಹದೇವರನ್ನೂ ಗೆದ್ದ, ಭೀಮನನ್ನೂ ಸಹ ಬಾಣಗಳಿಂದ ಹೊಡೆದ. ಭೀಮ ಅವನಿಗೆ ಆಗ ಕೃಷ್ಣನ ವರ ಇದ್ದುದನ್ನು ತಿಳಿದು ಅವನನ್ನು ಎದುರಿಸಿ ಹೋಗಲಿಲ್ಲ.

ವಿ : ಕೃತವರ್ಮನಿಗೆ ಹಾಗೆ ಭೀಮನನ್ನು ಹೊಡೆಯಲು ಸಾಧ್ಯವಾಗಿದ್ದು ಕೃಷ್ಣನ ವರದಿಂದಾಗಿ ಮಾತ್ರ. ಅದನ್ನು ತಿಳಿದಿದ್ದ ಭೀಮ ತಾನು ಅದಕ್ಕೆ ಅವಕಾಶ ನೀಡಿದ ಎಂಬುದನ್ನು ತಿಳಿಯಬೇಕು. ಭೀಮ ಅವನ ಮೇಲೆ ಯುದ್ಧ ಮಾಡಿದ ವಿವರ ಮಹಾಭಾರತದಲ್ಲಿದೆ. ಆದ್ದರಿಂದ ಇಲ್ಲಿ ಕೃತವರ್ಮನನ್ನು ಎದುರಿಸಲಿಲ್ಲ ಎಂದರೆ, ಅವನಿಗೆ ಕೃಷ್ಣನ ವರವಿದ್ದದ್ದರಿಂದ ಅವನನ್ನು ಸೋಲಿಸುವ ರೀತಿಯಲ್ಲಿ ಎದುರಿಸಲಿಲ್ಲ ಎಂದು ಅರ್ಥ ಮಾಡಿಕೊಳ್ಳಬೇಕು.

ಸಾತ್ಯಕಿಯಿಂದ ಕೃತವರ್ಮನ ಪರಾಜಯ

ವಿನೈವ ವೃಷ್ಣೀನ್ ವಿಜಯೇ ವರೋ ಯ-
ದಮುಷ್ಯ ತೇನಾಸ್ಯ ಹಯಾನ್ ಸ ಸಾತ್ಯಕಿಃ ।
ನಿಹತ್ಯ ಬಾಣೈರತುದತ್ ಸ ಯಾನ-
ಮನ್ಯತ್ ಸಮಾಸ್ಥಾಯ ತತೋಽಪಜಗ್ಮಿವಾನ್ ॥ ೯೦ ॥

ಅ: ಯಾದವರ ಹೊರತು ಇತರರ ಮೇಲೆ ಸರ್ವಜಯವರವನ್ನು ಕೃಷ್ಣ ಅವನಿಗೆ ನೀಡಿದ್ದರಿಂದ ಸಾತ್ಯಕಿ ಅವನ ಕುದುರೆಗಳನ್ನು ಕೊಂದು ಬಾಣಗಳಿಂದ ಪೀಡಿಸಿದ. ಅವನು ಬೇರೊಂದು ರಥವನ್ನೇರಿ ಅಲ್ಲಿಂದ ತೆರಳಿದ.

ವಿ : ಇತರರ ಮೇಲೆ ಜಯ ಸಾಧಿಸಿದ್ದ ಕೃತವರ್ಮನನ್ನು ಸಾತ್ಯಕಿ ಪರಾಭವಗೊಳಿಸಿದ. ಅವನಿಗೆ ಅದು ಸಾಧ್ಯವಾದುದು ಒಬ್ಬ ಯಾದವನಾದ್ದರಿಂದ. ಕೃಷ್ಣನ ವರ ಕೃತವರ್ಮನಿಗಿದ್ದುದು ಯಾದವರ ಹೊರತು ಇತರ ಎಲ್ಲರನ್ನೂ ಸೋಲಿಸಲೆಂದು ಮಾತ್ರ ಎಂದು ತಿಳಿಯಬೇಕು.

ಕೃಷ್ಣನ ಪಾಂಚಜನ್ಯಘೋಷ

ತದಾ ಹರಿಃ ಪಾಂಚಜನ್ಯಂ ಸುಘೋಷ-
ಮಾಪೂರಯಾಮಾಸ ಜಯೇಽಭಿಯುಧ್ಯತಿ ।
ಕರ್ಣಾದಿಭಿರ್ದ್ರೌಣಿಮುಖೈ ರಿಪೂಣಾಂ
ಬಲಪ್ರಹಾಣಾಯ ಪರಃ ಪರೇಭ್ಯಃ ॥ ೯೧ ॥

ಅ: ಅರ್ಜುನ ಕರ್ಣಾದಿಗಳೊಂದಿಗೂ, ಅಶ್ವತ್ಥಾಮ ಮೊದಲಾದವರೊಂದಿಗೂ ಯುದ್ಧ ಮಾಡುತ್ತಿದ್ದಾಗ ಶತ್ರುಗಳ ಬಲವನ್ನು ಕುಗ್ಗಿಸಲೆಂದು ಆಗ ಸರ್ವೋತ್ತಮನಾದ ಶ್ರೀಕೃಷ್ಣ ಅಪೂರ್ವ ಧ್ವನಿ ಮಾಡುವ ಪಾಂಚಜನ್ಯವನ್ನು ಮೊಳಗಿಸಿದ.

ವಿ: ಅರ್ಜುನನಿಗೆ ಸ್ಫೂರ್ತಿ ಹೆಚ್ಚಿಸಲೆಂದು, ಕರ್ಣಾದಿ ಕೌರವ ಪಕ್ಷದವರ ಶಕ್ತಿಯನ್ನು ಕುಗ್ಗಿಸಲೆಂದು ಶ್ರೀಕೃಷ್ಣ ಪಾಂಚಜನ್ಯ ಶಂಖವನ್ನು ಮೊಳಗಿಸಿದನು ಎಂದರ್ಥ. ಶಂಖಘೋಷಕ್ಕೆ ಆಸುರೀ ಶಕ್ತಿಗಳು ಮಣಿಯುವುದನ್ನು ಶಂಖಪೂಜೆಯ ಮಂತ್ರ ಸ್ಪುಟಪಡಿಸಿದೆ.

ಗರ್ಭಾ ದೇವಾರಿನಾರೀಣಾಂ ವಿಶೀರ್ಯಂತೇ ಸಹಸ್ರಧಾ ।
ತವ ನಾದೇನ ಪಾತಾಲೇ ಪಾಂಚಜನ್ಯ ನಮೋಸ್ತು ತೇ ॥

ಕರ್ಣಾದಿಗಳು ಆಸುರರಲ್ಲವಾದರೂ, ಮಹಾಸುರರಾದ ದುರ್ಯೋಧನಾದಿಗಳ ನೆರವಿಗೆ ನಿಂತಿದ್ದರಿಂದ ಅವರ ಶಕ್ತಿಯೂ ಸಹ ಕುಗ್ಗುವಂತಾಯಿತು ಎಂದು ತಿಳಿಯಬೇಕು.

ಸ ಪಾಂಚಜನ್ಯೋಽಚ್ಯುತವಕ್ತ್ರವಾಯುನಾ
ಭೃಶಂ ಸುಪೂರ್ಣೋದರನಿಃಸೃತಧ್ವನಿಃ ।
ಜಗದ್ವಿರಿಂಚೇಶಸುರೇಂದ್ರಪೂರ್ವಕಂ
ಪ್ರಕಂಪಯಾಮಾಸ ಯುಗಾತ್ಯಯೇ ಯಥಾ ॥ ೯೨ ॥

ಅ: ಶ್ರೀಕೃಷ್ಣನ ಬಾಯಿಂದ ಹೊರಟ ಗಾಳಿ ಚೆನ್ನಾಗಿ ತನ್ನ ಉದರದೊಳಗೆ ತುಂಬಿಕೊಂಡಾಗ ಜೋರಾದ ಧ್ವನಿಯನ್ನು ಹೊರಡಿಸಿ ಆ ಪಾಂಚಜನ್ಯ ಪ್ರಳಯ ಕಾಲದಲ್ಲಿ ಹೇಗೋ ಹಾಗೆ ಬ್ರಹ್ಮ, ಶಿವ, ದೇವೇಂದ್ರ ಮೊದಲಾದ ಜಗತ್ತನ್ನೆಲ್ಲ ನಡುಗಿಸಿತು.

ವಿ: ೧) ಈ ಶ್ಲೋಕ ಮೂಲಮಹಾಭಾರತದಲ್ಲಿ ಹೀಗೆಯೇ ಇದೆ (ದ್ರೋಣ. ೭೩/೫೨).

---

೯೧. ಜಯೇ ಅಭಿಯುಧ್ಯತೀತ್ಯತ್ರ ಜಯೇ= ಅತಿಜಯೇ ಅರ್ಜುನ ಇತ್ಯರ್ಥಃ ॥ –(ವಾ.)

೨) ಕೃಷ್ಣ ಶಂಖ ಊದಿದ ಪರಿ ಮತ್ತು ಅದರಿಂದಾದ ಪರಿಣಾಮ ಎರಡೂ ಇಲ್ಲಿ ಅತ್ಯಂತ ಅಪೂರ್ವ ರೀತಿಯಲ್ಲಿ ನಿರೂಪಿತವಾಗಿರುವುದನ್ನು ಗಮನಿಸಬೇಕು.

ಗಾಂಡೀವದ ಘೋಷ ಕೇಳದೆ ಯುಧಿಷ್ಠಿರನ ಆತಂಕ

ಗಾಂಡೀವಘೋಷೇ ಚ ತದಾऽಭಿಭೂತೇ
ಯುಧಿಷ್ಠಿರೋ ಭೀತಭೀತಸ್ತದೈತ್ಯ ।
ಶೈನೇಯಮೂಚೇ ಪರಸೈನ್ಯಮಗ್ನೇ
ಪಾರ್ಥೇ ಸ್ವಯಂ ಯುಧ್ಯತಿ ಕೇಶವಃ ಸ್ಮ ॥ ೯೩ ॥

ಅ: ಆಗ ಗಾಂಡೀವದ ಧ್ವನಿ ಕೇಳಿಸದಂತಾಗಲು ಧರ್ಮರಾಜ ಬಹಳವಾಗಿ ಭಯ-ಗೊಂಡವನಾಗಿ ಸಾತ್ಯಕಿಯ ಬಳಿ ಹೋಗಿ ಹೇಳಿದ 'ಸಾತ್ಯಕಿ, ಅರ್ಜುನ ಶತ್ರುಸೇನೆಯಲ್ಲಿ ಸಿಕ್ಕಿಹಾಕಿಕೊಂಡಿರಲು ಕೃಷ್ಣನೇ ಸ್ವತಃ ಯುದ್ಧ ಮಾಡುತ್ತಿರುವನೋ ಏನೋ'.

ವಿ: ಧರ್ಮರಾಜ ಅಂದು ವಿಶೇಷವಾಗಿ ಅರ್ಜುನನ ಗಾಂಡೀವ ಘೋಷದ ಕಡೆಗೆ ಗಮನ ನೀಡಿದ್ದ. ಅದಕ್ಕೆ ಅಂದು ಸೂರ್ಯ ಮುಳುಗುವ ಮುನ್ನ ಜಯದ್ರಥನನ್ನು ಸಂಹರಿಸುವ ಭಯಂಕರ ಪ್ರತಿಜ್ಞೆಯನ್ನು ಅವನು ಮಾಡಿದ್ದುದೇ ಕಾರಣವಾಗಿತ್ತು. ಆ ವರೆಗೂ ಕೇಳುತ್ತಿದ್ದ ಗಾಂಡೀವಘೋಷ ಆಗ ಕೇಳದಂತಾಗಿ ಕೃಷ್ಣನ ಪಾಂಚಜನ್ಯದ ಘೋಷ ಮಾತ್ರ ಕೇಳತೊಡಗಲು ಧರ್ಮರಾಜ ಅರ್ಜುನನಿಗೆ ಆಪತ್ತು ಸಂಭವಿಸಿ ಕೃಷ್ಣ ತಾನೇ ಯುದ್ಧಕ್ಕೆ ತೊಡಗಿರುವನೋ ಎಂದು ಆತಂಕ-ಕ್ಕೊಳಗಾದ ಎಂದರ್ಥ.

ಅರ್ಜುನನ ಕ್ಷೇಮವಾರ್ತೆ ತಿಳಿದು ಬರಲು ಸಾತ್ಯಕಿಯ ಪ್ರೇಷಣೆ

ನ ಶ್ರೂಯತೇ ಗಾಂಡಿವಸ್ಯಾದ್ಯ ಘೋಷಃ
ಸಂಶ್ರೂಯತೇ ಪಾಂಚಜನ್ಯಸ್ಯ ಘೋಷಃ ।
ತದ್ಯಾಹಿ ಜಾನೀಹಿ ತಮದ್ಯ ಪಾರ್ಥಂ
ಯದಿ ಸ್ಮ ಜೀವತ್ಯಸಹಾಯ ಏಷಃ ॥ ೯೪ ॥

ಅ: ''ಈಗ ಗಾಂಡೀವದ ಧ್ವನಿ ಕೇಳುತ್ತಿಲ್ಲ, ಪಾಂಚಜನ್ಯದ ಘೋಷ ಜೋರಾಗಿಯೇ ಕೇಳುತ್ತಿದೆ, ಆದ್ದರಿಂದ ನೀನೀಗ ಅರ್ಜುನನ ಬಳಿಗೆ ತೆರಳು. ಅಸಹಾಯಕನಾದ ಅವನು ಬದುಕಿರುವನೋ ಎಂದು ನೋಡು''.

---

೯೪. ಸುಘೋಷಂ ಸುತರಾಂ ಘೋಷೋ ಧ್ವನಿರ್ಯಸ್ಯ ಸ ತಥಾ। – (ಜ.)

ಭೀಮಸೇನನಿಂದ ಸಾತ್ಯಕಿಯ ವ್ಯೂಹಪ್ರವೇಶ

ಇತೀರಿತಃ ಸಾತ್ಯಕಿರತ್ರ ವಿಪ್ರಾನ್
ಸಂಪೂಜ್ಯ ವಿತ್ತೈಃ ಪರಮಾಶಿಷಶ್ಚ।
ಜಯಾಯ ತೇಭ್ಯಃ ಪ್ರತಿಗೃಹ್ಯ ಸೇನಾ
ಮುಖಂ ಯಯೌ ಭೀಮಸೇನಾನುಯಾತಃ ॥ ೯೫ ॥

ಅ: ಧರ್ಮರಾಜ ಹೀಗೆನ್ನಲು ಸಾತ್ಯಕಿ ಅಲ್ಲಿ ಬ್ರಾಹ್ಮಣರನ್ನು ದ್ರವ್ಯಗಳಿಂದ ಚೆನ್ನಾಗಿ ಪೂಜಿಸಿ ಜಯಕ್ಕೆಂದು ಅವರಿಂದ ಉತ್ತಮ ಆಶೀರ್ವಚನಗಳನ್ನು ಪಡೆದು ಭೀಮಸೇನನ ರಕ್ಷಣೆಯಲ್ಲಿ ವ್ಯೂಹದ ದ್ವಾರಕ್ಕೆ ತೆರಳಿದ.

ವಿ: ಜಯಸಾಧನೆಯಲ್ಲಿ ಬ್ರಾಹ್ಮಣರ ಆಶೀರ್ವಾದದ ಪಾತ್ರವನ್ನು ಇಲ್ಲಿ ನಿರೂಪಿಸಲಾಗಿದೆ. ದ್ರವ್ಯದಿಂದ ಸತ್ಕೃತರಾಗುವ ವಿಪ್ರರು ನೀಡುವ ಶುಭಾಶೀರ್ವಾದಗಳು ಶ್ರೇಯಸ್ಸಿಗೆ ಸಾಧನ ಎಂದರ್ಥ.

ದ್ರೋಣರಿಂದ ಸಾತ್ಯಕಿಯ ಉಪೇಕ್ಷೆ

ಭೀಮಸ್ತು ಸೇನಾಮುಖಮಾಶು ಭಿತ್ತ್ವಾ
ಪ್ರಾವೇಶಯದ್ಯುಯುಧಾನಂ ಚಮೂಂ ತಾಮ್ ।
ಸ ಯುಧ್ಯಮಾನೋ ಗುರೂಣಾಽಭ್ಯುಪೇಕ್ಷಿತಃ
ಸೂತಂ ನಿಹತ್ಯ ದ್ರಾವಯಾಮಾಸ ಚಾಶ್ವಾನ್ ॥ ೯೬ ॥

ಅ: ಭೀಮಸೇನನು ಕೂಡಲೇ ಸೇನೆಯ ದ್ವಾರವನ್ನು ಭೇದಿಸಿ ಸಾತ್ಯಕಿಯನ್ನು ಆ ಸೇನೆಯೊಳಗೆ ಪ್ರವೇಶ ಮಾಡಿಸಿದ. ಸಾತ್ಯಕಿ ದ್ರೋಣರೊಡನೆ ಯುದ್ಧ ಮಾಡಿದ. ದ್ರೋಣರು ಅವನನ್ನು ಉಪೇಕ್ಷಿಸಿದರು. ಸಾತ್ಯಕಿ ದ್ರೋಣರ ಸಾರಥಿಯನ್ನು ಕೊಂದು ಕುದುರೆಗಳನ್ನು ಓಡಿಸಿದ.

ವಿ : ಸಾತ್ಯಕಿಗೆ ಶಕಟಾಬ್ಜಚಕ್ರದ ಆ ವ್ಯೂಹದೊಳಗೆ ಪ್ರವೇಶಿಸಲು ಸ್ವತಃ ಸಾಧ್ಯವಾಗಲಿಲ್ಲ ಅದನ್ನು ಸಾಧ್ಯಮಾಡಿಕೊಟ್ಟಿದ್ದು ಭೀಮಸೇನ ಎಂಬುದನ್ನು ಗಮನಿಸಬೇಕು. ದ್ರೋಣರು ಸಾತ್ಯಕಿಯನ್ನು ಉಪೇಕ್ಷೆ ಮಾಡಿದ್ದು ಅವನು ಅರ್ಜುನನ ಪ್ರಿಯ ಶಿಷ್ಯ, ಅವನನ್ನು ಸೇರಿಕೊಳ್ಳಲಿ ಎಂಬ ಕಾರಣದಿಂದಲೇ. ಅವರು ನಿನ್ನ ಗುರುವಾದ ಅರ್ಜುನ ನನಗೆ ವಂದಿಸಿ ಒಳನಡೆದ, ನೀನೂ ಹಾಗೆ ಮಾಡಿದಲ್ಲಿ ಒಳಗೆ ಹೋಗಬಹುದು ಎಂಬ ಸೂಚನೆಯಿತ್ತರು :

ತವಾಚಾರ್ಯೋ ರಣಂ ಹಿತ್ವಾ ಗತಃ ಕಾಪುರುಷೋ ಯಥಾ ।
ಯುಧ್ಯಮಾನಂ ಚ ಮಾಂ ಹಿತ್ವಾ ಪ್ರದಕ್ಷಿಣಮವರ್ತತ ।
ತ್ವಂ ಹಿ ಯೇ ಯುಧ್ಯತೋ ನಾದ್ಯ ಜೀವನ್ ಯಾಸ್ಯಸಿ ಮಾಧವ ॥

– ಭಾರತ (ದ್ರೋಣ. ೧೧೩/೩೦,೩೧)

ಸಾತ್ಯಕಿ ತನ್ನ ಗುರುವಾದ ಅರ್ಜುನನೇ ಹಾಗೆ ಮಾಡಿರುವಾಗ, ಶಿಷ್ಯನಾದ ತಾನೂ ಹಾಗೇ ನಡೆದುಕೊಳ್ಳುವುದು ಉಚಿತ ಎಂದು ತಿಳಿಸಿ ವಂದಿಸಿಯೇ ಅವರ ಅನುಮತಿ ಪಡೆದು ಒಳನಡೆದ. ನಮಸ್ಕರಿಸಿದ ಮೇಲೆ ಯುದ್ಧಮಾಡಿದ್ದು ರಣರಂಗದ ಮರ್ಯಾದೆ ಎಂದು ಮಾತ್ರ :

ಗಚ್ಛಾಮಿ ಸ್ವಸ್ತಿ ತೇ ಬ್ರಹ್ಮನ್ ನ ಮೇ ಕಾಲಾತ್ಯಯೋ ಭವೇತ್ ।
ಆಚಾರ್ಯಾನುಗತೋ ಮಾರ್ಗಃ ಶಿಷ್ಯೈರನ್ವಾಸ್ಯತೇ ಸದಾ ॥
ತಸ್ಮಾದೇವ ವ್ರಜಾಮ್ಯಾಶು ಯಥಾ ಮೇ ಸ ಗುರುರ್ಗತಃ ।

– ಭಾರತ (ದ್ರೋಣ. ೧೧೩/೩೩)

ಸಾತ್ಯಕಿಯ ಅಪೂರ್ವ ಪರಾಕ್ರಮ

ಬಲಂ ವಿವೃದ್ಧಂ ಚ ತದಾऽಸ್ಯ ಸಾತ್ಯಕೇ-
ರ್ವಿಪ್ರಾಶೀರ್ಭಿಃ ಕೃಷ್ಣವರಾದಪಿ ಸ್ಮ ।
ಬಲಸ್ಯ ವೃದ್ಧಿರ್ಹಿ ಪುರಾऽಸ್ಯ ದತ್ತಾ
ಕೃಷ್ಣೇನ ತುಷ್ಟೇನ ದಿನೇ ಹಿ ತಸ್ಮಿನ್ ॥ ೯೭ ॥

ಅ: ಆಗ ಬ್ರಾಹ್ಮಣರ ಆಶೀರ್ವಚನಗಳಿಂದಲೂ, ಶ್ರೀಕೃಷ್ಣನ ವರದಿಂದಲೂ ಸಾತ್ಯಕಿಯ ಬಲ ಬಹಳವಾಗಿ ಹೆಚ್ಚಿತು. ಸಂತೋಷಪಟ್ಟಿದ್ದ ಕೃಷ್ಣ ಆ ಒಂದು ದಿನದ ಮಟ್ಟಿಗೆ ಅವನ ಬಲವು ಹೆಚ್ಚಲಿ ಎಂದು ವರ ನೀಡಿದ್ದ.

---

೯೭. ಪ್ರವೇಶಸ್ಯಾಪಿ ಪ್ರಾಪ್ತಿವಿಶೇಷತ್ವಾದ್ಗತಿಬುದ್ಧೀತಿದ್ವಿಕರ್ಮತಾ। ಗತೀತಿ ಸಪ್ರಾಪ್ತಿಕಾಯಾಃ ಗ್ರಹಣಂ। ಅನ್ಯಥಾ ನೀವಹ್ಯೋರ್ನೇತಿ ನಿಷೇಧೋ ವ್ಯರ್ಥಃ ಸ್ಯಾತ್। – (ಜ.)

೯೭. 'ಬಲಂ ವಿವೃದ್ಧಂ ಚ ತದಾऽಸ್ಯ ಸಾತ್ಯಕೇರ್ವಿಪ್ರಾಶೀರ್ಭಿಃ ಕೃಷ್ಣವರಾದಪಿ ಸ್ಮ' ಇತ್ಯತ್ರ ವಿಪ್ರಾಶೀರ್ಭಿಃ ಕೃಷ್ಣವರಾದಪಿ ಸಾತ್ಯಕೇರ್ಬಲಂ ವಿವೃದ್ಧಮುಚ್ಯತೇ । ತಥೋತ್ತರತ್ರ 'ಸ ಸೌಮದತ್ತಿರ್ಭುವಿ ಸಾತ್ಯಕಿಂ ರಣೇ ನಿಪಾತ್ಯ ಕೇಶೇಷು ಚ ಸಂಪ್ರಗೃಹ್ಯ' ಇತಿ (೨೬/೧೦೫) ಅಪಜಯಶ್ಚೋಚ್ಯತೇ । ಕೃಷ್ಣವರೇ ವಿದ್ಯಮಾನೇ ಅಪಜಯಾನುಪಪತ್ತೇಃ ತಸ್ಮಾತ್ ಕಥಮಿತ್ಯೇತತ್ ಕೃಷ್ಣವರಸ್ಯ ತಥಾ ಬ್ರಾಹ್ಮಣವರಸ್ಯ ಸಾಮಾನ್ಯರೂಪತ್ವೇನ ಪರಿಹರಣೀಯಮ್ । ಅಥವಾ ತದ್ವ್ಯತಿರಿಕ್ತತ್ವೇನ ಪರಿಹರಣೀಯಮ್ । 'ಪೂರ್ವಮೇವ ಹಿ ಕೃಷ್ಣಸ್ಯ ಮನೋಗತಮಿದಂ ಪ್ರಭೋಃ । ವಿಜೇತವ್ಯೋ ಯಥಾ ವೀರಃ ಸಾತ್ಯಕಿರ್ಯುಪಕೇತುನಾ । ಅತೀತೇನಾಗತೇ ಕಾಲೇ ಸ ಹಿ ವೇತ್ತಿ ಜನಾರ್ದನಃ' ಇತಿ ದ್ರೋಣಪರ್ವ-ವಚನಾತ್ । – (ತಿ.)

ವಿ : ೧) ಕೃತವರ್ಮನಿಗೆ ಆ ದಿನ ಒಂದು ಮುಹೂರ್ತದ ಮಟ್ಟಿಗೆ ಕೃಷ್ಣನಿಂದ ಸರ್ವಜಯದ ವರ ಲಭಿಸಿದ್ದರೆ, ಸಾತ್ಯಕಿಗೆ ಇಡೀ ದಿನ ಬಲವೃದ್ಧಿಯ ವರ ನೀಡಲ್ಪಟ್ಟಿತ್ತು ಎಂಬುದು ವಿಶೇಷ.

೨) ಹರಿಗುರುಗಳ ಅನುಗ್ರಹ ವಿಶೇಷ ಸಂದರ್ಭಗಳಲ್ಲಿ ಬಲವೃದ್ಧಿ ಮೊದಲಾದವುಗಳಿಗೆ ಹೇಗೆ ಸಾಧನವಾಗುವವು ಎಂಬುದು ಇಲ್ಲಿ ನಿರೂಪಿತವಾಗಿದೆ.

ಸಾತ್ಯಕಿ ಕೃತವರ್ಮರ ಯುದ್ಧ

ತತೋ ವಿವೃದ್ಧೋರುಬಲಾತ್ ಸ ಸಾತ್ಯಕಿಃ
ಸಂಸ್ಥಾಪ್ಯ ಭೀಮಂ ಪ್ರಯಯೌ ರಥೇನ ।
ತಂ ಬಾಣವರ್ಷೈಃ ಪೃತನಾಂ ಸಮಂತಾ-
ನ್ನಿಘ್ನಂತಮಾಜೌ ಹೃದಿಕಾತ್ಮಜೋಽಭ್ಯಯಾತ್ ॥ ೯೮ ॥

ಅ: ಬಳಿಕ ಬಹಳವಾಗಿ ಹೆಚ್ಚಿದ ಮಹಾಬಲದಿಂದಾಗಿ ಆ ಸಾತ್ಯಕಿ ಭೀಮಸೇನನನ್ನು ಸೇನಾಮುಖದಲ್ಲಿಯೇ ನಿಲ್ಲಿಸಿ ರಥದೊಂದಿಗೆ ಮುಂದೆ ಸಾಗಿದ. ಬಾಣಗಳ ಮಳೆಯಿಂದ ಎಲ್ಲೆಡೆಗಳಿಂದಲೂ ಸೇನೆಯನ್ನು ಧ್ವಂಸ ಮಾಡುತ್ತಿದ್ದ ಅವನನ್ನು ಹೃದಿಕ ಪುತ್ರನಾದ ಕೃತವರ್ಮ ಯುದ್ಧದಲ್ಲಿ ಎದುರಿಸಿದ.

ಸಾತ್ಯಕಿಯಿಂದ ಜಲಸಂಧನವಧೆ

ತಯೋರಭೂದ್ಯುದ್ಧಮತೀವ ದಾರುಣಂ
ತತ್ಸಾಕರೋತ್ ತಂ ವಿರಥಂ ಸ ಸಾತ್ಯಕಿಃ ।
ವಿಜಿತ್ಯ ತಂ ಸಾತ್ಯಕಿರುಗ್ರಧನ್ವಾ
ಯಯಾವತೀತ್ಯೈವ ಶಿರಾಂಸಿ ಯೂನಾಮ್ ॥ ೯೯ ॥

---

೯೭. ಸ್ನಾತಕಾನಾಂ ಸಹಸ್ರಸ್ಯ ಸ್ವರ್ಣನಿಷ್ಕಾನಥೋ ದದೌ ।
ಆಶೀರ್ವಾದೈಃ ಪರಿಷ್ವಕ್ತಃ ಸಾತ್ಯಕಿಃ ಶ್ರೀಮತಾಂ ವರಃ ॥ – ಭಾರತ (ದ್ರೋಣ. ೧೧೨/೬೨)

೯೭. ತದುಕ್ತಂ ದ್ರೋಣಪರ್ವಣಿ –
'ಪೂರ್ವಮೇವ ಹಿ ಕೃಷ್ಣಸ್ಯ ಮನೋಗತಮಿದಂ ಪ್ರಭೋ।
ವಿಜೇತವ್ಯೋ ಯಥಾ ವೀರಃ ಸಾತ್ಯಕಿರ್ಯೂಪಕೇತುನಾ।
ಅತೀತಾನಾಗತೇ ರಾಜನ್ ಸ ಹಿ ವೇತ್ತಿ ಜನಾರ್ದನಃ ॥' ಇತಿ । – (ಜ.)

೯೮. **ತತೋಽಧಿವೃದ್ಧೋರುಬಲಾತ್** .... – (ಪಾಠಾಂತರ)

ಅ: ಅವರಿಬ್ಬರಿಗೂ ಅತ್ಯಂತ ದಾರುಣವಾದ ಯುದ್ಧ ನಡೆಯಿತು. ಆಲ್ಲಿ ಸಾತ್ಯಕಿ ಕೃತವರ್ಮನನ್ನು ವಿರಥನನ್ನಾಗಿಸಿದ. ಮಹಾಧನುರ್ಧಾರಿಯಾದ ಸಾತ್ಯಕಿ ಅವನನ್ನು ಗೆದ್ದು ಬಾಣಗಳಿಂದ ತರುಣರ ತಲೆಗಳನ್ನು ಕತ್ತರಿಸುತ್ತಾ ಸಾಗಿದ.

ವಿ : ೧) ಸಾತ್ಯಕಿ ಕೃತವರ್ಮರ ಯುದ್ಧ ಅಪೂರ್ವವಾಗಲು ಕಾರಣ ಅವರಿಬ್ಬರೂ ಯಾದವ ವೀರರಾಗಿದ್ದುದು ಒಂದೆಡೆಯಾದರೆ, ಅವರಿಬ್ಬರೂ ಕ್ರಮವಾಗಿ ಕೃಷ್ಣಪಕ್ಷ, ಶುಕ್ಲಪಕ್ಷಗಳ ಅಭಿಮಾನಿ ದೇವತೆಗಳ ಅವತಾರರಾಗಿದ್ದುದು ಮತ್ತೊಂದು ಕಾರಣ ಎಂದು ತಿಳಿಯಬೇಕು.

೨) ಹಿಂದೆ ಹೇಳಿದಂತೆ ಸಾತ್ಯಕಿಗೆ ಇಡೀ ದಿನ ಬಲದ ಅಭಿವೃದ್ಧಿಯ ವರ ಕೃಷ್ಣನಿಂದ ಲಭಿಸಿದ್ದರಿಂದಲೂ, ಕೃತವರ್ಮನಿಗೆ ಯಾದವರ ಹೊರತು ಇತರರ ಮೇಲೆ ಮಾತ್ರ ಜಯ ಸಾಧಿಸುವ ವರ ಇದ್ದುದರಿಂದಲೂ ಸಾತ್ಯಕಿ ಆ ಯುದ್ಧದಲ್ಲಿ ಗೆಲ್ಲುವಂತಾಯಿತು ಎಂದು ತಿಳಿಯಬೇಕು.

೩) ಸಾತ್ವಿಕರಾದ ಪಾಂಡವರ ಪಕ್ಷ ವಹಿಸಿದ ಸಾತ್ಯಕಿಯ ಬಲ ಹೆಚ್ಚಿದ್ದು ತಾಮಸರಾದ ಕೌರವರ ಪಕ್ಷ ವಹಿಸಿದ್ದ ಕೃತವರ್ಮನ ಬಲ ಕುಗ್ಗಿದ್ದು ಸಹಜ ಎಂಬುದನ್ನೂ ಗಮನಿಸಬೇಕು.

ಕೃಂತನ್ ಶರೈಸ್ತಂ ಜಲಸಂಧ ಆಗಮದ್
ರಣೇ ಗಜಸ್ಕಂಧಗತೋಽಭಿಯೋದ್ಧುಮ್ ।
ನಿವಾರಯಂತಂ ತಮಸಹ್ಯವಿಕ್ರಮಂ
ನಿಹತ್ಯ ಬಾಣೈಃ ಸಮರೇ ಸ ಸಾತ್ಯಕಿಃ ॥ ೧೦೦ ॥

ಅ: ಆಗ ಜಲಸಂಧ ಆನೆಯ ಮೇಲೆ ಕುಳಿತು ಯುದ್ಧ ಮಾಡಲೆಂದು ಆಗಮಿಸಿದ. ತನ್ನನ್ನು ತಡೆಯಬಂದ, ಸಹಿಸಲಾಗದ ಆ ಮಹಾಪರಾಕ್ರಮಿಯಾದ ಜಲಸಂಧನನ್ನು ಸಾತ್ಯಕಿ ಬಾಣಗಳಿಂದ ಹೊಡೆದು ಕೊಂದುಹಾಕಿದ.

ವಿಲೋಡಯಾಮಾಸ ಬಲಂ ಕುರೂಣಾಂ
ನಿಘ್ನನ್ ಗಜಸ್ಯಂದನವಾಜಿಪತ್ತಿನಃ ।
ಸ ಪಾರ್ವತೇಯಾಂಶ್ಚ ಶಿಲಾಪ್ರವರ್ಷಿಣೋ
ನಿಹತ್ಯ ವಿದ್ರಾಪ್ಯ ಚ ಸರ್ವಸೈನಿಕಾನ್ ॥ ೧೦೧ ॥

---

೧೦೧. ಗಜಸ್ಯಂದನವಾಜಿಪತ್ತಿನ ಇತ್ಯತ್ರ ''ದ್ವಂದ್ವಶ್ಚ ಪ್ರಾಣಿತೂರ್ಯಸೇನಾಂಗಾನಾ'' ಮಿತಿ ವಚನಾತ್ ಏಕವದ್ಭಾವೇ ಕೃತೇ ಪತ್ತಿನ ಇತಿ ಷಷ್ಠ್ಯಂತಂ ಪದಂ ಚತುರಂಗಸೈನ್ಯಸ್ಯೇತ್ಯರ್ಥಃ ॥ – (ವಾ.)

ಅ: ಸಾತ್ಯಕಿ ಕೌರವರ ಸೈನ್ಯವನ್ನು, ಆನೆ,ರಥ, ಕುದುರೆ ಹಾಗೂ ಕಾಲಾಳುಗಳನ್ನು ಕೊಲ್ಲುತ್ತಾ ಕದಡಿ ಹಾಕಿದ. ಅವನು ಬಂಡೆಗಳ ಮಳೆ ಸುರಿಸುತ್ತಿದ್ದ ಗುಡ್ಡಗಾಡಿನ ಜನರನ್ನೂ ಸಂಹರಿಸಿ ಎಲ್ಲ ಸೈನಿಕರನ್ನು ಓಡಿಸಿದ.

ಸಾತ್ಯಕಿ ಭೂರಿಶ್ರವರ ಘೋರಯುದ್ಧ

ಸಮಾಸದತ್ ಕೇಶವಫಲ್ಗುನೌ ಚ
ಬಲೀ ತಮಾರಾಶು ಚ ಯೂಪಕೇತುಃ ।
ತಯೋರಭೂದ್ಯುದ್ಧಮತೀವ ಘೋರಂ
ಚಿರಂ ವಿಚಿತ್ರಂ ಚ ಮಹದ್ವಿಭೀಷಣಮ್ ॥ ೧೦೨ ॥

ಅ: ಸಾತ್ಯಕಿ ಕೃಷ್ಣಾರ್ಜುನರನ್ನು ಸಮೀಪಿಸಿದ. ಕೂಡಲೇ ಯೂಪಧ್ವಜನಾದ ಭೂರಿಶ್ರವಸ್ ಅವನ ಮೇಲೆ ಯುದ್ಧಕ್ಕೆ ಬಂದ. ಅವರಿಬ್ಬರಿಗೂ ಅತ್ಯಂತ ಘೋರವಾದ, ವಿಚಿತ್ರವಾದ, ಭಯಂಕರವಾದ, ದೊಡ್ಡ ಯುದ್ಧ ಬಹುಕಾಲ ನಡೆಯಿತು.

ಪರಸ್ಪರಂ ತೌ ತುರಗಾನ್ ನಿಹತ್ಯ
ನಿಪಾತ್ಯ ಸೂತೌ ಧನುಷೀ ನಿಕೃತ್ಯ ।
ಸಮೀಯತುಶ್ಚರ್ಮವರಾಸಿಧಾರಿಣೌ
ವಿಚಿತ್ರಮಾರ್ಗಾನ್ ಯುಧಿ ಸಂಚರಂತೌ ॥ ೧೦೩ ॥

ಅ: ಸಾತ್ಯಕಿ ಭೂರಿಶ್ರವರು ಪರಸ್ಪರ ಕುದುರೆಗಳನ್ನು ಕೊಂದರು, ಸೂತರನ್ನೂ ಸಂಹರಿಸಿದರು, ಬಿಲ್ಲುಗಳನ್ನು ಕತ್ತರಿಸಿದರು. ಬಳಿಕ ಕತ್ತಿ ಗುರಾಣಿಗಳನ್ನು ಹಿಡಿದು ಯುದ್ಧದಲ್ಲಿ ಬಹುಬಗೆಯ ವರಸೆಗಳನ್ನು ತೋರುತ್ತಾ ಹೋರಾಡತೊಡಗಿದರು.

ವಿ : ೧) ಸಾತ್ಯಕಿ ಭೂರಿಶ್ರವಸ್ ಇಬ್ಬರೂ ಪರಮಸಾತ್ತ್ವಿಕರಾದ ದೇವತಾಂಶಸಂಭೂತರೇ. ಅವರು ಇಲ್ಲಿ ಹೀಗೆ ಕಾದಾಡಲು ಅವರಲ್ಲಿ ಹಿಂದಿನಿಂದ ಬೆಳೆದು ಬಂದಿದ್ದ ವೈರ ಕಾರಣವಾಗಿತ್ತು. ಅದರ ವಿವರ ಮಹಾಭಾರತದಲ್ಲಿ ಬಂದಿದೆ (ದ್ರೋಣಪರ್ವ, ಅಧ್ಯಾಯ ೧೪೪, ಶ್ಲೋ. ೯–೧೮).

೨) ದೇವಕಿಯ ಸ್ವಯಂವರದಲ್ಲಿ ಶಿನಿ ಎಲ್ಲ ರಾಜರನ್ನೂ ಗೆದ್ದು ವಸುದೇವನಿಗಾಗಿ ಅವಳನ್ನು ರಥದಲ್ಲಿ ಏರಿಸಿಕೊಂಡ. ಅದನ್ನು ಸೋಮದತ್ತ ತಡೆದಿದ್ದ. ಆಗ ಶಿನಿ ಅವನನ್ನು ಪರಾಭವಗೊಳಿಸಿ ನೆಲದ ಮೇಲೆ ಕೆಡವಿ ಕೂದಲನ್ನು ಹಿಡಿದು, ಕಾಲಿಂದ ಎದೆಗೆ ಒದ್ದು ಬದುಕಿಕೋ ಎಂದು ಬಿಟ್ಟಿದ್ದ.

ಅದರ ಸೇಡು ತೀರಿಸಿಕೊಳ್ಳಲೆಂದು ಸೋಮದತ್ತ ಶಿವನನ್ನು ಆರಾಧಿಸಿ ಭೂರಿಶ್ರವಸ್ಸನ್ನು ಪಡೆದಿದ್ದ. ಅದರಿಂದಾಗಿ ಭೂರಿಶ್ರವಸ್ಸು ಸಾತ್ಯಕಿಯನ್ನು ಹೀಗೆ ಕೆಳಗೆ ಬೀಳಿಸಿ ಒದೆಯಲು ಸಾಧ್ಯವಾಯಿತು. ಶಿನಿಯ ಮೊಮ್ಮಗನೇ ಸಾತ್ಯಕಿ. ಶಿವನ ವರದಿಂದ ಜನಿಸಿದ್ದರೂ ಭೂರಿಶ್ರವನಿಗೆ ಕೃಷ್ಣರಕ್ಷಿತನಾದ ಸಾತ್ಯಕಿಯನ್ನು ಕೊಲ್ಲಲು ಸಾಧ್ಯವಿರಲಿಲ್ಲ ಎಂಬ ವಿಶೇಷಾಂಶವೂ ಶಿವನ ವರದಲ್ಲಿತ್ತು:

ತಸ್ಯ ಪೌತ್ರಂ ತು ಸಮರೇ ತ್ವತ್ಪುತ್ರೋ ಮೋಹಯಿಷ್ಯತಿ ।
ನ ತು ಮಾರಯಿತುಂ ಶಕ್ಯಃ ಕೃಷ್ಣಸಂರಕ್ಷಿತೋ ಹ್ಯಸೌ ॥ –ಭಾರತ (೭/೧೪೪/೧೮)

ಸಾತ್ಯಕಿಯನ್ನು ಕೊಲ್ಲಲು ಭೂರಿಶ್ರವನ ಯತ್ನ

ಸ ಸೌಮದತ್ತಿರ್ಭುವಿ ಸಾತ್ಯಕಿಂ ರಣೇ
ನಿಪಾತ್ಯ ಕೇಶೇಷು ಚ ಸಂಪ್ರಗೃಹ್ಯ ।
ಪದಾಽಸ್ಯ ವಕ್ಷಸ್ಯಧಿರುಹ್ಯ ಖಡ್ಗ-
ಮುದಗ್ರಹೀದಾಶು ಶಿರೋಽಪಹರ್ತುಮ್ ॥ ೧೦೪ ॥

ಅ: ಭೂರಿಶ್ರವಸ್ಸು ಯುದ್ಧದಲ್ಲಿ ಸಾತ್ಯಕಿಯನ್ನು ನೆಲದ ಮೇಲೆ ಬೀಳಿಸಿ ಅವನ ತಲೆಗೂದಲುಗಳನ್ನು ಒಟ್ಟಾಗಿ ಹಿಡಿದುಕೊಂಡು ಅವನ ಎದೆಯ ಮೇಲೆ ಕಾಲನ್ನು ಊರಿ ಅವನ ತಲೆಯನ್ನು ಕತ್ತರಿಸಲೆಂದು ಕೂಡಲೇ ಖಡ್ಗವನ್ನು ಕೈಗೆತ್ತಿಕೊಂಡ.

ವಿ: ಕೊನೆಗೂ ಯುದ್ಧದಲ್ಲಿ ಭೂರಿಶ್ರವಸ್ಸಿನ ಕೈ ಮೇಲಾಗಿ ಅವನು ಸಾತ್ಯಕಿಯನ್ನು ಸಂಹರಿಸುವ ಯತ್ನದಲ್ಲೂ ತೊಡಗಿದ. ಭೂರಿಶ್ರವಸ್ಸಿನ ಅಂತಹ ಯಶಸ್ಸಿಗೆ ಅವನಿಗಿದ್ದ ಶಿವನ ವರ ಕಾರಣವಾಯಿತು ಎಂದು ತಿಳಿಯಬೇಕು (೧೧/೧೪,೧೫). ಶಿವನ ವರ ಅಷ್ಟರಿಂದಲೇ ಚರಿತಾರ್ಥವಾಯಿತು ಎನ್ನಬಹುದು.

ಕೃಷ್ಣಪ್ರೇರಿತ ಅರ್ಜುನನಿಂದ ಸಾತ್ಯಕಿಯ ರಕ್ಷಣೆ

ತದಾಸುದೇವಸ್ತು ನಿರೀಕ್ಷ್ಯ ವಿಶ್ವತ-
ಶ್ಚಕ್ಷುರ್ಜಗಾದಾಶು ಧನಂಜಯಂ ರಣೇ ।
ತ್ರಾಯಸ್ವ ಶೈನೇಯಮಿತಿ ಸ್ಮ ಸೋಽಪಿ
ಭಲ್ಲೇನ ಚಿಚ್ಛೇದ ಭುಜಂ ಪರಸ್ಯ ॥ ೧೦೫ ॥

---

೧೦೫. ಅಥ ಕೃಷ್ಣೋ ಮಹಾಬಾಹುರರ್ಜುನಂ ಪ್ರತ್ಯಭಾಷತ ।
ತವಾಂತೇವಾಸಿನಂ ವೀರಂ ಪಾಲಯಾರ್ಜುನ ಸಾತ್ಯಕಿಮ್ ॥ – ಭಾರತ (ದ್ರೋಣ. ೧೪೨/೫೩,೫೪)

ಅ: ಅದನ್ನು ವಿಶ್ವತಶ್ಚಕ್ಷುವಾದ ಶ್ರೀಕೃಷ್ಣ ಗಮನಿಸಿ ಕೂಡಲೇ ಧನಂಜಯನಿಗೆ ತಿಳಿಸಿದ - ಯುದ್ಧದಲ್ಲಿ ಸಾತ್ಯಕಿಯನ್ನು ರಕ್ಷಿಸು. ಅರ್ಜುನನು ಭಲ್ಲದಿಂದ ಭೂರಿಶ್ರವಸ್ಸಿನ ತೋಳನ್ನು ಕತ್ತರಿಸಿಹಾಕಿದ.

ವಿ : ೧) ಆ ಸ್ಥಳ ಮೂರು ಯೋಜನದಷ್ಟು ದೂರದಲ್ಲಿದ್ದರೂ ವಿಶ್ವತಶ್ಚಕ್ಷುವಾದ ಕೃಷ್ಣನ ಕಣ್ಣಿಗೆ ಬಿದ್ದಿದ್ದರಲ್ಲಿ ಆಶ್ಚರ್ಯವೇನಿಲ್ಲ. ಅರ್ಜುನ ಭಲ್ಲ ಎಂಬ ಆಯುಧವನ್ನು ಕೈಗೆತ್ತಿಕೊಂಡು ಭೂರಿ–ಶ್ರವಸ್ಸಿನ ಖಡ್ಗ ಸಮೇತವಾದ ಕೈಯನ್ನು ಕತ್ತರಿಸಿ ಬೀಳಿಸಿದ. ತನ್ನ ಶಿಷ್ಯನೂ, ಪ್ರಿಯನೂ ಆದ ಸಾತ್ಯಕಿಯನ್ನು ಸಂರಕ್ಷಿಸಿದ.

೨) ಅಸ್ತ್ರಶಸ್ತ್ರಗಳಲ್ಲಿ ಕೃಷ್ಣಾರ್ಜುನರ ಶಿಷ್ಯನಾಗಿದ್ದ ಸಾತ್ಯಕಿ ಅವರಿಬ್ಬರಿಂದಲೇ ಇಲ್ಲಿ ರಕ್ಷಿತನಾದದ್ದು ವಿಶೇಷ (೨೦/೧೭೫). ಹೀಗೆ ಕೃಷ್ಣಾರ್ಜುನರು ಅಪಾರ ಶಿಷ್ಯವತ್ಸಲರು. ಸಚ್ಛಿಷ್ಯರನ್ನು ಸದ್ಗುರುಗಳು ಎಂತಹ ಆಪತ್ತಿನಿಂದಲೂ ರಕ್ಷಿಸುವರು ಎಂಬುದಕ್ಕೂ ಇದು ಸೂಚಕವಾಯಿತು.

ಸ ತೇನ ಚೋತ್ಕೃತ್ತಸಖಡ್ಗಬಾಹು-
ರ್ವಿನಿಂದ್ಯ ಪಾರ್ಥಂ ನಿಷಸಾದ ಭೂಮೌ ।
ಪ್ರಾಯೋಪವಿಷ್ಟಃ ಶರಸಂಸ್ತರೇ ಹರಿಂ
ಧ್ಯಾಯನ್ ವಿನಿಂದನ್ನಸುರಪ್ರವೇಶಾತ್ ॥ ೧೦೬ ॥

ಅ: ಖಡ್ಗ ಹಿಡಿದಿದ್ದ ಕೈ ಕತ್ತರಿಸಿ ಕೆಳಗೆ ಬೀಳಲು ಭೂರಿಶ್ರವಸ್ಸು ಅರ್ಜುನನನ್ನು ನಿಂದಿಸಿ ನೆಲದ ಮೇಲೆ ಕುಳಿತ. ಬಾಣಗಳ ಹಾಸಿನ ಮೇಲೆ ಪ್ರಾಯೋಪವೇಶ ಕೈಗೊಂಡ. ಅವನು ಹರಿಯನ್ನು ಧ್ಯಾನಿಸುತ್ತಿದ್ದ; ಅಸುರಾವೇಶದಿಂದಾಗಿ ಕೃಷ್ಣನನ್ನು ನಿಂದಿಸುತ್ತಲೂ ಕುಳಿತ.

---

೧೦೫. ಪಾರ್ಥಬಾಹುವಿಸೃಷ್ಟಃ ಸ ಮಹೋಲ್ಕೇವ ನಭಶ್ಚ್ಯುತಾ ।
ಸಖಡ್ಗಂ ಯಜ್ಞಶೀಲಸ್ಯ ಸಾಂಗದಂ ಬಾಹುಮಚ್ಛಿನತ್ ॥ – ಭಾರತ (ದ್ರೋಣ. ೧೪೨/೭೨)

೧೦೬. ಏವಮುಕ್ತೋ ಮಹಾಬಾಹುರ್ಯೂಪಕೇತುರ್ಮಹಾಯಶಾಃ ।
ಯುಯುಧಾನಂ ಸಮುತ್ಸೃಜ್ಯ ರಣೇ ಪ್ರಾಯಮುಪಾವಿಶತ್ ॥
ಶರಾನಾಸ್ತೀರ್ಯ ಸವ್ಯೇನ ಪಾಣಿನಾ ಪುಣ್ಯಲಕ್ಷಣಃ ।
ಯಿಯಾಸುರ್ಬ್ರಹ್ಮಲೋಕಾಯ ಪ್ರಾಣಾನ್ ಪ್ರಾಣೇಷ್ವಥಾಜುಹೋತ್ ॥
ಸೂರ್ಯೇ ಚಕ್ಷುಃ ಸಮಾಧಾಯ ಪ್ರಸನ್ನಂ ಸಲಿಲೇ ಮನಃ ।
ಧ್ಯಾಯನ್ ಮಹೋಪನಿಷದಂ ಯೋಗಯುಕ್ತೋಽಭವನ್ಮುನಿಃ ॥ – ಭಾರತ (ದ್ರೋಣ. ೧೪೩/೩೩-೩೫)

೧೦೬. ಶರಸಂಸ್ತರೇ ಶರಶಯ್ಯಾಯಾಂ ಪ್ರಾಯೋಪವಿಷ್ಟಃ । ನಿರಶನವ್ರತನಿಷ್ಠೋಽಭೂದಿತಿ ಶೇಷಃ। – (ಜ.)

ವಿ : ೧) ಅರ್ಜುನ ಹೀಗೆ ತನ್ನ ಕೈ ಕತ್ತರಿಸಿದ್ದು ಅಧರ್ಮ ಎಂದು ಭೂರಿಶ್ರವಸ್ ನಿಂದಿಸಿದ, ಆದರೆ ಅವನು ಅದರ ಹಿಂದಿನ ದಿನ ಅರ್ಜುನಪುತ್ರನಾದ ಅಭಿಮನ್ಯುವಿನ ಮೇಲೆ ಕಪಟ ಯುದ್ಧದಲ್ಲಿ ತೊಡಗಿದ್ದ ಮಹಾರಥರಲ್ಲಿ ಒಬ್ಬನಾಗಿದ್ದ ಎಂಬುದನ್ನು ಗಮನಿಸಬೇಕು.

೨) ಅವನು ಮಹಾಯೋಗಿಯಾದ್ದರಿಂದ ಆ ರಣರಂಗದಲ್ಲಿಯೂ ಶ್ರೀಹರಿಧ್ಯಾನ ಮಾಡಲು ಸಾಧ್ಯವಾಯಿತು. ಆದರೆ, ಶ್ರೀಕೃಷ್ಣನು ಸಾಕ್ಷಾತ್ ಶ್ರೀಹರಿಯೇ ಎಂಬುದನ್ನು ಅರಿಯದೇ ಅರ್ಜುನನಿಂದ ಆ ಕಾರ್ಯ ಮಾಡಿಸಿದ್ದಕ್ಕಾಗಿ ನಿಂದಿಸತೊಡಗಿದ.

ಸಾತ್ಯಕಿಯಿಂದ ಭೂರಿಶ್ರವನ ಸಂಹಾರ

ಗತೇಽಸುರಾವೇಶ ಉತಾತಿಭಕ್ತ್ಯಾ
ಧ್ಯಾಯತ್ಯಮುಷ್ಮಿನ್ ಗರುಡಧ್ವಜಂ ತಮ್ ।
ಶೈನೇಯ ಉತ್ಥಾಯ ನಿವಾರ್ಯಮಾಣಃ
ಕೃಷ್ಣಾರ್ಜುನಾದ್ಯೈರಹರಚ್ಛಿರೋಽಸ್ಯ ॥ ೧೦೭ ॥

ಅ: ಅಸುರಾವೇಶ ಕಳೆದ ಮೇಲೆ ಅತ್ಯಂತ ಭಕ್ತಿಯಿಂದ ಅವನು ಗರುಡಧ್ವಜನಾದ ಶ್ರೀಕೃಷ್ಣನನ್ನು ಧ್ಯಾನಿಸತೊಡಗಿದ. ಆಗ ಸಾತ್ಯಕಿ ಮೇಲೆದ್ದು ಕೃಷ್ಣ, ಅರ್ಜುನ ಮೊದಲಾದವರು ತಡೆಯುತ್ತಿದ್ದರೂ ಕೇಳದೇ ಅವನ ತಲೆಯನ್ನು ಕತ್ತರಿಸಿದ.

ವಿ : ಭೂರಿಶ್ರವನಿಗೆ ಅಸುರಾವೇಶ ಕಳೆಯಲು ಅರ್ಜುನ ನುಡಿದ ಮಾತುಗಳು ಕಾರಣ–ವಾದವು. ಅದರಲ್ಲಿ ಮುಖ್ಯವಾದದ್ದು ಹಿಂದಿನ ದಿನವೇ ಅವನ ಪುತ್ರನಾದ ಅಭಿಮನ್ಯುವನ್ನು ಸಂಚಿನಿಂದ ಕೊಲ್ಲುವಲ್ಲಿ ಅವನೂ ಕಾರಣನಾಗಿದ್ದ ಎಂಬುದಾಗಿತ್ತು. ಅದನ್ನು ಅರ್ಥ ಮಾಡಿಕೊಂಡ ಭೂರಿಶ್ರವಸ್ಸು ಅಸುರಾವೇಶವನ್ನು ಕಳೆದುಕೊಳ್ಳಲು ಸಾಧ್ಯವಾಯಿತು. ಬಳಿಕ ಅವನು ಭಕ್ತಿ–ಯಿಂದಲೇ ಕೃಷ್ಣನನ್ನು ಧ್ಯಾನಿಸತೊಡಗಿದ. ಆಗ ಮೇಲೆದ್ದ ಸಾತ್ಯಕಿ ಅವನ ತಲೆಯನ್ನು ಕತ್ತರಿಸಿ ತನ್ನ ವೈರವನ್ನು ತೀರಿಸಿಕೊಂಡ.

ಶ್ರೀಕೃಷ್ಣನಿಂದ ಅಶ್ವಗಳ ಆಯಾಸ ಪರಿಹಾರ

ತದಾ ಸ್ವಕೀಯಂ ರಥಮೇತದರ್ಥಂ
ಕ್ಲೃಪ್ತಂ ದದೌ ಸಾತ್ಯಕಯೇ ಸಸೂತಮ್ ।
ಕೃಷ್ಣೋಽಥ ಪಾರ್ಥಸ್ಯ ಹಯಾಸೃಪಾರ್ದಿತಾ–
ಸ್ತದಾಽಸೃಜದ್ವಾರುಣಾಸ್ತ್ರಂ ಸ ಪಾರ್ಥಃ ॥ ೧೦೮ ॥

ಅ: ಆಗ ಕೃಷ್ಣ ಅವನಿಗೆಂದೇ ಅಣಿಗೊಳಿಸಲ್ಪಟ್ಟಿದ್ದ ರಥವನ್ನು ಸಾರಥಿ ಸಮೇತವಾಗಿ ಸಾತ್ಯಕಿಗೆ ನೀಡಿದ. ಆ ವೇಳೆಗೆ ಅರ್ಜುನನ ಕುದುರೆಗಳು ಬಾಯಾರಿಕೆಯಿಂದ ಬಳಲಿದ್ದವು. ಆಗ ಅರ್ಜುನ ವಾರುಣಾಸ್ತ್ರವನ್ನು ಪ್ರಯೋಗಿಸಿದ.

ವಿ : ೧) ಕೃಷ್ಣ ಹಾಗೆ ಅಂತಹ ಭಯಂಕರ ರಣರಂಗದಲ್ಲಿ ಆ ಕ್ಷಣದಲ್ಲಿಯೇ ಸಾತ್ಯಕಿಗೆ ರಥವನ್ನು ತರಿಸಿಕೊಟ್ಟಿದ್ದು ಅವನ ಅತ್ಯದ್ಭುತವಾದ ಮಹಾಮಹಿಮೆಗೆ ನಿದರ್ಶನ. ಅದರಿಂದಾಗಿ ಸಾತ್ಯಕಿಗೆ ಮುಂದೆ ಕರ್ಣಾದಿಗಳೊಂದಿಗೆ ಹೋರಾಡಲು ಸಾಧ್ಯವಾಯಿತು.

೨) ಸಾತ್ಯಕಿಗೆ ಮಾತ್ರವಲ್ಲದೇ ಶ್ರೀಹರಿ ಸಕಲ ಸಾಧಕರಿಗೂ ರಥದಂತಹ ಸಾಧನ ಶರೀರವನ್ನು ಕೊಟ್ಟು ಈ ಸಂಸಾರ ಕುರುಕ್ಷೇತ್ರದಲ್ಲಿ ನೆರವಾಗಿರುವನು ಎಂಬುದನ್ನು ತಿಳಿಯಬೇಕು.

೩) ಈ ವೇಳೆಗೆ ಬಳಲಿಕೆಯಿಂದ ಅರ್ಜುನನ ಕುದುರೆಗಳು ಬಾಯಾರಿದ್ದವು. ಜಯದ್ರಥನ ಸುಳಿವೂ ಸಹ ಸಿಕ್ಕಿರಲಿಲ್ಲ, ಪರಿಸ್ಥಿತಿಯನ್ನು ಅರ್ಜುನ ಕೃಷ್ಣನಿಗೆ ನಿವೇದಿಸಿಕೊಂಡು ಅವನ ಸಲಹೆ–ಯಂತೆ ವಾರುಣಾಸ್ತ್ರದಿಂದ ಅರ್ಜುನ ನೀರಿಗೆ ಅವಕಾಶ ಕಲ್ಪಿಸಿದ ಎಂದರ್ಥ.

ಅರ್ಜುನನ ಅದ್ಭುತ ಅಸ್ತ್ರವಿದ್ಯಾ ಕೌಶಲ

ತೇನೈವ ತೀರ್ಥಂ ಪರಮಂ ಚಕಾರ
ತಥಾಽಶ್ವಶಾಲಾಮಪಿ ಬಾಣರೂಪಾಮ್ ।
ತತೋ ವಿಮುಚ್ಯಾತ್ರ ಹಯಾನಪಾಯಯ-
ದ್ಧರಿಸ್ತದಾ ವಾಸವಿರಾರ್ದಯತ್ ಪರಾನ್ **॥ ೧೦೯ ॥**

---

೧೦೮. ಇದಮುಕ್ತಂ ಭವತಿ । ಸಾತ್ಯಕಿಭೂರಿಶ್ರವಸೋರ್ಯುದ್ಧೇ ಯದಾ ಪರಸ್ಯ ರಥನಾಶಾನಂತರಂ ಭೂರಿಶ್ರವಸೋ ಜಯಃ ನ ತಥಾತ್ರ ಸಾತ್ಯಕಿಃ ಸ್ವಯಂ ರಥಸ್ಥ ಏವ ಕರ್ಣಂ ವಿರಥೀಕುರ್ಯಾತ್ । ಏತದ್ಧಿ ಅನ್ಯರಥದಾನೇನ ಸ್ಯಾತ್ । ಅತಃ ಸ್ವರಥಮೇವಾಸ್ಮೈ ದದ್ಯಾಮಿತ್ಯಭಿಪ್ರೇತ್ಯ ಭಗವತಾ ಸ್ವರಥ ಏವ ದತ್ತಃ । ಏವಂ ವಿಶಿಷ್ಟಜಯಾರ್ಥಂ ಉಭಯದಾನಂ ನಾಪ್ಯಪಿಶಬ್ದವೈಯರ್ಥ್ಯಂ .... । ವಿರೋಚನಸ್ಯ ಪುತ್ರೇಣ ಯೋದ್ಧುಂ ಬಲಂ ಪ್ರದಾಯೇತಿ ವಿಶೇಷವರತ್ವೇನ ಬಲಸ್ಯ ವೃದ್ಧಿರ್ಹೀತ್ಯವಿಶೇಷವರೇ ವಿದ್ಯಮಾನೇऽಪಿ ಪುನಃ ಬಲದಾನರೂಪೋ ವರೋ ಯುಕ್ತ ಏವೇತಿ । –(ತಿ.)

೧೦೯. ದಧ್ಮೌ ಶಂಖಂ ಮಹಾನಾದಮಾರ್ಷಭೇಣಾಥ ಮಾಧವಃ ।
ದಾರುಕೋऽವೇತ್ಯ ಸಂದೇಶಂ ಶ್ರುತ್ವಾ ಶಂಖಸ್ಯ ಚ ಸ್ವನಮ್ ॥
ರಥಮನ್ವಾನಯತ್ ತಸ್ಯೈ ಸುಪರ್ಣಾಢ್ಯ ಕೇತನಮ್ ॥
ಸ ಕೇಶವಸ್ಯಾನುಮತೇ ರಥಂ ದಾರುಕಸಂಯುತಮ್ ।
ಆರುರೋಹ ಶಿನೇಃ ಪೌತ್ರೋ ಜ್ವಲನಾದಿತ್ಯಸನ್ನಿಭಮ್॥(ಇತ್ಯಾದಿ) –ಭಾರತ(೭/೧೪೭/೪೫-೪೭)

ಅ: ವಾರುಣಾಸ್ತ್ರದಿಂದಲೇ ಅರ್ಜುನ ಉತ್ತಮ ಜಲಾಶಯವನ್ನು ನಿರ್ಮಿಸಿದ. ಹಾಗೆಯೇ ಬಾಣಗಳಿಂದಲೇ ಅಶ್ವಶಾಲೆಯನ್ನೂ ನಿರ್ಮಿಸಿದ. ಬಳಿಕ ಕುದುರೆಗಳನ್ನು ಬಿಚ್ಚಿ ಕೃಷ್ಣ ಅವುಗಳಿಗೆ ನೀರು ಕುಡಿಸಿದ, ಆಗ ಅರ್ಜುನ ಶತ್ರುಗಳನ್ನು ಪೀಡಿಸುತ್ತಿದ್ದ.

ವಿ: ೧) ಅರ್ಜುನ ಆಗ ಶ್ರೀಕೃಷ್ಣನ ಆದೇಶದಂತೆ ವಜ್ರಾಸ್ತ್ರವನ್ನು ಬಿಟ್ಟು ಭೂಮಿಯನ್ನು ಕೊರೆದು ಅದರಲ್ಲಿ ವಾರುಣಾಸ್ತ್ರದಿಂದ ನೀರನ್ನು ತುಂಬಿಸಿ ಭವ್ಯ ಸರೋವರವೊಂದನ್ನು ನಿರ್ಮಿಸಿದ.

೨) ಶ್ರೀಕೃಷ್ಣ ರಥದಿಂದಿಳಿದು, ಕುದುರೆಗಳನ್ನು ರಥದಿಂದ ಬಿಚ್ಚಿ ಅವುಗಳನ್ನು ನೀರಲ್ಲಿ ಮೀಯಿಸಿ, ನೀರು ಕುಡಿಸಿ, ಅವುಗಳ ಮೈಗೆ ನಾಟಿದ್ದ ಬಾಣಗಳನ್ನು ಕಿತ್ತಿ ನೋವನ್ನು ಪರಿಹರಿಸಿದ. ಅರ್ಜುನ ಆಗ ನೆಲದ ಮೇಲೆ ನಿಂತೇ ಸಕಲ ಕುರು ಸೇನೆಯನ್ನು ಒಂಟಿಯಾಗಿ ಎದುರಿಸಿದ. ಅವನು ಹಾಗೆ ಎದುರಿಸಿದ್ದನ್ನು ಮಹಾಭಾರತ ''ಏಕೋ ನಿವಾರಯಾಮಾಸ ಲೋಭಃ ಸರ್ವಗುಣಾನಿವ'' ಎಂದು ಕಾವ್ಯಮಯವಾಗಿ ವರ್ಣಿಸಿದೆ. (ಆಸೆ ಸಕಲಗುಣಗಳನ್ನೂ ಮುಚ್ಚಿ ಹಾಕುವಂತೆ, ಅರ್ಜುನನೊಬ್ಬನೇ ಶತ್ರುಗಳನ್ನೆಲ್ಲ ಎದುರಿಸಿದ). ರಣರಂಗದಲ್ಲಿ ಅರ್ಜುನ ತೋರಿದ ಈ ಮಹಿಮೆ ಅವನ ಅತ್ಯಪೂರ್ವವಾದ ಸಾಧನೆಗಳಲ್ಲೊಂದು.

೩) ಅಂತಹ ಭಯಂಕರ ರಣರಂಗದಲ್ಲಿ ಅಂತಹ ಉತ್ತಮ ತೀರ್ಥವನ್ನು ನಿರ್ಮಿಸುವ ಆತನ ಚಾತುರ್ಯ ಕಲಿಯುಗದಂತಹ ಭಯಂಕರ ಯುಗದಲ್ಲಿ ನ್ಯಾಯಸುಧೆಯಂತಹ ಅಪೂರ್ವ ಕೃತಿರತ್ನವನ್ನು ನೀಡಿರುವ ಜಯತೀರ್ಥರ ಸಾಧನೆಗೆ ಜ್ಞಾಪಕ. ಅದು ಸಾಧ್ಯವಾದದ್ದು ಕೃಷ್ಣನ ಅನುಗ್ರಹದಿಂದ. ಜಯತೀರ್ಥರಿಗೆ ಸಾಧ್ಯವಾದದ್ದು ವ್ಯಾಸ–ಮಧ್ವರ ಅನುಗ್ರಹದಿಂದ.

೪) ಅರ್ಜುನನು ನಿರ್ಮಿಸಿದ ಆ ತೀರ್ಥ ಋಷಿಗಳಿಂದ ಸೇವಿತವಾಯಿತು. ನಾರದರು ಅದನ್ನು ಸಂದರ್ಶಿಸಲೆಂದು ಅಲ್ಲಿಗೆ ಆಗಮಿಸಿದರು ಎಂಬ ವಿವರ *ಮಹಾಭಾರತದಲ್ಲಿದೆ.

೫) ಶ್ರೀಜಯತೀರ್ಥರ ನ್ಯಾಯಸುಧಾ ಸೇವನೆಗೆ ಶ್ರೀವ್ಯಾಸತೀರ್ಥಾದಿ ಜ್ಞಾನಿವೃಂದ ಧಾವಿಸಿದ್ದು ಇದೇ ರೀತಿಯೇ.

---

* ಇದಮಸ್ತೀತ್ಯಸಂಭ್ರಾಂತೋ ಬ್ರುವನ್ನಸ್ತ್ರೇಣ ಮೇದಿನೀಮ್ ।
ಅಭಿಹತ್ಯಾರ್ಜುನಶ್ಚಕ್ರೇ ವಾಜಿಪಾನಂ ಸರಃಶುಭಮ್ ।
ಹಂಸಕಾರಂಡವಾಕೀರ್ಣಂ ಚಕ್ರವಾಕೋಪಶೋಭಿತಮ್ ।
ಸುವಿಸ್ತೀರ್ಣಂ ಪ್ರಸನ್ನಾಂಭಃ ಪ್ರಫುಲ್ಲವರಪಂಕಜಮ್ ॥
ಕೂರ್ಮಮತ್ಸ್ಯಗಣಾರ್ಣಾಕೀರ್ಣಮಗಾಧಮೃಷಿಸೇವಿತಮ್ ।
ಆಗಚ್ಛನ್ ನಾರದಮುನಿರ್ದರ್ಶನಾರ್ಥಂ ಕೃತಂ ಕ್ಷಣಾತ್ ॥ – ಭಾರತ (ದ್ರೋಣ. ೯೯/೫೯-೬೧)

೬) ಸರೋವರವನ್ನು ಮಾತ್ರವಲ್ಲದೇ ಕುದುರೆಗಳ ವಿಶ್ರಾಂತಿಗಾಗಿ ಒಂದು *ಶರಶಾಲೆ–ಯನ್ನೂ ಸಹ ರಚಿಸಿದ್ದು ಅರ್ಜುನನ ಅದ್ಭುತ ಅಸ್ತ್ರಕೌಶಲಕ್ಕೆ ನಿದರ್ಶನ. ಖಾಂಡವವನದಹನ ಕಾಲದಲ್ಲಿ ಬಾಣಗಳಿಂದ ಒಂದು ಹನಿ ನೀರೂ ಸಹ ಒಳಗೆ ನುಗ್ಗದಂತೆ ಭದ್ರವಾದ ಛಾವಣಿ ನಿರ್ಮಿಸಿದ್ದ ಅರ್ಜುನ ಇಲ್ಲಿ ಶತ್ರುಗಳ ಒಂದು ಬಾಣವೂ ಒಳಗೆ ನುಗ್ಗದಂತಹ ಶರಶಾಲೆಯನ್ನು ನಿರ್ಮಿಸಿದ.

೭) ಇಂತಹ ಅದ್ಭುತ ಅಸ್ತ್ರ ಕೌಶಲದಿಂದಾಗಿಯೇ ಅರ್ಜುನ 'ಪಾರ್ಥ ಏವ ಧನುರ್ಧರಃ' ಎಂಬ ಹಿರಿಮೆಗೆ ಪಾತ್ರನಾದ.

ಯುಯೋಜ ಕೃಷ್ಣಸ್ತುರಗಾನ್ ರಥೇ ಪುನ-
ರ್ಗತಶ್ರಮಾನುದ್ಧೃತಸಾಯಕಾನ್ ಪ್ರಭುಃ ।
ಪ್ರಚೋದಿತೇ ತೇನ ರಥೇ ಸ್ಥಿತಃ ಪುನ-
ಸ್ತಥೈವ ಬೀಭತ್ಸುರರೀನಯೋಧಯತ್ ॥ ೧೧೦ ॥

---

* ಶರವಂಶಂ ಶರಸ್ಥೂಣಂ ಶರಾಚ್ಛಾದನಮದ್ಭುತಮ್ ।
ಶರವೇಶ್ಮಾಕರೋತ್ ಪಾರ್ಥಸ್ತ್ವಷ್ಟೇವಾದ್ಭುತಕರ್ಮಕೃತ್ ॥
ತತಃ ಪ್ರಹಸ್ಯ ಗೋವಿಂದಃ ಸಾಧು ಸಾಧ್ವಿತ್ಯಥಾಬ್ರವೀತ್ ॥
ಶರವೇಶ್ಮನಿ ಪಾರ್ಥೇನ ವೃತೇ ತಸ್ಮಿನ್ ಮಹಾತ್ಮನಾ ॥ – ಭಾರತ (ದ್ರೋಣ. ೯೯/೬೦,೬೩)

ಅಥ ಸ್ಮಯನ್ ಹೃಷೀಕೇಶಃ ಸ್ತ್ರೀಮಧ್ಯ ಇವ ಭಾರತ ।
ಅರ್ಜುನೇನ ಕೃತೇ ಸಂಖ್ಯೇ ಶರಗರ್ಭಗೃಹೇ ತಥಾ ॥
ಉಪಾವರ್ತಯದಮ್ಯಗ್ರಾನ್ತಾನಶ್ವಾನ್ ಪುಷ್ಕರೇಕ್ಷಣಃ ।
ಮಿಷತಾಂ ಸರ್ವಸೈನ್ಯಾನಾಂ ತ್ವದೀಯಾನಾಂ ವಿಶಾಂಪತೇ ॥
ತೇಷಾಂ ಕ್ಷೇಮಂ ಚ ಗ್ಲಾನಿಂ ಚ ವಮಥುಂ ವೇಪಥುಂ ವ್ರಣಾನ್ ।
ಸರ್ವಂ ವ್ಯಪಾನುದತ್ ಕೃಷ್ಣಃ ಕುಶಲೋ ಹ್ಯಶ್ವಕರ್ಮಣಿ ॥
ಶಲ್ಯಾನುದ್ಧೃತ್ಯ ಪಾಣಿಭ್ಯಾಂ ಪರಿಮೃಜ್ಯ ಚ ತಾನ್ ಹಯಾನ್ ।
ಉಪಾವರ್ತ್ಯ ಯಥಾನ್ಯಾಯಂ ಪಾಯಯಾಮಾಸ ವಾರಿ ಸಃ ॥
ಸ ತಾನ್ ಲಬ್ಧೋದಕಾನ್ ಸ್ನಾತಾನ್ ಜಗ್ಧಾನ್ನಾನ್ ವಿಗತಕ್ಲಮಾನ್ ।
ಯೋಜಯಾಮಾಸ ಸಂಹೃಷ್ಟಃ ಪುನರೇವ ರಥೋತ್ತಮೇ ॥ – ಭಾರತ (ದ್ರೋಣ. ೧೦೦/೧೨-೧೬)

೧೧೦. ಸ ಪಾರ್ಥಃ ಪಾರ್ಥಿವಾನ್ ಸರ್ವಾನ್ ಭೂಮಿಸ್ಥೋಽಪಿ ರಥಸ್ಥಿತಾನ್ ।
ಏಕೋ ನಿವಾರಯಾಮಾಸ ಲೋಭಃ ಸರ್ವಗುಣಾನಿವ ॥ – ಭಾರತ (ದ್ರೋಣ. ೯೯/೫೬)

ಅ: ಪ್ರಭುವಾದ ಶ್ರೀಕೃಷ್ಣ ಅಶ್ವಗಳಿಗೆ ನೆಟ್ಟಿದ್ದ ಬಾಣಗಳನ್ನೆಲ್ಲಾ ಕಿತ್ತಿ ಅವುಗಳ ಶ್ರಮವನ್ನು ಪರಿಹರಿಸಿ ಪುನಃ ರಥಕ್ಕೆ ಹೂಡಿದ. ಬಳಿಕ ಅವನು ರಥವನ್ನು ಪುನಃ ನಡೆಸಲು ತೊಡಗಿದಾಗ ಅರ್ಜುನ ಅದನ್ನೇರಿ ಮುಂಚಿನಂತೆಯೇ ಶತ್ರುಗಳೊಡನೆ ಕಾದತೊಡಗಿದ.

ವಿ: ಅಂತಹ ಪ್ರಸಂಗದಲ್ಲೂ ಕೌರವರು ಅವನ ಮೇಲೆ ಯಾವ ರೀತಿಯಲ್ಲೂ ಗೆಲುವು ಸಾಧಿಸಲಾಗದ್ದು ಹರಿವಿರೋಧಿಗಳ ದೌರ್ಭಾಗ್ಯಕ್ಕೆ ಸೂಚಕ.

ಯುಧಿಷ್ಠಿರನ ಆತಂಕ

ಶಿನಿಪ್ರವೀರೇ ತು ಗತೇ ಯುಧಿಷ್ಠಿರಃ
ಪುನಶ್ಚ ಚಿಂತಾಕುಲಿತೋ ಬಭೂವ ಹ ।
ಜಗಾದ ಭೀಮಂ ಚ ನ ಗಾಂಡಿವಧ್ವನಿಃ
ಸಂಶ್ರೂಯತೇ ಪಾಂಚಜನ್ಯಸ್ಯ ರಾವಃ ॥ ೧೧೧ ॥

ಅ: ಸಾತ್ಯಕಿ ತೆರಳಿದ ಮೇಲೆ ಧರ್ಮರಾಜ ಮತ್ತೆ ಚಿಂತೆಯಿಂದ ಉದ್ವಿಗ್ನನಾದ, ಭೀಮನಿಗೆ ಹೇಳಿದ 'ಗಾಂಡೀವ ಧ್ವನಿ ಕೇಳುತ್ತಿಲ್ಲ, ಪಾಂಚಜನ್ಯದ ಧ್ವನಿಯೇ ಜೋರಾಗಿ ಕೇಳಿಬರುತ್ತಿದೆ'.

ವಿ : ಸಾತ್ಯಕಿ ತೆರಳಿ ಬಹುಹೊತ್ತು ಕಳೆದರೂ ಅವನಿಂದ ಅರ್ಜುನನ ಕ್ಷೇಮವಾರ್ತೆಯ ಬಗ್ಗೆ ಯಾವ ಸೂಚನೆಯೂ ದೊರೆಯಲಿಲ್ಲ. ಅದರೊಂದಿಗೆ ಮುಂಚಿನಂತೆ ಗಾಂಡೀವದ ಧ್ವನಿ ಮರೆಯಾಗಿ ಕೃಷ್ಣನ ಪಾಂಚಜನ್ಯದ ಘೋಷವೇ ಕೇಳಿಬರುತ್ತಿತ್ತು. ಧರ್ಮರಾಜ ಹಿಂದಿನಂತೆಯೇ ಅರ್ಜುನನಿಗೇನೋ ಆಪತ್ತು ಒದಗಿ ಕೃಷ್ಣನೇ ಯುದ್ಧಕ್ಕೆ ತೊಡಗಿರುವನೆಂದು ಆತಂಕಕ್ಕೊಳಗಾದ. ಅದನ್ನೆಲ್ಲ ಭೀಮನ ಮುಂದೆ ಹೇಳಿಕೊಂಡ ಎಂದರ್ಥ.

ಅರ್ಜುನನ ಕ್ಷೇಮವಾರ್ತೆ ತಿಳಿದು ಬರಲು ಭೀಮನಿಗೆ ಆದೇಶ

ಮಯಾ ನಿಯುಕ್ತಶ್ಚ ಗತಃ ಸಸಾತ್ಯಕಿ-
ರ್ಭಾರಂ ಚ ತಸ್ಯಾಧಿಕಮೇವ ಮನ್ಯೇ ।
ತತ್ ಪಾಹಿ ಪಾರ್ಥಂ ಯುಯುಧಾನಮೇವ
ತ್ವಂ ಭೀಮ ಗತ್ವಾ ಯದಿ ಜೀವತಸ್ತೌ ॥ ೧೧೨ ॥

---

೧೧೩. ಯುಯುಧಾನಮೇವೇತ್ಯೇವಕಾರಸ್ಯ ತ್ವಮೇವೇತಿ ಸಂಬಂಧಃ ॥ – (ವಾ.)

ಅ: ನಾನು ಹೇಳಿದಂತೆ ಸಾತ್ಯಕಿ ತೆರಳಿರುವನು, ಅವನಿಗೆ ಆ ಭಾರ ಹೆಚ್ಚಾಯಿತೆಂದೇ ನನಗೆ ತೋರುತ್ತಿದೆ. ಆದ್ದರಿಂದ ಭೀಮಸೇನ, ನೀನೀಗ ತೆರಳಿ ಅವರಿಬ್ಬರೂ ಬದುಕಿದ್ದಲ್ಲಿ ಅರ್ಜುನ, ಸಾತ್ಯಕಿಯರನ್ನು ಕಾಪಾಡು.

ವಿ : ಸಾತ್ಯಕಿಯನ್ನು ಕಳುಹಿಸಿದ್ದು ಅವನಿಗೆ ನೀಗದ ಕಾರ್ಯವನ್ನು ವಹಿಸಿದಂತಾಯಿತು ಎಂದು ಹೇಳಿದ ಧರ್ಮರಾಜ ಬೇರೆ ಯಾರನ್ನು ಕಳುಹಿಸಿದರೂ ಸಮಸ್ಯೆ ಪರಿಹಾರವಾಗದೆಂದು ಬಗೆದು ಭೀಮಸೇನನನ್ನೇ ಕೇಳಿಕೊಂಡ ಎಂದು ತಿಳಿಯಬೇಕು. ಇತರ ಉಪಾಯಗಳಿಂದ ಸಾಧ್ಯವಾಗದ ಕಾರ್ಯಗಳು ವಾಯುದೇವರನ್ನು ಶರಣು ಹೊಕ್ಕಾಗ ಸುಲಭವಾಗಿ ಸಾಧ್ಯವಾಗುವವು ಎಂಬುದಕ್ಕೆ ಇದು ನಿದರ್ಶನ. ಇತರ ಸ್ತೋತ್ರಗಳು ಫಲಿಸದಾಗ ವಾಯುಸ್ತುತಿಯ ಪಠನೆ ಕಾರ್ಯಸಾಧಕ.

ಭೀಮ ತಿಳಿಸಿದ ಕೃಷ್ಣಮಹಿಮೆ

ಇತೀರಿತಃ ಪ್ರಾಹ ವೃಕೋದರಸ್ತಂ
ನ ರಕ್ಷಿತಂ ವಾಸುದೇವೇನ ಪಾರ್ಥಮ್ ।
ಬ್ರಹ್ಮೇಶಾನಾವಪಿ ಜೇತುಂ ಸಮರ್ಥೌ
ಕಿಂ ದ್ರೌಣಿಕರ್ಣಾದಿಧನುರ್ಭೃತೋಽತ್ರ ॥ ೧೧೩ ॥

---

೧೧೨. ಏಕಸ್ಯೈವ ಶಬ್ದಸ್ಯ ನಿಯುಕ್ತ ಇತ್ಯನೇನಾನ್ವಯಃ । ದ್ವಿತೀಯಸ್ಯ ತ್ವಮಿತ್ಯನೇನಾನ್ವಯ ಇತಿ ಸ್ವೀಕೃತ್ಯಾರ್ಥ-ಸ್ಯೋಕ್ತತ್ವಾತ್ । ಏತೇನೈವ ಚಶಬ್ದದ್ವಯಂ ವ್ಯರ್ಥಮಿತಿ ದೂಷಣಂ ಪ್ರತ್ಯುಕ್ತಮ್ । ಪಾರ್ಥಂ ಚ ಯುಯುಧಾನಂ ಚೇತಿ ಪರಸ್ಪರಸಮುಚ್ಚಯಾರ್ಥಂ ಚಶಬ್ದದ್ವಯಮಿತ್ಯಭ್ಯುಪಗಮಾತ್ ॥ – (ಸ.)

೧೧೨. ತದಿದಂ ಹ್ಯೇಕಮೇವಾಸೀದ್ ದ್ವಿಧಾ ಜಾತಂ ಮಯಾऽದ್ಯ ವೈ ।
ಸಾತ್ಯಕಿಶ್ಚ ಹಿ ವಿಜ್ಞೇಯಃ ಪಾಂಡವಶ್ಚ ಧನಂಜಯಃ ॥ – ಭಾರತ (ದ್ರೋಣ. ೧೨೬/೧೦)

ಅತಿಭಾರೇ ನಿಯುಕ್ತಶ್ಚ ಮಯಾ ಶೈನೇಯನಂದನಃ ॥ – ಭಾರತ (ದ್ರೋಣ. ೧೨೬/೧೬)

೧೧೨. ನ ಚಾಪ್ಯಸಹ್ಯಂ ಭೀಮಸ್ಯ ವಿದ್ಯತೇ ಭುವಿ ಕಿಂಚನ ।
ಶಕ್ತೋ ಹ್ಯೇಷ ರಣೇ ಯತ್ತಃ ಪೃಥಿವ್ಯಾಂ ಸರ್ವಧನ್ವಿನಾಮ್ ॥
ಸ್ವಬಾಹುಬಲಮಾಸ್ಥಾಯ ಪ್ರತಿವ್ಯೂಹಿತುಮಂಜಸಾ ।
ಯಸ್ಯ ಬಾಹುಬಲಂ ಸರ್ವೇ ಸಮಾಶ್ರಿತ್ಯ ಮಹಾತ್ಮನಃ ॥
ವನವಾಸಾನ್ನಿವೃತ್ತಾಃ ಸ್ಮ ನ ಚ ಯುದ್ಧೇಷು ನಿರ್ಜಿತಾಃ ॥
ಇತೋ ಗತೇ ಭೀಮಸೇನೇ ಸಾತ್ವತಂ ಪ್ರತಿ ಪಾಂಡವೇ ।
ಸನಾಥೌ ಭವಿತಾರೌ ಹಿ ಯುಧಿ ಸಾತ್ವತಫಲ್ಗುನೌ ॥ – ಭಾರತ (ದ್ರೋಣ. ೧೨೬/೨೦-೨೩)

ಅ: ಧರ್ಮರಾಜ ಹೀಗೆನ್ನಲು ಭೀಮಸೇನ ಅವನಿಗೆ ತಿಳಿಸಿದ : 'ಕೃಷ್ಣನಿಂದ ರಕ್ಷಿತನಾದ ಅರ್ಜುನನನ್ನು ಗೆಲ್ಲಲು ಬ್ರಹ್ಮ, ರುದ್ರರೂ ಸಮರ್ಥರಲ್ಲ. ಅಶ್ವತ್ಥಾಮ, ಕರ್ಣ ಮೊದಲಾದ ಧನುರ್ಧಾರಿಗಳೆಂತು ಗೆದ್ದಾರು?'

ವಿ : ಶ್ರೀಕೃಷ್ಣ ರಕ್ಷಿಸಿದಾಗ ಒಂದು ಹುಲ್ಲುಕಡ್ಡಿಯನ್ನೂ ಬ್ರಹ್ಮಾದಿಗಳು ಅಲುಗಾಡಿಸಲು ಸಮರ್ಥರಾಗದಿರುವಾಗ, ಅರ್ಜುನನನ್ನು ಅವರೆಂತು ಗೆದ್ದಾರು? ಅವರಿಗೂ ಆಗದ ಕಾರ್ಯವನ್ನು ಅಶ್ವತ್ಥಾಮಾದಿಗಳೆಂತು ಮಾಡಿಯಾರು? ಕೃಷ್ಣನಿಗೆ ವಿರುದ್ಧವಾಗಿ ಬ್ರಹ್ಮ ದೇವರು ನಿಲ್ಲುವುದು ಸರ್ವಥಾ ಅಸಾಧ್ಯವಾದ ವಿಷಯ, ಅವರು ಶುದ್ಧಭಾಗವತ ಧರ್ಮರತರಲ್ಲವೇ. ಆದರೂ ಹಾಗೆ ಉಲ್ಲೇಖಿಸಿರುವುದು ತರ್ಕಮುದ್ರೆಯಿಂದ ಎಂದು ತಿಳಿಯಬೇಕು. ಶ್ರೀಹರಿಯಿಂದ ರಕ್ಷಿತರಾದವ–ರನ್ನು ಶಿಕ್ಷಿಸಲು ಮೂಲರೂಪದ ಶಿವನಿಗೇ ಅಶಕ್ಯವೆನ್ನಿಸುವಾಗ, ಅವನ ಅವತಾರರಾದ ಅಶ್ವತ್ಥಾಮರೇನು ಮಾಡಿಯಾರು? ಅದರಂತೆ ಸೂರ್ಯಾದಿಗಳ ಅವತಾರರಾದ ಕರ್ಣಾದಿಗಳೂ ಸಹ ಎಂದರ್ಥ. ಈ ಮಾತಿನಲ್ಲಿ ಪಾಶುಪತಾದಿ ಮತಗಳ ನಿರಾಸವೂ ಇರುವುದನ್ನು ಗಮನಿಸಬೇಕು.

ಅತೋ ಭಯಂ ನಾಸ್ತಿ ಧನಂಜಯಸ್ಯ
ನ ಸಾತ್ಯಕೇಶ್ಚೈವ ಹರೇಃ ಪ್ರಸಾದಾತ್ ।
ರಕ್ಷ್ಯಸ್ತ್ವಮೇವಾತ್ರ ಮತೋ ಮಮಾದ್ಯ
ದ್ರೋಣೋ ಹ್ಯಯಂ ಯತತೇ ತ್ವಾಂ ಗೃಹೀತುಮ್ ॥ ೧೧೪ ॥

ಅ: ಹರಿಯ ಅನುಗ್ರಹದಿಂದಾಗಿ ಅರ್ಜುನನಿಗೆ ಭಯವಿಲ್ಲ, ಸಾತ್ಯಕಿಗೂ ಭಯವಿಲ್ಲ. ಈಗ ರಕ್ಷಿಸಲ್ಪಡಬೇಕಾದವನು ನೀನೇ ಎಂದು ನನ್ನ ಅಭಿಪ್ರಾಯ. ಈ ದ್ರೋಣರು ನಿನ್ನನ್ನು ಸೆರೆ ಹಿಡಿಯಲು ಯತ್ನಿಸುತ್ತಿರುವರಲ್ಲವೇ.

ವಿ : ಹರಿರಕ್ಷಿತನಾದ ಅರ್ಜುನನಿಗಾಗಲೀ, ಸಾತ್ಯಕಿಗಾಗಲೀ ಭಯವಿಲ್ಲ. ಆದರೆ, ನಿಜಕ್ಕೂ ಭಯವಿರುವುದು ದ್ರೋಣರಿಂದ ಧರ್ಮರಾಜನಿಗೇ ಎಂಬುದು ಇಲ್ಲಿಯ ವಿಶೇಷಾಂಶ.

ಯುಧಿಷ್ಠಿರನ ಒತ್ತಾಯ

ಇತೀರಿತಃ ಪ್ರಾಹ ಯುಧಿಷ್ಠಿರಸ್ತಂ
ನ ಜೀವಮಾನೇ ಯುಧಿ ಮಾಂ ಘಟೋತ್ಕಚೇ ।
ಧೃಷ್ಟದ್ಯುಮ್ನೇ ಚಾಸ್ತ್ರವಿದಾಂ ವರಿಷ್ಠೇ
ದ್ರೋಣೋ ವಶಂ ನೇತುಮಿಹ ಪ್ರಭುಃ ಕ್ವಚಿತ್ ॥ ೧೧೫ ॥

ಅ: ಭೀಮ ಹೀಗೆನ್ನಲು ಧರ್ಮರಾಜ ಅವನಿಗೆ ತಿಳಿಸಿದ - ಘಟೋತ್ಕಚ, ಹಾಗೆಯೇ ಅಸ್ತ್ರಜ್ಞರಲ್ಲಿ ಶ್ರೇಷ್ಠನೆನ್ನಿಸಿದ ಧೃಷ್ಟದ್ಯುಮ್ನ ಬದುಕಿರುವವರೆಗೂ ದ್ರೋಣರು ನನ್ನನ್ನು ಸೆರೆ ಹಿಡಿಯಲು ಎಂದೂ ಸಮರ್ಥರಾಗಲಾರರು.

ವಿ: ೧) ಘಟೋತ್ಕಚ, ಧೃಷ್ಟದ್ಯುಮ್ನರಿಂದ ರಕ್ಷಿತನಾದ ತನಗೆ ಭಯವಿಲ್ಲ ಎಂದು ಹೇಳುವ ಧರ್ಮರಾಜ ಕೃಷ್ಣರಕ್ಷಿತನಾದ ಅರ್ಜುನ, ಸಾತ್ಯಕಿಯರಿಗೆ ಅಪಾಯವಾದೀತು ಎಂದು ಅಂಜುವುದು ಎಂತಹ ವಿಪರ್ಯಾಸ..!!

೨) ಅವನು ತನ್ನ ರಕ್ಷಣೆಗಿಂತ ಮಿಗಿಲಾಗಿ ತನ್ನನ್ನು ನಂಬಿದವರ ರಕ್ಷಣೆಗೆ ಧಾವಿಸುವ ಪರಮ ಕರುಣಾಳು ಎಂಬುದು ಇದರ ಮತ್ತೊಂದು ಮುಖ. ಧರ್ಮದ ಸ್ವಭಾವವೇ ಅಂತಹುದು, ತನ್ನನ್ನು ನಂಬಿದವರನ್ನು ಅದು ಎಂದೂ ಕೈಬಿಡದು – 'ಧರ್ಮೋ ರಕ್ಷತಿ ರಕ್ಷಿತಃ'.

ಯದಿ ಪ್ರಿಯಂ ಕರ್ತುಮಿಹೇಚ್ಛಸಿ ತ್ವಂ
ಮಮ ಪ್ರಯಾಹ್ಯಾಶು ಚ ಪಾರ್ಥಸಾತ್ಯಕೀ ।
ರಕ್ಷಸ್ವ ಸಂಜ್ಞಾಮಪಿ ಸಿಂಹನಾದಾತ್
ಕುರುಷ್ವ ಮೇ ಪಾರ್ಥಶೈನೇಯದೃಷ್ಟೌ ॥ ೧೧೬ ॥

ಅ: ನೀನು ನನಗೆ ಪ್ರಿಯವಾದುದನ್ನು ಮಾಡಲು ಬಯಸುವೆಯಾದಲ್ಲಿ ಕೂಡಲೇ ಅರ್ಜುನ, ಸಾತ್ಯಕಿಯರ ಬಳಿಗೆ ತೆರಳು, ಅವರನ್ನು ರಕ್ಷಿಸು, ಅವರನ್ನು ಕಾಣುತ್ತಲೇ ಸಿಂಹನಾದದ ಮೂಲಕ ನನಗೆ ಸೂಚನೆ ನೀಡು.

ಯುಧಿಷ್ಠಿರನ ರಕ್ಷಣೆಗೆ ಧೃಷ್ಟದ್ಯುಮ್ನ ಘಟೋತ್ಕಚರ ನಿಯುಕ್ತಿ

ತಥಾ ಹತೇ ಚೈವ ಜಯದ್ರಥೇ ಮೇ
ಕುರುಷ್ವ ಸಂಜ್ಞಾಮಪಿ ತೇನ ಭೀಮಃ ।
ಉಕ್ತಸ್ತು ಹೈಡಿಂಬಮಮುಷ್ಯ ರಕ್ಷಣೇ
ವ್ಯಧಾಚ್ಚ ಸೇನಾಪತಿಮೇವ ಸಮ್ಯಕ್ ॥ ೧೧೭ ॥

---

೧೧೬. ದೃಷ್ಟ್ವಾ ಕುಶಲಿನೌ ಕೃಷ್ಣೌ ಸಾತ್ವತಂ ಚೈವ ಸಾತ್ಯಕಿಮ್ ।
ಸಂವಿದಂ ಚೈವ ಕುರ್ಯಾಸ್ತ್ವಂ ಸಿಂಹನಾದೇನ ಪಾಂಡವ ॥ – ಭಾರತ (ದ್ರೋಣ. ೧೨೬/೪೯)

ಅ: ಅದರಂತೆ ಜಯದ್ರಥ ಹತನಾದ ಬಳಿಕವೂ ನನಗೆ ಸೂಚನೆ ನೀಡು - ಹೀಗೆ ಧರ್ಮರಾಜ ಕೇಳಿಕೊಳ್ಳಲು ಭೀಮ ಅವನ ಸರಿಯಾದ ರಕ್ಷಣೆಗೆ ಘಟೋತ್ಕಚನನ್ನು, ಸೇನಾಪತಿಯಾದ ಧೃಷ್ಟದ್ಯುಮ್ನನನ್ನೂ ನಿಯಮಿಸಿದ.

ಸ ಚಾಹ ಸೇನಾಪತಿರತ್ರ ಭೀಮಂ
ಪ್ರಯಾಹಿ ತೌ ಯತ್ರ ಚ ಕೇಶವಾರ್ಜುನೌ ।
ನ ಜೀವಮಾನೇ ಮಯಿ ಧರ್ಷಿತುಂ ಕ್ಷಮೋ
ದ್ರೋಣೋ ನೃಪಂ ಮೃತ್ಯುರಹಂ ಚ ತಸ್ಯ ॥ ೧೧೮ ॥

ಅ: ಸೇನಾಪತಿಯಾದ ಧೃಷ್ಟದ್ಯುಮ್ನ ಭೀಮನಿಗೆ ಹೇಳಿದ - ನೀನು ಕೃಷ್ಣಾರ್ಜುನರು ಇರುವಲ್ಲಿಗೆ ತೆರಳು, ನಾನು ಬದುಕಿರುವವರೆಗೂ ದ್ರೋಣರು ಧರ್ಮರಾಜನನ್ನು ಹಿಡಿಯಲು ಸಮರ್ಥರಾಗಲಾರರು. ನಾನು ಅವರಿಗೆ ಮೃತ್ಯುವೇ ಆಗಿರುವೆನಲ್ಲವೇ.

ವಿ: ಧೃಷ್ಟದ್ಯುಮ್ನನನ್ನು ದ್ರುಪದ ಪಡೆದದ್ದು ದ್ರೋಣರ ಸಂಹಾರಕ್ಕಾಗಿಯೇ ಎಂಬುದು ಈಗಾಗಲೇ ಬಂದಿದೆ (೧೮/೯೨). ಆದ್ದರಿಂದ ದ್ರೋಣರೆಂದೂ ಧೃಷ್ಟದ್ಯುಮ್ನನನ್ನು ಸೋಲಿಸಿ ಧರ್ಮರಾಜನನ್ನು ಸೆರೆ ಹಿಡಿಯಲು ಸಾಧ್ಯವಿಲ್ಲ ಎಂದರ್ಥ.

ಇತಿ ಬ್ರುವಾಣಂ ಪ್ರಣಿಧಾಯ ಭೀಮಃ
ಪುನಃ ಪುನಸ್ತಂ ನೃಪತಿಂ ಗದಾಧರಃ ।
ಯಯೌ ಪರಾನೀಕಮಧಿಜ್ಯಧನ್ವಾ
ನಿರಂತರಂ ಪ್ರವಮನ್ ಬಾಣಪೂಗಾನ್ ॥ ೧೧೯ ॥

---

೧೧೯. ಕೃತ್ವಾ ಪ್ರದಕ್ಷಿಣಾನ್ ವಿಪ್ರಾನರ್ಚಿತಾಂಸ್ತುಷ್ಟಮಾನಸಾನ್ । – ಭಾರತ (ದ್ರೋಣ. ೧೨೭/೧೩)

೧೧೯. ಇತಿ ಬ್ರುವಾಣೇ ಪ್ರಣಧಾಯೇತ್ಯತ್ರ ಪುನಃ ಪುನರಿತಿ ಬ್ರುವಾಣೇ ಧೃಷ್ಟದ್ಯುಮ್ನೇ ತಂ ನೃಪತಿಂ ಪ್ರಣಧಾಯೇತಿ ಸಂಬಂಧಃ ॥ – (ವಾ.)

೧೧೯. ಅಧಿಜ್ಯಧನ್ವೇತ್ಯಸ್ಯಾಧಿ ಅಧಿಕೃತಾಂ ಉಪರಿಕೃತಾ ಜ್ಯಾ ಯಸ್ಯ ತತ್ ಅಧಿಜ್ಯಮ್ । ಅಧಿಜ್ಯಂ ಧನುರ್ಯಸ್ಯ ಸ ಅಧಿಜ್ಯಧನ್ವೇತ್ಯರ್ಥಃ । ಅಧಿಜ್ಯಧನುಃಶಬ್ದಸ್ಯ ಧನುಷಶ್ಚೇತಿ ಸೂತ್ರೇಣ ಸಮಾಸಾಂತೇऽನಜಾದೇಶೇ ಅಧಿಜ್ಯಧನ್ವೇತಿ ರೂಪಮ್ । ಧನುಃಶಬ್ದಾಂತಸ್ಯ ಬಹುವ್ರೀಹೇರನಜಾದೇಶೋ ಭವತಿ । ಸಮಾಸಾಂತ ಇತಿ ಧನುಷಶ್ಚೇತಿ ಸೂತ್ರಾರ್ಥಃ। ಅಥವಾ ಅಧಿಜ್ಯಂ ಧನ್ವಾ ಧನುರ್ಯಸ್ಯ ಸ ಅಧಿಜ್ಯ ಧನ್ವೇತ್ಯರ್ಥಃ । ಧನ್ವನ್ಶಿತಿನಕಾರಾಂತನಪುಂಸಕಶಬ್ದಸ್ಯ ಧನುಃಶಬ್ದಸ್ಯ ಚ ಪರ್ಯಾಯತ್ವಂ 'ಧನುಶ್ಚಾಪೋ ಧನ್ವಂ ಶರಾಸನಕೋದಂಡಕಾರ್ಮುಕಾಃ' ಇತ್ಯಮರಸಿದ್ಧಮ್ । ಧನುಃಶಬ್ದ-ಪರ್ಯಾಯಧನ್ವನ್ಶಿತಿನಕಾರಾಂತಂ ವ್ರೀಹ್ಯಾದಿತ್ವಾನ್ನತ್ವಾರ್ಥೇ ಇನಿಪ್ರತ್ಯಯೇ ನಸ್ತದ್ಧಿತ ಇತಿ ಟಿಲೋಪೇ ಧನ್ವೀ ನಿರೂಪಮ್ ॥ – (ಸ.)

ಅ: ಹೀಗೆ ಧೃಷ್ಟದ್ಯುಮ್ನನು ನುಡಿಯಲು ಭೀಮ ಧರ್ಮರಾಜನನ್ನು ಅವನ ರಕ್ಷಣೆಗೆ ಒಪ್ಪಿಸಿ ಗದಾಪಾಣಿಯಾಗಿ ಧನುಸ್ಸನ್ನು ಹೆದೆಯೇರಿಸಿಕೊಂಡು, ಬಾಣಗಳ ಗುಂಪನ್ನು ಎಡೆಬಿಡದೆ ಸುರಿಸುತ್ತಾ ಶತ್ರುಸೈನ್ಯದ ಮೇಲೆ ಸಾಗಿದನು.

ವಿ: ಸಾತ್ಯಕಿಯಂತೆ ಭೀಮನೂ ಸಹ ಬ್ರಾಹ್ಮಣರಿಗೆ ಸಮ್ಮಾನ ಮಾಡಿ ತೆರಳಿದ ಉಲ್ಲೇಖ ಮಹಾಭಾರತದಲ್ಲಿದೆ. ಇದು ಲೋಕಶಿಕ್ಷಣಕ್ಕಾಗಿ ಸ್ವತಃ ಭಾವಿಬ್ರಹ್ಮನಾದ ಭೀಮ ಮಾಡಿದ ಕಾರ್ಯ ಎಂದು ತಿಳಿಯಬೇಕು.

ಭೀಮ ದ್ರೋಣರ ಯುದ್ಧ

ನ್ಯವಾರಯತ್ ತಂ ಶರವರ್ಷಧಾರೋ
ದ್ರೋಣೋ ವಚಶ್ಚೇದಮುವಾಚ ಭೀಮಮ್ ।
ಶಿಷ್ಯಸ್ನೇಹಾದ್ವಾಸವಿಃ ಸಾತ್ಯಕಿಶ್ಚ
ಮಯಾ ಪ್ರಮುಕ್ತೌ ಭೃಶಮಾನತೌ ಮಯಿ ॥ ೧೨೦ ॥

ಅ: ಭೀಮನನ್ನು ಬಾಣಗಳ ಮಳೆ ಸುರಿಸುತ್ತಾ ದ್ರೋಣರು ಅಡ್ಡಗಟ್ಟಿದರು. ಈ ಮಾತನ್ನೂ ನುಡಿದರು - ನಾನು ಶಿಷ್ಯವಾತ್ಸಲ್ಯದಿಂದ ಅರ್ಜುನನನ್ನು, ಸಾತ್ಯಕಿಯನ್ನು ಒಳಗೆ ಬಿಟ್ಟೆ, ಅವರು ನನಗೆ ತುಂಬಾ ವಿನೀತರಾದವರು.

ಸ್ವೀಯಾ ಪ್ರತಿಜ್ಞಾಽಪಿ ಹಿ ಸೈಂಧವಸ್ಯ
ಗುಪ್ತೌ ಮಯಾ ಪಾರ್ಥಕೃತೇ ವಿಸೃಷ್ಟಾ।
ದಾಸ್ಯೇ ನ ತೇ ಮಾರ್ಗಮಹಂ ಕಥಂಚಿತ್
ಪಶ್ಯಾಸ್ತ್ರವೀರ್ಯಂ ಮಮ ದಿವ್ಯಮದ್ಭುತಮ್ ॥ ೧೨೧ ॥

ಅ: ಸೈಂಧವನ ರಕ್ಷಣೆಗಾಗಿ ನಾನು ಮಾಡಿದ ಪ್ರತಿಜ್ಞೆಯನ್ನೂ ಸಹ ಅರ್ಜುನನಿಗಾಗಿ ತೊರೆದೆ. ಆದರೆ, ನಾನು ನಿನಗೆ ಯಾವ ರೀತಿಯಿಂದಲೂ ದಾರಿ ನೀಡಲಾರೆ. ನನ್ನ ದಿವ್ಯವಾದ ಅದ್ಭುತ ಅಸ್ತ್ರಸಾಮರ್ಥ್ಯವನ್ನು ನೋಡು.

---

೧೨೦. ಶಿಷ್ಯಸ್ನೇಹಾದಿತ್ಯತ್ರ ಶಿಷ್ಯಾವಿತಿ ಸ್ನೇಹಾದಿತ್ಯರ್ಥಃ ॥ – (ವಾ.)

೧೨೦. ಶಿಷ್ಯಸ್ನೇಹಾತ್ ಮಮ ಶಿಷ್ಯ ಇತಿಸ್ನೇಹಾತ್। – (ಜ.)

ವಿ : ದ್ರೋಣರು ಭೀಮನಿಗೆ ಹೀಗೆ ಹೇಳುವ ಮೂಲಕ ಅರ್ಜುನ, ಸಾತ್ಯಕಿಯರಂತೆ ವಂದಿಸಿ ಕೇಳಿದಲ್ಲಿ ಮಾತ್ರ ಅವನಿಗೆ ಪ್ರವೇಶಕ್ಕೆ ಅವಕಾಶ ನೀಡುವುದಾಗಿ ಸೂಚಿಸಿದರು ಎಂದರ್ಥ.

ಗದೆಯಿಂದ ಪುಡಿಯಾದ ದ್ರೋಣರಥ

ಇತ್ಯುಕ್ತವಾಕ್ಯಃ ಸ ಗದಾಂ ಸಮಾದದೇ
ಚಿಕ್ಷೇಪ ತಾಂ ದ್ರೋಣರಥಾಯ ಭೀಮಃ ।
ಉವಾಚ ಚಾಹಂ ಪಿತೃವನ್ಮಾನಯೇ ತ್ವಾಂ
ಸದಾ ಮೃದುಸ್ತ್ವಾಂ ಪ್ರತಿ ನಾನ್ಯಥಾ ಕ್ವಚಿತ್ ॥ ೧೨೨ ॥

ಅ: ಅವರು ಈ ಮಾತನ್ನಾಡುತ್ತಲೇ ಭೀಮ ಗದೆಯನ್ನು ಕೈಗೆತ್ತಿಕೊಂಡ. ಅದನ್ನು ದ್ರೋಣರ ರಥದ ಮೇಲೆ ಎಸೆದ ಮತ್ತು ತಿಳಿಸಿದ : 'ನಾನು ನಿಮ್ಮನ್ನು ತಂದೆಯಂತೆ ಗೌರವಿಸುವೆ, ನಿಮ್ಮ ಬಗ್ಗೆ ನಾನು ಸದಾ ಮೃದುವಾಗಿಯೇ ವರ್ತಿಸುವೆ. ಸರ್ವಥಾ ಕಠಿಣವಾಗಿ ನಡೆದುಕೊಳ್ಳಲಾರೆ'.

ಅಮಾರ್ದವೇ ಪಶ್ಯ ಚ ಯಾದೃಶಂ ಬಲಂ
ಮಮೇತಿ ತಸ್ಯಾಶು ವಿಚೂರ್ಣಿತೋ ರಥಃ ।
ಗದಾಭಿಘಾತೇನ ವೃಕೋದರಸ್ಯ
ಸಸೂತವಾಜಿಧ್ವಜಯಂತ್ರಕೂಬರಃ ॥ ೧೨೩ ॥

---

೧೨೨. ಇತ್ಯುಕ್ತವಾಕ್ಯಃ ಸ ಭೀಮಃ ಗದಾಂ ಸಮಾದದೇ ದ್ರೋಣೋಕ್ತತೀಕ್ಷ್ಣವಾಕ್ಯಂ ಶ್ರುತ್ವಾ ಮೃದುಯುದ್ಧಂ ಪರಿತ್ಯಜ್ಯ ತೀಕ್ಷ್ಣಯುದ್ಧಂ ಕರ್ತವ್ಯಮಿತಿ ನಿಶ್ಚಿತ್ಯ ಗದಾಂ ಸಮಾದದ ಇತಿ ಯಾವತ್ । ಅನಂತರಮಹಂ ಪಿತೃವತ್ ತ್ವಾಮಾನಯ ಅತ ಏವ ತ್ವಾಂ ಪ್ರತಿ ಸದಾಹಂ ಮೃದು ಕ್ವಚಿತ್ ಕದಾಚಿದಪಿ ಅನ್ಯಥಾಸ್ಥಿತೋ ನ ಅಮಾರ್ದವೇ ಅಮಾರ್ದವಾವಸ್ಥಾಯಾಂ ಸಮಬಲಂ ಯಾದೃಶಂ ಪಶ್ಯೇತ್ಯುವಾಚ ಅನಂತರಂ ದ್ರೋಣರಥಾಯ ದ್ರೋಣರಥ-ಭಂಗಾಯ ತಾಂ ಗದಾಂ ಚಿಕ್ಷೇಪ ತಸ್ಯ ದ್ರೋಣಸ್ಯ ಸಸೂತವಾಜಿಧ್ವಜಯಂತ್ರಕೂಬರೋ ರಥಃ ವೃಕೋದರಸ್ಯ ಗದಾಭಿಘಾತೇನಾಶು ವಿಚೂರ್ಣಿತ ಇತಿ । – (ಸ.)

೧೨೩. ನಾರ್ಜುನೋಽಹಂ ಘೃಣೀ ದ್ರೋಣ ಭೀಮಸೇನೋಽಸ್ಮಿತೇ ರಿಪುಃ ।
ಪಿತಾ ನಸ್ತ್ವಂ ಗುರುರ್ಬಂಧುಸ್ತಥಾ ಪುತ್ರಾಸ್ತುತೇ ವಯಮ್ ।
ಇತಿ ಮನ್ಯಾಮಹೇ ಸರ್ವೇ ಭವಂತಂ ಪ್ರಣತಾಃ ಸ್ಥಿತಾಃ ॥
ಅದ್ಯ ತದ್ವಿಪರೀತಂ ತೇ ವದತೋಽಸ್ಮಾಸು ದೃಶ್ಯತೇ ।
ಯದಿ ತ್ವಂ ಶತ್ರುಮಾತ್ಮಾನಂ ಮನ್ಯಸೇ ತತ್ತಥಾಽಸ್ತ್ವಿಹ ॥
ಏಷ ತೇ ಸದೃಶಂ ಶತ್ರೋಃ ಕರ್ಮ ಭೀಮಃ ಕರೋಮ್ಯಹಮ್ ॥ – ಭಾರತ (ದ್ರೋಣ. ೧೨೭/೪೯-೫೧)

ಅ: 'ನಾನು ಕಠಿಣನಾದಲ್ಲಿ ನನ್ನ ಬಲ ಎಂತಹುದು ಎಂಬುದನ್ನು ನೀವು ನೋಡಿ' ಎಂದು ಗದೆಯನ್ನು ಎಸೆದ. ಕೂಡಲೇ ದ್ರೋಣರ ರಥ ಭೀಮನ ಗದೆಯ ಪೆಟ್ಟಿಗೆ ಸಾರಥಿ, ಕುದುರೆ, ಧ್ವಜ, ಚಕ್ರ, ನೊಗಗಳ ಸಮೇತ ಪುಡಿಪುಡಿಯಾಗಿ ಹೋಯಿತು.

ವಿ : 'ಅರ್ಜುನ ಸಾತ್ಯಕಿಯರು ವಿನೀತರು, ಭೀಮ ವಿನೀತನಲ್ಲ' ಎಂಬ ಅರ್ಥದ ಮಾತನ್ನು ದ್ರೋಣರು ನುಡಿದಾಗ ಭೀಮಸೇನ ತಾನು ನಿಜಕ್ಕೂ ವಿನೀತನಾಗಿದ್ದ ಕಾರಣದಿಂದಲೇ ದ್ರೋಣ–ರಿಗೆ ಉಳಿದುಕೊಳ್ಳಲು ಸಾಧ್ಯವಾಗಿದೆ. ತಾನು ವಿನೀತನಾಗದಿದ್ದಲ್ಲಿ ಅವರ ಪರಿಸ್ಥಿತಿ ವಿನಾಗುವುದು ಎಂಬುದನ್ನು ಹಾಗೆ ಗದೆಯನ್ನು ಪ್ರಯೋಗಿಸುವ ಮೂಲಕ ತಿಳಿಸಿಕೊಟ್ಟನು ಎಂದರ್ಥ.

ದ್ರೋಣೋ ಗದಾಮಾಪತತೀಂ ನಿರೀಕ್ಷ್ಯ
ತ್ವವಪ್ಲುತೋ ಲಾಘವತೋ ಧರಾತಲೇ ।
ತದೈವ ದುರ್ಯೋಧನಯಾಪಿತಂ ರಥಂ
ಪರಂ ಸಮಾಸ್ಥಾಯ ಶರಾನ್ ವವರ್ಷ ಹ ॥ ೧೨೪ ॥

ಅ: ಗದೆ ತನ್ನೆಡೆಗೆ ನುಗ್ಗಿ ಬರುತ್ತಿದ್ದುದನ್ನು ಕಂಡು ದ್ರೋಣರು ಥಟ್ಟನೆ ಭೂಮಿಗೆ ನೆಗೆದರು. ಆಗಲೇ ದುರ್ಯೋಧನ ಕಳಿಸಿದ ಮತ್ತೊಂದು ರಥವನ್ನು ಏರಿ ಭೀಮನ ಮೇಲೆ ಬಾಣಗಳ ಮಳೆ ಸುರಿಸತೊಡಗಿದರು.

ವಿ : ಅಂತಹ ಅಪಾರ ವೃದ್ಧಾಪ್ಯದಲ್ಲೂ ಛಂಗನೆ ಕೆಳಗೆ ನೆಗೆಯುವ ಮೂಲಕ ದ್ರೋಣರು ತೋರಿದ ಲಾಘವ ಅಪೂರ್ವವಾದುದು.

ಶರೈಸ್ತದೀಯೈಃ ಪರಮಾಸ್ತ್ರಮಂತ್ರಿತೈಃ
ಪ್ರವೃಷ್ಯಮಾಣೋ ಜಗದೀರಣಾತ್ಮಜಃ ।
ಶಿರೋ ನಿಧಾಯಾಶು ಪುರೋ ವೃಷೋ ಯಥಾ
ತಮಭ್ಯಯಾದೇವ ರಥಾದವಪ್ಲುತಃ ॥ ೧೨೫ ॥

---

೧೨೩. ಅಥೋದ್ಯಾಮ್ಯ ಗದಾಂ ಭೀಮಃ ಕಾಲದಂಡಮಿವಾಂತಕಃ ।
ದ್ರೋಣಾಯ ಮೃಜದ್ ರಾಜನ್ ಸ ರಥಾದವಪುಪ್ಲುವೇ ॥
ಸಾಶ್ವಸೂತಧ್ವಜಂ ಯಾನಂ ದ್ರೋಣಸ್ಯಾಪೋಥಯತ್ ತದಾ ॥ – ಭಾರತ (ದ್ರೋಣ. ೧೨೭/೫೩)

೧೨೫. ಯಂತ್ರಂ ಚಕ್ರಂ, ಕೂಬರಃ ಯುಗಂಧರಃ । – (ಜ.)

ಅ: ಪರಮಾಸ್ತ್ರಗಳಿಂದ ಅಭಿಮಂತ್ರಿತವಾಗಿದ್ದ ಬಾಣಗಳನ್ನು ದ್ರೋಣರು ಸುರಿಸತೊಡಗಿದಾಗ ಜಗತ್ಪ್ರೇರಕನಾದ, ವಾಯುಪುತ್ರನಾದ ಭೀಮ ರಥದಿಂದ ಕೆಳಕ್ಕೆ ಹಾರಿ, ತಲೆಯನ್ನು ಮುಂದೆ ಮಾಡಿಕೊಂಡು ಗೂಳಿಯಂತೆ ಅವರ ಕಡೆಗೆ ಧಾವಿಸಿದ.

ವಿ : ಘೂಳಿ ಮಳೆಹನಿಗಳನ್ನು ಲೆಕ್ಕಿಸದೇ ಮುನ್ನುಗ್ಗುವಂತೆ ಭೀಮಸೇನ ಬಾಣಗಳ ಮಳೆಯನ್ನು ಲೆಕ್ಕಿಸದೇ ದ್ರೋಣರೆಡೆಗೆ ಸಾಗಿದ ಎಂದರ್ಥ.

ಭೀಮನಿಂದ ದ್ರೋಣರ ಎಂಟು ರಥಗಳ ವಿನಾಶ

ಮನೋಜವಾದೇವ ತಮಾಪ್ಯ ಭೀಮೋ
ರಥಂ ಗೃಹೀತ್ವಾಽಂಬರ ಆಕ್ಷಿಪತ್ ಕ್ಷಣಾತ್ ।
ಶಕ್ತೋಽಪ್ಯಹಂ ತ್ವಾಂ ನ ನಿಹನ್ಮಿ ಗೌರವಾ
ದಿತ್ಯೇವ ಸುಜ್ಞಾಪಯಿತುಂ ತದಸ್ಯ ॥ ೧೨೬ ॥

ಅ: ಭೀಮ ಮನೋವೇಗದಿಂದಲೇ ದ್ರೋಣರ ಬಳಿ ಸಾಗಿ ಅವರ ರಥವನ್ನು ಎತ್ತಿ ಕ್ಷಣಮಾತ್ರದಲ್ಲಿ ಗಗನಕ್ಕೆ ತೂರಿದ. ನಾನು ಶಕ್ತನಾಗಿದ್ದರೂ ಗೌರವದಿಂದಾಗಿ ನಿಮ್ಮನ್ನು ಕೊಂದುಹಾಕುತ್ತಿಲ್ಲ ಎಂಬ ಸೂಚನೆಯನ್ನು ಆ ಮೂಲಕ ನೀಡಿದ.

ಸವಾಜಿಸೂತಃ ಸರಥಃ ಕ್ಷಿತೌ ಪತನ್
ವಿಚೂರ್ಣಿತೋಽಸ್ಮಾದ್ಗುರುರಪ್ಯವಪ್ಲುತಃ ।
ತದಾ ವಿಶೋಕೋಽಸ್ಯ ರಥಂ ಸಮಾನಯತ್
ತಮಾರುಹದ್ಭೀಮ ಉದಾರವಿಕ್ರಮಃ ॥ ೧೨೭ ॥

---

೧೨೫. ತತೋ ರಥಾದವಪ್ಲುತ್ಯ ವೇಗಮಾಸ್ಥಾಯ ಪಾಂಡವಃ ।
ನಿಮೀಲ್ಯ ನಯನೇ ರಾಜನ್ ಪದಾತಿರ್ದ್ರೋಣಮಭ್ಯಯಾತ್ ॥
ಅಂಸೇ ಶಿರೋ ಭೀಮಸೇನಃ ಕರೌ ಕೃತ್ವೋರಸಿ ಸ್ಥಿರೌ ।
ವೇಗಮಾಸ್ಥಾಯ ಬಲವಾನ್ ಮನೋಽನಿಲಗರುತ್ಮತಾಮ್ ॥ – ಭಾರತ (ದ್ರೋಣ. ೧೨೮/೧೫,೧೬)

೧೨೫. ಯಥಾ ಹಿ ಗೋವೃಷೋ ವರ್ಷಂ ಪ್ರತಿಗೃಹ್ಣಾತಿ ಲೀಲಯಾ ।
ತಥಾ ಭೀಮೋ ನರವ್ಯಾಘ್ರಃ ಶರವರ್ಷಂ ಸಮಗ್ರಹೀತ್ ॥ – ಭಾರತ (ದ್ರೋಣ. ೧೨೮/೧೭)

೧೨೭. **ಪತದ್ವಿಚೂರ್ಣಿತ** ಇತಿ ವಾ ಪಾಠಃ । – (ಜ.)

ಅ: ಆ ರಥವು ಭೂಮಿಗೆ ಬಿದ್ದು ಕುದುರೆ ಮತ್ತು ಸಾರಥಿಯೊಂದಿಗೆ ಪುಡಿಯಾಯಿತು, ದ್ರೋಣರು ಮತ್ತೊಮ್ಮೆ ಕೆಳಕ್ಕೆ ನೆಗೆದು ಪಾರಾದರು. ಆ ವೇಳೆಗೆ ವಿಶೋಕ ಭೀಮನ ರಥವನ್ನು ಅಲ್ಲಿಗೆ ತಂದ. ಮಹಾಪರಾಕ್ರಮಿಯಾದ ಭೀಮ ಅದನ್ನೇರಿದ.

ವಿ: ೧) ಹಾಗೆ ಭೀಮಸೇನ ದ್ರೋಣರ ರಥವನ್ನು ಪುಡಿಮಾಡಿದ್ದು ಒಟ್ಟು ಎಂಟು ಬಾರಿಯೆಂದು ಮಹಾಭಾರತದಲ್ಲಿದೆ :

ತಮಪ್ಯತಿರಥಂ ಭೀಮಶ್ಚಿಕ್ಷೇಪ ಭೃಶರೋಷಿತಃ ।
ಏವಮಷ್ಟೌ ರಥಾಃ ಕ್ಷಿಪ್ತಾ ಭೀಮಸೇನೇನ ಲೀಲಯಾ ॥

– ಭಾರತ (ದ್ರೋಣ. ೧೨೮/೨೧)

೨) ವಿಶೋಕ ಕೃಷ್ಣ, ತ್ರಿವಕ್ರೆಯರ ಪುತ್ರ. ಪಂಚರಾತ್ರಾದಿಗಳನ್ನು ಬಲ್ಲ ಶಾಸ್ತ್ರಜ್ಞ, ಭೀಮನ ಸಾರಥಿಯಾಗಿ ರಣರಂಗದಲ್ಲಿ ಪಾಲ್ಗೊಂಡವನು. ಕುರುಕ್ಷೇತ್ರಮಹಾಸಮರದಲ್ಲಿ ಸುರಕ್ಷಿತವಾಗಿ ಬದುಕುಳಿದದ್ದು ಅವನ ವಿಶೇಷ; ಅದು ಭೀಮನ ರಕ್ಷಣೆಯ ಹಿರಿಮೆ.

ಕುರು ಸೇನೆಯಲ್ಲಿ ದ್ರೋಣರ ಪರಾಕ್ರಮ

ದ್ರೋಣೋಽಪಿ ದುರ್ಯೋಧನದತ್ತಮನ್ಯಂ
ರಥಂ ಸಮಾಸ್ಥಾಯ ಯುಧಿಷ್ಠಿರಂ ಯಯೌ ।
ಗೃಹೀತುಕಾಮಂ ನೃಪತಿಂ ಪ್ರಯಾಂತಂ
ನ್ಯವಾರಯತ್ ಸಂಯತಿ ವಾಹಿನೀಪತಿಃ ॥ ೧೨೮ ॥

ಅ: ದ್ರೋಣರು ದುರ್ಯೋಧನ ನೀಡಿದ ಮತ್ತೊಂದು ರಥವನ್ನು ಏರಿ ಧರ್ಮರಾಜನ ಬಳಿಗೆ ತೆರಳಿದರು. ಧರ್ಮರಾಜನನ್ನು ಸೆರೆ ಹಿಡಿಯಲೆಂದು ಬಯಸಿ ಸಾಗಿದ್ದ ಅವರನ್ನು ಸೇನಾಪತಿಯಾದ ಧೃಷ್ಟದ್ಯುಮ್ನ ಯುದ್ಧದಲ್ಲಿ ತಡೆದ.

ವಿದ್ರಾವಿತಾಂ ದ್ರೋಣಶರೈಃ ಸ್ವಸೇನಾಂ
ಸಂಸ್ಥಾಪ್ಯ ಭೂಯೋ ದ್ರುಪದಾತ್ಮಜಃ ಶರೈಃ ।
ದ್ರೋಣಂ ನಿವಾರ್ಯೈವ ಚಮೂಂ ಪರೇಷಾಂ
ವಿದ್ರಾವಯಾಮಾಸ ಚ ತಸ್ಯ ಪಶ್ಯತಃ ॥ ೧೨೯ ॥

ಅ: ದ್ರೋಣರ ಬಾಣಗಳಿಂದ ಓಡುತ್ತಿದ್ದ ತನ್ನ ಸೇನೆಯನ್ನು ಧೃಷ್ಟದ್ಯುಮ್ನ ತಡೆದು ನಿಲ್ಲಿಸಿ, ಬಾಣಗಳಿಂದ ದ್ರೋಣರನ್ನು ತಡೆದು ಅವರು ನೋಡುತ್ತಿದ್ದಂತೆಯೇ ಅವರ ಸೇನೆಯನ್ನು ಹೊಡೆದೋಡಿಸತೊಡಗಿದ.

ತಯೋರಭೂದ್ಯುದ್ಧಮತೀವ ರೌದ್ರಂ
ಜಯೈಷಿಣೋಃ ಪಾಂಡವಧಾರ್ತರಾಷ್ಟ್ರಯೋಃ ।
ಅತ್ಯದ್ಭುತಂ ಸಂತತಬಾಣವರ್ಷ-
ಮನಾರತಂ ಸುಚಿರಂ ನಿರ್ವಿಶೇಷಮ್ ॥ ೧೩೦ ॥

ಅ: ಪಾಂಡವ ಕೌರವರ ಜಯ ಬಯಸಿದ್ದ ಆ ಧೃಷ್ಟದ್ಯುಮ್ನ ದ್ರೋಣರಿಗೆ ಸಂತತ ಬಾಣಗಳ ಮಳೆಯಿಂದ ಕೂಡಿ ನಿರ್ವಿಶೇಷವಾದ ಅತ್ಯದ್ಭುತವಾದ ಅತ್ಯಂತ ಭಯಾನಕವಾದ ಯುದ್ಧ ಬಹುಕಾಲ ನಡೆಯಿತು.

ಭೀಮನಿಂದ ವಿಂದ, ಅನುವಿಂದ ಮೊದಲಾದ ಹನ್ನೆರಡು ಕೌರವರ ಹಾಗೂ ದುರ್ಯೋಧನನ ಮಂತ್ರಿಗಳ ವಧೆ

ತತಃ ಪ್ರಾಯಾದ್ಭೀಮಸೇನೋಽಮಿತೌಜಾ
ಮೃದ್ಗಂಛರೈಃ ಕೌರವರಾಜಸೇನಾಮ್ ।
ವಿಂದಾನುವಿಂದಪ್ರಮುಖಾ ಧಾರ್ತರಾಷ್ಟ್ರಾ-
ಸ್ತಮಾಸೇದುರ್ದ್ವಾದಶ ವೀರಮುಖ್ಯಾಃ ॥ ೧೩೧ ॥

ಅ: ಬಳಿಕ ಅಮಿತ ಪರಾಕ್ರಮಿಯಾದ ಭೀಮಸೇನ ಬಾಣಗಳಿಂದ ದುರ್ಯೋಧನನ ಸೇನೆಯನ್ನು ಸದೆಬಡಿಯುತ್ತಾ ಮುಂದೆ ಸಾಗಿದನು. ಮಹಾವೀರರಾದ ವಿಂದ, ಅನುವಿಂದ ಮೊದಲಾದ ಹನ್ನೆರಡು ಜನ ಕೌರವರು ಅವನನ್ನು ಎದುರಿಸಿದರು.

ವಿ: ಹನ್ನೆರಡು ಜನ ಕೌರವರ ವಿವರ ಮಹಾಭಾರತದಲ್ಲಿದೆ – ಕುಂಡಭೇದಿ, ಸುಷೇಣ, ದೀರ್ಘನೇತ್ರ, ವೃಂದಾರಕ, ಅಭಯ, ರೌದ್ರಕರ್ಮ, ದುರ್ವಿಮೋಚನ, ವಿಂದ, ಅನುವಿಂದ, ಸುವರ್ಮ, ಸುದರ್ಶನ ಮತ್ತು ಸುಹಸ್ತ. ಈ ಹನ್ನೆರಡು ಜನರಲ್ಲಿ ವಿಂದ ಮತ್ತು ಅನುವಿಂದರು ಪ್ರಮುಖರು ಎಂದರ್ಥ.

---

೧೩೦. ಜಯೈಷಿಣೋಃ ಪಾಂಡವಧಾರ್ತರಾಷ್ಟ್ರಯೋರಿತ್ಯತ್ರ ಪಾಂಡವಧಾರ್ತರಾಷ್ಟ್ರಯೋಃ ಜಯೈಷಿಣೋಃ ಪಾಂಡವವಿಜಯೈಷೀ ಧೃಷ್ಟದ್ಯುಮ್ನಃ ಧಾರ್ತರಾಷ್ಟ್ರವಿಜಯೈಷೀ ದ್ರೋಣ ಇತಿ ಭಾವಃ ॥ – (ವಾ.)

ವಿದ್ಧಃ ಶರೈಸ್ತೈರ್ಬಹುಭಿರ್ಮಕೋದರಃ
ಶಿರಾಂಸಿ ತೇಷಾಂ ಯುಗಪಚ್ಚಕರ್ತ ।
ಹತೇಷು ತೇಷು ಪ್ರವರೇಷು ಧನ್ವಿನಾಂ
ಸತ್ಯವ್ರತಃ ಪುರುಮಿತ್ರೋ ಜಯಶ್ಚ ॥ ೧೩೨ ॥

ಬೃಂದಾರಕಃ ಪೌರವಶ್ಚೇತ್ಯಮಾತ್ಯಾಃ
ಸಮಾಸೇದುರ್ಭಾರ್ಗವರಾಷ್ಟ್ರಸ್ಯ ಭೀಮಮ್ ।
ಸ ತೈಃ ಪೃಷತ್ಕೈರವಕೀರ್ಯಮಾಣಃ
ಸಿತಾನ್ ವಿಪಾಟಾನ್ ಯುಗಪತ್ ಸಮಾದದೇ ॥ ೧೩೩ ॥

ಅ: ಅವರು ಅನೇಕ ಬಾಣಗಳಿಂದ ಹೊಡೆಯತೊಡಗುತ್ತಲೇ ಭೀಮಸೇನ ಅವರೆಲ್ಲರ ತಲೆಗಳನ್ನು ಏಕಕಾಲಕ್ಕೆ ಕತ್ತರಿಸಿಹಾಕಿದ. ಧನ್ವಿಶ್ರೇಷ್ಠರಾದ ಅವರು ಹತರಾಗಲು ಸತ್ಯವ್ರತ, ಪುರುಮಿತ್ರ, ಜಯ, ಬೃಂದಾರಕ, ಪೌರವ ಎಂಬ ದುರ್ಯೋಧನನ ಮಂತ್ರಿಗಳು ಭೀಮನ ಮೇಲೆ ಎರಗಿದರು. ಅವರು ಬಾಣಗಳನ್ನು ಸುರಿಸುತ್ತಿದ್ದಂತೆಯೇ ಭೀಮಸೇನ ಹರಿತವಾದ ಬಾಣಗಳನ್ನು ಒಟ್ಟಿಗೆ ಕೈಗೆತ್ತಿಕೊಂಡ.

ವಿ: ಹನುಮದ್ರೂಪದಿಂದ ರಾವಣನ ಮಂತ್ರಿಗಳನ್ನು ಕೊಂದಿದ್ದ ಭೀಮಸೇನ, ಇಲ್ಲಿ ದುರ್ಯೋಧನನ ಮಂತ್ರಿಗಳನ್ನು ಕೊಂದಿದ್ದು ಗಮನಾರ್ಹ.

ಭೀಮನಿಂದ ಕೃತವರ್ಮನ ಪರಾಭವ

ಜಹಾರ ತೈರೇವ ಶಿರಾಂಸಿ ತೇಷಾಂ
ಹತೇಷು ತೇಷ್ವೇವ ಪರೇ ಪ್ರದುದ್ರುವುಃ ।
ಸ ಸಿಂಹವತ್ ಕ್ಷುದ್ರಮೃಗಾನ್ ಸಮಂತತೋ
ವಿದ್ರಾವ್ಯ ಶತ್ರೂನ್ ಹೃದಿಕಾತ್ಮಜಂ ರಣೇ ॥ ೧೩೪ ॥

ಅ: ಆ ಬಾಣಗಳಿಂದ ಅವರ ಶಿರಸ್ಸುಗಳನ್ನು ಹಾರಿಸಿದ. ಅವರು ಸಾಯುತ್ತಲೇ ಉಳಿದವರು ದಿಕ್ಕೆಟ್ಟು ಓಡತೊಡಗಿದರು. ಭೀಮಸೇನ ಕ್ಷುದ್ರಮೃಗಗಳನ್ನು ಸಿಂಹ ಹೇಗೋ ಹಾಗೆ ಎಲ್ಲೆಡೆ-ಗಳಿಂದಲೂ ಶತ್ರುಗಳನ್ನು ಓಡಿಸುತ್ತಾ ಕೃತವರ್ಮನನ್ನು ಎದುರಿಸಿದ.

---

೧೩೩. ಶಿತಾನ್ ವಿಪಾಠಾನಿತ್ಯತ್ರ ''ತೃತೀಯೋಽತಿಶಯ'' ಇತಿ ವಚನಾತ್ ವಿಶೇಷೇಣ ಪಾಟಯಂತಿ ಪರಸೈನ್ಯಮಿತಿ ವಿಪಾಠಾಃ= ಶರವಿಶೇಷಾಃ ॥ –(ವಾ.)

ಅಭ್ಯಾಗಮತ್ ತೇನ ನಿವಾರಿತಃ ಶರೈಃ
ಕ್ಷಣೇನ ಚಕ್ರೇ ವಿರಥಾಶ್ವಸೂತಮ್ ।
ಸ ಗಾಢವಿದ್ಧಸ್ತು ವೃಕೋದರೇಣ
ರಣಂ ವಿಸೃಜ್ಯಾಪಯಯೌ ಕ್ಷಣೇನ ॥ ೧೩೫ ॥

ಅ: ಅವನು ಬಾಣಗಳಿಂದ ಅಡ್ಡಗಟ್ಟಲು ಕ್ಷಣಮಾತ್ರದಲ್ಲಿ ಅವನನ್ನು ರಥ, ಕುದುರೆ, ಸಾರಥಿ ಇಲ್ಲದವನನ್ನಾಗಿ ಮಾಡಿದ. ಭೀಮನಿಂದ ಬಹಳವಾಗಿ ಪೆಟ್ಟುತಿಂದ ಕೃತವರ್ಮ ಯುದ್ಧವನ್ನು ತೊರೆದು ಆ ಕ್ಷಣದಲ್ಲೇ ತೆರಳಿದ.

ವಿ : ಕೃತವರ್ಮನಿಗೆ ಈಗ ಕೃಷ್ಣನ ವರವಿಲ್ಲದ್ದರಿಂದ ಭೀಮಸೇನ ಅವನನ್ನು ಸಂಪೂರ್ಣವಾಗಿ ಸೋಲಿಸಿ ಓಡಿಸಿದ ಎಂದು ತಿಳಿಯಬೇಕು.

ವಿಜಿತ್ಯ ಹಾರ್ದಿಕ್ಯಮಥಾಶು ಭೀಮೋ
ವಿದ್ರಾವಯಾಮಾಸ ವರೂಥಿನೀಂ ತಾಮ್ ।
ಸಂಪ್ರೇಷಯನ್ ಸರ್ವನರಾಂಶ್ಚ ಕುಂಜರಾನ್
ಯಮಾಯ ಯಾತೋ ಹರಿಪಾರ್ಥಪಾರ್ಶ್ವಮ್ ॥ ೧೩೬ ॥

ಅ: ಭೀಮಸೇನ ಕೃತವರ್ಮನನ್ನು ಗೆದ್ದು ಕೂಡಲೇ ಆ ಸೇನೆಯನ್ನು ಹೊಡೆದಟ್ಟತೊಡಗಿದ. ಎಲ್ಲ ಪದಾತಿಗಳನ್ನೂ, ಕುದುರೆಗಳನ್ನೂ, ಆನೆಗಳನ್ನೂ ಕೊಂದುಹಾಕುತ್ತಾ ಶ್ರೀಕೃಷ್ಣಾರ್ಜುನರ ಬಳಿ ತಲುಪಿದ.

ಭೀಮನಿಂದ ಅರ್ಜುನನ ಕ್ಷೇಮವಾರ್ತೆಯ ಘೋಷ

ದೃಷ್ಟ್ವೈವ ಕೃಷ್ಣವಿಜಯೌ ಪರಮಪ್ರಹೃಷ್ಟ-
ಸ್ತಾಭ್ಯಾಂ ನಿರೀಕ್ಷಿತ ಉತ ಪ್ರತಿಭಾಷಿತಶ್ಚ।
ಸಂಜ್ಞಾಂ ನೃಪಸ್ಯ ಸ ದದಾವಪಿ ಸಿಂಹನಾದಾನ್
ಶ್ರುತ್ವಾ ಪರಾಂ ಮುದಾಮವಾಪ ಸ ಚಾಗ್ರ್ಯಬುದ್ಧಿಃ ॥ ೧೩೭ ॥

---

೧೩೮. ತದಾ ತು ನರ್ದಮಾನೇ ವೈ ಭೀಮಸೇನೇ ಮದೋತ್ಕಟೇ।
ಸ್ಮಿತಂ ಕೃತ್ವಾ ಮಹಾಬಾಹುರ್ಧರ್ಮಪುತ್ರೋ ಯುಧಿಷ್ಠಿರಃ ॥
–ಇತ್ಯಾದಿ ಭಾರತ (ದ್ರೋಣ. ೧೨೮/೩೮-೫೬)

ಅ: ಭೀಮ ಕೃಷ್ಣಾರ್ಜುನರನ್ನು ಕಾಣುತ್ತಲೇ ತುಂಬಾ ಹರ್ಷಿತನಾದ. ಅವರೂ ಇವನನ್ನು ಕಂಡರು, ಪರಸ್ಪರ ಮಾತನಾಡಿದರು. ಭೀಮಸೇನ ಸಿಂಹನಾದದ ಮೂಲಕ ಧರ್ಮರಾಜನಿಗೆ ಸೂಚನೆ ನೀಡಿದ. ಅದನ್ನು ಕೇಳಿ ಶ್ರೇಷ್ಠಬುದ್ಧಿಯ ಧರ್ಮರಾಜ ಬಹಳವಾಗಿ ಆನಂದಿಸಿದ.

ವಿ: ಹೀಗೆ ಧರ್ಮರಾಜನಿಗೆ ಆನಂದ ನೀಡುವ ಮೂಲಕ ಧರ್ಮಿಷ್ಠರಿಗೆ ಆನಂದಕರವಾದ ಶಾಸ್ತ್ರವನ್ನು ಉಪದೇಶಿಸುವ ಆನಂದತೀರ್ಥ ತಾನು ಎಂದು ಭೀಮಸೇನ ಸಾರಿದ ಎಂದು ತಿಳಿಯಬಹುದು. ಸಾತ್ಯಕಿಯಿಂದಾಗದ ಕಾರ್ಯ ಭೀಮನಿಂದಾದದ್ದು ಗಮನಾರ್ಹ. ಅದರಿಂದಾಗಿಯೇ ಕಲಿಯುಗದಲ್ಲಿ ಧರ್ಮಪ್ರಸಾರ ಮಾಡುವುದು ಕುರು ಸೇನೆಯಲ್ಲಿ ಸುರಕ್ಷಿತ ಓಡಾಡುವಂತೆ ಅಸಾಧ್ಯವಾದ ಕಾರ್ಯ, ಅದಕ್ಕೆ ವಾಯುವಿನ ಹೊರತು ಬೇರಾರೂ ಸಮರ್ಥರಲ್ಲವೆಂದು ಶ್ರೀಹರಿ ಆಚಾರ್ಯ ಶ್ರೀಮಧ್ವರನ್ನು *ಕಳುಹಿಸಿಕೊಟ್ಟ.

ಭೀಮನ ಸಿಂಹನಾದದ ವೈಭವ

ಭೀಮಸ್ಯ ನಾನದತ ಏವ ಮಹಾಸ್ವನೇನ
ವಿಣ್ಮೂತ್ರಶೋಣಿತಮಥೋ ಮೃತಿಮಾಪುರೇಕೇ ।
ಭೀತೇಷು ಸರ್ವನೃಪತಿಷ್ವಮುಮಾಪ ತೂರ್ಣಂ
ಕರ್ಣೋ ವಿಕರ್ಣಮುಖಿರಾ ಅಪಿ ಧಾರ್ತರಾಷ್ಟ್ರಾಃ ॥ ೧೩೮ ॥

ಅ: ಭೀಮ ಸಿಂಹನಾದ ಮಾಡಿದೊಡನೆಯೇ ಆ ಮಹಾಘೋಷದಿಂದ ಅನೇಕ ಕೌರವ ಸೈನಿಕರು ಮಲಮೂತ್ರ ವಿಸರ್ಜನೆ ಮಾಡಿದರು, ರಕ್ತವಾಂತಿ ಮಾಡಿದರು, ಸತ್ತೂ ಹೋದರು. ಸಕಲ ರಾಜರು ಭೀತರಾದಾಗ ಭೀಮನ ಮೇಲೆ ಕೂಡಲೇ ಕರ್ಣ ನುಗ್ಗಿದ. ವಿಕರ್ಣ ಮುಂತಾದ ಕೌರವರೂ ಬಂದರು.

---

* ನಾಥಃ ಕಲೌ ತ್ರಿಯುಗಹೂತಿರನುದ್ಭುಭೂಷುರ್ಬ್ರಹ್ಮಾಣಮಪ್ಯನವತಾರಮನಾದಿದಿಕ್ಷುಃ ।
ಸರ್ವಜ್ಞಮನ್ಯಮನವೇಕ್ಷ್ಯ ಸಕಾರ್ಯವೀರ್ಯಂ ಸ್ಮೇರಾನನೋ ಭುವನಜೇವನಮಾಬಭಾಷೇ ॥
– ಸುಮಧ್ವವಿಜಯ (೨/೨)

೧೩೮. ದುರ್ಯೋಧನಪಕ್ಷಿಣಾಂ ಗುದಲಿಂಗಾದಿದ್ವಾರೇಭ್ಯೋ ರಕ್ತಸ್ರಾವೋಽಪ್ಯಭೂದಿತಿಭಾವಃ । – (ಜ.)

೧೩೮. ವಿಣ್ಮೂತ್ರಶೋಣಿತಮಾಪುರಿತ್ಯಸ್ಯ ವಿಣ್ಮೂತ್ರಶೋಣಿತವಿಸರ್ಜನಮಾಪುರಿತ್ಯರ್ಥಃ । ವಿಣ್ಮೂತ್ರದ್ವಾರಾಭ್ಯಾಂ ವಿಣ್ಮೂತ್ರವಿಸರ್ಜನಂ ಮುಖೇನ ಶೋಣಿತವಮನಂ ಚಕ್ರುರಿತಿ ಭಾವಃ ॥ – (ಸ.)

ವಿ : ಭೀಮನ ಸಿಂಹನಾದದ ಅಪೂರ್ವ ಹಿರಿಮೆ ಇಲ್ಲಿ ವರ್ಣಿತವಾಗಿದೆ. ಮಹಾಭಾರತ ಮೂಲದಲ್ಲಿ ಬಂದಿರುವ ಭೀಮನಾದದ ವರ್ಣನಪರ ಶ್ಲೋಕಗಳು ಹೀಗಿವೆ :

ತಸ್ಮಿನ್ ಸಮುತ್ಥಿತೇ ಶಬ್ದೇ ತುಮುಲೇ ಲೋಮಹರ್ಷಣೇ ।
ಭೀಮಸೇನೋ ಮಹಾಬಾಹುಃ ಪ್ರಾಣದದ್ ಗೋವೃಷೋ ಯಥಾ ॥
ಶಂಖದುಂದುಭಿನಿರ್ಘೋಷಂ ವಾರಣಾನಾಂ ಚ ಬೃಂಹಿತಮ್ ।
ಸಿಂಹನಾದಂ ಚ ಸೈನ್ಯಾನಾಂ ಭೀಮಸೇನರವೋऽಭ್ಯಭೂತ್ ॥
ಹಯಾನಾಂ ಹ್ರೇಷಮಾಣಾನಾಮನೀಕೇಷು ಸಹಸ್ರಶಃ ।
ಸರ್ವಾನಭ್ಯಭವತ್ ಶಬ್ದಾನ್ ಭೀಮಸ್ಯ ನದತಃ ಸ್ವನಃ ॥
ತಂ ಶ್ರುತ್ವಾ ನಿನದಂ ತಸ್ಯ ಸೈನ್ಯಾಸ್ತವ ವಿತತ್ರಸುಃ ।
ಜೀಮೂತಸ್ಯೇವ ನದತಃ ಶಕ್ರಾಶನಿಸಮಸ್ವನಮ್ ॥
ವಾಹನಾನಿ ಚ ಸರ್ವಾಣಿ ಶಕೃನ್ಮೂತ್ರಂ ಪ್ರಸುಸ್ರುವುಃ ।
ಶಬ್ದೇನ ತಸ್ಯ ವೀರಸ್ಯ ಸಿಂಹಸ್ಯೇವೇತರೇ ಮೃಗಾಃ ॥ – ಭಾರತ (ಭೀಷ್ಮ. ೪೪/೮-೧೨)

ಕುರುಸೈನಿಕರಿಗೆ ಬಾಯಲ್ಲಿ ಮಾತ್ರವಲ್ಲದೇ ಮಲಮೂತ್ರದ್ವಾರಗಳಲ್ಲೂ ರಕ್ತಸ್ರಾವವಾದ ವಿವರ ಜನಾರ್ದನೀಯದಲ್ಲಿದೆ.

ಭೀಮನಿಂದ ವಿಕರ್ಣಾದಿಗಳ ವಧೆ – ಕರ್ಣನ ಪರಾಜಯ

ಹತ್ವಾ ವಿಕರ್ಣಮುತ ತತ್ರ ಚ ಚಿತ್ರಸೇನಂ
ಸಂಚೂರ್ಣಿತಂ ಚ ವಿದಧೇ ರಥಮರ್ಕಸೂನೋಃ ।
ಘೋರೈಃ ಶರೈಃ ಪುನರಪಿ ಸ್ಮ ಸ ಮೃದ್ಯಮಾನಃ
ಕರ್ಣೋऽಪಯಾನಮಕರೋದ್ದ್ರುತಮೇವ ಭೀಮಾತ್ ॥ ೧೩೯ ॥

ಅ:. ಭೀಮಸೇನ ಆ ಯುದ್ಧದಲ್ಲಿ ವಿಕರ್ಣನನ್ನು, ಚಿತ್ರಸೇನನನ್ನು ಸಂಹರಿಸಿದ. ಬಳಿಕ ಸೂರ್ಯಪುತ್ರನಾದ ಕರ್ಣನ ರಥವನ್ನು ಪುಡಿಗೈದ. ಭೀಮ ಮತ್ತೆ ಮತ್ತೆ ತೀಕ್ಷ್ಣವಾದ ಬಾಣಗಳಿಂದ ಹೊಡೆಯ ತೊಡಗಿದಾಗ ಕರ್ಣ ಕೂಡಲೇ ಅವನಿಂದ ದೂರಕ್ಕೆ ಪಲಾಯನ ಮಾಡಿದ.

---

೧೩೯. ನಿರ್ಜಿತ್ಯ ತು ರಣೇ ಕರ್ಣಂ ಭೀಮಸೇನಃ ಪ್ರತಾಪವಾನ್ ।
ನನಾದ ಬಲವಾನ್ ನಾದಂ ಪರ್ಜನ್ಯನಿನದೋಪಮಮ್ ॥ – ಭಾರತ (ದ್ರೋಣ. ೧೨೯/೩೧-೩೪)

ಕುಂತೀಪುತ್ರೇಣ ಭೀಮೇನ ನಿರ್ಜಿತಃ ಸ ತು ಲೀಲಯಾ ॥ (ಎಂದೂ ಅಲ್ಲಿದೆ) – (ದ್ರೋಣ. ೧೩೨/೨)

ಆಶ್ವಾಸ್ಯ ಚೈವ ಸುಚಿರಂ ಪುನರೇವ ಭೀಮಂ
ಯುದ್ಧಾಯ ಯಾತಿ ಧೃತರಾಷ್ಟ್ರಸುತೈಸ್ತಥಾಽನ್ಯೈಃ
ತಾಂಶ್ಚೈವ ತತ್ರ ವಿನಿಹತ್ಯ ತಥೈವ ಕರ್ಣೋ
ವ್ಯಶ್ವಾಯುಧಃ ಕೃತ ಉತಾಪಯಯೌ ಕ್ಷಣೇನ ॥ ೧೪೦ ॥

ಅ: ಬಹುಹೊತ್ತು ಸುಧಾರಿಸಿಕೊಂಡು ಕರ್ಣ ಮತ್ತೆ ಅನೇಕ ಕೌರವರೊಂದಿಗೆ ಭೀಮನ ಮೇಲೆ ಯುದ್ಧಕ್ಕೆ ತೆರಳಿದನು. ಭೀಮಸೇನ ಆ ಕೌರವರನ್ನೆಲ್ಲಾ ಕೊಂದುಹಾಕಿ ಕರ್ಣನ ಕುದುರೆಗಳನ್ನು ಸಂಹರಿಸಿದ. ಆಯುಧಗಳನ್ನು ನಾಶಮಾಡಿದ. ಕರ್ಣ ಕ್ಷಣಮಾತ್ರದಲ್ಲಿ ಅಲ್ಲಿಂದ ಪುನಃ ಓಡಿದ.

ವಿಕರ್ಣಚಿತ್ರಸೇನಾದ್ಯಾ ಏವಂ ವೀರತಮಾಃ ಸುತಾಃ ।
ಕರ್ಣಸ್ಯ ಪಶ್ಯತೋ ಭೀಮಬಾಣಕೃತ್ತಶಿರೋಧರಾಃ ॥ ೧೪೧ ॥

ನಿಪೇತುರ್ಧೃತರಾಷ್ಟ್ರಸ್ಯ ರಥೇಭ್ಯಃ ಪೃಥಿವೀತಲೇ ।
ತ್ರಯೋವಿಂಶತಿರೇವಾತ್ರ ಕರ್ಣಸಾಹಾಯ್ಯಕಾರಿಣಃ ॥ ೧೪೨ ॥

ಅ: ಧೃತರಾಷ್ಟ್ರನ ವಿಕರ್ಣ, ಚಿತ್ರಸೇನ ಮೊದಲಾದ ಮಹಾವೀರರಾದ ಇಪ್ಪತ್ತಮೂರು ಮಕ್ಕಳು ಕರ್ಣ ನೋಡುತ್ತಿದ್ದಂತೆಯೇ ಭೀಮನ ಬಾಣಗಳಿಂದ ತಲೆಕಡಿದವರಾಗಿ ರಥಗಳಿಂದ ನೆಲದ ಮೇಲೆ ಬಿದ್ದರು. ಅವರೆಲ್ಲ ಕರ್ಣನ ಸಹಾಯಕ್ಕೆಂದು ಬಂದಿದ್ದವರು.

ವಿ : ಹಾಗೆ ಸತ್ತ ಇಪ್ಪತ್ತಮೂರು ಕೌರವರ ಹೆಸರುಗಳು ಹೀಗಿವೆ – ವಿಕರ್ಣ, ಚಿತ್ರಸೇನ, ದುರ್ಮುಖ, ದುರ್ಜಯ, ದುರ್ಮರ್ಷಣ, ದುರ್ಮದ, ದುರ್ಧರ, ಜಯ, ಚಿತ್ರ, ಉಪಚಿತ್ರ,

---

೧೪೦. ಆಶ್ವಾಸ್ಯ ಚೈವಂ ಸುಚಿರಮಿತ್ಯತ್ರ ಸುಚಿರಮಾಶ್ವಾಸ್ಯ = ವಿಶ್ರಾಮ್ಯ ॥ – (ವಾ.)

೧೪೦. ಸವಿಹ್ವಲೋ ಮಹಾರಾಜ ಕರ್ಣೋ ಭೀಮಶರಾಹತಃ ।
ಪ್ರಾದ್ರವಜ್ಜವನೈರಶ್ವೈ ರಣಂ ಹಿತ್ವಾ ಮಹಾಭಯಾತ್ ॥ – (ದ್ರೋಣ. ೧೩೪/೩೪)

೧೪೦. ಅಶ್ವತ್ಥಾಮಾ ಮದ್ರರಾಜಃ ಕೃಪಃ ಕರ್ಣಶ್ಚ ಸಂಗತಾಃ ।
ನ ಶಕ್ತಾಃ ಪ್ರಮುಖೇ ಸ್ಥಾತುಂ ನೂನಂ ಭೀಮಸ್ಯ ಸಂಜಯ ॥
– (ಧೃತರಾಷ್ಟ್ರನ ವಚನ) ಭಾರತ (ದ್ರೋಣ. ೧೩೫/೮)

೧೪೨. ಏಕತ್ರಿಂಶನ್ಮಹಾರಾಜ ಪುತ್ರಾಂಸ್ತವ ನಿಪಾತಿತಾನ್ ।
ಹತಾನ್ ದುರ್ಯೋಧನೋ ದೃಷ್ಟ್ವಾ ಕ್ಷುತ್ತುಃ ಸಸ್ಮಾರ ತದ್ವಚಃ ॥ – ಭಾರತ (ದ್ರೋಣ. ೧೩೭/೪೧)

ಚಿತ್ರಾಕ್ಷ, ಚಾರುಚಿತ್ರ, ಶರಾಸನ, ಚಿತ್ರಾಯುಧ, ಚಿತ್ರವರ್ಮ, ಶತ್ರುಂಜಯ, ಶತ್ರುಸಹ, ಚಿತ್ರಬಾಣ, ಅಗ್ರಾಯುಧ, ದೃಢವರ್ಮ, ದುಷ್ಕರ್ಣ ಮತ್ತು ದುರ್ಮದ. ಅಷ್ಟು ಜನ ಕೌರವರು ತನ್ನ ಕಣ್ಣೆದುರೇ ಭೀಮನಿಂದ ಹತರಾಗುತ್ತಿದ್ದಾಗಲೂ ಕರ್ಣ ಹತಾಶನಾಗಿ ನೋಡುತ್ತಿದ್ದನೇ ಹೊರತು ಅವರನ್ನು ರಕ್ಷಿಸಲು ಸಮರ್ಥನಾಗಲಿಲ್ಲ ಎಂಬುದು ಗಮನಾರ್ಹ.

ಇಪ್ಪತ್ತೊಂದು ಬಾರಿ ಭೀಮನಿಂದ ಕರ್ಣನ ಸೋಲು

ಏಕವಿಂಶತಿವಾರಂ ಚ ವ್ಯಶ್ವಸೂತರಥಧ್ವಜಃ ।
ಗಾಢಮಭ್ಯರ್ದಿತಸ್ತೀಕ್ಷ್ಣೈಃ ಶರೈರ್ಭೀಮೇನ ಸಂಯುಗೇ ॥ ೧೪೩ ॥

ಅ: ಯುದ್ಧದಲ್ಲಿ ಕರ್ಣ ಭೀಮನಿಂದ ಇಪ್ಪತ್ತೊಂದು ಸಲ ಕುದುರೆ, ಸಾರಥಿ, ರಥ, ಧ್ವಜಗಳನ್ನು ತೀಕ್ಷ್ಣ ಬಾಣಗಳಿಂದ ಕಳೆದುಕೊಂಡ, ಮೈಮೇಲೂ ಸಹ ಪೆಟ್ಟುತಿಂದ.

ವಿ : ಕರ್ಣ ಒಂದೆರಡು ಬಾರಿಯಲ್ಲದೇ ಒಟ್ಟು ಇಪ್ಪತ್ತೊಂದು ಬಾರಿ ಅಂತಹ ಶೋಚನೀಯವಾದ ರೀತಿಯಲ್ಲಿ ಭೀಮನಿಂದ ಪರಾಭವಗೊಂಡ. ಈ ವಿವರವನ್ನು ಗಮನಿಸದ ಜನ ಭೀಮನನ್ನು ಕರ್ಣನಿಗಿಂತ ತುಂಬಾ ಕಡಿಮೆಯೆಂದು ತಿಳಿಯುವ ಅವಿವೇಕವನ್ನು ಮಾಡುವರು. ಭೀಮು ಇಪ್ಪತ್ತೊಂದು ಸಲ ಹಾಗೆ ಕರ್ಣನನ್ನು ಪರಾಭವಗೊಳಿಸುವುದು ಇಪ್ಪತ್ತೊಂದು ದುರ್ಭಾಷ್ಯಗಳ ಖಂಡನೆಯನ್ನು ಮಧ್ವರೂಪದಿಂದ ಮಾಡುವುದಕ್ಕೆ ಸೂಚಕವಾಯಿತೆಂದೂ ತಿಳಿಯಬಹುದು. ಕರ್ಣನ ಸೋಲು ಸಾಮಾನ್ಯವಾದ ಸೋಲಾಗಿರದೇ, ಕುದುರೆ ಮೊದಲಾದ ಸರ್ವಸ್ವವನ್ನೂ ಕಳೆದುಕೊಂಡ ಸಂಪೂರ್ಣ ಸೋಲಾದುದು ಮತ್ತೊಂದು ವಿಶೇಷ.

ಪ್ರಾಣಸಂಶಯಮಾಪನ್ನಃ ಸರ್ವಲೋಕಸ್ಯ ಪಶ್ಯತಃ ।
ರಣಂ ತ್ಯಕ್ತ್ವಾ ಪ್ರದುದ್ರಾವ ರುದನ್ ದುಃಖಾತ್ ಪುನಃ ಪುನಃ ॥ ೧೪೪ ॥

ಅ: ಕರ್ಣ ಪ್ರಾಣಸಂಶಯಕ್ಕೆ ಗುರಿಯಾಗಿ ಸಕಲಜನರು ನೋಡುತ್ತಿದ್ದಂತೆಯೇ ಯುದ್ಧವನ್ನು ತೊರೆದು ದುಃಖದಿಂದ ಮತ್ತೆಮತ್ತೆ ಅಳುತ್ತಾ ದೂರಕ್ಕೆ ಓಡಿದ.

ವಿ : ಕರ್ಣನ ಆ ಸೋಲು ಜನಗಳ ಕಣ್ಣಿಗೆ ಸ್ಫುಟವಾಗಿಯೇ ಕಾಣುತ್ತಿತ್ತು, ಅವನಂತೂ ಆ ಸೋಲಿನಿಂದ ಕಂಗೆಟ್ಟು ಬಹುವಾಗಿ ಅಳುತ್ತಾ ಪಲಾಯನ ಮಾಡಿದ. ಇಂತಹ ಪೆಟ್ಟನ್ನು ಕರ್ಣ ತನ್ನ

---

೧೪೩. ತಥಾ ಸಪ್ತದಶಂ ವೇಗಾದಷ್ಟಾದಶಮಥಾಪಿ ವಾ ।
ಬಹೂನಿ ಭೀಮಶ್ಚಿಚ್ಛೇದ ಕರ್ಣಸ್ಯೈವ ಧನೂಂಷಿ ಹಿ ॥ – ಭಾರತ (ದ್ರೋಣ. ೧೩೯/೨೨)

ಜೀವಮಾನದಲ್ಲಿ ಭೀಮನ ಹೊರತು ಬೇರಾರಿಂದಲೂ ತಿಂದಿರಲಿಲ್ಲ ಎಂಬುದನ್ನೂ ಗಮನಿಸಬೇಕು. 'ಭೀಮಸೇನ ಸಮೋ ನಾಸಿ' ಎಂಬುದು ಇದರಿಂದಲೂ ಸ್ಪುಟಪಡುವುದು.

ಭೀಮನೊಂದಿಗೆ ಕರ್ಣನ ಇಪ್ಪತ್ತೆರಡನೆಯ ಯುದ್ಧ

ದ್ವಾವಿಂಶತಿಮಯುದ್ಧೇ ತು ರಾಮದತ್ತಂ ಸುಭಾಸ್ವರಮ್ ।
ಅಭೇದ್ಯಂ ರಥಮಾರುಹ್ಯ ವಿಜಯಂ ಧನುರೇವ ಚ ॥ ೧೪೫ ॥

ತದ್ದತ್ತಮೇವ ಸಂಗೃಹ್ಯ ತೂಣೇ ಚಾಕ್ಷಯಸಾಯಕೌ ।
ಆಸಸಾದ ರಣೇ ಭೀಮಂ ಕರ್ಣೋ ವೈಕರ್ತನೋ ರುಷಾ ॥ ೧೪೬ ॥

ಅ: ಇಪ್ಪತ್ತೆರಡನೆಯ ಯುದ್ಧದಲ್ಲಿ ಕರ್ಣ ಪರಶುರಾಮ ನೀಡಿದ್ದ ಬಹಳವಾಗಿ ಶೋಭಿಸುತ್ತಿದ್ದಂತಹ ಅಭೇದ್ಯವಾದ ರಥವನ್ನು ಏರಿ, ಅವರೇ ನೀಡಿದ್ದ ವಿಜಯ ಎಂಬ ಧನುಸ್ಸನ್ನು ತೆಗೆದುಕೊಂಡು, ಎರಡು ಅಕ್ಷಯ ಬತ್ತಳಿಕೆಗಳನ್ನು ತೆಗೆದುಕೊಂಡು ಯುದ್ಧದಲ್ಲಿ ಭೀಮನನ್ನು ಕೋಪದಿಂದ ಎದುರಿಸಿದ.

ವಿ: ಆವರೆಗೂ ಕರ್ಣ ಪರಶುರಾಮರಿತ್ತ ಆ ರಥ, ಧನುಸ್ಸು ಮೊದಲಾದವುಗಳನ್ನು ಯುದ್ಧಕ್ಕೆ ತಂದಿರಲಿಲ್ಲ. ಅನಿವಾರ್ಯ ಪ್ರಸಂಗ ಒದಗಿದ್ದರಿಂದ ಅವನ್ನೆಲ್ಲ ಒಟ್ಟಾಗಿ ತೆಗೆದುಕೊಂಡೇ ಭೀಮನ ಮೇಲೆ ಯುದ್ಧಕ್ಕೆ ಬಂದ. ವಿಜಯ ಎಂಬ ಧನುಸ್ಸು ಪರಶುರಾಮರ ಧನುಸ್ಸು, ಅದು ವಿಶ್ವಕರ್ಮ–ನಿರ್ಮಿತ (೧೫/೫೦).

ಸುಘೋರ ಆಸೀತ್ ಸ ತಯೋರ್ವಿಮರ್ದೋ
ಭೀಮಸ್ಯ ಕರ್ಣಸ್ಯ ಚ ದೀರ್ಘಕಾಲಮ್।
ಆಕಾಶಮಾಚ್ಛಾದಯತೋಃ ಶರೌಘೈಃ
ಪರಸ್ಪರಂ ಚೈವ ಸುರಕ್ತನೇತ್ರಯೋಃ ॥ ೧೪೭ ॥

ಅ: ಭೀಮನಿಗೂ, ಕರ್ಣನಿಗೂ ದೀರ್ಘಕಾಲ ಅತ್ಯಂತಭಯಂಕರವಾದ ಯುದ್ಧ ನಡೆಯಿತು. ಅವರಿಬ್ಬರೂ ಕಣ್ಣುಗಳನ್ನು ಬಹಳ ಕೆಂಪು ಮಾಡಿಕೊಂಡು ಪರಸ್ಪರ ಬಾಣಗಳ ಸಮೂಹಗಳಿಂದ ಗಗನವನ್ನು ಮುಚ್ಚುತ್ತಾ ಕಾದಿದರು.

ವಿ : ಕರ್ಣನಿಗೆ ಆ ಮೊದಲು ಸಾಧ್ಯವಾಗದಿದ್ದ ಅಂತಹ ಪ್ರಬಲ ಯುದ್ಧ ಈಗ ಸಾಧ್ಯವಾಗಲು ಅವನು ಈಗ ತಂದಿದ್ದ ಪರಶುರಾಮದತ್ತವಾದ ರಥಾದಿಗಳೇ ಕಾರಣವಾದವು ಎಂದು ತಿಳಿಯಬೇಕು.

ಭೀಮನಿಂದ ಕರ್ಣನ ಕವಚ ಕುಂಡಲಗಳ ನಾಶ

ತತೋ ಭೀಮೋ ಮಹಾಬಾಹುಃ ಸಹಜಾಭ್ಯಾಂ ಚ ಸಂಯುತಮ್ ।
ತ್ವಾಂ ತು ಕುಂಡಲವರ್ಮಭ್ಯಾಂ ಶಕ್ನುಯಾಂ ಹಂತುಮಂಜಸಾ ॥ ೧೪೮ ॥

ಇತಿ ಜ್ಞಾಪಯಿತುಂ ತಸ್ಯ ಕುಂಡಲೇ ಕವಚಂ ತಥಾ ।
ಶರೈರುತ್ಕೃತ್ಯ ಸಮರೇ ಪಾತಯಾಮಾಸ ಭೂತಲೇ ॥ ೧೪೯ ॥

ಅ: ಆಗ ಮಹಾಬಾಹುವಾದ ಭೀಮಸೇನ - ನಿನ್ನನ್ನು ನಿನ್ನ ಹುಟ್ಟಿನೊಂದಿಗೆ ಬಂದಿದ್ದ ಕವಚ ಕುಂಡಲಗಳ ಸಮೇತವಾಗಿಯೇ ನಾನು ಕೊಲ್ಲಲು ಅತ್ಯಂತ ಸಮರ್ಥ ಎಂದು ಸೂಚಿಸಲು ಯುದ್ಧದಲ್ಲಿ ಅವನ ಎರಡು ಕುಂಡಲಗಳನ್ನು ಹಾಗೆಯೇ ಕವಚವನ್ನು ಬಾಣಗಳಿಂದ ಕತ್ತರಿಸಿ ಭೂಮಿಯ ಮೇಲೆ ಬೀಳಿಸಿದ.

ವಿ: ಭೀಮಸೇನನ ಹೊರತು ಕರ್ಣಕುಂಡಲ, ಕವಚಗಳ ಸಮೇತನಾದ ಕರ್ಣನನ್ನು ಸೋಲಿಸುವ ಶಕ್ತಿ ಅರ್ಜುನಾದಿ ಬೇರಾರಿಗೂ ಇರಲಿಲ್ಲ ಎಂಬುದು ಗಮನಾರ್ಹ. ಆದರೆ ಭೀಮನಿಗೆ ಆ ಕರ್ಣ ಕುಂಡಲಾದಿಗಳಾವುವೂ ಕರ್ಣಜಯಕ್ಕಾಗಲಿ, ಕರ್ಣವಧೆಗಾಗಲೀ ಅಡ್ಡಿಯಾಗುತ್ತಿರಲಿಲ್ಲ ಎಂಬುದು ಇಲ್ಲಿಯ ವಿಶೇಷ. ಭೀಮ ಕತ್ತರಿಸಿದ್ದು ಕರ್ಣ ಈಗ ತೊಟ್ಟಿದ್ದ ಕುಂಡಲ ಕವಚಾದಿಗಳನ್ನೇ ಆದರೂ ಇದು ಆ ವಿಷಯಕ್ಕೆ ಸೂಚಕವಾಗಿತ್ತು ಎಂದರ್ಥ. ಸಹಜಕುಂಡಲಸಮೇತನಾದ ಕರ್ಣನನ್ನು ಭೀಮ ಪರಾಭವಗೊಳಿಸಿದ್ದ ವಿವರ ಈಗಾಗಲೇ ಬಂದಿದೆ (೨೧/೧೯೫).

ಏವಂ ತಾನ್ಯಪಕೃಷ್ಯಾಹಂ ಹನ್ಯಾಂ ತ್ವಾಮಿತಿ ವೇದಯನ್ ।
ಪುನಶ್ಚ ಬಹುಭಿಸ್ತೀಕ್ಷ್ಣೈಃ ಶರೈರೇನಂ ಸಮಾರ್ದಯತ್ ॥ ೧೫೦ ॥

ಅ: ಹೀಗೆ ಅವುಗಳನ್ನು ಬೀಳಿಸಿ, 'ನಿನ್ನನ್ನು ಕೊಲ್ಲಬಲ್ಲೆ' ಎಂದು ತಿಳಿಸುತ್ತಾ ಭೀಮ ಮತ್ತೆ ಹರಿತವಾದ ಅನೇಕ ಬಾಣಗಳಿಂದ ಅವನನ್ನು ಬಹಳವಾಗಿ ಪೀಡಿಸಿದ.

---

೧೪೮. ಕುಂಡಲವರ್ಮಭ್ಯಾಮಿತ್ಯತ್ರ ಕುಂಡಲಮಿತಿ ಜಾತ್ಯೈಕವಚನಮ್ ॥ – (ವಾ.)

೧೪೯. ಕುಂಡಲೇ ಕವಚಂ ತಥೇತ್ಯತ್ರ ಸಹಜಕುಂಡಲಯೋಃ ಕವಚಸ್ಯ ಚ ಇಂದ್ರೇಣ ನೀತತ್ವಾತ್ ತತ್ಸದ್ಭಾವೇ ತದಪಿ ಛಿನದ್ಮೀತಿ ಸೂಚನಾಯ ಕುಂಡಲೇ = ನೂತನಕುಂಡಲೇ ಕವಚಂ = ನೂತನಕವಚಂ ಚ ಶರೈರುತ್ಕೃತ್ಯ ಪಾತಯಾಮಾಸೇತ್ಯನ್ವಯಃ ॥ – (ವಾ.)

೧೪೯. ಸ ಕುಂಡಲಂ ಮಹಚ್ಚಾರು ಕರ್ಣಸ್ಯಾಪಾತಯದ್ ಭುವಿ ।
ತಪನೀಯಂ ಮಹಾರಾಜ ದೀಪ್ತಂ ಜ್ಯೋತಿರಿವಾಂಬರಾತ್ ॥ – ಭಾರತ (ದ್ರೋಣ. ೧೩೯/೪)

ಪರಶುರಾಮರ ವರವನ್ನು ಪಾಲಿಸಲು ಭೀಮನ ನಿಶ್ಚಯ

ತತಸ್ತು ಭೀಮಸ್ಯ ಬಭೂವ ಬುದ್ಧಿ-
ರಸ್ಪರ್ಧಿನಃ ಸರ್ವಜಯೋ ಹಿ ದತ್ತಃ ।
ಅಮುಷ್ಯ ರಾಮೇಣ ನ ಚ ಸ್ಪೃಧಾऽಯಂ
ಕರ್ಣೋ ಮಯಾ ಯುದ್ಧ್ಯತಿ ಕೃಚ್ಛ್ರಗೋ ಹ್ಯಯಮ್ ॥ ೧೫೧ ॥

ಅ: ಬಳಿಕ ಇವನಿಗೆ ಪರಶುರಾಮನಿಂದ ಸ್ಪರ್ಧೆ ಮಾಡದಿದ್ದಲ್ಲಿ ಎಲ್ಲರನ್ನೂ ಗೆಲ್ಲುವಿ ಎಂಬ ವರ ನೀಡಲ್ಪಟ್ಟಿದೆ, ಆಪತ್ತಿಗೆ ಒಳಗಾಗಿರುವ ಇವನಂತೂ ಈಗ ನನ್ನೊಂದಿಗೆ ಸ್ಪರ್ಧೆಯಿಂದ ಯುದ್ಧ ಮಾಡುತ್ತಿಲ್ಲ ಎಂಬ ಆಲೋಚನೆ ಭೀಮನಿಗೆ ಮೂಡಿತು.

ತಥಾऽಪಿ ಮೇ ಭಗವಾನತ್ಯನುಗ್ರಹಾ-
ಜ್ಜಯಂ ದದಾತ್ಯಾತ್ಮವಚೋ ವಿಹಾಯ ।
ಮಯಾ ತು ಮಾನ್ಯಂ ವಚನಂ ಹರೇಃ ಸದಾ
ತಸ್ಮಾದ್ದಾಸ್ಯೇ ವಿವರಂ ತ್ವದ್ಯ ಶತ್ರೋಃ ॥ ೧೫೨ ॥

ಅ: ಆದರೂ ನನಗೆ ಭಗವಂತನಾದ ಪರಶುರಾಮ ಪರಮಾನುಗ್ರಹದಿಂದ ತನ್ನ ವರವನ್ನೂ ಗಮನಿಸದೇ ಜಯ ನೀಡುತ್ತಿರುವನು. ಆದರೆ, ನಾನು ಶ್ರೀಹರಿಯ ವಚನವನ್ನು ಸದಾ ಗೌರವಿಸಲೇಬೇಕು. ಆದ್ದರಿಂದ ನಾನೀಗ ಕರ್ಣನಿಗೆ ಅವಕಾಶ ಒದಗಿಸುವೆ.

ವಿ: ೧) ಪರಶುರಾಮರ ವರದಂತೆ ಕರ್ಣ ಭೀಮನ ಮೇಲೆ ಆಗ ಗೆಲ್ಲಬೇಕಿತ್ತು ಆದರೂ ಅವನಿಗೆ ಗೆಲ್ಲಲಾಗದಿರಲು ಅವನಿಗೆ ನೀಡಿದ ವರಕ್ಕಿಂತ ಹೆಚ್ಚಿನ ಅನುಗ್ರಹ ಭೀಮನ ಮೇಲೆ ಪರಶುರಾಮರಿಗೆ ಸದಾ ಇದ್ದುದೇ ಕಾರಣವಾಗಿತ್ತು

೨) ಭೀಷ್ಮರ ಮೇಲಿನ ಪ್ರೀತಿಯಿಂದಲೇ ತನ್ನ ಸಂಕಲ್ಪವನ್ನು ತೊರೆದ ಕೃಷ್ಣ (೨೫/೩೬), ಮಹಾಭಕ್ತನಾದ ಭೀಮನ ಮೇಲಿನ ಪ್ರೀತಿಯಿಂದಾಗಿ ತನ್ನ ವರವನ್ನು ಗಮನಿಸದೇ ಭೀಮನಿಗೇ ಜಯ ನೀಡುತ್ತಿರುವನು ಎಂಬುದು ಇಲ್ಲಿಯ ವಿಶೇಷಾಂಶ.

---

೧೫೨. ಭಗವಾನತ್ಯನುಗ್ರಹಾದಿತ್ಯತ್ರ ಅತಿಪದೇನ ''ಸ್ವನಿಯಮಮಥ ವಿಹಾಯ ಮತ್ಪ್ರತಿಜ್ಞಾಮೃತಮಧಿಕರ್ತುಮವಪ್ಲುತೋ ರಥಸ್ಥಃ'' ಇತಿ ಭಾಗವತೋಕ್ತೇಃ (೧/೯/೩೭) ಕಿಂಚಿದನುಗ್ರಹವತೋ ಭೀಷ್ಮಸ್ಯಾಪ್ಯರ್ಥೇ ಸ್ವನಿಯಮಂ ತ್ಯಕ್ತವತೋ ಹರೇರತ್ಯನುಗ್ರಹಪಾತ್ರೇ ಮಯಿ ಸ್ವನಿಯಮಪರಿತ್ಯಾಗಃ ಕಿಮು ವಾಚ್ಯ ಇತಿ ಸೂಚಯತಿ। ಮಯಾ ತು ಮಾನ್ಯಮಿತ್ಯತ್ರ ವಿಶೇಷವಾಚಿನಾ ತುಶಬ್ದೇನ ಭಕ್ತಿವಿಶೇಷವತೋ ಮಮಾಲ್ಪಭಕ್ತಭೀಷ್ಮವತ್ ಪ್ರಭೋಃ ನಿಯಮತ್ಯಾಜನಂ ನ ಧರ್ಮ ಇತಿ ಸೂಚಯತಿ ॥ – (ವಾ.)

೩) ಶ್ರೀಹರಿ ಹಾಗೆ ಭೀಮನ ಮೇಲೆ ಪರಮಾನುಗ್ರಹ ಮಾಡುವಂತೆ ಶ್ರೀಹರಿಯ ಮೇಲೆ ಪರಮಭಕ್ತಿಯನ್ನು ತೋರುವುದು ಭೀಮನ ಹಿರಿಮೆ. ಅದಕ್ಕೆಂದು ಆಗ ಕರ್ಣನಿಗೆ ಯುದ್ಧದಲ್ಲಿ ಹೋರಾಡುವ ಅವಕಾಶವನ್ನು ನೀಡಬೇಕೆಂದು ಭೀಮಸೇನ ಸಂಕಲ್ಪಿಸಿದ ಎಂದರ್ಥ.

೪) ಮಹಾಭಕ್ತನಾದ ತಾನು ಅಲ್ಪಭಕ್ತರಾದ ಭೀಷ್ಮರಂತೆ ಭಗವನ್ನಿಯಮವನ್ನು ಉಲ್ಲಂಘಿಸುವುದು ತರವಲ್ಲ ಎಂದು ಭೀಮಸೇನ ಯೋಚಿಸಿದ ಎಂದು ವಾದಿರಾಜೀಯದಲ್ಲಿದೆ.

ಏವಂ ಸ್ಮೃತ್ವಾ ತೇನ ರಂಧ್ರೇ ಪ್ರದತ್ತೇ
ಕರ್ಣೋಽಸ್ತ್ರವೀರ್ಯೇಣ ಧನುರ್ನ್ಯಕೃಂತತ್ ।
ರಶ್ಮೀನ್ ಹಯಾನಾಂ ಚ ತತೋ ರಥಂ ಸ
ತತ್ಯಾಜ ನೈಜಂ ಬಲಮೇವ ವೇದಯನ್ ॥ ೧೫೩ ॥

ಅ: ಹೀಗೆ ಆಲೋಚಿಸಿ ಭೀಮಸೇನ ಅವಕಾಶ ನೀಡಲು ಕರ್ಣ ತನ್ನ ಅಸ್ತ್ರಸಾಮರ್ಥ್ಯದಿಂದ ಭೀಮನ ಬಿಲ್ಲನ್ನು ತುಂಡುಮಾಡಿದ. ಕುದುರೆಗಳ ಹಗ್ಗಗಳನ್ನೂ ಕತ್ತರಿಸಿದ. ಬಳಿಕ ಭೀಮ ತನ್ನ ನೈಜ ಬಲವನ್ನು ತೋರಲೆಂದು ರಥವನ್ನು ತೊರೆದು ಕೆಳಗಿಳಿದ.

ವಿ : ಭೀಮ ಅವಕಾಶ ನೀಡಿದ್ದರ ಫಲವಾಗಿ ಕರ್ಣನಿಗೆ ಅಷ್ಟು ಪರಾಕ್ರಮವನ್ನು ಮೆರೆಯಲು ಸಾಧ್ಯವಾಯಿತು. ಭೀಮ ಹಾಗೆ ಸೋತಂತೆ ಮಾಡಿದರೂ ತಾನು ನಿಜವಾಗಲೂ ಗೆಲ್ಲುವವನೇ ಎಂದು ತೋರಿಸಲು ರಥದಿಂದ ಕೆಳಗಿಳಿದು ಮತ್ತೊಂದು ಬಗೆಯಲ್ಲಿ ಕರ್ಣನನ್ನು ಸೋಲಿಸಲು ಹೊರಟ ಎಂದರ್ಥ.

ಭೀಮನ ಅದ್ಭುತ ಪರಾಕ್ರಮ

ನ ಮೇ ರಥಾದ್ಯೈರ್ಧನುಷಾಽಪಿ ಕಾರ್ಯ-
ಮಿತ್ಯೇವ ಸ ಖ್ಯಾಪಯಿತುಂ ವೃಕೋದರಃ ।
ಖಮುತ್ಪಪಾತೋತ್ತಮವೀರ್ಯತೇಜಾ
ರಥಂ ಚ ಕರ್ಣಸ್ಯ ಸಮಾಸ್ಥಿತಃ ಕ್ಷಣಾತ್ ॥ ೧೫೪ ॥

---

೧೫೪. ಸ ಭೀಮಸೇನಃ ಕುಪಿತೋ ಬಲವಾನ್ ಸತ್ಯವಿಕ್ರಮಃ ।
ವಿಹಾಯಸಂ ಪ್ರಾಕ್ರಮದ್ ವೈ ಕರ್ಣಸ್ಯ ವ್ಯಥಯನ್ ಮನಃ ॥
ತಂ ದೃಷ್ಟ್ವಾ ರಥೋಪಸ್ಥನಿಲೀನಂ ವ್ಯಥಿತೇಂದ್ರಿಯಮ್ ।
ಧ್ವಜಮಸ್ಯ ಸಮಾಸಾದ್ಯ ತಸ್ಥೌ ಸ ಧರಣೀತಲೇ ।
ತದಸ್ಯ ಕುರವಃ ಸರ್ವೇ ಚಾರಣಾಶ್ಚಾಭ್ಯಪೂಜಯನ್ ॥ –BORI ಭಾರತ (ಕರ್ಣ. ೧೧೪/೫೪,೫೬)

ಅ: ನನಗೆ ರಥದಿಂದಾಗಲೀ, ಧನುಸ್ಸಿನಿಂದಾಗಲೀ ಏನೂ ಆಗಬೇಕಿಲ್ಲ ಎಂದು ಚೆನ್ನಾಗಿ ತಿಳಿಸಿಕೊಡಲೆಂದು ಉತ್ತಮ ಮಹಾಪರಾಕ್ರಮಿಯಾದ ಭೀಮಸೇನ ರಥದಿಂದ ಗಗನಕ್ಕೆ ನೆಗೆದು ಕ್ಷಣಮಾತ್ರದಲ್ಲಿ ಕರ್ಣನ ರಥವನ್ನು ಏರಿದ.

ವಿ : ತನ್ನ ರಥದಿಂದ ಭೀಮಸೇನ ಮೇಲಕ್ಕೆ ನೆಗೆದು ಕರ್ಣನ ರಥವನ್ನು ಏರಿ ನಿಂತು ತನ್ನ ಸಾಮರ್ಥ್ಯದ ಮತ್ತೊಂದು ಮುಖವನ್ನು ತೋರಿದ ಎಂದು ತಿಳಿಯಬೇಕು.

ಭಯಗೊಂಡ ಕರ್ಣ ನೊಗದ ಕೆಳಗೆ ಅಡಗಿದ

ಭೀತಸ್ತು ಕರ್ಣೋ ರಥಕೂಬರೇ ತದಾ
ವ್ಯಲೀಯತಾತಃ ಸ ವೃಕೋದರೋ ರಥಾತ್ ।
ಅವಪ್ಲುತೋ ಜ್ಞಾಪಯಿತುಂ ಸ್ವಶಕ್ತಿಂ
ನಿರಾಯುಧತ್ವೇಽಪ್ಯರಿನಿಗ್ರಹಾದೌ ॥ ೧೫೫ ॥

ಅ: ಭಯಗೊಂಡ ಕರ್ಣ ಆಗ ರಥದ ನೊಗದ ಕೆಳಗೆ ಅಡಗಿ ಕುಳಿತ. ಆಗ ಭೀಮಸೇನ, ಆಯುಧವಿಲ್ಲದಾಗಲೂ ಶತ್ರುನಿಗ್ರಹ ಮಾಡುವ ತನ್ನ ಶಕ್ತಿಯನ್ನು ತೋರಿಸಲೆಂದು ಹಾಗೆ ಮಾಡಿ ರಥದಿಂದ ಕೆಳಗೆ ಹಾರಿದ.

ವಿ : ಗದೆ, ಧನುಸ್ಸು, ರಥ, ಕವಚ ಮೊದಲಾದ ಯಾವುದೂ ಇಲ್ಲದೇ ಭೀಮ ಯುದ್ಧಕ್ಕೆ ತೊಡಗಿದರೂ ಅವನೆದುರು ನಿಲ್ಲುವ ಸಾಮರ್ಥ್ಯ ಯಾರಿಗೂ ಇಲ್ಲ ಎಂಬ ಮಾತು ಭಾರತದಲ್ಲಿದೆ. (ಉದ್ಯೋಗ ೫೧/೪೪). ಅದನ್ನು ಈ ಪ್ರಸಂಗದಲ್ಲಿ ದೃಢಪಡಿಸಿದ್ದು ವಿಶೇಷ.

ಶಕ್ತ್ಯಾಯುಧ ಮೊದಲಾದವುಗಳನ್ನು ಒಯ್ಯಬಯಸದ ಭೀಮ

ನೈಚ್ಛದ್ಗ್ರಹೀತುಂ ವಿನಿಹಂತುಮೇವ ವಾ
ರಥಂ ಧನುರ್ವಾಽಸ್ಯ ರಣೇಽಪಹರ್ತುಮ್ ।
ದ್ರೋಣಸ್ಯ ಯದ್ವತ್ ಪೂರ್ವಮತೀವ ಶಕ್ತೋಽ
ಪ್ಯಮಾನಯದ್ರಾಮವಚೋಽಸ್ಯ ಭಕ್ತ್ಯಾ ॥ ೧೫೬ ॥

---

೧೫೫. ಸೋಽತಿವಿದ್ಧೋ ಭೃಶಂ ಕರ್ಣಃ ಪಾಂಡವೇನ ತರಸ್ವಿನಾ ।
ರಥಕೂಬರಮಾಲಂಬ್ಯ ನ್ಯಮೀಲಯತ ಲೋಚನೇ ॥
ಸ ಮುಹೂರ್ತಾತ್ ಪುನಃ ಸಂಜ್ಞಾಂ ಲೇಭೇ ಕರ್ಣಃ ಪರಂತಪಃ ॥ – ಭಾರತ (ದ್ರೋಣ. ೧೩೯/೯)

೧೫೫. ಕೂಬರಸ್ಯಾಧಃ ಚಕ್ರವಾಜಿಮಧ್ಯಪ್ರದೇಶ ಇತ್ಯರ್ಥಃ । – (ಜ.)

ಅ: ಕರ್ಣನನ್ನು ಸೆರೆ ಹಿಡಿಯಲಾಗಲೀ, ಅವನನ್ನು ಕೊಲ್ಲಲಾಗಲೀ, ಅವನ ರಥ-ವನ್ನಾಗಲೀ, ಧನುಸ್ಸನ್ನಾಗಲೀ ಯುದ್ಧದಲ್ಲಿ ಅಪಹರಿಸಲಾಗಲೀ, ದ್ರೋಣರಿಗೆ ಹಿಂದೆ ಮಾಡಿದಂತೆ ಮಾಡಲು ಸಮರ್ಥನಾಗಿದ್ದರೂ ಭೀಮಸೇನ ಪರಶುರಾಮರ ಮಾತನ್ನು ಭಕ್ತಿಯಿಂದ ಗೌರವಿಸಿದ.

ವಿ: ಆಗ ಭೀಮನಿಗೆ ಕರ್ಣನನ್ನು ಸೆರೆ ಹಿಡಿಯಲು, ಕೊಲ್ಲಲು, ಅವನ ಅಪೂರ್ವವಾದ ರಥ, ಧನುಸ್ಸುಗಳನ್ನು ಎತ್ತಿಕೊಂಡು ಹೋಗಲು ಸಂಪೂರ್ಣವಾಗಿ ಸಾಧ್ಯವಿತ್ತು ದ್ರೋಣರಿಗೆ ಈಗಾಗಲೇ ಹಾಗೆ ಮಾಡಿಯೇ ಆ ವ್ಯೂಹದೊಳಗೆ ಭೀಮ ಪ್ರವೇಶಿಸಿದ್ದ ಆದರೂ, ಇಲ್ಲಿ ಕರ್ಣನಿಗೆ ಹಾಗೆ ಮಾಡದಿರಲು ಪರಶುರಾಮರ ಮೇಲಿನ ಪರಮಭಕ್ತಿಯೇ ಕಾರಣವಾಗಿತ್ತು ಎಂದು ತಿಳಿಯಬೇಕು. ಭೀಮನಿಗೆ ಕರ್ಣನನ್ನು ಕೊಲ್ಲಲು ಸಾಮರ್ಥ್ಯವಿತ್ತು ಎಂಬ ಮಾತು ಮಹಾಭಾರತದಲ್ಲೇ ಬಂದಿದೆ :

'ಭೀಮೋಽಪಿ ಮುಷ್ಟಿಮುದ್ಯಮ್ಯ ವಜ್ರಗರ್ಭಂ ಸುದಾರುಣಮ್ ।
ಹಂತುಮೈಚ್ಛತ್ಸೂತಪುತ್ರಂ ಸಂಸ್ಮರನ್ನರ್ಜುನಂ ಕ್ಷಣಾತ್ ॥
ಶಕ್ತೋಽಪಿ ನಾವಧೀತ್ಕರ್ಣಂ ಸಮರ್ಥಃ ಪಾಂಡುನಂದನಃ ।
ರಕ್ಷಮಾಣಃ ಪ್ರತಿಜ್ಞಾಂ ತಾಂ ಯಾ ಕೃತಾ ಸವ್ಯಸಾಚಿನಾ' ಇತಿ ॥

(ದ್ರೋಣ. ೧೩೯/೯೦, ೯೧) – (ವಾ.)

ಭೀಮ ಕರ್ಣನನ್ನು ಕೊಲ್ಲದಿರಲು ಕಾರಣ

ಸತ್ಯಾಂ ಕರ್ತುಂ ವಾಸವೇಶ್ಚ ಪ್ರತಿಜ್ಞಾಂ
ಸಮ್ಮಾನಯನ್ ವೈಷ್ಣವತ್ವಾಚ್ಚ ಕರ್ಣಮ್ ।
ದಾತುಂ ರಂಧ್ರಂ ಸೂರ್ಯಜಸ್ಯ ಪ್ರಯಾತಃ
ಶರಕ್ಷೇಪಾರ್ಥಂ ದೂರಮತಿಷ್ಠದತ್ರ ॥ ೧೫೭ ॥

---

೧೫೭. ಕರ್ಣೋ ರಥಕೂಬರ ಇತ್ಯತ್ರ ''ಕೂಬರಸ್ತು ಯುಗಂಧರಃ'' ಇತ್ಯನುಶಾಸನಾತ್ ಅಶ್ವಕಂಧರಸ್ಥಿತ-ಯುಗಧಾರಕದ್ವಂದ್ವೀಭೂತದಾರುವಿಶೇಷಃ । ನಿರಾಯುಧತ್ವೇಽಪ್ಯರಿನಿಗ್ರಹಾದಾವಿತ್ಯತ್ರ ನಿರಾಯುಧತ್ವೇಽಪೀತ್ಯುಪಲಕ್ಷಣಮ್। ವಿರಥತ್ವೇಽಪೀತ್ಯಪಿ ಗ್ರಾಹ್ಯಮ್ । ಏವಂ ಚ ವಿರಥತ್ವೇಽಪಿ ಸ್ವಶಕ್ತಿಂ ದ್ರೋತಯಿತುಂ ರಥಮಪಹರ್ತುಂ ನೈಚ್ಛತ್। ನಿರಾಯುಧತ್ವೇಽಪಿ ಸ್ವಶಕ್ತಿ । ಕರ್ಣಂ ಗೃಹೀತುಂ ವಿನಿಹಂತುಂ ವಾ ನೈಚ್ಛದಿತಿ ಕಥಂ ಸಂಬಂಧಃ। ನಿರಾಯುಧೇನ ಕರ್ಣಸ್ಯ ಗ್ರಹಣೇ ಹನನೇ ಚ ಸ್ವಶಕ್ತೇರತಿವಿಸ್ಪಷ್ಟಜ್ಞಾಪಕತ್ವೇನ ತಥಾ ಕುತೋ ನ ಕೃತಮಿತಿ ಚೇತ್ । ಸತ್ಯಮ್ । ಭೀತ್ಯಾ ಕೂಬರೇ ವಿಲೀನಸ್ಯ ಗ್ರಹಣಹನನಯೋರಪಿ ಸ್ವಾಸಾಧಾರಣಶಕ್ತಿಪ್ರಖ್ಯಾಪನವಿರೋಧಿತ್ವಾತ್ ವೀರಶಿರೋಮಣೇರ್ಮಮ ನಾಯಂ ಧರ್ಮ ಇತಿ ತದಪಿ ತ್ಯಕ್ತವಾನಿತ್ಯೇಕವಾಕ್ಯತಾಸಂಭವಾತ್ । ಅತ ಏವ ''ಭೀತಸ್ತು ಕರ್ಣೋ ರಥಕೂಬರೇ ತದಾ ವ್ಯಲೀಯತ'' ಇತ್ಯುಕ್ತಮ್ । ನ ಹಿ ಭೀತ್ಯಾ ಬಿಲೇ ಪ್ರವಿಷ್ಟಸ್ಯ ಮೂಷಿಕಸ್ಯ ಗ್ರಹಣಾಯ ಪ್ರೇಕ್ಷಾವಾನ್ ಶಕ್ತಃ ಪ್ರಯತತೇ ॥ – (ವಾ.)

ಅ: ಅರ್ಜುನನ ಪ್ರತಿಜ್ಞೆಯನ್ನು ಸತ್ಯಮಾಡಲೆಂದು, ವೈಷ್ಣವನೆಂಬ ಕಾರಣದಿಂದ ಕರ್ಣನನ್ನು ಆದರಿಸುತ್ತಾ ಅವನಿಗೆ ಬಾಣ ಬಿಡಲು ಅವಕಾಶ ನೀಡಲೆಂದು ಭೀಮಸೇನ ಅಲ್ಲಿ ಸ್ವಲ್ಪ ದೂರಕ್ಕೆ ಹೋಗಿ ನಿಂತ.

ವಿ: ಸಮರ್ಥನಾಗಿದ್ದರೂ ಭೀಮ ಕರ್ಣನನ್ನು ಕೊಲ್ಲದಿರಲು ಅರ್ಜುನನ ಪ್ರತಿಜ್ಞೆಯನ್ನು ಸತ್ಯ ಮಾಡಬೇಕೆಂಬ ಮತ್ತೊಂದು ಕಾರಣವೂ ಇತ್ತು. ಕರ್ಣ ಮೂಲತಃ ಹರಿಭಕ್ತನಾದ ಸೂರ್ಯನ ಅವತಾರ ಎಂಬುದು ಮತ್ತೊಂದು ಕಾರಣ. ಇಷ್ಟು ಅವಕಾಶವನ್ನು ನೀಡಿದ್ದರೂ ಕರ್ಣ ಇನ್ನೂ ರಥದ ನೊಗದ ಕೆಳಗೇ ಅಡಗಿದ್ದನೇ ಹೊರತು ಯಾವುದೇ ರೀತಿಯಲ್ಲೂ ಆಕ್ರಮಿಸುವ ಸ್ಥಿತಿ–ಯಲ್ಲಿರಲಿಲ್ಲ. ಅದನ್ನು ಗಮನಿಸಿದ ಭೀಮಸೇನ ಅವನ ರಥದಿಂದ ಕೆಳಕ್ಕೆ ಹಾರಿ ಸ್ವಲ್ಪ ದೂರಕ್ಕೆ ನಡೆದು ಅಲ್ಲಿ ಅವನು ತನ್ನ ಮೇಲೆ ಬಾಣ ಬಿಡಲು ಅವಕಾಶವಾಗಲೆಂದು ಸುಮ್ಮನೆ ನಿಂತ ಎಂದರ್ಥ.

ಭೀಮನ ಪರಾಕ್ರಮ

ತತಃ ಕರ್ಣೋ೭ ದೂರಗತಂ ವೃಕೋದರಂ
ಸಮ್ಮಾನಯಂತಂ ರಾಮವಾಕ್ಯಂ ವಿಜಾನನ್ ।
ಶರೈರವಿಧ್ಯತ್ ಸ ಚ ತಾನವಾರಯದ್
ಗಜೈರ್ಮತೈಸ್ತಾಂಶ್ಚ ಚಕರ್ತ ಕರ್ಣಃ ॥ ೧೫೮ ॥

ಅ: ಬಳಿಕ ಕರ್ಣ ಪರಶುರಾಮರ ವಾಕ್ಯವನ್ನು ಗೌರವಿಸುತ್ತಾ ಭೀಮಸೇನ ದೂರಕ್ಕೆ ತೆರಳಿ ನಿಂತಿರುವನು ಎಂದು ಚೆನ್ನಾಗಿ ತಿಳಿದು ಬಾಣಗಳಿಂದ ಅವನನ್ನು ಹೊಡೆಯತೊಡಗಿದನು.

---

೧೫೭. ಜರಾಸಂಧನಿರ್ಬಂಧಕರಮುಷ್ಟಿಪದ್ಭ್ಯಾವೇ೭ಪಿ ಕರ್ಣಾಹನನೇ ನಿಮಿತ್ತಾಂತರಂ ಬಾಹ । ಸತ್ಯಾಂ ಕರ್ತುಮಿತಿ। ತದುಕ್ತಂ ಭಾರತೇ (ದ್ರೋಣ. ೧೩೯/೯೦,೯೧)–

'ಭೀಮೋ೭ಪಿ ಮುಷ್ಟಿಮುದ್ಯಮ್ಯ ವಜ್ರಗರ್ಭಂ ಸುದಾರುಣಮ್ ।
ಹಂತುಮೈಚ್ಛತ್ಸುತಪುತ್ರಂ ಸಂಸ್ಮರನ್ನರ್ಜುನಂ ಕ್ಷಣಾತ್ ॥
ಶಕ್ತೋ೭ಪಿ ನಾವಧೀತ್ಕರ್ಣಂ ಸಮರ್ಥಃ ಪಾಂಡುನಂದನಃ ।
ರಕ್ಷಮಾಣಃ ಪ್ರತಿಜ್ಞಾಂ ತಾಂ ಯಾ ಕೃತಾ ಸವ್ಯಸಾಚಿನಾ' ಇತಿ ॥ – (ವಾ.)

೧೫೮. ಹಸ್ತ್ಯಂಗಾನ್ಯಥ ಕರ್ಣಾಯ ಪ್ರಾಹಿಣೋತ್ ಪಾಂಡುನಂದನಃ ।
ಚಕ್ರಾಣ್ಯಶ್ವಾಂಸ್ತಥಾ ಚಾನ್ಯದ್ ಯದ್ ಯತ್ ಪಶ್ಯತಿ ಭೂತಲೇ ॥
ತತ್ತದಾದಾಯ ಚಿಕ್ಷೇಪ ಕ್ರುದ್ಧಃ ಕರ್ಣಾಯ ಪಾಂಡವಃ ॥ – ಭಾರತ (ದ್ರೋಣ. ೧೩೯/೮)

ಭೀಮ ಅವನ ಬಾಣಗಳನ್ನು ಸತ್ತ ಆನೆಗಳನ್ನು ಎಸೆದು ತಡೆದ. ಕರ್ಣ ಆನೆಗಳ ಶವಗಳನ್ನೇ ಕತ್ತರಿಸಿದ.

ವಿ : ಭೀಮನ ಆ ಕಾರ್ಯವನ್ನು ಸೂಕ್ಷ್ಮವಾಗಿ ಅವಲೋಕಿಸಿದ ಕರ್ಣನಿಗೆ ಭೀಮ ಅಷ್ಟೆಲ್ಲಾ ತನಗೆ ಅವಕಾಶ ನೀಡುತ್ತಿರುವುದು ಪರಶುರಾಮ ತನಗೆ ನೀಡಿದ್ದ ವರವನ್ನು ಗೌರವಿಸಲೆಂದು ಎಂದು ಚೆನ್ನಾಗಿ ಅರ್ಥವಾಯಿತು. ಆದರೂ ಕೌರವ ಪಕ್ಷದಲ್ಲಿದ್ದದ್ದರಿಂದ ಭೀಮನ ಮೇಲೆ ಬಾಣ ಪ್ರಯೋಗದಲ್ಲಿ ತೊಡಗಿದ. ಭೀಮ ಆಗ ಸತ್ತ ಆನೆಗಳನ್ನೇ ಬಾಣಗಳಿಗೆ ಎದಿರಾಗಿ ಎಸೆಯತೊಡಗಿದ್ದು ಅವನ ಅಗಾಧ ಬಲಕ್ಕೆ ಮತ್ತೊಂದು ನಿದರ್ಶನ. ಅಷ್ಟು ಭಾರದ ಆನೆಗಳನ್ನು ಒಂದಾದರೊಂದಂತೆ ಅನಾಯಾಸದಿಂದ ಎತ್ತಿ ಎಸೆಯುವ ಭೀಮನ ಬಲ ಊಹಾತೀತವಾದದ್ದು. ಕರ್ಣ ಆನೆಗಳ ಶವಗಳನ್ನೇ ಕತ್ತರಿಸಿ ಸಮಾಧಾನಪಟ್ಟುಕೊಂಡ.

ವ್ಯಸೂನ್ ಗಜಾನ್ ಪ್ರಕ್ಷಿಪಂತಂ ಸಮೇತ್ಯ
ಸಂಸ್ಪೃಶ್ಯ ಚಾಪೇನ ವಚಶ್ಚ ದುಷ್ಟಮ್ ।
ಸಂಶ್ರಾವಯಾಮಾಸ ಸುಯೋಧನಸ್ಯ
ಪ್ರೀತ್ಯೈ ಪ್ರಜಾನನ್ನಪಿ ತಸ್ಯ ವೀರ್ಯಮ್ ॥ ೧೫೯ ॥

ಅ: ಸತ್ತ ಆನೆಗಳನ್ನು ಎಸೆಯುತ್ತಿದ್ದ ಭೀಮನ ಬಳಿಗೆ ಬಂದು ಕರ್ಣ ಬಿಲ್ಲಿನ ತುದಿಯಿಂದ ಅವನನ್ನು ತಿವಿದು,ಭೀಮನ ಪರಾಕ್ರಮವನ್ನು ಚೆನ್ನಾಗಿ ತಿಳಿದಿದ್ದರೂ ಸಹ ದುರ್ಯೋಧನನ ಪ್ರೀತಿಗೆಂದು ಕೆಟ್ಟ ಮಾತನ್ನು ನುಡಿದ.

ವಿ : ೧) ಹಾಗೆ ನುಡಿದ ಕೆಟ್ಟ ಮಾತುಗಳು ತೂಬರಕ, ಮೂಢ, ಔದರಿಕ ಎಂದು ಮಹಾ ಭಾರತದಲ್ಲಿದೆ :

ಪುನಃ ಪುನಸ್ತೂಬರಕ ಮೂಢ ಔದರಿಕೇತಿ ಚ ।
ಅಕೃತಾಸ್ತ್ರ ಮಾ ಯೋತ್ಸೀರ್ಬಾಲ ಸಂಗ್ರಾಮಕಾತರ ॥ – ಭಾರತ (೭/೧೫೯/೯೫)

ತೂಬರಕ ಎಂದರೆ ಗಡ್ಡ ಮೀಸೆಗಳು ಮೂಡದವನು ಎಂದೂ, ಔದರಿಕ ಎಂದರೆ ಹೊಟ್ಟೆಬಾಕ ಎಂದೂ ಅರ್ಥ.

---

೧೫೯. ಧನುಷೋಽಗ್ರೇಣ ತಂ ಕರ್ಣಃ ಸೋಽಭಿದ್ರುತ್ಯ ಪರಾಮೃಶತ್ ।
ಧನುಷಾ ಸ್ಪೃಷ್ಟಮಾತ್ರೇಣ ಕ್ರುದ್ಧಃ ಸರ್ಪ ಇವ ಶ್ವಸನ್ ॥
ಆಚ್ಛಿದ್ಯ ಸ ಧನುಸ್ತಸ್ಯ ಕರ್ಣಂ ಮೂಧನ್ಯತಾಡ್ಯತ್ ॥ – ಭಾರತ (ದ್ರೋಣ. ೧೫೯/೯೨,೯೩)

೨) ಕರ್ಣ ಭೀಮನನ್ನು ಹೀಗೆ ದುರ್ಯೋಧನನ ಪ್ರೀತಿಗೆಂದು ಬೈಯ್ದದ್ದನ್ನೇ ಆಧಾರವನ್ನಾಗಿ ಇಟ್ಟುಕೊಂಡು ಕೆಲವರು ಭೀಮಸೇನ ಗಡ್ಡ ಮೀಸೆಗಳಿಲ್ಲದವನೆಂದು ತಪ್ಪಾಗಿ ಅರ್ಥಮಾಡಿಕೊಂಡಿರುವುದುಂಟು. ವಸ್ತುಸ್ಥಿತಿ ಹಾಗಲ್ಲ. ಭೀಮಸೇನ ಶೋಭಿಸುವಂತಹ ಗಡ್ಡ ಮೀಸೆಗಳನ್ನು ಹೊಂದಿದ್ದ. ಪಾಂಡವರೆಲ್ಲರೂ ಮೀಸೆ ಹೊಂದಿದ್ದವರು ಎಂಬ ಮಹಾಭಾರತದ ಉಲ್ಲೇಖ ಇದನ್ನು ಸ್ಫುಟಪಡಿಸುವುದು :

ಅಂತರೇಣ ಯಕೃಲ್ಲೋಮಾನ್ ಶೂರಸೇನಾಂಶ್ಚ ಪಾಂಡವಾಃ । ...
ಧನ್ವಿನೋ ಬದ್ಧನಿಸ್ತ್ರಿಂಶಾ ವಿವರ್ಣಾಃ ಶ್ಮಶ್ರುಧಾರಿಣಃ । – ಭಾರತ (ವಿರಾಟ. ೫/೪,೫)

೩) ಆದರೂ ಕರ್ಣ ಹಾಗೆ ಬೈಯ್ಯಲು ವಿಶೇಷ ಕಾರಣವನ್ನು ಮುಂದೆ ತಿಳಿಸಿರುವರು (ಶ್ಲೋ. ೧೭೧).

೪) ಭೀಮನನ್ನು ಔದರಿಕ ಎಂದದ್ದೂ ಸಹ ಸಾಮಾನ್ಯ ಜನ ತಿಳಿದ ರೀತಿಯಲ್ಲಿ ಮಾತ್ರ. ಭೀಮ ಸರ್ವಥಾ ಹೊಟ್ಟೆಬಾಕನಲ್ಲ. ದುರ್ಯೋಧನ ನೀಡಿದ ಕಾಲಕೂಟವನ್ನೇ ತಿಂದು ಜೀರ್ಣಿಸಿಕೊಂಡ ಅವನನ್ನು ಹೊಟ್ಟೆಬಾಕ ಎಂದು ತಿಳಿಯುವುದು ಶುದ್ಧ ಅವಿವೇಕ. ಕರ್ಣನಿಗೂ ಅದೆಲ್ಲ ತಿಳಿದೇ ಇತ್ತು. ಆದರೂ ದುರ್ಯೋಧನನನ್ನು ಮೆಚ್ಚಿಸುವ ಭರದಲ್ಲಿ ತೋಚಿದ್ದನ್ನೆಲ್ಲಾ ಆಡಿ ಸಮಾಧಾನಪಟ್ಟುಕೊಂಡ ಎಂದರ್ಥ.

ದುರ್ಯೋಧನನ ಪ್ರೀತಿಗಾಗಿ ಕರ್ಣನಿಂದ ದುರುಕ್ತಿ

ಸಂಶ್ರಾವಯಂತಂ ವಚನಾನಿ ರೂಕ್ಷಾ-
ಣ್ಯಪಾಹನದ್ಬಾಣವರೈಸ್ತದಾऽರ್ಜುನಃ ।
ಸ ವರ್ಮಹೀನಃ ಪಾರ್ಥಬಾಣಾಭಿತಪ್ತೋ
ವ್ಯಪಾಗಮದ್ಭೀಮ ಆಪಾತ್ಮಯಾನಮ್ ॥ ೧೬೦ ॥

ಅ: ಭೀಮನಿಗೆ ಕೆಟ್ಟ ಮಾತುಗಳನ್ನು ನುಡಿಯುತ್ತಿದ್ದ ಕರ್ಣನನ್ನು ಶ್ರೇಷ್ಠ ಬಾಣಗಳಿಂದ ಅರ್ಜುನ ಹೊಡೆದ. ಪಾರ್ಥನ ಬಾಣಗಳಿಂದ ಪೀಡಿತನಾದ ಕರ್ಣ ಕವಚಹೀನನಾಗಿ ಪಲಾಯನ ಮಾಡಿದ. ಭೀಮ ತನ್ನ ರಥವನ್ನು ಏರಿದ.

ವಿ : ಆ ವೇಳೆಗೆ ಅರ್ಜುನ ಮಧ್ಯೆ ಪ್ರವೇಶಿಸಲು ಕರ್ಣ ಅಲ್ಲಿಂದ ತಕ್ಷಣ ಓಡಿದ ಎಂದರ್ಥ. ಕೃಷ್ಣ ಅರ್ಜುನನಿಗಾಗಿ ತನ್ನ ರಥ ಮೊದಲಾದವುಗಳನ್ನು ಅಪಹರಿಸಿಯಾನು ಎಂಬ ಭಯದಿಂದ ಹಾಗೆ ಓಡಿದ ಎಂಬ ಕಾರಣವನ್ನು ಮುಂದೆ ತಿಳಿಸಿರುವರು.

ಕರ್ಣ ಭೀಮನ ಮೇಲೆ ಶಕ್ತ್ಯಾಯುಧ ಪ್ರಯೋಗಿಸದಿರಲು ಕಾರಣ

ಕರ್ಣೋ ಭೀಮೇ ವಾಸವೀಂ ನೈವ ಶಕ್ತಿಂ
ವಿಮೋಕ್ತುಮೈಚ್ಛನ್ನೈವ ಬೀಭತ್ಸುತೋಽನ್ಯಾನ್।
ಹನ್ಯಾಮಿತಿ ಪ್ರಾಹ ಯತಃ ಸ ಕುಂತ್ಯೈ
ಯದ್ಯಪ್ಯವಧ್ಯಃ ಸ ತಯಾಽಪಿ ಭೀಮಃ ॥ ೧೬೧ ॥

ಅ:. ಅರ್ಜುನನ ಹೊರತು ಪಾಂಡವರಲ್ಲಿ ಬೇರಾರನ್ನೂ ಕೊಲ್ಲೆನು ಎಂದು ಕುಂತಿಗೆ ತಿಳಿಸಿದ್ದರಿಂದ ಕರ್ಣ ಭೀಮನ ಮೇಲೆ ಇಂದ್ರದತ್ತವಾದ ಶಕ್ತ್ಯಾಯುಧವನ್ನು ಪ್ರಯೋಗಿಸಲಿಲ್ಲ. ಆ ಶಕ್ತ್ಯಾಯುಧದಿಂದಲೂ ಭೀಮ ಸರ್ವಥಾ ಅವಧ್ಯನೇ ಆಗಿದ್ದ.

ವಿ : ೧) ಕರ್ಣನ ಬಳಿ ಇಂದ್ರದತ್ತವಾದ ಅಮೋಘ ಶಕ್ತ್ಯಾಯುಧವಿದ್ದರೂ ಅದನ್ನೇಕೆ ಅವನು ಆಗ ಭೀಮನ ಮೇಲೆ ಪ್ರಯೋಗಿಸಲಿಲ್ಲ ಎಂಬ ಶಂಕೆಗೆ ಇಲ್ಲಿ ಉತ್ತರವಿದೆ. ಕುಂತಿಗೆ ಕರ್ಣ ಅರ್ಜುನನ ಹೊರತು ಇತರ ಪಾಂಡವರನ್ನು ಕೊಲ್ಲೆನೆಂದು ವಚನ ನೀಡಿದ್ದರಿಂದ ಅವನು ಹಾಗೆ ಪ್ರಯೋಗಿಸಲಿಲ್ಲ ಎಂಬುದು ಮೇಲಿನ ಕಾರಣ. ಆದರೆ, ಆ ಶಕ್ತ್ಯಾಯುಧವನ್ನು ಪ್ರಯೋಗಿಸಿದ್ದರೂ ಅದರಿಂದ ಭೀಮನಿಗೆ ಯಾವ ಕೆಡುಕೂ ಆಗುತ್ತಿರಲಿಲ್ಲ ಎಂಬುದು ತತ್ವ.

೨) ಇಂದ್ರನಿಗಿಂತ ತುಂಬಾ ಮಿಗಿಲಾದ ವಾಯುದೇವರ ಮೇಲೆ ಆ ಶಕ್ತ್ಯಾಯುಧ ಏನನ್ನೂ ಮಾಡುತ್ತಿರಲಿಲ್ಲ. ಇಂದ್ರ ವಾಯು ಅವತಾರನಾದ ಹನುಮಂತನ ಮೇಲೆ ಶಕ್ತ್ಯಾಯುಧಕ್ಕಿಂತ ಮಿಗಿಲಾದ ವಜ್ರಾಯುಧವನ್ನೇ ಪ್ರಯೋಗಿಸಿದಾಗಲೂ ಅವನಿಗೆ ಏನೂ ಆಗದಿದ್ದ ಉಲ್ಲೇಖ ರಾಮಾಯಣದಲ್ಲಿ ಬಂದಿದೆ :

ಮತ್ಕರೋತ್ಸೃಷ್ಟವಜ್ರೇಣ ಹನುರಸ್ಯ ಯಥಾಽಹತಃ ।
ನಾಮ್ನಾ ವೈ ಕಪಿಶಾರ್ದೂಲೋ ಭವಿತಾ ಹನುಮಾನಿತಿ ॥ –ವಾ.ರಾ.(೬/೩೬/೧೧)

ಭಂಗೇ ಪ್ರಸಕ್ತೇಽಪಿ ನ ಭಂಗಮಾಪ ಹನುಃ ಶಿಶೋರ್ಯದ್ದನುಮಾನತೋಽಯಮ್॥
–ಸಂಗ್ರಹರಾಮಾಯಣ(೬/೧/೨೩)

ಎಂದ ಮೇಲೆ ಆ ವಾಯುವೇ ಆದ ಭೀಮನಿಗೆ ಶಕ್ತ್ಯಾಯುಧದಿಂದ ಯಾವ ಅನರ್ಥವೂ ಆಗುತ್ತಿರಲಿಲ್ಲ ಎಂಬುದು ಸ್ಪಷ್ಟ. ಕರ್ಣ ಶಕ್ತ್ಯಾಯುಧವನ್ನು ಪ್ರಯೋಗಿಸದೇ ಇದ್ದುದರಿಂದ ಭೀಮು ಉಳಿದುಕೊಂಡ ಎಂಬ ತಪ್ಪು ತಿಳಿವಳಿಕೆಯ ಜನಕ್ಕೆ ಇದು ಅತ್ಯಂತ ಸಮರ್ಪಕವಾದ ಉತ್ತರ ಎಂದು ತಿಳಿಯಬೇಕು. ಅಲ್ಲಿಯೇ ಇದ್ದ ಅರ್ಜುನನ ಮೇಲೆ ಪ್ರಯೋಗಿಸಲು ಅವನಿಗೆ ತೋಚಲಿಲ್ಲ ಎಂಬುದು ಆಶ್ಚರ್ಯ. ಕರ್ಣನಿಗೆ ಅಂತಹ ಮರೆವು ಪ್ರತಿನಿತ್ಯ ಆಗುತ್ತಿದ್ದ ವಿವರ ಮಹಾ–ಭಾರತದಲ್ಲಿದೆ (ದ್ರೋಣಪರ್ವ, ಅಧ್ಯಾಯ ೧೮೨, ಶ್ಲೋ. ೧೭–೨೯) :

ಸಾ ತು ಬುದ್ಧಿಃ ಕೃತಾऽಪ್ಯೇವಂ ಜಾಗ್ರತಿ ತ್ರಿದಶೇಶ್ವರೇ ।
ಅಪ್ರಮೇಯೇ ಹೃಷೀಕೇಶೇ ಯುದ್ಧಕಾಲೇऽಪ್ಯಮುಹ್ಯತ ॥
– ಭಾರತ (ದ್ರೋಣ. ೧೮೨/೨೮)

ನಾರಾಯಣಾಸ್ತ್ರಂ ಶಿರಸಿ ಪ್ರಪಾತಿತಂ
ನ ಯಸ್ಯ ಲೋಮಾಪ್ಯದಹಚ್ಛಿರಸ್ಥಿತಮ್ ।
ಕಿಂ ತಸ್ಯ ಶಕ್ತಿಃ ಪ್ರಕರೋತಿ ವಾಸವೀ
ತಥಾऽನ್ಯದಪ್ಯಸ್ತ್ರಶಸ್ತ್ರಂ ಮಹಚ್ಚ ॥ ೧೬೨ ॥

ಅ: ತಲೆಯ ಮೇಲೆ ಬಿದ್ದು ಬಹುಕಾಲ ನೆಲೆಸಿದ್ದ ನಾರಾಯಣಾಸ್ತ್ರವೇ ಭೀಮನ ಕೂದಲನ್ನು ಸುಡಲಿಲ್ಲ. ಎಂದಮೇಲೆ ಆ ಇಂದ್ರನ ಶಕ್ತಿ ಅವನಿಗೇನು ಮಾಡೀತು? ಅದರಂತೆ ಬೇರಾವ ಮಹತ್ತರವಾದ ಶಸ್ತ್ರಾಸ್ತ್ರಗಳೂ ಅವನನ್ನು ಏನು ಮಾಡಿಯಾವು?

ವಿ: ೧) ಭೀಮನಿಗೆ ಶಕ್ತ್ಯಾಯುಧದಿಂದ ಯಾವ ಹಾನಿಯೂ ಆಗುತ್ತಿರಲಿಲ್ಲ ಎಂಬುದನ್ನು ನಿರೂಪಿಸಲು ನೀಡಿರುವ ಮತ್ತೊಂದು ಪ್ರಬಲ ಕಾರಣ ಇದು. ಇಂದ್ರನಿಗಿಂತ ಅನಂತಪಟ್ಟು ಮಿಗಿಲಾದ ನಾರಾಯಣನ ಅಸ್ತ್ರವೇ ಅಶ್ವತ್ಥಾಮರಿಂದ ಪ್ರಯೋಗಿಸಲ್ಪಟ್ಟಾಗ ಅದು ಭೀಮನ ತಲೆಯ ಮೇಲೆ ಬಹುಹೊತ್ತು ಉರಿಯುತ್ತಿದ್ದರೂ ಒಂದು ಕೂದಲನ್ನೂ ಸುಡದೇ ಇದ್ದಾಗ ಈ ಇಂದ್ರನ ಶಕ್ತ್ಯಾಯುಧವೇ ಆಗಲೀ ಇತರ ಯಾವುದೇ ಆಯುಧವೇ ಆಗಲೀ ಭೀಮನನ್ನು ಏನೂ ಮಾಡಲಾರವು ಎಂಬುದು ಸ್ಪಷ್ಟ.

೨) ರಾಮಾಯಣದಲ್ಲಿ ಇಂದ್ರಜಿತ್ ಪ್ರಯೋಗಿಸಿದ ಬ್ರಹ್ಮಾಸ್ತ್ರ ಹನುಮಂತನನ್ನು ಏನೂ ಮಾಡದಿದ್ದ ವಿವರ ಬಂದಿರುವುದನ್ನೂ ಗಮನಿಸಬೇಕು (೭/೨೨). ಹೀಗೆ ಭೀಮನ ಅಸಾಧಾರಣ–ವಾದ ಸಾಮರ್ಥ್ಯದ ಬಗ್ಗೆ ಅಪೂರ್ವ ಬಗೆಯ ವಿವರಗಳನ್ನು ನೀಡುವ ವಿಶಿಷ್ಟ ಭಾಗವಿದು.

ಭೀಮ ಕರ್ಣನ ಶಕ್ತ್ಯಾಯುಧವನ್ನು ಒಯ್ಯದಿರಲು ಕಾರಣ

ಭೀಮಃ ಕರ್ಣರಥಂ ಪ್ರಾಪ್ತಃ ಶಕ್ತಿಂ ನಾದಾತುಮೈಚ್ಛತ ।
ಅಭಿಪ್ರಾಯಂ ಕೇಶವಸ್ಯ ಜಾನನ್ ಹೈಡಿಂಬಮೃತ್ಯವೇ ॥ ೧೬೩ ॥

---

೧೬೩. ಯದ್ಯಪ್ಯವಧ್ಯಃ ಸ ತಯಾऽಪಿ ಭೀಮ ಇತ್ಯತ್ರ ಯಃ = ಭೀಮಃ ತಯಾऽಪಿ= ಶಕ್ತ್ಯಾऽಪಿ ಅವಧ್ಯಃ ತಥಾऽಪಿ ಅಹಂ ಬೀಭತ್ಸೂನ್ಯಾನ್ ನ ಹನ್ಯಾಮೇವೇತಿ ಕುಂತ್ಯೈ ಯತಃ ಪ್ರಾಹ ತತ ಏವ ಕರ್ಣಃ ಭೀಮೇ ವಾಸವೀಂ ಶಕ್ತಿಂ ವಿಮೋಕ್ತುಂ ನೈಚ್ಛತ್ ॥ – (ವಾ.)

ಅ: ಅದು ಮುಂದೆ ಘಟೋತ್ಕಚನ ಮರಣಕ್ಕೆ ಕಾರಣವಾಗಬೇಕೆಂಬುದು ಕೃಷ್ಣನ ಸಂಕಲ್ಪ ಎಂದು ತಿಳಿದು ಭೀಮ ಕರ್ಣನ ರಥವನ್ನು ಏರಿದ್ದಾಗ ಅಲ್ಲಿದ್ದ ಶಕ್ತ್ಯಾಯುಧವನ್ನು ತೆಗೆದುಕೊಳ್ಳಲು ಬಯಸಲಿಲ್ಲ.

ವಿ : ೧) ಭೀಮ ಕರ್ಣನ ರಥಕ್ಕೆ ತೆರಳಿದ್ದಾಗ ಅಲ್ಲಿ ಇಂದ್ರ ನೀಡಿದ್ದ ಶಕ್ತ್ಯಾಯುಧವೂ ಇದ್ದಿತು. ಭೀಮ ಇಚ್ಛಿಸಿದ್ದಲ್ಲಿ ಅದನ್ನು ತಂದಿದ್ದಲ್ಲಿ ಪಾಂಡವರಲ್ಲಿ ಯಾರಿಗೂ ಅಪಾಯದ ಪ್ರಸಂಗವೇ ಇರಲಿಲ್ಲ. ಆದರೂ ಭೀಮ ಹಾಗೆ ಮಾಡಲಿಲ್ಲ. ಅದಕ್ಕೆ ಕಾರಣ ಆ ಶಕ್ತ್ಯಾಯುಧದಿಂದ ಆ ದಿನ ರಾತ್ರಿ ತನ್ನ ಮಗ ಘಟೋತ್ಕಚ ಹತನಾಗಬೇಕೆಂಬುದು ಕೃಷ್ಣನ ಸಂಕಲ್ಪವಾಗಿತ್ತು ಎಂಬುದು ಭೀಮನಿಗೆ ತಿಳಿದಿತ್ತು.

೨) ಹೀಗೆ ಭೀಮ ಪೂರ್ಣ ಬಲಮಾತ್ರವಲ್ಲದೇ ಪೂರ್ಣಪ್ರಜ್ಞನೂ ಆಗಿದ್ದ ವಿಶೇಷಾಂಶ ಇದರಿಂದ ತಿಳಿಯುವುದು. ತನ್ನ ಮಗ ಸತ್ತರೂ ಚಿಂತೆಯಿಲ್ಲ ಎಂದು ಶ್ರೀಹರಿಯ ಸಂಕಲ್ಪಕ್ಕೆ ತಲೆ ಬಾಗುವಂತಹ ಅಪ್ರತಿಮ ಭಾಗವತ ಶಿರೋಮಣಿ ಭೀಮಸೇನ ಎಂಬುದು ಇದರಿಂದ ದೃಢ–ಪಡುವುದು.

ತತಃ ಕರ್ಣೋ೨ನ್ಯಮಾಸ್ಥಾಯ ರಥಮರ್ಜುನಮಭ್ಯಯಾತ್ ।
ದಿವ್ಯಂ ರಥಂ ಧನುಶ್ಚೈವ ಕೃಷ್ಣಬುದ್ಧ್ಯಾ೨ರ್ಜುನೋ ಹರೇತ್ ॥ ೧೬೪ ॥

ಇತಿ ಭೀತಸ್ತು ತಾಂ ಶಕ್ತಿಮಾದಾಯಾರ್ಜುನಮೃತ್ಯವೇ ।
ಯುದ್ಧಾಯಾಯಾದ್ರಥಂ ಚಾಪಂ ಶಕ್ತಿಂ ಚೈಕತ್ರ ನಾಕರೋತ್ ॥ ೧೬೫ ॥

---

೧೬೪. ತತಃ ಕರ್ಣೋ೨ನ್ಯಮಾಸ್ಥಾಯೇತ್ಯತ್ರ ಅನ್ಯಂ = ರಥಂ ರಾಮದತ್ತದಿವ್ಯರಥಾದನ್ಯಮ್ । ನನು ರಾಮದತ್ತ-ರಥಚಾಪೇ ಕಿಮಿತಿ ನಾನೀತೇ ಇತ್ಯತ ಆಹ । ದಿಯಂ ರಥಮಿತಿ । ಯಾ ಅರ್ಜುನಮುಖೇ ಆಶಾಸ್ಯಮಾನಾ ತಾಂ ಶಕ್ತಿಮೇವಾದಾಯ ದಿವ್ಯರಥಚಾಪೇ ಚ ವಿಹಾಯ ರಥಾಂತರೇಣಾಯಾತ್ । ಮೃತಿಕಾಲೇ ಕರ್ಣಪರ್ವಣಿ ದಿನಾಂತೇ ಮರಣಕಾಲೇ ಮಮ ಮರಣಾನಂತರಂ ಕಿಮನೇನೇತಿ ತಂ ರಥಮಾರುಹ್ಯ ಗಮಿಷ್ಯತಿ । ಏಕಸ್ಯಾಪಿ ಪ್ರಬಲಾ-ಯುಧಸ್ಯಾಭಾವೇ ಅರ್ಜುನಃ ಮಯ್ಯವಜ್ಞಾಂ ಕರಿಷ್ಯತೀತಿ ಬುದ್ಧ್ಯಾ ಶಕ್ತಿಮಾತ್ರಮಾನೀತವಾನಿತಿ ಭಾವಃ ॥ – (ವಾ.)

೧೬೪. ಕೃಷ್ಣಬುದ್ಧ್ಯಾ — ಕೃಷ್ಣೋದಿತಬುದ್ಧ್ಯಾ। – (ಜ.)

೧೬೪. ಭೀಮಂ ಪ್ರತಿ ಕಥಂ ರಥಾದಿತ್ರಯಮಕರೋದಿತಿ ಚೇತ್, ಭಗವತಿ ರಾಮೇ ಭಕ್ತಿವಿಶೇಷಾತ್ । ಭೀಮೋ ರಥಾದಿಕಂ ನಾಪಹರತೀತಿ ಬುದ್ಧ್ಯಾ ತಂ ಪ್ರತ್ಯೇಕೀಕರಣೋಪಪತ್ತೇಃ । ಅತ ಏವೋಕ್ತಂ – 'ನೈಚ್ಛದ್ಗ್ರಹೀತುಂ ವಿನಿಹಂತುಮೇವ ರಥಂ ಧನುರ್ವಾ೨ಸ್ಯ ರಣೇ ಪ್ರಹರ್ತುಂ । ದ್ರೋಣಸ್ಯ ಯತ್ಪೂರ್ವಮತೀವಶಕ್ತೋ೨ಪ್ಯ-ಮಾನಯನ್ ರಾಮವಚಸ್ಯ ಭಕ್ತ್ಯಾ' (ಶ್ಲೋ. ೧೫೬) ಇತಿ। – (ತಾ.)

ಏಕಂ ಹೃತಂ ಚೇದನ್ಯತ್ ಸ್ಯಾದಿತಿ ಮತ್ವಾ ಭಯಾಕುಲಃ ।
ಬಿಭೇತಿ ಸರ್ವದಾ ನೀತೇಃ ಕೃಷ್ಣಸ್ಯಾಮಿತತೇಜಸಃ ॥ ೧೬೬ ॥

ಅ: ಬಳಿಕ ಕರ್ಣ ಬೇರೊಂದು ರಥವನ್ನೇರಿ ಅರ್ಜುನನ ಮೇಲೆ ಏರಿಹೋದ. ಕೃಷ್ಣನ ಪ್ರೇರಣೆಯಿಂದ ತನ್ನ ದಿವ್ಯರಥ ಹಾಗೂ ಧನುಸ್ಸುಗಳನ್ನು ಅರ್ಜುನ ಕಿತ್ತುಕೊಳ್ಳಬಹುದೆಂಬ ಭಯದಿಂದ ಕರ್ಣ ಅವನ್ನು ತರದೇ ಶಕ್ತ್ಯಾಯುಧವನ್ನು ಮಾತ್ರ ತೆಗೆದುಕೊಂಡು ಅರ್ಜುನನ್ನು ಕೊಲ್ಲಲೆಂದು ಯುದ್ಧಕ್ಕೆ ಬಂದ. ರಥ, ಧನುಸ್ಸು ಮತ್ತು ಆ ಶಕ್ತ್ಯಾಯುಧ ಮೂರನ್ನೂ ಅವನು ಒಂದೆಡೆ ಸೇರಿಸುತ್ತಿರಲಿಲ್ಲ. ಒಂದು ಹೋದರೂ ಮತ್ತೊಂದು ಇರಲಿ ಎಂಬುದು ಅವನ ವಿಚಾರವಾಗಿತ್ತು; ಅಮಿತ ತೇಜಸ್ವಿಯಾದ ಕೃಷ್ಣನ ನೀತಿಯಿಂದಾಗಿ ಅವನು ಸದಾ ಭಯ-ಪಡುತ್ತಿದ್ದ.

ವಿ: ಕರ್ಣ ಬೇರೊಂದು ರಥವೇರಿ ಬರಲು ಕಾರಣವನ್ನು ಇಲ್ಲಿ ವಿವರವಾಗಿ ತಿಳಿಸಿರುವರು. ಆ ಮೂರೂ ಒಂದೆಡೆ ಇದ್ದಾಗಲೂ ಅವನಿಗೆ ಭೀಮನನ್ನು ಯಾವ ರೀತಿಯಲ್ಲೂ ಸೋಲಿಸಲು ಸಾಧ್ಯ-ವಾಗಿರಲಿಲ್ಲ ಎಂಬುದನ್ನು ಗಮನಿಸಬೇಕು. ಭೀಮ ಅಂತಹ ಯಾವುದನ್ನೂ ಇಟ್ಟುಕೊಳ್ಳದೆಯೂ ಅವನ್ನೆಲ್ಲಾ ಇಟ್ಟುಕೊಂಡಿದ್ದ ಕರ್ಣನನ್ನು ಅನಾಯಾಸದಿಂದ ಪುನಃ ಪುನಃ ಸೋಲಿಸುತ್ತಿದ್ದುದು ಅವನ ಹಿರಿಮೆಯ ಮತ್ತೊಂದು ಮುಖ.

ನಿಶ್ಚಿತೋ ಮರಣಾಯೈವ ಮೃತಿಕಾಲೇ ತು ತಂ ರಥಮ್ ।
ಆರುಹ್ಯಾಗಾದ್ಧಿ ಪೂರ್ವಂ ತು ನ ಕಾಲಂ ಮನ್ಯತೇ ಮೃತೇಃ ॥ ೧೬೭ ॥

ಅ: ಮರಣಕಾಲದಲ್ಲಿ ಸಾಯಲೆಂದು ನಿಶ್ಚಯಿಸಿಕೊಂಡೇ ಅವನು ಆ ರಥವನ್ನು ಏರಿ ತೆರಳಿದ್ದ. ಅದಕ್ಕಿಂತ ಮುಂಚೆ ತನ್ನ ಮರಣಕ್ಕೆ ಸಮಯವಲ್ಲವೆಂದು ಅವನು ತಿಳಿದಿದ್ದ.

ವಿ: ೧) ಕರ್ಣ ಅರ್ಜುನನ ಮೇಲೆ ಪರಶುರಾಮದತ್ತವಾದ ರಥವನ್ನು, ಧನುಸ್ಸನ್ನು ತೆಗೆದು-ಕೊಂಡು ಹೋದದ್ದು ಕೊನೆಯ ಯುದ್ಧದಲ್ಲಿ ಮಾತ್ರ. ಅದು ತನ್ನ ಜೀವನದ ಕೊನೆಯ ಯುದ್ಧ ಎಂದು ತಿಳಿದದ್ದೇ ಅದಕ್ಕೆ ಕಾರಣವಾಗಿತ್ತು.

೨) ಆದರೆ ಆ ವೇಳೆಗೆ ಅವನಲ್ಲಿ ಶಕ್ತ್ಯಾಯುಧ ಇರಲಿಲ್ಲ. ಹೀಗೆ ಆ ಮೂರರ ಸಮೇತ ಎಂದೂ ಅವನು ಅರ್ಜುನನನ್ನು ಎದುರಿಸಲೇ ಇಲ್ಲ ಎಂಬುದು ವಿಶೇಷ. ಒಂದನ್ನಾದರೂ ಈಗ

---

೧೬೪. ಭೀಮಸ್ಯ ಮತಮಾಜ್ಞಾಯ ಕರ್ಣೋ ಬುದ್ಧಿಮತಾಂ ವರಃ ।
ವಿರರಾಮ ರಣಾತ್ ತಸ್ಮಾತ್ ಪಶ್ಯತಾಂ ಸರ್ವಧನ್ವಿನಾಂ ॥ – ಭಾರತ (ದ್ರೋಣ. ೧೩೯/೧೧೦)

ತರದಿದ್ದಲ್ಲಿ ಅರ್ಜುನನ ಮುಂದೆ ತಾನು ತುಂಬಾ ಕೀಳಾಗುವೆನೆಂಬ ಭಯದಿಂದ ಅದನ್ನು ಮಾತ್ರ ಈಗ ತಂದಿದ್ದ.

ಕರ್ಣ ಸಾತ್ಯಕಿಯರ ಯುದ್ಧ

ಶಕ್ತಿಂ ತು ತದ್ರಥಗತಾಂ ಪ್ರಸಮೀಕ್ಷ್ಯ ಕೃಷ್ಣಃ
ಸಂಸ್ಥಾಪ್ಯ ಪಾರ್ಥಮಪಿ ಸಾತ್ಯಕಿಮೇವ ಯೋದ್ಧುಮ್ ।
ದತ್ತ್ವಾ ಸ್ವಕೀಯರಥಮೇವ ವಿರೋಚನಸ್ಯ
ಪುತ್ರೇಣ ಸೋಽದಿಶದಮುಷ್ಯ ಬಲಂ ಪ್ರದಾಯ ॥ ೧೬೮ ॥

ಅ: ಅವನ ರಥದಲ್ಲಿ ಆಗ ಶಕ್ತ್ಯಾಯುಧವಿದ್ದುದನ್ನು ಕಂಡು ಶ್ರೀಕೃಷ್ಣ ಅರ್ಜುನನನ್ನು ತಡೆದು ಸಾತ್ಯಕಿಗೆ ತನ್ನ ರಥವನ್ನು ನೀಡಿ ಅವನನ್ನು ಗೆಲ್ಲಲು ಬೇಕಾದ ಬಲವನ್ನೂ ನೀಡಿ ಕರ್ಣನೊಂದಿಗೆ ಹೋರಾಡಲು ಅವನಿಗೆ ಆದೇಶವಿತ್ತ.

ವಿ : ಆಗ ಕರ್ಣನ ಬಳಿ ಶಕ್ತ್ಯಾಯುಧವಿದ್ದುದರಿಂದ ಅದರಿಂದ ಅರ್ಜುನನಿಗೆ ಅಪಾಯವೆಂದು ಬಗೆದು ಕೃಷ್ಣ ಕರ್ಣನ ಮೇಲೆ ಯುದ್ಧಕ್ಕೆ ಸಾತ್ಯಕಿಯನ್ನು ಕಳುಹಿಸಿಕೊಟ್ಟ ಎಂದರ್ಥ. ಕೃಷ್ಣ ಸಾತ್ಯಕಿಗೆ ತನ್ನ ರಥವನ್ನು ನೀಡಿದ್ದ ವಿವರ ಆಗಲೇ ಬಂದಿದೆ. ಬಲವನ್ನೂ ನೀಡಿದ್ದು ಇಲ್ಲಿಯ ವಿಶೇಷ. ದಿನವಿಡೀ ಶತ್ರುಗಳನ್ನು ಗೆಲ್ಲುವ ವರ ಅಂದಿನ ಮಟ್ಟಿಗೆ ಇದ್ದ ವಿವರವೂ ಬಂದಿದೆ. ಸಾತ್ಯಕಿಯ ಮೇಲೆ ಸರ್ವಥಾ ಕರ್ಣ ಶಕ್ತ್ಯಾಯುಧವನ್ನು ಪ್ರಯೋಗಿಸಲಾರ ಎಂಬುದು ಸಕಲರಿಗೆ ತಿಳಿದಿದ್ದ ವಿಚಾರವೇ ಆಗಿತ್ತು ಆದ್ದರಿಂದ ಸಾತ್ಯಕಿಗೆ ಅದರಿಂದ ಅಪಾಯವಿಲ್ಲ ಎಂಬುದೂ ಸ್ಪಷ್ಟ.

ಶಿಷ್ಯಂ ತ್ವಶಕ್ತಮಿಹ ಮೇ ಪ್ರತಿಯೋಧನಾಯ
ಪಾರ್ಥೋ ಹ್ಯದಾದಿತಿ ಸ ಸಾತ್ಯಕಿಮೀಕ್ಷಮಾಣಃ ।
ಸಂಸ್ಪರ್ಧಯೈವ ಯುಯುಧೇ ವಿರಥಂ ಚಕಾರ
ತೇನೈವ ಸಾತ್ಯಕಿರಮುಂ ಹರಿಯಾನಸಂಸ್ಥಃ ॥ ೧೬೯ ॥

---

೧೬೮. ಶಕ್ತಿಂ ತು ತದ್ರಥಗತಾಮಿತ್ಯತ್ರ ಯದ್ಯಪ್ಯಮೋಘವೈಷ್ಣವಾಸ್ತ್ರವ್ಯರ್ಥೀಕರಣಸಮರ್ಥಸ್ಯ ಕೃಷ್ಣಸ್ಯ ಶಕ್ತಿತೋಽಪಿ ನ ಭೀತಿಃ । ತಥಾಽಪಿ ತಯಾ ಶಕ್ತ್ಯಾ ಘಟೋತ್ಕಚೋ ಹನನೀಯ ಇತಿ ಬುದ್ಧ್ಯಾ ಶಕ್ತೇರ್ವ್ಯರ್ಥೀಕರಣಮಪಿ ಕೃಷ್ಣಸ್ಯ ನಾಭಿಪ್ರೇತಮಿತಿ ಭಾವಃ । ವಿರೋಚನಪುತ್ರೇಣೇತ್ಯತ್ರ ವಿರೋಚನಸ್ಯ ಪುತ್ರೇಣ= ಕರ್ಣೇನ ಸಹ ಯೋದ್ಧುಮಿತಿ ವ್ಯವಹಿತಪದಸಂಬಂಧಃ । ಬಲಂ= ಸ್ವಾವೇಶೇನ ಸಾಮರ್ಥ್ಯಾತಿಶಯಂ ಪ್ರದಾಯೇತ್ಯರ್ಥಃ ॥ –(ವಾ.)

ಅ: ''ಅಸಮರ್ಥನಾದ ತನ್ನ ಶಿಷ್ಯನನ್ನು ನನ್ನೊಂದಿಗೆ ಹೋರಾಡಲು ಅರ್ಜುನ ಕಳುಹಿಸಿರುವನು'' ಎಂದು ಗಮನಿಸಿ ಬಹಳವಾದ ಸ್ಪರ್ಧೆಯಿಂದಲೇ ಕರ್ಣ ಸಾತ್ಯಕಿಯೊಂದಿಗೆ ಯುದ್ಧಕ್ಕೆ ತೊಡಗಿದ. ಕೃಷ್ಣನ ರಥದಲ್ಲಿ ಕುಳಿತಿದ್ದ ಸಾತ್ಯಕಿ ಅದರಿಂದಾಗಿ ಕರ್ಣನನ್ನು ವಿರಥನನ್ನಾಗಿಮಾಡಿದ.

ವಿ: ಸಾತ್ಯಕಿ ಕರ್ಣನಂತಹ ಮಹಾವೀರನನ್ನು ಸೋಲಿಸಲು ಸಾಧ್ಯವಾದ ಕಾರಣ ಇಲ್ಲಿದೆ. ಅರ್ಜುನ ತಾನು ನೇರವಾಗಿ ಯುದ್ಧಕ್ಕೆ ಬರದೇ ತನ್ನ ಶಿಷ್ಯನೊಬ್ಬನನ್ನು ತನ್ನ ಮೇಲೆ ಕಳುಹಿಸಿ ತನಗೆ ಅವಮಾನ ಮಾಡುತ್ತಿರುವನೆಂದು ಕರ್ಣ ಸ್ಪರ್ಧೆಯಿಂದ ಹೋರಾಟಕ್ಕೆ ತೊಡಗಿದ್ದರಿಂದ ಪರಶುರಾಮನ ಶಾಪದಿಂದಾಗಿ ಕರ್ಣ ಸೋಲುವಂತಾಯಿತು ಎಂಬುದು ಒಂದು ಕಾರಣ. ಕೃಷ್ಣ ನೀಡಿದ್ದ ರಥದಲ್ಲಿ ಸಾತ್ಯಕಿ ಕುಳಿತಿದ್ದುದು ಅವನ ಗೆಲುವಿಗೆ ಮತ್ತೊಂದು ಕಾರಣ.

ಸಾತ್ಯಕಿಯಿಂದ ಕರ್ಣನ ಪರಾಜಯ

ನ ಕೇಶವರಥೇ ಕಶ್ಚಿತ್ ಸ್ಥಿತೋ ಯಾತಿ ಪರಾಜಯಮ್ ।
ಅತಶ್ಚ ಸಾತ್ಯಕಿರ್ನಾಪ ಕರ್ಣೇನಾತ್ರ ಪರಾಜಯಮ್ ॥ ೧೭೦ ॥

ಅ: ಕೃಷ್ಣನ ರಥದಲ್ಲಿ ಕುಳಿತ ಯಾವನೂ ಪರಾಭವ ಹೊಂದಲಾರ, ಅದರಿಂದ ಸಾತ್ಯಕಿ ಕರ್ಣನಿಂದ ಅಲ್ಲಿ ಪರಾಭವವನ್ನು ಹೊಂದಲಿಲ್ಲ.

ವಿ: ಕೃಷ್ಣನ ರಥದಲ್ಲಿ ಕುಳಿತವನು ಅಜೇಯನಾಗುವುದಕ್ಕೆ ಶ್ರೀಕೃಷ್ಣ ಬ್ರಹ್ಮರುದ್ರಾದಿ *ಪ್ರವರ್ತಕನಾಗಿರುವುದೇ ಕಾರಣ ಎಂಬುದನ್ನು ತಿಳಿಸಲು 'ಕೇಶವರಥೇ' ಎಂಬ ಪದವನ್ನು ಪ್ರಯೋಗಿಸಿರುವರು ಎಂದು ತಿಳಿಯಬೇಕು.

ಭೀಮನ ರಹಸ್ಯ ಪ್ರತಿಜ್ಞೆ

ಶಸ್ತ್ರಸಂಗ್ರಹಕಾಲೇ ತು ಕುಮಾರಾಣಾಂ ವ್ರತಂ ಭವೇತ್ ।
ಇತ್ಯುಕ್ತಂ ಜಾಮದಗ್ನ್ಯೇನ ಧನುರ್ವಿದ್ಯಾಪುರಾಕೃತಾ ॥ ೧೭೧ ॥

---

೧೬೯. ಸಂಸ್ಪರ್ಧಯೈವ ಯುಯುಧ ಇತ್ಯತ್ರ ಸಂಸ್ಪರ್ಧಯಾ= ದುರ್ಬಲಮೇವ ಮಮ ಸಮತಯಾ ಯೋದ್ಧುಂ ಪ್ರೇಷಿತವಾನಿತಿ ಅರ್ಜುನೋಪರಿ ಬಹುತರಸ್ಪರ್ಧಯೇತ್ಯರ್ಥಃ। ತೇನ= ಸ್ಪರ್ಧಾಪೂರ್ವಕಯುದ್ಧೇನ ॥ – (ವಾ.)

* 'ಹಿರಣ್ಯಗರ್ಭಃ ಕಃ ಪ್ರೋಕ್ತ ಈಶಃ ಶಂಕರ ಏವ ಚ ।
ಸೃಷ್ಟ್ಯಾದಿನಾ ವರ್ತಯತಿ ತೌ ಯತಃ ಕೇಶವೋ ಭವಾನ್ ॥' – ಗೀತಾಭಾಷ್ಯ (೨/೫೪)

೧೭೧. ಧನುರ್ವಿದ್ಯಾಪುರಾಕೃತೇತ್ಯತ್ರ ಪುರಾಕೃತಾ= ಪ್ರಥಮಕರ್ತ್ರಾ ॥ – (ವಾ.)

ಅ: ಶಸ್ತ್ರವಿದ್ಯಾಭ್ಯಾಸದ ಕಾಲದಲ್ಲಿ ರಾಜಕುಮಾರರು ವ್ರತವೊಂದನ್ನು ಕೈಗೊಳ್ಳಬೇಕು ಎಂದು ಧನುರ್ವಿದ್ಯೆಯನ್ನು ಪ್ರವರ್ತನೆ ಮಾಡಿದ ಪರಶುರಾಮರು ವಿಧಿಸಿರುವರು.

ವಿ: ಭೀಮನನ್ನು ಕರ್ಣ ತೂಬರ ಎಂದು ಕರೆದದ್ದರ ಹಿನ್ನೆಲೆಯನ್ನು ಇಲ್ಲಿಯ ಶ್ಲೋಕಗಳಲ್ಲಿ ವಿಶ್ಲೇಷಿಸುತ್ತಿರುವರು.

ತಚ್ಛತ್ರುವಧರೂಪಂ ಚ ಪೂರ್ವಾಸಿದ್ಧಂ ಚ ಗೂಹಿತಮ್ ।
ಅವಿರುದ್ಧಂ ಚ ಧರ್ಮಸ್ಯ ಕಾರ್ಯಂ ರಾಮಸ್ಯ ತುಷ್ಟಿದಮ್ ॥ ೧೭೨ ॥

ಅನುಪದ್ರವಂ ಚ ಲೋಕಸ್ಯೇತ್ಯತೋ ಭೀಮೋ ವ್ರತಂ ತ್ವಿದಮ್ ।
ಚಕಾರ ತೂಬರೇತ್ಯುಕ್ತೇ ಹನ್ಯಾಮಿತಿ ರಹಃ ಪ್ರಭುಃ ॥ ೧೭೩ ॥

ಅ: ಅಂತಹ ವ್ರತ ಶತ್ರುವಧೆಗೆ ಕಾರಣವಾಗುವಂತಿರಬೇಕು. ಹಿಂದೆ ಇತರರು ಮಾಡದಿದ್ದುದಾಗಿರಬೇಕು, ರಹಸ್ಯವಾಗಿರಬೇಕು, ಧರ್ಮಕ್ಕೆ ಅವಿರುದ್ಧವಾಗಿರಬೇಕು, ಪರಶುರಾಮರಿಗೆ ಪ್ರೀತಿಕರವಾಗಿರಬೇಕು, ಲೋಕಕ್ಕೆ ಹಾನಿಕರವಾಗಿರಬಾರದು ಎಂದು. ಆದ್ದರಿಂದ ತನ್ನನ್ನು ತೂಬರ ಎಂದು ಕರೆದಾಗ ಕೊಲ್ಲುವೆನೆಂದು ಪ್ರಭುವಾದ ಭೀಮಸೇನ ರಹಸ್ಯದಲ್ಲಿ ವ್ರತವನ್ನು ತೊಟ್ಟಿದ್ದ.

---

೧೭೨. ತಚ್ಛತ್ರುವಧರೂಪಂ ತೂಬರೇತಿ ವದಂತಂ ಹನ್ಮೀತಿ ವ್ರತಕರ್ತುಃ ತೂಬರೇತಿ ಕೇನಾಪಿ ನ ವಕ್ತವ್ಯಮಿತಿ ಯನ್ನಿಷೇಧಿತಂ ತಸ್ಯ ಯಃ ಶತ್ರುಃ ವಿಪರೀತಕಾರೀ ತೂಬರೇತಿ ವಕ್ತೇತ್ಯರ್ಥಃ । ತಸ್ಯ ವಧರೂಪಂ ರೂಪಂ = ರೂಪಣಂ ನಿರೂಪಣಂ ಯಸ್ಮಿನ್ ತತ್ ಶತ್ರುವಧರೂಪಂ ವ್ರತಮಿತಿ ಪೂರ್ವೇಣಾನ್ವಯಃ । ಪೂರ್ವಾಸಿದ್ಧಂ= ಪೂರ್ವಂ ಕೇನಾಪಿ ನ ಕೃತಂ ಗೂಹಿತಂ= ಕೇನಾಪ್ಯಜ್ಞಾತಂ ಗೂಹನಾಭಾವೇ ಯಃ ಕೋಽಪಿ ವದಿಷ್ಯತಿ ಚೇತ್ಸರ್ವೋಽಪಿ ಮಾರಣೀಯಃ ಸ್ಯಾದಿತ್ಯತೋ ಗೂಹನಂ ಕಾರ್ಯಮ್ । ಇದಮಪಿ ವ್ರತಸ್ಯ ವಿಶೇಷಣಮ್ । ಧರ್ಮಸ್ಯಾವಿರುದ್ಧಮಿತಿ ವದತಾ ಏಕಾದಶೀಭೋಜನಾದಿವ್ರತಂ ನ ಕಾರ್ಯಮಿತಿ ಸೂಚಿತಮ್ ॥ – (ವಾ.)

೧೭೩. ಭೀಮೋ ಹನ್ಯಾತ್ ತೂಬರಕೇತಿ ಚೋಕ್ತಃ । – (ಕರ್ಣ. ೬೯/೯)

೧೭೩. ಅನುಪದ್ರವಂ = ಪ್ರಾಯಶಃ ಉಪದ್ರವಾಜನಕಮ್ । ವಿದ್ಯಮಾನದೋಷಕಥನೇ ಹನ್ಮೀತಿ ಪ್ರತಿಜ್ಞಾಯಾಂ ಸರ್ವೇಽಪಿ ಬ್ರೂಯುಃ । ಸರ್ವೇಷಾಮಪಿ ಹನನಂ ಸ್ಯಾತ್। ಅವಿದ್ಯಮಾನದೋಷಕಥನೇ ತಸ್ಯ ಹನನಪ್ರತಿಜ್ಞಾಯಾಂ ಅವಿದ್ಯಮಾನತ್ವಾದೇವ ಕೋಽಪಿ ನ ಬ್ರೂಯಾತ್ । ಹನನಂ ಚ ಕಸ್ಯಾಪಿ ನ ಭವೇದಿತಿ ಭಾವೇನ ಅನುಪದ್ರವಮಿತ್ಯುಕ್ತಮ್ ॥ – (ವಾ.)

೧೭೩. ಕಾಲೇಽಷ್ಟಶ್ಮಶ್ರುರ್ನಾ ಚ ತೂಬರೌ । – ಅಮರಕೋಶ

ವಿ : ಶಸ್ತ್ರಾಭ್ಯಾಸಕ್ಕೆ ತೊಡಗುವಾಗ ರಾಜಕುಮಾರರೆಲ್ಲ ಒಂದು ರಹಸ್ಯ ವ್ರತವನ್ನು ತೊಡಬೇಕು ಎಂಬುದು ಇಲ್ಲಿಯ ವಿಶೇಷ. ಅದರಂತೆ ಭೀಮಸೇನ ತನ್ನನ್ನು ತೂಬರ (ಗಡ್ಡ ಮೀಸೆ ಮೂಡದವನು) ಎಂದು ಕರೆದವರನ್ನು ಕೊಲ್ಲುವೆನು ಎಂದು ವ್ರತ ಮಾಡಿದ್ದ ಎಂದರ್ಥ.

ಅನುಪದ್ರವಾಯ ಲೋಕಸ್ಯ ಸುವ್ಯಕ್ತಶ್ಮಶ್ರುಮಂಡಲಃ ।
ಸುಶ್ಮಶ್ರುಂ ಮಾಂ ನ ಕಶ್ಚಿದ್ಧಿ ತಥಾ ಬ್ರೂಯಾದಿತಿ ಸ್ಫುಟಮ್ ।
ತದರ್ಜುನೋ ವಿಜಾನಾತಿ ಸ್ನೇಹಾದ್ಭೀಮೋದಿತಂ ರಹಃ ॥ ೧೭೪ ॥

ಅ: ಸೊಂಪಾಗಿದ್ದ ಗಡ್ಡ ಮೀಸೆಗಳನ್ನು ಹೊಂದಿದ್ದ ಭೀಮ ಲೋಕಕ್ಕೆ ಕೆಡುಕಾಗದಿರಲೆಂದು ಒಳ್ಳೆಯ ಮೀಸೆವುಳ್ಳ ತನ್ನನ್ನು ಯಾವನೂ ಹಾಗೆ ಕರೆಯಲಾರ ಎಂದು ಹಾಗೆ ಪ್ರತಿಜ್ಞೆ ಮಾಡಿದ್ದ. ಅದನ್ನು ಭೀಮಸೇನ ರಹಸ್ಯದಲ್ಲಿ ಪ್ರೀತಿಯಿಂದ ತಿಳಿಸಿದ್ದರಿಂದ ಅರ್ಜುನ ತಿಳಿದಿದ್ದ.

ವಿ : ಭೀಮನಿಗೆ ನಿಜಕ್ಕೂ ಗಡ್ಡ ಮೀಸೆಗಳು ಮೂಡದಿದ್ದಲ್ಲಿ ಜನ ಅವನನ್ನು ಹಾಗೆಯೇ ಕರೆಯುತ್ತಿದ್ದರಿಂದ ಅವರನ್ನೆಲ್ಲ ಭೀಮ ಆಗಲೇ ಕೊಂದಿರುತ್ತಿದ್ದ. ಜೊತೆಗೆ ಸತ್ಯ ನುಡಿದವರನ್ನು ಕೊಂದ ಅಕಾರ್ಯವನ್ನೂ ಮಾಡಿದವನಾಗುತ್ತಿದ್ದ. ಆದ್ದರಿಂದ ಭೀಮಸೇನ ಸೊಂಪಾದ ಗಡ್ಡ ಮೀಸೆಗಳನ್ನು ಹೊಂದಿದವನಾಗಿದ್ದರಿಂದಲೆ ಆ ವ್ರತವನ್ನು ತೊಟ್ಟಿದ್ದ ಎಂದು ತಿಳಿಯಬೇಕು. ಆ ವ್ರತ ಗೋಪ್ಯವಾಗಿರಬೇಕಾದದ್ದೇ ಆದರೂ ಅರ್ಜುನನ ಮೇಲಿನ ಪ್ರೀತಿಯಿಂದಾಗಿ ಅದನ್ನು ತಿಳಿಸಿದ್ದ ಎಂಬುದು ಇಲ್ಲಿಯ ಇನ್ನೊಂದು ವಿಶೇಷ ವಿವರ.

ಅರ್ಜುನನ ರಹಸ್ಯ ಪ್ರತಿಜ್ಞೆ

ಅರ್ಜುನಸ್ಯಾಪಿ ಗಾಂಡೀವಂ ದೇಹೀತ್ಯುಕ್ತೇ ನಿಹನ್ಮಿ ತಮ್ ।
ಇತಿ ತಚ್ಚ ವಿಜಾನಾತಿ ಭೀಮ ಏಕೋ ನ ಚಾಪರಃ ।
ಗಾಂಡೀವಸ್ಯಾಗಮಂ ಪೂರ್ವಂ ಜಾನಾತ್ಯೇವ ಹಿ ನಾರದಾತ್ ॥ ೧೭೫ ॥

---

೧೭೪. ಏತದೇವ ವಿವೃಣೋತಿ ಅನುಪದ್ರವಾಯೇತಿ। ಸುಶ್ಮಶ್ರುಂ ಮಾಂ ಕಶ್ಚಿದಪಿ ತಥಾ = ತೂಬರೇತಿ ಸ್ಫುಟಂ ನ ಬ್ರೂಯಾದಿತಿ ಹಿ = ಹೇತೋಃ ಸುವ್ಯಕ್ತಶ್ಮಶ್ರುಮಂಡಲಃ ಭೀಮಃ ತೂಬರೇತ್ಯುಕ್ತೇ ಹನ್ಮಿತಿ ವ್ರತಂ ರಹಶ್ಚಕಾರೇತಿ ಯೋಜನಾ। ಚುಬುಕಾಗ್ರಶ್ಮಶ್ರುಮಾನ್ ಹಿ ತೂಬರ ಇತ್ಯುಚ್ಯತೇ। ಲೋಕೋತ್ತರಸೌಂದರ್ಯವತ್ಯಾ ದ್ರೌಪದ್ಯಾ-ಶ್ಚಿತ್ತಾಕರ್ಷಣಸಮರ್ಥೇ ಮಯಿ ತಚ್ಚಾಸಂಭಾವಿತಮಿತಿ ಭಾವಃ ॥ – (ವಾ.)

೧೭೫. ವಿದ್ಯಾಭ್ಯಾಸಕಾಲೇ ಗಾಂಡೀವಸ್ಯೈವಾಭಾವಾತ್ ಕಥಮರ್ಜುನಸ್ಯ ಉಕ್ತವ್ರತಮಿತ್ಯತ ಆಹ ಗಾಂಡೀವಸ್ಯೇತಿ ॥ – (ವಾ.)

ಅ: ಗಾಂಡೀವವನ್ನು ಬೇರೆಯವರಿಗೆ ನೀಡು ಎಂದು ಹೇಳಿದವನನ್ನು ಕೊಲ್ಲುವುದು ಅರ್ಜುನನ ಪ್ರತಿಜ್ಞೆಯಾಗಿತ್ತು. ಅವನು ತನಗೆ ಗಾಂಡೀವ ದೊರೆಯುವುದನ್ನು ನಾರದರಿಂದ ಮುಂಚಿತವಾಗಿಯೇ ತಿಳಿದಿದ್ದ. ಅದನ್ನು ಭೀಮನೊಬ್ಬನ ಹೊರತು ಬೇರಾರೂ ತಿಳಿದಿರಲಿಲ್ಲ.

ವಿ: ೧) ಭೀಮನ ವ್ರತ ಹಾಗಿದ್ದಂತೆ ಅರ್ಜುನನ ವ್ರತ ಗಾಂಡೀವವನ್ನು ಮತ್ತೊಬ್ಬರಿಗೆ ಕೊಡು ಎಂದು ಹೇಳಿದವರನ್ನು ಕೊಲ್ಲುವ ಪ್ರತಿಜ್ಞೆಯಾಗಿತ್ತು ಎಂದರ್ಥ. ಆ ವ್ರತವನ್ನು ಅಸ್ತ್ರಾಭ್ಯಾಸ ಪ್ರಾರಂಭದ ಕಾಲದಲ್ಲಿತೊಡಬೇಕು.

೨) ಆಗಿನ್ನೂ ಅರ್ಜುನನಿಗೆ ಗಾಂಡೀವ ಧನುಸ್ಸು ಲಭಿಸಿರಲಿಲ್ಲ ಎಂದ ಮೇಲೆ ಅಂತಹ ವ್ರತವನ್ನು ಆಗಲೇ ತೊಡುವುದು ಅವನಿಗೆ ಹೇಗೆ ಸಾಧ್ಯವಾಯಿತು ಎಂಬ ಪ್ರಶ್ನೆಗೆ ಇಲ್ಲಿ ಉತ್ತರವಿದೆ. ಅವನಿಗೆ ಮುಂದೆ ಗಾಂಡೀವ ಧನುಸ್ಸು ದೊರೆಯುವ ವಿವರ ನಾರದರಿಂದ ತಿಳಿದಿತ್ತು ಎಂದರ್ಥ. ಅರ್ಜುನನ ಆ ವ್ರತದಿಂದಾದ ವಿಶೇಷ ಪರಿಣಾಮದ ವಿವರ ಮುಂದೆ ಕರ್ಣಪರ್ವ–ದಲ್ಲಿ ಬರುವುದು (೨೭/೧೧೧–೧೨೮).

ಪ್ರತಿಜ್ಞಾಂ ಭೀಮಸೇನಸ್ಯ ಬ್ರುವತಃ ಫಲ್ಗುನೇ ರಹಃ ।
ದುರ್ಯೋಧನಸ್ತು ಶುಶ್ರಾವ ತಾಂ ಚ ಕರ್ಣಾಯ ಸೋಽಬ್ರವೀತ್ ॥ ೧೭೬ ॥

ಅ: ಅರ್ಜುನನಿಗೆ ಏಕಾಂತದಲ್ಲಿ ಭೀಮಸೇನ ಹೇಳುತ್ತಿದ್ದಾಗ ಆ ಪ್ರತಿಜ್ಞೆಯನ್ನು ದುರ್ಯೋಧನ ಕದ್ದು ಕೇಳಿದ್ದ. ಅದನ್ನು ಅವನು ಕರ್ಣನಿಗೆ ತಿಳಿಸಿದ್ದ.

ವಿ: ಭೀಮನ ಪ್ರತಿಜ್ಞೆ ದುರ್ಯೋಧನನಿಗೆ ತಿಳಿದದ್ದು ಹೀಗೆ. ದುರ್ಯೋಧನ ಅದನ್ನು ಕರ್ಣನಿಗೆ ತಿಳಿಸಿ ಪ್ರಸಂಗ ಬಂದಾಗ ಭೀಮನನ್ನು ಹಾಗೆ ಮೂದಲಿಸಲು ಹೇಳಿದ್ದ.

ಕರ್ಣನನ್ನು ಕೊಲ್ಲುವ ಅರ್ಜುನನ ಪುನಃಪ್ರತಿಜ್ಞೆ

ಅತೂಬರೋಽಪಿ ತೇನಾಸೌ ತಸ್ಮಾತ್ ತೂಬರ ಇತ್ಯಲಮ್ ।
ಉಕ್ತಃ ಪ್ರಕೋಪನಾಯೈವ ತಸ್ಮಾದರ್ಜುನಮಬ್ರವೀತ್ ॥ ೧೭೭ ॥

ಅ: ತಾನು ತೂಬರನಲ್ಲದಿದ್ದರೂ ತನ್ನನ್ನು ಕೆರಳಿಸಲೆಂದು ತೂಬರ ಎಂದು ಕರ್ಣ ಕರೆದದ್ದರಿಂದ ಭೀಮ ಅರ್ಜುನನಿಗೆ ಹೇಳಿದ .

---

೧೭೭. ಪುನಃ ಪುನಸ್ತೂಬರಕ ಮೂಢ ಔದರಿಕೇತಿ ಚ। –ಇತ್ಯಾದಿ ಕರ್ಣವಚಃ (ದ್ರೋಣ. ೧೩೯/೯೫/೧೦೫)

ವಿ : ಕರ್ಣ ದುರ್ಯೋಧನನ ಮಾತಿನಂತೆ ಭೀಮನನ್ನು ಕೆರಳಿಸಲೆಂದು 'ತೂಬರ' (ತೂಬರಿಕ) ಎಂದು ನುಡಿದ. ಅದರಂತೆ ಭೀಮ ಅವನನ್ನು ಕೊಲ್ಲಬೇಕಾಗುವುದು. ಹಾಗೆ ಕೊಂದಲ್ಲಿ ಅರ್ಜುನನ ಶಪಥ ಸುಳ್ಳಾಗುವುದು. ಕೊಲ್ಲದಿದ್ದಲ್ಲಿ ಭೀಮನ ಶಪಥ ಸುಳ್ಳಾಗುವುದು. ಹೀಗೆ ಅವರನ್ನು ಧರ್ಮಸಂಕಟಕ್ಕೆ ಸಿಕ್ಕಿಸುವುದು ಅವನ ವಿಚಾರವಾಗಿತ್ತು. ಹಾಗೆ ಸಿಕ್ಕಿಸಲೆಂದು ಅವನು ತನ್ನ ಪ್ರಾಣವನ್ನೇ ಪಣವನ್ನಾಗಿಟ್ಟಿದ್ದು ಎಂತಹ ವಿಪರ್ಯಾಸ ಎಂಬುದನ್ನು ಗಮನಿಸಬೇಕು. ಅಂತೂ ಕರ್ಣ ಹಾಗೆ ನುಡಿಯುವ ಮೂಲಕ ತನ್ನ ಸಾವನ್ನು ಮತ್ತಷ್ಟು ಖಚಿತಪಡಿಸಿಕೊಂಡ ಎಂಬುದು ಮಾತ್ರ ಅತ್ಯಂತ ಸ್ಪಷ್ಟ. ದುರ್ಯೋಧನನ ಪ್ರೀತಿಗೆಂದು ಬಾಳುವವರಿಗೆಲ್ಲ ದೊರೆಯುವ ಗತಿ ಅದೊಂದೇ.

ಜಾನಾಸಿ ಮತ್ಪ್ರತಿಜ್ಞಾಂ ತ್ವಂ ತ್ವತ್ಪ್ರತಿಜ್ಞಾಮಹಂ ತಥಾ ।
ತತ್ರ ಹಂತವ್ಯತಾಂ ಪ್ರಾಪ್ತೋ ಮಮ ವೈಕರ್ತನೋಽತ್ರ ಹಿ ॥ ೧೭೮ ॥

ಪ್ರತಿಜ್ಞಾತೋ ವಧಶ್ಚಾಸ್ಯ ತ್ವಯಾಽಪಿ ಮದನುಜ್ಞಯಾ ।
ಅತಸ್ತ್ವಯಾ ಮಯಾ ವಾಽಯಂ ಹಂತವ್ಯಃ ಸೂತನಂದನಃ ॥ ೧೭೯ ॥

ಅ: ನೀನು ನನ್ನ ಪ್ರತಿಜ್ಞೆಯನ್ನು ತಿಳಿದಿರುವಿ, ಅದರಂತೆ ನಾನು ನಿನ್ನ ಪ್ರತಿಜ್ಞೆಯನ್ನೂ ತಿಳಿದಿರುವೆ. ಕರ್ಣನೀಗ ಇಲ್ಲಿ ನನಗೆ ವಧ್ಯನಾಗಿರುವನು. ನನ್ನ ಅನುಜ್ಞೆಯಂತೆ ನಿನ್ನಿಂದಲೂ

---

೧೭೯. ಪ್ರತಿಜ್ಞಾತೋ ವಧಶ್ಚಾಸ್ಯೇತ್ಯತ್ರ ಅಸ್ಯ = ಕರ್ಣಸ್ಯ ವಧಃ ಮದನುಜ್ಞಯಾ ತ್ವಯಾ ಪ್ರತಿಜ್ಞಾತಃ = ದ್ಯೂತಕಾಲೇ ತ್ವಯಾ ಪ್ರತಿಜ್ಞಾತಃ । ಅತಃ = ಮದನುಜ್ಞಯಾ ತ್ವಯಾ ಕರ್ಣಹನನಸ್ಯ ಪ್ರತಿಜ್ಞಾತತ್ವೇನ ಕರ್ಣಹನನಪ್ರತಿಜ್ಞಾಯಾಃ ಸಾಕ್ಷಾತ್ ತ್ವತ್ಕೃತತ್ವಾತ್ ಪರಂಪರಯಾ ಮತ್ಕೃತತ್ವಾತ್ ತ್ವಯಾ ವಾ ಮಯಾ ವಾ ಕರ್ಣಃ ಹನನೀಯಃ । ತೂಬರೇತಿ ಪ್ರತಿಜ್ಞಾಯಾಃ ಸಾಮಾನ್ಯರೂಪತ್ವಾತ್ ತ್ವತ್ಕೃತಪ್ರತಿಜ್ಞಾಯಾಃ ವಿಶೇಷರೂಪತ್ವಾತ್ ಸಾಮಾನ್ಯಸ್ಯ ವಿಶೇಷೇಣಾಪೋ ಮದನುಜ್ಞಯಾ ಕೃತತ್ವತ್ಪ್ರತಿಜ್ಞಾಯಾ ಅಪಿ ಮತ್ಕೃತಪ್ರತಿಜ್ಞಾತ್ವಾತ್ ಸಾಕ್ಷಾತ್ಕರ್ಣಂ ಹನ್ಮಾಮಿತಿ ತ್ವತ್ಕೃತಪ್ರತಿಜ್ಞಾರಕ್ಷಣಾಯ *ಮದಂಶಾವಿಷ್ಟೇನ (೧೨/೧೨೯) ತ್ವಯೈವ ಕರ್ಣಹನನೇ ಉಭಯೋರಪಿ ಪ್ರತಿಜ್ಞಾ ಸಫಲಾ ಸ್ಯಾದಿತಿ ಭಾವಃ। ಅತ ಏವ ತ್ವಯೇತಿ ವಿಕಲ್ಪಾರ್ಥವಾಶಬ್ದಂ ವಿಹಾಯೈವ ಪ್ರಥಮಮುಕ್ತ್ವಾ ಮಯಾ ವೇತಿ ವಾಶಬ್ದೇನಾಸ್ವರಸಂ ಸೂಚಯತಾ ಮಯಾ ವೇತಿ ಪಶ್ಚಾದುಕ್ತಮ್ ॥ – (ವಾ.)

೧೭೯. ಕರ್ಣಸ್ಯ ವಚನಂ ಶ್ರುತ್ವಾ ಭೀಮಸೇನೋಽತಿದಾರುಣಮ್ ।
ಉವಾಚ ಕರ್ಣಂ ಪ್ರಹಸನ್ ಸರ್ವೇಷಾಂ ಶೃಣ್ವತಾಂ ವಚಃ ॥
ಜಿತಸ್ತ್ವಮಸಕೃದ್ ದುಷ್ಟಕತ್ಥನೇ ಕಿಂ ವೃಥಾಽತ್ಮನಾ ॥ – ಭಾರತ (ದ್ರೋಣ.೧೩೯/೧೦೬,೧೦೭)

---

* ಪರೋಕ್ಷಂ ಯಚ್ಚಸೌಭದ್ರೋ ಯುಷ್ಮಾಭಿರ್ನಿಹತೋ ಮಮ ॥
ಹಂತಾಸ್ಮಿ ವೃಷಸೇನಂ ತೇ ಪ್ರೇಕ್ಷಮಾಣಸ್ಯ ಸಂಯುಗೇ ॥ – ಭಾರತ (ದ್ರೋಣ. ೧೪೮/೧೭,೨೦)

ಇವನ ವಧೆಯ ಪ್ರತಿಜ್ಞೆ ಆಗಿದೆ. ಆದ್ದರಿಂದ ಈಗ ನಾನಾಗಲೀ, ನೀನಾಗಲೀ ಈ ಸೂತಪುತ್ರನಾದ ಕರ್ಣನನ್ನು ಕೊಲ್ಲಲೇ ಬೇಕಾಗಿದೆ.

ವಿ : ಭೀಮ ಸ್ಪಷ್ಟವಾಗಿ ತನ್ನ ನಿಲುವನ್ನು ಇಲ್ಲಿ ತಿಳಿಸುವನು. ಕರ್ಣ ತೂಬರ ಎಂದು ಕರೆಯುವ ಮೂಲಕ ವಧ್ಯನಾಗಿರುವನು. ಆದ್ದರಿಂದ ಇಬ್ಬರಲ್ಲಿ ಒಬ್ಬರು ಅವನನ್ನು ಕೊಲ್ಲುವುದು ಅನಿವಾರ್ಯ ಎಂದರ್ಥ. ತೂಬರ ಎಂದು ಕರೆಯುವವನನ್ನು ಕೊಲ್ಲುವೆನು ಎಂಬುದು ಭೀಮನ ಸಾಮಾನ್ಯ ಪ್ರತಿಜ್ಞೆ; ಕರ್ಣನನ್ನೇ ಕೊಲ್ಲುವೆನು ಎಂಬುದು ಅರ್ಜುನನ ವಿಶೇಷ ಪ್ರತಿಜ್ಞೆ. ಅರ್ಜುನನ ಪ್ರತಿಜ್ಞೆ ಕೈಕೊಂಡದ್ದು ಭೀಮನ ಆದೇಶದಂತೆ ಎಂಬುದು ಮತ್ತೊಂದು ವಿಶೇಷ. ಆದ್ದರಿಂದ ಕರ್ಣನ ವಧೆಯನ್ನು ಅರ್ಜುನ ಮಾಡುವುದೇ ಹೆಚ್ಚು ಉಚಿತ. ಅವನಲ್ಲಿ ವಾಯುವಿನ ಆವೇಶ–ವಿರುವುದರಿಂದ ಅವನು ಕೊಂದಲ್ಲಿ ಭೀಮನೇ ಕೊಂದಂತಾಗುವುದರಿಂದ ಭೀಮನ ಪ್ರತಿಜ್ಞೆಯೂ ನೆರವೇರುವುದು ಎಂಬ ವಿಶೇಷ ಕಾರಣದಿಂದ ಭೀಮ ಆ ರೀತಿಯಾಗಿ ಅರ್ಜುನನಿಗೆ ತಿಳಿಸುವನು ಎಂಬ ವಿಶೇಷ ವಿವರಗಳು ವಾದಿರಾಜೀಯದಿಂದ ತಿಳಿಯುವವು.

ಇತ್ಯುಕ್ತೋ ವಾಸವಿಃ ಪ್ರಾಹ ಹಂತವ್ಯೋಽಯಂ ಮಯೈವ ಹಿ ।
ತ್ವದೀಯೋಽಹಂ ಯತಸ್ತೇನ ಮತ್ಕೃತಂ ತ್ವತ್ಕೃತಂ ಭವೇತ್ ॥ ೧೮೦ ॥

ಅ: ಭೀಮ ಹೀಗೆನ್ನಲು ಅರ್ಜುನ ಕೇಳಿಕೊಂಡ - ಇವನನ್ನು ನಾನೇ ಕೊಲ್ಲುವೆ, ನಾನು ನಿನ್ನವನಾದ್ದರಿಂದ ನಾನು ಮಾಡಿದ್ದು ನೀನು ಮಾಡಿದಂತೆಯೇ ಆಗುವುದು.

ನ ತ್ವತ್ಕೃತಂ ಮತ್ಕೃತಂ ಸ್ಯಾತ್ ಗುರುರ್ಮಮ ಯತೋ ಭವಾನ್ ।
ಅತೋ ಮಯೈವ ಹಂತವ್ಯ ಇತ್ಯುಕ್ತ್ವಾ ಕರ್ಣಮಬ್ರವೀತ್ ॥ ೧೮೧ ॥

ಅ: ಆದರೆ ನೀನು ಮಾಡಿದ್ದು ನಾನು ಮಾಡಿದಂತಾಗುವುದಿಲ್ಲ, ನೀನು ಹಿರಿಯನಾದವ-ನಲ್ಲವೇ, ಆದ್ದರಿಂದ ಇವನನ್ನು ನಾನೇ ಕೊಲ್ಲುವೆ ಎಂದು ಹೇಳಿ ಕರ್ಣನಿಗೆ ತಿಳಿಸಿದ.

ವಿ : ಭೀಮಾರ್ಜುನರಲ್ಲಿ ಭೀಮ ಅಣ್ಣನಾಗಿಯೂ ಹಿರಿಯ, ವಾಯುವಾಗಿ ಸ್ವರೂಪದಲ್ಲಿಯೂ ಹಿರಿಯ. ಗುರು ಶಿಷ್ಯರಲ್ಲಿ ಶಿಷ್ಯ ಮಾಡಿದ್ದು ಗುರುವಿಗೆ ಸೇರುವಂತೆ, ಗುರು ಮಾಡಿದ್ದು ಶಿಷ್ಯನಿಗೆ ಸೇರಲಾರದು. ಆದ್ದರಿಂದ ಭೀಮನಿಗೆ ತಮ್ಮ ಮಾತ್ರವಲ್ಲದೇ ಶಿಷ್ಯನೂ ಆಗಿರುವ ಅರ್ಜುನ ಕರ್ಣನನ್ನು ಕೊಂದಲ್ಲಿ ಅವನ ಪ್ರತಿಜ್ಞೆ ಮಾತ್ರವಲ್ಲದೇ ಭೀಮನ ಪ್ರತಿಜ್ಞೆಯೂ ಈಡೇರುವುದು.

---

೧೮೦. ತ್ವದೀಯ ಇತ್ಯುಪಲಕ್ಷಣಮ್ । ತ್ವದಂಶೇನಾವಿಷ್ಟಶ್ಚೇತ್ಯಪಿ ದ್ರಷ್ಟವ್ಯಮ್ ॥ – (ವಾ.)

ಹಾಗೆ ಮಾಡದೇ ಹಿರಿಯನಾದ ಭೀಮನೇ ಕರ್ಣನನ್ನು ಕೊಂದಲ್ಲಿ ಕಿರಿಯನಾದ ಅರ್ಜುನನ ಪ್ರತಿಜ್ಞೆ ವ್ಯರ್ಥವಾಗುವುದು. ಆದ್ದರಿಂದ ಕಿರಿಯನಾದ ತಾನೇ ಕರ್ಣನನ್ನು ಕೊಲ್ಲುವುದು ಉಚಿತ, ಆ ಅವಕಾಶವನ್ನು ತನಗೇ ನೀಡಬೇಕೆಂದು ಅರ್ಜುನ ಪ್ರಾರ್ಥಿಸಿಕೊಂಡ ಎಂದು ಭಾವ. ಅರ್ಜುನನಲ್ಲಿ ವೀರನಾಮಕ ವಾಯುದೇವರ ಆವೇಶವು ಇರುವುದರಿಂದಲೂ, ಅರ್ಜುನ ಕೊಂದರೆ ಭೀಮ ಕೊಂದಂತೆಯೇ ಆಗುವುದು ಮತ್ತೊಂದು ವಿಶೇಷ (೧೨/೧೨೯).

ಕರ್ಣಪುತ್ರನ ವಧೆಗೆ ಅರ್ಜುನನ ಪ್ರತಿಜ್ಞೆ

ರೂಕ್ಷಾ ವಾಚಃ ಶ್ರಾವಿತೋಽಯಂ ಭೀಮಃ ಕೃಷ್ಣಸ್ಯ ಶೃಣ್ವತಃ ।
ಯಚ್ಚಾಭಿಮನ್ಯುರ್ಯುಷ್ಮಾಭಿರೇಕಃ ಸಂಭೂಯ ಪಾತಿತಃ ॥ ೧೮೨ ॥

ಅ: ಭೀಮನಿಗೆ ನೀನು ಕೃಷ್ಣನು ಕೇಳುತ್ತಿದ್ದಂತೆಯೇ ಕೆಟ್ಟ ಮಾತುಗಳನ್ನು ನುಡಿದಿರುವಿ, ಅದರಂತೆಯೇ ನೀವೆಲ್ಲಾ ಸೇರಿ ಒಂಟಿಯಾದ ಅಭಿಮನ್ಯುವನ್ನು ಕೊಂದಿರುವಿರಿ.

ಅತಸ್ತ್ವಾಂ ನಿಹನಿಷ್ಯಾಮಿ ತ್ವತ್ಪುತ್ರಂ ಚ ತವಾಗ್ರತಃ ।
ಇತ್ಯುಕ್ತೋಽನ್ಯರಥಂ ಪ್ರಾಪ್ಯ ಕರ್ಣ ಆವೀಜ್ಜಯದ್ರಥಮ್ ॥ ೧೮೩ ॥

ಅ: 'ಆದ್ದರಿಂದ ನಾನು ನಿನ್ನನ್ನು ಕೊಲ್ಲುವೆ; ನಿನ್ನೆದುರೇ ನಿನ್ನ ಮಗನನ್ನೂ ಕೊಂದುಹಾಕುವೆ'. ಅರ್ಜುನ ಹೀಗೆ ನುಡಿಯಲು ಕರ್ಣ ಬೇರೊಂದು ರಥವನ್ನೇರಿ ಜಯದ್ರಥನನ್ನು ರಕ್ಷಿಸಲೆಂದು ತೆರಳಿದ.

ಅರ್ಜುನ ಅಶ್ವತ್ಥಾಮರ ಯುದ್ಧ

ದ್ರೌಣಿಕರ್ಣಾಭಿಗುಪ್ತಂ ತಂ ನಾಶಕದ್ಧಂತುಮರ್ಜುನಃ ।
ತತ್ರ ವೇಗಂ ಪರಂ ಚಕ್ರೇ ದ್ರೌಣಿಃ ಪಾರ್ಥನಿವಾರಣೇ ॥ ೧೮೪ ॥

ಅ: ಅಶ್ವತ್ಥಾಮ ಕರ್ಣರಿಂದ ರಕ್ಷಿತನಾದ ಜಯದ್ರಥನನ್ನು ಸಂಹರಿಸಲು ಅರ್ಜುನನಿಗೆ ಸಾಧ್ಯವಾಗಲಿಲ್ಲ. ಆಗ ಅಶ್ವತ್ಥಾಮ ಅರ್ಜುನನನ್ನು ತಡೆಯಲೆಂದು ಹೆಚ್ಚಿನ ಪ್ರಯತ್ನವನ್ನು ಮಾಡತೊಡಗಿದ.

---

೧೮೪. ವೇಗಂ ಚಮತ್ಕಾರಮ್ । –(ವ.)

ನ ಚೈನಮಶಕತ್ ತರ್ತುಂ ಯತ್ನವಾನಪಿ ಫಲ್ಗುನಃ ।
ತಯೋರಾಸೀಚ್ಚಿರಂ ಯುದ್ಧಂ ಚಿತ್ರಂ ಲಘು ಚ ಸುಷ್ಠು ಚ ॥ ೧೮೫ ॥

ಅ: ಅರ್ಜುನನಿಗೆ ಎಷ್ಟೇ ಪ್ರಯತ್ನಿಸಿದರೂ ಅಶ್ವತ್ಥಾಮನನ್ನು ದಾಟಿ ಹೋಗಲು ಸಾಧ್ಯವಾಗಲಿಲ್ಲ. ಅವರಿಬ್ಬರಿಗೂ ರೋಚಕವಾದ ಪುಟ್ಟಯುದ್ಧ ಬಹುಹೊತ್ತು ನಡೆಯಿತು.

ವಿ : ಇಂದ್ರಾವತಾರನಾದ ಅರ್ಜುನನಿಗೆ ತನಗಿಂತ ತುಂಬಾ ಮಿಗಿಲಾದ ರುದ್ರಾವತಾರನಾದ ಅಶ್ವತ್ಥಾಮನನ್ನು ದಾಟಿ ಮುಂದೆಹೋಗಲು ಸಾಧ್ಯವಾಗದ್ದು ತೀರಾ ಸಹಜವೇ ಆದುದು.

ರಾತ್ರಿಯಾದ ಹಗಲು

ತದ್ದೃಷ್ಟ್ವಾ ಭಗವಾನ್ ಕೃಷ್ಣೋ ಲೋಹಿತಾಯತಿ ಭಾಸ್ಕರೇ ।
ಅಜಿತೇ ದ್ರೋಣತನಯೇ ತ್ವಹತೇ ಚ ಜಯದ್ರಥೇ ।
ಅರ್ಜುನಸ್ಯ ಜಯಾಕಾಂಕ್ಷೀ ಸಸರ್ಜ ತಮ ಊರ್ಜಿತಮ್ ॥ ೧೮೬ ॥

ಅ: ಭಗವಂತನಾದ ಕೃಷ್ಣ ಅದನ್ನು ನೋಡಿದ, ಸೂರ್ಯ ಕೆಂಪಾಗುತ್ತಿದ್ದ. ಅಶ್ವತ್ಥಾಮ ಸೋಲುವಂತಿರಲಿಲ್ಲ, ಜಯದ್ರಥನ ವಧೆ ನಡೆದಿರಲಿಲ್ಲ. ಅದರಿಂದ ಅರ್ಜುನನಿಗೆ ಜಯವನ್ನು ಬಯಸಿದವನಾಗಿ ಗಾಢವಾದ ಕತ್ತಲೆಯನ್ನು ಸೃಷ್ಟಿಸಿದ.

ವಿ : ೧) ಕೃಷ್ಣ ಆಗ ಅರ್ಜುನನ ಪ್ರತಿಜ್ಞೆಯನ್ನು ನೆರವೇರಿಸಲೆಂದು ಇನ್ನೂ ಸೂರ್ಯನಿರುವಾಗಲೇ ಸೂರ್ಯ ಮುಳುಗಿದಂತಹ ಕತ್ತಲೆಯ ವಾತಾವರಣವನ್ನು ಸೃಷ್ಟಿಸಿದ ಎಂದರ್ಥ.

೨) ಆಚಾರ್ಯರು ಸ್ಪಷ್ಟವಾಗಿ ತಿಳಿಸಿರುವಂತೆ ಕೃಷ್ಣ ಆಗ ನೇರವಾಗಿ ಕತ್ತಲೆಯನ್ನೇ ಸೃಷ್ಟಿಸಿದ, ಆದರೆ ಕುಮಾರವ್ಯಾಸ ಭಾರತದಲ್ಲಿ ಕೃಷ್ಣ ಸುದರ್ಶನ ಚಕ್ರವನ್ನು ಸೂರ್ಯನಿಗೆ ಅಡ್ಡ ಹಿಡಿದು ಮರೆಮಾಡಿದ ಎಂದಿದೆ :

ಸಲಿಸಬೇಹುದು ಭಕುತ ಮಾಡಿದ
ಫಲದ ಭಾಷೆಯನೆನುತ ರವಿಮಂ-
ಡಲಕೆ ಮರೆಯೊಡ್ಡಿದನು ಮುರರಿಪು ವರಸುದರ್ಶನವ । – (ದ್ರೋಣ. ಸಂ.೧೪, ಪದ್ಯ ೩೫)

---

೧೮೬. ತತೋऽಸೃಜತ್ ತಮಃ ಕೃಷ್ಣಃ ಸೂರ್ಯಸ್ಯಾವರಣಂ ಪ್ರತಿ ।
ಯೋಗೀ ಯೋಗೇನ ಸಂಯಕ್ತೋ ಯೋಗಿನಾಮೀಶ್ವರೋ ಹರಿಃ ॥ – ಭಾರತ (ದ್ರೋಣ. ೧೪೬/೬೭)

ಕೆಲವು ಮಹಾಭಾರತದ ಪ್ರತಿಗಳಲ್ಲೂ ಚಕ್ರದಿಂದಲೇ ಕತ್ತಲೆ ಸೃಷ್ಟಿಯಾದಂತೆ ಉಲ್ಲೇಖವುಂಟು :

ಸಸ್ಮಾರ ಚಕ್ರಂ ದೈತ್ಯಾರಿರ್ಹರಿಶ್ಚಕ್ರಂ ಸುದರ್ಶನಮ್ ।
ತದಾದಿದೇಶ ಭಗವಾನ್ ಸೃತಮಾತ್ರಮುಪಸ್ಥಿತಮ್ ॥
ಅಸ್ತಂ ಗತಮಿವಾದಿತ್ಯಂ ತಮಸಾ ಛಾದಯೇತಿ ವೈ । ...
ಅಂಧಂ ತಮ ಇವಾಜ್ಞಾನಮಾದಿತ್ಯಸ್ಯಾಹರತ್ ಪ್ರಭಾಮ್ ॥

ಅದು ನಿರ್ಣಯಕ್ಕೆ ವಿರುದ್ಧವಾದ್ದರಿಂದ ಮುಖ್ಯಾರ್ಥದಲ್ಲಿ ಅಗ್ರಾಹ್ಯವೆಂದೇ ತಿಳಿಯಬೇಕು. ಆದರೆ, ಚಕ್ರಕ್ಕೆ ತಮೋಭಿಮಾನಿನಿಯಾದ ದುರ್ಗಾದೇವಿ ಅಭಿಮಾನಿನಿಯಾದ್ದರಿಂದ ದುರ್ಗೆಯ ಮೂಲಕ ಕೃಷ್ಣ ತಮಸ್ಸನ್ನು ಸೃಷ್ಟಿಸಿದನು ಎಂದು ಗೌಣಾರ್ಥವನ್ನು ಮಾಡಿ ಆ ಪಾಠವನ್ನು ಕೂಡಿಸಬಹುದು. ನಿರ್ಣಯೋಕ್ತವಾದ ವಿವರವೇ ಮಹಾಭಾರತದ ಪೂನಾ ಭಂಡಾರ್ಕರ್ ಸಂಸ್ಥೆಯ ಸಂಶೋಧಿತಪ್ರತಿಯಲ್ಲೂ ಬಂದಿದೆ ಎಂಬುದು ಗಮನಾರ್ಹ.

೩) ಕೆಲವು ಆಧುನಿಕ ವಿಮರ್ಶಕರು ಅದೊಂದು ಪೂರ್ಣ ಸೂರ್ಯಗ್ರಹಣದ ಪ್ರಸಂಗ ಎಂದು ಭ್ರಮಿಸಿ ಅದನ್ನು ಮಹಾಭಾರತದ ಕಾಲನಿರ್ಣಯಕ್ಕೆ ಆಧಾರವನ್ನಾಗಿ ಭಾವಿಸುವುದುಂಟು. ಅದು ಸರಿಯಲ್ಲ, ಅಂದು ಪೂರ್ಣ ಸೂರ್ಯಗ್ರಹಣವಾಗಲು ಅಮಾವಾಸ್ಯೆ ತಿಥಿಯಾಗಿರಬೇಕಿತ್ತು. ಆದರೆ, ಅಂದು ಮಧ್ಯರಾತ್ರಿ ಕಳೆದ ಕೆಲವು ಸಮಯದ ನಂತರ ಚಂದ್ರೋದಯವಾದ ವಿವರ ಮಹಾಭಾರತದಲ್ಲಿದೆ(ದ್ರೋಣ.೧೮೪/೪೬). ಅಂದು ಅಮಾವಾಸ್ಯೆಯಾಗಿರುವ ಸಂಭವ ಸ್ವಲ್ಪ-ಮಾತ್ರಕ್ಕೂ ಇಲ್ಲ. ಅಲ್ಲದೇ ಮಹಾಭಾರತದ ಯುದ್ಧದ ಕೊನೆಯಾದದ್ದು ಅಮಾವಾಸ್ಯೆ ಎಂದಿರುವುದರಿಂದ ಹದಿನಾಲ್ಕನೆಯ ದಿನವಾದ ಅಂದು ಅಮಾವಾಸ್ಯೆಯಾಗಿರುವ ಸಂಭವ ಅಸಾಧ್ಯ. ಹೀಗೆ ಇದೊಂದು ಪೂರ್ಣ ಸೂರ್ಯಗ್ರಹಣದ ಪ್ರಸಂಗವಾಗಿದ್ದ ಸಾಧ್ಯತೆ ಅತ್ಯಂತ ಅಸಂಗತ ಎಂದು ತಿಳಿಯಬೇಕು.

ಕೌರವರ ಹರ್ಷ

ತಮೋವ್ಯಾಪ್ತೇ ಗಗನೇ ಸೂರ್ಯಮಸ್ತಂ
ಗತಂ ಮತ್ವಾ ದ್ರೌಣಿಪೂರ್ವಾಃ ಸಮಸ್ತಾಃ ।
ವಿಶಶ್ರಮುಃ ಸೈಂಧವಶ್ಚಾರ್ಜುನಸ್ಯ
ಹತಪ್ರತಿಜ್ಞಸ್ಯ ಮುಖಂ ಸಮೈಕ್ಷತ ॥ ೧೮೭ ॥

---

೧೮೭. ಸೃಷ್ಟೇ ತಮಸಿ ಕೃಷ್ಣೇನ ಗತೋಽಸ್ತಮಿತಿ ಭಾಸ್ಕರಃ ।
ತ್ವದೀಯಾ ಜಹೃಷುರ್ಯೋಧಾಃ ..... – ಭಾರತ (ದ್ರೋಣ. /೧೪೬/೬೮)

ಅ: ಗಗನದಲ್ಲೆಲ್ಲಾ ಕತ್ತಲೆ ತುಂಬಿಹೋಗಲು ಸೂರ್ಯ ಮುಳುಗಿದನೆಂದು ತಿಳಿದು ದ್ರೋಣ ಮೊದಲಾದ ಎಲ್ಲರೂ ವಿಶ್ರಾಂತಿ ಹೊಂದಿದರು. ಸೈಂಧವನೂ ಸಹ ಅರ್ಜುನ ಭ್ರಷ್ಟ ಪ್ರತಿಜ್ಞನಾದ ಎಂದು ಭಾವಿಸಿ ಅವನ ಮುಖವನ್ನು ನೋಡಲು ಆಗಮಿಸಿದ.

ವಿ: ಸೂರ್ಯ ಮುಳುಗುವ ಮುನ್ನ ಜಯದ್ರಥನನ್ನು ಕೊಲ್ಲುವ ಅರ್ಜುನನ ಪ್ರತಿಜ್ಞೆ ಸುಳ್ಳಾಯಿತು ಎಂದು ತಿಳಿದು ಅಶ್ವತ್ಥಾಮ ಮೊದಲಾದವರೆಲ್ಲಯುದ್ಧದಿಂದ ವಿಶ್ರಾಂತಿ ಹೊಂದಿದರು. ಸೈಂಧವನೂ ಹಾಗೆಯೇ ಭಾವಿಸಿ ಅರ್ಜುನನ ಕಳೆಗುಂದಿದ ಮುಖವನ್ನು ನೋಡಿ ಆನಂದಿಸಲೆಂದು ಅಲ್ಲಿ ಕಾಣಿಸಿಕೊಂಡ.

ಅರ್ಜುನನಿಂದ ಜಯದ್ರಥನ ವಧೆ

ತದಾ ಹರೇರಾಜ್ಞಯಾ ಶಕ್ರಸೂನು-
ಶ್ಚಕರ್ತ ಬಾಣೇನ ಜಯದ್ರಥಸ್ಯ ।
ಅಗ್ನಿಂ ವಿವಿಕ್ಷನ್ನಿವ ದರ್ಶಿತಃ ಶಿರ-
ಸ್ತದಾ ವಚಃ ಪ್ರಾಹ ಜನಾರ್ದನಸ್ತಮ್ ॥ ೧೮೮ ॥

ಅ: ಆಗ ಶ್ರೀಕೃಷ್ಣನ ಅಪ್ಪಣೆಯಂತೆ, ಅಗ್ನಿಯನ್ನು ಪ್ರವೇಶಿಸುವಂತೆ ನಟಿಸುತ್ತಾ ಅರ್ಜುನ ಬಾಣದಿಂದ ಜಯದ್ರಥನ ತಲೆಯನ್ನು ಕತ್ತರಿಸಿದ. ಆಗ ಶ್ರೀಕೃಷ್ಣ ಅವನಿಗೆ ತಿಳಿಸಿದ :

ನೈತಚ್ಛಿರಃ ಪಾತಯ ಭೂತಲೇ ತ್ವ-
ಮಿತೀರಿತಃ ಪಾಶುಪತಾಸ್ತ್ರತೇಜಸಾ ।
ದಧಾರ ಬಾಣೈರನುಪುಂಖಪುಂಖೈಃ
ಪುನಸ್ತಮೂಚೇ ಗರುಡಧ್ವಜೋ ವಚಃ ॥ ೧೮೯ ॥

ಅ: 'ಇವನ ತಲೆಯನ್ನು ಭೂಮಿಯ ಮೇಲೆ ಬೀಳಿಸಬೇಡ'. ಶ್ರೀಕೃಷ್ಣ ಹಾಗೆನ್ನುತ್ತಲೇ ಪಾಶುಪತಾಸ್ತ್ರದ ಸಾಮರ್ಥ್ಯದಿಂದ ಅರ್ಜುನ ಪುಂಖಾನುಪುಂಖ ಬಾಣಗಳಿಂದ ಅದನ್ನು ಗಗನದಲ್ಲಿಯೇ ತಡೆದ. ಆಗ ಗರುಢಧ್ವಜನಾದ ಶ್ರೀಕೃಷ್ಣ ಮತ್ತೆ ಹೇಳಿದ :

---

೧೮೮. ಅಗ್ನಿಂ ವಿವಿಕ್ಷನ್ ಇತ್ಯತ್ರ ದರ್ಶಿತಃ= ಪರೈರ್ದೃಷ್ಟಃ ॥ – (ವಾ.)

೧೮೯. ಅನುಪುಂಖಪುಂಖೈರಿತ್ಯತ್ರ ಪುಂಖಪದೇನ ಶರಮೂಲಂ ಕಥ್ಯತೇ। ಪುಂಖಮನು ವರ್ತಮಾನೈಃ ಅನುಪುಂಖ-ಪುಂಖೈಃ ॥ – (ವಾ.)

ಅರ್ಜುನನಿಂದ ವೃದ್ಧಕ್ಷತ್ರನ ವಧೆ

ಇದಂ ಪಿತುಸ್ತಸ್ಯ ಕರೇ ನಿಪಾತ್ಯತಾಂ
ವರೋ ಹಿ ದತ್ತೋಽಸ್ಯ ಪುರಾಽಮುನಾ ಯತ್ ।
ಶಿರೋ ನಿಕೃತ್ತಂ ಭುವಿ ಪಾತಯೇದ್ಯ-
ಸ್ತವಾಸ್ಯ ಭೂಯಾಚ್ಚತಶಿರಃ ಸಹಸ್ರಧಾ ॥ ೧೯೦ ॥

ಅ: ಇದನ್ನು ಅವನ ತಂದೆಯ ಕೈಯಲ್ಲಿ ಬೀಳಿಸು, ಅವನು ಇವನಿಗೆ ವರ ನೀಡಿರುವನು : ನಿನ್ನ ಕತ್ತರಿಸಿದ ತಲೆಯನ್ನು ಯಾವನು ನೆಲದ ಮೇಲೆ ಬೀಳಿಸುವನೋ ಅವನ ತಲೆ ಸಾವಿರ ಹೋಳಾಗಲಿ ಎಂದು.

ವಿ: ಜಯದ್ರಥನ ತಂದೆ ವೃದ್ಧಕ್ಷತ್ರ. ಅವನು ಜಯದ್ರಥನನ್ನು ಇತರರು ಯುದ್ಧದಲ್ಲಿ ಕೊಲ್ಲದಿರಲಿ ಎಂದು ವಿಚಿತ್ರವಾದ ವರ ನೀಡಿದ್ದ – ಅವನ ತಲೆಯನ್ನು ಕೆಳಗೆ ಬೀಳಿಸುವವರ ತಲೆ ಸಾವಿರಾರು ಹೋಳಾಗಿ ಸಿಡಿಯಲಿ ಎಂದು. ಆ ಭಯದಿಂದ ಯಾರೂ ಅವನನ್ನು ಕೊಲ್ಲುವ ಪ್ರಯತ್ನವನ್ನು ಮಾಡಲಾರರು ಎಂದು ಅವನ ವರದ ಭಾವವಾಗಿತ್ತು.

ಇತಿ ಸ್ಮ ವಧ್ಯಃ ಸ ಪಿತಾಽಪಿ ತೇನೇ-
ತ್ಯುದೀರಿತೇ ತಸ್ಯ ಸಂಧ್ಯಾಕ್ರಿಯಸ್ಯ ।
ಅಂಕೇ ವ್ಯಧಾತ್ ತಚ್ಛಿರ ಆಶು ವಾಸವಿಃ
ಸ ಸಂಭ್ರಮಾತ್ ತದ್ಭುವಿ ಚ ನ್ಯಪಾತಯತ್ ॥ ೧೯೧ ॥

---

೧೯೦. ಪುರಾಽಮುನಾ ಯದಿತ್ಯತ್ರ ಅಮುನಾ= ಪಿತ್ರಾ ಅಸ್ಯ= ಸೈಂಧವಸ್ಯ ॥ – (ವಾ.)

೧೯೦. ಅಂಕಕರಯೋರತಿಸಾಮೀಪ್ಯಾದಂಕ ಇತಿ ವಕ್ತವ್ಯೇ ಕರ ಇತ್ಯುಕ್ತಮ್। ಧ್ಯಾನಕಾಲೇ ಅಂಕಯೋರುಪರಿ ಉತ್ತಾನತ್ವೇನ ಕರೌ ಸಂಸ್ಥಾಪ್ಯ ಧ್ಯಾಯಂತೀತಿ ಹೇತೋರ್ವಾ ಅಂಕ ಇತ್ಯತ್ರ ಕರ ಇತ್ಯುಕ್ತಮ್। ಅನ್ಯಥಾ ಅಂಕೇ ನ್ಯಧಾತ್ತಚ್ಛಿರ ಆಶು ವಾಸವಿರಿತ್ಯುತ್ತರಶ್ಲೋಕಸ್ಯ ತಥಾ ಭಾರತಸ್ಯ ಚ ವಿರೋಧಃ। – (ಜ.)

೧೯೦. .... ಕರೇ ಹಸ್ತಿಕರಸದೃಶೇ ಅಂಕೇ ವ್ಯಧಾದಿತ್ಯಂಗೀಕಾರಾತ್ । ಅಥವಾ ಸಂಭ್ರಮಾತ್ ಅಯಮಪಿ ಮಯಾ ಹತ ಇತ್ಯುತ್ಸವಾತ್ । 'ಮಹ ಉತ್ಸವಸಂಭ್ರಮ' ಇತ್ಯಭಿಧಾನಾತ್ ಸೈಂಧವಪಿತಾಽಪಿ ಸಂಭ್ರಮಾತ್ ಭಯಾತ್ ಭುವಿ ನ್ಯಪಾತಯತ್ । ಸಂಭ್ರಮಾದಿತಿ ದೇಹಲೀದೀಪನ್ಯಾಯೇನೋಭಯತ್ರ ಸಂಬಂಧ್ಯತೇ । ಅಥವಾ ಅಂಕೇ ಪುರುಚಿಹ್ನಭೂತೇ ಕರ ಇತಿ ಕರಸ್ಯ ಪುರುಷಮುಖ್ಯಚಿಹ್ನಭೂತತ್ವೇನ 'ಸ್ಥಾಣುರ್ವಾ ಪುರುಷೋ ವಾ' ಇತ್ಯತ್ರ ಕರಾದಿದರ್ಶನೇ ಸಂಶಯೋ ನಿವರ್ತತ ಇತಿ । – (ತಿ.)

೧೯೦. ಧರಣ್ಯಾಂ ಮಮ ಪುತ್ರಸ್ಯ ಪಾತಯಿಷ್ಯತಿ ಯಃ ಶಿರಃ ।
ತಸ್ಯಾಪಿ ಶತಧಾ ಮೂರ್ಧಾ ಫಲಿಷ್ಯತಿ ನ ಸಂಶಯಃ ॥ – ಭಾರತ (ದ್ರೋಣ. ೧೪೬/೧೧೨)

ಅ: ಅದರಿಂದ ಅವನ ತಂದೆಯನ್ನೂ ಸಹ ಕೊಲ್ಲಬೇಕಿದೆ. ಶ್ರೀಕೃಷ್ಣ ಹೀಗೆನ್ನಲು ಸಂಧ್ಯಾ-ಕಾರ್ಯದಲ್ಲಿ ತೊಡಗಿದ್ದ ಅವನ ತೊಡೆಯಮೇಲೆ ಕೂಡಲೇ ಅರ್ಜುನ ಆ ಜಯದ್ರಥನ ತಲೆಯನ್ನು ಬೀಳಿಸಿದ. ಅವನು ಗಾಬರಿಯಿಂದ ಅದನ್ನು ನೆಲದ ಮೇಲೆ ಎತ್ತಿಹಾಕಿದ.

ವಿ: ೧) ಅರ್ಜುನ ಕೃಷ್ಣ ತಿಳಿಸಿದಂತೆ ಜಯದ್ರಥನ ತಲೆಯನ್ನು ಸಂಧ್ಯಾಕಾರ್ಯದಲ್ಲಿ ತೊಡಗಿ ತನ್ನ ತೊಡೆಯ ಮೇಲೆ ಕೈಯಿರಿಸಿಕೊಂಡಿದ್ದ ವೃದ್ಧಕ್ಷತ್ರನ ಕೈಯಲ್ಲಿ ಅರ್ಜುನ ಬೀಳಿಸಿದನು. ತಕ್ಷಣವೇ ಅವನು ಗಾಬರಿಯಿಂದ ಅದನ್ನು ಕೆಳಗೆ ಬೀಳಿಸಿದಾಗ ಅವನ ತಲೆಯೇ ಸಾವಿರಾರು ಹೋಳಾಗಿ ಸಿಡಿದು ಸತ್ತುಹೋದನು. ಹೀಗೆ ಅವನು ನೀಡಿದ ವರದಿಂದ ಅವನೇ ಸಾಯುವಂತಾದುದ್ದು ವಿಪರ್ಯಾಸ. ಅಯೋಗ್ಯರು ನೀಡುವ ವರಗಳು ಹೀಗೆ ಅವರಿಗೇ ಮಾರಕ ಎಂಬ ತತ್ವವನ್ನು ತಿಳಿಸಲು ಕೃಷ್ಣ ಹೀಗೆ ಅರ್ಜುನನಿಂದ ಹಾಗೆ ಮಾಡಿಸಿದ ಎಂದು ತಿಳಿಯಬೇಕು.

೨) ವೃದ್ಧಕ್ಷತ್ರನಂತಹ ಅಸುರ ನೀಡಿದ ವರ ಇಂದ್ರಾವತಾರನಾದ ಅರ್ಜುನನಂತಹ ಮಹಾತ್ಮನಿಗೆ ಕೆಡುಕುಂಟುಮಾಡಲು ಸರ್ವಥಾ ಅಸಾಧ್ಯ. ಉರ್ವಶಿಯಂತಹ ಅಪ್ಸರೆಯ ಶಾಪ ಅವನಿಗೆ ಬಾಧಕವಾಗದಿದ್ದ ವಿವರ ಈಗಾಗಲೇ ಬಂದಿದೆ. ಅಧಮ ಕಕ್ಷೆಯ ದೇವತೆಗಳು ಉತ್ತಮ ಕಕ್ಷೆಯ ದೇವತೆಗಳಿಗೆ ನೀಡುವ ಶಾಪವೇ ವ್ಯರ್ಥವಾಗುವಾಗ, ವೃದ್ಧಕ್ಷತ್ರನಂತಹ ಅಧಮಾಧಮ–ನಾದ ಅಸುರ ಹಾಗೆ ನೀಡಿದ ವರ ಅರ್ಜುನನಿಗೆ ಮಾರಕವಾಗುವುದು ಅಸಾಧ್ಯ. ಆದ್ದರಿಂದ ಕೃಷ್ಣ ಮೇಲೆ ಹೇಳಿದಂತೆ ಲೋಕಶಿಕ್ಷಣಕ್ಕಾಗಿ ಹಾಗೆ ಮಾಡಿದ ಎಂದು ತಿಳಿಯಬೇಕು.

೩) ಎಲ್ಲೋ ಇದ್ದ ವೃದ್ಧಕ್ಷತ್ರನ ತೊಡೆಯ ಮೇಲಿದ್ದ ಕೈಯಲ್ಲಿ ಬೀಳಿಸಲು ಅರ್ಜುನನಿಗೆ ಹೇಗೆ ಸಾಧ್ಯವಾಯಿತು ಎಂಬ ಪ್ರಶ್ನೆಗೆ ವಾದಿರಾಜರು ಅಪೂರ್ವ ಸಮಾಧಾನ ನೀಡಿರುವರು. ಶಬ್ದವೇಧಿ ಬಾಣ ಶಬ್ದ ಮಾತ್ರದಿಂದ ಲಕ್ಷ್ಯವನ್ನು ಗುರುತಿಸಿ ಭೇದಿಸುವಂತೆ, ಅರ್ಜುನ ಮನೋ–ವೇಧಿಯಾದ ಬಾಣವೊಂದನ್ನು ಪ್ರಯೋಗಿಸಿ ತಾನು ವೃದ್ಧಕ್ಷತ್ರನಿರುವ ಸ್ಥಳದಲ್ಲಿ ಬೀಳಲಿ ಎಂದು ಸಂಕಲ್ಪಿಸಿದ್ದರಿಂದ ಹಾಗೆ ಮಾಡಲು ಶಕ್ತನಾದ ಎಂದರ್ಥ.

---

೧೯೧. ಸ ಪಿತಾऽಪಿ ತೇನೇತ್ಯತ್ರ ಪುತ್ರವತ್ಸ ಪಿತಾऽಪೀತಿ ಸಮುಚ್ಚಯಾರ್ಥಮಪಿಪದಮ್। ಅಂಕೇ ವ್ಯಧಾದಿತ್ಯನೇನ ಶಬ್ದಪಾತಿಶರವತ್ ಮಂತ್ರಬಲಾತ್ ಮನಃಪಾತಿಶರೋऽಪ್ಯಸ್ತೀತಿ ಜ್ಞೇಯಮ್ ॥ – (ವಾ.)

೧೯೧. ಇತಿ ಸ್ಮವಧ್ಯೋऽಸ್ಯ – (ಪಾಠಾಂತರ)

೧೯೧. ಅಂಕ ಇತ್ಯಸ್ಯ ಅಂಕಸ್ಥಿತಕರ ಇತ್ಯರ್ಥಃ। ಏತೇನ ಕರೇ ನಿಪಾತ್ಯತಾಮಿತ್ಯುಕ್ತತ್ವಾತ್ ತದನುಸಾರೇಣಾಂಕಸ್ಥಿತ ಕರ ಇತಿ ವಕ್ತವ್ಯಮಂಕ ಇತಿ ಕಥನಮಯುಕ್ತಮಿತಿ ಚೋದ್ಯಂ ನಿರಸ್ತಂ ಅಂಕ ಇತ್ಯನೇನಾಂಕಮಾತ್ರಗ್ರಹಣಂ ನ ಕಿಂತ್ವಂಕಸ್ಥ-ಕರಗ್ರಹಣಮಿತ್ಯಭ್ಯುಪಗಮಾತ್ ॥ – (ಸ.)

ಪುನಃ ರಾತ್ರಿ ಹಗಲಾಯಿತು

ತತೋಽಭವತ್ ತಸ್ಯ ಶಿರಃ ಸಹಸ್ರಧಾ
ಹರಿಶ್ಚ ಚಕ್ರೇ ತಮಸೋ ಲಯಂ ಪುನಃ ।
ತದೈವ ಸೂರ್ಯೇ ಸಕಲೈಶ್ಚ ದೃಷ್ಟೇ
ಹಾಹೇತಿ ವಾದಃ ಸುಮಹಾನಥಾಸೀತ್ ॥ ೧೯೨ ॥

ಅ: ಬಳಿಕ ವೃದ್ಧಕ್ಷತ್ರನ ತಲೆ ಸಾವಿರಾರು ಹೋಳಾಯಿತು. ಕೃಷ್ಣ ಮತ್ತೆ ಕತ್ತಲೆಯನ್ನು ನಾಶಪಡಿಸಿದ, ಆಗ ಸೂರ್ಯ ಎಲ್ಲರಿಗೂ ಕಾಣಿಸಿಕೊಳ್ಳಲು ಕೌರವ ಸೈನ್ಯದಲ್ಲಿ ಬಲು ದೊಡ್ಡದಾದ ಹಾಹಾಕಾರ ಉಂಟಾಯಿತು.

ವಿ: ೧) ಸೂರ್ಯ ಇನ್ನೂ ಮುಳುಗಿಲ್ಲವೆಂಬ ಸತ್ಯ ತಿಳಿಯುತ್ತಲೇ ಅರ್ಜುನನ ಪ್ರತಿಜ್ಞೆ ನೆರವೇರಿತೆಂಬ ದುಃಖದಿಂದ ಕುರುಸೇನೆ ತಲ್ಲಣಿಸಿಹೋಯಿತೆಂದು ಅರ್ಥ. ಅವರಿಗೆ ಜಯದ್ರಥ ಸತ್ತ ವಿಷಯ ತಿಳಿದಿದ್ದರೂ, ಅರ್ಜುನ ಸೂರ್ಯಾಸ್ತದ ನಂತರ ಆ ಕಾರ್ಯ ಮಾಡಿದ ಎಂಬ ಭ್ರಮೆಯಿಂದ ಅರ್ಜುನ ಭಷ್ಟಪ್ರತಿಜ್ಞನಾಗಿ ಅಗ್ನಿಪ್ರವೇಶ ಮಾಡುವನೆಂಬ ಭಾವನೆ ಹೊಂದಿದ್ದರು. ಆದರೆ, ಅರ್ಜುನ ಅದನ್ನು ಸೂರ್ಯಾಸ್ತದೊಳಗೆ ಪೂರೈಸಿದ ಎಂಬ ವಿಷಯ ತಿಳಿದಾಗ ಅವರಿಗೆಲ್ಲ ಸಹಜವಾಗಿಯೇ ತುಂಬಾ ವ್ಯಥೆಯುಂಟಾಯಿತು.

೨) ಜಯದ್ರಥ ಸತ್ತ ದುಃಖಕ್ಕಿಂತ ಅರ್ಜುನ ಬದುಕಿದ ದುಃಖ ಅವರಿಗೆ ಹೆಚ್ಚು ನೋವನ್ನುಂಟು ಮಾಡಿತೆಂದು ಭಾವ.

ಭೀಮನ ಅದ್ಭುತ ಪರಾಕ್ರಮ

ಭೀಮಸ್ತದಾ ಶಲ್ಯಸುಯೋಧನಾದೀನ್
ಕೃಪಂ ಚ ಜಿತ್ವಾ ವ್ಯನದತ್ ಸುಭೈರವಮ್ ।
ಕುರ್ವನ್ ಸಹಾಯಂ ಫಲ್ಗುನಸ್ಯೈವ ತುಷ್ಟೋ
ಬಭೂವ ಶೈನೇಯ ಉತೋ ಹತೇ ರಿಪೌ ॥ ೧೯೩ ॥

---

೧೯೨. ತತೋ ವಿನಿಹತೇ ರಾಜನ್ ಸಿಂಧುರಾಜೇ ಕಿರೀಟಿನಾ ।
ತಮಸ್ತದ್ ವಾಸುದೇವೇನ ಸಂಹೃತಂ ಭರತರ್ಷಭ ॥ – ಭಾರತ (ದ್ರೋಣ. ೧೪೬/೧೩೨)

ಅ: ಆಗ ಭೀಮಸೇನ ಶಲ್ಯ, ದುರ್ಯೋಧನ ಮೊದಲಾದವರನ್ನೂ, ಕೃಪನನ್ನೂ ಜಯಿಸಿ ಅರ್ಜುನನಿಗೆ ಸಹಾಯ ಮಾಡಲೆಂದು ಭಯಂಕರವಾದ ಸಿಂಹನಾದವನ್ನು ಮಾಡಿದ. ಸಾತ್ಯಕಿ ಜಯದ್ರಥ ಹತನಾದನೆಂದು ಸಂತುಷ್ಟನಾದ.

ಸಿಂಹನಾದದ ಸೂಚನೆಯಿಂದ ಯುಧಿಷ್ಠಿರನ ಹರ್ಷ

ಅಪೂರಯತ್ ಪಾಂಚಜನ್ಯಂ ಚ ಕೃಷ್ಣೋ
ಮುದಾ ತದಾ ದೇವದತ್ತಂ ಚ ಪಾರ್ಥಃ ।
ಭೀಮಸ್ಯ ನಾದಂ ಸಹಪಾಂಚಜನ್ಯ
ಘೋಷಂ ಶ್ರುತ್ವಾ ನಿಹತಂ ಸಿಂಧುರಾಜಮ್ ।
ಜ್ಞಾತ್ವಾ ರಾಜಾ ಧರ್ಮಸುತೋ ಮುಮೋದ
ದುರ್ಯೋಧನಶ್ಚಾಪ ಸುದುಃಖಿತಸ್ತದಾ ॥ ೧೯೪ ॥

ಅ: ಕೃಷ್ಣನು ಪಾಂಚಜನ್ಯವನ್ನು ಮೊಳಗಿಸಿದ. ಅರ್ಜುನನು ಆನಂದದಿಂದ ದೇವದತ್ತವನ್ನು ಊದಿದ. ಪಾಂಚಜನ್ಯಘೋಷದೊಂದಿಗೆ ಭೀಮಸೇನನ ಸಿಂಹನಾದವನ್ನು ಕೇಳಿ ಜಯದ್ರಥ ಹತನಾದನೆಂದು ತಿಳಿದು ಧರ್ಮರಾಜ ಬಹಳವಾಗಿ ಸಂತೋಷಿಸಿದ. ದುರ್ಯೋಧನ ಅತ್ಯಂತ ಹೆಚ್ಚು ದುಃಖಿತನಾದ.

ಭೀಮನಿಂದ ವ್ಯೂಹಭೇದ

ತತೋ ದ್ರೌಣಿಮುಖಾಂ ಸೇನಾಂ ಸರ್ವಾಂ ಭೀಮೋಽಭ್ಯವರ್ತತ ।
ಪಾರ್ಥಃ ಕರ್ಣಮುಖಾಂ ಶಿಷ್ಟಾಂ ತತೋಽಭಜ್ಯತ ತದ್ಬಲಮ್ ॥ ೧೯೫ ॥

ಅ: ಬಳಿಕ ಅಶ್ವತ್ಥಾಮನ ಮುಂದಾಳುತ್ವದಲ್ಲಿ ಇದ್ದ ಸೇನೆಯನ್ನೆಲ್ಲ ಭೀಮಸೇನ ಎದುರಿಸಿದ. ಅರ್ಜುನ ಕರ್ಣನ ಮುಂದಾಳುತ್ವದಲ್ಲಿ ಬಂದ ಉಳಿದ ಸೇನೆಯನ್ನೆಲ್ಲ ಎದುರಿಸಿದ. ಬಳಿಕ ಅಶ್ವತ್ಥಾಮ ಕರ್ಣರ ಸೇನೆಗಳು ಸೋತವು.

ಶೀರ್ಣಾಂ ಸೇನಾಂ ಪ್ರವಿವಿಶುರ್ಧೃಷ್ಟದ್ಯುಮ್ನಪುರೋಗಮಾಃ ।
ತತಸ್ತಂ ದೇಶಮಾಪುಸ್ತೇ ಯತ್ರ ಭೀಮಧನಂಜಯೌ ॥ ೧೯೬ ॥

ಧೃಷ್ಟದ್ಯುಮ್ನ ಮೊದಲಾದವರು ಚದುರಿದ ಸೇನೆಯೊಳಗೆ ನುಗ್ಗಿದರು. ಭೀಮಾರ್ಜುನರಿದ್ದ ಸ್ಥಳಕ್ಕೆ ಅವರೆಲ್ಲ ಬಂದರು.

ಏ: ಹೀಗೆ ಭೀಮಾರ್ಜುನರಿಂದ ವ್ಯೂಹವೆಲ್ಲ ಭಗ್ನಗೊಂಡಾಗ, ಧೃಷ್ಟದ್ಯುಮ್ನ ಮೊದಲಾದವರು ಭೀಮಾರ್ಜುನರಿದ್ದಲ್ಲಿಗೆ ಆಗಮಿಸಲು ಶಕ್ತರಾದರು ಎಂದರ್ಥ. ಹೀಗೆ ಶಕಟಾಬ್ಜಶಕ್ರವ್ಯೂಹ ಇತರರಿಗೆ ಅಭೇದ್ಯವಾಗಿತ್ತು ಎಂಬುದು ಸ್ಪಷ್ಟಪಡುವುದು.

ಪಾಂಡವರಿಂದ ಕೌರವಸೇನೆಯ ಪರಾಭವ

ತತ ಏಕೀಕೃತಾಃ ಸರ್ವೇ ಪಾಂಡವಾಃ ಸಹಸೋಮಕಾಃ ।
ಪರಾನ್ ವಿದ್ರಾವಯಾಮಾಸುಸ್ತೇ ಭೀತಾಃ ಪ್ರಾದ್ರವನ್ ದಿಶಃ ॥ ೧೯೭ ॥

ಅ: ಬಳಿಕ ಒಂದಾದ ಎಲ್ಲ ಪಾಂಡವರೂ, ಪಾಂಚಾಲರೂ ಶತ್ರುಗಳನ್ನು ಹೊಡೆದೋಡಿಸತೊಡಗಿದರು. ಹೆದರಿದ ಅವರೆಲ್ಲ ದಿಕ್ಕಾಪಾಲಾಗಿ ಓಡಿದರು.

ದುರ್ಯೋಧನನ ಪರಾಕ್ರಮ

ವಿದ್ರಾವ್ಯಮಾಣಂ ಸೈನ್ಯಂ ತತ್ ದೃಷ್ಟ್ವಾ ದುರ್ಯೋಧನೋ ನೃಪಃ ।
ಜಯದ್ರಥವಧಾಚ್ಚೈವ ಕುಪಿತೋಽಭ್ಯದ್ರವತ್ ಪರಾನ್ ॥ ೧೯೮ ॥

ಅ: ತನ್ನ ಸೇನೆ ಹಾಗೆ ಹೊಡೆದೋಡಿಸಲ್ಪಟ್ಟದ್ದನ್ನು ಕಂಡು, ಜಯದ್ರಥನ ವಧೆಯಿಂದ ಕೆರಳಿ ರಾಜನಾದ ದುರ್ಯೋಧನ ಶತ್ರುಗಳ ಮೇಲೆ ನುಗ್ಗಿದ.

ಸ ಭೀಮಸೇನಂ ಚ ಧನಂಜಯಂ ಚ
ಯುಧಿಷ್ಠಿರಂ ಮಾದ್ರವತೀಸುತೌ ಚ ।
ಧೃಷ್ಟದ್ಯುಮ್ನಂ ಸಾತ್ಯಕಿಂ ದ್ರೌಪದೇಯಾನ್
ಸರ್ವಾನೇಕಃ ಶರವರ್ಷೈರ್ವವರ್ಷ ॥ ೧೯೯ ॥

ಅ: ಅವನು ಭೀಮಸೇನನನ್ನು, ಅರ್ಜುನನನ್ನು, ಧರ್ಮರಾಜನನ್ನು, ನಕುಲಸಹದೇವರನ್ನು, ಧೃಷ್ಟದ್ಯುಮ್ನನನ್ನು, ಸಾತ್ಯಕಿಯನ್ನು, ದ್ರೌಪದೀಪುತ್ರರು ಮೊದಲಾಗಿ ಎಲ್ಲರನ್ನೂ ಶರವೃಷ್ಟಿಯನ್ನು ಸುರಿಸಿ ಏಕಾಂಗಿಯಾಗಿ ಎದುರಿಸಿದ.

ತಂ ವಿವ್ಯಧುಸ್ತೇ ಬಹುಭಿಃ ಶಿಲೀಮುಖೈಃ
ಸ ತಾನನಾದೃತ್ಯ ಚಕರ್ತ ಬಾಣೈಃ ।
ಧನೂಂಷಿ ಚಿತ್ರಾಣಿ ಮಹಾರಥಾನಾಂ
ಚಕಾರ ಸಂಖ್ಯೇ ವಿರಥೌ ಯಮೌ ಚ ॥ ೨೦೦ ॥

ಅ: ಅವರು ಅವನನ್ನು ಅನೇಕ ಬಾಣಗಳಿಂದ ಹೊಡೆದರು. ಅವನು ಅವುಗಳನ್ನು ಲೆಕ್ಕಿಸದೆ, ಅನೇಕ ಮಹಾರಥರ ಬಗೆಬಗೆಯ ಧನುಸ್ಸುಗಳನ್ನು ಯುದ್ಧದಲ್ಲಿ ಕತ್ತರಿಸಿದ. ನಕುಲಸಹದೇವರನ್ನು ವಿರಥರನ್ನಾಗಿಸಿದ.

ಆದಾಯ ಚಾಪಾನಿ ಪರಾಣಿ ತೇಽಪಿ
ದುರ್ಯೋಧನಂ ವವೃಷುಃ ಸಾಯಕೌಘೈಃ ।
ಅಚಿಂತಯಿತ್ವೈವ ಶರಾನ್ ಸ ಏಕೋ
ನ್ಯವಾರಯತ್ ತಾನಖಿಲಾಂಶ್ಚ ಬಾಣೈಃ ॥ ೨೦೧ ॥

ಅ: ಅವರೆಲ್ಲ ಬೇರೆ ಬಿಲ್ಲುಗಳನ್ನು ತೆಗೆದುಕೊಂಡು, ಬಾಣಗಳ ಪ್ರವಾಹಗಳನ್ನು ದುರ್ಯೋಧನನ ಮೇಲೆ ಸುರಿಸಿದರು. ಅವುಗಳನ್ನು ಲೆಕ್ಕಿಸದೆ, ಅವನೊಬ್ಬನೇ ಅವರೆಲ್ಲರನ್ನೂ ಬಾಣಗಳಿಂದ ತಡೆಯತೊಡಗಿದ.

ತಂ ಗಾಹಮಾನಂ ದ್ವಿಷತಾಂ ಬಹೂನಾಂ
ಮಧ್ಯಂ ದ್ರೋಣದ್ರೌಣಿಕೃಪಪ್ರಧಾನಾಃ ।
ದೃಷ್ಟ್ವಾಸರ್ವೇ ಜುಗುಪುಃ ಸ್ವಾತ್ತಚಾಪಾ
ಅನಾರತಂ ಬಾಣಗಣಾನ್ ಸೃಜಂತಃ ॥ ೨೦೨ ॥

ಅ: ಬಹುಶತ್ರುಗಳ ಮಧ್ಯೆ ಸಿಕ್ಕಿಹಾಕಿಕೊಂಡಿದ್ದ ದುರ್ಯೋಧನನನ್ನು ದ್ರೋಣ, ಅಶ್ವತ್ಥಾಮ, ಕೃಪ ಮೊದಲಾದವರೆಲ್ಲ ನೋಡಿ, ಬಿಲ್ಲುಗಳನ್ನೆತ್ತಿಕೊಂಡು, ಎಡೆಬಿಡದೆ ಬಾಣಗಳನ್ನು ಪ್ರಯೋಗಿಸುತ್ತಾ ರಕ್ಷಿಸತೊಡಗಿದರು.

ಭೀಮ ಅಜೇಯನೆಂದು ಕರ್ಣನ ಪ್ರತಿಪಾದನೆ

ಸುಯೋಧನಃ ಕರ್ಣಮಾಹ ಜಹಿ ಭೀಮಮಿಮಂ ಯುಧಿ ।
ಸ ಆಹ ನೈವ ಶಕ್ಯೋ ಹಿ ಜೇತುಂ ದೇವೈಃ ಸವಾಸವೈಃ ॥ ೨೦೩ ॥

ಅ: ದುರ್ಯೋಧನ ಕರ್ಣನಿಗೆ ಹೇಳಿದ: ''ಈ ಭೀಮನನ್ನು ಯುದ್ಧದಲ್ಲಿ ನೀನು ಕೊಂದು-ಹಾಕು''. ಕರ್ಣ ಹೇಳಿದ: ''ಇಂದ್ರಾದಿದೇವತೆಗಳಿಗೂ ಈ ಭೀಮನನ್ನು ಗೆಲ್ಲಲು ಸಾಧ್ಯ-ವಾಗದು''.

ದೈವಾಜ್ಜೀವಾಮ್ಯಹಂ ರಾಜನ್ ಯುಧ್ಯನೇನಾತಿಪೀಡಿತಃ ।
ಅತೋ ಘಟಾಮಹೇ ಶಕ್ತ್ಯಾ ಜಯೋ ದೈವೇ ಸಮಾಹಿತಃ ॥ ೨೦೪ ॥

ಅ: ''ರಾಜನೆ! ಇವನಿಂದ ಬಹಳವಾಗಿ ಪೀಡಿತನಾದ ನಾನು ಬದುಕಿರುವುದು ದೈವಾ-ನುಗ್ರಹ. ಆದ್ದರಿಂದ ಶಕ್ತಿಯಿದ್ದಷ್ಟು ಯತ್ನಿಸೋಣ; ಜಯ ದೈವಕ್ಕೆ ಸೇರಿದ್ದು''.

ವಿ: ಕರ್ಣ ಭೀಮನ ಬಗ್ಗೆ ಈ ಮಾತುಗಳನ್ನು ತನ್ನ ಸ್ವಾನುಭವದಿಂದ ಹೇಳುತ್ತಿರುವುದನ್ನು ಗಮನಿಸಬೇಕು. ಅಂದು ಒಟ್ಟು ಇಪ್ಪತ್ತೆರಡು ಬಾರಿ ಭೀಮನಿಂದ ಅತ್ಯಂತಹೀನಾಯವಾದ ಸೋಲನ್ನು ಕಂಡ ಅವನಿಗೆ ಭೀಮನ ಅಗಾಧಬಲದ ಸ್ಪಷ್ಟಚಿತ್ರ ಸಿಕ್ಕಿತ್ತು ಎಂದು ತಿಳಿಯಬೇಕು.

ದುರ್ಯೋಧನನಿಂದ ದ್ರೋಣರ ನಿಂದೆ

ದುರ್ಯೋಧನೋ ದ್ರೋಣಮಾಹ ಸೈಂಧವಸ್ತ್ವದುಪೇಕ್ಷಯಾ ।
ಪಾರ್ಥೇನ ನಿಹತೋ ಭೀಮಸಾತ್ಯಕಿಭ್ಯಾಂ ಚ ಮೇ ಬಲಮ್ ॥ ೨೦೫ ॥

ಅ: ದುರ್ಯೋಧನ ದ್ರೋಣರನ್ನು ನಿಂದಿಸಿದ : ''ಸೈಂಧವ ನಿಮ್ಮ ಉಪೇಕ್ಷೆಯಿಂದಾಗಿ ಅರ್ಜುನನಿಂದ ಹತನಾದ. ನನ್ನ ಸೈನ್ಯ ಭೀಮಸಾತ್ಯಕಿಯರಿಂದ ನಾಶವಾಯಿತು.

ಪ್ರತಿಜ್ಞಾ ಚ ಪರಿತ್ಯಕ್ತಾ ಪಾಂಡವಸ್ನೇಹತಸ್ತ್ವಯಾ ।
ಇತ್ಯುಕ್ತಃ ಕುಪಿತೋ ದ್ರೋಣಃ ಪ್ರತಿಜ್ಞಾಮಕರೋತ್ ತತಃ ॥ ೨೦೬ ॥

ಅ: ಪಾಂಡವರ ಮೇಲಿನ ಪ್ರೀತಿಯಿಂದಾಗಿ ನಿಮ್ಮ ಪ್ರತಿಜ್ಞೆಯನ್ನು ತೊರೆದಿರಿ''. ದುರ್ಯೋಧನ ಹೀಗೆನ್ನಲು, ದ್ರೋಣರು ಕೋಪಗೊಂಡು ಮತ್ತೆ ಪ್ರತಿಜ್ಞೆ ಮಾಡಿದರು :

ದ್ರೋಣರ ಭೀಕರ ಪ್ರತಿಜ್ಞೆ

ಇತಃ ಪರಂ ನೈವ ರಣಾದ್ಯಾತ್ರಾವಹನಿ ವಾ ಕ್ವಚಿತ್ ।
ಗಚ್ಛೇಯಂ ನ ಚ ಮೋಕ್ಷ್ಯಾಮಿ ವರ್ಮ ಬದ್ಧಂ ಕಥಂಚನ ॥ ೨೦೭ ॥

ಅ: ''ಇನ್ನು ಮೇಲೆ ನಾನು ರಾತ್ರಿಯಾಗಲಿ, ಹಗಲಾಗಲಿ, ಯುದ್ಧವನ್ನು ಬಿಟ್ಟು ಹಿಂದಿರುಗೆ. ತೊಟ್ಟ ಕವಚವನ್ನು ಯಾವ ಕಾರಣದಿಂದಲೂ ಬಿಚ್ಚೆ''.

ವಿ: ೧) ದ್ರೋಣರು ದುರ್ಯೋಧನನ ಪ್ರತಿ ಆಕ್ಷೇಪಕ್ಕೂ ಹೊಸತಾದ ಪ್ರತಿಜ್ಞೆಯನ್ನೇ ಮಾಡುತ್ತಿದ್ದರೇ ಹೊರತು, ತಮ್ಮ ಹಿಂದಿನ ಪ್ರತಿಜ್ಞೆ ವಿಫಲವಾದುದ್ದಕ್ಕೆ ವಿವರಣೆ ನೀಡುತ್ತಿರಲಿಲ್ಲ. ಹಾಗೆ ನೀಡುವುದು ಅವರಿಗೆ ಬೇಕೂ ಇರಲಿಲ್ಲ. ದುರ್ಯೋಧನನೂ ಸಹ ಅವರ ಹೊಸ ಪ್ರತಿಜ್ಞೆ–ಯಿಂದ ಪ್ರಲೋಭಿತನಾಗುತ್ತಿದ್ದನೇ ಹೊರತು, ಅವರ ಹಿಂದಿನ ಪ್ರತಿಜ್ಞೆ ವ್ಯರ್ಥವಾದದ್ದರ ಬಗ್ಗೆ ಆಲೋಚಿಸುತ್ತಿರಲಿಲ್ಲ. ಅನ್ಯದೇವತೆಗಳನ್ನು ಎಷ್ಟೇ ನಂಬಿದರೂ, ಅವರಿಂದ ಅಭೀಷ್ಟಸಿದ್ಧಿಯಾಗದು ಎಂಬುದಕ್ಕೂ, ಹಾಗಿದ್ದರೂ ಅವಿವೇಕಿಗಳು ಹಾಗೆ ನಂಬುತ್ತಾರೆ ಎಂಬುದಕ್ಕೂ ಇದು ನಿದರ್ಶನ.

೨) ಗುರುಬಲವಿದ್ದರೂ, ವಿಷ್ಣುಭಕ್ತಿಯಿಲ್ಲದವರು ಯಶಸ್ವಿಯಾಗರು ಎಂಬುದಕ್ಕೆ ಇದು ನಿದರ್ಶನ. ಗುರುಗ್ರಹದ ಅಭಿಮಾನಿದೇವತೆಯಾದ ದ್ರೋಣಾಚಾರ್ಯರ ವೈಫಲ್ಯ ಒಂದರ್ಥದಲ್ಲಿ ನವಗ್ರಹಾರಾಧನೆ ಹಾಗೂ ಜ್ಯೋತಿಃಶಾಸ್ತ್ರದ ಇತಿಮಿತಿಗಳನ್ನು ಸ್ಫುಟಪಡಿಸುವ ಪ್ರಸಂಗ ಎಂದು ತಿಳಿಯಬೇಕು.

ಅಶ್ವತ್ಥಾಮರಿಗೆ ದ್ರೋಣರ ಸಂದೇಶ

ಮತ್ಪುತ್ರಶ್ಚ ತ್ವಯಾ ವಾಚ್ಯಃ ಪಾಂಚಾಲಾನ್ ನೈವ ಶೇಷಯೇಃ ।
ಸದೌಹಿತ್ರಾನಿತಿ ಪ್ರೋಕ್ತ್ವಾ ವಿಜಗಾಹೇ ನಿಶಾಗಮೇ ॥ ೨೦೮ ॥

ಅ: ''ನನ್ನ ಪುತ್ರ ಅಶ್ವತ್ಥಾಮನಿಗೆ ನೀನು ತಿಳಿಸಬೇಕು. 'ದೌಹಿತ್ರರ ಸಮೇತ ಯಾವ ಪಾಂಚಾಲರನ್ನು ಉಳಿಸದಿರು' ಎಂದು''. ಹೀಗೆ ನುಡಿದು ದ್ರೋಣರು, ರಾತ್ರಿ ಬಂದಾಗಲೂ ಪಾಂಡವರ ಸೇನೆಯೊಳಗೆ ನುಗ್ಗಿದರು.

ಚಮೂಂ ಪರೇಷಾಮಭ್ಯಾಗಾದ್ಧೃಷ್ಟದ್ಯುಮ್ನಸ್ತಮಾಶು ಚ ।
ದ್ರೌಣಿದುರ್ಯೋಧನೌ ತತ್ರ ವಿರಥೀಕೃತ್ಯ ಮಾರುತಿಃ ।
ದ್ರಾವಯಾಮಾಸ ತತ್ಸೈನ್ಯಂ ಪಶ್ಯತಾಂ ಸರ್ವಭೂಭೃತಾಮ್ ॥ ೨೦೯ ॥

---

೨೦೭. ನಾಹತ್ವಾ ಸರ್ವಪಂಚಾಲಾನ್ ಕವಚಸ್ಯ ವಿಮೋಕ್ಷಣಮ್ ।
ಕರ್ತಾಸ್ಮಿ ಸಮರೇ ಕರ್ಮ ಧಾರ್ತರಾಷ್ಟ್ರ ಹಿತಂ ತವ ॥ – ಭಾರತ (ದ್ರೋಣ. ೧೫೧/೩೪)

೨೦೮. ಸದೌಹಿತ್ರಾನ್ ಇತ್ಯತ್ರ ದ್ರುಪದಸ್ಯ ದುಹಿತುಃ ದ್ರೌಪದ್ಯಾಃ ಕುಮಾರಾಃ ॥ – (ವಾ.)

೨೦೮. ರಾಜನ್ ಬ್ರೂಯಾಃ ಸುತಂ ಯೇ ತ್ವಮಶ್ವತ್ಥಾಮಾನಮಾಹವೇ ।
ನ ಸೋಮಕಾಃ ಪ್ರಮೋಕ್ತವ್ಯಾ ಜೀವಿತಂ ಪರಿರಕ್ಷತಾ ॥ – ಭಾರತ (ದ್ರೋಣ. ೧೫೧/೩೫)

ಅ: ಶತ್ರುಸೈನ್ಯದೊಳಗೆ ಹಾಗೆ ನುಗ್ಗಿದ ಅವರನ್ನು ಕೂಡಲೇ ಧೃಷ್ಟದ್ಯುಮ್ನ ಎದುರಿಸಿದ: ಅಲ್ಲಿ ಭೀಮಸೇನ ಅಶ್ವತ್ಥಾಮದುರ್ಯೋಧನರನ್ನು ವಿರಥರನ್ನಾಗಿ ಮಾಡಿ, ಅವರ ಸೇನೆಯನ್ನು ರಾಜರೆಲ್ಲ ನೋಡುತ್ತಿದ್ದಂತೆಯೇ ಹೊಡೆದೋಡಿಸತೊಡಗಿದ.

ಆ ವರೆಗಿನ ಸೇನಾನಾಶದ ವಿವರ

ಅಕ್ಷೌಹಿಣ್ಯಸ್ತು ಸಪ್ತೈವ ಸೇನಯೋರುಭಯೋರಪಿ ।
ಹತಾಸ್ತಾಸಾಂ ಚ ಭೀಮೇನ ತಿಸ್ರೋ ದ್ವೇ ಫಲ್ಗುನೇನ ಚ ॥ ೨೧೦ ॥

ಅ: ಆ ವೇಳೆಗೆ ಎರಡೂ ಸೇನೆಗಳಲ್ಲಿ ಏಳು ಅಕ್ಷೋಹಿಣಿಗಳು ಹತವಾಗಿದ್ದವು. ಅವುಗಳಲ್ಲಿ ಭೀಮನಿಂದ ಮೂರು, ಅರ್ಜುನನಿಂದ ಎರಡು ನಾಶವಾಗಿದ್ದವು.

ಸೌಭದ್ರಸಾತ್ಯಕಿಮುಖೈಸ್ತನ್ಮಧ್ಯೇ ಷೋಡಶಾಂಶಕಃ ।
ಹೈಡಿಂಬಪಾರ್ಷತಮುಖೈಸ್ತ್ರಯಾಚ್ಚ ದಶಮಾಂಶಕಃ ॥ ೨೧೧ ॥

ಅ: ಅಭಿಮನ್ಯು, ಸಾತ್ಯಕಿ ಮೊದಲಾದವರಿಂದ ಆ ಐದರಲ್ಲಿ ಹದಿನಾರನೆಯ ಒಂದಂಶವೂ, ಘಟೋತ್ಕಚ, ಧೃಷ್ಟದ್ಯುಮ್ನ ಮೊದಲಾದವರಿಂದಲೂ ಮೂರು ಅಕ್ಷೋಹಿಣಿಯ ಹತ್ತನೆಯ ಒಂದಂಶ ಹತವಾಯಿತು.

ವಿ: ೧) ಹದಿನಾಲ್ಕನೆಯ ದಿವಸದ ರಾತ್ರಿಯ ವೇಳೆಗೆ ಕುರುಪಾಂಡವರ ಒಟ್ಟು ಹದಿನೆಂಟು ಅಕ್ಷೋಹಿಣೀಸೇನಯಲ್ಲಿ ಏಳು ಅಕ್ಷೋಹಿಣೀಸೇನೆ ಹತವಾಗಿತ್ತು ಎಂದಾಗುವುದು. ಆ ಏಳರಲ್ಲಿ ಪಾಂಡವರ ಸೇನೆಯಲ್ಲಿ ಎರಡು ಅಕ್ಷೋಹಿಣಿ ಮಾತ್ರ ಹತವಾಗಿದ್ದರೆ, ಕೌರವರ ಸೇನೆಯಲ್ಲಿ ಐದು ಅಕ್ಷೋಹಿಣೀಸೇನೆ ಹತವಾಗಿತ್ತು ಎಂದರ್ಥ.

೨) ಆ ಐದು ಅಕ್ಷೋಹಿಣಿಯಲ್ಲಿ ಭೀಮಸೇನ ಸಂಹರಿಸಿದ್ದು ಮೂರು ಅಕ್ಷೋಹಿಣಿ ಎಂಬುದನ್ನು ಗಮನಿಸಿದರೆ, **'ಭೀಮಸೇನಸಮೋ ನಾಸ್ತಿ ಸೇನಯೋರುಭಯೋರಪಿ'** ಎಂಬ ಮಾತು ಸ್ಫುಟಪಡುವುದು.

---

೨೧೦. ತನ್ಮಧ್ಯೇ ಷೋಡಶಾಂಶಕ ಇತ್ಯತ್ರ ತನ್ಮಧ್ಯೇ= ಭೀಮಾರ್ಜುನನಿಹತಾಕ್ಷೋಹಿಣೀಪಂಚಕಮಧ್ಯೇ ॥ – (ವಾ.)

೨೧೦. ತನ್ಮಧ್ಯೇऽರ್ಜುನಹತಯೋರ್ದ್ವಯೋರ್ಮಧ್ಯೇ ಷೋಡಶಾಂಶಕಃ ಷೋಡಶಭಾಗಃ ಸೌಭದ್ರಾದಿಭಿರ್ಹತಃ ನವಭಾಗೋ ಭೀಮೇನ ಹತ ಇತಿ ಭಾವಃ ॥ – (ವ.)

ಭೀಷ್ಮದ್ರೋಣದ್ರೌಣಿಭಿಶ್ಚ ದ್ವೇ ಸಮಂ ನಿಹತೇ ತದಾ ।
ತದನ್ಯೈರ್ಮಿಲಿತೈಃ ಸರ್ವೈಸ್ತಚ್ಚತುರ್ಥಾಂಶ ಏವ ಚ ॥ ೨೧೨ ॥

ಅ: ಭೀಷ್ಮ, ದ್ರೋಣ, ಅಶ್ವತ್ಥಾಮರಿಂದ ಪಾಂಡವರ ಎರಡು ಅಕ್ಷೋಹಿಣೀಸೇನೆ ಹತವಾಗಿತ್ತು. ಉಳಿದವರೆಲ್ಲಸೇರಿ ಅದರ ನಾಲ್ಕನೇ ಒಂದಂಶ ಕೊಂದಿದ್ದರು.

ವಿ: ಪಾಂಡವಸೇನೆಯಲ್ಲಿ ಭೀಮಾರ್ಜುನರ ಪಾತ್ರ ಪ್ರಮುಖವಾಗಿದ್ದರೆ, ಕೌರವರ ಸೇನೆಯಲ್ಲಿ ಭೀಷ್ಮ, ದ್ರೋಣ, ಅಶ್ವತ್ಥಾಮರ ಪಾತ್ರ ಪ್ರಮುಖವಾಗಿತ್ತು ಎಂದಾಗುವುದು. ಕುರುಸೇನೆಯಲ್ಲಿ ಅತ್ಯಂತ ಶಕ್ತಿಶಾಲಿ ಅಶ್ವತ್ಥಾಮರೇ ಆದರೂ, ''ತಂದೆ ಬದುಕಿರುವವರೆಗೂ ಚೆನ್ನಾಗಿ ಯುದ್ಧ ಮಾಡಲಾರೆ'' ಎಂದು ಕೃಷ್ಣನ ಮುಂದೆ ತಿಳಿಸಿದ್ದರಿಂದ(೨೪/೮೫), ಅವರಿಂದ ಈವರೆಗೂ ಮೊದಲ ಸ್ಥಾನವನ್ನು ಅಲಂಕರಿಸುವಂತಹ ರೀತಿಯಲ್ಲಿ ಸೇನಾಸಂಹಾರಕಾರ್ಯ ನಡೆದಿರಲಿಲ್ಲ ಎಂದು ತಿಳಿಯಬೇಕು.

ಹದಿನಾಲ್ಕನೆಯ ದಿನದ ರಾತ್ರಿಯುದ್ಧ - ಭೀಮನಿಂದ ಕರ್ಣ ದುಷ್ಕರ್ಣರ ವಧೆ

ತತೋ ರಾತ್ರೌ ಪಂಚಭಿಶ್ಚ ಪಾರ್ಥಾಃ ಷಡ್ಭಿಶ್ಚ ಕೌರವಾಃ ।
ಅಕ್ಷೌಹಿಣೀಭಿಃ ಸಂವ್ಯೂಹ್ಯ ಯುದ್ಧಂ ಚಕ್ರುಃ ಸುದಾರುಣಮ್ ॥ ೨೧೩ ॥

ಅ: ಬಳಿಕ ರಾತ್ರಿಯಲ್ಲಿ ಐದು ಅಕ್ಷೋಹಿಣೀಸೇನೆಯೊಂದಿಗೆ ಪಾಂಡವರು, ಆರು ಅಕ್ಷೋಹಿಣೀಸೇನೆಯೊಂದಿಗೆ ಕೌರವರು ವ್ಯೂಹರಚನೆ ಮಾಡಿ, ಅತ್ಯಂತ ಭಯಂಕರ ಯುದ್ಧವನ್ನು ಮಾಡಿದರು.

ಭೀಮಂ ಸೇನಾಂ ದ್ರಾವಯಂತಂ ಪುನಃ ಕರ್ಣಃ ಸಮಾಸದತ್ ।
ಸ ಕರ್ಣಪುರತೋ ಭೀಮೋ ದುಷ್ಕರ್ಣಂ ಕರ್ಣಮೇವ ಚ ॥ ೨೧೪ ॥

ದುರ್ಯೋಧನಸ್ಯಾವರಜೌ ನಿಷ್ಪಿಪೇಷ ಪದಾ ಕ್ಷಣಾತ್ ।
ರಥಾಶ್ವಧ್ವಜಸೂತೈಶ್ಚ ಸಹ ತೌ *ನ ವ್ಯದೃಶ್ಯತಾಮ್ ॥ ೨೧೫ ॥

ಅ: ತಮ್ಮ ಸೇನೆಯನ್ನು ಓಡಿಸುತ್ತಿದ್ದ ಭೀಮನನ್ನು ಎದುರಿಸಿ ಕರ್ಣ ತೆರಳಿದ. ಭೀಮ ಕರ್ಣನೆದುರೇ ದುಷ್ಕರ್ಣ ಮತ್ತು ಕರ್ಣ ಎಂಬ ದುರ್ಯೋಧನನ ತಮ್ಮಂದಿರನ್ನು ಕಾಲಿನಿಂದ

---

* ನ ವ್ಯಪಶ್ಯತಾಮಿತಿ ಪಾಠೇ ನ ವ್ಯಪಶ್ಯತಾಂ ನ ವ್ಯದೃಶ್ಯೇತಾಮ್। –(ಜ.)

ಕ್ಷಣಮಾತ್ರದಲ್ಲಿ ಹೊಸಕಿಹಾಕಿದ. ಅವರಿಬ್ಬರು ತಮ್ಮ ರಥ, ಕುದುರೆ, ಧ್ವಜ, ಸೂತರೊಂದಿಗೆ ಸಮೇತರಾಗಿಯೇ ಕಾಣೆಯಾದರು.

ವಿ: ಭೀಮಸೇನ ಕರ್ಣ, ದುಷ್ಕರ್ಣರೆಂಬ ಇಬ್ಬರು ಕೌರವರನ್ನು ಕರ್ಣನೆದುರೇ ಕಾಲಿನಿಂದ ಹೊಸಕಿಹಾಕಿದ. ಭೀಮನ ಅಸಾಮಾನ್ಯಪರಾಕ್ರಮಕ್ಕೆ ಇದು ಮತ್ತೊಂದು ನಿದರ್ಶನ. ಇದರಿಂದ ಕೌರವರಲ್ಲೂ ಕರ್ಣ ಎಂಬ ಹೆಸರಿನವನೊಬ್ಬನಿದ್ದ ಎಂದು ತಿಳಿಯುವುದು. ಆದರೆ ಅವನಿಗೆ ಕರ್ಣನಿಗೆ ಬಂದಿದ್ದಂತೆ ಆ ಹೆಸರು ಅಪೂರ್ವ ಕರ್ಣಕುಂಡಲನಿಮಿತ್ತವಾಗಿರದೆ, ಕೇವಲ ನಾಮ–ಮಾತ್ರವಾಗಿತ್ತು ಎಂಬುದು ವಿಶೇಷ.

ನಿರಾಯುಧೋಽಹಮಿತಿ ಮಾಂ ತ್ವಮಾತ್ಥ ಪರುಷಂ ವಚಃ ।
ನಿರಾಯುಧಃ ಪದೈವಾಹಂ ತ್ವಾಂ ಹಂತುಮಶಕಂ ತದಾ ॥ ೨೧೬ ॥

ಅ: ''ನನ್ನನ್ನು ನಿರಾಯುಧನೆಂದು ನೀನು ನಿಷ್ಠುರವಾಗಿ ಕರೆದಿದ್ದೆಯಲ್ಲ. ನಿರಾಯುಧನಾಗಿಯೂ ನಾನು ನಿನ್ನನ್ನು ಆಗ ಕಾಲಿನಿಂದ ಕೊಂದುಹಾಕಲು ಸಮರ್ಥನಾಗಿದ್ದೆ''.

ವಿ: ಕರ್ಣ ಆ ಮುನ್ನ ನಡೆದಿದ್ದ ಯುದ್ಧದಲ್ಲಿ ಭೀಮನನ್ನು ''ನಿರಾಯುಧ'' (೨೬೧) ಎಂದು ಗೇಲಿ ಮಾಡಿದ್ದಕ್ಕೆ ಇದು ಉತ್ತರ ಎಂದು ತಿಳಿಯಬೇಕು. ತಾನು ನಿರಾಯುಧನಾಗಿದ್ದರೂ, ನಿಃಶಕ್ತನಾಗಿರಲಿಲ್ಲ ಎಂಬುದು ಭೀಮನ ಭಾವ. ಇತರರಂತೆ ಭೀಮ ಶತ್ರುಜಯಕ್ಕೆ ಆಯುಧಗಳನ್ನು ಅವಲಂಬಿಸುವವನಾಗಿರಲಿಲ್ಲ ಎಂಬುದು ಇದರ ವಿಶೇಷ.

ಭೀಮನಿಂದ ಕಾಳಿಂಗವಧೆ

ಇತಿ ಕರ್ಣಸ್ಯ ತೌ ಭೀಮಃ ಸಂಜ್ಞಯಾ ಜ್ಞಾಪಯನ್ ಭುವಿ ।
ಪದಾ ಪಿಪೇಷ ಕಾಲಿಂಗಂ ಮುಷ್ಟಿನೈವ ಜಘಾನ ಹ ॥ ೨೧೭ ॥

---

೨೧೭. ಭುವಿ ಪದಾ ಪಿಪೇಷೇತ್ಯಸ್ಯ ಭುವಿ ಪಾತಯಿತ್ವಾ ಪದಾ ಪಿಪೇಷೇತ್ಯರ್ಥಃ । ಏತೇನ ಭುವೀತ್ಯೇತತ್ ವ್ಯರ್ಥಮಿತಿ ದೂಷಣಂ ಪರಾಸ್ತಮ್ । – (ಸ.)

೨೧೭. ಕಲಿಂಗಾನಾಂ ತು ತಂ ಶೂರಂ ಕ್ರುದ್ಧಂ ಕ್ರುದ್ಧೋ ವೃಕೋದರಃ ।
ರಥಾತ್ ರಥಮಭಿದ್ರುತ್ಯ ಮುಷ್ಟಿನಾಽಭಿಜಘಾನ ಹ ॥
ತಸ್ಯ ಮುಷ್ಟಿಹತಸ್ಯಾಜೌ ಪಾಂಡವೇನ ಬಲೀಯಸಾ ।
ಸರ್ವಾಣ್ಯಸ್ಥೀನಿ ಸಹಸಾ ಪ್ರಾಪತನ್ ವೈ ಪೃಥಕ್ ಪೃಥಕ್ ॥ – ಭಾರತ(ದ್ರೋಣ.೧೫೬/೨೩,೨೪)

ಅ: ಹೀಗೆ ಕರ್ಣನಿಗೆ ಸೂಚನೆ ನೀಡಲೆಂದು ಭೀಮ ಅವರಿಬ್ಬರನ್ನೂ ಕಾಲಿನಿಂದ ಹೊಸಕಿಹಾಕಿದ. ಕಾಲಿಂಗನನ್ನು ಮುಷ್ಟಿಯಿಂದಲೇ ಕೊಂದ.

ಮುಷ್ಟಿನಾ ತ್ವದ್ವಧಾಯಾಹಂ ಸಮರ್ಥ ಇತಿ ಕಿಂ ವದೇ ।
ತಸ್ಮಾನ್ಮಯಾ ರಕ್ಷಿತಸ್ತ್ವಮಿತಿ ಜ್ಞಾಪಯಿತುಂ ಪ್ರಭುಃ ।
ಸಾಶ್ವಸೂತಧ್ವಜರಥಃ ಕಾಲಿಂಗೋ ಮುಷ್ಟಿಚೂರ್ಣಿತಃ ॥ ೨೧೮ ॥

ಅ: ''ಮುಷ್ಟಿಯಿಂದಲೇ ನಿನ್ನನ್ನು ಕೊಲ್ಲಲು ಸಮರ್ಥ ಎಂದು ಬೇರೆ ಹೇಳಬೇಕೆ? ಆದರೂ ನಾನು ನಿನ್ನನ್ನು ಕೊಲ್ಲದೆ ಉಳಿಸಿದೆ'' ಎಂದು ತಿಳಿಸಲೆಂದು ಸಮರ್ಥನಾದ ಭೀಮ ಅಶ್ವ, ಸಾರಥಿ, ಧ್ವಜ, ರಥಗಳ ಸಮೇತವಾಗಿ ಕಾಲಿಂಗನನ್ನು ಮುಷ್ಟಿಯಿಂದ ಪುಡಿಮಾಡಿದ.

ವಿ: ೧) ಕರ್ಣ, ದುಷ್ಕರ್ಣರನ್ನು ಪಾದದಿಂದ ಹೊಸಕಿ ಕೊಂದಿದ್ದಂತೆ, ಕಾಲಿಂಗನನ್ನು ಭೀಮ ಮುಷ್ಟಿಯಿಂದ ಹೊಡೆದು ಕೊಂದ. ಅದರಂತೆ ಇದೂ ಸಹ ಕೇವಲ ಮುಷ್ಟಿಯಿಂದಲೂ ಅವನು ಕರ್ಣನನ್ನು ಕೊಲ್ಲಬಲ್ಲ ಸಮರ್ಥ ಎಂಬುದಕ್ಕೆ ಸೂಚನೆಯಾಯಿತು.

೨) ಅಂತೂ ಕರ್ಣನನ್ನು ತಾನು ಉದ್ದೇಶಪೂರ್ವಕವಾಗಿ ಉಳಿಸಿದ್ದೇ ಹೊರತು, ನಿರಾಯುಧತ್ವ ಮೊದಲಾದ ಕಾರಣಗಳಿಂದಲ್ಲ ಎಂದು ಭೀಮ ಆ ಮೂಲಕ ಕರ್ಣನಿಗೆ ತಿಳಿಸಿದ ಎಂದು ಭಾವ.

೩) ಕೃಷ್ಣ ಕಾಲಿಂಗಸರ್ಪವನ್ನು ಮೆಟ್ಟಿದ್ದಂತೆ, ಭೀಮಸೇನ ಕಾಲಿಂಗ ಎಂಬವನನ್ನು ಕೊಂದಿದ್ದ ಎಂಬುದು ವಿಶೇಷ. ಅದು ಸರ್ಪ ಮತ್ತು ಸುಜೀವಿಯಾದರೆ, ಇವನು ಕ್ಷತ್ರಿಯ ಮತ್ತು ಕುಜೀವಿ ಎಂಬುದು ಮತ್ತೊಂದು ವ್ಯತ್ಯಾಸ.

ಭೀಮನಿಂದ ಕೇತುಮಂತ ಮೊದಲಾದವರ ವಧೆ

ಕೇತುಮಾಂಶ್ಚ ಪಿತಾ ತಸ್ಯ ಶಕ್ರದೇವಃ ಶ್ರುತಾಯುಧಃ ।
ಅಕ್ಷೋಹಿಣ್ಯಾ ಸೇನಯಾ ಚ ಸಹ ಭೀಮೇನ ಪಾತಿತಃ ।
ಖಡ್ಗಯುದ್ಧೇ ಪುರಾ ಭೀಷ್ಮೇ ಸೇನಾಪತ್ಯಂ ಪ್ರಕುರ್ವತಿ ॥ ೨೧೯ ॥

---

* ಯಸ್ಯ ದೃಷ್ಟಿಶ್ಚ ಮುಷ್ಟಿಶ್ಚ ಗದಾ ಚಾರಿವಿದಾರಿಣೀ । —ಸರಸಭಾರತೀವಿಲಾಸ

೨೧೯. ಇದಾನೀಂತನರಾತ್ರಿಯುದ್ಧಪ್ರಸಂಗಾತ್ ಭೀಷ್ಮಪರ್ವಣಿ ದಶದಿನಾಭ್ಯಂತರೇ ಸೂರ್ಯಾಸ್ತಮಯಾನಂತರಮಪಿ ಕಿಂಚಿತ್ಕಾಲಂ ಖಡ್ಗಯುದ್ಧಮಾಸೀತ್। ತಾಂ ಕಥಾಮಪಿ ಸಂಗೃಹ್ಣಾತಿ ಖಡ್ಗೇತಿ। ಸಂಪೂರ್ಣರಾತ್ರಿಯುದ್ಧಾಭಾವಾತ್ ತತ್ರ ಪ್ರತ್ಯೇಕಂ ನ ವರ್ಣಿತಮ್। ಯಥಾऽರಣ್ಯಪರ್ವಣಿ ಧೃಷ್ಟದ್ಯುಮ್ನವಧರೂಪತಯಾ ತುಚ್ಛತ್ವಾದುಪೇಕ್ಷಿತಾ ಜಟಾಸುರವಧಕಥಾ ದ್ರುಪದಪುರೋಹಿತಮುಖೇನೋದ್ಯೋಗಪರ್ವಣಿ (೨೪/೬-೯) ವಾಚಿತಾ ತಥೇತಿ ಶ್ಲೇಷಃ।। –(ವಾ.)

೨೧೯. ತದುಕ್ತಂ ಭೀಷ್ಮಪರ್ವಣಿ। 'ತತಃ ಶ್ರುತಾಯುಧಃ ಕುದ್ಧೋ ರಾಜ್ಞಾ ಕೇತುಮತಾ ಸಹ। ಆಸಸಾದ ರಣೇ ಭೀಮಂ ವ್ಯೂಢಾನೀಕೇಷು ಚೇದಿಷು ।' ತಥಾ 'ಕಲಿಂಗಸ್ತು ಮಹೇಷ್ವಾಸಃ ಸಪುತ್ರಶ್ಚ ಮಹಾಬಲಃ। ಶಕ್ರದೇವ ಇತಿ ಖ್ಯಾತೋ ಜಘ್ನತುಃ ಪಾಂಡವಂ ರಣೇ।' ತಥಾ 'ಶಕ್ರದೇವಾಯ ಚಿಕ್ಷೇಪ ಸರ್ವಶೈಕ್ಯಾಯಸೀಂ ಗದಾಮ್। ಸ ತಯಾ ನಿಹತೋ ರಾಜನ್ ಕಲಿಂಗಸ್ಯ ಸುತೋ ರಥಾತ್।' ತಥಾ 'ಕೇತುಮಂತಂ ರಣೇ ಭೀಮೋ ಗಮಯದ್ಯಮಸಾದನಮ್' ಇತ್ಯಾದಿ। –(ಜ.)

೨೧೯. ವರದರಾಜಾಚಾರ್ಯಾಸ್ತು ಕೇತುಮದಾದೀನಾಂ ದ್ರೋಣಸೇನಾಪತ್ಯದಶಾಯಾಮೇವ ಭೀಮೇನ ವಧಮುಕ್ತ್ವಾ ಭೀಷ್ಮೇ ಪುರಾ ಸೇನಾಪತ್ಯಂ ಕುರ್ವತಿ ಸತಿ ಕರ್ಣಾನುಜಾನ್ ಧ್ರುವಾದ್ಯಾನ್ ನಿಶಿ ಖಡ್ಗಯುದ್ಧೇ ಪ್ರವರ್ತಮಾನೇ ಸ ವಿಜಘ್ನ ಇತಿ ವ್ಯಾಚಕ್ಷತೇ। ವ್ಯಾಸತೀರ್ಥಾಸ್ತು ಸಿಂಹಾವಲೋಕನನ್ಯಾಯೇನ ಪೂರ್ವಪ್ರವೃತ್ತಮಪಿ ನಿಶಾಯುದ್ಧಮಾಹ ಖಡ್ಗೇತೀತ್ಯಾಚಕ್ಷತೇ । ಅನಂತಭಟ್ಟಾರಕಾಸ್ತು ರಾತ್ರಿಯುದ್ಧಾತ್ ಪ್ರಸಂಗಾತ್ ಪ್ರವೃತ್ತಂ ರಾತ್ರಿಯುದ್ಧಮಾಹ – ಖಡ್ಗೇತೀತಿ ವ್ಯಾಚಕ್ಷತೇ । ತದೇತದ್ವ್ಯಾಖ್ಯಾನತ್ರಯಮಪಿ ಚಿಂತ್ಯಮ್ । ತಥಾಹಿ ಖಡ್ಗಯುದ್ಧ ಇತ್ಯೇತದರ್ಥಸ್ಯೋತ್ತರೇಣಾನ್ವಯೇ ಕೇತುಮದಾದೀನಾಂ ದ್ರೋಣಸೇನಾಪತ್ಯದಶಾಯಾಮೇವ ವಧೋಕ್ತ್ಯಾಪತ್ತೇಃ। ನ ಚೈತತ್ ಸಂಭವತಿ । ಉಕ್ತರೀತ್ಯಾ ಭೀಷ್ಮಸೇನಾಪತ್ಯದಶಾಯಾಮೇವ ಕೇತುಮದಾದೀನಾಂ ವಧೋಕ್ತ್ಯಗಮೇನ ಭೀಷ್ಮಪರ್ವವಿರೋಧಾಪತ್ತೇಃ । ಭೀಷ್ಮಪರ್ವಪರ್ಯಾಲೋಚನೇ ದಶದಿನಮಧ್ಯೇ ರಾತ್ರಿಯುದ್ಧಸ್ಯ ಕದಾऽಪ್ಯನುಕ್ತತ್ವಾತ್ ।

'ಸ ಹಿ ನೋऽಯುದ್ಧ್ಯತ ತದಾ ದಶಾಹಾನಿ ಮಹಾರಥಃ।
ಸಾಮಾತ್ಯಬಂಧುಃ ಕರ್ಣೋ ವೈ ಸೇನಾಂ ಸ್ವಾಂ ಸಮಬೂಬುದತ್ ।
ಸಾಮಾತ್ಯಬಂಧುಃ ಕರ್ಣೋऽಪಿ ದಶಾಹಾನಿ ನೋ ಯುದ್ಧ್ಯತ ।।'

ಇತಿ ಕರ್ಣಾನುಜಾನಾಂ ಯುದ್ಧಾಭಾವಕಥನಾತ್ ಭೀಷ್ಮಪರ್ವಣ್ಯಪಿ ಕರ್ಣಾನುಜಾನಾಂ ಯುದ್ಧಾಕಥನಾತ್ । ಕೇಚಿತ್ ತು ಕೇತುಮದಾದೀನಾಂ ದ್ರೋಣಸೇನಾಪತ್ಯದಶಾಯಾಮೇವ ವಧಮುಕ್ತ್ವಾ ಭೀಷ್ಮೇ ಸೇನಾಪತ್ಯಂ ಕುರ್ವತಿ ಸತಿ ಖಡ್ಗಯುದ್ಧೇ ಧ್ರುವಾದ್ಯಾನ್ ಬಹೂನ್ ಕರ್ಣಾನುಜಾನ್ ಜಘ್ನ ಇತಿ ವ್ಯಾಖ್ಯಾಯ, ಕರ್ಣೋ ನಿಶಿ ಭೀಮಕೃತಾಂ ಸಂಜ್ಞಾಂ ಕೃತ್ವಾ ಅಪರಾಂ ಇಂದ್ರದತ್ತಶಕ್ತಿಭಿನ್ನಾಂ ಶಕ್ತಿಂ ಚಿಕ್ಷೇಪೇತಿ ನಿಶೀತ್ಯೇತದುತ್ತರೇಣ ಯೋಜಯತಿ । ತದಾऽಪಿ ನ । ಭೀಷ್ಮಪರ್ವಪರ್ಯಾಲೋಚನೇ ಭೀಷ್ಮಸೇನಾಪತ್ಯದಶಾಯಾಂ ಕರ್ಣಾನುಜಾನಾಂ ಯುದ್ಧಸ್ಯೈವಾನವಗಮಾತ್ । ದ್ರೋಣಪರ್ವಣಿ ಕರ್ಣಾನುಜಾನಾಂ ಭೀಷ್ಮಸೇನಾಪತ್ಯದಶಾಯಾಂ ಯುದ್ಧಾಭಾವಸ್ಯೋಕ್ತತ್ವಾಚ್ಚ । ಕೇತುಮದಾದೀನಾಂ ದ್ರೋಣಸೇನಾಪತ್ಯದಶಾಯಾಮೇವ ವಧೋಕ್ತೇಃ ಭೀಷ್ಮಪರ್ವವಿರೋಧಾತ್ । ಕಿಂಚ ದ್ರೋಣಪರ್ವಣಿ 'ರಾತ್ರಿಯುದ್ಧೇ ತದಾ ರಾಜನ್ ವರ್ತಮಾನೇ ಸುದಾರುಣೇ । ದ್ರೋಣಮಭ್ಯದ್ರವನ್ ಸರ್ವೇ ಪಾಂಡವಾ ಸಹಸೈನಿಕಾಃ' ಇತ್ಯಾದಿನಾ ರಾತ್ರಿಯುದ್ಧಂ ಕಿಂಚಿದುಕ್ತ್ವಾ ಕೇತುಮತ್ಪುತ್ರಕಾಳಿಂಗವಧಾನಂತರಂ–

ತಂ ಕರ್ಣೋ ಭ್ರಾತರಶ್ಚಾಸ್ಯ ನಾಮೃಷ್ಯಂತ ಪರಂತಪ।
ತೇ ಭೀಮಸೇನಂ ನಾರಾಚೈರ್ಜಘ್ನುರಾಶೀವಿಷೋಪಮೈಃ।
ತತಃ ಶತ್ರರಥಂ ತ್ಯಕ್ತ್ವಾ ಭೀಮೋ ಧ್ರುವರಥಂ ಗತಃ।
ಧ್ರುವಂ ಚಾಸ್ಯಂತಮನಿಶಂ ಮುಷ್ಣಾನ ಸಮಪೋಥಯತ್ ।

ಅ: ಭೀಷ್ಮರು ಸೇನಾಧಿಪತ್ಯ ಮಾಡುತ್ತಿದ್ದಾಗ ಖಡ್ಗಯುದ್ಧದಲ್ಲಿ ಕಾಳಿಂಗನ ತಂದೆಯಾದ ಕೇತುಮಾನ್, ಶಕ್ರದೇವ, ಶ್ರುತಾಯುಧ ಎಂಬವರು ಭೀಮನಿಂದ ಅಕ್ಷೋಹಿಣೀ ಸೇನೆ-ಯೊಂದಿಗೆ ಹತರಾಗಿದ್ದರು.

ವಿ: ೧) ಭೀಷ್ಮರ ಸೇನಾಪತ್ಯಕಾಲದಲ್ಲಿ ತನ್ನ ತಂದೆಯಾದ ಕೇತುಮಾನ್ ಎಂಬವನನ್ನು ಭೀಮ ಸಂಹರಿಸಿದ್ದ ಎಂಬ ಕಾರಣದಿಂದ ಸೇಡು ತೀರಿಸಿಕೊಳ್ಳಲೆಂದು, ಅವನ ಮಗನಾದ ಕಾಲಿಂಗ ಯುದ್ಧಕ್ಕೆಂದು ಬಂದಿದ್ದ. ಅವನೀಗ ಭೀಮನಿಂದ ಹೀಗೆ ಸತ್ತ ಎಂದು ತಿಳಿಯಬೇಕು.

೨) ಇದು ಭೀಷ್ಮಪರ್ವದಲ್ಲಿ ಒಮ್ಮೆ ಸ್ವಲ್ಪಹೊತ್ತು ರಾತ್ರಿಯುದ್ಧ ನಡೆದಾಗ ಘಟಿಸಿದ ಪ್ರಸಂಗ ಎಂದು ಕೆಲವು ವ್ಯಾಖ್ಯಾನಗಳಲ್ಲುಂಟು. ಆಗ ಅವರು ಮಾಡಿಕೊಂಡ ಯುದ್ಧದ ನಿಯಮಗಳಂತೆ ರಾತ್ರಿಯುದ್ಧ ಮಾಡುವಂತಿರಲಿಲ್ಲ. ಇಂದಿನ ರಾತ್ರಿಯುದ್ಧಕ್ಕೆ ವಿಶೇಷಕಾರಣ–ವಿದ್ದಂತೆ, ಅಂದಿನ ರಾತ್ರಿಯುದ್ಧಕ್ಕೆ ವಿಶೇಷಕಾರಣ ಉಕ್ತವಾಗಿಲ್ಲ. ಆದ್ದರಿಂದ ಅಂದು ರಾತ್ರಿಯುದ್ಧವಾಗಿತ್ತೆಂದು ತಿಳಿಯುವುದು ಕಷ್ಟ ಎಂದು ಇತರ ಕೆಲವು ವ್ಯಾಖ್ಯಾನಗಳಲ್ಲಿದೆ.

ಭೀಮನಿಂದ ಕರ್ಣಾನುಜರ ವಧೆ

ಕರ್ಣಾನುಜಾನ್ ಧ್ರುವಾದ್ಯಾಂಶ್ಚ ಬಹೂನ್ ಜಘ್ನೇ ಸ ವೈ ನಿಶಿ ।
ಸಂಜ್ಞಾಂ ಭೀಮಕೃತಾಂ ಜ್ಞಾತ್ವಾ ಶಕ್ತಿಂ ಚಿಕ್ಷೇಪ ಚಾಪರಾಮ್ ॥ ೨೨೦ ॥

ಇತ್ಯಾದಿನಾ ದ್ರೋಣಸೇನಾಪತ್ಯದಶಾಯಾಮೇವ ನಿಶಾಯುದ್ಧೇ ಧ್ರುವಾದಿ- ಕರ್ಣಾನುಜಾನಾಂ ವಧೋಕ್ತ್ಯಾ 'ಕಲಿಂಗಾನಾಮನೀಕೇನ ಕಾಲಿಂಗಸ್ಯ ಸುತೋ ರಣೇ । ಪೂರ್ವಂ ಪಿತೃವಧಾತ್ ಕ್ರುದ್ಧೋ ಭೀಮಸೇನಮುಪಾದ್ರವತ್' ಇತಿ ದ್ರೋಣಪರ್ವಣಿ । ಭೀಷ್ಮಪರ್ವವೃತ್ತಕೇತುಮದಾದಿವಧಃ ಸ್ಮಾರಿತ ಇತಿ ಭಗವತ್ಪಾದೈರಪಿ ಕೇತುಮದಾದಿ-ವಧೋಽಪ್ಯತ್ರೋಕ್ತಇತಿ ಧ್ಯೇಯಮ್ । – (ವಿ.)

೨೨೦. ಸ ಭೀಮಃ ಧ್ರುವಾದ್ಯಾನ್ ಕರ್ಣಾನುಜಾನ್ ಬಹೂನ್ ನಿಶಿ ರಾತ್ರೌ ದ್ರೋಣೇ ಸೇನಾಪತೌ ಜಘ್ನೇ। ತದುಕ್ತಂ ದ್ರೋಣಪರ್ವಣಿ – 'ಧ್ರುವಂ ಚಾಸ್ಯಂತಮನಿಶಂ ಮುಷ್ಣಿನಾಸಮಪೋಥಯತ್।' ತಥಾ 'ತತಃ ಶತ್ರುರಯಂ ಹತ್ವಾ ಭೀಮೋ ಧ್ರುವರಥಂ ಗತಃ' ಇತಿ। ತಥಾ 'ಜಯರಾತರಥಂ ಕ್ಷಿಪ್ರಂ ಮರ್ದನ್ ಸವ್ಯೇನ ಪಾಣಿನಾ। ತಲೇನ ನಾಶಯಾಮಾಸ ಕರ್ಣಸ್ಯಾಗ್ರೇ ತತಃ ಸ್ಥಿತಮ್' ಇತ್ಯಾದಿನಾ ॥ – (ಜ.)

೨೨೦. ಧ್ರುವಂ ಚಾಸ್ಯಂತಮನಿಶಂ ಮುಷ್ಣಿನಾ ಸಮಪೋಥಯತ್ ।
ಸ ತಥಾ ಪಾಂಡುಪುತ್ರೇಣ ಬಲಿನಾ ಽಭಹತೋ ಽಪತತ್ ॥ – ಭಾರತ (ದ್ರೋಣ. ೧೫೬/೨೬)

ಜಯರಾತಮಥಾಕ್ಷಿಪ್ಯ ನದನ್ ಸವ್ಯೇನ ಪಾಣಿನಾ ।
ತಲೇನ ನಾಶಯಾಮಾಸ ಕರ್ಣಸ್ಯೈವಾಗ್ರತಃ ಸ್ಥಿತಃ ॥ – ಭಾರತ (ದ್ರೋಣ. ೧೫೬/೨೮)

ಅ: ಆ ರಾತ್ರಿಯಲ್ಲಿ ಭೀಮಸೇನ ಕರ್ಣನ ತಮ್ಮಂದಿರಾದ ಧ್ರುವ ಮೊದಲಾದ ಅನೇಕರನ್ನು ಸಂಹರಿಸಿದ. ಭೀಮ ನೀಡಿದ ಸೂಚನೆಯನ್ನು ಅರ್ಥ ಮಾಡಿಕೊಂಡ ಕರ್ಣ ಮತ್ತೊಂದು ಶಕ್ತ್ಯಾಯುಧವನ್ನು ಭೀಮನ ಮೇಲೆ ಪ್ರಯೋಗಿಸಿದ.

ವಿ: ಇಲ್ಲಿಯ ಧ್ರುವಾದಿ ಕರ್ಣಾನುಜರ ಪ್ರಸ್ತಾಪದಿಂದ ಅಧಿರಥರಾಧೆಯರಿಗೆ ಕರ್ಣಪ್ರಾಪ್ತಿಯ ಅನಂತರ ಧ್ರುವ ಮೊದಲಾದ ಮಕ್ಕಳು ಜನಿಸಿದ್ದ ವಿವರ ತಿಳಿಯುವುದು. ಕರ್ಣ ಹೀಗೆ ಪ್ರಯೋಗಿಸಿದ್ದು ಇಂದ್ರದತ್ತವಾದ ಅಮೋಘಶಕ್ತ್ಯಾಯುಧವನ್ನಲ್ಲ ಎಂಬುದನ್ನು 'ಅಪರಾಂ' ಎಂಬ ಪದದಿಂದ ತಿಳಿಸಿರುವರು.

ಭೀಮನಿಂದ ಕರ್ಣಶಕ್ತಿಯ ಭಂಗ

ಕರ್ಣಃ ಶಕ್ತಿರ್ಮಯಾ ದಿವ್ಯಾ ನ ಮುಕ್ತಾ ತೇನ ಜೀವಸಿ ।
ಇತಿ ಜ್ಞಾಪಯಿತುಂ ತಾಂ ತು ಜ್ಞಾತ್ವಾ ಭೀಮಃ ಕ್ಷಣಾತ್ ತದಾ ।
ಖಮುತ್ಪತ್ಯ ಗೃಹೀತ್ವಾ ಚ ಕರ್ಣೇ ಚಿಕ್ಷೇಪ ಸತ್ವರಃ ॥ ೨೨೧ ॥

ಅ: ಕರ್ಣ ''ನಾನು ಶಕ್ತ್ಯಾಯುಧವನ್ನು ಪ್ರಯೋಗಿಸಿಲ್ಲ; ಅದರಿಂದಾಗಿಯೇ ನೀನು ಬದುಕಿರುವಿ'' ಎಂದು ತಿಳಿಸಲು ಹಾಗೆ ಮಾಡಿದ. ಅದನ್ನು ಅರಿತ ಭೀಮ, ಕ್ಷಣಮಾತ್ರದಲ್ಲಿ ಗಗನಕ್ಕೆ ನೆಗೆದು, ಕರ್ಣಪ್ರಯೋಗಿಸಿದ ಶಕ್ತ್ಯಾಯುಧವನ್ನು ಕೈಯಲ್ಲಿ ಹಿಡಿದು, ಅದನ್ನು ಕರ್ಣನ ಮೇಲೆಯೇ ವೇಗದಿಂದ ಎಸೆದ.

ವಿ: ಇಲ್ಲಿ ಭೀಮನ ಅಸಾಮಾನ್ಯ ವೇಗಸಾಮರ್ಥ್ಯವನ್ನು ಗಮನಿಸಬೇಕು. ಕರ್ಣ ಎಸೆದ ಶಕ್ತ್ಯಾಯುಧವನ್ನೇ ಹಿಡಿದು, ಅದನ್ನು ಮರಳಿ ಅವನ ಮೇಲೆಯೇ ಎಸೆದದ್ದು ಅವನ ಅಸಾಧಾರಣ ಹಿರಿಮೆ.

ಯದಿ ತ್ವಯಾ ತದಾ ಮುಕ್ತಾ ಶಕ್ತಿಸ್ತ್ವಾಂ ಸಾ ಹನಿಷ್ಯತಿ ।
ಇತಿ ಜ್ಞಾಪಯಿತುಂ ಸಾ ಚ ಕರ್ಣರಕ್ಷಣಕಾಂಕ್ಷಿಣಾ ॥ ೨೨೨ ॥

---

೨೨೧. ಕರ್ಣಸ್ತು ಪಾಂಡವೇ ಶಕ್ತಿಂ ಕಾಂಚನೀಂ ಸಮವಾಸೃಜತ್ ।
ಯತಸ್ತಾಮೇವ ಜಗ್ರಾಹ ಪ್ರಹಸನ್ ಪಾಂಡುನಂದನಃ ॥
ಕರ್ಣಾಯೈವ ಚ ದುರ್ಧರ್ಷಶ್ಚಿಕ್ಷೇಪಾಜೌ ವೃಕೋದರಃ ॥ – ಭಾರತ (ದ್ರೋಣ. ೧೫೫/೩೦)

ಮುಕ್ತಾ ದಕ್ಷಭುಜೇ ಸಾऽಥ ವಿದಾರ್ಯ ಧರಣೀಂ ತಥಾ ।
ಭಿತ್ತ್ವಾ ವಿವೇಶ ಕರ್ಣಸ್ಯ ದರ್ಶಯಂತೀ ನಿದರ್ಶನಮ್ ॥ ೨೨೩ ॥

ಅ: ''ನೀನು ಆಗ ಆ ಶಕ್ತ್ಯಾಯುಧವನ್ನು ಪ್ರಯೋಗಿಸಿದ್ದಲ್ಲಿ ಅದು ನಿನ್ನನ್ನೇ ಕೊಲ್ಲುತ್ತಿತ್ತು'' ಎಂದು ತಿಳಿಸಲೆಂದು ಹಾಗೆ ಮಾಡಿದ; ಮತ್ತು ಕರ್ಣನನ್ನು ಉಳಿಸಬಯಸಿದ್ದ ಭೀಮ ಅವನ ಬಲಭುಜದ ಮೇಲೆ ಎಸೆದಿದ್ದ. ಅದು ಅವನ ಭುಜವನ್ನು ಸೀಳಿ, ನೆಲವನ್ನೂ ಸೀಳಿ ಒಳಹೊಕ್ಕಿತು. ಕರ್ಣನಿಗೆ ನಿದರ್ಶನವನ್ನೂ ತಿಳಿಸಿತು.

ವಿ: ೧) ''ಕರ್ಣ! ಆಗ ಶಕ್ತ್ಯಾಯುಧವನ್ನು ಪ್ರಯೋಗಿಸಿದ್ದಲ್ಲಿ ಹೀಗೆಯೇ ಅದನ್ನು ಕೈಯಲ್ಲಿ ಹಿಡಿದು, ನಿನ್ನ ಮೇಲೆ ಎಸೆದು, ನಿನ್ನನ್ನೇ ಕೊಲ್ಲುತ್ತಿದ್ದೆ'' ಎಂದು ಭೀಮ ಹಾಗೆ ಮಾಡುವ ಮೂಲಕ ತಿಳಿಸಿದ ಎಂದರ್ಥ.

೨) ಈಗಲೂ ಭೀಮ ಶಕ್ತ್ಯಾಯುಧವನ್ನು ಕರ್ಣನ ಎದೆಗೆ ಪ್ರಯೋಗಿಸದೆ, ಅವನ ಬಲತೋಳಿನ ಮೇಲೆ ಪ್ರಯೋಗಿಸಿ, ಅವನ ಪ್ರಾಣವನ್ನು ಕಾಪಾಡಿದ್ದ ಎಂಬುದು ಇಲ್ಲಿಯ ವಿಶೇಷ. ಹಾಗೆ ಕರ್ಣನನ್ನು ಉಳಿಸಲು ಹಿಂದೆ ಹೇಳಿದ್ದಂತೆ ಅರ್ಜುನನ ಪ್ರತಿಜ್ಞೆಯನ್ನು ನಡೆಸುವುದು ಮುಖ್ಯಕಾರಣವಾಗಿತ್ತು ಎಂದೂ ತಿಳಿಯಬೇಕು.

ತತೋ ಭೀಮಃ ಪುನಃ ಸ್ವಂ ತು ರಥಮಾಸ್ಥಾಯ ಚಾಪಭೃತ್ ।
ಕರ್ಣಸ್ಯ ಪುರತಃ ಶತ್ರೂನ್ ದ್ರಾವಯಾಮಾಸ ಸರ್ವತಃ ॥ ೨೨೪ ॥

ಅ: ಬಳಿಕ ಭೀಮ ಮರಳಿ ತನ್ನ ರಥವನ್ನು ಏರಿ, ಬಿಲ್ಲನ್ನೆತ್ತಿಕೊಂಡು, ಕರ್ಣನ ಎದುರೇ ಶತ್ರುಗಳನ್ನು ಎಲ್ಲೆಡೆಗಳಿಂದಲೂ ಹೊಡೆದೋಡಿಸತೊಡಗಿದ.

ಭೀಮನಿಂದ ಕರ್ಣರಥದ ನಾಶ

ತಂ ಕರ್ಣೋ ವಾರಯಾಮಾಸ ಶರೈಃ ಸನ್ನತಪರ್ವಭಿಃ ।
ಭೀಮಃ ಕರ್ಣರಥಾಯೈವ ಗದಾಂ ಚಿಕ್ಷೇಪ ವೇಗತಃ ॥ ೨೨೫ ॥

ಅ: ಆಗ ಕರ್ಣ ಭೀಮನನ್ನು ಬಾಗಿದ ಗಿಣ್ಣುಳ್ಳ ಬಾಣಗಳಿಂದ ತಡೆಯಲು ಯತ್ನಿಸಿದ. ಭೀಮ ಕರ್ಣನ ರಥದ ಮೇಲೆ ಗದೆಯನ್ನು ವೇಗದಿಂದ ಅಪ್ಪಳಿಸಿದ.

ಸ ತದ್ಗದಾಭಿಘಾತಾಯ ಸ್ಥೂಣಾಕರ್ಣಾಸ್ತ್ರಮಾಸೃಜತ್ ।
ತೇನಾಸ್ತ್ರೇಣ ಪ್ರತಿಹತಾ ಸಾ ಗದಾ ಭೀಮಮಾವ್ರಜತ್ ॥ ೨೨೬ ॥

ಅ: ಕರ್ಣ ಭೀಮನ ಗದೆಯನ್ನು ಪ್ರತಿಯಾಗಿ ಹೊಡೆಯಲೆಂದು, ಸ್ಥೂಣಾಕರ್ಣಾಸ್ತ್ರವನ್ನು ಪ್ರಯೋಗಿಸಿದ. ಆ ಅಸ್ತ್ರದಿಂದ ಹೊಡೆಯಲ್ಪಟ್ಟ ಗದೆ ಭೀಮನ ಬಳಿಗೆ ಮರಳಿತು.

ಭೀಮೋ ಗದಾಂ ಸಮಾದಾಯ ಕರ್ಣಸ್ಯ ರಥಮಾರುಹತ್ ।
ತಯಾ ಸಂಚೂರ್ಣಯಾಮಾಸ ಕರ್ಣಸ್ಯ ರಥಕೂಬರಮ್ ॥ ೨೨೭ ॥

ಅ: ಆಗ ಭೀಮ ಗದೆಯನ್ನು ಕೈಗೆತ್ತಿಕೊಂಡು, ಕರ್ಣನ ರಥವನ್ನು ಏರಿದ. ಆ ಗದೆಯಿಂದ ಕರ್ಣನ ರಥದ ನೊಗವನ್ನು ಪುಡಿಪುಡಿ ಮಾಡಿದ.

ವಿ: ಈ ಮೊದಲು ಭೀಮ ಕರ್ಣನ ರಥವನ್ನು ಏರಿದ್ದಾಗ, ಕರ್ಣ ರಥದ ನೊಗದ ಕೆಳಗೆ ಅಡಗಿಕೊಂಡಿದ್ದ (ಶ್ಲೋ. ೧೫೫). ಆಗ ಮನಸ್ಸು ಮಾಡಿದ್ದಲ್ಲಿ ಈಗಿನಂತೆ ರಥದ ನೊಗವನ್ನು ಪುಡಿಮಾಡಿ, ನಿನ್ನನ್ನು ಕೊಲ್ಲುತ್ತಿದ್ದೆ ಎಂದು ಈ ಮೂಲಕ ತಿಳಿಸಿದ ಎಂದು ತಿಳಿಯಬಹುದು. ಆಗ ಆ ರಥದ ನೊಗವನ್ನು ಪುಡಿ ಮಾಡದಿರಲು ಅದು ಪರಶುರಾಮದತ್ತವಾದ ದಿವ್ಯರಥ ಎಂಬ ಗೌರವ ಕಾರಣವಾಗಿತ್ತು ಎಂಬುದು ಮತ್ತೊಂದು ವಿಶೇಷಾಂಶ.

ಏವಂ ತ್ವಚ್ಚೂರ್ಣನೇ ಶಕ್ತೋ ಮತ್ಕಾಮಾತ್ ತ್ವಂ ಹಿ ಜೀವಸಿ ।
ಏವಂ ನಿದರ್ಶಯಿತ್ವೈವ ಪುನಃ ಸ್ವಂ ರಥಮಾವ್ರಜತ್ ॥ ೨೨೮ ॥

ಅ: ''ಹೀಗೆ ನಿನ್ನನ್ನೂ ನಾನು ಕೊಲ್ಲಲು ಸಮರ್ಥ; ಆದರೆ ನಾನು ಬೇಕೆಂದೇ ನಿನ್ನನ್ನು ಉಳಿಸಿರುವೆ'' ಎಂದು ಆ ನಿದರ್ಶನದಿಂದ ತೋರಿಸಿ, ಭೀಮನು ತನ್ನ ರಥಕ್ಕೆ ಮರಳಿದ.

ವಿ: ರಥದ ನೊಗವನ್ನು ಪುಡಿ ಮಾಡಿದಂತೆ, ಕರ್ಣನನ್ನೂ ಪುಡಿ ಮಾಡಲು ತಾನು ಶಕ್ತ ಎಂದು ಭೀಮ ಆ ಮೂಲಕ ತೋರಿಸಿ, ತನ್ನ ರಥಕ್ಕೆ ಮರಳಿದನು.

ಕರ್ಣನಿಂದ ಸಹದೇವನ ಪರಾಜಯ

ಪುನಃ ಕರ್ಣಪುರಃ ಸೇನಾಂ ಜಘಾನ ಬಹುಶೋ ರಣೇ ।
ಕರ್ಣಸ್ತು ತಂ ಪರಿತ್ಯಜ್ಯ ಸಹದೇವಮುಪಾದ್ರವತ್ ॥ ೨೨೯ ॥

ಅ: ಭೀಮ ಮತ್ತೆ ಕರ್ಣನೆದುರೇ ಸೇನೆಯನ್ನು ಬಹಳವಾಗಿ ಯುದ್ಧದಲ್ಲಿ ಕೊಲ್ಲತೊಡಗಿದ. ಕರ್ಣ ಅವನನ್ನು ಬಿಟ್ಟು ಸಹದೇವನೆಡೆಗೆ ಸಾಗಿದ.

ವಿ: ೧) ಭೀಮನ ಇಂತಹ ಅಪೂರ್ವಪರಾಕ್ರಮವನ್ನು ಮತ್ತೊಮ್ಮೆ ಕಂಡ ಕರ್ಣ, ಭೀಮನ ಮೇಲೆ ತನ್ನಿಂದ ಯುದ್ಧ ಮಾಡಲಾಗದೆಂದು ಬಗೆದು, ಅಲ್ಲಿಂದ ಸಹದೇವನೆಡೆಗೆ ತೆರಳಿದ ಎಂದರ್ಥ. ಈ ಬಳಿಕ ಕರ್ಣ ಭೀಮನ ಮೇಲೆ ನೇರವಾಗಿ ಯುದ್ಧಕ್ಕೆ ಅಷ್ಟಾಗಿ ತೊಡಗಲಿಲ್ಲ ಎಂಬುದು ಗಮನಾರ್ಹ ಅಂಶ.

೨) ಭೀಮಪರಾಕ್ರಮದ ಈ ಭಾಗವೂ ಸಹ ಅನುವಾದಗಳಲ್ಲಿ, ಪಂಪಭಾರತ, ಕುಮಾರವ್ಯಾಸಭಾರತ ಮೊದಲಾದ ಕೃತಿಗಳಲ್ಲಿ ಸಂಪೂರ್ಣವಾಗಿ ಬಿಟ್ಟುಹೋಗಿದೆ. ಇದರಿಂದಾಗಿ ಮೂಲಭಾರತವನ್ನು ಓದಲಾಗದ ಜನಗಳಿಗೆ ಭೀಮಪರಾಕ್ರಮದ ಪರಿಚಯ ತಪ್ಪಿಹೋಗು-ವಂತಾಗಿದೆ.

ಸ ತು ತಂ ವಿರಥೀಕೃತ್ಯ ಧನುಃ ಕಂಠೇऽವಸಜ್ಯ ಚ ।
ಕುತ್ಸಯಾಮಾಸ ಬಹುಶಃ ಸ ತು ನಿರ್ವೇದಮಾಗಮತ್ ॥ ೨೩೦ ॥

ಅ: ಕರ್ಣ ಸಹದೇವನನ್ನು ವಿರಥನನ್ನಾಗಿ ಮಾಡಿ, ಕತ್ತಿಗೆ ಬಿಲ್ಲು ಸಿಕ್ಕಿಸಿ, ಬಹಳವಾಗಿ ಅವಮಾನಿಸಿದ. ಸಹದೇವ ತುಂಬಾ ವಿಷಣ್ಣನಾದ.

ವಿ: ಭೀಮನಿಂದ ತನಗಾದ ಅವಮಾನವನ್ನು ಕರ್ಣ ದುರ್ಬಲನಾದ ಸಹದೇವನ ಮೇಲೆ ತೀರಿಸಿಕೊಳ್ಳುವ ಮೂಲಕ ತನ್ನ ವಿಕೃತಮನಸ್ಸನ್ನು ತೋರಿಸಿಕೊಂಡ ಎಂದು ಇದರಿಂದ ತಿಳಿಯುವುದು. ಈ ರೀತಿ ಅವನು ಮುಂದೆಯೂ ನಕುಲ, ಧರ್ಮರಾಜರ ಮೇಲೂ ನಡೆದು-ಕೊಳ್ಳುವುದನ್ನು ಗಮನಿಸಬೇಕು.

ನ ಹಂತುಮೈಚ್ಛತ್ ತಂ ಕರ್ಣಃ ಪೃಥಾಯೈ ಸ್ವಂ ವಚಃ ಸ್ಮರನ್ ।
ತಂ ವಿಜಿತ್ಯ ರಣೇ ಕರ್ಣೋ ಜಘ್ನೇ ಪಾರ್ಥವರೂಥಿನೀಮ್ ॥ ೨೩೧ ॥

ಅ: ತಾನು ಕುಂತಿಗೆ ನೀಡಿದ ವಚನವನ್ನು ಸ್ಮರಿಸಿಕೊಂಡು ಕರ್ಣ ಸಹದೇವನನ್ನು ಕೊಲ್ಲ-ಲಿಚ್ಛಿಸಲಿಲ್ಲ. ಅವನು ಸಹದೇವನನ್ನು ಸೋಲಿಸಿ, ಪಾಂಡವಸೇನೆಯನ್ನು ಕೊಲ್ಲತೊಡಗಿದ.

---

೨೩೦. ಕುತ್ಸಯಾಮಾಸ ಬಹುಶ ಇತಿ 'ತಮಭಿದ್ರುತ್ಯ ರಾಧೇಯೋ ಮುಹೂರ್ತಾದ್ಭರತರ್ಷಭ । ಅಬ್ರವೀತ್ ಪ್ರಹಸನ್ ವಾಕ್ಯಂ ಸಹದೇವಂ ವಿಶಾಂಪತೇ । ಮಾ ಯುದ್ಧ್ಯಸ್ವ ರಣೇ ವೀರ ವಿಶಿಷ್ಟೈರರಿಭಿಃ ಸಹ ।'..... ॥

– (ವಿ.)

ಘಟೋತ್ಕಚ ಅಶ್ವತ್ಥಾಮರ ಸಂಗ್ರಾಮ

ತತೋ ದ್ರೌಣಿರ್ವಿಧೈರ್ಬಾಣಸಂಘೈ-
ರ್ಜಘಾನ ಪಾರ್ಥಸ್ಯ ಚಮೂಂ ಸಮಂತತಃ ।
ಸಾ ಹನ್ಯಮಾನಾ ರಣಕೋವಿದೇನ
ನ* ಶಂ ಲೇಭೇ ಮೃತ್ಯುನಾಽಽರ್ತಾ ಪ್ರಜೇವ ॥ ೨೩೨ ॥

ಅ: ಆಗ ಅಶ್ವತ್ಥಾಮ ಬಗೆಬಗೆಯ ಬಾಣಸಮೂಹಗಳಿಂದ ಅರ್ಜುನನ ಸೇನೆಯನ್ನು ಎಲ್ಲೆಡೆಯಿಂದಲೂ ಕೊಲ್ಲತೊಡಗಿದ. ಯುದ್ಧಕೋವಿದನಾದ ಅವನಿಂದ ಹೊಡೆಯಲ್ಪಡುತ್ತಿದ್ದ ಆ ಸೇನೆ ಮರಣಕ್ಕೆ ತುತ್ತಾದ ಆರ್ತಜಂತುವಿನಂತೆ ನೆಮ್ಮದಿ ಕಾಣದಾಯಿತು.

ವಿ: ಅಶ್ವತ್ಥಾಮರು ಆ ಸೇನೆಯ ಪಾಲಿಗೆ ಮೃತ್ಯುದೇವತೆಯಂತಾದರು ಎಂದರ್ಥ. ಅವರು ನಿಜಕ್ಕೂ ಸಹ ಲಯಕರ್ತೃವಾದ ಮೃತ್ಯುದೇವತೆಯೇ ಆದವರು ಎಂಬುದನ್ನು ಗಮನಿಸಬೇಕು.

ದೃಷ್ಟ್ವಾ ಸೇನಾಂ ದ್ರೌಣಿಬಲಾಭಿಭೂತಾಂ
ತಮಾಹ್ವಯಾಮಾಸ ಘಟೋತ್ಕಚೋ ಯುಧಿ ।
ದ್ರೌಣಿಸ್ತಮಾಹಾಲಮಲಂ ನ ವತ್ಸ
ಪುತ್ರಸ್ತಾತಂ ಯೋಧಯಸ್ವಾದ್ಯ ಮಾಂ ತ್ವಮ್ ॥ ೨೩೩ ॥

ಅ: ಅಶ್ವತ್ಥಾಮರ ಬಲಕ್ಕೆ ತಮ್ಮ ಸೇನೆ ನಾಶವಾಗುತ್ತಿದ್ದುದನ್ನು ಕಂಡು, ಘಟೋತ್ಕಚ ಅವರನ್ನು ಯುದ್ಧಕ್ಕೆ ಆಹ್ವಾನಿಸಿದ. ಆಗ ಅಶ್ವತ್ಥಾಮ ''ಮಗು! ಬೇಡ, ಬೇಡ. ಮಗನಾದ ನೀನು ತಂದೆಯನ್ನೀಗ ಎದುರಿಸಬೇಡ''.

ವಿ: ಅಶ್ವತ್ಥಾಮ ಘಟೋತ್ಕಚನನ್ನು ಮಗ ಎಂದು ಕರೆಯಲು ಅವರ ಮೂಲರೂಪವಾದ ಶಿವನ ಆವೇಶ ಅವನೊಳಗಿದ್ದುದು ಕಾರಣವೆಂದು ತಿಳಿಯಬಹುದು(೧೯/೬೩). 'ಆತ್ಮಾ ವೈ ಪುತ್ರನಾಮಾಽಸಿ' ಎಂಬ ವಚನದಂತೆ ಅದು ಯುಕ್ತವಾಗುವುದು.

---

* ನಾಶಂ ಲೇಭೇ – (ಪಾಠಾಂತರ)

೨೩೩. ಗಚ್ಛ ವತ್ಸ ಸಹಾನ್ಯೈಸ್ತ್ವಂ ಯುಧ್ಯಸ್ವಾಮರವಿಕ್ರಮ ।
ನ ಹಿ ಪುತ್ರೇಣ ಹೈಡಿಂಬೇ ಪಿತಾ ನ್ಯಾಯ್ಯಃ ಪ್ರಬಾಧಿತುಮ್ ॥ – ಭಾರತ (ದ್ರೋಣ. ೧೫೬/೯೪)

ಇತ್ಯುಕ್ತ ಊಚೇ ನ ಪಿತಾ ಮಮ ತ್ವಂ
ಸಖಾ ಪಿತುರ್ಯದ್ಯಪಿ ಶತ್ರುಸಂಶ್ರಯಾತ್ ।
ಅರಿಶ್ಚ ಮೇಽಸೀತಿ ತಮಾಹ ಯದ್ಯರಿಂ
ಮಾಂ ಮನ್ಯಸೇ ತದ್ವದಹಂ ಕರೋಮಿ ತೇ ॥ ೨೩೪ ॥

ಅ: ಅಶ್ವತ್ಥಾಮ ಹೀಗೆನ್ನಲು, ಘಟೋತ್ಕಚ ನುಡಿದ : ''ನೀನು ನನ್ನ ತಂದೆಯೇನಲ್ಲ; ನನ್ನ ತಂದೆಯ ಸ್ನೇಹಿತನೆನ್ನುವುದೇನೋ ನಿಜ; ಆದರೆ ಶತ್ರುಪಕ್ಷಕ್ಕೆ ಸೇರಿರುವುದರಿಂದ ನನಗೆ ಶತ್ರುವೇ ಆಗಿರುವಿ''. ಆಗ ಅಶ್ವತ್ಥಾಮ ನುಡಿದ : ''ನೀನು ನನ್ನನ್ನು ಶತ್ರುವೆಂದು ಭಾವಿಸಿದೆ-ಯಾದಲ್ಲಿ ನಾನು ನಿನ್ನೊಂದಿಗೆ ಶತ್ರುವಿನಂತೆಯೇ ವರ್ತಿಸುವೆ''.

ವಿ: ಅಶ್ವತ್ಥಾಮ ಸಾಕ್ಷಾತ್ ತಂದೆಯಲ್ಲವಾದರೂ, ತಂದೆಯಾದ ಭೀಮನಿಗೆ ಮಿತ್ರನಾದ್ದರಿಂದ ತಂದೆಯಂತೆ ಗೌರವಿಸಬಹುದಾಗಿತ್ತು, ಆದರೆ ಶತ್ರುಪಕ್ಷ ಸೇರಿರುವುದರಿಂದ ಅದು ಅಸಾಧ್ಯ. ಆದ್ದರಿಂದ ಅಶ್ವತ್ಥಾಮರು ಶತ್ರುವೇ ಎಂಬುವುದು ಘಟೋತ್ಕಚನ ವಾದ.

ಇತ್ಯೂಚಿವಾಂಭಕ್ರಧನುಃಪ್ರಕಾಶಂ
ವಿಷ್ಫಾರ್ಯ ಚಾಪಂ ಪ್ರಕಿರನ್ ಶರೌಘಾನ್ ।
ಅಭ್ಯಾಗಮದ್ರಾಕ್ಷಸಮುಗ್ರವೇಗಃ
ಸ್ವಸೇನಯಾ ಸೋಽಪಿ ತಮಭ್ಯವರ್ತತ ॥ ೨೩೫ ॥

ಅ: ಅಶ್ವತ್ಥಾಮ ಹೀಗೆ ನುಡಿದು, ಇಂದ್ರಧನುಸ್ಸಿನಂತೆ ಕಂಗೊಳಿಸುತ್ತಿದ್ದ ತನ್ನ ಬಿಲ್ಲನ್ನು ಹೆದೆಯೇರಿಸಿ, ಬಾಣಗಳ ಪ್ರವಾಹವನ್ನು ಸುರಿಸುತ್ತಾ, ಭಯಂಕರವೇಗದಿಂದ ಘಟೋತ್ಕಚನ ಮೇಲೆ ನುಗ್ಗಿದ. ಘಟೋತ್ಕಚ ತನ್ನ ಸೇನೆಯೊಂದಿಗೆ ಅವರನ್ನು ಎದುರಿಸಿದ.

ಸ ರಕ್ಷಸಾಂ ಲಕ್ಷಸಮಾವೃತೋ ಬಲೀ
ನೃಭಿಶ್ಚ ವೀರೈರ್ಬಹುಭಿಃ ಸುಶಿಕ್ಷಿತೈಃ ।
ಅಕ್ಷೌಹಿಣೀಮಾತ್ರಬಲೇನ ರಾಕ್ಷಸಃ
ಸಂಕ್ಷೋಭಯಾಮಾಸ ಗುರೋಃ ಸುತಂ ಶರೈಃ ॥ ೨೩೬ ॥

---

೨೩೪. ಭೀಮಾತ್ ಖಲು ಸಮುತ್ಪನ್ನಃ ಕುರುಣಾಂ ವಿಪುಲೇ ಕುಲೇ ।
ಪಾಂಡವಾನಾಮಹಂ ಪುತ್ರಃ ಸಮರೇಷ್ವನಿವರ್ತಿನಾಮ್ ॥ – ಭಾರತ (ದ್ರೋಣ. ೧೫೬/೯೮)

ಅ: ಬಲಿಷ್ಠನಾದ ಆ ಘಟೋತ್ಕಚ ಲಕ್ಷರಾಕ್ಷಸರೊಂದಿಗೂ, ತುಂಬಾ ಪರಿಣತರಾದ ಅನೇಕ ಮನುಷ್ಯವೀರರೊಂದಿಗೂ ಕೂಡಿ, ಒಂದು ಅಕ್ಷೋಹಿಣೀಸೇನೆಯೊಂದಿಗೆ ಗುರುಪುತ್ರರಾದ ಅಶ್ವತ್ಥಾಮರನ್ನು ಬಾಣಗಳಿಂದ ಕಂಗೆಡಿಸಿದ.

ಸ ತೇನ ಬಾಣೈರ್ಬಹುಭಿಃ ಪ್ರಪೀಡಿತೋ
ವಿಭಿನ್ನಗಾತ್ರಃ ಕ್ಷತಜಾಭಿಪ್ಲುತಾಂಗಃ ।
ವ್ಯಾವೃತ್ಯ ನೇತ್ರೇ ಕುಪಿತೋ ಮಹದ್ಧನು-
ರ್ವಿಷ್ಫಾರ್ಯ ಬಾಣೈ ರಜನೀಂ ಚಕಾರ ॥ ೨೩೭ ॥

ಅ: ಘಟೋತ್ಕಚನಿಂದ ಅನೇಕಬಾಣಗಳಿಂದ ತುಂಬಾ ಪೀಡಿತನಾಗಿ ಅಶ್ವತ್ಥಾಮ ಮೈಯೆಲ್ಲ ಗಾಯಗೊಂಡ. ಸುರಿಯುತ್ತಿದ್ದ ರಕ್ತ ಮೈಮೇಲೆಲ್ಲ ಹರಿಯತೊಡಗಿತು. ಕೋಪಗೊಂಡ ಅವನು ಕಣ್ಣುಗಳನ್ನು ತಿರುಗಿಸುತ್ತಾ ತನ್ನ ಮಹಾಧನುಸ್ಸನ್ನು ಸೆಳೆದು, ಬಾಣಗಳಿಂದ ರಾತ್ರಿಯಾಗಿಸಿದ.

ವಿ: ಅಶ್ವತ್ಥಾಮ ಪ್ರಯೋಗಿಸಿದ ಬಾಣಗಳು ಎಲ್ಲೆಡೆ ತುಂಬಿಹೋಗಿದ್ದರಿಂದಾಗಿ, ಅದು ರಾತ್ರಿಯೇ ಆಗಿದ್ದರೂ ಮತ್ತಷ್ಟು ಕತ್ತಲೆನ್ನಿಸಿತ್ತು ಎಂದರ್ಥ. ತಮಸ್ಸು, ಅಂಧಂತಮಸ್ಸು ಎನ್ನುವಂತೆ ಎಂದು ತಿಳಿಯಬೇಕು. ಅದರಿಂದಾಗಿ ರಾತ್ರಿಕಾಲದಲ್ಲಿ ಉರಿಯುತ್ತಿದ್ದ ಪಂಜುಗಳೂ ಸಹ ಮರೆಯಾಗುವಂತಾಗಿ ಸಂಪೂರ್ಣ ಕತ್ತಲೆ ಕವಿಯಿತು ಎಂದು ಭಾವ.

ಅಶ್ವತ್ಥಾಮನಿಂದ ಅಂಜನವರ್ಮನ ಸಂಹಾರ

ಸೋಽಕ್ಷೌಹಿಣೀಂ ತಾಂ ಕ್ಷಣಮಾತ್ರತಃ ಕ್ಷರನ್
ಮಹಾಶರಾಂಸ್ತಾನಪಿ ರಾಕ್ಷಸಾನ್ ಕ್ಷಯಮ್ ।
ನಿನಾಯ ಪುತ್ರಂ ಚ ಘಟೋತ್ಕಚಸ್ಯ
ನಿಷ್ಕ್ಯಃ ಪುರಾ ಯೋಽಂಜನವರ್ಮನಾಮಕಃ ॥ ೨೩೮ ॥

---

೨೩೭. ಬಾಣೈ ರಜನೀಂ ಚಕಾರೇತ್ಯತ್ರ ''ಪ್ರದೀಪಹಸ್ತಾ ಅಥ ಯೋಧಕಾ''ಶ್ಚೇತಿ(೨೬೪) ವಕ್ಷ್ಯಮಾಣತ್ವಾತ್ ಪ್ರದೀಪಪ್ರಕಾಶಂ ಪ್ರತಿರುಧ್ಯ ತಮೋ ವಿಸ್ತಾರ್ಯ ರಜನೀಂ ಚಕಾರೇತ್ಯರ್ಥಃ ॥ – (ವಾ.)

೨೩೮. ತಮಯಸ್ಮಯವರ್ಮಾಣಂ ದ್ರೌಣಿರ್ಭೀಮಾತ್ಮಜಾತ್ಮಜಮ್ ।
ಜಘಾನಾಂಜನಪರ್ವಾಣಂ ಮಹೇಶ್ವರ ಇವಾಂಧಕಮ್ ॥ – ಭಾರತ (ದ್ರೋಣ. ೧೫೬/೯೦)

೨೩೯. ಪುರಾ ಯಃ ಅಂಜನವರ್ಮನಾಮಕೋಽಭೂದಿತಿ ಶೇಷಃ । ತಂ ನಿಷ್ಕ್ಯಂ ನಿಷ್ಕ್ಯನಾಮಕಂ ಘಟೋತ್ಕಚಸ್ಯ ಪುತ್ರಂ ಚ ಕ್ಷಯಂ ನಿನಾಯ । – (ಜ.)

ಅ: ಅಶ್ವತ್ಥಾಮ ಕ್ಷಣಮಾತ್ರದಲ್ಲಿಯೇ ದೊಡ್ಡ ಬಾಣಗಳನ್ನು ಸುರಿಸಿ, ಅಕ್ಷೋಹಿಣೀ ಸೇನೆಯನ್ನೂ, ರಾಕ್ಷಸರನ್ನೂ ನಾಶಗೊಳಿಸಿದ. ಘಟೋತ್ಕಚನ ಪುತ್ರನಾದ ನಿಷ್ಠ್ಯ ಎಂಬವನನ್ನು ಸಂಹರಿಸಿದ. ನಿಷ್ಠ್ಯನ ಮೊದಲ ಹೆಸರು ಅಂಜನವರ್ಮ ಎಂದು.

ವಿ: ಮಹಾಭಾರತದ ಕೆಲವು ಪ್ರತಿಗಳಲ್ಲಿ ಇವನ ಹೆಸರು ಅಂಜನಪರ್ವ ಎಂದಿದೆ. ಪಾಠವ್ಯತ್ಯಾಸ ಎಂಬುದು ಸ್ಪಷ್ಟ. ಮಹಾಭಾರತಯುದ್ಧದಲ್ಲಿ ಪಾಲ್ಗೊಂಡಿದ್ದ ಆರು ತಲೆಮಾರಿನ ಜನರಲ್ಲಿ ಈ ಅಂಜನವರ್ಮ ಕೊನೆಯ ತಲೆಮಾರಿನವನು.

ಘಟೋತ್ಕಚನಿಂದ ಅಶ್ವತ್ಥಾಮರ ಮೂರ್ಛೆ

ನಿರೀಕ್ಷ್ಯ ಸೇನಾಂ ಸ್ವಸುತಂ ಚ ಪಾತಿತಂ
ಘಟೋತ್ಕಚೋ ದ್ರೋಣಸುತಂ ಶರೇಣ ।
ವಿವ್ಯಾಧ ಗಾಢಂ ಸ ತು ವಿಹ್ವಲೋ ಧ್ವಜಂ
ಸಮಾಶ್ರಿತಶ್ಚಾಶು ಸಸಂಜ್ಞಕೋಽಭವತ್ ॥ ೨೩೯ ॥

ಅ: ಸೇನೆಯೊಂದಿಗೆ ತನ್ನ ಮಗನೂ ನಾಶವಾಗಿದ್ದನ್ನು ಕಂಡು ಘಟೋತ್ಕಚ ದ್ರೋಣಪುತ್ರನಾದ ಅಶ್ವತ್ಥಾಮನನ್ನು ಬಾಣವೊಂದರಿಂದ ಗಾಢವಾಗಿ ಹೊಡೆದ. ಅವನು ಬಹಳ ಪೆಟ್ಟು ತಿಂದು, ಧ್ವಜಕ್ಕೆ ಒರಗಿದ. ಕೂಡಲೇ ಚೇತರಿಸಿಕೊಂಡ.

ವಿ: ರುದ್ರಾವತಾರರಾದ ಅಶ್ವತ್ಥಾಮರನ್ನು ಅಷ್ಟು ಬಲವಾಗಿ ಹೊಡೆಯಲು ಘಟೋತ್ಕಚನಿಗೆ ಸಾಧ್ಯವಾಗಲು ಅವನೊಳಗೆ ರುದ್ರಾವೇಶವಿದ್ದುದು ಕಾರಣವಾಯಿತು ಎಂದು ತಿಳಿಯಬೇಕು.

ಅಶ್ವತ್ಥಾಮನಿಂದ ಘಟೋತ್ಕಚನ ಮೂರ್ಛೆ

ಉತ್ಥಾಯ ಬಾಣಂ ಯಮದಂಡಕಲ್ಪಂ
ಸಂಧಾಯ ಚಾಪೇ ಪ್ರವಿಕೃಷ್ಯ ರಾಕ್ಷಸೇ ।
ಮುಮೋಚ ತೇನಾಭಿಹತಃ ಪಪಾತ
ವಿನಷ್ಟಸಂಜ್ಞಃ ಸ್ವರಥೇ ಘಟೋತ್ಕಚಃ ॥ ೨೪೦ ॥

ಅ: ಅಶ್ವತ್ಥಾಮ ಮೇಲೆದ್ದು ಯಮದಂಡದಂತಹ ಬಾಣವನ್ನು ಬಿಲ್ಲಿನಲ್ಲಿ ಹೂಡಿ, ಜೋರಾಗಿ ಎಳೆದು, ರಾಕ್ಷಸನ ಮೇಲೆ ಪ್ರಯೋಗಿಸಿದ. ಅದರಿಂದ ಬಹಳವಾಗಿ ಹೊಡೆತ ತಿಂದ ಘಟೋತ್ಕಚ ಪ್ರಜ್ಞಾಹೀನನಾಗಿ ತನ್ನ ರಥದಲ್ಲಿ ಬಿದ್ದ.

ಅಶ್ವತ್ಥಾಮನ ಮೂರ್ಛೆ

ವಿಮೂರ್ಛಿತಂ ಸಾರಥಿರಸ್ಯ ದೂರಂ
ನಿನಾಯ ಯುದ್ಧಾಜ್ಜಗತೋಽಭಿಪಶ್ಯತಃ ।
ದ್ರೌಣಿಶ್ಚ ಸೇನಾಂ ನಿಶಿ ತೈಃ ಶರೋತ್ತಮೈ
ರ್ವ್ಯದ್ರಾವಯತ್ ಪಾಂಡವಸೋಮಕಾನಾಮ್ ॥ ೨೪೧ ॥

ಅ: ಗಾಢಮೂರ್ಛೆಗೊಳಗಾಗಿದ್ದ ಘಟೋತ್ಕಚನನ್ನು ಅವನ ಸಾರಥಿ ಜನರೆಲ್ಲ ನೋಡುತ್ತಿದ್ದಂತೆಯೇ ಯುದ್ಧದಿಂದ ದೂರಕ್ಕೆ ಕರೆದೊಯ್ದ. ಅಶ್ವತ್ಥಾಮ ಹರಿತವಾದ ಉತ್ತಮವಾದ ಬಾಣಗಳಿಂದ ಪಾಂಡವರ ಮತ್ತು ಪಾಂಚಾಲರ ಸೇನೆಯನ್ನು ಹೊಡೆದೋಡಿಸತೊಡಗಿದ.

ಘಟೋತ್ಕಚನ ಅದ್ಭುತ ಯುದ್ಧ

ಸಂಜ್ಞಾಮವಾಪ್ಯಾಥ ಘಟೋತ್ಕಚೋಽಪಿ
ಕ್ರುದ್ಧೋಽವಿಶತ್ ಕೌರವಸೈನ್ಯಮಾಶು ।
ವಿದ್ರಾವಯಾಮಾಸ ಸ ಬಾಣವರ್ಷೈಃ
ಪ್ರಕಂಪಯಾಮಾಸ ಮಹಾರಥಾಂಸ್ತಥಾ ॥ ೨೪೨ ॥

ಅ: ಘಟೋತ್ಕಚ ಪ್ರಜ್ಞೆ ಮರಳಿದವನಾಗಿ, ಕೋಪಗೊಂಡು ಕೂಡಲೇ ಕೌರವಸೇನೆಯನ್ನು ಪ್ರವೇಶಿಸಿದ. ಶರವೃಷ್ಟಿಗಳಿಂದ ಅವನು ಆ ಸೇನೆಯನ್ನು ಓಡಿಸಿದ. ಅದರಂತೆ ಮಹಾರಥರನ್ನೂ ನಡುಗಿಸಿದ.

ತದೈವ ಪಾರ್ಥಂ ಪ್ರತಿಯೋದ್ಧುಮಾಗತಂ
ವೈಕರ್ತನಂ ವೀಕ್ಷ್ಯ ಜಗತ್ಪತಿರ್ಹರಿಃ ।
ಘಟೋತ್ಕಚಂ ಪ್ರಾಹಿಣೋಚ್ಛಕ್ತಿಮುಗ್ರಾಂ
ತಸ್ಮಿನ್ ಮೋಕ್ತುಂ ಪಾರ್ಥರಕ್ಷಾರ್ಥಮೇವ ॥ ೨೪೩ ॥

ಅ: ಆಗ ಅರ್ಜುನನೊಂದಿಗೆ ಯುದ್ಧ ಮಾಡಲೆಂದು ಕರ್ಣ ಬರುತ್ತಿದ್ದುದನ್ನು ಕಂಡು, ಜಗದೊಡೆಯನಾದ ಶ್ರೀಕೃಷ್ಣ ಘಟೋತ್ಕಚನನ್ನು ಕಳುಹಿಸಿಕೊಟ್ಟ; ಪಾರ್ಥನ ರಕ್ಷಣೆಗಾಗಿ ಅವನ ಮೇಲೆ ಭಯಂಕರವಾದ ಶಕ್ತ್ಯಾಯುಧವನ್ನು ಪ್ರಯೋಗ ಮಾಡಿಸುವುದು ಅವನ ಉದ್ದೇಶವಾಗಿತ್ತು.

ವಿ: ಕರ್ಣ ಆಗ ಶಕ್ತ್ಯಾಯುಧವನ್ನು ತನ್ನೊಡನೆ ತಂದಿದ್ದರಿಂದ ಅದರಿಂದ ಅರ್ಜುನನಿಗೆ ಒದಗುವ ಅಪಾಯವನ್ನು ತಪ್ಪಿಸಲೆಂದು ಕೃಷ್ಣ ಅವನ ಮೇಲೆ ಘಟೋತ್ಕಚನನ್ನು ಯುದ್ಧಕ್ಕೆ ಕಳುಹಿಸಿದ. ಘಟೋತ್ಕಚ ಆ ಶಕ್ತ್ಯಾಯುಧಕ್ಕೆ ಬಲಿಯಾಗಿ, ಅರ್ಜುನ ಸುರಕ್ಷಿತನಾಗಬೇಕು ಎಂಬುದು ಕೃಷ್ಣನ ಸಂಕಲ್ಪವಾಗಿತ್ತು

ಕರ್ಣಘಟೋತ್ಕಚರ ಯುದ್ಧ

ಸ ಕರ್ಣಮಾಹೂಯ ಯುಯೋಧ ತೇನ
ತಸ್ಯಾನು ದುರ್ಯೋಧನಪೂರ್ವಕಾಶ್ಚ ಯೇ ।
ದ್ರೋಣೇನ ಚೈತಾನ್ ಸಮರೇ ಸ ಏಕೋ
ನಿವಾರಯಾಮಾಸ ಮಮರ್ದ ಚಾಧಿಕಮ್ ॥ ೨೪೪ ॥

ಅ: ಘಟೋತ್ಕಚ ಕರ್ಣನನ್ನು ಆಹ್ವಾನಿಸಿ, ಅವನೊಡನೆ ಯುದ್ಧಕ್ಕೆ ತೊಡಗಿದ. ಅವನೊಂದಿಗೆ ಬಂದಿದ್ದ ದುರ್ಯೋಧನ ಮೊದಲಾದವರೊಂದಿಗೂ, ದ್ರೋಣರೊಂದಿಗೂ ಯುದ್ಧಮಾಡಿ, ಏಕಾಂಗಿಯಾಗಿಯೇ ಅವರನ್ನೆಲ್ಲ ತಡೆದು, ಬಹಳವಾಗಿ ಪೀಡಿಸತೊಡಗಿದ.

ತೇ ಬಾಧ್ಯಮಾನಾ ಬಹುಶೋ ಬಲೀಯಸಾ
ಕರ್ಣಂ ಪುರೋಧಾಯ ತಮಭ್ಯಯೋಧಯನ್ ।
ನ ವಿವ್ಯಥೇ ತತ್ರ ರಣೇ ಸ ಕರ್ಣಃ
ಸ್ವವೀರ್ಯಮಾಸ್ಥಾಯ ಮಹಾಸ್ತ್ರವೇತ್ತಾ ॥ ೨೪೫ ॥

ಅ: ಬಲಿಷ್ಠನಾದ ಅವನಿಂದ ಬಹಳವಾಗಿ ಪೀಡಿತರಾದ ಅವರು ಕರ್ಣನನ್ನು ಮುಂದಿಟ್ಟು-ಕೊಂಡು, ಅವನೊಂದಿಗೆ ಯುದ್ಧಕ್ಕೆ ತೊಡಗಿದರು. ಆ ಯುದ್ಧದಲ್ಲಿ ಮಹಾ ಅಸ್ತ್ರಜ್ಞನಾದ ಕರ್ಣ ತನ್ನ ಸಾಮರ್ಥ್ಯವನ್ನು ಮೆರೆಯುತ್ತಾ ವ್ಯಥೆಗೊಳ್ಳದೆ ಹೋರಾಡತೊಡಗಿದ.

ನಿವಾರಯಾಮಾಸ ಗುರೋಃ ಸುತಂ ತದಾ
ಭೀಮಸ್ತ್ರಿಗರ್ತಾನ್ ಶತಮನ್ಯುನಂದನಃ ।
ಅಲಂಬಲೋ ನಾಮ ತದೈವ ರಾಕ್ಷಸಃ
ಸಮಾಸದತ್ ಭೀಮಸುತಂ ನಿಹಂತುಮ್ ॥ ೨೪೬ ॥

ಅ: ಆಗ ಭೀಮ ಗುರುಪುತ್ರನಾದ ಅಶ್ವತ್ಥಾಮನನ್ನು ತಡೆದ. ಇಂದ್ರಪುತ್ರನಾದ ಅರ್ಜುನ ಸಂಶಪ್ತಕರನ್ನು ತಡೆದ. ಆಗ ಅಲಂಬಲ ಎಂಬ ರಾಕ್ಷಸ ಭೀಮಪುತ್ರನಾದ ಘಟೋತ್ಕಚನನ್ನು ಕೊಲ್ಲಲೆಂದು ಧಾವಿಸಿದ.

ವಿ: ಅಲಂಬಲನು ಜಟಾಸುರನ ಮಗ. ತನ್ನ ತಂದೆಯನ್ನು ಕೊಂದಿದ್ದ ಭೀಮನ ಮೇಲೆ ಸೇಡು ತೀರಿಸಿಕೊಳ್ಳಲೆಂದು ಬಂದಿದ್ದವನು. ಕೆಲವು ಪಾಠಗಳಲ್ಲಿ ಅವನ ಹೆಸರು ಅಲಂಬುಸ ಎಂದಿದೆ. ಆದರೆ ಅಲಂಬುಸನೆಂಬ ರಾಕ್ಷಸನ ಸಂಹಾರ ಈಗಾಗಲೇ ಆಗಿರುವುದರಿಂದ, ನಿರ್ಣಯದಲ್ಲಿನ ಅಲಂಬಲ ಎಂಬ ಪಾಠವೇ ಮೂಲಪಾಠ ಎಂದು ತಿಳಿಯಬೇಕು; ದಾಕ್ಷಿಣಾತ್ಯಪಾಠಗಳಲ್ಲಿ ಇರುವುದೂ ಹಾಗೆಯೇ.

ಘಟೋತ್ಕಚನಿಂದ ಅಲಂಬಲನ ವಧೆ

ಯುಧ್ವಾಪ್ರಗೃಹ್ಯೈನಮಥೋ ನಿಪಾತ್ಯ
ಘಟೋತ್ಕಚೋ ಭೂಮಿತಲೇಽಸಿನಾಽಸ್ಯ ।
ಉತ್ಕೃತ್ಯ ಶೀರ್ಷಂ ತು ಸುಯೋಧನೇಽಕ್ಷಿಪದ್
ವಿಷೇದುರತ್ರಾಖಿಲಭೂಮಿಪಾಲಾಃ ॥ ೨೪೭ ॥

ಅ: ಘಟೋತ್ಕಚ ಅವನೊಂದಿಗೆ ಯುದ್ಧ ಮಾಡಿ, ಅವನನ್ನು ನೆಲಕ್ಕೆ ಬೀಳಿಸಿ, ಖಡ್ಗದಿಂದ ಅವನ ತಲೆಯನ್ನು ಕತ್ತರಿಸಿ, ಅದನ್ನು ದುರ್ಯೋಧನನ ಮೇಲೆ ಎಸೆದ. ಅಲ್ಲಿಯ ಎಲ್ಲ ರಾಜರೂ, ಬಹಳವಾಗಿ ವಿಷಣ್ಣರಾದರು.

ಘಟೋತ್ಕಚನಿಂದ ಅಲಾಯುಧನ ವಧೆ

ಅಲಾಯುಧೋಽಥಾಗಮದುಗ್ರವೀರ್ಯೋ
ನರಾಶನಸ್ತಂ ಸ ಘಟೋತ್ಕಚೋಽಭ್ಯಯಾತ್
ಯುಧ್ವಾಮುಹೂರ್ತಂ ಸ ತು ತೇನ ಭೂಮೌ
ನಿಪಾತ್ಯ ತಂ ಯಜ್ಞಪಶುಂ ಚಕಾರ ॥ ೨೪೮ ॥

ಅ: ಬಳಿಕ ಅಲಾಯುಧ ಎಂಬ ಉಗ್ರಪರಾಕ್ರಮಿಯಾದ ನರಭಕ್ಷಕನಾದ ರಾಕ್ಷಸ ಘಟೋತ್ಕಚನ ಮೇಲೆ ಧಾವಿಸಿದ. ಅವನನ್ನು ಎದುರಿಸಿ, ಮುಹೂರ್ತಕಾಲ ಅವನೊಂದಿಗೆ ಯುದ್ಧಮಾಡಿ, ಅವನನ್ನು ಭೂಮಿಯ ಮೇಲೆ ಬೀಳಿಸಿ ಯಜ್ಞಪಶುವನ್ನಾಗಿ ಮಾಡಿದ.

ವಿ: ಯಜ್ಞಪಶುವನ್ನಾಗಿ ಮಾಡಿದ ಎಂದರೆ, ಆ ರಣಯಜ್ಞದಲ್ಲಿ ಅವನನ್ನು ಪಶುವಿನಂತೆ ಬಲಿ–ನೀಡಿ, ಕೊಂದುಹಾಕಿದ. ಇದರಿಂದ ತಂದೆಯಾದ ಭೀಮನಂತೆ ಅವನ ಪುತ್ರನಾದ ಘಟೋತ್ಕಚನೂ ಸಹ ಯುದ್ಧವನ್ನು ಯಜ್ಞ ಎಂಬ ತಾತ್ತ್ವಿಕರೀತಿಯಲ್ಲಿಯೇ ಮಾಡಿದ್ದ ಎಂಬ ವಿಶೇಷಾಂಶ ತಿಳಿಯುವುದು.

ಅಥಾಸ್ಯ ಶಿರ ಉತ್ಕೃತ್ಯ ಕ್ರೋಧಾದ್ದುರ್ಯೋಧನೋರಸಿ ।
ಚಿಕ್ಷೇಪ ತೇನ ಸಂಭ್ರಾಂತಾಃ ಸರ್ವೇ ದುರ್ಯೋಧನಾದಯಃ ॥ ೨೪೯ ॥

ಅ: ಬಳಿಕ ಅವನ ಶಿರಸ್ಸನ್ನು ಕತ್ತರಿಸಿ, ಅದನ್ನು ಕೋಪದಿಂದ ದುರ್ಯೋಧನನ ಎದೆಯ ಮೇಲೆ ಎಸೆದ. ಅದರಿಂದ ದುರ್ಯೋಧನ ಮೊದಲಾದವರೆಲ್ಲ ಕಂಗೆಟ್ಟರು.

ಘಟೋತ್ಕಚಬಲಖ್ಯಾತ್ಯೈ ಸಮರ್ಥೇನಾಪಿ ಯೋ ರಣೇ ।
ನ ಹತೋ ಭೀಮಸೇನೇನ ಹತೋಽಸ್ಮಿನ್ ಭೈಮಸೇನಿನಾ ॥ ೨೫೦ ॥

ಅ: ಘಟೋತ್ಕಚನ ಬಲವನ್ನು ಪ್ರಕಟಪಡಿಸಲೆಂದು ಭೀಮಸೇನ ತಾನು ಸಮರ್ಥನಾಗಿದ್ದರೂ, ಕೊಲ್ಲದೇ ಬಿಟ್ಟಿದ್ದ ಅಲಾಯುಧ ಭೀಮಪುತ್ರನಾದ ಘಟೋತ್ಕಚನಿಂದ ಹತನಾದ.

ವಿ: ಹೀಗೆ ಸಮರ್ಥನಾಗಿದ್ದರೂ ಭೀಮಸೇನ ಅಲಾಯುಧನನ್ನು ತಾನು ಕೊಲ್ಲದೆ, ತನ್ನ ಮಗನಾದ ಘಟೋತ್ಕಚ ಕೊಲ್ಲಲೆಂದು ಬಿಟ್ಟಿದ್ದು ಸಮರ್ಥರಾದ ಹಿರಿಯರು ಅನೇಕಕಾರ್ಯಗಳನ್ನು ತಾವೇ ಮಾಡದೆ, ಚಿಕ್ಕವರಿಗೆ ಬಿಟ್ಟುಕೊಡಲು ಮೇಲ್ಪಂಕ್ತಿಯಾಯಿತೆಂದು ತಿಳಿಯಬಹುದು.

ಶಕ್ತಿಮೋಚನಕ್ಕೆ ಕರ್ಣನಲ್ಲಿ ಪ್ರಾರ್ಥನೆ

ಸರ್ವೇ ಸಂಚೋದಯಾಮಾಸುಃ ಕರ್ಣಂ ಶಕ್ತಿವಿಮೋಕ್ಷಣೇ ।
ಅಸ್ಮಿನ್ ಹತೇ ಹತಂ ಸರ್ವಂ ಕಿಂ ನಃ ಪಾರ್ಥಃ ಕರಿಷ್ಯತಿ ॥ ೨೫೧ ॥

ಅ: ಆಗ ಎಲ್ಲರೂ ಶಕ್ತ್ಯಾಯುಧವನ್ನು ಪ್ರಯೋಗಿಸಲೆಂದು ಕರ್ಣನನ್ನು ಕೇಳಿಕೊಳ್ಳತೊಡಗಿದರು: ''ಇವನು ಸತ್ತರೆ ಉಳಿದವರು ಸತ್ತಂತೆಯೇ. ಅರ್ಜುನ ನಮ್ಮನ್ನೇನು ಮಾಡಿಯಾನು?''

---

೨೫೧. ಶಕ್ತ್ಯಾರಕ್ಷೋ ಜಹಿ ಕರ್ಣಾದ್ಯ ತೂರ್ಣಂ ನಶ್ಯಂತ್ಯೇತೇ ಕುರವೋ ಧಾರ್ತರಾಷ್ಟ್ರಾಃ ।
ಕರಿಷ್ಯತಃ ಕಿಂಚ ನೋ ಭೀಮಪಾರ್ಥೌ ತಪಂತಮೇನಂ ಜಹಿ ಪಾಪಂ ನಿಶೀಥೇ ॥
– ಭಾರತ (ಕರ್ಣ. ೧೮೯/೪೮)

ವಿ: ಅವರೆಲ್ಲ ಆಗ ಅರ್ಜುನ ಘಟೋತ್ಕಚನಿಗಿಂತ ಮಹಾಪರಾಕ್ರಮಿ ಎಂಬುದನ್ನು ಮರೆತು, ಅರ್ಜುನನಿಗಿಂತ ಘಟೋತ್ಕಚನೇ ಮಹಾಅಪಾಯಕಾರಿ ಎಂದು ಭ್ರಾಂತರಾಗುವಷ್ಟು ಅದ್ಭುತವಾದ ಪರಾಕ್ರಮವನ್ನು ಘಟೋತ್ಕಚ ಆಗ ತೋರಿದ್ದ ಎಂದರ್ಥ.

ಕರ್ಣನಿಂದ ಶಕ್ತ್ಯಾಯುಧಪ್ರಯೋಗ

ಏವಂ ಸಂಚೋದ್ಯಮಾನಃ ಸ ಧಾರ್ತರಾಷ್ಟ್ರೈಃ ಪುನಃ ಪುನಃ ।
ಹೈಡಿಂಬೇನಾರ್ದ್ಯಮಾನೈಸ್ತು ಸ್ವಯಂ ಚ ಭೃಶಪೀಡಿತಃ ।
ಆದತ್ತ ಶಕ್ತಿಂ ವಿಪುಲಾಂ ಪಾಕಶಾಸನಸಮ್ಮತಾಮ್ ॥ ೨೫೨ ॥

ಅ: ಘಟೋತ್ಕಚನಿಂದ ಪೀಡಿತರಾದ ಕೌರವರಿಂದ ಹೀಗೆ ಮತ್ತೆ ಮತ್ತೆ ಒತ್ತಾಯಿಸಲ್ಪಟ್ಟ ಕರ್ಣ ತಾನೂ ಸಹ ಅವನಿಂದ ಬಹಳವಾಗಿ ಪೀಡಿತನಾದ್ದರಿಂದ ಇಂದ್ರನಿಗೆ ಸಮ್ಮತವಾದ ಆ ಮಹತ್ತರವಾದ ಶಕ್ತ್ಯಾಯುಧವನ್ನು ಕೈಗೆತ್ತಿಕೊಂಡ.

ವಿ: ಕರ್ಣ ಅರ್ಜುನನಿಗೆಂದೇ ಮೀಸಲಾಗಿಟ್ಟಿದ್ದ ಆ ಶಕ್ತ್ಯಾಯುಧವನ್ನು ಘಟೋತ್ಕಚನ ಮೇಲೆ ಪ್ರಯೋಗಿಸಲು ಕೌರವರು ಮಾತ್ರವಲ್ಲದೆ, ತಾನೂ ಸಹ ಅವನಿಂದ ಬಹಳವಾಗಿ ಪೆಟ್ಟು ತಿಂದದ್ದೂ ಕಾರಣವಾಯಿತು ಎಂಬ ವಿಶೇಷವಿವರ ಇಲ್ಲಿದೆ.

ತಾಮಂಬರಸ್ಥಾಯ ಘಟೋತ್ಕಚಾಯ
ಶೈಲೋಪಮಾಯಾತುಲವಿಕ್ರಮಾಯ ।
ಚಿಕ್ಷೇಪ ಮೃತ್ಯೋ ರಸನೋಪಮಾಮಲಂ
ಪ್ರಕಾಶಯಂತೀಂ ಪ್ರದಿಶೋ ದಿಶಶ್ಚ ॥ ೨೫೩ ॥

ಅ: ಕರ್ಣ, ಮೃತ್ಯುವಿನ ನಾಲಿಗೆಯಂತಿದ್ದ, ದಿಕ್ಕುವಿದಿಕ್ಕುಗಳನ್ನು ಬೆಳಗುತ್ತಿದ್ದ ಆ ಶಕ್ತ್ಯಾಯುಧವನ್ನು ಗಗನದಲ್ಲಿದ್ದ ಬೆಟ್ಟದಂತಿದ್ದ, ಅತುಲಪರಾಕ್ರಮಿಯಾದ ಘಟೋತ್ಕಚನ ಮೇಲೆ ಎಸೆದ.

---

೨೫೩. ತಾಂ ವೈ ಶಕ್ತಿಂ ಲೇಲಿಹಾನಾಂ ಪ್ರದೀಪ್ತಾಂ ಪಾಶೈರ್ಯುಕ್ತಾಮಂತಕಸ್ಯೇವ ಜಿಹ್ವಾಮ್ ।
ಮೃತ್ಯೋಃ ಸ್ವಸಾರಂ ಜ್ವಲಿತಾಮಿವೋಲ್ಕಾಂ ವೈಕರ್ತನಃ ಪ್ರಾಹಿಣೋದ್ ರಾಕ್ಷಸಾಯ ॥
– ಭಾರತ (ದ್ರೋಣ. ೧೭೯/೫೪)

ಶಕ್ತ್ಯಾಯುಧದಿಂದ ಘಟೋತ್ಕಚನ ಮರಣ

ನಿರ್ಭಿನ್ನವಕ್ಷಾಃ ಸ ತಯಾ ಪಪಾತ
ವಿಚೂರ್ಣಯನ್ ಶತ್ರುಬಲಂ ಹತೋಽಪಿ ।
ತಸ್ಮಿನ್ ಹತೇ ಜಹೃಷುರ್ಧಾರ್ತರಾಷ್ಟ್ರಾ
ಉಚ್ಚುಕ್ರುಶುರ್ದುಧುವುಶ್ಚಾಂಬರಾಣಿ ॥ ೨೫೪ ॥

ಅ: ಆ ಶಕ್ತ್ಯಾಯುಧದಿಂದ ಎದೆ ಸೀಳಿದವನಾಗಿ, ಘಟೋತ್ಕಚ ನೆಲಕ್ಕೆ ಬೀಳತೊಡಗಿದ. ತಾನು ಹತನಾದರೂ, ಶತ್ರುಸೈನ್ಯದ ಮೇಲೆ ಬೀಳುತ್ತಾ ಅದನ್ನು ಪುಡಿ ಮಾಡಿದ. ಅವನು ಹತನಾಗಲು, ಕೌರವರು ನಲಿದರು; ಜೋರಾಗಿ ಕೇಕೆ ಹಾಕಿದರು. ವಸ್ತ್ರಗಳನ್ನು ಚಿಂದಿ ಮಾಡಿದರು.

ವಿ: ಪೀಠಪೂಜೆಯ ಕಾಲಕ್ಕೆ ಅಷ್ಟದಳಕಮಲದಲ್ಲಿ ಪೂರ್ವದಿಕ್ಕಿನಲ್ಲಿ ವಿಮಲಾ ಎಂಬ ಶ್ರೀಹರಿಯ ಶಕ್ತಿಯನ್ನು ಪೂಜಿಸುವ ವಿಧಿ ತಂತ್ರಸಾರದಲ್ಲಿದೆ. ಅದರಂತೆ ಪೂರ್ವದಿಗ್ದೇವತೆಯಾದ ಇಂದ್ರನ ಶಕ್ತ್ಯಾಯುಧದ ಹೆಸರು ವಿಮಲಾ ಎಂದು ಊಹಿಸಬಹುದು. ಭಾಸನ ಕರ್ಣಭಾರ ನಾಟಕ 'ವಿಮಲಾ' ಎಂದೇ ಆ ಹೆಸರನ್ನು ಉಲ್ಲೇಖಿಸಿರುವುದು ಇದಕ್ಕೆ ಪೋಷಕವಾಗಿದೆ.

ಘಟೋತ್ಕಚನನ್ನು ಸಂಹರಿಸಿದ ಶಕ್ತ್ಯಾಯುಧ ಮರಳಿ ಇಂದ್ರನ ಬಳಿಗೆ ತೆರಳಿತು. ಇಂದ್ರ ತಿಳಿಸಿದ್ದಂತೆ ಕೃಷ್ಣರಕ್ಷಿತನಾದ ಅರ್ಜುನನನ್ನು ಕರ್ಣ ಅದರಿಂದ ಕೊಲ್ಲಲು ಸಾಧ್ಯವಾಗದೇ ಹೋಯಿತು.

ತದಾ ನನರ್ತ ಕೇಶವಃ ಸಮಾಶ್ಲಿಷಚ್ಚ ಫಲ್ಗುನಮ್ ।
ನನಾದ ಶಂಖಿಮಾಧಮಜ್ಜಹಾಸ ಚೋರುನಿಸ್ವನಃ ॥ ೨೫೫ ॥

ಅ: ಆಗ ಕೃಷ್ಣ ಕುಣಿಯತೊಡಗಿದ. ಅರ್ಜುನನನ್ನು ಗಾಢವಾಗಿ ತಬ್ಬಿಕೊಂಡ. ಶಂಖವನ್ನು ಮೊಳಗಿಸುತ್ತಾ ಸಿಂಹನಾದವನ್ನು ಮಾಡಿದ. ದೊಡ್ಡಧ್ವನಿಯಿಂದ ಜೋರಾಗಿ ನಕ್ಕ.

---

೨೫೪. ದುಧುವುಃ ಪಾಲಿತವಂತಶ್ಚ। – (ವ.)

೨೫೪. ಕೃತ್ವಾऽऽತ್ಮಾನಂ ವಿಂಧ್ಯತುಲ್ಯಪ್ರಮಾಣಮ್ ॥ – ಭಾರತ (ದ್ರೋಣ. ೧೭೯/೫೫)

೨೫೫. ವಾಸುದೇವಸ್ತು ಹರ್ಷೇಣ ಮಹತಾऽಭಿಪರಿಪ್ಲುತಃ ।
ನನಾದ ಸಿಂಹನಾದಂ ವೈ ಪರ್ಯಷ್ವಜತ ಫಾಲ್ಗುನಮ್ ।
ಸ ವಿನದ್ಯ ಮಹಾನಾದಮಭೀಷೂನ್ ಸಂನಿಯಮ್ಯ ಚ ।
ನನರ್ತ ಹರ್ಷಸಂವೀತೋ ವಾತೋದ್ಧೂತ ಇವ ದ್ರುಮಃ ॥ – ಭಾರತ (ದ್ರೋಣ. ೧೮೦, ೨–೪)

ತಮಪೃಚ್ಛದ್ಗುಡಾಕೇಶಃ ಕಿಮೇತದಿತಿ ದುರ್ಮನಾಃ ।
ಹತೇ ಸುತೇಽಗ್ರಜೇಽಸ್ಮಾಕಂ ವೀರೇ ಕಂ ನಂದಸಿ ಪ್ರಭೋ ॥ ೨೫೬ ॥

ಅ: ಅರ್ಜುನ ವಿಷಾದದಿಂದ ಕೃಷ್ಣನನ್ನು ಕೇಳಿದ 'ಪ್ರಭು, ನಮ್ಮ ವೀರನಾದ ಜ್ಯೇಷ್ಠಪುತ್ರ ಹತನಾಗಿರುವಾಗ ನೀನೇಕೆ ಹೀಗೆ ಸಂತೋಷಪಡುತ್ತಿರುವಿ'.

ತಮಾಹ ಭಗವಾನ್ ಕೃಷ್ಣೋ ದಿಷ್ಟ್ಯಾ ಜೀವಸಿ ಫಲ್ಗುನ ।
ತ್ವದರ್ಥಂ ನಿಹಿತಾ ಶಕ್ತಿರ್ವಿಮುಕ್ತಾಽಸ್ಮಿನ್ ಹಿ ರಾಕ್ಷಸೇ ॥ ೨೫೭ ॥

ಅ: ಭಗವಂತನಾದ ಕೃಷ್ಣ ಅವನಿಗೆ ತಿಳಿಸಿದ 'ಅರ್ಜುನ, ಅದೃಷ್ಟವಶಾತ್ ನೀನು ಬದುಕಿದೆ. ನಿನಗೋಸ್ಕರ ಕಾದಿರಿಸಿದ್ದ ಶಕ್ತ್ಯಾಯುಧವನ್ನು ಕರ್ಣ ಈ ಘಟೋತ್ಕಚನ ಮೇಲೆ ಬಿಟ್ಟ'.

ವಿ : ಘಟೋತ್ಕಚ ಸತ್ತಿರುವುದಕ್ಕಲ್ಲ ತನಗೆ ಸಂಭ್ರಮ, ಅರ್ಜುನ ಬದುಕುಳಿದುದ್ದಕ್ಕೆ ಎಂದು ಕೃಷ್ಣನ ಭಾವ. ಸರ್ವಸಮರ್ಥನಾದ ಕೃಷ್ಣ ಹಾಗೆ ಸಂಭ್ರಮ ವ್ಯಕ್ತಪಡಿಸಿದ್ದು ಲೋಕರೀತಿಯಿಂದ ಮಾತ್ರ. ''ಕರ್ತುಂ ಅಕರ್ತುಂ ಅನ್ಯಥಾ ಕರ್ತುಮಪಿ ಸಮರ್ಥಃ'' ಆದ ಅವನಿಗೆ ಯಾವ ಕಾರ್ಯ ತಾನೇ ಅಸಾಧ್ಯ.

ವ್ಯಾಸರಿಂದ ಧರ್ಮರಾಜನ ಸಾಂತ್ವನ

ತತೋ ಯುಧಿಷ್ಠಿರೋ ದುಃಖಾದಮರ್ಷಾಚ್ಚಾಭ್ಯವರ್ತತ ।
ಕರ್ಣಂ ಪ್ರತಿ ತಮಾಹಾಥ ಕೃಷ್ಣದ್ವೈಪಾಯನಃ ಪ್ರಭುಃ ॥ ೨೫೮ ॥

ಅ: ಬಳಿಕ ಯುಧಿಷ್ಠಿರ ದುಃಖದಿಂದಲೂ, ಕೋಪದಿಂದ ಕರ್ಣನ ಮೇಲಿನ ಕೋಪದಿಂದಲೂ ಕುದಿಯತೊಡಗಿದ. ಆಗ ಸರ್ವಸಮರ್ಥರಾದ ವೇದವ್ಯಾಸರು ಆಗಮಿಸಿ ತಿಳಿಸಿದರು.

ಯಯಾಽರ್ಜುನೋ ನಿಹಂತವ್ಯಸ್ತಯಾಽಸೌ ರಾಕ್ಷಸೋ ಹತಃ ।
ತನ್ಮಾ ಶುಚಸ್ತ್ವಂ ರಾಜೇಂದ್ರ ದಿಷ್ಟ್ಯಾ ಜೀವತಿ ಫಲ್ಗುನಃ ।
ಇತ್ಯುಕ್ತ್ವಾ ಪ್ರಯಯೌ ವ್ಯಾಸಸ್ತತೋ ಯುದ್ಧಮವರ್ತತ ॥ ೨೫೯ ॥

---

೨೫೮. ಭಾರತ (ಕರ್ಣ. ೧೮೩/೫೯-೬೭)

ಅ: ''ಅರ್ಜುನ ಹತನಾಗಬೇಕಿದ್ದ ಶಕ್ತ್ಯಾಯುಧದಿಂದ ಘಟೋತ್ಕಚ ಹತನಾಗಿರುವನು; ಆದ್ದರಿಂದ ಮಹಾರಾಜ, ಶೋಕಿಸದಿರು. ದೈವವಶಾತ್ ಅರ್ಜುನ ಬದುಕಿರುವನು''. ಹೀಗೆ ಹೇಳಿ ವೇದವ್ಯಾಸರು ತೆರಳಿದರು. ಬಳಿಕ ಯುದ್ಧ ಸಾಗಿತು.

ವಿ: ಹುಟ್ಟಿದವರಿಗೆ ಸಾವು ತಪ್ಪಿದ್ದಲ್ಲ, ಘಟೋತ್ಕಚನ ಸಾವಂತೂ ಅರ್ಜುನನ ಉಳಿವಿಗೆ ಕಾರಣವಾಗಿದೆ. ಆದ್ದರಿಂದ ದುಃಖಿಸುವುದರ ಬದಲು ಸಂತೋಷಿಸುವುದು ಉಚಿತ. ನಿನಗಿನ್ನು ಜಯ ದೂರವಿಲ್ಲ, ಅಂದಿಗೆ ಐದನೆಯ ದಿನಕ್ಕೆ ಗೆಲುವು ಹಾಗೂ ರಾಜ್ಯ ಅವರಿಗೆ ಲಭಿಸುವುದು ಎಂದು ತಿಳಿಸಿ ವೇದವ್ಯಾಸರು ಅದೃಶ್ಯರಾದರು (ಭಾರತ ದ್ರೋಣಪರ್ವ, ೧೮೩/೬೪, ೬೫) :

ಭ್ರಾತೃಭಿಃ ಸಹಿತಃ ಸರ್ವೈಃ ಪಾರ್ಥಿವೈಶ್ಚ ಮಹಾತ್ಮಭಿಃ ।
ಕೌರವಾನ್ ಸಮರೇ ರಾಜನ್ ಪ್ರತಿಯುಧ್ಯಸ್ವ ಭಾರತ ।
ಪಂಚಮೇ ದಿವಸೇ ತಾತ ಪೃಥಿವೀ ತೇ ಭವಿಷ್ಯತಿ ॥

ಉಭಯ ಸೇನೆಗಳಿಗೆ ನಿದ್ರೆಯ ಬಾಧೆ

ಭೀಮಾರ್ಜುನಾಭ್ಯಾಮಿಹ ಹನ್ಯಮಾನೇ
ಬಲೇ ಕುರೂಣಾಮಿತರೈಶ್ಚ ಪಾಂಡವೈಃ ।
ಪ್ರದೀಪಹಸ್ತಾ ಅಥ ಯೋಧಕಾಶ್ಚ
ಸರ್ವೇಽಪಿ ನಿದ್ರಾವಶಗಾ ಬಭೂವುಃ ॥ ೨೬೦ ॥

ಅ:. ಭೀಮಾರ್ಜುನರಿಂದ ಕೌರವರ ಸೇನೆಯು, ಕೌರವರಿಂದ ಪಾಂಡವ ಸೇನೆಯು ನಾಶಹೊಂದುತ್ತಿದ್ದಾಗ ದೀಪ ಹಿಡಿದವರು, ಯೋಧರು, ಎಲ್ಲರೂ ನಿದ್ರೆಗೆ ಒಳಗಾದರು.

ವಿ: ಅಂದು ಯುದ್ಧದ ಹದಿನಾಲ್ಕನೆಯ ದಿನವಾಗಿತ್ತು. ಅಂದಂತೂ ಬೆಳಗಿನಿಂದ ಆರಂಭವಾದ ಯುದ್ಧ ಮಧ್ಯರಾತ್ರಿ ಕಳೆದರೂ ಮುಕ್ತಾಯವಾಗಿರಲಿಲ್ಲ. ಹೀಗಾಗಿ ಹೆಚ್ಚಿನ ಬಳಲಿಕೆ ಮೊದಲಾದ ಕಾರಣಗಳಿಂದ ಉಭಯ ಪಕ್ಷದ ಯೋಧರಿಗೂ ನಿದ್ರೆ ಕವಿಯತೊಡಗಿತು. ಕೆಲವರು ಆನೆ, ಕುದುರೆ, ರಥಗಳಲ್ಲಿ ಕುಳಿತಿದ್ದಂತೆಯೇ ನಿದ್ರೆಗೈಯ್ಯತೊಡಗಿದರು. ಮತ್ತು ಕೆಲವರು ನಿದ್ರೆಯ ಮಂಪರಿನಲ್ಲೇ ಯುದ್ಧ ಮಾಡುತ್ತಾ ಸಿಕ್ಕಿದವರನ್ನು ಕೊಂದುಹಾಕುತ್ತಿದ್ದರು. ಅನಿವಾರ್ಯವಾದಾಗ ಶಸ್ತ್ರಯುದ್ಧವೇ ಆ ರೀತಿ ನಡೆದಂತೆ, ಸತತ ಶಾಸ್ತ್ರಾಭ್ಯಾಸ ನಡೆಯುವುದು ಸಂಸಾರ ಕುರುಕ್ಷೇತ್ರದಲ್ಲಿ ಅನಿವಾರ್ಯ ಎಂಬ ಸೂಚನೆ ಇಲ್ಲಿದೆ.

---

೨೬೦. ರಥೇಷ್ವನ್ಯೇ ಗಜೇಷ್ವನ್ಯೇ ಹಯೇಷ್ವನ್ಯೇ ಚ ಭಾರತ ।
ನಿದ್ರಾಂಧಾ ನೋ ಬುಬುಧಿರೇ ಕಾಂಚಿಚ್ಚೇಷ್ಟಾಂ ನರಾಧಿಪ ॥ – ಭಾರತ (ದ್ರೋಣ. ೧೩೨/೨೪)

ಸ್ವಲ್ಪಕಾಲ ನಿದ್ರಿಸಲು ಅರ್ಜುನನ ಅನುಮತಿ

ದೃಷ್ಟೈವ ತಾನಾಹ ಧನಂಜಯಸ್ತದಾ
ಸ್ವಪ್ಸ್ಯಂತು ಯಾವಚ್ಛಶಿನಃ ಪ್ರಕಾಶಃ ।
ಇತೀರಿತಾ ಆಶಿಷಃ ಫಲ್ಗುನಾಯ
ಪ್ರಯುಜ್ಯ ಸರ್ವೇ ಸುಷುಪುರ್ಯಥಾಸ್ಥಿತಾಃ ॥ ೨೬೧ ॥

ಅ: ಅವರೆಲ್ಲ ಹಾಗೆ ನಿದ್ರಾವಶರಾಗಿದ್ದುದನ್ನು ನೋಡಿ ಅರ್ಜುನ ತಿಳಿಸಿದ ''ಚಂದ್ರೋದಯದ ವರೆಗೂ ಎಲ್ಲರೂ ನಿದ್ರೆ ಮಾಡಿರಿ''. ಅವನು ಹೀಗೆನ್ನಲು ಎಲ್ಲರೂ ಅವನಿಗೆ ಹಾರೈಕೆ ಸಲ್ಲಿಸಿ ತಾವು ಇದ್ದ ಸ್ಥಿತಿಯಲ್ಲಿಯೇ ಮಲಗಿಬಿಟ್ಟರು.

ವಿ: ಅರ್ಜುನ ಚಂದ್ರೋದಯದ ವರೆಗೆ ಬಿಡುವು ನೀಡಿದಾಗ ಅವರೆಲ್ಲ ಪಕ್ಷಭೇದವನ್ನು ಮರೆತು ಒಟ್ಟಾಗಿ ಅರ್ಜುನನಿಗೆ ಶುಭ ಹಾರೈಸಿದರು ಎಂಬ ಇಲ್ಲಿಯ ವಿವರ ಅಪೂರ್ವವಾದದ್ದು. ಅಂದು ಕೃಷ್ಣಪಕ್ಷದ ದಶಮಿಯ ದಿನ, ಅಂದಿನ ಚಂದ್ರೋದಯದ ಕಾಲ ಸುಮಾರು ರಾತ್ರಿ ಎರಡು ಗಂಟೆಯ ವೇಳೆ. ಅಲ್ಲಿಯವರೆಗೂ ಅವರು ಮಲಗಬಹುದು ಎಂದರ್ಥ. ಅಂದು ಅಮಾವಾಸ್ಯೆ–ಯಾಗಿರಲಿಲ್ಲವೆಂಬುದು ಇದರಿಂದ ಇನ್ನೂ ಸ್ಫುಟಪಡುವುದು. ಇದರಿಂದಾಗಿ ಈ ಮೊದಲೇ ಹೇಳಿದಂತೆ ಅಂದು ಸಂಜೆ ಕೃಷ್ಣ ಸೂರ್ಯನಿದ್ದಾಗಲೇ ಕತ್ತಲೆ ಕವಿಸಿದ ಪ್ರಸಂಗ ಪೂರ್ಣಗ್ರಹಣದ ಪ್ರಸಂಗ ಎಂಬ ಕೆಲವರ ಕಲ್ಪನೆ ಅತ್ಯಂತ ಅಸಮಂಜಸ ಎಂಬುದು ಸ್ಫುಟಪಡುವುದು.

ಚಂದ್ರೋದಯ - ಮತ್ತೆ ರಾತ್ರಿಯುದ್ಧ - ಸೋಮದತ್ತ ಭೂರಿಗಳ ವಧೆ

ಪುನಶ್ಚ ಚಂದ್ರೇಽಭ್ಯುದಿತೇ ಯುಧೇ ತೇ
ಸಮಾಯಯುಃ ಶಸ್ತ್ರಮಹಾಸ್ತ್ರವರ್ಷಾಃ ।
ತತ್ರಾಯಾತಃ ಸಾತ್ಯಕಿಂ ಸೋಮದತ್ತೋ
ಭೂರಿಶ್ಚ ತಾಭ್ಯಾಂ ಯುಯುಧೇ ಸ ಏಕಃ ॥ ೨೬೨ ॥

---

೨೬೧. ಯಾವಚ್ಛಶಿನಃ ಪ್ರಕಾಶಶ್ಚಂದ್ರಿಕಾ ಭವಿಷ್ಯತಿ ತಾವತ್ ... । – (ವ.)

೨೬೧. ನಿಮೀಲಯತ ಚಾತ್ರೈವ ರಣಭೂಮೌ ಮುಹೂರ್ತಕಮ್ ।
ತತೋ ವಿನಿದ್ರಾ ವಿಶ್ರಾಂತಾಶ್ಚಂದ್ರಮಸ್ಯುದಿತೇ ಪುನಃ ॥ – ಭಾರತ (ದ್ರೋಣ. ೧೮೪/೨೮)

೨೬೧. ತಾಮಸ್ಯ ವಾಚಂ ದೇವಾಶ್ಚ ಋಷಯಶ್ಚ ಮಹಾತ್ಮನಃ ।
ಸರ್ವಸೈನ್ಯಾನಿ ಚಾಕ್ಷುದ್ರಾಂ ಪ್ರಹೃಷ್ಟಾಃ ಪ್ರತ್ಯಪೂಜಯನ್ ॥ – ಭಾರತ (೧೮೪/೨೯/೪೫)

ಅ: ಮತ್ತೆ ಚಂದ್ರೋದಯವಾದ ಮೇಲೆ ಅವರೆಲ್ಲ ಶಸ್ತ್ರಗಳನ್ನೂ, ಮಹಾಸ್ತ್ರಗಳನ್ನೂ ಮಳೆಗರೆಯುತ್ತಾ ಯುದ್ಧಕ್ಕೆಂದು ತೊಡಗಿದರು. ಆಗ ಬಂದ ಸೋಮದತ್ತ ಮತ್ತು ಭೂರಿ ಇಬ್ಬರು ಸಾತ್ಯಕಿಯನ್ನು ಎದುರುಸಿದರು. ಸಾತ್ಯಕಿಯೊಬ್ಬನೇ ಅವರಿಬ್ಬರೊಂದಿಗೆ ಯುದ್ಧ ಮಾಡ-ತೊಡಗಿದ.

ವಿ: ಆಗಿನ ಚಂದ್ರೋದಯದ ವರ್ಣನೆ ಮಹಾಭಾರತದಲ್ಲಿ ಹೀಗಿದೆ.

ತತಃ ಕುಮುದನಾಥೇನ ಕಾಮಿನೀಗಂಡಪಾಂಡುನಾ ।
ನೇತ್ರಾನಂದೇನ ಚಂದ್ರೇಣ ಮಾಹೇಂದ್ರೀ ದಿಗಲಂಕೃತಾ ॥ – (೭/೧೮೪/೪೬)

ಇದನ್ನು ಕಾವ್ಯಪ್ರಕಾಶ ಮೊದಲಾದ ಲಕ್ಷಣ ಗ್ರಂಥಗಳಲ್ಲಿ ಲುಪ್ತೋಪಮೆಗೆ ಅಪೂರ್ವ–ವಾದ ಉದಾಹರಣೆಯನ್ನಾಗಿ ಉಲ್ಲೇಖಿಸಲಾಗಿದೆ. ಅವರಿಬ್ಬರಿಗೂ ಸಾತ್ಯಕಿಯ ಮೇಲೆ ವಿಶೇಷ ಕೋಪ ಬರಲು ಅವನು ಅಂದಿನ ದಿನವೇ ಭೂರಿಶ್ರವಸ್ಸನ್ನು ನಿಂದಿತವಾದ ರೀತಿಯಲ್ಲಿ ಕೊಂದಿದ್ದು ವಿಶೇಷ ಕಾರಣವಾಗಿತ್ತು ಎಂದು ತಿಳಿಯಬಹುದು.

ಬಾಹ್ಲೀಕನಿಂದ ಸಾತ್ಯಕಿಯ ಪರಾಭವ

ಹತೌ ಚ ತೌ ಪೇತತುಸ್ತೇನ ಭೂಮೌ
ಬಾಹ್ಲೀಕ ಏನಂ ಸಮರೇ ತ್ವಯೋಧಯತ್ ।
ಸ ಸಾತ್ಯಕಿಂ ವಿರಥೀಕೃತ್ಯ ಬಾಣಂ
ವಧಾಯ ತಸ್ಯಾಶು ಮುಮೋಚ ವೀರಃ ॥ ೨೬೩ ॥

ಅ: ಸಾತ್ಯಕಿಯಿಂದ ಅವರಿಬ್ಬರೂ ಹತರಾಗಿ ನೆಲಕ್ಕೊರಗಿದರು. ಆಗ ಅವನನ್ನು ಯುದ್ಧದಲ್ಲಿ ಬಾಹ್ಲೀಕ ಎದುರಿಸಿದ. ವೀರನಾದ ಅವನು ಸಾತ್ಯಕಿಯನ್ನು ವಿರಥನನ್ನಾಗಿಸಿ ಅವನ ವಧೆಗೆಂದು ಕೂಡಲೇ ಒಂದು ಬಾಣವನ್ನು ಪ್ರಯೋಗಿಸಿದ.

ವಿ : ೧) ಬಾಹ್ಲೀಕ ಸೋಮದತ್ತನ ತಂದೆ. ತನ್ನ ಮಗ ಹಾಗೂ ಮೊಮ್ಮಗ ಇಬ್ಬರೂ ಹಾಗೆ ಹತರಾಗಿ ಬಿದ್ದದ್ದನ್ನು ನೋಡಿ ಅವನು ಸಾತ್ಯಕಿಯೊಂದಿಗೆ ಯುದ್ಧಕ್ಕೆ ತೊಡಗಿದ.

೨) ಬಾಹ್ಲೀಕ ಪ್ರಹ್ಲಾದನ ಅವತಾರ. ಅವನಲ್ಲಿ ವಾಯುದೇವರ ಆವೇಶವೂ ಇದ್ದ ಉಲ್ಲೇಖ ಈಗಾಗಲೇ ಬಂದಿದೆ(೧೧/೮). ಭೀಷ್ಮರ ದೊಡ್ಡಪ್ಪನೆಂಬುದು ಅವನ ಹಿರಿಮೆ. ಎಂದರೆ ಯುದ್ಧರಂಗದಲ್ಲಿ ಪಾಲ್ಗೊಂಡ ರಾಜರುಗಳಲ್ಲಿ ಅತ್ಯಂತ ಹಿರಿಯ ಎಂಬುದು ಬಾಹ್ಲೀಕನ ವೈಶಿಷ್ಟ್ಯ ಎಂದಾಗುವುದು.

ಭೀಮನಿಂದ ಸಾತ್ಯಕಿಯ ರಕ್ಷಣೆ - ಬಾಹ್ಲೀಕನ ವಧೆ

ಚಿಚ್ಛೇದ ತಂ ಭೀಮಸೇನಸ್ತ್ರಿಧೈವ
ತಸ್ಮೈ ಶತಘ್ನೀಂ ಪ್ರಜಹಾರ ಬಾಹ್ಲಿಕಃ ।
ತಯಾ ಹತೋ ವಿಹ್ವಲಿತೋ ವೃಕೋದರೋ
ಜಘಾನ ತಂ ಗದಯಾ ಸೋಽಪತಚ್ಚ ॥ ೨೬೪ ॥

ಅ: ಬಾಹ್ಲೀಕ ಪ್ರಯೋಗಿಸಿದ ಆ ಬಾಣವನ್ನು ಭೀಮಸೇನ ಮೂರು ತುಂಡಾಗಿ ಕತ್ತರಿಸಿದ. ಬಾಹ್ಲೀಕ ಆಗ ಭೀಮನ ಮೇಲೆ ಶತಘ್ನೀ ಎಂಬ ಆಯುಧದಿಂದ ಅಪ್ಪಳಿಸಿದ. ಭೀಮ ಅದರಿಂದ ವಿಹ್ವಲಗೊಂಡಂತೆ ನಟಿಸುತ್ತಾ ಗದೆಯಿಂದ ಬಾಹ್ಲೀಕನನ್ನು ಹೊಡೆದ. ಅವನು ಹತನಾಗಿ ಬಿದ್ದ.

ವಿ : ಶತಘ್ನೀ ಎಂಬುದು ಏಕಕಾಲಕ್ಕೆ ನೂರು ಜನರನ್ನು ಕೊಲ್ಲುವಂತಹ ವಿಶಿಷ್ಟವಾದ ಆಯುಧ. ಅದು ಬ್ರಹ್ಮದತ್ತ ಎಂದು ಪ್ರಸಿದ್ಧಿ. ಅದಕ್ಕೆ ಗೌರವ ತೋರಬೇಕೆಂದು ಭೀಮ ವಿಹ್ವಲಗೊಂಡಂತೆ ನಟಿಸಿದ.

ಬಾಹ್ಲೀಕವಧೆಯ ರಹಸ್ಯ

ಬಾಹ್ಲೀಕಃ ಪ್ರಾರ್ಥಯಾಮಾಸ ಪೂರ್ವಂ ಸ್ನೇಹಪುರಃಸರಮ್ ।
ಭೀಮ ತ್ವಯೈವ ಹಂತವ್ಯೋ ರಣೇಽಹಂ ಪ್ರೀತಿಮಿಚ್ಛತಾ ।
ತದಾ ಯಶಶ್ಚ ಧರ್ಮಂ ಚ ಲೋಕಂ ಚ ಪ್ರಾಪ್ನುಯಾಮಹಮ್ ॥ ೨೬೫ ॥

---

೨೬೪. ವಿಹ್ವಲಿತ ಇತಿ । ದೃಢಪ್ರಹಾರೇಣ ಚಲಿತತನುರಿತ್ಯರ್ಥಃ । ನಿತರಾಂ ವ್ಯಥಿತ ಇತಿ । ಲೋಕವಿವಕ್ಷಯೇತತ್ । ಯದ್ವಾ ಭೀಮಸ್ಯ ಕಿಂಚಿಚ್ಚಲಿತತನುಮೇವ ನಿತರಾಂ ವ್ಯಥಿತೇತಿ ಭಾವಃ । ಯದ್ವಾ ನಿತರಾಂ ಪ್ರಯತ್ನವತಾ ತ್ವಯಾ ವ್ಯಥಿತ ಇತ್ಯರ್ಥಃ । –(ತಾ.)

೨೬೪. ವಿಹ್ವಲಿತ ಇತ್ಯಸ್ಯ ಭಯಯುಕ್ತವಚ್ಚಲನವಿಶಿಷ್ಟ ಇತ್ಯರ್ಥಃ । –(ತಾ.)

೨೬೪. ವಿಹ್ವಲಿತ ಇತ್ಯನೇನ ಭಯಭ್ರಮೋತ್ಪಾದನಾರ್ಥಂ ಸ್ವೇಚ್ಛಯಾ ವಲನಂ ಕೃತಮಿತ್ಯುಚ್ಯತೇ ಇತ್ಯ-ಭ್ಯುಪಗಮಾತ್ । –(ಸ.)

೨೬೫. ನನು ಪೂರ್ವಂ ಭೀಮಃ ವೈಷ್ಣವತ್ವಾತ್ ಕರ್ಣಂ ನ ಜಘಾನೇತ್ಯುಕ್ತಮ್ । ತರ್ಹಿ ಬಾಹ್ಲೀಕಸ್ಯಾಪಿ ವೈಷ್ಣವತ್ವಾತ್ ಕಥಂ ಜಘಾನೇತ್ಯತ ಆಹ – ಬಾಹ್ಲೀಕ ಇತ್ಯಾದಿನಾ । –(ಜ.)

ಅ: ಹಿಂದೆ ಬಾಹ್ಲೀಕ ಪ್ರೀತಿಪೂರ್ವಕವಾಗಿ ಬೇಡಿಕೊಂಡಿದ್ದ ''ಭೀಮ, ಯುದ್ಧದಲ್ಲಿ ನನ್ನ ಪ್ರೀತಿಗೆಂದು ನೀನೇ ನನ್ನನ್ನು ಸಂಹರಿಸಬೇಕು. ಆಗ ನಾನು ಕೀರ್ತಿ, ಪುಣ್ಯಗಳನ್ನು, ಉತ್ತಮ ಲೋಕವನ್ನು ಪಡೆಯುವಂತಾಗುವೆನು''.

ವಿ : ಬಾಹ್ಲೀಕ ವೈಷ್ಣವಾಗ್ರೇಸರ. ಭೀಮ ವೈಷ್ಣವರನ್ನು ಸಂಹರಿಸುವುದಿಲ್ಲ. ಅವನು ಭೀಷ್ಮ, ದ್ರೋಣ ಕರ್ಣಾದಿಗಳನ್ನು ಸಂಹರಿಸದಿದ್ದುದೂ ಅದೇ ಕಾರಣದಿಂದಾಗಿಯೇ. ಬಾಹ್ಲೀಕನಂತೂ ಅತ್ಯಂತ ಹಿರಿಯ. ಸಂಬಂಧದಲ್ಲಿ ಭೀಮನಿಗೆ ಮುತ್ತಜ್ಜ. ಅಂಥವನನ್ನು ಭೀಮ ಕೊಂದದ್ದು ಏಕೆ ಎಂಬ ಪ್ರಶ್ನೆಗೆ ಉತ್ತರ ಇಲ್ಲಿದೆ. ಬಾಹ್ಲೀಕ ಮೊದಲಿಗೇ ಭೀಮನನ್ನು ಅವನೇ ತನ್ನನ್ನು ಕೊಲ್ಲಬೇಕೆಂದು ಪ್ರಾರ್ಥಿಸಿಕೊಂಡಿದ್ದರಿಂದ ಭೀಮ ಅವನ ಒಳಿತಿಗಾಗಿ ಸಂಹರಿಸಿದನೇ ಹೊರತು ಶತ್ರುಗಳನ್ನು ಕೊಲ್ಲುವಂತೆ ದ್ವೇಷಾದಿಗಳಿಂದಲ್ಲ ಎಂಬುದು ತಾತ್ಪರ್ಯ.

ಇತ್ಯುಕ್ತ ಆಹ ತಂ ಭೀಮೋ ನಿತರಾಂ ವ್ಯಥಿತಸ್ತದಾ ।
ಹನ್ಯಾಂ ನೈವಾನ್ಯಥಾ ಯುದ್ಧೇ ತತ್ ತೇ ಶುಶ್ರೂಷಣಂ ಭವೇತ್ ।
ಇತಿ ತೇನ ಹತಸ್ತತ್ರ ಭೀಮಸೇನೇನ ಬಾಹ್ಲಿಕಃ ॥ ೨೬೬ ॥

ಅ: ಬಾಹ್ಲೀಕ ಹಾಗೆ ಕೇಳಿಕೊಂಡಾಗ ಭೀಮ ತಿಳಿಸಿದ ''ನೀನು ನನ್ನನ್ನು ಬಹಳ ನೋಯಿಸಿದಾಗ ಮಾತ್ರ ನಿನ್ನನ್ನು ಯುದ್ಧದಲ್ಲಿ ಕೊಲ್ಲುವೆ, ಇಲ್ಲವಾದಲ್ಲಿ ಇಲ್ಲ. ಹಾಗೆ ನೋಯಿಸುವುದು ನಿನಗೆ ಸೇವೆ ಮಾಡಿದ ಪುಣ್ಯಕ್ಕೇ ಕಾರಣವಾಗುವುದು''. ಅದರಂತೆ ಭೀಮಸೇನನಿಂದ ಬಾಹ್ಲೀಕ ಅಲ್ಲಿ ಹತನಾದ.

ವಿ : ೧) ಬಾಹ್ಲೀಕ ಹಾಗೆ ಕೇಳಿಕೊಂಡಾಗ ಭೀಮ ತಿಳಿಸಿದ್ದ – ನನ್ನನ್ನು ನೀನು ಯುದ್ಧದಲ್ಲಿ ತುಂಬಾ ಬಲವಾಗಿ ಹೊಡೆದು ನೋಯಿಸಬೇಕು, ಹಾಗಿದ್ದರೆ ಮಾತ್ರ ಕೊಲ್ಲುವೆ. ಆ ರೀತಿ

---

೨೬೬. ಹನ್ಯಾಂ ನೈವಾನ್ಯಥೇತ್ಯತ್ರ ಅನ್ಯಥಾ= ತ್ವದಾಜ್ಞಾಂ ವಿನಾ ನ ಹನ್ಯಾಮ್। ತತ್= ತ್ವದಾಜ್ಞಯಾ ಹನನಂ ತೇ ಶುಶ್ರೂಷಣಂ ಭವೇತ್ । ಯದ್ವಾ ನಿತರಾಂ ವ್ಯಥಿತಸ್ತ್ವಾಂ ಹನ್ಯಾಮ್ । ಅನ್ಯಥಾ ನೈವ ॥ – (ವಾ.)

೨೬೬. ನಿತರಾಂ ವ್ಯಥಿತ ಇತ್ಯಸ್ಯ ನಿತರಾಂ ತಾಡಿತ ಇತ್ಯರ್ಥಃ । ಏತೇನ ಭೀಮಸ್ಯ ವ್ಯಥಾಯಾ ಏವಾಯೋಗೇನ ನಿತರಾಂ ವ್ಯಥಾಯಾಃ ಸುತರಾಮಯೋಗಾನ್ನಿತರಾಂ ವ್ಯಥಿತ ಇತಿ ನಿತರಾಂ ವ್ಯಥಾಯುಕ್ತತ್ವಸ್ಯ ಕಥನಮನುಪಪನ್ನಮಿತಿ ಚೋದ್ಯಂ ಪ್ರತ್ಯುಕ್ತಮ್ । ವ್ಯಥಾ ತಾಡನ ಇತ್ಯಸ್ಮಾತ್ ಕ್ರಮಪ್ರತ್ಯಯೇ ಛಾಂದಸೇ ಇಡಾಗಮೇ ಧಕಾರಸ್ಯ ಥಕಾರೇ ವ್ಯಥಿತ ಇತಿ ರೂಪಂ ನಿಷ್ಪನ್ನಮಿತ್ಯಂಗೀಕೃತ್ಯ ನಿತರಾಂ ವ್ಯಥಿತ ಇತ್ಯಸ್ಯ ನಿತರಾಂ ತಾಡಿತ ಇತ್ಯರ್ಥಸ್ಯೋಕ್ತತ್ವಾತ್॥ – (ಸ.)

೨೬೬. ಸಾ ಪಾಂಡವೇನ ಪ್ರಹಿತಾ ಬಾಹ್ಲೀಕಸ್ಯ ಶಿರೋऽಹರತ್ ।
ಸ ಪಪಾತ ಹತಃ ಪೃಥ್ವ್ಯಾಂ ವಜ್ರಾಹತ ಇವಾದ್ರಿರಾಟ್ ॥ (ದ್ರೋಣ. ೧೫೭/೧೫)

ನೋಯಿಸುವುದು ನಿನಗೆ ಪಾಪಕ್ಕೆ ಕಾರಣವಾಗುವ ಬದಲು ಪುಣ್ಯಕ್ಕೇ ಕಾರಣವಾಗುವುದು ಎಂದು. ಅದರಿಂದಾಗಿಯೇ ಬಾಹ್ಲೀಕ ಭೀಮನನ್ನು ಶತಘ್ನಿಯಿಂದ ಅಷ್ಟು ಜೋರಾಗಿ ಹೊಡೆದಿದ್ದ. ಭೀಮ ತನ್ನ ಮಾತಿನಂತೆ ಅವನನ್ನು ಸಂಹರಿಸಿ ಅವನಿಗೆ ಸದ್ಗತಿಯನ್ನು ನೀಡಿದ. ಪ್ರಹ್ಲಾದನಂತಹ ವಿಷ್ಣುಭಕ್ತ ಪ್ರಾರಬ್ಧವಶಾತ್ ಹಾಗೆ ಕೌರವ ಪಕ್ಷವನ್ನು ಸೇರುವಂತಾಗಿದ್ದರೂ ಅದನ್ನು ಹೀಗೆ ಸದ್ಗತಿಗೆ ಕಾರಣವಾಗುವಂತೆ ಮಾಡಿಕೊಂಡಿದ್ದು ಆತನ ವಿವೇಕದ ವಿಶೇಷ ಫಲ. ಅದು ಭೀಮನನ್ನು ಅವನು ಸಾಕ್ಷಾತ್ ವಾಯುದೇವರ ಅವತಾರ ಎಂದು ಚೆನ್ನಾಗಿ ತಿಳಿದು ಆರಾಧಿಸಿದ್ದರ ಫಲಶ್ರುತಿ.

೨) ಗುರುವಾದ ಭೀಮನನ್ನು ಬಾಹ್ಲೀಕ ಹಾಗೆ ಬಲವಾಗಿ ಹೊಡೆದ ಪ್ರಸಂಗ ಗುರುಗಳನ್ನು ಶಿಷ್ಯ ಕ್ಲಿಷ್ಟ ಪ್ರಶ್ನೆಗಳನ್ನು ಕೇಳುವುದರ ಸಂಕೇತ, ಹಾಗೆ ಗುರುಗಳನ್ನು ಪ್ರಶ್ನಿಸುವಾಗ ಪೂರ್ವಪಕ್ಷವನ್ನು ಸ್ವಪಕ್ಷವೆಂಬಷ್ಟೇ ಬಲವಾಗಿ ಕೇಳಿದಾಗಲೂ ಶಿಷ್ಯರಿಗೆ ಯಾವ ಪಾಪವೂ ಬರದು, ತತ್ವನಿರ್ಣಯದ ಉದ್ದೇಶದಿಂದ ಅಂತಹ ಪ್ರಶ್ನೆಯನ್ನು ಕೇಳುವುದರಿಂದ ಅದು ಪುಣ್ಯಕ್ಕೇ ಕಾರಣವಾಗುವುದು ಎಂಬ ನಿರ್ಣಯ ಶ್ರೀಮದ್ಭಾಗವತತಾತ್ಪರ್ಯನಿರ್ಣಯದಲ್ಲಿ ಬಂದಿದೆ:

'ಶಿಷ್ಯೋಽಪಿ ಪೂರ್ವಪಕ್ಷಸ್ಥಸ್ತದೇವಾತ್ಮಮತಂ ಬ್ರುವನ್।
ನೈವ ದುಷ್ಯತ್ಯಸತ್ಕೇನ ..... ॥' ಇತಿ ವಿಕ್ಷೇಪೇ । – ಭಾ. ತಾ. (೧೧/೧೦/೩೭)

೩) ಇಲ್ಲಿ ಬಾಹ್ಲೀಕನ ಹೊಡೆತ ಅದಕ್ಕೆ ಸಂಕೇತ. ಅದಕ್ಕೆ ಭೀಮ ಬಾಹ್ಲೀಕನನ್ನು ಹೊಡೆದು ಸಾಯಿಸಿದ್ದು ಗುರು ಶಿಷ್ಯನ ಸಂಶಯವನ್ನು ಪೂರ್ಣವಾಗಿ ಪರಿಹರಿಸುವುದರ ಸಂಕೇತ. ಹೀಗೆ ಈ ಭೀಮ ಬಾಹ್ಲೀಕರ ಪ್ರಸಂಗ ಅಪೂರ್ವ ತತ್ವಜಿಜ್ಞಾಸೆಯ ಪ್ರತೀಕದಂತಿರುವುದನ್ನು ಗಮನಿಸಬೇಕು.

ಹತೇ ಬಾಹ್ಲೀಕೇ ಕೌರವಾ ಭೀಮಸೇನ-
ಮಭ್ಯಾಜಗ್ಮುಃ ಕರ್ಣದುರ್ಯೋಧನಾದ್ಯಾಃ ।
ದ್ರೌಣಿಂ ಪುರಸ್ಕೃತ್ಯ ಗುರುಂ ಚ ಪಾರ್ಷತಃ
ಸಭ್ರಾತೃಕಃ ಸಾತ್ಯಕಿನಾ ಸಮಭ್ಯಯಾತ್ ॥ ೨೬೭ ॥

ಅ: ಬಾಹ್ಲೀಕ ಹತನಾಗಲು ಕರ್ಣ, ದುರ್ಯೋಧನ ಮೊದಲಾದ ಕೌರವ ವೀರರು ಅಶ್ವತ್ಥಾಮನನ್ನು, ದ್ರೋಣರನ್ನು ಮುಂದಿಟ್ಟುಕೊಂಡು ಭೀಮಸೇನನ ಮೇಲೆ ನುಗ್ಗಿದರು. ಧೃಷ್ಟದ್ಯುಮ್ನ ತನ್ನ ಸೋದರರೊಂದಿಗೂ, ಸಾತ್ಯಕಿಯೊಂದಿಗೂ ಕೂಡಿ ಗುರುಗಳಾದ ದ್ರೋಣರನ್ನು ಎದುರಿಸಿದ.

ರಾತ್ರಿಯುದ್ಧದಲ್ಲಿ ಅಕ್ಷೋಹಿಣೀ ಸೇನೆಯ ವಿನಾಶ

ಸಂಶಪ್ತಕೈರೇವ ಪಾರ್ಥೋ ಯುಯೋಧ
ತದ್ಯುದ್ಧಮಾಸೀದತಿರೌದ್ರಮದ್ಭುತಮ್ ।
ಅಕ್ಷೌಹಿಣೀ ತತ್ರ ಭೀಮಾರ್ಜುನಾಭ್ಯಾಂ
ನಿಷೂದಿತಾ ರಾತ್ರಿಯುದ್ಧೇ ಸಮಂತಾತ್ ॥ ೨೬೮ ॥

ಅ: ಅರ್ಜುನ ಸಂಶಪ್ತಕರೊಂದಿಗೆ ಯುದ್ಧದಲ್ಲಿ ತೊಡಗಿದ. ಆ ಯುದ್ಧ ಅತ್ಯಂತ ಭೀಕರವೂ, ಅದ್ಭುತವೂ ಆಗಿತ್ತು. ಆ ರಾತ್ರಿ ಯುದ್ಧದಲ್ಲಿ ಅಂದು ಭೀಮಾರ್ಜುನರಿಂದ ಒಂದು ಅಕ್ಷೋಹಿಣೀ ಸೇನೆ ನಾಶ ಹೊಂದಿತು.

ವಿ : ದುರ್ಯೋಧನನ ಸೇನೆ ಐದು ಅಕ್ಷೋಹಿಣಿ ಸಂಖ್ಯೆಗೆ ಇಳಿಯಿತು ಎಂದರ್ಥ.

ಹದಿನೈದನೆಯ ದಿನದ ಯುದ್ಧ

ತತಃ ಸೂರ್ಯಶ್ಚಾಭ್ಯುದಿತಸ್ತದಾऽऽತಿ
ಘೋರಂ ದ್ರೋಣಃ ಕರ್ಮ ಯುದ್ಧೇ ಚಕಾರ ।
ಸ ಪಾಂಚಾಲಾನಾಂ ರಥವೃಂದಂ ಪ್ರವಿಶ್ಯ
ಜಘಾನ ಹಸ್ತ್ಯಶ್ವರಥಾನ್ ನರಾಂಶ್ಚ ॥ ೨೬೯ ॥

ಅ: ಬಳಿಕ ಸೂರ್ಯೋದಯವಾಯಿತು. ಆಗ ದ್ರೋಣರು ಅತ್ಯಂತ ಘೋರವಾದ ಕಾರ್ಯವನ್ನು ಯುದ್ಧದಲ್ಲಿ ಮಾಡಿದರು. ಅವರು ಪಾಂಚಾಲರ ರಥಸೇನೆಯನ್ನು ಹೊಕ್ಕು ಆನೆಗಳನ್ನು, ಕುದುರೆಗಳನ್ನು, ರಥಗಳನ್ನು, ಪದಾತಿಗಳನ್ನು ಕೊಂದುಹಾಕಿದರು.

ದ್ರೋಣರ ಅದ್ಭುತ ಯುದ್ಧ

ವಿದ್ರಾವಿತಾಸ್ತೇನ ಮಹಾರಥಾಶ್ಚ
ನೈವಾವಿಂದನ್ ಶರ್ಮ ಬಾಣಾಂಧಕಾರೇ ।
ಯುವೇವ ವೃದ್ಧೋऽಪಿ ಚಚಾರ ಯುದ್ಧೇ
ಸ ಉಗ್ರಧನ್ವಾ ಪರಮಾಸ್ತ್ರವೇತ್ತಾ ॥ ೨೭೦ ॥

ಅ: ದ್ರೋಣರು ಮಹಾರಥರನ್ನೂ ಸಹ ಹೊಡೆದೋಡಿಸಿದರು. ಬಾಣಗಳ ಕತ್ತಲಲ್ಲಿ ಅವರಿಗೆ ನೆಮ್ಮದಿ ದೊರಕದಂತಾಯಿತು. ವೃದ್ಧರಾದರೂ ಯುದ್ಧದಲ್ಲಿ ಮಹಾ ಅಸ್ತ್ರಜ್ಞರೂ, ಭಯಂಕರ ಬಿಲ್ಲುಗಾರರೂ ಆದ ದ್ರೋಣರು ಯುವಕನಂತೆ ಸಂಚರಿಸಿದ.

ವಿ: ಆಗ ಸೂರ್ಯೋದಯವಾಗಿದ್ದರೂ ದ್ರೋಣರ ಬಾಣಗಳು ಗಗನದಲ್ಲಿ ತುಂಬಿದ್ದರಿಂದ ಮತ್ತೊಮ್ಮೆ ಕತ್ತಲೆ ಕವಿದಂತಾಯಿತು ಎಂಬ ಇಲ್ಲಿಯ ವಿಶೇಷಾಂಶವನ್ನು ಗಮನಿಸಬೇಕು. ಭೀಷ್ಮರಂತೆ ಎಂಟುನೂರು ವರ್ಷಗಳ ವೃದ್ಧರಾದರೂ ದ್ರೋಣರು ಯುವಕನಂತೆ ಸಂಚರಿಸಿದ್ದು ಅವರ ಅಪಾರ ಯೋಗಸಿದ್ಧಿಗೆ ದ್ಯೋತಕ.

ರಥಾರ್ಬುದಂ ತೇನ ಹತಂ ಚ ತತ್ರ
ತತಃ ಸಹಸ್ರಂ ಗುಣಿತಂ ನರಾಣಾಮ್ ।
ತತೋ ದಶಾಂಶೋ ನಿಹತೋ ಹಯಾನಾಂ
ಗಜಾರ್ಬುದಂ ಚೈವ ರಣೋತ್ಕಟೇನ ॥ ೨೭೧ ॥

ಅ: ಯುದ್ಧಕೋವಿದರಾದ ದ್ರೋಣರಿಂದ ಅಲ್ಲಿ ಇಪ್ಪತ್ತು ಸಾವಿರ ರಥಿಕರು ಹತರಾದರು, ಅದರ ಸಾವಿರಪಟ್ಟು ಕಾಲಾಳುಗಳು ಕೊಲ್ಲಲ್ಪಟ್ಟರು, ಅದರ ಹತ್ತನೆಯ ಒಂದಂಶದಷ್ಟು ಕುದುರೆಗಳೂ ಸತ್ತವು. ಇಪ್ಪತ್ತು ಸಾವಿರ ಗಜಗಳೂ ಹತವಾದವು.

ವಿ: ಅರ್ಬುದ ಎಂಬ ಸಂಖ್ಯೆಗೆ ಅನೇಕ ಅರ್ಥಗಳು ಇದ್ದರೂ *ಮಹಾಭಾರತದಲ್ಲಿ ಬಂದ ಉಲ್ಲೇಖದಂತೆ ಈ ಪ್ರಸಂಗದಲ್ಲಿ ಇದಕ್ಕೆ ಇಪ್ಪತ್ತು ಸಾವಿರ ಎಂದು ಅರ್ಥಮಾಡಿಕೊಳ್ಳಬೇಕು.

ದ್ರೋಣರಿಂದ ವಿರಾಟ ದ್ರುಪದರ ವಧೆ

ತಥಾ ವಿರಾಟದ್ರುಪದೌ ಶರಾಭ್ಯಾಂ
ನಿನಾಯ ಲೋಕಂ ಪರಮಾಜಿಮಧ್ಯೇ ।
ತತೋ ವಿಜಿತ್ಯೈವ ಗುರೋಃ ಸುತಾದೀನ್
ಧೃಷ್ಟದ್ಯುಮ್ನಂ ಭೀಮಸೇನೋ ಜುಗೋಪ ॥ ೨೭೨ ॥

---

೨೭೧. ರಥಾರ್ಬುದಮಿತ್ಯತ್ರ ಅರ್ಬುದಪದೇನ ವಿಂಶತಿಸಹಸ್ರಮುಚ್ಯತೇ। ಅರ್ಬುದಪದೇನ ಮಹಾಸಂಖ್ಯಾऽಪಿ ಕಥ್ಯತೇ। ತೇನ ವಿಂಶತಿಸಹಸ್ರಂ ತ್ರಿಂಶತ್ಸಹಸ್ರಂ ಚೋಚ್ಯತೇ। ಪ್ರಕೃತೇ ತು ವಿಂಶತ್ಸಹಸ್ರಮುಚ್ಯತ ಇತಿ ಭಾವಃ ॥ – (ವಾ.)

* ಹತ್ವಾ ವಿಂಶತಿಸಾಹಸ್ರಾನ್ – ಭಾರತ (ದ್ರೋಣ. /೧೯೦/೨೯)

ಅ: ಹಾಗೆಯೇ ಎರಡು ಬಾಣಗಳಿಂದ ದ್ರೋಣರು ವಿರಾಟ ಮತ್ತು ದ್ರುಪದರನ್ನು ಆ ಯುದ್ಧದಲ್ಲಿ ಪರಲೋಕಕ್ಕೆ ಅಟ್ಟಿದರು. ಬಳಿಕ ಗುರುಪುತ್ರರಾದ ಅಶ್ವತ್ಥಾಮ ಮೊದಲಾದವರನ್ನು ಗೆದ್ದು ಭೀಮಸೇನ ಧೃಷ್ಟದ್ಯುಮ್ನನನ್ನು ರಕ್ಷಿಸತೊಡಗಿದ.

ವಿ : ವಿರಾಟ, ದ್ರುಪದರು ದ್ರೋಣರ ಸಮಕಾಲಿಕರು ಎಂಬ ಮಾತು ಈಗಾಗಲೇ ಬಂದಿದೆ. (೧೧/೫೬).

ದ್ರೋಣ ಧೃಷ್ಟದ್ಯುಮ್ನರ ಯುದ್ಧ

ಧೃಷ್ಟದ್ಯುಮ್ನೋ ಭೀಮಸೇನಾಭಿಗುಪ್ತೋ
ದ್ರೋಣಂ ಹಂತುಂ ಯತ್ನಮುಚ್ಚೈಶ್ಚಕಾರ ।
ನಿವಾರಯಾಮಾಸ ಗುರುಃ ಶರೌಘೈ-
ರ್ಧೃಷ್ಟದ್ಯುಮ್ನಂ ಸೋಽಪಿ ತಂ ಸಾಯಕೇನ ।
ವಿವ್ಯಾಧ ತೇನಾಭಿಹತಃ ಸ ಮೂರ್ಛಾ-
ಮವಾಪ ವಿಪ್ರೋ ನಿಷಸಾದ ಚಾಶು ॥ ೨೭೩ ॥

ಅ: ಭೀಮಸೇನನ ಬೆಂಗಾವಲಿನಲ್ಲಿ ಧೃಷ್ಟದ್ಯುಮ್ನ ದ್ರೋಣರನ್ನು ಕೊಲ್ಲಲೆಂದು ಬಹಳವಾಗಿ ಪ್ರಯತ್ನ ಮಾಡಿದ. ದ್ರೋಣರು ಧೃಷ್ಟದ್ಯುಮ್ನನನ್ನು ಬಾಣಗಳ ಪ್ರವಾಹಗಳಿಂದ ತಡೆದರು. ಧೃಷ್ಟದ್ಯುಮ್ನ ಬಾಣದಿಂದ ದ್ರೋಣರನ್ನು ಜೋರಾಗಿ ಹೊಡೆದ. ದ್ರೋಣರು ಆ ಏಟಿಗೆ ಮೂರ್ಛಿತರಾದರು.

ಧೃಷ್ಟದ್ಯುಮ್ನಃ ಸತ್ವರಂ ಖಡ್ಗಚರ್ಮಣೀ
ಆದಾಯ ತಸ್ಯಾರುರುಹೇ ರಥೋತ್ತಮಮ್ ।
ಸಂಜ್ಞಾಮವಾಪ್ಯಾಥ ಗುರುಃ ಶರೌಘೈಃ
ಪ್ರಾದೇಶಮಾತ್ಕೈರ್ವ್ಯಥಯಾಮಾಸ ತಂ ಚ ॥ ೨೭೪ ॥

ಅ: ಧೃಷ್ಟದ್ಯುಮ್ನ ಕೂಡಲೇ ಕತ್ತಿ ಗುರಾಣಿಗಳನ್ನು ಕೈಗೆತ್ತಿಕೊಂಡು ದ್ರೋಣರ ಉತ್ತಮವಾದ ರಥವನ್ನು ಏರತೊಡಗಿದ. ಆ ವೇಳೆಗೆ ದ್ರೋಣರು ಎಚ್ಚೆತ್ತು ಗೇಣುದ್ದದ ಬಾಣಗಳ ಪ್ರವಾಹದಿಂದ ಧೃಷ್ಟದ್ಯುಮ್ನನನ್ನು ನೋಯಿಸಿದರು.

ವಿ : ೧) ಪ್ರಾದೇಶಮಾತ್ರ ಬಾಣಗಳು ಎಂದರೆ ಗೇಣುದ್ದ ಬಾಣಗಳು ಎಂದರ್ಥ. ಹತ್ತಿರ–ದಲ್ಲಿದ್ದವರಿಗೆ ಹೊಡೆಯಲು ಈ ಬಾಣಗಳಿಂದ ಮಾತ್ರ ಸಾಧ್ಯ. ತೀರಾ ಹತ್ತಿರಕ್ಕೆ ಬಂದಿದ್ದ ಧೃಷ್ಟದ್ಯುಮ್ನನ ಮೇಲೆ ಅದಕ್ಕೆಂದೇ ದ್ರೋಣರು ಅವುಗಳನ್ನು ಪ್ರಯೋಗಿಸಿದರು. ದ್ರೋಣ ಮೊದಲಾದ ಕೆಲವರಲ್ಲಿ ಮಾತ್ರ ಅಂತಹ ಬಾಣಗಳಿದ್ದುದಾಗಿ ಪ್ರತೀತಿ. ಅಂತಹ ವಿಷಮ–ಸನ್ನಿವೇಶದಲ್ಲೂ ವಿಶಿಷ್ಟಸ್ಫೂರ್ತಿಯಿಂದ ದ್ರೋಣರು ಹಾಗೆ ಧೃಷ್ಟದ್ಯುಮ್ನನನ್ನು ಹೊಡೆದೋಡಿ–ಸುವ ಮೂಲಕ ತೋರಿಸಿದ ಸಮಯಪ್ರಜ್ಞೆ ಅನ್ಯಾದೃಶವಾದುದು. 'ಬುದ್ಧಿಯಲ್ಲಿ ಬೃಹಸ್ಪತಿ' ಎಂಬುದು ಪ್ರಸಿದ್ಧವಾದ ಮಾತು. ಅವರಂತೂ ಸ್ವತಃ ಬೃಹಸ್ಪತಿಯ ಅವತಾರರೇ ಅಲ್ಲವೆ!

೨) ಹತ್ತಿರದವರನ್ನು ಹೊಡೆಯಲು 'ರಿವಾಲ್ವರ್' ಇದ್ದಂತೆ ಈ ಬಾಣಗಳು ಎಂದು ತಿಳಿಯಬೇಕು.

ಸ ತೈರತಿವ್ಯಥಿತಸ್ತದ್ರಥಾಚ್ಚ–
ಪರಾವೃತ್ತಃ ಸ್ವಂ ರಥಮಾರುರೋಹ ।
ಸುಸಂರಬ್ಧೌ ತೌ ಪುನರೇವ ಯುದ್ಧಂ
ಸಂಚಕ್ರತುರ್ವ್ಯಷ್ಟಶರಾಂಬುಧಾರೌ ॥ ೨೭೫ ॥

ಅ: ಆ ಬಾಣಗಳಿಂದ ಬಹಳವಾಗಿ ಪೀಡಿತನಾದ ಧೃಷ್ಟದ್ಯುಮ್ನ ಹಿಂದಿರುಗಿ ತನ್ನ ರಥವನ್ನು ಏರಿದ. ಇಬ್ಬರೂ ಅತ್ಯಂತ ಬಲವಾಗಿ ಯತ್ನಿಸುತ್ತಾ ಬಾಣಗಳ ಮಳೆ ಸುರಿಸುತ್ತಾ ಪುನಃ ಯುದ್ಧಕ್ಕೆ ತೊಡಗಿದರು.

ದ್ರೋಣರಿಂದ ಪುರುಜಿತ್ ಕುಂತಿಭೋಜಾದಿಗಳ ವಧೆ

ನಿವಾರ್ಯ ಶತ್ರುಂ ಸ ಶರೈರ್ಬ್ರಹ್ಮಾಸ್ತ್ರಮಸೃಜದ್ದ್ವಿಜಃ ।
ತೇನ ಸಂದಾಹಯಾಮಾಸ ಪಾಂಚಾಲಾನ್ ಸುಬಹೂನ್ ರಣೇ ।
ಪುರುಜಿತ್ ಕುಂತಿಭೋಜಶ್ಚ ತೇನಾನ್ಯೇ ಚ ಹತಾಸ್ತದಾ ॥ ೨೭೬ ॥

ಅ: ದ್ರೋಣರು ಬಾಣಗಳಿಂದ ಧೃಷ್ಟದ್ಯುಮ್ನನನ್ನು ತಡೆದು ಬ್ರಹ್ಮಾಸ್ತ್ರವನ್ನು ಪ್ರಯೋಗಿಸಿ ಅದರಿಂದ ಬಹುಸಂಖ್ಯೆಯ ಪಾಂಚಾಲರನ್ನು ಯುದ್ಧದಲ್ಲಿ ಸುಟ್ಟುಹಾಕಿದರು. ಪುರುಜಿತ್, ಕುಂತಿಭೋಜ ಮತ್ತಿತರರು ಆಗ ಅವರಿಂದ ಹತರಾದರು.

ಭೀಮೋಽರ್ಜುನಃ ಸಾತ್ಯಕಿಶ್ಚ ಪರ್ಯಾಯೇಣ ಗುರೋಃ ಸುತಮ್ ।
ದೂರತೋ ವಾರಯಾಮಾಸುರ್ಮಹತ್ಯಾ ಸೇನಯಾ ಸಹ ॥ ೨೭೭ ॥

ಅ: ಭೀಮ, ಅರ್ಜುನ ಮತ್ತು ಸಾತ್ಯಕಿ ಒಬ್ಬರಾದ ಬಳಿಕ ಮತ್ತೊಬ್ಬರಂತೆ ಅಶ್ವತ್ಥಾಮನನ್ನು ದೊಡ್ಡ ಸೇನೆಯೊಂದಿಗೆ ದೂರದಲ್ಲಿಯೆ ತಡೆದು ನಿಲ್ಲಿಸಿದರು.

ವಿ: ಹಾಗೆ ಅಶ್ವತ್ಥಾಮರನ್ನು ದೂರದಲ್ಲಿ ತಡೆಯುವ ಮೂಲಕ ಧೃಷ್ಟದ್ಯುಮ್ನನಿಗೆ ದ್ರೋಣ–ರೊಂದಿಗೆ ಹೋರಾಡಲು ಅನುಕೂಲ ಮಾಡಿಕೊಟ್ಟರು ಎಂದರ್ಥ.

ಕರ್ಣದುರ್ಯೋಧನಾದೀಂಶ್ಚ ಶಲ್ಯಂ ಭೋಜಂ ಕೃಪಂ ತಥಾ ।
ಭೀಮಾರ್ಜುನೌ ಶರೌಘೇಣ ವಾರಯಾಮಾಸತೂ ರಣೇ ॥ ೨೭೮ ॥

ಅ: ಭೀಮಾರ್ಜುನರು ಕರ್ಣ, ದುರ್ಯೋಧನ ಮುಂತಾದವರನ್ನು, ಶಲ್ಯ, ಕೃತವರ್ಮ, ಕೃಪರನ್ನು ಯುದ್ಧದಲ್ಲಿ ಬಾಣಗಳ ಪ್ರವಾಹಗಳಿಂದ ತಡೆದರು.

ಭೀಮಸೇನನಿಂದ ಜಯತ್ಸೇನನ ಸಂಹಾರ

ತತ್ರ ಭೀಮೋ ಗಜಾನೀಕಂ ಜಯತ್ಸೇನಂ ಚ ಮಾಗಧಮ್ ।
ಜಘಾನ ಸುಬಹೂಂಶ್ಚೈವ ಮಾಗಧಾನಾಂ ರಥವ್ರಜಾನ್ ॥ ೨೭೯ ॥

ಅ: ಆಗ ಭೀಮ ಗಜಸೇನೆಯನ್ನು, ಜಯತ್ಸೇನ ಎಂಬ ಮಗಧದೇಶದ ರಾಜನನ್ನು ಹಾಗೆಯೇ ಮಗಧದೇಶದ ಬಹುಸಂಖ್ಯೆಯ ರಥ ವೃಂದವನ್ನು ನಾಶಮಾಡಿದ.

ಭೀಮಸೇನನಿಂದ ಅಶ್ವತ್ಥಾಮ ಗಜದ ಸಂಹಾರ

ಅಥ ಮಾಲವರಾಜಸ್ಯ ತ್ವಶ್ವತ್ಥಾಮಾಭಿಧಂ ಗಜಮ್ ।
ಭೀಮಸೇನಹತಂ ದೃಷ್ಟ್ವಾ ವಾಸುದೇವಪ್ರಚೋದಿತಃ ।
ಅಶ್ವತ್ಥಾಮಾ ಹತ ಇತಿ ಪ್ರಾಹ ರಾಜಾ ಯುಧಿಷ್ಠಿರಃ ॥ ೨೮೦ ॥

---

೨೭೭. ಮಹತ್ಯಾ ಸೇನಯಾ ಸಹ ವಿದ್ಯಮಾನಂ ಗುರೋಃ ಸುತಂ ದೂರತಃ ದೂರದೇಶಂ ಪ್ರತಿ ಪಲಾಯನಂ ಯಥಾ ಸ್ಯಾತ್ ತಥಾ ವಾರಯಾಮಾಸುರಿತಿ ॥ – (ಸ.)

೨೭೮. ಭೋಜಂ ಕೃಪಂ ತಥೇತ್ಯತ್ರ ಭೋಜಃ = ಯದುಕುಲೋತ್ಪನ್ನಃ ಕೃತವರ್ಮಾ ॥ – (ವಾ.)

ಆ: ಆಗ ಮಾಲವ ರಾಜನ ಅಶ್ವತ್ಥಾಮ ಎಂಬ ಹೆಸರಿನ ಆನೆ ಭೀಮನಿಂದ ಹತವಾದದ್ದನ್ನು ನೋಡಿ ಕೃಷ್ಣನಿಂದ ಪ್ರಚೋದಿತನಾಗಿ ರಾಜನಾದ ಯುಧಿಷ್ಠಿರ 'ಅಶ್ವತ್ಥಾಮನು ಹತನಾದ' ಎಂದು ನುಡಿದ.

ವಿ : ಧರ್ಮರಾಜ ಅಶ್ವತ್ಥಾಮ ಹತನಾದ ಎಂದು ಹೇಳಲು ಹಿಂಜರಿದುದನ್ನು ಕಂಡು ಭೀಮಸೇನ ಮಾಲವ ರಾಜನ ಅಶ್ವತ್ಥಾಮ ಎಂಬ ಹೆಸರಿನ ಆನೆಯನ್ನು ಸಂಹರಿಸಿದಾಗ ಅದನ್ನಾದರೂ ನುಡಿಯಲು ಧರ್ಮರಾಜನಿಗೆ ಹೇಳಿದಾಗ ಧರ್ಮರಾಜ ''ಅಶ್ವತ್ಥಾಮಾ ಹತಃ'' ಎಂದು ನುಡಿದ ಎಂದರ್ಥ.

'ಅಶ್ವತ್ಥಾಮಾ ಹತಃ' ಎಂದ ಯುಧಿಷ್ಠಿರ

ಅಶ್ವತ್ಥಾಮವಧಂ ಶ್ರುತ್ವಾ ನಾಹಂ ಯೋತ್ಸ್ಯ ಇತಿ ಸ್ವಯಮ್ ।
ಪುರೋಕ್ತಂ ಧರ್ಮಜಾಯೈವ ತೇನ ದ್ರೋಣೋ ಯುಧಿಷ್ಠಿರಮ್ ॥ ೨೮೧ ॥

ಬ್ರೂಹಿ ಸತ್ಯಮಿತಿ ಪ್ರಾಹ ಸತ್ಯಮಿತ್ಯೇವ ಸೋಽಬ್ರವೀತ್ ।
ಉಪಾಂಶು ಕುಂಜರಶ್ಚೇತಿ ದ್ರೋಣೋಽಥೋ ವ್ಯಥಿತೋಽಭವತ್ ॥ ೨೮೨ ॥

ಆ: ಅಶ್ವತ್ಥಾಮನ ವಧೆಯನ್ನು ಕೇಳಿದ ಮೇಲೆ ನಾನು ಯುದ್ಧ ಮಾಡಲಾರೆ ಎಂದು ದ್ರೋಣರು ಸ್ವತಃ ಧರ್ಮರಾಜನಿಗೆ ಹಿಂದೆಯೇ ಹೇಳಿದ್ದರು. ಅದರಿಂದ ದ್ರೋಣರು ಯುಧಿಷ್ಠಿರನನ್ನು ಕೇಳಿದರು 'ನಿಜ ಹೇಳು'. ಯುಧಿಷ್ಠಿರ 'ನಿಜ' ಎಂಬುದಾಗಿಯೇ ನುಡಿದ. ಅಸ್ಪಷ್ಟವಾಗಿ 'ಆನೆ' ಎಂದ. ಅದರಿಂದ ದ್ರೋಣರು ಬಹಳವಾಗಿ ವ್ಯಥೆಗೊಳಗಾದರು.

---

೨೮೦. ತತೋ ಭೀಮೋ ಮಹಾಬಾಹುರನೀಕೇ ಸ್ವೇ ಮಹಾಗಜಮ್ ।
ಜಘಾನ ಗದಯಾ ರಾಜನ್ನಶ್ವತ್ಥಾಮಾನಮಿತ್ಯುತ ॥
ಪರಪ್ರಮಥನಂ ಘೋರಂ ಮಾಲವಸ್ಯೇಂದ್ರವರ್ಮಣಃ ॥ – ಭಾರತ (ದ್ರೋಣ. ೧೯೦/೧೫)

೨೮೧. ಅಸ್ತ್ರಂ ಚಾಹಂ ರಣೇ ಜಹ್ಯಾಂ ಶ್ರುತ್ವಾ ತು ಮಹದಪ್ರಿಯಮ್ ।
ಶ್ರದ್ಧೇಯವಾಕ್ಯಾತ್ ಪುರುಷಾದೇತತ್ ಸತ್ಯಂ ಬ್ರವೀಮಿ ತೇ ॥ – ಭಾರತ (ಭೀಷ್ಮ. ೪೩/೬೪/೬೬)

೨೮೨. ಉಪಾಂಶು ಮಂದಂ ದ್ರೋಣಸ್ಯ ಶ್ರವಣಗೋಚರೋ ಯಥಾ ನ ಸ್ಯಾತ್ತಥಾ ಮಂದಮಿತ್ಯರ್ಥಃ। – (ಜ.)

೨೮೨. ಉಪಾಂಶುಕಂಜರ ಇತಿ ಉಪಾಂಶು ಅವ್ಯಕ್ತಮ್ । – (ವಿ.)

೨೮೨. ಅಶ್ವತ್ಥಾಮಾ ಹತ ಇತಿ ಶಬ್ದಮುಚ್ಚೈಶ್ಚುಕ್ರೋಶ ಹ ।
ಅವ್ಯಕ್ತಮಬ್ರವ್ರೀದ್ ರಾಜನ್ ಹತಃ ಕುಂಜರ ಇತ್ಯುತ ॥ – ಭಾರತ (ದ್ರೋಣ. ೧೯೦/೫೫)

ಎ : ೧) ''ಅಶ್ವತ್ಥಾಮಾ ಹತಃ ಕುಂಜರಃ'' ಎಂದು ಧರ್ಮರಾಜ ನುಡಿದ. ಅಶ್ವತ್ಥಾಮ ಎಂಬ ಆನೆ ಸತ್ತಿತು ಎಂದು ಅದರ ಅರ್ಥ. ಆದರೆ ಕುಂಜರಃ ಎಂಬುದನ್ನು ತುಟಿಯೊಳಗೇ ನುಡಿದದ್ದರಿಂದ ಅಶ್ವತ್ಥಾಮಾ ಹತಃ ಎಂದಷ್ಟೇ ದ್ರೋಣರಿಗೆ ಕೇಳಿ ಅವರು ವ್ಯಥೆಯಿಂದ ಶಸ್ತ್ರತ್ಯಾಗಕ್ಕೆ ಅಣಿಯಾದರು ಎಂದರ್ಥ.

೨) ಧರ್ಮರಾಜ ಕೃಷ್ಣನ ಆದೇಶದಂತೆ ಸ್ಪಷ್ಟವಾಗಿ ಅಶ್ವತ್ಥಾಮಾ ಹತಃ ಎಂದು ಹೇಳಲು ಸಂದೇಹಿಸಿದ್ದರಿಂದ ಅವನಿಗೆ ನರಕದರ್ಶನವಾಗುವ ಪ್ರಸಂಗ ಒದಗಿತು ಎಂಬ ಉಲ್ಲೇಖ ಮುಂದೆ ಬಂದಿದೆ. ಕೃಷ್ಣ ಹಾಗೆ ಸುಳ್ಳು ನುಡಿಸುವವನು ಅಲ್ಲ ಎಂಬುದನ್ನು ಧರ್ಮರಾಜ ಅರಿಯದಾದ ಎಂಬುದು ಅದಕ್ಕೆ ಕಾರಣ. ಅಶ್ವತ್ಥಾಮಾ ಹತಃ ಎಂಬ ಮಾತು ಕೃಷ್ಣ ತಿಳಿಸಿದ ಮೇಲೆ ಹೇಳಲು ಭೀಮಸೇನನಂತೆ ಧರ್ಮರಾಜನು ಸಿದ್ಧನಾಗಬೇಕಿತ್ತು ಹಾಗೆ ಮಾಡದ್ದು ಅವನ ದೋಷವಾಯಿತು.

೩) 'ಅಶ್ವತ್ಥಾಮಾ ಹತಃ' ಎಂಬುದನ್ನು ಅಶ್ವತ್ಥಾಮ ಸತ್ತನು ಎಂದೇ ಅರ್ಥಮಾಡಬೇಕಿಲ್ಲ. ಸಂಸ್ಕೃತದಲ್ಲಿ ಹನು ಧಾತುವಿಗೆ ಹಿಂಸೆ ಎಂಬ ಅರ್ಥವೂ ಉಂಟು – 'ಹನು ಹಿಂಸಾಗತ್ಯೋಃ'. ಅಶ್ವತ್ಥಾಮ ಹಿಂಸೆಗೊಳಗಾದ ಎಂದರ್ಥ. ಮುಂದೆ ಅಶ್ವತ್ಥಾಮ ಕೃಷ್ಣನ ಶಾಪದಿಂದ ತಲೆಯಲ್ಲಿ ಗಾಯಗೊಂಡು ದೇಹದಲ್ಲಿ ರಣದಿಂದ ಕೂಡಿ ಹಿಂಸೆಪಡುವ ವಿವರ ಬರುವುದು.

೪) ಅದು ಮುಂದೆ ಬರುವ ವಿವರವಾದರೂ ಹಾಗೆ ತಾನು ನಿಶ್ಚಿತವಾಗಿ ಮಾಡಿಯೇ ಮಾಡುವೆ ಎಂದು ಕೃಷ್ಣನ ಸಂಕಲ್ಪವಾಗಿತ್ತು ಅದನ್ನು 'ಆಯಿತು' ಎಂದು ಭೂತಕಾಲದಲ್ಲಿ ಹೇಳುವುದು ಶಾಸ್ತ್ರ ಸಮ್ಮತವೂ ಹೌದು.

೫) ಅಶ್ವತ್ಥಾಮಾ ಹತಃ ಎಂಬುದಕ್ಕೆ ಸತ್ತ ಎಂಭ ಅರ್ಥವೂ ಕೂಡ ಅದೇ ಅರ್ಥದಲ್ಲಿ ವಿವಕ್ಷಿತ. ಒಬ್ಬ ಬ್ರಾಹ್ಮಣ ಹತನಾಗುವುದು ಎಂದರೆ ತೇಜೋವಧೆಗೆ ಒಳಗಾಗುವುದು ಎಂದರ್ಥ ಎಂಬ ವಿವರ ಭಾಗವತ ಪುರಾಣದಲ್ಲಿ ಬಂದಿದೆ. ಅದರಂತೆ ಅಶ್ವತ್ಥಾಮ ತನ್ನ ತಲೆಯ ಮೇಲಿನ ಮಣಿಯನ್ನು ಕಳೆದುಕೊಂಡು ತೇಜೋಹೀನನಾಗುವುದರಿಂದ ಹತಃ ಎಂಬುದು ಉಚಿತವೇ ಆಗಿದೆ. ಮತ್ತೊಂದು ರಿತಿಯಲ್ಲಿ ಸಹ ಇದು ಯಥಾರ್ಥವೇ ಆದ ಮಾತು ('**ವಿಷ್ಯಚ್ಚ ನಿಶ್ಚಿತಂ ಯತ್ತದತೀತತ್ವೇನ ಭಣ್ಯತೇ**').

೬) ಅದರಂತೆ, 'ಅಶ್ವತ್ಥಾಮಾ ಹತಃ' ಎಂಬುದಕ್ಕೆ 'ಅಶ್ವತ್ಥಾಮ ಅಹತಃ' ಎಂದು ಪದವಿಭಾಗವೂ ಆಗುವುದು. ಅತತ್ವಮಸಿ ಎಂದು ಹೇಗೋ ಹಾಗೆ. ಅಶ್ವತ್ಥಾಮ ಸತ್ತಿಲ್ಲ ಎಂಬುದು ಅದರ ಅರ್ಥ. ಅದಂತೂ ಆಗಲೂ ಯಥಾರ್ಥವೇ ಆದ ವಿಚಾರ.

೭) ಹೀಗೆ ಬಹುಬಗೆಯಲ್ಲಿ ಯಥಾರ್ಥವಾಗಿದ್ದ ಆ ಮಾತನ್ನು ಧರ್ಮರಾಜ ಸಂದೇಹ ಮನಸ್ಕನಾಗಿ ನೋಡುವ ಮೂಲಕ ದೋಷಕ್ಕೊಳಗಾದ ಎಂದು ತಿಳಿಯಬೇಕು. ಇದನ್ನೆಲ್ಲಾ ಬಲ್ಲ

ಪೂರ್ಣಪ್ರಜ್ಞನಾದ ಭೀಮು ಕೃಷ್ಣನ ಆದೇಶದಂತೆ ಅದನ್ನು ಸ್ಪಷ್ಟವಾಗಿಯೇ ನುಡಿದು ಕೃಷ್ಣನ ಪರಮ ಪ್ರೀತಿಗೆ ಪಾತ್ರನೆಂಬುದನ್ನು ಸ್ಫುಟಪಡಿಸಿಕೊಂಡ.

೮) ಆವರೆಗೂ ಭೂಮಿಯಿಂದ ನಾಲ್ಕು ಅಂಗುಲ ಮೇಲೆ ಸಂಚರಿಸುತ್ತಿದ್ದ ಯುಧಿಷ್ಠಿರನ ರಥ ಅಂದಿನಿಂದ ಭೂಮಿಯನ್ನು ಮುಟ್ಟಿ ಸಂಚರಿಸುವಂತಾಯಿತು ಎಂಬ ರೋಚಕ ಉಲ್ಲೇಖ ಮಹಾಭಾರತದಲ್ಲಿದೆ (೭/೧೯೦/೫೬) :

ತಸ್ಯ ಪೂರ್ವಂ ರಥಃ ಪೃಥ್ವ್ಯಾಶ್ಚತುರಂಗುಲಮುಚ್ಛ್ರಿತಃ ।
ಬಭೂವೈವಂ ಚ ತೇನೋಕ್ತೇ ತಸ್ಯ ವಾಹಾಃ ಸ್ಪೃಶನ್ ಮಹೀಮ್ ॥

ಇದು ಅವನು ಹೇಳಿದ ಅಸತ್ಯವಚನದ ಫಲವಲ್ಲ; ಕೃಷ್ಣನ ಆದೇಶವನ್ನು ಸಂದೇಹಿಸಿದ್ದರ ಫಲ ಎಂದು ತಿಳಿಯಬೇಕು (೩೨/೧೦೩).

ಭೀಮನಿಂದ ದ್ರೋಣರಿಗೆ ಉಪದೇಶ

ತಸ್ಯ ಭೀಮೋ ರಥೇಷಾಂ ಚ ಗೃಹೀತ್ವಾ ನ ತವೇದೃಶಮ್ ।
ಯೋಗ್ಯಂ ಗುಣವತೋ ನಿತ್ಯಂ ಪರಧರ್ಮೋಪಜೀವನಮ್ ॥ ೨೮೩ ॥

ಇತ್ಯಾಹ ಖಸ್ಥಾ ಮುನಯಶ್ಚಾಲಮೇಹೀತಿ ತಂ ತದಾ ।
ಊಚುಸ್ತದಖಿಲಂ ಜ್ಞಾತ್ವಾ ದ್ರೋಣಃ ಶಸ್ತ್ರಮವಾಸೃಜತ್ ॥ ೨೮೪ ॥

ಅ: ಭೀಮ ದ್ರೋಣರ ರಥದ ಮುಂಭಾಗದ ಕಂಭವನ್ನು ಹಿಡಿದು 'ನಿಮ್ಮಂತಹ ಗುಣವಂತರಿಗೆ ಈ ತೆರನಾಗಿ ಪರಧರ್ಮದಿಂದ ಬದುಕುವುದು ಯೋಗ್ಯವಾಗದು' ಎಂದು

---

೨೮೩. ತತೋ ಭೀಮೋ ದೃಢಕ್ರೋಧೋ ದ್ರೋಣಸ್ಯಾಶ್ಲಿಷ್ಯ ತಂ ರಥಮ್ ।
ಏಕಸ್ಯಾರ್ಥೇ ಬಹೂನ್ ಹತ್ವಾ ಪುತ್ರಸ್ಯಾಧರ್ಮವಿದ್ಯಯಾ ।
ಸ್ವಕರ್ಮಸ್ಥಾನ್ ವಿಕರ್ಮಸ್ಥೋ ನ ವ್ಯಪತ್ರಪಸೇ ಕಥಮ್ ॥
(ಇತ್ಯಾದಿ ಭೀಮನ ವಚನ) – ಭಾರತ (ದ್ರೋಣ. ೧೯೨/೩೬/೪)

೨೮೪. ಮುನಯ ಇತಿ । ಮುನಯ ವಸಿಷ್ಠವಿಶ್ವಾಮಿತ್ರಾದಯಃ ॥ – (ವಿ.)

ಋಷಯೋ ऽಭ್ಯಾಗತಾಸ್ತೂರ್ಣಂ ಹವ್ಯವಾಹಪುರೋಗಮಾಃ ।
ವಿಶ್ವಾಮಿತ್ರೋ ಜಮದಗ್ನಿರ್ಭರದ್ವಾಜೋ ऽಥ ಗೌತಮಃ ।
ವಸಿಷ್ಠಃ ಕಶ್ಯಪೋ ऽತ್ರಿಶ್ಚ ಬ್ರಹ್ಮಲೋಕಂ ನಿನೀಷವಃ ॥
ಸಿಕತಾಃ ಪೃಶ್ನಯೋ ಗರ್ಗಾ ವಾಲಖಿಲ್ಯಾ ಮರೀಚಿಪಾಃ ॥
ಭೃಗವೋ ऽಂಗಿರಸಶ್ಚೈವ ಸೂಕ್ಷ್ಮಾಶ್ಚಾನ್ಯೇ ಮಹರ್ಷಯಃ ॥ – ಭಾರತ (ದ್ರೋಣ. ೧೯೦/೩೨/೩೪)

ತಿಳಿಸಿದ. ಗಗನದಲ್ಲಿದ್ದ ಮುನಿಗಳು ಸಹ 'ಇನ್ನು ಸಾಕು, ಬಾ'- ಎಂದು ಅವರನ್ನು ಕರೆದರು. ಅದೆಲ್ಲವನ್ನೂ ತಿಳಿದು ದ್ರೋಣರು ಶಸ್ತ್ರವನ್ನು ತ್ಯಜಿಸಿದರು.

ಏ : **'ಅಶ್ವತ್ಥಾಮಾ ಹತಃ'** ಎಂಬ ಮಾತನ್ನು ಕೇಳಿದ ಮೇಲೂ ದ್ರೋಣರು ಯುದ್ಧವನ್ನು ನಿಲ್ಲಿಸದೇ ಕಾದುತ್ತಲೇ ಇದ್ದರು. ಆಗ ಭೀಮ ಅವರ ಬಳಿಗೆ ತೆರಳಿ ತತ್ತ್ವೋಪದೇಶವನ್ನು ಮಾಡಿದ:

ಯದಿ ನಾಮ ನ ಯುಧ್ಯೇರನ್ ಶಿಕ್ಷಿತಾ ಬ್ರಹ್ಮಬಂಧವಃ ।
ಸ್ವಕರ್ಮಭಿರಸಂತುಷ್ಟಾ ನ ಕ್ಷತ್ರಂ ಕ್ಷಯಂ ವ್ರಜೇತ್ ॥
ಅಹಿಂಸಾಂ ಸರ್ವಭೂತೇಷು ಧರ್ಮಂ ಜ್ಯಾಯಸ್ತರಂ ವಿದುಃ ।
ತಸ್ಯ ಚ ಬ್ರಾಹ್ಮಣೋ ಮೂಲಂ ಭವಾಂಶ್ಚ ಬ್ರಹ್ಮವಿತ್ತಮಃ ॥
ಶ್ವಪಾಕವನ್ಮ್ಲೇಚ್ಛಗಣಾನ್ ಹತ್ವಾ ಚಾನ್ಯಾನ್ ಪೃಥಗ್ವಿಧಾನ್ ।
ಅಜ್ಞಾನಾನ್ಮೂಢವದ್ಬ್ರಹ್ಮನ್ ಪುತ್ರದಾರಧನೇಪ್ಸಯಾ ॥
ಏಕಸ್ಯಾರ್ಥೇ ಬಹೂನ್ ಹತ್ವಾ ಪುತ್ರಸ್ಯಾಧರ್ಮವಿದ್ಯಯಾ ।
ಸ್ವಕರ್ಮಸ್ಥಾನ್ ವಿಕರ್ಮಸ್ಥೋ ನ ವ್ಯಪತ್ರಪಸೇ ಕಥಮ್ ॥
ಯಸ್ಯಾರ್ಥೇ ಶಸ್ತ್ರಮಾದಾಯ ಯಮಪೇಕ್ಷ್ಯ ಚ ಜೀವಸಿ ।
ಸ ಚಾದ್ಯ ಪತಿತಃ ಶೇತೇ ಪೃಷ್ಠೇ ನಾವೇದಿತಸ್ತವ ॥
ಧರ್ಮರಾಜಸ್ಯ ತದ್ ವಾಕ್ಯಂ ನಾಭಿಶಂಕಿತುಮರ್ಹಸಿ ।

– ಭಾರತ(ದ್ರೋಣ. ೧೯೨/೩೭-೪೧)

ಅದರಿಂದ ಜ್ಞಾನಪಡೆದ ದ್ರೋಣರು ದೇಹ ತೊರೆಯಲು ನಿಶ್ಚಯಿಸಿದರು ಎಂಬುದು ಇಲ್ಲಿಯ ಮುಖ್ಯ ವಿಷಯ. ಭೀಮ ಹೀಗೆ ದೇವಗುರುವಾದ ಗುರು ದ್ರೋಣರಿಗೆ ತತ್ತ್ವೋಪದೇಶ ಮಾಡುವ ಮೂಲಕ ತಾನು ಲೋಕಗುರು, ತ್ರೈಲೋಕ್ಯಾಚಾರ್ಯ ಎಂಬುದನ್ನು ಸಾರಿದ ಎಂದು

---

೨೮೪. ದ್ರೋಣೋऽಪಿ ಶಸ್ತ್ರಾಣ್ಯುತ್ಸೃಜ್ಯ ಪರಮಂ ಸಾಂಖ್ಯಮಾಸ್ಥಿತಃ ।
ತಥೋಕ್ತ್ವಾ ಯೋಗಮಾಸ್ಥಾಯ ಜ್ಯೋತಿರ್ಭೂತೋ ಮಹಾತಪಾಃ ॥
ಪುರಾಣಂ ಪುರುಷಂ ವಿಷ್ಣುಂ ಜಗಾಮ ಮನಸಾ ಪರಮ್ ।
ಮುಖಂ ಕಿಂಚಿತ್ ಸಮುನ್ನಾಮ್ಯ ವಿಷ್ಟಭ್ಯ ಉರಮಗ್ರತಃ ॥
ನಿಮೀಲಿತಾಕ್ಷಃ ಸತ್ವಸ್ಥೋ ನಿಕ್ಷಿಪ್ಯ ಹೃದಿ ಧಾರಣಾಮ್ ।
ಓಮಿತ್ಯೇಕಾಕ್ಷರಂ ಬ್ರಹ್ಮ ಜ್ಯೋತಿರ್ಭೂತೋ ಮಹಾತಪಾಃ ।
ಸ್ಮರಿತ್ವಾ ದೇವದೇವೇಶಮಕ್ಷರಂ ಪರಮಂ ಪ್ರಭುಮ್ ।
ದಿವಮಾಕ್ರಾಮದಾಚಾರ್ಯಃ ಸಾಕ್ಷಾತ್ ಸದ್ಗಿರ್ದುರಾಕ್ರಮಾಮ್ ॥
ದ್ಯೌ ಸೂರ್ಯಾವಿತಿ ನೋ ಬುದ್ಧಿರಾಸೀತ್ ತಸ್ಮಿಂಸ್ತಥಾಗತೇ ॥ – ಭಾರತ (ದ್ರೋಣ.೧೯೨/೪೯–೫೩)

* ವೇದವೇದಾಂಗವಿದುಷಃ ಸತ್ಯಧರ್ಮರತಸ್ಯ ತೇ ।
ಬ್ರಾಹ್ಮಣಸ್ಯ ವಿಶೇಷೇಣ ತವೈತನ್ನೋಪಪದ್ಯತೇ ॥ – ಬಿ.ಒ.ಆರ್.ಐ. ಭಾರತ (ದ್ರೋಣ. ೧೬೪/೯೧)

ತಿಳಿಯಬೇಕು. ದ್ರೋಣರು ಶಸ್ತ್ರ ತೊರೆಯುವ ಮುನ್ನ ಹಾಗೆ ತೊರೆಯುವ ವಿಚಾರವನ್ನು ಘೋಷಿಸಿದರು ಎಂಬ ವಿವರವೂ ಮಹಾಭಾರತದಲ್ಲಿದೆ (ದ್ರೋಣಪರ್ವ ೧೯೨/೪೨–೪):

ಸರ್ವಾಣ್ಯಸ್ತ್ರಾಣಿ ಧರ್ಮಾತ್ಮಾ ಹಾತುಕಾಮೋಽಭ್ಯಭಾಷತ ।
ಕರ್ಣ ಕರ್ಣ ಮಹೇಷ್ವಾಸ ಕೃಪ ದುರ್ಯೋಧನೇತಿ ಚ ॥
ಸಂಗ್ರಾಮೇ ಕ್ರಿಯತಾಂ ಯತ್ನೋ ಬ್ರವೀಮ್ಯೇಷ ಪುನಃ ಪುನಃ ।
ಪಾಂಡವೇಭ್ಯಃ ಶಿವಂ ವೋಽಸ್ತು ಶಸ್ತ್ರಮುತ್ಸೃಜಾಮ್ಯಹಮ್ ॥

ದ್ರೋಣರ ದೇಹತ್ಯಾಗ

ಸನ್ಯಸ್ಯ ಕರ್ಮಾಣಿ ತದಾಽಖಿಲಾನಿ
ಯೋಗಾರೂಢಃ ಪರಮಂ ವಾಸುದೇವಮ್ ।
ಸರ್ವೇಶ್ವರಂ ನಿತ್ಯನಿರಸ್ತದೋಷಂ
ಧ್ಯಾಯನ್ ಮುಕ್ತ್ವಾ ದೇಹಮಗಾತ್ ಸ್ವಧಾಮ ॥ ೨೮೫ ॥

ಅ: ದ್ರೋಣರು ತಮ್ಮ ಸಕಲಕರ್ಮಗಳನ್ನು ಶ್ರೀಹರಿಗೆ ಒಪ್ಪಿಸಿ ಯೋಗಾರೂಢನಾಗಿ ಸರ್ವೇಶ್ವರನೂ, ಸದಾ ಸಕಲ ದೋಷದೂರನೂ ಆದ ಸರ್ವೋತ್ತಮ ಕೃಷ್ಣನನ್ನು ಧ್ಯಾನಿಸುತ್ತಾ ದೇಹವನ್ನು ತೊರೆದು ತನ್ನ ಲೋಕಕ್ಕೆ ತೆರಳಿದರು.

ವಿ : ೧) ದ್ರೋಣರು ಆಗ ಧ್ಯಾನಿಸಿದ್ದು ವಿಷ್ಣುವನ್ನು ಎಂಬ ವಿವರ ಮಹಾಭಾರತದಲ್ಲಿದೆ.

೨) ಬ್ರಹ್ಮರಂಧ್ರದಿಂದ ದೇಹೋತ್ಕ್ರಮಣ ಮಾಡಿ ಮುನಿಗಳೊಂದಿಗೆ ತನ್ನ ಲೋಕಕ್ಕೆ ತೆರಳಿದರು. ಅವರು ಮೂಲರೂಪವನ್ನು ಸೇರುವ ವಿವರ ಸ್ವರ್ಗಾರೋಹಣ ಪರ್ವದಲ್ಲಿ ಬರುವುದು (೩೨/೧೨೧).

ದ್ರೋಣರಿಗೆ ಸದ್ಗತಿ - ಧೃಷ್ಟದ್ಯುಮ್ನನಿಂದ ದ್ರೋಣರ ಶಿರಶ್ಛೇದ

ತಂ ಕೇಶವಃ ಪಾಂಡವಾ ಗೌತಮಶ್ಚ
ಯಾಂತಂ ಸ್ವಲೋಕಂ ದದೃಶುರ್ವಿಹಾಯಸಾ ।
ಧೃಷ್ಟದ್ಯುಮ್ನಃ ಪಾಂಡವೈರ್ವಾರ್ಯಮಾಣೋಽ
ಪ್ಯಗಾತ್ ಖಡ್ಗಂ ಚರ್ಮ ಚಾದಾಯ ತತ್ರ ॥ ೨೮೬ ॥

---

* ತಥೋಕ್ತ್ವಾ ಯೋಗಮಾಸ್ಥಾಯ ಜ್ಯೋತಿರ್ಭೂತೋ ಮಹಾತಪಾಃ ।
ಪುರಾಣಂ ಪುರುಷಂ ವಿಷ್ಣುಂ ಜಗಾಮ ಮನಸಾ ಪರಮ್ ॥ – ಭಾರತ(ದ್ರೋಣ. ೧೯೨/೫೦)

ಅ: ದ್ರೋಣರು ಹಾಗೆ ಗಗನಮಾರ್ಗದಲ್ಲಿ ತನ್ನ ಲೋಕಕ್ಕೆ ತೆರಳುತ್ತಿದ್ದುದನ್ನು ಕೃಷ್ಣ ಪಾಂಡವರು ಮತ್ತು ಕೃಪ ಇವರು ಕಂಡರು. ಪಾಂಡವರು ತಡೆಯುತ್ತಿದ್ದರೂ ಕೇಳದೇ ಧೃಷ್ಟದ್ಯುಮ್ನ ಖಡ್ಗ ಗುರಾಣಿಗಳನ್ನು ತೆಗೆದುಕೊಂಡು ದ್ರೋಣರಿದ್ದಲ್ಲಿಗೆ ನಡೆದ.

ಛಿತ್ವಾಽಸಿನಾ ತಸ್ಯ ಶಿರಃ ಪುನಶ್ಚ
ರಥಂ ಸ್ವಕೀಯಂ ತ್ವರಯಾ ಸಮಾಸ್ಥಿತಃ ।
ದೃಷ್ಟ್ವಾ ಕೃಪಸ್ತಂ ಸುಭೃಶಂ ಭಯಾರ್ದಿತಃ
ಸಂಪ್ರಾದ್ರವದ್ಗಾಜಿನಮೇಕಮಾಸ್ಥಿತಃ ॥ ೨೮೭ ॥

ಅ: ಖಡ್ಗದಿಂದ ಅವರ ತಲೆಯನ್ನು ಕತ್ತರಿಸಿ ಮತ್ತೆ ವೇಗದಿಂದ ತನ್ನ ರಥವನ್ನು ಏರಿಬಿಟ್ಟ. ಅದನ್ನು ಕಂಡು ಕೃಪ ಅತ್ಯಂತ ಭಯಪೀಡಿತನಾಗಿ ಕುದುರೆಯೊಂದನ್ನೇರಿ ವೇಗದಿಂದ ಪಲಾಯನ ಮಾಡಿದ.

ವಿ: ಅರ್ಜುನಾದಿ ಪಾಂಡವರು ತಡೆಯುತ್ತಿದ್ದರೂ ಕೇಳದೇ ಧೃಷ್ಟದ್ಯುಮ್ನ ದ್ರೋಣರ ದೇಹದಿಂದ ಅವರ ತಲೆಯನ್ನು ಕತ್ತರಿಸಿದ. ದ್ರೋಣರು ಆಗಲೇ ದೇಹ ತೊರೆದದ್ದರಿಂದ ಅವನು ಕತ್ತರಿಸಿದ್ದು ಮೃತದೇಹದ ತಲೆಯನ್ನು ಮಾತ್ರ. ಆದರೆ, ಕೃಷ್ಣಾದಿ ಕೆಲವರ ಹೊರತು ಬೇರಾರಿಗೂ ದ್ರೋಣರು ದೇಹ ತ್ಯಜಿಸಿದ್ದ ವಿಷಯ ತಿಳಿಯದೇ ಇದ್ದುದರಿಂದ ಅವರು ಧೃಷ್ಟದ್ಯುಮ್ನ ದ್ರೋಣರನ್ನೇ ಸಂಹರಿಸಿದ ಎಂದು ಭಾವಿಸಿದರು.

ಸಾತ್ಯಕಿ ಧೃಷ್ಟದ್ಯುಮ್ನರ ವಿವಾದ

ಸಂಛಿನ್ನೇ ದ್ರೋಣಶಿರಸಿ ಗರ್ಹಯಾಮಾಸ ವಾಸವಿಃ ।
ಯುಧಿಷ್ಠಿರಶ್ಚ ಪಾಂಚಾಲ್ಯಂ ಸಾತ್ಯಕಿಶ್ಚಾತಿಕೋಪಿತಃ ॥ ೨೮೮ ॥

---

೨೮೬. ವಯಮೇವ ತದಾದ್ರಾಕ್ಷ್ಮ ಪಂಚ ಮಾನುಷಯೋನಯಃ ।
ಯೋಗಯುಕ್ತಂ ಮಹಾತ್ಮಾನಂ ಗಚ್ಛಂತಂ ಪರಮಾಂ ಗತಿಮ್ ।
ಅಹಂ ಧನಂಜಯಃ ಪಾರ್ಥೋ ಕೃಪಃ ಶಾರದ್ವತಸ್ತಥಾ ॥
ವಾಸುದೇವಶ್ಚ ವಾರ್ಷ್ಣೇಯೋ ಧರ್ಮಪುತ್ರಶ್ಚ ಪಾಂಡವಃ ॥
ಅನ್ಯೇ ತು ಸರ್ವೇ ನಾಪಶ್ಯನ್ ಭಾರದ್ವಾಜಸ್ಯ ಧೀಮತಃ ॥ – ಭಾರತ (ದ್ರೋಣ. ೧೯೨/೫೬-೫೮)

೨೮೮. ಉಕ್ತವಾಂಶ್ಚ ಮಹಾಬಾಹುಃ ಕುಂತೀಪುತ್ರೋ ಧನಂಜಯಃ ।
ಜೀವಂತಮಾನಯಾಚಾರ್ಯಂ ಮಾ ವಧೀರ್ದ್ರುಪದಾತ್ಮಜ ॥ – ಭಾರತ (ದ್ರೋಣ. ೧೯೨/೬೫)

ಅ: ದ್ರೋಣರ ತಲೆಯನ್ನು ಛೇದಿಸಿದಾಗ ಅರ್ಜುನ ಯುಧಿಷ್ಠಿರರು ಧೃಷ್ಟದ್ಯುಮ್ನನನ್ನು ನಿಂದಿಸಿದರು. ಸಾತ್ಯಕಿಯೂ ಬಹಳ ಕೋಪಗೊಂಡ.

ವಿ: ಯುಧಿಷ್ಠಿರಂ ಚ ಎಂಬ ಹೃಷೀಕೇಶತೀರ್ಥೀಯ ಪಾಠಕ್ಕೆ ಅರ್ಜುನ ಧೃಷ್ಟದ್ಯುಮ್ನ, ಯುಧಿಷ್ಠಿರ ಇಬ್ಬರನ್ನೂ ನಿಂದಿಸಿದ ಎಂದು ಅರ್ಥ.

ಧೃಷ್ಟದ್ಯುಮ್ನಸ್ತು ತಾವಾಹ ಕಥಂ ಭೂರಿಶ್ರವಾ ಹತಃ ।
ಇತಿ ತಂ ಸಾತ್ಯಕಿಃ ಕ್ರುದ್ಧೋ ಗದಾಪಾಣಿಃ ಸಮಭ್ಯಯಾತ್ ॥ ೨೮೯ ॥

ಅ: ಧೃಷ್ಟದ್ಯುಮ್ನ ಅವರಿಬ್ಬರನ್ನೂ ಕೇಳಿದ 'ಭೂರಿಶ್ರವನನ್ನು ನೀವು ಕೊಂದದ್ದು ಹೇಗೆ..!'. ಸಾತ್ಯಕಿ ಅದರಿಂದ ಕೋಪಗೊಂಡು ಗದಾಪಾಣಿಯಾಗಿ ಅವನ ಮೇಲೆ ಏರಿಹೋದ.

ವಿ: ದ್ರೋಣರ ತಲೆಯನ್ನು ಹಾಗೆ ತಾನು ಕತ್ತರಿಸಿದ್ದು ತಪ್ಪಾದರೆ, ಅದೇ ರೀತಿ ಭೂರಿಶ್ರವಸ್ಸಿನ ತಲೆಯನ್ನು ನೀವು ಕತ್ತರಿಸಿದ್ದು(೨೬/೧೦೭) ಹೇಗೆ ಸರಿ? ಎಂದು ಧೃಷ್ಟದ್ಯುಮ್ನ ಪ್ರತಿಯಾಗಿ ಆಕ್ಷೇಪಿಸಿದನು ಎಂದರ್ಥ.

ಭೀಮನಿಂದ ವಿವಾದದ ಉಪಶಮನ

ಆಹ್ವಯಾಮಾಸ ಪಾಂಚಾಲ್ಯಸ್ತಂ ಧೃತಾಸಿರವಿಸ್ಮಯಃ ।
ತದಾ ಜಗ್ರಾಹ ಶೈನೇಯಂ ಭೀಮಃ ಕೃಷ್ಣಪ್ರಚೋದಿತಃ ।
ಶಮಯಾಮಾಸ ಪಾರ್ಥಂ ಚ ಪಾಂಚಾಲ್ಯಸ್ನೇಹಯಂತ್ರಿತಃ ॥ ೨೯೦ ॥

ಅ: ಧೃಷ್ಟದ್ಯುಮ್ನ ಚಕಿತನಾಗದೇ ಸಾತ್ಯಕಿಯನ್ನು ಯುದ್ಧಕ್ಕೆ ಆಹ್ವಾನಿಸಿದ. ಆಗ ಕೃಷ್ಣನ ಪ್ರೇರಣೆಯಂತೆ ಭೀಮ ಸಾತ್ಯಕಿಯನ್ನು ಹಿಡಿದುಕೊಂಡ; ಧೃಷ್ಟದ್ಯುಮ್ನನ ಮೇಲಿನ ಪ್ರೀತಿಗೆ ಬದ್ಧನಾಗಿ ಅರ್ಜುನನನ್ನು ಸಾಂತ್ವನಗೊಳಿಸಿದ.

---

೨೮೯. ಭೂರಿಶ್ರವಾ ಹ್ಯಧರ್ಮೇಣ ತ್ವಯಾ ಧರ್ಮವಿದಾ ಹತಃ । – ಭಾರತ (ದ್ರೋಣ. ೧೯೮/೪೩)

೨೮೯. ತಚ್ಛ್ರುತ್ವಾ ಕ್ರೋಧತಾಮ್ರಾಕ್ಷಃ ಸಾತ್ಯಕಿಸ್ತ್ವಾದದೇ ಗದಾಮ್ ॥ – ಭಾರತ (ದ್ರೋಣ. ೧೯೮/೪೬)

೨೯೦. ಚೋದಿತೋ ವಾಸುದೇವೇನ ಭೀಮಸೇನೋ ಮಹಾಬಲಃ ।
ಅವಪ್ಲುತ್ಯ ರಥಾತ್ತೂರ್ಣಂ ಬಾಹುಭ್ಯಾಂ ಸಮವಾರಯತ್ ॥
ದ್ರವಮಾಣಂ ತಥಾ ಕ್ರುದ್ಧಂ ಸಾತ್ಯಕಿಂ ಪಾಂಡವೋ ಬಲೀ ॥ – ಭಾರತ (ದ್ರೋಣ. ೧೯೮/೫೦)

ವಿ: ವಾಯುವಿನ ಅವತಾರನಾದ ಭೀಮು ಅಗ್ನಿಯ ಅವತಾರನಾದ ಧೃಷ್ಟದ್ಯುಮ್ನನನ್ನು ಸಾಂತ್ವನಗೊಳಿಸಿದ್ದು ಅತಿಯಾದ ಗಾಳಿ ಬೆಂಕಿಯನ್ನು ನಂದಿಸಿದಂತಾಯಿತು ಎಂದು ತಿಳಿಯಬಹುದು.

ತೇ ವಾಸುದೇವೇನ ತದಾऽನುಶಿಷ್ಟಿತಾಃ
ಸ್ನೇಹಂ ಪುನಃ ಪೂರ್ವವದಾಪುರುತ್ತಮಮ್ ।
ಯತ್ತಾಶ್ಚ ಯುದ್ಧಾಯ ಸಮುದ್ಯತಾಶ್ಚ
ತದಾऽಗಮದ್ದ್ರೌಣಿರಪ್ಯಾತ್ತಧನ್ವಾ ॥ ೨೯೧ ॥

ಅ: ಶ್ರೀಕೃಷ್ಣನಿಂದ ವಿಶೇಷವಾಗಿ ಉಪದೇಶಹೊಂದಿದ ಅವರು ಮುಂಚಿನಂತೆಯೇ ಪರಸ್ಪರರಲ್ಲಿ ಒಳ್ಳೆಯ ಸ್ನೇಹವನ್ನು ಹೊಂದಿದವರಾದರು. ಆಯುಧಗಳನ್ನು ಹಿಡಿದು ಯುದ್ಧಕ್ಕೆ ಸನ್ನದ್ಧರಾಗಿ ತೆರಳಿದರು. ಆಗ ಬಿಲ್ಲನ್ನು ಹಿಡಿದು ಅಶ್ವತ್ಥಾಮ ಆಗಮಿಸಿದ.

ಅಶ್ವತ್ಥಾಮನಿಂದ ನಾರಾಯಣಾಸ್ತ್ರಪ್ರಯೋಗ

ಆಶ್ರುತ್ಯ ತಾತಂ ನಿಹತಂ ಪ್ರತಿಜ್ಞಾಂ
ಚಕಾರ ನಿಃಶೇಷರಿಪುಪ್ರಮಾಥನೇ ।
ನಾರಾಯಣಾಸ್ತ್ರಂ ವಿಸಸರ್ಜ ಕೋಪಾತ್
ತದಾ ಭೀತಾ ಭೀಮಮೃತೇ ಸಮಸ್ತಾಃ ॥ ೨೯೨ ॥

ಅ: ತನ್ನ ತಂದೆ ದ್ರೋಣರು ಹತರಾದದ್ದನ್ನು ಕೇಳಿ ಅಶ್ವತ್ಥಾಮ ಶತ್ರುಗಳನ್ನು ನಿಃಶೇಷವಾಗಿ ಸದೆಬಡಿಯುವ ಪ್ರತಿಜ್ಞೆಯನ್ನು ಮಾಡಿದ, ಕೆರಳಿ ನಾರಾಯಣಾಸ್ತ್ರವನ್ನು ಪ್ರಯೋಗಿಸಿದ. ಆಗ ಭೀಮನ ಹೊರತು ಇತರ ಎಲ್ಲರೂ ಭೀತರಾದರು.

ವಿ: ತನ್ನ ತಂದೆ ಜೀವಿಸಿರುವವರೆಗೂ ಮೃದುವಾಗಿ ಯುದ್ಧ ಮಾಡುವುದಾಗಿ ವಚನ ನೀಡಿದ್ದ ಅಶ್ವತ್ಥಾಮ ಈಗ ತಂದೆ ಅಳಿದದ್ದನ್ನು ಕೇಳಿ ಪೂರ್ಣಪ್ರಮಾಣದ ಯುದ್ಧಕ್ಕೆ ತೊಡಗಿದ ಎಂದು ತಿಳಿಯಬೇಕು (೨೪/೭೮).

---

೨೯೨. ತಥೋಕ್ತ್ವಾ ದ್ರೋಣಪುತ್ರಸ್ತು ವಾರ್ಯುಪಸ್ಪೃಶ್ಯ ಭಾರತ ।
ಪ್ರಾದುಶ್ಚಕ್ರಾ ತದ್ದಿವ್ಯಮಸ್ತ್ರಂ ನಾರಾಯಣಂ ತದಾ ॥ – ಭಾರತ (ದ್ರೋಣ. ೧೯೫/೫೦)

ಯುಧಿಷ್ಠಿರನ ವಿಷಾದ

ಯುಧಿಷ್ಠಿರಃ ಪ್ರಾಹ ವಿಷಣ್ಣಚೇತನಃ
ಶೈನೇಯಪೂರ್ವಾಃ ಪ್ರತಿಯಾಂತು ಸರ್ವೇ ।
ಸಭ್ರಾತೃಕೋಽಹಂ ದ್ರೌಣಿವರಾಸ್ತ್ರಮಗ್ನೇ
ಭವೇಯಮಿತ್ಯತ್ರ ಜಗಾದ ಕೇಶವಃ ॥ ೨೯೩ ॥

ಅ: ಆಗ ಧರ್ಮರಾಜ ಖಿನ್ನಮನಸ್ಕನಾಗಿ ನುಡಿದ - ''ಸಾತ್ಯಕಿ ಮೊದಲಾದವರೆಲ್ಲ ಇಲ್ಲಿಂದ ಹೊರಟು ಹೋಗಲಿ. ನಾನು ಸೋದರರೊಂದಿಗೆ ಅಶ್ವತ್ಥಾಮರ ಶ್ರೇಷ್ಠ ಅಸ್ತ್ರ (ನಾರಾಯಣಾಸ್ತ್ರ)ಕ್ಕೆ ಬಲಿಯಾಗುವೆ''. ಆಗ ಶ್ರೀಕೃಷ್ಣನುಡಿದ :

ವಿ : ನಾರಾಯಣಾಸ್ತ್ರಕ್ಕೆ ತಮ್ಮಲ್ಲಿ ಪ್ರತ್ಯಸ್ತ್ರವಿಲ್ಲವೆಂಬುದನ್ನು ಗಮನಿಸಿದ ಧರ್ಮರಾಜ ನಿರಾಶನಾಗಿ ಇತರರೆಲ್ಲ ಹೊರಟು ಹೋಗಲಿ, ತಾನು ತಮ್ಮಂದಿರೊಂದಿಗೆ ಅದಕ್ಕೆ ಬಲಿಯಾಗುವುದು ಅನಿವಾರ್ಯ ಎಂದು ತೀರ್ಮಾನಿಸಿದ.

ಶ್ರೀಕೃಷ್ಣನಿಂದ ಅಸ್ತ್ರಮೋಚನದ ಉಪಾಯ

ನಮಧ್ವಮಸ್ತ್ರಸ್ಯ ತತೋ ವಿಮೋಕ್ಷ್ಯಥೇ-
ತ್ಯಥ ಪ್ರಣೇಮುಶ್ಚ ಧನಂಜಯಾದಿಕಾಃ ।
ಸರ್ವೇ ನ ಭೀಮಸ್ತದಮುಷ್ಯ ಮೂರ್ಧ್ನಿ
ಪಪಾತ ಸೋಽಗ್ನಾವಿವ ಸಂಸ್ಥಿತೋಽಗ್ನಿಃ ॥ ೨೯೪ ॥

---

೨೯೩. ಧೃಷ್ಟದ್ಯುಮ್ನ ಪಲಾಯಸ್ವ ಸಹ ಪಾಂಚಾಲಸೇನಯಾ ।
ಸಾತ್ಯಕೇ ತ್ವಂ ಚ ಗಚ್ಛಸ್ವ ವೃಷ್ಣ್ಯಂಧಕವೃತೋ ಗೃಹಾನ್ ॥
ಅಹಂ ಹಿ ಸಹಸೋದರ್ಯೈಃ ಪ್ರವೇಕ್ಷ್ಯೇ ಹವ್ಯವಾಹನಮ್ ॥
(ಯುಧಿಷ್ಠಿರನ ವಚನ) – ಭಾರತ (ದ್ರೋಣ. ೧೯೯/೨೫-೩೬)

೨೯೪. ಶೀಘ್ರಂ ನ್ಯಸ್ಯತ ಶಸ್ತ್ರಾಣಿ ವಾಹೇಭ್ಯಶ್ಚಾವರೋಹತ ।
ಏಷ ಯೋಗೋಽತ್ರ ವಿಹಿತಃ ಪ್ರತಿಷೇಧೇ ಮಹಾತ್ಮನಾ ॥...
ಯೇಽಂಜಲಿಂ ಕುರ್ವತೇ ವೀರಾ ನಮಂತಿ ಚ ವಿವಾಹನಾಃ ।
ತಾನ್ಪ್ರೈತದಸ್ತ್ರಂ ಸಂಗ್ರಾಮೇ ನಿಹನಿಷ್ಯತಿ ಮಾನವಾನ್ ॥
(ಶ್ರೀಕೃಷ್ಣನ ವಚನ)–ಭಾರತ (ದ್ರೋಣ. ೧೯೯/೩೭, ೪೨)

ಅ: ''ಅಸ್ತ್ರಕ್ಕೆ ನಮಸ್ಕರಿಸಿರಿ, ಆಗ ಅದರಿಂದ ಬಿಡುಗಡೆ ಹೊಂದುವಿರಿ''. ಕೂಡಲೇ ಅರ್ಜುನ ಮೊದಲಾದವರೆಲ್ಲ ಅದಕ್ಕೆ ನಮಸ್ಕರಿಸಿದರು, ಭೀಮ ನಮಸ್ಕರಿಸಲಿಲ್ಲ. ಅವನ ತಲೆಯ ಮೇಲೆ ಆ ಅಸ್ತ್ರ ಬಿದ್ದಿತು. ಭೀಮ ಅಗ್ನಿಯ ಮಧ್ಯೆ ಅಗ್ನಿಯಂತೆ ಆ ಅಸ್ತ್ರದ ಮಧ್ಯೆ ನಿಂತ.

ವಿ: ೧) ಮೇಲ್ನೋಟಕ್ಕೆ ಅಸ್ತ್ರಕ್ಕೆ ನಮಸ್ಕರಿಸಬೇಕೆನ್ನುವ ಕೃಷ್ಣನ ಅಪ್ಪಣೆಯನ್ನು ಭೀಮನ ಹೊರತು ಎಲ್ಲರೂ ಪಾಲಿಸಿದರು ಎಂಬಂತೆ ಕಾಣುವುದು. ವಸ್ತುಸ್ಥಿತಿ ಅದಲ್ಲ. ಕೃಷ್ಣನ ಮಾತಿನ ಅರ್ಥ ಅಸ್ತ್ರದಿಂದ ಪಾರಾಗಬೇಕಿದ್ದಲ್ಲಿ ಅಸ್ತ್ರಕ್ಕೆ ಶರಣಾಗಿರಿ ಎಂದು ಮಾತ್ರ. ಸ್ವಧರ್ಮವಾದ ಯುದ್ಧಕ್ಕಿಂತ ಪ್ರಾಣವೇ ಮಿಗಿಲು ಎನ್ನುವವರಿಗೆ ಅದು ಕೃಷ್ಣ ನೀಡಿದ ಪರಿಹಾರ.

೨) ಆದರೆ, ಪ್ರಾಣಕ್ಕಿಂತ ಧರ್ಮವೇ ಮಿಗಿಲು ಎನ್ನುವ ಭೀಮ ಕೃಷ್ಣನ ಮಾತಿನ ಆಂತರ್ಯವನ್ನರಿತು ಅದಕ್ಕೆ ಶರಣಾಗದೇ ಶಸ್ತ್ರಪಾಣಿಯಾಗಿ ಹಾಗೆಯೇ ನಿಂತ. ಎಂದರೆ ನಿಜವಾದ ಅರ್ಥದಲ್ಲಿ ಕೃಷ್ಣನ ಮಾತಿನ ಮರ್ಮವನ್ನು ತಿಳಿದು ಕೃಷ್ಣನಿಗೆ ಪ್ರೀತಿಕರವಾಗುವಂತೆ ನಡೆದು–ಕೊಂಡದ್ದು ಭೀಮಸೇನ ಮಾತ್ರ ಎಂದು ತಿಳಿಯಬೇಕು.

೩) ಉದ್ಯೋಗಪರ್ವದಲ್ಲಿ ಭೀಮನನ್ನು ಆಕ್ಷೇಪಿಸಿದಂತೆ ನಟಿಸಿದ್ದ ಕೃಷ್ಣ ಇಲ್ಲೂ ಸಹ ಅದರಂತೆಯೇ ವರ್ತಿಸುವನು. ಅದು ಲೋಕಕ್ಕೆ ತನ್ನ ನಿಷ್ಠೆಯನ್ನು ತೋರಿಸಲೆಂದು ಕೃಷ್ಣ ಮಾಡಿದ ಉಪಾಯ ಎಂದು ಬಲ್ಲ ಭೀಮ ತನ್ನ ಕರ್ತವ್ಯದಲ್ಲಿ ನಿರತನಾದ. ಇತರರು ಪ್ರಾಣರಕ್ಷಣೆಗಾಗಿ ಆ ಅಸ್ತ್ರಕ್ಕೆ ಶರಣಾಗಿ ಮುಖ್ಯ ಧರ್ಮವನ್ನು ಕೈಬಿಟ್ಟರು.

೪) ಭೀಮನ ಮೇಲೆ ಅಸ್ತ್ರ ಹಾಗೆ ಬಿದ್ದರೂ ಅವನಿಗೆ ಯಾವುದೇ ಅಪಾಯವೂ ಆಗದೇ ಬೆಂಕಿಯ ನಡುವೆ ನಿಂತ ಬೆಂಕಿಯಂತೆ ಶೋಭಿಸುತ್ತಲೇ ಇದ್ದ. ನಾರಾಯಣಾಸ್ತ್ರದ ಬೆಂಕಿಯ ಮಧ್ಯೆ ಭೀಮ ಬೆಂಕಿಯಂತೆ ನಿಂತದ್ದು ಉಚಿತವೇ ಆದುದು. ಮೂಲತಃ ಭೀಮ ಪ್ರಾಣಾಗ್ನಿಯೆಂದು ಪ್ರಸಿದ್ಧನಾದ ವಾಯುವೇ ಅಲ್ಲವೇ – 'ಪ್ರಾಣಾಗ್ನಯ ಏವೈತಸ್ಮಿನ್ ಪುರೇ ...' (ಷಟ್ಪ್ರಶ್ನೋಪ–ನಿಷತ್ ಪ್ರಶ್ನೆ ೪) :

ಸಾಶ್ವಸೂತರಥೋ ಭೀಮೋ ದ್ರೋಣಪುತ್ರಾಸ್ತ್ರಸಂವೃತಃ ।
ಅಗ್ನಾವಗ್ನಿರಿವ ನ್ಯಸ್ತೋ ಜ್ವಾಲಾಮಾಲೀ ಸುದುರ್ದೃಶಃ ॥

– ಭಾರತ (ದ್ರೋಣ. ೨೦೦/೩)

---

೨೯೪. ತತಃ ಶಸ್ತ್ರಾಣಿ ತೇ ಸರ್ವೇ ಸಮುತ್ಸೃಜ್ಯ ಮಹೀತಲೇ ।
ಅವಾರೋಹನ್ ರಥೇಭ್ಯಶ್ಚ ಹಸ್ತ್ಯಶ್ವೇಭ್ಯಶ್ಚ ಸರ್ವಶಃ ॥ – ಭಾರತ (ದ್ರೋಣ. ೧೯೯/೬೧)

೨೯೪. ತೇಷು ನಿಕ್ಷಿಪ್ತಶಸ್ತ್ರೇಷು ವಾಹನೇಭ್ಯಶ್ಚ್ಯುತೇಷು ಚ ।
ತದಸ್ತ್ರವೀರ್ಯಂ ವಿಪುಲಂ ಭೀಮಮೂರ್ಧನ್ಯಥಾಪತತ್ ॥ – ಭಾರತ (ದ್ರೋಣ. ೧೯೯/೬೨)

೫) ಭೀಮು ತಾನು ಅಸ್ತ್ರತ್ಯಾಗ ಮಾಡದ್ದು ಮಾತ್ರವಲ್ಲದೇ ಅರ್ಜುನಾದಿ ಎಲ್ಲರಿಗೂ ಹಾಗೆ ಅಸ್ತ್ರತ್ಯಾಗ ಮಾಡಿ ಸ್ವಧರ್ಮವನ್ನು ತೊರೆಯುವ ಪಾತಕಕ್ಕೆ ಗುರಿಯಾಗಬೇಡಿ ಎಂದು ಕರ್ತವ್ಯವನ್ನು ಉಪದೇಶಿಸಿದ:

ನ ಕಥಂಚನ ಶಸ್ತ್ರಾಣಿ ಮೋಕ್ತವ್ಯಾನೀಹ ಕೇನಚಿತ್ ।
ಅಹಮಾವಾರಯಿಷ್ಯಾಮಿ ದ್ರೋಣಪುತ್ರಾಸ್ತ್ರಮಾಶುಭೈಃ ॥...
ಅರ್ಜುನಾರ್ಜುನ ಬೀಭತ್ಸೋ ನ ನ್ಯಸ್ಯಂ ಗಾಂಡಿವಂ ತ್ವಯಾ ।
ಶಶಾಂಕಸ್ಯೇವ ತೇ ಪಂಕೋ ನೈರ್ಮಲ್ಯಂ ಪಾತಯಿಷ್ಯತಿ ॥

– ಭಾರತ (ದ್ರೋಣ. ೧೯೯/೪೫, ೫೨)

ಇದು ಆಚಾರ್ಯತ್ವದ ಲಕ್ಷಣ. ತನ್ನಂತೆ ಇತರರನ್ನೂ ಸನ್ಮಾರ್ಗದಲ್ಲಿ ತೊಡಗಿಸುವುದು ಗುರುವಿನ ಮುಖ್ಯ ಲಕ್ಷಣವಲ್ಲವೇ. ಅವರಾರೂ ಆ ಹಿತೋಕ್ತಿಯನ್ನು ಗಮನಿಸದೇ ಪ್ರಾಣ ಉಳಿಸಿಕೊಳ್ಳಲೆಂದು ಅಸ್ತ್ರಗಳನ್ನು ಕೆಳಗಿಟ್ಟು ಅದಕ್ಕೆ ನಮಸ್ಕರಿಸಿಯೇ ಬಿಟ್ಟರು. ಅರ್ಜುನನೂ ಸಹ ಗೋವುಗಳನ್ನು ನಾರಾಯಣಾಸ್ತ್ರದಲ್ಲಿ ಎದುರು ನಿಲ್ಲೆನೆಂಬುದು ತನ್ನ ವ್ರತವೆಂದು ತಿಳಿಸಿ ಅದಕ್ಕೆ ವಂದಿಸಿ ಶರಣಾದ :

ಭೀಮ ನಾರಾಯಣಾಸ್ತ್ರೇ ಮೇ ಗೋಷು ಚ ಬ್ರಾಹ್ಮಣೇಷು ಚ ।
ಏತೇಷು ಗಾಂಡಿವಂ ನ್ಯಸ್ಯಮೇತದ್ಧಿ ವ್ರತಮುತ್ತಮಮ್ ॥

– ಭಾರತ (ದ್ರೋಣ. ೧೯೯/೫೩)

೬) **'ಪಾಂಡುಸೈನ್ಯಮೃತೇ ಭೀಮಂ ಸುಮಹದ್ಭಯಮಾವಿಶತ್'** (೭/೧೯೯/೬೦) ಎಂಬ ಮಹಾಭಾರತದ ಮಾತು ಭೀಮನ ಅಸಾಧಾರಣಮಹತ್ತ್ವವನ್ನು ಸ್ಫುಟಪಡಿಸುವುದು.

೭) ಹೀಗೆ ಭೀಮು ಮಾತ್ರವೇ ಶುದ್ಧಭಾಗವತಧರ್ಮರತ ಎಂಬುದು ಸ್ಫುಟವಾಗುವುದು.

ಭೀಮನ ಅದ್ಭುತ ಧರ್ಮಪಾಲನೆ

ಅದಹ್ಯಮಾನೇ ಭೀಮೇಽಪಿ ವಹ್ನೌ ವಹ್ನಿರಿವ ಸ್ಥಿತೇ ।
ಅವೇಷ್ಟಯದ್ವಾರುಣೇನ ಪಾರ್ಥೋ೯ೇಽತ್ಮಾತ್ಮಪ್ರಪತ್ತಯೇ ॥ ೨೯೫ ॥

---

೨೯೫. ಆತ್ಮಪ್ರಪತ್ತಯ ಇತ್ಯತ್ರ ಪ್ರಕರ್ಷೇಣ ಪತ್ತಿಃ ಪ್ರಪತ್ತಿಃ ಭೀಮಸೇನೋಪರಿ ಮನಸಃ ಆಸಕ್ತಿಃ ಸ್ನೇಹ ಇತ್ಯರ್ಥಃ ॥ – (ವಾ.)

೨೯೫. ಭೀಮಸೇನಂ ಸಮಾರ್ಕೀರ್ಣಂ ದೃಷ್ಟ್ವಾಽಸ್ತ್ರೇಣ ಧನಂಜಯಃ ।
ತೇಜಸಃ ಪ್ರತಿಘಾತಾರ್ಥಂ ವಾರುಣೇನ ಸಮಾವೃಣೋತ್ ॥ – ಭಾರತ (ದ್ರೋಣ. ೨೦೦/೧)

ಅ: ಭೀಮನು ಅಗ್ನಿಯ ಮಧ್ಯೆ ಅಗ್ನಿಯಂತೆ ಸುಡದೇ ನಿಂತಾಗ ಅರ್ಜುನ ತನ್ನ ಪಾಲಿನ ಪ್ರೀತಿಯನ್ನು ತೋರಿಸಲೆಂದು, ಭೀಮನನ್ನು ರಕ್ಷಿಸಲು ವಾರುಣಾಸ್ತ್ರವನ್ನು ಪ್ರಯೋಗಿಸಿದ.

ನ ದೇಹೇ ಪತಿತಾಸ್ತ್ರಸ್ಯ ಬಹಿರ್ವೇಷ್ಟನತಃ ಫಲಮ್ ।
ತಥಾऽಪಿ ಸ್ನೇಹವಶಗೋ ವೇಷ್ಟಯಾಮಾಸ ಫಲ್ಗುನಃ ॥ ೨೯೬ ॥

ಅ: ದೇಹದ ಮೇಲೆ ಬಿದ್ದ ಅಸ್ತ್ರಕ್ಕೆ ಹಾಗೆ ಹೊರಗಿನಿಂದ ನೀರು ಸಿಂಪಡಿಸುವುದು ನಿರರ್ಥಕ, ಆದರೂ ಸ್ನೇಹಕ್ಕೆ ವಶನಾಗಿ ಅರ್ಜುನ ಹಾಗೆ ತಾನು ವಾರುಣಾಸ್ತ್ರದಿಂದ ರಕ್ಷಣೆ ನೀಡಲು ಪ್ರಯತ್ನಿಸಿದ.

ವಿ: ಭೀಮಸೇನ ತನ್ನ ಹುಂಕಾರದಿಂದಲೇ ನಾರಾಯಣಾಸ್ತ್ರವನ್ನು ಹಿಮ್ಮೆಟ್ಟಿಸಿದ ಎಂಬುದಾಗಿ ಶ್ರೀಪಾದರಾಜರ ಮಧ್ವನಾಮದಲ್ಲಿದೆ :

ಗುರುಸುತನ ಸಂಗರದಿ ನಾರಾಯಣಾಸ್ತ್ರವದು ।
ಉರವಣಿಸಿ ಬರಲು ಶಸ್ತ್ರವ ಬಿಸುಟರು ॥
ಹರಿಯ ಕೃಪೆ ಪಡೆದಿದ್ದ ಭೀಮ ಹುಂಕಾರದಲಿ ।
ಎರಗದಲೆ ದಿವ್ಯಾಸ್ತ್ರವನು ನೆರೆ ಅಟ್ಟಿದ ॥ – ಶ್ರೀಶ್ರೀಪಾದರಾಜರ ಮಧ್ವನಾಮ(೨೦)

ಅಮೋಘತ್ವಂ ನಿಜಾಸ್ತ್ರಸ್ಯ ಭೀಮಸ್ಯಾವಧ್ಯತಾಮಪಿ ।
ಸಾಧಯನ್ ಸಾರ್ಜುನಃ ಕೃಷ್ಣೋ ಭೀಮಸ್ಯ ರಥಮಾರುಹತ್ ॥ ೨೯೭ ॥

ಅ: ತನ್ನ ಅಸ್ತ್ರ ಅಮೋಘವೆಂಬುದನ್ನು, ಭೀಮ ಅವಧ್ಯನೆಂಬುದನ್ನು ಸಾರಿ ಕೃಷ್ಣ ಅರ್ಜುನನೊಂದಿಗೆ ಭೀಮನ ರಥವನ್ನೇರಿದ.

ವಿ : ೧) ಆ ಪ್ರಸಂಗದಿಂದ ನಾರಾಯಣಾಸ್ತ್ರವೂ ಅಮೋಘ, ಭೀಮ ಸರ್ವಥಾ ಅವಧ್ಯ ಎಂಬ ಎರಡು ಮುಖ್ಯ ಪ್ರಮೇಯಗಳು ಜಗತ್ತಿಗೆ ತಿಳಿಯುವಂತಾಯಿತು. ನಾರಾಯಣಾಸ್ತ್ರದ ಅಮೋಘ–ತ್ವವು ವಿಷ್ಣುಸರ್ವೋತ್ತಮತ್ವಕ್ಕೂ, ಭೀಮನ ಅವಧ್ಯತ್ವವು ವಾಯು ಜೀವೋತ್ತಮತ್ವಕ್ಕೂ ಸಂಕೇತ. ಭೀಮ ಅವಧ್ಯ ಎಂಬುದು ಅಕ್ಷರಶಃ ಸತ್ಯವಾದ ಮಾತಾಗಿತ್ತು ಎಂಬುದು ಮಹಾಭಾರತದಿಂದ ತಿಳಿಯುವುದು.

---

೨೯೭. ನಿಜಾಸ್ತ್ರಸ್ಯ= ನಾರಾಯಣಾಸ್ತ್ರಸ್ಯ ॥ – (ವಾ.)

೨) ಭೀಮನ ಮೇಲೆ ನಾರಾಯಣಾಸ್ತ್ರ ಅಷ್ಟು ದೀರ್ಘಕಾಲ ಉರಿದರೂ ಭೀಮನ ಕೂದಲೂ ಕುಂದಿರಲಿಲ್ಲ; ಭೀಮ ಪುನಃ ಸೂರ್ಯನಂತೆ ಕಂಗೊಳಿಸಿದ ಎಂಬ ಮಾತು ಮಹಾಭಾರತದಲ್ಲಿದೆ (ದ್ರೋಣಪರ್ವ ೨೦೦/೨೨):

ವ್ಯಪೋಢೇ ಚ ತತೋ ಘೋರೇ ತಸ್ಮಿಂಸ್ತೇಜಸಿ ಭಾರತ ।
ಬಭೌ ಭೀಮೋ ನಿಶಾಪಾಯೇ ಧೀಮಾನ್ ಸೂರ್ಯ ಇವೋದಿತಃ ॥

ಅದರಂತೆ ಗಂಟೆಗಟ್ಟಲೆ ಬಾಲದ ತುದಿಯಲ್ಲಿ ಬೆಂಕಿ ಉರಿದರೂ ಆ ಬಾಲದ ತುದಿಯ ರೋಮಗಳೂ ಸಹ ಸುಟ್ಟಿರಲಿಲ್ಲ ಎಂಬ ನಿರೂಪಣೆ ರಾಮಾಯಣದಲ್ಲಿದೆ.

ವೇಷ್ಟಿತಂ ವಾರುಣಾಸ್ತ್ರೇಣ ಪ್ರವಿಷ್ಟಂ ಬಾಹ್ಯತಸ್ತದಾ ।
ಸಹಿತತ್ವಾತ್ ಕೇಶವೇನ ನರತ್ವಾದಥ ಫಲ್ಗುನಮ್ ॥ ೨೯೮ ॥

ತದಸ್ತ್ರಂ ನಾದಹತ್ ತಾಭ್ಯಾಂ ಸ್ವರಥಾದವರೋಪಿತೇ ।
ಭೀಮ ಆಚ್ಛಿನ್ನಹೇತೌ ಚ ತದಸ್ತ್ರಂ ಶಾಂತಿಮಾಗಮತ್ ॥ ೨೯೯ ॥

ಅ: ವಾರುಣಾಸ್ತ್ರದಿಂದ ಹೊರಗೆ ಸುತ್ತುವರಿದದ್ದರಿಂದಲೂ ಕೃಷ್ಣನೊಂದಿಗೆ ಕೂಡಿದ್ದರಿಂದಲೂ, ನರನ ಆವೇಶ ಹೊಂದಿದ್ದರಿಂದಲೂ ಆ ನಾರಾಯಣಾಸ್ತ್ರ ಅರ್ಜುನನನ್ನು ಸುಡಲಿಲ್ಲ. ಅವರಿಬ್ಬರಿಂದ ಭೀಮ ರಥದಿಂದ ಕೆಳಗಿಳಿಸಲ್ಪಟ್ಟು ಅವನ ಆಯುಧವನ್ನು ಕಿತ್ತುಕೊಂಡದ್ದರಿಂದ ಆ ನಾರಾಯಣಾಸ್ತ್ರ ಶಾಂತವಾಯಿತು.

---

೨೯೮. ವೇಷ್ಟಿತಂ ವಾರುಣಾಸ್ತ್ರೇಣೇತ್ಯತ್ರ ವಾರುಣಾಸ್ತ್ರೇಣ ಬಾಹ್ಯತಃ ವೇಷ್ಟಿತಂ ತದಸ್ತ್ರಂ ಪ್ರವಿಷ್ಟಂ= ಸ್ವಜ್ವಾಲಾಮಧ್ಯೇ ಪ್ರವಿಷ್ಟಮಪಿ ಭೀಮಂ ಶೀತಲೋದಕಾಮಿಲಿತೋಷ್ಣೋದಕವತ್ ನಾದಹತ್। ಕೇಶವೇನ ಸಹಿತತ್ವಾತ್ ನರತ್ವಾಚ್ಚ ಇದಂ ಚೋಪಲಕ್ಷಣಮ್, ಕೃತನಮಸ್ಕಾರತ್ವಾಚ್ಚೇತ್ಯಪಿ ಗ್ರಾಹ್ಯಮ್, ದ್ರಷ್ಟವ್ಯಮ್। ಫಲ್ಗುನಂ ಚ ನಾದಹತ್ ॥ – (ವಾ.)

೨೯೮. ನ್ಯಸ್ತಶಸ್ತ್ರಾತತಸ್ತ್ರಾತು ನಾದಹತ್ ಸೋಽಸ್ತ್ರಜ್ಞೋಽನಲಃ ।
ವಾರುಣಾಸ್ತ್ರಪ್ರಯೋಗಾಚ್ಚವೀರ್ಯವತ್ವಾಚ್ಚಕೃಷ್ಣಯೋಃ ॥ – ಭಾರತ (ದ್ರೋಣ.೨೦೦/೧೨)

೨೯೯. ಆಚ್ಛಿನ್ನಹೇತೌ ಆಚ್ಛಿನ್ನಾ = ಬಲಾನ್ಮೋಚಿತಾ ಹೇತಿರಾಯುಧಂ ಯಸ್ಯ ತಸ್ಮಿಂಶ್ಚ ಸತಿ ತದಸ್ತ್ರಂ ಶಾಂತಿಮಾಗಮತ್ ॥ – (ವಾ.)

೨೯೯. ವಾರುಣಾಸ್ತ್ರದೃಹಿಸ್ಥಿತತ್ವಾತ್ ಕೃಷ್ಣೇನ ಯುಕ್ತತ್ವಾತ್ ನರಾವೇಶಾಚ್ಚಇತಿಹೇತುತ್ರಯಾತ್ ಪಾರ್ಥಂ ನಾದಹದಿತ್ಯರ್ಥಃ। – (ಜ.)

೨೯೯. ಏವಮುಕ್ತ್ವಾ ತು ತಂ ಕೃಷ್ಣೋ ರಥಾದ್ ಭೂಮಿಮವರ್ತಯತ್ ।
ಯದಾಽಪಕೃಷ್ಟಃ ಸ ರಥಾನ್ನ್ಯಸಿತಶ್ಚಾಯುಧಂ ಭುವಿ ।
ತತೋ ನಾರಾಯಣಾಸ್ತ್ರಂ ತತ್ ಪ್ರಶಾಂತಂ ಶತ್ರುತಾಪನಮ್ ॥ – ಭಾರತ (ದ್ರೋಣ.೨೧೦೧೮,೧೯)

ವಿ: ೧) ಭೀಮನಿಗೆ ನಾರಾಯಣಾಸ್ತ್ರದಿಂದ ಯಾವ ಅಪಾಯವೂ ಇಲ್ಲವಾದರೂ ಅವನ ರಥವೇರಿದ ಅರ್ಜುನನಿಗೆ ಅಪಾಯ ಇದ್ದೇ ಇದ್ದಿತು. ಆದರೆ, ವಾರುಣಾಸ್ತ್ರ ಪ್ರಯೋಗಿಸಿದ್ದರಿಂದ ಹೊರಗಿನ ಅಪಾಯ ತಪ್ಪಿದರೆ, ಕೃಷ್ಣನ ಜೊತೆಗಿದ್ದುದರಿಂದಲೂ, ಸ್ವತಃ ನರನ ಆವೇಶದಿಂದ ಕೂಡಿದ್ದರಿಂದಲೂ ಅರ್ಜುನ ಅಸ್ತ್ರದಿಂದ ಸುರಕ್ಷಿತನಾದ ಎಂಬುದು ಇಲ್ಲಿಯ ವಿಶೇಷಾಂಶ. ಕೃಷ್ಣ ಭೀಮನನ್ನು ರಥದಿಂದ ಎತ್ತಿ ಕೆಳಕ್ಕಿಳಿಸಿದಾಗ ಅಸ್ತ್ರ ಶಾಂತವಾಯಿತು.

೨) ಭೀಮ ಅರ್ಜುನಾದಿಗಳನ್ನೆಲ್ಲ ಎತ್ತಿ ನಡೆದಿದ್ದ ವಿವರ ಅರಗಿನ ಮನೆಯ ಪ್ರಸಂಗದಲ್ಲಿ ಬಂದಿದೆ(೧೯/೪೩). ಆದರೆ ಅರ್ಜುನಾದಿಗಳು ಯಾರೂ ಭೀಮನನ್ನು ಹಾಗೆ ಎತ್ತಲು ಸಾಧ್ಯವಿರಲಿಲ್ಲ. ಇಲ್ಲಿ ಕೃಷ್ಣ ಭೀಮನನ್ನು ಹಾಗೆ ಅನಾಯಾಸವಾಗಿ ಎತ್ತಿ ಕೆಳಗಿಳಿಸುವ ಮೂಲಕ ತಾನು ಅವನಿಗಿಂತ ಮಿಗಿಲಾದವನು ಎಂದು ಲೋಕಕ್ಕೆ ತಿಳಿಸಿದ.

೩) ವಾಯುದೇವರು ಕೂರ್ಮರೂಪದಿಂದ ಬ್ರಹ್ಮಾಂಡವನ್ನು ಹೊತ್ತಿದ್ದರೆ, ಆ ವಾಯು–ವನ್ನೂ ಸಹ ಮಹಾವಿಷ್ಣು ಕೂರ್ಮರೂಪದಿಂದ ತನ್ನ ಮೇಲೆ ಧರಿಸಿರುವನು ಎಂಬ ತತ್ತ್ವ ಇದರಿಂದ ಸ್ಫುಟಪಡುವುದು.

ಶುದ್ಧ ಕ್ಷತ್ರಿಯಧರ್ಮೇಷು ನಿರತೋ ಯದ್ವೃಕೋದರಃ ।
ವಾಹನಾದವತೀರ್ಯಾನ್ಯೈಃ ಪ್ರಣತೇಽಪಿ ನಿರಾಯುಧೈಃ ।
ಸಾಯುಧಃ ಸರಥೋಽಯುದ್ಧ್ಯದವಿಷಹ್ಯಮಪೀಶ್ವರೈಃ ॥ ೩೦೦ ॥

ಅ: ಶುದ್ಧವಾದ ಕ್ಷತ್ರಿಯ ಧರ್ಮಗಳಲ್ಲಿ ಭೀಮಸೇನ ಸದಾ ನಿರತನಾದವನು. ಆದ್ದರಿಂದ ಇತರರು ವಾಹನಗಳಿಂದ ಕೆಳಗಿಳಿದು ನಿರಾಯುಧರಾಗಿ ನಾರಾಯಣಾಸ್ತ್ರಕ್ಕೆ ನಮಸ್ಕರಿಸಿದರೂ, ಭೀಮ ಮಾತ್ರ ಆಯುಧ ಸಹಿತನಾಗಿ ರಥದಲ್ಲಿ ಕುಳಿತಿದ್ದೇ ಮಹಾಸಮರ್ಥರಾದ ದೇವತೆಗಳಿಗೂ ಸಹಿಸಲಾಗದ ಆ ನಾರಾಯಣಾಸ್ತ್ರದೊಂದಿಗೆ ಹೋರಾಡಿದ.

ಇತರರಿಗೂ ಭೀಮನ ಉಪದೇಶ

ಸ್ವಧರ್ಮಹಾನೌ ಮಿತ್ರಾಣಾಂ ಕರ್ತವ್ಯಂ ಯನ್ನಿಷೇಧನಮ್ ।
ಅತಃ ಸೋಽನ್ಯಾನಪಿ ಪ್ರಾಹ ಮಾ ನಮಧ್ವಮಿತಿ ಸ್ವಯಮ್ ॥ ೩೦೧ ॥

---

೩೦೦. ಯುದ್ಧೇ ಕ್ಷತ್ರಿಯಧರ್ಮೇ ಚ ನಿರತೋಽಯಂ ವೃಕೋದರಃ । – ಭಾರತ (ಆಶ್ರಮವಾಸಿಕ. ೧೩/೮)

ಅ: ಸ್ವಧರ್ಮಕ್ಕೆ ಚ್ಯುತಿ ತಂದುಕೊಳ್ಳುವ ಪ್ರಸಂಗದಲ್ಲಿ ಮಿತ್ರರಿಗೆ ಅದನ್ನು ಬೇಡವೆಂದು ತಿಳಿಸುವುದು ಕರ್ತವ್ಯವಾದ್ದರಿಂದ ಭೀಮ ಇತರರಿಗೂ ಆ ಅಸ್ತ್ರಕ್ಕೆ ನಮಸ್ಕರಿಸಬೇಡಿರಿ ಎಂದು ತಿಳಿಸಿದನು.

ಪಾಪಾನ್ನಿವಾರಯತಿ ಯೋಜಯತೇ ಹಿತಾಯ ಗುಹ್ಯಂ ಚ ಗೂಹತಿ ಗುಣಾನ್ ಪ್ರಕಟೀಕರೋತಿ ॥
ಆಪದ್ಗತಂ ಚ ನ ಜಹಾತಿ ದದಾತಿ ಕಾಲೇ ಸನ್ಮಿತ್ರಲಕ್ಷಣಮಿದಂ ಪ್ರವದಂತಿ ಸಂತಃ ॥

– ಎಂಬ ಸುಭಾಷಿತ(ನೀತಿಶತಕ ೭೦)ದಲ್ಲಿ ಬಂದಿರುವ ಅಸಾಧಾರಣಮಿತ್ರಲಕ್ಷಣ ಭೀಮನಲ್ಲಿ ಪೂರ್ಣಪ್ರಮಾಣದಲ್ಲಿರುವುದನ್ನು ಗಮನಿಸಬೇಕು.

ಅಸ್ತ್ರಕ್ಕೆ ವಂದಿಸದಿರಲು ಕಾರಣ

ನಮಸ್ಕಾರ್ಯಮಪಿ ಹ್ಯಸ್ತ್ರಂ ನ ನಮ್ಯಂ ಜೀವನೇಚ್ಛಯಾ ।
ಸಮರೇ ಶತ್ರುಣಾ ಮುಕ್ತಂ ತಸ್ಮಾತ್ ತಂ ನ ಚಕಾರ ಸಃ ॥ ೩೦೨ ॥

ಅ: ಅಸ್ತ್ರವು ನಮಸ್ಕಾರಕ್ಕೆ ಯೋಗ್ಯವಾಗಿದ್ದರೂ ಯುದ್ಧದಲ್ಲಿ ಶತ್ರುವಿನಿಂದ ಬಿಡಲ್ಪಟ್ಟಾಗ ಬದುಕಿನ ಮೇಲಿನ ಆಸೆಯಿಂದ ನಮಸ್ಕರಿಸುವುದು ಉಚಿತವಲ್ಲ. ಆದ್ದರಿಂದ ಭೀಮ ಅದಕ್ಕೆ ನಮಸ್ಕರಿಸಲಿಲ್ಲ.

ವಿ : ೧) ನಾರಾಯಣಾಸ್ತ್ರಕ್ಕೆ ಶ್ರೀಹರಿಯೇ ದೇವತೆಯಾದ್ದರಿಂದ ಅದು ನಮಸ್ಕಾರಕ್ಕೆ ಯೋಗ್ಯವಲ್ಲವೇ ಎಂಬ ಪ್ರಶ್ನೆಗೆ ಇಲ್ಲಿ ಉತ್ತರವಿದೆ. ಅಸ್ತ್ರ ದೇವತೆ ನಾರಾಯಣನಾದ್ದರಿಂದ ಅದು

---

೩೦೧. ತತ ಉತ್ಪಪ್ಲುತಾಮಾಂಸ್ತಾನಸ್ತ್ರಾಣ್ಯಾಲಕ್ಷ್ಯ ಪಾಂಡವಃ ।
ಭೀಮಸೇನೋऽಬ್ರವೀದ್ ರಾಜನ್ನಿದಂ ಸಂಹರ್ಷಯನ್ ವಚಃ ॥
ನ ಕಥಂಚನ ಶಸ್ತ್ರಾಣಿ ಮೋಕ್ತವ್ಯಾನೀಹ ಕೇನಚಿತ್ ।
ಅಹಮಾವಾರಯಿಷ್ಯಾಮಿ ದ್ರೋಣಪುತ್ರಾಸ್ತ್ರಮಾಶುಗೈಃ ॥
ಯದಿ ನಾರಾಯಣಾಸ್ತ್ರಸ್ಯ ಪ್ರತಿಯೋದ್ಧಾನ ವಿದ್ಯತೇ ।
ಅದ್ಯೈತತ್ ಪ್ರತಿಯೋತ್ಸ್ಯಾಮಿ ಪಶ್ಯತ್ಸು ಕುರುಪಾಂಡುಷು ॥
ಅರ್ಜುನಾರ್ಜುನ ಬೀಭತ್ಸೋ ನ ನ್ಯಸ್ಯಂ ಗಾಂಡಿವಂ ತ್ವಯಾ ।
ಶಶಾಂಕಸ್ಯೇವ ತೇ ಪಂಕೋ ನೈರ್ಮಲ್ಯಂ ಪಾತಯಿಷ್ಯತಿ ॥
(ಭೀಮನ ವಚನ) – ಭಾರತ (ದ್ರೋಣ. ೧೯೯/೪೪-೫೨)

* ತನ್ನ ಚಕಾರ ಸಃ – (ಪಾಠಾಂತರ)
ತತ್ - ನಮನಮ್ । ÷ (ವೇ.)

ನಮಸ್ಕಾರಕ್ಕೆ ಅರ್ಹವೆಂಬುದು ನಿಃ ಸಂಶಯ. ಆದರೆ, ಅದನ್ನು ಪ್ರಯೋಗಿಸಿದ್ದು ಶತ್ರುವಾದ್ದರಿಂದ ಅದಕ್ಕೆ ನಮಸ್ಕರಿಸಿದರೆ ಶತ್ರುವಿಗೆ ಮಣಿದಂತಾಗುವುದು ಎಂಬ ಕಾರಣದಿಂದ ಭೀಮಸೇನ ಅದಕ್ಕೆ ನಮಸ್ಕರಿಸಲಿಲ್ಲ ಎಂದರ್ಥ.

೨) ಶ್ರುತಿಸ್ಮೃತಿಗಳು ಶ್ರೀಹರಿಯ ಆಜ್ಞೆಗಳಾಗಿ ಮಾನ್ಯವೇ ಆದರೂ, ಅವುಗಳನ್ನು ಪೂರ್ವಪಕ್ಷಿಗಳು ತಮ್ಮ ಸಿದ್ಧಾಂತಸ್ಥಾಪನೆಗಾಗಿ ಉಲ್ಲೇಖಿಸಿದಾಗ ಅವುಗಳನ್ನು ಆ ಅರ್ಥದಲ್ಲಿ ಅಂಗೀಕರಿಸದೇ, ಅದಕ್ಕೆ ಯೋಗ್ಯವಾದ ಬೇರೆ ಅರ್ಥವನ್ನು ಹೇಳಿ ಗೌರವಿಸುವುದು ವಾದಕಥೆಯಲ್ಲಿ ಹೇಗೆ ಕರ್ತವ್ಯವೋ ಹಾಗೆಯೇ ಇಲ್ಲಿಯೂ ಎಂದು ತಿಳಿಯಬೇಕು :

ಸ್ವಪಕ್ಷ ಆಗಮಶ್ಚೈವ ವಕ್ತವ್ಯಃ ಪ್ರತಿವಾದಿನಾ ।
ತಸ್ಯಾಪ್ಯನ್ಯಾರ್ಥತಾ ಸಾಧ್ಯಾ ವಾದಿನಾ ಸ್ವಾರ್ಥಸಿದ್ಧಯೇ ॥
ಅನ್ಯಾರ್ಥತಾ ನಿರಾಕಾರ್ಯಾ ಸ್ವಾಗಮಸ್ಯ ವಿನಿಶ್ಚಯಾತ್ ।
ಉಪಪತ್ತ್ಯವಕಾಶೋಽತ್ರ ಹ್ಯಾಗಮಾರ್ಥವಿನಿರ್ಣಯೇ ॥
ವಾದ್ಯಾಗಮಾರ್ಥೇ ನಿರ್ಣೀತ ಆಗಮಾರ್ಥಃ ಪರಸ್ಯ ತು ।
ನಿರ್ಣೀಯಃ ಸಹಿತೈಃ ಪಶ್ಚಾತ್ ತತೋ ನಿಶ್ಶೇಷನಿರ್ಣಯಃ ॥ – ಕಥಾಲಕ್ಷಣ(೧೧-೧೩)

೩) ಇದರಂತೆ ಶ್ರೀಹರಿಯ ಮೂರ್ತಿಗಳು ಅವೈಷ್ಣವರಿಂದ ಪ್ರತಿಷ್ಠಿತವಾದಾಗ ಅಲ್ಲಿ ಸನ್ನಿಧಾನವಿರುವುದಿಲ್ಲವಾದ್ದರಿಂದ ಅವಕ್ಕೆ ವಂದಿಸಬಾರದು ಎಂಬ ಶಾಸ್ತ್ರೋಕ್ತಿಯನ್ನು ಗಮನಿಸಬೇಕು.

ನಾರಾಯಣಾಸ್ತ್ರದ ಅಭಿಮಾನಿದೇವತೆ

ಅಸ್ಯಾಭಿಮಾನೀ ವಾಯುರ್ಹಿ ದೇವತಾಽಸ್ಯ ಹರಿಃ ಸ್ವಯಮ್ ।
ತಸ್ಮಾದ್ಭೀಮಂ ಸ್ವರೂಪತ್ವಾನ್ನಾದಹಚ್ಚಾಗ್ನಿಮಗ್ನಿವತ್* ॥ ೩೦೩ ॥

ಅ: ನಾರಾಯಣಾಸ್ತ್ರಕ್ಕೆ ಅಭಿಮಾನಿ ದೇವತೆ ವಾಯುವೇ; ಪ್ರತಿಪಾದ್ಯದೇವತೆ ಸಾಕ್ಷಾತ್ ಶ್ರೀಹರಿ. ಆದ್ದರಿಂದ ಆ ಅಸ್ತ್ರವು ಭೀಮನ ಸ್ವರೂಪವೇ ಆದ್ದರಿಂದ ಅಗ್ನಿಯನ್ನೇ ಅಗ್ನಿ ಹೇಗೆ ಸುಡುವುದಿಲ್ಲವೋ, ಹಾಗೆ ಭೀಮನನ್ನು ಸುಡಲಿಲ್ಲ.

ವಿ : ಲಂಕೆಯಲ್ಲಿ ಹನುಮಂತನಿಗಿಟ್ಟ ಬೆಂಕಿ ಸಹ ಅದನ್ನು ಎಷ್ಟುಮಾತ್ರಕ್ಕೂ ಸುಡದಿದ್ದ ವಿವರ ರಾಮಾಯಣದಲ್ಲಿದೆ. ಅಲ್ಲಿಯೂ ಸಹ ಆ ಬೆಂಕಿ ಹನುಮಂತನ ಬಾಲದ ಬೆಂಕಿಯೇ ಆಗಿತ್ತು ಎಂದರೆ ಹನುಮಂತ ಬೆಂಕಿಯಲ್ಲಿ ಬೆಂಕಿಯಂತೆಯೇ ನಿಂತಿದ್ದ ಎಂದಾಗುವುದು ಎಂಬ ವಿಶೇಷಾಂಶವನ್ನು ಗಮನಿಸಬೇಕು.

---

* 'ಅಗ್ನಾವಗ್ನಿರಿವ ನ್ಯಸ್ತೋ' ಎಂಬ ಭಾರತ(ದ್ರೋಣ-೨೦೦/೩)ದ ಶ್ಲೋಕದ ಭಾವವನ್ನೇ ಇಲ್ಲಿ ವಿವರಿಸಿರುವರು.

ಮನಸೈವಾದರಂ ಚಕ್ರೇ ಭೀಮೋಽಸ್ತ್ರೇ ಚ ಹರೌ ತದಾ ।
ಕ್ಷತ್ರಧರ್ಮಾನುಸಾರೇಣ ನ ನನಾಮ ಚ ಬಾಹ್ಯತಃ ॥ ೩೦೪ ॥

ಅ: ಭೀಮಸೇನ ಮನಸ್ಸಿನಿಂದಲೇ ಆ ಅಸ್ತ್ರಕ್ಕೂ, ಅಸ್ತ್ರದೇವತೆಯಾದ ಶ್ರೀಹರಿಗೂ ಆದರ ತೋರಿದ. ಆದರೆ, ಕ್ಷತ್ರಧರ್ಮಕ್ಕೆ ಅನುಸಾರವಾಗಿ ಹೊರಗಿನಿಂದ ಮಾತ್ರ ಶಿರಬಾಗಿ ವಂದಿಸಲಿಲ್ಲ.

ವಿ: ಭೀಮನ ಧರ್ಮಪ್ರಜ್ಞೆ ಹೀಗೆ ಸರ್ವಾತ್ಮನಾ ಪರಿಪೂರ್ಣವಾಗಿರುವುದು, ಅತ್ಯಂತ ಅಪೂರ್ವ ಎಂಬುದನ್ನು ಗಮನಿಸಬೇಕು.

ವಾಸುದೇವಃ ಸ್ವಕೀಯಾಸ್ತ್ರಂ ಭೀಮಂ ಚಾಮೋಘಮೇವ ತು ।
ಸಾಧಯಿತ್ವಾನಂತಶಕ್ತಿಃ ಪುನರಶ್ವಾನಚೋದಯತ್ ॥ ೩೦೫ ॥

ಅ: ಅನಂತ ಶಕ್ತಿಯುಳ್ಳ ಶ್ರೀಕೃಷ್ಣ ತನ್ನ ಅಸ್ತ್ರವನ್ನೂ, ಭೀಮನನ್ನೂ ಅಮೋಘವೆಂದು ತೋರಿಸಿ ಪುನಃ ಕುದುರೆಗಳನ್ನು ನಡೆಸತೊಡಗಿದ.

ಪುನಃ ಪ್ರಯೋಕ್ತುಮಸ್ತ್ರಂ ತದ್ದಾರ್ತರಾಷ್ಟ್ರೋಽಭ್ಯಚೋದಯತ್ ।
ದ್ರೌಣಿರ್ನ ಶಕ್ಯಮಿತ್ಯುಕ್ತ್ವಾ ಧೃಷ್ಟದ್ಯುಮ್ನಂ ಸಮಭ್ಯಯಾತ್ ॥ ೩೦೬ ॥

---

೩೦೪. ಮನಸೈವಾದರಂ ಚಕ್ರ ಇತ್ಯಸ್ಯಾಯಮರ್ಥಃ। ಭೀಮಃ ತದಾ ಅಸ್ತ್ರಮೋಚನಕಾಲೇ ಮನಸಾ ಹರಾವೇವಾದರಂ ಚಕ್ರೇ। ಅಸ್ತ್ರೇ ಚ ಅಸ್ತ್ರವಿಷಯೇ ನಾದರಂ ಚಕ್ರೇ ನ ನನಾಮ ಚ। ಚ ಶಬ್ದೇನಾನಾದರಂ ಚಕ್ರ ಇತಿ ಲಭ್ಯತೇ। ಅನ್ಯಥಾ ಚಶಬ್ದವೈಯರ್ಥ್ಯಾತ್ ನ ನನಾಮೇತ್ಯನೇನೈವೋಪಪತ್ತೇಃ। ನ ಚ ಪ್ರತೀತಾರ್ಥಂ ಪರಿತ್ಯಜ್ಯ ಅನ್ಯಾರ್ಥಃ ಕುತ ಇತಿ ವಾಚ್ಯಮ್ । 'ಶುದ್ಧಕ್ಷತ್ರಿಯಧರ್ಮೇಷು ನಿರತತ್ವಾದ್ವೃಕೋದರಃ । ವಾಹನಾದವತೀರ್ಯಾನ್ಯೈಃ ಪ್ರಣತೇಽಪಿ ನಿರಾಯುಧೈಃ । ಸಾಯುಧಃ ಸರಥೋಽಯುದ್ಧ್ಯದವಿಷಹ್ಯಮಪೀಶ್ವರೈಃ । ಸ್ವಧರ್ಮಹಾನೌ ಮಿತ್ರಾಣಾಂ ಕರ್ತವ್ಯಂ ಯನ್ನಿಷೇಧನಮ್ । ಅತಃ ಸೋಽನ್ಯಾನಪಿ ಪ್ರಾಹ ನ ನಮದ್ವಮಿತಿ ಸ್ವಯಮ್' ಇತಿ ಶ್ಲೋಕದ್ವಯಸ್ಯೈವ ಸಾಧಕತ್ವಾತ್। ತರ್ಹಿ ಭಗವದಸ್ತ್ರಂ ನ ನಮ್ಯಂ ಕಿಮ್? ಇತ್ಯತ ಆಹ – 'ನಮಸ್ಕಾರ್ಯಮಪಿ ಹ್ಯಸ್ತ್ರಂ ನ ನಮ್ಯಂ ಜೀವನೇಚ್ಛಯಾ । ಸಮರೇ ಶತ್ರುಣಾ ಮುಕ್ತಂ ತಸ್ಮಾತ್ ತಂ ನ ಚಕಾರ ಸಃ' ಇತ್ಯನ್ಯಾನ್ ಪ್ರತಿಬಾಧಕೋಽಪನ್ಯಾಸೇನ ಪುನಃ ಭೀಮಸ್ಯಾನಮಸ್ಕಾರಕಥನಾಚ್ಚಾಯಮೇವಾರ್ಥ ಇತ್ಯವಸೀಯತೇ। ಏವಂ ಸತಿ ಭೀಮಸ್ಯಾಸ್ತ್ರಂ ಪ್ರತಿ ಸಾಯುಧತ್ವೇನ ಸಂಸ್ಥಾನಮುಪಪದ್ಯತೇ। –(ಮ.)

೩೦೬. ಅಶ್ವತ್ಥಾಮನ್ ಪುನಃ ಶೀಘ್ರಮಸ್ತ್ರಮೇತತ್ ಪ್ರಯೋಜಯ। –ಭಾರತ (ದ್ರೋಣ. ೨೦೦/೨೫)

ಅ: ದುರ್ಯೋಧನ ಆ ಅಸ್ತ್ರವನ್ನು ಮತ್ತೊಮ್ಮೆ ಪ್ರಯೋಗಿಸಲು ಅಶ್ವತ್ಥಾಮನನ್ನು ಬಹಳವಾಗಿ ಒತ್ತಾಯಿಸಿದ. ಅದು ಸಾಧ್ಯವಿಲ್ಲ ಎಂದು ಹೇಳಿ ಅಶ್ವತ್ಥಾಮ ಧೃಷ್ಟದ್ಯುಮ್ನನ ಮೇಲೆ ಏರಿಹೋದ.

ವಿ: ನಾರಾಯಣಾಸ್ತ್ರ ಒಮ್ಮೆ ಮಾತ್ರ ಪ್ರಯೋಗಿಸುವಂತಹ ಅಸ್ತ್ರ :

ನೈತದಾವರ್ತತೇ ರಾಜನ್ನಸ್ತ್ರಂ ದ್ವಿರ್ನೋಪಪದ್ಯತೇ ।
ಆವೃತಂ ಹಿ ನಿವರ್ತೇತ ಪ್ರಯೋಕ್ತಾರಂ ನ ಸಂಶಯಃ ॥

– ಭಾರತ (ದ್ರೋಣ. ೨೦೦/೨೭)

'ಅಸ್ತ್ರಂ ದ್ವಿರ್ನೋಪಪದ್ಯತೇ' (ಮಹಾಭಾರತ) ಎಂದರೆ ನಾರಾಯಣಾಸ್ತ್ರದ ಕಾರ್ಯ ಒಂದು ಬಾರಿ ಪ್ರಯೋಗಿಸಿದಾಗಲೇ ಸಮಗ್ರವಾಗಿ ಪೂರೈಸುವುದರಿಂದ ಅದನ್ನು ಮತ್ತೊಮ್ಮೆ ಪ್ರಯೋಗಿಸುವ ಅವಶ್ಯಕತೆಯೇ ಬಾರದು ಎಂದರ್ಥ. ಇಲ್ಲಿ ಕೃಷ್ಣ ಅಸ್ತ್ರದಿಂದ ಬಿಡುಗಡೆಯ ಉಪಾಯವನ್ನು ತೋರಿದ್ದರಿಂದ ಎಲ್ಲರೂ ಉಳಿಯುವಂತಾಯಿತು. ಮತ್ತೊಮ್ಮೆ ಪ್ರಯೋಗಿಸು–ವಂತಿಲ್ಲ, ಪ್ರಯೋಗಿಸಿದರೂ ಆ ಉಪಾಯದಿಂದ ಅವರೆಲ್ಲ ಮುಂಚಿನಂತೆ ಸುರಕ್ಷಿತವಾಗಿ ಉಳಿಯುವರು ಎಂಬ ವಿಚಾರ ದುರ್ಯೋಧನನ ಮಂದಬುದ್ಧಿಗೆ ತಿಳಿಯದಾಗಿತ್ತು ಎಂಬುದು ಇಲ್ಲಿಯ ವಿಶೇಷ.

ಅಶ್ವತ್ಥಾಮನೊಂದಿಗೆ ಧೃಷ್ಟದ್ಯುಮ್ನ ಸಾತ್ಯಕಿಯರ ಯುದ್ಧ

ಆಯಾಂತಮೀಕ್ಷ್ಯೈವ ಗುರೋಃ ಸುತಂ
ತಂ ಧೃಷ್ಟದ್ಯುಮ್ನಂ ಸಾತ್ಯಕಿರಭ್ಯಯಾದ್ರಣೇ ।
ಉಭೌ ಚ ತೌ ಸಾಯಕಾಭ್ಯಾಮವಿಧ್ಯ-
ನ್ನಿಪೇತತುಸ್ತೌ ಚ ವಿಮೂರ್ಛಿತೌ ರಣೇ ॥ ೩೦೭ ॥

ಅ: ಗುರುಪುತ್ರನಾದ ಅಶ್ವತ್ಥಾಮ ಧೃಷ್ಟದ್ಯುಮ್ನನ ಬಳಿಗೆ ಬರುತ್ತಿದ್ದುದನ್ನು ಕಂಡು ಸಾತ್ಯಕಿ ಯುದ್ಧದಲ್ಲಿ ತಾನೂ ಜೊತೆಗೂಡಿದ. ಅವರಿಬ್ಬರನ್ನೂ ಅಶ್ವತ್ಥಾಮ ಬಾಣಗಳಿಂದ ಹೊಡೆದ, ಅವರಿಬ್ಬರೂ ಯುದ್ಧದಲ್ಲಿ ಮೂರ್ಛಿತರಾಗಿ ಕೆಳಗೆ ಬಿದ್ದರು.

---

೩೦೭. ಆಯಾಂತಮೀಕ್ಷ್ಯೈವ ಗುರೋಃ ಸುತಂ ತಂ ಧೃಷ್ಟದ್ಯುಮ್ನಮ್ ಇತ್ಯತ್ರ ತಂ = ಸ್ವಪಿತುರ್ವಧಕರ್ತಾರಂ ಧೃಷ್ಟದ್ಯುಮ್ನಂ ಪ್ರತ್ಯಾಯಾಂತಮಿತಿ ಯೋಗ್ಯಪದಾಧ್ಯಾಹಾರಃ ॥ – (ವಾ.)

ಭೀಮಸ್ಯಾಭ್ಯಾಗತಸ್ಯಾಶ್ವಾನ್ ದ್ರೌಣಿರ್ವ್ಯದ್ರಾವಯದ್ರಣೇ ।
ಸಂಸ್ಥಾಪಯತಿ ತಾನ್ ಭೀಮೇ ದದರ್ಶ ದ್ರೌಣಿಮರ್ಜುನಃ ॥ ೩೦೮ ॥

ಅ: ಅಲ್ಲಿಗೆ ಬಂದ ಭೀಮನ ಕುದುರೆಗಳನ್ನು ಅಶ್ವತ್ಥಾಮ ಯುದ್ಧದಲ್ಲಿ ಹೊಡೆದೋಡಿಸಿದ. ಅವುಗಳನ್ನು ಭೀಮ ನಿಯಂತ್ರಿಸುತ್ತಿದ್ದಂತೆಯೇ ಅರ್ಜುನ ಅಶ್ವತ್ಥಾಮನನ್ನು ಕಂಡ.

ಅಶ್ವತ್ಥಾಮರಿಂದ ಆಗ್ನೇಯಾಸ್ತ್ರಪ್ರಯೋಗ

ತತೋಽರ್ಜುನಸ್ತಂ ಪ್ರತಿಯೋದ್ಧುಮಾಗಮದ್
ರೂಕ್ಷಾವಾಚಃ ಶ್ರಾವಯನ್ ಕ್ರುದ್ಧರೂಪಃ ।
ತತ್ರಾಗ್ನೇಯಂ ದ್ರೌಣಿರಮುಂಚದಸ್ತ್ರಂ
ತೇನ ವ್ಯಾಪ್ತಾ ಪೃತನಾ ಪಾಂಡವಾನಾಮ್ ॥ ೩೦೯ ॥

ಅ: ಬಳಿಕ ಅರ್ಜುನ ಅವನ ಮೇಲೆ ಯುದ್ಧ ಮಾಡಲೆಂದು ಬಂದ. ಅಶ್ವತ್ಥಾಮ ಕ್ರುದ್ಧನಾಗಿ ಕಟುಮಾತುಗಳಿಂದ ಅರ್ಜುನನನ್ನು ನಿಂದಿಸುತ್ತಾ ಆಗ್ನೇಯಾಸ್ತ್ರವನ್ನು ಪ್ರಯೋಗಿಸಿದ. ಅದು ಪಾಂಡವರ ಸೇನೆಯನ್ನೆಲ್ಲ ಎಲ್ಲೆಡೆಗಳಿಂದಲೂ ಸುತ್ತುವರಿಯಿತು.

ಅಕ್ಷೌಹಿಣೀ ನಿಹತಾ ಚಾತ್ರ ಸೇನಾ
ಪಾರ್ಥಂ ಸಯಾನಂ ಹರಿರುಜ್ಜಹಾರ ।
ಜೀವಂತಮಾಲೋಕ್ಯ ಸುರೇಂದ್ರನಂದನಂ
ದ್ರೌಣಿಃ ಕೋಪಾತ್ ಕಾರ್ಮುಕಂ ಚಾಪಹಾಯ ॥ ೩೧೦ ॥

---

೩೦೯. ದೇವೈರಪಿ ಸುದುರ್ಧರ್ಷಮಸ್ತ್ರಮಾಗ್ನೇಯಮಾದದೇ ।
ದೃಶ್ಯಾದೃಶ್ಯಾನರಿಗಣಾನುದ್ದಿಶ್ಯಾಚಾರ್ಯನಂದನಃ ॥ – (ದ್ರೋಣ. ೨೦೧/೧೬/೩೬)

೩೧೦. ತತ್ರಾದ್ಭುತಮಪಶ್ಯಾಮ ಕೃತ್ಸ್ನಮಕ್ಷೌಹಿಣೀಂ ಹತಾಮ್ ॥ – ಭಾರತ (ದ್ರೋಣ. ೨೦೧/೧೬,೩೮)

೩೧೦. ತತೋ ಗಾಂಡೀವಧನ್ವಾ ಚ ಕೇಶವಶ್ಚಾಕ್ಷತಾವುಭೌ ॥
ವಿಮುಕ್ತೌ ಚ ಮಹಾತ್ಮಾನೌ ದೃಷ್ಟ್ವಾ ದ್ರೌಣಿಃ ಸುದುಃಖಿತಃ ॥
ತತೋ ದ್ರೌಣಿರ್ಧನುಸ್ಕೃತ್ವಾ ರಥಾತ್ ಪ್ರಸ್ಕಂದ್ಯ ವೇಗಿತಃ ।
ಧಿಗ್ ಧಿಕ್ ಸರ್ವಮಿದಂ ಮಿಥ್ಯೇತ್ಯುಕ್ತ್ವಾ ಸಂಪ್ರಾದ್ರವದ್ ರಣಾತ್ ॥
– ಭಾರತ (ದ್ರೋಣ. ೨೦೧/೪೦,೪೫,೪೭)

ಅ: ಆಗ ಅಲ್ಲಿ ಒಂದು ಅಕ್ಷೋಹಿಣೀ ಸೇನೆ ಹತವಾಯಿತು. ಕೃಷ್ಣ ರಥ ಸಮೇತವಾಗಿ ಅರ್ಜುನನನ್ನು ಪಾಲಿಸಿದ. ಅರ್ಜುನ ಬದುಕುಳಿದುದನ್ನು ಕಂಡು ಅಶ್ವತ್ಥಾಮ ಕೋಪದಿಂದ ಬಿಲ್ಲನ್ನು ಎಸೆದು ತೆರಳಿಬಿಟ್ಟ.

ವಿ: ೧) ಅಶ್ವತ್ಥಾಮ ಪ್ರಯೋಗಿಸಿದ ಆ ಅಪೂರ್ವವಾದ ಆಗ್ನೇಯಾಸ್ತ್ರಕ್ಕೆ ಪಾಂಡವರ ಒಂದು ಅಕ್ಷೋಹಿಣೀ ಸೇನೆ ಸುಟ್ಟುಹೋಯಿತು, ಆದರೆ ಆ ಅಸ್ತ್ರದ ಮಧ್ಯೆ ಇದ್ದರೂ ಯಾವ ಅಪಾಯವೂ ಆಗದಂತೆ ಕೃಷ್ಣ ಅರ್ಜುನನನ್ನು ರಥ ಸಮೇತನನ್ನಾಗಿಯೇ ಸಂರಕ್ಷಿಸಿದ. ತನ್ನ ಮುಖ್ಯ ಗುರಿಯಾದ ಅರ್ಜುನ ಬದುಕುಳಿದುದ್ದನ್ನು ಕಂಡು ನಿರಾಶನಾದ ಅಶ್ವತ್ಥಾಮ ಕೋಪದಿಂದ ಯುದ್ಧ ಬಿಟ್ಟು ಹೊರನಡೆದ ಎಂದರ್ಥ.

೨) ಇಲ್ಲಿ ವೇದವ್ಯಾಸರನ್ನು ವೇದಾಂತಕೃತ್ ಎಂದು ಕರೆಯುವ ಮೂಲಕ ಭಗವದ್ಗೀತೆ–ಯಲ್ಲಿ ಬಂದಿರುವ ವೇದಾಂತಕೃದ್ವೇದವಿದೇವ ಚಾಹಮ್ ಎಂಬ ವಾಕ್ಯವನ್ನು ಜ್ಞಾಪಿಸುತ್ತಾ ಸಾಕ್ಷಾತ್ ಶ್ರೀಹರಿಯೇ ವೇದವ್ಯಾಸರು ಎಂಬುದನ್ನು ಸ್ಫುಟಪಡಿಸಿರುವರು ಎಂದು ತಿಳಿಯಬೇಕು. ಹಾಗೆ ಅಂತಹ ವಿಷಮ ಪ್ರಸಂಗದಲ್ಲಿ ತಕ್ಷಣ ಆಗಮಿಸಿ ಉಪದೇಶ ನೀಡಿದ್ದೂ ಸಹ ವೇದವ್ಯಾಸರು ಸಾಕ್ಷಾತ್ ಶ್ರೀಹರಿ ಎಂಬುದಕ್ಕೆ ದ್ಯೋತಕ.

ಅಶ್ವತ್ಥಾಮರ ಯುದ್ಧತ್ಯಾಗ – ವೇದವ್ಯಾಸರ ಧರ್ಮೋಪದೇಶ

ಯಯೌ ತಮಾಗತ್ಯ ಜಗಾದ ಕೃಷ್ಣೋ
ವೇದಾಂತಕೃತ್ ಪೂರ್ಣಷಾಡ್ಗುಣ್ಯದೇಹಃ ।
ಮಾ ಯಾಹಿ ಸಾಕ್ಷಾದ್ಗಿರಿಶಃ ಸುರಾಣಾಂ
ಕಾರ್ಯಾಯ ಭೂಮೌ ಬಲವಾನಜಾಯಥಾಃ ॥ ೩೧೧ ॥

ಅ: ಆಗ ಅವನ ಬಳಿಗೆ ಬ್ರಹ್ಮಸೂತ್ರ ಬರೆದ ಪೂರ್ಣಷಾಡ್ಗುಣ್ಯದೇಹರಾದ ವೇದವ್ಯಾಸರು ಆಗಮಿಸಿ ತಿಳಿಸಿದರು. ಹೋಗದಿರು, ನೀನು ಸಾಕ್ಷಾತ್ ಶಿವನ ಅವತಾರ. ದೇವತೆಗಳ ಕಾರ್ಯಕ್ಕೆಂದು ಬಲವಂತನಾದ ನೀನು ಭೂಮಿಯಲ್ಲಿ ಜನಿಸಿರುವಿ.

ವಿ: ೧) ಅಶ್ವತ್ಥಾಮರ ಪೂರ್ಣಪ್ರಮಾಣ ಯುದ್ಧ ಈಗಷ್ಟೇ ಪ್ರಾರಂಭವಾಗಿದ್ದು ಅವರಿಂದ ಮುಂದಿನ ಮೂರು ದಿನಗಳಲ್ಲಿ ಅಪೂರ್ವವಾದ ಯುದ್ಧ ನಡೆದು ಕೊನೆಯಲ್ಲಿ ಅವರಿಂದ

---

೩೧೧. ತತಃ ಸ್ನಿಗ್ಧಾಂಬುದಾಭಾಸಂ ವೇದವ್ಯಾಸಮಕಲ್ಮಷಮ್ ।
ವೇದವ್ಯಾಸಂ ಸರಸ್ವತ್ಯಾವಾಸಂ ವ್ಯಾಸಂ ದದರ್ಶ ಹ ॥

ಅಳಿದುಳಿದ ಪಾಂಡವ ಸೇನೆ ಸೌಪ್ತಿಕಪರ್ವದಲ್ಲಿ ಹತವಾಗಬೇಕಿದೆ. ಅದನ್ನೆಲ್ಲ ಪೂರೈಸದೇ ಯುದ್ಧ–ದಿಂದ ಹೊರನಡೆಯುವುದು ಯೋಗ್ಯವಲ್ಲ ಎಂದು ವ್ಯಾಸರು ಸೂಚ್ಯವಾಗಿ ತಿಳಿಸಿದರು ಎಂದರ್ಥ.

೨) ಈ ಭಾಗದಲ್ಲಿ ತುಂಬಾ ಪ್ರಸಿದ್ಧವಾದ ಶತರುದ್ರಿಯ ಬರುವುದು. ಅದು ಅಶ್ವತ್ಥಾಮ ಶಿವನೆಂದು ತಿಳಿಸಿ ಶಿವನನ್ನು ಬಣ್ಣಿಸುವ ಪ್ರಸಂಗ. ಮೇಲ್ನೋಟಕ್ಕೆ ಶಿವ ಸರ್ವೋತ್ತಮನೆಂದು ಕಾಣುವಂತಿದ್ದರೂ ವಾಸ್ತವವಾಗಿ ಅದು ಶಿವನ ಅಂತರ್ಯಾಮಿಯಾದ ಶಿವ ಎಂಬ ವಿಷ್ಣುರೂಪದ ಹಿರಿಮೆಯನ್ನು ಪ್ರತಿಪಾದಿಸುವ ಪರಮವೈಷ್ಣವ ಭಾಗವೇ ಆಗಿದೆ ಎಂದು ತಿಳಿಯಬೇಕು.

ಮಹಚ್ಚ ಕಾರ್ಯಂ ಪುನರಸ್ತಿ ದೃಷ್ಟಂ
ತವಾಶು ತಚ್ಚ ಪ್ರತಿಪಾದಯೇತಿ ।
ತಥೋದಿತಃ ಪ್ರಾತರಿತಿ ಬ್ರುವಾಣೋ
ಯಯೌ ಪ್ರಣಮ್ಯಾಖಿಲವೇದಯೋನಿಮ್ ।
ಯಯುಸ್ತಮನ್ವೇವ ಸುಯೋಧನಾದಯೋ
ದುಃಖಾನತಾಸ್ತೇ ಶಿಬಿರಾಯ ಭೀತಾಃ ॥ ೩೧೨ ॥

ಅ: ನೀನು ಮಾಡಬೇಕಾದ ಮಹತ್ಕಾರ್ಯ ಮುಂದಿದೆ ಎಂದು ನಾನು ಬಲ್ಲೆ. ಅದನ್ನು ನೀನು ಬೇಗನೇ ಪೂರೈಸು. ವೇದವ್ಯಾಸರು ಹಾಗೆ ತಿಳಿಸಲು 'ಬೆಳಿಗ್ಗೆ' ಎಂದು ನುಡಿಯುತ್ತಾ ಅಖಿಲ ವೇದಪ್ರತಿಪಾದ್ಯರಾದ ವೇದವ್ಯಾಸರನ್ನು ವಂದಿಸಿ ಅಶ್ವತ್ಥಾಮ ತೆರಳಿಬಿಟ್ಟ. ಅವನ ಹಿಂದೆಯೇ ದುರ್ಯೋಧನಾದಿಗಳೂ ಸಹ ದುಃಖದಿಂದ ತಲೆ ತಗ್ಗಿಸಿ ಭೀತರಾಗಿ ಶಿಬಿರಕ್ಕೆ ತೆರಳಿದರು.

ವಿ: ಅಶ್ವತ್ಥಾಮರು ಆಗಲೇ ಯುದ್ಧಕ್ಕೆ ತೆರಳದೆ 'ಬೆಳಿಗ್ಗೆ' ಎಂದು ಎನ್ನುವ ಮೂಲಕ ಭೀಮನಂತೆ ಶ್ರೀಹರಿಯ ಆಜ್ಞೆಯನ್ನು ತಕ್ಷಣ ಶಿರಸಾ ವಹಿಸುವವರಲ್ಲ ಎಂಬುದನ್ನೂ ತಿಳಿಸಿದಂತಾಯಿತು. ದ್ರೋಣರ ನಿರ್ಯಾಣ ಮಾತ್ರವಲ್ಲದೇ, ಕ್ಷಣಕಾಲ ಪಾಂಡವ ಪಾಳಯದಲ್ಲಿ ಅಪಾರ ಗೊಂದಲ ಹುಟ್ಟಿಸಿದ್ದ ಅಶ್ವತ್ಥಾಮರ ನಾರಾಯಣಾಸ್ತ್ರ, ಆಗ್ನೇಯಾಸ್ತ್ರಗಳು ನಿರೀಕ್ಷಿತವಾದ ಪರಿಣಾಮವನ್ನು ಬೀರದ್ದರಿಂದ ದುರ್ಯೋಧನಾದಿಗಳು ತುಂಬಾ ದುಃಖಿತರಾಗಿ ಭಯದಿಂದ ಕಂಗೆಟ್ಟು ಶಿಬಿರಕ್ಕೆ ಮರಳಿದರು.

---

೩೧೪ 'ಯಮಃ ಕಾಲೋ ಮಾನುಷಾಣಾಂ ತಸ್ಯ ಕಾಲಃ ಸುದರ್ಶನಃ ।
ತಸ್ಯಾಪಿ ರುದ್ರಸ್ತತ್ಕಾಲೋ ಬ್ರಹ್ಮಾ ದುರ್ಗಾSಪಿ ತಸ್ಯ ತು ।
ಸಾ ಬ್ರಹ್ಮಪ್ರಲಯೇ ದೇವೀ ವರ್ತತೇ ಚಕ್ರರೂಪಿಣೀ ।
ಸಂಹರಂತೀ ಸದಾ ಲೋಕಾನ್ಸ್ವವ ಬ್ರಹ್ಮಾದಿಷು ಸ್ಥಿತಾ ।
ತಸ್ಯಾ ನಿಯಾಮಕೋ ವಿಷ್ಣುಃ ಪರಃ ಕಾಲಃ ಸ ಉಚ್ಯತೇ ।
ಕಾಲಾಭಿಮಾನಿನೀ ಸೈವ ಪ್ರಭುರ್ನ ಜಗದೀಶಿತುಃ ।
ತಸ್ಯಾಃ ಪ್ರಭುಃ ಸ ಏವೇಶೋ ವಿಷ್ಣುಃ ಸರ್ವೇಶ್ವರೇಶ್ವರಃ' ಇತಿ ಚ ॥ – ಭಾ. ತಾ. (೩/೧೨/೩೮)

ಪಾರ್ಥಾಶ್ಚ ಸರ್ವೇ ಮುದಿತಾ ಜನಾರ್ದನಂ
ಪರಂ ಸ್ತುವಂತಃ ಶಿಬಿರಾಯ ಜಗ್ಮುಃ ।
ತತ್ರಾಪಿ ರಾತ್ರಾವಮಿತಾನ್ ಹರೇರ್ಗುಣಾ-
ನನುಸ್ಮರಂತೋ ಮುಮುದುಃ ಸಮೇತಾಃ ॥ ೩೧೪ ॥

॥ ಇತಿ ಶ್ರೀಮದಾನಂದತೀರ್ಥಭಗವತ್ಪಾದಾಚಾರ್ಯವಿರಚಿತೇ ಶ್ರೀಮಹಾಭಾರತ-
ತಾತ್ಪರ್ಯನಿರ್ಣಯೇ ನಾರಾಯಣಾಸ್ತ್ರೋಪಶಮನಂ ನಾಮ ಷಡ್ವಿಂಶೋಽಧ್ಯಾಯಃ ॥೨೬॥

ಅ: ಪಾಂಡವರೆಲ್ಲ ಆನಂದಭರಿತರಾಗಿ ಸರ್ವೋತ್ತಮನಾದ ಕೃಷ್ಣನನ್ನು ಸ್ತುತಿಸುತ್ತಾ ಶಿಬಿರಕ್ಕೆ ತೆರಳಿದರು. ಅಲ್ಲೂ ರಾತ್ರಿಯಲ್ಲಿ ಶ್ರೀಹರಿಯ ಅನಂತವಾದ ಗುಣಗಳನ್ನು ಪುನಃ ಪುನಃ ಸ್ಮರಿಸುತ್ತಾ ಒಟ್ಟಾಗಿ ನಲಿದರು.

ವಿ: ೧) ದ್ರೋಣರು ಹಾಗೆ ಸೇನಾಪತಿಯಾಗಿ ಯುದ್ಧ ಮಾಡಿದ್ದು ಒಟ್ಟು ಐದು ದಿನಗಳ ಕಾಲ ಎಂದು *ಮಹಾಭಾರತದಲ್ಲಿದೆ.

೨) ದುರ್ಯೋಧನಾದಿಗಳದು ದುಃಖಾನುಭವದ ಪ್ರಸಂಗವಾದಂತೆ ಪಾಂಡವರಿಗೆ ಅದೆಲ್ಲ ಸುಖಾನುಭವದ ಪ್ರಸಂಗವಾದದ್ದು ಗಮನಾರ್ಹ. ಪಾಂಡವರು ತಮ್ಮ ಅಂತಹ ಗೆಲುವನ್ನೆಲ್ಲ ಶ್ರೀಕೃಷ್ಣನ ಪರಮಾನುಗ್ರಹದ ಫಲ ಎಂದು ಭಕ್ತಿಯಿಂದ ಸ್ಮರಿಸುತ್ತಾ ಆ ರಾತ್ರಿಯನ್ನು ಕಳೆದರು.

॥ ಶ್ರೀಮದಾನಂದತೀರ್ಥಭಗವತ್ಪಾದಾಚಾರ್ಯಪ್ರಣೀತ ಮಹಾಭಾರತತಾತ್ಪರ್ಯನಿರ್ಣಯದಲ್ಲಿ
'ನಾರಾಯಣಾಸ್ತ್ರೋಪಶಮನ'ವೆಂಬ ಇಪ್ಪತ್ತಾರನೆಯ ಅಧ್ಯಾಯ ಮುಗಿಯಿತು ॥ ೨೬ ॥

॥ ಶ್ರೀಕೃಷ್ಣಾರ್ಪಣಮಸ್ತು ॥

॥ ಇಲ್ಲಿಗೆ ಚತುರ್ಥಸಂಪುಟ ಮುಕ್ತಾಯವಾಯಿತು ॥

ಸಮರ್ಪಿತಂ ಮಯಾ ಭವೇತ್ ಸುಮಧ್ವನುತ್ತವಾಣಿನಾ ।
ರಮಾರಮೇಶಪಾದಯೋಃ ಪ್ರಭಂಜನಾಭಿಧಾಯುಜಾ ॥

❋❋❋❋❋❋

---

* ಯುದ್ಧಂ ಕೃತ್ವಾ ದಿನಾನ್ ಪಂಚ ದ್ರೋಣೋ ಹತ್ವಾ ವರೂಥಿನೀಮ್ ।
ಬ್ರಹ್ಮಲೋಕಂ ಗತೋ ರಾಜನ್ ಬ್ರಾಹ್ಮಣೋ ವೇದಪಾರಗಃ ॥ – ಭಾರತ (ದ್ರೋಣ. ೨೦೧/೧೦೦)

ವ್ಯತ್ಯಾಸಾದಿಸಪ್ತಭೇದಪ್ರತಿಪಾದಕ ಪುರಾಣವಾಕ್ಯಸಂಗ್ರಹ

ವ್ಯತ್ಯಾಸಃ ಪ್ರಾತಿಲೋಮ್ಯಂ ಚ ಗೋಮೂತ್ರೀ ಪ್ರಘಸಸ್ತಥಾ ।
ಉಕ್ಷಣಃ ಸುಧುರಃ ಸಾಧುಃ ಸಪ್ತಭೇದಾಃ ಪ್ರಕೀರ್ತಿತಾಃ ॥ ೧ ॥

ವ್ಯತ್ಯಾಸ, ಪ್ರಾತಿಲೋಮ್ಯ, ಗೋಮೂತ್ರೀ, ಪ್ರಘಸ, ಉಕ್ಷಣ, ಸುಧುರ ಮತ್ತು ಸಾಧು ಎಂಬುದಾಗಿ ಸಪ್ತಭೇದಗಳು ಎಂದು ಹೇಳಲ್ಪಟ್ಟಿವೆ.

ಶ್ರದ್ಧಧಾನಾಯ ಶಿಷ್ಯಾಯ ಪೃಚ್ಛತೇ ಮೇ ಸುತಾಯ ಚ ।
ವಿಧಿವದ್ವದ ಹೇ ತಾತ ವ್ಯತ್ಯಾಸಾದ್ಯರ್ಥನಿರ್ಣಯಮ್ ॥ ೨ ॥

ಶಿಷ್ಯನೂ, ಪುತ್ರನೂ ಆಗಿ ಶ್ರದ್ಧೆಯಿಂದ ಕೇಳುತ್ತಿರುವ ನನಗೆ, ತಂದೆಯಾದ ಬ್ರಹ್ಮದೇವರೇ! ಈ ವ್ಯತ್ಯಾಸ ಮೊದಲಾದವುಗಳ ಸ್ಪಷ್ಟನಿರ್ಣಯವನ್ನು ತಿಳಿಸಿರಿ.

ಶೃಣು ನಾರದ ವಕ್ಷ್ಯಾಮಿ ಯಾವತ್ ತೇ ಮತಿಗೋಚರಮ್ ।
ವ್ಯತ್ಯಾಸಾದಿಪ್ರಭೇದಾನಾಂ ಸಂಕೋಚಾದರ್ಥನಿರ್ಣಯಮ್ ॥ ೩ ॥

ನಾರದ! ವ್ಯತ್ಯಾಸ ಮೊದಲಾದವುಗಳ ನಿರ್ಣಯವನ್ನು ಸಂಕ್ಷೇಪವಾಗಿ ನಿನಗೆ ತಿಳಿಯುವಷ್ಟು ವಿವರಿಸುವೆ; ಕೇಳು.

ಏಷ್ವೇಕೈಕಪ್ರಭೇದಸ್ತು ಪೃಥಗ್ಭಿನ್ನಃ ಸಹಸ್ರಧಾ ।
ತಲ್ಲಕ್ಷಣಂ ತದರ್ಥಾಂಶ್ಚ ತದುದಾಹರಣಾನಿ ಚ ॥ ೪ ॥

ಇವುಗಳ ಲಕ್ಷಣ, ಅರ್ಥ ಮತ್ತು ನಿದರ್ಶನಗಳನ್ನು ತಿಳಿಸುವೆ; ಇವುಗಳಲ್ಲಿ ಪ್ರತಿಯೊಂದು ಸಹ ಅನೇಕ ತೆರನಾಗಿ ಉಂಟು.

ಮೂಲರಾಮಾಯಣೇ ಪ್ರೋಕ್ತಂ ಪಂಚರಾತ್ರಾಗಮೇಷು ಚ ।
ವಿಸ್ತರಾದ್ ವ್ಯಾಸರೂಪೇಣ ಹರಿಶ್ಚೈವಾಮಿತಾತ್ಮನಾ ॥ ೫ ॥

ಇವುಗಳನ್ನು ಮೂಲರಾಮಾಯಣದಲ್ಲೂ, ಪಂಚರಾತ್ರಾಗಮಗಳಲ್ಲೂ, ಅಮಿತ ಸ್ವರೂಪನಾದ ವೇದವ್ಯಾಸ ರೂಪದ ವಿಷ್ಣುವು ವಿಸ್ತಾರವಾಗಿ ತಿಳಿಸಿರುವನು.

ತೇ ಸರ್ವೇಽನಂತವೇದಾರ್ಥನಿರ್ಣಯಾಯೈವ ಕೀರ್ತಿತಾಃ ।
ತತಃ ಕಲಿಬಲಾನ್ಮರ್ತ್ಯಾ ಮಂದಾಯ್ರ್ಯುಮರ್ತಿಶಾಲಿನಃ ॥ ೬ ॥

ಇವೆಲ್ಲವೂ ಅನಂತವೇದಗಳ ತಾತ್ಪರ್ಯವನ್ನು ಗ್ರಹಿಸಲು ಅವಶ್ಯವಾಗಿವೆ. ಕಲಿಯ ಪ್ರಭಾವದಿಂದಾಗಿ ಮನುಷ್ಯರೆಲ್ಲ ಅಲ್ಪ ಆಯುಷ್ಯ ಅಲ್ಪಬುದ್ಧಿಗಳನ್ನು ಹೊಂದಿದವರಾದರು.

ದೃಷ್ಟ್ವಾ ವೇದಾನ್ ವಿಭಜ್ಯೈವ ತದರ್ಥಜ್ಞಾಪನಾಯ ಚ ।
ಕೃತ್ವಾ ಲಕ್ಷಣಶಾಸ್ತ್ರಂ ಚ ತಸ್ಮಿನ್ನಪಿ ಚ ಈರಿತಾಃ ॥ ೭ ॥

ಅವರನ್ನು ಕಂಡು, ವೇದಗಳನ್ನು ವಿಭಾಗ ಮಾಡಿ ಅವುಗಳ ಅರ್ಥವನ್ನು ತಿಳಿಸಲೆಂದು ಲಕ್ಷಣಶಾಸ್ತ್ರವನ್ನು ಶ್ರೀವೇದವ್ಯಾಸರು ರಚಿಸಿದರು.

ವ್ಯತ್ಯಾಸೇನೈವ ಸಂಕೋಚಾತ್ ಸ್ವೋಕ್ತವೇದಾರ್ಥನಿರ್ಣಯಃ ।
ಯಾವದ್ಭಿಃ ಸ್ಯಾತ್ ಪ್ರಭೇದಾನಾಂ ಪ್ರಭೇದೈಸ್ತೇ ಚ ನೋಽಖಿಲಾಃ ॥ ೮ ॥

ವ್ಯತ್ಯಾಸಾದಿಭೇದಗಳಿಂದ ಸಂಕ್ಷೇಪವಾಗಿ ಅದರಲ್ಲಿ ವೇದಾರ್ಥಗಳ ನಿರ್ಣಯವು ಉಕ್ತವಾಗಿದೆ; ಎಷ್ಟು ಪ್ರಭೇದಗಳುಂಟೋ ಅಷ್ಟು ಪ್ರಭೇದಗಳನ್ನು ಅವರು ನಮಗೆ ಅರುಹಿರುವರು.

ಇದಾನೀಂ ತತ್ ಸಮಾಲೋಡ್ಯ ನಿಶ್ಚಿತ್ಯೈವ ಪ್ರವಚ್ಮಿ ತೇ ।
ಭಾರತಸ್ಯ ಪುರಾಣಾನಾಂ ಯಾವದ್ಭಿಃ ಸ್ಯಾದ್ವಿನಿರ್ಣಯಃ ।
ತತ್ರ ಭೇದಾನ್ ತದರ್ಥಾಂಶ್ಚ ಶೃಣುಷ್ವೈಕಾಗ್ರಮಾನಸಃ ॥ ೯ ॥

ನಾನೀಗ ಅವನ್ನೆಲ್ಲ ವಿಮರ್ಶಿಸಿ, ನಿರ್ಣಯ ಮಾಡಿ ನಿನಗೆ ತಿಳಿಸುತ್ತಿರುವೆ. ಅವುಗಳಿಂದ ಮಹಾಭಾರತ ಮತ್ತು ಪುರಾಣಗಳ ಅರ್ಥನಿರ್ಣಯವು ಸ್ಪಷ್ಟವಾಗಿ ಆಗುವುದು; ಆ ಭೇದಗಳನ್ನು ಮತ್ತು ಅವುಗಳ ಅರ್ಥಗಳನ್ನು ಏಕಾಗ್ರಮನಸ್ಸಿನಿಂದ ಆಲಿಸು.

ವ್ಯತ್ಯಾಸೋ ವ್ಯತ್ಯಯಃ ಪ್ರೋಕ್ತಃ ಪುಂವ್ಯತ್ಯಾಸಸ್ತದಾದಿಮಃ ।
ಯಥಾऽऽऽರಣ್ಯೇ ಪರ್ವಣಿ ತು ಕೇಶವಃ ಪ್ರಾಹ ಪಾರ್ಷತೀಮ್ ॥ ೧೦ ॥

ಅದಲುಬದಲಾಗಿ ಹೇಳುವುದು 'ವ್ಯತ್ಯಾಸ'; ಪುರುಷವ್ಯತ್ಯಾಸ ಅದರಲ್ಲಿ ಮೊದಲನೆಯದು; ಅರಣ್ಯಪರ್ವದಲ್ಲಿ ಶ್ರೀಕೃಷ್ಣನು ದ್ರೌಪದಿಗೆ ನುಡಿದ ಮಾತು ಇದಕ್ಕೆ ನಿದರ್ಶನ.

ಸಾಂತ್ವಯನ್ ಧಾರ್ತರಾಷ್ಟ್ರಾಂಶ್ಚ ಶತಮರ್ಜುನಸಾಯಕೈಃ ।
ಮೃತಾನ್ ಸಂದರ್ಶಯಿಷ್ಯೇऽಹಂ ಇತಿ ಪುಂವ್ಯತ್ಯಯಃ ಸ್ಮೃತಃ ॥ ೧೧ ॥

ದ್ರೌಪದಿಯನ್ನು ಸಾಂತ್ವನ ಪಡಿಸುತ್ತ ಶ್ರೀಕೃಷ್ಣ ನುಡಿದ; 'ಅರ್ಜುನನ ಬಾಣಗಳಿಂದ ನೂರು ಜನ ಕೌರವರು ಹತರಾಗುವುದನ್ನು ನಾನು ನಿನಗೆ ತೋರಿಸುವೆ'. ಇದು ಪುರುಷ–ವ್ಯತ್ಯಾಸವೆನ್ನಿಸುವುದು.

ವಿ: ನಿಜವಾಗಿಯೂ ಕೌರವರನ್ನು ಕೊಂದವನು ಭೀಮಸೇನನಾದ್ದರಿಂದ, ಇಲ್ಲಿ ಅರ್ಜುನನಿಂದ ಕೊಲ್ಲಿಸುವೆನು ಎಂದು ಹೇಳಿರುವುದು ಪುರುಷವ್ಯತ್ಯಾಸ ಎಂಬ ಪ್ರಭೇದದಿಂದ ಎಂದು ಭಾವ.

ಹರಿವಂಶೇ ಹರಿಃ ಕೃಷ್ಣೋ ಗೋಪಗೋಜನಸಂವೃತಃ ।
ಚಿಕ್ರೀಡೇ ಜಾಹ್ನವೀತೀರೇ ವ್ಯತ್ಯಾಸೋ ದೈಶಿಕಃ ಸ್ಮೃತಃ ॥ ೧೨ ॥

ಹರಿವಂಶದಲ್ಲಿ ಶ್ರೀಕೃಷ್ಣನು ಗೋಪರಿಂದಲೂ ಗೋಜನರಿಂದಲೂ ಕೂಡಿ ಗಂಗೆಯ ತೀರದಲ್ಲಿ ವಿಹರಿಸಿದನು ಎಂದು ಹೇಳಿರುವರು; ಇದು ದೇಶ ವ್ಯತ್ಯಾಸ.

ವಿ: ಇಲ್ಲಿ 'ಯಮುನಾತೀರದಲ್ಲಿ' ಎನ್ನುವ ಬದಲು ಜಾಹ್ನವೀತೀರದಲ್ಲಿ ಎಂದು ಹೇಳಿರುವುದು ದೈಶಿಕವ್ಯತ್ಯಾಸ.

ಮಾರ್ಕಂಡೇಯೇ ತಥಾ ಪೂರ್ವಂ ರಾಮಃ ಕೃತಯುಗೇಽಹನತ್ ।
ದಶಕಂಠಂ ತಥೇತ್ಯಾದೌ ವ್ಯತ್ಯಾಸಃ ಕಾಲಿಕಃ ಸ್ಮೃತಃ ॥ ೧೩ ॥

ಮಾರ್ಕಂಡೇಯ ಪುರಾಣದಲ್ಲಿ ಶ್ರೀರಾಮನು ಕೃತಯುಗದಲ್ಲಿ ರಾವಣನನ್ನು ಸಂಹರಿಸಿದನು ಎಂದು ಹೇಳಲಾಗಿದೆ; ಇದು **ಕಾಲವ್ಯತ್ಯಾಸ**.

ವಿ: ಇಲ್ಲಿ ತ್ರೇತಾಯುಗ ಎನ್ನುವುದರ ಬದಲು ಕೃತಯುಗ ಎಂದಿರುವುದು **ಕಾಲವ್ಯತ್ಯಾಸ** ಎಂದು ಭಾವ.

ಹಿಂಸಾಕರ್ಮರತತ್ವಾತ್ತು ಹಿಂಸಾರ ಇತಿ ಕೇಸರಿಮ್ ।
ವ್ಯತ್ಯಾಸಃ ಸಿಂಹ ಇತ್ಯಾದಾವಕ್ಷರವ್ಯತ್ಯಯಃ ಸ್ಮೃತಃ ॥ ೧೪ ॥

ಹಿಂಸಾಕಾರ್ಯದಲ್ಲಿ ರತವಾದ್ದರಿಂದ ಸಿಂಹವನ್ನು 'ಸಿಂಹ' ಎಂದು ಕರೆಯುವುದು **'ಅಕ್ಷರವ್ಯತ್ಯಾಸ'**ವೆನ್ನಿಸುವುದು.

ಕ್ವಚಿದ್ರಾಮೋ ದಾಶರಥಿರ್ಹತ್ವಾ ಕಂಸಮಪಾಲಯತ್[೧] ।
ಮಧುರಾಂ ಪುರಮಿತ್ಯಾದೌ ಕಥಾವ್ಯತ್ಯಯ ಈರಿತಃ ॥ ೧೫ ॥

ಕೆಲವೆಡೆ ದಾಶರಥಿ ರಾಮನು ಕಂಸನನ್ನು ಕೊಂದು ಮಧುರೆಯನ್ನು ಪಾಲಿಸಿದನು ಎಂದು ಹೇಳಿರುವುದುಂಟು; ಇದನ್ನು **'ಕಥಾವ್ಯತ್ಯಾಸ'** ಎಂದು ತಿಳಿಯಬೇಕು.

ವಿಪರೀತಕ್ರಮಂ ಯತ್ರ ಪ್ರತಿಲೋಮಂ ತದೀರಿತಮ್ ।
ತದ್ಭಾವಃ ಪ್ರಾತಿಲೋಮ್ಯಂ ಚ ತತ್ಭೇದಃ ಕ್ವಚಿದ್ಭವೇತ್ ॥ ೧೬ ॥

ಕ್ರಮವನ್ನು ಹಿಂದು ಮುಂದಾಗಿ, ವಿರುದ್ಧವಾಗಿ ಹೇಳುವುದಕ್ಕೆ **'ಪ್ರಾತಿಲೋಮ್ಯ'** ಎನ್ನುವರು.

---

೧. ಕಂಸಮಪೀಪಲತ್ – (ಪಾಠಾಂತರ)

ವಿಧಿಪ್ರಾಣೌ ತಯೋರ್ಭಾರ್ಯೇ ಗರುತ್ಮಚ್ಛೇಷಶಂಕರಾಃ ।
ಷಣ್ಮಹಿಷ್ಯ ಹರೇಸ್ತದ್ವತ್ ಸೌಪರ್ಣೀ ವಾರುಣೀ ಉಮಾ ॥ ೧೭ ॥

ಇಂದ್ರಕಾಮೌ ತಯೋಃ ಪತ್ನ್ಯೌ ಕ್ರಮಾಚ್ಛತಗುಣಾಧಿಕಾಃ ।
ಇತ್ಯಾಗ್ನೇಯಪುರಾಣೋಕ್ತಂ ತಾರತಮ್ಯಪ್ರಕಾಶನಮ್ ।
ಇತ್ಯಾದಾವರ್ಥನಿರ್ವಾಹಃ ಪ್ರಾತಿಲೋಮ್ಯಪ್ರಭೇದತಃ ॥ ೧೮ ॥

ಬ್ರಹ್ಮವಾಯುಗಳು, ಅವರ ಪತ್ನಿಯರು, ಗರುಡಶೇಷ ರುದ್ರರು, ಶ್ರೀಹರಿಯ ಷಣ್ಮಹಿಷಿಯರು, ಸೌಪರ್ಣೀ, ವಾರುಣಿ ಮತ್ತು ಗಿರಿಜೆಯರು, ಇಂದ್ರ ಕಾಮರು ಮತ್ತು ಅವರ ಪತ್ನಿಯರು ಕ್ರಮವಾಗಿ ನೂರುಗುಣ ಅಧಿಕರು ಎಂಬ ಆಗ್ನೇಯ ಪುರಾಣದಲ್ಲಿನ ತಾರತಮ್ಯಕ್ರಮದ ಮಾತು ಇದಕ್ಕೆ ಉದಾಹರಣೆ: ಇವರೆಲ್ಲ ಕ್ರಮವಾಗಿ ನೂರುಗುಣ ಕಡಿಮೆಯವರು ಎನ್ನಬೇಕಾಗಿತ್ತು; ಹಾಗೆ ಹೇಳದೆ, 'ಅಧಿಕರಾದವರು' ಎಂದು ವಿರುದ್ಧ ರೀತಿಯಲ್ಲಿ ಹೇಳಿರುವುದರಿಂದ ಇದು **'ಪ್ರಾತಿಲೋಮ್ಯ'** ಎನ್ನಿಸುವುದು.

ಕಲಿಶ್ಚ ದ್ವಾಪರಸ್ತ್ರೇತಾ ಕೃತಂ ಪುಣ್ಯಂ ಪುರಾ ಯುಗಾಃ ।
ಕ್ರಮಾದಿತ್ಯಾದಿಷು ಪ್ರಾತಿಲೋಮ್ಯಾದುಕ್ತೋ ವಿನಿರ್ಣಯಃ ॥ ೧೯ ॥

ಕಲಿ, ದ್ವಾಪರ, ತ್ರೇತಾ ಮತ್ತು ಕೃತ – ಈ ನಾಲ್ಕು ಯುಗಗಳು ಕ್ರಮವಾಗಿ ಹೆಚ್ಚು ಪುಣ್ಯಕರ ಎಂದಿರುವುದು ಸಹ ಇಂತಹ **'ಪ್ರಾತಿಲೋಮ್ಯ'**ಕ್ಕೆ ಮತ್ತೊಂದು ಉದಾಹರಣೆ.

ಏಃ ಕ್ರಮವಾಗಿ ಕಡಿಮೆ ಪುಣ್ಯಕರ ಎನ್ನದೆ, ಹೆಚ್ಚು ಪುಣ್ಯಕರ ಎಂದಿರುವುದೇ ಇಲ್ಲಿಯ **ಪ್ರಾತಿಲೋಮ್ಯ**.

ವತ್ಸೋ ಗೋಸ್ತನಮಕ್ಷೀರಂ ಯದಾऽऽದೌ ಪಿಬತಿ ಸ್ಫುಟಮ್ ।
ತದಾ ಗೋಮೂತ್ರೋದಯಃ ಸ್ಯಾತ್ ಕ್ಷೀರಸ್ಯಾಧಿಕ್ಯಸಿದ್ಧಯೇ ॥ ೨೦ ॥

ಯದಾ ಗೋಪೋ ದುಹತ್ಯೇನಾಂ ತದಾ ಮೂತ್ರೋ ನ ವಿದ್ಯತೇ ।
ಪಶ್ಚಾತ್ ಪಿಬತಿ ವತ್ಸೇ ತು ಪುನರ್ಮೂತ್ರೋದಯೋ ಭವೇತ್ ॥ ೨೧ ॥

ಏವಂ ಕ್ವಚಿತ್ ಕಥಾಸು ಸ್ಯಾದಾದಾವಂತೇ ಚ ಸಂಗತಿಃ ।
ಮಧ್ಯೇ ಸಂಗತಿವಿಚ್ಛೇದಃ ಕಥಾಂತರಸಮಾಗಮಃ ॥ ೨೨ ॥

ಏವಮಾದಿಷು ವಿಜ್ಞೇಯೋ ಗೋಮೂತ್ರೀ ಭೇದತಃ ಕ್ರಮಾತ್ ।
ಯಥಾऽऽರಣ್ಯೇ ಪಾಂಡವಾನಾಂ ಕಥಾಸಂಗತಿಸಂಮತಾಃ ॥ ೨೩ ॥

ತಾನ್ ವಿಹಾಯೈವ ತನ್ಮಧ್ಯೇ ಹರಿಶ್ಚಂದ್ರಸ್ಯ ಭೂಭೃತಃ ।
ನಳಸ್ಯ ರಾಘವಸ್ಯಾಪಿ ಗೋಮೂತ್ರೀ ಭೇದತಃ ಕ್ರಮಾತ್ ॥ ೨೪ ॥

ಕರುವು ಗೋವಿನ ಸ್ತನವನ್ನು ಕುಡಿಯತೊಡಗಿದಾಗ ಹಸುವು ಹಾಲನ್ನು ಹೆಚ್ಚಾಗಿ ಸುರಿಸಲೆಂದು ಮೂತ್ರವನ್ನು ಸುರಿಸುತ್ತದೆ; ಆದರೆ ಗೋವಳಿಗನು ಕರೆಯತೊಡಗಿದಾಗ ಮೂತ್ರವನ್ನು ನಿಲ್ಲಿಸುತ್ತದೆ; ಮತ್ತೆ ಕರುವು ಕುಡಿಯ ತೊಡಗಿದಾಗ ಪುನಃ ಮೂತ್ರವನ್ನು ಸುರಿಸುತ್ತದೆ. ಹೀಗೆ ಕೆಲವು ಕಥೆಗಳಲ್ಲಿ ಆದಿಯಲ್ಲೂ ಅಂತ್ಯದಲ್ಲೂ ಕಥಾ ಸಂಗತಿ ಇದ್ದರೆ, ಮಧ್ಯೆ ಬೇರೆ ವಿಚಾರವು ಬಂದು ಕಥಾವಿಚ್ಛೇದವಾಗಿ ಬೇರೊಂದು ಕಥೆ ಬಂದಿರುತ್ತದೆ. ಇಂತಹ ಪ್ರಸಂಗದಲ್ಲಿ 'ಗೋಮೂತ್ರೀ' ಎಂಬ ಪ್ರಭೇದವಿರುವುದು ಎಂದು ತಿಳಿಯಬೇಕು. ವನಪರ್ವದಲ್ಲಿ ಪಾಂಡವರ ಕಥೆಯ ಮಧ್ಯೆ ಹರಿಶ್ಚಂದ್ರ, ನಳ, ಶ್ರೀರಾಮ ಮೊದಲಾದವರ ಕಥೆಗಳು ಬಂದಿರುವುದು ಈ ಗೋಮೂತ್ರೀ ಪ್ರಭೇದದಿಂದ ಎಂದು ತಿಳಿಯಬೇಕು.

ಏವಂ ಸರ್ವಪುರಾಣೇಷು ಮಧ್ಯೇ ಚಿತ್ರಕಥಾಃ ಸೃತಾಃ ।
ಆದ್ಯಂತಯೋಃ ಸಂಗತಿಶ್ಚ ಗೋಮೂತ್ರೀಭೇದತಃ ಸೃತಾಃ ॥ ೨೫ ॥

ಹೀಗೆ ಸಕಲ ಪುರಾಣಗಳಲ್ಲೂ ಮುಖ್ಯ ಕಥೆಗಳ ಮಧ್ಯೆ ಮಧ್ಯೆ ಬರುವ ಅನೇಕ ತೆರನಾದ ಕಥೆಗಳೆಲ್ಲ ಈ 'ಗೋಮೂತ್ರೀ' ಭೇದವನ್ನು ಆಶ್ರಯಿಸಿ ಹೊರಟ ಕಥೆಗಳು ಎಂದು ತಿಳಿಯಬೇಕು.

ಪ್ರಥಸಃ ಸರ್ವಶಾಸ್ತ್ರಾರ್ಥವಿರುದ್ಧಾರ್ಥಾನುವರ್ಣನಮ್ ।
ಕ್ವಚಿನ್ಮೋಹಾಯಾಸುರಾಣಾಂ ಪುರಾಣೇಷು ತಥೋಚ್ಯತೇ ।
ತಾದೃಶಾನಾಂ ತು ವಾಕ್ಯಾನಾಂ ಗ್ರಾಹ್ಯೋऽರ್ಥಸ್ತ್ವವಿರೋಧತಃ ॥ ೨೬ ॥

ಸಕಲಸಚ್ಛಾಸ್ತ್ರಗಳಿಗೂ ವಿರುದ್ಧವಾದ ವಿಷಯಗಳನ್ನು ಅಸುರರ ಮೋಹನಕ್ಕೋಸ್ಕರ ತತ್ತ್ವವೆಂಬಂತೆ ಕೆಲವು ಪುರಾಣಗಳಲ್ಲಿ ಹೇಳುವುದುಂಟು. ಇದನ್ನು '**ಪ್ರಕ್ಷಸ**'ವೆನ್ನುವರು.

ವಿ: ಇಂತಹ ವಾಕ್ಯಗಳಿಗೆಲ್ಲ ಶಾಸ್ತ್ರಗಳಿಗೆ ವಿರುದ್ಧವಲ್ಲದ ರೀತಿಯ ಅರ್ಥವನ್ನು ಮಾಡಿಕೊಳ್ಳಬೇಕು.

ಮೂರ್ಖಂ ದೃಷ್ಟ್ವಾ ಸುತಂ ತಾತೋ ವಿಷಂ ಭುಂಕ್ಷ್ವೇತಿ ವಕ್ಷ್ಯತಿ ।
ತಚ್ಛ್ರುತ್ವಾ ತದ್ವಿರುದ್ಧಾರ್ಥಮಾಚರನ್ನ ತಥಾऽऽಚರೇತ್ ॥ ೨೬ ॥

ಮೂರ್ಖನಾದ ಮಗನನ್ನು ಕಂಡು ತಂದೆ ಹೇಳುವುದುಂಟು; 'ವಿಷ ತಿನ್ನು' ಎಂದು. ಆ ಮಾತನ್ನು ಕೇಳಿ ವಿಷವನ್ನು ತಿನ್ನದೆ, ಅದರ ಹಿಂದಿನ ಮರ್ಮವನ್ನು ತಿಳಿದುಕೊಂಡು ಸರಿಯಾಗಿ ನಡೆದು ಕೊಳ್ಳಬೇಕಲ್ಲವೇ!

ಏವಂ ಸರ್ವಸ್ಯ ಜಗತಃ ಪಿತಾ ಗುರುರುದಾರಧೀಃ ।
ವ್ಯಾಸೋऽನ್ಯಥಾ ಕ್ವಚಿದ್ಭಕ್ತಿಹಿತಾಯ ಸ್ವಜನಾಯ ಚ ॥ ೨೮ ॥

ಹೀಗೆ ಜಗತ್ತಿನ ತಂದೆಯೂ, ಗುರುವೂ ಆದ ಕೃಪಾಲು ಶ್ರೀವೇದವ್ಯಾಸರು, ತನ್ನ ಭಕ್ತ ಜನರ ಹಿತಕ್ಕೆಂದು ಕೆಲವೊಮ್ಮೆ ಬೇರೆ ತೆರನಾಗಿ ಹೇಳುವುದುಂಟು.

ತಥಾ ಜಗದಸತ್ಯಂ ಚ ಮಿಥ್ಯಾಭೂತಂ ನಿರೀಶ್ವರಮ್ ।
ಅಪ್ರತಿಷ್ಠಿತಮಜ್ಞೇಯಂ ಹರೇರ್ಜೀವೈರಭಿನ್ನತಾಮ್ ।
ನೀಚತಾಮವರೇಭ್ಯಶ್ಚ ದೇವೇಭ್ಯಶ್ಚ ಜರಾಮೃತೀ ॥ ೨೯ ॥

ಜನ್ಮಾದಿದೋಷಸಂಪರ್ಕಃ ನಿರ್ಗುಣತ್ವಮಪೂರ್ಣತಾ ।
ಅಸರ್ವಜ್ಞತ್ವಮಜ್ಞತ್ವಮಭೇದೋ ಜಡಜೀವಯೋಃ ॥ ೩೦ ॥

ಜಡಯೋರ್ಜೀವಯೋರ್ವಾऽಪಿ ಜಡಸರ್ವೇಶಯೋರಪಿ ।
ಅನಧೀನಂ ಜಗದ್ವಿಷ್ಣೋರಸ್ವಾತಂತ್ರ್ಯಂ ಹರೇಸ್ತಥಾ ॥ ೩೧ ॥

ಸ್ವತಂತ್ರತಾ ಚ ಜೀವಸ್ಯ ಸರ್ವಜ್ಞತ್ವಮದುಃಖಿತಾ ।
ವಿಷ್ಣೋಃ ಪ್ರಾಕೃತದೇಹಾದಿಃ ಸ್ವಾವತಾರವಿಪರ್ಯಯಃ ।
ಇತ್ಯಾದೌ ಪ್ರಭಸಾದ್ಭೇದಾತ್ ಗ್ರಾಹ್ಯೋಽರ್ಥಸ್ತ್ವವಿರೋಧತಃ ॥ ೩೨ ॥

'ಜಗತ್ತು ಮಿಥ್ಯ', 'ಇದಕ್ಕೆ ಸ್ವಾಮಿಯಿಲ್ಲ', 'ಇದಕ್ಕೆ ನೆಲೆಯೂ ಇಲ್ಲ; ಇದು ಜ್ಞಾನ ವಿಷಯವಲ್ಲ; ಶ್ರೀಹರಿಯು ಜೀವರಿಂದ ಅಭಿನ್ನನು; ಅವನಿಗಿಂತ ಕಡಿಮೆಯವರಾದ ಬ್ರಹ್ಮಾದಿದೇವತೆಗಳಿಗಿಂತ ಕಡಿಮೆಯಾದವನು; ಅವನಿಗೆ ಹುಟ್ಟುಸಾವುಗಳುಂಟು; ಜನ್ಮಾದಿ ದೋಷಗಳ ಸಂಪರ್ಕ ಉಂಟು; ಅವನು ನಿರ್ಗುಣ; ಅಪೂರ್ಣ; ಸರ್ವಜ್ಞನಲ್ಲ; ಅಜ್ಞಾನಿ; ಜೀವ ಮತ್ತು ಜಡಗಳಿಗೂ ಭೇದವಿಲ್ಲ; ಜಡ ಜಡಗಳಿಗೂ, ಜೀವ ಜೀವರಿಗೂ ಭೇದವಿಲ್ಲ, ಜಡ ಈಶರಿಗೂ ಭೇದವಿಲ್ಲ; ಜಗತ್ತು ವಿಷ್ಣುವಿಗೆ ಅಧೀನವಾಗಿಲ್ಲ; ಶ್ರೀಹರಿಯು ಅಸ್ವತಂತ್ರ; ಜೀವನು ಸ್ವತಂತ್ರ; ಸರ್ವಜ್ಞ, ದುಃಖಿಯಲ್ಲದವನು; ವಿಷ್ಣುವಿಗೆ ಪ್ರಾಕೃತದೇಹಾದಿಗಳು ಉಂಟು; ಅವನ ಅವತಾರಗಳನ್ನು ತಪ್ಪಾಗಿ ಹೇಳುವುದು ಮೊದಲಾದ ಕಡೆಗಳಲ್ಲಿ 'ಪ್ರಭಸ'ವೆಂಬ ಭೇದವಿದೆ ಎಂದು ತಿಳಿದುಕೊಳ್ಳಬೇಕು. ಶಾಸ್ತ್ರದ ಮುಖ್ಯಪ್ರಮೆಯಕ್ಕೆ ವಿರೋಧವಾಗದಂತಹ ಸರಿಯಾದ ಅರ್ಥಗಳನ್ನೇ ಇಂತಹ ಮಾತುಗಳಿಗೆ ತಿಳಿದುಕೊಳ್ಳಬೇಕು.

ಪ್ರಾಮಾಣ್ಯಮೇಕದೇಶಸ್ಯಾನ್ಯಸ್ಯೈವಾಪ್ರಮಾಣತಾ ।
ಯತ್ರ ತತ್ರೋಕ್ಷಣಾದ್ ಭೇದಾತ್ ಗ್ರಾಹ್ಯೋಽರ್ಥೋ ನ ಚಾಪರಃ ॥೩೩॥

ಕೆಲವೊಮ್ಮೆ ಹೇಳುತ್ತಿರುವ ಒಂದು ವಿಷಯ ಪ್ರಮಾಣವಾಗಿದ್ದರೆ, ಮತ್ತೊಂದು ವಿಷಯ ಅಪ್ರಮಾಣವಾಗಿರುತ್ತದೆ; ಇಂತಹ ಭೇದವನ್ನು 'ಉಕ್ಷಣ' ಎಂದು ತಿಳಿದು,ಅಲ್ಲಿ ಸರಿಯಾದ ಅರ್ಥವನ್ನು ಮಾತ್ರ ಗ್ರಹಿಸಿ ಉಳಿದದ್ದನ್ನು ತೊರೆಯಬೇಕು.

ಉಕ್ತಂ ರಾಮಾಯಣೇ ಗಂಗಾಪಾರ್ವತ್ಯೌ ಹಿಮವತ್ಸುತೇ ।
ರುದ್ರಸ್ಯ ವಲ್ಲಭೇಽತಸ್ತಂ ಗಂಗಾಧರಮುಮಾಪತಿಮ್ ॥ ೩೪ ॥

ರಾಮಾಯಣದಲ್ಲಿ ಗಂಗಾ ಮತ್ತು ಪಾರ್ವತಿಯರು ಹಿಮವಂತನ ಪುತ್ರಿಯರು; ಮತ್ತು ಶಿವನ ಪತ್ನಿಯರು; ಅದಕ್ಕೆಂದೇ ಶಿವನನ್ನು ಗಂಗಾಧರ, ಉಮಾಪತಿ ಎನ್ನುವರು ಎಂದು ಉಕ್ತವಾಗಿದೆ.

ಪ್ರಾಹುಸ್ತ್ರೇರದ್ಯಾಹ್ಯಂ ಪೂರ್ವಂ ತ್ಯಾಜ್ಯಂ ಸತಾಂ ಮತೇ ।
(ಉಚ್ಛಿಷ್ಟಂ ಶಿವನಿರ್ಮಾಲ್ಯಂ ವಮನಂ ಮೃತಕರ್ಪಟಮ್ ।
ಕಾಕವಿಷ್ಠಾಸಮುದ್ಭೂತಂ ಪಂಚ ಪೂತಾನಿ ಭಾರತ ॥)
– ಇತ್ಯಾದೌ ಉಕ್ಷಣಾದ್ ಭೇದಾತ್ ತತ್ತ್ವಂ ನಿಶ್ಚೀಯತೇ ಬುಧೈಃ ॥ ೩೫ ॥

ಇದರಲ್ಲಿ ಶಿವನಿಗೆ ಗಂಗಾಧರ, ಉಮಾಪತಿ ಎಂದು ಹೆಸರುಗಳಿರುವುದು ನಿಜ; ಪಾರ್ವತಿಯು ಅವನ ಪತ್ನಿ ಎಂಬುದೂ ನಿಜ ; ಆದರೆ ಗಂಗೆಯು ಅವನ ಪತ್ನಿ ಎಂಬುದು ಮಾತ್ರ ಸರಿಯಲ್ಲ (ಗಂಗೆಯು ವರುಣ ಪತ್ನಿ) ಎಂದು ಪ್ರಮೆಯವನ್ನು ಗ್ರಹಿಸಬೇಕು. ಇಂತಹ ಸ್ಥಳಗಳಲ್ಲೆಲ್ಲ 'ಉಕ್ಷಣ' ಎಂಬ ಭೇದದಿಂದ ವಿವೇಕಿಗಳು ನಿಜವಾದ ಅರ್ಥವನ್ನು ಗ್ರಹಿಸಬೇಕು.

ಕ್ರಮಂ ಚ ವ್ಯುತ್ಕ್ರಮಂ ತ್ಯಕ್ತ್ವಾ ಯತ್ರ ಬೋಧಃ ಕ್ರಮೋದ್ಗಮಃ ।
ತತ್ರೈವ ಸುಧುರಾದ್ಭೇದಾದ್ ಗ್ರಾಹ್ಯೋಽರ್ಥೋ ಬಹುಸಂಮತಃ ॥ ೩೬ ॥

ಕ್ರಮ ಮತ್ತು ವ್ಯುತ್ಕ್ರಮ ಎರಡನ್ನು ಬಿಟ್ಟು ಯಾವ ಕ್ರಮವನ್ನೂ ಗಮನದಲ್ಲಿರಿಸಿಕೊಳ್ಳದೆ ವಿಷಯಗಳನ್ನು ನಿರೂಪಿಸುವಲ್ಲಿ 'ಸುಧುರ'ವೆಂಬ ಭೇದವಿದೆ ಎಂದು ತಿಳಿದು, ಅದಕ್ಕೆ ಬಹುವಾಕ್ಯಗಳಿಗೆ ಸಂಮತವಾದ ರೀತಿಯಲ್ಲಿ ಸರಿಯಾದ ಅರ್ಥವನ್ನು ತಿಳಿದುಕೊಳ್ಳಬೇಕು.

ರೂಪಂ ಶಬ್ದಶ್ಚ ಗಂಧಶ್ಚ ಸ್ಪರ್ಶಶ್ಚಾಪಿ ತಥಾ ರಸಃ ।
ವ್ಯೋಮಾದಿಪಂಚಭೂತಾನಾಂ ಗುಣಾ ಹ್ಯೇತೇ ವಿಶೇಷತಃ ॥ ೩೭ ॥

ಇತ್ಯುಕ್ತಂ ಪಂಚರಾತ್ರೇ ತು ಭೇದಾಶ್ಚ ಸುಧುರಾತ್ ತಥಾ ।
ತತ್ರ ನೋಕ್ತಪ್ರಕಾರೇಣ ಗ್ರಾಹ್ಯೋಽರ್ಥಸ್ತು ಯಥಾಕ್ರಮಮ್ ॥ ೩೮ ॥

ರೂಪ, ಶಬ್ದ, ಗಂಧ, ಸ್ಪರ್ಶ ಮತ್ತು ರಸ – ಇವುಗಳು ಆಕಾಶಾದಿ ಪಂಚಭೂತಗಳಿಗೆ ವಿಶೇಷಗುಣಗಳಾಗಿವೆ (ಎಂಬುದು ಇದಕ್ಕೆ ಉದಾಹರಣೆ).

ಪಂಚರಾತ್ರದಲ್ಲಿ ಹೀಗೆ ಉಕ್ತವಾಗಿದೆ; ಇದು 'ಸುಧುರ' ವೆಂಬ ಭೇದವನ್ನು ಆಶ್ರಯಿಸಿ ಹೇಳಿದ ಮಾತು. ಇಲ್ಲಿ ರೂಪ ಶಬ್ದಗಳು ಆಕಾಶಾದಿಗಳ ಗುಣಗಳು ಎಂಬುದನ್ನು ಮಾತ್ರ ಗ್ರಹಿಸಬೇಕೇ ಹೊರತು ಕ್ರಮವಾಗಿ ಅಥವಾ ವ್ಯುತ್ಕ್ರಮವಾಗಿ ಆಕಾಶಾದಿಗಳ ಗುಣಗಳು ಎಂದಲ್ಲ.

ವಿ: ಶಬ್ದ, ಸ್ಪರ್ಶ, ರೂಪ, ರಸ, ಗಂಧಗಳು ಕ್ರಮವಾಗಿ ಆಕಾಶ, ವಾಯು, ತೇಜಸ್ಸು, ನೀರು ಮತ್ತು ಪೃಥಿವಿಯ ವಿಶೇಷ ಗುಣಗಳು ಎಂಬುದನ್ನು ಪ್ರಮಾಣಾಂತರಗಳಿಂದ ತಿಳಿದುಕೊಳ್ಳಬೇಕು ಎಂದು ಭಾವ.

ಕಲ್ಪಭೇದಾತ್ ಕಥಾಭೇದೋ ಯತ್ರೋಕ್ತಃ ಸತ್ಕಥಾಸು ಚ ।
ತತ್ರೋಭಯಂ ಗ್ರಾಹ್ಯಮೇವ ದೂಷ್ಯಾಂಶೋ ನೈವ ವರ್ತತೇ ॥ ೩೯ ॥

ತತ್ರ ಸಾಧುಪ್ರಭೇದೇನ ಸಂಗ್ರಾಹ್ಯಸ್ತತ್ವನಿರ್ಣಯಃ ।
ಉಕ್ತಂ ಭಾಗವತೇ ಷಷ್ಠಸ್ಕಂಧೇ ವ್ಯಾಸೇನ ತತ್ಸುತಃ ॥ ೪೦ ॥

ಕಲ್ಪಭೇದಗಳಿಗೆ ಅನುಸಾರವಾಗಿ ಕಥಾಭೇದಗಳನ್ನು ನಿರೂಪಿಸುವುದು 'ಸಾಧು' ಎಂಬ ಭೇದ. ಇದರಲ್ಲಿ ಎರಡೂ ಕಥೆಗಳು ಯಥಾರ್ಥವಾಗಿಯೇ ಇರುತ್ತವೆ. ತೊರೆಯಬೇಕಾದ ಅಂಶ ಇರುವುದಿಲ್ಲ; ಭಾಗವತ ಷಷ್ಠಸ್ಕಂಧದಲ್ಲಿ ಶ್ರೀವೇದವ್ಯಾಸರಿಂದ ಉಕ್ತವಾಗಿರುವುದು ಯಥಾರ್ಥವಾಗಿಯೇ ಇದೆ.

ಇಂದ್ರೋ ಹತ್ವಾವಕರೋತ್ ತ್ವಾಷ್ಟ್ರಂ ವಿಶ್ವರೂಪಂ ದ್ವಿಜೋತ್ತಮಮ್ ।
ಬ್ರಹ್ಮಹತ್ಯಾಪೀಡಿತಸ್ತು ಬ್ರಹ್ಮಾಣಂ ಶರಣಂ ಯಯೌ ॥ ೪೧ ॥

ಚತುರ್ಮುಖಶ್ಚತುರ್ಧಾ ತಂ ವಿಭಜ್ಯ ಪ್ರಾಕ್ಷಿಪನ್ಮಹಾನ್ ।
ಭೂಮೌ ವಾರಿಷು ವೃಕ್ಷೇಷು ನಾರೀಋತುಷು ಕ್ರಮಾತ್ ॥ ೪೨ ॥

ಉಷರಂ ದೂಷಿತಂ ಭೂಮೌ ಫೇನಂ ದುಷ್ಟಂ ಜಲೇಷು ಚ ।
ಸ್ರವ್ಯಂ ದೂಷ್ಯಂ ಚ ವೃಕ್ಷಾದೌ ಹ್ಯಂಗನಾ ಋತುದೂಷಿತಾ ।
ಹತ್ಯಾಮುಕ್ತಃ ಶಚೀನಾಥಃ ಪುನಃ ಸ್ವರ್ಗಮಪೀಪಲತ್ ॥ ೪೩ ॥

ಇಂದ್ರನು ತ್ವಷ್ಟೃವಿನ ಮಗನಾದ ವಿಶ್ವರೂಪನೆಂಬ ಬ್ರಾಹ್ಮಣ ಶ್ರೇಷ್ಠನನ್ನು ಸಂಹರಿಸಿ ಬ್ರಹ್ಮಹತ್ಯಾದೋಷಕ್ಕೆ ಗುರಿಯಾದ; ಮತ್ತು ಅದರ ಪರಿಹಾರಕ್ಕೆಂದು ಬ್ರಹ್ಮನನ್ನು ಶರಣು ಹೊಂದಿದನು; ಚತುರ್ಮುಖ ಬ್ರಹ್ಮನು ಆ ದೋಷವನ್ನು ನಾಲ್ಕು ಭಾಗವಾಗಿ ವಿಂಗಡಿಸಿ,

ಕ್ರಮವಾಗಿ ಭೂಮಿ, ನೀರು, ವೃಕ್ಷ ಮತ್ತು ನಾರೀ ಋತುಗಳಲ್ಲಿ ಇರಿಸಿದ; ಭೂಮಿಯಲ್ಲಿ ಸೌಳು, ಜಲದಲ್ಲಿ ನೊರೆ, ವೃಕ್ಷಗಳಲ್ಲಿ ಅಂಟು, ನಾರಿಯಲ್ಲಿ ರಜಸ್ಸು ಅದಕ್ಕೆಂದೇ ನಿಂದ್ಯವಾಗಿವೆ. ಬ್ರಹ್ಮಹತ್ಯೆಯಿಂದ ಹೀಗೆ ಪಾರಾದ ಇಂದ್ರ ಮತ್ತೆ ಸ್ವರ್ಗವನ್ನು ಪಾಲಿಸಿದನು.

[೧]
ಶ್ರೀಭವಿಷ್ಯತ್ಪುರಾಣೇ ತು ಇತ್ಯರ್ಥೋ ವ್ಯಾಸಚೋದಿತಃ ।
ವೃತ್ರಹತ್ಯಾಂ ವಿಭಜ್ಯಾಥ ಕ್ಷಿಪ್ತವಾನ್ ಸ ಚತುರ್ಮುಖಃ ॥ ೪೪ ॥

ವಹ್ನೌ ಪ್ರಥಮಜಾತಾಸು ಜ್ವಾಲಾಸು ಚ ನದೀಷು ಚ ।
ಪರ್ವತಾಗ್ರೇಷು ಏವೈಂದ್ರ ನಾರೀಋತುಷು ತಾಂ ಕ್ರಮಾತ್ ॥ ೪೫ ॥

ಆದರೆ ಭವಿಷ್ಯತ್ಪುರಾಣದಲ್ಲಿ ಅದೇ ವ್ಯಾಸರು ಹೀಗೆ ಹೇಳಿರುವರು: ಚತುರ್ಮುಖ ಬ್ರಹ್ಮನು, ವೃತ್ರಾಸುರನನ್ನು ಸಂಹರಿಸಿದ್ದರಿಂದ ಇಂದ್ರನಿಗೆ ಬಂದ ಬ್ರಹ್ಮಹತ್ಯೆಯನ್ನು ಅಗ್ನಿಯ ಮೊದಲ ಜ್ವಾಲೆಗಳಲ್ಲೂ, ನದಿಗಳಲ್ಲೂ, ಪರ್ವತಗಳ ತುದಿಗಳಲ್ಲೂ, ನಾರೀ ಋತುಗಳಲ್ಲಿ ಕ್ರಮವಾಗಿ ಇರಿಸಿದ.

ಇತ್ಯಾದೌ ಸಾಧುಭೇದೇನ ಕೀರ್ತಿತಂ ಕಲ್ಪಭೇದತಃ ।
ತತ್ರೋಭಯಂ ಗ್ರಾಹ್ಯಮೇವ ಸಪ್ತಭೇದಾಃ ಪ್ರಕೀರ್ತಿತಾಃ ॥ ೪೬ ॥

ಇಂತಹ ಪ್ರಸಂಗಗಳಲ್ಲಿ 'ಸಾಧು' ಎಂಬ ಭೇದದಿಂದ ಅರ್ಥವನ್ನು ತಿಳಿಯಬೇಕು. ಎಂದರೆ ಇವೆರಡೂ ಪ್ರಸಂಗಗಳೂ ಪ್ರಾಮಾಣಿಕವೇ ಆಗಿವೆ.

ವಿ: ಒಂದು ಕಲ್ಪದಲ್ಲಿ ಇಂದ್ರನಿಗೆ ಬಂದ ವಿಶ್ವರೂಪ ಬ್ರಾಹ್ಮಣನ ಹತ್ಯೆಯ ದೋಷವನ್ನು ಬ್ರಹ್ಮದೇವರು ಭೂಮಿ, ನೀರು, ವೃಕ್ಷ, ಮತ್ತು ನಾರೀಋತುಗಳಲ್ಲಿ ಇರಿಸಿದರೆ, ಮತ್ತೊಂದು ಕಲ್ಪದಲ್ಲಿ ವೃತ್ರಾಸುರನನ್ನು ಸಂಹರಿಸಿದ್ದರಿಂದ ಇಂದ್ರನಿಗೆ ಬಂದ ಬ್ರಹ್ಮಹತ್ಯೆಯನ್ನು ಅಗ್ನಿಯ ಪ್ರಥಮ ಜ್ವಾಲೆಗಳು, ನದಿಗಳು, ಪರ್ವತಾಗ್ರ ಮತ್ತು ನಾರೀಋತುಗಳಲ್ಲಿ ಇರಿಸಿ, ಇಂದ್ರದೇವರನ್ನು ಪಾಲಿಸಿದರು ಎಂದು ತಿಳಿಯಬೇಕು.

---

೧. ಮಹಾಭಾರತೇ ಶಾಂತಿಪರ್ವಣಿ ಚ

ಇದಂ ರಹಸ್ಯಂ ಪರಮಂ ಯಚ್ಛ್ರುತಂ ಶ್ರೀಹರೇರ್ಮುಖಾತ್ ।
ತತ್ ತೇ ಸಮಾಸತಃ ಪ್ರೋಕ್ತಂ ಜ್ಞಾತ್ವಾಮುಕ್ತಿಂ ಗಮಿಷ್ಯಸಿ ।
ತದುಕ್ತಮವಿವಿಚ್ಯೈವ ಮುಕ್ತಿಃ ಕಸ್ಯಾಪಿ ನೋ ಭವೇತ್ ॥ ೪೭ ॥

ಇದನ್ನೆಲ್ಲ ನಾನು ಕೇಳಿದ್ದು ಸಾಕ್ಷಾತ್ ಶ್ರೀಹರಿಯ ಮುಖದಿಂದ; ಆದ್ದರಿಂದಲೇ ಇದು ತುಂಬಾ ರಹಸ್ಯವಾದುದು, ಉತ್ತಮವಾದುದು. ಇದನ್ನೆಲ್ಲ ನಾನು ನಿನಗೆ ಸಂಕ್ಷೇಪವಾಗಿ ತಿಳಿಸಿರುವೆನು; ಇದನ್ನು ತಿಳಿದರೆ ಮುಕ್ತಿಗೆ ತೆರಳುವಿ. ಇದನ್ನೆಲ್ಲ ತಿಳಿಯದವನಿಗೆ ಮಾತ್ರ ಎಂದೂ ಮುಕ್ತಿಯು ಲಭಿಸದು.

॥ ಇತಿ ([೧]ಶ್ರೀಬ್ರಹ್ಮಾಂಡಪುರಾಣೇ) ವ್ಯತ್ಯಾಸಾದಿಸಪ್ತಭೇದ(ನಿರ್ಣಯ)ಪ್ರತಿಪಾದಕ ಪುರಾಣವಾಕ್ಯಸಂಗ್ರಹಃ[೨] ॥

★★★★★

---

೧. ಮಹಾಭಾರತ ಶಾಂತಿಪರ್ವದಲ್ಲೂ ಹೀಗೆಯೇ ಉಂಟು.

೨. ಇವು ಬ್ರಹ್ಮನಾರದಸಂವಾದರೂಪವಾಗಿರುವುದರಿಂದ ಬ್ರಹ್ಮಾಂಡಪುರಾಣದ ಶ್ಲೋಕಗಳೆಂದು ಊಹಿಸಬಹುದು.

ಇವುಗಳ ಎರಡು ಹಸ್ತಪ್ರತಿಗಳು ನನ್ನ ಸಂಗ್ರಹ(ಶ್ರೀಜಯತೀರ್ಥಸಂಸ್ಕೃತ ಹಸ್ತಲಿಖಿತ ಗ್ರಂಥಾಲಯ ವ್ಯಾಸನಕೆರೆ)ದಲ್ಲೂ, ಮತ್ತೊಂದು ಪ್ರತಿಯು ಬೆಂಗಳೂರು ಉತ್ತರಾದಿಮಠದ ಗ್ರಂಥಾಗಾರದಲ್ಲೂ ಉಂಟು.

ಬಳಿತ್ಥಾಸೂಕ್ತ

(ಕನ್ನಡ ಅನುವಾದ ಹಾಗೂ ವಿವರಣೆಸಮೇತ)

ಬಳಿತ್ಥಾಸೂಕ್ತದಲ್ಲಿ ವಾಯುಮಹಿಮೆ

ಬಳಿತ್ಥಾ ತದ್ವಪುಷೇ ಧಾಯಿ ದರ್ಶತಂ
ದೇವಸ್ಯ ಭರ್ಗಃ ಸಹಸೋ ಯತೋऽಜನಿ ।
ಯದೀಮುಪ ಹ್ವರತೇ ಸಾಧತೇ ಮತಿ-
ರ್ಋತಸ್ಯ ಧೇನಾ ಅನಯಂತ ಸಸ್ರುತಃ ॥ ೧ ॥

ಅ: ಯತಃ – ಯಾವ ನಾರಾಯಣನಿಂದ ಅವನ ಆಜ್ಞೆಯಂತೆ ಅವನ ಪ್ರೀತಿಗೋಸ್ಕರ; (ಅ)ಜನಿ – ಜನಿಸಿತೋ; ಅಂತಹ; ಸಹಸಃ – ಬಲರೂಪರಾದ; ದೇವಸ್ಯ – ಕ್ರೀಡಾದಿ ಗುಣಯುಕ್ತರಾದ ವಾಯುದೇವರ ಮೂಲರೂಪವು; ಬಟ್ – ಬಲಾತ್ಮಕವೂ; ದರ್ಶತಂ – ಜ್ಞಾನಪೂರ್ಣವೂ ಆಗಿದ್ದು; ಭರ್ಗಃ – (ಅದು) ಶ್ವಾಸರೂಪದಿಂದ ಜಗತ್ತನ್ನು ಧರಿಸಿದ ಅದು; ಇತ್ಥಾ – (ಇತ್ಥಂ ಏವ) – ಮೂಲರೂಪದಲ್ಲಿ ಹೇಗೋ ಹಾಗೆಯೇ ; ಬಲಾದಿಗಳಿಂದ ಕೂಡಿದುದಾಗಿ; ವಪುಷೇ – ಅವತಾರಕ್ಕಾಗಿ; ಅಧಾಯಿ – ಪ್ರೇರಿತವಾಯಿತು; ಯತ್ – ಅವರ ಪ್ರಥಮಾವತಾರವು; ಮತಿಃ– ಮತಿ (ಹನೂಮಾನ್) ಎಂದು ಕರೆಯಲ್ಪಟ್ಟಿದೆ; ಅದು ಋತಸ್ಯ – ಜ್ಞಾನಾತ್ಮಕನಾದ ಶ್ರೀರಾಮನ; ಉಪ – ಸಮೀಪದಲ್ಲಿ ; ಹ್ವರತೇ– ಕ್ರೀಡಿಸುತ್ತಿರುವುದು(ಮತ್ತು ಭಕ್ತಿಭಾವದಿಂದ ಬಾಗಿ ನಿಂತಿರುವುದು); ಈಂ – ಹೀಗೆಯೇ; ಸಾಧತೇ – (ರಾಮನ ಕಾರ್ಯಗಳನ್ನು) ಸಾಧಿಸುವುದು; ಸಸ್ರುತಃ – ಶ್ರೀರಾಮವಿಷಯಕವಾದ ಅಮೃತವನ್ನು ಸುರಿಸುವ; ಧೇನಾಃ – ಮಾತುಗಳನ್ನು; ಅನಯಂತ – ಶಿಷ್ಯರಿಗೆ ತಲುಪಿಸಿತು (ಅಥವಾ ಸಸ್ರುತಃ – ಶ್ರೀರಾಮನ ಅಮೃತದಂತಹ ಧೇನಾಃ – ಮಾತುಗಳನ್ನು ; ಅನಯಂತ – ಸೀತಾಕೃತಿಯಲ್ಲಿನ ಮಹಾಲಕ್ಷ್ಮಿಗೆ ತಲುಪಿಸಿತು).

---

೧. ಯಸ್ಯ ತನ್ಮೂಲರೂಪಂ ಬಟ್ – ಬಲಾತ್ಮಕಮ್ । ದರ್ಶತಂ ಜ್ಞಾನರೂಪಮ್ । ದೃಶೇರೌರಾಣಾದಿಕೋऽತಚ್ ಪ್ರತ್ಯಯಃ । ಅನೇನ ವಾಯುಶಬ್ದೋ ನಿರುಕ್ತಃ । ವ ಶಬ್ದೋ ಬಲವಾಚೀ । ಅಯತಿಃ ಗತ್ಯರ್ಥಃ । ಗತ್ಯರ್ಥಾಶ್ಚಾವ-ಗತ್ಯರ್ಥಾಃ । ತತ ಉಣ್ । ವಶ್ಚಾಸೌ ಆಯುಶ್ಚೇತಿ ವಾಯುರಿತಿ । ತತ್ – ಸಹಸೋ ದೇವಸ್ಯ ವಾಯೋಃ ಸ್ವರೂಪಂ ಮಹಾಬಲಂ ಜ್ಞಾನಾತ್ಮಕಂ ತತಮ್ । – (ನ್ಯಾಯಸುಧಾ)

ಯತೋ ಭಾರತಿಜ್ಞಾನಾತ್ಮಕತ್ವಾತ್ ಭರ್ಗಾಖ್ಯಂ ಬ್ರಹ್ಮಾಭಿವ್ಯಕ್ತಮಭೂತ್ ಅಥವಾ ಯತೋ ದೇವಾತ್ ಸ್ವಯಮಜನಿ ತಸ್ಯ ವಿಷ್ಣೋರ್ದೇವಸ್ಯ ಭರ್ತೃ ಗಂತೃ ಚ । – (ತತ್ತ್ವಪ್ರದೀಪ)

ನ ಕೇವಲಂ ಮೂಲರೂಪಮೇವಂ ಕಿಂತು ಯಸ್ಯಾವತಾರೇಷು ನಿಹಿತಂ ರೂಪಮಿತ್ಥಮೇವ । ತತ್ ಇತ್ಥಂಭೂತಮೇವ ರೂಪತ್ರಯಾವತಾರಾಯ ಭಗವತಾ ನಿಹಿತಂ ಪ್ರೇರಿತಂ ಅವತೀರ್ಣಂ ಚ । -(ತತ್ತ್ವಪ್ರಕಾಶಿಕಾ)

ಎಃ ೧) ಶ್ರೀನಾರಾಯಣನ ಆಜ್ಞೆಯಂತೆ ಅವನ ಪ್ರೀತಿಗೋಸ್ಕರ ಅವತರಿಸುವ ಶ್ರೀವಾಯು–ದೇವರ ಮೂಲರೂಪವು ಬಲಾತ್ಮಕವೂ, ಜ್ಞಾನಪೂರ್ಣವೂ ಕ್ರೀಡಾದಿ ಗುಣವಿಶಿಷ್ಟವೂ ಆಗಿದೆ; ಶ್ವಾಸರೂಪದಿಂದ ಜಗತ್ತನ್ನು ಧರಿಸಿದೆ; ಅಂತಹ ರೂಪವು ಮೂಲರೂಪದಲ್ಲಿ ಹೇಗಿರುವುದೋ ಹಾಗೆಯೇ ಬಲಜ್ಞಾನಾದಿಗಳಿಂದ ಕೂಡಿದ್ದುದಾಗಿಯೇ ಅವತಾರಕ್ಕೆಂದು (ಶ್ರೀಹರಿಯಿಂದ) ಪ್ರೇರಿತವಾಯಿತು. ಅವರ ಪ್ರಥಮಾವತಾರಕ್ಕೆ 'ಹನೂಮಾನ್' ಎಂದು ಹೆಸರು. ಅದು ಜ್ಞಾನ–ಸ್ವರೂಪನಾದ ರಾಮರೂಪದ ಶ್ರೀಹರಿಯ ಅಮೃತ ಸುರಿಸುವ ಕಥಾರೂಪವಾದ ಮಾತುಗಳನ್ನು ಶಿಷ್ಯರಿಗೆ ಉಪದೇಶಿಸಿತು. (ಮತ್ತು ಅಂತಹ ಅವನ ಮಾತುಗಳನ್ನು ಸೀತಾಕೃತಿಯಲ್ಲಿ ಸನ್ನಿಹಿತವಾಗಿದ್ದ ಶ್ರೀರಮಾದೇವಿಗೆ ಒಪ್ಪಿಸಿತು).

---

೧. ಇತ್ಥಂ ವಕ್ಷ್ಯಮಾಣಪ್ರಕಾರೇಣ ವಪುಷೇ ಅವತಾರಾಯ ಅಧಾಯಿ ಭಗವದಿಚ್ಛಯಾ ಸ್ವಬುದ್ಧ್ಯಾ ಚ।
–(ತತ್ತ್ವಪ್ರದೀಪ)

೧. ಭರ್ಗಃ– ಭರಣಗಮನಯೋಃ ಕರ್ತೃ। ಡುಭೃಜ್ ಭರಣೇ ಗಮ್ಲೃ ಗತೌ, ಆಭ್ಯಾಮಸುನ್ ಪ್ರತ್ಯಯೋ ಡಿಚ್ಚ। ಇದಮಪಿ ವಾಯುಶಬ್ದವ್ಯಾಖ್ಯಾನಮ್ । ವಾ ಗತಿಗಂಧನಯೋರಿತ್ಯತಃ। 'ಕೃವಾಪಾಜಮಿಸ್ವದಿಸಾಧ್ಯಶೂಭ್ಯಃ ಉಣ್' ಇತ್ಯುಣ್ । ಅನೇಕಾರ್ಥತ್ವಾದ್ಧಾತೂನಾಂ ವಾತಿರ್ಭರಣೇऽಪಿ ವರ್ತತೇ ॥ ಅಪಿ ಚ ಮಹತ್ ಶ್ರೇಷ್ಠಮ್ । ವಯಃ ಶ್ರೇಷ್ಠತ್ವೇ ಇತ್ಯಸ್ಮಾದುಣ್। –(ನ್ಯಾಯಸುಧಾ)

ಭರ್ಗಃ ಜಗದ್ಭರಣಗಮನಗುಣಮ್ । ಮಹತ್ ಮಹನೀಯಮ್ । –(ತತ್ತ್ವಪ್ರಕಾಶಿಕಾ)

ಭರ್ಗಃ– ಭರತಿ ಶ್ವಾಸರೂಪೇಣ ಜಗತ್ ಬಿಭರ್ತಿ, 'ಸ ಏನಾನ್ ಬ್ರಹ್ಮ ಗಮಯತಿ' ಇತಿ ಶ್ರುತೇಃ ಪರಂ ಬ್ರಹ್ಮ ಗಮಯತೀತಿ ಚೇತಿ ಭರ್ಗಶಬ್ದವಾಚ್ಯಂ 'ಆದಿಭೂಭ್ಯಾಂ ದುತಚ್' ಇತ್ಯಾದಾವಿವ ಧಾತುದ್ವಯಾದೌಣಾದಿಕೋऽಸುನ್ ಪ್ರತ್ಯಯಃ । ತದ್ವಾಯೋರ್ಮೂಲರೂಪಂ ಅನೇನ ಬಟ್ ಬಲಾತ್ಮಕಂ 'ಅಯಪಯಗತೌ' ಇತಿ ಧಾತೋಃ ಅಯ್ ಜ್ಞಾನಾತ್ಮಕಂ ಚೇತಿ, ವಬಯೋರಭೇದಾತ್ ವಿಶೇಷಣದ್ವಯೇನ ವಾಯುಶಬ್ದಾರ್ಥಃ ಉಕ್ತೋ ಭವತಿ। – (ವಾ)

ಭರ್ಗಃ– ಭಾತಿ ಪ್ರಕಾಶತೇ ಇತಿ ಗಚ್ಛತಿ ಜಾನಾತೀತಿ ಪ್ರಕಾಶಜ್ಞಾನರೂಪಂ ಬ್ರಹ್ಮ ಜನಿ– ವ್ಯಕ್ತಮಭವತ್ । -(ಜ)

೧. 'ದ್ರವಿಣಂ ರೇತಃ ಸಹೋ ಬಲಂ' ಇತ್ಯನುಶಾಸನಾತ್ । –(ವಾ)

'ಸಹ ಮರ್ಷಣ' ಇತಿ ಧಾತೋಃ 'ಯ ಏವಾಯಾಂ ಮುಖ್ಯಪ್ರಾಣಃ ತಮುದ್ಗೀಥಮುಪಾಸಾಂಚಕ್ರೀರೇ ತಂ ಹಾಸುರಾಃ ಋತ್ವಾ ವಿದಧ್ವಸುಃ ಯಥಾऽಶ್ಮಾನಮಾಖಣಮೃತ್ವಾ ವಿದಧ್ವಂಸತ' ಇತ್ಯೇವಂ ಛಂದೋಗೋಪನಿಷದ್ವಾಕ್ಯಾಚ್ಚ ಕಲ್ಯಾದ್ಯಸುರಕೃತೋಪದ್ರವಸಹನಶೀಲಸ್ಯ ಆಶುಗತ್ವಾತ್ ವೇಗವತೋ ವಾ ಪ್ರಾಣಸ್ಯ। – (ವಾ)

೧. ಮತಿಃ – ಮತಿಶಬ್ದವಾಚ್ಯಮ್ । 'ಹನ ಹಿಂಸಾಗತ್ಯೋರಿತಿ ಧಾತೋಃ ಗತ್ಯರ್ಥಾನಾಂ ಜ್ಞಾನಾರ್ಥತ್ವಾತ್ ಮತಿಶಬ್ದ ವಾಚ್ಯಮಿತ್ಯರ್ಥಃ । ಹನವಾನಿತಿ ವಕ್ತವ್ಯೇ ಸರ್ವದಾ ಜ್ಞಾನಶೀಲತ್ವದ್ಯೋತನಾಯ ಉದ್ವಯೇ ಕೃತೇ ಹನೂಮಾನಿತಿ ಭವತಿ। –(ವಾ)

ಹನುಶಬ್ದೋ ಜ್ಞಾನವಾಚೀ ಹನೂಮಾನ್ ಮತಿಶಬ್ದತಃ ॥– ಇತಿ ಭಾವವೃತ್ತೇ। –(ಛಾಂದೋಗ್ಯಭಾಷ್ಯ)

೨) ಶ್ರೀಮದಾಚಾರ್ಯರು ಶ್ರೀವಾಯುದೇವರ ಜೀವೋತ್ತಮತ್ವವನ್ನು ಬಳಿತ್ಥಾಸೂಕ್ತ-ವನ್ನು ಉದಾಹರಿಸುತ್ತ ಸಮರ್ಥಿಸುತ್ತಿರುವರು.

೩) ಬಳಿತ್ಥಾಸೂಕ್ತವು ಋಗ್ವೇದದಲ್ಲಿನ ಸೂಕ್ತ ಶ್ರೀಮದಾಚಾರ್ಯರು ಇದನ್ನು ಭೃಗು-ಮುನಿದೃಷ್ಟವಾದ 'ಪ್ರಾಣಾಗ್ನಿ'ಸೂಕ್ತವೆಂಬುದಾಗಿ ತಂತ್ರಸಾರಸಂಗ್ರಹದಲ್ಲಿ ತಿಳಿಸಿರುವರು(೪/೬೮).

೪) ಈ ಸೂಕ್ತಕ್ಕೆ ಶ್ರೀವಾದಿರಾಜರು, ಜನಾರ್ದನಭಟ್ಟರು, ವರದರಾಜಾಚಾರ್ಯರು ಮೊದಲಾದ ಅನೇಕ ಮಹನೀಯರು ಮಹಾಭಾರತತಾತ್ಪರ್ಯನಿರ್ಣಯದ ತಮ್ಮ ಟಿಪ್ಪಣಿಗಳಲ್ಲಿ ವ್ಯಾಖ್ಯಾನ ಬರೆದಿರುವರು; ಶ್ರೀವಾದಿರಾಜಸ್ವಾಮಿಗಳು ಯುಕ್ತಿಮಲ್ಲಿಕಾಗ್ರಂಥದಲ್ಲಿ ಫಲಸೌರಭದಲ್ಲಿ ಇದನ್ನು ವಿವರವಾಗಿ ವ್ಯಾಖ್ಯಾನಿಸಿರುವರು; ಬಿದರಹಳ್ಳಿ ಶ್ರೀನಿವಾಸತೀರ್ಥರ 'ತೈತ್ತಿರೀಯಭಾಷ್ಯ' ಮತ್ತು ಅವರ ಪುತ್ರ ವೇಂಕಟಪತ್ಯಾಚಾರ್ಯರ ತಂತ್ರಸಾರಟೀಕೆ(ಗುರ್ವರ್ಥದೀಧಿತಿ)ಯಲ್ಲಿ ಇದರ

---

೧. ವಚಾಂಸಿ ಮೂಲರಾಮಾಯಣಾದೀನಿ ರಾಮವಚಾಂಸಿ। –(ನ್ಯಾಯಸುಧಾ)

ತತ್ರ ಪ್ರಥಮಂ ಹನುಮದಾಖ್ಯಂ ವಪುಃ ರಾಮಸ್ಯ ವಚಾಂಸಿ ಸೀತಾಂ ಪ್ರತಿ ನೀತವತ್ । ರಾಮವಿಷಯ-ವಚಾಂಸಿ ಮೂಲರಾಮಾಯಣರೂಪಾಣಿ ಶಿಷ್ಯೇಷು ನೀತವತ್ । –(ತತ್ತ್ವಪ್ರಕಾಶಿಕಾ)

ರಾಮವಚಸಿ ಯೋ ನಯಃ ನ್ಯಾಯಃ ಆಜ್ಞಾರೂಪಃ । ತದ್ಯುಕ್ತಂ ವಾ । –(ತತ್ತ್ವಪ್ರಕಾಶಿಕಾ)

ರಾಮಸ್ಯ ಸ್ವೃತರೂಪಸ್ಯ ವಾಚಸ್ತೇನಾನಯಂತ ಹಿ। (ಭಾವವೃತ್ತ-ಸದ್ಭಾವ)

ಸಾಧಕೋ ರಾಮವಾಕ್ಯಾನಾಂ ತತ್ಸಮೀಪಗತಃ ಸದಾ ।
ಹನೂಮಾನ್ ಪ್ರಥಮೋ ಜ್ಞೇಯೋ..... (ಯಜುಃಸಂಹಿತಾ)

ಹನಹಿಂಸಾಗತ್ಯೋರಿತಿ ಧಾತುಃ । ತತ್ತಸ್ಮಾತ್ ಹನುಶಬ್ದಸ್ಯ ಜ್ಞಾನವಾಚಕತ್ವಾತ್ । ಜ್ಞಾನಶೀಲಮಿತ್ಯನೇನ ಹನುಶಬ್ದಾದುಪರಿ ತಾಚ್ಛೀಲಕಾರ್ಥ ಉನ್ [೧]ಪ್ರತ್ಯಯಃ ಇತಿ ಸೂಚಯತಿ । ತದ್ವಂತಮಿತ್ಯನೇನ ಹನುಮತ್ಪದೇ ವಿದ್ಯಮಾನಮತುಪ್‌ಪ್ರತ್ಯಯಾರ್ಥಂ ದರ್ಶಯತಿ । ತತಶ್ಚ ಜ್ಞಾನಶೀಲವಾನ್ ಹನುಮಾನಿತ್ಯುಕ್ತಂ ಭವತಿ । ಕ್ವಚಿತ್ ಹನೂಮಾನಿತಿ ಪ್ರಯೋಗಸ್ತು ನಿರುಕ್ತತ್ವಾತ್ [೨]ಉಕಾರಾಖ್ಯ ವರ್ಣಾಗಮಮಾದಾಯ ಇತಿ ದ್ರಷ್ಟವ್ಯಮ್ । ಹನ್ವಾಖ್ಯಾಂಗವಿಶೇಷವತ್ತ್ವಸ್ಯ ಮರ್ಕಟಾಂತರೇऽಪಿ ಸತ್ತ್ವೇನ ರಾಮವ್ಯಾಸಯೋರ್ಮುಖ್ಯಶಿಷ್ಯೇ ಮೂಲ-ರಾಮಾಯಣಪ್ರವರ್ತಕಾಚಾರ್ಯೇ ವೈಯಾಕರಣಗುರೌ ಹನುಮತಿ ಶ್ರೌತಮತಿಪದಸಮಾಖ್ಯಯಾ ಅಸ್ಮದುಕ್ತವ್ಯುತ್ಪತ್ತೇರೇವ ಶ್ಲಾಘ್ಯತ್ವಾದಿತಿ ಭಾವಃ । –(ಭಾ.ವಿ.)

ಹನುಶಬ್ದಸ್ಯ ಜ್ಞಾನವಾಚಿತ್ವೇ ಹನುಮಾನ್ ಮತಿಮಚ್ಛಬ್ದವಾಚ್ಯಃ ಸ್ಯಾತ್ - ಇತಿ ಚೇನ್ನ । ಜ್ಞಾನವತೋऽಪಿ ಜ್ಞಾನಸ್ವರೂಪತಾ ಪ್ರಕಟನಾಯ ಮತಿಶಬ್ದಪ್ರಯೋಗಾತ್ । – (ಬೃಹದಾರಣ್ಯಭಾಷ್ಯಭಾವಬೋಧ)

---

೧. ಬಳಾದ್ಧಂ ಭೃಗುಣಾ ದೃಷ್ಟಂ ಪ್ರಾಣಾಗ್ನೇಃ ಸೂಕ್ತಮುಚ್ಯತೇ ॥ – (ತಂತ್ರಸಾರಸಂಗ್ರಹಃ ೪/೬೮)

ತಾಚ್ಛೀಲ್ಯಾರ್ಥೇ ಉನ್‌ಪ್ರತ್ಯಯಃ।'ತಾಚ್ಛೀಲ್ಯಾರ್ಥಾದುನಸ್ತಥಾ' ಇತಿ ಅನುವ್ಯಾಖ್ಯಾನೋಕ್ತೇಃ। –(ಗುರ್ವರ್ಥದೀಧಿತಿ)

೨. ಉಚ್ಛಬ್ದಃ ಉತ್ಕೃಷ್ಟತ್ವವಾಚೀ । ಉತ್ಕೃಷ್ಟತ್ವಮುಕಾರಾರ್ಥಃ ಇತಿ ಬೃಹದ್ಭಾಷ್ಯೋಕ್ತೇಃ । -(ಗುರ್ವರ್ಥದೀಧಿತಿ)

ಸಮಗ್ರ ವ್ಯಾಖ್ಯಾನ ದೊರೆಯುತ್ತದೆ. ಸುರೋತ್ತಮತೀರ್ಥರ ಯುಕ್ತಿಮಲ್ಲಿಕಾಟೀಕೆ (ಭಾವ–ವಿಲಾಸಿನೀ)ಯಲ್ಲಿ ಸಮಗ್ರಸೂಕ್ತವು ತುಂಬಾ ವಿಸ್ತಾರವಾಗಿ ವ್ಯಾಖ್ಯಾತವಾಗಿದೆ.

೫) ಇದರ ಮೂಲಸೂಕ್ತದಲ್ಲಿ ಒಟ್ಟಾಗಿ ೧೩ ಋಕ್ಕುಗಳಿದ್ದು, ಅವುಗಳಲ್ಲಿ ಮೊದಲ ಐದು ಋಕ್ಕುಗಳನ್ನು ಮಾತ್ರ ಶ್ರೀಮದಾಚಾರ್ಯರು ಇಲ್ಲಿ ಉದಾಹರಿಸಿರುವರು; ಪರಂಪರೆಯಲ್ಲೂ ಬಳಿತ್ಥಾಸೂಕ್ತವೆಂಬುದಾಗಿ ಈ ಐದು ಋಕ್ಕುಗಳನ್ನು ಮಾತ್ರವೇ ಪಠಿಸುತ್ತಾರೆ. ಉಳಿದ ಋಕ್ಕುಗಳೂ ಸಹ ಶ್ರೀಮಧ್ವಾವತಾರ ವರ್ಣನಪರವಾಗಿವೆ.

೬) 'ಈಶಾವಾಸ್ಯಂ' ಎಂಬ ಮೊದಲ ಪದದಿಂದಾಗಿ 'ಈಶಾವಾಸ್ಯೋಪನಿಷತ್' ಎಂದು ಯಾಜ್ಞೀಯಮಂತ್ರೋಪನಿಷತ್ತು ಪ್ರಸಿದ್ಧವಾಗಿರುವಂತೆ; 'ಕೇನ' ಎಂಬ ಮೊದಲ ಪದದಿಂದಾಗಿ ತಲವಕಾರೋಪನಿಷತ್ತು 'ಕೇನೋಪನಿಷತ್' ಎಂದು ಪ್ರಸಿದ್ಧವಾಗಿರುವಂತೆ, 'ಬಳಿತ್ಥಾ' ಎಂಬ ಇಲ್ಲಿಯ ಆರಂಭದ ಪದದಿಂದಾಗಿ ಇದು 'ಬಳಿತ್ಥಾಸೂಕ್ತ' ವೆಂದೇ ಪ್ರಸಿದ್ಧವಾಗಿದೆ. 'ವಾಯುಸೂಕ್ತ' ಎಂದು ಇದಕ್ಕೆ ಅರ್ಥ.

೭) 'ದೈತ್ಯರ ಸಕಲವಿಧ ಉಪದ್ರವಗಳನ್ನು ಮೋಘಗೊಳಿಸುವ ಸಹನಶೀಲರು' ಎಂಬ ಅರ್ಥವನ್ನು ಶ್ರೀವಾದಿರಾಜರು 'ಸಹಸಃ' ಎಂಬ ಪದಕ್ಕೆ ಮಾಡಿರುವರು; ಈ ಪದವು 'ತ್ರಿಷ್ವಪ್ಯೇವತಾರೇಷ್ವರಿಭಿರಪೃಣಂ ಹಿಂಸಿತೋ ನಿರ್ವಿಕಾರಃ' ಎಂಬ ವಾಯುಸ್ತುತಿಯ ಮಾತಿಗೆ ಮೂಲವೂ ಆಗಿದೆ.

೮) ಶ್ವಾಸಮಂತ್ರದಿಂದ ಜಗತ್ತನ್ನು ಧರಿಸಿರುವವರು' ಮತ್ತು 'ಯೋಗ್ಯಚೇತನರನ್ನು ಪರಬ್ರಹ್ಮನ ಬಳಿ ತಲುಪಿಸುವವರು' ಎಂಬ ಅರ್ಥವನ್ನು 'ಭರ್ಗ' ಶಬ್ದಕ್ಕೆ ಶ್ರೀವಾದಿರಾಜರು ಬರೆದಿರುವರು.

೯) 'ಮತಿ' ಎಂದರೆ 'ಹನೂಮಾನ್' ಎಂದು ಅರ್ಥ:–

ಕಿಂ ಚ ಶ್ರುತೌ ಮತಿಪದಂ ಹನುಮದ್ವಾಚಕಂ ಭವೇತ್ ।
ಯತೋ ಗತ್ಯರ್ಥಕೋ ಧಾತುರ್ಜ್ಞಾನಾರ್ಥ ಇತಿ ಶಾಬ್ದಿಕಾಃ ॥
ತಜ್ಜ್ಞಾನಶೀಲಂ ತದ್ವಂತಂ ನಿರ್ವಕ್ತಿ ಹನುಮತ್ಪದಮ್ ।
ಮತಿರೂಪಂ ಮತೀತ್ಯಾಹುರ್ಮತಿಮಂತೋ ಯತೋ ಬುಧಾಃ ॥
ಅತಃ ಸ್ವಾಭಾವಿಕೀ ಯಸ್ಯ ಮತಿಃ ಸ ಮತಿರುಚ್ಯತೇ ।
ಏವಂ ಚ ಹನುಮಾನೇವ ಮತಿಶಬ್ದೋದಿತೋ ನ ಕಿಮ್ ॥

–ಯುಕ್ತಿಮಲ್ಲಿಕಾ–ಫಲಸೌರಭ(೬೫–೬೭)

೧೦) ಶ್ರೀವಾಯುದೇವರು ಕೂರ್ಮರೂಪದಿಂದ ಬ್ರಹ್ಮಾಂಡದೊಳಗೆ ಘನೋದಕದ ಮಧ್ಯದಲ್ಲಿದ್ದು ಜಗತ್ತನ್ನು ಧರಿಸಿರುವರು; ಎಂದೇ ಬಹುಭಾರ ಸಹನಶೀಲರಾಗಿರುವರು – ಎಂಬ ಅರ್ಥವಿಶೇಷಾಂಶವು 'ಸಹಸಃ' ಶಬ್ದದಿಂದ ಸೂಚಿತವಾಗಿದೆ.

೧೧) ವಿಷ್ಣುರೂಪವನ್ನು ಸದಾ ಹೃದಯಕಮಲದಲ್ಲಿ ಧರಿಸಿ ಅದನ್ನು ಮನಸ್ಸಿನಿಂದ ಕೂಡಾ ಚಿಂತಿಸುತ್ತಿರುವರು ಎಂಬ ಕಾರಣದಿಂದ ಶ್ರೀವಾಯುದೇವರ ಮೂಲರೂಪಕ್ಕೆ 'ಭರ್ಗಃ' ಎಂದು ಹೆಸರು.

೧೨) ಭಾರತ ರಾಮಾಯಣಗಳಲ್ಲಿ ಶ್ರೀವಾಯುದೇವರ ಮಹಿಮೆ ಬಹುತೆರನಾಗಿ ವರ್ಣಿತವಾಗಿದೆ ಎಂಬುದು 'ಇತ್ಥಾ' ಎಂಬಲ್ಲಿನ ದೀರ್ಘದಿಂದ ಸೂಚಿತವಾಗಿದೆ.

೧೩) 'ಭರ್ಗಃ' ಎಂದರೆ 'ಶಿವ' ಎಂದೂ ಅರ್ಥವಿದೆ. ಯಾವ 'ಸಹೋ' ನಾಮಕರಾದ ಶ್ರೀವಾಯುದೇವರಿಂದ 'ಭರ್ಗಃ' – ಶಿವನು ಹುಟ್ಟಿದನೋ ಅಂತಹ ವಾಯುದೇವರ ಬಲಜ್ಞಾನಾತ್ಮಕವಾದ ಮೂಲರೂಪವು ಹೀಗೆ ಅವತರಿಸಿತು ಎಂದು ಇನ್ನೊಂದು ತೆರನಾಗಿಯೂ ಇದಕ್ಕೆ ಅರ್ಥ ಮಾಡಬಹುದು. ಶ್ರೀವಾಯುದೇವರು ರುದ್ರದೇವರ ಜನಕರು ಎಂಬ ವಿವರ ಪುರಾಣಪ್ರಸಿದ್ಧವೂ ಆಗಿದೆ. ಒಂದೊಂದು ರೋಮದಿಂದಲೂ ಕೋಟಿಲಿಂಗಗಳನ್ನು ಸೃಷ್ಟಿಮಾಡಿದ ಮಹಾಮಹಿಮ ಹನುಮಂತ ಎಂಬುದಂತೂ ಸುಪ್ರಸಿದ್ಧ ವಿಚಾರವೇ ಆಗಿದೆ.

೧೪) 'ವಾಯವಾಯಾಹಿ ದರ್ಶತ' ಎಂಬ ವೇದಮಂತ್ರದಿಂದ ಸ್ಪಷ್ಟವಾಗಿ ಶ್ರೀವಾಯು–ದೇವರಿಗೆ ದರ್ಶತ ಶಬ್ದವಾಚ್ಯತ್ವವು ಸಿದ್ಧವಾಗುತ್ತದೆ. 'ದರ್ಶತ' ಎಂಬ ಪದ ಬಳಿತ್ಥಾಸೂಕ್ತವು ವಾಯುಪರವೆಂಬುದಕ್ಕೂ ಗಮಕ. (ಋ. ೧/೧/೨)

---

೧. ಬ್ರಹ್ಮಾಂಡಾಂತರ್ಗತ ಘನೋದಕಮಧ್ಯಸ್ಥವಾಯುಕೂರ್ಮರೂಪೇಣ ಜಗದ್ಧಾರಕಶೇಷಾಧಾರತಯಾ ಬಹುತರಸಹನಶೀಲತ್ವಾತ್ ವಾ 'ಸಹಃ' ಶಬ್ದವಾಚ್ಯಸ್ಯ। –(ಭಾ.ವಿ.)

೧. ಯತೋ ವಿಷ್ಣೋಃ ಸ್ವಯಮಜನಿ ತದ್ರೂಪಸ್ಯ ಸದಾ ಸ್ವಹೃದಯಕಮಲೇ ಧರಣಾತ್ ಮನಸಾ ಗಮನಾದವಗಮನಾಚ್ಚ ಭರ್ಗಃಶಬ್ದವಾಚ್ಯಂ ತನ್ಮೂಲರೂಪಮ್। –(ಭಾ.ವಿ.)

೧. ಭಾರತರಾಮಾಯಣಾದೌ ವಕ್ಷ್ಯಮಾಣಪ್ರಕಾರಃ ಅತಿದೀರ್ಘಃ ಇತಿ ಜ್ಞಾಪಯಿತುಂ 'ಇತ್ಥಾ' ಇತ್ಯುಕ್ತಮ್। ಇತ್ಥಂ ಮೂಲರೂಪವದೇವ ವಾ। –(ಭಾ.ವಿ.)

೧. ಅಥವಾ ಭರ್ಗ ಇತಿ ಅಕಾರಾಂತಂ ಪದಂ ಶಿವವಾಚಕಮ್ । 'ಹರಃ ಸ್ಮರಹರೋ ಭರ್ಗಃ ಕೃತ್ತಿವಾಸಾ ವೃಷಾಂಗಗಃ' ಇತ್ಯಭಧಾನಾತ್ । ಯತಃ ಸಹಸೋ ವಾಯೋಃ ಭರ್ಗಃ ಶಿವೋ ಅಜನಿ ತಸ್ಯ ಸಹಸೋ ದೇವಸ್ಯ ಬಟ್ ದರ್ಶತಂ ತತ್ ಮೂಲರೂಪಂ ಇತ್ಥಂ ವಪುಷೇऽಧಾಯೀತಿ ಯೋಜನಾ। ವಾಯ್ವವತಾರಂ ವಿಹಾಯ ಸಹಃಪದೇನ ಮುಖ್ಯಪ್ರಾಣಸ್ಯೈವ ಗ್ರಹಣಾಯೇದಂ ವ್ಯಾಖ್ಯಾನಮ್ । [೨]ಶಿವಜನಕತ್ವಸ್ಯ ಅನ್ಯತ್ರಾಯೋಗಾತ್ 'ಕಿಂಕರಾಃ ಶಂಕರಾದ್ಯಾ' ಇತಿ ಮುಖ್ಯಪ್ರಾಣ ಏವ ಸಂಭವಾಚ್ಚ । ಏಕೈಕರೋಮ್ಣಃ ಕೋಟಿಲಿಂಗಜನಕತ್ವಸ್ಯ ಸುಪ್ರಸಿದ್ಧತ್ವೇನ ಯುಕ್ತಿಯುಕ್ತತ್ವಾಚ್ಚ ಅಯಮಪ್ಯರ್ಥೋ ಅತ್ಯಂತಶ್ಲಾಘ್ಯಃ ॥ –(ಭಾ.ವಿ.)

೧೫) ವೈಷ್ಣವದರ್ಶನವನ್ನು ತಮ್ಮ ಮೂರನೆಯ ಅವತಾರದಿಂದ ಭೂಲೋಕದಲ್ಲಿ ಪ್ರಚುರಪಡಿಸಿದವರು, ಆ ರೂಪದಿಂದ ಅನೇಕತೆರನಾದ ದುರ್ಮತಗಳನ್ನು ನಾಶಪಡಿಸಿದವರು, ಅದಕ್ಕೆ ಅವಶ್ಯವಾದ ಬಲ ಮತ್ತು ಜ್ಞಾನಗಳನ್ನು ಹೊಂದಿದವರು ಎಂಬ ಅರ್ಥವಿಶೇಷಗಳು ಕ್ರಮವಾಗಿ ಇಲ್ಲಿಯ **'ದರ್ಶತಂ'**, **'ಭಗಃ'** ಮತ್ತು **'ಬಟ್'** ಎಂಬ ಪದಗಳಿಗೆ ಉಂಟು.

೧೬) ಹೀಗೆ ಅವರ ಮೂರನೆಯ ರೂಪವು ಅತಿ ಪ್ರಬಲವಾಗಿದ್ದು, ಜಗದ್ಗುರುವಾಗಿ ಜ್ಞಾನದಾಯಕವಾಗಿದೆ; ಮತ್ತು ಸಾಕ್ಷಾತ್ತಾಗಿ ಮುಕ್ತಿಗೆ ಕಾರಣವಾಗುವ ಶ್ರೀಹರಿಯ ಸರ್ವೋತ್ತ-ಮತ್ವಾದಿ ಮಹಾಮಹಿಮೆಯನ್ನು ಸ್ಥಾಪಿಸುತ್ತದೆ; ಶ್ರುತಿಯ ಪ್ರಾಮಾಣ್ಯ ಅರ್ಥವಿಚಾರಗಳನ್ನು ಮಾಡುತ್ತ ಶ್ರುತಿಗೂ ತುಂಬಾ ಪ್ರಿಯವಾಗಿದೆ ಎಂಬ ಈ ರೂಪದ ಮಹಿಮೆಯನ್ನು ಶ್ರುತಿಯು **'ವಪುಷೇ'** ಎಂಬುದಾಗಿ ತಿಳಿಸುತ್ತದೆ; ಈ ಕಾರಣಕ್ಕಾಗಿಯೇ ಶ್ರೀವಾಯುದೇವರ ಮೂಲರೂಪ ಮತ್ತು ಮೊದಲೆರಡು ಅವತಾರರೂಪಗಳನ್ನು ಅರ್ಧ ಅರ್ಧ ಋಕ್ಕುಗಳಲ್ಲೂ (ಒಟ್ಟು ಒಂದೂವರೆ ಋಕ್ಕುಗಳಲ್ಲಿ) ಮೂರನೆಯ ಶ್ರೀಮಧ್ವರೂಪವನ್ನು ಮುಂದಿನ ಮೂರೂವರೆ ಋಕ್ಕುಗಳಲ್ಲೂ ಶ್ರುತಿಯು ವರ್ಣಿಸಿದೆ.

ಈಕಾರೋऽಬ್ಜದಲೇ ಲಕ್ಷ್ಮ್ಯಾಂ ವಾಣ್ಯಾಂ ಕಮಲಕೇಸರೇ । ರಚನಾಯಾಂ ಶಕ್ರಚಾಪೇ ಬಾಣೇ ಫಣಿನಿ ಕಂದರೇ ॥ –(ನಾನಾರ್ಥರತ್ನಮಾಲಿಕಾ ಭಾ.ಏ)

೧. 'ವಾಯವಾಯಾ ಹಿ ದರ್ಶತ' ಇತ್ಯತ್ರ ಸ್ಪಷ್ಟಂ ದರ್ಶತಪದಸ್ಯ ವಾಯುವಿಶೇಷಣತ್ವ ಶ್ರವಣಾತ್ ಅಸ್ಯಾಪಿ ವಾಯುಪ್ರಕರಣತ್ವದ್ಯೋತನಾಯ ಚ ತದೇವ ಪದಮುಪಾತ್ತಮ್ । – (ಭಾ.ಏ)

೧. ಯದ್ವಾ ದರ್ಶೋ ದರ್ಶನಂ ವೈಷ್ಣವದರ್ಶನಂ ತತಂ ಸ್ವತೃತೀಯಾವತಾರೇಣ ಭೂಮೌ ವ್ಯಾಪ್ತಂ ಯಸ್ಮಾತ್ ತದ್ದರ್ಶತಮ್ । ಭರ್ಗಃ ತದ್ರೂಪೇಣೈವ ಭರ್ಜ್ಯಂತೇ ನಾನಾದುರ್ದರ್ಶನಾನಿ ಅನೇನ ಇತಿ ಭರ್ಗಃ ಶಬ್ದವಾಚ್ಯಮ್ । 'ಭ್ರಶ್ಚಪಾಕೇ' ಇತಿ ಧಾತೋಃ ಪ್ರಸಿದ್ಧೋऽಯಮರ್ಥಃ । ತದುಭಯೋಪಯುಕ್ತಯುಕ್ತಿಜ್ಞಾನಬಲವತ್ತ್ವಾತ್ ಬಟು । –(ಭಾ.ಏ)

೧. ದರ್ಶತಂ – ಎಂಬುದಕ್ಕೆ 'ಭಗವದ್ದ್ರಷ್ಟೃ' ಎಂಬ ವಿಶೇಷಾರ್ಥವನ್ನು ಶ್ರೀಪದ್ಮನಾಭತೀರ್ಥರು ಸನ್ನ್ಯಾಯರತ್ನಾವಲಿಯಲ್ಲಿ ಬರೆದಿರುವರು.

'ದರ್ಶತಂ ಅತಿಶಯೇನ ದರ್ಶರೂಪಂ' ಪ್ರಾತಿಲೋಮ್ಯೇನ ತೃತೀಯಾತ್ ತೃತೀಯಸ್ಯಾತಿಶಯಾರ್ಥತ್ವಾತ್ ।
–ಎಂಬುದಾಗಿ ನಯಚಂದ್ರಿಕಾದಲ್ಲಿದೆ.

೧. ..... ಪುನರೇವಸೂತ್ರಾತ್ ಶ್ರದ್ಧಾಸುತಾನಾಪ ಸುರಪ್ರವೀರಾನ್ । ಶೇಷಂ ಶಿವಂ ಚೇಂದ್ರಮ್ ॥ –(೩/೧೯)

ಯಾ ಮಾರುತಾದ್ಗರ್ಭಮವಾಪ ಪೂರ್ವ ಶೇಷಂ ಸುಪರ್ಣಂ ಗಿರಿಶಂ ಸುರೇಂದ್ರಮ್ ।
ಚತುರ್ಮುಖಾಖ್ಯಾನ್ ಚತುರಃ ಕುಮಾರಾನ್ ಸಾ ದ್ರೌಪದೀ ನಾಮ ಬಭೂವ ಭೂಮೌ ॥ –(೨/೧೭೫)

೧೭) ಶ್ರೀವಾಯುದೇವರ ಹನುಮದ್ರೂಪವು ಶ್ರೀರಾಮನ ಸಮೀಪದಲ್ಲಿ ಕ್ರೀಡಿಸುತ್ತಿದೆ; ಅವರೊಂದಿಗೆ ಏಕಾಂತದ ಮಾತುಗಳನ್ನು ಆಡುವ ಸಮಯದಲ್ಲಿ ಬಾಗಿ ನಿಲ್ಲುತ್ತದೆ; ದುಷ್ಟರಕ್ಕಸರ ಸಂಹಾರ ಮೊದಲಾದ ಶ್ರೀರಾಮನ ಕಾರ್ಯಗಳನ್ನು ಸಾಧಿಸುತ್ತದೆ. 'ಸ್ವಾಮಿಭಕ್ತಿಯನ್ನು ತೋರಿಸುವಾಗ ಅದರ ಶರೀರ ಬಾಗುತ್ತದೆ; ಆದರೆ ಸ್ವಾಮಿಕಾರ್ಯವನ್ನು ಮಾಡುವಲ್ಲಿ ಮಾತ್ರ ಅದರ ಮನಸ್ಸು ಎಂದೂ ವಕ್ರವಾಗುವುದೇ ಇಲ್ಲ' ಎಂಬ ಅರ್ಥವಿಶೇಷವನ್ನು 'ಸಾಧಯತೇ' ಎಂಬ ಪ್ರಸಿದ್ಧ ಪದವನ್ನು ಬಿಟ್ಟು 'ಸಾಧತೇ' ಎಂಬ ಯಥಾಸ್ಥಿತ ಧಾತು ಪ್ರಕೃತಿಯ ಪ್ರಯೋಗವು ಸೂಚಿಸುತ್ತದೆ.

೧೮) ಹನುಮಂತ ಮೊದಲಾದ ವಾಯುದೇವರ ಮೂರುರೂಪಗಳಿಂದ 'ಭರ್ಗಃ' ಶಬ್ದವಾಚ್ಯನಾದ ಭಗವಂತನ ರೂಪವು ಮೂಲರಾಮಾಯಣ ಪಂಚರಾತ್ರ ಬ್ರಹ್ಮಸೂತ್ರಗಳ ವ್ಯಾಖ್ಯಾನಾದಿಗಳಿಂದ ಪ್ರಾದುರ್ಭೂತವಾಯಿತು; ಭಗವಂತನಿಗೆ ಜನನಾದಿ ದೋಷಗಳಿಲ್ಲ; ಅವನು ಗಾಯತ್ರೀಪ್ರತಿಪಾದ್ಯ ಎಂಬುದನ್ನೂ ಭರ್ಗ ಎಂಬ ಪದವು ಸೂಚಿಸುತ್ತದೆ, ಎಂಬ ಅರ್ಥವಿಶೇಷವೂ ಇದರಲ್ಲಿದೆ.

೧೯) 'ಸಹಃ' ಎಂಬುದು ಮುಖ್ಯಪ್ರಾಣವಾಚಕವೆಂದು ಭಾಗವತಪುರಾಣದಲ್ಲಿದೆ (೮/೫/೩೭) :

''ಪ್ರಾಣಾದಭೂದ್ಯಸ್ಯ ಚರಾಚರಾಣಾಂ ಪ್ರಾಣಃ ಸಹೋ ಬಲಮೋಜಶ್ಚ ವಾಯುಃ''

---

೧. ಉಕ್ತರೀತ್ಯಾ ತಸ್ಯೈವಾತಿಪ್ರಬಲತ್ವಾತ್ ಜಗದ್ಗುರುತಯಾ ಜ್ಞಾನದಾಯಕತೃತೀಯರೂಪಸ್ಯ ಸಾಕ್ಷಾನೋಕ್ಷೋಪಯೋಗಿತಯಾ ಭಗವತಃ ಸರ್ವೋತ್ತಮತ್ವಾದಿಮಹಾಮಹಿಮಸ್ಥಾಪಕತಯಾ ಸ್ವಪ್ರಾಮಾಣ್ಯಸ್ಥಾಪಕತಯಾ ಸ್ವಾರ್ಥಕಮೀಮಾಂಸತಯಾ ಶ್ರುತೇರತ್ಯಂತಪ್ರಿಯತಯಾ ತತ್ಪೈವ ಭರಾದ್ 'ವಪುಷೇ' ಇತಿ ಏಕವಚನಮ್। ಅತ ಏವ ಮೂಲರೂಪೇ ಅವತಾರದ್ವಯೇಽಪಿ ಚ ಅರ್ಧಾರ್ಧಋಕ್ ತೃತೀಯರೂಪವಿಷಯೇ ತು ಸಾರ್ಧಋಕ್ ತ್ರಯಮ್। -(ಭಾ.ವಿ.)

೧.. ಋತಸ್ಯ ಯಥಾರ್ಥಜ್ಞಾನಸ್ಯ ರಾಮಸ್ಯ ಚ ಸಮೀಪೇ ಹ್ವರತೇ ಕ್ರೀಡತೇ। ಏಕಾಂತೋಕ್ತಿಸಮಯೇ ನಮ್ರೀಭವತಿ ಚ । ಸಾಧತೇ ದುಷ್ಪರಾಕ್ಷಸಹಿಂಸನಾದಿ ರಾಮಕಾರ್ಯಾಣಿ ಸಾಧಯತೇ। ಸ್ವಾಮಿಭಕ್ತಿಕರಣೇ ಅಂಗಕೌಟಿಲ್ಯಸದ್ಭಾವೇಽಪಿ ಸ್ವಾಮಿಕಾರ್ಯಕರಣಸಮಯೇ ಮನಃಕೌಟಿಲ್ಯಾಭಾವಸೂಚನಾಯ ಸಾಧ್ಯತೇ ಇತಿ ಪ್ರಸಿದ್ಧಪ್ರಯೋಗಂ ವಿಹಾಯ ಯಥಾಸ್ಥಿತಧಾತುಪ್ರಕೃತೇರೇವ ಪ್ರಯೋಗಃ ಕೃತಃ। -(ಭಾ.ವಿ.)

೧. ಯತೋ ಹನುಮದಾದ್ಯವತಾರತ್ರಯಾತ್ ಭರ್ಗಃ ಭಾರರೂಪತ್ವಾತ್ ರತಿರೂಪತ್ವಾತ್ ಗತಿರೂಪತ್ವಾಚ್ಚ ಭರ್ಗಃಶಬ್ದವಾಚ್ಯಂ ಭಗವತೋರೂಪಂ ಅಜನಿ । ಮೂಲರಾಮಾಯಣ ಪಂಚರಾತ್ರಬ್ರಹ್ಮಸೂತ್ರವ್ಯಾಖ್ಯಾನಾದಿನಾ ಪ್ರಾದುರ್ಭೂತಮಭೂತ್। -(ಭಾ.ವಿ.)

ಭಗವತ್ಪರತಾಯಾಂ ತು ಭಗವತೋ ಜನನಾಭಾವಸೂಚನಾರ್ಥಂ ಗಾಯತ್ರೀಪ್ರತಿಪಾದ್ಯತ್ವ ಸೂಚನಾರ್ಥಂ ಚ ಭರ್ಗೇ ಇತಿ ವಿಶೇಷಣಮ್। -(ಭಾ. ವಿ.)

೨೦) ಶ್ರೀರಾಮ, ಕೃಷ್ಣ ವೇದವ್ಯಾಸ ಎಂಬ 'ಭರ್ಗಃ' ಶಬ್ದವಾಚ್ಯಗಳಾದ ಭಗವದವತಾರಗಳು ಭೂಮಿಯಲ್ಲಿ ಅವತರಿಸಿದವು; ಅವುಗಳ ಸೇವೆಗೆಂದು ಶ್ರೀವಾಯುದೇವರು ಅವತರಿಸಿದರು ಎಂದೂ ಭಾವ.

'ಯತೋ ಯಸ್ಮಾತ್ ಕಾರಣಾತ್ ಭರ್ಗಃ ಶಬ್ದವಾಚ್ಯಂ ಭಗವತೋ ರಾಮರೂಪವಮ್ । ಕೃಷ್ಣರೂಪಂ ವ್ಯಾಸರೂಪಂ ಚ ಅಜನಿ ಭೂಮಾವವತೀರ್ಣಮಭೂತ್। ತಸ್ಮಾತ್ ಕಾರಣಾತ್ ತತ್ಸೇವಾರ್ಥಂ ವಪುಷೇ ಧಾಯೀತಿ ವಾ ॥'' –(ಭಾ. ವಿ.)

೨೧) 'ಋತಂ' ಎಂದರೆ 'ಬ್ರಹ್ಮ' (ವಿಷ್ಣು) ಎಂಬ ಅರ್ಥವು ಶ್ರುತಿ ಪ್ರಸಿದ್ಧ:

''ಋಗತೌ'' ಇತಿ ಧಾತೋಸ್ತು ಪೂರ್ವಾವಗತವತ್ ಸದಾ ।
ಸ್ಥಿತೇರ್ಬ್ರಹ್ಮತ್ವಮಿತ್ಯುಕ್ತಂ'' – ತತ್ತ್ವೋದ್ಯೋತ –(ವ್ಯಾಸಸ್ಮೃತಿ)

ಸುಷ್ಟು ಸರ್ವದಾ ಸರ್ವತ್ರ ಚ ಸತ್ಯರೂಪಸ್ಯ ಚೇತ್ಯರ್ಥಃ ।
ಯದ್ವಾ ಪೂರ್ವಾವಗತವತ್ ಸದಾಸ್ಥಿತಸ್ಯ । – (ಬೃಹದಾರಣ್ಯಭಾವಬೋಧ)

ಆ ಹನೂಮದ್ರೂಪವು ಇಂದೂ ಶ್ರೀರಾಮನನ್ನು ಸಾಕ್ಷಾತ್ತಾಗಿ ಕಾಣುತ್ತ ಸ್ತುತಿಸುತ್ತ ಕಿಂಪುರುಷಖಂಡದಲ್ಲಿ ಇರುವುದು ಎಂಬ ಅರ್ಥವಿಶೇಷವನ್ನು ಶ್ರೀತ್ರಿವಿಕ್ರಮಪಂಡಿತಾಚಾರ್ಯರು ಇದಕ್ಕೆ ಮಾಡಿರುವರು.

ಬಳಿತ್ಥಾಸೂಕ್ತದಲ್ಲಿ ಅವತಾರತ್ರಯ

ಪೃಕ್ಷೋ ವಪುಃ ಪಿತುಮಾನ್ನಿತ್ಯ ಆಶಯೇ
ದ್ವಿತೀಯಮಾ ಸಪ್ತಶಿವಾಸು ಮಾತೃಷು ।
ತೃತೀಯಮಸ್ಯ ವೃಷಭಸ್ಯ ದೋಹಸೇ
ದಶಪ್ರಮತಿಂ ಜನಯಂತ ಯೋಷಣಃ ॥ ೨ ॥

---

೧. ಸದಾ ಚ ನಿತ್ಯಪ್ರತ್ಯಕ್ಷಸ್ಯ ತಸ್ಯ ಸಮೀಪಗತ ಏವ ಹ್ಯಯಂ ಮತಿಶಬ್ದತೋ ಹನೂಮಾನ್। ಅದ್ಯಾಪಿ ಹಿ ಸಿದ್ಧಗಂಧರ್ವಪರಿಗೀತಸತತರಮಣಾತ್ಮಕಸಕಲಸಜ್ಜನಮನೋರಮಣರಾಮಾಭಧೇಯರಮಾರಮಣಗುಣಗಣಾಮೃತರಸಾಸ್ವಾದಮಹೋತ್ಸವಸಮುದ್ಭೂತಹರ್ಷಾಶ್ರುಗದ್ಗದಪುಲಕಾಕುಲಿತಃ ಕಿಂಪುರುಷೇ ಖಂಡೇ ತಿಷ್ಠತೀತಿ ಭಾವಃ। –(ತತ್ತ್ವಪ್ರದೀಪ)

೧. ಋ. ೧/೧೪೧/೧-೫

೨. ಪೃಚ್ಛಬ್ದಃ ಪೃತನಾವಾಚೀ ಪ್ರಸಿದ್ಧಃ। ತಸ್ಮಿನ್ ಕರ್ಮಣ್ಯುಪಪದೇ 'ಕ್ಷಿ' ಕ್ಷಯೇ। ಇತ್ಯೇತಸ್ಮಾತ್ ಆತೋಽನುಪಸರ್ಗೇ ಕ ಇತಿ ಕಃ। ಉಪಪದತಕಾರಲೋಪಶ್ಚಾಂದಸಃ। ಪುಲ್ಲಿಂಗಂ ಚ ಶ್ರುತ್ಯನುಸಾರೇಣ। ಅಸುನ್ ವಾ ಪ್ರತ್ಯಯಃ। ಕಿದಿತಿ ನಪುಂಸಕಮೇವೇದಮ್। ರಿಪುಪೃತನಾಕ್ಷಯಕಾರೀತ್ಯರ್ಥಃ। – (ನ್ಯಾಯಸುಧಾ)

ಅ: ದ್ವಿತೀಯಂ – (ಶ್ರೀವಾಯುವಿನ ಎರಡನೆಯ (ಭೀಮಸೇನ) ಅವತಾರವು) ಪೃಕ್ಷಃ – (ಪೃತ್ – ಕ್ಷಃ) ಕೌರವಸೇನೆಗೆ ಕ್ಷಯಮಾಡಿದುದು, ಪಿತುಮಾನ್ – ಬಹ್ವನ್ನವನ್ನು ಭೋಜನ ಮಾಡುವಂತಹುದು, ನಿತ್ಯಃ – ಸ್ವಚ್ಛಂದಮೃತ್ಯುವಾಗಿ ನಿತ್ಯವಾದುದು; (ಆಗಿ)ಮಾತೃಷು – ಮಾತೃಶಬ್ದವಾಚ್ಯವಾದ, ಸಪ್ತಶಿವಾಸು – ಮಂಗಲಕರವಾದ ಋಗ್ವೇದ, ಯಜುರ್ವೇದ ಸಾಮವೇದ, ಅಥರ್ವಣವೇದ, ಮಹಾಭಾರತ(ಇತಿಹಾಸ), ಪುರಾಣ ಮತ್ತು ಪಂಚರಾತ್ರಗಳೆಂಬ ಸಪ್ತಸದಾಗಮಗಳಲ್ಲಿ ಆ – ಚೆನ್ನಾಗಿ, ಶಯೇ – ವಿಹರಿಸಿತು; ಅಸ್ಯ ವೃಷಭಸ್ಯ – ದೇವಶ್ರೇಷ್ಠನಾದ ಈ ವಾಯುವಿನ; ತೃತೀಯಂ–ಮೂರನೆಯ ರೂಪವಾದ; ದಶಪ್ರಮತಿಂ – ಪೂರ್ಣಪ್ರಜ್ಞರನ್ನು; ದೋಹಸೇ – ತತ್ತ್ವಜ್ಞಾನವನ್ನು ಕರೆಯಲೆಂದು; ಯೋಷಣಃ – ವೇದಾ(ವಿದ್ಯಾ)ಭಿಮಾನಿನಿಯಾದ ಶ್ರೀ, ಭೂ ಮತ್ತು ದುರ್ಗಾ ಎಂಬ ದೇವಿಯರು; ಅಜನಯಂತ –(ಮಧ್ವಗೇಹರೆಂಬವರ ಪತ್ನಿಯಲ್ಲಿ ಸನ್ನಿಹಿತರಾಗಿದ್ದು) ಹುಟ್ಟಿಸಿದರು.

ಶ್ರೀವಾಯುದೇವರ ಎರಡನೆಯ ಅವತಾರವು, ಸೈನ್ಯವನ್ನು ನಾಶಪಡಿಸುವುದೂ ಬಹ್ವನ್ನವನ್ನು ಭೋಜನಮಾಡುವುದೂ, ನಿತ್ಯ ಯಥಾರ್ಥಜ್ಞಾನೋಪೇತವೂ ಆದ ಭೀಮರೂಪ; ಅದು ಋಗ್ವೇದ ಮೊದಲಾದ ಸಪ್ತಮಂಗಲಕರವಾದ ಸಚ್ಛಾಸ್ತ್ರಗಳಲ್ಲಿ ಚೆನ್ನಾಗಿ ವಿಹರಿಸಿತು.

ಟಿ: ೧) ಈ ಋಕ್ಕಿನ ಪೂರ್ವಾರ್ಧದಲ್ಲಿ ಶ್ರೀವಾಯುದೇವರ ದ್ವಿತೀಯಾವತಾರರಾದ ಶ್ರೀಭೀಮಸೇನನ ವರ್ಣನೆ ಬಂದಿದ್ದು ಉತ್ತರಾರ್ಧದಲ್ಲಿ ಅವರ ತೃತೀಯಾವತಾರವಾದ ಶ್ರೀಪೂರ್ಣಪ್ರಜ್ಞರೂಪದ ವರ್ಣನೆಯು ಪ್ರಾರಂಭವಾಗಿದೆ.

---

೨. ದ್ವಿತೀಯಂ ವಪುರ್ಭೀಮನಾಮಕಂ ಕುರುಪೃತನಾಕ್ಷಯಕಾರಕಮ್। – (ತತ್ತ್ವಪ್ರಕಾಶಿಕಾ)

ತಸ್ಯೈವ ಕ್ಷಿತಿಭಾರಭೂತಪ್ರಭೂತಬಲದುರ್ದಮದುಷ್ಪಜನಸಂಹರಣಕೃತಾವತಾರಸ್ಯ ಕೃಷ್ಣಸ್ಯ ಸಹಕಾರಿ ಪೃತನಾಕ್ಷಯಕಾರಿ ಪೃಕ್ಷೋ ದ್ವಿತೀಯಂ ವಪುಃ॥ – (ತತ್ತ್ವಪ್ರದೀಪ)

೨. ದೋಹಸೇ – 'ದುಹ್ ಪ್ರಪೂರಣೇ' ಇತಿ ಧಾತೋಃ ಸರ್ವಜ್ಞಾನಪೂರಣಾಯ। ದೋಹಸೇ – ಜ್ಞಾನ-ದೋಹನಾಯ। ...ಜ್ಞಾನಪ್ರಕಟನಾಯ। – (ಜ)

೨. ದೋಹಸೇ – ವಿಷ್ಣ್ವಾಖ್ಯತತ್ತ್ವಜ್ಞಾನದೋಹನಾರ್ಥಮ್। – (ವ)

೨. ಸಪ್ತ ಚ ತಾಃ ಶಿವಾಶ್ಚೇತಿ ಸಪ್ತಶಿವಾಃ – ತಾಸು ಸಪ್ತಸಂಖ್ಯಾಕಾಸು ಶಿವಾಸು ಶೋಭನಾಸು ಮಾತೃಷು ಮಾಪಯಂತಿ ಜ್ಞಾಪಯಂತಿ, ಪರಮಾತ್ಮಾನಮಿತಿ ಮಾತೃಶಬ್ದವಾಚ್ಯಾಸು ವಿದ್ಯಾಸು

ಋಗ್ಯಜುಃಸಾಮಾಥರ್ವಭಾರತ ಪಂಚರಾತ್ರ ಮೂಲರಾಮಾಯಣಾಖ್ಯಾಸು ಸಪ್ತವಿದ್ಯಾಸು ಇತ್ಯರ್ಥಃ -(ವಾ)

ಸಪ್ತಶಿವಾಸು – ಋಗಾದ್ಯಾಶ್ಚ ತ್ವಾರಃ, ಇತಿಹಾಸಃ ಪುರಾಣಂ ಪಂಚರಾತ್ರಕಮಿತಿ ಸಪ್ತಸಂಖ್ಯಾಕಾಸು ನಿರ್ದೋಷತ್ವಾತ್ ಶಿವಾಸು ಮಂಗಲರೂಪಾಸು, ಮಂಗಳಾಖ್ಯವಿಷ್ಣುಪ್ರತಿಪಾದಕಾಸು ವಾ। -(ಜ)

೨) **ಪೃಕ್ಷಃ** ಎಂಬ ಪದವು ಪೃತ್ – ಕ್ಷ – ಎಂದು ನಿಷ್ಪನ್ನವಾಗಿದ್ದು (ಕೌರವ)ಸೇನೆಯನ್ನು ನಾಶಗೊಳಿಸಿದುದು ಎಂಬ ಅರ್ಥವನ್ನು ಹೊಂದಿದೆ. ಕೌರವರ ಒಟ್ಟು ಹನ್ನೊಂದು ಅಕ್ಷೋಹಿಣೀ ಸೇನೆಯಲ್ಲಿ ದುರ್ಯೋಧನಾದಿ ನೂರುಜನ ಕೌರವರನ್ನು ಕೊಲ್ಲುವುದರೊಂದಿಗೆ ಅದರಲ್ಲಿನ ಒಟ್ಟು ಆರು ಅಕ್ಷೋಹಿಣೀ ಸೇನೆಯನ್ನು ಒಬ್ಬನೇ ನಾಶಪಡಿಸಿದ್ದು ಶ್ರೀಭೀಮಸೇನ ಎಂಬುದನ್ನು ಅರ್ಥ ಮಾಡಿಕೊಂಡರೆ ಅವರಿಗೆ ಈ ವಿಶೇಷಣದ ಸಾರ್ಥಕ್ಯ ಅರ್ಥವಾಗುತ್ತದೆ. ಅದರಂತೆ ಬಕ, ಕಿರ್ಮೀರ, ಜರಾಸಂಧ ಮೊದಲಾದ ಇತರ ಸಕಲ ಅಸುರರನ್ನೂ, ಅವರ ಸೇನೆಯನ್ನೂ ಸಂಹರಿಸಿದ್ದು ಸಹ ಶ್ರೀಭೀಮಸೇನನೇ ಆಗಿರುವನು.

೩) ಪಿತುಮಾನ್ – 'ಪಿತುಃ' ಎಂದರೆ 'ಅನ್ನ'ವೆಂದು ಅರ್ಥ ಎಂದು ವೇದಗಳಲ್ಲೇ ಉಕ್ತವಾಗಿದೆ; ಅದರಂತೆ 'ಪಿತುಮಾನ್' ಎಂದರೆ 'ಅನ್ನವಾನ್' ಎಂದು ಅರ್ಥವಾಗುತ್ತದೆ. ಬಹ್ವನ್ನಭೋಕ್ತೃ ಎಂಬುದು ಅದರ ಒಟ್ಟು ಭಾವ.

೪) ನಿತ್ಯಃ – ಸ್ವಚ್ಛಂದವ್ಯತ್ಯು ಎಂಬ ಕಾರಣದಿಂದಾಗಿ ಭೀಮಸೇನನಿಗೆ 'ನಿತ್ಯ' ಎಂದು ಹೆಸರು; ಪ್ರಲಯಕಾಲದಲ್ಲೂ ಲುಪ್ತವಾಗದ ಅವೋಧಜ್ಞಾನ ಇವರದು ಎಂಬ ಅರ್ಥದಲ್ಲೂ ಇಲ್ಲಿಯ 'ನಿತ್ಯ' ಎಂಬ ವಿಶೇಷಣವು ಅವರಿಗೆ ಯುಕ್ತವಾಗಿದೆ.

ಮಾತೃಷು–ಮಾಪಯಂತಿ ಪ್ರಾಪಯಂತಿ ಪರಮಾತ್ಮಾನಂ ಇತಿ ಮಾತರಃ।
ಮಾತೃಷು – ಮಾಪಯಂತಿ ವಿಜ್ಞಾಪಯಂತಿ ಅರ್ಥಾನಿತಿ ಮಾತರಃ ತಾಸು। – (ವ; ಜ)

೨. ಪೃತ್ – ಪೃತನಾ; ತಸ್ಯಾಃ ಕ್ಷಯಕಾರಿತ್ವಾತ್, ಪೃಕ್ಷಃ ಶಬ್ದವಾಚ್ಯಮ್ । 'ಕ್ಷೀಣ್ ಕ್ಷಯೇ' ಇತಿ ಧಾತೋಃ ಕರ್ತ್ರರ್ಥೇ ಔಣಾದಿಕೇ ಡಸನ್ ಪ್ರತ್ಯಯೇ ಕೃತೇ 'ಪಕ್ಷಃ' ಇತಿ ಸಕಾರಾಂತಶಬ್ದನಿಷ್ಪತ್ತಿರಿತಿ ಭಾವಃ। –(ವಾ)

ಪೃತಂ ಸೇನಾಂ ಕ್ಷಿಣೋತೀತಿ ಪೃಕ್ಷಃ ಪೃಕ್ಷ ಶಬ್ದೋ ಯದಾ ಕ್ಷಯೇ ಇತ್ಯಸ್ಮಾತ್ ಉಪಬತ್ಯಯೋ ಡಿತ್ವಾರೋಪೇ ಚ ಪೃಕ್ಷ ಇತಿ ರೂಪಂ ಸಿದ್ಧ್ಯತಿ ।।'ಕ್ಷೀಕ್ಷಯೇ' ಇತಿ ಧಾತೋಃ ಭಣಾದಿಕೇ ಡಸ್ ಪ್ರತ್ಯಯೇ ಕೃತೇ ಪೃಕ್ಷ ಇತಿ ಸಕಾರಾಂತಂ ಪದಮ್ । ತಕಾರಲೋಪಃ ಛಾಂದಸಃ। –(ಭಾ.ವಿ)

೨. ಏವಮಕ್ಷೋಹಿಣೀಷಟ್ಕಂ ಭೀಮೇನ ನಿಹತಂ ರಣೇ। -(೨೮/೪೩)

೨. ಪಿತುಮಾನ್ – 'ಪಿತುರಿತ್ಯನ್ನನಾಮ ಸ್ಯಾತ್' ಇತಿ ಬ್ರಾಹ್ಮಣವಚನಾತ್ ಅನ್ನವಾನ್ । ಮತುಪಃ ಪ್ರಾಶಸ್ತ್ಯಾರ್ಥ-ಕಥನಾತ್ 'ಬಹ್ವನ್ನಭೋಕ್ತಾ' ಇತ್ಯರ್ಥಃ। – (ವಾ)

ಅಸಾಧಾರಣ್ಯೇನ ವ್ಯಪದೇಶಾ ಭವಂತೀತಿ ನ್ಯಾಯೇನ ಬಹ್ವನ್ನಭೋಕ್ತೃತ್ವಾತ್। ತದ್ವಾನ್ ಇತ್ಯುಚ್ಯತೇ । ಪ್ರಸಿದ್ಧಂ ಚ ಭೀಮೇ ಬಹ್ವನ್ನಭೋಕ್ತೃತ್ವಮ್ । ಬಕಾಸುರವೆಧಾದೌ ಭೀಮಶಬ್ದಪ್ರವೃತ್ತಿನಿಮಿತ್ತಮಪ್ಯತ್ರೋಚ್ಯತೇ। -(ವ)

'ಬಂಡಿ ಅನ್ನವನುಂಡಿತು ಕೂಸು' ಎಂಬ ಶ್ರೀಪುರಂದರದಾಸರ ಮಾತು ಈ ಶ್ರುತಿಯ ಅರ್ಥರೂಪವಾಗಿದೆ ಎಂಬುದನ್ನು ಗಮನಿಸಬೇಕು.

೫) ಆ ಶಯೇ – ಚೆನ್ನಾಗಿ ಮಲಗಿದರು ಎಂದು ಮೇಲಿನ ಅರ್ಥ; ಮಲಗಿದವನು ಬಹಿರ್ವ್ಯಾಪಾರವನ್ನು ಪೂರ್ಣವಾಗಿ ತೊರೆಯುವಂತೆ (ಬಡಗಿಯು ಇತರ ಸಕಲಕಾರ್ಯಗಳನ್ನೂ ತೊರೆದು ತನ್ನ ಕಾರ್ಯದಲ್ಲಿ ತನ್ಮಯನಾಗುವಂತೆ) ಶ್ರೀಭೀಮಸೇನನು ಸದಾ ವೇದಾದಿ ಶಾಸ್ತ್ರವಿಚಾರದಲ್ಲೇ ಪೂರ್ಣವಾಗಿ ನಿರತರಾಗಿರುವನು ಎಂದು ಭಾವ.

೬) **ದಶಪ್ರಮತಿಂ** – ಎಂಬಲ್ಲಿ 'ದಶ' ಎಂದರೆ ಸರ್ವ ಎಂದೂ, ಸರ್ವ ಎಂದರೆ ಪೂರ್ಣ ಎಂದೂ ಅರ್ಥ; ಪ್ರಮತಿ ಎಂದರೆ 'ಪ್ರಜ್ಞಾ' ಎಂದರ್ಥ; 'ಪೂರ್ಣಪ್ರಜ್ಞ' ಎಂಬುದು ಅದರ ಒಟ್ಟು ಅರ್ಥ.

೭) **ಯೋಷಣಃ** – ಎಂಬುದಕ್ಕೆ ಸ್ತ್ರೀಯರು ಎಂದು ಸಾಮಾನ್ಯವಾದ ಅರ್ಥ; ಇಲ್ಲಿ ವಾಯುದೇವರನ್ನು ಹುಟ್ಟಿಸುವ ಸ್ತ್ರೀಯರ ಪ್ರಸಕ್ತಿಯಾದ್ದರಿಂದ ಶ್ರೀಭೂದುರ್ಗಾ ಎಂದು

---

೨. ನಿತ್ಯಃ–ಸ್ವಚ್ಛಂದಮೃತ್ಯುತ್ವಾತ್ ನಿತ್ಯಶಬ್ದವಾಚ್ಯಃ। –(ವಾ)

'ಸ್ವಚ್ಛಃ ಸ್ವಚ್ಛಂದಮೃತ್ಯುಃ' ಎಂಬ ವಾಯುಸ್ತುತಿಯ ಮಾತು ಈ ಶ್ರುತಿಗೆ ವಿವರಣರೂಪವಾಗಿದೆ. 'ಸ್ವಚ್ಛಂದಮೃತ್ಯವೋ ಯೋಗಾತ್' –(೩೨/೬೫)

ಏವಂ ಪ್ರಲಯಕಾಲೇऽಪಿ ಪ್ರತಿಭಾತಪರಾವರಃ। ಮುಖ್ಯವಾಯುರ್ನಿತ್ಯಸಮಃ..... -(ಅನುವ್ಯಾಖ್ಯಾನ)

ಇಲ್ಲಿನ ನಿತ್ಯ ಶಬ್ದವನ್ನು 'ನಿತ್ಯಂ ಆಶಯೇ' ಎಂಬುದಾಗಿ ಸಹ ಅನ್ವಯಿಸಿ ವರದರಾಜೀಯ ಮತ್ತು ಜನಾರ್ದನ-ಭಟ್ಟೀಯ ವ್ಯಾಖ್ಯಾನಗಳಲ್ಲಿ ಅರ್ಥ ಬರೆಯಲಾಗಿದೆ; ನಿತ್ಯಃ– ನಿತ್ಯಂ ಆ ಸಮಂತಾತ್, ಶಯೇ– ರೇಮೇ –(ವ)

ಜನಾರ್ದನಭಟ್ಟರು 'ನಿತ್ಯಃ' ಎಂಬುದನ್ನು 'ನಿತ್ಯಾಸು' ಎಂಬುದಾಗಿ 'ಸಪ್ತಶಿವಾಸು' ಎಂಬುದಕ್ಕೆ ವಿಶೇಷಣವನ್ನಾಗಿಯೂ ಅನ್ವಯಿಸಿರುವರು.

ನಿತ್ಯಃ– ನಿತ್ಯಾಸು ಇತಿ ವಾ। ಅತ್ರ ಕೇಷಾಂಚಿದದರ್ಥತಃ ನಿತ್ಯತ್ವಂ ಜ್ಞೇಯಮ್। ನಿತ್ಯಃ - ಪ್ರಲಯೇऽಪ್ಯ-ವಿಲುಪ್ತಜ್ಞಾನಃ। ನಿತ್ಯಃ – ನಿತ್ಯಂ ಶಯೇ ಇತಿ ವಾ। –(ಜ)

ಭೃತಮೋ ಭೀಮ ಇತ್ಯುಕ್ತೋ ವಾಚೋ ಮಾ ಮಾತರಃ ಸ್ಮೃತಾಃ।
ಋಗಾದ್ಯಾ ಇತಿಹಾಸಶ್ಚ ಪುರಾಣಂ ಪಂಚರಾತ್ರಕಮ್।
ಪ್ರೋಕ್ತಾಃ ಸಪ್ತಶಿವಾಸ್ತತ್ರ ಶಯೋ ಭೀಮಸ್ತತಃ ಸ್ಮೃತಃ॥

— ಎಂಬ ಶ್ರೀಮದಾಚಾರ್ಯರಿಂದ ಉದಾಹೃತವಾದ ಸದ್ಭಾವ(ಭಾವ ವೃತ್ತ)ವೆಂಬ ಪ್ರಮಾಣವಾಕ್ಯವು ಇದರ ಅರ್ಥ ರೂಪವಾಗಿದೆ.

೨. ಆ ಸಮಂತಾತ್ ಸಮ್ಯಕ್ ಚ ಶಯೇ। ಶಿಶ್ಯೇ। ಯಥಾ ಸುಪ್ತಃ ಪುರುಷೋ ಬಹಿರನ್ಯನ್ನ ಪಶ್ಯತಿ ತಥಾ ತಾಸಾಮರ್ಥವಿಚಾರೇ ಸಮಾಹಿತ ಚಿತ್ತತ್ವಾತ್ ಶರಕೃದ್ವತ್ ಬಹಿರ್ವ್ಯಾಪರಮಜಾನಾನಃ ಸನ್ ತಾ ಏವ ವಿಚಾರಯಾಮಾಸ ಇತ್ಯರ್ಥಃ। ಅನೇನ ಭೃತಾಃ ಮಾಃ ಮಾಪಯಂತೀತಿ ಮಾಃ ವಿದ್ಯಾಃ ಯೇನ ಸ ಇತಿ ವ್ಯುತ್ಪತ್ತ್ಯಾ ಭೀಮಶಬ್ದಾರ್ಥ ಉಕ್ತೋ ಭವತಿ। 'ವರ್ಣಾಗಮೋ ವರ್ಣವಿಪರ್ಯಯಶ್ಚೇತಿ' ವಚನಾತ್ ಋಕಾರಸ್ಯ ಈಕಾರಾದೇಶಃ। –(ವಾ)

ವೇದಾಭಿಮಾನಿಗಳಾದ ಲಕ್ಷ್ಮೀರೂಪಗಳೇ ವಿವಕ್ಷಿತ ಎಂದು ತಿಳಿಯಬೇಕು. ಮಧ್ಯಗೇಹಪತ್ನಿಯಲ್ಲಿ ಸನ್ನಿಹಿತರಾಗಿದ್ದು ಶ್ರೀಮಧ್ವಾಚಾರ್ಯರಿಗೆ ಜನ್ಮವಿತ್ತವರು ಶ್ರೀಭೂದುರ್ಗಾರೂಪದ ಮಹಾಲಕ್ಷ್ಮೀ ಎಂಬ ಸೂಚನೆಯೂ ಇಲ್ಲಿದೆ.

೮) ಈ ಮಂತ್ರಕ್ಕೆ ವ್ಯಾಖ್ಯಾನರೂಪವಾದ ಶ್ರೀವಾದಿರಾಜರ ಯುಕ್ತಿಮಲ್ಲಿಕಾಗ್ರಂಥದ ಮಾತುಗಳು ಹೀಗಿವೆ :

ದ್ವಿತೀಯಂ ಚ ವಪುಃ ಸಾ ವಾಕ್ ಪಿತುಮಾನಿತಿ ಶಂಸತಿ ।
ಪಿತುರಿತ್ಯನ್ನನಾಮೇತಿ ಬ್ರಾಹ್ಮಣಂ ಪಿತುಮಾಂಸ್ತತಃ ॥

---

೨. **'ಸ ವಾಯುರೇವಾಭವದತ್ರ ಭೀಮನಾಮಾ ।**
ಭೃತಾ ಹಿ ಮಾಃ ಸಕಲಾ ಹಿ ಯಸ್ಮಿನ್॥' -(೧೨/೨೦)

– ಎಂಬ ಶ್ರೀಮದಾಚಾರ್ಯರ ಮಾತು ಈ ಶ್ರುತಿವಚನಕ್ಕೆ ವಿವರಣರೂಪವಾಗಿದೆ.

ದಶಪ್ರಮತಿಂ–'ದಶದಶತಸ್ತಚ್ಛತಂ' ಇತ್ಯಾದಿ ಶ್ರುತೇಶ್ಚ ದಶ–ಪೂರ್ಣಾಃ ಮತಯೋಃ ಭಗವದ್ವಿಷಯತ್ವಾತ್ ಪ್ರಕೃಷ್ಟಾ ಮತಯೋ ಯಸ್ಯ ತಂ ಪೂರ್ಣಪ್ರಜ್ಞಮಿತಿ ಯಾವತ್ । –(ವಾ)

ದಶಪ್ರಮತಿಂ–'ಶತಂ ದಶ ಸಹಸ್ರಂ' ಇತ್ಯಪರಿಮಿತನಾಮಾನಿ – ಇತಿ ಶ್ರುತೇಃ । ಪೂರ್ಣಪ್ರಜ್ಞಂ ಪೂರ್ಣಪ್ರಜ್ಞಾನಸ್ಥಾನಭೂತದೇಹಮ್ । –(ಜ)

'ದಶೇತಿ ಸರ್ವಮುದ್ದಿಷ್ಟಂ ಸರ್ವಂ ಪೂರ್ಣಮಿಹೋಚ್ಯತೇ ।
ಪ್ರಜ್ಞಾ ಪ್ರಮತಿರುದ್ದಿಷ್ಟಾ ಪೂರ್ಣಪ್ರಜ್ಞಸ್ತು ಸ ಸ್ಮೃತಃ ॥

– ಎಂಬ ಶ್ರೀಮದಾಚಾರ್ಯರು ಉದಾಹರಿಸಿರುವ ಯಜುಃಸಂಹಿತಾ ವಚನವು ಇದರ ವಿವರಣರೂಪವಾಗಿದೆ.

೨. ಯೋಷಣಃ–ಶ್ರೀಭೂದುರ್ಗಾಖ್ಯಾಃ ವೇದಾಭಿಮಾನಿನ್ಯೋ ಯೋಷಿತಃ । –(ವಾ)

ಯೋಷಣಃ– ಗುರುತ್ವಾದ್ ಬಹುವಚನಮ್ । 'ನಿಷ್ಕಾಸಯನ್ ಪರಮಸೌ ಭಗವಾನ್ ವಿವೇಶ' ಇತಿ ವಚನಾತ್ । ದೋಹಸೇ ದೋಹನಾಯ । -(ಜ)

'ಮಾತೃಸ್ಥಾನೀಯವಾದ ಸಪ್ತಸದಾಗಮಗಳ ಜ್ಞಾನಪ್ರಕಾಶನಕ್ಕೋಸ್ಕರ' ಎಂಬ ಅರ್ಥವನ್ನು ಶ್ರೀಜನಾರ್ದನ-ಭಟ್ಟರು ಬರೆದಿರುವರು. 'ಅಥವಾ ಯೋಷಣಃ ಯೋಷಿತಾಂ ಸಪ್ತಮಾತೃಣಾಮ್ । ದೋಹಸೇ – ಜ್ಞಾನಪ್ರಕಟನಾಯ । ಯದ್ವಾ । ಯೋಷಣಃ – ವಿದ್ಯಾಭಿಮಾನಿನ್ಯೋ ಶ್ರೀಭೂದುರ್ಗಾಖ್ಯಾ ಇತಿ । –(ಜ)

೨. ಜನಯಂತ– 'ಬಹುಲಂ ಛಂದಸ್ಯಮಾಙ್ ಯೋಗೇऽಪಿ' ಇತಿ ವಚನಾತ್ ಅಜನಯಂತ। -(ವಾ)

ಶ್ರೀಭೂದುರ್ಗಾಖ್ಯಾಃ ಋಗಾದಿ ವೇದಾಭಿಮಾನಿನ್ಯೋ ದೇವ್ಯಃ ಸ್ವಾಭಿಮನ್ಯಮಾನವೇದಾನಾಮನ್ಯೈ-ರನ್ಯಥಾ ವ್ಯಾಖ್ಯಾತತ್ವಾತ್ ಯಥಾವದ್ವ್ಯಾಖ್ಯಾನಾಯ ಮಧ್ಯಗೇಹಾಖ್ಯ ವಿಪ್ರಪತ್ನ್ಯಾಂ ಉದರೇ ಸ್ಥಿತ್ವಾ ಅಜನಯಂತ ಇತಿ ಭಾವಃ । –(ವಾ)

೨. ಪಿತುರಿತ್ಯನ್ನನಾಮೇತಿ ಬ್ರಾಹ್ಮಣವಚನಬಲಾತ್ ಪಿತುರನ್ನಮಸ್ಯಾಸ್ತೀತಿ ವ್ಯುತ್ಪತ್ತ್ಯಾ ಬಹ್ವನ್ನವಾನ್ ಭೀಮ ಏವ ಪಿತುಮಾನಿತ್ಯುಚ್ಯತೇ । ಬಹುಧನೇ ಧನವಾನಿತಿ ಪ್ರಯೋಗದರ್ಶನೇನ ಬಾಹುಲ್ಯಸ್ಯಾಪಿ ಮತುಬರ್ಥತ್ವಾದಿತಿ ಭಾವಃ । -(ಭಾ. ವಿ.)

ಬಹ್ವನ್ನವಾನಭೂದ್ಭೀಮೋ ಬಾಹುಲ್ಯಾರ್ಥಮತುಬ್ಬಲಾತ್ ।
ತೃತೀಯಂ ತು ವಪುಃ ಪ್ರಾಹ ದಶವ್ರಮತಿನಾಮಿ ಸಾ ।
ತಚ್ಚ ಪೂರ್ಣಪ್ರಜ್ಞನಾಮಸಮಾನಾರ್ಥಂ ಪ್ರತೀಯತೇ
ಬಹುತ್ವಾರ್ಥದಶತ್ವೋಕ್ತೇಃ ಪೂರ್ಣತ್ವಾರ್ಥೇಽಪಿ ವರ್ತನಾತ್ ।
ಅತಃ ಪೂರ್ಣಪ್ರಜ್ಞ ಏವ ದಶಪ್ರಮತಿನಾಮವಾನ್ ॥
ಅಪ್ಯಕ್ಷರಸ್ಯ ಸಾಮ್ಯೇನ ನಿರ್ಭ್ಯಾಯಾದಿತಿ ವೈದಿಕಾಃ ।
ಸರ್ವಸಾಮ್ಯೇ ತು ಶಬ್ದೌ ದ್ವೌ ಕಥಂ ನೈಕಾರ್ಥವಾಚಕೌ ॥
ದಶಪ್ರಮತಿನಾಮಾಽನ್ಯೋ ಯತೋ ನಾಸ್ತಿ ಜಗತ್ತ್ರಯೇ ।
ಅರ್ಥಾಲಾಭೇನ ಶಬ್ದೋಽಸೌ ಪೂರ್ಣಪ್ರಜ್ಞಂ ಬಲಾದ್ ಭಜೇತ್ ॥
– ಯುಕ್ತಿಮಲ್ಲಿಕಾ ಫಲಸೌರಭ (೬೯೭ – ೭೦೧)

ಯತೋ ಮಧ್ವೋ ಮಾತರಿಶ್ವಾ ಗುಹಾಸಂತಂ ಮಥಾಯತಿ ।
ಇತಿ ವಕ್ಷ್ಯತಿ ಯಂ ಮಧ್ವಂ ಮಾತರಿಶ್ವಾಭಿಧಂ ಸ್ಫುಟಮ್ ॥
ದಶಪ್ರಮತಿನಾಮಾತ್ರ ಸ ಏವಾತೋ ನ ಸಂಶಯಃ ॥
★ವೃಷಭಸ್ಯಾಸ್ಯ ದೇವಸ್ಯ ತೃತೀಯಂ ಚ ವಪುರ್ಹರೇಃ ।
ಯೋಷಿತೋ ವೇದಮಾನಿನ್ಯಃ ಶ್ರೀಭೂದುರ್ಗಾಭಿಧಾಃ ಕಿಲ ॥
ದೋಹಸೇ ಜ್ಞಾನದೋಹಾಯ ದಶಪ್ರಮತಿಸಂಜ್ಞಿತಮ್ ।
ಜನಯಂತ ನಿಜಾನ್ನಾರಾಯಣಾರ್ಥಮಜೀಜನನ್ ॥

---

೨. ಬಹುತ್ವಾರ್ಥದಶತ್ವೋಕ್ತೇರಿತ್ಯನೇನ 'ದಶದಶತಸ್ತಚ್ಛತಂ ಶತಶತಾನಿ ತತ್ಸಹಸ್ರಾಣಿ ತತ್ಸರ್ವ'ಮಿತಿ ಶ್ರುತಿಂ ಸೂಚಯತಿ । ಯುಕ್ತ್ಯಾಽಪಿ ದಶದಶಕಸ್ಯ ಶತತ್ವಾತ್ ದಶದಶಕಸ್ಯ ಸಹಸ್ರತ್ವಾತ್ ಏವಮನಂತಾನಾಮಪಿ ದಶಸಂಖ್ಯಯೈವ ಗುಣನಾತ್ ದಶಮತಿಪದಂ ಪೂರ್ಣತ್ವಾರ್ಥಕಮ್ ॥ –(ಭಾ.ವಿ.)

೨. ಬಲಾತ್ ಶಬ್ದಸ್ಯಾರ್ಥಸಾಹಿತ್ಯಾವಶ್ಯಂಭಾವಬಲಾತ್ । ಯದಾಹ ಕಾಲಿದಾಸೋಽಪಿ 'ವಾಗರ್ಥಾವಿವ ಸಂಪೃಕ್ತೌ' ಇತಿ । –(ಭಾ.ವಿ.)

೨.. ಅತಃ ಏಕಪ್ರಕರಣಸ್ಥಶಬ್ದದ್ವಯಸ್ಯ ಭಿನ್ನಾರ್ಥಕತ್ವಾಯೋಗಾತ್ । –(ಭಾ.ವಿ.)

೨. ಕಸ್ಯ ಯೋಷಣ ಇತ್ಯಾಕಾಂಕ್ಷಾಪೂರಣಾಯ ಯೋಗ್ಯತಯಾ ಹರೇರಿತ್ಯುಕ್ತಮ್ । ದೇವೇಷು ಬಹು-ಭಾರ್ಯಾತ್ವಸ್ಯ ಶ್ರೀಭೂದುರ್ಗಾಪತೌ ಹರಾವೇವ ಯುಕ್ತತ್ವಾತ್ ಇತಿ ಭಾವಃ । -(ಭಾ.ವಿ.)

೨. ಪೂಷನ್ ಶಬ್ದವತ್ ಯೋಷನ್ ಶಬ್ದೋಽಪಿ ನಕಾರಾಂತಸ್ತ್ರೀಲಿಂಗೋ ವೈದಿಕೋಽಸ್ತಿ । ಅತ ಏವ 'ಯೋಷಣಃ' ಇತ್ಯಸ್ಯ 'ಯೋಷಿತಃ' ಇತ್ಯರ್ಥಃ ಉಕ್ತಃ । –(ಭಾ.ವಿ.)

೨. ವೃಷಭಸ್ಯ – ದೇವಶ್ರೇಷ್ಠಸ್ಯ । –(ವಾ;ಜ)
'ದೇವಶ್ರೇಷ್ಠಸ್ತು ಮಾರುತಃ' ಎಂಬ ಭಾರತವಾಕ್ಯವನ್ನು ಇಲ್ಲಿ ಗಮನಿಸಬಹುದು. – (೨/೫)

ಅಮಾಜ್ ಯೋಗೇಽಪಿ ಲಙ್ ರೂಪಂ ಯತಃ ಸ್ಯಾಚ್ಛಂದಸೀದೃಶಮ್ ।
ಛಂದಸ್ಯಸನ್ ಪ್ರತ್ಯಯೋಽಪಿ ತುಮರ್ಥೇಽಸ್ತೀತಿ ಶಾಬ್ದಿಕಾಃ ॥ – (೭೨/೭೫)

೯) ಮಹಾಬಲನಾದ ಭೀಮಸೇನನಿಗೆ ಪ್ರತಿಸೇನೆಯೇ ಇಲ್ಲ ಎಂದು ಭಾವ.

೧೦) ಬಕನಿಗೆ ನೀಡಿದ ಸಾವಿರಪ್ರಸ್ಥದಷ್ಟು ಅನ್ನವನ್ನು ತಾನು ಭುಂಜಿಸಿ ತನ್ನನ್ನು ಆಶ್ರಯಿಸಿದ ಏಕಚಕ್ರನಗರದ ಜನಗಳ ಭಯವನ್ನು ಪರಿಹರಿಸಿದ 'ಭೀಮ' ಮಾಹಾತ್ಮ್ಯವನ್ನು ಈ ಪದ ತಿಳಿಸುತ್ತದೆ.

೩) **ಶೇತೇ** – ಎಂಬುದಕ್ಕೆ ಸರ್ವತ್ರ ವಿಮರ್ಶೆಮಾಡಿ ನಿರ್ಣಯ ಮಾಡುವವರು ಎಂದು ಅರ್ಥ. ಅವರಿಗೆ ಲೌಕಿಕಜನಗಳಂತಹ ನಿದ್ರೆ ಎಂದೂ ಇಲ್ಲವೇ ಇಲ್ಲ ಎಂಬುದನ್ನು 'ಶೇತೇ' ಎಂಬ ಲೌಕಿಕಪ್ರಯೋಗಕ್ಕೆ ಬದಲಾಗಿ 'ಶಯೇ' ಎಂಬ ಅಲೌಕಿಕಪ್ರಯೋಗವು ಸೂಚಿಸುತ್ತದೆ.

---

೨. ದೋಹಸೇ ಇತ್ಯತ್ರಾಪಿ ಹರೇರಿತಿ ಪದಮಾವರ್ತನೀಯಮ್ । –(ಭಾ.ವಿ.)

೨. ತಾಸಾಮೇತಜ್ಜನನೀತ್ವೇ ಕಿಂಕಾರಣಂ ಇತ್ಯತ ಉಕ್ತಮ್ । ನಿಜೇತಿ। ಮಾನುಷ್ಯೇಣಾಂ ದೇವಜನನೀತ್ವಾ–ಸಂಭವಾತ್ ಭಗವತ್ಪುತ್ರಸ್ಯ ಮುಖ್ಯಪ್ರಾಣಸ್ಯ ಲಕ್ಷ್ಮೀಪುತ್ರತ್ವಾತ್ ಸಹಜಮಾತರಃ ತಾ ಏವ ಮನುಷ್ಯಪತ್ನ್ಯಾಮಾವಿಷ್ಟಾಃ ತಂ ಜನಯಾಮಾಸುರಿತಿ ಭಾವಃ । –(ಭಾ.ವಿ.)

೨. ಮಾಜ್ಯೋಗೇ ಅಡಾಗಮಾಭಾವೋ ಲೋಕಸಿದ್ಧಃ । ಅಮಾಜ್ಯೋಗೇಽಪಿ ಛಂದಸಿ ಅಡಾಗಮೋ ವೈಕಲ್ಪಿಕಃ । ತಸ್ಮಾಜ್ಜನಯಂತ ಇತ್ಯಪಿ ಪದಂ ಛಂದಸೀತಿ ಭಾವಃ । ಅನೇನ 'ಬಹುಲಂ ಛಂದಸ್ಯಮಾಜ್ಯೋಗೇಽಪಿ' ಇತಿ ಸೂತ್ರಂ ಸೂಚಯತಿ' । –(ಭಾ.ವಿ.)

೨. ತುಮರ್ಥೇ ತುಮುನ್ ಪ್ರತ್ಯಯಾರ್ಥೇ। ದೋಗ್ಧುಮಿತ್ಯಾದ್ಯರ್ಥೇ ದೋಹಸೇ ಇತ್ಯಾದಿ ಪದಮಪಿ ಭವತೀತಿ ಭಾವಃ ।

ಏವಂ ಚ ಹರಿವಿಷಯಕಜ್ಞಾನದೋಹಾಯ ವೇದಾಭಿಮಾನಿದೇವತಾಭಿರ್ಜನಿತಃ ಪುತ್ರೋ ಮಧ್ವ ಏವ ಭವತೀತಿ ಭಾವಃ ॥ –(ಭಾ.ವಿ.)

೨. ಭೃತಮೋ ಭೀಮ ಇತ್ಯುಕ್ತೋ ವಾಚೋ ಮಾ ಮಾತರಃ ಸ್ಮೃತಾಃ ।
ಸ ವಾಯುರೇವಾಭವದತ್ರ ಭೀಮನಾಮಾ ಭೃತಾ ಹಿ ಮಾಃ ಸಕಲಾ ಹಿ ಯಸ್ಮಿನ್ । ಇತ್ಯುತ್ತರತ್ರ (೧೨/೨೦)

ಋಗಾದ್ಯಾ ಇತಿಹಾಸಶ್ಚ ಪುರಾಣಂ ಪಂಚರಾತ್ರಕಮ್ ।
ಪ್ರೋಕ್ತಃ ಸಪ್ತಶಿವಾಸ್ತತ್ರ ಶಯೋ ಭೀಮಸ್ತತಃ ಸ್ಮೃತಃ ॥ ಇತಿ ಭಾವವೃತ್ತೇ

ದಶೇತಿ ಸರ್ವಮುದಿಷ್ಟಂ ಸರ್ವಂ ಪೂರ್ಣಮಿಹೋಚ್ಯತೇ ।
ಪ್ರಜ್ಞಾ ಪ್ರಮತಿರುದ್ದಿಷ್ಟಾಪೂರ್ಣಪ್ರಜ್ಞಸ್ತು ಸ ಸ್ಮೃತಃ ॥ ಯಜುಃ ಸಂಹಿತಾಯಾಮ್

ಋಷಭಃ ಶ್ರೇಷ್ಠಃ ದೇವಶ್ರೇಷ್ಠಃ - ದೇವಶ್ರೇಷ್ಠಸ್ತು ಮಾರುತಃ ಭಾ. (೨/೫)

೪) ಇಲ್ಲಿಯ 'ಸಪ್ತ' ಎಂಬುದಕ್ಕೆ 'ಪರ ಮತ್ತು ಅಪರ' ಎಂಬ ಎರಡು ತತ್ತ್ವಗಳು ಮತ್ತು ಅವುಗಳಲ್ಲಿರುವ ಪಂಚಭೇದಗಳು ಎಂದೂ ಅರ್ಥವಾಗುತ್ತದೆ; ಅಂತಹ ಸಪ್ತಪ್ರಮೇಯಗಳು ಪ್ರಕಟವಾಗುವಂತೆ ಸಪ್ತಶಾಸ್ತ್ರಗಳನ್ನು ವಿಮರ್ಶೆ ಮಾಡುವ ಮಹನೀಯರು ಶ್ರೀಮಧ್ವಾಚಾರ್ಯರು ಎಂದು ಭಾವ.

೫) 'ವೃಷಭ' ಎಂಬಲ್ಲಿನ ವೃಷ ಶಬ್ದಕ್ಕೆ ಧರ್ಮ ಎಂದರ್ಥ; ಅಂತಹ ಧರ್ಮವನ್ನು ಧರಿಸುವವನಾದ್ದರಿಂದ 'ವೃಷಭ' ಎಂದು ನಾರಾಯಣನಿಗೆ ಹೆಸರು. ಅಂತಹ ವಿಷ್ಣುವು, ವೈಷ್ಣವ–ಧರ್ಮವನ್ನು ಸುಜನರ ಮನಸ್ಸಿನಲ್ಲಿ ಚೆನ್ನಾಗಿ ತುಂಬಿಸಲೆಂದು ಶ್ರೀಮಧ್ವರನ್ನು ಅವತರಿಸುವಂತೆ ಮಾಡಿದರು ಎಂದರ್ಥ.

೬) ಇಲ್ಲಿನ 'ವೃಷಭಸ್ಯ ದೋಹಸೇ' ಎಂಬುದಕ್ಕೆ ವೃಷಭರೂಪದಲ್ಲಿದ್ದ ಶ್ರೀಇಂದ್ರದೇವರಿಗೆ (ತಮ್ಮ ಸರ್ವಮೂಲಗ್ರಂಥಗಳಿಗೆ ಟೀಕೆಗಳನ್ನು ರಚಿಸುವ) ವಿಶೇಷಜ್ಞಾನವನ್ನು ಉಪದೇಶಿಸುವ ಕಾರ್ಯವೂ ಶ್ರೀಮಧ್ವರೂಪದಿಂದ ಆಯಿತು ಎಂಬ ಅರ್ಥವನ್ನೂ ಮಾಡಬಹುದು.

೧ ತೇನ ಚ ಮಹಾಬಲಸ್ಯಾಸ್ಯ ಸೇನಾ ಸರ್ವಾऽಪಿ ನ ಪ್ರತಿಸೇನಾ ಇತಿ ಜ್ಞಾಪಯತಿ। –(ಭಾ.ವಿ.)

೨. ಪಿತುಮಾನ್ – ಬಹ್ವನ್ನಭೋಕ್ತೃತ್ವಾತ್ ಪಿತುಮಚ್ಛಬ್ದವಾಚ್ಯಶ್ಚ । ಇದಮಪಿ ಬಕಾಯ ದತ್ತಸಹಸ್ರಪ್ರಸ್ಥಾನ್ನಭೋಜನಂ ಕೃತ್ವಾ ಸ್ವಾಶ್ರಿತೈಕಚಕ್ರಸ್ಥಸಜ್ಜನಾನಾಂ। ಭೀಃಮೀಯತೇ ಸಮೀಯತೇ ನಶ್ಯತಿ ಅಸ್ಮಾದಿತಿ ವ್ಯುತ್ಪತ್ಯಾ ಭೀಮಶಬ್ದಸೂಚನಾರ್ಥಮ್। –(ಭಾ.ವಿ)

೩. ಶಯೇ – ಶೇತೇ। ಸರ್ವತ್ರ ವಿಮರ್ಶಂ ಕೃತ್ವಾ ತಿಷ್ಠತೀತ್ಯರ್ಥಃ। ಶೇತೇ ಇತಿ ವಕ್ತವ್ಯೇ 'ಶಯೇ' ಇತಿ ವಚನಂ ಲೌಕಿಕಾನಾಂ ನಿದ್ರಾವತ್ ನಿದ್ರಾಭಾವ ಸೂಚನಾರ್ಥಮ್। ಅತ ಏವ ಪ್ರಾಕ್ 'ನಿತ್ಯಃ' ಇತಿ ವಿಶೇಷಣಂ ಚೋಕ್ತಮ್। –(ಭಾ.ವಿ.)

೪. ಸಪ್ತ – ಪರತತ್ತ್ವಾಪರತತ್ತ್ವೇ। ತಯೋಃ ಪಂಚಭೇದಾಶ್ಚೇತಿ ಸಪ್ತಾರ್ಥಾಃ ಯಥಾ ಭವಂತಿ ತಥಾ ಶೇತೇ ಇತಿ ವಾ। –(ಭಾ.ವಿ.)

೫. ವೃಷಭಸ್ಯ – ವೃಷಂ ಧರ್ಮಂ ಭಿಭರ್ತೀತಿ ವೃಷಭಃ ಸಕಲವೈಷ್ಣವಧರ್ಮಾಧಾರಭೂತೋ ನಾರಾಯಣಃ ತಸ್ಯ ದೋಹಸೇ ಉಪದೇಶಾದಿನಾ ಸಕಲಸಜ್ಜನಮನಃಸುಪ್ರಕರ್ಷೇಣ ಪೂರಣಾಯ । ವೈಷ್ಣವಧರ್ಮಂ ವಿಷ್ಣುಂ ಚ ಲೋಕೇ ಸಮ್ಯಕ್ ಪ್ರತಿಪಾದಯಿತುಮಿತ್ಯರ್ಥಃ। ದುಹ್ ಪ್ರಪೂರಣೇ ಇತಿ ಧಾತೋಃ। –(ಭಾ.ವಿ.)

ಬಳಿತ್ಥಾಸೂಕ್ತದಲ್ಲಿ ಮಧ್ವಾವತಾರದ ಕಾರ್ಯ

ನಿರ್ಯದೀಂ ಬುಧ್ನಾನ್ಮಹಿಷಸ್ಯ ವರ್ಪಸಃ
ಈಶಾನಾಸಃ ಶವಸಾಽಕ್ರಂತ ಸೂರಯಃ ।
ಯದೀಮನು ಪ್ರದಿವೋ ಮಧ್ವ ಆಧವೇ
ಗುಹಾಸಂತಂ ಮಾತರಿಶ್ವಾ ಮಥಾಯತಿ ॥ ೩ ॥

ಅ: ಬುಧ್ನಾತ್ – ಜ್ಞಾನರೂಪವಾದ; ವರ್ಪಸಃ – ಸಜ್ಜನರನ್ನು ಪಾಲಿಸುವಂತಹ, ಮಹಿಷಸ್ಯ – ದೇವಶ್ರೇಷ್ಠರಾದ ಶ್ರೀವಾಯುದೇವರ; ಯತ್ – ಆ ಮೂರನೆಯ ರೂಪದಿಂದ; ಈಂ – ಈ ತೆರನಾಗಿ ಜ್ಞಾನವು ಪೂರ್ಣ ಮಾಡಲ್ಪಡಲು, ಈಶಾನಾಸಃ – ರುದ್ರಾದಿ ದೇವತೆಗಳು; ಶವಸಾ – ಸುಖದಿಂದ; ಸೂರಯಃ – ಜ್ಞಾನಿಗಳಾಗಿ; ಕ್ರಂತ – ಆಗಿಸಲ್ಪಟ್ಟರು; ಮಧ್ವಃ – ಮಧ್ವನಾಮಕರಾದ; ಮಾತರಿಶ್ವಾ – ಶ್ರೀವಾಯುದೇವರು; ಪ್ರದಿವಃ – ಹಿರಿದಾದ ಬುದ್ಧಿಪ್ರಕಾಶದಿಂದ ಕೂಡಿದ ಹಿಂದೆ ಹೇಳಿದ ರುದ್ರಾದಿದೇವತೆಗಳನ್ನು; ಅನು – ಪುರಸ್ಕರಿಸಿ, ಗುಹಾ(ಗುಹಾಯಾಂ) – ಹೃದಯಗುಹೆಯಲ್ಲಿ; ಸಂತಂ – ನೆಲೆಸಿರುವ (ಪರಮಾತ್ಮನನ್ನು)ಆಧವೇ – ಅವನೇ ಸರ್ವಸ್ವಾಮಿ ಎಂಬ ವಿಷಯದಲ್ಲಿ; ಮಥಾಯತಿ – ವೇದಶಾಸ್ತ್ರಗಳನ್ನು ಚೆನ್ನಾಗಿ ಮಥನಮಾಡುವರು.

---

೩. ಬುಧ್ನಾತ್– 'ಬುಧ ಅವಗಮೇ' ಇತಿ ಧಾತೋಃ, ಬುಧ್ನಾತ್– ಜ್ಞಾನರೂಪಾತ್, ಬುಧ್ನಃ ಪಂಡಿತಾನ್ ನಯತಿ ಸನ್ಮಾರ್ಗೇ ಇತಿ ವಾ ಬುಧ್ನಾತ್। –(ವಾ)

ಬುಧ್ನಃ–ಬೋಧರೂಪಾತ್ –(ಜ)

ಬುಧ್ನಃ– ಪೂರ್ಣಬೋಧಾಖ್ಯಾತ್ –(ವ)

೩. ಮಹಿಷಸ್ಯ– ದೇವಶ್ರೇಷ್ಠಸ್ಯ ವಾಯೋಃ ॥ –(ವಾ)

೩. ವರ್ಪಸಃ– ವರಯತಿ ಸಜ್ಜನಾನ್ ಪಾಲಯತೀತಿ ವ್ಯುತ್ಪತ್ತ್ಯಾವರ್ಪಃಶಬ್ದವಾಚ್ಯಾತ್ ಪೂರ್ವವದ್ಧಾತುದ್ವಯಾತ್ ಕರ್ತ್ರರ್ಥೇ ಡಸನ್ ಪ್ರತ್ಯಯಃ ಇತಿ ಭಾವಃ ॥ –(ವಾ)

ಮಹಿಷಸ್ಯ ಪೂರ್ಣಗುಣಸ್ಯ ವಿಷ್ಣೋಃ। ವರಣೀಯತ್ವೇನ ಉಪೇಯತ್ವಾತ್ ವರ್ಪಸಃ ತನ್ನಾಮಕಾನ್ ಜ್ಞಾನಬಲಾದಿಗುಣಾನ್। –(ಜ)

೩. ಈಂ – ಇತ್ಥಂ ಪೂರ್ವೋಕ್ತರೀತ್ಯಾ ಜ್ಞಾನಪೂರಣೇ ಕೃತೇ ಸತಿ । –(ವಾ)

೩. ಈಶಾನಾಸಃ– 'ಬಹುವಚನಮಾದ್ಯರ್ಥೇ' ಇತಿ ವಚನಾತ್, ಈಶಾನಾದ್ಯಾಃ ದೇವಾಃ । – (ವಾ)

೩. ಶವಸಾ –ಸುಖೇನ; ಸೂರಯಃ – ಜ್ಞಾನಿನಃ; ನಿಃ–ನಿತರಾಂ; ಆಕ್ರಯಂತ। – (ವಾ)

ಟಿ: ೧) ಹೀಗೆ ಜ್ಞಾನಕಾರ್ಯಕ್ಕಾಗಿ ಅವತರಿಸಿದ ಶ್ರೀಮಧ್ವಾಚಾರ್ಯರು ವೇದಾದಿ ಶಾಸ್ತ್ರಗಳನ್ನು ಮಥನ ಮಾಡಿ, ರುದ್ರಾದಿ ದೇವತೆಗಳಿಗೂ ಜ್ಞಾನವಿಶೇಷಕ್ಕೆ ನೆರವಾದ ವಿಚಾರವನ್ನು ಇಲ್ಲಿ ತಿಳಿಸಿರುವರು.

೨) ಶ್ರೀವಾಯುದೇವರು ಜ್ಞಾನರೂಪರು; ಸಜ್ಜನರನ್ನು ಪಾಲಿಸುವಂತಹವರು; ದೇವಶ್ರೇಷ್ಠರು. ಅವರ ಮಧ್ವರೂಪದಿಂದ ಹಿಂದೆ ಹೇಳಿದಂತೆ ಜ್ಞಾನಕಾರ್ಯವು ಸಮಗ್ರವಾಗಿ ಮಾಡಲ್ಪಟ್ಟಿತು. ಆದರಿಂದಾಗಿ ರುದ್ರಾದಿದೇವತೆಗಳಿಗೂ ವಿಶೇಷಜ್ಞಾನವನ್ನು ಪಡೆಯಲು ಸಾಧ್ಯವಾಯಿತು.

---

೩. ಮಧ್ವಃ–ಆನಂದತೀರ್ಥಾಖ್ಯಃ ಮಧುಶಬ್ದಃ ಸುಖವಾಚೀ ಮಧುದ್ಯೌ ರಸ್ತುನಃ ಪಿತಾ ಇತಿ ಶ್ರುತೇಃ। ವ ಶಬ್ದಶ್ಚ ಅವಗತಿಕರಣತ್ವವಾಚೀ। ಅವಗತ್ಯರ್ಥಕಧಾತೋಃ ಕರಣಾರ್ಥೇ ಕ ಪ್ರತ್ಯಯಃ। ಘಜರ್ಥೇ ಕವಿಧಾನಮಿತಿ ವಚನಾತ್। ತತಶ್ಚ ಸುಖಸಾಧನಂ ತೀರ್ಥಶಬ್ದಾಪರಪರ್ಯಾಯ 'ವ ಶಬ್ದವಾಚ್ಯಂ ಶಾಸ್ತ್ರಂ' ಅಸ್ಯೇತಿ ಮಧ್ವ ಇತ್ಯುಕ್ತಂ ಭವತಿ। ಸ್ವರಿತತ್ರೈವ ಉಕಾರಲೋಪಃ, ನಿರುಕ್ತತ್ವಾತ್। – (ವ)

ಮಧುಶಬ್ದಃ ಸುಖವಾಚೀ। 'ಮಧು ದ್ಯೌರಸ್ತು ನಃ ಪಿತಾ' ಇತಿ ಪ್ರಯೋಗಾತ್। ವ ಶಬ್ದಃ ಶಾಸ್ತ್ರಾಪರ-ಪರ್ಯಾಯ ತೀರ್ಥವಾಚೀ। ಮಾತೀರವಗತ್ಯರ್ಥಾತ್ ಕರಣೇ ಘಜರ್ಥೇ ಕವಿಧಾನಮಿತಿ ಕಃ। ಸುಖಸಾಧನಂ ತೀರ್ಥಮಸ್ಯೇತಿ। ಸ್ವರಿತತ್ರೇವ ಉಕಾರಲೋಪಃ। – (ನ್ಯಾಯಸುಧಾ)

ತೃತೀಯಂ ತು ವಪುಃ ಆನಂದರೂಪಸ್ಯ ಹರೇಃ ಪ್ರತಿಪಾದಕಶಾಸ್ತ್ರನಿರ್ಮಾತೃ ಮಧ್ವಾಭಧಮಿತಿ।
– (ತತ್ತ್ವ ಪ್ರಕಾಶಿಕಾ)

೩. ಮಾತರಿಶ್ವಾ – ಮಾತರಿ ಪ್ರಮಾಣಭೂತೇ ಋಗಾದೌ ಶ್ವಯತಿ ಗಚ್ಛತಿ। – (ವ)

೩. ಪ್ರದಿವಃ – ಪ್ರಕೃಷ್ಟಬುದ್ಧಿಪ್ರಕಾಶವತಃ ಪೂರ್ವೋಕ್ತಾನೀಶಾನಾದಿದೇವಾನ್। –(ವಾ)

ಪ್ರದಿವಃ – ಪ್ರಕೃಷ್ಟಜ್ಞಾನವಾನ್ ಮಧ್ವಃ।

ಪ್ರದಿವಃ – ಪ್ರಕೃಷ್ಟದ್ಯುತಿಕಾಂತ್ಯಾದಿರೂಪಃ। – (ವ)

೩. ಅನು – ಅನುಸೃತ್ಯ ಪುರಸ್ಕೃತ್ಯೇತಿ ಯಾವತ್। – (ವಾ)

ಅನು–ಅನುಕೂಲೇನ ಮಥಾಯತಿ। ಋಗಾದಿಶಾಸ್ತ್ರಂ ವಿಚಾರಯತಿ॥ -(ಜ)

೩. ಗುಹಾ – ಗುಹಾಯಾಂ ಸುಲೋಪಃ ಹೃದಯಗುಹಾಯಾಮಿತ್ಯರ್ಥಃ। –(ವಾ)

ಗುಹಾಸಂತಂ ನಿರ್ಗುಣತ್ವಾದ್ಯುಕ್ತಿಭಿಃ ಗೂಹಿತಂ ಸಂತಂ ಪರಮಾತ್ಮಾನಮ್। -(ವ)

ಸಂತಂ – ವಿದ್ಯಮಾನಂ ಗುಹಾನಿಹಿತಂ ಸಂತಮಿತಿ ವಾ।

೩. ಆಧವೇ – 'ಧವಃ ಪ್ರಿಯಃ ಪತಿರ್ಭರ್ತಾ' ಇತ್ಯನುಶಾಸನಾತ್। ಭಾವಪ್ರಧಾನಾಚ್ಚ ನಿರ್ದೇಶಸ್ಯ। ಆಧವೇ ಆ ಸಮಂತಾತ್ ಪತಿತ್ವೇ ವಿಷಯೇ। – (ವಾ)

ಆಧವೇ – ಆ ಸಮಂತಾತ್ ಧವೇ ಭಾವಪ್ರಧಾನೋ ನಿರ್ದೇಶಃ। ವಿಷಯಸಪ್ತಮೀ ಪತಿತ್ವಾರ್ಥೇ। – (ಜ)

ಆಧವೇ – ಭಾವಪ್ರಧಾನೋ ನಿರ್ದೇಶಃ। ಆಸಮಂತಾತ್ ಪತಿತ್ವೇ ಸರ್ವಸ್ವಾಮಿತ್ವೇ ತಜ್ಜ್ಞಾಪನಾರ್ಥಮಿತಿ ಯಾವತ್। – (ವ)

ಯತ್ – ಯಸ್ಮಾತ್ ಕಾರಣಾತ್। –(ವಾ)

ಅಂತಹ ರುದ್ರಾದಿದೇವತೆಗಳನ್ನು ಉದ್ದೇಶಿಸಿ, ಹೃದಯಗುಹೆಯಲ್ಲಿನ ಸರ್ವಸ್ವಾಮಿಯಾದ ಪರಮಾತ್ಮನೇ ಸಕಲವೇದಗಳಿಂದ ಪ್ರತಿಪಾದಿತನಾದವನು ಎಂಬ ತತ್ತ್ವವನ್ನು ವೇದಾದಿ ಸಕಲ ಶಾಸ್ತ್ರಗಳನ್ನು ಚೆನ್ನಾಗಿ ಮಥನಮಾಡಿ ತೋರಿಸಿದರು.

೩) 'ಮಹಿಷಸ್ಯ' ಎಂಬ ಪದವನ್ನು ವಿಷ್ಣುವಿಗೆ ವಿಶೇಷಣಗಳೆಂಬುದಾಗಿಯೂ ಶ್ರೀಜನಾರ್ದನಭಟ್ಟರು ಮತ್ತು ಶ್ರೀವರದರಾಜಾಚಾರ್ಯರು ವ್ಯಾಖ್ಯಾನಿಸಿರುವರು.

೪) ಅದರಂತೆ 'ಪ್ರದಿವಃ' ಎಂಬುದು ಮಧ್ವಾಚಾರ್ಯರಿಗೆ ವಿಶೇಷಣವನ್ನಾಗಿ ಅವರು ಅನ್ವಯಿಸಿ, ಅದಕ್ಕೆ 'ಪ್ರಕೃಷ್ಟಜ್ಞಾನವನ್ನು ಹೊಂದಿದವರು' ಎಂಬ ಅರ್ಥವನ್ನು ಅವರು ಬರೆದಿರುವರು.

೫) 'ವರ್ಪಸಃ' ಎಂಬುದನ್ನು ಶ್ರೀಜನಾರ್ದನಭಟ್ಟರು ವಿಷ್ಣುವಿಗೆ ವಿಶೇಷಣವನ್ನಾಗಿ ವ್ಯಾಖ್ಯಾನಿಸಿರುವರು ಮತ್ತು ವರದರಾಜಾಚಾರ್ಯರು 'ವರ್ಪ' ಎಂಬ ಹೆಸರಿನ ವಿಷ್ಣುವಿನ ಗುಣಗಳನ್ನು ಎಂಬುದಾಗಿ ವಿವರಿಸಿರುವರು.

೬) ಬುಧ್ನಾತ್ – 'ಮೂಲಬಧ್ನೋಽಂಘ್ರಿನಾಮಕಃ' ಎಂದು ಕೋಶವಿರುವುದರಿಂದ ಸಕಲವೈಷ್ಣವರಿಗೂ ಮೂಲಾಧಾರಭೂತವಾದ ಶ್ರೀಮಧ್ವರೂಪದಿಂದ ಈಂ – ಇತ್ಥಂ ಹೀಗೆ ಜಗತ್ತಿನಲ್ಲಿ ಪ್ರವರ್ತಿತವಾದ ಮಧ್ವಸಿದ್ಧಾಂತದ ರೀತಿಯಿಂದ, ಈಶಾನಾಸಃ – ರುದ್ರಾದಿಜ್ಞಾನಿಗಳು, ಮಹಿಷಸ್ಯ– ಸರ್ವೋತ್ತಮನಾದ ನಾರಾಯಣನ, ವರ್ಪಸಃ – ವರಣೀಯವೂ, ಪಾಲಕವೂ ಆದ ಕಾರಣ 'ವರ್ಪಃ' ಎಂದು ಪ್ರಸಿದ್ಧವಾದ ಗುಣಗಳನ್ನು ಅಥವಾ ಅವತಾರಗಳನ್ನು, ನಿರಕ್ರಂತ – ಚೆನ್ನಾಗಿ ತಿಳಿದುಕೊಂಡರು ಎಂದು ಭಾವ.

---

೩. ಮಥಾಯತಿ – ವೇದಶಾಸ್ತ್ರಾದೀನಾಂ ಸಮ್ಯಕ್ ಮಥನಂ ಕರೋತಿ । ಅನಂತವೇದವಿಷಯತ್ವೇನ ಮಥನಸ್ಯ ಮಹತ್ತರತ್ವಾತ್ ದೀರ್ಘಃ । ಅಪಾರವೇದಶಾಸ್ತ್ರಾದಿವಿಚಾರಂ ಕೃತ್ವಾ ಹರೇಃ ಸರ್ವೋತ್ತಮತ್ವಂ ಖ್ಯಾಪಯತೀತ್ಯರ್ಥಃ । ಕಾರಣಾತ್ ಈಶಾನಾಸಃ ಸೂರಯಃ ಅಕ್ರಿಯಂತ ಇತಿ ಪೂರ್ವೇಣಾನ್ವಯಃ । –(ವಾ)

ಮಹಿಷಸ್ಯ – ಮಹೀಯಸ್ಯ ಮಹಿತಷಡ್ಗುಣಸ್ಯ ಹರೇಃ । ವರ್ಪಸಃ ವರಣೀಯತ್ವಾದಿನಾ ವರ್ಪಃಸಂಜ್ಞಕಾನ್ ಗುಣಾನ್ । –(ವ)

ಮಥಾಯತಿ । ಮಥ್ನಾತಿ–ಶಾಸ್ತ್ರೇಣ ವಿಚಾರ್ಯ ನಿಶ್ಚಯತೀತ್ಯರ್ಥಃ । –(ವ)

೩. ಬುಧ್ನಾತ್ – ಜ್ಞಾನರೂಪಾತ್ 'ಮೂಲಬುಧ್ನೋಽಂಘ್ರಿನಾಮಕಃ' ಇತ್ಯಭಿಧಾನಾತ್ ಸಕಲವೈಷ್ಣವಾನಾಂ ಮೂಲಾಧಾರಭೂತಾದ್ವಾ ಯತ್ – ಯಸ್ಮಾನ್ಮಧ್ವಾಭಿಧಾತ್ ತೃತೀಯರೂಪಾತ್, ಈಂ– ಇತ್ಥಂ ಜಗತಿ ಪ್ರವರ್ತಮಾನ-ಮಧ್ವಸಿದ್ಧಾಂತರೀತ್ಯಾ, ಈಶಾನಾಸಃ – ಈಶಾನಾದ್ಯಾಃ, ಸೂರಯಃ – ವಿದ್ವಾಂಸಃ, ಮಹಿಷಸ್ಯ – ಸರ್ವೋತ್ತಮಸ್ಯ ನಾರಾಯಣಸ್ಯ, ವರ್ಪಸಃ–ವರಣೀಯತ್ವಾತ್ ಪಾಲಕತ್ವಾದ್ವಾ ವರ್ಪಸಂಜ್ಞಾನ್ ಗುಣಾನ್ ಅವತಾರಾನ್ ವಾ ನಿರಕ್ರಂತ । ಕ್ರಂದಿರ್ಗತಿಶೋಷಣಯೋರಿತಿ ಧಾತೋಃ ಗತ್ಯರ್ಥಾನಾಂ ಜ್ಞಾನಾರ್ಥತ್ವಾತ್ ನಿರಜಾನಂತೇತ್ಯರ್ಥಃ ।
– (ಭಾ.ವಿ)

೭) **ಮಹಿಷಸ್ಯ** – ಶ್ರೇಷ್ಠರಾದ ಶ್ರೀವಾಯುದೇವರ; **ವರ್ಪಸಃ**–ಗುರುತ್ವದಿಂದಾಗಿ ವರಣೀಯವೂ, ಜ್ಞಾನದಾನದಿಂದಾಗಿ ಪಾಲಕವೂ ಆದ; **ಬುಧ್ನಾತ್** – ಜ್ಞಾನರೂಪವಾದ ತೃತೀಯರೂಪದಿಂದ; **ಈಶಾನಾಸಃ** – ರುದ್ರಾದಿ ದೇವತೆಗಳು ಸಂಸಾರದಿಂದ ಪಾರಾದರು.

೮) **ಪ್ರದಿವಃ** – ಎಂಬುದನ್ನು 'ಅತ್ಯುನ್ನತವಾದ ಜ್ಞಾನಪ್ರಕಾಶವನ್ನು ಉಳ್ಳವರು' ಎಂಬ ಅರ್ಥದಲ್ಲಿ ಶ್ರೀಮಧ್ವಾಚಾರ್ಯರಿಗೆ ವಿಶೇಷಣವನ್ನಾಗಿಯೂ, ಉನ್ನತವಾದ ಜ್ಞಾನಪ್ರಕಾಶವನ್ನು ಹೊಂದಿದವರು ಎಂಬ ಅರ್ಥದಲ್ಲಿ ರುದ್ರಾದಿದೇವತೆಗಳಿಗೆ ವಿಶೇಷಣವನ್ನಾಗಿಯೂ ಅರ್ಥ ಮಾಡಿಕೊಳ್ಳಬಹುದು.

೯) **ಅನು** – ಎಂಬುದಕ್ಕೆ ಶ್ರುತಿ, ಬ್ರಹ್ಮಮೀಮಾಂಸಾ ಮೊದಲಾದ ಶಾಸ್ತ್ರಗಳಿಗೆ ಅನುಗುಣವಾಗಿ ಎಂದು ಸಹ ಅರ್ಥಮಾಡಿಕೊಳ್ಳಬಹುದು.

೧೦) ಈ ಶ್ರುತಿಯಲ್ಲಿ ಸ್ಪಷ್ಟವಾಗಿ 'ಮಧ್ವ' ಎಂಬ ಹೆಸರನ್ನು 'ಮಾತರಿಶ್ವಾ' ಎಂಬ ಹೆಸರಿನೊಂದಿಗೆ ಹೇಳಿರುವುದರಿಂದ ಶ್ರೀವಾಯುದೇವರ ತೃತೀಯರೂಪಕ್ಕೆ 'ಮಧ್ವ' ಎಂಬ ಹೆಸರು ಮತ್ತು ಅದು ವಾಯುದೇವರ ಅವತಾರ ಎಂಬ ವಿಷಯ ಎರಡೂ ಸ್ಪಷ್ಟಪಡುತ್ತವೆ.

೧೧) ಬ್ರಹ್ಮಜ್ಞಾನಕ್ಕೆ ಸಾಧನೀಭೂತವಾದ ವೇದಾದಿಶಾಸ್ತ್ರಗಳಲ್ಲಿ ಪರಿಜ್ಞಾನವನ್ನು ಹೊಂದಿದವರು ಎಂಬ ಕಾರಣದಿಂದ ಶ್ರೀವಾಯುದೇವರಿಗೆ 'ಮಾತರಿಶ್ವಾ' ಎಂದು ಹೆಸರು.

---

೫. ಅಥವಾ ಮಹಿಷಸ್ಯ – ಶ್ರೇಷ್ಠಸ್ಯ ವಾಯೋಃ ವರ್ಪಸಃ – ಗುರುತಯಾ ವರಣೀಯಾತ್ ಜ್ಞಾನದಾನೇನ ಪಾಲಕಾಚ್ಚ ಬುಧ್ನಾತ್ ಯಸ್ಮಾತ್ ತೃತೀಯರೂಪಾತ್ ಈಶಾನಾಸಃ – ಸೂರಯಃ 'ಯಥಾಪೂರ್ವಂ ಪ್ರಾಜಾಯಂತ' ಇತಿ ಶ್ರುತೇಃ, 'ಯತ್ರ ಪೂರ್ವೇ ಸಾಧ್ಯಾಃ ಸಂತಿ ದೇವಾಃ' ಇತಿ ಶ್ರುತೇಶ್ಚ ; ಈಂ– ಇತ್ಥಂ, ಪೂರ್ವಮುಕ್ತದೇವವತ್ ನಿರಕ್ಯಂತ, ಸಂಸಾರಾನ್ನಿಷ್ಕ್ರಾಂತಾ ಅಭೂವನ್ನಿತಿ ಯೋಜನಾ। –(ಭಾ.ವಿ)

೫. ಪ್ರದಿವಃ–ಪ್ರಕೃಷ್ಟಾ ದ್ಯೌರ್ಯಸ್ಯೇತಿ ವ್ಯುತ್ಪತ್ತ್ಯಾ ಪ್ರಕೃಷ್ಟಜ್ಞಾನಪ್ರಕಾಶವಾನ್। ದಿವುಕ್ರೀಡಾಯಾಮಿತಿ ಧಾತೋಃ ಭಾವಾರ್ಥೇ ಕ ಪ್ರತ್ಯಯೇ ದಿವ ಇತಿ ರೂಪಂ ಸಿದ್ಧ್ಯತಿ। –(ಭಾ.ವಿ.)

ಪ್ರದಿವಃ–ಪ್ರಕೃಷ್ಟಪ್ರಕಾಶಾನ್ ಈಶಾನಾದಿದೇವಾನ್ ಅನುಸೃತ್ಯ। -(ಭಾ.ವಿ.)

೫. ಶ್ರುತಿಬ್ರಹ್ಮಮೀಮಾಂಸಾಮನುಸೃತ್ಯ ವಾ। –(ಭಾ.ವಿ.)

೫. ಅಸ್ಯಾಂ ತು ಶ್ರುತೌ ಸ್ಪಷ್ಟಂ ಮಧ್ವೇತಿ ನಾಮ್ನಃ ಮಾತರಿಶ್ವನಾಮ್ನಾ ಸಾಮಾನಾಧಿಕರಣ್ಯೋಕ್ತೇಃ ತೃತೀಯ-ರೂಪಸ್ಯ ಮಧ್ವ ಇತ್ಯಾಖ್ಯಾ ವಾಯುರೂಪತಾ ಚ ಸೃಷ್ಟ್ಯೇಕತಾ। –(ಭಾ.ವಿ.)

೫. ಮಾತರಿ–ಭಗವಜ್ಜ್ಞಾನಸಾಧನೀಭೂತೇ ವೇದಶಾಸ್ತ್ರಾದೌ ಶ್ವಾಗತಿಃ ಅವಗತಿರ್ಯಸ್ಯೇತಿ ವ್ಯುತ್ಪತ್ತ್ಯಾವಾಯು-ವಾಚಕ ಮಾತರಿಶ್ವಪದಾರ್ಥಸೂಚನಾಯ...। –(ಭಾ.ವಿ.)

೧೨) 'ಮಧು ದ್ಯೌರಸ್ತು ನಃ ಪಿತಾಃ' ಎಂಬುದಾಗಿ ಪ್ರಯೋಗವಿರುವುದರಿಂದ 'ಮಧು' ಶಬ್ದವು ಸುಖವಾಚಕವಾದುದು. 'ವ' ಶಬ್ದಕ್ಕೆ ತೀರ್ಥವೆಂದೂ, ಶಾಸ್ತ್ರವೆಂದೂ ಅರ್ಥ. ಸುಖಸಾಧನವಾದ ಶಾಸ್ತ್ರವನ್ನು ರಚಿಸಿದವರು ಎಂದರೆ 'ಆನಂದತೀರ್ಥ'ರು ಎಂಬುದು 'ಮಧ್ವ' ಶಬ್ದದ ಅರ್ಥವಾಗಿದೆ; 'ಮಧುವ' ಎಂದಾಗಬೇಕಿದ್ದ ಪದ 'ಸುವಃ' ಎಂಬುದು ಉಕಾರ ಲೋಪವಾಗಿ 'ಸ್ವಃ' ಎಂಬುದಾಗಿ ಋಗ್ವೇದಿಗಳು ಪಠಿಸುವಂತೆ 'ಮಧ್ವ' ಎಂದಾಗಿದೆ ಎಂದು ತಿಳಿಯಬೇಕು.

೧೩) ಶ್ರೀಮದಾಚಾರ್ಯರು ಉದಾಹರಿಸಿರುವ ಈ ಮಂತ್ರಾರ್ಥವಿವರಣರೂಪವಾದ ವಚನಗಳು ಹೀಗಿವೆ:

''ಮಧ್ವಿತ್ಯಾನಂದ ಉದ್ದಿಷ್ಟೋ ವರಿತಿ ತೀರ್ಥಮುದಾಹೃತಮ್ ।
ಮಧ್ವ ಆನಂದತೀರ್ಥಃ ಸ್ಯಾತ್ ತೃತೀಯಾ ಮಾರುತೀ ತನುಃ ॥''

– ಉಪನಿಷದ್ಭಾಷ್ಯಗಳಲ್ಲಿ ಉದಾಹೃತವಾಗಿರುವ ಭಾವವೃತ್ತವಚನ

ಅಸತ್ಯಮಪ್ರತಿಷ್ಠಂ ಚ ಜಗದೇತದನೀಶ್ವರಮ್ ।
ವದದ್ಭಿರ್ಗೂಹಿತಂ ಸಂತಂ ತೃತೀಯೋಽಸುರ್ಮಥಾಯತಿ ॥
ಯೇನ ವಿಷ್ಣೋರ್ಹಿ ವರ್ಷಾಖ್ಯಾನ್ ಗುಣಾನಾಜ್ಞಾಸಿಷುಃ ಪರಾನ್ ।
ಈಶಾನಾಸಃ ಸೂರಯಶ್ಚ ನಿಗೂಢಾನ್ ನಿರ್ಗುಣೋಕ್ತಿಭಿಃ ॥ – ಯಜುಃಸಂಹಿತಾವಚನ

---

೩. ಮಧುಶಬ್ದಃ ಸುಖವಾಚೀ (ಮಧುದ್ಯೌ ರಸ್ತು ನಃ ಪಿತಾ) ಇತಿ ಪ್ರಯೋಗಾತ್ । ವ ಶಬ್ದಃ ಶಾಸ್ತ್ರಾಪರ-ಪರ್ಯಾಯತೀರ್ಥವಾಚೀ । ವಾತೇರವಗತ್ಯರ್ಥಾತ್ ಕರಣೇ ಘಞರ್ಥೇ ಕವಿಧಾನಮಿತಿ ಕಃ । ಸುಖಸಾಧನಂ ತೀರ್ಥಂ ಅಸ್ಯೇತಿ । ಸ್ವರಿತ್ಯತ್ರೈವ ಉಕಾರಲೋಪಃ । – (ನ್ಯಾಯಸುಧಾ)

೩. ಸುವರಿತಿ ವಕ್ತವ್ಯೇ ಉಕಾರಲೋಪೇನ ಯಥಾ ಸ್ವರಿತಿ ಪಠಂತಿ ಋಗ್ವೇದಿನಃ, ತಥಾಽತ್ರಾಪ್ಯೀತಿ ಭಾವಃ ।
– (ನ್ಯಾಯಸುಧಾ ಟಿಪ್ಪಣೀ ಯಾದುಪತ್ಯ)

ಭೂರ್ಭುವಃ ಸ್ವರಿತಿ ವಕ್ತವ್ಯೇ ಛಾಂದಸತ್ವೇನ ಯಥಾ ಉಕಾರಲೋಪಮಾಶ್ರಿತ್ಯ ಸ್ವರಿತಿ ಋಗ್ವೇದಿನಃ ಪಠಂತಿ ತದ್ವದಿತ್ಯಾಹ । ಸ್ವರಿತ್ಯತ್ರೈವೇತಿ । –(ನ್ಯಾಯಸುಧಾಟಿಪ್ಪಣೀ ಶ್ರೀನಿವಾಸತೀರ್ಥೀಯ)

೩. ಅತ್ರ-ಶ್ರುತೌ। ಏಕಃ ಶಿವಪ್ರತಿಪಾದಕೇಶಾನಶಬ್ದಃ। ಬಹುವಚನಾಂತವಿಭಕ್ತಿಃ ಬಹುವಚನರೂಪವಿಭಕ್ತಿಃ। ತತ್ ತಸ್ಮಾತ್ ಈಶಾನಪದವಾಚ್ಯಶಿವಸ್ಯೈಕತ್ವೇನ ಬಹುವಚನಸ್ಯ ಅದ್ಯರ್ಥಂ ವಿನಾ ಅರ್ಥಾಂತರಾಯೋಗಾತ್॥
-(ಭಾ. ವಿ.)

೩. ಉಪಲಕ್ಷಣಂ ಚೈತತ್। ಯಚ್ಛಬ್ದಸ್ಯ ತಚ್ಛಬ್ದಾಪೇಕ್ಷತ್ವಾತ್ ತೃತೀಯಂ ವಪುರ್ಜನಯಂತೀತಿ ಅಸ್ಯಾಪಿ ವಾಕ್ಯಸ್ಯ ಸ್ವಪೂರ್ವವಾಕ್ಯೇನ ಸಂಬಂಧಶ್ಚೇತಿ ದ್ರಷ್ಟವ್ಯಮ್ । -(ಭಾ. ವಿ.)

೩. ಮದ್ಗೀಃ- ಮಮ ಗ್ರಂಥರೂಪ ವಾಕ್। ತದ್ಯುಕ್ತಿಮಲ್ಲಿಕಾ। ಪೂರ್ವಾಚಾರ್ಯೋಕ್ತಾರ್ಥೇ ಯುಕ್ತಿಸಂಗ್ರಹ-ರೂಪತ್ವಾತ್ ಯುಕ್ತಿಮಲ್ಲಿಕಾಖ್ಯಾ। -(ಭಾ. ವಿ.)

೧೪) ಇದರ ಅರ್ಥವಿವರಣರೂಪವಾದ ಶ್ರೀತ್ರಿವಿಕ್ರಮಪಂಡಿತಾಚಾರ್ಯರ ಮಾತು ಹೀಗಿದೆ:

'ತೃತೀಯಂ ಮಧ್ವ ಉಚ್ಯತೇ । ಮಧ್ವಿತ್ಥಾನಂದ ಉದ್ದಿಷ್ಟೋ ವೇತಿ ತೀರ್ಥಮುದಾಹೃತಂ' ಇತ್ಯುಕ್ತಮ್ । ಅತಃ ಶ್ರೀಮದಾನಂದತೀರ್ಥಭಗವತ್ಪಾದಾಚಾರ್ಯ ಇತ್ಯರ್ಥಃ । ಯಸ್ಯ ಅಸ್ಖಲಿತಾನವರತ ವೇದಶಾಸ್ತ್ರವ್ಯಾಖ್ಯಾನಶ್ರವಣಕೌತುಕಸಮುತ್ಪಾತದುಃಖಸಂಘಾತೋ ನಿಖಿಲ ಪಂಡಿತವರ್ಗೋ ಮಹಾಮೃತಸಮುದ್ರಾ ವಗಾಹೀವ ಬಹುಲಮಾಹ್ಲಾದಮಾಪ್ನೋತಿ ॥ – ತತ್ತ್ವಪ್ರದೀಪ

೧೫) ಇದನ್ನು ಶ್ರೀವಾದಿರಾಜರು ಹೀಗೆ ವ್ಯಾಖ್ಯಾನಿಸಿರುವರು :

ಯತೋ ಮಧ್ವೋ ಮಾತರಿಶ್ವಾ ಜನ್ಮನೋಽನು ಸುರಾನನು ।
ಪ್ರಕೃಷ್ಟವಿಜಿಗೀಷಾದಿಶಕ್ತಿಮಾನ್ ಪ್ರದಿವಃ ಸುಧೀಃ ॥
ಪ್ರಕೃಷ್ಟಾ ದ್ಯೌರ್ಯೇಷು ತೇ ವಾ ಪ್ರದಿವೋ ದೇವತಾ ಜನಾಃ ।
ತಾನನೂದ್ದಿಶ್ಯೇತಿ ವಾಽರ್ಥೋ ವಕ್ತವ್ಯೋಽತ್ರ ವಿಚಕ್ಷಣೈಃ ॥
ಆಧವೇ ಸರ್ವತಃ ಶ್ರೇಷ್ಠೇ ಯದ್ಧವಃ ಪತಿರುಚ್ಯತೇ ।
ಭಾವಪ್ರಧಾನೋ ನಿರ್ದೇಶೋಽಪ್ಯಸ್ತಿ ತೇನೋಚಿತಂ ಹಿ ತತ್ ॥
ಗುಹಾಸಂತಂ ಹೃದ್ಗುಹಾಯಾಂ ವಸಂತಂ ಪುರುಷೋತ್ತಮಮ್ ।
ಈಮಿತ್ಥಂ ಹೃದ್ಗುಹಾಸ್ಥತ್ವಾದ್ಯಾಕಾರೇಣ ಮಥಾಯತಿ ॥
ವೇದಶಾಸ್ತ್ರಾದಿಮಥನಂ ಕೃತ್ವಾ ದರ್ಶಯತಿ ಪ್ರಭುಃ ॥
ದೀರ್ಘೇಣ ಮಥನಸ್ಯಾತಿದೀರ್ಘತಾಂ ಶ್ರೌತತಾಂ ಚ ಸಾ ।
ಅಸೂಚಯತ್ ತೇನ ನಾನಾ ದುರ್ಭಾಷ್ಯಾಣ್ಯಪ್ಯಮೋಚಯತ್ ।
ತಸ್ಮಾದೀಶಾನಾದಯೋಽಪಿ ಸೂರಯಸ್ತತ್ಪ್ರಸಾದತಃ ॥
ಬಭೂವುರಿತಿ ಸಂಬಂಧೋ ಯತೋಽತ್ಯೈಕೋ ಬಹುಃ ಕೃತಃ ।
ಆದ್ಯರ್ಧೈವ ವಿಭಕ್ತಿಸ್ತದಿತಿ ಸರ್ವಂ ಚ ಮಂಗಲಮ್ ॥
ವರ್ಗಾರ್ಥಸೂದಿತಃ ಪೂರ್ವೈರ್ಮದ್ಗೀಸ್ತದ್ಯುಕ್ತಿಮಲ್ಲಿಕಾ ॥

– ಯುಕ್ತಿಮಲ್ಲಿಕಾ ಫಲಸೌರಭ (೭೦೬–೭೧೨)

ಮಧ್ವರೂಪದಿಂದ ಮಾಡಿದ ಪರಮತಖಂಡನೆ

ಪ್ರ ಯತ್ಪಿತುಃ ಪರಮಾನ್ನೀಯತೇ ಪ-
ರ್ಯಾ ಪೃಕ್ಷುಧೋ ವೀರುಧೋ ದಂಸು ರೋಹತಿ ।
ಉಭಾ ಯದಸ್ಯ ಜನುಷಂ ಯದಿನ್ವತ
ಆದಿದ್ಯವಿಷ್ಟೋ ಅಭವದ್ ಘೃಣಾ ಶುಚಿಃ ॥ ೪ ॥

ಅ: ಯತ್ – ಯಾವ ಕಾರಣದಿಂದಾಗಿ; ಪರಮಾತ್ ಪಿತುಃ – ಸರ್ವೋತ್ತಮನೂ ತನ್ನ ತಂದೆಯೂ ಆದ ನಾರಾಯಣನಿಂದ; ಆ – ಚೆನ್ನಾಗಿ; ಪರಿತಃ – ಸರ್ವರೀತಿಯಿಂದಲೂ; ಪ್ರನೀಯತೇ – ಪ್ರೇರಿಸಲ್ಪಡುವರೋ; ಆಕಾರಣಕ್ಕಾಗಿ; ಪೃಕ್ಷುಧಃ – ಪ್ರಶ್ನೆಗಳೆಂಬ; ವೀರುಧಃ – ಲತೆಗಳನ್ನು; ದಂಸು – ದಂತಗಳಲ್ಲಿ; ರೋಹತಿ – ಇರಿಸಿಕೊಂಡು ನಾಶಪಡಿಸುವರು; ಯತ್ – ಯಾವಕಾರಣದಿಂದ; ಉಭಾ –ಲಕ್ಷ್ಮೀನಾರಾಯಣರಿಬ್ಬರೂ; ಅಸ್ಯ – ಈ ಮಧ್ವಾಚಾರ್ಯರ; ಜನುಷಂ – ಜನ್ಮವನ್ನು; ಇನ್ವತಃ –(ಜ್ಞಾನಕಾರ್ಯಕ್ಕೆಂದು) ಉಂಟುಮಾಡುವರೋ; ಆತ್ – ಆಕಾರಣದಿಂದಾಗಿ; ಯವಿಷ್ಠಃ – ಅವರಿಬ್ಬರಿಗಿಂತ ಕಿರಿಯರಾದ ಅವರು; ಇತ್ – ಈ ತೆರನಾಗಿ; ಘೃಣಾ – ಕರುಣಾಳುಗಳಾಗಿ; ಶುಚಿಃ –ಬ್ರಹ್ಮಹತ್ಯಾದಿ ನಿಮಿತ್ತವಾದ ಜನಾಪವಾದದಿಂದಲೂ ಸಹ ದೂರವಾಗಿರುವ ನಿಮಿತ್ತವಾಗಿಯೂ, ಗರ್ಭವಾಸಾದಿದೋಷಗಳಿಂದ ರಹಿತರಾದ ಕಾರಣ-ದಿಂದಾಗಿಯೂ 'ಶುಚಿ' ಎನ್ನಿಸಿದವರು.

ಟಿ: ೧) ಶ್ರೀಮಧ್ವಾತಾರದವರ್ಣನೆಯು ಈ ಮಂತ್ರದಲ್ಲಿ ಮುಂದುವರೆದಿದೆ.

೨) ಶ್ರೀವಾಯುದೇವರು ಶ್ರೀಮಧ್ವರಾಗಿ ಅವತರಿಸಿ ತನ್ನ ತಂದೆಯೂ ಸರ್ವೋತ್ತಮನೂ ಆದ ಶ್ರೀನಾರಾಯಣನಿಂದ ಪ್ರೇರಿತರಾಗಿಯೇ ಸಕಲ ಕಾರ್ಯಗಳನ್ನೂ ಮಾಡಿದರು; ಪ್ರಶ್ನರೂಪವಾದ ಬಳ್ಳಿಗಳನ್ನು ಹಲ್ಲುಗಳಲ್ಲಿರಿಸಿಕೊಂಡು ಸೀಳಿಹಾಕಿದರು; ಇವರ ಜನ್ಮವು ಶ್ರೀಲಕ್ಷ್ಮೀನಾರಾಯಣರ ಪ್ರೇರಣೆಯಿಂದ ಆದದ್ದರಿಂದಾಗಿ ಇವರು ಅವರಿಬ್ಬರಿಗಿಂತ ಕಡಿಮೆ– ಯಾದವರು (ಮತ್ತು ಇತರರಿಗಿಂತ ಮಿಗಿಲಾದವರು); ಇವರು (ವಿಷ್ಣುಭಕ್ತರಲ್ಲಿ) ಕೃಪಾಶೀಲರೂ, ಗರ್ಭವಾಸಾದಿ ದೋಷಗಳಿಲ್ಲದ ಪರಿಶುದ್ಧಚೇತನರೂ ಆಗಿರುವರು.'' ಎಂದು ಭಾವ.

---

೪. ಪರಮಾತ್ ಪಿತುಃ– ಹೇತೌ ಪಂಚಮೀ। ಸರ್ವೋತ್ತಮೇನ ಪಿತ್ರಾ ಪ್ರೇರ್ಯತೇ। –(ಜ)

೪. ತದ್ರೂಪಂ ಪೃಕ್ಷುಧಃ ಪ್ರಶ್ನರೂಪಾಃ ವೀರುಧಃ ಲತಾಃ ದಂಸು ದಂತೇಷು ಪರ್ಯಾರೋಹತಿ। ವಲ್ಲೀಖಂಡನವತ್ ಖಂಡಯತೀತ್ಯರ್ಥಃ। . –(ಜ)

೪. ಪೃಕ್ಷುಧಃ– ಪ್ರಶ್ನರೂಪಾಃ, ವೀರುಧಃ–ವ್ರತತೀಃ, ಖಂಡನಾರ್ಥಂ ದಂಸು ದಂತೇಷು ಪರ್ಯಾರೋಹತಿ ಸ್ಥಾಪಯತಿ। ಯಥಾ ಕಶ್ಚಿತ್ ಪುರುಷೋ ವೀರುಧಃ ಖಂಡಯಿತುಂ ದಂತೇಷು ಧಾರಯತಿ। ಏವಂ ಪ್ರಶ್ನಾನ್ ಖಂಡಯಿತುಂ ಅನುಚರ್ಚಿತವತ್ ಶಕಲೀಕರೋತೀತ್ಯರ್ಥಃ। –(ವ)

೪. ಆತ್ – ಇತಃ – ಆಭ್ಯಾಮೇವ ಸಕಾಶಾತ್ ಯವಿಷ್ಠಃ ಕನಿಷ್ಠಃ ಅಭವತ್। । ಆಭ್ಯಾಮೇವ ಲಕ್ಷ್ಮೀನಾರಾಯಣಾ-ಭ್ಯಾಮೇವ ಯವಿಷ್ಠೋ ಅವರೋ ಭವೇತ್, ಯತ್ ವ್ಯತಿರೇಕೇಣ ಅನ್ಯಸ್ಯ ಪ್ರೇರಕಸ್ಯಾಭಾವಾತ್ ತದನಂತರಮಯಮೇವೇತಿ ಭಾವಃ। – (ವ)

೪. ವಿಷ್ಣುಭಕ್ತೇಷು, ಘೃಣಾ – ದಯಾವಾನ್, ಶುಚಿಃ – ಗರ್ಭವಾಸಾದಿ ದೋಷರಹಿತಃ। –(ಜ)

೪. ಘೃಣಾ ಶುಚಿಃ – ಕೃಪಯಾ ಶುದ್ಧಃ। – (ವ)

೩) ಶ್ರೀವಿಷ್ಣುವಿನಿಂದ ಶ್ರೀವಾಯುದೇವರು ''ಪಾಜಕದಲ್ಲಿ ಜನಿಸಿರಿ; ಬ್ರಹ್ಮಸೂತ್ರಗಳಿಗೂ ಹತ್ತು ಉಪನಿಷತ್ತುಗಳಿಗೂ ಭಾಷ್ಯಗಳನ್ನು ರಚಿಸಿರಿ, ರಜತಪೀಠಪುರದಲ್ಲಿ ಶ್ರೀಕೃಷ್ಣನನ್ನು ಪ್ರತಿಷ್ಠಾಪಿಸಿರಿ, ಸೇತುದರ್ಶನಕ್ಕೆಂದು (ರಾಮೇಶ್ವರಕ್ಕೆ) ತೆರಳಿರಿ, ಅಲ್ಲಿಯೂ ದುಷ್ಟರನ್ನು ಜಯಿಸಿರಿ; ಸಜ್ಜನರಿಗೆ ಜ್ಞಾನವನ್ನು ನೀಡಿರಿ; ಬದರಿಗೆ ತೆರಳಿರಿ; ವ್ಯಾಸರನ್ನು ಕಾಣಿರಿ; ಹಾದಿಯಲ್ಲಿ ಸಜ್ಜನರನ್ನು ಅನುಗ್ರಹಿಸಿರಿ; ಇದೇ ಮೊದಲಾದ ರೀತಿಯಲ್ಲಿ ಪ್ರೇರಿತರಾಗಿರುವರು ಎಂಬುದಾಗಿ ಶ್ರೀವಾದಿರಾಜಸ್ವಾಮಿಗಳು ರಮ್ಯವಾಗಿ ತಿಳಿಸಿರುವರು.

೪) ಶ್ರೀವೇದವ್ಯಾಸರು ದುರ್ಭಾಷ್ಯ ಬರೆದ ಮಾಯಾವಾದಿಯನ್ನು ತತ್ಕ್ಷಣ ಭಸ್ಮವಾಡದ ಕ್ಷಮಾಸಮುದ್ರರು ಎಂಬ ಸುಮಧ್ವವಿಜಯದ ಮಾತಿನಂತೆ ಇಲ್ಲಿನ ಕೃಪೆಯ ಅರ್ಥವನ್ನು ತಿಳಿಯಬೇಕು:

ಸ್ವಸೂತ್ರಜಾತಸ್ಯ ವಿರುದ್ಧಭಾಷೀ ತದ್ಭಾಷ್ಯಕಾರೋಽಹಮಿತಿ ಬ್ರುವನ್ ಯಃ।
ತಂ ತತ್ಕ್ಷಣಾದ್ಯೋ ನ ದಿಧಕ್ಷತಿ ಸ್ಮ ಸ ವ್ಯಾಸರೂಪೋ ಭಗವಾನ್ ಕ್ಷಮಾಬ್ಧಿಃ ॥ –(೧/೫೩)

೫) ಪ್ರಶ್ನೆಗಳು ಹಸಿವಿನಂತೆ ಪೀಡಕವಾಗಿ ಮತ್ತೆ ಮತ್ತೆ ಉದ್ಭವಿಸುತ್ತಲೇ ಇರುವುದರಿಂದ ಅವುಗಳನ್ನು ಬಳ್ಳಿಗಳೆಂದು ಕರೆದಿರುವುದು ಉಚಿತವಾಗಿದೆ; ಅವುಗಳನ್ನು ಎತ್ತು (ಅಥವಾ ಪುರುಷನು) ಹಲ್ಲುಗಳಲ್ಲಿ ಇರಿಸಿಕೊಂಡು ತುಂಡರಿಸುವಂತೆ ಶ್ರೀಮದಾಚಾರ್ಯರು ಸಕಲ ಪೂರ್ವಪಕ್ಷಗಳನ್ನೂ ನಾಶಪಡಿಸುವರು ಎಂದು ಭಾವ.

---

೪. ಇದಂ ಕಾರ್ಯಂ ಕುರು, ಇದಂ ಕಾರ್ಯಂ ಕುರು ಇತಿ ಪ್ರೇರ್ಯತೇ ಇತ್ಯರ್ಥಃ। ಪಾಜಕಕ್ಷೇತ್ರೇ ಉತ್ಪದ್ಯಸ್ವ, ಬ್ರಹ್ಮಸೂತ್ರಸ್ಯ ದಶೋಪನಿಷದಾಂ ಚ ಭಾಷ್ಯಾಣಿ ಕುರು, ರಜತಪೀಠಪುರೇ ಕೃಷ್ಣಂ ಪ್ರತಿಷ್ಠಾಪಯ, ಸೇತು-ದರ್ಶನಾರ್ಥಂ ಗಚ್ಛ, ತತ್ರಾಪಿ ಖಲಾನ್ ನಿರ್ಜಯಸ್ವ, ಸುಜನೇಷು ಜ್ಞಾನಂ ದಿಶ, ಬದರೀಂ ಗಚ್ಛ, ವ್ಯಾಸಂ ಪಶ್ಯ, ಮಧ್ಯೇ ಮಾರ್ಗಂ ಸುಜನಾನನುಗೃಹಾಣ, ಇತ್ಯಾದಿರೂಪೇಣ ಪ್ರಣೀಯತೇ ಇತ್ಯರ್ಥಃ। – (ವಾ)

೪. ಪೃಕ್ಷುಧಃ – ಪೃತಃ ಪ್ರಶ್ನಾ ಏವ ಕ್ಷುದ್ವತ್ ಪರಪೀಡಕತ್ವಾತ್ ಕ್ಷುಧಃ, ತಾ ಏವ ವೀರುಧಃ ಲತಾಃ, ವಿಶೇಷೇಣ ಪುನಃ ಪುನಃ ರುಹಂತೀತಿ ಹಿ ಲತಾಃ ವೀರುಧಃ। ಪ್ರಶ್ನಾನಾಮಪಿ ಪುನಃ ಪುನರುತ್ಪತ್ತೇರ್ವೀರುಧಾಂ ಸಾಮ್ಯಮ್ । ತಾಃ। ಸರ್ವಾಃ। – (ವಾ)

೪. ದಂಸು – ದಂತೇಷು; ರೋಹತಿ –ಆರೋಪಯತಿ। ಅಂತರ್ಣೀತೋ ಣಿಚ್ । ಯಥಾ ಬಲೀವರ್ದಃ ಲತಾಃ ದಂತೇಷು ನಿಕ್ಷಿಪ್ಯ ನಾಶಯತಿ ತದ್ವತ್ ಪರಪ್ರಶ್ನಾನಪಿ ನಾಶಯತೀತಿ ಭಾವಃ। 'ದತ್ಸು' ಇತಿ ವಕ್ತವ್ಯೇ 'ದಂಸು' ಇತಿ ವಚನಂ 'ಪುಂಸು' ಇತಿವತ್ ವರ್ಣವಿಕಾರಾದಿನಾ ಜ್ಞೇಯಮ್ । – (ವಾ)

೪. ಗತ್ಯರ್ಥಾನಾಂ ಜ್ಞಾನಾರ್ಥಕತ್ವಾತ್ ಯತ್‌ಜ್ಞಾನಮುದ್ದಿಶ್ಯ, ಇನ್ವತಃ- ಪ್ರೇರಯತಃ, ಯುಗೇ ಯುಗೇ ಪ್ರೇರಯತಃ, ತತ್ ತಸ್ಮಾತ್ ಕಾರಣಾತ್ ಆತ್-ಅಕಾರವಾಚ್ಯಾತ್ ನಾರಾಯಣಾತ್। ಯವಿಷ್ಠಃ–ವಾಯೋರವ-ತಾರೇಷು ಕನಿಷ್ಠಃ ಮಧ್ವಾಚಾರ್ಯಃ। – (ವಾ)

೬) ಶ್ರೀಮಧ್ವರೂಪವು ಹನುಮದ್ರೂಪ ಮತ್ತು ಭೀಮರೂಪಗಳ ಅನಂತರದ ರೂಪವಾದ್ದರಿಂದ ಅವುಗಳಲ್ಲಿ ಕಿರಿಯದು ಎಂಬ ಅಭಿಪ್ರಾಯವನ್ನೂ ಇಲ್ಲಿಯ 'ಯವಿಷ್ಠ' ಎಂಬುದು ಸೂಚಿಸುತ್ತದೆ ಎಂದು ಶ್ರೀವಾದಿರಾಜರು ವ್ಯಾಖ್ಯಾನಿಸಿರುವರು.

೭) ಹನುಮದ್ರೂಪ ಹಾಗೂ ಭೀಮರೂಪಗಳಲ್ಲಿ ದುಷ್ಟರನ್ನು ದೈಹಿಕವಾಗಿ ನಾಶಪಡಿಸಿದರೆ, ಅವರ ವಿಚಾರಗಳನ್ನು ಮಾತ್ರ ಖಂಡಿಸಿದ್ದು ಶ್ರೀಮಧ್ವರೂಪದ ವೈಶಿಷ್ಟ್ಯ ; ಮೇಲ್ನೋಟಕ್ಕೆ ಇದು ಅವರ ಕಾರುಣ್ಯಕ್ಕೆ ದ್ಯೋತಕ; ಅದರಂತೆ ಬ್ರಾಹ್ಮಣರೂಪದಿಂದ ದುರ್ಮತ ಪ್ರಸಾರಕರನ್ನು ಸಂಹರಿಸದೆ ಇದ್ದದ್ದು ಬ್ರಹ್ಮಹತ್ಯೆಯನ್ನು ಮಾಡಿದರೆಂಬ ಜನಾಪವಾದಕ್ಕೂ ಕಾರಣವಾಗದ ಮತ್ತೊಂದು ಗುಣವಾಗಿದ್ದು ಅವರ 'ಶುಚಿತ್ವ'ಕ್ಕೂ ದ್ಯೋತಕವಾಗಿದೆ.

೮) ವಾಸ್ತವವಾಗಿ ಅವರು ದುಷ್ಟರನ್ನು ಸಂಹರಿಸದೆ ಇದ್ದದ್ದು ಸುಮಧ್ವವಿಜಯದಲ್ಲಿ ಹೇಳಿರುವಂತೆ, ಆ ಕಾರ್ಯವನ್ನು ಭಗವದಾಜ್ಞೆಯಿಂದ ಶ್ರೀದುರ್ಗಾದೇವಿ ಮಾಡುವರು ಎಂಬ ಕಾರಣದಿಂದ; ದುಷ್ಟರ ಸಂಹಾರದಿಂದ ಬ್ರಹ್ಮಹತ್ಯಾರೂಪದೋಷಕ್ಕೆ ಅವಕಾಶವೇ ಇಲ್ಲ; ಆದರೂ ಸಾಮಾನ್ಯರಿಗೆ ಬರಬಹುದಾದ ಶಂಕೆಗೂ ಅವರು ಅವಕಾಶಕೊಡಲಿಲ್ಲ ಎಂದು ಭಾವ.

೯) ಪರಮಾತ್ – ಅತಿಶಯಿತ ವಿದ್ಯೆಯಿಂದ ಕೂಡಿದ ಶ್ರೀವೇದವ್ಯಾಸರಿಂದ ಅನೇಕ ತೆರನಾದ(ಬ್ರಹ್ಮಸೂತ್ರಭಾಷ್ಯರಚನೆ ಮೊದಲಾದ) ಕಾರ್ಯವನ್ನು ಮಾಡಲು ತೆರಳಿರಿ ಎಂದು ಆಜ್ಞಪ್ತರಾಗುವರು ಎಂದರೆ ಶ್ರೀಮಧ್ವಾಚಾರ್ಯರು ಭಗವತ್ಸಂಕಲ್ಪಕ್ಕೆ ಅನುಗುಣವಾಗಿ ಅವನ ಪ್ರೇರಣೆಯಿಂದಲೇ ಸರ್ವತ್ರ ಚರಿಸುವವರು; ದುರ್ಮತದ ಆಚಾರ್ಯರುಗಳಂತೆ ಸ್ವೇಚ್ಛಾಚಾರಿ–ಗಳಾಗಲೀ, ದುರಾಚಾರಿಗಳಾಗಲೀ ಎಂದೂ ಅಲ್ಲ ಎಂದು ಭಾವ.

---

೪. ಇತ್ –ಇತ್ಥಂ;ಇದಾನೀಂ ದೃಶ್ಯಮಾನಪ್ರಕಾರೇಣ ಘೃಣಾ – ಘೃಣಾವಾನ್ ದುರ್ಜನಾನಪಿ ಭೀಮವತ್ ಹನೂಮದ್ವಚ್ಚಹರ್ಯಾಜ್ಞಾಯಾ ಅಭಾವಾತ್ ಕುತೋ ಹನ್ಮೀತಿ ಕೃಪಾವಾನ್ ಅತ ಏವ ಶುಚಿಃ । ಸ್ವಪ್ರತಿವಾದಿತಯಾ ಪ್ರತ್ಯವಸ್ಥಿತಾನಾಮಪಿ ವಿಪ್ರರೂಪಾಣಾಂ ವಿದುಷಾಂ ವಾಚಾ ದೂಷಣೇऽಪಿ ಕರೇಣ ಅಹಿಂಸನಾತ್ ವಿಪ್ರಹತ್ಯಾನಿಮಿತ್ತಜನಾಪವಾದೇನಾಪಿ ಅಸ್ಪೃಷ್ಟೋ ಅಭವದಿತ್ಯರ್ಥಃ । –(ವಾ)

೪. ಮಮ ಪ್ರಭೋರ್ನಾಪರಥಾ ಹಿ ಶೋಭತೇ ದ್ವಿಷತ್ಸು ವಿಷ್ಣೂಂ ಯದದಂಡಧಾರಣಮ್ ।
ಹರಿಸ್ವಸಾ ನನ್ವಚಿರಾದಸದಧ್ದಿದೇ ಭವೇದತೋ ನಾಸ್ಮಿ ಚ ದಂಡಧಾರಕಃ ॥ –(ಸುಮಧ್ವವಿಜಯ - ೪/೩))

೪. ಪರಮಾತ್–ಪರಾ ಅತಿಶಯಿತಾ ಮಾ ವಿದ್ಯಾ ಯಸ್ಯೇತಿ ವ್ಯುತ್ಪತ್ತ್ಯಾ ಪರರೂಪಾತ್ ವ್ಯಾಸಾತ್ ವಾ, ಪರಿ–ಪರಿತಃ ಪ್ರಣೀಯತೇ ಪ್ರಕರ್ಷೇಣ ಪ್ರೇರಯಿತ್ವಾ ನೀಯತೇ ಇದಂ ಕಾರ್ಯಂ ಕರ್ತುಂ ಅತ್ರ ಗಚ್ಛೇತಿ ನಿಯಮ್ಯತೇ । ಭಗವತ್ಸಂಕಲ್ಪಾನುಸಾರೇಣ ತತ್ಪ್ರೇರಣಯೈವ ಸರ್ವತ್ರಗಚ್ಛತಿ। ನ ತು ದುರ್ದರ್ಶನಾಚಾರ್ಯವತ್ ಸ್ವೇಚ್ಛಾಚಾರೀ ಚ ಇತ್ಯರ್ಥಃ। -(ಭಾ.ವಿ)

೧೦) ಪೃಕ್ಷುಚ್ಛಬ್ದಕ್ಕೆ ಪ್ರತಿವಾದಿಕೃತ ಪ್ರಶ್ನೆಗಳನ್ನು ಎಂದೂ 'ವೀರುತ್' ಶಬ್ದಕ್ಕೆ ಮತ್ತೆಮತ್ತೆ ಹುಟ್ಟುವಂತಹ ವೇದವೃಕ್ಷಕ್ಕೆ ಜೋತುಬಿದ್ದಿರುವ 'ಲತೆ'ಗಳು ಎಂದೂ ಅರ್ಥ. ಪ್ರತಿವಾದಿಗಳ ಪ್ರಶ್ನೆಗಳು ಪ್ರಾಮಾಣಿಕವಾಗಿರದೆ ಕೇವಲ ದುರಾಗ್ರಹದಿಂದ ಕೂಡಿರುತ್ತವೆ ಎಂಬುದನ್ನು ಸಹ ಇಲ್ಲಿ ಸೂಚಿಸಿರುವರು.

೧೧) ಬಳ್ಳಿಗಳನ್ನು ಹಲ್ಲುಗಳಿಂದ ತುಂಡರಿಸಿ ಹಾಕುವಂತೆ ಪ್ರತಿವಾದಿಕೃತ ಪ್ರಶ್ನೆಗಳನ್ನು ದಂತದೊಳಗಿನ ವಾಗ್ಗುಂಫಗಳಿಂದ ತುಂಡುಮಾಡಿ ಹಾಕುವರು ಎಂದು ಅರ್ಥ. ಅದನ್ನು ಸೂಚಿಸಲೆಂದೇ 'ದತ್ಸು' ಎಂದು ಹೇಳದೆ, 'ದಂಸು' ಎಂಬುದಾಗಿ ಹೇಳಿರುವರು; ಅಥವಾ 'ದೋ ಅವಖಂಡನೇ' ಅಥವಾ 'ದಂಶ ದಂಶನೇ' ಎಂಬ ಧಾತುವಿನಿಂದ ನಿಷ್ಪನ್ನವಾಗಿರುವ ಸಕಾರಾಂತ ಪದ ಎಂಬುದಾಗಿಯೂ ಇದನ್ನು ಭಾವಿಸಬಹುದು. (ಪುಮಾನ್ ಎಂಬ ಪದದಂತೆ ಇಲ್ಲಿ 'ದಾನ್' ಶಬ್ದವಿದೆ ಎಂದು ತಿಳಿಯಬೇಕು).

೧೨) ಅಪ್ರಾಮಾಣಿಕವಾದ ಪ್ರಶ್ನೆಗಳನ್ನು 'ಸತ್ಯಂ' ಎಂದು ಪರಿಹರಿಸದೆ, 'ತನ್ನ'(ತತ್ ನ) ಎಂಬುದಾಗಿ ಖಂಡಿಸಿಯೇ ಹಾಕುವರು ಎಂಬ ಅಭಿಪ್ರಾಯವಿಶೇಷವೂ ಸಹ 'ದಂಸು' ಎಂಬಲ್ಲಿ ಸೂಚಿತವಾಗಿದೆ. ಕೆಲವೆಡೆ 'ಸತ್ಯಂ' ಎಂಬುದಾಗಿ (ಅರ್ಧಾಂಗೀಕಾರಮಾಡಿ) ಉತ್ತರ ನೀಡಿರುವುದು ನಿಜವಾದರೂ, ಹೆಚ್ಚಾಗಿ ಪೂರ್ವಪಕ್ಷಗಳ ಪ್ರಶ್ನೆಗಳನ್ನು 'ತನ್ನ' ಎಂಬುದಾಗಿ ಖಂಡಿಸಿಹಾಕಿರುವರು ಎಂಬ ಅಭಿಪ್ರಾಯ ವಿಶೇಷವೂ 'ದಂಸು' ಎಂಬುದರಿಂದ ಸೂಚಿತವಾಗಿದೆ.

---

೪. ವೀರುಧಃ– ವಿಃ ವಿಶೇಷಣ ರುಹತೀತಿ ವ್ಯತ್ಪತ್ತ್ಯಾ ವೀರುಚ್ಛಬ್ದವಾಚ್ಯಲತಾವತ್ ವಾರಂ ವಾರಂ ಉತ್ಪದ್ಯಮಾನತಯಾ ತದ್ವತ್ ವೇದಾಖ್ಯಪಾದಪವಿಲಂಬಿತಯಾ ಚ ಲತಾಶಬ್ದೋಪಲಕ್ಷಿತಾಃ, ಪೃಕ್ಷುಧಃ ಪ್ರಚ್ಛ ಈಪ್ಸಾಯಾಮಿತ್ಯತ್ರೋಕ್ತಪ್ರಚ್ಛಧಾತೋಃ ಛಕಾರಸ್ಯ ವರ್ಣಾಂತರಾದೇಶೇನ ಪ್ರಶ್ನಶಬ್ದವತ್ ಕ್ಷುದಾಖ್ಯವರ್ಣವಿಕಾರೇ ಸತಿ ಪೃಕ್ಷುಚ್ಛಬ್ದವಾಚ್ಯಾನ್ ಪ್ರತಿವಾದಿಕೃತಪ್ರಶ್ನಾನ್ । ಪ್ರಶ್ನಾನಾಂ ಪ್ರಾಮಾಣಿಕತ್ವಾಭಾವಸೂಚನಾಯ ಋಕಾರಸ್ಯ ಗುಣಾಭಾವಶ್ಛಾಂದಸಃ ।

೪. ದಂಸು ಸಂತೇಷು ಆರೋಹತಿ ಆರೋಪಯತಿ । ಯಥಾ ಲತಾಃ ದಂತೈಶ್ಚೂರ್ಣೀಕುರ್ವಂತಿ । ತಥಾ ಪ್ರತಿವಾದಿಕೃತಪ್ರಶ್ನಾನ್ ದಂತಾಂತರ್ವರ್ತಿವಾಗ್ಗುಂಫೈಃ ಚೂರ್ಣೀಕರೋತಿ ಇತ್ಯರ್ಥಃ । ಅತ ಏವ ಮುಖ್ಯತೋ ದಂತತ್ವಾಭಾವಸೂಚನಾಯ 'ದತ್ಸು' ಇತಿ ವಕ್ತವ್ಯೇ 'ಪುಂಸು' ಇತಿವತ್ 'ದಂಸು' ಇತ್ಯುಕ್ತಮ್ । ಪುಮಾನಿತಿವತ್ 'ದೋ ಅವ ಖಂಡನೇ' ಇತಿ ಧಾತೋಃ 'ದಂಶ ದಂಶನೇ' ಇತಿ ವಾ ಧಾತೋಃ 'ದಾನ್' ಇತಿ ಸಾಕಾರಾಂತೋ ವಾ ಶಬ್ದೋ ದ್ರಷ್ಟವ್ಯಃ । –(ಭಾ.ವಿ.)

೪. 'ಲೃತುಲಸಾನಾಂ ದಂತಾ' ಇತಿ ವಚನಾತ್ ತನ್ನೇತಿ ದಾಂತಾಭ್ಯಾಂ ವರ್ಣಾಭ್ಯಾಮೇವ ಪ್ರಶ್ನಪರಿಹಾರಸ್ಯ ಪ್ರಾಗಾರಂಭನಿಯಮಾತ್ 'ದಂಸು' ಇತ್ಯುಕ್ತಮ್ । ಅಪ್ರಾಮಾಣಿಕಶಂಕಾಯಾಃ ಸತ್ಯಮಿತಿ ಪರಿಹಾರೋ ನಾಸ್ತ್ಯೇವ ಕ್ವಚಿತ್ ಪ್ರಾಮಾಣಿಕಾಪ್ರಾಮಾಣಿಕಶಂಕಾಯಾಃ ಸತ್ಯಮಿತಿ ಪರಿಹಾರಾರಂಭೇಽಪಿ ದಾಂತಾಕ್ಷರಬಾಹುಲ್ಯೇನೈವ ತತ್ರಾಪಿ ಪರಿಹಾರಾರಂಭಾತ್ ಯಕಾರಾದೇರಪ್ರಾಧಾನ್ಯಾತ್ 'ದಂಸು' ಇತ್ಯೇವೋಕ್ತಮ್ । –(ಭಾ.ವಿ.)

೧೩) ಭಗವದ್ವಿರೋಧಿಯಾಗಿ ಹುಟ್ಟಿದಂತಹ ತನ್ನ ಸೈನ್ಯಕ್ಕೆ ಕ್ಷೋಭೆಯುಂಟು ಮಾಡುವಂತಹ ಕಲ್ಯಾದಿ ದೈತ್ಯಸಮೂಹದ ದಂತಗಳ ಮೇಲೆ ತಮ್ಮ ಪಾದಗಳನ್ನು ಊರಿ ಅವರ ದಂತಭಂಗವನ್ನು ಮಾಡುವರು ಎಂಬ ಮತ್ತೊಂದು ಅರ್ಥವೂ ಇಲ್ಲಿದೆ. ಸೋಲಿಸುವುದನ್ನು 'ಹಲ್ಲು ಮುರಿಯುವುದು' ಎಂದು ಕರೆಯುವ ಲೋಕರೂಢಿಯೂ ಇದೆಯಲ್ಲವೇ? ಭೀಮಸೇನನು ಸಾಕ್ಷಾತ್ತಾಗಿಯೇ ದುಃಶಾಸನನ ಹಲ್ಲುಗಳನ್ನು ಮುರಿದು ಹಾಕಿರುವರು ಎಂಬುದು ಸಹ 'ದಂಸು' ಎಂಬುದರಿಂದ ಸೂಚಿತವಾಗಿದೆ. ಶ್ರುತಿಯೂ ಹಾಗೆಯೇ ಇದೆ.

೧೪) ಲಕ್ಷ್ಮೀನಾರಾಯಣರ ಭೃತ್ಯರಾದ ಶ್ರೀಮಧ್ವಾಚಾರ್ಯರು ಅವರಿಬ್ಬರಿಂದ ಪ್ರೇರಿತರಾಗಿರುವರು; ಅಕಾರವಾಚ್ಯನಾದ ಪರಮಾತ್ಮನ ಬಲದಿಂದ ಸೂಕ್ಷ್ಮರೂಪರಾದ ಅವರು ಯತಿರೂಪವನ್ನು ಧರಿಸಿದವರು ಎಂಬ ಕಾರಣದಿಂದ ಭೀಮಾದಿರೂಪದಲ್ಲಿ ಮಾಡಿದಂತೆ ಶತ್ರುಗಳನ್ನು ದೈಹಿಕವಾಗಿ ಹಿಂಸಿಸಲಿಲ್ಲ. ಅವರ ಇಂತಹ ಕರುಣೆ ಯತಿಗಳು ಹಿಂಸೆಯನ್ನು ಮಾಡಬಾರದು ಎಂಬ ಲೋಕಧರ್ಮದ ಶಿಕ್ಷಣೆಗಾಗಿಯೇ ಹೊರತು ಒಳಗಿನಿಂದ ಬಂದ ನಿಜವಾದ ಕರುಣೆಯಲ್ಲ; ಇದನ್ನೆಲ್ಲ ಸೂಚಿಸಲೆಂದು 'ಘೃಣೇ' ಎಂದು ಹೇಳದೆ 'ಘೃಣಾ' ಎಂಬ ಪ್ರಯೋಗ ಇಲ್ಲಿ ಬಂದಿದೆ. ತಮ್ಮ ಶಿಷ್ಯರಾದ ವಿಷ್ಣುಭಕ್ತರಲ್ಲಿ ಮಾತ್ರ ನಿಜವಾಗಿಯೂ ಇವರು ಕರುಣಾಳುಗಳೇ ಆಗಿರುವರು ಎಂಬ ಭಾವವೂ ಇಲ್ಲಿದೆ.

---

೪. ಅಥವಾ ವೀರುಧಃ ವಿಃ – ಭಗವದ್ವಿರೋಧಿತಯಾ ಉತ್ಪನ್ನಸ್ಯ, ವೃಕ್ಷವದ್ಧಃ– ಸ್ವಪೃತನಾಕ್ಷೋಭಕಾರಿಣಃ ಕಲ್ಯಾದಿದೈತ್ಯಸಮೂಹಸ್ಯ ದಂಸು–ದಂತೇಷು ಆರೋಹತಿ । ಸ್ವಚರಣೇನಾರೋಹತಿ । ಆರೋಹಣಂ ಕರೋತಿ । ತಾನ್ ಪರಾಭೂಯ ತೇಷಾಂ ದಂತಭಂಗಂ ಕರೋತೀತ್ಯರ್ಥಃ । ಪರಾಜಯಸ್ಯ ದಂತಭಂಗ ಇತಿ ಲೋಕೇ ರೂಢೇಃ। ಭೀಮಸೇನೇನ ದುಃಶಾಸನಾದೇಃ ಸಾಕ್ಷಾದ್ದಂತಭಂಗಸ್ಯಾಪಿ ಕೃತತ್ವಾತ್ 'ದಂಸು' ಇತ್ಯುಕ್ತಮ್ । –(ಭಾ.ವಿ.)

೪. ತಥಾ ಚ ಶ್ರುತಿಃ ।

'ಅಥಃ ಸಪತ್ನಾ ಮೇ ಪದೋರಿಮೇ ಸರ್ವೇ ಅಭಿಷ್ಠಿತಾ' ಇತಿ ।

'ತ್ವಯಾऽಭಿಗುಪ್ತಾ ವಿಚರಂತಿ ನಿರ್ಭಯಾ ವಿನಾಯಕಾನೀಕಪಮೂರ್ಧಸು ಪ್ರಭೋ ॥'

ಇತಿ ದೇವಾನಾಂ ಸ್ತುತಿರೂಪ ಸ್ಯೈತಿಶ್ಚ। -(ಭಾ.ವಿ.)

೪. ಯತ್– ಯಸ್ಮಾತ್ ; ಉಭೌ– ಲಕ್ಷ್ಮೀನಾರಾಯಣೌ । ಅಸ್ಯ– ಮಧ್ವಸ್ಯ ಸ್ವಾಮಿತ್ವೇನ – ಸಂಬಂಧಿನೌ । ಯತ್ – ಯಸ್ಮಾತ್ ಜನುಷಂ – ಜನ್ಮ । ಇನ್ವತಃ ಪ್ರೇರಯತಃ । 'ಇಣ್ ಗತೌ' ಇತಿ ಧಾತೋಃ 'ಇನ್ವತಿ' ಇತಿ ವೈದಿಕರೂಪಮ್ । ಅತ್ –ಅಸ್ಮಾತ್ ಕಾರಣಾತ್ ಅಕಾರವಾಚ್ಯ ಪ್ರೇರಕಪರಮಾತ್ಮಬಲಾದ್ ವಾ ಯವಿಷ್ಠಃ ಸೂಕ್ಷ್ಮರೂಪೋ ಮಧ್ವಃ । ಘೃಣಾ ಘೃಣಾವಾನ್ ಯತಿರೂಪಧಾರಿತ್ವಾತ್ ದಯಯೈವ ಭೀಮಾದಿವತ್ ಶತ್ರುಷು ಹಿಂಸಾದಿಕಮ- ಕುರ್ವನ್ ಇತ್ಯರ್ಥಃ । ಲೋಕಮರ್ಯಾದಾರಕ್ಷಣಾರ್ಥಮೇವ ಸಾ ಘೃಣಾ । ನ ತು ಸ್ವಸ್ಯ ಸಹಜೇತಿ ಸೂಚನಾಯ 'ಘೃಣೇ' ಇತಿ ನೋಕ್ತಮ್ । –(ಭಾ.ವಿ.)

೪. ಶುಚಿಃ–ಪಾರಮಹಂಸ್ಯಧರ್ಮಾಚರಣಾತ್ ಪರಮಪಾವನಶ್ಚಾಭವತ್। –(ಭಾ.ವಿ.)

೧೫) ಹೀಗೆ ಪರಮಹಂಸಧರ್ಮವನ್ನು ಮೇಲ್ನೋಟಕ್ಕೂ ಪಾಲಿಸಿ 'ಶುಚಿ' ಎನ್ನಿಸಿದ್ದು ಇವರ ಹಿರಿಮೆ; ಗಂಡವಾಟ, ಪೂರ್ವವಾಟ ಮೊದಲಾದ ಮಲ್ಲರನ್ನು ಸಹ ಕುಳಿತುಕೊಂಡೇ ಪರಾಭವಗೊಳಿಸಿದರೇ ಹೊರತು, ಅವರೊಂದಿಗೆ ನೇರವಾಗಿ ಮಲ್ಲಯುದ್ಧವನ್ನು ಮಾಡಿ ಅಲ್ಲ ಎಂಬ ಸುಮಧ್ವವಿಜಯದ(೧೬/೨೭,೨೮) ಉಲ್ಲೇಖವನ್ನು ಇಲ್ಲಿ ಗಮನಿಸಬಹುದು. ಶ್ರೀವಾಯುದೇವರು ತಮ್ಮ ಸಕಲ ಅವತಾರಗಳಲ್ಲೂ ಮೂಲರೂಪದಂತೆಯೇ ಪರಿಶುದ್ಧರಾಗಿರುವರು ಎಂದೂ ಭಾವ.

ಮಧ್ವರಿಗೆ ಗರ್ಭವಾಸಾದಿ ದುಃಖಗಳಿಲ್ಲ - ಅವರ ಪೂರ್ಣಪ್ರಜ್ಞತ್ವ

ಆದಿನ್ಮಾತ್ರಾವಿಶದ್ಯಾಸ್ವಾಶುಚಿ-
ರಹಿಂಸ್ಯಮಾನ ಉರ್ವಿಯಾ ವಿವಾವೃಧೇ ।
ಅನು ಯತ್ಪೂರ್ವಾ ಅರುಹತ್ ಸನಾಜುವೋ
ನಿನವ್ಯಸೀಷ್ವವರಾಸು ಧಾವತೇ ॥ ೫ ॥

ಅ: (ಶ್ರೀವಾಯುದೇವರು) ಆತ್ – ಅಕಾರ ಶಬ್ದವಾಚ್ಯನಾದ ವಿಷ್ಣುವಿನ ಆಜ್ಞೆಯಿಂದ; ಇತ್ – ಈ ತೆರನಾಗಿ ಮೂರು ಅವತಾರಗಳಲ್ಲಿ; ಮಾತ್ಯಃ – ಅಂಜನಾ, ಕುಂತೀ ಮತ್ತು ಮಧ್ಯಗೇಹಪತ್ನಿಯರೆಂಬ ತಾಯಿಯರಲ್ಲಿ; ಆ –ತ್ರೇತಾಯುಗ, ದ್ವಾಪರಯುಗ ಮತ್ತು

---

೪. ಶುದ್ಧೇ ಭಾಗವತೇ ಧರ್ಮೇ ನಿರತೋ ಯದ್ ವೃಕೋದರಃ । –(೧೮/೪)

೫. 'ಯತ್ತದೋನಿತ್ಯಸಂಬಂಧೇ' ಇತಿ ವಚನಾತ್ । –(ವಾ)

೫. 'ಜುಷೀ ಪ್ರೀತಿಸೇವನಯೋಃ' ಇತಿ ಧಾತೋಃ ಸಜೂರಿತ್ಯಾದಾವಿವ ಕೂರಿತ್ಯುಕಾರಾಂತಃ ಶಬ್ದೋऽಯಮಿತಿ ಜ್ಞೇಯಮ್ । –(ವಾ)

೫. ಇತ್ – ಇತ್ಥಂ– ಅವತಾರತ್ರಯೇऽಪಿ । –(ವಾ)

೫. ಮಾತ್ಯಃ – ಅಂಜನಾ ಕುಂತೀ ವಿಪ್ರಪತ್ನೀ ರೂಪಾಃ । –(ವಾ)

೫. ಆ- ತ್ರೇತಾಯುಗಂ ದ್ವಾಪರಯುಗಂ ಕಲಿಯುಗಂ ಚ ಮರ್ಯಾದೀಕೃತ್ಯ । -(ವಾ)

೫. ಆ–ಸಮಂತಾತ್ । –(ವಾ)

೫. ಶುಚಿಃ – ದುಷ್ಕರ್ಮಾದಿಭಿರಸ್ಪೃಷ್ಟಃ । –(ವಾ)

೫. ಸನಾತನಂ ಪರಮಾತ್ಮಾನಂ ಜುಷಂತಿ ಪ್ರತಿಪಾದಯಂತೀತಿ ಸನಾಜುವಃ। –(ವಾ)

೫. ಪೂರ್ವಾಃ – ಸಪ್ತವಿದ್ಯಾಸು ಪೂರ್ವಾಃ ಋಗ್ಯಜುಃಸಾಮಾಥರ್ವಾಖ್ಯಾಃ ನಿತ್ಯವಿದ್ಯಾಃ ।

ಕಲಿಯುಗಗಳನ್ನು ಪರ್ಯಾದೆ ಮಾಡಿಕೊಂಡು; ಆವಿಶತ್– ಪ್ರವೇಶಿಸಿದರು; ಯಾಸು – ಆ ತಾಯಿಯರಲ್ಲಿ; ಆ ವ್ಯಾ – ಉರುತರವಾದ ತಮ್ಮ ಸ್ವಸಾಮರ್ಥ್ಯದಿಂದ; ಆ – ಎಲ್ಲ ರೀತಿಯಲ್ಲೂ; ಶುಚಃ – ದುಷ್ಕರ್ಮ ಮೊದಲಾದವುಗಳಿಂದ ಅಸ್ಪೃಷ್ಟರಾಗಿ; (ಅತ ಏವ – ಆ ಕಾರಣದಿಂದಲೇ); ಅಹಿಂಸ್ಯಮಾನಃ(ಸನ್) – ದುಷ್ಕರ್ಮದಿಂದಾಗಲೀ, ಉದರದಲ್ಲಿನ ಜಂತುಗಳಿಂದಾಗಲಿ ಹಿಂಸಿಸಲ್ಪಡದವರಾಗಿ; ವವೃಧೇ – (ಪ್ರಸವಪರ್ಯಂತ) ಬೆಳೆದರು; ಸನಾಜುವಃ – ಸನಾತನನಾದ ಪರಮಾತ್ಮನನ್ನು ಪ್ರತಿಪಾದಿಸುವ ಕಾರಣದಿಂದಾಗಿ; 'ಸನಾಜುವಾ' ಎನ್ನಿಸಿದ; ಪೂರ್ವಾಃ – ಸಪ್ತವಿದ್ಯೆಗಳಲ್ಲಿ ಮುಂಚಿನವುಗಳಾದ ಋಗ್ವೇದ, ಯಜುರ್ವೇದ, ಸಾಮವೇದ ಮತ್ತು ಅಥರ್ವಣವೇದಗಳೆಂಬ ನಿತ್ಯಶಾಸ್ತ್ರಗಳನ್ನು; ಯತ್ – ಅವು ನಿತ್ಯವೆಂಬ ಕಾರಣದಿಂದಾಗಿ; ಅನು – ಅವುಗಳ ಅರ್ಥವನ್ನು ತಿಳಿಸಿಕೊಡುವ ಶಿಕ್ಷಾ, ಕಲ್ಪ, ವ್ಯಾಕರಣ ಮೊದಲಾದವುಗಳಿಗೆ ಅನುಗುಣವಾಗಿ; ಅರುಹತ್ – ಏರಿದರು; ವೃಕ್ಷವನ್ನೇರುವಂತೆ ಮೆಲ್ಲಮೆಲ್ಲನೆ ವಿಚಾರ ಮಾಡಿದರು; ನಿ – ನಿತರಾಂ – ಬಹಳವಾಗಿ; ನವ್ಯಸೀಷು –ನವೀನವೂ ಪೌರುಷೇಯತ್ವ ನಿಮಿತ್ತದಿಂದ ಅವರವೂ ಎನ್ನಿಸಿದ ಪಂಚರಾತ್ರ, ಭಾರತ, ಮೂಲರಾಮಾಯಣಗಳೆಂಬ ಶಾಸ್ತ್ರಗಳಲ್ಲಿ ಆ ತೆರನಾದ ಕಾಠಿನ್ಯವಿಲ್ಲದಿರುವುದರಿಂದ; ಧಾವತೇ – ಶೀಘ್ರಶೀಘ್ರವಾಗಿ ವ್ಯಾಖ್ಯಾನ ಮಾಡುವರು.

ಟಿ ೧) ಶ್ರೀವಾಯುದೇವರು ಅಕಾರವಾಚ್ಯನಾದ ಮಹಾವಿಷ್ಣುವಿನ ಆಜ್ಞೆಯಿಂದ ಈ ತೆರನಾಗಿ ತಮ್ಮ ಮೂರೂ ಅವತಾರಗಳಲ್ಲಿ ಅಂಜನಾ, ಕುಂತೀ ಮತ್ತು ಮಧ್ವಗೇಹಪತ್ನಿ ಎಂಬ ತಾಯಿಯರಲ್ಲಿ ಪ್ರವೇಶ ಮಾಡಿದರು; ಅವರಲ್ಲಿ ತಮ್ಮ ಸ್ವಸಾಮರ್ಥ್ಯದಿಂದಲೇ ಎಲ್ಲ ರೀತಿಯಲ್ಲೂ ದುಷ್ಕರ್ಮಾದಿಗಳಿಂದ ಅಸ್ಪೃಷ್ಟರಾಗಿದ್ದು ದುಷ್ಕರ್ಮದಿಂದಾಗಲೀ ಉದರಸ್ಥಜಂತುಗಳಿಂದಾಗಲೀ ಹಿಂಸಿಸಲ್ಪಡದಿರುವವರಾಗಿ ಬೆಳೆದರು; ಸನಾತನನಾದ ಪರಮಾತ್ಮನನ್ನು ಪ್ರತಿಪಾದಿಸುವ ಕಾರಣದಿಂದಾಗಿ 'ಸನಾಜುವ' ಎನ್ನಿಸಿದ ನಿತ್ಯವಾದ ವೇದವಾಕ್ಯಗಳನ್ನು ಶಿಕ್ಷಾ, ವ್ಯಾಕರಣ

---

೫. ಅನು – ತದರ್ಥಬೋಧಕ ಶಿಕ್ಷಾವ್ಯಾಕರಣಾದಿಕಮನುಸೃತ್ಯ ಅರುಹತ್ । ವೃಕ್ಷಾರೋಹಣ- ಕರ್ತೃವತ್ ಶನೈಃ ಶನೈರ್ವಿಚಾರಯಾಮಾಸೇತಿ ಭಾವಃ ।

೫. ನವ್ಯಸೀಷು – ನವೀನಾಸು; – (ವಾ)

೫. ಅವರಾಸು – ಪೌರುಷೇಯತ್ವೇನ ತತಃ ಅವರಾಸು ಪಂಚರಾತ್ರ ಭಾರತಮೂಲರಾಮಾಯಣಾಖ್ಯವಿದ್ಯಾಸು । – (ವಾ)

೫. ಧಾವತೇ –ತದ್ವತ್ ಕಾಠಿನ್ಯಾಭಾವಾತ್ ಶೀಘ್ರಂ ಶೀಘ್ರಂ ವ್ಯಾಖ್ಯಾತೀತ್ಯರ್ಥಃ । –(ವಾ)

೫. ಅಕಾರವಾಚ್ಯ ಪರಮಾತ್ಮಪ್ರೇರಣಾದೇವ । – (ಭಾ.ವಿ.)

ಮೊದಲಾದ ವೇದಾಂಗಗಳಿಗೆ ಅನುಸಾರವಾಗಿ ನಿಧಾನವಾಗಿ ವಿವರಿಸಿದರು; (ಮತ್ತು) ವೇದಾಪೇಕ್ಷಯೂ ಅರ್ವಾಚೀನವೂ, ಪೌರುಷೇಯವೆಂಬ ಕಾರಣದಿಂದಾಗಿ ಅವರವೂ ಎನ್ನಿಸಿದ ಪಂಚರಾತ್ರ, ಮಹಾಭಾರತ ಮತ್ತು ಮೂಲರಾಮಾಯಣಗಳೆಂಬ ಶಾಸ್ತ್ರಗಳಲ್ಲಿ ಅವು ವೇದದಷ್ಟು ಕಠಿಣವಲ್ಲವೆಂಬ ಕಾರಣದಿಂದಾಗಿ ವೇಗವಾಗಿ ವ್ಯಾಖ್ಯಾನಿಸಿದರು.

೨) ಶ್ರೀವಾಯುದೇವರು ಅವತರಿಸಿದ್ದು ಶ್ರೀಲಕ್ಷ್ಮೀನಾರಾಯಣರ ಅಪ್ಪಣೆಯಿಂದಲೇ ಹೊರತು ಗರ್ಭವಾಸಾದಿಗಳಿಗೆ ಕಾರಣವಾದ ಪಾಪದಿಂದಾಗಿ ಅಲ್ಲ ಎಂಬ ವಿಶೇಷವು 'ಅತ್' – ಎಂಬ ಮಾತಿನಿಂದ ತಿಳಿಯುತ್ತದೆ.

೩) ''ತಾಯಿಯ ಗರ್ಭದಲ್ಲಿನ ಶುಕ್ಲಶೋಣಿತಾತ್ಮಕವಾದ ದೇಹದ ಪರಿಣಾಮಕಾಲದಲ್ಲೇ ಸ್ವತಃ ಪ್ರವೇಶಮಾಡಿದರು; ಇತರರಂತೆ ಮುಂಚಿನಿಂದಲೇ ಗರ್ಭದಲ್ಲಿ ನೆಲೆಸದ್ದರಿಂದ ಗರ್ಭವಾಸದುಃಖವನ್ನು ಅನುಭವಿಸಲಿಲ್ಲ; ಎಂಬುದು **'ಅವಿಶತ್'** ಎಂಬ ಪದದಿಂದ ಸೂಚಿತವಾಗಿದೆ.

೪) **'ಅ'** ಎಂಬುದನ್ನು **'ಶುಚಿಃ'** ಎಂಬುದರೊಂದಿಗೂ ಅನ್ವಯಿಸಿಕೊಳ್ಳಬಹುದು; ಅವರು ಪಾಪಾದಿಕರ್ಮಗಳ ಲೇಪವಿಲ್ಲದ ಪರಿಶುದ್ಧರು ಎಂಬುದು ಅದರ ಭಾವ.

೫) **'ಅಹಿಂಸ್ಯಮಾನಃ'** – ಎಂಬುದಕ್ಕೆ ಗರ್ಭದಲ್ಲಾಗಲೀ, ಜನನಾನಂತರವೇ ಆಗಲಿ ಕಲಿ ಮೊದಲಾದವರಿಂದ ಯಾವ ರೀತಿಯಲ್ಲೂ ಹಿಂಸಿಸಲ್ಪಡದವರು ಎಂದು ಅರ್ಥ. ಇದು ಒಂದು ರೀತಿಯಲ್ಲಿ ಅವರು **'ಅಖಣ್ಡಾಶ್ಮಸಮ'**ರು ಎಂಬ ಛಾಂದೋಗ್ಯೋಪನಿಷತ್ತಿನ ಮಾತಿಗೆ ಸಮಾಖ್ಯೆಯಾಗಿದೆ; **'ತ್ರಿಷ್ವಪ್ಯೇವಾವತಾರೇಷ್ವರಿಭಿರಪಹೃಣಂ ಹಿಂಸಿತೋ ನಿರ್ವಿಕಾರಃ'** ಎಂಬ ವಾಯುಸ್ತುತಿಯ ಮಾತು ಇದಕ್ಕೆ ವಿವರಣರೂಪವಾಗಿದೆ. ಸರ್ಪರೂಪದ ಮಣಿಮಂತ, ಅನೇಕ ಚೋರರು, ಗಂಡವಾಟ, ಪೂರ್ವವಾಟ ಮೊದಲಾದ ಮಲ್ಲರು ಮೊದಲಾದವರು ಎಷ್ಟೇ

---

೫. ಲಕ್ಷ್ಮೀನಾರಾಯಣ ಪ್ರೇರಣಾದೇವ ಮಾತ್ಕಾರಾವಿಶತ್ । ನ ಪುನರಸ್ಯ ಗರ್ಭವಾಸಾದಿ ನಿಮಿತ್ತಂ ವಿಕರ್ಮ ಅಸ್ತೀತಿ ಭಾವಃ । -(ಭಾವಬೋಧ)

೫. ಅವಿಶದಿತ್ಯನೇನ ಮಾತುರುದರಸ್ಥಶುಕ್ಲಶೋಣಿತಾತ್ಮಕದೇಹಪರಿಣಾಮಕಾಲೇ ಸ್ವಯಮಾವಿಶತ್ । ನ ತು ಪೂರ್ವಮಾರಭ್ಯ ದುಃಖಮನ್ವಭೂದಿತಿ ಸೂಚಯತಿ । –(ಭಾ.ವಿ.)

೫. ಅಸಮಂತಾತ್ – ಶುಚಿಃ । ಪಾಪಾದಿಕರ್ಮಲೇಪರಹಿತಃ ಇತ್ಯರ್ಥಃ । –(ಭಾ.ವಿ.)
ಯಾಸು ಮಾತೃಷು ಅ ಸಮಂತಾತ್ ಶುಚಿಃ । –(ಭಾವಬೋಧ)
ಅ ಸಮಂತಾತ್ ಶುಚಿಃ ಶುಕ್ಲಶೋಣಿತಸಂಬಂಧರಹಿತಃ । –(ವ)

೫. ಗರ್ಭೇ ವಾ ಗರ್ಭಾಜ್ಜನ್ಮಾನಂತರಂ ವಾ ಕಲ್ಯಾದಿಭಿರಹಿಂಸ್ಯಮಾನಃ । – (ಭಾ.ವಿ.)

ಪ್ರಯತ್ನಿಸಿದರೂ ಶ್ರೀಮದಾಚಾರ್ಯರ ಕೂದಲನ್ನು ಕೊಂಕಿಸಲೂ ಸಮರ್ಥರಾಗಲಿಲ್ಲ ಎಂಬ ಸುಮಧ್ವವಿಜಯದಲ್ಲಿನ ಉಲ್ಲೇಖವನ್ನು ಇಲ್ಲಿ ಸ್ಮರಿಸಬಹುದು.

೬) ಉರ್ವಿಯಾ – ಎಂಬುದಕ್ಕೆ 'ಉರುತರವಾದ ತಮ್ಮ ಸಹಜಶಕ್ತಿಯಿಂದ ಎಂದು ಅರ್ಥ; ಗರ್ಭದಲ್ಲಿನ ಅಪಾರವಾದ ಪೀಡೆಯಿಂದ ಎಷ್ಟು ಮಾತ್ರಕ್ಕೂ ಹಿಂಸಿಸಲ್ಪಡದೆ ಎಂಬುದಾಗಿಯೂ ಇದನ್ನು ವ್ಯಾಖ್ಯಾನಕಾರರು ವಿವರಿಸಿರುವರು.

೭) ಶ್ರೀಮಧ್ವಾಚಾರ್ಯರ ವೃದ್ಧಿಯು 'ದೇವಾನಾಂ ತು ಶರಚ್ಛತಂ' ಎಂಬ ವಾಯುಪುರಾಣದ ಮಾತಿನಂತೆ ದೇವತೆಗಳ ನೂರುವರ್ಷಪರ್ಯಂತ (ಎಂದರೆ ಮನುಷ್ಯಮಾನದ ಮೂವತ್ತಾರುಸಾವಿರವರ್ಷಗಳ ಕಾಲ) ಎಂಬ ಅರ್ಥವಿಶೇಷವನ್ನು 'ವಿವಾವೃಧೇ' ಎಂಬಲ್ಲಿನ ದೀರ್ಘವು ಸೂಚಿಸುತ್ತದೆ. ಶ್ರೀಮದಾಚಾರ್ಯರು ಅದ್ಯಾಪಿ ಬದರಿಯಲ್ಲಿರುವರು; ಅವರು ಒಟ್ಟಾಗಿ ದೇವಮಾನದ ನೂರುವರ್ಷಗಳ ಅನಂತರ ತಮ್ಮ ಮೂಲರೂಪದೊಂದಿಗೆ ಐಕ್ಯ ಹೊಂದುವರು ಎಂಬ ವಿಚಾರವನ್ನು ಶ್ರೀವಾದಿರಾಜರು ತಮ್ಮ ಸರಸಭಾರತೀವಿಲಾಸಗ್ರಂಥದಲ್ಲಿ ತಿಳಿಸಿರುವರು.

೮) ಸರ್ವದಾ ವಿದ್ಯಮಾನವಾದ ಪರಮಾತ್ಮನನ್ನು (ಮಹಾಯೋಗವೃತ್ತಿ ಮತ್ತು ಮಹಾರೂಢಿವೃತ್ತಿಗಳಿಂದ) ಸದಾ ಗುಣಸ್ತವನಪೂರ್ವಕ ಸೇವಿಸುವರು ಎಂಬ ಕಾರಣದಿಂದ ವೇದಗಳಿಗೆ 'ಸನಾಜುವಃ' ಎಂದು ಹೆಸರು. 'ಜುವ' ಎಂಬುದು 'ಜುಷ' ಎಂಬ ಅರ್ಥದ ವೈದಿಕಪದ.

---

೫. ಉರ್ವಿಯಾ – ಉರ್ವ್ಯಾ ಉರುತರಸ್ವಶಕ್ತ್ಯಾ । –(ಜ)
ಉರ್ವಿಯಾ– ಉರುತ್ವೇನ ಮಹಿಮೋತ್ಕರ್ಷೇಣ ಅಹಿಂಸ್ಯಮಾನಃ। –(ವ)
ಉರ್ವಿಯಾ – ಉರ್ವ್ಯಾ ಉತ್ಕೃಷ್ಟಜ್ಞಾನಾದಿಮಚ್ಛಕ್ತ್ಯಾ। –(ಜ)
ಉರ್ವಿಯಾ – ಉತ್ಕೃಷ್ಟಯಾ ಗರ್ಭವಾಸಪೀಡಯಾ -(ಭಾವಬೋಧ)

೫. ತದ್ವರ್ಧನಂ 'ದೇವಾನಾಂ ತು ಶರಚ್ಛತಮ್' ಇತಿ ವಾಯುಪುರಾಣವಚನಾತ್ ದೇವವರ್ಷಶತಪರ್ಯಂತಂ ಇತಿ ಸೂಚನಾಯ ದೀರ್ಘಃ। – (ಭಾ.ವಿ.)
ಶರಚ್ಛತೇ ವ್ಯತಿತೇ ತು ದೇವಾನಾಮಾಜ್ಞಯಾ ಪ್ರಭೋಃ ।
ವಿಕಶಾಂ ಮೂಲರೂಪೇಣ ಲೋಕೇ ಸ್ವೀಯೇ ಗಮಿಷ್ಯತಿ ॥ (ಸ. ಭಾ. ೭/೨೫)

೫. ವಿವಾವೃಧೇ – ವಿಶೇಷೇಣಾಭಿವೃದ್ಧೋ ಽಭೂತ್ ಇತ್ಯರ್ಥಃ। -(ಭಾವಬೋಧ)
ವಿವಾವೃಧೇ – ರುದ್ರಾದಿಭ್ಯೋ ಅಧಿಕಂ ಜ್ಞಾತವಾನ್ । – (ಜ)

೫. ಸನಾಜುವಃ – ಸನಾತ್ ಸದಾತನತ್ವೇನ ಸನಾತ್ ಪುರುಷಸಂಜ್ಞಿತಮ್ । ನಾರಾಯಣಂ ಜುಷಂತೇ ಗುಣ-ಸ್ತವನೇನ ಸೇವಂತೇ ಇತಿ ಸನಾಜುಷ ಇತ್ಯರ್ಥಃ। ಜುಷ ಇತ್ಯಸ್ಯಾರ್ಥೇ ಜುವ ಇತಿ ವೈದಿಕಪದಮ್ । –(ಭಾ.ವಿ.)
ಸನಾಜುವಃ–ಸದಾ ವನಂ ಭಗವಂತಂ ಪ್ರತಿಪಾದಯಂತೀತಿ ಸನಾಜುವಃ – (ಭಾವಬೋಧ)
ಸನಾಜುವಃ – ಸರ್ವದಾ ವಿದ್ಯಮಾನಂ ಪರಮಾತ್ಮಾನಂ ಮಹಾಯೋಗವೃತ್ತ್ಯಾ
ಮಹಾರೂಢ್ಯಾ ಚ ತಾತ್ಪರ್ಯೇಣ ಜುಷಂತೇ ಪ್ರತಿಪಾದಯಂತೀತಿ ಸನಾಜುವಃ। – (ವ)
ಸನಂ – ಪುರಾತನಂ ಕಾಲಂ ಜುಷಂತೀತಿ ಅಪೌರುಷೇಯಾ ವಾ। -(ಜ)

೯) (ಭಾರತಾದಿಗಳಿಗಿಂತ)ಮೊದಲೇ ಇದ್ದವುಗಳು ಎಂಬ ಕಾರಣದಿಂದ ಋಗಾದಿ ವೇದಗಳಿಗೆ 'ಪೂರ್ವಾಃ' ಎಂದು ಹೆಸರು; ಅವುಗಳನ್ನು ಉಪಕ್ರಮ ಉಪಸಂಹಾರ ಮೊದಲಾದ ತಾತ್ಪರ್ಯನಿರ್ಣಾಯಕಲಿಂಗಗಳಿಗೆ ಅನುಸಾರವಾಗಿ ಮನಸ್ಸಿನಿಂದ ಏರುವರು; ಅಥವಾ ಅವುಗಳ ಅಭಿಮಾನಿಗಳಾಗಿ ಅವುಗಳ ಮೇಲೆ ಕುಳಿತುಕೊಳ್ಳುವರು ಎಂದು ಭಾವ. ಅಶ್ವಾರೂಢನಾದ ಪುರುಷನು ತಾನು ಏರಿ ಕುಳಿತ ಅಶ್ವವನ್ನು ಕೊಲ್ಲಲು ಶತ್ರುಗಳಿಗೆ ಅವಕಾಶ ನೀಡದಂತೆ ವೇದಾಭಿಮಾನಿಗಳಾದ ಶ್ರೀವಾಯುದೇವರು ವೇದಾದಿಗಳಿಗೆ ಅಪಾರ್ಥಮಾಡುವ ಜನಗಳನ್ನು ಸಹಿಸುವುದಿಲ್ಲ; ಅವರನ್ನು ನಿಗ್ರಹಿಸುವರು ಎಂಬ ಅರ್ಥವಿಶೇಷವು **'ಅರುಹತ್'** – ಎಂಬ ಪದದಿಂದ ಸೂಚಿತವಾಗಿದೆ.

೧೦) **'ನಿನವ್ಯಸೀಷು'** ಎಂಬುದಕ್ಕೆ ಭಗವಂತನ ಮೂಲರೂಪ ಮತ್ತು ವ್ಯಾಸಾದಿ ಅವತಾರರೂಪಗಳಿಂದ ಉತ್ಪನ್ನವಾದ ಮತ್ತು ಆ ಕಾರಣದಿಂದಲೇ ವೇದಾದಿಗಳಿಗಿಂತ ನೂತನವಾದ (ಭಾರತಾದಿ)ಗ್ರಂಥಗಳು ಎಂದು ಅರ್ಥ. ಭಗವದುತ್ಪ್ರೇಕ್ಷಿತವಾದ ನೂತನವಾದ ಯುಕ್ತ್ಯಾದಿಗಳನ್ನು ಹೊಂದಿರುವ ಕಾರಣದಿಂದಲೂ ಭಾರತಾದಿ ಗ್ರಂಥಗಳಿಗೆ 'ನವ್ಯ' ಎಂಬ ಹೆಸರು ಕೂಡುತ್ತದೆ.

೧೧) **''ಅವರಾಸು''** ಎಂಬುದಕ್ಕೆ (ವೇದಾದಿಗಳಿಗಿಂತಲೂ) ಕಡಿಮೆಯಾದ ಎಂದು ಅರ್ಥ. ಪೌರುಷೇಯವಾದರೂ ಮಹಾಭಾರತ, ಬ್ರಹ್ಮಸೂತ್ರಗಳು ವೇದಾದಿಗಳಿಗಿಂತಲೂ ಮಿಗಿಲು ಎಂದು ಶ್ರೀಮದಾಚಾರ್ಯರು ಇದೇ ಅಧ್ಯಾಯದಲ್ಲಿ ಸ್ಪಷ್ಟವಾಗಿ ತಿಳಿಸಿರುವುದರಿಂದ ಇಲ್ಲಿ 'ಕಡಿಮೆಯಾದವು'ಗಳು ಎಂಬುದಕ್ಕೆ ವೇದವಿದ್ಯೆಗಳ ಅನಂತರ ಉತ್ಪನ್ನವಾದವುಗಳು ಎಂಬ ಕಾರಣದಿಂದ ಮಾತ್ರ ಎಂದು ತಿಳಿಯಬೇಕು. ವೇದಗಳು ಸಂಖ್ಯೆಯಲ್ಲಿ ಅನಂತ; ಭಾರತಾದಿಗಳು ಅನಂತವಲ್ಲ ಎಂಬ ಮತ್ತೊಂದು ಕಾರಣದಿಂದಲೂ ಭಾರತಕ್ಕೆ ಅವರತ್ವ ತಿಳಿಯಬಹುದು; ಮಹತ್ವದ ದೃಷ್ಟಿಯಿಂದ ಭಾರತಾದಿಗಳು ವೇದಗಳಿಗಿಂತ ಅವರ ಎಂದು ಮಾತ್ರ ಸರ್ವಥಾ ತಿಳಿಯಕೂಡದು;

---

೫. ಪೂರ್ವಾಃ ಸಪ್ತವಿದ್ಯಾಸು ಪ್ರಥಮಂ ವಿದ್ಯಮಾನಾ ಋಗ್ಯಜುಃಸಾಮಾಥರ್ವಾಖ್ಯವಿದ್ಯಾಃ ಅನು ತದುಪಕ್ರಮೋಪಸಂಹಾರಾದೀನ್ ಅನುಸೃತ್ಯ ಅರುಹತ್ । ಮನಸಾ ಆರುಹ್ಯ ಅಭಿಮಾನಿತಯಾ ಆರುಹ್ಯ ವಾ ತಿಷ್ಠತಿ । ಯಥಾ ಅಶ್ವಾರೂಢಃ ಪುರುಷಃ ತಮಶ್ವಂ ಹಂತುಂ ನ ಮುಂಚತಿ ತಥಾ ವೇದಾಭಿಮಾನಿತ್ವಾತ್ ಅಯಮಪಿ ವೇದಮನ್ಯಥೀಕರ್ತುಂ ನ ಮುಂಚತೀತಿ ಸೂಚನಾಯ ಅರುಹದಿತ್ಯುಕ್ತಮ್ । –(ಭಾ.ವಿ.)

ಪೂರ್ವಾ ಋಗಾದ್ಯಾ ಅರುಹದಿತಿ ಯತ್ ತದನು ಕ್ರಮಾದೇವ ಉಪಕ್ರಮಾದೇವ ಉಪಕ್ರಮಾದಿಲಿಂಗೈಃ ಕ್ರಮೇಣೈವ ಋಗಾದಿವೇದಚತುಷ್ಟಯಾರ್ಥಂ ವಿಚಾರಯಾಮಾಸೇತ್ಯರ್ಥಃ। – (ಭಾವಬೋಧ)

೫. ನಿನವ್ಯಸೀಷು ನಿತರಾಂ ನವ್ಯಾಸು ಮೂಲರೂಪಾದ್ವ್ಯಾಸಾದಿರೂಪಾಚ್ಚ ಭಗವತಃ ಉತ್ಪನ್ನಾಸು ಇತ್ಯರ್ಥಃ । ವೇದಾನಾಮಪಿ ಸೃಷ್ಟಿಕಾಲ ಏವ ಪ್ರಾದುರ್ಭೂತತ್ವೇನ ನವಸಮತ್ವ ಸದ್ಭಾವೇऽಪಿ ಕೃತತ್ವೇನ ಸಾಕ್ಷಾನ್ನವ್ಯತ್ವಸೂಚನಾಯ 'ನಿ' ಇತ್ಯುಪಸರ್ಗಃ । ಭಗವದುತ್ಪ್ರೇಕ್ಷಿತ ನೂತನಯುಕ್ತ್ಯಪೇತಾಸು ವಾ । –(ಭಾ.ವಿ)

೫. ಅವರಾಸು – ವೇದವಿದ್ಯಾತಃ ಅನಂತರ ವಿದ್ಯಮಾನಸು ಪುರಾಣಪಂಚರಾತ್ರೇಷು ವಾ ಪುರಾಣಪಂಚರಾತ್ರ-ಮೂಲರಾಮಾಯಣೇಷು ವಾ – (ಭಾ.ವಿ.)

ಶ್ರೀಕೃಷ್ಣನು ಬಲರಾಮನ ತಮ್ಮನಾಗಿದ್ದರೂ, ವಸುದೇವನ ಪುತ್ರನಾಗಿದ್ದರೂ, ವಾಸ್ತವವಾಗಿ ಅವರಿಗಿಂತ ಉತ್ತಮನಾಗಿರುವಂತೆ ಎಂದು ತಿಳಿಯಬಹುದು.

೧೨) ಶಬ್ದಕ್ರಮದಲ್ಲಿ ವ್ಯತ್ಯಾಸವಿದ್ದರೂ ಅರ್ಥತಃ ಅನಾದಿನಿತ್ಯವಾದ ಪುರಾಣಾದಿಗಳಲ್ಲಿ ಸ್ವಕಪೋಲಕಲ್ಪಿತವಾದ ಕಾಳಿದಾಸಾದಿಗಳ ಗ್ರಂಥಗಳಲ್ಲಿರುವಂತಹ ನವ್ಯತೆ ಇರುವುದಿಲ್ಲ; ಅವು ಪರಮಪ್ರಾಮಾಣಿಕಗ್ರಂಥಗಳು ಎಂಬ ವೈಶಿಷ್ಟ್ಯವನ್ನು 'ನವ್ಯಸೀಷು' ಎಂಬ ವಿಲಕ್ಷಣಪ್ರಯೋಗವು ಸೂಚಿಸುವುದು.

೧೩) 'ಧಾವತೇ' – ಪಂಚರಾತ್ರಾದಿಗಳು ವೇದಾದಿಗಳಂತೆ ಕಠಿಣವಲ್ಲವೆಂಬ ಕಾರಣದಿಂದಾಗಿ ಅವುಗಳನ್ನು ಶೀಘ್ರವಾಗಿ ವ್ಯಾಖ್ಯಾನಿಸುವರು; ಭಗವದುಪದೇಶಬಲದಿಂದಲೂ ಆಲೋಚನಮಾತ್ರದಿಂದ ಈಶ್ವರಭಿನ್ನ ಸಕಲವಿಷಯಗಳನ್ನು ಸಾಕಲ್ಯೇನ ಗ್ರಹಿಸುವ ತಮ್ಮ ಅಪಾರ ಪ್ರತಿಭಾ ಬಲದಿಂದಲೂ ತ್ವರೆಯಿಂದ ಪಂಚರಾತ್ರಾದಿ ಪೌರುಷೇಯಗ್ರಂಥಗಳನ್ನು ವ್ಯಾಖ್ಯಾನಿ–ಸುವರು ಎಂದು ಭಾವ.

೧೪) ಪೂರ್ವವಿದ್ಯೆಗಳಾದ ವೇದಗಳಲ್ಲಿ ಅಪ್ರಸಿದ್ಧವೂ, ಅಲೌಕಿಕವೂ ಆದ ಬಹುಪದಗಳು ತುಂಬಿರುವುದರಿಂದಲೂ, ಸ್ವರ ಮತ್ತು ಸಂಹಿತಾ ಪದಗಳು ನಿಯತವಾಗಿರುವುದರಿಂದಲೂ, ಅವುಗಳ ವ್ಯಾಖ್ಯಾನದಲ್ಲಿ ಸ್ವಚ್ಛಂದಪ್ರವೃತ್ತಿಗೆ ಎಷ್ಟೂ ಅವಕಾಶವಿಲ್ಲ; ಆದರೆ ಪೌರುಷೇಯ ಗ್ರಂಥಗಳಾದ ಪಂಚರಾತ್ರಾದಿಗಳಲ್ಲಿ ಅಂತಹ ಕಾಠಿಣ್ಯವಿಲ್ಲ; ಎಂಬುದನ್ನು ವೇದಗಳಿಗೆ ನಿಧಾನವಾಗಿ ವಿಚಾರ ಮಾಡುತ್ತಲೂ, ಪಂಚರಾತ್ರಾದಿಗಳಿಗೆ ತ್ವರೆಯಿಂದಲೂ ವ್ಯಾಖ್ಯಾನ ಬರೆಯುವ ಮೂಲಕ ಶ್ರೀಮದಾಚಾರ್ಯರು ತೋರಿಸಿಕೊಟ್ಟಿರುವರು ಎಂದೂ ಭಾವ.

೧೫) ಅಂಜನಾಕುಂತ್ಯಾದಿ ಮಾತೃಗಳಲ್ಲಿ ಮಾತ್ರವಲ್ಲದೆ 'ಶ್ರೀಭೂದುರ್ಗಾಜಯಾಶಾಂತಿ' ಎಂಬ ಮಾತೃಗಳಲ್ಲೂ ಎಂಬ ವಿಶೇಷಾರ್ಥ ಜನಾರ್ದನಭಟ್ಟೀಯವ್ಯಾಖ್ಯಾನದಲ್ಲಿದೆ.

---

೫. ಕ್ರಮಮಾತ್ರವ್ಯತ್ಯಾಸಸದ್ಭಾವೇऽಪಿ ಶಬ್ದತೋऽರ್ಥತಶ್ಚಾನಾದಿಷ್ವೇಷು ಪುರಾಣಾದಿಷು ಸ್ವಕಪೋಲಕಲ್ಪಿತತಯಾ ಕಾಲಿದಾಸಕೃತ ಮೇಘಸಂದೇಶಾದಿಷ್ವಿವ ಶಬ್ದತೋऽರ್ಥತಶ್ಚ ನವ್ಯತ್ವಾಭಾವಸೂಚನಾಯ 'ನವ್ಯಸೀಷು' ಇತಿ ವಿಲಕ್ಷಣ ಪ್ರಯೋಗಃ। ಅನ್ಯಥಾ 'ನವೀಯಸೀಷು' ಇತ್ಯೇವ ಶ್ರುತಿರವಕ್ಷ್ಯತ್। –(ಭಾ.ವಿ.)

೫. ಧಾವತೇ ಅನುಕೂಲವರಬಲಾತ್ ಸಾಕ್ಷಾದ್ಭಗವದುಪದೇಶಬಲಾಚ್ಚ ತ್ವರಯಾ ಅವಗಾಹತೇ। –(ಭಾ.ವಿ.)

೫. ಅವರಾಸು ತ್ರಿಷು ಇತಿಹಾಸಪುರಾಣಪಂಚರಾತ್ರಾಖ್ಯಾಸು ಮಾತೃಷು ನಿಧಾವತೇ ಉಪಕ್ರಮಾದಿ ಪರ್ಯಾಲೋಚನಂ ವಿನೈವ ಶೀಘ್ರಮೇವಾರ್ಥಂ ವಿಚಾರಯತೀತ್ಯರ್ಥಃ। -(ಬೃಹದಾರಣ್ಯಕಭಾವಬೋಧ)

೫. ಅತಃ ಪೂರ್ವವಿದ್ಯಾಸು ಅಪ್ರಸಿದ್ಧಾಲೌಕಿಕಬಹುಪದಸದ್ಭಾವಾತ್ ಸ್ವರಸಂಹಿತಾಪದಾದೀನಾಂ ನಿಯತತ್ವಾತ್ ಸ್ವಚ್ಛಂದವೃತ್ತೇರನುಚಿತತ್ವಾಚ್ಚ ಶನೈರ್ವ್ಯಾಖ್ಯಾತಿ ಪೌರುಷೇಯಗ್ರಂಥೇಷು ತಥಾ ಕಾಠಿನ್ಯಾದ್ಯಭಾವಾತ್ ಶೀಘ್ರಂ ಶೀಘ್ರಂ ವ್ಯಾಖ್ಯಾತೀತಿ ಭಾವಃ। –(ವಾ)

೧೬) 'ಅರುಹತ್' ಎಂಬುದಕ್ಕೆ (ಅಂತಹ ತಾಯಂದಿರಲ್ಲಿ) ಜ್ಯೇಷ್ಠಾದಿ ಅನುಕ್ರಮದಿಂದ ಅವರು ಜನಿಸಿದರು ಎಂಬ ಅರ್ಥವಿಶೇಷವನ್ನು ಜನಾರ್ದನಭಟ್ಟರು ಬರೆದಿರುವರು.

೧೭) ಅದರತೆ 'ಸನಾಜುವಃ' ಮತ್ತು 'ನವ್ಯಸೀಷು:' ಎಂಬ ಪದಗಳನ್ನು ಶ್ರೀವಾಯುದೇವರ ಅವತಾರಗಳಿಗೆ ವಿಶೇಷಣವನ್ನಾಗಿ ಅನ್ವಯಿಸಿ ಕ್ರಮವಾಗಿ ಜನಾರ್ದನಭಟ್ಟರು ವ್ಯಾಖ್ಯಾನಿಸಿರುವರು.

ವಿಶೇಷಾಂಶ:

೧) ಈ ಬಳಿತ್ಥಾಸೂಕ್ತದಲ್ಲಿ ಹನುಮದ್ದ್ವಾದಶನಾಮ, ಭೀಮದ್ವಾದಶನಾಮ ಮತ್ತು ಮಧ್ವದ್ವಾದಶನಾಮಗಳು ಸೂಚಿತವಾಗಿವೆ ಎಂಬುದಾಗಿ ಶ್ರೀಸುರೋತ್ತಮತೀರ್ಥರು ಯುಕ್ತಿ-ಮಲ್ಲಿಕಾವ್ಯಾಖ್ಯಾನದಲ್ಲಿ ನಿರೂಪಿಸಿರುವರು.

೨) **ಪ್ರಥಮಂ ವಪುಃ** ಎಂಬಲ್ಲಿ 'ವಾಯುಪುತ್ರ' ಎಂಬ ನಾಮ, ಋತಸ್ಯ ಉಪಹ್ವರತೇ ಎಂಬಲ್ಲಿ 'ರಾಮೇಷ್ಟ' ನಾಮ, ಸಾಧತೇ ಎಂಬಲ್ಲಿ 'ಮಹಾಬಲಃ' ಮತ್ತು 'ದಶಗ್ರೀವಸ್ಯ ದರ್ಪಹಾ' ಎಂಬ ನಾಮಗಳು, 'ಧೇನಾ ಅನಯಂತ' ಎಂಬಲ್ಲಿ ಅಮಿತವಿಕ್ರಮ, ಉದಧಿಕ್ರಮಣ ಮತ್ತು ಸೀತಾಶೋಕವಿನಾಶನ ಎಂಬ ನಾಮಗಳು ಸೂಚಿತವಾಗಿವೆ. 'ಹನುಮತ್' ಎಂಬ ನಾಮವು ಸರ್ವತ್ರ ಸೂಚಿತವಾಗಿದೆ.

---

೫. ನವ್ಯಸೀಷು ಕೃತಕತ್ವೇನ ನೂತನಾಸು 'ನಿಧಾವತೇ' ಉಪಕ್ರಮೋಪಸಂಹಾರಾದಿ ಪರ್ಯಾಲೋಚನಾಂ ವಿನೈವ ನಿತರಾಂ ಧಾವತೇ । ಶೀಘ್ರಮೇವ ಅರ್ಥಂ ವಿಚಾರಯತೀತ್ಯರ್ಥಃ । ತದರ್ಥಸ್ಯ ಪೂರ್ವಮೇವಾವಗತತ್ವಾತ್ ಸದ್ಯ ಏವ ಯಥಾವದರ್ಥ ಪ್ರತೀತಿಭಾವಃ । ಶೀಘ್ರಗಮನಂ ಹಿ ಧಾವನಂ ಲೋಕೇ ಪ್ರಸಿದ್ಧಮಿತಿ । –(ವ)

೫. ಮಾತ್ಸ್ಯ– ಶ್ರೀಭೂದುರ್ಗಾಜಯಾಶಾಂತ್ಯಾದ್ಯಂಜನಾದಿಮಾತ್ಸ್ಯಃ। -(ಜ)

೫. ಅನು ಕ್ರಮೇಣ ಅರುಹತ್ - ಜಾತಃ । ರುಹ ಜನ್ಮನಿ ಪ್ರಾದುರ್ಭಾವೇ ಇತಿ ಧಾತೋಃ । –(೧/೯)

'ಸ್ವಯಂಭುಪ್ರಾಣಾತ್ಶೇಷ' ಇತ್ಯುಕ್ತತ್ವಾತ್ । – (ಜ)

೫. 'ಕಥಂಭೂತಾಃ ಸನಾಜುವಃ ವಿಷ್ಣುಸೇವಾರತಾಃ ನವ್ಯಸೀಷು ನೂತನ ದೇಹವತ್ವಾನ್ನೂತನಾಸು ಅವತಾರಾಸು ಸ್ವತಃ ನೀಚಾಸು ನಿಧಾವತೇ ವ್ಯುತ್ಕ್ರಮೇಣ ಧರ್ಮಾನಂತರಂ ಶೀಘ್ರಂ ಜನನಂ ಪ್ರಾಪ್ನೋತಿ । ಸಂಸ್ಪರ್ಶಮಾತ್ರಾ-ದಭವದಿತ್ಯುಕ್ತತ್ವಾತ್ । – (ಜ)

೫. ಅಪಿ ಚ ಪ್ರಥಮಂ ವಪುರಿತ್ಯನೇನ ಹನುಮತಃ ವಾಯುಪುತ್ರನಾಮ ಋತಸ್ಯ ಉಪಹ್ವರತೇ ಇತ್ಯನೇನ ರಾಮೇಷ್ಟನಾಮ, ಸಾಧತೇ ಇತ್ಯನೇನ ಮಹಾಬಲಃ, ದಶಗ್ರೀವಸ್ಯದರ್ಪಹಾ ಇತಿ ನಾಮ,ಧೇನಾ ಅನಯಂತ ಇತ್ಯನೇನ ಅಮಿತವಿಕ್ರಮಃ ಉದಧಿಕ್ರಮಣಃ, ಸೀತಾಶೋಕವಿನಾಶನಃ ಇತಿ ನಾಮ ಚ ಹನುಮಚ್ಛ್ರುತ್ಯಾ ಸೂಚಿತಮ್ । ಹನುಮನ್ನಾಮ ತು ಸರ್ವತ್ರ ಸೂಚಿತಮಿತ್ಯುಕ್ತಮ್ । –(ಭಾ.ವಿ.)

೩) ದ್ವಿತೀಯಂ ವಪುಃ ಎಂಬಲ್ಲಿ 'ಮಾರುತಿ' ಎಂಬ ನಾಮ, 'ಪೃಕ್ಷ' ಎಂಬಲ್ಲಿ 'ಮಹಾಬಲ, ಗದಾಪಾಣಿ, ದುಃಶಾಸನವಿನಾಶನ, ಜರಾಸಂಧಾಂತಕೃತ್ ಮತ್ತು ವೀರ' ಎಂಬ ನಾಮಗಳು, ಪಿತುಮಾನ್ ಎಂಬಲ್ಲಿ ವೃಕೋದರನಾಮ, ಮಾತೃಷು ಆವಿಶತ್ ಎಂಬಲ್ಲಿ ಕೃಷ್ಣದಯಿತಃ ಎಂಬ ನಾಮಗಳು ಸೂಚಿತವಾಗಿವೆ. 'ಭೀಮ' ನಾಮವು ಸರ್ವತ್ರ ಸೂಚಿತವಾಗಿದೆ.

೪) 'ತೃತೀಯಮಸ್ಯ' ಎಂಬ ವಾಕ್ಯದಲ್ಲಿ ಆನಂದತೀರ್ಥ, ಪೂರ್ಣಪ್ರಜ್ಞ, ಯತೀಶ್ವರ ಎಂಬ ನಾಮಗಳು, 'ನಿರ್ಯದೀಂ' ಎಂಬ ಶ್ರುತಿಯಲ್ಲಿ 'ಜ್ಞಾನದಾತಾ' 'ವೈಷ್ಣವಾಚಾರ್ಯ' ಎಂಬ ನಾಮಗಳು, 'ಯದೀಮನು' ಎಂಬ ಶ್ರುತಿಯಲ್ಲಿ 'ಮಧ್ವ' ಮತ್ತು 'ತತ್ತ್ವಜ್ಞ' ಎಂಬ ನಾಮಗಳು, 'ಪ್ರಯತ್ಪಿತುಃ' ಎಂಬ ಶ್ರುತಿಯಲ್ಲಿ 'ವ್ಯಾಸಶಿಷ್ಯಃ', 'ಧ್ವಸ್ತದುರಾಗಮಃ', ಜಿತವಾದೀ' ಎಂಬ ನಾಮಗಳೂ, 'ಉಭಾಯದಸ್ಯ' ಎಂಬ ಶ್ರುತಿಯಲ್ಲಿ ಶುಚಿ ಪದದಿಂದ 'ಜಿತೇಂದ್ರಿಯ' ಎಂಬ ನಾಮವೂ ಸೂಚಿತವಾಗಿವೆ.

೫) ಹೀಗೆ ಈ ಸೂಕ್ತವು ಹನುಮದಾದಿ ವಾಯುರೂಪಪ್ರತಿಪಾದಕವೆಂಬುದು ಲೋಕ–ಪ್ರಸಾದದಿಂದಲೂ ಸಿದ್ಧವಾಗುತ್ತದೆ ಎಂದು ತಿಳಿಸಿರುವರು.

೬) ಹನುಮದಾದಿ ದ್ವಾದಶನಾಮಸ್ತೋತ್ರಗಳು ಈ ತೆರನಾಗಿವೆ:

ಹನುಮದ್ದ್ವಾದಶನಾಮಸ್ತೋತ್ರಮ್

ಹನುಮಾನಂಜನಾಸೂನುರ್ವಾಯುಪುತ್ರೋ ಮಹಾಬಲಃ ।
ರಾಮೇಷ್ಟಃ ಫಲ್ಗುಣಸಖಃ ಪಿಂಗಾಕ್ಷೋಽಮಿತವಿಕ್ರಮಃ ॥
ಉದಧಿಕ್ರಮಣಶ್ಚೈವ ಸೀತಾಸಂದೇಶಹಾರಕಃ ।
ಲಕ್ಷ್ಮಣಪ್ರಾಣದಾತಾ ಚ ದಶಗ್ರೀವಸ್ಯ ದರ್ಪಹಾ ॥
ದ್ವಾದಶೈತಾನಿ ನಾಮಾನಿ ಕಪೀಂದ್ರಸ್ಯ ಮಹಾತ್ಮನಃ ।
ಸ್ವಾಪಕಾಲೇ ಪ್ರಬೋಧೇ ಚ ಯಾತ್ರಾಕಾಲೇ ಚ ಯಃ ಪಠೇತ್ ।
ನ ಭಯಂ ವಿದ್ಯತೇ ತಸ್ಯ ಸರ್ವತ್ರ ವಿಜಯೀ ಭವೇತ್ ॥ ೧ ॥

---

೫. ಭೀಮಶ್ರುತ್ಯಾ ಚ ದ್ವಿತೀಯಂ ವಪುರಿತ್ಯನೇನ ಮಾರುತಿರಿತಿ ನಾಮ ಪೃಕ್ಷ ಇತ್ಯನೇನ 'ಮಹಾಬಲಃ', ಗದಾಪಾಣಿಃ','ದುಃಶಾಸನವಿನಾಶನಃ', 'ಜರಾಸಂಧಾಂತಕೃತ್', 'ವೀರಃ' ಇತಿ ನಾಮ 'ಪಿತುಮಾನ್' ಇತ್ಯನೇನ 'ವೃಕೋನಾಮ ಮಹಾವಹ್ನಿಃ ಕಾಯೇನ ದಶಯೋಜನಃ' ಇತಿ ವಚನಾತ್ ವೃಕಾಖ್ಯಾಗ್ನಿಸನ್ನಿಹಿತೋದರತ್ವೇನ ವೃಕೋದರ ನಾಮ 'ಮಾತೃಷು ಆವಿಶತ್' ಇತ್ಯನೇನ 'ಕೃಷ್ಣದಯಿತಃ' ಇತಿ ನಾಮ ಚ ಸೂಚಿತಮ್ । 'ಭೀಮ' ನಾಮ ತು ಸರ್ವತ್ರ ಸೂಚಿತಮಿತ್ಯುಕ್ತಮ್ । – (ಭಾ.ವಿ.)

ಭೀಮದ್ವಾದಶನಾಮಸ್ತೋತ್ರಮ್

ಮಾರುತಿಃ ಪಾಂಡವೋ ಭೀಮೋ ಗದಾಪಾಣಿರ್ವೃಕೋದರಃ ।
ಕೌಂತೇಯಃ ಕೃಷ್ಣದಯಿತೋ ಭೀಮಸೇನೋ ಮಹಾಬಲಃ ॥
ಜರಾಸಂಧಾಂತಕೋ ವೀರೋ ದುಃಶಾಸನವಿನಾಶಕಃ ।
ದ್ವಾದಶೈತಾನಿ ನಾಮಾನಿ ಭೀಮಸ್ಯ ನಿಯತಂ ಪಠನ್ ।
ಆಯುರಾರೋಗ್ಯಸಂಪತ್ತಿಮರಿಪಕ್ಷಕ್ಷಯಂ ಲಭೇತ್ ॥ ೨ ॥

ಮಧ್ವದ್ವಾದಶನಾಮಸ್ತೋತ್ರಮ್

ಪೂರ್ಣಪ್ರಜ್ಞೋ ಜ್ಞಾನದಾತಾ ಮಧ್ವೋ ಧ್ವಸ್ತದುರಾಗಮಃ ।
ತತ್ತ್ವಜ್ಞೋ ವೈಷ್ಣವಾಚಾರ್ಯೋ ವ್ಯಾಸಶಿಷ್ಯೋ ಯತೀಶ್ವರಃ ॥
ಆನಂದತೀರ್ಥಃ ಶಂನಾಮಾ ಜಿತವಾದೀ ಜಿತೇಂದ್ರಿಯಃ ।
ಶ್ರೀಮದಾನಂದತೀರ್ಥಸನ್ನಾಮ್ನಾಮೇವಂ ದ್ವಾದಶಕಂ ಜಪೇತ್ ।
ಲಭತೇ ವೈಷ್ಣವೀಂ ಭಕ್ತಿಂ ಗುರುಭಕ್ತಿಸಮನ್ವಿತಾಮ್ ॥ ೩ ॥

---

೫. 'ಮಧ್ವ' ಶ್ರುತ್ಯಾ 'ತೃತೀಯಮಸ್ಯೇ'ತಿವಾಕ್ಯೇ 'ಆನಂದತೀರ್ಥಃ', ಪೂರ್ಣಪ್ರಜ್ಞಃ', ಯತೀಶ್ವರಃ' ಇತಿ ನಾಮ ಸೂಚಿತಮ್ । ನಿರ್ಯದೀಮಿತಿ ಶ್ರುತ್ಯಾ 'ಜ್ಞಾನದಾತಾ', ವೈಷ್ಣವಾಚಾರ್ಯ' ಇತಿ ನಾಮ 'ಯದೀಮನು' ಇತಿ ಶ್ರುತ್ಯಾ ಮಧ್ವನಾಮ ತತ್ತ್ವಜ್ಞನಾಮ ಚ 'ಪ್ರಯತ್ತಿತು' ರಿತಿ ಶ್ರುತ್ಯಾ 'ವ್ಯಾಸಶಿಷ್ಯಃ' 'ಧ್ವಸ್ತದುರಾಗಮಃ' 'ಜಿತವಾದೀತಿ' ನಾಮ 'ಉಭಾಯದಸ್ಯ' ಇತಿ ಶ್ರುತೌ ಶುಚಿಪದೇನ ಜಿತೇಂದ್ರಿಯನಾಮ ಚ ಸೂಚಿತಮ್ । ಅತೋ ಹನುಮದಾದಿಪ್ರತಿಪಾದಕತ್ವಮಸ್ಯ ವರ್ಗಸ್ಯ ಲೋಕಪ್ರವಾದತೋಽಪಿ ಸಿದ್ಧಮಿತ್ಯಪಿ ದ್ರಷ್ಟವ್ಯಮ್ ॥

ಸ ವಾಯುರೇವಾಭವದತ್ರ ಭೀಮಾನಾಮಾ ಭೃತಾ ಹಿ ಮಾಃ ಸಕಲಾ ಹಿ ಯಸ್ಮಿನ್ । –(೧೨/೫೪)

೫. ಮಧ್ವರೂಪದಲ್ಲೂ ಅವರು ದುರ್ವಾದಿಸೇನಾನಾಶಕರಾಗಿರುವರು; ಮತ್ತು ಅಗ್ನಿಶರ್ಮಾದಿ ಬಹುಜನರು ತಂದಿತ್ತ ಬಹುವಿಧವಾದ ಬಹುಪ್ರಮಾಣದ ಅನ್ನವನ್ನು ಭುಂಜಿಸಿದರು. ಇವೇ ಮೊದಲಾದ ವಿವರಗಳನ್ನು ಸುಮಧ್ವವಿಜಯಾದಿಗಳಿಂದ ತಿಳಿಯಬಹುದು.

೫. ಶ್ರೀನಾರಾಯಣ ಪಂಡಿತಾಚಾರ್ಯರು 'ಮಧ್ವ' ಪದವನ್ನು 'ಮಧು+ಅ' ಎಂಬುದಾಗಿಯೂ ವ್ಯಾಖ್ಯಾನಿಸಿರುವರು.

ಮಧ್ವಶಬ್ದಃ ಆನಂದವಾಚೀ । 'ಕಾಮಾನಲ ಮಧುಲಮ್ಭೈಃ ಶಮಯನ್ ದುರಾಷೈಃ' ಇತ್ಯಾದೌ ದೃಷ್ಟತ್ವಾತ್ । ಅಕಾರೋ ತೀರ್ಥವಾಚೀ ಪಾಪಪ್ರತಿಷ್ಠೇಧಾರ್ಥತ್ವಾತ್ ತಸ್ಯ ಅಥವಾ ವಕಾರಸ್ತೀರ್ಥವಾಚೀ । ತಸ್ಯ ಅಮೃತವಾಚಿತ್ವೇ ಜಲವಾಚಿತ್ವಸಂಭವಾತ್ । ಏವಂ ಮಧ್ವಃ ಆನಂದತೀರ್ಥಃ । –ನಯಚಂದ್ರಿಕಾ

೫. ನನು 'ಅನ್ನಸೂಕ್ತಮಧ್ಯಸ್ಥೇ ಅಸ್ಮಿನ್ ವರ್ಗೇ ಕುತೋ ಮುಖ್ಯಪ್ರಾಣಸ್ಯ ಪ್ರಸಂಗಃ ಇತಿ ಚೇತ್, ನ । ಅನ್ನಮಾತ್ರಸ್ಯ ಪ್ರಾಣಾದ್ಯಾಹುತಿಪಂಚಕಭರಿತತ್ವೇನ ಅನ್ನಸೂಕ್ತೇಷ್ವೇವ ಪ್ರಾಣಸ್ತುತೇರಾವಶ್ಯಕತ್ವಾತ್। –(ಭಾ.ವಿ)

೫. ಅಹಂ ವೈಶ್ವಾನರೋಭೂತ್ವಾ ಪ್ರಾಣಿನಾಂ ದೇಹಮಾಶ್ರಿತಃ ।
ಪ್ರಾಣಾಪಾನಸಮಾಯುಕ್ತಃ ಪಚಾಮ್ಯನ್ನಂ ಚತುರ್ವಿಧಮ್ ॥ –ಗೀತಾ(೧೫/೧೪)

ಸುಮಧ್ವವಿಜಯದ ಈ ಕೆಳಗಿನ ಶ್ಲೋಕ ಮತ್ತು ಅದರಲ್ಲಿನ ವಿವರಗಳು ಒಂದರ್ಥದಲ್ಲಿ ಈ ಸೂಕ್ತದ 'ಪಿತುಮಾನ್' ಶಬ್ದಕ್ಕೆ ವಿವರಣರೂಪವಾಗಿದೆ: (೯/೫೦)

''ವಾಯುನಾ ತ್ರಿರಪಿ ಪೂರ್ವಪಾಯಿನಾ ಸರ್ವದೈವತಜಿತಾ ತರಸ್ವಿನಾ ।
ಯೋಽಪರೋಕ್ಷವಪುಷಾಽಪ್ಯಪೇಕ್ಷಿತಃ ಕೋಽತ್ರ ವರ್ಣಯತಿ ತಂ ಮಹಾಕ್ರತುಮ್ ॥''

ತ್ರಿವಿಕ್ರಮಪಂಡಿತಾಚಾರ್ಯರ ತತ್ತ್ವಪ್ರದೀಪದಲ್ಲಿಯ ಈ ಕೆಳಗಿನ ಶ್ಲೋಕವು ಈ ಸೂಕ್ತದ ಅರ್ಥಸಂಗ್ರಹರೂಪವಾಗಿದೆ.

ತ್ರೇಧಾಽವತಾರಮವನಾಯ ಸತಾಂ ಬಳಿತ್ಥೇದ್ಯಾಶ್ರುತಿರ್ಭಗವತೀ ಗುರುಮೇನಮಾಹ ।
ಮುಖ್ಯಾನಿಲೋಽತಿಬಲವಾನ್ ಮತಿರೀಶಧೇನಾ ನೇತೇತಿ ಪಕ್ಷ ಇತಿ ಮಧ್ವ ಇತಿ ಕ್ರಮೇಣ ॥

ತಾಮ್ರಪರ್ಣೀ ಶ್ರೀನಿವಾಸಾಚಾರ್ಯರ ವ್ಯಾಖ್ಯಾನದಲ್ಲಿನ ಕೆಲವು ವಿಶೇಷಾಂಶಗಳು:

೧. ದರ್ಶತಂ – ಜ್ಞಾನರೂಪಂ ಭೃಮೃದೃಶಿಯಜಿಪರ್ವಿಪಚ್ಯಮಿತಮಿನಮಿಹರ್ಯ–ಭ್ಯೋಽತಚ್ ಇತಿ ಉಣಾದಿಸೂತ್ರೇ ದೃಶೇರತಚ್‌ಪ್ರತ್ಯಯವಿಧಾನಾತ್ । ದರ್ಶೇನ ಜ್ಞಾನೇನ ತತಂ ವ್ಯಾಪ್ತಂ ದರ್ಶತಮಿತ್ಯಪ್ಯಾಹುಃ।

೨. ಅಸ್ಯ ವೃಷಭಸ್ಯ– ವೃಷ ಸೇಚನೇ ಚ । ಭಕ್ತಾನಾಂ ಸರ್ವಾಭಿಲಾಷವರ್ಷಿತುಃ । ಯದ್ವಾ ವೃಷಸ್ನೇಹೇ ಭಕ್ತಾನುರಾಗಿಣಃ। ಭಗವದ್ಭಕ್ತಪ್ರವರಸ್ಯ ವಾ। ಯದ್ವಾ ವೃಷಶಕ್ತಿಶಯ ಇತಿ ಧಾತೋರ್ಬಹುಶಕ್ತಿಸಂಪನ್ನಸ್ಯ।

---

೫. ಭಗವಂತರಾಯರ ವ್ಯಾಖ್ಯಾನವೂ ಇದಕ್ಕೆ ಉಪಲಬ್ಧವಿದೆ. –(ಜ)

'ಗುರ್ವರ್ಥದೀಧಿತಿ'ಯಲ್ಲಿ ಪುರುಷಸೂಕ್ತ ವಿಷ್ಣುಸೂಕ್ತ ಅಂಭೃಣೀಸೂಕ್ತ ಹಿರಣ್ಯಗರ್ಭಸೂಕ್ತ ಸರಸ್ವತೀಸೂಕ್ತ ಮೊದಲಾದ ಅನೇಕಸೂಕ್ತಗಳ ವ್ಯಾಖ್ಯಾನಗಳು ಸಹ ಉಂಟು. ಸಮಗ್ರಗ್ರಂಥ ನನ್ನ ಸಂಗ್ರಹ (ಶ್ರೀಜಯತೀರ್ಥ ಸಂಸ್ಕೃತ ಹಸ್ತಲಿಖಿತ ಗ್ರಂಥಾಲಯ, ವ್ಯಾಸನಕೆರೆ)ದಲ್ಲಿ ಉಪಲಬ್ಧವಿದೆ.

ಇದರಲ್ಲಿ ಸಂಗ್ರಹಿಸದೆ ಬಿಟ್ಟಿರುವ ಇನ್ನೂ ಅನೇಕ ಅಪೂರ್ವ ಅರ್ಥಗಳು ಭಾವವಿಲಾಸಿನೀ ಮೊದಲಾದ ಗ್ರಂಥಗಳಲ್ಲಿ ಉಂಟು.

ವೇದತುಲ್ಯತ್ವಾಚ್ಚೇತಿ । ವೇದಸ್ಥಾನೀಯತ್ವಾದಿತ್ಯರ್ಥಃ । ನ ತು ವೇದಸಮತ್ವಾದಿತ್ಯರ್ಥಃ । ಸಮಸ್ತಶಾಸ್ತ್ರಾರ್ಥ-ನಿದರ್ಶನಾತ್ಮಕಂ ಚಕ್ರೇ ಮಹಾಭಾರತನಾಮಧೇಯಮ್ । ವೇದೋತ್ತಮಂ ತಚ್ಚ ವಿಧಾತೃಶಂಕರಪ್ರಧಾನಕೈಸ್ತನ್ಮುಖತಃ ಸುರೈಃ ಶ್ರುತಮ್ ॥– ಇತಿ ಮಹಾಭಾರತತಾತ್ಪರ್ಯನಿರ್ಣಯ ವಿರೋಧಾದಿತಿ ಸಂಪ್ರದಾಯವಿದಃ॥

– ಬದರಹಳ್ಳಿ ಶ್ರೀನಿವಾಸತೀರ್ಥರು (ಗೀತಾಭಾಷ್ಯಟಿಪ್ಪಣ)

ನ ಚೇತಿಶಬ್ದೋಕ್ತಭಾರತಸ್ಯ ಋಗಾದ್ಯುತ್ತಮತ್ವಾತ್ । ಪುರಾಣಾಂತರ್ಗತಸ್ಯ ಭಾಗವತಸ್ಯ ಚ ಋಗಾದಿವೇದಸಮತ್ವಾತ್ ಕಥಮವರಾಸ್ವಿತ್ಯುಕ್ತಮಿತಿ ಚೇತ್ । ಅತ್ರ ಕೇಚಿಚ್ಛತ್ರಿನ್ಯಾಯೇನ ಉಪಚರಿತಮೇತದಿತ್ಯಾಹುಃ । ವಸ್ತುತಸ್ತು ಪೌರುಷೇಯತ್ವೇನೈವ ಅವರತ್ವಂ ನ ವಸ್ತುತಃ । ತಥಾ ಚ ನಮ್ಯಸೀಷು ಅವರಾಸು ಇತಿ ವ್ಯಾಖ್ಯೇಯಮಿತಿ ಸಂಪ್ರದಾಯವಿದಃ ॥

– ಬದರಹಳ್ಳಿ ಶ್ರೀನಿವಾಸತೀರ್ಥರು (ತೈತ್ತರೀಯಭಾಷ್ಯಟೀಕಾ)

ಶಯೇ–ಶೇತೇ–ಲೋಪಸ್ತ ಆತ್ಮನೇ ಪದೇಷು ಇತಿ ತಕಾರಲೋಪೇ ಅಯಾದೇಶೇ ಚ ಶಯೇ ಇತಿ ರೂಪಮ್।

೩. ಯದ್ಯಪಿ ಬಂಧೇರ್ಬುಧಿ ಬುಧೀ ಚೇತ್ಯುಣಾದಿಸೂತ್ರೇ ಬಂಧ ಬಂಧನೇ ಇತಿ ಧಾತೋರ್ಬುಧಾದೇಶೇ ನಕ್ ಪ್ರತ್ಯಯೇ ಚ ಕೃತೇ ಬುಧ್ನಾತ್ ಜ್ಞಾನೋಪದೇಶಕಾತ್ ಅಬುಧ್ನೇ ರಾಜೇತ್ಯತ್ರ ಋಭ್ವಾಷ್ಟಕಾಯಾಂ ಅಬುಧ್ನೇ ಬುಧ ಅವಗಮನೇ ತತೋ ನಕ್ ತತ್ಪ್ರತಿಷೇಧೋ ಅಬುಧ್ನಮಿತಿ ನಿಷ್ಪನ್ನಮಿತ್ಯುಕ್ತಮ್। ತಥಾಪೀಹ ಪ್ರಕೃತವಿವಕ್ಷಯಾ ಅರ್ಥಾಂತರಂ ಬೋಧ್ಯಮ್। ಯದ್ವಾ ಧಾತ್ವರ್ಥಭೂತೋ ಬಂಧೋ ಭಕ್ತಿಲಕ್ಷಣೋ ವಿವಕ್ಷಿತಃ। 'ಅನುಬಂಧಶ್ಚ ಭಕ್ತಿಃ ಸ್ಯಾತ್' ಇತಿ ವಚನಾತ್ । ಭಗವದ್ಭಕ್ತಾಗ್ರೇಸರಾದಿತಿ ಯಾವತ್ । ಭಕ್ತೇರ್ಜ್ಞಾನರೂಪತ್ವಾತ್ ಬೋಧಾತ್ಮಕತ್ವಾದಿತಿ ವಾ।

ಶುಚಿಃ – ಅಜ್ಞಾನಾದಿದೋಷರಹಿತಃ । ಅಹಿಂಸ್ಯಮಾನಃ ಪೂರ್ವಪಕ್ಷಿಪ್ರಯುಕ್ತ ಪ್ರಮಾಣಾಭಾಸೈರಪೀಡ್ಯಮಾನ ಉರುತ್ವೇನ ವಿವಾವೃಧೇ।

'ಬಳಿತ್ಥಾಸೂಕ್ತವು ಋಗ್ವೇದದಲ್ಲಿ ಅನ್ನಸೂಕ್ತಗಳ ಮಧ್ಯೆ ಬರುತ್ತದೆ: ಎಂದಮೇಲೆ ಇದರಲ್ಲಿ ಮುಖ್ಯಪ್ರಾಣನ ಪ್ರಸಕ್ತಿ ಏತಕ್ಕೆ? ಎಂದೂ ಕೇಳಬೇಕಿಲ್ಲ; ಅನ್ನವು ಪ್ರಾಣಾದಿ ಆಹುತಿ ಪಂಚಕಗಳಿಂದ ಭರಿತವಾಗಿರುವುದರಿಂದ ಅನ್ನ ಸೂಕ್ತದಲ್ಲಿ ಮುಖ್ಯಪ್ರಾಣನ ಸ್ತುತಿರೂಪಪ್ರಸಕ್ತಿಯು ಅತ್ಯವಶ್ಯವಾಗಿದೆ. ಪ್ರಾಣಿಗಳು ತಿನ್ನುವ ಚತುರ್ವಿಧಅನ್ನವನ್ನೂ ಪರಮಾತ್ಮನು ಪಚನ ಮಾಡುವುದು ಪ್ರಾಣಾಪಾನಾದಿಗಳ ಮೂಲಕ ಎಂಬ ಮಾತು ಭಗವದ್ಗೀತೆಯಲ್ಲಿ ಬಂದಿದೆ.

ಕೆಲವು ವಿಶೇಷ ವಿವರಗಳು

೧) ಶ್ರೀವಾಯುದೇವರಿಗೆ ಪ್ರಾಣಾಗ್ನಿ ಶಬ್ದವಾಚ್ಯತ್ವವು ಶ್ರುತಿಪ್ರಸಿದ್ಧವಾಗಿದೆ; ಷಟ್ಪಶ್ನೋಪ– ನಿಷತ್ತಿನ ಮಾತುಗಳನ್ನು ಇಲ್ಲಿ ಉಲ್ಲೇಖಿಸಬಹುದು.

'ಪ್ರಾಣಾಗ್ನಯ ಏವ ಏತಸ್ಮಿನ್ ಹೃದಯಪುರೇ ಜಾಗ್ರತೀ । ಗಾರ್ಹಪತ್ಯೋ ವಾ ಏಷೋऽಪಾನೋ ವ್ಯಾನೋऽನ್ವಾಹಾರ್ಯಪಚನೋ ಯತ್ ಗಾರ್ಹಪತ್ಯಾತ್ ಪ್ರಣೀಯತೇ ॥''

ಇದಕ್ಕೆ ಶ್ರೀಟೀಕಾಚಾರ್ಯರು ಬರೆದ ಟೀಕೆಯಲ್ಲಿ,

''ಏತಸ್ಮಿನ್ ಪುರೇ ಪ್ರಾಣಾ ಮುಖ್ಯಪ್ರಾಣರೂಪಾಣ್ಯೇವ ಅಗ್ನಯಃ ಪ್ರಾಣಾಗ್ನಯಃ'' ಎಂದೇ ಸ್ಪಷ್ಟವಾದ ವಿವರಣೆ ಇದೆ.

ಇನ್ನು ಬೃಹದ್ದೇವತಾಗ್ರಂಥದಲ್ಲೂ ಇದನ್ನು **ಮರುದ್ದೇವತಾಕ** ಎಂದೇ ಕರೆಯಲಾಗಿದೆ.

೨) ಪವಮಾನಮಂಡಲದಲ್ಲಿ ಪ್ರಸಕ್ತನಾದ 'ಸೋಮ'ನು ಚಂದ್ರ, ಶಿವಾದಿಗಳಾಗಿರದೆ ಶ್ರೀಮುಖ್ಯಪ್ರಾಣನೇ ಆಗಿರುವಂತೆ ಬಳಿತ್ಥಾಸೂಕ್ತದಲ್ಲಿ ಪ್ರಸಕ್ತನಾಗಿರುವ ಪ್ರಾಣಾಗ್ನಿಯು ಸ್ಪಸಿದ್ಧ ಅಗ್ನಿಯಾಗಿರದೆ ಸಾಕ್ಷಾತ್ ಮುಖ್ಯಪ್ರಾಣನೇ ಆಗಿರುವನು ಎಂದು ತಿಳಿಯಬೇಕು.

೩) ಶ್ರೀಮದಾಚಾರ್ಯರು ತಮ್ಮ ಬ್ರಹ್ಮಸೂತ್ರಭಾಷ್ಯ, ಅನುವ್ಯಾಖ್ಯಾನ, ಮೊದಲಾದ ಅನೇಕ ಗ್ರಂಥಗಳ ಕೊನೆಯಲ್ಲಿ ತಮ್ಮ ಸ್ವರೂಪವನ್ನು ತಿಳಿಸುತ್ತ ಹೇಳಿರುವ ಈ ಕೆಳಗಿನ ಮಾತು ಒಂದರ್ಥದಲ್ಲಿ ಬಳಿತ್ಥಾಸೂಕ್ತಕ್ಕೆ ಅವರೇ ರಚಿಸಿರುವ ಶ್ಲೋಕರೂಪವ್ಯಾಖ್ಯಾನವಾಗಿದೆ. ಶ್ರೀವಾಯುದೇವರನ್ನು ಪ್ರತಿಪಾದಿಸುವ ಸೂಕ್ತಕ್ಕೆ ಸ್ವತಃ ವಾಯ್ವವತಾರರಾದ ಅವರೇ ಬರೆದ ಭಾಷ್ಯ ಎಂಬುದು ಅದರ ಹಿರಿಮೆ:

ಯಸ್ಯ ತ್ರೀಣ್ಯುದಿತಾನಿ ವೇದವಚನೇ ರೂಪಾಣಿ ದಿವ್ಯಾನ್ಯಲಂ
ಬಟ್ ತದ್ದರ್ಶತಮಿತ್ಥಮೇವ ನಿಹಿತಂ ದೇವಸ್ಯ ಭರ್ಗೋ ಮಹತ್ ।
ವಾಯೋ ರಾಮವಚೋನಯಂ ಪ್ರಥಮಕಂ ಪಕ್ಷೋ ದ್ವಿತೀಯಂ ವಪು–
ರ್ಮಧ್ವೋ ಯತ್ತು ತೃತೀಯಮೇತದಮುನಾ ಗ್ರಂಥಃ ಕೃತಃ ಕೇಶವೇ ॥

೪) ಇದಲ್ಲದೆ ತಾವು ಐತರೇಯ, ಛಾಂದೋಗ್ಯ, ಬೃಹದಾರಣ್ಯಕ ಮತ್ತು ತೈತ್ತಿರೀಯೋಪ–ನಿಷತ್ತುಗಳಿಗೆ ರಚಿಸಿರುವ ಭಾಷ್ಯಗಳಲ್ಲಿ ಭಾವವೃತ್ತ, ಸದ್ಭಾವ ಮತ್ತು ಯಜುಃಸಂಹಿತಾ ಎಂಬ ಗ್ರಂಥಗಳಿಂದ ಈ ಸೂಕ್ತದ ವಿವರಣರೂಪವಾದ ವಾಕ್ಯಗಳನ್ನು ಉದಾಹರಿಸಿರುವರು.

೫) ಶ್ರೀಮದಾಚಾರ್ಯರ ಗ್ರಂಥಗಳ ಪ್ರಾಚೀನಟೀಕಾಕಾರರಾದ ಶ್ರೀಪದ್ಮನಾಭತೀರ್ಥರು, ಶ್ರೀತ್ರಿವಿಕ್ರಮಪಂಡಿತಾಚಾರ್ಯರು, ಶ್ರೀನಾರಾಯಣಪಂಡಿತಾಚಾರ್ಯರು ಕ್ರಮವಾಗಿ ಸನ್ಯಾಯರತ್ನಾವಲಿ, ತತ್ತ್ವಪ್ರದೀಪ ಮತ್ತು ನಯಚಂದ್ರಿಕಾ ಗ್ರಂಥಗಳಲ್ಲಿ 'ಯಸ್ಯ ತ್ರೀಣ್ಯುದಿತಾನಿ' ಎಂಬ ಶ್ರೀಮದಾಚಾರ್ಯರ ಶ್ಲೋಕಕ್ಕೆ ಬರೆದಿರುವ ವ್ಯಾಖ್ಯಾನಗಳಲ್ಲಿ ಸೂಕ್ತದ ಅನೇಕ ಪದಗಳಿಗೆ ವಿವರಣೆ ದೊರೆಯುತ್ತದೆ. ಅನಂತರ ತಮ್ಮ ನ್ಯಾಯಸುಧಾ ಮತ್ತು ತತ್ತ್ವಪ್ರಕಾಶಿಕೆಗಳಲ್ಲಿ ಸೂಕ್ತಗತವಾದ 'ಭರ್ಗಃ', 'ಪೃಕ್ಷಃ', 'ಮಧ್ವಃ' ಮೊದಲಾದ ಪದಗಳನ್ನು ಅವುಗಳ ನಿಷ್ಪತ್ತಿಗಳೊಂದಿಗೆ ವಿವರಿಸಿದ ಮಹಾನುಭಾವರು. ಶ್ರೀಮದಾಚಾರ್ಯರ ಗ್ರಂಥಗಳ ಟೀಕಾಕೃತ್ಪಾದರೆಂದೇ ಸರ್ವಮಾನ್ಯರಾಗಿರುವ ಶ್ರೀಜಯತೀರ್ಥರು. ಅವರ ಗ್ರಂಥಗಳ ಟಿಪ್ಪಣಿಗಳಾದ ಪರಿಮಳ, ಯಾದುಪತ್ಯ, ಶೇಷವಾಕ್ಯಾರ್ಥಚಂದ್ರಿಕಾ ಮೊದಲಾದ ಸುಧಾಟಿಪ್ಪಣಿಗಳು, ಭಾವಬೋಧ, ಭಾವದೀಪ, ಅಭಿನವಚಂದ್ರಿಕಾ ಮೊದಲಾದ ತತ್ತ್ವಪ್ರಕಾಶಿಕಾಟಿಪ್ಪಣಿಗಳು, ಮೊದಲಾದ ಪ್ರಮುಖಟಿಪ್ಪಣಿಗಳಲ್ಲಿ ಈ ಪದಗಳ ಬಗ್ಗೆ ಬಗೆಬಗೆಯ ವಿಶ್ಲೇಷಣಗಳು ಬಂದಿವೆ.